
ಬಯಸದೆ ಬಂದದ್ದು

ಆತ್ಮ ಕಥನ



ಪ್ರೊ. ಗೊದ್ದು ವೀರೇಶ್

ಮುಖಪುಟ ಚಿತ್ರ ವಿನ್ಯಾಸ

ಶ್ರೀಮತಿ ಶಾರದ ವೀರೇಶ್ ರಚಿಸಿದ ಕರ್ನಾಟಕ ಶಾಸ್ತ್ರೀಯ ಸಂಪ್ರದಾಯ ಮೇಲು ಕೋಟೆ ಚಿತ್ರಕಲೆ : ಶ್ರೀಲಕ್ಷ್ಮಿ

ಶ್ರೀಮತಿ ಶಾರದ ವೀರೇಶ್‌ರವರು ನಾಲ್ಕೈದು ವರುಷದಿಂದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ತರಬೇತಿ ಪಡೆದು, ಹತ್ತಾರು ಕರ್ನಾಟಕ ಸಂಪ್ರದಾಯ ಚಿತ್ರಕಲೆಗಳನ್ನು ರಚಿಸಿದ್ದಾರೆ. ಅವುಗಳಲ್ಲೊಂದಾದ ಮೇಲುಕೋಟೆ ಚಿತ್ರಕಲೆ ಶ್ರೀ ಲಕ್ಷ್ಮಿ ಚಿತ್ರವನ್ನು ಮುಖಪುಟದಲ್ಲಿ ಮುದ್ರಿಸಲಾಗಿದೆ.

ಕರ್ನಾಟಕ ಶಾಸ್ತ್ರೀಯ ಸಂಪ್ರದಾಯ ಚಿತ್ರಕಲೆಯ ಮೂಲ ಅಜಂತ ಮತ್ತು ಬಾದಾಮಿ ಗುಹೆಗಳ (ಕ್ರಿ.ಪೂ. 2ನೇ ಶತಮಾನದಿಂದ, ಕ್ರಿ.ಶ. 6ನೇ ಶತಮಾನ) ಚಿತ್ರಕಲೆಗಳಿಂದ ಸ್ಫೂರ್ತಿಗೊಂಡಿದೆ ಯೆಂದು ಹೇಳಲಾಗಿದೆ. ಆನಂತರ ಹನ್ನೆರಡನೇ ಶತಮಾನದ ಜೈನ ಧಾವಳ ವಾಲೆಗರಿ ಪೈಂಟಿಂಗ್ಸ್ ಮತ್ತು ಬಾಗೇವಾಡಿ ಚಿತ್ರಕಲೆ (ಮರದ ಹಾಳೆಗಳ ಮೇಲೆ ಚಿತ್ರಿಸಿದವು) ಗಳು ಕರ್ನಾಟಕ ಸಂಪ್ರದಾಯಕ್ಕೆ ಹೋಲುತ್ತವೆ.

ಮೈಸೂರು ಶೈಲಿ ಸಂಪ್ರದಾಯ ಚಿತ್ರಕಲೆ ನಿಜವಾಗಿ ಪ್ರಾರಂಭವಾದದ್ದು ವಿಜಯನಗರದ ಅರಸರ ಕಾಲದಿಂದ. ಕರ್ನಾಟಕ ಶಾಸ್ತ್ರೀಯ ಸಂಗೀತದ ಮೂಲವೂ ಇದೇ ಕಾಲದಲ್ಲಿ ಪುರಂದರದಾಸರಿಂದ ಪ್ರಚುರಕ್ಕೆ ಬಂತು. ವಿಜಯನಗರ ಸಾಮ್ರಾಜ್ಯ ಅಳಿದ ನಂತರ ಅಲ್ಲಿದ್ದ ನೂರಾರು ನುರಿತ ಕಲೆಗಾರರಿಗೆ ಆಶ್ರಯಕೊಟ್ಟು ಶಾಸ್ತ್ರೀಯ ಕಲೆಗೆ ಪ್ರೋತ್ಸಾಹಿಸಿದವರು ಶ್ರೀರಂಗಪಟ್ಟಣದ ಕರ್ನಾಟಕ ಸಿಂಹಾಸನಾಧೀಶ್ವರ ರಾಜ ಒಡೆಯರು (1578-1617). ರಾಜಒಡೆಯರ ನಂತರ ಬಂದ ರಣಧೀರ ಕಂಠೀರವ ನರಸರಾಜ ಒಡೆಯರು; ಚಿಕ್ಕದೇವರಾಜ ಒಡೆಯರು; ಕಂಠೀರವ ರಾಜ ಒಡೆಯರು ಮತ್ತು ದೊಡ್ಡಕೃಷ್ಣರಾಜ ಒಡೆಯರುಗಳು ಶಾಸ್ತ್ರೀಯ ಸಂಗೀತ ಚಿತ್ರಕಲೆಗಳಿಗೆ ಪ್ರೋತ್ಸಾಹಿಸಿ ಎಲ್ಲಾ ದೇವಸ್ಥಾನ ಮತ್ತು ಅರಮನೆಗಳಲ್ಲಿ ಬಿತ್ತರಿಸಿದರು. ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಕ್ಷೀಣ ಸ್ಥಿತಿಗೆ ಬಂದು, ಇವು 1799ರ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರವರು ಈ ಕಲೆಯನ್ನು ಉತ್ತುಂಗಕ್ಕೇರಿಸಿದರು. ಅವರ ಕಾಲದ ಚಿತ್ರಗಳನ್ನು ಇಂದಿಗೂ ಮೈಸೂರು ಜಗನ್ಮೋಹನ ಪ್ಯಾಲೆಸ್‌ನಲ್ಲಿ ಕಾಣಬಹುದು.

ದಕ್ಷಿಣ ಭಾರತ ಶಾಸ್ತ್ರೀಯ ಸಂಪ್ರದಾಯ ಚಿತ್ರಕಲೆಗಳಲ್ಲಿ ಎರಡು ವಿಧ. ಮೈಸೂರು ಶೈಲಿ ಮತ್ತು ತಂಜಾವೂರು ಶೈಲಿ. ಸಾಮಾನ್ಯರಿಗೆ ಇವುಗಳ ವ್ಯತ್ಯಾಸ ತಿಳಿಯಲಾಗ ದಿರಬಹುದು. ಆದರೆ ಇವೆರಡರಲ್ಲೂ, ಮಾಡುವ ವಿಧಾನ ಮತ್ತು ಉಪಯೋಗಿಸುವ ಸಾಮಗ್ರಿಗಳು ಭಿನ್ನ. ತಂಜಾವೂರು ಶೈಲಿಯಲ್ಲಿ ಬೆಳ್ಳಿಯ ಮೇಲೆ ಚಿನ್ನ ಲೇಪಿಸಿದ ಎಲೆಗಳನ್ನು ಉಪಯೋಗಿಸಿದರೆ, ಮೈಸೂರು ಶೈಲಿಯಲ್ಲಿ ಅಪ್ಪಟ ಚಿನ್ನದ ಎಲೆಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ಮೈಸೂರು ಶೈಲಿ ಚಿತ್ರಕಲೆ ಬಹಳ ಕಾಲದವರೆಗೆ ಉಳಿಯುವವು.

ಮೂಲ : Traditional Paintings of Karnataka 1980. Published by Karnataka Chitrakala Parishat, Bangalore - 560 001.

ಬಯಸದೆ ಬಂದದ್ದು

ಆತ್ಮ ಕಥೆ

ಪ್ರೊ॥ ಗೊದ್ದು ವೀರೇಶ್

ಶ್ರೀ ಶಾರದಾ ಪಬ್ಲಿಕೇಷನ್
ಗಂಗಾನಗರ, ಬೆಂಗಳೂರು

BAYASADE BANDADDU an **Autobiography** by Prof. Goddu Veeresh, 'Srinidhi' No. 239, 4th Main, Ganganagar, Bangalore - 560 032, Pages xxiv + 8 + 288 - 1999

ಬೆಲೆ : ರೂ. 140/-

ಪ್ರಕಾಶಕರು

ಶ್ರೀ ಶಾರದಾ ಪಬ್ಲಿಕೇಷನ್

ನಂ. 239, 4ನೇ ಮುಖ್ಯರಸ್ತೆ

ಗಂಗಾನಗರ, ಬೆಂಗಳೂರು - 560 032

✆ 333 2482

ಮುದ್ರಕರು

ನವಭಾರತ್ ಎಂಟರ್‌ಪ್ರೈಸಸ್

ನಂ. 10, ಸಿರೂರ್ ಪಾರ್ಕ್ 'ಬಿ' ಸ್ಟ್ರೀಟ್

ಶೇಷಾದ್ರಿಪುರಂ, ಬೆಂಗಳೂರು - 560 020

✆ 336 4142 336 4682

ಪರಿವಿಡಿ

ಮುನ್ನುಡಿ

ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳೂ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಆದ ಪ್ರೊ|| ಗೊದ್ದು ವೀರೇಶ್ ಅವರು ಕೆಲವು ದಿನಗಳ ಹಿಂದೆ ಫೋನು ಮಾಡಿ, 'ನಾನೊಂದು ಪುಸ್ತಕ ಬರೆದು ನನ್ನ ನೆನಪುಗಳನ್ನು ದಾಖಲಿಸಿದ್ದೇನೆ. ಅದರ ಹೆಸರು "ಬಯಸದೆ ಬಂದದ್ದು". ಅದರ ಕರಡನ್ನು ಇಬ್ಬರು ಮಿತ್ರರಿಗೆ ಕೊಟ್ಟಿದ್ದೆ. ಕೆಲವು ದಿನ ಇಟ್ಟು ಕೊಂಡಿದ್ದು, ನಿಮ್ಮ ಕಡೆಗೆ ಕೈ ತೋರಿಸಿದರು. ಅದಕ್ಕೊಂದು ಮುನ್ನುಡಿ ಬರೆದುಕೊಡಬೇಕು' ಎಂದು ಕೇಳಿದರು. 'ನನಗೆ ಬಿಡುವಿಲ್ಲ. ಬಾಕಿ ಬೇಕಾದಷ್ಟಿದೆ. ಕ್ಷಮಿಸಿ' ಎಂದು ನನ್ನ ಅಸಹಾಯ ಕತೆಯನ್ನು ವ್ಯಕ್ತಪಡಿಸಿದೆ. ಅವರು ಪ್ರೀತಿಯ ಪಟ್ಟು ಬಿಡಲಿಲ್ಲ. 'ಓದದೆ ಮುನ್ನುಡಿ ಬರೆಯುವ ಹವ್ಯಾಸ ನನಗಾಗದು. ಒಂದು ತಿಂಗಳಾದರೂ ಸಮಯ ಕೊಡಿ' ಎಂದೆ. 'ಆಗಲಿ' ಎಂದರು.

ಆತ್ಮ ಕಥೆ, ಜೀವನ ಚರಿತ್ರೆ, ಪ್ರವಾಸಕಥೆ ಎಂದರೆ ನನಗೆ ಪಕ್ಷಪಾತ ಹಾಗೂ ಕಟ್ಟೊಲುಮೆ. ಪ್ರಸಿದ್ಧ ವಿಜ್ಞಾನಿಯೊಬ್ಬರು ಕನ್ನಡದಲ್ಲಿ ಬರೆದ ಆತ್ಮಕಥೆಯಾದ್ದರಿಂದ, ಅದನ್ನೋದುವ ಕುತೂಹಲ ನನ್ನ ಮನಸ್ಸನ್ನು ಸೂರೆಗೊಳ್ಳಲಾಗಿ, ಅವರ ಮನೋರಥವನ್ನೀಡೇರಿಸಲು ಸಮ್ಮತಿಸಿದೆ. ನಾನಾ ವೃತ್ತಿಗಳನ್ನವಲಂಬಿಸಿರುವ ಮತಿಸಂಪನ್ನರು ಲೋಕಾನುಭವ ಶ್ರೀಮಂತರು ಕನ್ನಡವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿದಾಗ ಮಾತ್ರ ಭಾಷೆ ಸಮಗ್ರವಾಗಿ ವಿಕಾಸಗೊಳ್ಳುತ್ತದೆನ್ನುವುದು ನನ್ನ ನಿಶ್ಚಿತ ಮತ. ಅದರ ಸೆಳೆತದಿಂದಾಗಿ, ಬೋಧಕ-ಸಂಶೋಧಕ-ಶಿಕ್ಷಣವೇತ್ತ-ಆಡಳಿತಗಾರ-ಪ್ರವಾಸಿಯ ಸಂಕೀರ್ಣ ಜೀವನದ ಬಹುಮುಖೀ ಅನುಭವಗಳನ್ನು ಇತರ ಕನ್ನಡ ಬಂಧುಗಳಿಗಿಂತ-ಒಬ್ಬಿಬ್ಬರನ್ನು ಬಿಟ್ಟು-ಮೊದಲೇ ಓದುವ ಸಂಭ್ರಮದಿಂದಾಗಿ ಈ ಕನ್ನಡಕೈಂಕರ್ಯವನ್ನೊಪ್ಪಿಕೊಂಡೆ. ಓದುತ್ತ, ಓದುತ್ತ ನನ್ನ ಮತ್ತು ಅವರ ಅನುಭವಗಳಲ್ಲಿ ಅಪೂರ್ವ ಸಾಮ್ಯ ಹಾಗೂ ಬಾಂಧವ್ಯ ಕಂಡು ಬರಲಾಗಿ, ಹಲವು ನೂತನಾನುಭಗಳು ಆಕರ್ಷಿಸುತ್ತಿರಲಾಗಿ, ಎರಡು ಕೂರುಗಳಲ್ಲಿ ಈ ಆತ್ಮಕಥೆಯನ್ನು ಓದಿಮುಗಿಸಿದೆ. ಆಶ್ಚರ್ಯವೇನೆಂದರೆ, ಡಾ|| ವೀರೇಶರ ತಜ್ಞ ಜೀವನದ ವ್ಯವಹಾರಗಳೆಲ್ಲ ಆಂಗ್ಲ ಭಾಷೆಯ ಮೂಲಕ ನಡೆದಿದ್ದರೂ, ಪ್ರಾಯಶಃ ಕನ್ನಡದಲ್ಲಿ ಈ ಮೊದಲು ಬೇರೇನೂ ಹೆಚ್ಚಿಗೆ ಬರೆಯದಿದ್ದರೂ ನುರಿತ ಲೇಖಕನ ಭಾಷೆಯಂತೆ ಈ ಕಥಾನಕದ ಭಾಷೆ ಅಡೆ ತಡೆಯಿಲ್ಲದೆ ಪ್ರವಹಿಸುತ್ತಿರುವುದು. ವಿಜ್ಞಾನಿಯ ಭಾಷೆಯೆಂದ ಮೇಲೆ ಸ್ಪಷ್ಟತೆ, ನಿಖರತೆ, ವಾಸ್ತವತೆ ಇರಲೇ ಬೇಕಷ್ಟೆ. ಆಡಂಬರವಿಲ್ಲದ ನಿರರ್ಗಳವಾದ ಭಾಷೆಯಲ್ಲಿ ಅನುಭವಗಳು ಮಿಂಚುಗಳಂತೆ ಚಿಮ್ಮುತ್ತವೆ. ದಟ್ಟವಾದ, ದಿಟವಾದ, ನಿಷ್ಕಪಟವಾದ, ನೈಜವಾದ ಅನುಭವಗಳೇ ಆತ್ಮಕಥೆಯ ಬಂಡವಾಳ, ಅದರ ತಿರುಳೆಂಬುದು ಸರ್ವವೇದ್ಯ.

ಈ ಆತ್ಮಕಥಾ ಸರೋವರದಲ್ಲಿ ಮಲೆನಾಡಿನ ಜಾನಪದ ಜೀವನ, ವಿಜ್ಞಾನ ಬೋಧನೆ-ಶೋಧನೆ ಮತ್ತು ಪ್ರವಾಸ ಕಥನ, ಈ ಮೂರು ವಾಹಿನಿಗಳು ಸಂಗಮಿಸುತ್ತವೆ. ಈ ಸಂಗಮವೆ

ವೀರೇಶರ ಬದುಕೆಂದರೂ ಸಲ್ಲುತ್ತದೆ. ಅಥವಾ ಸತ್ಯ ಶೋಧನೆಯೇ ಅವರ ಬದುಕು ಅವರ ಭುಕ್ತಿ ಶಕ್ತಿ ಮುಕ್ತಿ ಎಂದರೂ ಅತಿಶಯೋಕ್ತಿಯಾಗಲಾರದು. ಹಳ್ಳಿಯ ಅನಕ್ಷರಸ್ತ ಬಡಕುಟುಂಬ ದಲ್ಲಿ ಹುಟ್ಟಿದ ಹೈದನೊಬ್ಬ ಮಹಾಪ್ರಾಧ್ಯಾಪಕನಾಗಿ, ಮಹಾಸಂಶೋಧಕನಾಗಿ, ಕುಲಪತಿಯಾಗಿ, ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿಯಾಗಿ, ಪವಾಡ ಸದೃಶವಾಗಿ ವಿಕಾಸಹೊಂದಿದ ಕತೆಯೇ 'ಬಯಸದೆ ಬಂದದ್ದು' ಬಯಸದಿದ್ದರೂ ಬುದ್ಧಿಸಾಮರ್ಥ್ಯದಿಂದ, ಶ್ರಮ ಜೀವನದಿಂದ ಋತದಿಚ್ಛೆಯಿಂದ ಬಂದದ್ದು ನಿಜ. ಸೌದೆ ಕಂಬಳ, ಹಬ್ಬ ಹರಿದಿನ, ಬೇಟೆ, ಮದುವೆ, ಸಂತೆ ಮೊದಲಾದುವುಗಳ ವರ್ಣನೆಯಲ್ಲಿ ಗ್ರಂಥಕರ್ತೃಕ ಸಾಂದ್ರ ಜಾನಪದ ಪ್ರಜ್ಞೆ ಮತ್ತು ವೀಕ್ಷಣ ಶಕ್ತಿ ಅಭಿವ್ಯಕ್ತಗೊಂಡಿವೆ. ತಮ್ಮ ಬಾಲ್ಯ ಜೀವನ ಗ್ರಾಮೀಣ ಜೀವನದೊಡನೆ ಹೇಗೆ ಹೆಣೆದು ಕೊಂಡಿತ್ತೆನ್ನುವುದನ್ನು ಕೀಳರಿಮೆಯಿಲ್ಲದೆ ಸ್ವಾಭಿಮಾನದಿಂದ ವಿವರಿಸಿದ್ದಾರೆ. ಕೊನೆಯ ತನಕ ಏತಕ್ಕೆ ಓದುತ್ತಿದ್ದೇನೆಂಬ ತಿಳಿವಳಿಕೆ ಇಲ್ಲದಿದ್ದರೂ ಯಶಸ್ವಿಯಾಗಿ ವ್ಯಾಸಂಗ ಮುಗಿಸಿದ್ದು ಅದ್ಭುತ ಸಂಗತಿಯೇ ಹೌದು. ಬಡತನದಿಂದ ಬಂದ ಪ್ರತಿಯೊಬ್ಬ ಗ್ರಾಮೀಣ ಮುಗ್ಧ ಯುವಕರ ಹಣೆ ಬರಹವೇ ಇಷ್ಟು. ಅವರಿಗೆ ಗುರುವಿಲ್ಲದೆ, ಗುರಿಯೂ ಇಲ್ಲದೆ, ವಿಧಿಯ ಕಾಲ್ಚೆಂಡಿನಂತೆ ಈ ಯುವಕರು ಬದುಕು ಸಾಗಿಸಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ವೀರೇಶರು ಶಾಲಾ ಕಾಲೇಜು ವ್ಯಾಸಂಗವನ್ನು ಮುಗಿಸುತ್ತಾರೆ. ಒಂದು ಪರೀಕ್ಷೆ ಮುಗಿಸಿದ ನಂತರ ಮುಂದೇನು ಎಂಬ ಪ್ರಶ್ನೆ ಅವರ ಮುಂದೆ ನಿಲ್ಲುತ್ತದೆ. ಯಾವುದೋ ಅಗೋಚರ ಶಕ್ತಿ ಇದ್ದಕ್ಕಿದ್ದಂತೆ ದಾರಿ ತೋರಿಸುತ್ತದೆ. ವ್ಯಾಸಂಗ, ಉದ್ಯೋಗಾನ್ವೇಷಣೆ, ವಿವಾಹ, ಕುಟುಂಬ ನಿರ್ವಹಣೆ, ಗೃಹ ನಿರ್ಮಾಣ, ಇವೇ ಮೊದಲಾದ ಖಾಸಗಿ ಸಂಗತಿಗಳ ರೋಚಕ ವರ್ಣನೆಯನ್ನು ಓದಿಯೇ ಸವಿಯ ಬೇಕು. ಅವರ ಖಾಸಗಿ ಜೀವನ ಕೋಲಾಹಲಕಾರಿಯಲ್ಲದಿದ್ದರೂ ಕುತೂಹಲಕಾರಿ ಎಂಬುದಂತೂ ನಿಜ. ಬೋಧನ ಸಂಶೋಧನೆಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡ ವಿಜ್ಞಾನಿ ಏಕಾಂತ ವಾಸಿ ಮಾತ್ರವಲ್ಲ. ಸಂಸಾರದ ಬಗ್ಗೆ ಹಾಗೂ ನೆಂಟರಿಷ್ಟರ ಬಗ್ಗೆ ಅನಿವಾರ್ಯವಾಗಿ ನಿರ್ಲಿಪ್ತನೆಂಬುದು ಈ ಕತೆಯಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಸಾಹಿತಿಯ ಬಾಳೂ ಅಂಥದೇ.

ಬೋಧನೆ ಮತ್ತು ಸಂಶೋಧನೆ ಈ ಆತ್ಮಕಥೆಯ ಬಹುಭಾಗವನ್ನು ಆಕ್ರಮಿಸಿಕೊಂಡಿ ರುವುದು ಸರಿಯೇ ಸರಿ. ಬೋಧನೆ ಮತ್ತು ಸಂಶೋಧನೆ ಅವರ ಬದುಕಿನ ಎರಡು ರೆಕ್ಕೆಗಳು. ವಿದ್ಯಾರ್ಥಿಗಳು ಮೆಚ್ಚಿಕೊಂಡಾಗ ಅವರು ಶ್ರೇಷ್ಠ ಬೋಧಕರೆಂಬುದು, ಅಂತರರಾಷ್ಟ್ರೀಯ ವಿಜ್ಞಾನಿಗಳು ಅಹುದಹುದೆಂದಾಗ ಅವರು ಮಹಾವಿಜ್ಞಾನಿಯೆಂಬುದು ಸಾಬೀತಾಗುತ್ತದೆ. ಈ ಮೆಚ್ಚುಗೆಗಳು ಅವರ ಅರ್ಹತೆಯನ್ನು ಪ್ರಾಮಾಣೀಕರಿಸುವ ಪ್ರಶಸ್ತಿಗಳೆ ಹೊರತು, ಆ ಈ ಊ ಪ್ರಶಸ್ತಿಗಳಲ್ಲ. ವೀರೇಶರ ಹಿರಿಮೆಯನ್ನು ನಾನು ಹಲವರಿಂದ ಕೇಳಿ ತಿಳಿದುಕೊಂಡಿದ್ದೇನೆ. ಅವರ ಈ ಆತ್ಮವೃತ್ತಾಂತವನ್ನೋದುವಾಗ, ಅವರು ಹೇಳಿರುವುದೆಲ್ಲ ನಿಜ ಮಾತ್ರವಲ್ಲ, ಎಲ್ಲವನ್ನು ಹೇಳಿದರೆ ಆತ್ಮಸ್ತುತಿಯಾದೀತೆಂಬ ಸಂಕೋಚವಿದ್ದಂತೆಯೂ ತೋರುತ್ತದೆ. "ಕಾಲೇಜಿನ ಬೋಧಕರಲ್ಲಿ ಬಹುತೇಕ ಮಂದಿ ನಿಗದಿತ ಕಾಲದಲ್ಲಿ ಪಾಠಮಾಡಿ ಮೌಲ್ಯಮಾಪನ ಮಾಡುವುದನ್ನು ಬಿಟ್ಟರೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತಿಸುವುದಾಗಲಿ ಅಥವಾ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಿ ಮಾರ್ಗದರ್ಶನ ನೀಡುವುದಾಗಲಿ ಮಾಡುತ್ತಿರಲಿಲ್ಲ. ಕೆಲವರು ಹುಡುಗರಿಂದ ಮೆಚ್ಚುಗೆ ಪಡೆಯಬೇಕೆಂದು ಶಿಕ್ಷಕರು ಮಾಡಬಾರದ್ದನ್ನು ಮಾಡಲು ಪ್ರಯತ್ನಿಸುವರೆ ಹೊರತು ನಿಷ್ಠುರವಾದರೂ ಚಿಂತೆಯಿಲ್ಲ, ಅವರು ಮುಂದೆ ಒಳ್ಳೆ ಪ್ರಜೆಗಳಾಗುವ ಮಾರ್ಗದರ್ಶನ ಮಾಡಲು ಪ್ರಯತ್ನಿಸುತ್ತಿರಲಿಲ್ಲ". ಈ ಸತ್ಯಾಕ್ಷೇಪ ಮತ್ತೂ ಮುಂದುವರಿ

ಯುತ್ತದೆ. ಶಿಕ್ಷಣ ಕ್ಷೇತ್ರದ ಎಲ್ಲಾ ಹಂತಗಳಲ್ಲಿಯೂ ಈ ಪೀಡೆಯನ್ನು ಕಾಣಬಹುದಾಗಿದೆ. ಇದರಿಂದಾಗಿ ಶಿಕ್ಷಣದ ಮಟ್ಟ ದಿನೇ ದಿನೇ ಕುಸಿಯುತ್ತಿದೆ. ಶೀಲ ಕಾಣೆಯಾಗುತ್ತಿದೆ, ಮೌಲ್ಯ ಮರೆಯಾಗುತ್ತಿದೆ.

ಹಿರಿಯ ಸಂಶೋಧಕರ ದೋಷ ದೌರ್ಬಲ್ಯಗಳನ್ನು ಬಯಲು ಮಾಡುವಲ್ಲಿಯೂ ಅವರು ಹಿಂಜರಿಯುವುದಿಲ್ಲ. "ನಮ್ಮ ದೇಶದಲ್ಲಿ ಬಹಳಷ್ಟು ಜನರಿಗೆ ಪಿಹೆಚ್.ಡಿ. ಡಿಗ್ರಿ ಸಂಶೋಧನೆಯ ಕೊನೆಯ ಹಂತ. ನಂತರ ದೊಡ್ಡ ಹುದ್ದೆಗೆ ಹೋಗುವ ಹಂಬಲ. ಸಂಶೋಧನೆಯ ಕಡೆ ಗಮನ ಹರಿಸುವುದು ಕಡಿಮೆ. ಸಂಶೋಧನೆ ಅಥವಾ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಸಿಕ್ಕಿದರೆ, ಇವರ ಕೈ ಕೆಳಗೆ ಕೆಲಸ ಮಾಡುವವರು ಮಾಡಿದ ಸಂಶೋಧನೆ ಇವರದಾಗುತ್ತದೆ. ಸಕ್ರಿಯವಾಗಿ ಕಿರಿಯ ರೊಂದಿಗೆ ಕಲೆತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವವರು ಬಹಳ ವಿರಳ" (116). ವೀರೇಶರ ಈ ಮಾತುಗಳಲ್ಲಿ ಲವಶೇಷವೂ ಉತ್ಪ್ರೇಕ್ಷೆಯಿಲ್ಲ. ಅವರ ಈ ಎರಡು ಅಭಿಪ್ರಾಯಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಮಾತುಗಳು ವೀರೇಶರ ಬೋಧನ-ಸಂಶೋಧನ ಜೀವನದ ಮೇಲೂ ಬೆಳಕು ಬೀರುತ್ತವೆಂಬುದರಲ್ಲಿ ಸಂದೇಹವಿಲ್ಲ. ಅವರು ಅಪ್ರಾಮಾಣಿಕ ರಾಗಿದ್ದರೆ ಈ ಮಾತು ಹೊರಬರುತ್ತಿರಲಿಲ್ಲ. ಆ ತ್ಯಾಗಗಳಲ್ಲಿ ನೋವು ಸಂಕಟ ದುಮ್ಮಾನ ಹೆಪ್ಪುಗಟ್ಟಿವೆ. ಶಿಕ್ಷಣದ ಹೊಣೆಯನ್ನು ಹೊತ್ತ ಮಂತ್ರಿಗಳು, ಕುಲಪತಿಗಳು ಮತ್ತು ಕುಲಾಧಿಪತಿಗಳು ಆ ಕಡೆಗೆ ಗಮನ ಹರಿಸಬೇಕಾದ್ದು ಆದ್ಯಕರ್ತವ್ಯ.

ಡಾ॥ ವೀರೇಶರು ಸಂಶೋಧನೆಗೆ ಆರಿಸಿಕೊಂಡಿರುವ ಜಂತುಗಳೆಂದರೆ, ಬೇರು ತಿನ್ನುವ ಹುಳು, ಗೆದ್ದಲು, ಇರುವೆ ಮೊದಲಾದವು. ಸಾಮಾನ್ಯಮನುಷ್ಯನ ದೃಷ್ಟಿಯಿಂದ ಇವು ನಿಷ್ಪ್ರಯೋಜಕವಾದ ಕ್ಷುದ್ರವಾದ, ಜೀವಜಾಲದಲ್ಲಿ ಪ್ರಮುಖವಲ್ಲದ ಪ್ರಾಣಿಗಳು. ಅವರ ಸಂಶೋಧನೆಯ ಫಲಶ್ರುತಿಯನ್ನು ನೆನೆದಾಗ, ಅವು ಸೃಷ್ಟಿಯ ಅದ್ಭುತಗಳೆಂದು, ಜೀವಜಾಲದಲ್ಲಿ ಆನೆ, ಕುದುರೆ, ಗೋವು ಮಾನವನಷ್ಟೆ ಅವುಗಳಿಗೆ ಸ್ಥಾನವಿದೆಯೆಂದೂ ಮನವರಿಕೆಯಾಗುತ್ತದೆ. ಜಗತ್ತನ್ನೆಲ್ಲ ಆವರಿಸಿಕೊಂಡಿರುವ ಅವ್ಯಕ್ತ ಶಕ್ತಿಯ ಬಗ್ಗೆ ಭಕ್ತಿ ಗೌರವ ಮೂಡುತ್ತವೆ. ಬೀಟಲ್ಸ್ ಎಂದು ಕರೆಯುವ ಈ ಹುಳುವಿನ ದುಂಬಿಗಳು ಸಂಜೆ ಕತ್ತಲಾಗುವ ಸಮಯದಲ್ಲಿ ಭೂಮಿಯೊಳಗಿಂದ ಹೊರಗೆ ಬಂದು ಹೆಣ್ಣುಗಂಡು ಸಂಪರ್ಕವಾಗಿ ರಾತ್ರಿಯಲ್ಲಿ ಬೇವಿನ ಮರದ ಎಲೆ ಅಥವಾ ಇನ್ನಿತರ ಆಶ್ರಯ ಗಿಡಗಳನ್ನು ಭಕ್ಷಿಸಿ ಬೆಳಗಾಗುವುದರೊಳಗೆ ಪುನಃ ಭೂಮಿಯೊಳಗೆ ಹೋಗುತ್ತವೆ. ಮುಖ್ಯ ನ್ಯಾಯಾಧೀಶರೆಂಬ ಭಯವಿಲ್ಲದೆ ಅವು ಅವರ ಮನೆಯ ಮರಗಳ ಎಲೆಗಳನ್ನು ಸಂಹಾರ ಮಾಡುತ್ತಿದ್ದುವಂತೆ! ಇವುಗಳ ಬಗ್ಗೆ ಪ್ರಪಂಚದ ಹಲವು ರಾಷ್ಟ್ರಗಳಲ್ಲಿ ಮೇಧಾವಿ ವಿಜ್ಞಾನಿಗಳು ಅವಿರತವಾಗಿ ಸಂಶೋಧನೆ ನಡೆಸುತ್ತಿದ್ದಾರೆ. ಆ ಸಂಶೋಧನೆಗಳ ಫಲವಾಗಿ ಗಿಡಮರ ಉಳಿದು ಕೊಂಡಿವೆ, ಇಲ್ಲವಾಗಿದ್ದರೆ ಮನುಷ್ಯ ನಿರಂತರ ಕ್ಷಾಮಕ್ಕೆ ತುತ್ತಾಗಬೇಕಿತ್ತು.

ಗೆದ್ದಲಂತೂ ಆಬಾಲವೃದ್ಧರಿಗೆ ಸುಪರಿಚಿತವಾದ ಪ್ರಾಣಿ. ವಾಲ್ಮೀಕಿಯಂತೆ ಮನುಷ್ಯ ಸದಾ ಅವುಗಳ ನಡುವೆಯೇ ಬದುಕಬೇಕಾಗಿದೆ. ಅವುಗಳಿಂದ ಮನುಷ್ಯನಿಗಾಗುತ್ತಿರುವ ನಷ್ಟ ಅಪಾರ. ಈ ಆತ್ಮಕಥೆಯ ಒಂದು ಭಾಗವಾಗಿ ಗೆದ್ದಲ ಪುರಾಣ ಸೇರಿಕೊಂಡಿರುವುದು ಅನಿವಾರ್ಯ. ರಾಮಾಯಣದಷ್ಟೇ ಸ್ವಾರಸ್ಯವಾಗಿರುವ ಗೆದ್ದಲಿನ ಚರಿತ್ರೆಯನ್ನು ಬಲ್ಲವರು ಬಹಳ ವಿರಳವೆಂದು ವೀರೇಶರೇ ಹೇಳುತ್ತಾರೆ. ಗೆದ್ದಲುಗಳಲ್ಲಿ ಹಲವು ಜಾತಿಗಳಿವೆಯಂತೆ. ಮಣ್ಣಿನಲ್ಲಿರುವ ಎಲ್ಲಾ ಜೀವಿಗಳಿಗಿಂತ ಸಂಖ್ಯೆ ಮತ್ತು ತೂಕಗಳಲ್ಲಿ ಗೆದ್ದಲ ಪ್ರತಾಪವೇ ಅಧಿಕವಂತೆ. ಆಫ್ರಿಕಾ,

ಆಸ್ಟ್ರೇಲಿಯಾ ಮತ್ತು ಭಾರತಗಳಲ್ಲಿ ಒಂದು ಹೆಕ್ಟೇರ್ ಭೂಮಿಯಲ್ಲಿ ಇನ್ನೂರಕ್ಕೂ ಹೆಚ್ಚು ಗೆದ್ದಲು ಗೂಡುಗಳಿವೆಯಂತೆ. ಅವು ಭೂಮಿಯೊಳಗೆ ಗೂಡು ಕಟ್ಟಿದರೆ, ಹೊರಗೆ ಹುತ್ತ ಕಟ್ಟುತ್ತವೆ. ಒಂದು ಗೂಡಿನಲ್ಲಿ ರಾಣಿಯದೇ ಪ್ರಧಾನ ಸ್ಥಾನ. ಗಂಡು ಕೇವಲ ಸಂಭೋಗ ಗುಳಿ, ಉಳಿದವು ಸೈನಿಕರು ಇಲ್ಲವೇ ಸೇವಕರು. ರಾಣಿಯನ್ನು ಕೊಂದರೆ ಮಾತ್ರ ಗೂಡುಗಳ ನಾಶ ಸಾಧ್ಯ. ಅದರಿಂದ ಮಾನವನಿಗಾಗುವ ಪ್ರಯೋಜನವನ್ನು ವಿವರಿಸಲಾಗಿದೆ.

ಸಂಶೋಧನಾಸಕ್ತರು ಮತ್ತು ವಿದ್ವಾಂಸರು ಇಡೀ ಜಗತ್ತಿನ ರಾಷ್ಟ್ರಕರು. ಎಲ್ಲಾ ಕಡೆಯ ಪ್ರಯೋಗಾಲಯಗಳ ವಾರಸುದಾರರು. ಸಂಶೋಧನೆ ತೀವ್ರಗೊಳ್ಳಬೇಕಾದರೆ, ಪರಿಪೂರ್ಣ ವಾಗಬೇಕಾದರೆ ಜಗತ್ತಿನ ಎಲ್ಲ ಸಂಶೋಧಕರೊಡನೆ ಸಂಪರ್ಕ ಹೊಂದಿರಬೇಕು. ವೀರೇಶರು ಶಿಖರ ಪ್ರಾಯದ ಸಂಶೋಧಕರಾದ್ದರಿಂದ ಜಗತ್ತಿನ ಎಲ್ಲ ಕಡೆಗಳಿಂದ ಅವರಿಗೆ ಆಹ್ವಾನ ಬರುತ್ತದೆ. ಜಗತ್ತಿನ ಕೀಟ ವಿಜ್ಞಾನಿಗಳೆಲ್ಲರೂ ಅವರ ಆಪ್ತರು. ಹೀಗಾಗಿ ಅವರು 1975 ರಿಂದ ಹದಿನೆಂಟು ಸಲ ವಿದೇಶ ಪ್ರವಾಸ ಕೈಗೊಂಡು, ಕೆಲವು ಭಾಗಗಳನ್ನುಳಿದು ಪ್ರಪಂಚ ಪರ್ಯಟನವೆಸಗಿದ್ದಾರೆ. ಹೋದ ಕಡೆಯಲ್ಲೆಲ್ಲ ಪ್ರಬಂಧವೋದುವುದಲ್ಲದೆ, ಅಲ್ಲಲ್ಲಿಯ ಸಂಶೋಧನೆಗಳನ್ನು ಸಾಂಗವಾಗಿ ಅಧ್ಯಯನ ಮಾಡುತ್ತಾರೆ, ಜತೆಜತೆಗೆ ಅಲ್ಲಿಯ ಜೀವನದ ಬಗ್ಗೆ ಕ್ಷ-ಕಿರಣ ಹಾಯಿಸುತ್ತಾರೆ. ನಡುನಡುವೆ ನಮ್ಮ ರಾಷ್ಟ್ರದ ಜನಜೀವನದೊಡನೆ ಹೋಲಿಸಿ ಉಚಿತವಾಗಿ ವ್ಯಾಖ್ಯಾನ ಮಾಡುವುದುಂಟು. ಬ್ಯಾಂಕ್ ಕ್ರೆಡಿಟ್ ಕಾರ್ಡುಗಳು, ಸೆಲ್ಯೂಲರ್ ಫೋನ್, ಕಂಪ್ಯೂಟರ್, ಇ-ಮೇಲ್, ಫ್ಯಾಕ್ಸ್ ಮೊದಲಾದ ಉಪಕರಣಗಳು ಅಮೆರಿಕೆಯಲ್ಲಿ ಶೋಕಿಯ ವಸ್ತುಗಳಾಗಿರದೆ, ದಿನಬಳಕೆಯ ಸರ್ವಸಾಮಾನ್ಯರ ಅಗತ್ಯ ವಸ್ತುಗಳಾಗಿವೆ ಎಂದವರು ಹೇಳುವಾಗಲೆ, ಇಂಡಿಯಾವನ್ನು ಅವು ಆಕ್ರಮಿಸಿಕೊಳ್ಳುತ್ತಿವೆಯೆಂದು ಹೇಳಬಹುದಾಗಿದೆ. ಅಲ್ಲಿಯಂತೆ ಮಲಮೂತ್ರಗಳನ್ನು ಮಿಶ್ರಣ ಕಾಂಪೋಸ್ಟ್ ಮಾಡುವುದಾದರೆ, ಗೊಬ್ಬರ ಬೇಡಿಕೆಯ ಪೂರ್ಣಪ್ರಮಾಣವನ್ನು ಪೂರೈಸಬಹುದು, ಪರಿಸರ ಮಾಲಿನ್ಯವನ್ನು ತಪ್ಪಿಸಬಹುದೆಂದು ವೀರೇಶ್ ಹೇಳುತ್ತಾರೆ. ಅಲ್ಲಿಯ ಜನ ಊಟಕ್ಕಾಗಿ ಹೋಟಲಿಗೆ ಹೋದಾಗ, ತಿಂದುಳಿದ ಪದಾರ್ಥಗಳನ್ನು ಚೀಲದಲ್ಲಿ ತುಂಬಿಕೊಂಡು, ಮನೆಯ ಫ್ರಿಜ್‌ನಲ್ಲಿಟ್ಟು ಮಾರನೆಯ ದಿನ ತಿನ್ನುತ್ತಾರೆ. ಮದುವೆ, ಮುಂಜಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ ನಮ್ಮ ಜನ ಪೋಲು ಮಾಡುವ ಪದಾರ್ಥಗಳ ಪ್ರಮಾಣವನ್ನು ನೋಡಿದ ಅವರು ಸಂಕಟಪಡುತ್ತಾರೆ. ಕಛೇರಿಯಲ್ಲಿ, ಮನೆಯಲ್ಲಿ, ಕೆಲಸದ ಜಾಗದಲ್ಲಿ, ಎಲ್ಲೆಂದರಲ್ಲಿ ನಮ್ಮ ಜನ ಕರ್ತವ್ಯವನ್ನು ಮರೆತು ಹರಟೆ ಹೊಡೆಯುತ್ತಾರೆಂದು, ಅಲ್ಲಿಯ ಜನ ಎಂದೂ ಖಾಲಿ ಹರಟೆಯಲ್ಲಿ ಕಾಲ ಕಳೆಯುವುದಿಲ್ಲವೆಂದವರು ವಿಷಾದದಿಂದ ಸ್ಪಷ್ಟಪಡಿಸುತ್ತಾರೆ.

ವೀರೇಶರು ಮೇಲಿಂದ ಮೇಲೆ ವಿದೇಶಗಳಿಗೆ ಹೋಗುತ್ತಿದ್ದದ್ದು ಮುಖ್ಯವಾಗಿ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಲಿಕ್ಕಾಗಿ, ಸಂಶೋಧನಾ ಪ್ರಬಂಧಗಳನ್ನು ಮಂಡಿಸುವ ಸಲುವಾಗಿ, ತಜ್ಞರೊಡನೆ ವಿಚಾರ ವಿನಿಮಯ ಮಾಡಿಕೊಳ್ಳುವ ಕಾರಣಕ್ಕಾಗಿ, ಪ್ರಯೋಗ ಮಂದಿರಗಳ ಪ್ರಯೋಜನ ಪಡೆಯುವ ಸಲುವಾಗಿ. ಅಂದ ಮೇಲೆ ಅವರ ಪ್ರವಾಸ ಸಾಹಿತ್ಯದಲ್ಲಿ ವೈಜ್ಞಾನಿಕ ಸಂಶೋಧನೆಗಳಿಗೆ ಸಂಬಂಧಿಸಿದ ವಿಚಾರಗಳೇ ಅನಿವಾರ್ಯವಾಗಿ ಬಹು ಪ್ರಮಾಣ ದಲ್ಲಿರುತ್ತವೆಂದು ಯಾರಾದರೂ ನಿರೀಕ್ಷಿಸಬಹುದು. ತಜ್ಞರಲ್ಲದ ಸಾಮಾನ್ಯರಿಗೆ ಅವು ಬೇಡವಾಗಬಹುದು ಅಥವಾ ಕೆಲವು ಕಡೆ ಯಾದಿಯಂತೆ ತೋರಬಹುದು, ಗ್ರಂಥಕರ್ತರಿಗೂ ಅಂಥ ಪರಿಯ ಅರಿವು ಇದ್ದೇ ಇದೆ. ತಾವು ವೀಕ್ಷಿಸಿದ ಜನಜೀವನ ವೈವಿಧ್ಯವನ್ನೋ, ಅನುಭವಿಸಿದ

ಸ್ವಾರಸ್ಯವಾದ ಸಂಗತಿಗಳನ್ನೋ ವಿವರಿಸುವ ಮೂಲಕ ಆ ಕೊರತೆಯನ್ನು ನಿವಾರಿಸುತ್ತಾರೆ. ನಡುನಡುವೆ ಬರುವ ವ್ಯಕ್ತಿ ಚಿತ್ರಗಳಂತು ಊಟದ ನಡುವಣ ನಂಜಿಕೆಯ ಪದಾರ್ಥಗಳಂತೆ ಸವಿಯಾಗಿರುತ್ತವೆ. ಇನ್ನೂರು ವರ್ಷಗಳ ಹಿಂದೆ ಅಮೆರಿಕೆಗೆ ವಲಸೆ ಬಂದ ಜರ್ಮನಿಯ ಆಮಿಷ್ ಜನರ ಕಂದಾಚಾರ ಪದ್ಧತಿಯ ಜೀವನ (125); ನೈಜೀರಿಯಾದ ಹಳ್ಳಿಯೊಂದರ ಹೆಂಗಸರ ನಡೆವಳಿಕೆ (135); ಮದ್ರಾಸಿನಿಂದ ದೆಹಲಿಗೆ ಹೋಗುವಾಗ ಜನೋಪಕಾರಿಯಂತೆ ನಟಿಸುತ್ತಿದ್ದ ಕಳ್ಳನ ವಂಚನೆ (186); ಕಾಮನ್ ವೈಫ್ ಅರ್ಥವಿವರಣೆ (200) - ಇಂಥ ಹಲವಾರು ಸಂಗತಿಗಳು ಓದುಗರ ಮನವನ್ನು ರಂಜಿಸುವುದಲ್ಲದೆ ಪಾಠಬೋಧಕವೂ ಆಗಿರುತ್ತವೆ. ಜಾಪನೀಸ್ ಮೆಥಡ್ ಆಫ್ ಪ್ಯಾಡಿ ಕಲ್ಟಿವೇಷನ್ ಸ್ಕೀಮ್‌ನಲ್ಲಿ ಮಡಿಕೇರಿಯಿಂದ ಮಂಗಳೂರಿಗೆ ವರ್ಗವಾಗಿ ಬಂದ ಮಂದಣ್ಣ (65); ಕೀಟಶಾಸ್ತ್ರ ವಿಭಾಗದ ಮುಖ್ಯಸ್ಥರೂ, ಮೇಧಾವಿಗಳೂ ಕರ್ತವ್ಯ ನಿಷ್ಠರೂ ಆದ ಡಾ॥ ಎಂ. ಪುಟ್ಟರುದ್ರಯ್ಯ (83); ಪುಟ್ಟಪರ್ತಿಯ ಸಾಯಿಬಾಬಾ (93); ಮಹಾರಾಜ ಕಾಲೇಜ್ ಹಾಸ್ಟಲಿನ ಹೆಡ್ ಕುಕ್ ಗಯೂಸಾಬ್ (48); ಅಮೆರಿಕೆಯ ಒರೇಗಾನ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಪಾಲ್ ರಿಚರ್ (119); ವಿವಾಹ ವಿಚ್ಛೇದನ ಮಾಡಿಕೊಂಡ ಕೂಡಲೆ ಇಂಡಿಯಾಕ್ಕೆ ಬಂದ ಕೊಲಂಬಸ್ ವಿಶ್ವವಿದ್ಯಾನಿಲಯದ ಡಾ॥ ರೋಜರ್ ಮಿಟ್‌ಚಲ್ (163); ಲೂದಿಯಾನಾದ ಹಾಲು ವ್ಯಾಪಾರಿ (185) - ಇಂಥ ಹಲವು ವ್ಯಕ್ತಿಗಳ ಚಿತ್ರಗಳನ್ನು ಸುಂದರವಾಗಿ ಬಿಡಿಸಿದ್ದಾರೆ. ಪೂರ್ಣವಾಗಿ ಓದಿಯೇ ಅವುಗಳ ಸ್ವಾರಸ್ಯವನ್ನು ಸವಿಯಬೇಕು. ಈ ದೃಷ್ಟಿಯಿಂದ ಇದೊಂದು ವ್ಯಕ್ತಿ ಚಿತ್ರ ಶಾಲೆಯಂತೆ ತೋರದಿರಲಾರದು. 'ನಾನು ಸದಾ ಕಾಲೇಜು, ಸಂಶೋಧನೆಯೆಂದು ಅವಳ ಜತೆ ಹೆಚ್ಚು ಕಾಲ ಕಳೆಯಲಾಗುತ್ತಿರಲಿಲ್ಲ. ಆದ್ದರಿಂದಾಗಿ ವಿಚ್ಛೇದನ ಅನಿವಾರ್ಯವಾಯಿತು' ಎಂದು ಮಿಟ್‌ಚಲ್ ಹೇಳುವ ಮಾತು ಗಮನೀಯವಾದದ್ದು. ನೈಜೀರಿಯಾದ ನೈಜರ್ ನದಿಯ ದಡದಲ್ಲಿ ನಿರ್ಜನವಾದ ಪ್ರದೇಶದಲ್ಲಿ ಗುಡಿಸಿಲಿನಲ್ಲಿ ವಾಸಿಸುತ್ತಿದ್ದ ಸಂಶೋಧನೆ ಇಪ್ಪತ್ತು ವರ್ಷ ವಯಸ್ಸಿನ ಇಂಗ್ಲೆಂಡಿನ ಹುಡುಗಿಯ ಧೈರ್ಯಸ್ಥೈರ್ಯಗಳನ್ನು ಕಂಡಾಗ ಹೀಗಿರುವುದರಿಂದಲೇ ಬ್ರಿಟಿಷರು ಪ್ರಪಂಚವನ್ನೇ ಆಳಲು ಶಕ್ತರಾದರು ಎಂದು ವೀರೇಶ್ ಉದ್ಗಾರ ತೆಗೆಯುತ್ತಾರೆ. ಆಸ್ಟ್ರೇಲಿಯಾದ ಆದಿವಾಸಿಗಳಿಗೂ ಇಂಡಿಯಾದ ಪೂರ್ವೋತ್ತರ ಭಾಗದ ಜನರಿಗೂ ಹೆಚ್ಚು ವ್ಯತ್ಯಾಸವಿಲ್ಲದ್ದಕ್ಕೆ ನಲವತ್ತು ಸಾವಿರ ವರ್ಷಗಳ ಹಿಂದೆ ಆಸ್ಟ್ರೇಲಿಯಾ ಏಷಿಯಾ ಒಂದುಗೂಡಿಕೊಂಡಿದ್ದದ್ದೇ ಕಾರಣವೆಂದು ಹೇಳುವಲ್ಲಿ ಸತ್ಯವಿದೆ. ಬ್ರಿಟಿಷರ ನಡೆವಳಿಯ ಸೂಕ್ಷ್ಮ ಗ್ರಹಿಕೆ ಮೆಚ್ಚುವಂಥದು(193). ಜಗತ್ತಿನ ವಿವಿಧ ಭಾಗಗಳ ಮಾನವರ ಸ್ವಭಾವಗಳಿಗೆ ಹಾಗೂ ಸಮಾಜಶಾಸ್ತ್ರೀಯ ವಿಚಾರಗಳಿಗೆ, ಕನ್ನಡಿಯಾಗಿರುವುದರಿಂದ ಈ ಗ್ರಂಥದ ಮೌಲಿಕತೆ ಹೆಚ್ಚಾಗುತ್ತದೆ.

ಈ ಗ್ರಂಥದಲ್ಲಿ ಬಳಕೆಯಾಗಿರುವ ಮಲೆನಾಡಿನ ಕಡೆಯ ಹಲವು ಮಾತುಗಳು ನಿಘಂಟುಕಾರರಿಗೆ ತುಂಬ ಪ್ರಿಯವಾಗುತ್ತದೆ: ದನಕಡಗುವುದು, ಮೊಸರುಬಾನ, ಉಗ್ಗಿ, ಕೊರೆ ಮೀನು, ಕಯಿಕಲ, ಹೊಳ (ಬ್ಯಾರಲ್), ಕುರ್ಜಿನವರು, ಜೂಳಿಮುಗೆ, ಕಾರ್ಡಮಮ್ (ಕಾಡುಮನೆಯಿಂದ ಬಂದದ್ದು), ಕಜ್ಜಿ (ರೋಗ ಸಂಬಂಧಿ ಪದವಲ್ಲ), ಒಟ್ಟಂಗಿಪುಳ್ಳೆ, ದೀಣೆ, ಟಾರಿಕಾಯು, ಓಟೆಬಾಸು, ಜುಮ್ಮನಮಟ್ಟೆ (ಒಂದು ಬಗೆ ಮರದ ಚಕ್ಕೆ), ಕಡಿಕೆ, ಹೋಕು, ಗೊರಗ (ಮಳೆಕವಚ), ಪೆದರು ಇರುವೆ, ಹುಲಿಗೆ ಇಂಥ ಪದಗಳ ಕಣಜ ಮಲೆನಾಡು. ಉಪಭಾಷಿಕ ಸರ್ವೇಕ್ಷಣೆ ನಡೆದಿದ್ದರೆ ಸಹಸ್ರ ಸಹಸ್ರ ಶಬ್ದಗಳನ್ನು ಸಂಗ್ರಹಿಸಬಹುದಿತ್ತು, ಕನ್ನಡದ ಶ್ರೀಮಂತಿಕೆ ಜಗಕ್ಕೆ ತಿಳಿಯುತ್ತಿತ್ತು ಎನ್ನುವುದಕ್ಕೆ ಈ ಗ್ರಂಥದಿಂದ ಸಾಕ್ಷಿ ದೊರೆಯುತ್ತದೆ.

ಪ್ರವಾಸ ಕಾಲದಲ್ಲಿ ತಾವು ಪಡೆದ ಅನುಭವಗಳ ಆಧಾರದ ಮೇಲೆ ವೀರೇಶ್ ಹಲವು ಒಳ್ನುಡಿಗಳನ್ನು ಲಿಖಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಮಾತ್ರ ನಿದರ್ಶನಾರ್ಥವಾಗಿ ಉದ್ಧರಿಸಲಾಗಿದೆ.

1. ಸೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ; ಮಾನವನಿಗೆ ಹಲವು ವಿಧದಲ್ಲಿ ಗೆದ್ದಲು ಕೆಡುಕನ್ನುಂಟು ಮಾಡಿದರೂ ಅವುಗಳಿಂದ ಪರಿಸರಕ್ಕೆ ಉಪಯೋಗವೂ ಇದೆ.
2. ಭಾರತೀಯರು ತಿಂಡಿ ತಿನುಸುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದಿರುವುದನ್ನು ವೀಕ್ಷಿಸಿದರೆ ನಮ್ಮ ಹುಟ್ಟುಗುಣ ಸಾಗರ ದಾಟಿದರೂ ಹೋಗದು ಎಂಬಂತೆ ಕಾಣುತ್ತದೆ.
3. ನಮ್ಮ ಜನ ಒಳ್ಳೆ ವಸ್ತುಗಳನ್ನು ಹೊರದೇಶಕ್ಕೆ ಕಳಿಸಿ ಕಳಪೆಮಾಲನ್ನು ದೇಶೀಯರಿಗೆ ಮಾರುತ್ತಾರೆ. ಪಾಶ್ಚಿಮಾತ್ಯರು ಅವರಿಗೆ ಬೇಡದ್ದನ್ನು ನಮ್ಮ ದೇಶಕ್ಕೆ ಕಳಿಸುತ್ತಾರೆ.
4. ಸಿಖ್ಖರನ್ನು ಗಡ್ಡ ತೆಗೆದುಬಿಡಿ ಎಂದು ಹೇಳಿದರೆ ಸಾವಿಗೆ ಸಿದ್ಧ ಎಂದರೇ ಹೊರತು ಗಡ್ಡ ತೆಗೆಯಲು ಒಪ್ಪುತ್ತಿರಲಿಲ್ಲ.
5. ಜಪಾನೀಯರು ಇಲ್ಲಿಗೆ ಬಂದಾಗ ನಾವು ಕಾಲಹರಣ ಮಾಡುವುದನ್ನು ನೋಡಿ ಇವರೆಲ್ಲರೂ ನಮ್ಮಂತೆ ಕೆಲಸ ಮಾಡಿಬಿಟ್ಟರೆ ನಮ್ಮ ಪಾಡೇನು ಎಂದವರು ಹೆದರಬಹುದು.
6. ಪಾಶ್ಚಾತ್ಯ ದೇಶಗಳಲ್ಲಿ ಕೆಲಸಗಾರರಿರುವರೆ ಹೊರತು ಕೂಲಿಕಾರರಿಲ್ಲ.

ಗ್ರಂಥದುದ್ದಕ್ಕೂ ಮಂಕುತಿಮ್ಮನ ಕಗ್ಗ, ವೀರಶೈವ ವಚನ, ಶಂಕರಾಚಾರ್ಯ ಮೊದಲಾದ ಆಕರಗಳಿಂದ ಆಯುವ ಉದ್ಧರಣೆಗಳಿಂದ, ಸಾಯಿಬಾಬ ಚಿನ್ಮಯಾನಂದರಂಥ ಸಂತರ ಸಂಪರ್ಕದಿಂದ ಎಡ್ಗರ್ ಕೇಸಿಯಂಥವರ ಬಗೆಗಿನ ಗೌರವದಿಂದ ಅವರ ನಿರಂತರ ಶೋಧನೆ ಅಧ್ಯಯನಗಳಿಂದ, ನನ್ನ ಪುಟ್ಟ ಪುಸ್ತಕ ಭಂಡಾರ ನನ್ನ ಸರ್ವಸ್ವವಾಗಿದೆ, ಚೈತನ್ಯ ಕುಗ್ಗಿದಾಗ ಅದು ನನ್ನ ಸಹಾಯಕ್ಕೆ ಬರುತ್ತದೆ ಎನ್ನುವ ಮಾತುಗಳಿಂದ, ಅನೇಕ ಸಂಸ್ಥೆಗಳ ಸಂಸ್ಥಾಪನೆಯಿಂದ, ಪ್ರವಾಸ ಸಮಯದಲ್ಲಿ ಜಗತ್ತನ್ನು ನೋಡುವ ರೀತಿಯಿಂದ ಡಾ॥ ವೀರೇಶರು ಇಹಪರಗಳೆರಡನ್ನು ಒಟ್ಟಿಗೆ ಸಾಧಿಸುತ್ತಿರುವ ಯಾತ್ರಿಕರೆಂದು, ಜ್ಞಾನಾರ್ಜನೆ ಹಾಗೂ ವಿಸ್ತರಣೆ ಆಧ್ಯಾತ್ಮಿಕ ಸಾಧನೆಯ ಸೋಪಾನವೆಂದು ತಿಳಿದಿರುವ ಕಾಯಕ ಯೋಗಿಗಳೆಂದು ವಿಶದವಾಗುತ್ತದೆ. ಇದೊಂದು ನಿಷ್ಕಪಟ, ನಿರಾಡಂಬರ, ಪ್ರಾಮಾಣಿಕ ಕಥನವೆಂದೇ ಸ್ಪಷ್ಟಪಡಿಸಬಹುದಾಗಿದೆ. "ದಕ್ಷಿಣ ಅಮೆರಿಕಾ ಖಂಡವನ್ನು ಹೊರತು ಪಡಿಸಿ ಉಳಿದೆಲ್ಲ ಖಂಡಗಳಲ್ಲಿ ಹದಿನೆಂಟು ಬಾರಿ ಹೊರದೇಶಗಳಿಗೆ ಹೋಗಿ ಬಂದಮೇಲೆ ನನಗನಿಸಿದ್ದು ಭಾರತದಲ್ಲಿರುವಷ್ಟು ವೈವಿಧ್ಯಮಯವಾದ ಜಾಗ, ಜನ, ಪ್ರೇಕ್ಷಣೀಯ ಸ್ಥಳಗಳು, ಆಚಾರ ವ್ಯವಹಾರ, ಊಟ ಉಡುಗೆಗಳು, ಕಲೆ ಸಂಸ್ಕೃತಿ ಮತ್ತಾವ ದೇಶದಲ್ಲಿಯೂ ದೊರೆಯಲಾರವು. ಶತಮಾನಗಳ ದಾಸ್ಯ ಸಂಕಲೆ ನಮ್ಮದನ್ನು ನಾವು ಮರೆಯುವಷ್ಟು ಮಾಡಿದೆ" (183) ಎನ್ನುವ ಅವರ ಹೇಳಿಕೆ ಸತ್ಯ ಮಾತ್ರವಲ್ಲ, ಅದರಲ್ಲಿ ಅವರ ದೇಶಾಭಿಮಾನ ಕೆನೆಗಟ್ಟಿದಂತಿದೆ. ಕನ್ನಡಿಗರೆಲ್ಲರೂ ಓದಿ ಮನನ ಮಾಡಿಕೊಳ್ಳಬೇಕಾದ ಗ್ರಂಥವಿದು. ಕೆಲವು ಪುನರಾವರ್ತನೆಗಳನ್ನು ಬಿಟ್ಟಿದ್ದರೆ, ಉಷಾಬಾಯಿಯ ಪ್ರಕರಣದಂಥವುಗಳನ್ನು ತೇಲಿಸಿದ್ದರೆ ಆತ್ಮಕಥೆಯ ಒಟ್ಟಂದಕ್ಕೆ ಹಾನಿಯಾಗುತ್ತಿರಲಿಲ್ಲ. ಟ್ರಾನ್ಸ್‌ಫರ್ ಮೊದಲಾದ ಸಾಮಾನ್ಯ ಇಂಗ್ಲಿಷ್ ಪದಗಳಿಗೆ ಕನ್ನಡ ಪದಗಳನ್ನು ಬಳಸಬಹುದಿತ್ತೆಂದು ತೋರುತ್ತದೆ. ಅದೇನೇ ಇರಲಿ, ಆತ್ಮಕಥೆಯ ಪ್ರಾಕಾರಕ್ಕೆ ಇದೊಂದು ಅಮೂಲ್ಯ ಕೊಡುಗೆ ಎಂಬುದಂತು ನಿಜ.

ಪ್ರೊ|| ದೇ. ಜವರೇಗೌಡ
ಮಾಜಿ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರೊ॥ ಜಿ.ಕೆ. ವೀರೇಶ್ ವಿರಚಿತ

"ಬಯಸದೆ ಬಂದದ್ದು" : ಒಂದು ವಿವೇಚನೆ

— ಎಚ್.ಎ. ರಾಮಕೃಷ್ಣ

ಪ್ರಸ್ತಾವನೆ:

ಆತ್ಮಕಥನವೆಂಬುದು ಸಾಹಿತ್ಯ ಪ್ರಕಾರಗಳಲ್ಲಿ ಒಂದು ವಿಶಿಷ್ಟ ಅಭಿವ್ಯಕ್ತಿಯ ವಾಹಿನಿ. ಪ್ರಕಟಗೊಳ್ಳುವ ಸಾಹಿತ್ಯ ಅನುಭವಗಳು 'ವ್ಯಕ್ತಿತ್ವ'ದ ಮೂಸೆಯಲ್ಲೇ ಪ್ರವಹಿಸುವುದು ಅನಿವಾರ್ಯ. ಯಾವ ಸಂದರ್ಭ ಇರಲಿ, ಘಟನಾವಳಿ ಇರಲಿ ನೈಜ ಹಿನ್ನೆಲೆಯಲ್ಲಿ, ವಿಭಿನ್ನ ರೂಪಕದಲ್ಲಿ ದೃಢೀಕರಿಸಿಕೊಳ್ಳುತ್ತದೆ. ಆ ಪಥವನ್ನು ನಿರ್ಲಕ್ಷಿಸಿ, ದೂರ ಸರಿಯುವ ಯಾವ ಸಮೀಕರಣವೂ ಸುಸಂಗತವೆನಿಸುವುದಿಲ್ಲ. ಪೂರ್ವಗ್ರಹ ಪೀಡನೆಗಳಿಂದ, ಅವ್ಯೆಚಾರಿಕ ನಿಲುವಿನೊಡನೆ ಸಿಲುಕಿಕೊಳ್ಳುವ ಬರವಣಿಗೆಯು ಅಸಮರ್ಪಕವೂ, ವ್ಯಕ್ತಿಜನ್ಯ ಹುಚ್ಚು ಸಾಹಸವೂ ಆಗಿ ಪರಿಸಮಾಪ್ತಿಗೊಳ್ಳುವುದು. ಆದಕಾರಣ, ಯಾವುದೇ ಆತ್ಮಕಥನದ ಸೃಷ್ಟಿಯು ಸಂಯಮಬದ್ಧವಾಗಿರುವುದರ ಜೊತೆಗೆ ಪ್ರಾಮಾಣಿಕವಾಗಿರಬೇಕು. An Autobiography should be a testament of authenticity.

ಈ ಮಾತುಗಳನ್ನು ಸ್ಪಷ್ಟೀಕರಿಸುವಾಗ, ಪ್ರೊ॥ ಜಿ.ಕೆ. ವೀರೇಶ್ ವಿರಚಿತ "ಬಯಸದೆ ಬಂದದ್ದು" ಕೃತಿಗೆ ಅನ್ವಯವಾಗಲಿ ಎಂದು ಉದ್ದೇಶಿಸಿದಲ್ಲ. ಏಕೆಂದರೆ, ಅವರು ಪೂರ್ವ ಭಾವಿಯಾಗಿ, ಸಾಹಿತಿಯಾಗಿ, ಒಂದು ನೀಲಿ ನಕಾಶೆ ನಿರ್ಮಿಸಿಕೊಂಡು ಬರಹಗಾರರಾಗಿ ಬೆಳಕಿಗೆ ಬರಲೆಂದು ಆಶಿಸಿದವರಲ್ಲ. ಅಥವಾ ಯಾವುದೋ ಒತ್ತಡ, ಸನ್ನಿವೇಶದ ಪ್ರಭಾವದ ಹಿಡಿತಕ್ಕೆ ಸಿಕ್ಕಿಬಿದ್ದು, ಹೊರಬರಲಾರದೆ ಪ್ರಯತ್ನಿಸಿದವರೂ ಅಲ್ಲ. ಅಥವಾ ಯಾವುದೋ ಪ್ರಶಸ್ತಗಳಿಕೆಯ ಸ್ಫೂರ್ತಿಯಿಂದ ದೃಢಚಿತ್ತರಾಗಿ, ಬದ್ಧರಾಗಿ 'ಶತಾಯಗತಾಯ' ಸಂಕಲ್ಪಿಸಿ, ಈ ದಿಶೆಯಲ್ಲಿ ಹೆಜ್ಜೆ ಇಟ್ಟವರಲ್ಲ! (ವೀರೇಶ್‌ರವರ ಹೇಳಿಕೆ ಈ ನನ್ನ-ನಿರ್ಣಯಾತ್ಮಕ ನಿಲುವಿಗೆ ಪುಷ್ಟಿ ನೀಡುತ್ತದೆ ಎಂದು ನಂಬಿದ್ದೇನೆ.)

ಧ್ವನಿಪೂರ್ಣ:

ಪ್ರೊ॥ ಜಿ.ಕೆ. ವೀರೇಶ್‌ರವರು ತಮ್ಮ ಗ್ರಂಥಕ್ಕೆ ಸೃಜನಶೀಲ ಬರವಣಿಗೆಗೆ ಅನ್ವರ್ಥವಾಗುವಂತಹ ಶೀರ್ಷಿಕೆಯನ್ನೇ ಧ್ವನಿಪೂರ್ಣವಾಗಿ ಬಳಸಿದ್ದಾರೆ. "ಬಯಸದೇ ಬಂದದ್ದು..." ಕೌತುಕದ ಕಾದಂಬರಿಯೊಂದಕ್ಕೆ ಸೂಚ್ಯಾರ್ಥವಾಗಿ ನಿರ್ದೇಶಿಸುವಂಥದ್ದು. ಪ್ರಪ್ರಥಮವಾಗಿ ಈ ವಿಚಾರವನ್ನೇ ತುಸು ವಿಶದವಾಗಿ ಹೊರಗೆಡವಲಿಚ್ಛಿಸುತ್ತೇನೆ.

ಬಯಸದೇ ಬಂದದ್ದನ್ನು ಚಿಂತಿಸುವಾಗ, ಬಯಸಿ ಬಂದದ್ದು ಏನು? ಎಂಬ ವಿಲೋಮವೂ ಸ್ಫುರಿಸುವುದು! ಯಾವುದೇ ಹಂಬಲ ಆಶೆ ನಿರೀಕ್ಷೆಯಲ್ಲಿ ರೂಪಗೊಳ್ಳುವ ಅನುಭವವು ಆಯ್ಕೆಯ ಇತಿಮಿತಿಯಲ್ಲೇ ಸಿಲುಕಿಬಿಡುವುದು. ಅದು ಸ್ವಾಭಾವಿಕವಾದದು... ಅಲ್ಲಿ ವೈಯಕ್ತಿಕ 'ಆಶಯ'ವಷ್ಟೇ ಪ್ರಧಾನವಾಗುವುದು. ಗುಪ್ತಗಾಮಿನಿಯಾಗಿ ಅಂತರ್ಯದಲ್ಲೇ ಸಾಫಲ್ಯವನ್ನು

ಸಂದರ್ಶಿಸಲು ತವಕಪಡುತ್ತಿರುತ್ತದೆ. ಅಲ್ಲಿ ಸಾಧಕಬಾಧಕಗಳಾಗಲಿ, ತರ್ಕ ಸೂಕ್ಷ್ಮವಾಗಲಿ ನಿಯಂತ್ರಿಸಲು ಅಶಕ್ಯವಾಗುವುದರಲ್ಲಿ ಅನುಮಾನಬೇಡ. ವ್ಯಕ್ತಿಜೀವನದಲ್ಲಿ ಗೋಚರವಾಗಿಯೋ ಅಥವಾ ಅಗೋಚರವಾಗಿಯೋ ಅದು ವ್ಯಕ್ತಗೊಳ್ಳುವುದನ್ನು ಗಮನಿಸಬಹುದು.

ಸ್ವಯಂ ಪ್ರೇರಿತ ಸಾಧನೆ:

ಇದನ್ನು ಪ್ರಸ್ತಾಪಿಸುವಾಗ ಮತ್ತೊಂದು ಗಂಭೀರವಾದ ವಿಚಾರವೊಂದು ಸುಳಿಯುತ್ತದೆ. ಅದನ್ನು ಶೇಕ್ಸ್‌ಪಿಯರ್ ನಾಟಕಕಾರನ ನುಡಿಗಳಲ್ಲೇ ಪ್ರತಿಪಾದಿಸುವುದು ಸಮಂಜಸವೆನಿಸುವುದು. "…. Some are born great; some achieve greatness; for some greatness is thrust upon them." — ಡಾ॥ ವೀರೇಶ್ ಅವರೇ ಸ್ವತಃ ವಿನಮ್ರಭಾವದಿಂದ, ಆದರ ಪೂರ್ವಕವಾಗಿ ಸ್ವೀಕರಿಸುವಂತೆ "ಬಯಸದೇ ಬಂದದ್ದು" ಮೇಲೆ ಸೂಚಿಸಿರುವ ಎರಡನೆಯ ವರ್ಗದ ಹಿನ್ನೆಲೆಗೆ ಒಪ್ಪಿಕೊಳ್ಳುವಂತಹದಿರಬಹುದೆ! ಹೌದು ಅರ್ಹತೆ, ಸಾಮರ್ಥ್ಯ ಮತ್ತು ಮೇಲಾಗಿ 'ಅದೃಷ್ಟ' ಅಲ್ಲಿ ಕೂಡಿ ಬೆಸೆದುಕೊಂಡಿರಬಹುದೆ!

ಅವ್ಯಕ್ತ ಪ್ರಭಾವವೋ / ವ್ಯಕ್ತವೋ !

"ಪ್ರವಾಹದಲ್ಲಿ ನಾನೊಬ್ಬ ನೆರೆಬಂದ ಹಾಗೆ ತೇಲುವ ಸ್ವಭಾವದವನು" (ಪು. 96) — ಎಂದು ತಮ್ಮ ಬಾಳ್ವೆಯ ಜಾಡನ್ನು ಗುರುತಿಸಿಕೊಳ್ಳುತ್ತಾರೆ ವೀರೇಶ್! ಇಂತಹ ಉನ್ನತ ಆದರ್ಶ ಉತ್ಪನ್ನವಾಗಿ, ಎಡರುತೊಡರುಗಳನ್ನು ಎದುರಿಸಿ, ಸಂಜೀವಿನಿಯಂತೆ ಸ್ಫೂರ್ತಿ ಪಡೆದು, ಕೆಲಸಮಾಡುವುದಕ್ಕೆ ದೈವಶ್ರದ್ಧೆಯೇ ಕಾರಣ. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಯಿಂದಾದ ಪ್ರಭಾವ, ಸ್ವಾಮಿ ಚಿನ್ಮಯಾನಂದರ ಉಪನ್ಯಾಸಗಳು, ಶ್ರೀ ರಾಮಕೃಷ್ಣಾಶ್ರಮದ ಶ್ರೀ ರಂಗನಾಥನಂದರ ಸಂಪರ್ಕ, ಸತ್ಯ ಸಾಯಿಬಾಬರ ದರ್ಶನಾಕಾಂಕ್ಷೆ, ಒಲವು ಮೊದಲಾದವು ವೀರೇಶ್‌ರ ಬದುಕಿನಲ್ಲಿ ಅದ್ಭುತವಾಗಿ ಪ್ರಭಾವಬೀರಿದೆ ಎಂಬ ಮಾತು, ವಿಚಾರಧಾರೆ ಗ್ರಂಥದಲ್ಲಿ ಅರ್ಥಗರ್ಭಿತವಾಗಿ ವ್ಯಕ್ತಗೊಳ್ಳುತ್ತದೆ — ಇಲ್ಲಿ ನಿಕಟವಾದ ಸಂಬಂಧ ಇಲ್ಲದಿರಬಹುದು; ಅನುಯಾಯಿ ಭಕ್ತನಂತೆ ಆಚರಣೆಯಲ್ಲಿ ತೋರದಿರಬಹುದು. ಆದರೆ ಶಕ್ತಿಯುತ ಸೆಳೆತವಿದೆ!

ವೀರೇಶ್‌ರ ಆಧ್ಯಾತ್ಮಿಕ ಪಿಪಾಸೆ, ಧಾರ್ಮಿಕ ಜಿಜ್ಞಾಸೆ, ಅತೀಂದ್ರಿಯಾಸಕ್ತಿ ಅಲ್ಲಲ್ಲಿ ಕೇವಲ ಒಂದೆರಡು ಮಾತುಗಳಲ್ಲಿ ನಿರ್ದಿಷ್ಟವಾಗಿ ವ್ಯಕ್ತವಾದರೂ ಅವರ ಶ್ರದ್ಧೆ ನಂಬಿಕೆ ವಿಶ್ವಾಸ ಎಲ್ಲರೂ ಸವೆದ ದಾರಿಯಲ್ಲಾಗಿಲ್ಲ. ಅಂಧಾನುಕರಣೆ ಅವರ ಸ್ವಭಾವಕ್ಕೆ ಬಾಹಿರವೆನಿಸಿದಂತೆ ಕಂಡರೂ ಸಹ, ಸಂಪ್ರದಾಯದ ಕಟ್ಟುಪಾಡುಗಳನ್ನು, ಅನುಷ್ಠಾನವನ್ನು ಬಹಿಷ್ಕರಿಸಿದವರಲ್ಲ: "ಚಿಕ್ಕಂದಿನಿಂದಲೂ ನಾನು ಮಾಡುತ್ತಿದ್ದ ಒಂದು ಕೆಲಸ, ಇಂದಿಗೂ ಅದರ ಪೂರ್ಣ ಮನದಟ್ಟಾಗದಿರುವುದು. ಇದ್ದಕ್ಕಿದ್ದ ಹಾಗೆಯೇ ಕಂಡಕಂಡ ದೇವರಿಗೆ ಕೈಮುಗಿಯುವುದು. ಇದು ಪೂರ್ವಾರ್ಜಿತ ಕರ್ಮದಿಂದಲೋ, ಭಯದಿಂದಲೋ, ಭವಿಷ್ಯದ ಅನಿಶ್ಚತೆಯಿಂದಲೋ ನಾನರಿಯೆ. ದೇಶದ ಉದ್ದಗಲಕ್ಕೆ ಇರುವ ಎಲ್ಲಾ ಮುಖ್ಯ ದೇವಸ್ಥಾನಗಳಿಗೆ ಹೋಗಿದ್ದೇನೆ. ಆದರೆ ತೀರ್ಥಯಾತ್ರೆಯಂತೆ ಯಾವ ದೇವಸ್ಥಾನಕ್ಕೂ ಹೋಗಿದ್ದು ನೆನಪಿಲ್ಲ. ಬದರಿನಾಥ್ ಕೇದಾರನಾಥ್‌ಗೆ ಹೋದಾಗಲೂ ಹೋಗುವ ಹಿಂದಿನ ದಿನದವರೆಗೂ ಇದರ ಪರಿವೆ ಇಲ್ಲ. ಸ್ವಾಮಿ ಅಯ್ಯಪ್ಪನ ದರ್ಶನ ಮಾಡಿದ್ದೂ ಮತ್ತೊಬ್ಬರ ಪ್ರೇರಣೆಯಿಂದ. ಒಟ್ಟಿನಲ್ಲಿ ನಾನು ಹೋಗಿದ್ದೆ ಅನ್ನುವುದಕ್ಕಿಂತ ಸಂದರ್ಭಗಳು ನನ್ನನ್ನು ಅಲ್ಲಿಗೆ ಎಳೆ ತಂದಿದ್ದವು ಎನ್ನುವುದು ಉಚಿತ."

ವೀರೇಶ್‌ರು ನಿಜಕ್ಕೂ ಅದೃಷ್ಟವಂತರು. ದೇಶವಿದೇಶಗಳ ಅವರ ಪ್ರವಾಸ ಐದು ಖಂಡಗಳನ್ನೊಳಗೊಂಡಿದೆ. ಕೇವಲ ದಕ್ಷಿಣ ಅಮೆರಿಕಾಕ್ಕೆ ಮಾತ್ರ ಹೋಗುವ ಅವಕಾಶವನ್ನು ಕಳೆದುಕೊಂಡರೂ, ಕೊನೆಯ ಗಳಿಗೆಯಲ್ಲಿ, ಅರ್ಜೆಂಟೀನಾಕ್ಕೆ ಭೇಟಿಕೊಡುವ ಸಂದರ್ಭದಿಂದ ವಂಚಿತರಾದವರು. ಅಲ್ಲದೆ ಇಂತಹ ಪ್ರಪಂಚದ ಪರ್ಯಟನ ಹದಿನೆಂಟು ಬಾರಿ ಜರಗಿರುತ್ತದೆ. ಒಂದೊಂದು ಭೇಟಿಯೂ ಸಾಕಷ್ಟು ದಿನಗಳೊ, ವಾರಗಳನ್ನೊಳಗೊಂಡಂಥವು. ಫ್ರಾನ್ಸ್, ಜರ್ಮನಿ, ಇಟಲಿ, ಬೆಲ್ಜಿಯಂ, ಸ್ವೀಡನ್ ಮತ್ತು ಡೆನ್‌ಮಾರ್ಕ್. ಇಂಗ್ಲೆಂಡ್, ವೇಲ್ಸ್, ಆಕ್ಸ್ ಫರ್ಡ್, ಕ್ಯಾಂಬ್ರಿಜ್ ಮತ್ತು ಕಾರ್ಡಿಫ್. ಅಮೆರಿಕಾದಲ್ಲಿ ಅನೇಕ ರಾಜ್ಯಗಳು, ಕೆನಡಾ, ಪೌರಾತ್ಯ ರಾಷ್ಟ್ರಗಳಾದ ಬ್ಯಾಂಗ್‌ಕಾಕ್, ಜಪಾನ್, ಚೈನಾ, ತೈವಾನ್, ಇಂಡೋನೇಶಿಯಾ, ಆಸ್ಟ್ರೇಲಿಯ ಮೊದಲಾದವುಗಳು. ಅವರು ಉಲ್ಲೇಖಿಸುವಂತೆ "ಕೋಶ ತಿಳಿಯುವ ವಿದ್ಯೆ ಜ್ಞಾನಾರ್ಜನೆಗೆ ಆದರೆ ದೇಶ ಸುತ್ತಿ ತಿಳಿಯುವಂತಹ ವಿದ್ಯೆ ಜ್ಞಾನವನ್ನು ಬಳಸುವ ರೀತಿಯನ್ನು ತಿಳಿಸುತ್ತದೆ."

"ಬಯಸದೆ ಬಂದದ್ದು" ಪ್ರೊ॥ ವೀರೇಶ್‌ರವರ ಚೊಚ್ಚಲು ಕನ್ನಡ ರಚನೆ. ಅದೊಂದು ಜೀವನ ವೃತ್ತಾಂತದ ವಿಸ್ತೃತ ದಾಖಲೆಯಾಗಿರುವುದು ಅತ್ಯಂತ ಆಕಸ್ಮಿಕ. ಈ ಮೊದಲು ಇಂತಹ ಕೃತಿಯೊಂದರಲ್ಲಿ ತೊಡಗುವ ಸಾಧ್ಯತೆ ಅವರಿಗೆ ಕಂಡಿರಲಿಕ್ಕಿಲ್ಲ. ಇಡೀ ಜೀವಿತಕಾಲದ ಘಟನಾವಳಿಗಳು ಯಾವುದೋ ಸಂಯೋಜಿತ ಎಳೆಗಳನ್ನು ಅನುಸರಿಸಿಕೊಂಡು ನೇಯ್ದು ಕೊಳ್ಳುತ್ತವೆ. ಹತ್ತು ಹಲವಾರು ಘಟ್ಟಗಳಲ್ಲಿ ಕಂಡುಂಡ ಬಾಳ್ವೆಯ ಸರಣಿ ಇದು. ಅರವತ್ತೈದು ವರ್ಷಗಳ ಅವಧಿಯಲ್ಲಿ ಜರುಗಿ ಮುನ್ನಡೆದಿವೆ. (1934 ರಿಂದ ಇಲ್ಲಿಯ ತನಕ) ನಿರೂಪಣೆಯಲ್ಲಿ ಸರಳವಾಗಿ ಸಂಭಾಷಿಸುವ ಸೊಗಸು ಮೂಡುತ್ತದೆ. ಕೇಳುತ್ತಾ ಹೋಗಲು ಸ್ವಾರಸ್ಯಕರ, ಸುಲಲಿತ ಮಾತುಗಾರಿಕೆ ಮೇಳವಿಸುತ್ತದೆ. ವೀರೇಶ್‌ರ ಕನ್ನಡದಲ್ಲಿ ಪುಟಪುಟದಲ್ಲೂ ಲವಲವಿಕೆಯ, ದಿನಬಳಕೆಯ, ಸಮಯೋಚಿತ ಮಾತುಗಳು; ಮಣ್ಣಿನ ಸೊಗಡಿನೊಂದಿಗೆ ಪ್ರಸರಿಸುತ್ತವೆ.

ಮೂರು ದಶಕಗಳಿಂದಲೂ ನಾನು ವೀರೇಶ್‌ರನ್ನು ಕಂಡಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯ ದಲ್ಲಿ ಅವರು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಶಿಕ್ಷಕ, ಸಂಶೋಧಕ, ಪ್ರಾಧ್ಯಾಪಕ, ವ್ಯವಸ್ಥಾಪಕ, ಆಡಳಿತಗಾರ, ವಿಶೇಷ ಅಧಿಕಾರಿ, ಮಾರ್ಗದರ್ಶಕ, ವಿಜ್ಞಾನಿ, ತಜ್ಞ ಮತ್ತು ತಂತ್ರಜ್ಞಾನಿ ಹಾಗೂ ಉಪಕುಲಪತಿ ಮೊದಲಾದ ಗುರುತರವಾದ ಸ್ಥಾನಮಾನಗಳನ್ನು ಅಲಂಕರಿಸಿ, ನಿಷ್ಠೆಶ್ರದ್ಧೆತನ್ಮಯತೆಯಿಂದ ದುಡಿದವರು.

ತಮ್ಮ ಯೋಜನೆಗಳಲ್ಲಾಗಲಿ, ಆಲೋಚನೆಗಳಲ್ಲಾಗಲಿ ಎಂದೂ ಒಡಕು, ಬಿರುಕು ಕಂಡುಕೊಂಡು ಜುಗುಪ್ಸಿತರಾದವರಲ್ಲ. ಅಥವಾ ಸಿನಿಕನ ಮರ್ಜಿಯಲ್ಲಿ ಉಪೇಕ್ಷೆಯ ಮಾತುಗಳನ್ನು ಸಿಡಿಸುವವರೂ ಅಲ್ಲ. "ನಮ್ಮಲ್ಲಿ ಏನಾದರೊಂದು ಮಾಡುವುದಕ್ಕೆ ಮುಂಚಿತವಾಗಿಯೇ ಮುಂದೆ ಅದು ಆಗದ ಕೆಲಸವೆಂದು ತರ್ಕಿಸಿ, ತಡೆಯುವವರು ಅನೇಕರು" (ಪು. 105). ಇದರಿಂದ ನಾವು ಬಯಸಿದಷ್ಟೂ ಮುಂದುವರೆಯುವುದಕ್ಕೆ ಆಗದು. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಅವರದು ಸಂವೇದನಾಶೀಲ ಜಿಜ್ಞಾಸೆ. ಎಂತಹ ದಾರುಣ ಸನ್ನಿವೇಶವಿರಲಿ, ದಂಗುಪಡಿಸುವ ಕೈವಾಡವಿರಲಿ, ಅವರದು ಸುಧಾರಿತ, ಪರಿಹಾರಯುಕ್ತ, ಪರಿವರ್ತಕ ಅಭೀಷ್ಟ ಮತ್ತು ನಿಚ್ಚಳ ನಿಲುವು. "ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡಿ, ಶಿಕ್ಷಣ ಕೊಡಬೇಕಾದ ಸಂಸ್ಥೆ, ಶಿಕ್ಷೆಕೊಟ್ಟು ಬೀದಿಪಾಲು ಮಾಡಿದರೆ ಅವರು ಮತ್ತೆಲ್ಲಿಗೆ ಹೋಗಬೇಕು? ಉಪ್ಪು ಉಪ್ಪಿನಾಂಶವನ್ನು ಕಳೆದುಕೊಂಡರೆ, ಮತ್ತೆಲ್ಲಿಂದ ಉಪ್ಪಿನಾಂಶ ತರುವುದು?" (ಪು. 108).

ಮಲೆನಾಡಿನ ವಿಭಿನ್ನತೆ:

ಜಿ. ಕೆ. ವೀರೇಶ್‌ರು ಮಲೆನಾಡಿನವರು – ಸಕಲೇಶಪುರದ ಯಸಳೂರು ಹೋಬಳಿ ಗೊದ್ದು ಗ್ರಾಮದಲ್ಲಿ ಜನ್ಮ ತಳೆದವರು. ಅದು ಕೇವಲ ಕುಗ್ರಾಮವಷ್ಟೇ ಅಲ್ಲ. ಆಧುನಿಕ ಜಗತ್ತಿನಲ್ಲಿ ಆಗುಹೋಗುತ್ತಿದ್ದ ಪರಿವೆಯೇ ಇಲ್ಲದಂತಹ ನಿರ್ಭಾಗ್ಯ ಸ್ಥಿತಿಯಲ್ಲಿದ್ದ ಪರಿಸರ! ವೀರೇಶ್‌ರ ಬಾಲ್ಯದ ದಿನಗಳು ಹೋರಾಟದ ಬದುಕೇ ಸರಿ – ಎಲ್ಲ ತರಹದ ಕೆಲಸಕಾರ್ಯಗಳನ್ನು ಮಾಡಿದ ಅನುಭವಗಳು – ದನಕಾಯುವುದು, ಸೌದೆ ಒಡೆಯುವುದು, ಗೊಬ್ಬರ ಹೊರುವುದು, ಮುಸುರೆ ತಿಕ್ಕುವುದು, ಇತ್ಯಾದಿ ಕಾರ್ಯ ಅವರ ಅನುದಿನದ ಕೈಂಕರ್ಯ – ಸಕಲೇಶಪುರದಲ್ಲಿ ಓದುವಾಗ ಒಂದು ತಿರುವು ಸಿಕ್ಕಿ, ಬದುಕಿನ ಪರಿಯೇ ಬದಲಾಗಿ, ಮೈಸೂರು ಯುವರಾಜ ಕಾಲೇಜಿನ ವಿದ್ಯಾರ್ಥಿಯಾಗಿ, ಅಲ್ಲಿಂದ ಮುಂದೆ ಬೆಂಗಳೂರು ಕೃಷಿ ಕಾಲೇಜಿನಲ್ಲಿ ವ್ಯಾಸಂಗ ನಡೆಸಿದ ಪ್ರಕರಣಗಳು ಪುಸ್ತಕದಲ್ಲಿ ಕಣ್ಮುಂದೆ ಚಾಚಿ ನಿಲ್ಲುತ್ತವೆ. ಭವಣೆಯ ಪರಿಪಾಡಿನಿಂದ ಭ್ರಮನಿರಸನಗೊಳ್ಳದೇ ಹೋದದ್ದು ವಿಸ್ಮಯಕರ!

ಗ್ರಾಮೀಣ ಬದುಕಿನಲ್ಲಿ ಚಿರಪರಿಚಿತರಾಗಿ ಬೆಳೆದ ವೀರೇಶ್‌ರಲ್ಲಿ ಜಾನಪದ ಸಂಸ್ಕೃತಿ, ಭಾಷೆಯ ವೈಖರಿ, ಪರಂಪರಾಗತವಾಗಿ ಹರಿದು ಬಂದ ರೀತಿ ನೀತಿ, ಆಚಾರ ವಿಚಾರಗಳು, ವ್ಯವಹಾರ ವಹಿವಾಟುಗಳು ಚಿತ್ರವತ್ತಾಗಿ ಗ್ರಂಥದ ಮೊದಲ ಭಾಗಗಳಲ್ಲಿ ಹೆಚ್ಚಿನ ಚಿರಮುದ್ರೆಯಿಂದ ತೆರೆದುಕೊಳ್ಳುತ್ತವೆ. ಮಲೆನಾಡಿನ ಮನುಷ್ಯ ಪ್ರಾಣಿ ಪಕ್ಷಿಗಳ ನೈಸರ್ಗಿಕ ಹೊನಲು, ಅಂತಹ ಪ್ರಾದೇಶಿಕ ಸೊಬಗಿನಲ್ಲಿ ಎದ್ದು ಕಾಣುವಂತಹ ವಿಶೇಷಗಳಲ್ಲದೆ, ಬಡತನದ ಬೇಗೆಯಲ್ಲಿ ನೊಂದು ಬೆಂದವರಿಗೆ ಬದುಕಿನ ಸುವರ್ಣಾವಕಾಶಗಳೂ ಹೇಗೆ ದೂರ ಸರಿಯುತ್ತವೆ ಎಂಬ ವಿವರಗಳೂ ಸಂಕ್ಷಿಪ್ತವಾಗಿ ಆದರೆ ಪರಿಣಾಮಕಾರಿಯಾಗಿ ಬಹಿರಂಗಗೊಳ್ಳುತ್ತವೆ. ಕನ್ನಡ ಭಾಷೆಯ ಬಳಕೆ ಆಕರ್ಷಕವಾಗಿದೆ.

ಮಲೆನಾಡಿನ ಪ್ರಾದೇಶಿಕ ಕನ್ನಡ ಪ್ರಭೇದಗಳು ಸಾಕಷ್ಟು ಕಾಣಿಸಿಕೊಳ್ಳುತ್ತವೆ. ಅಲ್ಲದೆ ಜಾನಪದ ಸಂಪತ್ತಿನ ಶಬ್ದಕೋಶ ಕಣ್ಸೆಳೆಯುವಂಥದ್ದು. ಕುವೆಂಪು, ಕಾರಂತರು, ಗೊರೂರು, ಚದುರಂಗ, ರಾವ್ ಬಹದ್ದೂರು, ಎಚ್.ಎಲ್. ನಾಗೇಗೌಡ, ದೇಜಗೌ, ದೇವನೂರ ಮಹಾದೇವ ಮೊದಲಾದವರ ಕೃತಿಗಳಲ್ಲಿ ಎದ್ದು ಕಾಣುವಂತೆ ಇಲ್ಲೂ ಸಹ ಅಲ್ಲಲ್ಲಿ ಗಮನವನ್ನು ಸೆಳೆಯುತ್ತದೆ.

ವೀರೇಶ್ ಅವರು ಕೃಷಿ ಪದವೀಧರರಾದದ್ದು 1957 ರಲ್ಲಿ – ಅಲ್ಲಿಂದ 1998ರ ವರೆಗೆ ಅವರು ಸಲ್ಲಿಸಿರುವ ಸೇವೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ – 41 ವರ್ಷಗಳ ಕಾಲ ಅವರು ಗಳಿಸಿರುವ ಅನುಭವಧಾರೆಯ ಪಾಕವೇ "ಬಯಸದೇ ಬಂದದ್ದು" ಗ್ರಂಥದಲ್ಲಿ, ಪುನರಾವೃತ್ತಿಗೊಳ್ಳದ ರೀತಿಯಲ್ಲಿ, ಪ್ರತಿಯೊಂದೂ ಉಲ್ಲೇಖಾರ್ಹ ಸಂಗತಿಯನ್ನು ಸುಲಲಿತ ವಾಕ್ಯ ಸರಣಿಯಲ್ಲಿ ಬರೆದಿದ್ದಾರೆ. ನಾಲ್ಕಾರು ಪ್ರತ್ಯೇಕ ವಾಕ್ಯಗಳಲ್ಲಿ ಬರಬಹುದಾದ ಪುಂಜವನ್ನು ಕೇವಲ ಏಕೈಕ ವಾಕ್ಯದಲ್ಲಿ ಸಮರ್ಥನೀಯವಾಗಿ, ಸರಾಗವಾಗಿ ಹರಿಸುವ ಧಾಟಿಯಲ್ಲಿ ನಿರೂಪಿಸುತ್ತಾರೆ. ಆಡುಮಾತೆನಿಸಿದರೂ ಅದು ಖಚಿತವಾದದ್ದು, ಪ್ರಮಾಣಬದ್ಧವಾಗಿರುತ್ತದೆ. ಇದೊಂದು ಭಾಷೆಯ ದೃಷ್ಟಿಯಿಂದ ಹೊಸ ಆಯಾಮವನ್ನು ನಿರ್ದೇಶಿಸುತ್ತದೆ. ಆದರಲ್ಲೂ ಕೃಷಿ ವಿಜ್ಞಾನಿಯೊಬ್ಬರ ಈ ತೆರನಾದ ಅನೈಚ್ಛಿಕ, ಸ್ವಾಭಾವಿಕ ಕನ್ನಡ ಪ್ರಯೋಗ ಮೆಚ್ಚುವಂತಹದು.

ಗಣನೀಯ ದಾಖಲೆಯ ಸೊಬಗು:

ಮತ್ತೊಂದು ಕಣ್ಣಿಗೆ ಕೋರೈಸುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದು ಕೇವಲ ಸೂಕ್ತವಷ್ಟೇ ಅಲ್ಲ, ಅತ್ಯಂತ ಗಣನೀಯವಾದ ಅಂಶ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವೀರೇಶ್ ಅವರನ್ನು ಬಿಟ್ಟು ಎಂಟು ಉಪಕುಲಪತಿಗಳು – ಇವರು ಸ್ಥಾನವನ್ನು ಅಲಂಕರಿಸುವ ಮೊದಲು – ನೇಮಕಗೊಂಡು, ಕಾರ್ಯಭಾರವನ್ನು ಚಾಕಚಕ್ಯತೆಯಿಂದ ನಡೆಸಿದ್ದುಂಟು. ಆ ಪೈಕಿ ಕೆಲವರು ನಿಷ್ಣಾತ ವಿಜ್ಞಾನಿಗಳು, ತೀಕ್ಷ್ಣಮತಿಗಳೂ ಮತ್ತು ಮೇಲ್ದರ್ಜೆಯ ಶೈಕ್ಷಣಿಕ, ಸಂಶೋಧಕ ಮತ್ತು ವಿಸ್ತರಣಾ ಪರಿಶ್ರಮಗಳಲ್ಲಿ ಪರಿಪಕ್ವತೆಯನ್ನು ಸಂಪಾದಿಸಿದವರಾಗಿದ್ದು, ವಿಶ್ವವಿದ್ಯಾನಿಲಯದ ಬೆಳವಣಿಗೆಗೆ ಮತ್ತು ಶ್ರೇಯೋಭಿವೃದ್ಧಿಗೆ ಸತತ ಶ್ರಮಿಸಿದ್ದವರಾಗಿರುವುದೂ ಉಂಟು. ಆದರೆ ಯಾರೂ ಆ ಪೈಕಿ ಏಕೋ ಏನೋ ತಮ್ಮ ನಿಲವು ನಿರ್ಧಾರಗಳನ್ನು, ಅನುಭವ ಆಧಾರಗಳನ್ನು, ದರ್ಶನ ಒಳನೋಟಗಳನ್ನು ಬರವಣಿಗೆಯ ರೂಪದಲ್ಲಿಳಿಸಿ, ಗ್ರಂಥರಚನೆಯ ಸ್ವಾರಸ್ಯವನ್ನು ಹೃನ್ಮನಗಳಿಗೆ ರುಚಿಸಲೆಂದು ಹಂಚಿಕೊಂಡಿದ್ದಿಲ್ಲ. ಕೇವಲ ವರದಿಗಳು ಮತ್ತು ದಾಖಲೆಗಳಲ್ಲದೆ ಬೇರೆ ಮಜಲಿನಲ್ಲಿ ಅಥವಾ ಸಾಹಿತ್ಯಕ ಶೈಲಿಯಲ್ಲಿ ಬರೆದುದಿಲ್ಲ.

ಹಾಗೆ ಯೋಜಿಸಿಕೊಂಡು, ಅಭಿವ್ಯಕ್ತಿಯ ರೂಪರೇಷೆಗಳಿಗೆ ಸ್ಪಷ್ಟ ಆಕಾರ ಸ್ವರೂಪವನ್ನು ಕೊಟ್ಟ ಕೃಷಿ ವಿಶ್ವವಿದ್ಯಾನಿಲಯದ ಏಕೈಕ ಉಪಕುಲಪತಿ ಎಂದರೆ ಡಾ|| ಜಿ.ಕೆ. ವೀರೇಶ್ – ಈ ಪಟ್ಟಿಯಲ್ಲಿ ಅವರೇ ಪ್ರಪ್ರಥಮರು.

ವಿವಿಧ ಶಾಖೆಗಳಲ್ಲಿ, ವಿಭಾಗಗಳಲ್ಲಿ, ಅಧ್ಯಯನ ಶಿಸ್ತು, ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಈ ವಿಧವಾದ ಬರವಣಿಗೆ ಅತ್ಯಂತ ಸಾಂದರ್ಭಿಕವಾದದ್ದು. ನಮ್ಮ ಇಂದಿನ, ಪ್ರಸ್ತುತ ಸಂದಿಗ್ಧ, ಸಂಕೀರ್ಣ ವಿದ್ಯುನ್ಮಾನ ಕ್ರಾಂತಿಕಾಲದಲ್ಲಿ, ಬಾಹ್ಯಾಕಾಶ ಉಪಗ್ರಹ ಉಡಾವಣೆಯಲ್ಲಿ, ಅಂತರ್‌ಗ್ರಹಯಾನ ಪರ್ಯಾಯ ಯುಗದಲ್ಲಿ, ಸ್ಫೋಟಕ ಸಂವಹನ ಮತ್ತು ಕಂಪ್ಯೂಟರ್ ದಿಕ್ಕುದಿಶೆಗಳಲ್ಲಿ, ಅಂತಹ ವಿಚಾರ ವಿನಿಮಯದ ಪ್ರಯೋಜನ, ಅಮಿತವಾದದ್ದು – ಉದಾಹರಣೆಗಾಗಿ ಓರ್ವ ಲೇಜರ್ ನಿಷ್ಣಾತ, ಸೆಲ್ ಜೀವ ವಿಜ್ಞಾನಿ, ಮಾಲ್ಯೂಕುಲರ್ ತಜ್ಞ, ರಾಕೆಟ್ ತಾಂತ್ರಿಕ ಪಟು, ಸಮುದ್ರ ವಿಜ್ಞಾನ ಪರಿಣಿತ, ಕ್ಯಾನ್ಸರ್ ಸರ್ಜನ್, ಪರಿಮಾಣು ಪ್ರಾಯೋಗಿಕ ನಿಪುಣ, ಮೊದಲಾದವರು ಸಹ ಸಮಾಜ ವಿಜ್ಞಾನ, ತತ್ವಶಾಸ್ತ್ರ, ರಾಜಕೀಯ ಹಾಗೂ ಮಾನಸಿಕ ಶಾಸ್ತ್ರಗಳಲ್ಲಿ ತೊಡಗಿರುವವರಂತೆ, ಸಾಹಿತಿಗಳು ಮತ್ತು ಕೈಗಾರಿಕೋದ್ಯಮಿಗಳಂತೆ (ವಿಶೇಷವಾಗಿ ವಿದೇಶಗಳಲ್ಲಿ) ಒಂದಲ್ಲ ಒಂದು ರೀತಿಯ ಆತ್ಮಾನ್ವೇಷಣೆಯಲ್ಲಿ ಮುಳುಗಿ, ತಾವು ಕಂಡುಂಡ ಜೀವನದ ಸಿಹಿಕಹಿ, ವಿರೋಧಾಭಾಸಗಳು, ನೋವು ನಲಿವಿನ ಪ್ರಸಂಗಗಳು, ಹಾಸ್ಯ ವಿನೋದದ ಸನ್ನಿವೇಶಗಳು ಮೊದಲಾದ ಅಗತ್ಯ ಸೃಜನ ವಸ್ತು ಸಾಮಗ್ರಿಗಳನ್ನು ಬಳಸಿ, ತಮ್ಮ ನೇಯಿಗೆಯನ್ನು ಪ್ರದರ್ಶಿಸುತ್ತಾರೆ. ಅಂತಹ ಸ್ತುತ್ಯಾರ್ಹ ಆತ್ಮ ಚರಿತ್ರಗಳು ನಮ್ಮಲ್ಲೂ ಸ್ವಾಗತಾರ್ಹ. (ಇತ್ತೀಚಿನ ಎ.ಎನ್. ಯಲ್ಲಪ್ಪರೆಡ್ಡಿಯವರ "ಹಸಿರು ಹಾದಿ" ನಿರೂಪಣೆ : ಸತೀಶ್ ಚಪ್ಪರಿಕೆ – ಅರಣ್ಯಕ್ಕೆ ಸಂಬಂಧಿಸಿದಂತೆ ಉಲ್ಲೇಖಾರ್ಹ)

ಕೆಲವೊಂದು ನಿದರ್ಶನಗಳು:

ವೀರೇಶ್‌ರ ನಿರೂಪಣೆಯಲ್ಲಿ ಅನೇಕಾನೇಕ ನಿದರ್ಶನಗಳು ಕಣ್ಣಿಗೆ ಕಟ್ಟುವಂತೆ ಸಾದರಗೊಳ್ಳುತ್ತವೆ. ಅವು ಓದುಗರ ಗಮನವನ್ನು ಸೆರೆಹಿಡಿಯುವುದರಲ್ಲಿ ಕಿಂಚಿತ್ತೂ ಸಂದೇಹ ಬೇಡ. ಆಯ್ಕೆಯಲ್ಲಿ ಬಂದೊದಗುವ ಸನ್ನಿವೇಶಗಳು ಮನಸ್ಸಿಗೆ ಮುದವನ್ನು ನೀಡುತ್ತವೆ.

ಯಾವುದೇ ವರ್ಗ ವಿಂಗಡನೆಯಾಗಲಿ, ವೃತ್ತಿಪರ ಶ್ರೇಣಿಯಾಗಲಿ ಪ್ರತ್ಯೇಕವಾಗಿ ಮೀಸಲಾಗುವುದಿಲ್ಲ. ಅತ್ಯಂತ ಸ್ವಾಭಾವಿಕವಾಗಿ ಹರಡುವ ವಿಚಾರಧಾರೆ ಸಣ್ಣದಿರಲಿ ದೊಡ್ಡದಿರಲಿ, ಸಾಮಾನ್ಯವಿರಲಿ ಗಂಭೀರವಿರಲಿ, ಮೇಳವಿಸಿಕೊಳ್ಳುವುದು ವೀರೇಶ್‌ರ ನಿರೂಪಣಾ ಶಕ್ತಿಗೆ ಸಾಕ್ಷಿಗಳಾಗಿದೆ.

"ಅರಕಲಗೂಡು ಪ್ಲೇಗಿಗೆ ಹೆಸರಾದದ್ದು.... ಇಲಿ ಸತ್ತು ಬಿದ್ದ ಸುದ್ದಿ ಮುಟ್ಟಿದರೆ ಸಾಕು, ಪ್ಲೇಗ್ ಇನಾಕ್ಯುಲೇಷನ್ ತೆಗೆದುಕೊಂಡು ನಾಲ್ಕು ದಿವಸ ಮಲಗಬೇಕಿತ್ತು. ಕೆಲವು ತುಂಟ ಹುಡುಗರು ಎಲ್ಲಿಯಾದರೂ ಇಲಿ ಹೊಡೆದು ಸ್ಕೂಲಿಗೆ ತಂದು ಹಾಕುತ್ತಿದ್ದರು. ಸತ್ತ ಇಲಿ ಕಂಡಮೇಲೆ ಸ್ಕೂಲು ಮುಚ್ಚಲೇಬೇಕಿತ್ತು!"

"ಷಷ್ಠಿ ಸುಬ್ರಹ್ಮಣ್ಯ ಜಾತ್ರೆಗೆ ಹೋಗುವುದೆಂದರೆ ಊರಿನವರಿಗೆ (ಇಪ್ಪತ್ತು ಮನೆಗಳಿದ್ದ ವೀರೇಶ್‌ರ ಊರು ಗೊದ್ದು) ಒಂದು ವಿಶೇಷ. ಕಾಲುದಾರಿಯಲ್ಲಿ ಸುಬ್ರಹ್ಮಣ್ಯಕ್ಕೆ ದೂರ 20 ಮೈಲಿ ... ಮೂವತ್ತೆರಡು ಮೈಲಿ ಅರಕಲಗೂಡಿಗೆ ನಡೆದವನಿಗೆ ಇದೇನು ಕಷ್ಟದ ಕೆಲಸವಲ್ಲ.... ದಟ್ಟವಾದ ಕಾಡು, ಮುಗಿಲೆತ್ತರ ಮರಗಳು, ಮಧ್ಯಾಹ್ನದ ಹೊತ್ತು ಹವೆ ತಂಡಿಯಾಗಿ ತೊಟ್ಟಿಡುತ್ತಿತ್ತು. ನೈಸರ್ಗಿಕ ನೋಟ, ಮುಂಗಾರು ಮಳೆಯನಂತರ ಎದ್ದ ಬುಗ್ಗೆಗಳು ಇನ್ನೂ ಬತ್ತಿರಲಿಲ್ಲ.... ತರತರಹದ ಝರಿ, ಜಲಪಾತ, ಹಳ್ಳಕೊಳ್ಳಗಳನ್ನು ದಾಟುವಾಗ ತಿಳಿ ನೀರಿನಲ್ಲಿ ಕಾಣುತ್ತಿದ್ದ ಮೀನುಗಳು, ಬಗೆಬಗೆಯ ಹೂವುಗಳು ಬಳ್ಳಿಗಳು, ಉದ್ದನೆ ಬಾಲದ ಕೆಂಜೆಳ್ಳು, ಮನಮೋಹಕ. ಬಯಲು ಸೀಮೆಯಲ್ಲಿ ಕಾಣದ ಬಗೆ ಬಗೆಯ ಪಕ್ಷಿಗಳು ಇವೆಲ್ಲವೂ ಉಲ್ಲಾಸ, ತಂದಿದ್ದವು... ಅಲ್ಲಿಯ ಸಂಪನ್ಮೂಲಗಳ ನಾಶ ನೋಡಿದರೆ ಇಂದು ಅದೋ ಇದೋ ಎಂಬ ಸಂಶಯ ಬರುತ್ತದೆ... ಹಿಮಾಲಯ ಪರ್ವತಗಳ ಶ್ರೇಣಿಯಲ್ಲಿಯೂ ಕೂಡ ಅಂತಹ ರಮಣೀಯವಾದ ದೃಶ್ಯ ಕಂಡಿರಲಿಲ್ಲ..." (ಪುಟ 37)

"...ಮಹಾರಾಜಾ ಕಾಲೇಜು ಹಾಸ್ಟೆಲ್‌ನಲ್ಲಿದ್ದು ಹೆಬ್ಬಾಳದ ಕೃಷಿ ಕಾಲೇಜು ಹಾಸ್ಟೆಲ್‌ಗೆ ಸೇರಿದಾಗ ಅದೆಂತಹ ಬದಲಾವಣೆ ಎಂದು ಅನುಭವಿಸಿದವರಿಗೇ ಗೊತ್ತು! ಲಾಹೋರ್ ಶೆಡ್ಡುಗಳೆ ನಮ್ಮ ರೂಮ್. ಒಂದೊಂದರಲ್ಲಿ ಎಂಟರಂತೆ ಮಂಚ, ಟೇಬಲ್ ಇದ್ದವು. ರಾತ್ರಿ ಮಲಗಿ, ಮೇಲೆ ನೋಡಿದರೆ ಇಲಿ, ಹೆಗ್ಗಣಗಳು ಸಾಲು ಸಾಲಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಮಾನಿನಂತಿದ್ದ ಮರದ ಮೇಲ್ಛಾವಣಿಯಲ್ಲಿ ಓಡಾಡುತ್ತಿದ್ದರೆ, ಯಾವಾಗ ಮೈಮೇಲೆ ಬಿದ್ದಾವೋ ಎಂದು ಗಾಬರಿಯಾಗುತ್ತಿತ್ತು.... ಇಲಿಗಳ ಓಡಾಟ ನೋಡಿ ನನ್ನ ಸಹಪಾಠಿಗೆ ಜ್ವರವೇ ಬಂದಿತ್ತು. ಎರಡು ಮೂರು ದಿನ ಕಳೆದ ಮೇಲೆ, ಎಲ್ಲರೂ ಸೇರಿದ ನಂತರ ಬಹುಶಃ ಇಲಿಗಳಿಗೆ ಜ್ವರ ಬಂದಿರಬೇಕು!" (ಪುಟ 57)

".... ಇಂಗ್ಲೆಂಡ್‌ನ ರಾಣಿ ಎಲಿಜಬೆತ್ ಮತ್ತು ಅವರ ಪತಿ ಪ್ರಿನ್ಸ್ ಫಿಲಿಪ್ಸ್ ಭಾರತಕ್ಕೆ ಬಂದಿದ್ದಾಗ ಡೆಲ್ಲಿಯ ಐ.ಎ.ಆರ್.ಐ.ಗೆ ಭೇಟಿಕೊಟ್ಟಿದ್ದರು. ಅಂದು ನಾನು ಲೈಬ್ರರಿಯಲ್ಲಿ ಏನೋ ರೆಫರೆನ್ಸ್ ನೋಡುತ್ತಿದ್ದೆ. ನಾನು ಮಧ್ಯೆ ಇದ್ದು ಎಡ ಬಲಕ್ಕೆ ರಾಣಿ ಮತ್ತು ಅವರ ಪತಿ ನಿಂತಿದ್ದ ಒಂದು ಫೋಟೋವನ್ನು ಒಬ್ಬ ಫೋಟೋಗ್ರಾಫರ್ ತೆಗೆದಿದ್ದನ್ನು ತಂದು, ಮೂರು ರೂಪಾಯಿ ಕೊಟ್ಟರೆ ಆ ಫೋಟೋವನ್ನು ನನಗೆ ಕೊಡುವುದಾಗಿ ಹೇಳಿದ. ನನ್ನಲ್ಲಿ ದುಡ್ಡು ಇರಲಿಲ್ಲ. ಅದರ ಆವಶ್ಯಕತೆಯೂ ಅಂದು ಕಾಣಲಿಲ್ಲ....." (ಪುಟ 73)

"ಹಿತ್ತಲ ಗಿಡ ಮದ್ದಲ್ಲ" ಎಂಬ ನಾಣ್ಣುಡಿ ಅಕ್ಷರಶಃ ನಿಜ. ಏಕೆಂದರೆ ಡಾ|| ಜಿ.ಕೆ. ವೀರೇಶ್ ಗಳಿಸಿರುವ ಮಹತ್ ಸಾಧನೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾನ್ಯತೆ,

ಶ್ರೇಷ್ಠತೆಗೆ ದಾಖಲಾಗುವಂತಹದ್ದು. ಕೀಟಶಾಸ್ತ್ರ ತಜ್ಞರಾಗಿ, ತಂತ್ರವಿಜ್ಞಾನ ಪರಿಶೋಧಕರಾಗಿ ಗಿಡ ಬಳ್ಳಿ, ಧವಸಧಾನ್ಯ, ಹಣ್ಣು ಹಂಪಲು, ಅಷ್ಟೇ ಏಕೆ ಇಡೀ ಸಸ್ಯರಾಶಿಯ ರಮ್ಯ ಲೋಕಕ್ಕೆ ಅವರು ನೀಡಿರುವ ಕಾಣಿಕೆ ಅಮೋಘವಾದದು. ಯಾವುದೇ ಬೆಳೆಗೆ ಗಂಡಾಂತರವೆನಿಸುವ ಪೀಡೆಗಳೆಂದರೆ 'ರೂಟ್‌ಗ್ರಬ್ಸ್' — ಅದರ ಸಾಂಕ್ರಾಮಿಕತೆ ಹಲವು ಹತ್ತಾರು ಕಡೆಯಿಂದ ಆಕ್ರಮಿಸಿ, ಸರ್ವನಾಶ ಮಾಡುವುದುಂಟು. ಗೊಬ್ಬರದ ಹುಳು, ಬೇರು ತಿನ್ನುವ ಹುಳು, ಗೊಣ್ಣೆಹುಳು, ಇತ್ಯಾದಿ ಬಾಧಿಸುವ ರೋಗರುಜಿನಗಳು, ಕೀಟ ಬಾಧೆಗಳು ಅನೇಕ.

ವೀರೇಶ್ ಸೂಚಿಸುವ ವಿಧಾನ ನಿಜಕ್ಕೂ ಪ್ರಶಂಸನೀಯ. ಯಾವ ಕ್ರಮವನ್ನಾಗಲಿ, ಧಾರ್ಮಿಕ ವಿಧಿಯನ್ನಾಗಲಿ ಟೀಕಿಸದೆ ನೀಡುವ ವ್ಯಾಖ್ಯಾನವೊಂದನ್ನು ಇಲ್ಲಿ ಗಮನಿಸಿ: "ಹಾವಿದೆಯೆಂದು ಹುತ್ತವನ್ನು ಪೂಜಿಸುವವರು ಗೆದ್ದಲನ್ನೇ ಪೂಜಿಸುತ್ತಾರೆ. ವಿಪರ್ಯಾಸವೆಂದರೆ ನಮ್ಮ ಶತ್ರುವನ್ನು ಹಾಲೆರೆದು ಪೂಜಿಸಿದ ಹಾಗೆ! ಬೆಳೆಯುತ್ತಿರುವ ಹುತ್ತದಲ್ಲಿ ಹಾವಿರಲು ಸಾಧ್ಯವೇ ಇಲ್ಲ. ಗೆದ್ದಲನ್ನು ಬಿಟ್ಟು ಮತ್ತಾವ ಕೀಟವಾಗಲಿ, ಪ್ರಾಣಿಯಾಗಲಿ ಒಳಹೋಗಲು ಸಾಧ್ಯವೇ!" (ಪುಟ 146)

ಆದರೂ ಪ್ರಕೃತಿಯಲ್ಲಿ ಅವ್ಯಾಹತವಾಗಿ, ಅನುರಣಿತವಾಗಿ, ಕಾರ್ಯನಿರ್ವಾಹಕ ಸೂತ್ರವೊಂದಿದೆ. ಸೃಷ್ಟಿಯ ಬ್ರಹ್ಮಾಂಡ ರಚನೆಯಲ್ಲಿ 'ಜೈವಿಕ ಸಮತೋಲನ' ಎಂಬುದು ಜೀವದಾಹಿನಿ. ಕೇವಲ ವೈಜ್ಞಾನಿಕ ಸಂಶೋಧನೆಯ ಒಂದೇ ಜಾಡನ್ನು ಹಿಡಿದು ಅಂತಿಮ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಆರೋಗ್ಯಕರವೆನಿಸದು. ಅದರಿಂದ ಅನೇಕ ವೇಳೆ ಸಂರಕ್ಷಣೆಗಿಂತ, (ಅವಸರದಲ್ಲಿ ಪ್ರಯೋಗಿಸಿದ ಕಾರಣ), ಸಹಾಯಕ್ಕಿಂತ ಅಪಾಯವೇ ಹೆಚ್ಚು. ಈ ಪರಸ್ಪರ ಪೋಷಕ, ದಿವ್ಯ ಪರಿಕಲ್ಪನೆಯ ಬುನಾದಿಯ ಮೇಲೆ ನಿಂತಿದೆ – ಸಾವಯವ ಬೇಸಾಯ! ಸಾರಸ್ವತ ರೂಪದಲ್ಲಿ ವ್ಯಕ್ತಪಡಿಸಬೇಕೆಂದರೆ "ಮಾನವನ ಸಂಪನ್ಮೂಲಗಳಲ್ಲಿ ಕೀಟಗಳೂ ಒಂದು ಭಾಗ. ಕೀಟಗಳಿಂದ ಮಾನವನಿಗೆ ಅಪಾರ ಹಾನಿಯುಂಟಾಗಿದ್ದರೂ ಅವುಗಳಿಂದ ಉಪಯೋಗ ಕೂಡ ಆಗಿದೆ...."

– ಈ ನಿಟ್ಟಿನಲ್ಲಿ ವೀರೇಶ್ ಕೈಗೊಂಡ ಸೋಲನಾಪ್ಸಿಸ್ ಪ್ರಾಜೆಕ್ಟ್ ಬಗ್ಗೆ ಯು.ಎಸ್.ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ 'ಅಪ್ರಿಸಿಯೇಶನ್' ಕಳಿಸಿದ್ದಾರೆ. ಈ ಹಿಂದೆಯೇ ಬೇರು ಹುಳುವಿನ ಮೇಲೆ ನಡೆಸಿದ ಅತ್ಯುತ್ತಮ ಸಂಶೋಧನೆಗೆ ರಾಷ್ಟ್ರಮಟ್ಟದ 'ಹೂಕರ್ ಅವಾರ್ಡ್' ಮತ್ತು ಮಣ್ಣಿನ ಜೀವಿಗಳ ಮೇಲೆ ಕುರಿತ ಅತ್ಯುತ್ತಮ ಸಂಶೋಧನೆಗೆ ಕೃ.ವಿ.ವಿದ್ಯಾನಿಲಯಗಳ ಅವಾರ್ಡ್‌ಗಳೂ ಬಂದಿವೆ..." ಬೆಂಗಳೂರು ಕೃ.ವಿ.ವಿ. ಪ್ರಾರಂಭಿಸಿದ ಮಣ್ಣುಜೀವಿ ಮತ್ತು ಪರಿಸರ ವಿಜ್ಞಾನ 'ಸಾಯಿಲ್ ಬಯಾಲಜಿ ಆ್ಯಂಡ್ ಇಕಾಲಜಿ' ವಿಭಾಗ ಭಾರತ ದೇಶದಲ್ಲೇ ಮೊಟ್ಟ ಮೊದಲನೆಯದು.

ವೀರೇಶ್ ಅವರ ಅಧ್ಯಯನ, ಸಂಶೋಧನೆಯ ಪರ್ಯಾಯ ಕಾಲದಲ್ಲಿ ಡಾ॥ ಎಂ. ಪುಟ್ಟರುದ್ರಯ್ಯನವರು ನೀಡಿದ ಅವಿಚ್ಛಿನ್ನ ಮಾರ್ಗದರ್ಶನವನ್ನು ಅತ್ಯಂತ ನಮ್ರಭಾವದಿಂದ ನೆನೆದು ನಮಿಸುತ್ತಾರೆ. ಹಾಗೆಯೇ ಅವರ ಕೃತಜ್ಞತೆ ಡಾ॥ ಚನ್ನಬಸವಣ್ಣ ಮತ್ತು ಡಾ॥ ಕೆ. ಎಸ್. ಕೃಷ್ಣಶಾಸ್ತ್ರಿಯವರಿಗೂ ಸಲ್ಲುತ್ತದೆ.

ಉನ್ನತ ಅಧ್ಯಯನ, ಪರಿಣತ ವ್ಯಾಸಂಗ ಮತ್ತು ವ್ಯಾಪಕ ಚರ್ಚೆಗಳ ದೀರ್ಘ ಕಾಲಾವಧಿಯಲ್ಲಿ ಸುಮಾರು ಎರಡು ದಶಕಗಳಿಗೂ ಮೀರಿದಂತೆ ಅನೇಕ ಕೀಟಶಾಸ್ತ್ರ ಮತ್ತು ಜೈವಿಕ ಶಾಸ್ತ್ರಗಳಲ್ಲಿ ವಿಖ್ಯಾತರೆನಿಸಿದ ದಿಗ್ಗಜಗಳ ಸಂಪರ್ಕವನ್ನು ಗಳಿಸಿರುವ ಹಿರಿಮೆ

ವೀರೇಶ್‌ರದು. ಆಕಸ್ಮಿಕವೆಂದೆನ್ನಿ ಅಥವಾ ಅದೃಷ್ಟವೆಂದೆನ್ನಿ, ಅವರು ನೈಜೀರಿಯಾದಲ್ಲಿರಲಿ, ಮಾಸ್ಕೋದಲ್ಲಿರಲಿ, ಕ್ಯಾನ್‌ಬರಾದಲ್ಲಿರಲಿ ಅಥವಾ ಕೆನಡಾದಲ್ಲಿರಲಿ, ಟೋಕಿಯೋದಲ್ಲಿರಲಿ ಅಥವಾ ಪ್ಯಾರಿಸ್‌ನಲ್ಲಿರಲಿ, ಲಂಡನ್‌ನಲ್ಲಿರಲಿ ಅಥವಾ ಕೊಪೆನ್‌ಹ್ಯಾಗ್‌ನಲ್ಲಿರಲಿ ವೀರೇಶ್ ತಮ್ಮ ಸ್ನೇಹಪರ ಸೌಹಾರ್ದ, ಸೌಜನ್ಯ ಹಾಗೂ ಆಳವಾದ ವಿದ್ವತ್ತಿನಿಂದ ಜನಮನವನ್ನು ಗೆದ್ದವರು. ಅಪಾರ ಸಂಖ್ಯೆಯಲ್ಲಿ ಪ್ರಬುದ್ಧ ಪ್ರಬಂಧಗಳನ್ನು ರಚಿಸಿ, ರೈತೋಪಯೋಗಿ ಗುರಿಯಿಟ್ಟುಕೊಂಡು ಪ್ರಕಟಿಸಿದ್ದಾರೆ. ಕಿರುಹೊತ್ತಿಗೆಗಳು, ಪುಸ್ತಕಗಳು, ಕೈಪಿಡಿಗಳಾದಿಯಾಗಿ ಅನೇಕ ಉಪಯುಕ್ತ ವಿಚಾರಧಾರೆಯೇ ಅವರ ಪಾಲಿಗೆ ಇದ್ದು, ಖ್ಯಾತಿಯನ್ನು ತಂದಿದೆ. ಪ್ರಗತಿಪರ ಕೀಟಶಾಸ್ತ್ರ ಸಂಘ ಸಂಸ್ಥೆಗಳಿಗೆ, ಮಂಡಳಿಗಳಿಗೆ, ಸಮಿತಿಗಳಲ್ಲಿ ಅಮೂಲ್ಯವಾದ ತಮ್ಮ ಜ್ಞಾನ ಮತ್ತು ಅನುಭವವನ್ನು ನೀಡಿದ್ದು, ಮೆಚ್ಚುವಂತಹ ನಿಷ್ಕರ್ಷೆ ನಿರ್ಧಾರಗಳನ್ನು ತಿಳಿಸಿ, ಹೊಸ ಹೊಸ ತಿರುವು, ಅತ್ಯಾಧುನಿಕತೆಯ ಮರ್ಜಿಯನ್ನು ಸ್ಪಷ್ಟಪಡಿಸಿರುವುದುಂಟು.

ಇನ್ನು ವೀರೇಶ್‌ರು ಸೆಮಿನಾರ್, ವಿಚಾರಗೋಷ್ಠಿ, ಕಾರ್ಯಾಗಾರ, ಸಭೆ ಸಮೂಹಗಳು, ಚರ್ಚಾಕೂಟ ಮತ್ತು ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿರುವುದು ಅಪಾರ. ವಿಶ್ವವಿಖ್ಯಾತ ಬ್ರಿಟಿಷ್ ಮ್ಯೂಜಿಯಮ್ ಆಫ್ ನ್ಯಾಚುರಲ್ ಹಿಸ್ಟರಿ ಮತ್ತು ನೈಜೀರಿಯ ಮ್ಯೂಜಿಯಮ್‌ಗಳಲ್ಲಿ ಬಹಳ ಗಂಭೀರವಾದ, ಗುರುತರವಾದ ಅಧ್ಯಯನದಲ್ಲಿ ಮಗ್ನರಾಗಿರುವುದೂ ಉಂಟು. ನೈಜೀರಿಯಾ 'ಗೆದ್ದಲಿನ ಸ್ವರ್ಗ'ವೆಂಬ ಸತ್ಯ ಅವರ ನೆನಪಿನಲ್ಲಿ ಮಾಸದು! ವೀರೇಶ್‌ರ ನಿಕಟವಾದ ಸಂಶೋಧನಾ ಸಂಪರ್ಕಗಳು ಗಣನೀಯವಾದವಷ್ಟೇ ಅಲ್ಲ, ಅಂತರರಾಷ್ಟ್ರೀಯ ಖ್ಯಾತಿವೆತ್ತ, ಘನತೆಯುಳ್ಳ ಸಂದರ್ಭಗಳು. ಪ್ರೊ|| ಪಾಲ್ ರಿಚರ್, ಡಾ|| ಟಿ.ಜಿ. ವುಡ್, ಡಾ|| ಸಿ.ಎ. ಎಡ್ವರ್ಡ್ಸ್, ಡಾ|| ಗಿಲರಾವ್ ಮುಂತಾದವರು ಡಾ|| ವೀರೇಶ್‌ರವರ ಜೀವನದಲ್ಲಿ ಅವಿಭಾಜ್ಯ ಅಂಗಗಳಂತೆ ವಿರಾಜಮಾನರಾಗಿದ್ದಾರೆ. ಹಾಗೆಯೇ ಅತೀಂದ್ರಿಯಾ ದರ್ಶನದ ಪ್ರವಾದಿ ಎಡ್ಗರ್ ಕೇಸಿಯ 'Clairvoyance' ಬಗ್ಗೆ ಅವರು ಆಸ್ಥೆಯುಳ್ಳವರಾಗಿರುವುದೂ ವಿಸ್ಮಯಕರ ಸಂಗತಿಯೇ ಸರಿ!

ವೀರೇಶ್‌ರ ಹೃದಯದಲ್ಲಿ ಮೃದು ಮಧುರ, ಸವಿ ಸಂವೇದನೆಗಳು, ಕ್ಷಣಭಂಗುರ ಗಳಿಗೆಗಳ ಮೂಲಕ ಅತುಲಾನಂದ ಕಾವ್ಯಾನಂದ ಲೋಕದಲ್ಲಿ ಮಿಂದು ಮೀಯುತ್ತವೆ ಎಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿ, ಇಲ್ಲಿ ಉದಹರಿಸಿರುವ ಕೆಲವು ಸಾಲುಗಳು ಪ್ರಮಾಣಪೂರ್ಣ ಸಾಕ್ಷಿಗಳಾಗಿವೆ, ಕಾಂತಿಯುಕ್ತವಾಗಿ ಕಂಗೊಳಿಸುತ್ತವೆ : "ಇಬೆಡಾನ್ ಸಹರಾ ಮರುಭೂಮಿಯ ಮೇಲೆ ವಿಮಾನದಲ್ಲಿ ಬರುವಾಗ ಸಂಜೆ ಸೂರ್ಯ ಮುಳುಗುವ ಮುನ್ನ, ಚಿನ್ನದ ರಾಶಿ ಮೇಲೆ ಹಾದು ಹೋದ ಹಾಗೆ ಭಾಸವಾಗುತ್ತದೆ. ಸಂಜೆಯ ಹೊಂಬಣ್ಣದ ಬಿಸಿಲು, ಮರಗಳೇನಿಲ್ಲದ ಅಲೆಅಲೆಯ ಮರುಳು ರಾಶಿಯ ಮೇಲೆ ಬಿದ್ದಾಗ, ವರ್ಣಿಸಲಸಾಧ್ಯವಾದ ಚಿನ್ನದ ಬೆಳಕು ಸೂಸುತ್ತದೆ. ಅದರ ಆನಂದವನ್ನು ಅನುಭವಿಸಬೇಕೇ ಹೊರತು, ವರ್ಣಿಸಲಾಗದು! ಆ ಸಮಯದಲ್ಲಿ ನನ್ನ ಸ್ಮರಣೆಗೆ ಬಂದ ಮತ್ತೊಂದು ರಮಣೀಯವಾದ ದೃಶ್ಯ ಬೆಳಗಿನ ಜಾವ ಸೂರ್ಯ ಏರುತ್ತಿರುವಾಗ, ಆಕಾಶ ನಿರ್ಮಲವಾಗಿದ್ದಾಗ ಡೆಲ್ಲಿಯಿಂದ ಶ್ರೀನಗರಕ್ಕೆ ವಿಮಾನದಲ್ಲಿ ಹೋಗುವಾಗ, ಅಲೆಅಲೆಯಾದ ಬೆಟ್ಟ, ಹಿಮದಿಂದ ಮುಚ್ಚಿದ ಹಿಮಾಲಯದ ದೃಶ್ಯ ಮತ್ತು ಡೆಹರಾಡೂನ್‌ನಿಂದ ಕಾಣುವ ಕಾಂಚನಗಂಗ ಪರ್ವತ, ಇವೆರಡೂ ನನ್ನ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿ ನಿಂತಿವೆ."

– ಒಟ್ಟಿನಲ್ಲಿ ಡಾ|| ಜಿ.ಕೆ. ವೀರೇಶ್‌ರ "ಬಯಸದೆ ಬಂದದ್ದು" ಕೇವಲ ಸ್ವಾಗತಾರ್ಹವಷ್ಟೇ ಅಲ್ಲ, ಹರ್ಷದಾಯಕ ದಾಖಲೆ.

"ಬಯಸದೆ ಬಂದದ್ದು" ಒಂದು ವಿಮರ್ಶನೆ

– *ಸಿ.ಪಿ.ಕೆ.*

ಪ್ರೊ|| ಜಿ.ಕೆ. ವೀರೇಶ್ ಅವರು ಖ್ಯಾತ ಕೃಷಿ ವಿಜ್ಞಾನಿಗಳು, ಕೀಟಶಾಸ್ತ್ರಜ್ಞರು ಹಳ್ಳಿಯೊಂದರಲ್ಲಿ ಹುಟ್ಟಿ, ಸ್ವಂತ ಯೋಗ್ಯತೆಯಿಂದ ಮೇಲೆ ಬಂದು, ಅನೇಕ ವಿಕ್ರಮಗಳನ್ನು ಸಾಧಿಸಿ, ಅಂತರರಾಷ್ಟ್ರೀಯ ಮನ್ನಣೆ ಪಡೆದವರು. ಕೃಷಿ ವಿಷಯದಲ್ಲಿ ಮಾತ್ರವಲ್ಲ, ಬರವಣಿಗೆಯ ಕೃಷಿಯಲ್ಲೂ ತಾವು ಗಟ್ಟಿಗರು ಎಂಬುದನ್ನು ಅವರು ತಮ್ಮ ಈ ಕೃತಿಯಲ್ಲಿ ತೋರಿಸಿಕೊಂಡಿದ್ದಾರೆ! ಬಹುಶಃ ಕನ್ನಡದಲ್ಲಿ ಇದು ಅವರ ಚೊಚ್ಚಲು ಬರಹವಾಗಿದ್ದರೂ, ನುರಿತ ಕೈಯಿಂದ ಎಂದಂತೆ ನಮ್ಮನ್ನು ಬೆರಗುಗೊಳಿಸುತ್ತದೆ.

ಇದೊಂದು ವಿಶಿಷ್ಟವಾದ ಆತ್ಮಕಥನ. ಆದರೆ ಇಲ್ಲಿ ವೈಯಕ್ತಿಕ ಜೀವನದ ವಿವರಗಳು ಕಡಿಮೆ (ಅದೊಂದು ಕೊರತೆ ಎನಿಸಲೂಬಹುದು) ವೃತ್ತಿಜೀವನದ ವಿವರಗಳೇ ಹೆಚ್ಚು. ವೃತ್ತಿಜೀವನಕ್ಕೆ ಸಂಬಂಧಿಸಿದ ಹಾಗೆ ಇದು ಆತ್ಮ ಕಥನವಾಗಿರುವಂತೆ ಬಹುಮಟ್ಟಿಗೆ ಪ್ರವಾಸ ಕಥನವಾಗಿಯೂ ಪರಿಣಮಿಸಿದೆ. ಆದ್ದರಿಂದ ಇದರ ಸ್ವರೂಪ ತುಸು ಸಂಕೀರ್ಣವೆನ್ನಬಹುದು.

ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್, ರಷ್ಯ, ಜಪಾನ್ ಮುಂತಾದ ದೇಶಗಳಿಗೆ ಪರ್ಯಟನ ಕೈಗೊಂಡ ಲೇಖಕರು ಆಯಾ ದೇಶದ ನೆಲ, ಜಲ, ಜನರನ್ನು ಅವರ ಬದುಕಿನ ಬಗೆಯನ್ನು ಸ್ವಾರಸ್ಯಯುಕ್ತವಾಗಿ ಚಿತ್ರಿಸಿದ್ದಾರೆ. ಕುತೂಹಲಕರವಾದ ಹೊಸ ಹೊಸ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಕೆಲವೊಮ್ಮೆ ರೀತಿಗಿಂತ ವಿಷಯವೇ ಆಕರ್ಷಕವಾಗುತ್ತದೆ. ಪ್ರೊ|| ವೀರೇಶ್ ಅವರ ನಿರೂಪಣೆಯಲ್ಲಿ ವಿದೇಶಗಳಿಗೂ ಭಾರತಕ್ಕೂ ಇರುವ ವೈಷಮ್ಯ (Contrast) ತಾನಾಗಿ ಒಡೆದು ಕಾಣುತ್ತದೆ. ಆದರೆ ನಮ್ಮ ದೇಶದ ವೈವಿಧ್ಯ ವೈಶಿಷ್ಟ್ಯಗಳನ್ನು ಅವರು ಮರೆಯದೆ ಪ್ರಸ್ತಾಪಿಸುತ್ತಾರೆ.

ಈ ಪುಸ್ತಕದ 'ತಂತ್ರ' ಗಮನಾರ್ಹವಾಗಿದೆ. ಪ್ರೊ|| ವೀರೇಶ್ ಅವರ ನಿವೃತ್ತಿಯ ನಂತರದ ಅಮೆರಿಕಾ ಪ್ರವಾಸದಿಂದ ಇದು ಪ್ರಾರಂಭಗೊಳ್ಳುತ್ತದೆ ಆಮೇಲೆ ಅವರು ಬಾಲ್ಯದಿಂದ ತೊಡಗಿ ತಮ್ಮ ಜೀವನ ವೃತ್ತಾಂತವನ್ನು 'ಸಿಂಹಾವಲೋಕನ ಕ್ರಮ'ದಿಂದ ಹೇಳುತ್ತಾ ಹೋಗುತ್ತಾರೆ. ಹೀಗಾಗಿ, ಅಮೆರಿಕದ ಅತ್ಯಾಧುನಿಕ ಜಗತ್ತಿನಿಂದ ನಾವು ಥಟ್ಟನೆ ಸುಮಾರು ಅರವತ್ತು ವರ್ಷಗಳ ಹಿಂದಿನ ಮಲೆನಾಡಿನ ಗ್ರಾಮೀಣ ಜಗತ್ತೊಂದಕ್ಕೆ ಸಾಗುತ್ತೇವೆ. ಆ ಗ್ರಾಮೀಣ ಪ್ರಪಂಚದ ಚಿತ್ರಣ ತನಗೆ ತಾನೇ ಆಸಕ್ತಿಕರವಾಗಿರುವುದಲ್ಲದೆ ಸಾಂಸ್ಕೃತಿಕ ಅಧ್ಯಯನಕ್ಕೆ ವಿಪುಲ ಸಾಮಗ್ರಿಯನ್ನೊದಗಿಸುತ್ತದೆ.

ತಮ್ಮ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಪ್ರೊ॥ ವೀರೇಶ್ ಅವರು ಕೊಡುವ ಹಲವಾರು ವಿವರಗಳು, ಮಾಹಿತಿಗಳು ಸಾಮಾನ್ಯ ಓದುಗರಿಗೆ ಪ್ರಿಯವಾಗದೆ ಹೋಗಬಹುದು. ಆದರೆ ಅವರು ಹೇಳುವ ಕೀಟಲೋಕದ ಮುಖ್ಯವಾಗಿ ಗೆದ್ದಲಿನ ಕಥೆ ರೋಚಕವಾಗಿದೆ.

ಪ್ರೊ॥ ವೀರೇಶ್ ಅವರ ಆತ್ಮಚರಿತ್ರೆ ತಕ್ಕಮಟ್ಟಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹುಟ್ಟು, ಬೆಳವಣಿಗೆಗಳ ಚರಿತ್ರೆಯೂ ಆಗಿರುವುದು ಲಕ್ಷಿಸಬೇಕಾದ ಸಂಗತಿ.

ಲೇಖಕರ ಹಾಸ್ಯಪ್ರಜ್ಞೆ ಕೃತಿಯ ಉದ್ದಕ್ಕೂ ಉಲ್ಲಾಸದಾಯಕವಾಗಿ ವ್ಯಕ್ತವಾಗುತ್ತದೆ. (ವಾಸ್ತವವಾಗಿ, ಹಾಸ್ಯಪ್ರಜ್ಞೆಯ ಅಭಾವವನ್ನು ವೀರೇಶ್ ಮೆಚ್ಚುವುದಿಲ್ಲ!) ಪ್ರಕೃತಿಯನ್ನು ವರ್ಣಿಸುವಲ್ಲಿ ಕವಿ ಹೃದಯದ ಜಿನುಗು, ಮಿನುಗುಗಳನ್ನು ಅಲ್ಲಲ್ಲಿ ಗುರುತಿಸಬಹುದು. ಕೆಲವು ಭಾಗಗಳ ಹೊರತು, ಒಟ್ಟಿನ ಮೇಲೆ ಕೃತಿ ಸರಾಗವಾಗಿ ಓದಿಸಿಕೊಳ್ಳುತ್ತದೆ. ಈ ಸಾಧನೆ ಸಣ್ಣದಲ್ಲ.

ಪ್ರೊ॥ ವೀರೇಶ್ ಅವರು ತಮ್ಮ ಈ ಹೊತ್ತಗೆಗೆ ಕೊಟ್ಟಿರುವ ಶೀರ್ಷಿಕೆ ಅರ್ಥವತ್ತಾಗಿದೆ ಅವರ ವ್ಯಕ್ತಿತ್ವದಲ್ಲಿ ವೈಜ್ಞಾನಿಕ ಮನೋಧರ್ಮವಿರುವಂತೆ ಆಧ್ಯಾತ್ಮದ ಎಳೆಯೂ ಉಂಟು. ಪುಸ್ತಕ, ಅಮೆರಿಕದಂಥ ಆಧುನಿಕ ಅಮರಾವತಿಯಿಂದ ಮೊದಲಾಗಿ ಆಧ್ಯಾತ್ಮಚಿಂತನದಲ್ಲಿ ಅಂತ್ಯಗೊಳ್ಳುತ್ತದೆ!

ವಿವಿಧ ವೃತ್ತಿಗಳಿಂದ ಬಂದವರು ಸಾಹಿತ್ಯ ವ್ಯವಸಾಯಕ್ಕೆ ಕೈ ಹಾಕಿದಾಗ, ತಮ್ಮ ತಮ್ಮ ಅನುಭವಗಳನ್ನು ಧಾರೆಯೆರೆದಾಗ, ಆಯಾ ಭಾಷಾ ಸಾಹಿತ್ಯಗಳು ಸಮೃದ್ಧವೂ ವೈವಿಧ್ಯಪೂರ್ಣವೂ ಆಗಿರುತ್ತವೆ. ಪಾಶ್ಚಾತ್ಯ ಸಾಹಿತ್ಯಗಳು ಶ್ರೀಮಂತವಾಗಿರುವುದು ಹೀಗೆಯೇ. ಈ ದೃಷ್ಟಿಯಿಂದ ಪ್ರೊ॥ ವೀರೇಶ್‌ರ ಈ ಪುಸ್ತಕ ಕನ್ನಡಕ್ಕೆ ಸ್ವಾಗತಾರ್ಹವಾಗಿದೆ. ಕನ್ನಡದಲ್ಲಿರುವ ಆತ್ಮವೃತ್ತದ, ಅದರ ಅಂಗವಾಗಿ ಪ್ರವಾಸ ಸಾಹಿತ್ಯದ ಪ್ರಕಾರಗಳಿಗೆ ಇದೊಂದು ಬೋಧಪ್ರದವಾದ ಅಪರೂಪದ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ. ದಿಟವಾಗಿ ಇದೊಬ್ಬ 'ಮಣ್ಣಿನ ಮಗ'ನ ಬಾಳಿನ ಕಥೆ. ಪ್ರೊ॥ ವೀರೇಶ್ ಅವರಿಗೇ ಹಾರ್ದಿಕ ಅಭಿನಂದನೆಗಳು ಸಲ್ಲುತ್ತವೆ.

ಶುಭ ಹಾರೈಕೆ

ಪ್ರೊ॥ ಜಿ.ಕೆ. ವೀರೇಶ್ ಅವರು ಬರೆದಿರುವ "ಬಯಸದೆ ಬಂದದ್ದು" ಎಂಬ ಹೊತ್ತಿಗೆ ಕುತೂಹಲಕರವೂ ಸೋಜಿಗವೂ ಆದ ಒಂದು ಆತ್ಮಕಥೆ.

ಶ್ರೀ ವೀರೇಶ್ ಅವರು ತಮ್ಮ ಪಾಲಿಗೆ ಬಂದದ್ದನ್ನು ತುಂಬ ಆತ್ಮವಿಶ್ವಾಸದಿಂದ ಸ್ವೀಕರಿಸಿ ಅದನ್ನು ಸಾರ್ಥಕ್ಯವಾಗಿ ಸಾಧಿಸಿದ್ದು ಅವರ ನೈತಿಕಬಲ, ಪ್ರಯತ್ನ ಸಾಧನೆ ಎಂದೇ ಹೇಳಬಹುದು. ತಾವು ವೈದ್ಯಕೀಯ ವಿದ್ಯೆಯನ್ನು ಕಲಿಯಬೇಕೆಂಬ ಯೋಜನೆಯ ಕುಡಿ ಮುರುಟಿ ಕೃಷಿ ವಿದ್ಯಾಭ್ಯಾಸದ ಕಡೆ ಎಳೆದೊಯ್ದಾಗ ಅದಕ್ಕೆ ವ್ಯಸನಪಡದೆ, ಅದರಲ್ಲಿ ಎಂಥ ಸಾಧನೆ ಮಾಡಿದರು ಎಂಬುದನ್ನು ಅವರು ತಮ್ಮ ಆತ್ಮಕಥೆಯಲ್ಲಿ ನಿರಾಡಂಬರದಿಂದ ಸರಳವಾಗಿ ಅಭಿವ್ಯಕ್ತ ಪಡಿಸಿದ್ದಾರೆ.

ಅವರು ಸಂಶೋಧನೆಗೆ ಆರಿಸಿಕೊಂಡ ವಿಷಯ ಕ್ಷುದ್ರವಾದ, ಬಲ್ಲವರಿಂದ ನಿಕೃಷ್ಟವಾಗಿ ನಿರಾಕರಿಸಲ್ಪಟ್ಟ ಗೆದ್ದಲು, ಇರುವೆ ಮೊದಲಾದ ಹುಳು, ಹುಪ್ಪಟೆ, ಜಂತುಗಳು, ಅವುಗಳ ಸೃಷ್ಟಿಯ ವೈಚಿತ್ರ್ಯವನ್ನು, ಮನುಷ್ಯ ಪ್ರಾಣಿಯ ಜೀವನದಂತೆಯೇ ಇವುಗಳ ಸೃಷ್ಟಿಯ ಉದ್ದೇಶವೂ ಎಷ್ಟು ಮಹತ್ವವಾದದ್ದು ಎಂಬುದನ್ನು ಬೆರಳಿಟ್ಟು ತೋರಿಸಿದ್ದಾರೆ.

ದೇಶ ವಿದೇಶಗಳ ಪ್ರವಾಸ ಕಾಲದಲ್ಲಿ ಅವರು ಕಂಡ ಜನಸಾಮಾನ್ಯರೇ ಆಗಿರಲಿ, ಸಂಸಾರಿಗಳೇ ಆಗಿರಲಿ, ಸಂನ್ಯಾಸಿಗಳಾಗಿರಲಿ, ಸಂಶೋಧಕರಾಗಿರಲಿ ಎಲ್ಲರನ್ನು ತನ್ನಂತೆ ಬಗೆಯುವ ವಿಶಾಲವಾದ ಮನೋಭಾವವನ್ನು ರೂಢಿಸಿಕೊಂಡು ಆತ್ಮವಿಶ್ವಾಸವನ್ನು ಆತ್ಮ ಪ್ರಜ್ಞೆಯನ್ನು ಬೆಳೆಸಿಕೊಂಡು ಬದುಕಿನ ಪ್ರೊಫೆಸರ್ ಆದವರು ಶ್ರೀ ವೀರೇಶ್ ಅವರು.

ಅವರು ತಮ್ಮ ಆತ್ಮಕಥೆಯನ್ನು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದು ನಿವೃತ್ತರಾದ ಮೇಲೆ ಬರೆದಿದ್ದಾರೆ. ತಮ್ಮ ಗ್ರಾಮೀಣ ಸಂಸ್ಕೃತಿಯನ್ನು ಮರೆಯದೆ ಪೌರಸ್ತ್ಯ ಪಾಶ್ಚಾತ್ಯ ನಾಗರಿಕತೆಗೆ ಮಾರುಹೋಗದೆ ತಮ್ಮ ಸೌಜನ್ಯ ಸಜ್ಜನಿಕೆ ಸದ್ವೃತ್ತಿಯನ್ನು ರೂಢಿಸಿಕೊಂಡು ಬಂದಿರುವುದು, ಅವರ ಕನ್ನಡಿಗತನವನ್ನು ಪ್ರತಿಬಿಂಬಿಸಿ ಭಾರತೀಯತೆಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದಿರುವುದು ಮೆಚ್ಚುವಂಥಾದ್ದು. ಕನ್ನಡವನ್ನು ಮಾತೃಭಾಷೆಯಾಗುಳ್ಳ ಶ್ರೀ ವೀರೇಶ್ ಅವರು ಇಂಗ್ಲಿಷ್ ಅಭ್ಯಾಸವನ್ನು ವಿಸ್ತಾರವಾಗಿ ಮಾಡಿ ದೇಶವಿದೇಶಗಳಲ್ಲಿ ಅನೇಕ ಬಾರಿ ಸಂಚರಿಸಿದ್ದರೂ ತಮ್ಮ ಆತ್ಮಕಥೆಯನ್ನು ಇಂಗ್ಲಿಷಿನಲ್ಲಿ ಬರೆಯದೆ ಕನ್ನಡದಲ್ಲೇ ಬರೆದು ಕನ್ನಡ ಭಾಷೆಯ ಆಳ ಅಗಲದ ವ್ಯಾಪ್ತಿಯನ್ನು ತೋರಿಸಿಕೊಟ್ಟಿದ್ದಾರೆ.

"ಬಯಸದೆ ಬಂದದ್ದು" ಕೇವಲ ಆತ್ಮಕಥೆಯಾಗದೆ ಅವರ ಸಂಶೋಧನ ಕ್ಷೇತ್ರದ ಆಗುಹೋಗುಗಳನ್ನು ಮಹತ್ವವನ್ನು ಉಪಯುಕ್ತತೆಯನ್ನು ಪರಿಚಯ ಮಾಡಿಕೊಡುತ್ತದೆ. ಶ್ರೀ ವೀರೇಶ್ ಅವರಿಗೆ ಶುಭ ಕೋರುತ್ತಾ ಇವರ ಜೀವನದ ಸಾರ್ಥಕತೆ ಬೇರೆಯವರಿಗೆ ಮೇಲ್ಪಂಕ್ತಿಯಾಗಲಿ ಎಂದು ಹಾರೈಸುತ್ತೇನೆ.

— ಜಿ. ನಾರಾಯಣ

ಮಾಜಿ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು
ದಿನಾಂಕ : 1-9-1999

ಪ್ರಸ್ತಾವನೆ

ಸುಮಾರು ಒಂದು ದಶಕದಿಂದಲೂ ಎಷ್ಟೇ ಕೆಲಸದ ಒತ್ತಡವಿದ್ದರೂ ತಪ್ಪದೆ ಮಾಡುತ್ತಿದ್ದ ಒಂದು ಅಭ್ಯಾಸವೆಂದರೆ ಸಂಜೆ ನಾಲ್ಕೈದು ಕಿಲೋಮೀಟರ್ ಕಾಲ್ನಡಿಗೆ (ವಾಕ್) ಹೋಗುವುದು. ನನ್ನ ಹಾಗೆ ಮತ್ತಿಬ್ಬರು ಈ ಅಭ್ಯಾಸವನ್ನು ರೂಢಿಸಿಕೊಂಡಿದ್ದವರು ಶ್ರೀ ಕೆ. ವೀರಯ್ಯ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ನಿವೃತ್ತಿಯಾದವರು ಮತ್ತು ಶ್ರೀ ಬಾಣಯ್ಯ, ನಿವೃತ್ತ ಮ್ಯಾನೇಜಿಂಗ್ ಡೈರೆಕ್ಟರ್ ಕವಿಕಾ ಅವರು. ನಾವು ಮೂವರೂ ಸ್ವಾತಂತ್ರ್ಯ ಪೂರ್ವದಲ್ಲಿ ಹಳ್ಳಿಗಳಲ್ಲಿ ವಿದ್ಯಾಭ್ಯಾಸಕ್ಕೆ ಇದ್ದ ಅಡೆತಡೆಗಳನ್ನು ದಾಟಿ, ವಿದ್ಯಾವಂತರಾಗಿ, ವೃತ್ತಿಯನ್ನು ಅವಲಂಬಿಸಿ ನಿವೃತ್ತಿಯಾಗುವವರೆಗೆ ಅನುಭವಿಸಿದ್ದ ಜೀವನದ ಬಗ್ಗೆ ಆಗಾಗ ಮೆಲಕು ಹಾಕುತ್ತಿದ್ದೆವು. ಇವರಿಬ್ಬರೂ ನಿಮ್ಮ ನೆನಪುಗಳನ್ನು ಎಲ್ಲಿಯಾದರೂ ಬರೆದಿಡುವುದು ಸೂಕ್ತ ಎಂದು ಸಲಹೆ ಮಾಡುತ್ತಿದ್ದರು. ಆಗ ಇದರ ಬಗ್ಗೆ ಹೆಚ್ಚಿಗೆ ಚಿಂತಿಸಿದವನಲ್ಲ.

ನಾನು ಕುಲಪತಿ ಸ್ಥಾನದಿಂದ ನಿವೃತ್ತಿಯಾದ ತಕ್ಷಣ ತುರ್ತಾಗಿ ಅಮೆರಿಕಾಕ್ಕೆ ಹೋಗಬೇಕಾದ ಸಂದರ್ಭ, ಮಗಳ ಮನೆಯಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಾನೊಬ್ಬನೇ ವಿನಾಕಾರಣ ಕಾಲಕಳೆಯಬೇಕಾದ ಅನಿವಾರ್ಯತೆಯಿಂದ ನನ್ನ ಸ್ನೇಹಿತರು ಹೇಳುತ್ತಿದ್ದದ್ದನ್ನೇಕೆ ಪ್ರಾರಂಭಿಸಬಾರದೆಂದು ನೆನಪಿನಲ್ಲಿರುವುದಷ್ಟನ್ನು ಬರೆಯಲು ಪ್ರಾರಂಭಿಸಿದೆ. ಸುಮಾರು ಅರವತ್ತು ವರುಷಗಳ ನೆನಪು ಮರುಕಳಿಸಿ ಕೈ ತಪ್ಪುವ ಮುಂಚೆಯೇ ಮನಸ್ಸಿಗೆ ತೋಚಿದ ಹಾಗೆ ಬರೆದಿದ್ದರಿಂದ ಭಾಷೆ, ಸಾಹಿತ್ಯ, ಒಕ್ಕಣೆಗಳಿಗೆ ಅಷ್ಟಾಗಿ ಒತ್ತು ಕೊಡಲಾಗಿಲ್ಲ. ಆದರೆ ವಿಷಯಗಳನ್ನು ಸತ್ಯಾಂಶಗಳಿಂದ ದೂರವಿಡಲಿಲ್ಲ. ಅಂತೂ ಮುಕ್ಕಾಲು ಭಾಗ ನಾಲ್ಕೈದು ವಾರದಲ್ಲಿ ಬರೆದಿದ್ದಾಯಿತು. ಇನ್ನುಳಿದ ಕಾಲು ಭಾಗ ಬರೆದು ಅಚ್ಚಾಗುವಷ್ಟರಲ್ಲಿ ವರುಷವೇ ಉರುಳಿತು.

ಬರೆದು ಪೂರೈಸಿದ ನಂತರ ಇದು ಓದುಗರ ಒಪ್ಪಿಗೆಗೆ ಅರ್ಹತೆ ಇದೆಯೇ? ಜನ ಒಪ್ಪಿಯಾರೆ? ಎಂಬ ಅನುಮಾನ ಅಂಕುರಿಸಿತು. ಆ ಸಮಯಕ್ಕೆ ನೆನಪಿಗೆ ಬಂದವರು ಸಾಹಿತಿ ಶ್ರೀ ಜಿ. ನಾರಾಯಣರವರು. ಅವರು ಹಿಂದೊಮ್ಮೆ ಯಾವುದೋ ಸಮಾರಂಭದಲ್ಲಿ ಇಬ್ಬರೂ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದಾಗ 'ನೀವು ಏನನ್ನಾದರೂ ಕನ್ನಡದಲ್ಲಿ ಬರೆಯುವ ಮನಸ್ಸು ಮಾಡಬೇಕು' ಅಂದಿದ್ದರು. ಮೂರು ದಶಕದ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ನೂರು ಪುಸ್ತಕ ಹೊರತರುವ ಯೋಜನೆ ಅಡಿಯಲ್ಲಿ 'ಆಧುನಿಕ ಬೇಸಾಯ' ಎಂಬ ಕೃತಿಯನ್ನು ಬರೆದು ಕೊಟ್ಟಿದ್ದೆ. ಆನಂತರ ಕನ್ನಡಕ್ಕೆ ಕೈ ಹಾಕಿದ್ದು ಇದೇ ಮೊದಲು. ಆದ್ದರಿಂದ ಶ್ರೀ ನಾರಾಯಣರವರ ಅಭಿಪ್ರಾಯ ಪಡೆಯುವ ಧೈರ್ಯ ಮಾಡಿ ಅವರ ಮನೆಗೆ ಹೋಗಿ, ಇದು ಪ್ರಕಟಿಸುವುದಕ್ಕೆ ಕನಿಷ್ಠ ಅರ್ಹತೆ ಇದ್ದರೆ ಇದಕ್ಕೆ ತಾವೇ ಮುನ್ನುಡಿ ಬರೆಯಬೇಕೆಂದು ಕೇಳಿಕೊಂಡೆ. ಸಂತೋಷದಿಂದ ನೋಡಲು ಒಪ್ಪಿಕೊಂಡರು.

ವಾರ ಕಳೆದ ನಂತರ ಒಂದು ದಿನ ಫೋನ್ ಮಾಡಿ 'ನಿಮ್ಮ ಪುಸ್ತಕ. ನನಗೇನೋ ಮೆಚ್ಚುಗೆಯಾಗಿದೆ. ಕನ್ನಡದಲ್ಲಿ ಇಂತಹ ಆತ್ಮಕಥನದ ಮೂಲಕ ಅನುಭವಗಳನ್ನು ಬರೆದಿರುವುದು ಬಹಳ ವಿರಳ. ಇದನ್ನು ಪ್ರಕಟಿಸುವ ಮುನ್ನ ನನ್ನ ಒಂದೆರಡು ಸಲಹೆ' ಅಂದರು. ಮೊದಲು ಹಂತಹಂತವಾಗಿ ನನ್ನ ಹುಟ್ಟು, ಬಾಲ್ಯ, ವಿದ್ಯೆ, ವೃತ್ತಿ, ಪ್ರವಾಸ, ನಿವೃತ್ತಿಯವರೆಗೆ ಇಪ್ಪತ್ತೇಳು ಭಾಗಗಳಾಗಿ ಯಾವ ಶೀರ್ಷಿಕೆಯೂ ಇಲ್ಲದೆ ಬರೆದಿದ್ದೆ. ಕೆಲವು ಭಾಗಗಳನ್ನು ಕ್ರೂಢೀಕರಿಸಿ ಸಮಂಜಸವಾದ ಶೀರ್ಷಿಕೆ ಕೊಡುವುದು ಉತ್ತಮವೆಂದು ಸಲಹೆ ಮಾಡಿದರು. ಫೋಟೋಗಳನ್ನು ಹಾಕುವ ಯೋಚನೆ ಇರಲಿಲ್ಲ. (ದುಬಾರಿಯಾಗುವುದೆಂಬ ಕಾರಣದಿಂದ) ಫೋಟೋಗಳು ಪುಸ್ತಕದ ಘನತೆಯನ್ನು ಹೆಚ್ಚಿಸುತ್ತವೆ. ಫೋಟೋಗಳನ್ನು ಹಾಕುವುದು ಸೂಕ್ತವೆಂದರು. ಪ್ರೊ॥ ಹೆಚ್.ಎ. ರಾಮಕೃಷ್ಣರವರಿಗೆ ಒಮ್ಮೆ ಕರಡು ಪ್ರತಿಯನ್ನು ತೋರಿಸುವುದು ಒಳ್ಳೆಯದೆಂದರು. ಕೊನೆಯದಾಗಿ "ಪ್ರೊ॥ ದೇ.ಜ. ಗೌಡರು ಇದನ್ನು ನೋಡಬೇಕೆಂದು ನನ್ನ ಆಸೆ. ಅವರು ಒಪ್ಪಿದರೆ ಅವರಿಂದ ಮುನ್ನುಡಿ ಬರೆಯಿಸುವುದು ಸೂಕ್ತ" ಅಂದರು. ಕೊನೆಯ ಸಲಹೆ ನನಗೆ ಕೊಂಚ ಮುಜುಗರವೆನಿಸಿತು. ಏಕೆಂದರೆ ದೇ.ಜ. ಗೌಡರಿಗೆ ಇಂತಹ ಹತ್ತಾರು ಕೃತಿಗಳನ್ನು ಸದಾ ನೋಡುವ ಒತ್ತಡವಿರುವುದು ತಿಳಿದಿತ್ತು. ಅವರಿಗೆ ಬಿಡುವಿಲ್ಲದ ಕಾರ್ಯಕ್ರಮದ ಮಧ್ಯೆ ನನ್ನತರಹದ ಚೊಚ್ಚಲು ಕೃತಿಯನ್ನು ಓದಲು ಒಪ್ಪಿಯಾರೆ ಎಂಬ ಅನುಮಾನ ಒಂದು ಕಡೆ ಎಳೆದರೆ, ಹಾಗೆ ಮಾಡದಿದ್ದರೆ ಜಿ. ನಾರಾಯಣರವರ ಸಲಹೆಯನ್ನು ತಿರಸ್ಕರಿಸುವ ಆಪಾದನೆಗೆ ಗುರಿಯಾಗುವ ಭಯ ಮತ್ತೊಂದೆಡೆ. ಗಟ್ಟಿ ಮನಸ್ಸು ಮಾಡಿ ದೂರವಾಣಿ ಮುಖಾಂತರ ಪ್ರೊ॥ ದೇ.ಜ. ಗೌಡರನ್ನು ಭಿನ್ನೈಸಿಕೊಂಡೆ. ಪ್ರತ್ಯುತ್ತರವಾಗಿ ಅವರು "ನನಗೆ ಆತ್ಮಕಥನದ ಕಡೆಗೆ ಹೆಚ್ಚಿನ ಒಲವು, ಆದರೆ ಈಗಾಗಲೆ ನನ್ನ ಹತ್ತಿರ ಹಲವಾರು ತಿಂಗಳಿಂದ ಕೆಲವು ನಿಂತಿವೆ, ಹೀಗಿದ್ದೂ ನಿಮ್ಮದನ್ನು ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ, ನಿಧಾನವಾದರೂ ತೊಂದರೆ ಇಲ್ಲವೆನ್ನುವುದಾದರೆ ಕಳುಹಿಸಿಕೊಡಿ" ಅಂದರು. ಕಳುಹಿಸಿಕೊಟ್ಟು ಒಂದು ತಿಂಗಳೊಳಗೆ ಮುನ್ನುಡಿ ಬರೆದು ಕಳುಹಿಸಿದ್ದಾರೆ. ಅದರೊಂದಿಗೆ ಎರಡು ಸಾಲು ಪತ್ರ ಬರೆದು "ಮೊದಲಿಂದ ಕೊನೆಯ ವರೆಗೆ ನಿಮ್ಮ ಪುಸ್ತಕ ಓದಿದ್ದೇನೆ. ನನಗೆ ಚೆನ್ನಾಗಿ ಕಂಡಿದೆ. ಎರಡು ಮಾತು ಬರೆದಿದ್ದೇನೆ. ತಲುಪಿದ್ದಕ್ಕೆ ಒಂದು ಸಾಲು ಸಾಕು" ಎಂದು ಬರೆದಿದ್ದಾರೆ. ಇದೆಂತಹ ಭಾಗ್ಯ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಒಂದು ಸಮಯದಲ್ಲಿ ಬಯಸದೆ ಬಂದದ್ದು ಗಂಥವನ್ನು ಕೈ ಬಿಡುವ ಪರಿಸ್ಥಿತಿಯಲ್ಲಿದ್ದಾಗ ಸಾಹಿತಿ ಜಿ. ನಾರಾಯಣರವರ ವಾತ್ಸಲ್ಯ, ಸಲಹೆ, ಸಹಕಾರ, ಪ್ರೋತ್ಸಾಹ ನನ್ನನ್ನು ಹುರಿದುಂಬಿಸಿ ಈ ಕೃತಿ ಓದುಗರ ಮುಂದೆ ಬರಲು ಸಾಧ್ಯವಾಗಿದೆ. ಅವರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಪ್ರೊ॥ ಹೆಚ್.ಎ. ರಾಮಕೃಷ್ಣರವರು ಬಹಳ ಶ್ರಮವಹಿಸಿ ಸ್ನೇಹಿತನೆಂಬ ಮಮತೆಯಿಂದ ಕರಡು ಪ್ರತಿಯನ್ನು ಕೂಲಂಕುಷವಾಗಿ ಓದಿ ತಪ್ಪುಗಳನ್ನು ತಿದ್ದಿ ಸಹಕರಿಸಿದ್ದಲ್ಲದೆ, ಒಂದು ವಿಶ್ಲೇಷಣೆಯನ್ನೂ ಬರೆದಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಶ್ರೀಮಾನ್ ಕೆ.ಟಿ. ವೀರಪ್ಪನವರು, ನಿವೃತ್ತ ನಿರ್ದೇಶಕರು, ಪ್ರಸಾರರಂಗ, ಮೈಸೂರು ವಿಶ್ವವಿದ್ಯಾನಿಲಯ ಇವರು, ನಲವತ್ತೈದು ವರುಷಕ್ಕೂ ಮೇಲ್ಪಟ್ಟು, ನಾವು ಇಂಟರ್

ಮೀಡಿಯಟ್‌ನಲ್ಲಿ ಒಂದೇ ತರಗತಿಯಲ್ಲಿ, ಒಂದೇ ಹಾಸ್ಟಲಿನಲ್ಲಿದ್ದಾಗಿನಿಂದಲೂ ಆತ್ಮೀಯರು. ಅವರ ತಮ್ಮ ಪ್ರೊ॥ ಕೆ.ಟಿ. ಶಿವಶಂಕರರವರು ನನ್ನ ಆತ್ಮೀಯ ವಿದ್ಯಾರ್ಥಿಗಳಲ್ಲಿ ಒಬ್ಬರು. ಇವರಿಬ್ಬರೂ ನನ್ನ ಮೇಲಿನ ಮಮತೆಯಿಂದ ನನ್ನ ಪರವಾಗಿ ನನ್ನ ಕೃತಿಯನ್ನು ಪ್ರೊ॥ ಸಿ.ಪಿ.ಕೆ.ಯವರಿಗೆ ಪರಿಚಯಿಸಿದರು. ಪ್ರೊ॥ ಸಿ.ಪಿ.ಕೆ.ಯವರು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ವಿಭಾಗದ ನಿವೃತ್ತ ಮುಖ್ಯಸ್ಥರು, ಖ್ಯಾತ ಸಾಹಿತಿ ಮತ್ತು ಹೆಸರಾಂತ ವಿಮರ್ಶಕಕಾರರೆಂದು ಪ್ರಖ್ಯಾತಿಯಾಗಿದ್ದಾರೆ. ಅವರು ಬಯಸದೆ ಬಂದದ್ದನ್ನು ವಿಮರ್ಶಿಸಿ ದಿಟವಾಗಿ ಇದೊಬ್ಬ 'ಮಣ್ಣಿನ ಮಗನ' ಬಾಳಿನ ಕಥೆ ಎಂದು ಹೇಳಿರುವುದು ಹೆಮ್ಮೆಯ ವಿಷಯ. ಇವರೆಲ್ಲರಿಗೂ ನನ್ನ ಅನನ್ಯ ಧನ್ಯವಾದಗಳು.

ನವಭಾರತ ಪ್ರೆಸ್ಸಿನ ಎಸ್. ಶ್ರೀಧರ್‌ರವರು ಸುಮಾರು ಮೂರು ದಶಕದಿಂದ ನನಗೆ ಬಲ್ಲವರು. ನನ್ನ ಹಲವಾರು ವೈಜ್ಞಾನಿಕ ಕೃತಿಗಳನ್ನು ಮುದ್ರಿಸಿದ್ದಾರೆ. ಇವರು ಮೊದಲಿನಿಂದಲೂ ನನ್ನ ವಿದ್ಯಾರ್ಥಿಗಳೊಂದಿಗೆ ಬರ್ಡ್‌ವಾಚರ್ಸ್ ಕ್ಲಬ್ಬಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದದ್ದರಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಇವರೂ ಒಬ್ಬರೆಂದು ತಿಳಿದುಕೊಂಡಿದ್ದೇನೆ. ಇವರು ಜೀವ ವಿಜ್ಞಾನ ಮತ್ತು ಪರಿಸರದಲ್ಲಿ ತುಂಬ ಕಾಳಜಿ ಉಳ್ಳವರು ಹಾಗೂ ವೈಜ್ಞಾನಿಕ ಮನೋಭಾವದವರು. ಬಯಸದೆ ಬಂದದ್ದು ಮುದ್ರಣಕ್ಕೆ ಕೊಡುವ ಮುನ್ನ ಇದರ ಖರ್ಚನ್ನು ನನ್ನಿಂದ ಭರಿಸಲು ಸಾಧ್ಯವೆ ಎಂದು ಕೇಳಿದ್ದಕ್ಕೆ ಅದರ ಯೋಚನೆ ನಿಮಗೇಕೆ ಅನುಕೂಲವಾದಾಗ ಕೊಟ್ಟರಾಯಿತೆಂದು ಪ್ರೋತ್ಸಾಹಿಸಿದರು. ಜೊತೆಗೆ ಎಲ್ಲ ಹಂತದಲ್ಲಿ ಸಲಹೆ, ಸಹಕಾರ ನೀಡಿದ್ದಾರೆ. ಇವರ ಸಲಹೆಯೇ ಮುಖ ಪುಟದಲ್ಲಿ ಶ್ರೀಮತಿ ಶಾರದಾ ವೀರೇಶ್ ರಚಿಸಿದ ಲಕ್ಷ್ಮಿ ಚಿತ್ರವನ್ನು ಮುದ್ರಿಸಲು ಪ್ರೇರೇಪಿಸಿದ್ದು. ಕಂಪೋಸರ್ ಶ್ರೀಮತಿ ಕಲಾವತಿಯವರು ಸಹನೆ ಕಳೆದುಕೊಳ್ಳದೆ ಪದೇ ಪದೇ ನಾನು ಹೇಳುತ್ತಿದ್ದ ಬದಲಾವಣೆಗಳನ್ನೆಲ್ಲ ಅಳವಡಿಸಿ, ನಕಲನ್ನು ತೆಗೆದು, ತಪ್ಪುಗಳನ್ನು ತಿದ್ದಿ ಸಹಕರಿಸಿದ್ದಾರೆ. ಶ್ರೀ ಆರ್. ನಾರಾಯಣ ಸ್ವಾಮಿಯವರು ಮುತುವರ್ಜಿ ವಹಿಸಿ ಮುದ್ರಿಸಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಶ್ರೀ ಎಲ್. ಶಿವಲಿಂಗಯ್ಯ, ಪ್ರಿಂಟಿಂಗ್ ಆಫೀಸರ್, ಇನ್ಸ್‌ಡಾಕ್, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು ಇವರು ನನ್ನೊಡನೆ ಕುಳಿತು ಕರಡು ಪ್ರತಿಯನ್ನು ತಿದ್ದಿ ಫೋಟೋಗಳನ್ನು ಜೋಡಿಸಿ ಮುದ್ರಣಕ್ಕೆ ಸಂಬಂಧಿಸಿದ ಸಲಹೆ ನೀಡಿ ಪುಸ್ತಕದ ಘನತೆಯನ್ನು ಹೆಚ್ಚಿಸಿದ್ದಾರೆ. ಇವರಿಗೆ ನನ್ನ ಕೃತಜ್ಞತೆಗಳು.

ಶ್ರೀ ಶಾರದಾ ಪಬ್ಲಿಕೇಷನ್‌ರವರು ಇದನ್ನು ಪ್ರಕಟಿಸಲು ಸಹಕರಿಸಿದ್ದಕ್ಕೆ ಕೃತಜ್ಞತೆಗಳು.

ಬಯಸದೆ ಬಂದದ್ದು ಆಸಕ್ತ ಓದುಗರಿಗೆ ನಿರಾಶೆ ಉಂಟು ಮಾಡುವುದಿಲ್ಲವೆಂಬ ಆತ್ಮ ವಿಶ್ವಾಸದಿಂದ ಅವರ ಮುಂದೆ ಇದನ್ನು ಇಡುತ್ತಿದ್ದೇನೆ.

ಪ್ರೊ॥ ಗೊದ್ದು ವೀರೇಶ್

ದಿನಾಂಕ : 9-9-1999

1 ವಿಶ್ರಾಂತಿ

ಮೊದಲನೆಯ ಹಂತದ ವಿದ್ಯಾರ್ಜನೆಯನ್ನು 1957 ರಲ್ಲಿ ಮುಗಿಸಿ ಮುಂದಿನ ಜೀವನದ ಬದುಕು ಬಳಲಿನ ದುಡಿಮೆಯ 40 ವರ್ಷಗಳನ್ನು ಹಿಮ್ಮೆಟ್ಟಿ 1998 ಏಪ್ರಿಲ್ 20 ರಂದು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಒಂಭತ್ತನೆಯ ಕುಲಪತಿಯಾಗಿ ನಿವೃತ್ತಿಯಾದ ದಿನ ಬಯಸಿದ್ದು ಹಿಂದೆಂದು ಅನುಭವಿಸದ ವಿಶ್ರಾಂತಿ. ಆದರೆ, ಆದದ್ದೇನು? ಬೀಳ್ಕೊಡುಗೆಯ ಸಮಾರಂಭಗಳು, ಬಿಟ್ಟಿದ್ದ ಕೆಲವು ದಾಖಲೆಗಳ ಸಹಿ, ನೂತನ ಕುಲಪತಿಗಳಿಗೆ ಕೆಲವು ವಿಷಯ ಗಳನ್ನು ಪರಿಚಯಿಸುವ ಕೆಲಸ ಮತ್ತು ನನ್ನ ನಿವೃತ್ತಿ ವೇತನ ಕಡತಗಳನ್ನು ಸಂಗ್ರಹಿಸುವಷ್ಟರಲ್ಲಿ ಎರಡು ವಾರಗಳು ಕಳೆದಿದ್ದವು.

ಮುಂಜಾನೆ ಅವಸರವಿಲ್ಲದೆ ನಿಧಾನವಾಗಿ ಏಳುವುದೆಂದು ಮಲಗುವಾಗ ಮನಸ್ಸು ಮಾಡಿದ್ದರೂ "ಅರ್ಜೆಂಟ್ ನಿಮಗೆ ಫೋನ್ ಇದೆಯೆಂದು" ಮಲಗಿದಲ್ಲಿಗೆಯೇ ಮಡದಿ ಕಾರ್ಡ್‌ಲೆಸ್ ಫೋನ್‌ನನ್ನು ಕೈಗೆ ಕೊಟ್ಟಾಗ ಮತ್ತೊಂದು ಅಧ್ಯಾಯ ಪ್ರಾರಂಭವಾಯಿತು. ಡಾ॥ ಐಸಾಕ್ ಮೆಥಾಯ್‌ರವರಿಂದ ಕರೆ. "ಬೆಳಿಗ್ಗೆ ಏಳುವುದಕ್ಕೆ ಮುಂಚೆಯೇ ತೊಂದರೆ ಕೊಡುತ್ತಿರುವುದಕ್ಕೆ ಕ್ಷಮೆಯನ್ನು ಕೇಳುತ್ತೇನೆ, ನೀವು ಅರ್ಜೆಂಟಾಗಿ ಅಮೆರಿಕಾಕ್ಕೆ ಹೋಗಬೇಕಾಗಿದೆ. ದಯವಿಟ್ಟು ಏನೂ ನೆಪ ಹೇಳಬೇಡಿ ಇದು ನಮ್ಮ ಗೌರವದ ಪ್ರಶ್ನೆ. ನೀವು ಹೋಗಲೇಬೇಕು. ನಿಮಗೆ ತಿಳಿಸಿ ಮಿಸ್ ಲಿಂಡ ಎಲ್ಸವಿಕ್‌ಗೆ ಕೂಡಲೆ ತಾವು ಬರುವುದಾಗಿ ಇ-ಮೇಲ್ ಕಳುಹಿಸುತ್ತಿದ್ದೇನೆ. ಉಳಿದದ್ದನ್ನು ಮತ್ತೆ ಮಾತಾಡುತ್ತೇನೆ"ಎಂದು ಹೇಳಿ ಫೋನ್ ಇಟ್ಟರು.

ಡಬ್ಲ್ಯೂ.ಎಸ್.ಎ.ಎ. (WSAA – ವರ್ಲ್ಡ್ ಸಸ್ಟೈನಬಲ್ ಅಗ್ರಿಕಲ್‌ಚರ್ ಅಸೋಸಿಯೇಷನ್) ಸಂಸ್ಥೆ ಇಂಡಿಯ ಚಾಪ್ಟರ್ ಪ್ರಾರಂಭದ ಆರು ಜನ ಪ್ರೊಮೋಟರ್ಸ್‌ರಲ್ಲಿ ಡಾ॥ ಐಸಾಕ್ ಮಥಾಯ್‌ರವರ ಪಾತ್ರ ದೊಡ್ಡದು. ಉಳಿದ ಐವರಲ್ಲಿ ನಾನೂ ಸೇರಿದಂತೆ ಡಾ॥ ವರ್ಮ (ಹೆಸರಾಂತ ನರ ತಜ್ಞರು), ಶ್ರೀ ನಿಜಾಮುದ್ದೀನ್ (ನಿವೃತ್ತ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ), ಡಾ॥ ಚೆನ್ನಬಸವಣ್ಣ (ಡೈರೆಕ್ಟರ್, ನಿಮ್‌ಹಾನ್ಸ್) ಮತ್ತು ಶ್ರೀ ಚಿಟ್ಟಿಯಪ್ಪ (ಹೆಸರಾಂತ ಪ್ಲಾಂಟರ್ ಮತ್ತು ಉದ್ಯಮಿ).

ಕಾರಣಾಂತರದಿಂದ ಡಬ್ಲ್ಯೂ.ಎಸ್.ಎ.ಎ. ಅಂತರ ರಾಷ್ಟ್ರೀಯ ಕಾರ್ಯನಿರ್ವಾಹಕ ಕಮಿಟಿಯ ಹನ್ನೆರಡು ಸದಸ್ಯರ ಪೈಕಿ ಏಳು ಸದಸ್ಯರು ಹೊರ ಬಂದಿದ್ದರು. ಇವರಲ್ಲಿ ಡಾ॥ ಐಸಾಕ್ ಮಥಾಯ್ ಕೂಡ ಒಬ್ಬರು. ಹೀಗೆ ಹೊರಬಂದವರೂ ಮತ್ತು ಹಲವಾರು ಸುಸ್ಥಿರ ಸಾವಯವ ಕೃಷಿಯಲ್ಲಿ ಕಾಳಜಿ ಇರುವವರು ಕೂಡಿ ಒಂದು ಸಂಸ್ಥೆಯನ್ನು ಯುನೈಟೆಡ್ ನೇಷನ್ನಿನ

ಅಂಗವಾಗಿ ಸ್ಥಾಪಿಸಬೇಕೆಂದು ತೀರ್ಮಾನಿಸಿದ್ದರು. ಈ ಸಂಸ್ಥೆಯ ರೂಪರೇಷೆಗಳನ್ನು ತರ್ಕಿಸಿ ಒಂದು ಕರಡು ನಿರ್ಣಯವನ್ನು ರೂಪಿಸಲು ಹತ್ತು ಜನರ ಒಂದು ಅಂತರರಾಷ್ಟ್ರೀಯ ಕಮಿಟಿಯನ್ನು ಸೂಚಿಸಿದ್ದರು. ಅದರಲ್ಲಿ ಏಷ್ಯಾ ಪೆಸಿಫಿಕ್ ಭಾಗವನ್ನು ಪ್ರತಿನಿಧಿಸಲು ನನ್ನನ್ನು ಡಾ॥ ಮೆಥಾಯ್ ಸೂಚಿಸಿದ್ದರು. ಅದರ ಎರಡು ದಿನದ ಮೀಟಿಂಗ್‌ನ್ನು ಅಮೇರಿಕಾದ ಅರೆಕಾನ್ಸಸ್‌ಗೆ ನೂರು ಮೈಲಿ ದೂರದ ಒಂದು ಫಾರಂನಲ್ಲಿ ಕರೆದಿದ್ದರು. ಈ ಮಧ್ಯೆ ಮೊದಲೆ ಬಂದಿದ್ದ ವಿ.ಪಿ.ಎ. ಆಹ್ವಾನವನ್ನು ಮನ್ನಿಸಬೇಕಾಯಿತು. ಮೂರು ದಶಕದ ಮೊದಲೇ ಕರ್ನಾಟಕದಿಂದ ಅಮೆರಿಕಾಕ್ಕೆ ಹೋಗಿದ್ದ, ಅದರಲ್ಲೂ ರೈತಾಪಿ ಕುಟುಂಬದಿಂದ ಹೋಗಿದ್ದವರು, ಅವರ ಕುಲ ಕಸುಬಾದ ಬೇಸಾಯದ ನೆನಪಿನಾರ್ಥ, ವಿ.ಪಿ.ಎ. (ಒಕ್ಕಲಿಗರ ಪರಿಷತ್ ಆಫ್ ಅಮೇರಿಕ) ಸಂಸ್ಥೆಯನ್ನು ಸ್ಥಾಪಿಸಿದ್ದರು. ಜುಲೈ ತಿಂಗಳ ಮೊದಲನೆಯ ವಾರದಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಬೇಕಿದ್ದ ಈ ಸಮ್ಮೇಳನಕ್ಕೆ ನನ್ನನ್ನೂ ಆಹ್ವಾನಿಸಿದ್ದರು. ಇದರಲ್ಲಿ ಪಾಲ್ಗೊಳ್ಳಲು ಇನ್ನೂ ನಿರ್ಧರಿಸಿರಲಿಲ್ಲ. ಈಗ ಅದಕ್ಕೂ ಬರುವುದಾಗಿ ಒಪ್ಪಿಕೊಂಡೆ.

ವಿಷಯ ತಿಳಿದ ಹತ್ತು ದಿನಗಳಲ್ಲಿ ನಾನು ಅಮೆರಿಕ ತಲುಪಬೇಕಿತ್ತು. ವೀಸ, ಏರ್ ಟಿಕೆಟ್, ಮೀಟಿಂಗಿಗೆ ಬೇಕಿದ್ದ ಮಾಹಿತಿ, ಮಗಳಿಗೆ ಭೇಕಾಗುವ ವಸ್ತುಗಳು, ಎಲ್ಲವನ್ನು ಯೋಚಿಸಿದಾಗ ಪುನಃ ಜೀವನದ ಜಂಜಾಟ ಪ್ರಾರಂಭವಾಯಿತು. ಬಯಸುವುದೊಂದು ಆಗುವುದೊಂದು. ಹೊರಡಲು ಅಣಿಮಾಡಿದ್ದಾಯಿತು.

ನನ್ನ ಮೊದಲ ವಿದೇಶ ಪ್ರವಾಸ 1975ರಲ್ಲಿ. ಆಗ ನೆದರ್‌ಲ್ಯಾಂಡ್, ಇಂಗ್ಲೆಂಡ್, ಅಮೆರಿಕಾ ಮತ್ತು ನೈಜೀರಿಯಾ (ಆಫ್ರಿಕಾ) ದೇಶಗಳಿಗೆ ಹೋಗುವ ಅವಕಾಶ ದೊರೆತಿತ್ತು. ನಂತರ ಸುಮಾರು ಹತ್ತು ಹನ್ನೆರಡು ಬಾರಿ ಅಮೆರಿಕಾಕ್ಕೆ ಹೋಗಿ ಬಂದಿದ್ದೇನೆ. ಆದರೆ 1994ರ ನಂತರ ಪುನಃ ಹೋಗುತ್ತಿರುವುದು 1998ರ ಮೇ ತಿಂಗಳಲ್ಲಿ. ಇಪ್ಪತ್ತನೇ ಶತಮಾನದ ವಿಜ್ಞಾನದ ಸೊಬಗನ್ನು ದಿನನಿತ್ಯದ ಜೀವನದಲ್ಲಿ ರೂಢಿಸಿಕೊಂಡಿರುವವರಲ್ಲಿ ಅಮೆರಿಕನ್ನರು ಮೊದಲಿಗರೆಂದರೆ ತಪ್ಪಾಗಲಾರದು. ದಿನನಿತ್ಯ ಸಹಸ್ರ ಸಂಖ್ಯೆಯಲ್ಲಿ ಬರುವ ಪ್ರವಾಸಿಗರಿಗೆ ಇದೊಂದು ಮಾಯಾಜಾಲ. ಇಲ್ಲಿಯವರ ದುಡಿಮೆ ಮಾನವ ಯಂತ್ರದ ಒಂದು ಭಾಗ ಇದ್ದ ಹಾಗೆ. ಎಲ್ಲವೂ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯಬೇಕು. ಗೊತ್ತಿಲ್ಲದೆ ಮಾಡಿದೆ ಎಂದರೆ ಅನುಕಂಪಿಸುವರಿಲ್ಲ. ಗೊತ್ತಿಲ್ಲದಿದ್ದರೆ ಇಲ್ಲಿಗೇಕೆ ಬಂದೆ? ಬಹುಶಃ ವಿಶದವಾಗಿ ವಿವರಿಸಿರುವ ಸೂಚನೆಯ ಫಲಕಗಳು ಪ್ರತಿ ಹೆಜ್ಜೆ ಹೆಜ್ಜೆಗೂ ಇಲ್ಲಿರುವಷ್ಟು ಮತ್ತೆಲ್ಲೂ ಇರಲಾರವು. ಇಂಗ್ಲಿಷ್ ಭಾಷೆ ಗೊತ್ತಿದ್ದು ಓದಲು ಬರುವವರಿಗೆ ಯಾರನ್ನೂ ಎಲ್ಲಿಯೂ ಏನನ್ನೂ ಕೇಳಬೇಕಾಗಿಲ್ಲ. ಆದರೆ ಕೆಲವರಿಗೆ ಅದರಲ್ಲೂ ಭಾರತೀಯರಿಗೆ ಎಲ್ಲದಕ್ಕೂ ಮತ್ತೊಬ್ಬರನ್ನು ಕೇಳಲೇಬೇಕು. ಕೆಲವು ಬಾರಿ ಕೇಳಿದವನಿಗೆ ಅವನ ಮುಂದೆಯೇ ಇರುವ ಫಲಕವನ್ನು ಏಕೆ ಓದಬಾರದೆಂದು ಬೆರಳು ತೋರಿ ಏನೂ ಹೇಳದೆ ಮುಂದೆ ಹೋಗುತ್ತಿರುವ ಸಂದರ್ಭವೂ ಉಂಟು.

ಪ್ರತಿ ಸಾರಿ ಅಮೆರಿಕಾಕ್ಕೆ ಹೋದಾಗಲೆಲ್ಲಾ ಒಂದಲ್ಲ ಒಂದು ಹೊಸದು ಕಾಣುತ್ತದೆ. ಜೀವನದಲ್ಲಿ ನನಗೆ ಮೊದಲ ಬಾರಿಗೆ ದುಡ್ಡಿನ ಬದಲಿಗೆ ಬ್ಯಾಂಕ್ ಕಾರ್ಡು ಎಷ್ಟು ಅವಶ್ಯಕ

ಎಂದು ಅರಿವಾಗಿದ್ದು ಈಗಿನ ಅಮೆರಿಕಾ ಪ್ರವಾಸದಲ್ಲಿ. ಬ್ಯಾಂಕ್ ಕ್ರೆಡಿಟ್ ಕಾರ್ಡುಗಳು, ಸೆಲ್ಯೂಲರ್ ಫೋನ್, ಕಂಪ್ಯೂಟರ್‌ಗಳು ದೊಡ್ಡಸ್ತಿಕೆಯ ಬಿಂಕವೆಂದು ತಿಳಿದಿದ್ದೆ. ಆದರೆ ಅಮೆರಿಕಾದಲ್ಲಿ ಇವೇ ಜನಸಾಮಾನ್ಯರ ಮೂಲ ಅವಶ್ಯಕತೆಗಳು.

ನ್ಯೂಯಾರ್ಕ್ ಏರ್‌ಪೋರ್ಟಿನಲ್ಲಿ ನಾನು ಬರುವ ಫ್ಲೈಟ್ ಮತ್ತು ವೇಳೆಯನ್ನು ಮಗಳಿಗೆ ತಿಳಿಸಲು ಫೋನ್ ಮಾಡಲು ಪ್ರಯತ್ನ ಮಾಡಿ ವಿಫಲವಾದಾಗ ಪಶ್ಚಾತ್ತಾಪ ಪಟ್ಟುಕೊಂಡೆ. ನನ್ನ ಹತ್ತಿರ ಡಾಲರ್ ಇದ್ದರೂ, 2½ ಡಾಲರ್‌ನಷ್ಟು ಕ್ವಾರ್ಟರ್ ನಾಣ್ಯಗಳು ನನ್ನಲ್ಲಿರಲಿಲ್ಲ. ಯಾರನ್ನು ಕೇಳಿದರೂ ದೊರಕಲಿಲ್ಲ. ಏಕೆಂದರೆ ಅದರ ಆವಶ್ಯಕತೆ ಅಲ್ಲಿ ಯಾರಿಗೂ ಇಲ್ಲ. ಯಾವುದಾದರೂ ಬ್ಯಾಂಕ್ ಕಾರ್ಡಿದ್ದರೆ ಆಯಿತು. ಎಲ್ಲದಕ್ಕೂ ಎಲ್ಲೆಲ್ಲಿಯೂ ಕಾರ್ಡುಗಳನ್ನು ಒಪ್ಪಿಕೊಳ್ಳುವ ಮಿಷಿನ್‌ಗಳಿವೆ.

ಪ್ಲೇನ್ ಒಳಗೆ ಕುಳಿತಾಗ ಮುಂದಿನ ಸೀಟಿನ ಹಿಂಬದಿಯಲ್ಲಿ ನನ್ನ ಎದುರು ಫೋನ್ ಇತ್ತು. ಅದರ ಪಕ್ಕದಲ್ಲಿ ಹೀಗೆ ಬರೆದಿತ್ತು. "ಏಕೆ ಸುಮ್ಮನೆ ಕುಳಿತಿರುವೆ. ನಿನ್ನ ಆಫೀಸಿಗೆ ಕರೆ, ಅಥವಾ ಮನೆಯಲ್ಲಿರುವ ಮಕ್ಕಳನ್ನು ಕರೆ. ಮತ್ತೆಲ್ಲಿಗಾದರೂ ಫೋನ್ ಮಾಡು." ಇಲ್ಲಿಂದಲಾದರೂ ಮಗಳಿಗೆ ಫೋನ್ ಮಾಡಬಹುದೆಂದು ಫೋನ್ ತೆಗೆದುಕೊಂಡು ಬಟನ್ ಒತ್ತಿದರೆ ಕರೆಯಿಲ್ಲ. ಇಲ್ಲಿಯೂ ಕಾರ್ಡಿದ್ದರೆ ಮಾತ್ರ ಕರೆಯಬಹುದು.

ಎಲ್ಲಾ ಏರ್‌ಪೋರ್ಟ್‌ಗಳಲ್ಲಿ ಕಾರ್ಡ್ ಒತ್ತಿ ಇ-ಮೇಲ್ ಮಾಡಬಹುದು, ಫ್ಯಾಕ್ಸ್ ಮಾಡಬಹುದು. ಬಹಳ ಉದ್ಯಮಿಗಳು, ಎರಡು ಫ್ಲೈಟ್‌ಗಳ ನಡುವಣ ಕಾಲವನ್ನು ವಿಳಂಬ ಮಾಡುವುದಿಲ್ಲ. ಇ-ಮೇಲ್, ಫ್ಯಾಕ್ಸ್ ಮುಖಾಂತರ ಅವರವರ ಆಫೀಸ್ ಕೆಲಸಗಳನ್ನು ಏರ್‌ಪೋರ್ಟ್‌ಗಳಲ್ಲೇ ಮಾಡುತ್ತಿರುತ್ತಾರೆ.

ವಾಷಿಂಗ್‌ಟನ್‌ನಲ್ಲಿ ಭಾನುವಾರ ಮೆಟ್ರೋ ರೈಲು ಪ್ರಾರಂಭವಾಗುವುದು ಬೆಳಿಗ್ಗೆ ಎಂಟರ ನಂತರ. ಹಿಂದಿನ ದಿನವೇ ಮೆಟ್ರೋ ಟಿಕೆಟ್ಟಿಗೆ ಉಳಿಕೆ ಹಣವನ್ನು ಭರ್ತಿಮಾಡಿ ಬೆಳಿಗ್ಗೆ ಆರು ಘಂಟೆಗೆ ಹೊರಡುವುದೆಂದು ತೀರ್ಮಾನಿಸಿದ್ದೆ. ಅದೇ ದಿನ ಸರಸ್ವತಿ ಬಸವರಾಜು ಮತ್ತು ಜನೆಟ್ ಲೆಬೂಡ, ಊಟಕ್ಕೆ ಕರೆದಿದ್ದರು. ನಾಳೆ ಕಾರಿನಲ್ಲಿ ಏರ್‌ಪೋರ್ಟಿಗೆ ಬಿಡುತ್ತೇವೆಂದು ಅವರು ಹೇಳಿದರು. ನಾನು ಮೆಟ್ರೋದಲ್ಲಿ ಹೋಗುತ್ತೇನೆಂದು ಹೇಳಿದೆ. ಆಗ ತಿಳಿಯಿತು, ಭಾನುವಾರ ಆ ವೇಳೆಯಲ್ಲಿ ಮೆಟ್ರೋ ಇಲ್ಲವೆಂದು. ಅಂದೆ ರಾತ್ರಿ ಡಾ॥ ರಾಜು ಮಗಳು ವಾಣಿಗೆ ಫೋನ್ ಮಾಡಿ ಅವಳೂ ಅಂದು ಏರ್‌ಪೋರ್ಟ್‌ಗೆ ಮೆಟ್ರೋದಲ್ಲಿ ಹೋಗಬೇಕೆಂದಿದ್ದವಳನ್ನು ಕಾರ್ ತರಲು ಹೇಳಿ ನಿಗದಿತ ವೇಳೆಗೆ ಮುಂಚಿತವೇ ಏರ್‌ಪೋರ್ಟ್ ಸೇರಿದೆವು. ವಾಣಿ ನನಗಿಂತ ಮುಂಚಿತ ಇದ್ದ ಫ್ಲೈಟ್‌ನಲ್ಲಿ ಬೇರೆ ಕಡೆ ಹೋದಳು. ನಾನು ಚೆಕ್-ಇನ್ ಕೌಂಟರ್‌ಗೆ ಹೋಗಿ ಬೋರ್ಡಿಂಗ್ ಪಾಸ್ ತೆಗೆದುಕೊಂಡಾಗ, 'ತಾವು ಇಚ್ಛೆ ಪಟ್ಟರೆ ಕೂಡಲೆ ಹೊರಡುವ ಫ್ಲೈಟಿಗೆ ಹೋಗಬಹುದು, ಇಲ್ಲದಿದ್ದರೆ ಒಂದು ಘಂಟೆ ಕಾದು ನಿಗದಿತ ಫ್ಲೈಟ್‌ನಲ್ಲಿ ಹೋಗಬಹುದೆಂದು' ಸೂಚಿಸಿದರು. ಕೂಡಲೆ ಹೊರಡುವುದರಲ್ಲಿ ಹೋಗುತ್ತೇನೆಂದು ಹೇಳಿ ಪ್ಲೇನಿಗೆ ಹೋದರೆ ನಾನೆ ಮೊದಲನೆಯವನು. ಮೂವತ್ತು ಜನ ಕೂರುವ ಪ್ಲೇನು 'ಎಕ್ಸ್‌ಪ್ರೆಸ್' ನಲ್ಲಿ ಮತ್ತಾರೂ ಇರಲಿಲ್ಲ. ಕೂಡಲೆ ಹೊರಟೇ ಬಿಟ್ಟಿತು. ಏರ್‌ಹೋಸ್ಟೆಸ್‌ಗೆ ಕೇಳಿದೆ "ಇದೇನು? ನನಗೊಬ್ಬನಿಗೋಸ್ಕರ

ಹೋಗುವುದೇ ಎಂದು" ಅದಕ್ಕೆ ಅವಳು. (We are lucky today, at least we have one passanger. On Friday there were none, we went empty) "ಈವತ್ತು ಅದೃಷ್ಟ, ನೀವು ಒಬ್ಬರಾದರೂ ಇದ್ದೀರಿ. ಶುಕ್ರವಾರ ಒಬ್ಬರೂ ಇರಲಿಲ್ಲ. ಖಾಲಿ ಹೋದೆವು" ಎಂದಳು.

ಪ್ಲೇನು ಹೊರಡುವ ಮುನ್ನ ಏರ್ ಸೇಫ್ಟಿ ಸೂಚನೆಗಳನ್ನು ವಿವರಿಸಲು ಪ್ರಾರಂಭ ಮಾಡಿದಳು. "ನನಗೊಬ್ಬನಿಗೋಸ್ಕರ ಏಕೆ ಶ್ರಮ ತೆಗೆದುಕೊಳ್ಳುವೆ. ಅದರ ಬಗ್ಗೆ ನನಗೆ ಸಾಕಷ್ಟು ಅರಿವಿದೆ ಬೇಡ" ಎಂದು ಹೇಳಿದೆ. ಅದಕ್ಕೆ ಅವಳು ಸ್ವಲ್ಪ ಸಿಟ್ಟುಗೊಂಡವಳಂತೆ (It is my duty, I must tell you, and you must hear) "ಇದು ನನ್ನ ಕರ್ತವ್ಯ. ನಾನು ಹೇಳಲೇ ಬೇಕು. ನೀವು ಕೇಳಲೇ ಬೇಕು." ಎಂದು ಹೇಳಿ ಅವಳ ಕರ್ತವ್ಯವನ್ನು ಮಾಡಿಯೇ ಬಿಟ್ಟಳು.

ಒಂದು ಘಂಟೆಯ ಪ್ರಯಾಣದುದ್ದಕ್ಕೂ ನಮ್ಮ ದೇಶಕ್ಕೂ ಇಲ್ಲಿಗೂ ಇರುವ ವ್ಯತ್ಯಾಸವನ್ನು ಚಿಂತಿಸುತ್ತಾ ಹೋದೆ. ನಮ್ಮಲ್ಲಿ ಬಸ್ಸಾಗಲಿ, ರೈಲಾಗಲಿ, ವಿಮಾನವಾಗಲಿ ಕನಿಷ್ಟ ಮಂದಿ ಪ್ರಯಾಣಿಕರಿಲ್ಲದಿದ್ದರೆ ಘಂಟೆಗಟ್ಟಲೆ ಕಾದು ಹೊರಡುತ್ತಾರೆ. ಅಥವಾ ಕ್ಯಾನ್ಸಲ್ ಮಾಡುತ್ತಾರೆ. ಇಲ್ಲಿ ನಿಗದಿತ ವೇಳೆಯಲ್ಲಿ ಪ್ರಯಾಣಿಕರಿರಲಿ ಇಲ್ಲದಿರಲಿ ವಿಮಾನವನ್ನಾದರೂ ಬಿಡುತ್ತಾರೆ. ಇದು ಉಳ್ಳವರ ದುಂದುಗಾರಿಕೆಯೆಂದು ಕರೆಯೋಣವೇ ಅಥವಾ ಕರ್ತವ್ಯನಿಷ್ಠೆಯೆ, ತಿಳಿಯದು. ಏರ್‌ಹೋಸ್ಟೆಸ್‌ನ ಕರ್ತವ್ಯ ಪ್ರಜ್ಞೆಯನ್ನಂತೂ ಮೆಚ್ಚಿಕೊಳ್ಳಬೇಕಾದದ್ದೆ.

ಮೆಡೂಕ್ರೀಕ್ ಫಾರಂನಲ್ಲಿ ಎರಡು ದಿವಸದ ಮೀಟಿಂಗ್‌ಗೆ, ಪ್ರೆಸಿಡೆಂಟ್ ಕ್ಲಿಂಟನ್‌ನ ತೌರೂರಾದ ಅರೆಕಾನ್ಸಸ್‌ನಿಂದ 2½ ಘಂಟೆ ಕಾರಿನಲ್ಲಿ ಹೋಗಬೇಕು. ಸುಮಾರು ಸಾವಿರ ಅಡಿ ಇಳಿದರೆ ದಟ್ಟಕಾಡಿನ ಮಧ್ಯೆ 300 ಎಕರೆ ಫಾರಂ, ಆರೇಳು ಮನೆಗಳು, ಅಲ್ಲಿ ಕೆಲಸ ಮಾಡುವ ರೈತರಿದ್ದರು. ನಾವು ಇಳಿದುಕೊಂಡಿದ್ದ ಮನೆಯ ಮಹಡಿಯ ಮೇಲೆ ನಾಲ್ಕಾರು ರೂಂಗಳು, ಪ್ರತಿ ರೂಮ್‌ನಲ್ಲಿ ಬಂಕರ್‌ಟೈಪು ಹಾಸಿಗೆ, ಒಂದೊಂದು ರೂಮ್‌ನಲ್ಲಿ ಏಳೆಂಟು ಜನ ಮಲಗಬಹುದು. ಕೆಳಗೆ ಅಡಿಗೆ, ಊಟ, ಮೀಟಿಂಗ್ ಹಾಲ್, ಕಕ್ಕಸ್ಸು-ಸ್ನಾನ ಒಂದೆಡೆ. ಇಲ್ಲಿಯ ಕಕ್ಕಸ್ಸಿನ ವೈಶಿಷ್ಟವೇನೆಂದರೆ ಕಮೋಡನ್ನು ಒಂದು ಅಗಲವಾದ ಪೈಪಿಗೆ ಕೂಡಿಸಿ ನೇರವಾಗಿ ಮಲಮೂತ್ರ ಕಾಂಪೋಸ್ಟ್ ಡ್ರಂ ಗೆ ಬೀಳುವಂತೆ ಮಾಡಲಾಗಿತ್ತು. ಪ್ರತಿ ಸಾರಿ ಕಕ್ಕಸ್ಸಿಗೆ ಹೋದವರು ಪಕ್ಕದಲ್ಲಿಟ್ಟಿರುವ ಮರದ ಪುಡಿ ಎರಡು ಹಿಡಿಯನ್ನ ಆ ಪೈಪೊಳಗೆ ಹಾಕಬೇಕು. ಯಾವ ವಾಸನೆಯೂ ಇರುವುದಿಲ್ಲ. ಡ್ರಂ ತುಂಬಿದಾಗ ಒಂದು ಕಡೆ ತಿರುಗಿಸಿ ಖಾಲಿ ಇರುವುದನ್ನು ಅದರ ಅಡಿಗೆ ಸೇರಿಸುವರು. ಸುಮಾರು ಒಂದು ಡ್ರಂ ತುಂಬ ಬೇಕಾದರೆ ಎರಡು ಮೂರು ತಿಂಗಳು ಬೇಕು. ಮಲಮೂತ್ರ ಒಣಗಿದ ಮೇಲೆ ಅದನ್ನ ಮತ್ತೊಂದು ಕಾಂಪೊಸ್ಟ್ ತೊಟ್ಟಿಯಲ್ಲಿ ಸಾವಯವ ವಸ್ತುಗಳೊಡನೆ ಮಿಶ್ರಣ ಕಾಂಪೊಸ್ಟ್ ಮಾಡಿದಾಗ ಅತ್ಯುತ್ಯಮ ಗೊಬ್ಬರವಾಗುವುದು. ಸಾವಯವ ಕೃಷಿಗೆ ಇದೊಂದು ಅತ್ಯುತ್ತಮ ಸಾಧನೆ.

ಭಾರತದಲ್ಲಿ ಈ ಸಾಧನವನ್ನು ಅಳವಡಿಸಿದರೆ 95 ಕೋಟಿ ಜನರ ಮಲಮೂತ್ರ ನಮ್ಮ ಗೊಬ್ಬರದ ಬೇಡಿಕೆಯ ಪೂರ್ಣ ಪ್ರಮಾಣವನ್ನು ಪೂರೈಸಬಹುದು. ಮಹಾತ್ಮಗಾಂಧಿಯವರು ಇದನ್ನೇ ಹೇಳುತ್ತಿದ್ದರು. ಪರಿಸರ ಮಾಲಿನ್ಯವನ್ನೂ ತಪ್ಪಿಸಬಹುದು.

ಇತ್ತೀಚೆಗೆ ಅಮೆರಿಕದಲ್ಲಿ ಸಸ್ಯಹಾರಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇಪ್ಪತ್ತೈದು ವರುಷಗಳ ಹಿಂದೆ ದಿನಕ್ಕೆ ಒಂದು ಬಾರಿಯಾದರೂ ಮಾಂಸವನ್ನು ಸೇವಿಸುತ್ತಿದ್ದವರು ವಾರಕ್ಕೆರಡು ಬಾರಿ ಮಾತ್ರ ತಿನ್ನಲು ಪ್ರಾರಂಭಿಸಿದ್ದಾರೆ. ಮೂರು ದಿನದ ಮೀಟಿಂಗ್‌ನಲ್ಲಿ ಒಂದು ಸಾರಿ ಮಾತ್ರ ಒಂದು ಐಟಂ ಮಾಂಸಹಾರವಿತ್ತು. ಹತ್ತು ದಿವಸ ವಾಷಿಂಗ್‌ಟನ್‌ನಲ್ಲಿ ಮಿಸ್. ಲಿಂಡವರ ಮನೆಯಲ್ಲಿದ್ದಾಗ ಒಂದು ದಿನವೂ ಮಾಂಸಹಾರ ಮಾಡಲಿಲ್ಲ. ವಾರದಲ್ಲಿ ಆಗಿದ್ದ ಮೂರು ಮೀಟಿಂಗ್‌ನಲ್ಲಿ ಮಧ್ಯಾಹ್ನದ ಊಟಕ್ಕೆ ಮಾಂಸಹಾರವಿರಲಿಲ್ಲ. ಸಸ್ಯಾಹಾರಿಗಳೆಂದು ಹೇಳಿಕೊಳ್ಳುವ ನಮ್ಮ ದೇಶದಲ್ಲಿ ಮಾಂಸ ಮೀನಿನ ರೇಟು ಗಗನಕ್ಕೆ ಏರುತ್ತಿದ್ದರೂ ದಿನೇ ದಿನೇ ಮಾಂಸಹಾರಿಗಳ ಸಂಖ್ಯೆ ಹೆಚ್ಚುತ್ತಿದೆ.

ಅಮೆರಿಕಾದಲ್ಲಿ ಹೋಟೆಲ್‌ಗಳಿಗೆ ಊಟಕ್ಕೆ ಹೋದಾಗ ಯಾವುದಾದರೂ ಐಟಂ ಉಳಿದರೆ ಪ್ಯಾಕ್ ಮಾಡಿಸಿಕೊಂಡು ಮನೆಗೆ ತೆಗೆದುಕೊಂಡು ಹೋಗಿ ಫ್ರಿಜ್‌ನಲ್ಲಿ ಇಟ್ಟು ಮಾರನೆಯ ದಿನ ತಿನ್ನುವುದು ವಾಡಿಕೆ. ಅವರಿಗೆ ತಿನ್ನಲು ಅನ್ನವಿಲ್ಲವೆಂದಲ್ಲ ಅಥವಾ ಕೊಳ್ಳಲು ದುಡ್ಡಿಲ್ಲ ವೆಂದಲ್ಲ. ಕೊಟ್ಟಿದ್ದ ದುಡ್ಡು, ಕೊಂಡ ಪದಾರ್ಥ ವ್ಯರ್ಥವಾಗಬಾರದೆಂಬುದು ಅವರ ತತ್ವ. ನಮ್ಮ ದೇಶದಲ್ಲಿ ಮದುವೆ ಮುಂಜಿಗಳಲ್ಲಿ ಹಬ್ಬ-ಹರಿದಿನಗಳಲ್ಲಿ ಪೋಲು ಮಾಡುವ ಆಹಾರ ಅದೆಷ್ಟೆಂದು ಗ್ರಹಿಸಲಸಾಧ್ಯ!.

ಮೆಡೊಕ್ರೀಕ್ ಫಾರಂ ಮೀಟಿಂಗ್ ಪೂರೈಸಿದ ನಂತರ ವಾಷಿಂಗ್‌ಟನ್‌ನಲ್ಲಿ ಒಂದು ವಾರ ಸಂಘ ಸಂಸ್ಥೆಗಳು ಹಾಗೂ ಸ್ಟೇಟ್ ಡಿಪಾರ್ಟ್‌ಮೆಂಟ್‌ಗಳಿಗೆ ಭೇಟಿಕೊಡುವ ಅವಕಾಶವನ್ನು ನನ್ನ ಪ್ರೋಗ್ರಾಂ ಕೋಆರ್ಡಿನೇಟರ್ ಮಿಸ್ ಲಿಂಡ ಎಲ್ಸವಿಕ್ ಅಣಿ ಮಾಡಿಸಿಕೊಟ್ಟರು. ಮುಖ್ಯವಾಗಿ ಭೇಟಿಕೊಟ್ಟ ಕಛೇರಿಗಳೆಂದರೆ ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್, ಗ್ಲೋಬಲ್ ಎನ್‌ವಿರಾನ್‌ಮೆಂಟಲ್ ಫೆಸಿಲಿಟಿ, ಹ್ಯೂಮೇನ್ ಸೊಸೈಟಿ ಆಫ್ ಅಮೆರಿಕಾ, ಕೌಂಟರ್‌ಪಾರ್ಟ್ ಇಂಟರ್ ನ್ಯಾಷನಲ್, ಯು.ಎನ್.ಡಿ.ಪಿ. ಆಫೀಸ್, ವರ್ಲ್ಡ್ ಬ್ಯಾಂಕ್ ಮತ್ತು ಯು.ಎಸ್.ಡಿ.ಎ. (ಎಸ್.ಎ.ಆರ್.ಇ.) [World Resource Institute, Global Environmental Facility (GEF), Humane Society of America, Counterpart International, UNDP Office, World Bank and USDA (SARE)].

ನಾನು ಸಂದಿಸಿದ ವ್ಯಕ್ತಿಗಳೆಲ್ಲ ದೊಡ್ಡ ಹುದ್ದೆಯಿದ್ದವರು. ಅವರ ಆಫೀಸ್ 8 x 6 ಅಡಿ ಉದ್ದಗಲ, ಒಂದು ಕಂಪ್ಯೂಟರ್, ಫೋನ್, ಸಣ್ಣ ಟೇಬಲ್, ಒಂದು ಕುರ್ಚಿ, ಪುಸ್ತಕ ಕಡತಗಳನ್ನಿಡಲು ಪಕ್ಕದಲ್ಲಿ ಷೆಲ್ಫ್ ಬಿಟ್ಟರೆ ಮತ್ತೇನು ಇಲ್ಲ. ಯಾರಾದರೂ ವಿಸಿಟರ್ ಹೋದರೆ ಪಕ್ಕದ ಕೋಣೆಯಿಂದ ಕುರ್ಚಿಯನ್ನು ಎಳೆದು ತಂದಿಡಬೇಕು. ಅವರ ವ್ಯವಹಾರವೆಲ್ಲ ಅಂತರರಾಷ್ಟ್ರೀಯ ಮಟ್ಟದ್ದಾದರೂ, ಸ್ಥಳಾವಕಾಶವನ್ನು ಆವಶ್ಯಕತೆಗೆ ಮೀರಿ ಯಾರೂ ಇಟ್ಟುಕೊಂಡಿದ್ದು ನೋಡಲಿಲ್ಲ. ಎಲ್ಲವೂ ಚೊಕ್ಕಟ. ಎಲ್ಲ ಅವಶ್ಯ ಸಾಮಾನುಗಳು ಕೈ ಎಟಕುವಷ್ಟರಲ್ಲಿ ವ್ಯವಸ್ಥಿತವಾಗಿಟ್ಟಿರುವವು. ನಮ್ಮ ದೇಶದಲ್ಲಿ ಯಾವುದೇ ಆಫೀಸಿಗೆ ಹೋದರೆ ಒಬ್ಬ ಕೂರುವಲ್ಲಿ ನಾಲ್ಕಾರು ಕುರ್ಚಿಗಳು, ರೂಮಿನ ಅರ್ಧಭಾಗ ಆವರಿಸುವ ಟೇಬಲ್. ಸ್ನೇಹಿತರು ಬಂದರೆ ಸಾವಧಾನವಾಗಿ ಕೂರಿಸಿ, ಕಾಫಿ ತರಿಸಿಕೊಟ್ಟು ಮಾತಾಡುವಷ್ಟರಲ್ಲಿ ಅರ್ಧ ದಿನ ಕಳೆದಿರುತ್ತದೆ.

ಒಂದು ದಿನ ನಮ್ಮ ಸ್ನೇಹಿತರ ಆಹ್ವಾನದ ಮೇರೆಗೆ ಮೆರಿಲ್ಯಾಂಡಿನ ಯು.ಎಸ್.ಡಿ.ಎ. (U.S.D.A. River Road Unit) ಗೆ ಭೇಟಿಕೊಟ್ಟು ಹಾಗೆಯೇ ಡಾ॥ ಸುಜೇನ್ ಬಾತ್ರರವರು ನಡೆಸುತ್ತಿದ್ದ ಬೀ ರಿಸರ್ಚ್ ಲ್ಯಾಬೊರೋಟರಿಗೆ (Bee Research Laboratory Beltsville U.S.D.A.) ಹೋಗಿ ವಾಪಸ್ಸು ಬರುವಾಗ ಒಂದು ಹಿಂದೂ ಟೆಂಪಲ್‌ಗೆ ಹೋಗುವುದೆಂದು ತೀರ್ಮಾನಿಸಿದೆವು. ನಮ್ಮ ಸ್ನೇಹಿತರಾದ ಡಾ॥ ಶಿವರಾಮಯ್ಯ ಶಾಂತರಾಂ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಪೂರೈಸಿ, ಕೆಲಸಕ್ಕೆ ಪರದಾಡಿ ಹೇಗೋ ಅಮೆರಿಕಾ ಸೇರಿದ್ದರು. ಈಗ ಯುನೈಟೆಡ್ ಸ್ಟೇಟ್ ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್‌ಚರ್ (USDA)ನಲ್ಲಿ ಒಂದು ಗೌರವಾನ್ವಿತ ಹುದ್ದೆಯಲ್ಲಿದ್ದಾರೆ. ವರುಷದಲ್ಲಿ ನಾಲ್ಕಾರು ಬಾರಿ ಹಲವಾರು ದೇಶಗಳಿಗೆ ಕಾರ್ಯನಿಮಿತ್ತ ಹೋಗುತ್ತಿರುತ್ತಾರೆ. ಅವರ ಸಬ್ಜೆಕ್ಟ್‌ನಲ್ಲಿ ಆಳವಾದ ಅಧ್ಯಯನ ಮಾಡಿ ಅದರ ಪ್ರತಿಭೆಯನ್ನು ಪ್ರದರ್ಶಿಸುವುದರ ಜೊತೆಗೆ ಈ ದೇಶದ ನಡೆನುಡಿ ಆಚಾರ ವಿಚಾರಗಳನ್ನು ಅರಿತವರು ಮತ್ತು ತಮ್ಮ ದೇಶದ ಸಂಸ್ಕೃತಿ ಪರಂಪರೆಯಲ್ಲಿ ಗಟ್ಟಿಯಾಗಿ ನಿಂತಿರುವವರು. ಗಾಂಧೀಜಿಯವರು ಕೂಡ ಹೇಳುತ್ತಿದ್ದದ್ದು "ಎಲ್ಲಾ ದೇಶದ ಗಾಳಿ ಬೀಸಲಿ. ಆದರೆ ನಾ ನಿಂತಿರುವ ನೆಲದಿಂದ ಎತ್ತರಿಸೆ" ಎಂದು.

ಶಾಂತರಾಂರವರು ಮೆರಿಲ್ಯಾಂಡಿನ ಗ್ರೀನ್‌ಫೀಲ್ಡ್‌ನಲ್ಲಿರುವ ದೇವಸ್ಥಾನದ ವ್ಯವಸ್ಥಾಪನೆ ಮತ್ತು ಕಾರ್ಯನಿರ್ವಾಹಕ ಮಂಡಲಿ ವಿಷಯ ಚೆನ್ನಾಗಿ ತಿಳಿದವರು. ಈ ದೇವಸ್ಥಾನದಲ್ಲಿ ಹಿಂದೂಗಳ ಎಲ್ಲಾ ದೇವರ ವಿಗ್ರಹಗಳಿವೆ. ಆದರೂ ಕೆಲವರು ತಮ್ಮ ದೇವರಿಗೆ ಅಗ್ರಸ್ಥಾನವನ್ನು ಕೊಡಬೇಕೆಂದು ವಾದಿಸುವರು. ತಮಿಳರು ತಮ್ಮ ದೇವರು ಆಂಡವನಿಗೆ ಅಗ್ರಸ್ಥಾನ ದೊರೆಯಲಿಲ್ಲವೆಂದು ಬೇರೆ ಒಂದು ದೇವಸ್ಥಾನವನ್ನೇ ಕಟ್ಟಿದರು. ಮತ್ತೆ ಕೆಲವರು ಈ ಯೋಚನೆಯಲ್ಲಿರುವರೆಂದು ಕೇಳಿದೆ.

ಭಾರತೀಯರು ಏನೇ ಆದರೂ ಎಲ್ಲಿ ಹೋದರು ಅವರ ಮೂಲವನ್ನು ಮರೆಯಲಾರ ರೆನ್ನುವುದಕ್ಕೆ ಇದೊಂದು ಉದಾಹರಣೆ. ಭಾರತದಲ್ಲಿ ಎಷ್ಟು ಸ್ಟೇಟುಗಳಿವೆಯೋ ಅಷ್ಟು ಸಂಘಗಳು ಇಲ್ಲಿವೆ. ಕನ್ನಡ ಸಂಘ, ತಮಿಳು ಸಂಘ, ತೆಲುಗು, ಮಲಯಾಳ, ಪಂಜಾಬಿ, ಬಾಂಗ್ಲಾ ಹೀಗೆ ಹತ್ತಾರು. ಇಲ್ಲಿರುವ ಎಲ್ಲಾ ಸವಲತ್ತನ್ನು ಅನುಭವಿಸುತ್ತಿದ್ದರೂ ಸಿಟಿಜನ್‌ಷಿಪ್ ತೆಗೆದು ಕೊಂಡಿದ್ದರೂ ಅವರ ಮಕ್ಕಳೆಲ್ಲ ಅಪ್ಪಟ ಅಮೆರಿಕನ್‌ರಾಗಿದ್ದರೂ ಮದುವೆ ವಿಷಯ ಬಂದರೆ ಅವರ ಮಕ್ಕಳು ಅವರ ಜಾತಿಯಲ್ಲೇ ಭಾರತದಿಂದ ಮದುವೆಯಾಗ ಬೇಕೆಂದು ಬಯಸುವರು. ಏಷ್ಯನ್ನರಿಗೆಲ್ಲರಿಗೂ ಈ ವ್ಯಾಮೋಹವಿದ್ದರೂ ಭಾರತೀಯರಲ್ಲಿ ಬಹಳವಾಗಿ ಕಾಣುತ್ತದೆ. ಹಲವರು ತಮ್ಮ ಅಂತಿಮ ಕಾಲವನ್ನು ಭಾರತದಲ್ಲೇ ಕಳೆಯಬೇಕೆಂದು ಬಯಸುವರು. ಮಕ್ಕಳು ಮಾತ್ರ ಬರಲಾರರು.

ವಾಷಿಂಗ್‌ಟನ್‌ನಲ್ಲಿ ಮಿಸ್. ಲಿಂಡ ಎಲ್ಸವಿಕ್‌ರ 326ನೇ ಅಪಾರ್ಟ್‌ಮೆಂಟ್, 1255, ನ್ಯೂ ಹ್ಯಾಂಪ್ಶೈರ್ ಅವಿನ್ಯೂನಲ್ಲಿ ಇತ್ತು. ಇದು 21 ನೇ ಬೀದಿ ನಾರ್ಥ್‌ವೆಸ್ಟ್‌ಗೆ ಹತ್ತಿರವಿದ್ದು ಎಲ್ಲಾ ವಿಧದಲ್ಲಿ ಅನುಕೂಲವಿತ್ತು. ನನ್ನ ಜೊತೆಯಲ್ಲಿ ವೆನಿಜಿಯೋಲದ ಮುಗೇಲ್ ಏಂಜಲ್ ನೂನೆಜ್ ಕೂಡ ಈ ಅಪಾರ್ಟ್‌ಮೆಂಟಿನಲ್ಲಿದ್ದರು. ಇಬ್ಬರೂ ಒಂದೇ ರೂಮ್‌ನಲ್ಲಿ ಮಲಗುತ್ತಿದ್ದೆವು. ಇವರು ಮಲಗುವ ಮುನ್ನ ಮತ್ತೆ ಬೆಳಿಗ್ಗೆ ಎದ್ದ ತಕ್ಷಣ ಕೆಲವು ಮಂತ್ರಗಳನ್ನು

ಪಠಿಸುತ್ತಿದ್ದರು. ಕೇಳುವುದಕ್ಕೆ ನಮ್ಮ ಸಂಸ್ಕೃತದ ಮಂತ್ರಗಳಂತೆ ಕಾಣುತ್ತಿದ್ದವು. ಇವರು ಕ್ರಿಶ್ಚಿಯನ್ನರಾಗಿ ದಕ್ಷಿಣ ಅಮೆರಿಕಾ ಖಂಡದಲ್ಲಿ ವೆನಿಜಿಯೋಲ ದೇಶದಲ್ಲಿ ಹುಟ್ಟಿ ಬೆಳೆದು ಸ್ಪ್ಯಾನಿಷ್ ಭಾಷೆಯನ್ನು ಆಡುತ್ತಿದ್ದವರಿಗೆ ಸಂಸ್ಕೃತದ ಅರಿವು ಹೇಗಾಯಿತೆಂದು ನನಗೆ ತಿಳಿಯಲು ಕುತೂಹಲವಾಯಿತು. ಒಂದು ಗುರುವಾರ ಬೆಳಿಗ್ಗೆ ಹಾಸಿಗೆಯಿಂದ ಎದ್ದವರೆ ಎರಡು ಕೈಗಳನ್ನು ಜೋಡಿಸಿಕೊಂಡು "ದೇವಾಂನಾಂಚ, ಋಷಿಣಾಂಚ, ಗುರು ಕಾಂಚನಸನ್ನಿಭಂ।, ಬುದ್ಧಿಭೂತಂ ತ್ರಿಲೋಕೇಶಂ ತಂ ನಮಾಮಿ ಬೃಹಸ್ಪತಿಂ॥" ಎಂದು ಗಟ್ಟಿಯಾಗಿ ಹೇಳುತ್ತಿದ್ದರು. ನನ್ನ ಮೊಮ್ಮಗಳು ನಾಲ್ಕು ವರುಷದ ಸಿತಾರ ತೊದಲಿಕೊಂಡು ಇದನ್ನು ಹೇಳುತ್ತಿದ್ದದ್ದು ತಕ್ಷಣ ಜ್ಞಾಪಕಕ್ಕೆ ಬಂತು. "ಇದನ್ನು ಹೇಗೆ ಕಲಿತಿರಿ" ಎಂದು ಕೇಳಿದೆ. ಅವರಿಗೊಬ್ಬ ಇಂಡಿಯನ್ ಮಾಂಕ್ (ಸನ್ಯಾಸಿ) ವಾರದ ಪ್ರತಿಯೊಂದು ದಿವಸಕ್ಕೂ ಇರುವ ಮಂತ್ರವನ್ನು ಆಯಾ ದಿವಸ ಎದ್ದ ತಕ್ಷಣ ಹೇಳಿಕೊಳ್ಳುವುದಕ್ಕೆ ಇವರಿಗೆ ಕಲಿಸಿದ್ದರಂತೆ. ಭಾರತೀಯರೆಲ್ಲರೂ ಎದ್ದ ತಕ್ಷಣ ಅವರ ಹಾಗೆ ಹೇಳಿಕೊಳ್ಳುತ್ತಾರೆಂದು ನಂಬಿದ್ದರು. ಅಂದು ಗುರುವಾರವಾದ್ದರಿಂದ ಈ ಮಂತ್ರವನ್ನು ಹೇಳಿದರು. ಹೀಗೆ ಪ್ರತಿದಿನ ಆಯಾ ವಾರದ ಮಂತ್ರವನ್ನು ಹೇಳುತ್ತೇನೆಂದು ಉಳಿದ ಆರು ಶ್ಲೋಕವನ್ನು ಹೇಳಿದರು. ಅವರಿಗೆ ಇದರಲ್ಲಿ ಎಷ್ಟು ನಂಬಿಕೆ ಇತ್ತೆಂದರೆ ಎಂದಾದರೂ ಆಯಾ ದಿನದ ಮಂತ್ರವನ್ನು ಹೇಳದೆ ಮರೆತರೆ ಅಂದಿನ ಕೆಲಸವೇನೂ ಸುಗಮ ವಾಗಿ ನೆರವೇರುವುದಿಲ್ಲವೆಂದು ತಿಳಿದಿದ್ದರು. ರಾತ್ರಿ ಮಲಗುವ ಮುನ್ನ ಅವರ ಗುರುಗಳು ಹೇಳಿಕೊಟ್ಟಿದ್ದನ್ನು ಜಪಿಸದಿದ್ದರೆ ಆ ರಾತ್ರಿ ಅವರ ನಿದ್ರೆ ದುಸ್ವಪ್ನಗಳಿಂದ ಕೂಡಿ ಮರುದಿನ ಲವಲವಿಕೆ ಇರುವುದಿಲ್ಲವೆಂದು ನಂಬಿದ್ದರು. ಅವರಿಗೆ ಕೆಲವು ಯೋಗಾಸನಗಳೂ ತಿಳಿದಿದ್ದವು. ಭಾರತದ ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರ ವೈಶಿಷ್ಟ್ಯ, ವೇದೋಪನಿಷತ್‌ಗಳ ಸಾರ, ಗೀತೆಯ ಮಹತ್ವ ಮುಂತಾದುವನ್ನೂ ತಿಳಿದಿದ್ದರು. ನಾನು ಸ್ವಾಮಿ ಚಿನ್ಮಯಾನಂದರ ಗೀತ ಜ್ಞಾನ ಯಜ್ಞಗಳಿಗೆ ತಪ್ಪದೆ ಹೋಗುತ್ತಿದ್ದ ಪರಿಣಾಮವಾಗಿ ಅವರು ಕೇಳುತಿದ್ದ ಕೆಲವು ಪ್ರಶ್ನೆಗಳಿಗೆ ಅಷ್ಟಿಷ್ಟು ತಿಳಿದದ್ದನ್ನು ಹೇಳಲು ಸಾಧ್ಯವಾಯಿತು. ಇಲ್ಲದಿದ್ದರೆ ಅವರಿಗೆ ನಾನು ಯಾವ ಧರ್ಮದವನು ಎಂದು ಹೇಳಲು ಕಷ್ಟವಾಗುತ್ತಿತ್ತು.

ನಾನು ಡೆಟ್ರಿಯಾಟ್‌ನಲ್ಲಿ ನನ್ನ ಮಗಳ ಮನೆಯಲ್ಲಿದ್ದಾಗ ಒಂದು ಭಾನುವಾರ ಸಾಯಿಬಾಬರ ಭಜನೆಗೆ ನನ್ನ ಸ್ನೇಹಿತರಾದ ಡಾ॥ ಶಿವಶಂಕರ ಶಾಸ್ತ್ರಿಗಳು ಎವರ್ ಗ್ರೀನ್ ಫೀಲ್ಡ್‌ನಲ್ಲಿರುವ ಕ್ಯಾವಲಿ ಚರ್ಚ್‌ಗೆ ಕರೆದುಕೊಂಡು ಹೋಗಿದ್ದರು. ಸುಮಾರು ಮೂವತ್ತು-ನಲವತ್ತು ಜನ ನೆರೆದಿದ್ದ ಆ ಸಭೆಯಲ್ಲಿ ಅಮೆರಿಕನ್ನರು ಅನೇಕರಿದ್ದರು. ಅವರಿಗೆ ಸಾಯಿಬಾಬರ ಬಗ್ಗೆ ತಿಳಿದಿದ್ದ ಪವಾಡಗಳು, ಸಮಾಜ ಸೇವೆ, ಅಲ್ಲಿದ್ದ ಭಾರತೀಯರಿಗೆ ತಿಳಿದಿರಲಾರದು. ನಾನು ಬೆಂಗಳೂರಿನಿಂದ ಬಂದವನೆಂದು ತಿಳಿದು ಸಾಯಿಬಾಬರ ವಿಷಯ ನನಗೆ ಹೆಚ್ಚಿಗೆ ತಿಳಿದಿರಬಹುದೆಂದು ಗ್ರಹಿಸಿದ್ದರು. ಆದರೆ ಈ ಹಿಂದೆ ಅವರನ್ನು ಎರಡು ಬಾರಿ ನೋಡುವ ಅವಕಾಶ ಬಿಟ್ಟರೆ ಮತ್ತೇನೂ ಗೊತ್ತಿಲ್ಲವೆಂದಾಗ ಬಾಬಾರವರ ಬಗ್ಗೆ ಮಾತನಾಡುವ ಪೇಚಾಟ ದಿಂದ ತಪ್ಪಿಸಿಕೊಂಡೆ.

ಪಾಶ್ಚಿಮಾತ್ಯರಲ್ಲಿ ಒಂದು ದೊಡ್ಡ ಗುಣವನ್ನು ನಾನು ಕಂಡಿದ್ದು ಅವರು ಇಷ್ಟ ಪಟ್ಟು ಏನನ್ನಾದರೂ ಕಲಿಯಲು ಪ್ರಯತ್ನಪಟ್ಟರೆ ಅವರ ತನು-ಮನ-ಧನಗಳನ್ನು ಪೂರ್ಣವಾಗಿ

ಮುಡುಪಾಗಿಟ್ಟು ಶ್ರದ್ಧಾಭಕ್ತಿಯಿಂದ ಕಲಿಯುತ್ತಾರೆ. ನಂಬಿಕೆಯಲ್ಲಿ ಅನುಮಾನಿಸುವುದಿಲ್ಲ. ಅರ್ಧಂಬರ್ಧ ವಿದ್ಯೆಯನ್ನು ನಾಲ್ಕಾರು ಜನರ ಮುಂದೆ ಪ್ರದರ್ಶಿಸಿಕೊಳ್ಳುವ ಚಪಲ ಅವರಿಗಿಲ್ಲ. ತಿಳಿಯದಿದ್ದುದ್ದನ್ನು ನೇರವಾಗಿ ಗೊತ್ತಿಲ್ಲವೆಂದು ಹೇಳುತ್ತಾರೆ.

ಒಕ್ಕಲಿಗರ ಪರಿಷತ್ ಆಫ್ ಅಮೆರಿಕದ (ವಿ.ಪಿ.ಎ.) ಐದನೇ ಸಮ್ಮೇಳನ ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್‌ನಲ್ಲಿ ಜುಲೈ 2-4, 98ರಲ್ಲಿ ನಡೆಯಿತು. ಅದರಲ್ಲಿ ನಾನೂ ಒಬ್ಬ ಆಹ್ವಾನಿತ. ನನ್ನ ಹಾಗೆ ಆಹ್ವಾನಿತರಲ್ಲಿ ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡರು, ಖ್ಯಾತ ನಿರ್ದೇಶಕ ನಟ ನಾಗಾಭರಣ, ಜಾನಪದ ನೃತ್ಯಕಲೆ ಮೂಲ ಸಂಸ್ಥಾಪಕ ಡಾ॥ ಹೆಚ್. ಎಲ್. ನಾಗೇಗೌಡ, ಡಾ॥ ಎಸ್. ರಾಮೇಗೌಡ (AICTE) ಮುಂತಾದವರಿದ್ದರು. ನನ್ನ ಬಂಧುಗಳು, ಸ್ನೇಹಿತರೂ ಆದ ಆಲ್ದೂರು ಸಿ. ಎ. ಚಂದ್ರೇಗೌಡ ಮತ್ತು ಅವರ ಪತ್ನಿ, ಹವ್ವಳ್ಳಿ ಭೈರೇಗೌಡ ಅವರ ಪತ್ನಿ ಅವರೂ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಮೂರು ದಶಕದ ಹಿಂದೆ ಬೆರಳೆಣಿಸುವಷ್ಟು ಒಕ್ಕಲಿಗರು ಅಮೆರಿಕಾದಲ್ಲಿ ಇರಲಿಲ್ಲ. ಈಗ ಸುಮಾರು ಆರುನೂರು ಕುಟುಂಬಗಳಿಗೂ ಮಿಗಿಲಾಗಿವೆಯಂತೆ. ಒಕ್ಕಲಿಗ ಜನಾಂಗದವರು (ಒಕ್ಕಲುತನ ಕುಲಕಸುಬಾಗಿರುವವರು) 'ಅಪ್ಪ ಹಾಕಿದ ಆಲದ ಮರಕ್ಕೆ' ಅಂಟಿಕೊಂಡವರು, ತಲತಲಾಂತರದಿಂದ ತಾತ, ಮುತ್ತಾತ ಮಾಡಿದ ಆಸ್ತಿಯನ್ನೇ ಹರಿದು ಹಂಚಿ, ಹೊಡೆದಾಡಿಕೊಂಡು ಹಳ್ಳಿಯನ್ನು ಬಿಡದವರು, ಇಂದು ಸಾಗರದಾಚೆ ಇಷ್ಟೊಂದು ಸಂಖ್ಯೆಯಲ್ಲಿ ನೆಲಸಿರುವುದು ಸೋಜಿಗದ ಸಂಗತಿ. ಈ ಮಣ್ಣಿನ ಮಕ್ಕಳು, ಈ ನೆಲದ ನಂಟನ್ನು ಬಿಡಲು ಒಲ್ಲರು. ಬದಲಿಗೆ ಇದನ್ನು ಬಲಪಡಿಸುವ ಹಂಬಲ. ವಿ.ಪಿ.ಎ. ಮೂಲಕ ತಮ್ಮ ತಾಯ್ನಾಡಿನ ಹಿರಿಯರ ಕುಲಕಸುಬನ್ನು ನೆನೆಸಿಕೊಂಡು 'ನೇಗಿಲ ಯೋಗಿಯ' ತ್ಯಾಗ ಮನೋಭಾವದ, ಹಸಿದ ಹೊಟ್ಟೆಗೆ ಅನ್ನ ಉಣಿಸುವ ಉದ್ಯೋಗಕ್ಕೆ ಒತ್ತುಕೊಟ್ಟು, ಪ್ರೋತ್ಸಾಹಿಸಲು ಪಣತೊಟ್ಟಿರುವಂತೆ ಕಾಣುತ್ತದೆ.

ವಿ.ಪಿ.ಎ. ಕಾನ್‌ಫರೆನ್ಸ್ ಮುಗಿಸಿ, ಸ್ನೇಹಿತರೊಡಗೂಡಿ ಮಾಡಿದ ಎರಡು ವಾರಗಳ ಪ್ರವಾಸ ಸ್ಮರಣೀಯ. ಡಾ॥ ರಾಜಗೌಡ-ರತ್ನ, ಡಾ॥ ಅಪ್ಪಸ್ವಾಮಿಗೌಡ, ಅಮರನಾಥ ಕುಟುಂಬ, ಡಾ॥ ರಾಮಕೃಷ್ಣಯ್ಯ ಕುಟುಂಬ, ಡಾ॥ ಸೊಣ್ಣಪ್ಪ ಕುಟುಂಬ ಒಟ್ಟುಗೂಡಿ, ಪಾಮ್‌ಡೇಲಿನಲ್ಲಿರುವ ಲಕ್ಷ್ಮಣರವರ ಮನೆಯಲ್ಲಿ ಒಂದು ದಿನ ತಂಗಿದ್ದು, ಮರುದಿನ ಲಕ್ಷ್ಮಣ್ ಮತ್ತು ಅವರ ಮಗಳ ಸಮೇತ ಎಲ್ಲರೂ ಪ್ರಯಾಣ ಬೆಳೆಸಿದೆವು. ಸುಮಾರು ಎರಡು ಸಾವಿರ ಕಿಲೋಮೀಟರ್ ದೂರ ಹತ್ತು ದಿನದ ಪ್ರವಾಸ ಪ್ರಯಾಸವಿಲ್ಲದೆ ನಡೆಯಿತು. ಅಷ್ಟು ಬಾರಿ ನಾನು ಅಮೆರಿಕಾಕ್ಕೆ ಹೋಗಿದ್ದರೂ ಗ್ರಾಂಡ್ ಕ್ಯಾನಿಯನ್ ಮತ್ತು ಲಾಸ್ ವಾಗಸ್ ನೋಡಿರಲಿಲ್ಲ. ದಕ್ಷಿಣ ಅಮೆರಿಕಾದ ವಿಜ್ಞಾನಿ ಒಮ್ಮೆ ನನಗೆ ಹೇಳಿದ ಮಾತು ನೆನಪಿಗೆ ಬಂತು. ಪ್ರಪಂಚದಲ್ಲಿ ಎರಡು ಸ್ಥಳಗಳನ್ನು ಪುಸ್ತಕದಲ್ಲಿ ಓದಿದರೂ ಅಥವಾ ನೋಡಿದವರಿಂದ ಕೇಳಿದರೂ ನಾವೇ ಕಣ್ಣಾರೆ ನೋಡಿದ ಸೊಬಗು ಸಿಗುವುದಿಲ್ಲವೆಂದು. ಅವು ಯಾವುವೆಂದರೆ ಒಂದು ಭಾರತ, ಎರಡನೆಯದು ಗ್ರಾಂಡ್ ಕ್ಯಾನಿಯನ್. ನಾನು ಗ್ರಾಂಡ್ ಕ್ಯಾನಿಯನ್ ನೋಡಿದ ಮೇಲೆ ಅವರು ಹೇಳಿದ ಸತ್ಯ ಅರಿವಾಯಿತು. ನಿಸರ್ಗದಲ್ಲಿ ಇಂತಹದೊಂದು ರಮಣೀಯವಾದ ದೃಶ್ಯ, ಮುಂಜಾನೆ, ಮಧ್ಯಾಹ್ನ, ಸಂಜೆ ಬಹು ಬಗೆಯ ವರ್ಣಗಳಿಂದ ಕಾಣುವ ಸೊಬಗನ್ನು ನೋಡಿಯೇ ಸವಿಯಬೇಕು. ಲಾಸ್ ವಾಗಸ್ ಇಂದ್ರಜಾಲದ

ಸೃಷ್ಟಿ. ಒಳಹೊಕ್ಕರೆ ಹಗಲು ರಾತ್ರಿಯ ಪರಿವೇ ಇಲ್ಲ. ಎಲ್ಲಿಯೂ ಗಡಿಯಾರಗಳಿಲ್ಲ. ಪ್ರಪಂಚದಾದ್ಯಂತ ಮಾನವರು ಮಿಲಿಯನೆಯರ್ ಆಗುವ ಆಸೆಯಿಂದ ಬರುತ್ತಾರೆ. ಹೊರಗೆ ಬರುವಾಗ ಬರಿಗೈ. ಇದರ ಅರಿವು ಎಲ್ಲರಿಗೂ ತಿಳಿದಿದ್ದರೂ, ದೀಪಕ್ಕೆ ಚಿಟ್ಟೆ ಆಕರ್ಷಿಸಿ ತನ್ನ ರೆಕ್ಕೆಯನ್ನು ಸುಟ್ಟು ಕೊಂಡರೂ, ಪದೇ ಪದೇ ಅದನ್ನೇ ಆಶಿಸುವಂತೆ ಜನರೂ ಸಾವಿರಾರು ಸಂಖ್ಯೆಯಲ್ಲಿ ವರ್ಷವಿಡೀ ಇಲ್ಲಿಗೆ ಬಂದು ಜೂಜಾಡುವುದನ್ನು ನೋಡಿದರೆ ಧರ್ಮರಾಯನಿಗೂ ಬಿಡದ ಹುಚ್ಚು ಹುಲುಮಾನವರನ್ನು ಬಿಟ್ಟೀತೇ ಅನಿಸುತ್ತದೆ!

ಲಾಸ್‌ಏಂಜಲೀಸ್‌ನಿಂದ ವಾಪಸ್ಸು ಬರುವಾಗ ಚಿಕಾಗೋದಲ್ಲಿ ಎರಡು ದಿವಸ ತಂಗಿದ್ದು ಡಾ|| ರಾಜು-ರತ್ನರವರ ಜೊತೆ ಡೆಟ್ರಿಯಾಟಿಗೆ ಡ್ರೈವ್ ಮಾಡುವ ಯೋಜನೆಯಿಂದಾಗಿ ನನ್ನ ಊಸಾ ಟಿಕೆಟ್ಟನ್ನು ಬದಲಾಯಿಸಿ ಸೆಂಟ್ ಲೂಯಿಸ್ ನಿಂದ ಚಿಕಾಗೋ ಒಹೆರ್‌ಗೆ ಬಂದಾಗ ನಾರಾಯಣಸ್ವಾಮಿಯವರು ಬಂದು, ಸಂಜೆ ಚಿಕಾಗೋದಲ್ಲಿದ್ದ ಲೆಮಾಂಟ್ ರೋಡಿನಲ್ಲಿರುವ ದಿ ಹಿಂದೂ ಟೆಂಪಲ್ ಆಫ್ ಗ್ರೇಟರ್ ಚಿಕಾಗೋ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಸುಮಾರು 13 ಎಕರೆ ಜಮೀನಿನಲ್ಲಿರುವ ಈ ದೇವಸ್ಥಾನದ ಆವರಣದಲ್ಲಿ ನಾನು ಹೋದ ದಿನವೇ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಅವರ ಮೊದಲ ಚಿಕಾಗೋ ಧಾರ್ಮಿಕ ಸಮ್ಮೇಳನದ ಜ್ಞಾಪಕಾರ್ಥವಾಗಿ, ಪ್ರತಿಷ್ಠಾಪನೆ ಮಾಡಿದ್ದರು. ಅಲ್ಲಿಯ ರಾಮದೇವರ ದೇವಸ್ಥಾನದ ಜೀರ್ಣೋದ್ಧಾರದ ಪ್ರಯುಕ್ತ, ಅಂದು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅನ್ನದಾನವಿತ್ತು. ಅಂದು ಅಲ್ಲಿದ್ದ ವಾತಾವರಣ ನಾನು ಇಂಡಿಯಾದಲ್ಲಿಯೇ ಇದ್ದ ಹಾಗೆಯೇ ಭಾಸವಾಯಿತು. ಭಾರತೀಯರನೇಕರು ಅಮೇರಿಕಾದಲ್ಲಿ ಹಲವಾರು ವರುಷಗಳು ಕಳೆದಿದ್ದರೂ ಅವರ ದೇಶೀಯವರ ಜೊತೆ ಸೇರಿದಾಗ ಅವರ ವರ್ತನೆಗಳೆಲ್ಲ ದೇಶೀಯವರಂತೆಯೇ. ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಕಾಗದದ ತಟ್ಟೆ ಲೋಟಗಳು, ಮಂದಿರದೊಳಗೆ ಪೂಜಾಸಾಮಗ್ರಿಗಳನ್ನು ಅಡ್ಡಾದಿಡ್ಡಿಯಾಗಿ ಹರಡಿರುವುದು, ಗಾಯನವಾಗುತ್ತಿದ್ದಾಗ ಅವರವರೇ ಗಟ್ಟಿಯಾಗಿ ಮಾತನಾಡಿಕೊಳ್ಳುವುದು, ಎಲ್ಲವನ್ನು ನೋಡಿದಾಗ ಹುಟ್ಟುಗುಣ ಸಾಗರ ದಾಟಿದರೂ ಹೋಗದು ಅನ್ನುವುದಕ್ಕೆ ನಿದರ್ಶನವಾಗಿತ್ತು.

2 ನನ್ನ ಹುಟ್ಟೂರು

ನನ್ನ ಊರು ಗೊದ್ದು. ಮನೆ ದೊಡ್ರೆಮನೆ. ಕೋಣನ ದೊಡ್ಡೇಗೌಡ ನಮ್ಮ ಅಜ್ಜ. ಅವರ ತಾಯಿಯ ಮನೆಯಲ್ಲೇ ಹುಟ್ಟಿ ಬೆಳೆದವರು. ಚಿಕ್ಕಂದಿನಲ್ಲಿ ತಾಯಿ ತೀರಿಕೊಂಡಿದ್ದರಿಂದ ಮಗುವನ್ನು ತಾಯಿ ಮನೆಯಲ್ಲೇ ಬಿಟ್ಟಿದ್ದರು. ಪ್ರಾಪ್ತವಯಸ್ಸಿಗೆ ಬರುವವರೆಗೂ ತಂದೆಯ ಮನೆಯವರಿಗೆ ಅವನ ಅರಿವೇ ಇಲ್ಲ.

ಆಗಿನ ಕಾಲದಲ್ಲಿ ದೀಪಾವಳಿ ಹಬ್ಬದ ವೇಳೆಯಲ್ಲಿ ಊರಿನಲ್ಲಿದ್ದ ಹೋರಿಗಳ ಬೀಜ ಹೊಡೆಯುವುದು ಸಾಂಪ್ರದಾಯ. ಅಂದರೆ ಕ್ಯಾಸ್ಟ್ರೇಟ್ ಮಾಡುವುದು ವಾಡಿಕೆ. ಗಟ್ಟಿಮುಟ್ಟಾದ ಗಂಡಸರೆಲ್ಲಾ ಸೇರಿ ಊರಿನಲ್ಲಿರುವ ಹೋರಿಗಳನ್ನೆಲ್ಲಾ ಒಂದೆಡೆ ಸೇರಿಸಿ, ಹಗ್ಗ ಹಾಕಿಯೋ, ಕೊಂಬು ಹಿಡಿದೋ, ಬಾಲ ತಿರುವಿಯೋ, ಹೋರಿಗಳನ್ನು ಕೆಳಕ್ಕೆ ಕೆಡವಿ ನಾಲ್ಕಾರು ಜನ ಅದುಮಿ ಹಿಡಿದುಕೊಂಡು, ಗಟ್ಟಿ ಮುಟ್ಟಾದ ಹುರಿಯಾಳು ಕತ್ತರಿಯೋಪಾದಿಯಲ್ಲಿದ್ದ ಎರಡು ಮರದ ದೊಣ್ಣೆಗಳ ಮಧ್ಯೆ ಬೀಜಗಳನ್ನು ಸಿಲುಕಿಸಿ ನಿಧಾನವಾಗಿ ಕರಗುವಂತೆ ತೀಡುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ನಮ್ಮ ಊರಿನ ಮಂದೆ ಪಟೇಲರು ಉಪಸ್ಥಿತರಿದ್ದರಂತೆ. ಹೋರಿಗಳನ್ನು ಹಿಡಿಯುವಾಗ ಅಲ್ಲಿದ್ದವರಲ್ಲಿ ಗಟ್ಟಿಮುಟ್ಟಾದ ಒಬ್ಬನನ್ನು 'ಗೊದ್ದ, ಗೊದ್ದ ಹಿಡಿಯೋ' ಎಂದು ಹೇಳುತ್ತಿದ್ದರಂತೆ. ಯಾರು ಈತ ಎಂದು ಕೇಳಲಾಗಿ ಇವನು ಗೊದ್ದಿನ ಸಂತತಿಯವನೆ, ನಿಮ್ಮ ಕುಟುಂಬದವನೆ, ತಾಯಿ ತೀರಿದಮೇಲೆ ಇವನು ಇಲ್ಲಿಯೇ ಉಳಿದ ಎಂದರಂತೆ. ಬಹುಶಃ ಇವನು ಮುಂದೆ ಉಪಯೋಗಕ್ಕೆ ಬರಬಹುದೆಂದು ತಿಳಿದು ನಮ್ಮ ಹುಡುಗನನ್ನು ನಾನು ಕರೆದುಕೊಂಡು ಹೋಗುತ್ತೇನೆಂದು ಹೇಳಿ ಕರೆತಂದು ತಮ್ಮಲ್ಲಿದ್ದ ಹನ್ನೆರಡು ಜೊತೆ ಕೋಣಗಳನ್ನು ಕಾಯುವುದಕ್ಕೆ ಬಿಟ್ಟರಂತೆ. ಅಂದಿನಿಂದ ಅವರಿಗೆ ಕೋಣನ ದೊಡ್ಡೇಗೌಡನೆಂದು ಹೆಸರು ಬಂತು.

ನನಗೆ ಎಂಟೊಂಭತ್ತು ವಯಸ್ಸಿದ್ದಾಗ ನಮ್ಮ ಊರಿನಲ್ಲಿ ಕೇವಲ ಇಪ್ಪತ್ತು ಮನೆಗಳಿದ್ದವು. ಅವುಗಳ ಪೈಕಿ ಮೇಲ ಮನೆ ಮೂರು ಒಕ್ಕಲು, ಕೆಳಮನೆ ಎರಡು ಒಕ್ಕಲು ಬಿಟ್ಟರೆ ಉಳಿದವರೆಲ್ಲಾ ಒಂದೇ ಕುಟುಂಬಕ್ಕೆ ಸೇರಿದ್ದವರು. ನಾಡು ಪಟೇಲ, ಮಂದೆ ಪಟೇಲ, ಗ್ರಾಮಪಟೇಲಿಕಗಳೆಲ್ಲ ಇವರದ್ದೇ. ಪೂರ್ವದಲ್ಲಿ ಒಂದೇ ದೊಡ್ಡ ತೊಟ್ಟಿಮನೆ ಇತ್ತು. ಅದರಲ್ಲಿ ಮೂರು ತಲೆಮಾರಿನ ಅವಿಭಾಜ್ಯ ಕುಟುಂಬ ವಾಸವಾಗಿದ್ದರು. ಕ್ರಮೇಣ ಅಣ್ಣತಮ್ಮಂದಿರು ಬೇರೆಯಾದಾಗ ಅದರಲ್ಲೇ ಕೆಲವು ಭಾಗಗಳನ್ನು ಬೇರೆ ಮಾಡಿ, ಒಡೆದ ಕುಟುಂಬ ಸಂಸಾರ ಮಾಡುತ್ತಿದ್ದರು. ಮುಂದೆ ಅವರು ಬೇರೆ ಹೋದರೂ ತೊಟ್ಟಿಮನೆಯಲ್ಲಿದ್ದ ಹೆಸರೇ ಅವರಿಗೆ ಉಳಿಯಿತು. ಈಗಲೂ ಮೂಡಲಬಾಗಿಲ ಮನೆಯವರು, ಹಿತ್ತಿಲ ಬಾಗಿಲ ಮನೆಯವರು ದೊಡ್ಡಮನೆ (ದೊಡ್ರೆ

ಮನೆಯವರು) ಸಣ್ಣಮನೆಯವರೆಂದು ಹತ್ತಾರು ಮನೆಗಳಾಗಿವೆ. ಸುಮಾರು ಸಾವಿರದ ಒಂಭೈನೂರ ನಲವತ್ತೆರಡು-ನಲವತ್ಮೂರರಲ್ಲಿ ಈ ತೊಟ್ಟಿ ಮನೆಯನ್ನು ಒಡೆದು ಆ ಜಾಗದಲ್ಲಿ ಎರಡು ಮನೆಗಳನ್ನು ಕಟ್ಟಿದ್ದು ನೋಡಿದ್ದೇನೆ.

ಗೊದ್ದು ಪಟೇಲರ ಊರು, ಉಚ್ಚಂಗಿ ಶ್ಯಾನುಬೋಗರ ಊರು ಎಂದು ಹೇಳುವ ವಾಡಿಕೆ ಈ ಪ್ರದೇಶದಲ್ಲಿ ಇತ್ತು. ಮೂರನೇ ಮೈಸೂರು ಯುದ್ಧದಲ್ಲಿ ಮೈಸೂರು ಬ್ರಿಟಿಷರ ಪಾಲಾದರೂ ಐಗೂರಿನಲ್ಲಿ ಆಳುತ್ತಿದ್ದ ಪೊಳೆಯಗಾರರು ಬ್ರಿಟಿಷರಿಗೆ ಶರಣಾಗತರಾಗಿರಲಿಲ್ಲ. ಮಹಾದಂಡ ನಾಯಕ ಆರ್ಥರ್ ವೆಲ್ಲೆಸ್ಲಿಯು ಸ್ವತಃ ಸೈನ್ಯ ತೆಗೆದುಕೊಂಡು ಮಲೆನಾಡಿನ ಮೇಲೆ ದಂಡೆತ್ತಿ ಬಂದು ಕೆಲ ಪಾಳೆಯಗಾರರನ್ನು ಸೆರೆ ಹಿಡಿದು ನೇಣು ಹಾಕಿದರು. ಆದರೆ ಮಲೆನಾಡಿನ ದುರ್ಗಮ ಪ್ರದೇಶದ ಜನರನ್ನು ಎದುರು ಹಾಕಿಕೊಳ್ಳಲು ಇಂಗ್ಲಿಷರು ಸಿದ್ಧರಿರಲಿಲ್ಲ. ರಾಜಮಹಾರಾಜರುಗಳ ಕಾಲದಲ್ಲಿ ಕೊಟ್ಟಿದ್ದ ಇನಾಂ, ಸನ್ನದು, ಗೌಡಿಕೆ ಮೊದಲಾದ ಸ್ಥಾನಮಾನ, ಸವಲತ್ತುಗಳನ್ನು ಅವರವರಿಗೆ ಕಾಯಂ ಮಾಡಲು ನಿರ್ಧರಿಸಿ, ನಿಗದಿತ ದಿನಗಳಲ್ಲಿ ಆಯಾ ಪ್ರದೇಶದ ಸವಲತ್ತಿರುವ ಜನ ದಾಖಲುಗಳನ್ನು ತೋರಿಸಿ ಪಡೆಯಬಹುದೆಂದು ಘೋಷಿಸಿದರು. ಕೆಲವರನೇಕರು ಇವುಗಳನ್ನು ಸಕಾಲದಲ್ಲಿ ತೋರಿಸದೆ ಕಳೆದುಕೊಂಡಿರುವವರಿದ್ದಾರೆ (ಎನ್.ಕೆ. ಪುಟ್ಟೇಗೌಡ). ಆದರೆ ನಮ್ಮ ಊರು ನಾಡು ಪಟೇಲರು, ಮಂದೇ ಪಟೇಲರು, ಗ್ರಾಮಪಟೇಲರಲ್ಲದೆ, ಓಡಳ್ಳಿ ಪಟೇಲರು, ಕೆರಳ್ಳಿ ಪಟೇಲರು, ಕೊಂಗಳ್ಳಿ ಪಟೇಲರು, ಇಡಕಳ್ಳಿ ಪಟೇಲರು ಕೂಡ ಇನ್ನೂರು ವರ್ಷಕ್ಕೂ ಹಿರಿದಾದ ಪಟೇಲಿಕೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಗೊದ್ದು ಪಟೇಲರುಗಳ ಊರು ಎಂದು ಹೆಸರು ಗಳಿಸಿತು. ಆದರೆ ದೊಡ್ರೆ ಮನೆಯವರಿಗೆ ಯಾವ ಪಟೇಲಿಕೆಯೂ ಇರಲಿಲ್ಲ. ಬಹುಶಃ ಕೋಣನ ದೊಡ್ಡೇಗೌಡ್ರು ಹುಟ್ಟಿ ಬೆಳೆದದ್ದು ಅವರ ತಾಯಿ ಮನೆಯಲ್ಲಿಯಾದ್ದರಿಂದಲೊ ಅಥವಾ ವಂಶದಲ್ಲಿ ಕಿರಿಯವರೆಂದೋ ತಿಳಿಯದು.

ಕಾಲಕ್ರಮೇಣ ಕೋಣನ ದೊಡ್ಡೇಗೌಡ್ರಿಗೆ ಮದುವೆಯಾಗಿ ಆದ ಮಕ್ಕಳಲ್ಲಿ ಐದು ಗಂಡು ಮಕ್ಕಳು, ಒಂದು ಹೆಣ್ಣು ಮಗು ಬದುಕಿ ಉಳಿದವು. ಅವರಿಗೆ ಪಿತ್ರಾರ್ಜಿತ ಆಸ್ತಿ ಸಾಕಷ್ಟು ಸಿಕ್ಕಿರಲಿಲ್ಲ. ಜೀವನಕ್ಕೆ ಗದ್ದೆಯೇ ಆಧಾರ. ಅವರ ಜೀವನದುದ್ದಕ್ಕೂ ಮಕ್ಕಳಿಗೆ ವರುಷಕ್ಕೆ ಅನ್ನವಾಗುವಷ್ಟು ಗದ್ದೆ ಮಾಡಿದರೆ ಸಾಕು ಎನ್ನುವುದೇ ಧ್ಯೇಯ. ಅವರ ಧ್ಯೇಯವನ್ನು ಸಾಧಿಸಲು ಶ್ರಮ ಪಟ್ಟು, ಒಂದಿಷ್ಟು ನಾಣ್ಯಗಳನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಇಟ್ಟಿದ್ದರಂತೆ. ಯಾರೋ ಅದನ್ನು ಅಪಹರಿಸಿದ ಮೇಲೆ ಏಳುವರುಷ ಗಡ್ಡ ಬೋಳಿಸದೆ ಯೋಚಿಸಿ ಸತ್ತು ಹೋದರಂತೆ. ಇದನ್ನು ನಮ್ಮ ತಾಯಿ ನಾನು ಚಿಕ್ಕವನಾಗಿದ್ದಾಗ ಹೇಳಿದ್ದು ಅಚ್ಚಾಗಿ ಮನಸ್ಸಿನಲ್ಲಿ ನಿಂತಿದೆ.

ಗೊದ್ದು, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ (ಮಂಜರಾಬಾದ್ ತಾಲ್ಲೂಕು) ಯಸಳೂರು ಹೋಬಳಿಯಲ್ಲಿ ವಣಗೂರು ಕೂಡುರಸ್ತೆಯಿಂದ ಮೂರು ಕಿ.ಮೀ. ದೂರದಲ್ಲಿದೆ. ಈ ಊರಿಗೆ ಗೊದ್ದು ಎಂಬ ಹೆಸರು ಬರಲು ಅಲ್ಲಿದ್ದ ಒಂದು ಮುಳ್ಳುಹಂದಿ ಗುದ್ದಿನಿಂದ. ನಮ್ಮ ತಂದೆಯವರ ಕಾಲದಲ್ಲೂ ಕೂಡ ಮುಳ್ಳು ಹಂದಿಗಳು ಈ ಗುದ್ದಿಗೆ ಅಡಗಲು ಬರುತ್ತಿದ್ದವಂತೆ. ನಮ್ಮ ಊರಿನವರು ಬೇರೆ ಕಡೆಯಿಂದ ವಲಸೆ ಬಂದವರು ಎಂಬ ವದಂತಿ. ಬಹುಶಃ, ಆ ಕಾಲದಲ್ಲಿ ಶಿಕಾರಿಗೆ ಹೋಗುತ್ತಿದ್ದವರಿಗೆ ಆ ಜಾಗ ಮಲೆನಾಡಿನ ಮಳೆ ಗಾಳಿ

ಹೊಡೆತಕ್ಕೆ ಮರೆಯಾಗಿ ಕಂಡಿದ್ದರಿಂದ ಅಲ್ಲಿ ಬಂದು ನೆಲೆಸಿರಬೇಕು. ಐಗೂರು ಪಾಳೆಗಾರರು, "ಗೊದ್ದು ನಮ್ಮ ಮುದ್ದಿನ ಅರಮನೆ" ಎಂದು ಬಣ್ಣಿಸಿರುವ ಶಿಲಾಶಾಸನಗಳಿವೆಯಂತೆ.

ಸುತ್ತಲೂ ಗುಡ್ಡ. ದಟ್ಟವಾದ ಕಾಡು. ಊರಿಗೆ ಎತ್ತಿನ ಗಾಡಿ ಬರಬೇಕಾದರೆ ತ್ರಾಸ. ಎರಡು ಪಾರ್ಶ್ವದಲ್ಲಿ, ಎರಡು ಮೈಲಿ ದೂರದಲ್ಲಿ ಎರಡು ಹೊಳೆ, ಮಧ್ಯೆ ಊರು. ಮಳೆಗಾಲದಲ್ಲಿ ತುಂಬಿ ಹರಿಯುವ ಹೊಳೆಯನ್ನು ದಾಟಲು ಆಚೀಚೆ ದಡದಲ್ಲಿರುವ ಎರಡು ಮರಗಳ ಮಧ್ಯೆ ಮೆಟ್ಟು. ಮುಕ್ಕಾಲು ಅಡಿ ಅಗಲದ ಮರ ಅಥವಾ ಕಾಡಿನಲ್ಲಿ ಸಿಕ್ಕುವ ಗಟ್ಟಿಯಾದ ಬೆತ್ತ ಅಥವಾ ಬಳ್ಳಿಗಳನ್ನು ಹೆಣೆದು ಮಾಡಿರುವ ಜೋತು ಉಯ್ಯಾಲೆ ಮೆಟ್ಟು. ಪ್ರತಿವರ್ಷ ಮೆಟ್ಟು ಜಾರಿ ನೀರು ಪಾಲಾದವರ ಸುದ್ದಿ ಸರ್ವೇಸಾಮಾನ್ಯವಾಗಿರುತ್ತಿತ್ತು.

ಊರಿಗೆ ಹತ್ತಿರವಾದ ಪಟ್ಟಣವೆಂದರೆ ಸಕಲೇಶಪುರ (45 ಕಿ.ಮೀ.) ಆಗ ಬಸ್ಸು ನೋಡಿದವರೇ ಇಲ್ಲ. ರೈಲು ನೋಡಲು ಹಾಸನಕ್ಕೆ ಹೋಗಬೇಕಿತ್ತು (85 ಕಿ.ಮೀ.). ನಮ್ಮ ತಾಯಿಯ ತೌರೂರು ನೇರಡಿ, ನಮ್ಮೂರಿಂದ ಸುಮಾರು 5 ಮೈಲು. ಎತ್ತಿನ ಗಾಡಿ ನೋಡುವುದಕ್ಕೆ ಅವರು ಗೊದ್ದಿಗೆ ಬರುತ್ತಿದ್ದರಂತೆ. ಮುಂಗಾರು ಮಳೆ ಪ್ರಾರಂಭವಾಗುವ ಮುನ್ನ ಮೇ ತಿಂಗಳಲ್ಲಿ ಮನೆಯ ಸುತ್ತ ಮರೆ ಕಟ್ಟುತ್ತಿದ್ದರು. ದಟ್ಟವಾಗಿರುವ ಬಗನೆ ಉಲಿ, ಓಟೆ, ಹಂಬು (ಕಾಡಿನಲ್ಲಿ ಸಿಕ್ಕುತ್ತಿದ್ದ ಬಳ್ಳಿ) ಇದಕ್ಕೆ ಬೇಕಾದ ಸಲಕರಣೆ. ಒಂದು ಮನೆಯಿಂದ ಇನ್ನೊಂದು ಮನೆ ಕಾಣದಿರುವಷ್ಟು ಮರಗಿಡ. ಊರಿನಲ್ಲಿ ನಾಲ್ಕೈದು ಹುಲ್ಲಿನ ಮನೆ ಬಿಟ್ಟರೆ ಉಳಿದವೆಲ್ಲಾ ಹಂಚಿನ ಮನೆಗಳು. ಮಳೆಗಾಲ ಪೂರೈಸುವವರೆಗೆ ಮನೆಗೆ ಸೂರು ನೀರೇ ಗತಿ. ಮನೆ ಮೇಲೆ ಬಿದ್ದ ನೀರು ಸೂರಿನಿಂದ ದೋಣಿ ಮುಖಾಂತರ ಒಂದು ಹಂಡೆಯಲ್ಲಿ ಸಂಗ್ರಹಿಸುತ್ತಿದ್ದರು. ಊರಿಗೆ ಒಂದೇ ಸೇದುವ ಬಾವಿ, ಎಂಭತ್ತು ಅಡಿ ಆಳವಿತ್ತು. ಎರಡು ಮಗೆಯುವ ಬಾವಿ ಸೇರಿ ಊರಿಗೆಲ್ಲ ನೀರಾಗುತ್ತಿತ್ತು.

ಆಗಿನ ಕಾಲದಲ್ಲಿ ಮಲೆನಾಡಿನಲ್ಲಿ ಎಲ್ಲರೂ ಗಮನಿಸಬೇಕಾದ ಎರಡು ನಿಯಮಗಳೆಂದರೆ, ಒಂದನೆಯದು ನಾಲ್ಕೈದು ತಿಂಗಳಿಗೆ ಬೇಕಾಗುವಷ್ಟು ಉಪ್ಪು, ಸೀಮೆಎಣ್ಣೆ, ಬೆಲ್ಲ ಮತ್ತು ಸಾಂಬಾರ ಪದಾರ್ಥಗಳನ್ನು ಸಂಗ್ರಹಿಸುವುದು. ಎರಡನೆಯದು ಆರು ತಿಂಗಳಿಗೆ ಆಗುವಷ್ಟು ಸೌದೆಒಟ್ಟಲು. ಬೇಸಿಗೆಯಲ್ಲಿ (ಮಾರ್ಚ್-ಏಪ್ರಿಲ್) ಎರಡು ಮುಖ್ಯವಾದ ಆಗಿನ ಕಸುಬೆಂದರೆ ಗದ್ದೆ ಬಿತ್ತುವುದು, ಸೌದೆ ಕಡಿಯುವುದು. ಗದ್ದೆ ಬಿತ್ತುವುದು, ಸೌದೆ ಕಡಿಯುವುದನ್ನು ಊರಿನವರು ಸಾಮೂಹಿಕವಾಗಿ ಮಾಡುತ್ತಿದ್ದರು. ಅದಕ್ಕೆ ಕಂಬಳವೆಂದೂ ಕರೆಯುತ್ತಿದ್ದರು. ಗದ್ದೆ ಬಿತ್ತುವಾಗ ಮುಯ್ಯಿ ಆರು (ಜೊತೆ ಎತ್ತು ನೇಗಿಲು ನೊಗ ಒಂದು ಆಳು) ಹೋಗುವುದು ವಾಡಿಕೆ. ಅವರವರ ಶಕ್ತಿಯಾನುಸಾರ ಹಿಡುವಳಿಯನ್ನು ಹೊಂದಿಕೊಂಡು ಹತ್ತು ಇಪ್ಪತ್ತು ಆರು ಒಬ್ಬರಿಗೆ ಒಂದು ದಿನ ಬಿತ್ತಲು ಹೋಗಬೇಕಿತ್ತು. ರೇವತಿ, ಅಶ್ವಿನಿ, ಭರಣಿ ಮಳೆ ಹದಬಿದ್ದ ತಕ್ಷಣ ವಾರದ ಮುಂಚೆಯೇ ಯಾರ ಯಾರ ಮನೆಯಲ್ಲಿ ಯಾವತ್ತು ಬಿತ್ತುವುದೆಂದು ತೀರ್ಮಾನಿಸಿ, ಅಂದು ಅವರಿಗೆ ಬೇರೆಯವರೆಲ್ಲಾ ಹೋಗಿ ಉತ್ತು ಬಿತ್ತಿ ಬರುತ್ತಿದ್ದರು. ಅಂದು ಆ ಮನೆಯವರು ಅವರಿಗೆಲ್ಲರಿಗೆ ವಿಶೇಷವಾದ ಅಡಿಗೆ ಮಾಡಿ ಗದ್ದೆ ಹತ್ತಿರ ಬಡಿಸುತ್ತಿದ್ದರು. ಜೊತೆಗೆ ಕುಡಿಯುವವರಿಗೆ ಬಗನೆ ಕಳ್ಳು (ಹೆಂಡ) ಗಡಿಗೆಯಲ್ಲಿ ತಂದು ಬಾಳೆ ಎಲೆ ದೊನ್ನೆಯಲ್ಲಿ ಕೊಡುತ್ತಿದ್ದರು.

ಸೌದೆ ಕಂಬಳವೂ ಹೀಗೆ ಒಬ್ಬೊಬ್ಬರಿಗೆ ಒಂದೊಂದು ದಿನ ಮುಡುಪಾಗಿಡುತ್ತಿದ್ದರು. ಮುಂಜಾನೆಯೇ ಎದ್ದು ಗಂಡಸರೆಲ್ಲ ಸೇರಿ ಒಂದು ಮನೆಗೆ ಆರು ತಿಂಗಳಿಗೆ ಬೇಕಾಗುವಷ್ಟು ಸೌದೆಯನ್ನು ಕಡಿದು, ಒಡೆದು ಅಲ್ಲಲ್ಲಿ ರಾಶಿ ಹಾಕುತ್ತಿದ್ದರು. ಮಧ್ಯಾಹ್ನದ ನಂತರ, ಕಡುಬು, ಕೋಳಿಸಾರು, (ಶಕ್ತಿ ಇದ್ದವರು ಕುರಿ ಹಂದಿಯನ್ನು ಕಡಿಯುತ್ತಿದ್ದರು) ಕುಡಿಯುವಷ್ಟು ಕಳ್ಳು. ಹೀಗೆ ಅದೆಷ್ಟು ಮರಗಳನ್ನು ಕಡಿದು ಉರಿಸಿದ್ದಾರೆಯೋ ತಿಳಿಯದು. ನಾನು ಚಿಕ್ಕಂದಿನಲ್ಲಿ ಬೇಸಿಗೆ ರಜಕ್ಕೆ ಊರಿಗೆ ಹೋದರೆ ಎಲ್ಲೆಲ್ಲೂ ರಾಶಿ ರಾಶಿ ಸೌದೆ ಗುಡ್ಡೆಗಳು. ಮಲೆನಾಡಿನ ಮನೆಗಳಲ್ಲಿ ಮಳೆಗಾಲದಲ್ಲಿ ಬೆಂಕಿ ಆರಿದ್ದೇ ಇಲ್ಲ. ಯಾರಿಗೂ ಗಿಡನೆಟ್ಟು ಮರ ಬೆಳೆಸಬೇಕೆಂಬ ಅರಿವಿಲ್ಲ. ಇಂದು ಆ ಜಾಗವೆಲ್ಲ ಬೋಳು ಬಯಲಾಗಿ ಒಂದು ಕಾಲದಲ್ಲಿ ದಟ್ಟವಾದ ಕಾಡಿತ್ತೆಂದು ಊಹಿಸಲೂ ಸಾಧ್ಯವಿಲ್ಲ.

ಮತ್ತೊಂದು ಊರಿನವರೆಲ್ಲ ಸಾಮೂಹಿಕವಾಗಿ ಮಾಡುತ್ತಿದ್ದದ್ದು ಬೇಟೆಯಾಡುವುದು ಮತ್ತು ಮೀನು ಹಿಡಿಯುವುದು. ನಾನು ಇಂಟರ್‌ಮೀಡಿಯಟ್‌ಗೆ ಹೋಗುವವರೆಗೂ (1952) ನಮ್ಮ ಊರಿನಲ್ಲಿ ಮಾಂಸ, ಮೀನು ಮಾರಿದ್ದು, ಕೊಂಡಿದ್ದು ನೋಡಿರಲಿಲ್ಲ. ಹಬ್ಬಹರಿದಿನಗಳಲ್ಲಿ ನೆಂಟರಿಷ್ಟರಿಗೆ ಆತಿಥ್ಯಕ್ಕೆ ಮನೆಯಲ್ಲಿದ್ದ ಕೋಳಿಗಳೇ ಆಧಾರ. ಉಳಿದ ದಿನಗಳು ಅಂದರೆ ಬೇಸಿಗೆಯಲ್ಲಿ ಕಾಡು ಪ್ರಾಣಿಗಳ ಬೇಟೆ ಅಥವಾ ಹೊಳೆಯಲ್ಲಿ ಬಲೆ ಹಾಕಿಯೋ, ಮದ್ದು ಹಿಂಡಿಯೋ ಮೀನು ಹಿಡಿಯುವುದು. ಬೇಸಿಗೆಯಲ್ಲಿ ಬಲೆ ಹೊಡೆಯುವುದನ್ನು ಈಜು ಬಲ್ಲವರು ಮಾಡುತ್ತಿದ್ದರು. ಊರಿನವರು ಸಾಮೂಹಿಕವಾಗಿ ಕಾರೆಕಾಯಿ ಅಥವಾ ಕಗ್ಗಟ್ಟನ್ನು ರಾತ್ರಿಯೆಲ್ಲಾ ಕುಟ್ಟಿ, ಮರುದಿನ ಹಳ್ಳವನ್ನು ಕಟ್ಟಿ, ಅದರ ಕೆಳಗೆ ಇರುವ ಗುಂಡಿಗಳಿಗೆ ಕದರಿ ಮೇಲೆ ಬಂದ ಮೀನನ್ನು ಹಿಡಿಯುತ್ತಿದ್ದರು. ನೀರು ತಿಳಿಯಾದನಂತರ ಉಳಿದ ಮೀನೆಲ್ಲ ಚೇತರಿಸಿಕೊಳ್ಳುತ್ತಿದ್ದವು.

ಮಳೆಗಾಲದಲ್ಲಿ ಕರಿ ಮೀನು (ಗದ್ದೆಯಲ್ಲಿ ಸಿಕ್ಕಿದ ಮೀನನ್ನು ಒಣಗಿಸಿಟ್ಟಿರುವುದು) ಅಥವಾ ಸಂಡಿಗೆ (ಕಾಡುಮಾಂಸ ಒಣಗಿಸಿ ಶೇಖರಿಸಿಟ್ಟಿರುವವು) ಕೆಸವಿನ ಸೊಪ್ಪು, ಕಾಡು ಗೆಣಸು, ಸಾರಿಗೆ ಆಧಾರ. ಮಳೆಗಾಲದ ಪ್ರಾರಂಭದಲ್ಲಿ ಬಗೆಬಗೆಯ ಅಣಬೆಗಳು ದೊರೆಯುತ್ತಿದ್ದವು. ಕಾಸರಗಾಲಿ, ಬೇರಣಬೆ, ಹುಲ್ಲಣಬೆ, ಕೂಗಾನು, ಕುಕ್ಕರೆ ಹೀಗೆ ಒಂದೇ ಎರಡೇ. ಅವುಗಳಲ್ಲಿದ್ದ ರುಚಿ ಈಗ ಮಾರುಕಟ್ಟೆಯಲ್ಲಿ ದೊರೆಯುವ ಯಾವ ಅಣಬೆಯಲ್ಲೂ ದೊರೆಯಲಾರದು. ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಮಳೆಗಾಲ ನಿಂತು ಒಂದೆರಡು ದಿನ ಬಿಸಿಲಾಗಿ ಮಳೆ ಬಂದ ದಿನ ಹೇರಳವಾಗಿ ಮೀನು ಹಿಡಿಯುತ್ತಿದ್ದರು. ಹಳ್ಳಕೊಳ್ಳಗಳನ್ನು ಅಲ್ಲಲ್ಲಿ ಅಡ್ಡಗಟ್ಟಿ, ನೀರು ಒಂದು ಕಡೆ ಹರಿಯುವಂತೆ ಮಾಡಿ ಅದರ ಅಡಿ ಕೂಳಿ, ಗೋರಿ, ಕಡಿಕೆ (ವಾಟೆಯಿಂದ ಮಾಡಿದ ಸಾಧನಗಳು) ಇಟ್ಟು, ಅದರೊಳಗೆ ಬಿದ್ದ ಮೀನುಗಳನ್ನು ಸಂಗ್ರಹಿಸುತ್ತಿದ್ದರು. ಗದ್ದೆಯಲ್ಲೂ ಕೂಡ ಹೇರಳವಾಗಿ ಸಣ್ಣ ಮೀನುಗಳು ದೊರೆಯುತ್ತಿದ್ದವು. ಗದ್ದೆ ಕೊಯ್ಲಿಗೆ ಮುಂಚೆ ಗದ್ದೆ ಹಿಕ್ಕುವುದೆಂದು ನೀರೆಲ್ಲಾ ತಗ್ಗಾದ ಕಡೆಗೆ ಹೋಗುವ ಹಾಗೆ ಮಾಡಿ ಬದುವಿನ ಒಂದು ಕಡೆ ನೀರು ಹೋಗಲು ಜಾಗ ಮಾಡಿ ಅದಕ್ಕೆ ಎದುರಾಗಿ ಕೂಳಿ, ಗೋರಿ ಅಥವಾ ಕಡಿಕೆಗಳನ್ನಿಡುತ್ತಿದ್ದರು. ಕೆಲವರಿಗೆ ಮಳೆಗಾಲ ಕಳೆಯುವವರೆಗೂ ಉಪಯೋಗಿಸುವಷ್ಟು ಮೀನು ಸಿಗುತ್ತಿತ್ತು. ಆ ದಿನಗಳಲ್ಲಿ ಊರಿಗೆ ಯಾರಾದರೂ ಬಂದರೆ ಮೂಗು ಹಿಡಿದು ಬರಬೇಕಿತ್ತು. ಎಲ್ಲರ ಮನೆ ಮುಂದೆ ಮೀನು ಒಣಗಿಸುತಿದ್ದು, ಊರೇ ನಾತ ಹೊಡೆಯುತ್ತಿತ್ತು.

ಈಗಿನವರಿಗೆ ಅದೆಲ್ಲಾ ಕನಸಾಗಿದೆ. ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಬಳಸಲು ಪ್ರಾರಂಭ ಮಾಡಿದಾಗಿನಿಂದ ಗದ್ದೆಯಲ್ಲಿ ಮೀನಿನ ಸಂತತಿಯೇ ಇಲ್ಲಾ. ಕೀಟ ನಾಶಕ ಬಳಕೆಗೆ ಬಂದ ಮೇಲೆ ಹಳ್ಳಕೊಳ್ಳಗಳಲ್ಲಿಯೂ ಮೀನು ಸಿಗುವುದು ದುರ್ಲಭ. ಇನ್ನು ಕಾಡೇ ಇಲ್ಲದಿರುವಾಗ ಕಾಡು ಪ್ರಾಣಿಗಳ ಬೇಟೆ ಎಲ್ಲಿ ಬಂತು?

ಕೋಣನ ದೊಡ್ಡೇಗೌಡರಿಗೆ (ನಮ್ಮ ಅಜ್ಜನಿಗೆ) ಐದು ಜನ ಗಂಡು ಮಕ್ಕಳಲ್ಲಿ, ಹಿರಿಯರು ಕೊಮಾರಿಗೌಡ್ರು, ಎರಡನೆಯವರು ತಮ್ಮಣ್ಣಗೌಡ್ರು, ಮೂರನೆಯವರು ಕರೇಗೌಡ್ರು (ನಮ್ಮ ತಂದೆ), ನಾಲ್ಕನೆಯವರು ದೇವೇಗೌಡ್ರು, ಕೊನೆಯವರು ನಿಂಗೇಗೌಡ್ರು. ಹಿರಿಯವರ ವಿಷಯ ನನಗೆ ಅಷ್ಟಾಗಿ ಗೊತ್ತಿಲ್ಲ. ಅವರಿಗೆ ಇಬ್ಬರು ಗಂಡು ಮಕ್ಕಳು. ಮೂರು ಹೆಣ್ಣು ಮಕ್ಕಳು. ನನ್ನ ಪ್ರೈಮರಿ ವಿದ್ಯಾಭ್ಯಾಸ ಈ ಮೂವರಲ್ಲಿ ಒಬ್ಬಳಾದ ಪುಟ್ಟಕ್ಕನ ಮನೆಯಲ್ಲಿ. ಅವಳ ಗಂಡ ಅಣ್ಣೇಗೌಡ್ರು ಟ್ರೆಷರಿ ಶರಾಫ್ ಆಗಿದ್ದರು. ಅವರು ಅರಕಲಗೂಡಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅವರ ಮನೆಯಲ್ಲಿ ಐದು ವರುಷ ಇದ್ದೆ (1942-46).

ನನ್ನ ತಂದೆಯ ಸಹೋದರರಲ್ಲಿ ಎರಡನೆಯವರು ಆಗಿನ ಕಾಲಕ್ಕೆ ವಿದ್ಯಾವಂತರು. ಓದಲು ಬರೆಯಲು ಬರುತ್ತಿತ್ತು. ಕಾಫಿ ವ್ಯಾಪಾರ ಮಾಡುತ್ತಿದ್ದರು. ಶೇಂದಿ ಕಂಟ್ರಾಕ್ಟ್ ಕೂಡ ಮಾಡುತ್ತಿದ್ದರು. ಸಾಕಷ್ಟು ಸಂಪಾದನೆಯನ್ನು ಮಾಡಿ ಬೇರೆ ಒಂದು ಮನೆಯನ್ನು ಕಟ್ಟಿದ್ದರು. ಈಗಲೂ ಅದನ್ನು 'ಹೊಸಮನೆ' ಎಂದು ಕರೆಯುತ್ತಾರೆ. ಸಾಕಷ್ಟು ಜಮೀನನ್ನು ಮಾಡಿದ್ದರು. ಆಗಿನ ಕಾಲದಲ್ಲಿ ಮುನ್ನೂರು ರೂಪಾಯಿಗಿಂತ ಹೆಚ್ಚಿನ ಕಂದಾಯ ಕಟ್ಟುತ್ತಿದ್ದ ಕೆಲವರಲ್ಲೇ ಇವರೊಬ್ಬರು. ಆದರೆ ಇವರಿಂದ ಇವರ ಸಹೋದರರ ಬಡತನ ಬಗೆ ಹರಿಯಲಿಲ್ಲ. 'ನನಗೆ ತಂದೆಯ ಆಸ್ತಿಯೂ ಬೇಡ, ನಾನು ಮಾಡಿದ್ದನ್ನು ಬೇರೆಯವರಿಗೆ ಕೊಡೂವುದೂ ಇಲ್ಲ' ಎಂದು ಬೇರೆ ಹೋದರಂತೆ. ಇವರಿಗೆ ಇಬ್ಬರು ಪತ್ನಿಯರು. ಮೊದಲನೆಯವರಿಗೆ ಮಕ್ಕಳಿಲ್ಲವೆಂದು ಎರಡನೆಯ ಮದುವೆಯಾಗಿದ್ದರು. ಅವರಿಗೆ ಎರಡು ಗಂಡು ಮಕ್ಕಳು. ಮಕ್ಕಳಿಲ್ಲದ ಮೊದಲನೆಯವರನ್ನು ನಾವೆಲ್ಲಾ ದೊಡ್ಡವ್ವ ಎಂದು ಕರೆಯುತ್ತಿದ್ದೆವು. ಅವರಿಗೆ ಮಕ್ಕಳೆಂದರೆ ಪ್ರೀತಿ. ಎಲ್ಲರನ್ನೂ ಒಂದೇ ಸಮ ಕಾಣುತ್ತಿದ್ದರು. ಅವರಿಗೆ ಬೆನ್ನು ಕೆರೆದರೆ ಏನಾದರೂ ತಿನ್ನಲು ಕೊಡುತ್ತಿದ್ದರು. ಚಿಕ್ಕವರೆಲ್ಲಾ ಸಮಯ ಬಂದಾಗ ಬೆನ್ನು ಕೆರೆಯಲು ಹೋಗುತ್ತಿದ್ದೆವು. ನೆಪಮಾತ್ರಕ್ಕೆ ಬೆನ್ನು ಒಡ್ಡಿ ಏನಾದರೂ ಕೈಗಿಟ್ಟು ಕಳುಹಿಸುತ್ತಿದ್ದರು.

ಮೂರನೆಯವರು ಕರೇಗೌಡ್ರು (ನಮ್ಮ ತಂದೆ). ಅವರದ್ದೇ ಎಲ್ಲಾ ಬೇಸಾಯದ ಕಾರುಬಾರು. ಅವರಿಗೂ ಎರಡು ಮದುವೆ. ಮೊದಲನೆಯ ಮದುವೆಯಾಗಿ ಸ್ವಲ್ಪ ಸಮಯಕ್ಕೇ ಆಕೆ ತೀರಿಕೊಂಡರು. ಎರಡನೆಯವರಾದ ನಮ್ಮ ತಾಯಿಗೆ, ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳು.

ನಾಲ್ಕನೆಯವರು ದೇವೇಗೌಡ್ರಿಗೆ ಒಂದು ಗಂಡು, ಎರಡು ಹೆಣ್ಣು. ಇವರು ಶಿಕಾರಿಯಲ್ಲಿ ಎತ್ತಿದ ಕೈ. ಯಾರಾದರೂ ನೆಂಟರು ಮನೆಗೆ ಬಂದರೆ ಇವರಿಗೆ ಹೇಳಿದರೆ ಸಾಕು. ಇಂತಹದೇ ಬೇಟೆಯನ್ನು ತರುತ್ತೇನೆ ಅದಕ್ಕೆ ತಕ್ಕ ಅಣಿಮಾಡಿಕೊಂಡಿರಿ ಎಂದು ಹೇಳುತ್ತಿದ್ದರಂತೆ.

ಯಾವತ್ತೂ ಮನೆಯವರಿಗೆ ನಿರಾಶೆ ಮಾಡಲಿಲ್ಲವೆಂದು ನಮ್ಮ ತಾಯಿ ಹೇಳುತ್ತಿದ್ದರು. ಮೊದಲನೆಯವರನ್ನು ಮತ್ತು ನಾಲ್ಕನೆಯವರನ್ನು ನಾನು ನೋಡಿರಲಿಲ್ಲ.

ಕೊನೆಯವರು ನಿಂಗೇಗೌಡ್ರು. ಇವರಿಗೂ ಎರಡು ಮದುವೆ. ಮೊದಲನೆಯವರಿಗೆ ಮೂರು ಹೆಣ್ಣು ಮಕ್ಕಳನಂತರ ತೀರಿಕೊಂಡ ಮೇಲೆ ಎರಡನೆ ಮದುವೆಯಾಗಿದ್ದರು. ಇವರಿಗೆ ಎರಡು ಹೆಣ್ಣು ಮೂರು ಗಂಡು ಮಕ್ಕಳು. ಚಿಕ್ಕಯ್ಯನಿಗೂ ಓದಲು ಬರೆಯಲು ಬರುತ್ತಿರಲಿಲ್ಲ. ತಮ್ಮಣ್ಣಗೌಡ್ರನ್ನು ಬಿಟ್ಟರೆ ಬೇರೆ ಯಾರಿಗೂ ಅಕ್ಷರ ಜ್ಞಾನವಿರಲಿಲ್ಲ. ಆದರೂ ಚಿಕ್ಕಯ್ಯನಿಗೆ ರಾಮಾಯಣ ಮಹಾಭಾರತದ ಅರಿವು ಚೆನ್ನಾಗಿತ್ತು. ಸಂಜೆ ಆರರನಂತರ ಅವರನ್ನು ನೋಡಲು ಯಾರೂ ಹೋಗುತ್ತಿರಲಿಲ್ಲ. ಆ ವೇಳೆಗೆ ಅವರು ಆ ದಿನದ 'ಕೋಟ' ತೆಗೆದುಕೊಂಡು ಒಳ್ಳೆ ಸ್ಪಿರಿಟ್‌ನಲ್ಲಿರುತ್ತಿದ್ದರು. ಯಾರಾದರೂ ಓದಿದವರು ಅವರ ಹತ್ತಿರ ಹೋದರೆ ರಾಮಾಯಣದಲ್ಲೋ ಮಹಾಭಾರತದಲ್ಲೋ ಯಾವುದಾದರೂ ಒಂದು ಸನ್ನಿವೇಶವನ್ನು ತೆಗೆದುಕೊಂಡು ಅದು ಹೇಗಾಯಿತೆಂದು ಕೇಳುತ್ತಿದ್ದರು. ಈ ಪರೀಕ್ಷೆಗೆ ಯಾರೂ ತಯಾರಿರುತ್ತಿರಲಿಲ್ಲ. ಬಹುಶಃ, ಕಿರಿಯವನೆಂದು ಪ್ರೀತಿಯಿಂದ ಸಾಕಿರಬೇಕು. ಗಟ್ಟಿಮುಟ್ಟಾದ ಆಳು. ಇವರ ಪ್ರಾಯದಲ್ಲಿ ಮಧ್ಯ ರಾತ್ರಿ ಎದ್ದು ಇವರು ಹಾಸಿಗೆಯಲ್ಲಿ ಮಲಗಿರುವಂತೆ ಜೋಡಿಸಿ, ಎರಡು ಮೈಲಿ ದೂರದ ಹುಲಗತ್ತೂರು ಹೊಳೆ ಹಾದು, ಆಚೆ ದಡದಲ್ಲಿದ್ದ ತಮ್ಮ ಪ್ರಿಯತಮೆಯನ್ನು ನೋಡಿ ಬೆಳಗಾಗುವುದರೊಳಗೆ ಬರುತ್ತಿದ್ದರೆಂದು ಹೇಳುತ್ತಿದ್ದರು. ಇವರು ಎಂತಹ ಮರವನ್ನಾದರೂ ಹತ್ತಿ, ಅಡ್ಡ ಕೊನೆಯಲ್ಲಿದ್ದ ಹೆಜ್ಜೇನನ್ನು ಕೊಯ್ಯುತ್ತಿದ್ದರಂತೆ. ಸಹೋದರರೆಲ್ಲ ಬೇರೆಯಾದ ನಂತರ ಇವರ ಮನೆ ದನಕರುಗಳಿಗೆ ಊರಿಗೇ ಹೆಸರಾದವರು. ಸದಾ ಇವರ ಮನೆಯಲ್ಲಿ ಹಾಲು ಮೊಸರು ತುಪ್ಪದ ಕಾಲುವೆ ಹರಿಯುತ್ತಿತ್ತು.


ಅನಕ್ಷರಸ್ಥರಾದರೂ ಆಗಿನವರಿಗೆ ವ್ಯವಹಾರ ಜ್ಞಾನ ಚೆನ್ನಾಗಿತ್ತು. ಕತೆ, ಪುರಾಣ, ಇತಿಹಾಸ, ಹಬ್ಬ ಹುಣ್ಣಿಮೆ, ವಾರ ತಿಥಿ, ಘಳಿಗೆ, ನಕ್ಷತ್ರ ಮುಂತಾದವುಗಳ ಬಗ್ಗೆ ಅರಿವು ವಿದ್ಯಾವಂತರಿಗಿಂತ ಕಡಿಮೆಯೇನಿರಲಿಲ್ಲ. ನಾನು ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದರೂ ನಮ್ಮ ತಾಯಿಗೆ ತಿಳಿದಿದ್ದ ಅಮಾವಾಸ್ಯೆ, ಹುಣ್ಣಿಮೆ, ಯಾವ ಮಳೆ ಯಾವತ್ತು ಹುಟ್ಟುತ್ತದೆ, ಯಾವ ಪಾದ, ಯಾವ ಹಬ್ಬ ಎಂದು ಬರುತ್ತದೆ, ಇವೆಲ್ಲದರ ಬಗ್ಗೆ ನನಗೆ ತಿಳಿದಿರಲಿಲ್ಲ. ಈಗಿನ ಹಾಗೆ ಸಣ್ಣಪುಟ್ಟ ಖಾಯಿಲೆಗಳಿಗೆ ಡಾಕ್ಟರ ಹತ್ತಿರ ಹೋಗುವ ಅಭ್ಯಾಸವೇ ಇರಲಿಲ್ಲ. ಏಕೆಂದರೆ ಒಬ್ಬ ಡಾಕ್ಟರ್ ನೋಡಬೇಕೆಂದರೆ ಹತ್ತಾರು ಮೈಲಿಯಾದರೂ ಹೋಗಬೇಕಿತ್ತು. ಎಷ್ಟೋ ಖಾಯಿಲೆಗಳಿಗೆ ಸ್ಥಳದಲ್ಲಿಯೇ ದೊರೆಯುವ ಉಪಾಯಗಳಿಂದ ನಿವಾರಿಸಿಕೊಳ್ಳುತ್ತಿದ್ದರು. ನಮ್ಮ ಊರಿನಲ್ಲಿ ಹುಟ್ಟಿದ ಮುಕ್ಕಾಲು ಪಾಲು ಮಕ್ಕಳಿಗೆ ಹೆರಿಗೆ ಮಾಡಿಸುವುದಕ್ಕೆ ನಮ್ಮ ಹಿರಿ ದೊಡ್ಡಪ್ಪನ ದೊಡ್ಡ ಸೊಸೆ ನಾಲ್ಕೈದು ದಶಕಗಳು ನೆರವಾಗಿದ್ದರು. ಆಗ ಹೆರಿಗೆ ಆಸ್ಪತ್ರೆ ಹೆಸರೇ ಕೇಳಿದವರಿಲ್ಲ. ಮಕ್ಕಳಿಗೆ ಲಸಿಕೆ ಹಾಕಿಸುವುದಾಗಲಿ ಅಥವಾ ಯಾವುದೇ ಆ್ಯಂಟಿ ಬಯಾಟಿಕ್ಸ್ ಕೊಡುವುದಾಗಲಿ ಇರಲಿಲ್ಲ. ಈಗಿನ ಹೈಜಿಯನಿಕ್ ಕಂಡೀಷನ್ ನೋಡಿದರೆ ಆಗಿನ ಮಲೆನಾಡು ಪ್ರದೇಶದಲ್ಲಿದ್ದ ಹಳ್ಳಿಯ ವಾತಾವರಣ ನೆನಸಿಕೊಂಡರೆ ನಾವು ಹೇಗೆ ಬದುಕಿ ಉಳಿದೆವು ಎನ್ನಿಸುತ್ತದೆ!

ನಮ್ಮ ಊರು ಒಂದು ಕೊಂಪೆಯಲ್ಲಿ ಇದ್ದರೂ ಬಹಳ ಜನರಿಗೆ ಓದಲು ಬರೆಯಲು ಬರುತ್ತಿತ್ತು. ಸಂಜೆ ಹೊತ್ತು ಜೋಗಿ ಹಾಡು, ಕೊರವಂಜಿಪದ, ಜಾನಪದ, ರಾಮಾಯಣ,

ಮಹಾಭಾರತ ಓದುವ ಅಭ್ಯಾಸ ಇಟ್ಟುಕೊಂಡಿದ್ದರು. ಊರಿನವರೆಲ್ಲಾ ಸೇರಿ ಒಬ್ಬ ಉಪಾಧ್ಯಾಯರನ್ನು ಇಟ್ಟುಕೊಂಡಿದ್ದರು. ಸ್ಕೂಲು ಎರಡು ಕೊಠಡಿಯ ಹಂಚಿನ ಮನೆ. ಒಂದು ಕಡೆ ಉಪಾಧ್ಯಾಯರ ಅಡಿಗೆ ವಸತಿ, ಉಳಿದ ಭಾಗ ತರಗತಿ. ನಾನು ಸ್ಕೂಲಿಗೆ ಹೋಗುತ್ತಿದ್ದಾಗ ಅಂದರೆ 1938-42 ರ ಅವಧಿಯಲ್ಲಿ ಸುಮಾರು ಮೂವತ್ತು ಮೂವತ್ತೈದು ವಿದ್ಯಾರ್ಥಿಗಳು ಇರುತ್ತಿದ್ದೆವು. ಪಕ್ಕದ ಊರಾದ ತಿಪ್ಪಹಳ್ಳಿ, ಹುಡ್ರೆಮನೆ, ಕೊಂಗಳ್ಳಿಯಿಂದಲೂ ಶಾಲೆಗೆ ಬರುತ್ತಿದ್ದರು. ಬೇರೆ ಬೇರೆ ತರಗತಿಗಳೆಂದು ವಿಂಗಡಿಸಿರಲಿಲ್ಲ. ದನ ದೊಡ್ಡಿಗೆ ಕೂಡಿದ ಹಾಗೆ ಚಿಕ್ಕವರು ದೊಡ್ಡವರು ಎಲ್ಲರೂ ಒಟ್ಟಿಗೆ ಕೂರುತ್ತಿದ್ದೆವು. ಆಗಿನ ನಿಯಮವೇನೆಂದರೆ ದನಕಡಗುವಾಗ ಮತ್ತು ದನಕೂಡುವಾಗ ಹುಡುಗರನ್ನು ಹೊರಗೆ ಹೋಗಲು ಬಿಡುತ್ತಿದ್ದರು. ಉಳಿದಂತೆ ಬೆಳಿಗ್ಗೆ ಏಳು ಘಂಟೆಯಿಂದ ಸಂಜೆ ಆರು ಘಂಟೆಯವರಿಗೆ ಸ್ಕೂಲು. ಮಧ್ಯಾಹ್ನ ಊಟಕ್ಕೆ ಬಿಡುತ್ತಿದ್ದರು. ಊರಿಗೆ ಒಂದೇ ದೊಡ್ಡ ಗಡಿಯಾರ ತೋಟ್ಟಿ ಮನೆಯಲ್ಲಿತ್ತು. ಗಂಟೆಗೆ ಒಂದು ಬಾರಿ ಯಾರಾದರೂ ಹುಡುಗರು ಹೋಗಿ ನೋಡಿ ಬಂದು ಗಂಟೆ ಹೇಳಬೇಕಿತ್ತು. ಊರಲ್ಲಿ ಎಲ್ಲರಿಗೂ ಅರಿವಿದ್ದದ್ದು ಎರಡು ವೇಳೆ. ದನಕಡಗುವ ಹೊತ್ತು ಅಂದರೆ ಬೆಳಿಗ್ಗೆ ಎಂಟರಿಂದ ಒಂಭತ್ತು, ಮತ್ತೆ ದನಕೂಡುವ ಹೊತ್ತು ಸಂಜೆ ಸುಮಾರು ಐದು ಗಂಟೆಗೆ. ಉಳಿದ ವೇಳೆ ಅಂದರೆ ಮನೆಯಲ್ಲಿ ಹೆಂಗಸರಿಗೆ ಮತ್ತು ಆರಂಭಕ್ಕೆ ಹೋಗುವವರಿಗೆ ಮೊದಲನೆ ಕೋಳಿ ಕೂಗು ದಿನದ ಆರಂಭದ ಸೂಚಕ. ಅಂದರೆ ಬೆಳಿಗ್ಗೆ ನಾಲ್ಕು ಘಂಟೆ ಮತ್ತು ಐದು ಘಂಟೆ. ಬೆಂಕಿಯ ಬೆಳಕೋ, ಹರಳೆಣ್ಣೆ ದೀಪವೋ ಅಥವಾ ಸೀಮೆಎಣ್ಣೆ ದೀಪವೋ ಬೆಳಕಿಗೆ ಆಧಾರ.

ಮನೆಯಲ್ಲಿ ಹೆಂಗಸರೆ ಮೊದಲು ಏಳುತ್ತಿದ್ದದ್ದು ಮತ್ತು ಕೊನೆಯಲ್ಲಿ ಮಲಗುತ್ತಿದ್ದದ್ದು. ಎಷ್ಟೋ ದಿವಸ ನಮ್ಮ ತಾಯಿ ಮಲಗಿದ್ದೇ ನೋಡಿರಲಿಲ್ಲ. ನಾವು ಮಲಗಿದ ಮೇಲೆ ಮಲಗುತ್ತಿದ್ದರು. ನಾವು ಏಳುವುದಕ್ಕೆ ಮುಂಚಿತವಾಗಿಯೇ ಎದ್ದಿರುತ್ತಿದ್ದರು. ಊರಿನ ಎಲ್ಲರ ಮನೆಯ ಬಾಳು ಹೀಗೆ. ರಾತ್ರಿ ಮಲಗುವಾಗ ಬೆಂಕಿ ಮುಚ್ಚಿ ಅಂದರೆ ಒಂದು ದೊಡ್ಡ ಕೆಂಡವನ್ನು ಬೂದಿಯಿಂದ ಮುಚ್ಚಿ ಬೆಳಿಗ್ಗೆ ಅದನ್ನು ಕೆದಕಿ ಸ್ಟೌದೆ ಇಟ್ಟು ಬೆಂಕಿ ಮಾಡುತ್ತಿದ್ದರು. ಬಹಳ ಮನೆಗಳಲ್ಲಿ ವರ್ಷಗಟ್ಟಲೆ ಬೆಂಕಿ ಆರಿದ್ದೇ ಇಲ್ಲ. ಹೆಂಗಸರು ದಿನನಿತ್ಯ 14-16 ಘಂಟೆ ಕೆಲಸ ಮಾಡುತ್ತಿದ್ದರು. ನೀರು ಸೇದುವುದು, ಭತ್ತ ಕುಟ್ಟುವುದು, ಅಕ್ಕಿ ಬೀಸುವುದು, ರೊಟ್ಟಿ ಸುಡುವುದು, ಮಜ್ಜಿಗೆ ಕಡೆಯುವುದು, ಹಾಲು ಕರೆಯುವುದು, ದನಕಡಗುವುದು, ಕೊಟ್ಟಿಗೆ ಬಾಚುವುದು, ಹುಲ್ಲು ತರುವುದು, ಎಲ್ಲವೂ ಹೆಂಗಸರ ಕೆಲಸ. ಹೊತ್ತು ಹೊತ್ತಿಗೆ ಅಡಿಗೆ ಮಾಡುವುದು ಇವರಿಗೆ ಮುಡಿಪಾದದ್ದು. ಇದರ ಜೊತೆಗೆ ಮಕ್ಕಳ ಸೇವೆ, ಅವರಿಗೆ ವಾರಕ್ಕೊಮ್ಮೆಯಾದರೂ ಸ್ನಾನ,ಬಟ್ಟೆ ತೊಳೆಯುವುದು. ಮಧ್ಯೆ ಮಧ್ಯೆ ನೆಂಟರಿಷ್ಟರು, ಹೋಗಿ ಬರುವವರು, ವರ್ಷಕ್ಕೊಮ್ಮೆ ತವರೂರಿಗೆ ಹೋಗಲು ಬಿಡುವು ಕೊಡುತ್ತಿರಲಿಲ್ಲ. ಇಷ್ಟೆಲ್ಲಾ ಮಾಡಿಯೂ ಗಂಡನ ಜೊತೆ ಗದ್ದೆ ತೋಟದ ಕೆಲಸದಲ್ಲಿ ನೆರವಾಗಬೇಕು. ಬಹುಶಃ, ಭಾರತದ ಎಲ್ಲಾ ಹಳ್ಳಿಯ ಜೀವನವೇ ಹೀಗೆ!

ಸ್ಕೂಲಿನಲ್ಲಿ ದಿನನಿತ್ಯ ಕಡ್ಡಾಯವಾಗಿ ಮಾಡುತ್ತಿದ್ದುದು ಪ್ರಾರಂಭದಲ್ಲಿ ಪ್ರಾರ್ಥನೆ - ಸ್ವಾಮಿದೇವನೆ ಲೋಕಪಾಲನೆ, ಸಂಜೆ ಸ್ಕೂಲು ಬಿಡುವಾಗ ಎಲ್ಲರೂ ಒಟ್ಟಿಗೆ ನೂರರವರೆಗೆ ಗಟ್ಟಿಯಾಗಿ ಮಗ್ಗಿ ಹೇಳಿ ನಂತರ ಕಾಯೌಶ್ರೀ ಗೌರಿ ಹೇಳುವುದು. ಇದರ ಮಧ್ಯೆ ಯಾರಿಗೆ ಏನು ಪಾಠ ಹೇಳುತ್ತಿದ್ದರೆಂದು ಜ್ಞಾಪಕವಿಲ್ಲ. ಈಗಿನ ಹಾಗೆ ಹತ್ತಾರು ಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗಲು ಪುಸ್ತಕಗಳೇ ಇರಲಿಲ್ಲ. ನನಗೆ ಜ್ಞಾಪಕವಿರುವುದು ಮೊದಲನೆಯ





ತಾಯಿ ಲಿಂಗಮ್ಮನವರು


ಮಲೆನಾಡಿನಲ್ಲಿ ಮರೆಯಾಗುತ್ತಿರುವ ಹೆಂಗಸರ ಉಡುಗೆಯ ವೈಖರಿ (ಪುಟ 15)

ಸ್ವಾಮಿ ಚಿನ್ಮಯಾನಂದರವರೊಂದಿಗೆ

ಚಿನ್ಮಯ ಮಿಷನ್ನಿನ ಬಾಲವಿಹಾರದ ಒಂದು ನೋಟ (ಪುಟ 285)

ಡಾ॥ ರಾಧಾಕೃಷ್ಣನ್‌ರವರೊಂದಿಗೆ

1959ರಲ್ಲಿ ದೆಹಲಿಯಲ್ಲಿ ಓದುತ್ತಿದ್ದಾಗ (ಪುಟ 72)







ಕರ್ನಾಟಕ ರಾಜ್ಯಪಾಲ ಶ್ರೀ ಖುರ್ಷಿದ್ ಆಲಂಖಾನ್‌ರವರೊಂದಿಗೆ

ಭಾರತ ಸ್ವಾತಂತ್ರ್ಯ ಸುವರ್ಣಮಹೋತ್ಸವ ಸಮಾರಂಭದಲ್ಲಿ ಸೈನ್ಸ್ ಮ್ಯೂಸಿಯಂ ಉದ್ಘಾಟನಾ ಸಮಾರಂಭ (ಪುಟ 276-77)

ಡಾ|| ಸ್ವಾಮಿನಾಥನ್‌ರವರೊಂದಿಗೆ

ಹಿಂಬದಿಯಲ್ಲಿ - ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನೆನಪಿನಾರ್ಥ ನಿಲ್ಲಿಸಿರುವ ಸ್ಮಾರಕ ಸ್ಥಂಬ (ಪುಟ 248)

ಸಕಲೇಶಪುರದ ನಾಗರೀಕರು ಸನ್ಮಾನಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡರು ಸನ್ಮಾನಿಸುತ್ತಿರುವುದು

ಹಿಂಬದಿಯಲ್ಲಿ ಜಿಲ್ಲಾ ಪರಿಷತ್ ಸದಸ್ಯರು ಹೆಚ್.ಎಮ್. ಕೃಷ್ಣಪ್ರಸಾದ್‌ರವರು



ಪುಸ್ತಕ ಆಟ, ಊಟ, ಓಟ, ದುಡ್ಡಿದ್ದವನು ದೊಡ್ಡಪ್ಪ, ದನದೊಡ್ಡಿಗೆ ಕೂಡು ಹೀಗೆ ಪ್ರಾಸವಾಗಿ ಪ್ರಾರಂಭವಾಗಿ ಕೊನೆಗೊಳ್ಳುತ್ತಿದ್ದವು. ದಿನನಿತ್ಯ ಇವನ್ನು ಓದಿ ಇಡೀ ಪುಸ್ತಕವೇ ಬಾಯಿ ಪಾಠವಾಗುತ್ತಿತ್ತು.

ಲೆಕ್ಕ, ಗಣಿತ ಈಗ ಇರುವುದಕ್ಕೆ ಭಿನ್ನ, ಅಡ್ಡ, ಹಾಗ, ಮುಪ್ಪಾಗ ಮುಂತಾದವು. ಅಮರಕೋಶ ಓದಬೇಕಿತ್ತು. ಈ ಶಾಲೆಯಲ್ಲಿ ಕಲಿತ ಅಚ್ಚಳಿಯದೆ ಜ್ಞಾಪಕದಲ್ಲಿ ಉಳಿದಿರುವ ಪ್ರಸಂಗವೆಂದರೆ ಕೆಲವರು ಹಲಗೆಯ ಮೇಲೆ ತೆಳುವಾಗಿ ಮರಳನ್ನು ಹರಡಿ ಅದರ ಮೇಲೆ ಅ, ಆ, ಇ, ಈ ಯನ್ನು ಬೆರಳಿನಲ್ಲಿ ಬರೆದು ಅಳಿಸಿ ಬರೆಯಬೇಕಿತ್ತು. ಮತ್ತೆ ಕೆಲವರಿಗೆ ಸ್ಲೇಟು ಬಳಪವಿರುತ್ತಿತ್ತು. ಬಹುಶಃ, ಬೇಗ ಕಲಿಯುವವರಿಗೆ ಸ್ಲೇಟು ಬಳಪ ಕೊಡುತ್ತಿದ್ದರು. ನಿಧಾನವಾಗಿ ಕಲಿಯುವವರಿಗೆ ಹಲಗೆ ಮೇಲೆ ಮರಳು ಹರಡಿ ಬರೆಸುತ್ತಿದ್ದರು. ನಮ್ಮ ಜೊತೆ ಕೊಂಗಳ್ಳಿ ಹುಚ್ಚ ಎಂಬ ಹುಡುಗ ಇದ್ದ. ನನಗಿಂತಲೂ ವಯಸ್ಸಿನಲ್ಲಿ ದೊಡ್ಡವನು. ಅವನ ನಿಜವಾದ ಹೆಸರೂ ದೊಡ್ಡ ಎಂದು. ಇಡೀ ಒಂದು ವರುಷ ಮರಳ ಮೇಲೆ ಅ ಆ ಇ ಈ ಬರೆದರೂ ಸ್ಲೇಟಿನ ಮೇಲೆ ಬರೆಯಲು ಬರುತ್ತಿರಲಿಲ್ಲ. ಆದರೆ ಅವನ ಚತುರತೆ ಲೆಕ್ಕ ಹೇಳುವುದರಲ್ಲಿ ಎಲ್ಲರನ್ನೂ ವಿಸ್ಮಯ ಮಾಡುತ್ತಿತ್ತು.

ಆಗಿನ ಕಾಲದಲ್ಲಿ ಹಳ್ಳಿಯ ಯುವಕರಿಗೆ ಆಟ ಪಾಟ ನಕ್ಕು ನಲಿಯುವಂತಹ ಸನ್ನಿವೇಶ ದೊರೆಯುತ್ತಿರಲಿಲ್ಲ. ಆದರೆ ಊರಿನಲ್ಲಿ ಯಾವುದಾದರೂ ಮದುವೆ ಇದ್ದರೆ ವಾರಗಟ್ಟಲೆ ಶಾಸ್ತ್ರಗಳು. ಆಗ ಎಲ್ಲರೂ ಸೇರಿ ಅವರವರಿಗೆ ತೋರಿದ ಹಾಸ್ಯಚಟಾಕಿಗಳನ್ನು ಬಿಡುವುದು, ಯಾವುದಾದರೂ ಕೈ ಕಸರತ್ತು, ಒಡಕು ಬಿಡಿಸುವುದು ಮೊದಲಾದುವನ್ನು ಪ್ರದರ್ಶಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಕೊಂಗಳ್ಳಿ ಹುಚ್ಚನ ಕಡೆ ಎಲ್ಲರ ಗಮನ. ಲೆಕ್ಕದಲ್ಲಿ ಕೂಡಿ, ಕಳೆದು, ಭಾಗ ಮಾಡಿ, ಗುಣಿಸುವುದರಲ್ಲಿ ನಿಸ್ಸೀಮ. ಅದು ಎಷ್ಟೇ ಸಂಖ್ಯೆ ಇರಲಿ ಕ್ಷಣ ಮಾತ್ರದಲ್ಲಿ ಸರಿಯಾದ ಉತ್ತರ ಹೇಳುತ್ತಿದ್ದ. ಕೆಲವು ಗುಣಾಕಾರ ಭಾಗಾಕಾರ ಮಾಡುವುದಕ್ಕೆ ಗಂಟೆಗಟ್ಟಲೆ ಬೇಕಿದ್ದುದನ್ನು ಕ್ಷಣ ಮಾತ್ರದಲ್ಲಿ ಹೇಳುತ್ತಿದ್ದ. ಆದರೆ ಬರೆಯುವುದಕ್ಕೆ ಬರುತ್ತಿರಲಿಲ್ಲ. ಓದುವುದಕ್ಕೆ ಬರುತ್ತಿರಲಿಲ್ಲ. ಒಂದು ಉದ್ದನೆಯ ಕೂದಲನ್ನು ಹಲವಾರು ಗಂಟು ಹಾಕಿಕೊಟ್ಟರೆ ಹಗ್ಗದ ಗಂಟನ್ನು ಬಿಡಿಸಿದ ಹಾಗೆ ಸುಸೂತ್ರವಾಗಿ ಬಿಡಿಸುತ್ತಿದ್ದ. ಮಾತು ಕಡಿಮೆ, ಮುಖ ನೋಡಿದವರಿಗೆಲ್ಲ ಹಸನ್ಮುಖಿ. ಯಾರಿಗೂ ಯಾವಾಗಲೂ ಏನೂ ತೊಂದರೆ ಕೊಟ್ಟವನಲ್ಲ. ಇಂತಹ ಪ್ರತಿಭಾವಂತನ ಜೀವನವೆಲ್ಲ ದನಕಾದೆ ಕಳೆದನೆಂದು ಕಾಣುತ್ತದೆ. ರಾಮಾನುಜಂಗೆ ಸಿಕ್ಕಿದ ಹಾಗೆ ಇವನಿಗೂ ಯಾರಾದರೂ ಇವನ ಪ್ರತಿಭೆಯನ್ನು ಗುರುತಿಸುವವರು ಸಿಕ್ಕಿದ್ದರೆ ಅವನೇನಾಗುತ್ತಿದ್ದನೋ ತಿಳಿಯದು! ಹಳ್ಳಿಗಳಲ್ಲಿ ಅವಕಾಶ ಸಿಕ್ಕದೆ ಇಂತಹ ಪ್ರತಿಭೆಗಳು ಬೆಳಕಿಗೆ ಬರದೆ ಮಣ್ಣಾಗಿರುವುದು ಎಷ್ಟೋ!

ಶಾಲೆಯ ಉಪಾಧ್ಯಾಯರು ಹೆಚ್ಚಿನ ಭಾಗವನ್ನು ಶಾಲೆಯಲ್ಲೇ ಕಳೆಯುತ್ತಿದ್ದರು. ಊರಿನವರು ಕೊಡುತ್ತಿದ್ದ ಅಕ್ಕಿ, ಹಾಲು, ಬೇಳೆ, ಬೆಲ್ಲ, ಕಾಫಿಪುಡಿ ಇವರ ದಿನನಿತ್ಯದ ಆವಶ್ಯಕತೆಗಳನ್ನು ನೀಗಿಸುತ್ತಿದ್ದವು. ಅವರಿಗೆ ಸಂಭಾವನೆ ಏನು ಕೊಡುತ್ತಿದ್ದರೆಂದು ತಿಳಿಯದು. ಅವರೇ ಅಡಿಗೆ ಮಾಡಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳು ಪಾತ್ರೆ ತೊಳೆದು ಬಟ್ಟೆ ಒಗೆದು ಕೊಡುತ್ತಿದ್ದರು. ಒಗೆದ ಬಟ್ಟೆಗಳನ್ನು ನೀಳವಾಗಿ ಕೋಲಿನಿಂದ ಹರಡಿ, ಹಗ್ಗದ ಮೇಲೆ

ಬಿಡುತ್ತಿದ್ದರು. ಇಸ್ತ್ರಿ ಮಾಡದಿದ್ದರೂ ಬಟ್ಟೆ ಮುಜುಗಾಗುತ್ತಿರಲಿಲ್ಲ. ದೊಡ್ಡ ಹುಡುಗರು ಬಟ್ಟೆ ಒಗೆಯುವುದು, ಸೌದೆ ತರುವುದು ಮಾಡುತ್ತಿದ್ದರು. ಚಿಕ್ಕವರು ಪಾತ್ರೆ ತೊಳೆಯುವುದು, ಕಸ ಹೊಡೆಯುವ ಕೆಲಸ ಮಾಡುತ್ತಿದ್ದರು. ಇವರ ಪಂಗಡಕ್ಕೆ ನಾನೂ ಸೇರಿದವನು. ಪಾತ್ರೆ ತೊಳೆಯುವ ಮುನ್ನ ಅವರು ಬಿಟ್ಟಿದ್ದ ಬೆಂದ ಬೇಳೆಯ ಮೇಲೆ ನಮ್ಮೆಲ್ಲರ ಕಣ್ಣು. ಆ ಕಾಲದಲ್ಲಿ ಮನೆಯಲ್ಲಿ ನಾವು ಬೇಳೆ ಸಾರು ನೋಡಿದವರಲ್ಲ. ಬೇಳೆ ಕೊಳ್ಳುತ್ತಿದ್ದರೋ ಇಲ್ಲವೋ ತಿಳಿಯದು!

ಹಬ್ಬಗಳಲ್ಲೆಲ್ಲಾ ಗೌರಿ ಗಣೇಶ ಹಬ್ಬ ಹಿರಿದು. ಮಳೆಗಾಲ ಹಿಡಿಯುವ ಮುನ್ನ ಮಾಡುವ ಮಾರಿ ಹಬ್ಬ ಬಿಟ್ಟರೆ ಮಳೆಗಾಲ ನಿಲ್ಲುವ ಸಮಯಕ್ಕೆ ಬರುತ್ತಿದ್ದ ಗೌರಿಗಣೇಶನ ಹಬ್ಬಕ್ಕೆ ಕೆಲವು ವಾರಗಳ ಮುಂಚಿತವಾಗಿಯೇ ಕಾಯಿ ಜೂಜು ಪ್ರಾರಂಭವಾಗುತ್ತಿತ್ತು. ಮೂವತ್ತು ಹೆಜ್ಜೆ, ಐವತ್ತು ಹೆಜ್ಜೆ ದೂರದಲ್ಲಿ ತೆಂಗಿನಕಾಯಿಟ್ಟು ಗುರುತಿನ ಮೇಲೆ ನಿಂತು ಕಲ್ಲಿನಿಂದ ಹೊಡೆಯುವುದು. ಇದರಲ್ಲಿ ನಾನಾ ತರದ ಪಂದ್ಯ, ಇಷ್ಟು ಕಲ್ಲಿಗೆ ಇಷ್ಟು ಕಾಯಿ ಗೆದ್ದರೆ ಒಡೆದ ಕಾಯಿಗಳೆಲ್ಲ ಗೆದ್ದವರಿಗೆ. ಸೋತರೆ ಅಷ್ಟು ಕಾಯಿಗಳನ್ನು ಸೋತವರು ಕೊಡಬೇಕು. ಇನ್ನೂ ಬಗೆ ಬಗೆಯ ಕಾಯಿ ಜೂಜು ನಡೆಯುತ್ತಿತ್ತು. ಮಕ್ಕಳಿಗೆ ಪೆಟ್ಲು ಹೊಡೆಯುವ ಆಟ. ಸಣ್ಣ ಬಿದಿರು, ಒಂದು ಅಡಿ ಉದ್ದ, ಕಡಲೆ ಕಾಳು ಹಿಡಿಯುವಷ್ಟು ರಂಧ್ರ. ಆ ರಂಧ್ರಕ್ಕೆ ತಕ್ಕಂತೆ ಒಂದು ಬಿದರಿನ ಕೋಲು. ಆ ಸಮಯದಲ್ಲಿ ಒಂದು ಬಗೆಯ ಕಾಡು ಬಳ್ಳಿಯಿಂದ ಗೊಂಚಲು ಗೊಂಚಲಾಗಿ ಬಿಡುತ್ತಿದ್ದ ಕಡಲೆಕಾಳು ಗಾತ್ರದ 'ಗಂಗನಕಾಯಿ'ಯನ್ನು ಕೊಯ್ದು ತಂದು, ಒಂದೊಂದು ಕಾಯಿಯನ್ನು ಬಿದರಿನ ರಂಧ್ರಕ್ಕೆ ಸೇರಿಸಿ ಬಿದರಿನ ಕಡ್ಡಿಯನ್ನು ಹೊಟ್ಟೆಯಿಂದ ಬಲವಾಗಿ ತಳ್ಳಿದರೆ ಪಟಾಕಿಯಷ್ಟು ಶಬ್ದ ಬರುತ್ತಿತ್ತು. ಹತ್ತಿರದಿಂದ ಹೊಡೆದರೆ ಸಾಕಷ್ಟು ಪೆಟ್ಟಾಗುತ್ತಿತ್ತು.

ನಾನು ಎಸ್.ಎಸ್.ಎಲ್.ಸಿ. ಮಾಡಿ, ಇಂಟರ್‌ಮೀಡಿಯಟ್‌ಗೆ ಹೋದ ವರುಷ ಅಂದರೆ 1952 ರಲ್ಲಿ ಊರಿನಲ್ಲಿ ಗಣೇಶನನ್ನು ಇಡುವುದು ಪ್ರಾರಂಭವಾಯಿತು. ಅಲ್ಲಿಯವರೆಗೆ ಊರಿನಲ್ಲಿ ಯಾರೂ ಗಣೇಶನಮೂರ್ತಿಯನ್ನು ಇಟ್ಟು ಪೂಜಿಸುವ ವಾಡಿಕೆ ಇರಲಿಲ್ಲ. ಗೌರಿ ಹಬ್ಬದ ದಿನ ಮುತ್ತೈದೆಯರು ಮಡಿ ಉಟ್ಟು, ಬಾವಿಯ ಹತ್ತಿರ ಗಂಗೆಯನ್ನು ಪೂಜಿಸಿ, ಮನೆಗೆ ತರುತಿದ್ದ ಸಂಭ್ರಮ ಬಿಟ್ಟರೆ ಗೌರಿ ಗಣೇಶನನ್ನು ಅಂಗಡಿಯಿಂದ ತಂದು ಪೂಜಿಸುತ್ತಿರಲಿಲ್ಲ. ಊರಿನವರೆಲ್ಲರ ಅನುಮತಿ ಮತ್ತು ಧನ ಸಹಾಯದಿಂದ ನನ್ನ ನೇತೃತ್ವದಲ್ಲಿ ಸಕಲೇಶಪುರದಿಂದ ಗೌರಿ ಗಣೇಶನನ್ನು ತಂದು ಸ್ಕೂಲಿನಲ್ಲಿ ಇಟ್ಟು, ಐದು ದಿವಸದನಂತರ ವಾದ್ಯ ಮೆರವಣಿಗೆಯಲ್ಲಿ ಕೂಡರಸ್ತೆ ಹೊಳೆಗೆ ತೆಗೆದುಕೊಂಡು ಹೋಗಿ ವಿಸರ್ಜಿಸಲಾಯಿತು. ಪ್ರತಿ ದಿನ ಬೆಳಿಗ್ಗೆ-ಸಂಜೆ ಊರಿನವರು ಯಾರಾದರೊಬ್ಬರು ಪೂಜೆ ಫಲಹಾರಕ್ಕೆ ದಾನಿಗಳಾಗುತ್ತಿದ್ದರು. ಒಂದೆರಡು ದಿವಸ ಹರಿಕಥೆ, ಸಂಗೀತವೂ ಏರ್ಪಾಡಾಗುತ್ತಿತ್ತು. ಸುಗ್ಗಿಯನ್ನು ಬಿಟ್ಟರೆ ಊರಿನವರೆಲ್ಲ ಸಾಮೂಹಿಕವಾಗಿ ಸೇರಿ ಮಾಡುವಂತಹ ಗಣೇಶನ ಹಬ್ಬ ಇಂದಿಗೂ ನಡೆದುಕೊಂಡು ಬರುತ್ತಿರುವುದು ಸಂತೋಷದ ವಿಷಯ.

ಗೌರಿ ಹಬ್ಬದ ಹೊತ್ತಿಗೆ ಕೆಲಸವೆಲ್ಲ ಪೂರೈಸಿ ಆರಂಭದ ಸಲಕರಣೆಗಳೆನ್ನೆಲ್ಲ ತೊಳೆದು, ಹಬ್ಬದ ದಿನ ಪೂಜಿಸಿ ನಂತರ ಒಂದು ಕಡೆ ಇಡುತ್ತಿದ್ದರು.

ಮುಖ್ಯವಾದ ಹಬ್ಬಗಳಲ್ಲೆಲ್ಲಾ ಅಕ್ಕಪಕ್ಕದ ನಾಲ್ಕೈದು ಮನೆಯವರನ್ನಾದರೂ ಕರೆದು ಒಟ್ಟಿಗೆ ಊಟ ಮಾಡುವುದು ಒಂದು ವಿಶೇಷ. ಪುನಃ ಅವರ ಮನೆಗೆ ಇವರು

ಹೋಗುವ ವಾಡಿಕೆ. ಹಬ್ಬದ ಹಿಂದಿನ ದಿನ ಶಿಖಾರಿ ಮಾಡುವುದು ಒಂದು ರೂಢಿ. ಗೌರಿ ಹಬ್ಬದ ವಿಶೇಷ ಹೂರಲಕಡುಬು, ಒಂದು ಬಗೆಯ ಸಿಹಿ ಕಡುಬು: ಹೂರಲಕಡುಬನ್ನು ಗೌರಿ ಹಬ್ಬದಿಂದ ದೀಪಾವಳಿಯವರೆಗೆ ಮಾತ್ರ ಮಾಡುತ್ತಾರೆ. ಉಳಿದ ದಿನಗಳಲ್ಲಿ ವಿಶೇಷವಾದ ಅಡಿಗೆ ಎಂದರೆ ಶಾವಿಗೆ, ಬಗೆ ಬಗೆಯ ಕಡುಬು, ಮತ್ತೊಂದು ಅಪರೂಪದ ಅಡಿಗೆ ಮತ್ತೆಲ್ಲೂ ನಾನು ನೋಡದಿದ್ದದ್ದು 'ಮೊಸರುಬಾನ', ರೊಟ್ಟಿ ಪಾಯಸ ಮುಂತಾದವು. ಹಸು ಅಥವಾ ಎಮ್ಮೆ, ಕರು ಹಾಕಿ ಎರಡೂ ವಾರದವರೆಗೆ ಸಂಗ್ರಹಿಸಿದ ಹಾಲನ್ನು ಒಂದು ದೊಡ್ಡ ಮಡಿಕೆಯಲ್ಲಿ ಶೇಖರಿಸಿ ಒಲೆಯ ಹತ್ತಿರವಿಟ್ಟು ನಂತರ ಅಕ್ಕಿ ಬೆಲ್ಲ ಇದರೊಳಗೆ ಸೇರಿಸಿ ಬೇಯಿಸಿ ಬಡಿಸುತ್ತಿದ್ದರು. ಮೊಸರುಬಾನ ಬಹಳ ರುಚಿ ಆದರೂ ಎಲ್ಲರಿಗೂ ಜೀರ್ಣವಾಗುವುದು ಸುಲಭವಲ್ಲ.

ಅನಂತರ ಬರುವ ಮಾಳ ಪಕ್ಷ, ದೀಪಾವಳಿ, ಷಷ್ಠಿ, ಸಂಕ್ರಾಂತಿ, ಯುಗಾದಿ ಹಬ್ಬಗಳನ್ನು ಎಲ್ಲರೂ ಆಚರಿಸುತ್ತಿದ್ದರು. ದೀಪಾವಳಿಯ ದಿನ ಮುಂಜಾನೆಯೇ ಮನೆಗೊಬ್ಬರಂತೆ ಎಲ್ಲರೂ ಒಟ್ಟಾಗಿ ಹೋಗಿ, ಊರಿನ ಮುಂದೆ ಇರುವ ಗದ್ದೆಯಿಂದ ಮೊದಲು ಒಂದೆರೆಡು ಭತ್ತದ ತೆನೆಗಳನ್ನು ಕಿತ್ತು ನಂತರ ದಾರಿ ಉದ್ದಕ್ಕೂ ಸಿಕ್ಕುವ ಹಲವಾರು ಬಗೆ ಬಗೆಯ ಗಿಡ ಮೂಲಿಕೆ ಸೊಪ್ಪು ತಂದು ಪೂಜೆ ಮಾಡಿ ಒಂದಷ್ಟನ್ನು ಸೂರಿಗೆ ಸಿಕ್ಕಿಸಿ ಉಳಿದದ್ದನ್ನು ಕಣಜಕ್ಕೆ ಹಾಕುವುದು ವಾಡಿಕೆ. ಇದರಿಂದ ಧಾನ್ಯಗಳಿಗೆ ಹುಳ ಬೀಳುವುದಿಲ್ಲವೆಂಬ ನಂಬಿಕೆ.

ಷಷ್ಠಿ ಹಬ್ಬ, ಕುಕ್ಕೆ ಸುಬ್ರಹ್ಮಣ್ಯ ದೇವರ ರಥೋತ್ಸವದ ದಿವಸ. ಅಂದು ಎಲ್ಲರೂ ಒಂದು ಹೊತ್ತು ಉಪವಾಸ ಇರುವರು. ಎಲ್ಲರ ಮನೆಯಲ್ಲಿ ಏನೇನು ತರಕಾರಿ ತಂದಿರುವರೋ ಅದೆಲ್ಲವನ್ನೂ ಹತ್ತಾರು ಭಾಗ ಮಾಡಿ ಊರಿನವರಿಗೆಲ್ಲಾ ಕೊಡಬೇಕು. ಹಾಗೆ ಪ್ರತಿಯೊಬ್ಬರೂ ಮಾಡುವುದರಿಂದ ಎಲ್ಲರ ಮನೆಯಲ್ಲಿ ಎಲ್ಲಾ ಬಗೆಯ ತರಕಾರಿ ಕೂಟು ಆಗುತ್ತಿತ್ತು. ಸಾಮಾನ್ಯವಾಗಿ ಬಾಳೆಕಾಯಿ, ಬದನೆಕಾಯಿ ಒಟ್ಟಿಗೆ ಸಾರು ಮಾಡುವುದಿಲ್ಲ. ಆದರೆ ಷಷ್ಠಿ ಹಬ್ಬದ ದಿನ ಈ ನಿಯಮವಿಲ್ಲ, ಹಾಗೆಯೆ ರೈತರು ಕುಂಬಳಕಾಯಿ ತಿನ್ನುತ್ತಿರಲಿಲ್ಲ, ಆದರೆ ಷಷ್ಠಿ ಹಬ್ಬದಲ್ಲಿ ಬೇರೆ ತರಕಾರಿಯೊಂದಿಗೆ ಹಾಕಬಹುದಿತ್ತು. ಅಂದು ಎಲ್ಲರ ಮನೆಯ ಸಾರು ಸ್ವಾದ. ಮಲೆನಾಡಿನಲ್ಲಿ ಹೆಚ್ಚಾಗಿ ಕುಸಲಕ್ಕಿ ಅನ್ನ ಉಣ್ಣುವುದು ವಾಡಿಕೆ. ಆದರೆ ಷಷ್ಠಿ ಹಬ್ಬದಲ್ಲಿ ಬೆಳತಕ್ಕಿ ಅನ್ನ ಮಾಡಬೇಕು. ಮಧ್ಯಾಹ್ನದ ಊಟದ ನಂತರ ಸಂಜೆ ತಂಬಿಟ್ಟು ತುಪ್ಪ ತಿನ್ನುತ್ತಿದ್ದರು. ರಾತ್ರಿ ಊಟವಿಲ್ಲ. ಅಂದು ಸಂಜೆ ಬಹಳ ದೂರದವರೆಗೂ ಕಾಣುವ ಗವಿ ಬೆಟ್ಟದ ಮೇಲೆ ಒಂದು ಎತ್ತರವಾದ ಕಲ್ಲಿನ ಮೇಲೆ ಎಂಟು ಮೊಳದ ಹೊಸ ಪಂಚೆ ಬತ್ತಿ ಮಾಡಿ ಒಂದು ಟಿನ್ ಒಳ್ಳೆಣ್ಣೆಯಲ್ಲಿ ಅದ್ದಿ ದೀಪ ಹಚ್ಚಿದರೆ ಹತ್ತಾರು ಮೈಲಿ ದೂರಕ್ಕೆ ಕಾಣುತ್ತಿತ್ತು. ಅದನ್ನು ನೋಡಿ ಕೈಮುಗಿದು ಜನ ಸಾರ್ಥಕರಾಗುತ್ತಿದ್ದರು.

ಸಂಕ್ರಾಂತಿ ಹಬ್ಬ ಬರುವ ವಾರಗಳ ಮುಂಚೆಯೇ ಊರಿನ ಮಕ್ಕಳಿಗೆಲ್ಲಾ ಸಂಭ್ರಮ. ಹಬ್ಬದ ಮರುದಿನ ದೊಡ್ಡಯ್ಯನ ಜಾತ್ರೆ. ಕುಮಾರಸ್ವಾಮಿ ದೇವಸ್ಥಾನದಲ್ಲಿ ಪೂಜೆ. ದೇವರ ವಿಗ್ರಹ ಹಳ್ಳಿಬಯಲಿನ ಒಂದು ಮನೆಯಲ್ಲಿ ಇಟ್ಟಿರುತ್ತಿದ್ದರು. ಜಾತ್ರೆಯ ದಿವಸ ವಿಧಿ ಪೂರ್ವಕವಾಗಿ ವಾಲಗದೊಡನೆ ಹೊತ್ತು ತಂದು ದೇವಸ್ಥಾನದಲ್ಲಿ ಇಟ್ಟು ಸರ್ವರಿಗೂ ದರ್ಶನ ನೀಡಿ, ಪುನಃ ಸಂಜೆ ಆ ಮನೆಗೆ ತೆಗೆದುಕೊಂಡು ಹೋಗುವರು. ದೇವರು ಹೊತ್ತು

ತರುವವನಿಗೆ ಮೈಮೇಲೆ ಆವೇಶ ಬಂದಂತೆ ಓಲಾಡಿ ಬರುವುದನ್ನು ನೋಡಿ ಜನರೆಲ್ಲ ಕೈ ಮುಗಿಯುತ್ತಿದ್ದರು. ಆ ದಿನ ಚಂಗಡ ಹಳ್ಳಿ ಮಠದ ಸ್ವಾಮಿಯವರು ಬಿಳಿ ಕುದುರೆ ಮೇಲೆ ಬಂದು, ನಿಗದಿತ ಸ್ಥಳದಲ್ಲಿ ಆಸೀನರಾಗುತ್ತಿದ್ದರು. ಭಕ್ತಾದಿಗಳು ಬಂದು ಆಶೀರ್ವಾದ ಪಡೆದು ಕಾಣಿಕೆ ತೆತ್ತು ಹೋಗುತ್ತಿದ್ದರು. ಜಾತ್ರೆ ಎಂದ ಮೇಲೆ ಭಾರತದ ಎಲ್ಲೆಡೆ ನಡೆಯುವಂತೆ ಹಲವಾರು ತಿಂಡಿ ತಿನಿಸುಗಳು, ಮಕ್ಕಳ ಆಟದ ಸಾಮಾನು, ಮಹಿಳೆಯರಿಗೆ ಬಳೆ ಮತ್ತು ತರತರಹದ ಸರ ಮುಂತಾದವು, ದೊಡ್ಡವರು ಹುರಿಕಡಲೆ, ಕೊಬ್ಬರಿ ಕೊಂಡು ಮನೆಯಲ್ಲಿ ಕುಟ್ಟಿದ ಅವಲಕ್ಕಿ ಸಮೇತ ಮನೆಯವರಿಗೆಲ್ಲಾ ಹಂಚುತ್ತಿದ್ದರು. ಸುಮಾರು ಹತ್ತು ಇಪ್ಪತ್ತು ಮೈಲಿ ಸುತ್ತಲಿನಿಂದ ಜನ ಬರುತ್ತಿದ್ದರು. ಮಕ್ಕಳಿಗೆ ಮುಂಡಾ ಮಾಡಿಸುವವರು ಅನೇಕರು. ಅಂತೂ ಆ ಪ್ರದೇಶಕ್ಕೆ ಅದೊಂದು ದೊಡ್ಡ ಜಾತ್ರೆ. ಜಾತ್ರೆಯ ಮುಂಜಾನೆಯೇ ಮಕ್ಕಳಿಗೆಲ್ಲಾ ಹಿರಿಯರು ಅವರವರ ಶಕ್ತ್ಯಾನುಸಾರ ಮೂರು ಕಾಸು ಆರು ಕಾಸು ಹೆಚ್ಚೆಂದರೆ ಒಂದು ಆಣೆ (ರೂಪಾಯಿಗೆ ನೂರ ತೊಂಭತ್ತೆರೆಡು ಕಾಸು, ಆಣೆಗೆ ಹನ್ನೆರಡು ಕಾಸು) ಒಟ್ಟು ನಾಲ್ಕು ಆಣೆ ಸಿಕ್ಕಿದವನೆ ಕುಬೇರ. ವರುಷಕ್ಕೆ ಒಂದೇ ಸಾರಿ ಹೊಸ ಬಟ್ಟೆ ಹೊಲಿಸುತ್ತಿದ್ದದ್ದು ಸಂಕ್ರಾಂತಿ ಹಬ್ಬದ ಸಮಯದಲ್ಲಿ. ಮಕ್ಕಳು ಜಾತ್ರೆಗೆ ಹೊಸ ಬಟ್ಟೆ ಹಾಕಿ ಹೋಗುವ ಕನಸನ್ನು ಹಲವಾರು ದಿನಗಳ ಹಿಂದಿನಿಂದಲೇ ಕಾಣುತ್ತಿದ್ದರು.

ಹಬ್ಬದ ಹಿಂದಿನ ದಿವಸ ಊರಿನವರೆಲ್ಲ ಶಿಕಾರಿ ಮಾಡುತ್ತಿದ್ದರು. ಹೆಂಗಸರು ಮಕ್ಕಳು ಮೀನು ಹಿಡಿಯಲು ಹೋಗುತ್ತಿದ್ದರು. ಮಲೆನಾಡಿನ ಮಳೆಗಾಲ ನಿಂತು ಚಿಲುಮೆಗಳೆಲ್ಲ ಬತ್ತಿ, ಹಳ್ಳ ಕೊಳ್ಳಗಳೆಲ್ಲ ಸೊರಗಿ ಅಲ್ಲಲ್ಲಿ ಗುಂಡಿಯಲ್ಲಿ ಮಾತ್ರ ನೀರು ನಿಂತಿರುತ್ತಿತ್ತು ಅಥವಾ ಸಣ್ಣದಾಗಿ ಹರಿಯುತ್ತಿತ್ತು. ಅಂತಹ ಗುಂಡಿಗಳನ್ನು ಉಗ್ಗಿ ಅಲ್ಲಿರುವ ಮೀನು, ಏಡಿ, ಸೀಗಡಿ ಸಂಗ್ರಹಿಸಿ ಬಗೆ ಬಗೆಯಾಗಿ ವಿಂಗಡಿಸುತ್ತಿದ್ದರು. ಕೊರೆ ಮೀನು, ಮಳ್ಳಿ ಮೀನು, ಕಯಿಕಲ, ಸೀಗಡಿ, ಏಡಿ ಹೀಗೆ ಅವುಗಳನ್ನೆಲ್ಲಾ ತಿಳಿಯಾದ ನೀರಿನಲ್ಲಿ ಸ್ವಚ್ಛಮಾಡಿ ಬೇರೆ ಬೇರೆ ಪಾತ್ರೆಗಳಲ್ಲಿ ಸಾರು ಮಾಡುವರು. ಗಂಡಸರೆಲ್ಲ ಶಿಕಾರಿ ಮಾಡಿ ತಂದ ಕಾಡು ಹಂದಿ, ಕಾಡು ಕುರಿ, ಜಿಂಕೆ, ಸಾರಗ, ಮುಳ್ಳು ಹಂದಿ, ಮೊಲದ ಮಾಂಸಗಳ ಭಕ್ಷ್ಯ ಇರುತ್ತಿತ್ತು.

ಶಿಕಾರಿ ಮಾಡುವ ಕ್ರಮ ಬಹಳ ಜಾಣ್ಮೆಯದು. ಶಿಕಾರಿಗೆ ಹೊರಡುವ ಮುಂಜಾನೆ ಮನೆಗೆ ಒಬ್ಬರು ಇಬ್ಬರಂತೆ ಊರ ಮುಂದೆ ಸೇರುವರು. ಅಂದು ಯಾವ ಕಡೆ ಬೇಟೆಯಾಡಬೇಕೆಂದು ನಿರ್ಧರಿಸುವ ಮುನ್ನ ಕೆಲವು ಮಾಹಿತಿಗಳನ್ನು ತಿಳಿದವರಿಂದ ಸಂಗ್ರಹಿಸುವರು. ಕೆಲವರು ಒಂದೆರಡು ದಿನದ ಹಿಂದೆ ಹೆಜ್ಜೆ ಗುರುತು ನೋಡಿ ಅವು ನೀರಿಗೆ ಬಂದಿದ್ದ ಜಾಗ, ತಂಗಿದ್ದ ಜಾಗ, ಮೇದಿದ್ದ ಜಾಗ ತಿಳಿಸುವರು. ಶಿಕಾರಿಯಲ್ಲಿ ಪರಿಣಿತರಾದವರು, ಅವು ಯಾವ ದಿಕ್ಕಿನಲ್ಲಿ ಹೋಗಿರಬಹುದು, ಎಷ್ಟು ದೂರ ಹೋಗಿರಬಹುದು, ಪುನಃ ಎಲ್ಲಿಗೆ ನೀರು ಕುಡಿಯಲು ಬರಬಹುದು, ಅವುಗಳನ್ನು ಸುತ್ತುಗಟ್ಟಿದರೆ ಯಾವ ಗಂಡಿಯಲ್ಲಿ ಹೊರಡುವವು, ಯಾರು ಯಾವ ಗಂಡಿಯಲ್ಲಿ ಕೋವಿ (ಬಂದೂಕ) ಹಿಡಿದು ನಿಲ್ಲಬೇಕು, ಯಾರು ಮುಂದಾಗಿ ನಾಯಿ ಕರೆದುಕೊಂಡು ನುಗ್ಗಬೇಕು, ಹೀಗೆಲ್ಲಾ ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವರು.

ಕೆಲವರಲ್ಲಿ ಒಳ್ಳೆ ಕೋವಿ ಇರುತ್ತಿತ್ತು. ಹೊಡೆಯುವುದರಲ್ಲಿ ನಿಪುಣರಲ್ಲ. ಕೆಲವರಿಗೆ ಹೊಡೆಯುವುದರಲ್ಲಿ ಒಳ್ಳೆ ಚಾಣಕ್ಷತೆ ಇರುತ್ತಿತ್ತು, ಕೋವಿ ಇರುತ್ತಿರಲಿಲ್ಲ. ಮತ್ತೆ ಕೆಲವರಿಗೆ

ಇವೆರಡೂ ಇರುತ್ತಿತ್ತು. ಅವರೇ ಮುಂದಾಳು, ಯಾರು ಯಾರಿಗೆ ಕೋವಿ ಕೊಡಬೇಕೆಂದು ಇವರೇ ನಿರ್ಧರಿಸುತ್ತಿದ್ದರು. ಕೆಲವರ ಮನೆಯಲ್ಲಿ ಒಳ್ಳೆ ಶಿಕಾರಿ ನಾಯಿಗಳಿರುತ್ತಿದ್ದವು, ಕೋವಿ ಇರುತ್ತಿರಲಿಲ್ಲ. ಅಂತಹವರು ನಾಯಿಗಳನ್ನು ಅವರ ವಶದಲ್ಲಿ ಇರಿಸಿಕೊಂಡು ಯಾವಾಗ ಎಲ್ಲಿ ಬಿಡಬೇಕೆಂದು ಹೇಳುವರು. ಶಿಕಾರಿಯ ದಿವಸ ಮನುಷ್ಯರಿಗಿಂತ ನಾಯಿಗಳಿಗೆ ಸಂಭ್ರಮ. ಅವುಗಳ ಕಿರುಚಾಟ ಪರದಾಟ ಊರನ್ನೇ ಎಬ್ಬಿಸುವಂತಿರುತ್ತಿತ್ತು. ನಾಲ್ಕಾರು ಜನ ಕೋವಿ ಹಿಡಿದು ಊರ ಮುಂದೆ ನಿಂತರೆ ಅಂದು ಗ್ಯಾರಂಟಿ ಶಿಕಾರಿಗೆ ಹೊರಡುವರೆಂದು ಊರಿನ ನಾಯಿಗಳಿಗೆಲ್ಲ ತಿಳಿಯುತ್ತಿತ್ತು. ಮೇಲ ಮನೆ ಮೋಟ ನಾಯಿ, ಕೆಳ್ಳಮನೆ ಜೂಲ ನಾಯಿ, ಮೂಡು ಬಾಗಿಲ ಮನೆ ಮುದಿ ನಾಯಿ ಕೊಂಗಳ್ಳಿ ಪಟೇಲರ ಕುಂಟ ನಾಯಿ ಹೀಗೆ ಹಲವು ಹತ್ತು ಹೆಸರಿಂದ ಕರೆಯುವ ನಾಯಿಗಳೆಲ್ಲ ಊರಿನವರಿಗೆ ಚಿರಪರಿಚಯ. ಶಿಕಾರಿಗೆ ಹೊರಟ ನಂತರ ಪರಸ್ಪರ ನಾಯಿಗಳು ಕಚ್ಚಾಡುತ್ತಿರಲಿಲ್ಲ. ಅವುಗಳೆಲ್ಲರ ಗುರಿ ಶಿಕಾರಿ.

ಕೋವಿಗಳಲ್ಲಿ ಹಲವು ಬಗೆ. ಕೇಪಿನ ಕೋವಿ, ತೋಟ ಕೋವಿ, ಒಂದು ಹೊಳ (ಸಿಂಗಲ್ ಬ್ಯಾರಲ್), ಎರಡು ಹೊಳ (ಡಬಲ್ ಬ್ಯಾರಲ್) ಮುಂತಾದವು. ಕೇಪಿನ ಕೋವಿಗೆ ಮದ್ದು ಗುಂಡು ತುಂಬಿಸುವುದಕ್ಕೆ ಸಮಯ ತೆಗೆದು ಕೊಳ್ಳುವುದು. ರವೆ ಅಥವಾ ಗುಂಡು ಅದರಲ್ಲಿ ಸೇರಿಸುವುದು ಪ್ರಾಣಿಗಳ ಗಾತ್ರವನ್ನು ಊಹಿಸಿ ಮಾಡುವರು. ಕೇಪಿನ ಕೋವಿ ಎಲ್ಲ ಸಮಯದಲ್ಲಿ ನಂಬಿಕಸ್ತವಲ್ಲ. ಕೆಲವು ಬಾರಿ ಹುಡಿಯುವದೇ ಇಲ್ಲ. ಮದ್ದು ಶೀತವಾದರೆ ಹುಡಿಯುವುದಿಲ್ಲ. ಆದರೂ ಆಗಿನ ಕಾಲದಲ್ಲಿ ಕೇಪಿನ ಕೋವಿಗಳೇ ಹೆಚ್ಚು.

ಶಿಕಾರಿಯಾದ ನಂತರ, ಅವುಗಳನ್ನು ಸರಿಪಡಿಸುವುದಕ್ಕೆ ಎಲ್ಲರೂ ಒಟ್ಟು ಸೇರಿ ವಿಂಗಡಿಸುತ್ತಾರೆ. ಹೊಡೆದವನಿಗೆ ಅದರ ತಲೆ ಭಾಗ ಅಥವಾ ಒಂದು ತೊಡೆ ಹೆಚ್ಚು. ಆ ಪ್ರಾಣಿಯನ್ನು ಹೊಡೆಯಲು ಯಾವುದಾದರೂ ನಾಯಿ ಹೆಚ್ಚಿನ ಪಾತ್ರವಹಿಸಿದ್ದರೆ ಅದಕ್ಕೆ ಒಂದು ಪಾಲು, ಕೋವಿ ಇಲ್ಲದವನು ಹೊಡೆದಿದ್ದರೆ ಕೋವಿ ಕೊಟ್ಟವರಿಗೆ ಒಂದು ಪಾಲು. ಊರಿನಲ್ಲಿ ಹಿರಿಯವರಿದ್ದರೆ ಅವರ ಮನೆಯವರು ಯಾರೂ ಶಿಕಾರಿಗೆ ಹೋಗುವವರಿಲ್ಲದಿದ್ದರೆ ಅವರಿಗೆ ಒಂದು ಪಾಲು. ದೊಡ್ಡ ಪ್ರಾಣಿಯ ಶಿಕಾರಿಯಾಗಿದ್ದರೆ ಶಿಕಾರಿಗೆ ಹೋದವರಿಗೆ ಸುಟ್ಟು ಅಲ್ಲೇ ತಿನ್ನಲು ಒಂದಿಷ್ಟನ್ನು ಮೊದಲೇ ತೆಗೆದಿಡುವರು. ನಾಯಿಗಳಿಗೆ ಕಾಲು, ಎಲುಬು ಮುಂತಾದವನ್ನು ಅವಕ್ಕೂ ಸಾಕಾಗುವಷ್ಟನ್ನು ಹಾಕುವರು. ಶಿಕಾರಿ ಆಗಿದ್ದು ಎಷ್ಟು ತೂಕದ್ದು ಎಂದು ತಿಳಿಯಲು, ಎರಡು ಆಳು ಹೊರೆ, ನಾಲ್ಕಾಳು ಹೊರೆ, ಆರಾಳು ಹೊರೆ, ಎಂಟಾಳು ಹೊರೆ ಎಂದು ಬಣ್ಣಿಸುವರು.

ಆಗಿನ ಕಾಲದ ಮಲೆನಾಡಿನಲ್ಲಿ ಮಿನು, ಮಾಂಸ, ಮದ್ಯ ಇದ್ದರೆ ಅದೇ ದೊಡ್ಡ ಹಬ್ಬ. ಇಂತಹ ಹಬ್ಬಗಳಲ್ಲಿ ಸಂಕ್ರಾಂತಿ ಒಂದು. ಅಷ್ಟರಲ್ಲಿ ಕೊಯ್ಲು ಪೂರೈಸಿ ಆ ವರುಷದ ಆದಾಯ, ಖರ್ಚೆಲ್ಲ ತಿಳಿದಿರುತ್ತದೆ. ಆ ಕಾಲದಲ್ಲಿ ದುಡ್ಡು ಕೊಟ್ಟು, ಅಂಗಡಿಯಿಂದ ಶಾರಾಯಿ ಬ್ರಾಂದಿ ಕೊಂಡು ಕುಡಿಯುತ್ತಿರಲಿಲ್ಲ. ಬಗನೆ ಶೇಂದಿ ಹೇರಳವಾಗಿ ದೊರೆಯುತ್ತಿತ್ತು. ಅವರವರ ಟೇಷ್ಟಿಗೆ ಬೇಕಾದ್ದನ್ನು ಕುಡಿಯಬಹುದಿತ್ತು. ಸಿಹಿಯಾಗಿ ಅಮಲೇರದಂತಿರಬೇಕೆಂದರೆ ಬೆಳಗಿನ ಹೊತ್ತು ಕುಡಿಯಬೇಕು. ಬಿಸಿಲೇರಿದಂತೆಲ್ಲಾ ಅಮಲೇರುವುದು. ಸಂಜೆ ಹೊತ್ತಿಗೆ ಎರಡು ಮೂರು ಚಿಪ್ಪು ಕುಡಿದರೆ ನಾಲ್ಕು ಪೆಗ್ಗು ಬ್ರಾಂದಿ ಹಾಕಿದ ಹಾಗೆ. ತೆಂಗಿನ ಚಿಪ್ಪು ನಯವಾಗಿ ಹೆರೆದು

ಕಳ್ಳು ಕುಡಿಯಲು ಉಪಯೋಗಿಸುತ್ತಿದ್ದರು, ಬಿಟ್ಟರೆ ಬಾಳೆ ಎಲೆ ದೊನ್ನೆ. ನಾನು ಚಿಕ್ಕವನಾಗಿರುವಾಗ ಯಾರ ಮನೆಯಲ್ಲೂ ಗ್ಲಾಸು ನೋಡಿದ್ದು ಅಪರೂಪ. ಕೆಲವರ ಮನೆಯಲ್ಲಿ ಸಾರಾಯಿ ಕುಡಿಯಲು ಮಾತ್ರ ಸಣ್ಣ ಗಾಜಿನ ಲೋಟ ಇರುತ್ತಿತ್ತು.

ತಮ್ಮಣ್ಣ ಗೌಡ್ರು ಶೇಂದಿ ಕಂಟ್ರಾಕ್ಟ್ ಮಾಡುತ್ತಿದ್ದುದರಿಂದ ಹಳೆಮನೆಗೆ ನಾಲ್ಕೈದು ದೊಡ್ಡ ಗಡಿಗೆಯಲ್ಲಿ ಎಂಟೊಂಬತ್ತು ಗಂಟೆಯ ಹೊತ್ತಿಗೆ ಕಳ್ಳನ್ನು ಹೊತ್ತು ತರುತ್ತಿದ್ದರು. ಶೇಂದಿ ತೆಗೆಯುತ್ತಿದ್ದವರು ಬಹುತೇಕ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವರು. ಅವರಲ್ಲನೇಕರು ಕುಡಿಯುತ್ತಿರಲಿಲ್ಲ. ತೋಟದಿಂದ ತರುತ್ತಿದ್ದವರು ಪಾಲೆಯವರು (ದಕ್ಷಿಣ ಕನ್ನಡದ ಪರಿಶಿಷ್ಟ ಜಾತಿಯವರು) ಈ ಗಡಿಗೆಗಳನ್ನು ಸಾಲಾಗಿ ಒಪ್ಪಾರಿನಲ್ಲಿ ಇಡುತ್ತಿದ್ದರು. ಬೇಕಾದವರು ಅಲ್ಲಿ ಕುಡಿಯಬಹುದಿತ್ತು. ನೆಂಟರಿಷ್ಟರಿಗೆ ಬೇರೆ ಜೂಳಿ ಮಗೆಯಲ್ಲಿ ಒಳಗೆ ತಂದು ಊಟಕ್ಕೆ ಮುಂಚೆ ಕೊಡುತ್ತಿದ್ದರು. ಆಗಿನ ಕಾಲದ ಆತಿಥ್ಯ ಕಳ್ಳು, ಕುಸಲಕ್ಕಿ ಅನ್ನ, ಅಂಬಲಿ, ಕೆಸವಿನ ಸಾರು, ಅಥವಾ ಗೆಣಸು, ಹೆಚ್ಚಿಗೆ ಅಂದರೆ ಸಂಡಿಗೆ, ಕರಿ ಮೀನು ಸಾರು. ಎಲ್ಲರ ಮುಖದಲ್ಲಿ ಸಂತೃಪ್ತಿಯ ಭಾವ. ಅವರ ಆತಿಥ್ಯಕ್ಕೆ ಎಣೆ ಇಲ್ಲ.

ಯಾರೂ ಆಡಂಬರವಾಗಿ ಬಟ್ಟೆ ಹಾಕಿದವರಲ್ಲ. ಕೆಲವರು ಮೇಲೊಂದು ಅಂಗಿ ಕೆಳಗೆ ಕಂಬಳಿ ಕಟ್ಟುತ್ತಿದ್ದರು. ತಲೆಗೆ ಉಂಡನೆಯ ಟೊಪ್ಪಿ. ಪಾದರಕ್ಷೆಯನ್ನು ಬೆರಳೆಣಿಸುವಷ್ಟು ಜನ ಹಾಕುತ್ತಿರಲಿಲ್ಲ. ಅದೂ ಕೂಡ ಏಲಕ್ಕಿ ವ್ಯಾಪಾರಕ್ಕೆ ಬರುತ್ತಿದ್ದ ಕಾಕಾಗಳನ್ನು ನೋಡಿ ಮಾಡಿರಬಹುದು. ನಾನು ಹೈಸ್ಕೂಲಿಗೆ ಹೋಗುವವರೆಗೂ ಪಾದರಕ್ಷೆ ಹಾಕಿದವನಲ್ಲ. ಎಲ್ಲಿಯಾದರೂ ನೆಂಟರ ಮನೆಗೆ ಅಥವಾ ಮದುವೆಗೆ ಹೋಗುವಾಗ ಅಕ್ಕಪಕ್ಕದ ಮನೆಯವರು ಪಂಚೆ ಶರಟು ಒಗೆದಿಟ್ಟಿದ್ದರೆ ಕೇಳಿ ಹಾಕಿಕೊಂಡು ಹೋಗುತ್ತಿದ್ದರು. ಹೀಗೆ ಪರಸ್ಪರ ಅನುಸರಿಸುತ್ತಿದ್ದರು. ಇಂದು ಒಬ್ಬೊಬ್ಬರ ಹತ್ತಿರವಿರುವ ಬಟ್ಟೆಗಳನ್ನು ಎಣಿಸಿದರೆ ಈ ದೇಶದ ಎರಡು ಪಟ್ಟು ಜನಸಂಖ್ಯೆಗೆ ಅವರ ಜೀವಮಾನಕ್ಕೆಲ್ಲ ಆಗಬಹುದು.

ಹಬ್ಬದ ಮರುದಿನ ಊರಿನ ಹರಿಜನರಿಗೆಲ್ಲ ಎಲ್ಲರ ಮನೆಯಿಂದ ಊಟ. ಅಂದರೆ ಒಂದೇ ಹೊತ್ತು ಎಲ್ಲರ ಮನೆಯಲ್ಲಿ ಹೇಗೆ ಊಟ ಮಾಡಲು ಸಾಧ್ಯ. ಆದ್ದರಿಂದ ಪ್ರತಿ ಹರಿಜನರ ಮನೆಯ ಹೆಂಗಸು ಹೊಸದಾಗಿ ನೇದಿದ್ದ ಹೆಡಿಗೆಯನ್ನು ಹೊತ್ತು ಮನೆ ಮುಂದೆ ಇಡುತ್ತಿದ್ದರು. ಮನೆಯಲ್ಲಿ ಮಾಡಿದ ಅಡಿಗೆಯ ಒಂದು ಭಾಗವನ್ನು ಅದರಲ್ಲಿಡುತ್ತಿದ್ದರು. ಹೆಚ್ಚಿನದಾಗಿ ತಟ್ಟೆ ಕಡುಬು, ದೋಸೆ, ಅನ್ನ, ಸಿಹಿ ತಿಂಡಿ ಕೊಡುತ್ತಿದ್ದರು. ಅದೆಲ್ಲವನ್ನು ಸಂಗ್ರಹಿಸಿ, ವಿಂಗಡಿಸಿ ನೀರಿನಲ್ಲಿ ನೆನಸಿಟ್ಟು ಹತ್ತಾರು ದಿವಸ ಇಟ್ಟು ತಿನ್ನುತ್ತಿದ್ದರು. ಹೀಗೆ ಮಾಡುತ್ತಿದ್ದುದು ಎರಡು ಮೂರು ದೊಡ್ಡ ಹಬ್ಬಗಳಲ್ಲಿ ಮಾತ್ರ.

ಹೊಸವರುಷದ ಮೊದಲ ಹಬ್ಬ ಯುಗಾದಿ. ಯುಗಾದಿ ಹಬ್ಬದ ವಿಶೇಷ ಬೇವು ಬೆಲ್ಲ ತಿನ್ನುವುದು. ಮಕ್ಕಳಿಗೆ ಅದೊಂದು ಕಹಿ ಹಬ್ಬ. ದೊಡ್ಡವರಿಗೆಲ್ಲ ಅಂದು ಪಂಚಾಂಗ ಕೇಳುವ ಕುತೂಹಲ. ಮಧ್ಯಾಹ್ನದ ನಂತರ ಉಚ್ಚಂಗಿ ಜೋಯಿಸರು ದೇವಸ್ಥಾನದಲ್ಲಿ ಕುಳಿತು, ಆ ವರುಷ ಮಳೆ ಬೆಳೆ, ಋತುಮಾನ, ಅವರವರ ನಕ್ಷತ್ರ ಫಲ, ಮದುವೆ ಲಗ್ನ ಮುಂತಾದುವನ್ನು ಹೇಳುವರು. ಊರವರೆಲ್ಲ ಒಂದು ತಟ್ಟೆಯ ತುಂಬ ಅಕ್ಕಿ ತಂದು ಅವರ ಮುಂದೆ ಇಡುವರು. ಇದ್ದವರು ಬೆಣ್ಣೆ, ಬಾಳೆಗೊನೆ ಮುಂತಾದುವನ್ನು ಕೊಡುತ್ತಿದ್ದರು.

ಯುಗಾದಿ ಹಬ್ಬದ ನಂತರ ಬಿತ್ತನೆಗೆ ಮುಂಚೆ ಭರಣಿ ಮಳೆಯೊಳಗೆ ಒಂದು ವಾರ ನಡೆಯುವ ಸುಗ್ಗಿ ಹಬ್ಬ, ಮಲೆನಾಡಿನ ಎಲ್ಲಾ ಊರುಗಳಲ್ಲಿ ಅವರ ಗ್ರಾಮ ದೇವತೆಯನ್ನು ಮುಂದಿಟ್ಟುಕೊಂಡು ಅವರವರೆ ನಿರೂಪಿಸಿಕೊಂಡಿರುವ ಕೆಲವು ನಿಬಂಧನೆಗಳೊಳಗೆ ಮಾಡುವ ಹಬ್ಬ. ಈ ಹಬ್ಬವನ್ನು ಗ್ರಾಮಸ್ಥರು ಯಾವಾಗ ಮಾಡಬೇಕೆಂದು ನಿರ್ಧರಿಸುತ್ತಾರೆ. ಆ ವಾರದಲ್ಲಿ ಊರಿನಲ್ಲಿ ಮದುವೆ, ಸಾವು, ಸೂತಕ ಇರಕೂಡದು. ನಮ್ಮ ಊರಿನಲ್ಲಿ ನಡೆಯುವ ಸುಗ್ಗಿ ಹಬ್ಬ 9-10 ದಿವಸ ನಡೆಯುವುದು. ಮೊದಲ ದಿನ ಅಂದರೆ ಒಂದು ಭಾನುವಾರ 'ಸಾರು' ಅಂದರೆ ಹರಿಜನ ಕೇರಿಯಿಂದ ಮಡಿಯುಟ್ಟವರು ಶಂಖ ಜಾಗಟೆ, ದೀಪದೊಂದಿಗೆ ಮನೆ ಮನೆಗೆ ಬಂದು ಶಂಖ ಊದಿ ಜಾಗಟೆ ಹೊಡೆದು ದೀಪಕ್ಕೆ ಆ ಮನೆಯವರಿಂದ ಎಣ್ಣೆ ಹಾಕಿಸಿಕೊಂಡು ಹೋಗುತ್ತಾನೆ. ಅಂದು ಮುಂಜಾನೆ ಅಥವಾ ಹಿಂದಿನ ದಿನ ಮನೆ ಮುಂಭಾಗವನ್ನು ಮತ್ತು ಮನೆಯೊಳಗಡೆ ಸಾರಿಸಿ ಚೊಕ್ಕವಾಗಿಟ್ಟಿರುತ್ತಾರೆ. 'ಸಾರು' ಹಾಕುವುದೆಂದರೆ 'ಹಸಿ ಕಡಿಯಬಾರದು, ಒಣಗು ಮುರಿಯಬಾರದು, ರೊಟ್ಟಿ ಸುಡಬಾರದು, ಭತ್ತ ಬೇಯಿಸಬಾರದು, ಕುಟ್ಟಬಾರದು, ಆರಂಭ ಮಾಡಬಾರದು, ಹೊಳೆ ದಾಟಿ ಯಾರೂ ಊರ ಹೊರಗೆ ಹೋಗಬಾರದು,' ಹಾಗೇನಾದರೂ ಅನಿವಾರ್ಯವಾಗಿ ಊರಹೊರಗೆ ಹೋಗಬೇಕಾದರೆ ಬಂದ ಮೇಲೆ ಕತ್ತಲಾಗುವ ತನಕ ಹೊರಗೆ ಇದ್ದು ನಕ್ಷತ್ರ ಕಂಡ ಮೇಲೆ ತಲೆ ಮೇಲೆ ಸಗಣಿ ನೀರು ಚುಮುಕಿಸಿ ಒಳಗೆ ಬರಬೇಕು. ಬಹುಶಃ ಈ ನಿಬಂಧನೆಗಳು ಮನೆಯಲ್ಲಿ ಎಲ್ಲರೂ ಹೆಂಗಸು, ಗಂಡಸು ಸೇರಿದಂತೆ ಹತ್ತು ದಿನದ ಮಟ್ಟಿಗೆ ಹೊರ ಕೆಲಸ ಏನೂ ಮಾಡದೆ ಎಲ್ಲರೂ ಸುಗ್ಗಿ ಸಂಭ್ರಮದಲ್ಲಿ ಭಾಗವಹಿಸಲಿಕ್ಕೆ ಇರಬಹುದು.

ಅಂದಿನಿಂದ ಅಂದರೆ ಸಾರು ಹಾಕಿದ ದಿನದಿಂದ ಎಂಟು ಹತ್ತು ಯುವಕರು ದೇವರ ಕಾರ್ಯಕ್ಕೆ ಮಡಿಯಾಗಿ ಮುಡುಪಾಗಿರುವರು. ಇವರನ್ನು 'ಕುರ್ಜಿನವರು' ಎಂದು ಹೇಳುವರು. ಅವರು ದೇವಸ್ಥಾನದಲ್ಲಿ ಗಡಿಗೆಯೊಳಗೆ ಇಟ್ಟಿದ್ದ ಗ್ರಾಮ ದೇವತೆಯ ಮುಖಗಳನ್ನು ತೆಗೆದು ವಿಭೂತಿಯಲ್ಲಿ ಬೆಳಗಿ ಮೂರು ಮರದ ವಿಗ್ರಹಗಳ ಮೇಲೆ ಇಟ್ಟು, ಸೀರೆ ಉಡಿಸಿ, ಆಭರಣ ತೊಟ್ಟು, ಕಮಾನು ಕಟ್ಟಿದ ಹಲಗೆಯ ಮೇಲೆ ಭದ್ರವಾಗಿ ನಿಲ್ಲಿಸಿ ಎರಡು ಬಿದರಿನ ಅಡ್ಡೆಗಳನ್ನು ಕಟ್ಟಿ ಮುಂದೆ ಇಬ್ಬರು ಹಿಂದೆ ಇಬ್ಬರು ಹೊರಲು ಅಣಿ ಮಾಡುವರು. ಕುರ್ಜಿನವರು ಸುಗ್ಗಿ ಮುಗಿಯುವವರೆಗೆ ದೇವಸ್ಥಾನದಲ್ಲಿ ಮಲಗುವರು. ಅವರಿಗೆ ಪ್ರತ್ಯೇಕ ಅಡಿಗೆ, ಮಾಂಸ ಮದ್ಯ ಸೇವಿಸಬಾರದು. ಪ್ರತಿದಿನ ತಣ್ಣೀರಿನಲ್ಲಿ ಸ್ನಾನಮಾಡಿ ಮಡಿ ಉಟ್ಟುಕೊಂಡು ದೇವರ ಕೆಲಸದಲ್ಲಿ ನಿರತರಾಗಿರುವರು. ಆ ಕಾಲದಲ್ಲಿ ದೊರೆಯುವ ಕಣಗಿಲ ಹೂವನ್ನು ದೂರ ದೂರದಿಂದ ಸಂಗ್ರಹಿಸಿ ಅಲಂಕಾರ ಮಾಡುವರು. ಸೋಮವಾರ ಹೊಳೆಗೆ ಹೊರಡುವುದರಿಂದ ಪ್ರಾರಂಭವಾಗಿ ಮುಂದಿನ ಮಂಗಳವಾರ ದೇವರು ಮನೆಗೆ ಬರುವವರೆಗೆ ಸುಗ್ಗಿ ಹಬ್ಬ. ಮಂಗಳವಾರದಿಂದ ಕ್ರಮವಾಗಿ ಬಿಲ್ಲು ಸುಗ್ಗಿ, ಕುದುರೆ ಸುಗ್ಗಿ, ಮಲ್ಲುಸುಗ್ಗಿ, ದೊಡ್ಡಸುಗ್ಗಿ, ಹಗಲಸುಗ್ಗಿ ಹೀಗೆ ಪ್ರತಿದಿನ ಒಂದೊಂದು ಬಗೆಯ ಅವತಾರಗಳನ್ನು ಕಟ್ಟಿಕೊಂಡು ಕುಣಿಯುವುದು. ಬೆಳಕಿಗೆ ಓಟೆಹೊಂತೆ ಅಥವಾ ಹರಳೆಣ್ಣೆ ಪಂಜು.

ಸ್ವಾತಂತ್ರ್ಯದ ಪೂರ್ವದಲ್ಲಿ ಗ್ಯಾಸ್‌ಲೈಟುಗಳು ಕೂಡ ಇರಲಿಲ್ಲ. ಟಾರ್ಚ್ ನೋಡಿದ್ದು ನಲವತ್ತರ ದಶಕದ ಪ್ರಾರಂಭದಲ್ಲಿ. ಮಂಗಳೂರು ಕಾಸರಗೋಡಿನಿಂದ ಯಾಲಕ್ಕಿ ವ್ಯಾಪಾರಕ್ಕೆ ಬರುತ್ತಿದ್ದ ಕಾಕಾಗಳು ಇವುಗಳನ್ನು ಪರಿಚಯಿಸಿದರು. ಅವುಗಳು ಬಂದ ನಂತರ ಹೇರಳವಾಗಿದ್ದ

ಕಾಡು ಬೆಕ್ಕುಗಳು ಅದರಲ್ಲೂ ಕಬ್ಬೆಕ್ಕುಗಳು ನಾಶವಾದವು. ರಾತ್ರಿ ಹೊತ್ತು ಟಾರ್ಚ್‌ನ್ನು ಬಿಟ್ಟರೆ ಬೆಕ್ಕುಗಳು ಅದನ್ನೆ ನೋಡುತ್ತಾ ಅವಾಕ್ಕಾಗಿ ಕುಳಿತುಬಿಡುತ್ತಿದ್ದವು. ಕೆಂಡದಂತೆ ಕಾಣುತ್ತಿದ್ದ ಕಣ್ಣುಗಳ ಕಡೆ ಗುರಿ ಇಟ್ಟು ಗುಂಡು ಹೊಡೆದು ಕೊಲ್ಲುತ್ತಿದ್ದರು. ಕೇವಲ ನಾಲ್ಕಾರು ವರ್ಷಗಳಲ್ಲಿ ಇವುಗಳ ಸಂತತಿಯೇ ನಾಶವಾಗುತ್ತ ಬಂತು. ಆಧುನಿಕತೆಯ ಆವಿಷ್ಕರಣದಿಂದ ಪರಿಸರಕ್ಕೆ ಆಗುವ ಹಾನಿಗೆ ಇದೊಂದು ಸಣ್ಣ ನಿದರ್ಶನ!

ಊರಿನಲ್ಲಿ ಹರಿಜನರು, ಉತ್ತಮರು ಸಹ ಬಾಳ್ವೆ ನಡೆಸುತ್ತಿದ್ದರು. ಹರಿಜನರು ಬಂದರೆ ಚಾವಡಿಯಲ್ಲಿ ನಿಲ್ಲುತ್ತಿದ್ದರು. ಊಟ ಮಾಡುವುದಿದ್ದರೆ ಅವರಿಗಾಗಿ ಇಟ್ಟಿದ್ದ ತಟ್ಟೆ ಅಥವಾ ಬಾಳೆ ಎಲೆಯಲ್ಲಿ ಬಡಿಸುತ್ತಿದ್ದರು. ನಮ್ಮವರು ಕೂಡ ಬ್ರಾಹ್ಮಣರ ಮನೆಗೆ ಹೋದರೆ ಹೀಗೆ ಕಾಣುತ್ತಿದ್ದರು. ಹರಿಜನರು ಕೂಡ ಉತ್ತಮರನ್ನು ಅವರ ಮನೆ ಒಳಗೆ ಸೇರಿಸುತ್ತಿರಲಿಲ್ಲ. ಈ ಸಂಪ್ರದಾಯ ಯಾವ ವೈಷಮ್ಯವೂ ಇಲ್ಲದೆ ನಡೆದು ಬಂದಿತ್ತು. ಹರಿಜನರ ಸಾವಿಗೆ ಊರಿನ ಗಂಡಸರೆಲ್ಲ ಹೋಗುತ್ತಿದ್ದರು. ಅವರಿಗೆ ಒತ್ತಾಗಿ ನಿಲ್ಲುತ್ತಿದ್ದರು.

ಊರಿನಲ್ಲಿ ಮದುವೆಯಾದರೆ ಊರಿನವರಿಗೆ ಎಷ್ಟು ಮುಖ್ಯವೋ ಊರಿನ ಹರಿಜನರಿಗೂ ಅಷ್ಟೇ ಮುಖ್ಯ. ಮದುವೆ ಸಮಯದಲ್ಲಿ ಅವರು ಬೇರೆ ಎಲ್ಲಿಗೂ ಹೋಗುತ್ತಿರಲಿಲ್ಲ. ಊರಿನವರಿಗಂತೂ ಯಾರ ಮನೆಯಲ್ಲಿ ಮದುವೆಯಾದರೂ ಅವರ ಮನೆಯಲ್ಲೇ ಆದ ಹಾಗೆ. ಹೆಣ್ಣು ಕೇಳುವುದರಿಂದ ಹಿಡಿದು ಹೆಣ್ಣು ಕಳುಹಿಸುವವರೆಗೆ ಎಲ್ಲಾ ಜವಾಬ್ದಾರಿ ಊರಿನವರದು. ಮದುವೆ ಮನೆಯವರು ಊರಿನವರು ಹೇಳಿದ ಹಾಗೆ ನಡೆಯಬೇಕು.

ಎಲ್ಲಾ ಮದುವೆಗಳಲ್ಲಿ ಹೆಣ್ಣು ಕೊಟ್ಟು ತರುತ್ತಿದ್ದದ್ದು ಹತ್ತು ಮೈಲಿ ಒಳಗೆ. ಆದ್ದರಿಂದ ಹತ್ತು ಮೈಲಿ ವ್ಯಾಸದಲ್ಲಿ ಇದ್ದ ಎಲ್ಲ ಊರುಗಳಲ್ಲಿ ಎಲ್ಲರೂ ನೆಂಟರು. ಗಂಡಿನ ಕಡೆಯವರು ಹೆಣ್ಣಿಗಾಗಿ ಪರದಾಡಬೇಕಿತ್ತು. ಗಂಡಿನವರು ಹೆಣ್ಣನ್ನು ಒಂದು ಬಗೆ ವ್ಯಾಪಾರ ಮಾಡಿದ ಹಾಗೆ. ಮದುವೆಯ ದಿವಸ 'ತೆರಿನ' ಹಣ ಎಂದು ನಿಗದಿತ ಹಣವನ್ನು ಹೆಣ್ಣಿನ ಮನೆಯವರಿಗೋ ಅಥವಾ ಊರಿಗೋ ಕೊಡಬೇಕಿತ್ತು. ಆಗ ಲಗ್ನಪತ್ರಿಕೆಯನ್ನು ಯಾರೂ ಮಾಡಿಸುತ್ತಿರಲಿಲ್ಲ. ಪ್ರತಿಯೊಬ್ಬ ಮನೆಯವರು ಇಂತಿಂತ ಊರಿಗೆ ಹೋಗಿ ಮದವೆ ಮನೆಯ ನೆಂಟರನ್ನು ಮದುವೆಗೆ ಬನ್ನಿ ಎಂದು ಕರೆಯಬೇಕಿತ್ತು. ನಾನೂ ಕೂಡ ಈ ಪಾತ್ರವನ್ನು ಹಲವಾರು ಬಾರಿ ವಹಿಸಿದ್ದೇನೆ. ಊರಿನವರನ್ನು ಕೂಡ ಕರೆಯುವ ಸಂಪ್ರದಾಯ. ಆ ವಾರದಲ್ಲಿ ಆಗುವ ಎಲ್ಲಾ ಕಾರ್ಯಕ್ರಮಗಳ ಪಟ್ಟಿಯನ್ನು ಪ್ರತಿ ಮನೆಗೆ ಹೋಗಿ ಗಟ್ಟಿಯಾಗಿ ಹೇಳಿ ಹೊಸ್ತಿಲ ಮೇಲೆ ಅರಿಸಿನದ ಅಕ್ಕಿಯನ್ನು ಇಟ್ಟು ಬರುವ ಪದ್ಧತಿ. ಚಪ್ಪರ ಹಾಕಕ್ಕೆ ಬನ್ನಿ, ಚಪ್ಪರದ ಊಟಕ್ಕೆ ಬನ್ನಿ, ಊರೂಟಕ್ಕೆ ಬನ್ನಿ, ಧಾರೆಗೆ ಬನ್ನಿ, ಧಾರೆ ಊಟಕ್ಕೆ ಬನ್ನಿ. ಹೆಣ್ಣು ಹೊರಡಿಸುವುದಕ್ಕೆ ಬನ್ನಿ ಎಂದು ಉದ್ಘರಿಸಬೇಕು.

ಈಗ ಸರಳತೆಯನ್ನು ಮಾನ್ಯ ಮಾಡುವವರೇ ಇಲ್ಲ. ಆಡಂಬರದ ಅದ್ದೂರಿಗೆ ಕೈಲಾಗದಿದ್ದರೂ ಎಟಕಿಸುತ್ತಾರೆ. ಲಗ್ನಪತ್ರಿಕೆಯನ್ನು ಮಾಡುವ ಖರ್ಚಿನಲ್ಲಿ ಒಂದು ಮದುವೆ ಮಾಡಬಹುದು. ಮದುವೆಗಳನ್ನು ಸರಳಗೊಳಿಸುವ ಉದ್ದೇಶದಿಂದ ಕೆ. ವಿ. ಪುಟ್ಟಪ್ಪನವರು ಮಂತ್ರ ಮಾಂಗಲ್ಯವನ್ನು ಜಾರಿಗೆ ತಂದರು. ಆದರೆ ಇಂದು ಅದನ್ನು ಪಾಲಿಸುವವರೇ ಇಲ್ಲ. ಎಲ್ಲಿಯಾದರೂ ಇಂತಹ ಮದುವೆಯಿದ್ದರೂ ನಂತರದ ಊಟ ಉಪಚಾರಗಳು ಅದ್ದೂರಿಯಾಗಿಯೇ ನಡೆಯುತ್ತವೆ.

ಅಕ್ಕಸಾಲಿಗ, ಕುಂಬಾರ, ಬೋವಿ, ಮಡಿವಾಳ, ಬಜಂತ್ರಿ, ಕುಳುವಾಡಿ ಇವರಿಗೆ ಮದುವೆಯಲ್ಲಿ ಆದ್ಯತೆ. ಅಕ್ಕಸಾಲಿಗ ತಾಳಿ, ವಡವೆ ಮಾಡಿತಂದರೆ ಕುಂಬಾರ ಪ್ರತ್ಯೇಕವಾಗಿ ಹನ್ನೆರಡು ಗುಂಬ ಮಾಡಿ ತರಬೇಕು. ಗುಂಬಕ್ಕೊಂದು ಊರಿನ ಒಬ್ಬ ಮುತ್ತೈದೆ ಮದುವೆ ಪೂರೈಸುವವರೆಗೂ ಮುಡಿಪಾಗಿರಬೇಕು. ಬೋವಿ ಛತ್ರಿ ಹಿಡಿದಿರಬೇಕು. ಗಂಡು ಬರುವಾಗ ಮಡಿವಾಳ ಮಡಿ ಬಟ್ಟೆಯನ್ನು ಮುಂದೆ ಹಾಸಬೇಕು. ಕುಳುವಾಡಿ ಕಾಡು ಬಾಳೆಎಲೆ ಸಂಗ್ರಹಿಸಬೇಕು.

ಮದುವೆಯ ಹಿಂದಿನ ದಿವಸ ಚಪ್ಪರ ಹಾಕುವುದು ಒಂದು ಸಂಭ್ರಮ. ಊರಿನವರೆಲ್ಲ ಮನೆಗೆ ಒಂದರಂತೆ ಕಂಬ, ಕಣಾರ ಕಡಿದು ತರಬೇಕು. ಶಾಸ್ತ್ರೋಕ್ತವಾಗಿ ಹನ್ನೆರಡು ಕಂಬ ಮಧ್ಯೆ ಹಾಲು ಕಂಬದ ಚಪ್ಪರವನ್ನು ಮನೆ ಮುಂದೆ ಹಾಕಬೇಕು. ಚಪ್ಪರ ಪೂಜೆ ಆದ ನಂತರ ಚಪ್ಪರದ ಊಟ ಪೂರೈಸಿ ಹೋಗಬೇಕು.

ಅಂದು ರಾತ್ರಿಯೆಲ್ಲಾ ಬೇರೆ ಬೇರೆ ಊರಿನಿಂದ ನೆಂಟರು ಬರುವ ಸಂಭ್ರಮ. ಅವರನ್ನು ಬರಮಾಡಿಕೊಂಡು ಊಟ ವಸತಿ ನೋಡಿಕೊಳ್ಳಬೇಕು. ಕೆಲವು ಆಪ್ತನೆಂಟರು ವಾದ್ಯ ಸಮೇತ ಬರುತ್ತಾರೆ. ಹಾಗೆ ಬರುವವರನ್ನು ಊರ ಮುಂದೆ ವಾದ್ಯದೊಂದಿಗೆ ಹೋಗಿ ಕರತರಬೇಕು. ಪುನಃ ಧಾರೆಯಾದ ನಂತರ ವಾದ್ಯದೊಂದಿಗೆ ಬಂದವರನ್ನು ಮದುವೆ ಮನೆಯ ವಾದ್ಯದೊಂದಿಗೆ ಅಷ್ಟುದೂರ ಹೋಗಿ ಬಿಟ್ಟು ಬರಬೇಕು.

ಮುಹೂರ್ತಕ್ಕೆ ನಿಗಧಿಯಾದ ಪುರೋಹಿತರು ಮುಂಜಾನೆಯೆ ಬಂದು ಧಾರೆಗೆ ಬೇಕಾಗುವ ಸಾಮಾನುಗಳನ್ನೆಲ್ಲಾ ಜೋಡಿಸಿ ಕಾದಿರುತ್ತಾರೆ. ಗಂಡಿನ ಕಡೆಯವರೆಲ್ಲ ಗಂಡಿನೊಡನೆ ಬೆಳಗಾಗುವುದರೊಳಗೆ ಬಂದು ಊರ ಮುಂದೆ ಅದಕ್ಕಾಗಿಯೇ ಹಾಕಿರುವ ಚಪ್ಪರದಲ್ಲಿ ಕುಳಿತಿರುತ್ತಾರೆ. ಅನುಕೂಲವಿರುವವರು ಅಂದಲದಲ್ಲಿ (ಪಲ್ಲಕ್ಕಿ) ಗಂಡನ್ನು ಕರೆತಂದಿರುತ್ತಾರೆ. ಮಿಕ್ಕವರು ಗಾಡಿಯಲ್ಲಿ ಗಂಡನ್ನು ಕರೆದುಕೊಂಡುಬರಬಹುದು. ಬಹುತೇಕ ಕಾಲ್ನಡಿಗೆಯಲ್ಲೆ ಬರುವವರಿದ್ದರು. ಧಾರೆಯಾದ ನಂತರ ಊಟ ಉಪಚಾರವೆಲ್ಲಾ ಮುಗಿದ ಮೇಲೆ ಮದುವೆಯನ್ನು ಹೊರಡಿಸಲು ಅಣಿ ಮಾಡುತ್ತಾರೆ. ಊರಿನವರೆಲ್ಲಾ ಹೆಂಗಸರು ಗಂಡಸರು ಸೇರಿದಂತೆ ಊರ ಮುಂದೆ ಬಂದು ಸೇರುತ್ತಾರೆ. ಒಂದು ಹೊಸ ಚಾಪೆಯನ್ನು ಹಾಸಿ ಅದರ ಮೇಲೆ ಹೆಣ್ಣು ಗಂಡು ಕೂರಿಸಿ ಶಾಸ್ತ್ರ ಮಾಡುವರು. ಪ್ರತಿ ಮನೆಯಿಂದ ಶಾಸ್ತ್ರಕ್ಕೆ ಅಕ್ಕಿ ಬೆಣ್ಣೆ ತಂದಿರುತ್ತಾರೆ. ಬೆಣ್ಣೆಯನ್ನು ಹೆಣ್ಣಿನ ತಲೆಗೆ ಹಾಕಿ ಶಾಸ್ತ್ರ ಮಾಡುವರು. ಹೊರಡುವಾಗ ಊರಿನ ಮುಖ್ಯಸ್ಥರೊಬ್ಬರು ಗಂಡಿನ ಕಡೆಯ ಮುಖ್ಯಸ್ಥರೊಬ್ಬರಿಗೆ ಹೆಣ್ಣಿನ ಕೈಯನ್ನು ಅವರ ಕೈಯಲ್ಲಿ ಇಟ್ಟು ಹೆಣ್ಣು ತಿಳಿಯದೆ ತಪ್ಪು ಮಾಡಿದರೂ ಕ್ಷಮಿಸಿ, ಇನ್ನುಮುಂದೆ ನಿಮ್ಮ ಒಡವೆ ಎಂದು ಬಿನ್ನೈಸಿ ಕಳುಹಿಸಿಕೊಡುವರು. ಆಗ ಊರೆ ರೋಧಿಸುವ ವಾತಾವರಣ. ಎಲ್ಲಾ ಹೆಂಗಸರ ಕಣ್ಣಲ್ಲಿ ನೀರು. ಈಗ ಈ ಸಂಪ್ರದಾಯಗಳೇನು ಇರುವುದು ಕಾಣುವುದಿಲ್ಲ.

ಇಂದಿಗೂ ನನಗೆ ಅರ್ಥವಾಗದ ಅಂದಿದ್ದ ವಾಡಿಕೆ ಎಂದರೆ. ತಲೆನೋವು ಬಂದಾಗ ನೆತ್ತಿಯಲ್ಲಿ ಆಗಿದೆ ಎಂದು. ಬೆಣ್ಣೆ ಅಥವಾ ಅಂಬಲಿಯನ್ನು ತಲೆಗೆ ತೀಡಿ ನೆತ್ತಿಯ ಮೇಲೆ ಜೋರಾಗಿ ಹಸ್ತದಿಂದ ಉಜ್ಜಿ ಉಜ್ಜಿ ನೊರೆ ನೊರೆಯಾಗಿ ಹಾಲು ಕೆನೆಯಂತೆ ಬರುತ್ತಿದ್ದ

ಗೋಡನ್ನು ಬಾಚಿ ತೆಗೆಯುತ್ತಿದ್ದರು. ಎಂತಹ ತಲೆ ನೋವಿದ್ದರೂ ಇದೊಂದೇ ಉಪಾಯ, ತಲೆ ನೋವಿಗೆಂದು ಮಾತ್ರೆ, ಕಶಾಯ, ಮುಲಾಮು ಉಪಯೋಗಿಸುತ್ತಿರಲಿಲ್ಲ. ಈಗೆಲ್ಲೂ ಈ ತರಹ ನೆತ್ತಿ ತೆಗೆಯುವುದನ್ನು ನೋಡಲಿಲ್ಲ.

ಮತ್ತೊಂದು ವಿಧಾನ ಸೂಡು ಹಾಕುವುದು. ಇದನ್ನು ನುರಿತವರೆ ಮಾಡುತ್ತಿದ್ದರು. ಬಳೆಯನ್ನು ದೀಪದಲ್ಲಿ ಕಾಯಿಸಿ ನರವನ್ನು ಹಿಡಿದು ಕಾದ ಬಳೆಯನ್ನು ಅದರ ಮೇಲೆ ಕ್ಷಣ ಮಾತ್ರ ಇಡುತ್ತಿದ್ದರು. ಕೆಲವರಿಗೆ ತಕ್ಷಣ ತಲೆನೋವು ಪರಿಹಾರವಾಗುತ್ತಿತ್ತು. ಇದೊಂದು ಬಗೆಯ ಆಕ್ಯೂಪಂಕ್ಚರ್ ಇರಬಹುದೆಂದು ಈಗ ನನಗೆ ಅನಿಸುತ್ತದೆ.

ಡಾಕ್ಟರು, ಪಂಡಿತರು ಫಕೀರರು ಇಲ್ಲದ ಊರಲ್ಲಿ ಎಲ್ಲ ಖಾಯಿಲೆಗಳಿಗೆ ಸಿದ್ಧೌಷಧಿ ಮಂತ್ರ-ಯಂತ್ರ. ಸಾಮಾನ್ಯವಾಗಿ ನಾಲ್ಕೈದು ವರುಷದ ಒಳಗಿನ ಮಕ್ಕಳ ಕೊರಳಲ್ಲಿ ಕಾಣುತ್ತಿದ್ದದ್ದು ತಾಯತ. ನಮ್ಮ ಊರಲ್ಲಿ ಕೆರಳ್ಳಿ ಪಟೇಲ್ ಮರಿಗೌಡರು ತಾಯತ ಬರೆಯುವುದರಲ್ಲಿ ಹೆಸರಾದವರು. ಎರಡು ಅಂಗುಲ ಅಗಲ, ನಾಲ್ಕು ಅಂಗುಲ ಉದ್ದದ ತೆಳುವಾದ ತಾಮ್ರದ ತಗಡಿನಲ್ಲಿ ಕೋಳಿಗರಿಯ ಬುಡದಿಂದ ಏನನ್ನೋ ಅದರ ಮೇಲೆ ಬರೆದು ಸುತ್ತಿ, ಹಸಿ ನೂಲು ದಾರವನ್ನು ಅರಿಶಿನದಲ್ಲಿ ಅದ್ದಿ, ತಾಯತ ಕಟ್ಟಿ ಧೂಪ ಹಾಕಿ ಕೊರಳಿಗೆ ಕಟ್ಟುತ್ತಿದ್ದರು. ಕಾಮಾಲೆ ರೋಗಕ್ಕೆ ಹುಡ್ರೆಮನೆ ಮರೀಗೌಡ್ರು ಕೊಡುತ್ತಿದ್ದ ಹಸಿರು ಔಷಧ ರಾಮಬಾಣದಂತೆ ಇತ್ತು. ಹೀಗೆ ಹತ್ತು ಹಲವು ಬಗೆಯ ಖಾಯಿಲೆಗಳಿಗೆ ಒಂದಲ್ಲ ಒಂದು ಬಗೆಯ ಉಪಾಯ ದೊರೆಯುತ್ತಿತ್ತು. ಜೊತೆಗೆ ದೇವರು ಕೇಳಿಸುವುದು, ಜಪ ಮಾಡುವುದು, ದಾನ ಕೊಡುವುದು ಸರ್ವೇಸಾಮಾನ್ಯ.

ಆಗಿನ ಮಲೆನಾಡಿನ ಹಳ್ಳಿಗಳು ಗುಡ್ಡ, ಗಿಡ ಮರಗಳಿಂದ ಸುತ್ತುವರಿದಿದ್ದರಿಂದ ದೂರದಿಂದ ಆ ಊರುಗಳನ್ನು ಕಾಣುವುದು ಅಥವಾ ಅಲ್ಲಿಯ ಶಬ್ದಗಳನ್ನು ಕೇಳುವುದು ಕಷ್ಟವಾಗಿತ್ತು. ಆದ್ದರಿಂದ ಊರಿನಲ್ಲಿ ಯಾರಾದರೂ ಸತ್ತರೆ ಗುಂಡು ಹೊಡೆಯುತ್ತಿದ್ದರು. ಇದಕ್ಕೆ ಪ್ರತ್ಯೇಕವಾದ ಗುಡ್ಡಕೋವಿ, ಮುಕ್ಕಾಲು ಅಡಿ ಉದ್ದ, ಒಂದಂಗುಲ ಪಾರ್ಶ್ವದ, ಅರ್ಧ ಅಡಿಕೊಳವೆ, ಅಡಿಯಲ್ಲಿ ರಂಧ್ರ. ಮದ್ದು ಗುಂಡನ್ನು (ಗನ್‌ಪೌಡರ್) ಇದರೊಳಗೆ ತುಂಬಿಸಿ, ಚೆನ್ನಾಗಿ ಕುಟ್ಟಿ ದೂರದಿಂದ ರಂಧ್ರದ ಮುಖಾಂತರ ಬೆಂಕಿ ತೋರಿಸಿದರೆ ನಾಲ್ಕಾರು ಮೈಲಿಗೆ ಕೇಳಿಸುವಂತಹ ಶಬ್ದ ಬರುತ್ತದೆ. ಈ ಶಬ್ದ ಕೇಳಿ, ಸುತ್ತಮುತ್ತಲ ಊರಿನವರು ಆ ಊರಲ್ಲಿ ಸಾವಾಗಿದೆಯೆಂದು ತಿಳಿಯುತ್ತಿದ್ದರು. ಹಲವಾರು ಕಾರಣಗಳಿಂದ ಈಚೆಗೆ ಈ ಪದ್ಧತಿ ಕಡಿಮೆಯಾಗುತ್ತಿದೆ.

ಮಲೆನಾಡಿನಲ್ಲಿ ಭತ್ತ, ಏಲಕ್ಕಿ, ಕಾಫಿ, ಅಡಿಕೆ, ಬಾಳೆ, ಕಿತ್ತಳೆ, ಸೀಗೆ ಸ್ವಾಭಾವಿಕವಾಗಿ ಬೆಳೆಯುತ್ತಿದ್ದರೂ ಅವುಗಳ ಕೃಷಿ ಮಲೆನಾಡಿನ ಎಲ್ಲಾ ಪ್ರದೇಶದಲ್ಲಿ ಒಂದೇ ಸಮನೆ ಬರುತ್ತಿರಲಿಲ್ಲ. ಕೊಡಗು ಕಿತ್ತಲೆ ಕಾಫಿಗೆ ಹೆಸರಾದರೆ ಮಂಜ್ರಾಬಾದ್ ತಾಲ್ಲೂಕು (ಸಕಲೇಶಪುರ) ಏಲಕ್ಕಿಗೆ ಹೆಸರಾದದ್ದು. ಮಲೆನಾಡು ಪ್ರದೇಶದ ಚಿಕ್ಕಮಗಳೂರು ಕಾಫಿ, ಕಿತ್ತಳೆ, ಅಡಿಕೆ ಅಂಟುವಾಳಕ್ಕೆ ಪ್ರಸಿದ್ಧಿ, ಶಿವಮೊಗ್ಗ ಮಲೆನಾಡು ಪ್ರದೇಶ ಅಡಿಕೆ, ಭತ್ತ ಬೇಸಾಯದಲ್ಲಿ ಮುಂದೆ.

ಸಕಲೇಶಪುರ ತಾಲ್ಲೂಕು ಅದರಲ್ಲೂ ಹೆತ್ತೂರು, ಯಸಳೂರು ಹೋಬಳಿ ಏಲಕ್ಕಿಗೆ ತೌರೂರೆಂದು ಹೇಳಬಹುದು. ಒಂದು ಕಾಲದಲ್ಲಿ ಸ್ವೇಚ್ಛೆಯಾಗಿ ಕಾಡಿನಲ್ಲಿ ಬೆಳೆದ ಏಲಕ್ಕಿ ಮೆಣಸನ್ನು ಸಂಗ್ರಹಸಿ ಕೊಲ್ಲಿ ರಾಷ್ಟ್ರಗಳಿಗೆ ಕಳುಹಿಸುತ್ತಿದ್ದರಂತೆ. ಕಾಡಿನಲ್ಲಿ ದೊಡ್ಡ ಮರಗಳು ಬಿದ್ದಾಗ ಬಯಲಾದಲ್ಲಿ ಏಲಕ್ಕಿ ತಾನಾಗಿಯೇ ಹುಟ್ಟುತ್ತಿತ್ತು. ಅಂದರೆ ಹಕ್ಕಿ, ಅಳಿಲು, ಕಾಡುಪ್ರಾಣಿಗಳು ಏಲಕ್ಕಿ ಹಣ್ಣನ್ನು ತಿಂದು ವಿಸರ್ಜಿಸಿದಾಗ ಬಯಲು ಬೆಳಕಿನಲ್ಲಿ ಬೀಜ ಮೊಳಕೆ ಒಡೆದು ಗಿಡವಾಗಿ ಒಂದೆರಡು ವರುಷ ಫಸಲು ಬಿಟ್ಟು ಒಣಗುತ್ತಿತ್ತು. ಏಲಕ್ಕಿಯ ಉಪಯೋಗವನ್ನು ಅರಬ್ಬರು ಪ್ರಚುರ ಪಡಿಸಿದರೆಂದು ಕಾಣುತ್ತದೆ. ಇದರ ಬೇಡಿಕೆ ಹೆಚ್ಚಾದಾಗ ಕಾಡಿನ ಸೀಗೆ ಮೆಣಸಿನೊಂದಿಗೆ ಏಲಕ್ಕಿಯನ್ನೂ ಸೇರಿಸಿ ವನ್ಯ ಸಂಪತ್ತನ್ನು ಹರಾಜು ಮಾಡುತ್ತಿದ್ದರು.

ಹತ್ತೊಂಬತ್ತನೆ ಶತಮಾನದ ಆದಿ ಭಾಗದಲ್ಲಿ ಯೂರೋಪಿಯನ್ನರು ಪಶ್ಚಿಮ ಘಟ್ಟದ ದಟ್ಟವಾದ ಕಾಡಿನ ಸಂಪತ್ತನ್ನು ಸಂಗ್ರಹಿಸಿ ಇಂಗ್ಲೆಂಡಿಗೆ ಕಳುಹಿಸಲು ಪ್ರಾರಂಭಿಸಿದ ಮೇಲೆ ಏಲಕ್ಕಿ ಬೇಸಾಯ ಚಾಲನೆಗೆ ಬಂತು. ಸ್ಥಳೀಯರ ಮಾತಿನ ಪ್ರಕಾರ ಏಲಕ್ಕಿಯ ಉಪಯೋಗ ಯೂರೋಪಿಯನ್ನರಿಗೆ ಗೊತ್ತಿರಲಿಲ್ಲವಂತೆ. ಕಾಡಿನಲ್ಲಿ ತಾನಾಗಿಯೇ ಬೆಳೆಯುತ್ತಿದ್ದ ಏಲಕ್ಕಿಯನ್ನು ಫರಂಗಿಯವರು ಸಂಗ್ರಹಿಸಿ ಇದನ್ನು ಪರಿಶೀಲಿಸಿ, ಅದರ ಉಪಯೋಗವನ್ನು ತಿಳಿಸಬೇಕೆಂದು ಇಂಗ್ಲೆಂಡಿಗೆ ಕಳುಹಿಸಿಕೊಟ್ಟಾಗ ಅದನ್ನು ಕಳುಹಿಸಿಕೊಟ್ಟಿದ್ದ ಪೆಟ್ಟಿಗೆಯ ತುಂಬ ಚಿನ್ನವನ್ನು ತುಂಬಿ ಈ ಬೆಳೆಯನ್ನು ವೃದ್ಧಿಪಡಿಸಿ, ಏಲಕ್ಕಿಯನ್ನು ಇಂಗ್ಲೆಂಡಿಗೆ ಕಳುಹಿಸುವುದೆಂದು ಬರೆದಿತ್ತಂತೆ. ಅಂತು, ಮಂಜರಾಬಾದ್ ತಾಲ್ಲೂಕಿನಲ್ಲಿ ಮೊದಲು ಮಾಡಿದ ಪ್ಲಾಂಟೇಷನ್, 'ಕಾರ್ಡಮಮ್'. ಕಾರ್ಡಮಮ್ ಎಂದು ಹೆಸರು ಬರಲು ಕಾರಣ ಮೊದಲು ಕಳುಹಿಸಿದ ಏಲಕ್ಕಿ ಸಕಲೇಶಪುರ ತಾಲ್ಲೂಕು 'ಕಾಡುಮನೆಯಿಂದ' ಎಂದು ಬರೆದಿದ್ದರಿಂದ ಅದಕ್ಕೆ ಕಾರ್ಡಮಮ್ ಎಂಬ ನಾಮಾಂಕಿತವಾಯಿತೆಂದು ವದಂತಿ.

ಹೊಂಗಡಹಳ್ಳದ ಹತ್ತಿರ ಬಾಜೆಮನೆ ಎಸ್ಟೇಟು ಸುಮಾರು ಎರಡು ಸಾವಿರ ಎಕರೆ ಒಬ್ಬ ಯೂರೋಪಿಯನ್ನರ ವಶದಲ್ಲಿದ್ದು, ಏಲಕ್ಕಿ ಬೆಳೆಯುವ ಮೊದಲ ಪ್ರಯತ್ನ ಅಲ್ಲಿ ಆಯಿತಂತೆ. ಆದರೆ ಮುಂದೆ ಯೂರೋಪಿಯನ್ನರ ಒಲವು ಕಾಫಿಯ ಕಡೆಗೆ ತಿರುಗಿ ಏಲಕ್ಕಿ ಬೇಸಾಯ ಸ್ಥಳೀಯರ ಪಾಲಿಗೆ ಬಿತ್ತು. ಕಾರಣ ಏಲಕ್ಕಿಗೆ ಬರುತ್ತಿದ್ದ ಕಟ್ಟೆ ಕಾಯಿಲೆ ನಿಯಂತ್ರಣ ಕಷ್ಟ, ಅಲ್ಲದೆ ಅದರ ಬೇಡಿಕೆ ಮತ್ತು ಬೆಲೆ ಒಂದೇ ಸಮನೆ ಇರುತ್ತಿರಲಿಲ್ಲ. ಅಂತು ಮಂಜ್ರಾಬಾದ್ ಏಲಕ್ಕಿ ಪ್ರಪಂಚದಲ್ಲೇ ಅತ್ಯುತ್ತಮವಾದದ್ದೆಂದು ಹೆಸರುಗಳಿಸಿತು. ಹೆತ್ತೂರು ಹೋಬಳಿ, ಯಸಳೂರು ಹೋಬಳಿಯಲ್ಲಿ ಅತಿವೃಷ್ಟಿ ಕಾರಣ ಕಾಫಿ ಪ್ರಬುದ್ಧಮಾನಕ್ಕೆ ಬರಲಿಲ್ಲ. ಇಲ್ಲಿ ನೂರ ಐವತ್ತು ಅಂಗುಲಕ್ಕೂ ಹೆಚ್ಚು ಮಳೆ ಮುಂಗಾರಿನ ಮೂರು ತಿಂಗಳಲ್ಲಿ ಸುರಿದು ಉಳಿದಂತೆ ವರುಷದ ಅರ್ಧಭಾಗದಲ್ಲಿ ಮಳೆಯೇ ಇಲ್ಲದ್ದು, ಮತ್ತು ಹೆಚ್ಚು ಗುಡ್ಡಗಾಡು ಪ್ರದೇಶವಾದ್ದರಿಂದ ಅಂತರ್‌ಜಲ ಬಹಳ ಆಳವಾಗಿರುವುದು ಅಲ್ಲದೆ ಕೊಳೆ ರೋಗದ ಹಾವಳಿಯಿಂದ ಅಡಿಕೆ, ಕಿತ್ತಲೆ, ಕಾಫಿ ಬೆಳೆಗೆ ಈ ಪ್ರದೇಶ ಸೂಕ್ತವಾಗಲಿಲ್ಲ.

ಈ ಭಾಗದ ಮಲೆನಾಡು ಪ್ರದೇಶದಲ್ಲಿ ಎರಡೇ ಮುಖ್ಯ ಬೆಳೆ. ಭತ್ತ ಮತ್ತು ಏಲಕ್ಕಿ. ನಮ್ಮ ಊರಲ್ಲಿ ಎಲ್ಲರಿಗೂ ಇವೆರಡರ ಕೃಷಿ ಇತ್ತು. ಭತ್ತ ವರುಷಕ್ಕೆ ಜೀವನಾಧಾರವಾದರೆ

ಏಲಕ್ಕಿ ಇತರೆ ಖರ್ಚಿಗೆ ಆಗುತ್ತಿತ್ತು. ಏಲಕ್ಕಿ ಬೇಸಾಯಕ್ಕೆ ತಂತ್ರಜ್ಞಾನ ಹೆಚ್ಚೇನು ಇರಲಿಲ್ಲ. ಕಾಡು ಕಡಿದು, ನೆರಳು ಕಡಿಮೆ ಮಾಡಿ, ಆರು ಅಡಿ ಅಂತರಕ್ಕೆ ಗುಂಡಿ ಮಾಡಿ ಮುಂಗಾರು ಮಳೆ ಪ್ರಾರಂಭದಲ್ಲಿ ಗಿಡ ಹಾಕುವುದು, ವರುಷಕ್ಕೆ ಒಂದಾವರ್ತಿ ಕಳೆ ತೆಗೆದು, ಗಿಡ ಹೋದಲ್ಲಿ ಪುನಃ ಗಿಡ ಹಾಕುವುದು. ಬೀಜದ ಗಿಡ ಹಾಕಿ ಮೂರು ವರುಷಕ್ಕೆ ಮೊದಲ ಫಸಲು ಬರುತ್ತೆ. ಹಿಂದೆ ಏನೂ ಬೇಸಾಯ ಮಾಡದ ಕಾಡಾಗಿದ್ದರೆ ಗಿಡ ಹೋದಲ್ಲಿ ತುಂಬಿಸುತ್ತಿದ್ದರೆ ಹತ್ತಾರು ವರುಷ ಫಸಲು ತೆಗೆಯುತ್ತಿದ್ದರು. ಮಳೆ ಕಡಿಮೆಯಾಗಿ ಕಾಡು ಬಂಜರಾಗುತ್ತಾ ಬಂದ ಹಾಗೆಲ್ಲಾ ಏಲಕ್ಕಿ ಬೆಳೆ ಕ್ಷೀಣಿಸುತ್ತಾ ಬಂತು. ಈಗ ಗೌಟಮಾಲ, ಏಲಕ್ಕಿ ಬೆಳೆಯಲ್ಲಿ ಮುಂಚೋಣಿಯಲ್ಲಿದ್ದು, ತುರ್ತುಕ್ರಮ ಕೈಗೊಳ್ಳದಿದ್ದರೆ, ಒಂದು ಕಾಲದಲ್ಲಿ ಸಾಂಬಾರ ಪದಾರ್ಥದ ರಾಣಿ ಎಂದು ಹೆಸರಾಗಿದ್ದ ಏಲಕ್ಕಿ ನಮ್ಮ ಕೈ ತಪ್ಪಿ ಹೋಗುವ ಸಂಭವವಿದೆ.

ಮಳೆಗಾಲದಲ್ಲಿ ಏಲಕ್ಕಿ ತೋಟಗಳಲ್ಲಿ ಜಿಗಣೆಗಳಿಂದ ಪಾರಾಗಿ ಬರುವುದೆ ಕಷ್ಟ. ಅವು ರಕ್ತ ಹೀರಿ ಬಿದ್ದುಹೋದ ನಂತರವೇ, ಕಚ್ಚಿದ ಜಾಗದಿಂದ ರಕ್ತ ಸುರಿಯಲು ಪ್ರಾರಂಭವಾಗುತ್ತದೆ. ಏಲಕ್ಕಿ ಕುಯಿಲು ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಕೊನೆಯವರಿಗೆ ನಡೆಯುತ್ತದೆ. ಹದಿನೈದು ದಿವಸಕ್ಕೊಮ್ಮೆ ಕೊಯಲಿಗೆ ಬರುವ ಏಲಕ್ಕಿ ಹಣ್ಣಾಗಿ ಹೊಂಬಣ್ಣಕ್ಕೆ ತಿರುಗಿದಾಗ ಸುಲಭವಾಗಿ ಗರೆಯಿಂದ ಬಿಡಿಸಬಹುದು. ಹೆಚ್ಚಿಗೆ ಹಣ್ಣಾಗಲು ಬಿಟ್ಟರೆ ಅಳಿಲು, ಇಲಿ, ಕೋತಿ ಇತರೆ ಕಾಡು ಪ್ರಾಣಿಗಳು ತಿಂದು ಹಾಳು ಮಾಡುತ್ತವೆ. ಕೋತಿಗಳು ಗಿಡಗಳನ್ನೆ ಸಿಗಿದು ಧ್ವಂಸ ಮಾಡುತ್ತವೆ. ಏಲಕ್ಕಿ ಒಣಗಿಸುವುದು ಎರಡು ವಿಧ. ಮೊದಲು ಕೊಯಲಿಗೆ ಬಂದದ್ದನ್ನು ಬಿಸಿಲಿನಲ್ಲಿ ಒಣಗಿಸಲು, ಮಳೆಗಾಲ ಇನ್ನೂ ನಿಂತಿರುವುದಿಲ್ಲವಾದ್ದರಿಂದ ತೊಂದರೆ ಇರುವುದು. ಪ್ರತ್ಯೇಕ ನಿರ್ಮಿಸಿದ ಗೂಡಿನಲ್ಲಿ ಸೌದೆಯ ಸಹಾಯದಿಂದ ಶಾಖವನ್ನು ಉತ್ಪತ್ತಿ ಮಾಡಿ ಒಣಗಿಸುವರು. ಶಾಖದ ವೈಪರೀತ್ಯದಿಂದ ಕೆಲವು ಬಾರಿ ಒಣಗಿದ ಏಲಕ್ಕಿ ಕಪ್ಪಾಗಬಹುದು. ಹದವಾದ ಶಾಖದಲ್ಲಿ ನಿಧಾನವಾಗಿ ಒಣಗಿಸಿದರೆ ಹಸುರಾದ ಒಣಗಿದ ಏಲಕ್ಕಿ ಆಗುವುದು. ಇದನ್ನು ಗ್ರೀನ್‌ಕಾರ್ಡಮಮ್ ಎನ್ನುವರು. ಕೇರಳದಲ್ಲಿ ಹೆಚ್ಚಾಗಿ ಇದನ್ನೇ ಮಾಡುವುದು. ಮಾರುಕಟ್ಟೆಯಲ್ಲಿ ಇದಕ್ಕೆ ಬೆಲೆಯೂ ಜಾಸ್ತಿ. ಎರಡನೆಯ ವಿಧ ಬಿಸಿಲಲ್ಲಿ ಒಣಗಿಸುವುದು.

ಸಕಲೇಶಪುರ ಮೂಡಿಗೆರೆ ತಾಲ್ಲೂಕುಗಳಲ್ಲಿ ಬೆಳೆದ ಏಲಕ್ಕಿಯನ್ನು ಹೆಚ್ಚಾಗಿ ಬಿಸಿಲಿನಲ್ಲಿಯೇ ಒಣಗಿಸುವುದು. ಮೂರು ದಿವಸ ಒಣಗಿದ ಮೇಲೆ ಹೊಸದಾಗಿ ನೇಯ್ದಿದ್ದ ಹೆಡಿಗೆಯೊಳಗೆ ಕೈಯಿಂದ ಉಜ್ಜಿ ತೊಟ್ಟು ತೆಗೆದು, ಕೇರಿ ವಿಂಗಡಿಸುವರು. ದೊಡ್ಡ ದೊಡ್ಡ ಏಲಕ್ಕಿಯನ್ನು ಕೈಯಲ್ಲಿ ಆರಿಸಿ ತೆಗೆದದ್ದು 'ಹ್ಯಾಂಡ್ ಪಿಕ್ಡ್', ಜಲಿಸಿ ಉಳಿಯುವುದು ರಾಶಿ, ಸಣ್ಣದೆಲ್ಲ ಕೂಳೆ. ಹೀಗೆ ವಿವಿಧ ಬಗೆಯ ಏಲಕ್ಕಿ ವಿಂಗಡಿಸುವರು.

ನಾನು ಚಿಕ್ಕವನಾಗಿರುವಾಗ ಏಲಕ್ಕಿ ವ್ಯಾಪಾರ ಕಾಸರಗೋಡು ಕಾಕಾಗಳೇ ಮಾಡುತ್ತಿದ್ದರು. ಬೆಳೆದವರು ಯಾರೂ ಮಂಡಿಗೆ ತೆಗೆದುಕೊಂಡು ಹೋಗಿ ಮಾರುತ್ತಿರಲಿಲ್ಲ. ತೂಕದಲ್ಲಿಯೂ ಬೆಳೆದವರಿಗೆ ಮೋಸವಾಗುತ್ತಿತ್ತು. ತೂಕದ ಬಟ್ಟುಗಳಾಗಲಿ ಅಥವಾ ಸ್ಟ್ಯಾಂಡರ್ಡ್ ತಕ್ಕಡಿಗಳಾಗಲಿ ಇರುತ್ತಿರಲಿಲ್ಲ. ಒಂದು ಸೇರು, ಪಂಚೇರು, ದಡಿಯ, ಕಲ್ಲು ಗುಂಡುಗಳು ಇರುತ್ತಿದ್ದವು. ಅವುಗಳ ನಿಜವಾದ ತೂಕವನ್ನು ಯಾರೂ ಪರಿಷ್ಕರಿಸುತ್ತಿರಲಿಲ್ಲ. ತಕ್ಕಡಿಗಳು ಕೂಡ ಒಂದು ಅಡ್ಡನೆಯ ಕೋಲು, ಆ ಕೋಲಿನ ಮಧ್ಯದ ರಂಧ್ರದೊಳಗೆ ಪೋಣಿಸಿದ ದಾರ, ಅದನ್ನು ಹಿಡಿಯಲು ಒಂದು

ಬಟ್ಟೆಯ ಗಂಟು. ತಕ್ಕಡಿಗಳಿಗೂ ಸರಿಯಾದ, ಸಮವಾದ ಮೂರು ದಾರವಿರುತ್ತಿರಲಿಲ್ಲ. ಕಲ್ಲಿನ ಕಡೆ ತಕ್ಕಡಿ ಮೇಲೆದ್ದರೂ ಏಲಕ್ಕಿ ಕಡೆ ತಕ್ಕಡಿ ಕೆಳಗೆ, ಕಾರಣ ತೂಗುತ್ತಿದ್ದವರು ಕಾಕಾಗಳೇ. ಆಗಿನ ಕಾಲದಲ್ಲಿ ಒಂದು ಮೂಟೆ ಏಲಕ್ಕಿಗೆ (100 ಕೆ.ಜಿ.) 30-40 ರೂಪಾಯಿಗಳು. ಬೆಳ್ಳಿ ರೂಪಾಯಿಗಳು ಇನ್ನೂ ಚಾಲನೆಯಲ್ಲಿದ್ದವು.

ಏಲಕ್ಕಿಯನ್ನು ವಿಂಗಡಿಸಿ, ಕೇರಿ, ಚೊಕ್ಕ ಮಾಡುವಾಗ ಉದುರಿದ ಬೀಜ, ಜೊಳ್ಳು,ಒಡಕು, ಕಜ್ಜಿ, ಕೊಳೆ ಮುಂತಾದವುಗಳನ್ನೆಲ್ಲಾ ಶೇಖರಿಸಿ ಮನೆಯ ಮಡದಿ ವರುಷಕ್ಕೊಮ್ಮೆ ಇದರಿಂದ ಅವರಿಗೆ ಬೇಕಾದ ಸಾಮಾನು ಕೊಳ್ಳುತ್ತಿದ್ದರು. ಇದೂ ಕೂಡ ಮಂಗಳೂರು, ಕಾಸರಗೋಡು ಕಾಕಾಗಳು ತಲೆಯ ಮೇಲೆ ಹೊತ್ತುತರುತ್ತಿದ್ದ ಒಣಗಿದ ಸಮುದ್ರದ ಮೀನು, ಸಾಬೂನು, ಸಣ್ಣಸಣ್ಣ ಪಾತ್ರೆ ಮುಂತಾದುವನ್ನು, ಅವರು ಶೇಖರಿಸಿದ್ದ, ಏಲಕ್ಕಿ ಕೊಟ್ಟು ಕೊಳ್ಳುತ್ತಿದ್ದರು.

ಮಳೆಗಾಲ ನಿಲ್ಲುವ ಸಮಯಕ್ಕೆ ಪಶ್ಚಿಮ ಕರಾವಳಿಯಿಂದ ಬರುತ್ತಿದ್ದ ವ್ಯಾಪಾರಸ್ಥ ಕಾಕಾಗಳು ಸ್ಥಳೀಯರಿಗಿಂತ ಭಿನ್ನವಾಗಿ ಕಾಣುತ್ತಿದ್ದರು. ನೊರ್ ನೊರ್ ಎನ್ನುವ ಚರ್ಮದ ಚಪ್ಪಲಿ, ಬಿಳಿಯ ಮುಂಡು, ಮೇಲೆ ಬಿಳಿಯ ಶರ್ಟು, ತಲೆಗೆ ಬಿಳಿಯ ರುಮಾಲು, ಕತ್ತಿನ ಪಟ್ಟಿ ಕೊಳೆಯಾಗದ ಹಾಗೆ ಬಣ್ಣದ ಚೌಕ ಸುತ್ತಿ ಕೈಯ್ಯಲ್ಲಿ ಕೊಡೆ, ಕಂಕುಳಲ್ಲಿ ಹಸುವೆ ಚೀಲವನ್ನಿಟ್ಟು ಸ್ವಲ್ಪ ಗತ್ತಿನಲ್ಲೇ ಬರುತ್ತಿದ್ದನ್ನು ನೋಡಿ ಇತರರು ದಾರಿಯಲ್ಲಿ ದೂರ ಸರಿಯುತ್ತಿದ್ದರು. ಇವರು ಇಸ್ಲಾಂ ಧರ್ಮದವರಾದರೂ ಹಳ್ಳಿಯಲ್ಲಿ ಹಿಂದೂಗಳ ಮನೆಯ ಒಂದು ಮೂಲೆಯಲ್ಲಿ ಮುಕ್ಕಾಮು ಹಾಕುತ್ತಿದ್ದರು. ಅವರ ಜೀವನ ಬಹಳ ಸರಳ. ಬೆಳಿಗ್ಗೆ ಕುಸಲಕ್ಕಿ ಗಂಜಿ, ನೆಂಚಲು ಒಣಮೀನು, ಮಧ್ಯಾಹ್ನ ಎಲ್ಲಿಯೋ ಚಟ್ಟಿಟ್ಟು ತಿಂದು ಚಹಾ ಕುಡಿದು, ಸಂಜೆ ಒಂದು ಹೊತ್ತು ಸಾರು, ಅನ್ನ ಮಾಡಿ ತಿನ್ನುತ್ತಿದ್ದರು. ಹಳ್ಳಿಯವರು ಪುಕ್ಕಟ್ಟೇ ಕೊಟ್ಟ ಹಾಲಿನಿಂದ ಆಗಾಗ ಚಾ ಮಾಡಿ ಕುಡಿಯುತ್ತಿದ್ದರು. ನಾನು ಚಿಕ್ಕವನಾಗಿದ್ದಾಗ ಊರಿನಲ್ಲಿ ಸಕ್ಕರೆ ನೋಡಿದ್ದು ಇವರ ಹತ್ತಿರವೇ. ಆಗಾಗ ಕರೆದು ಒಂದು ಚಮಚ ಸಕ್ಕರೆ ಕೊಟ್ಟರೆ ಕ್ಯಾಡ್‌ಬರೀಸ್ ಚಾಕಲೇಟು ತಿಂದಿದ್ದಕ್ಕಿಂತ ಹೆಚ್ಚು ಸಂತೋಷ. ಸಾಮಾನ್ಯ ಗಂಡಸರು ಒಳ್ಳೆಯ ಬಟ್ಟೆ ಹಾಕಲು ಕಲಿತದ್ದು ಇವರಿಂದ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇವರು ಪೇಟೆಯಿಂದ ತರುತ್ತಿದ್ದ ಹೊಸ ಹೊಸ ಬಟ್ಟೆ, ಟಾರ್ಚು, ಕೈಗಡಿಯಾರ, ಕೊಡೆ, ಮುಂತಾದುವನ್ನು ಕೊಟ್ಟು ಬದಲಿಗೆ ಏಲಕ್ಕಿ ತೆಗೆದುಕೊಳ್ಳುತ್ತಿದ್ದರು. ಅದಕ್ಕೂ ಒಂದು ಅಳತೆ ಅಥವಾ ಬೆಲೆ ಎಂದಿಲ್ಲ. ಅವರು ಕೇಳಿದಷ್ಟು ಇವರು ಕೊಟ್ಟಷ್ಟು!

ಇತ್ತೀಚೆಗೆ ರೆಗ್ಯೂಲೇಟೆಡ್ ಮಾರ್ಕೆಟ್ ಆದಮೇಲೆ, ಎಲ್ಲರೂ ಅವರವರ ಮಾಲನ್ನು ಮಾರ್ಕೆಟಿಗೆ ತೆಗೆದುಕೊಂಡು ಹೋಗಲು ಪ್ರಾರಂಭಿಸಿದಮೇಲೆ, ಈ ಮಧ್ಯಸ್ತಿಕೆ ವ್ಯಾಪಾರಸ್ಥರ ಚಟುವಟಿಕೆ ಕಡಿಮೆಯಾಯಿತು. ರೆಗ್ಯೂಲೇಟೆಡ್ ಮಾರ್ಕೆಟ್ ಬರುವ ಮುಂಚೆ ಮಾರ್ಕೆಟ್‌ನಲ್ಲಿ ಏಲಕ್ಕಿ ಕೊಳ್ಳುವುದು ಮಾರುವುದು ಬಹಳ ಗುಟ್ಟಾಗಿ. ಅಂದರೆ ಮಧ್ಯವರ್ತಿ ವ್ಯಾಪಾರಗಾರರು ಮಳಿಗೆಗಳ ಮಾಲೀಕರೊಂದಿಗೆ ಕೊಳ್ಳುವ ಮಾರುವ ಬೆಲೆಯನ್ನು ಇಬ್ಬರೂ ಅವರವರ ಕೈಯನ್ನು ಹಿಡಿದು ಒಂದು ಬಟ್ಟೆಯಿಂದ ಮುಚ್ಚಿಕೊಂಡು ಬೆರಳಿನಿಂದ ಸೂಚಿಸುವ ಗುರುತಿನಿಂದ ಬೆಲೆಯನ್ನು ನಿಗದಿ ಮಾಡುತ್ತಿದ್ದರು. ಬೆಳೆಯುವವರಿಗೆ ಇದರ ಗಂಧವೇ ಗೊತ್ತಿರಲಿಲ್ಲ.

3 ವಿದ್ಯಾರ್ಜನೆ

ಜೀವನದಲ್ಲಿ ಮರೆಯಲಾಗದ ದಿನಗಳಲ್ಲಿ ಒಂದು, 1942ರ ಜನವರಿ 16ನೇ ತಾರೀಖು, ಶನಿವಾರ. ಅಂದು ಬೆಳಿಗ್ಗೆ 6 ಘಂಟೆಗೆ ಬುತ್ತಿ ಬ್ಯಾಗಿನಲ್ಲಿ ಇಟ್ಟುಕೊಂಡು ನನ್ನ ಚಿಕ್ಕಪ್ಪನ ಮಗ ಸಣ್ಣಪ್ಪಣ್ಣನ (ಜಿ.ಡಿ. ರಾಮೇಗೌಡ್ರು) ಹಿಂದೆ ಹೊರಟದ್ದು. ಮೂವತ್ತೆರಡು ಮೈಲಿ ದೂರದಲ್ಲಿರುವ ಅರಕಲಗೂಡಿನಲ್ಲಿ ಸಣ್ಣಪ್ಪಣ್ಣ ಓದುತ್ತಿದ್ದರು. ಹಿಂದಿನ ದಿವಸ ದೊಡ್ಡಯ್ಯನ ಜಾತ್ರೆ. ಜಾತ್ರೆಯಿಂದ ಮನೆಗೆ ಬಂದ ಮೇಲೆ ತಂದೆಯವರು ನಾಳೆ ಸಣ್ಣಪ್ಪನ ಜೊತೆ ಅರಕಲಗೂಡಿಗೆ ಓದಲು ಹೋಗು ಎಂದು ಹೇಳಿದ್ದು ರಾತ್ರಿಯೆಲ್ಲಾ ಮನಸ್ಸಿನಲ್ಲಿ ತಳಮಳ. ಅಂದೇ ಸಂಜೆ ಸ್ಕೂಲಿನ ಉಪಾಧ್ಯಾಯರಲ್ಲಿಗೆ ಹೋಗಿ ತಂದೆ ಹೇಳಿದ್ದನ್ನು ಹೇಳಿದೆ. ಸ್ವಲ್ಪ ಸಮಯ ಏನನ್ನೋ ಯೋಚಿಸಿದನಂತರ ಈ ಶಾಲೆಯಲ್ಲಿ ನೀನು ಕಲಿಯುವುದನ್ನೆಲ್ಲಾ ಕಲಿತಿದ್ದಿ, ಆದರೆ ಸರ್ಕಾರಿ ಸ್ಕೂಲಿಗೆ ಸೇರದಿದ್ದರೆ ಮುಂದುವರಿಯಲು ಸಾಧ್ಯವಿಲ್ಲ, ಹೋಗು ದೇವರು ನಿನಗೆ ಒಳ್ಳೆಯದು ಮಾಡಲಿ ಎಂದು ಬೆನ್ನು ಮೇಲೆ ಕೈಯಿಟ್ಟು ನಾಲ್ಕು ಹೆಜ್ಜೆ ಜೊತೆಯಲ್ಲಿ ಮುಂದೆ ಬಂದು ಕಳುಹಿಸಿದರು. ಬರುವಾಗ ಅವರ ಮುಖ ನೋಡಿದೆ. ಅವರ ಕಣ್ಣಿನ ಅಂಚು ತೇವವಾಗಿತ್ತು. ಬಹುಶಃ, ಬೇರೊಬ್ಬ ಹುಡುಗ ಹೋಗಿ ಹೇಳಿದ್ದರೂ ಹೀಗೆ ಮಾಡುತ್ತಿದ್ದರೇನೋ! ಆ ಶಾಲೆ ಮತ್ತು ಅಲ್ಲಿಯ ಮಕ್ಕಳು ಅವರಿಗೆ ಸರ್ವಸ್ವ.

ಹೊರಡುವಾಗ ಅಣಿ ಮಾಡಿಕೊಳ್ಳಬೇಕಾಗಿದ್ದು ಏನೂ ಇರಲಿಲ್ಲ. ಪುಸ್ತಕ ಪೆನ್ಸಿಲ್ ಸರ್ಟಿಫಿಕೇಟು ಏನೊಂದೂ ಇಲ್ಲ. ಜನವರಿಯಲ್ಲಿ ಸರ್ಕಾರಿ ಶಾಲೆಗೆ ಸೇರಿಸುತ್ತಾರೋ ಇಲ್ಲವೋ ಎಂಬ ಅರಿವೂ ಮನೆಯಲ್ಲಿ ಯಾರಿಗೂ ಇರಲಿಲ್ಲ. ಸಂಕ್ರಾಂತಿ ಹಬ್ಬಕ್ಕೆ ಹೊಲಿಸಿದ ಒಂದು ಚಡ್ಡಿ, ಶರಟನ್ನು ಬುತ್ತಿಯ ಜೊತೆ ಬ್ಯಾಗಿನಲ್ಲಿಟ್ಟದ್ದು ಜ್ಞಾಪಕ. ಅವ್ವ ಅವರ ಎಲೆ ಅಡಿಕೆ ಚೀಲದ ಮೂಲೆಯೊಂದರಿಂದ ಬೆರಳು ಹಾಕಿ ನಾಲ್ಕು ಮೂಲೆ ಇರುವ ಎರಡಾಣೆ ದುಡ್ಡನ್ನು ತೆಗೆದು ಜೋಪಾನವಾಗಿ ಇಟ್ಟುಕೋ, ದಾರಿಯಲ್ಲಿ ಎಲ್ಲಿಯಾದರೂ ಕೆಡವೀಯ ಎಂದು ಹೇಳಿ ನನ್ನ ಕೈಯ್ಯಲ್ಲಿಟ್ಟರು. ಸಣ್ಣಪ್ಪಣ್ಣನನ್ನು ಹಿಂಬಾಲಿಸಿದೆ.

ಸಣ್ಣಪ್ಪಣ್ಣ ವಯಸ್ಸಿನಲ್ಲಿ ನನಗಿಂತ ಆರೇಳು ವರುಷ ದೊಡ್ಡವರು. ಅವರಿಗೆ ಅರಕಲಗೂಡಿನ ಅನುಭವ ಸಾಕಷ್ಟಿತ್ತು. ಎಂಟನೆ ತರಗತಿಯ ಪರೀಕ್ಷೆ ತೆಗೆದುಕೊಂಡಿದ್ದರು. (Lower Secondary) ಅವರೊಡನೆ ಅಷ್ಟು ಸಲಿಗೆ ಇರಲಿಲ್ಲ. ಅವರು ನಾಲ್ಕು ಹೆಜ್ಜೆ ಮುಂದೆ ನಾನು ಹಿಂದೆ. ಮಧ್ಯೆ ಒಂದು ಸಾರಿ 'ನೀನು ಇದ್ದಕಿದ್ದ ಹಾಗೆ ಬಂದೆಯಲ್ಲ. ಏನೂ ಬೇಜಾರಿಲ್ಲವ' ಎಂದು ಕೇಳಿದ್ದು ಜ್ಞಾಪಕ. ನನಗೆ ಸಂತೋಷವೋ ದುಃಖವೋ ಏನೂ ಅರಿಯೆ. ಮೊದಲ ಬಾರಿ ಮನೆ ಬಿಟ್ಟು ದೂರ ಹೋಗುತ್ತಿರುವುದೇ ವಿಚಿತ್ರ. ದಾರಿಯಲ್ಲಿ ಸಿಕ್ಕಿದ ಉಚ್ಚಂಗಿ, ಚಂಗಡ ಹಳ್ಳಿ, ಶನಿವಾರ ಸಂತೆ ವಿಚಿತ್ರವಾಗಿ ಕಂಡವು. ಏಕೆಂದರೆ ರಸ್ತೆಯ ಇಕ್ಕೆಲದಲ್ಲಿ ಮನೆ, ಅಂಗಡಿ.

ಆದರೆ ಗೊದ್ದು ಹತ್ತಾರು ಮನೆಗಳ ಒಂದು ಗುಂಪು, ಮನೆಗಳ ಮಧ್ಯೆ ಕಲ್ಲೋಣಿ. ವಣಗೂರು ಕೂಡುರಸ್ತೆಯಿಂದ ಹುಡ್ರೆ ಮನೆಕಡೆಗೆ ಹೋಗುವ ದಾರಿ ಒಂದು ಗಾಡಿ ಹೋಗುವ ಅಗಲಕ್ಕೆ ಮಾತ್ರ ಇತ್ತು. ಅಲ್ಲಿ ತನಕ ಆ ಊರಿಗೆ ನಾಲ್ಕು ಚಕ್ರದ ವಾಹನ ಬಂದಿದ್ದಿಲ್ಲ. ಶನಿವಾರ ಸಂತೆ ನಮ್ಮ ಊರಿಗೆ 12 ಮೈಲಿ. ಹತ್ತು ಹನ್ನೆರಡು ಮೈಲಿ ಸುತ್ತ ಮುತ್ತ ವಾರಕ್ಕೊಮ್ಮೆ ಶನಿವಾರ ನಡೆಯುವ ಸಂತೆಗೆ ಕೊಳ್ಳುವವರು ಮಾರುವವರು ಬರುತ್ತಿದ್ದರು. ಬಟ್ಟೆ ಮೊದಲುಗೊಂಡು ದಿನ ನಿತ್ಯದ ಬಳಕೆಗೆ ಬೇಕಾದ್ದನ್ನು ಕೊಳ್ಳಲು ಕಾಲ್ನಡಿಗೆಯಲ್ಲಿ ಬಂದು ಹೋಗುವುದಕ್ಕೆ ಇದೊಂದೆ ಸಂತೆ. ಆದ್ದರಿಂದ ದಾರಿ ಉದ್ದಕ್ಕೂ ಅಲ್ಲಲ್ಲಿ ಜನ ಸಂತೆಗೆ ಹೋಗುವರು ಸಿಕ್ಕುತ್ತಿದ್ದರು. ಶನಿವಾರ ಸಂತೆಗೆ ಮುಂಚೆಯೇ ಸಿಗುವ ಕಾಜೂರು ಹೊಳೆಯಲ್ಲಿ ಬುತ್ತಿ ಬಿಚ್ಚಿ, ಊಟ ಮಾಡಿ ಉಳಿದದ್ದನ್ನು ರಾತ್ರಿಗೆ ಕಟ್ಟಿಕೊಂಡು ಹೊರಟೆವು.

ಶನಿವಾರ ಸಂತೆಯಲ್ಲಿ ಸಣ್ಣಪ್ಪಣ್ಣನು ನನ್ನನ್ನು ಮರೆಯಾಗಲು ಬಿಡುತ್ತಿರಲಿಲ್ಲ. ಅರಕಲಗೂಡಿನಿಂದ ವ್ಯಾಪಾರಕ್ಕೆ ಸಾಮಾನು ತರುತ್ತಿದ್ದ ಗಾಡಿಯೊಂದನ್ನು ಪತ್ತೆಹಚ್ಚಿ ಅದರ ಮಾಲೀಕನೊಡನೆ ಅದೇನೋ ಮಾತನಾಡಿ ನೀನು ಸಂಜೆಯ ತನಕ ಈ ಗಾಡಿಯ ಹತ್ತಿರವೇ ಇರಬೇಕು, ಎಂದು ಹೇಳಿ ಕುಳ್ಳಿರಿಸಿ ಅವರಿಗೆ ಪರಿಚಯವಿರುವ ಹಲವಾರು ನೆಂಟರನ್ನು ಮಾತಾಡಿಸುತ್ತಾ ಅಲ್ಲಲ್ಲಿ ಅಡ್ಡಾಡುತ್ತಿದ್ದರು. ಕತ್ತಲಾದ ನಂತರ ಗಾಡಿ ಪ್ರಯಾಣ. ಇನ್ನೂ ಮುಸುಕು ಬೆಳಗಾಗುವುದರಲ್ಲಿ ಅರಕಲಗೂಡು ತಲುಪಿದೆವು. ಮನೆಯಲ್ಲಿ ಯಾರೂ ಎದ್ದಿರಲಿಲ್ಲ. ನನ್ನನ್ನು ನೋಡಿ ಮನೆಯವರೆಲ್ಲರಿಗೂ ಆಶ್ಚರ್ಯ. ಇವನೇಕೆ ಈಗ ಬಂದ. ಪಟ್ಟಣ ನೋಡಲೋ ಅಥವಾ ಮತ್ತಾವ ಕೆಲಸಕ್ಕೆ ಕಳುಹಿಸಿದ್ದಾರೋ. ಸ್ವಲ್ಪ ಸಮಯದ ಮೇಲೆ ನನ್ನನ್ನು ಕಳುಹಿಸಿರುವ ಉದ್ದೇಶವನ್ನು ಸಣ್ಣಪ್ಪಣ್ಣ ಹೇಳಿರಬೇಕು.

ಅಣ್ಣೇಗೌಡ್ರು (ನಮ್ಮ ದೊಡ್ಡಪ್ಪನ ಮಗಳ ಗಂಡ) ತಾಲ್ಲೂಕು ಟ್ರೆಷರಿಯಲ್ಲಿ ಶರಾಫ್ ಆಗಿದ್ದರು. ಸಂಬಳ ತೆಗೆದುಕೊಳ್ಳುವವರೆಲ್ಲರಿಗೂ ಅವರ ಪರಿಚಯವಿದ್ದಿರಬೇಕು. ಮಾರನೆಯ ದಿನ ಅರಕಲಗೂಡು ಕೋಟೆಯಲ್ಲಿರುವ ಸರ್ಕಾರಿ ಸ್ಕೂಲಿನ ಮಾಸ್ಟರ ಹತ್ತಿರ ಕರೆದುಕೊಂಡು ಹೋಗಿ, ಇವನನ್ನು ಏನು ಮಾಡುತ್ತೀರಿ. ಇವರಪ್ಪ ಓದಿಲ್ಲ ಇವರ ಅಜ್ಜ ಓದಿಲ್ಲ, ಇವನೇನೋ ಓದಬೇಕಂತೆ, ನಿಮಗೆ ತಿಳಿದಿದ್ದನ್ನು ಮಾಡಿ ಎಂದು ಹೇಳಿ ನನ್ನನ್ನು ಅಲ್ಲಿಯೇ ಬಿಟ್ಟು ಹೋದರು. ನನಗೆ ಹುಟ್ಟಿದ ತಾರೀಖು ಗೊತ್ತಿಲ್ಲ. ಯಾವ ಕ್ಲಾಸ್ ಎಂದು ಗೊತ್ತಿಲ್ಲ. ನನ್ನ ಹೆಸರೂ ಕೂಡ ಅಸ್ಪಷ್ಟವಾಗಿತ್ತು. ಈಗಿರುವ ಹೆಸರು ವೀರೇಶ್ ಅಲ್ಲಿಯ ತನಕ ಯಾರ ಬಾಯಲ್ಲೂ ಉಚ್ಚರಿಸಿ ರಲಿಲ್ಲ. ಉಚ್ಚಂಗಿ ಜೋಯಿಸರು ನನ್ನ ಹುಟ್ಟಿದ ಗುರುತಿನ ಆಧಾರದ ಮೇಲೆ, ಕೃಷ್ಣ ಎಂದು ಹೆಸರಿಸಿದ್ದರು. ಜಾತಕದಲ್ಲಿ ಇಂದೂ ಅದೇ ಹೆಸರಿರುವುದು. ಆದರೆ ಇದು ಪ್ರಚುರಕ್ಕೆ ಬರುವ ಮುನ್ನ ನಮ್ಮ ಪಕ್ಕದ ಮನೆ ಕೆಳ್ಳಮನೆ ಅಜ್ಜಿಯೊಬ್ಬರು ಈರಾಜು ಎಂದು ಹೆಸರಿಸಿದರಂತೆ. ಈ ಹೆಸರು ಐಗೂರು ಪಾಳೇಗಾರರೊಬ್ಬರ ಹೆಸರು. ಈರಾಜು ಹೋಗಿ ಈರಾಸು ಆಯಿತು. ಇಂದಿಗೂ ನನಗಿಂತ ಹಿರಿಯರು ಊರಲ್ಲಿ ಕರೆಯುವುದು ಇದೇ ಹೆಸರಿಂದ. ನಮ್ಮ ತಾಯಿಗೆ ಈ ಹೆಸರು ಬಿಟ್ಟು ಬೇರೆ ಏನೂ ತಿಳಿದಿರಲಿಲ್ಲ. ನಿನ್ನ ಹೆಸರೇನು ಎಂದು ಕೇಳಿದಾಗ ನಾನು ಹೇಳಿದ್ದೂ ಇದೇ ಹೆಸರು. ಇದನ್ನು ಕೇಳಿ ಮಾಸ್ತರಿಗೆ ಏನನ್ನಿಸಿತೊ ತಿಳಿಯದು. ಮರುದಿನ ಕ್ಲಾಸ್‌ನಲ್ಲಿ ಹಾಜರಿ

ತೆಗೆದುಕೊಳ್ಳುವಾಗ ವೀರೇಶ್ ಎಂದು ಕರೆದಾಗ ನಾನು ಹಿಂದೂ ಮುಂದು ನೋಡಿದೆ. ನಿನ್ನನ್ನೇ ಕರೆಯುತ್ತಿರುವುದು ಎಂದು ಹೇಳಿದಾಗ ಅವನೇ ನಾನು ವೀರೇಶ್ ಎಂದು ತಿಳಿಯಿತು!


ಮುಂದೆ ನನ್ನ ಹೆಸರು ವೀರೇಶ್‌ಗೌಡ ಹೇಗಾಯಿತೋ ತಿಳಿಯದು. ಅಂತು ನಾನು ಎಂ.ಎಸ್‌ಸಿ. ಪೂರೈಸಿ ಕೆಲಸಕ್ಕೆ ಸೇರಿದಾಗ ವೀರೇಶ್‌ಗೌಡ ಎಂಬ ನಾಮಾಂಕಿತ ನನ್ನ ಎಲ್ಲಾ ಸರ್ಟಿಫಿಕೇಟ್‌ನಲ್ಲಿವೆ. ಸುಮಾರು 1961-62ರ ಸಮಯದಲ್ಲಿ ನಮ್ಮ ಕಾಲೇಜಿನಲ್ಲಿ ಮತ್ತೊಬ್ಬ ಬಾಟನಿ ಲೆಕ್ಚರರ್ ಪರಮೇಶ್ವರಪ್ಪ ಎಂಬುವವರಿದ್ದರು. ಅವರಿಗೆ ಪರಮೇಶ್ವರ್ ಎಂದು ಹೆಸರು ಬದಲಿಸಬೇಕಿತ್ತು. ಆಗಿನ ನಿಯಮದ ಪ್ರಕಾರ ಕನಿಷ್ಠ ಮೂರು ಹೆಸರುಗಳನ್ನು ಬದಲಿಸಲು, ತಲಾ ಐದು ರೂಪಾಯಿಯಂತೆ ಸಂಬಂಧಪಟ್ಟವರಿಗೆ ಕಟ್ಟಿ ಕಾಲೇಜಿನಿಂದ ಕಳುಹಿಸಿದರೆ ಗೆಜೆಟ್‌ನಲ್ಲಿ ಬದಲಾದ ಹೆಸರು ಪ್ರಕಟವಾಗುತ್ತಿತ್ತು. ಕಾಲೇಜು ಆಫೀಸಿಗೆ ಹೋದಾಗ ಮತ್ತೊಂದು ಹೆಸರನ್ನು ಸೇರಿಸಲು ಪರದಾಡುತ್ತಿದ್ದ ಪರಮೇಶ್ವರಪ್ಪ, ನಿನ್ನ ಹೆಸರಿನ ಮುಂದೆ ಇರುವ ಗೌಡ ತೆಗೆದು ವೀರೇಶ್ ಮಾಡಿಸು ಎಂದು ಹೇಳಿ ನನ್ನ ಹೆಸರನ್ನು ಸೇರಿಸಿ ಕಳುಹಿಸಿದರು. ಗೆಜೆಟ್‌ನಲ್ಲಿ ಬಂದರೇನಂತೆ, ನನ್ನ ಸಮಕಾಲಿನವರು ವೀರೇಶ್‌ಗೌಡ ಎಂದು ಕರೆಯಲು ಮರೆಯಲಿಲ್ಲ. ಅಂತೆಯೇ ಸುಂಕರೆಡ್ಡಿಯವರ ಹೆಸರು ಶ್ರೀನಾಥ್‌ರೆಡ್ಡಿ ಆದರೂ ಸುಂಕರೆಡ್ಡಿಯೇ ಉಳಿಯಿತು.

ಮುಖ್ಯೋಪಾಧ್ಯಾಯರು ನನ್ನನ್ನು ಮೊದಲನೆಯ ತರಗತಿಯ ಮಾಸ್ತರ ಹತ್ತಿರ ಬಿಟ್ಟು ಈ ಹುಡುಗನನ್ನು ಸೇರಿಸಿಕೊಳ್ಳಬಹುದೇ ಎಂದು ಪರೀಕ್ಷಿಸಿ ಎಂದರು. ಅವರು ನನ್ನ ಪೂರ್ವ ಚರಿತ್ರೆಯೆಲ್ಲ ಕೇಳಿ ಎರಡನೆಯ ತರಗತಿಯ ಮಾಸ್ತರ ಮುಂದೆ ಬಿಟ್ಟರು. ಅಲ್ಲಿ ಮೂರು ತಿಂಗಳು ಕಳೆದ ಮೇಲೆ ಮೂರನೆ ತರಗತಿಗೆ ತೇರ್ಗಡೆ ಮಾಡಿದರು. ಆಗ ನನಗೆ ಒಂಬತ್ತನೆಯ ವಯಸ್ಸು.

ಶರಾಫ್ ಅಣ್ಣೇಗೌಡ್ರು ಹೆತ್ತೂರು ನಾಡು ಪಟೇಲರ ಕುಟುಂಬಕ್ಕೆ ಸೇರಿದವರು. ಅವರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಎಂಟು ಸಾರಿ ಫೇಲಾಗಿ ಎಂಟು ರೂಪಾಯಿ ಸಂಬಳಕ್ಕೆ ಬೆಂಗಳೂರು ಲಾಲ್‌ಬಾಗ್ ಗಾರ್ಡನ್‌ನಲ್ಲಿ ಕ್ರುಂಬಿಗಲ್‌ರವರ ಕೆಳಗೆ ಕೆಲಸಕ್ಕೆ ಸೇರಿ ಮುಂದೆ ಈ ಹುದ್ದೆಗೆ ಹೇಗೆ ಬಂದರೋ ತಿಳಿಯದು. ಬೆಂಗಳೂರಿನಲ್ಲಿ ತೋಟದಪ್ಪ ಚೌಲ್ಟ್ರಿಯಲ್ಲಿ ಇದ್ದುಕೊಂಡು ಎಂಟು ರೂಪಾಯಿ ಸಂಬಳದಲ್ಲಿ ನಾಲ್ಕು ರೂಪಾಯಿ ಉಳಿಸುತ್ತಿದ್ದೆ ಎಂದು ಹೇಳುತ್ತಿದ್ದರು. ಆಗಿನ ಕಾಲದ ಜೀವನ ಅಷ್ಟು ಕನಿಷ್ಠವಿತ್ತೇ ಎಂದು ಊಹಿಸಲೂ ಅಸಾಧ್ಯ!

ನಮ್ಮ ಕುಟುಂಬದಲ್ಲಿ ಓದು ಬರಹ ಕಲಿತು ವ್ಯಾಪಾರ ವ್ಯವಹಾರ ಜ್ಞಾನವಿದ್ದವರು ನನ್ನ ದೊಡ್ಡಪ್ಪ ತಮ್ಮಣ್ಣಗೌಡ್ರೊಬ್ಬರೆ. ಅವರಿಗೆ ಸರ್ಕಾರಿ ನೌಕರಿಯಲ್ಲಿರುವವರಿಗೆ ಸಂಬಂಧ ಮಾಡಬೇಕೆಂಬ ಆಸೆಯಿಂದ ಹಿರಿ ದೊಡ್ಡಪ್ಪನ ಮಗಳಾದ ಪುಟ್ಟಕ್ಕನನ್ನು ಇವರಿಗೆ ಕೊಟ್ಟು ವಿವಾಹ ಮಾಡಿದ್ದರು. ಅನಂತರ ಇವರ ಯೋಗಕ್ಷೇಮವನ್ನು ತಕ್ಕ ಮಟ್ಟಿಗೆ ನೋಡಿಕೊಳ್ಳು ತ್ತಿದ್ದರೆಂದು ಕಾಣುತ್ತದೆ. ಒಮ್ಮೆ ಟ್ರೆಷರಿಯ ಲೆಕ್ಕದಲ್ಲಿ ವ್ಯತ್ಯಾಸ ಬಂದು ಅಣ್ಣೇಗೌಡ್ರಿಗೆ ಕೆಲಸವೇ ಹೋಗುವ ಸ್ಥಿತಿಯಲ್ಲಿದ್ದಾಗ ಅದನ್ನು ಭರಿಸಿ ಉಳಿಸಿದರೆಂದು ಹೇಳುತ್ತಿದ್ದರು. ಮುಂದೆ ಈ ತರಹದ ತೊಂದರೆ ಬಂದು ನಿರ್ಗತಿಕನಾಗದಿರಲಿ ಎಂದು ನಾಲ್ಕು ಎಕರೆ ಜಾಗವನ್ನು ಕೂಡ ಇವರ ಹೆಸರಿಗೆ ಗೊದ್ದಿನಲ್ಲಿ ಮಾಡಿಕೊಟ್ಟಿದ್ದರು. ತಮ್ಮಣ್ಣಗೌಡರ ದೂರದೃಷ್ಟಿಯಿಂದ ನಮ್ಮ ಕುಟುಂಬದಲ್ಲಿ ಕೆಲವರು ವಿದ್ಯಾವಂತರಾಗಲು ಅನುಕೂಲವಾಯಿತು. ಅಣ್ಣೇಗೌಡರ ಸರ್ವೀಸ್








ನನ್ನ ಕುಟುಂಬ : (ಎಡದಿಂದ ಬಲಕ್ಕೆ)
ಕವಿತ, ವೀರೇಶ್, ಶಾರದ, ಭರತ್, ಸವಿತ
(1990)

(ಎಡದಿಂದ ಬಲಕ್ಕೆ) ಪ್ರಭಾ, ಮಲ್ಲೇಶ್,
ವೀರೇಶ್, ಶಾರದ

ಕೃಷಿ ಕಾಲೇಜು ಸ್ವರ್ಣಮಹೋತ್ಸವ
13-10-1996
ರಾಜ್ಯಪಾಲ ಖುರ್ಷಿದ್ ಆಲಂ ಖಾನ್
ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ
ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಅವರೊಂದಿಗೆ








ರಾಥಮ್‌ಸ್ಟಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ನಲ್ಲಿ
ನಿಂತಿರುವವರು : (ಎಡದಿಂದ ಬಲಕ್ಕೆ) ಎಡ್‌ವರ್ಡ್, ಲಾಷ್ಕಿ,
ವೀರೇಶ್, ಫ್ರೇಜರ್. ಕುಳಿತಿರುವವರು : ರೀಷ್

ನೈಜೀರಿಯಾದ ಹಳ್ಳಿಯ ಜನಜೀವನದ
ಮತ್ತೊಂದು ದೃಶ್ಯ (ಪುಟ 135)



ಅಮೆರಿಕೆಯ ರೆಡ್
ಇಂಡಿಯನ್ಸ್ ಸಾಮನ್
ಮೀನು ಬೇಯಿಸುತ್ತಿರುವ
ಮತ್ತೊಂದು ದೃಶ್ಯ
(ಪುಟ 121)



ಗುರುಗಳು ಹಾಗೂ
ಮಾರ್ಗದರ್ಶಕರು
ನನ್ನ ಎಡಕ್ಕೆ
ಡಾ॥ ಎಮ್. ಪುಟ್ಟರುದ್ರಯ್ಯ
ಬಲಕ್ಕೆ ಡಾ॥ ಜಿ.ಪಿ. ಚನ್ನಬಸವಣ್ಣ

ಪೂರ್ತಿ ಯಾವಾಗಲೂ ಅವರ ಮನೆಯಲ್ಲಿ ಒಬ್ಬಿಬ್ಬರು ಓದಿ ಕೊಂಡಿದ್ದರು. ಅವರ ಮನೆಯಲ್ಲಿ ಓದಿ ಕೊಂಡಿದ್ದವರಲ್ಲಿ ನಾನೇ ಕೊನೆಯವನು. ಇವರಲ್ಲಿ ಓದಿಕೊಂಡಿದ್ದು ಲೋವರ್ ಸೆಕೆಂಡರಿ ಪರೀಕ್ಷೆ ಪಾಸ್ ಮಾಡಿದವರಲ್ಲಿ ಮೊದಲಿಗರು ಜಿ. ಆರ್. ರಾಮೇಗೌಡ್ರು. ಇವರು ಹಿರಿದೊಡ್ಡಪ್ಪನ ಮೊಮ್ಮಗ. ಇವರು ತಾಯಿಯ ಗರ್ಭದಲ್ಲಿರುವಾಗಲೇ ತಂದೆ ತೀರಿಕೊಂಡಿದ್ದರು. ನಮ್ಮ ಊರಿಗೆ ಮೊದಲು ನೌಕರಿ ಮಾಡಿದವರೆಂದರೆ ಇವರಿರಬಹುದು. ಸ್ಕೂಲ್ ಬಿಟ್ಟ ಮೇಲೆ ಹತ್ತಿರ ಹಳ್ಳಿಗಳಲ್ಲಿ ಕೆಲವು ವರುಷ ಉಪಾಧ್ಯಾಯ ವೃತ್ತಿಯನ್ನು ಮಾಡಿದ್ದರು. ಅಣ್ಣೇಗೌಡ್ರು ನೌಕರಿಯಲ್ಲಿದ್ದ ಸ್ಥಳಗಳಾದ ಹೊಳೆನರಸೀಪುರ, ಬೇಲೂರು, ಸಕಲೇಶಪುರ, ಅರಕಲಗೂಡು ಎಲ್ಲಿಯೂ ಆಗ ಹೈಸ್ಕೂಲ್ ಇರಲಿಲ್ಲ. ಆದ್ದರಿಂದ ಜಿ. ಆರ್. ರಾಮೇಗೌಡ್ರಿಗೆ ಮುಂದೆ ಹೈಸ್ಕೂಲಿಗೆ ಹೋಗುವ ಅವಕಾಶ ದೊರೆಯಲಿಲ್ಲ. ಮೊದಲು ಹೈಸ್ಕೂಲ್ ಮೆಟ್ಟಿಲು ಹತ್ತಿದವರು ಜಿ. ಡಿ. ರಾಮೇಗೌಡ್ರು. ನಾನು ಅರಕಲಗೂಡಿಗೆ ಹೋದ ವರುಷ (1942) ಅವರು ಲೋವರ್ ಸೆಕೆಂಡರಿ ಪರೀಕ್ಷೆ ಪಾಸು ಮಾಡಿ ಹಾಸನದಲ್ಲಿ ಹೈಸ್ಕೂಲ್ ಸೇರಿದರು. ಇವರು ತಂದೆಗೆ ಒಬ್ಬರೇ ಮಗ. ಇನ್ನು ಹಳೆ ಮನೆಯಲ್ಲಿ ಒಟ್ಟಿಗಿದ್ದರು. ಹಣಕಾಸಿನ ವ್ಯವಸ್ಥೆ ಸುಧಾರಿಸಿತ್ತು. ಇವರನ್ನು ಹಾಸ್ಟೆಲಿನಲ್ಲಿ ಬಿಟ್ಟು ಓದಿಸಲು ಸಾಧ್ಯವಾಯಿತು. ನಾನು ಆರನೇ ಕ್ಲಾಸ್ ಪೂರೈಸುವಷ್ಟರಲ್ಲಿ ಅಣ್ಣೇಗೌಡ್ರಿಗೆ ರಿಟೈರ್ ಆಗಿ ಗೊದ್ದು ಸೇರಿದ್ದರು (1946).

ಶರಾಫ್ ಅಣ್ಣೇಗೌಡ್ರಿಗೆ ಗಂಡು ಮಕ್ಕಳಿರಲಿಲ್ಲ. ಎಲ್ಲವೂ ಹೆಣ್ಣು ಮಕ್ಕಳು. ಬಹುಶಃ ಈ ಕಾರಣಕ್ಕಾಗಿಯೂ ಸದಾ ಅವರ ಮನೆಯಲ್ಲಿ ಒಬ್ಬಿಬ್ಬ ಗಂಡು ಹುಡುಗರು ಓದಿಕೊಳ್ಳುತ್ತಿದ್ದರು. ಇವರದು ಬಹಳ ಸರಳ ಜೀವನ. ನಿವೃತ್ತಿ ಆಗುವ ಸಮಯ ಬಂದಾಗಲೂ ತಿಂಗಳಿಗೆ 35 ರೂಪಾಯಿ ಸಂಬಳ. ಅರಕಲಗೂಡು ಬಹಳ ಅಗ್ಗದ ಜಾಗ. ಆಗಿನ್ನು ಎಲೆಕ್ಟ್ರಿಸಿಟಿ ಬಂದಿರಲಿಲ್ಲ. ಅಲ್ಲಲ್ಲಿ ಕೊಳವೆ ನೀರು ಇರುತ್ತಿತ್ತು. ಮನೆ ಬಾಡಿಗೆ ಒಂದೂ ಮುಕ್ಕಾಲು ರೂಪಾಯಿ. ಒಂದು ದೊಡ್ಡ ಹಜಾರ ಅಡಿಗೆ ಮನೆ ಬಚ್ಚಲು, ಮನೆ ಮುಂದೆ ಜಗಲಿ. ಅದರ ಮಾಲೀಕ ದೊಡ್ಡಾಚಾರಿ ಆದರ ಒಂದು ಪಕ್ಕದ ಒಡ ಮನೆಯಲ್ಲಿದ್ದರು. ನಾಲ್ಕಾಣೆ ಬಾಡಿಗೆ ಹೆಚ್ಚಿಸಲು ಪಟ್ಟಶ್ರಮವೆಲ್ಲ ವ್ಯರ್ಥವಾಗಿತ್ತು. ಒಂದು ಗಾಡಿ ಸೌದೆಗೆ ಒಂದು ರೂಪಾಯಿ. ನಾಲ್ಕಾಣೆ, ಹೆಚ್ಚಿಸಿದಾಗ ದೊಡ್ಡ ಗೊಂದಲವೇ ಆಯಿತು. ಅರಕಲಗೂಡಿನಲ್ಲಿ ಶುಕ್ರವಾರ ಸಂತೆ. ಸಂತೆಗೆ ವಾರಕ್ಕೆ ಎರಡು ರೂಪಾಯಿ ಖರ್ಚು. ಒಂದು ರೂಪಾಯಿ ದಿನಸಿ. ಮತ್ತೊಂದು ರೂಪಾಯಿಗೆ ವಾರಕ್ಕಾಗುವ ಉಳಿದೆಲ್ಲಾ ಸಾಮಾನು. ಆಗ ಕಾಸಿಗೂ ಬೆಲೆಯಿತ್ತು. ಕೆರೆಬದಿಯಲ್ಲಿ ಉಪ್ಪಾರರು-ತರಕಾರಿ ಬೆಳೆಯುತ್ತಿದ್ದರು. ಆಗಾಗ ತರಕಾರಿ ಕೊಟ್ಟು ಕಾಫಿ ತಿಂಡಿ ತಿಂದುಕೊಂಡು ಹೋಗುತ್ತಿದ್ದರು.

ತಿಂಗಳಿಗೊಮ್ಮೆಯೋ ಎರಡು ತಿಂಗಳಿಗೊಮ್ಮೆಯೋ ಗೊರೂರು ಸಂತೆಗೆ ಹೋಗುವ ವಾಡಿಕೆ ಇತ್ತು. ಏಕೆಂದರೆ ಅಲ್ಲಿ ಕೆಲವು ಸಾಮಾನು ಅರಕಲಗೂಡಿಗಿಂತಲು ಅಗ್ಗವೆಂದು. ಮನೆಯಲ್ಲಿ ಬಹುತೇಕ ಪಾತ್ರೆಗಳು, ಮಣ್ಣಿನ ಮಡಿಕೆ. ನೀರು ಕಾಯಿಸುವ ಹಂಡೆ ಮಣ್ಣಿನದು. ಅದೇನಾದರೂ ಬಿರುಕು ಬಂದು ಸೋರಲು ಪ್ರಾರಂಭಿಸಿದರೆ ಮರಳನ್ನು ತಳಕ್ಕೆ ಹಾಕಿ ಅದನ್ನೇ ಉಪಯೋಗಿಸುತ್ತಿದ್ದೆವು. ಮನೆಯಲ್ಲೆಲ್ಲಾ ಒಂದೇ ಒಂದು ಕುರ್ಚಿ. ಅಣ್ಣೇಗೌಡರನ್ನು ಬಿಟ್ಟರೆ ಮತ್ತಾರು ಅದರಲ್ಲಿ ಕೂರುತ್ತಿರಲಿಲ್ಲ. ಕೂರಲು ಚಾಪೆಗಳೆ ಆಧಾರ. ಹಿತ್ತಲಿನಲ್ಲಿ ಜಾಗವಿತ್ತು. ಅಷ್ಟಿಷ್ಟು ತರಕಾರಿ ಬೆಳೆದುಕೊಳ್ಳುತ್ತಿದ್ದೆವು. ಸಾಕಷ್ಟು ಕೋಳಿಗಳಿದ್ದವು. ಆದರೆ ಒಮ್ಮೊಮ್ಮೆ

ರಾಣಿಕೇಟ್ ಖಾಯಿಲೆ ಬಂದು ಸಂತಾನಕ್ಕೆ ಒಂದೂ ಉಳಿಯದಂತೆ ಸತ್ತು ಹೋಗುತ್ತಿದ್ದವು. ದೊಡ್ಡ ಹುಂಜಗಳನ್ನು ಕಾಲಿಗೆ ಹಗ್ಗ ಹಾಕಿ ಯಾವುದಾದರೂ ಗಿಡಕ್ಕೆ ಕಟ್ಟುವುದು ನನ್ನ ಕೆಲಸ. ಕೆಲವು ಸಾರಿ ಅವು ದೂರ ಹೋದಾಗ ಮನೆಗೆ ಬರುತ್ತಿರಲಿಲ್ಲ!

ದಾರಿಯಲ್ಲಿ ಬಿದ್ದಿದ್ದ ಸಗಣಿ ಸಂಗ್ರಹಿಸಿ ಬೆರಣಿ ಮಾಡಿಕೊಳ್ಳುತ್ತಿದ್ದೆವು. ಮಂಗಳವಾರ, ಶುಕ್ರವಾರ, ಶನಿವಾರ ಹಾಸನ ಗೊರೂರು ಸಂತೆಗೆ ಗಾಡಿಗಳು ಹೋಗುತ್ತಿದ್ದವು. ಆಗ ಬೆಳಗಿನ ಜಾವ ಬಹಳ ದೂರ ರಸ್ತೆಯಲ್ಲಿ ಹೋಗಿ ಸಗಣಿ ಸಂಗ್ರಹಿಸುತ್ತಿದ್ದೆವು. ತಾಲ್ಲೂಕು ಕಛೇರಿ ಸುತ್ತ ಆಕೇಷಿಯ ಮರಗಳಿರುತ್ತಿದ್ದವು. ಅವುಗಳ ಕಾಯಿ (ಒಟ್ಟಂಗಿಪುಳ್ಳೆ) ಒಣಗಿ ಬಿದ್ದಾಗ ಉರುವಲಿಗೆ ಸಂಗ್ರಹಿಸುತ್ತಿದ್ದೆವು. ರಜ ಬಂದಾಗ ಅಥವಾ ಸ್ಕೂಲಿನಿಂದ ಬಂದು ಒಟ್ಟಂಗಿ ಪುಳ್ಳೆ ಆಯಿಸುವ ಕೆಲಸ ಮಾಡುತ್ತಿದ್ದೆವು.

ನಮ್ಮ ಮನೆ, ಕೆರೆ ಸಮೀಪವಿತ್ತು. ಕೊಳಾಯಿ ನೀರನ್ನು ಕುಡಿಯಲು ಮತ್ತು ಅಡಿಗೆಗೆ ಉಪಯೋಗಿಸುತ್ತಿದ್ದರು. ಉಳಿದೆಲ್ಲಕ್ಕೆ ಕೆರೆನೀರೇ ಆಧಾರ. ಬೆಳಿಗ್ಗೆ ಸಂಜೆ ಕೆರೆಯಿಂದ ನೀರು ತರುವುದು ನಿತ್ಯದ ಕೆಲಸ ಮತ್ತು ಬಟ್ಟೆ ಒಗೆಯಲು ಶನಿವಾರ, ಭಾನುವಾರ. ನಾನೊಬ್ಬನೇ ಮನೆಯಲ್ಲಿ ಗಂಡು ಹುಡುಗನಾಗಿದ್ದು ಆಗಾಗ ಕಛೇರಿಗೆ ಊಟ ಕೊಟ್ಟು ಬರಬೇಕಿತ್ತು. ಬೆಳಿಗ್ಗೆ ಎಲ್ಲರಿಗಿಂತ ಮುಂಚೆ ಎದ್ದು ನೀರೊಲೆಗೆ ಬೆಂಕಿ ಹಾಕಿ, ಮುಸುರೆ ತಿಕ್ಕಿ, ಕಸ ಹೊಡೆದು, ಮುಂದಿನ ಬಾಗಿಲು ಬೀದಿ ಗುಡಿಸಿರಬೇಕಿತ್ತು. ಅನಂತರ ಅಡುಗೆಗೆ ಅಕ್ಕನಿಗೆ ಸಹಾಯ. ಕಾರ ಕಡೆಯುವುದು, ತರಕಾರಿ ಹೆಚ್ಚುವುದು ಇದೆಲ್ಲ ಮಾಡಿ ಅವಸರ ಅವಸರವಾಗಿ ಪೇಟೆಯಲ್ಲಿದ್ದ ಸ್ಕೂಲಿಗೆ ಸುಮಾರು ಅರ್ಧ ಮೈಲು ಹೋಗಿ ಮಧ್ಯಾಹ್ನ ಊಟಕ್ಕೆ ಬಂದು ಹೋಗಿ ಸಂಜೆ ಮನೆಗೆ ಬಂದರೆ ಸಾಕಷ್ಟು ಕೆಲಸ ಕಾದಿರುತ್ತಿದ್ದವು. ಅಂತೂ ಆಟದ ಗಂಧವೇ ಇಲ್ಲವೆಂದು ಹೇಳಬಹುದು. ಸ್ಕೂಲಿಗೆ ಎಷ್ಟೇ ತಡವಾದರೂ ಸಂತೆ ಮೈದಾನದಲ್ಲಿದ್ದ ಕಲ್ಲು ಆಂಜನೇಯನಿಗೆ ಒಂದು ಪ್ರದಕ್ಷಿಣೆ ಹಾಕಿ ಸ್ಕೂಲಿಗೆ ಹೋಗುತ್ತಿದ್ದೆ. ಆರು ಅಡಿ ಎತ್ತರ ನಾಲ್ಕು ಅಡಿ ಅಗಲದ ಕಲ್ಲು ಚಪ್ಪಡಿಯಲ್ಲಿ ಕೆತ್ತಿದ ಆಂಜನೇಯನಿಗೆ ಗುಡಿ ಇರಲಿಲ್ಲ. ಪೂಜೆ ಪುನಸ್ಕಾರ ನಡೆಯುತ್ತಿರಲಿಲ್ಲ. ಆದರೂ ಕಣ್ಣಿಗೆ ಎದ್ದು ಕಾಣುವ ಆಂಜನೇಯ ದಾರಿಯಲ್ಲಿ ಹೋಗುವವರ ಕಣ್ಣು ಸೆಳೆಯುತ್ತಿದ್ದ. ಇತ್ತೀಚೆಗೆ ಆ ಮಾರ್ಗವಾಗಿ ಹೋಗುವಾಗ ಈ ಕಲ್ಲು ಆಂಜನೇಯನನ್ನು ನೋಡಬೇಕೆಂದು ಎಷ್ಟು ನೋಡಿದರೂ ಕಾಣಲಿಲ್ಲ!

ಮೊದಲು ಹೋದಾಗ ಮಲೇರಿಯ ಜ್ವರಕ್ಕೆ ಆರು ತಿಂಗಳು ಕ್ವಿನೈನ್ ಕುಡಿದೆ. ಕ್ವಿನೈನ್ ಪುಡಿ ಸಣ್ಣ ಪ್ಯಾಕೆಟ್ಟಿನಲ್ಲಿ ಆಸ್ಪತ್ರೆಯಲ್ಲಾಗಲಿ ಅಥವಾ ಪೋಸ್ಟ್ ಆಫೀಸಿನಲ್ಲಾಗಲಿ ಸಿಕ್ಕುತ್ತಿತ್ತು. ಬಹುಶಃ, ಅದರಂಥ ಕಹಿಯಾದ ಪದಾರ್ಥ ಬೇರೊಂದಿಲ್ಲವೆಂದು ಕಾಣುತ್ತದೆ. ಈಗ ನನ್ನ ಕಿವಿ ಮಾಂದ್ಯಕ್ಕೆ ಇದೂ ಕಾರಣವಿರಬಹುದೆಂದು ಡಾಕ್ಟರ್ ಹೇಳುವರು. ಅರಕಲಗೂಡು ಪ್ಲೇಗಿಗೆ ಹೆಸರಾದದ್ದು. ಎಲ್ಲಿಯಾದರೂ ಇಲಿ ಸತ್ತು ಬಿದ್ದ ಸುದ್ದಿ ಮುಟ್ಟಿದರೆ ಸಾಕು, ಸ್ಕೂಲ್‌ಗಳನ್ನೆಲ್ಲಾ ಮುಚ್ಚಿ ಚುಚ್ಚುಮದ್ದು ಕೊಡುತ್ತಿದ್ದರು. ಪ್ಲೇಗ್ ಇನಾಕ್ಯುಲೇಷನ್ ತೆಗೆದುಕೊಂಡರೆ ನಾಲ್ಕು ದಿವಸ ಮಲಗಬೇಕಿತ್ತು. ಈಗ ದನಗಳಿಗೂ ಅಂತ ಇಂಜೆಕ್ಷನ್ ಕೊಡುತ್ತಾರೋ ಇಲ್ಲವೋ ತಿಳಿಯದು! ಕೆಲವು ತುಂಟ ಹುಡುಗರು ಎಲ್ಲಿಯಾದರೂ ಇಲಿ ಹೊಡೆದು ಸ್ಕೂಲಿಗೆ ತಂದು ಹಾಕುತ್ತಿದ್ದರು. ಸತ್ತ ಇಲಿ ಕಂಡ ಮೇಲೆ ಸ್ಕೂಲ್ ಮುಚ್ಚಲೇ ಬೇಕಿತ್ತು.

ಪ್ಲೇಗು ಜಾಸ್ತಿಯಾದಾಗ ಎಲ್ಲರೂ ಊರು ಬಿಟ್ಟು ಹೊರ ವಲಯದಲ್ಲಿ ವಾಸ ಮಾಡಿ ಮನೆಗೆಲ್ಲಾ ಸೈನೋಗ್ಯಾಸ್ ಹೊಡಿಸಿ ನಾಲ್ಕಾರು ದಿನಗಳನಂತರ ಬರಬೇಕಿತ್ತು.

ನಾನು ಮೊದಲು ಅರಕಲಗೂಡಿಗೆ ಬರುವಾಗ ಶನಿವಾರ ಸಂತೆಯಿಂದ ಗಾಡಿಯಲ್ಲಿ ಬಂದದ್ದು ಬಿಟ್ಟರೆ ಊರಿಗೆ ಹೋಗುವುದು ಬರುವುದೆಲ್ಲ ನಡೆದೇ. ಮೂವತ್ತೆರಡು ಮೈಲಿ ಪ್ರಯಾಣ. ಬೆಳಿಗ್ಗೆ ಹೊರಟರೆ ಸಂಜೆ ಕತ್ತಲಾಗುವುದರೊಳಗೆ ಊರು ಸೇರಬೇಕಾದರೆ ಅತಿ ಪ್ರಯಾಸವೇ ಆಗುತ್ತಿತ್ತು. ಬಹಳ ಹೊತ್ತು ನಡೆದನಂತರ ಹೊಳೆ ದಾಟಿ ದಡ ಸೇರಿದಾಗ ಮಂಡಿಯ ಕೆಳಗೆ ಕಾಲಿನಿಂದ ರಕ್ತ ಚಿಮ್ಮುತ್ತಿತ್ತು. ಪ್ರಯಾಣದ ಮುಂದಿನ ದಿನ ಏಳಲಾಗುತ್ತಿರಲಿಲ್ಲ.

ರಜದಲ್ಲಿ ಊರಿಗೆ ಹೋದರೆ ಅಲ್ಲಿಯೂ ಸುಮ್ಮನೆ ಇರುವ ಹಾಗಿಲ್ಲ. ಗದ್ದೆ ತೋಟಕ್ಕೆ ಹೋಗಬೇಕಿತ್ತು. ಗದ್ದೆ ಉಳುವುದು, ಹೆಂಟೆ ಹೊಡೆಯುವುದು, ಗೊಬ್ಬರ ಹಾಕುವುದು, ಇವೆಲ್ಲ ಬೇಸಿಗೆಯಲ್ಲಿ ಮಳೆಗಾಲ ಪ್ರಾರಂಭಕ್ಕೆ ಮುಂಚೆ ನಡೆಯುತ್ತಿದ್ದ ಬೇಸಾಯದ ಕೆಲಸ, ಇಲ್ಲದಿದ್ದರೆ ದನಕಾಯುವುದು. ಮನೆಯಲ್ಲಿ ನಲವತ್ತು ಐವತ್ತು ದನಗಳಿರುತ್ತಿದ್ದವು. ಆರೇಳು ಜೊತೆ ಉಳುವ ಎತ್ತುಗಳು. ಏಳೆಂಟು ಹಾಲು ಕೊಡುವಂತಹವು. ಬಿಟ್ಟರೆ ಉಳಿದೆಲ್ಲವು ಮುದಿ, ಕುಂಟ, ಹೆಳವ, ಪಡ್ಡೆ, ಕಡಸು, ಹೋರಿ, ಗೊಡ್ಡಿ ಮುಂತಾದವು. ದನ ಮೇಯಲು ಎಲ್ಲೆಲ್ಲೂ ದೀಣೆ. ಆದರೆ ಬೇಸಗೆಯಲ್ಲಿ ನೀರು ಕುಡಿಸಲು ದೂರದಲ್ಲಿದ್ದ ಹಳ್ಳ, ಕೊಳ್ಳ, ಕೆರೆ ಅಥವಾ ಹೊಳೆಗೆ ಹೋಗಬೇಕಿತ್ತು ಮಧ್ಯಾಹ್ನ ಒಂದು ಹೊತ್ತು ಅವು ನೀರು ಕುಡಿದರೆ ಪುನಃ ಮುಂದಿನ ದಿನ ಮಧ್ಯಾಹ್ನವೇ. ಹೀಗಾಗಿ ಬೇಸಿಗೆಯಲ್ಲಿ ದನಗಳೆಲ್ಲ ಸೊರಗುತ್ತಿದ್ದವು. ಸಂಜೆ ಅವುಗಳನ್ನೆಲ್ಲ ಒಂದು ವ್ಯವಸ್ಥಿತ ರೀತಿಯಲ್ಲಿ ಕಟ್ಟಿ ಹುಲ್ಲು ಹಾಕುತ್ತಿರಲಿಲ್ಲ. ಎಲ್ಲವನ್ನು ಒಂದೋ ಎರಡೋ ಕೊಟ್ಟಿಗೆಗೆ ಕೂಡಿ, ಭತ್ತದ ಹುಲ್ಲನ್ನು ಹಾಕಿ ಬಾಗಿಲು ಮುಚ್ಚಿದರೆ ಮತ್ತೆ ಬೆಳಿಗ್ಗೆನೇ ನೋಡುತ್ತಿದ್ದದ್ದು. ಎಷ್ಟೋ ಬಾರಿ ಗರ್ಭದ ಹಸುಗಳು ಅಲ್ಲಿಯೇ ಕರು ಹಾಕಿರುತ್ತಿದ್ದವು. ಒಂದಕ್ಕೊಂದು ತಿವಿದು, ಹಾದು, ಒದ್ದು, ರಂಪ ಮಾಡುತ್ತಿದ್ದವು. ಅದೊಂದು ದಾರುಣ ನೋಟ.

ನಮ್ಮ ಮನೆಯಲ್ಲಿ ದನಕಾಯಲು ಒಬ್ಬ ಹುಡುಗ ಇದ್ದ. ನನಗೂ ನನ್ನ ತಮ್ಮನಿಗೂ ಮನೆಯಲ್ಲಿ ಅವನೇ ಹತ್ತಿರದವನು. ಅವನ ಜೊತೆ ದನ ಕಾಯಲು ಹೋಗುವುದೆಂದರೆ ಎಲ್ಲಿಲ್ಲದ ಸಂತೋಷ. ಜೇನು ಕೀಳುವುದು, ಹಲಸಿನಕಾಯಿ ಕೆಡವುದು, ಸೌತೆಕಾಯಿ ಕೀಳುವುದು, ಬಗನೆ ಕಂದು ಕಡಿದು ತಿರುಳು ತಿನ್ನುವುದರಲ್ಲೆಲ್ಲ ಅವನು ನಿಪುಣ. ಹಿಂದಿನ ದಿನವೇ ಅವನು ಪೀಠಿಕೆ ಹಾಕುತ್ತಿದ್ದ. ನಾಳೆ ನನ್ನೊಡನೆ ಬಂದರೆ ಮೇಲೆ ಹೇಳಿದ ಕಸುಬನ್ನು ಏನಾದರೂ ಮಾಡುವೆ ಎಂದು. ಮನೆಯವರಿಗೆ ತಿಳಿಯದೆ ಒಮ್ಮೊಮ್ಮೆ ಅವನ ಜೊತೆ ಹೋಗುತ್ತಿದ್ದೆವು. ಸಂಜೆ ಬಂದ ಮೇಲೆ ದೂರು ಬರುತ್ತಿತ್ತು. ನಮ್ಮ ತೋಟದಲ್ಲಿ ಇವರೆಲ್ಲ ಸೇರಿ ಜೇನು ಕಿತ್ತಿದ್ದಾರೆ, ಹಲಸಿನ ಕಾಯಿ ಕೆಡವಿದ್ದಾರೆ, ಸೌತೆಕಾಯಿ ಕಿತ್ತಿದ್ದಾರೆ, ಬಗನೆ ಕಂದು ಕಡಿದಿದ್ದಾರೆ ಎಂದು. ಆಗಲೇ ಗೊತ್ತಾಗುತ್ತಿದ್ದುದು ಅವೆಲ್ಲ ಬೇರೆಯವರ ಜಮೀನೆಂದು. ಆದರೆ ಅವನು ನಮಗೆ ಹೇಳುತ್ತಿದ್ದುದು ಅವೆಲ್ಲ ನಮ್ಮ ಜಮೀನು ಎಂದು. ಈ ಅಚಾತುರ್ಯಕ್ಕಾಗಿ ಒಮ್ಮೆ ತಂದೆಯವರು ನನಗೆ ಹೊಡೆದದ್ದು ಬೆನ್ನು ಬಾಸುಂಡೆ ವಾರವಾದರೂ ಹೋಗಿರಲಿಲ್ಲ. ನಾನು ಮಿಡ್ಲಸ್ಕೂಲಿನಲ್ಲಿದ್ದರೂ

ಅವರ ಅನಿಸಿಕೆಯಲ್ಲಿ ಒಬ್ಬ ವಿದ್ಯಾವಂತ ಹೀಗೆ ಕಂಡವರ ಜಮೀನಿನಲ್ಲಿ ಕಳ್ಳತನ ಮಾಡುವುದರಲ್ಲಿ ಪಾಲ್ಗೊಂಡಿರುವುದು ಶುದ್ಧ ಅಕ್ಷಮ್ಯ ಅಪರಾಧ ಎಂದು. ದಿನ ತಪ್ಪಿದರೆ ದನಕಾಯುವವನಿಗೆ ಪೆಟ್ಟು ತಪ್ಪುತ್ತಿರಲಿಲ್ಲ. ಆದರೂ ಒಂದು ದಿನವೂ ಅವನ ಕಣ್ಣಿನಲ್ಲಿ ನೀರೂರಿದ್ದನ್ನು ನೋಡಲಿಲ್ಲ. ಸಂಜೆ ಎಷ್ಟೇ ಹೊತ್ತಾದರೂ ಅವನ ಊಟವನ್ನು ಮನೆಗೆ ತೆಗೆದುಕೊಂಡು ಹೋಗಿ ತಾಯಿ ಯೊಡನೆ ಹಂಚಿ ತಿನ್ನುತ್ತಿದ್ದ.

ಕೆಲವು ದಿವಸ ಕೊಟ್ಟಿಗೆಯ ಸಗಣಿ ತೆಗೆದು ತಿಪ್ಪೆಗೆ ಹಾಕುವುದಕ್ಕೆ ತಾಯಿಗೆ ಸಹಕರಿಸುತ್ತಿದ್ದೆ. ಕೊಟ್ಟಿಗೆಯ ಮುಂದೆ ಕವಲಿರುವ ಮೂರು ಕಂಬಗಳನ್ನು ಆಳವಾಗಿ ಹೂಳಿ ಅದರ ಮೇಲೆ ತ್ರಿಕೋಣಾಕಾರದ ಮರದ ಕವಲನ್ನು ಮಾಡಿ ಅದರ ಮೇಲೆ ಒಂದು ಹೆಡಗೆಯನ್ನಿಯಟ್ಟು ಸಗಣಿಯನ್ನು ತುಂಬಿಸಿ ಅಡಿಯಿಂದ ತಲೆಕೊಟ್ಟು ಹೊತ್ತು ಕೊಲ್ಲಿಯಿಂದ ಆಚೆ ಇರುವ ತಿಪ್ಪೆಗೆ ಹಾಕುತ್ತಿದ್ದರು. ಕೊಲ್ಲಿ ದಾಟಲು ಮೆಟ್ಟಲು ಇತ್ತು. ಏನೂ ಹೊರೆ ಇಲ್ಲದೆ ಹೋದರೂ ಅನುಭವವಿಲ್ಲದವರು ತತ್ತರಿಸಿ ಬೀಳುವಂತಿತ್ತು. ಒಂದು ದಿನ ಗೊಬ್ಬರ ತುಂಬಿದ ಹೆಡಗೆ ಹೊತ್ತು ಮೆಟ್ಟಿಲ ಮೇಲೆ ಹೋಗುವಾಗ ಜಾರಿ ಬಿದ್ದು ತಾಯಿಯ ಬಲಗೈ ಭುಜದ ಕೀಲು ತಪ್ಪಿತ್ತು. ಹಳ್ಳದಿಂದ ಮೇಲೆತ್ತಲು ನನ್ನಿಂದ ಸಾಧ್ಯವಾಗಲಿಲ್ಲ. ಹೇಗೋ ತೆವಳಿ ದಡಕ್ಕೆ ಬಂದು ಕುಳಿತು, ತಾಳಲಾರದ ನೋವನ್ನು ಹಲ್ಲುಕಚ್ಚಿ ಹಿಡಿದು ಎಡಗೈಯಿಂದ ನಿಧಾನವಾಗಿ ಮೂಳೆ ಕೀಲು ತಪ್ಪಿದ್ದನ್ನು ಮತ್ತೆ ಅದಕ್ಕೆ ಕೂಡಿಸಿಕೊಂಡರು. ಈಗ ಯೋಚಿಸಿದರೆ ಅದೊಂದು ಪವಾಡ ಎಂದೇ ಹೇಳಬೇಕು.

ಅರಕಲಗೂಡಿನಲ್ಲಿರುವಾಗ (1942-46) ದಿನೇ ದಿನೇ ಜೀವನ ದುಬಾರಿಯಾಗುತ್ತಾ ಬರುತ್ತಿತ್ತು. ಆಗ ಎರಡನೆಯ ಮಹಾಯುದ್ಧದ ಮಧ್ಯೆ ಮತ್ತು ಅಂತ್ಯ ಸಮಯ. ಮಕ್ಕಳೆಲ್ಲಾ ದೊಡ್ಡವರಾದಂತೆ ಅಕ್ಕನಿಗೂ, ಅಣ್ಣೇಗೌಡರಿಗೂ ಅವರ ಹೆಣ್ಣುಮಕ್ಕಳ ಭವಿಷ್ಯದ ಚಿಂತೆ. ಈ ಮಧ್ಯೆ ಅಣ್ಣೇಗೌಡರ ಸಹೋದರರಿಬ್ಬರೂ ತೀರಿಕೊಂಡರು. ಅವರ ಮಕ್ಕಳೆಲ್ಲಾ ತಂದೆಯವರು ಮಾಡಿದ ಆಸ್ತಿಗಳನ್ನು ಮಾರಿ ಅಲ್ಲಲ್ಲಿ ಹೋಗಲು ಪ್ರಾರಂಭಿಸಿದ್ದರು. ಅಣ್ಣೇಗೌಡ್ರಿಗೆ ಬಂದಿದ್ದ ಪಾಲು ಕಂಡವರ ಪಾಲಾಗಬಹುದೆಂಬ ಹೆದರಿಕೆ ಅವರನ್ನು ಕಾಡಿಸುತ್ತಿತ್ತು. ನಾವು ಅರಕಲಗೂಡು ಬಿಡುವ ವರುಷ ಅವರು ತೀರ ಯೋಚಿಸಲು ಪ್ರಾರಂಭಿಸಿದರು. ರಿಟೈರ್ ಆಗಲು ಇನ್ನೂ ಕೆಲವು ವರುಷಗಳಿರುವ ಹಾಗೆಯೇ ರಿಟೈರ್‌ಮೆಂಟ್ ತೆಗೆದುಕೊಂಡು ಗೊದ್ದಿಗೆ ಬಂದರು. ಅಲ್ಲಿಯೇ ಮೊದಲ ಎರಡು ಹೆಣ್ಣು ಮಕ್ಕಳ ಮದುವೆ ಮಾಡಿದ್ದು ಮತ್ತು ಅವರಿಗೆ ಒಂದು ಗಂಡು ಮಗು ಆಗಿದ್ದು ಆಗಲೇ. ನಾಲ್ಕಾರು ವರುಷ ಅಲ್ಲಿಯೇ ಇದ್ದು ಹೆತ್ತೂರಿನಲ್ಲಿ ಸ್ವಂತ ಮನೆ ಮಾಡಿ ಉಳಿದಿದ್ದ ಅವರ ಪಿತ್ರಾರ್ಜಿತ ಸ್ವತ್ತನ್ನು ರೂಢಿಸಲು ಪ್ರಾರಂಭಿಸಿದರು. ಅವರಿಗೆ ಬರುತ್ತಿದ್ದ ಪೆನ್‌ಷನ್ ಹಳ್ಳಿಯ ಜೀವನಕ್ಕೆ ಸಾಕಾಗುತ್ತಿತ್ತು. ಉಳಿದ ಮೂರು ಹೆಣ್ಣು ಮಕ್ಕಳನ್ನು ಮದುವೆ ಮಾಡಿ, ಮಗನ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟರು. ಅವರ ತಮ್ಮ ಅನಂತಸ್ವಾಮಿ ಗೌಡರು ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದರು. ಅವರ ವಿದ್ಯಾಭ್ಯಾಸವನ್ನು ಅಣ್ಣೇಗೌಡ್ರೆ ನೋಡಿಕೊಂಡಿದ್ದರು. ಆ ಕೃತಜ್ಞತೆಗೆ, ಇವರ ಮಗ ಪರಮೇಶ್‌ನ ಹೈಸ್ಕೂಲ್ ಕಾಲೇಜಿನ ವ್ಯಾಸಂಗ ಪೊಲೀಸ್ ಇನ್ಸ್‌ಪೆಕ್ಟರ್ ಅನಂತಸ್ವಾಮಿ ಗೌಡ್ರ ಮನೆಯಲ್ಲಿ ನಡೆಯಿತು. ಅನಂತರ ಇಂಜನೀಯರಿಂಗ್ ಕಾಲೇಜಿಗೆ ಸೇರಿದ ಮೇಲೆ ಬೆಂಗಳೂರಿನಲ್ಲಿ ನನ್ನ ಜೊತೆ ಮೂರು ವರುಷ ಇದ್ದ.

ಷಷ್ಠಿ ಸುಬ್ರಹ್ಮಣ್ಯ ಜಾತ್ರೆಗೆ ಹೋಗುವುದೆಂದರೆ ಊರಿನವರಿಗೆ ಒಂದು ವಿಶೇಷ. ಕಾಲು ದಾರಿಯಲ್ಲಿ ಸುಬ್ರಹ್ಮಣ್ಯಕ್ಕೆ ದೂರ 20 ಮೈಲಿ ಒಳಗೆ ಇರಬಹುದು. ಮೂವತ್ತೆರಡು ಮೈಲಿ ಅರಕಲಗೂಡಿಗೆ ನಡೆದವನಿಗೆ ಇದೇನು ಕಷ್ಟದ ಕೆಲಸವಲ್ಲ. ನಮ್ಮ ಮನೆಯಲ್ಲಿ ಕೆಲಸಕ್ಕೆ ಇದ್ದ ಮೋಣಪ್ಪನ ಜೊತೆ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಬಂದದ್ದು ನೆನಪಿನಲ್ಲಿ ಹಸಿರಾಗಿ ನಿಂತಿದೆ. ಏಳು ಸಾಲು ಗುಡ್ಡ ದಾಟಿ, ಬೂದಿ, ಚೌಡಿ, ಕಳ್ಳರಗಂಡಿ, ಕುಳುಗುಂದ ಮಾರ್ಗವಾಗಿ ಮೊದಲು ಮೋಣಪ್ಪನ ನೆಂಟರ ಮನೆಗೆ ಮಧ್ಯಾಹ್ನ ಮೀರಿದ ಮೇಲೆ ತಲುಪಿದೆವು. ಕುಸಲಕ್ಕಿ ಅನ್ನ, ಸೌತೆಕಾಯಿ ಸಾರು, ಗದ್ದೆಯ ಮಧ್ಯದಲ್ಲಿದ್ದ ಹುಲ್ಲಿನ ಮನೆಯಲ್ಲಿ ಉಂಡದ್ದು ಮುಂದೆಂದೂ ಯಾವ ಪಂಚತಾರಾ ಹೋಟೆಲಿನಲ್ಲೂ ಸಿಗದ ಸೊಬಗಾಯಿತು. ದಾರಿ ದಣಿವು ಕಾಣಲಿಲ್ಲ. ದಟ್ಟವಾದ ಕಾಡು, ಮುಗಿಲೆತ್ತರ ಮರಗಳು, ಮಧ್ಯಾಹ್ನದ ಹೊತ್ತು ಹವೆ ತಂಡಿಯಾಗಿ ತೊಟ್ಟಿಡುತ್ತಿತ್ತು. ಮುಂದೆ ಹೋದಂತೆಲ್ಲ ಹಿಂದಿನ ದೃಶ್ಯಕ್ಕಿಂತ ರಮಣೀಯವಾಗಿದ್ದ ನೈಸರ್ಗಿಕ ನೋಟ, ಮುಂಗಾರು ಮಳೆಯ ನಂತರ ಎದ್ದ ಬುಗ್ಗೆಗಳು ಇನ್ನು ಬತ್ತಿರಲಿಲ್ಲ, ತರತರಹ ಝುರಿ, ಜಲಪಾತ, ಹಳ್ಳ ಕೊಳ್ಳಗಳನ್ನು ದಾಟುವಾಗ ತಿಳಿ ನೀರಿನಲ್ಲಿ ಕಾಣುತಿದ್ದ ಮೀನುಗಳು, ಬಗೆ ಬಗೆಯ ಹೂವು ಬಳ್ಳಿಗಳು, ಉದ್ದನೆ ಬಾಲದ ಕೆಂಜಳ್ಳು, ಬಯಲು ಸೀಮೆಯಲ್ಲಿ ಕಾಣದ ಬಗೆ ಬಗೆಯ ಪಕ್ಷಿಗಳು ಇವೆಲ್ಲವೂ, ಮನೋಹರ ಉಲ್ಲಾಸ ತಂದಿದ್ದವು. ಘಟ್ಟದ ಮೇಲಿಂದ 2000 ಅಡಿ ಇಳಿದು ಕಾಡು ಮೇಡುಗಳನ್ನು ದಾಟಿದ ದಣಿವಿನ ಪರಿವೇ ಇಲ್ಲ. ಐವತ್ತು ವರುಷಗಳ ನಂತರ ಈ ದಾರಿಯಲ್ಲಿ ಹೋದಾಗ ಕಂಡಿದ್ದು ಬೋಳಾದ ಗುಡ್ಡಗಳು, ರಸ್ತೆ ಅಗಲ ಮಾಡಲು ಕೊರೆದಿದ್ದ ಇಕ್ಕೆಲದಲ್ಲಿ ಮರಗಳು ಇಲ್ಲದ್ದು, ಯಾವಾಗಲೂ ಸಂಚರಿಸುವ ವಾಹನಗಳು, ದಾರಿ ಉದ್ದಕ್ಕೂ ಅಲ್ಲಲ್ಲಿ ಕಟ್ಟಿರುವ ಮನೆಗಳ ಸೌಕರ್ಯಕ್ಕೆ ಅಲ್ಲಿಯ ಸಂಪನ್ಮೂಲಗಳ ನಾಶ, ನೋಡಿದರೆ ಅದೆ ಇದೋ ಎಂಬ ಸಂಶಯ ಬರುತ್ತದೆ. ನಮ್ಮ ಮಕ್ಕಳಿಗೆ ಹೀಗಿತ್ತೆಂದು ಹೇಳಿದರೆ ನಂಬುವುದಿಲ್ಲ. ಹಿಮಾಲಯ ಪರ್ವತಗಳ ಶ್ರೇಣಿಯಲ್ಲಿಯೂ ಕೂಡ ಅಂತಹ ರಮಣೀಯವಾದ ದೃಶ್ಯ ಕಂಡಿರಲಿಲ್ಲ.

* * * *

ಅರಕಲಗೂಡು ಬಿಟ್ಟ ಮೇಲೆ ಅಣ್ಣಂದಿರು ಇನ್ನೊಬ್ಬ ಮನೆಯ ಕೆಲಸಕ್ಕೆ ಸಿಕ್ಕಿದ ಎಂದು ತಿಳಿದಿದ್ದರು. ಆದರೆ ತಂದೆಯವರಿಗೆ ನನ್ನನ್ನು ಓದಲು ಕಳುಹಿಸಬೇಕೆಂಬ ಚಪಲ. ನನಗೂ ಏತಕ್ಕೆ ಓದುತಿದ್ದೇನೆಂದು ತಿಳಿಯದು. ಊರಿಗೆ ಹತ್ತಿರವಿದ್ದ ಮಿಡ್ಲ್‌ಸ್ಕೂಲ್ ಹತ್ತು ಕಿ.ಮೀ. ದೂರದ ಹೆತ್ತೂರಿನಲ್ಲಿತ್ತು. ಆಗ ಯಾರೂ ಅಲ್ಲಿಗೆ ನಡೆದುಕೊಂಡು ಹೋಗಿ ಬಂದು ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ. ಹೆತ್ತೂರಿನ ನಮ್ಮ ಅಕ್ಕನ ಮನೆಯಲ್ಲಿ ಆಗಲೆ ನನ್ನ ತಮ್ಮ ಒಂದು ವರುಷದಿಂದ ಓದುತಿದ್ದ. ಮತ್ತೊಬ್ಬನನ್ನು ಅಲ್ಲಿಗೆ ಕಳುಹಿಸುವುದೆಂದರೆ ತಂದೆಗೆ ಮುಜುಗರ. ಆದ್ದರಿಂದ ನಮ್ಮ ಚಿಕ್ಕಪ್ಪನ ಮಗಳ ಮನೆಗೆ ನನ್ನನ್ನು ಕಳುಹಿಸಿಕೊಟ್ಟರು. ಅವರೇನು ಅಷ್ಟು ಅನುಕೂಲವಾಗಿರಲಿಲ್ಲ. ಒಂದು ಒಡ ಮನೆಯಲ್ಲಿ ಚಿಕ್ಕ ಸಂಸಾರ. ನಮ್ಮ ಮನೆಯಿಂದ ಅವರಿಗೇನು ಸಹಾಯ ಮಾಡುತಿದ್ದ ಹಾಗಿರಲಿಲ್ಲ. ಎಷ್ಟೇ ಕಷ್ಟವಾದರೂ ಓದುವುದಕ್ಕೆಂದು ಹುಡುಗರನ್ನು ಕಳುಹಿಸಿದರೆ ಬೇಡವೆಂದು ಯಾರೂ ಹಿಂದಕ್ಕೆ ಕಳುಹಿ ಸುತ್ತಿರಲಿಲ್ಲ. ಹೆತ್ತೂರಿನವರಿಗೆ ಅದೊಂದು ದೊಡ್ಡ ಗುಣ. ಆ ಕಾಲದಲ್ಲಿ ಹೆತ್ತೂರು ಹೋಬಳಿ

ಎಸಳೂರು ಹೋಬಳಿಯಿಂದ ನನ್ನಂತೆ ಅನೇಕ ಹುಡುಗರು ಹೆತ್ತೂರಿನಲ್ಲಿ ಮಿಡ್ಲ್‌ಸ್ಕೂಲ್ ಪಾಸ್ ಮಾಡಿ ಮುಂದುವರೆದವರಿದ್ದಾರೆ. ಇಲ್ಲಿ ಓದಿದ ವೈ. ಕೆ. ಪುಟ್ಟಸ್ವಾಮಿ ಗೌಡರು, ಕರ್ನಾಟಕ ಸರ್ಕಾರದ ಸೆಕ್ರೆಟರಿಯಾಗಿ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನ್ ಛೇರ್‌ಮೆನ್ ಆಗಿ ನಿವೃತ್ತಿಯಾದವರು. ನಾನು ಕೃ.ವಿ.ವಿ. ಬೆಂಗಳೂರು ಇದರ ಕುಲಪತಿಯಾಗಿ ನಿವೃತ್ತಿಯಾದವನು.

ನಾನು ಹೆತ್ತೂರಿಗೆ ಹೋಗಿ ಒಂದು ವರ್ಷದನಂತರ ನನ್ನ ತಮ್ಮ ಓದುವುದನ್ನು ಬಿಟ್ಟ. ನಾನು ಎಂಟನೆಯ ಕ್ಲಾಸಿನಲ್ಲಿದ್ದಾಗ ಅಕ್ಕನ ಮನೆಗೆ ಹೋದೆ. ನಮ್ಮ ಭಾವನ ತಂಗಿಯನ್ನೇ ನನ್ನ ದೊಡ್ಡ ಅಣ್ಣನಿಗೆ ಕೊಟ್ಟು ಮದುವೆಯಾಗಿತ್ತು. ನಮ್ಮ ಭಾವನವರು, ಇಬ್ಬರು ಹಿರಿಯಣ್ಣಂದಿರು ಒಟ್ಟಿಗೆ ಇದ್ದರು. ಹಿರಿಯವರಾದ ಕರೇಗೌಡ್ರು ಜೀವನದಲ್ಲಿ ನೋವು ನಲಿವು ಅನುಭವಿಸಿ ನುರಿತವರಾಗಿದ್ದರು. ಹೆತ್ತೂರು ಸಾವಿರಕ್ಕೂ ಹೆಚ್ಚು ಜನರಿದ್ದ ದೊಡ್ಡ ಊರು. ಎಲ್ಲರೂ ಅಣ್ಣ ತಮ್ಮಂದಿರು. ಕರೇಗೌಡ್ರಿಗೆ ಊರಿನಲ್ಲಿ ಹೆಚ್ಚು ಮರ್ಯಾದೆ ಇರುತಿತ್ತು. ತಕ್ಕ ಮಟ್ಟಿಗೆ ಆಸ್ತಿವಂತರು. ಅವರ ಪತ್ನಿ ತೀರಿಕೊಂಡು ಹಲವು ವರುಷಗಳಾಗಿದ್ದವು. ಇಬ್ಬರು ಗಂಡು ಮಕ್ಕಳು. ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಮಧ್ಯದವರಿಗೆ ಒಂದು ಹೆಣ್ಣುಮಗಳು ನಮ್ಮ ಅಕ್ಕನಿಗೆ ಆಗ ಎರಡು ಮಕ್ಕಳು. ನನ್ನ ವಯಸ್ಸಿನ ಹುಡುಗರು ಮಾಡಬೇಕಾದ ಕೆಲಸವನ್ನು ಅಲ್ಲಿಯೂ ಮಾಡಲೇ ಬೇಕಿತ್ತು. ಸೌದೆ ತರುವುದು, ದನ ಕಾಯುವುದು, ಬಿಡುವಾದಾಗ ತೋಟಕ್ಕೆ ಹೋಗುವುದು, ಏಲಕ್ಕಿ ಹಣ್ಣುಕುಯ್ಯುವುದು, ನೀರು ಸೇದುವುದು ಮುಂತಾದವು. ಇಲ್ಲಿಯೂ ಸಹಾ ಆಟಕ್ಕೆ ಅವಕಾಶವಿರಲಿಲ್ಲ. ಬೇರೆ ಮಕ್ಕಳೂ ಕೂಡ ಯಾವ ಆಟಕ್ಕೂ ಹೋಗುತ್ತಿರಲಿಲ್ಲ.

ಹೆತ್ತೂರು ಮಿಡ್ಲ್ ಸ್ಕೂಲಿನ ಹೆಡ್ ಮಾಸ್ಟರು ಬಾಲಸುಬ್ರಹ್ಮಣ್ಯ ಮಾಸ್ಟರು ಆ ಊರಿನವರೇ. ಇವರು ನಮ್ಮ ಭಾವಂದಿರಿಗೆ ಒಂದನೇ ಅಣ್ಣತಮ್ಮಂದಿರು. ಅವರ ಇಬ್ಬರು ಪುತ್ರರು ನಮ್ಮ ಜೊತೆ ಎಂಟನೇ ಕ್ಲಾಸಿನಲ್ಲಿ ಓದುತಿದ್ದರು. ಒಟ್ಟು ನಾವು ಎಂಟು ಜನ ಮಾತ್ರ ಎಂಟನೇ ಕ್ಲಾಸಿನಲ್ಲಿ ಇದ್ದೆವು. ಆ ಊರಿನವರೆಲ್ಲರ ಕಣ್ಣು ಎಂಟನೇ ತರಗತಿಯ ವಿದ್ಯಾರ್ಥಿಗಳ ಮೇಲೆ. ಏಕೆಂದರೆ ಅದರಲ್ಲಿ ಎಷ್ಟು ಜನ ಪಾಸಾಗುತ್ತಾರೋ ಅದರ ಮೇಲೆ ಆ ಸ್ಕೂಲಿನ ಶ್ರೇಯಸ್ಸು ನಿರಿತಿತ್ತು. ಬಾಲಸುಬ್ರಹ್ಮಣ್ಯ ಮಾಸ್ಟರ್‌ನ್ನು ಕಂಡರೆ ಎಲ್ಲ ಹುಡುಗರಿಗೆ ಹೆದರಿಕೆ. ಅವರ ಹತ್ತಿರ ಹೋಗಲು ಅಂಜುತ್ತಿದ್ದರು. ಮಡಿ ಬಟ್ಟೆ, ಕಚ್ಚೆ ಪಂಚೆ, ಟೋಪಿ ಧರಿಸುತ್ತಿದ್ದರು. ಅವರಿಗೆ ಆ ಸ್ಕೂಲಿನ ಯಾವ ತರಗತಿಯಲ್ಲಿ ಯಾರನ್ನಾದರೂ ಕರೆದು ಶಿಕ್ಷಿಸುವ ಹಕ್ಕಿತ್ತು. ಆ ಊರಿನಲ್ಲಿ ದನ ಬಾರಿ ಕಾಯುವ ಪದ್ಧತಿ ಇತ್ತು. ಅಂದರೆ ಆರೇಳು ಮನೆಯವರು ಒಂದೊಂದು ದಿವಸ ಅಥವಾ ವಾರಕ್ಕೊಂದು ದಿನ ಬಾರಿ ಕಾಯುವವರ ಮನೆಯ ದನವೆಲ್ಲವನ್ನು ಮೇಯಿಸಬೇಕಿತ್ತು. ನನ್ನನ್ನು ಹೆಚ್ಚಾಗಿ ಈ ಕೆಲಸಕ್ಕೆ ಕಳುಹಿಸದಿದ್ದರೂ ಒಮ್ಮೆ ಕ್ಲಾಸಿಗೆ ಚಕ್ಕರ್ ಹೊಡೆದು ದನ ಕಾಯುವ ಪರಿಸ್ಥಿತಿ ಬಂತು. ಮರುದಿನ ಹೆಡ್ ಮಾಸ್ಟರ್ ಕ್ಲಾಸಿಗೆ ಬಂದು ನೆನ್ನೆ ಯಾರು ಯಾರು ಕ್ಲಾಸಿಗೆ ಬಂದಿರಲಿಲ್ಲ, ಏಕೆ? ಎಂದು ಪ್ರಶ್ನಿಸಿ, ನಾನು ಬಂದಿರಲಿಲ್ಲವೆಂದು ತಿಳಿದಾಗ ಬೆಂಚು ಮೇಲೆ ನಿಲ್ಲು ಎಂದರು. ಮತ್ತೊಬ್ಬ ಹುಡುಗಿ ಐಗೂರಿನಿಂದ ಬರುತ್ತಿದ್ದವಳು ಅಂದು ಬಂದಿರಲಿಲ್ಲವಾದ್ದರಿಂದ ನನಗೊಬ್ಬನಿಗೆ ಏಕೆ ಶಿಕ್ಷೆ ಅವಳಿಗೂ ಏಕಿಲ್ಲ ಎಂದು ಕೇಳಿದೆ. ಹೆಡ್ ಮಾಸ್ಟರ್‌ಗೆ ಅದೆಲ್ಲಿಲ್ಲದ ಕೋಪ ಬಂತೋ! ನೀನ್ಯಾರು ಅದನ್ನು ಹೇಳುವುದಕ್ಕೆ ಎಂದು

ಹೇಳಿ ಮಂಡಿಯ ಕೆಳಗೆ ರಪ್ ರಪ್ ಅಂತ ಬೆತ್ತದ ಚಡಿಯಿಂದ ಬಾರಿಸಿದರು. ನನ್ನ ವೇದನೆಯನ್ನು ನೋಡಲಾರದೆ ನಮ್ಮ ಕ್ಲಾಸ್ ಟೀಚರ್ ಗೊರೂರು ಐಯ್ಯಂಗಾರ್ ಬಂದು ಪಕ್ಕಕ್ಕೆ ಕರೆದುಕೊಂಡು ಹೋಗಿ ಸಂತೈಸಿದರು. ಅವರ ಕಣ್ಣಲ್ಲೂ ನೀರೂರಿತು. ನನಗೆ ನೆನಪಿರುವುದು ಶಾಲೆಯಲ್ಲಿ ಹೊಡೆಸಿಕೊಂಡಿದ್ದು ಅದೇ ಮೊದಲು ಮತ್ತು ಕೊನೇ. ನನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಹೈಸ್ಕೂಲಿಗೆ ಕಳುಹಿಸಲು ಪ್ರೇರೇಪಿಸಿದವರು ಬಾಲಸುಬ್ರಹ್ಮಣ್ಯ ಮಾಸ್ಟರೇ ಎಂದು ಹೇಳಬೇಕು. ನಮ್ಮ ತಂದೆ ತೀರಿ ಹೋಗಿ ಆಗಲೇ ಒಂದು ವರ್ಷವಾಗಿತ್ತು. ನನ್ನ ದೊಡ್ಡಣ್ಣ ಮತ್ತು ಅವರ ಹಿರಿಯ ಭಾವ ಕರೀಗೌಡ್ರು ಬಾಲಸುಬ್ರಹ್ಮಣ್ಯ ಮಾಸ್ಟರನ್ನು ಹೆಚ್ಚಿಗೆ ಗೌರವಿಸುತ್ತಿದ್ದರು. ಅವರು ಹೇಳಿದ್ದಕ್ಕೆ ಇಲ್ಲ ಎಂದು ಹೇಳುತ್ತಿರಲಿಲ್ಲ. ಆ ವರ್ಷ ಎಂಟು ಜನಕ್ಕೆ ಆರು ಜನ ಎಂಟನೆಯ ತರಗತಿಯಲ್ಲಿ ಪಾಸಾಗಿದ್ದೆವು. ಒಬ್ಬಳನ್ನು ಬಿಟ್ಟು ಉಳಿದ ಐದು ಮಂದಿಯೂ ಹೈಸ್ಕೂಲ್ ಸೇರಿದೆವು. ನಮ್ಮ ಕ್ಲಾಸಿನ ಒಬ್ಬಳೆ ಹುಡುಗಿ ಪುಟ್ಟಗೌರಮ್ಮನಿಗೆ ಹುಡುಗಿಯರ ಹಾಸ್ಟೆಲ್ ವ್ಯವಸ್ಥೆ ಇಲ್ಲದ್ದರಿಂದ ಮುಂದೆ ಓದಲಾಗಲಿಲ್ಲ. ಆಕೆಗೆ ಎಲ್ಲಿಯವರೆಗಾದರೂ ಓದುವ ಆಸೆಯಿತ್ತು. ಮನೆಯವರಿಗೆ ಕಳುಹಿಸುವ ಶಕ್ತಿಯೂ ಇತ್ತು.

ಪರೀಕ್ಷೆಗೆ ಒಂದೆರೆಡು ತಿಂಗಳ ಮುಂಚಿತವಾಗಿಯೇ ನಮ್ಮ ಹೆಚ್ಚಿನ ಕಾಲವನ್ನು ನಮ್ಮ ಕ್ಲಾಸ್ ಟೀಚರ್ ಐಯ್ಯಂಗಾರ್‌ರ ಮನೆಯಲ್ಲಿ ಕಳೆಯುತ್ತಿದ್ದೆವು. ಅವರೊಬ್ಬರೇ ಇದ್ದರು. ಬಿಡುವಿದ್ದಾಗಲೆಲ್ಲ ಪಾಠ ಹೇಳಿ ಕೊಡುತಿದ್ದ ಅವರಿಗೆ ಟ್ಯೂಶನ್ ಫೀಸ್ ಕೊಟ್ಟಿದ್ದು ನೆನಪಿಲ್ಲ. ಆಗಾಗ ನಾವೆಲ್ಲಾ ಅಂದರೆ ಇದ್ದವರೆ ಆರು ಹುಡುಗರು ಒಟ್ಟಿಗೆ ಹೋಗಿ ಅವರಿವರ ಮನೆಯ ಹಲಸಿನ ಕಾಯಿ ಕೀಳುವುದು, ಹಕ್ಕಿ ಬೇಟೆ, ಮುಂತಾದುವನ್ನು ಮಾಡುತಿದ್ದೆವು. ನಮ್ಮ ಟೀಚರ್ ಮನೆ ಮುಂದಿನ ಮನೆಯಲ್ಲಿ ನಾಲ್ಕೈದು ಹಲಸಿನ ಮರಗಳಿದ್ದವು. ತುಂಬ ಕಾಯಿ ಬಿಡುತಿದ್ದವು. ಆ ಮನೆಯವರು ಯಾರಿಗೂ ಕೊಡುತ್ತಿರಲಿಲ್ಲ. ನಮ್ಮಲ್ಲಿ ಹೊರಟಿ ಮನೆ ಸುಬ್ಬ (ಕೊತ್ತಿ) ಮರ ಹತ್ತುವುದರಲ್ಲಿ ನಿಪುಣ, ಎಂಥಾ ಮರವನ್ನಾದರೂ ಹತ್ತಬಲ್ಲ. ಸಣ್ಣಗಿದ್ದುದರಿಂದ ಅಡ್ಡ ಕೊನೆಯಲ್ಲಿ ನಿರಾಯಾಸವಾಗಿ ನಡೆದು ತುದಿಯಲ್ಲಿದ್ದುದನ್ನು ಕೂಡ ಕೆಡವಬಲ್ಲ. ರಾತ್ರಿ ಎಲ್ಲರೂ ಮಲಗಿದ ಮೇಲೆ ಮುಂದಿನ ಮನೆ ಹಲಸಿನ ಹಣ್ಣನ್ನು ಕೆಳಕ್ಕೆ ಬೀಳಿಸದೆ ಒಬ್ಬರಿಂದ ಒಬ್ಬರಿಗೆ ಕೊಟ್ಟು ಕೆಳಗಿಟ್ಟು ನಂತರ ಹತ್ತಿರದಲ್ಲಿದ್ದ ಕಾಡಿನ ಮಧ್ಯೆ ಇಟ್ಟು ಬೆಳಕಾದಾಗ ದೂರ ಹೋಗಿ ತಿನ್ನುತ್ತಿದ್ದೆವು. ಆ ಮನೆಯವರು ಬೆಳಗ್ಗೆ ನಮ್ಮ ಮಾಸ್ಟರ ಮನೆಯ ಹತ್ತಿರ ಬಂದು ನಿಮಗೂ ಕೊಡದೆ ಉಳಿಸಿಕೊಂಡಿದ್ದ ಹಲಸಿನ ಹಣ್ಣೆಲ್ಲವನ್ನೂ ರಾತ್ರಿ ಯಾರೋ ತೆಗೆದುಕೊಂಡು ಹೋಗಿದ್ದಾರೆ. ಅವರ ಮನೆ ಹಾಳಾಗ, ಅವರಿಗೆ ಹಾವು ಕಡಿಯ, ಎಂದೆಲ್ಲಾ ಶಪಿಸುತ್ತಿದ್ದರು. ಅದಕ್ಕೆ ನಾವು ಅಯ್ಯೋ ಪಾಪ, ಅವರೇನಾದರೂ ಸಿಕ್ಕಿದರೆ ಕೈಕಾಲು ಮುರಿಯುತ್ತೇವೆ ಎಂದು ಹೇಳಿ ಸಮಾಧಾನ ಮಾಡುತ್ತಿದ್ದೆವು. ಕೊನೆಗೂ ನಮ್ಮ ಕುತಂತ್ರ ಅವರಿಗೆ ಗೊತ್ತಾಗಲೇ ಇಲ್ಲ. ಮತ್ತೊಬ್ಬರ ಮನೆಯಲ್ಲೂ ಕೂಡ (ಚಡ್ಡಿ ಮನೆ) ಒಳ್ಳೊಳ್ಳೆ ಹಲಸಿನ ಹಣ್ಣು ಇರುತ್ತಿದ್ದವು. ಯಾರಿಗೂ ಕೊಡುತ್ತಿರಲಿಲ್ಲ. ಮಧ್ಯಾಹ್ನದ ಹೊತ್ತು ಎಲ್ಲರೂ ಕೆಲಸಕ್ಕೆ ಹೋಗಿದ್ದಾಗ ಸುಬ್ಬ ಮರ ಹತ್ತಿ ಕೆಡುವುತ್ತಿದ್ದ. ಅದು ಬೀಳುವ ಸಮಯದಲ್ಲಿ ಕೆಳಗಿರುವವರೆಲ್ಲ ಜೋರಾಗಿ ಕಿರುಚುತ್ತಿದ್ದೆವು. ಮಾಲಿಕರ ಮನೆಯ ಮುದುಕಿಗೆ ಹಲಸಿನ ಕಾಯಿ ಬಿದ್ದ ಶಬ್ದ ಕೇಳುತ್ತಿರಲಿಲ್ಲ. ಆ ಸಮಯದಲ್ಲಿ ಒಂದಿಬ್ಬರು ಕುಡಿಯಲು ನೀರು ಕೇಳಲು ಹೋಗಿ ಮುದುಕಿಯ ಹತ್ತಿರ ಮಾತನಾಡುತ್ತಾ ಇರುತ್ತಿದ್ದೆವು. ಮರುದಿನ ಆ ಮುದುಕಿ ನಮ್ಮಲ್ಲಿ ದೈನ್ಯದಿಂದ ನಿಮಗೂ ಕೊಡದೆ

ಇದ್ದ ಹಲಸಿನ ಹಣ್ಣೆಲ್ಲಾ ಯಾರೋ ಮನೆಹಾಳರು ಹಾಲ ಹಗಲೇ ಕೆಡವಿಕೊಂಡು ಹೋಗಿದ್ದಾರೆಂದು ಬಾಯಿಗೆ ಬಂದಂತ್ತೆಲ್ಲಾ ಬಯ್ಯುತ್ತಿತ್ತು.

ಒಮ್ಮೆ ಸಂಜೆ ದನ ಕೂಡುವ ಹೊತ್ತು, ಅಂದು ನಾನು ಕೂಡ ದನ ಕೂಡಲು ಹೋಗಿದ್ದೆ. ಹುಲ್ಲು ಮೆದೆ ಕೊಟ್ಟಿಗೆ ಕಣ ಇರುವ ಪಕ್ಕದ ಪೊದೆಗೆ ಯಾರೋ ಬೆಂಕಿ ಹಚ್ಚಿದ್ದರು. ಆ ಸಮಯದಲ್ಲಿ ನಾನು ಅಲ್ಲಿದ್ದೆ. ದಾರಿಯಲ್ಲಿ ಹೋಗುತ್ತಿದ್ದ ಜನ ಬೆಂಕಿ ನೋಡಿ ಎಲ್ಲರೂ ಸೇರಿ ಪ್ರಯಾಸದಿಂದ ಬೆಂಕಿ ಆರಿಸಿದರು. ಯಾರೋ ಬಂದು ಕರಿಯಪ್ಪ ಭಾವನಿಗೆ ನಾವಿಲ್ಲದಿದ್ದರೆ ಇವತ್ತು, ನಿಮ್ಮ ಹುಲ್ಲು ಮುಂಡ ಕೊಟ್ಟಿಗೆ ಎಲ್ಲವೂ ಭಸ್ಮವಾಗುತ್ತಿತ್ತು, ನಿಮ್ಮ ದನ ಕೂಡಲು ಹೋಗಿದ್ದ ಹುಡುಗರು ಈ ಕೆಲಸ ಮಾಡಿರಬಹುದೆಂದು ಹೇಳಿದರು. ಕರೇಗೌಡ್ರಿಗೆ ಎಲ್ಲಿಲ್ಲದ ಸಿಟ್ಟು ನೆತ್ತಿಗೇರಿತು. ಅನಾಹುತವಾಗಬಹುದಿದ್ದಂತಹ ದೃಶ್ಯ ಅವರ ಮೈಗೆ ಬೆಂಕಿ ಹಚ್ಚಿದಂತಾಗಿತ್ತು. ನನ್ನನ್ನು ಕರೆದು ಕಪಾಳಕ್ಕೆ ಪಟೀರಂತ ಹೊಡೆದು, ನಿನ್ನನ್ನು ಓದಲು ಕಳುಹಿಸಿರುವುದು ಅವರಿವರ ಮನೆಗೆ ಬೆಂಕಿ ಹಚ್ಚುವುದಕ್ಕಾ ಎಂದು ಗದರಿಸಿದರು. ಅವರು ಯಾರಿಗೂ ಯಾವತ್ತೂ ಹೊಡೆದಿರಲಿಲ್ಲ. ಗಟ್ಟಿಯಾಗಿ ಬೈದದ್ದು ಇಲ್ಲ. ಅಂದೇಕೆ ಅವರು ಸರಿಯಾಗಿ ವಿಷಯ ತಿಳಿಯದೆ ಕೈಮಾಡಿದರು ಎಂದು ಅಲ್ಲಿದ್ದವರಿಗೆ ಅನಿಸಿರಬೇಕು. ಕೊನೆಗೂ ಯಾರು ಬೆಂಕಿ ಹಾಕಿದವರು ಎಂದು ತಿಳಿಯದಿದ್ದರೂ ನಾನಂತೂ ಆ ಕೆಲಸವನ್ನು ಮಾಡಿಲ್ಲವೆಂದು ಅವರ ಮನಸ್ಸಿಗೆ ಅರಿವಾಗಿರಬೇಕು. ಮುಂದೆ ಅವರು ನನ್ನ ಮೇಲೆ ತುಂಬಾ ಅಭಿಮಾನವಿಟ್ಟಿದ್ದರು. ನಾನು ಬಿ.ಎಸ್‌ಸಿ. (ಅಗ್ರಿ.) ಮಾಡಿ ಕೆಲವು ತಿಂಗಳು ಕೆಲಸವಿಲ್ಲದೆ ಮನೆಯಲ್ಲಿದ್ದಾಗ ನನ್ನನ್ನು ಕರೆದು ನೂರು ರೂಪಾಯಿ ಕೈಗಿತ್ತು, ಬೆಂಗಳೂರಿಗೆ ಹೋಗಿ ಕೆಲಸಕ್ಕೆ ಪ್ರಯತ್ನಪಡು ಎಂದು ಹೇಳಿ ಕಳುಹಿಸಿದರು.

ನಾನು ಹೆತ್ತೂರಿನಲ್ಲಿ ಓದುತ್ತಿದ್ದಾಗ ತಂದೆಯವರು ತೀರಿಕೊಂಡರು (1947). ಅಂದು ಯುಗಾದಿ ಹಬ್ಬ, ಸುಮಾರು ಹತ್ತು ಹನ್ನೊಂದು ಗಂಟೆಗೆ ಪ್ರಾಣ ಹೋಗಿದೆ. ಅಂದೇ ಅಂತ್ಯಕ್ರಿಯೆ ಮಾಡಬೇಕೆಂದು ಊರಿನವರು ನಿರ್ಧರಿಸಿದ್ದರಿಂದ ಹತ್ತಿರದ ನೆಂಟರಿಗೆ ಸಾವಿಗೆ ಹೇಳಲು ಜನ ಕಳುಹಿಸಿದ್ದರು. ಆಗಿನ ಕಾಲದಲ್ಲಿ ಊರಿನ ಹರಿಜನರೇ ಸಾವಿಗೆ ಹೇಳುವ ಕೆಲಸ ಮಾಡುತ್ತಿದ್ದರು. ಯಾರ ಮನೆಗೆ ಅವನು ಹೇಳುವನೋ ಆ ಮನೆಯವರು ಒಂದು ಕೇರುವ ಮರದ ತುಂಬ ಭತ್ತವನ್ನು ಅವನಿಗೆ ಕೊಡುತ್ತಿದ್ದರು. ಹೆತ್ತೂರಿಗೆ ವರ್ತಮಾನ ಮುಟ್ಟುವಾಗ ಮಧ್ಯಾಹ್ನ ಮೂರರ ಸಮಯ. ನಾನು ಮನೆಯಲ್ಲಿರಲಿಲ್ಲ. ನನಗಾಗಿ ಯಾರೂ ಕಾಯಲಿಲ್ಲ. ಎಲ್ಲರೂ ಹೋಗಿದ್ದರು. ಸಂಜೆ ದನ ಕೂಡವ ಹೊತ್ತು, ಮನೆಗೆ ಬಂದ ತಕ್ಷಣ ಹೀಗೆಂದು ಯಾರೋ ಹೇಳಿದರು. ಕ್ಷಣ ಮಾತ್ರ ಅಲ್ಲಿ ನಿಲ್ಲದೆ ಓಡಲು ಪ್ರಾರಂಭಿಸಿದವನು ನಮ್ಮ ಊರಿನ ಸ್ಮಶಾನದಲ್ಲೆ ನಿಂತಿದ್ದು. ದಾರಿಯಲ್ಲಿ ಯಾರು ಯಾರೋ ನಿಲ್ಲಿಸಲು ಪ್ರಯತ್ನ ಪಟ್ಟರೂ ಸಿಕ್ಕದೆ ಓಡಿದೆ. ಸಂಜೆ ಕತ್ತಲಾಗುವ ಸಮಯ. ಚಿತೆಗೆ ಏರಿಸಲು ಆಗ ತಾನೆ ಶವವನ್ನು ಎತ್ತುತ್ತಿದ್ದರು. ಮುಖ ನೋಡಲು ಸಿಕ್ಕಿತು. ಮೂರು ಗಂಟೆ ಮುಂಚಿತವಾಗಿ ಹೊರಟಿದ್ದವರೂ ಕೂಡ ಆಗತಾನೆ ಸೇರಿದ್ದರು. ಎಲ್ಲರಿಗೂ ಇವನು ಹೇಗೆ ಬಂದ ಎಂದು ಆಶ್ಚರ್ಯ!

ಹೆತ್ತೂರಿನಲ್ಲಿ ಓದುತ್ತಿದ್ದಾಗ ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಯನ್ನು ಓಪನ್ ಮಾಡಲು ಮೈಸೂರು ಮಹಾರಾಜರು ಬರುತ್ತಾರೆಂದು ಬಾಲಸುಬ್ರಹ್ಮಣ್ಯ ಹೆಡ್‌ಮಾಸ್ಟರ್

ನಮ್ಮನ್ನು ಸಕಲೇಶಪುರಕ್ಕೆ ನಡೆಸಿಕೊಂಡು ಹೋಗಿದ್ದರು. ಅದೇ ಮೊದಲು ನಾನು ಎಲೆಕ್ಟ್ರಿಕ್ ದೀಪ ನೋಡಿದ್ದು. ಸೇತುವೆಯಿಂದ ಕ್ರಾಫರ್ಡ್ ಆಸ್ಪತ್ರೆಯವರೆಗೆ ತಳಿರು ತೋರಣ, ಚಪ್ಪರ, ವಿದ್ಯುತ್ ದೀಪಗಳಿಂದ ಅಲಂಕರಿಸಿದ ನೋಟ ಯಾವುದೋ ಬೇರೆ ಪ್ರಪಂಚಕ್ಕೆ ಬಂದಂತ್ತಿತ್ತು. ಅನಂತರ ಸಕಲೇಶಪುರಕ್ಕೆ ಹೋಗಿದ್ದು ಎಂಟನೆ ತರಗತಿ ಪರೀಕ್ಷೆಗೆ.

ಅಂದಿನ ಮಲೆನಾಡು ಕೊಂಪೆಗಳಿಗೆ ಸ್ವಾತಂತ್ರ್ಯ ಚಳುವಳಿ ಕಾವು ತಟ್ಟದಿದ್ದರೂ, ಹೆತ್ತೂರಿನಲ್ಲಿ ಹೆಚ್.ಎಸ್. ಮಲ್ಲೇಗೌಡರ ನೇತೃತ್ವದಲ್ಲಿ ಕೊಂಚ ಚುರುಕಾಗಿತ್ತೆಂದು ಹೇಳಬಹುದು. ಇದಕ್ಕೆ ಪೂರ್ವಭಾವಿಯಾಗಿ ಪ್ರಚೋದನೆ ನೀಡಿದ್ದು, ಹಾಸನ ಜಿಲ್ಲೆಯ ಜೈಲುಗಳಲ್ಲಿ ಜಾಗವಿಲ್ಲದೆ, ಸ್ವಾತಂತ್ರ್ಯ ಹೋರಾಟಗಾರರನ್ನು ಲಾರಿಯಲ್ಲಿ ತುಂಬಿಸಿ ಬಿಸಲೆ ಘಾಟಿಯ ಕೆಳಗೆ ಬಿಟ್ಟುಹೋಗುತ್ತಿದ್ದದ್ದು. ಮೂವತ್ತು ನಲವತ್ತು ಮೈಲಿ ಘಟ್ಟ ಹತ್ತಿ ಹಸಿವು ಬಾಯಾರಿಕೆಯಿಂದ ಬಳಲಿ ಬಂದವರಿಗೆ ದಾರಿಅಡೆ ಸಿಕ್ಕುತ್ತಿದ್ದ ಊರೆಂದರೆ ಹೆತ್ತೂರು. ಸ್ವಾತಂತ್ರ್ಯ ಹೋರಾಟಗಾರರನ್ನು ಸಂತೈಸಿ ಸಕಲೇಶಪುರ ಮುಟ್ಟಲು ಸಹಕರಿಸುತ್ತಿದ್ದವರು ಹೆತ್ತೂರಿನವರು. ಇದರಿಂದ ಎಚ್ಚೆತ್ತ ಜನ ತಾವೂ ಚಳುವಳಿಯಲ್ಲಿ ಭಾಗಿಗಳಾದರು. ಹೆತ್ತೂರಿನ ಮಿಡ್ಲ್‌ಸ್ಕೂಲ್ ವಿದ್ಯಾರ್ಥಿಗಳು ಎಂಟನೆ ತರಗತಿ ವಿದ್ಯಾರ್ಥಿಗಳ ಮುಂದಾಳುತನದಲ್ಲಿ ಬಾವುಟ ಹಿಡಿದು ಪ್ರಭಾತ್‌ಬೇರಿ ಹೊರಡುತ್ತಿದ್ದರು. ಆಗ ನಾನು ಎಂಟನೆಯ ತರಗತಿಯಲ್ಲಿದ್ದೆ. ನಾವು ಜೋರಾಗಿ ಹೇಳಿಕೊಂಡು ಅರಚುತ್ತಿದ್ದವುಗಳಲ್ಲಿ 'ಏನೇ ಬರಲಿ ಒಗ್ಗಟ್ಟಿರಲಿ', 'ತಂಬುಚಟ್ಟಿ ಚಟ್ಟಕಟ್ಟಿ' ಅನ್ನುವುದು ಇಂದಿಗೂ ನೆನಪಿನಲ್ಲಿದೆ. ಮೊದಲ ಸ್ವಾತಂತ್ರ್ಯ ದಿನಾಚರಣೆಯ ದಿನ ಮಿಡ್ಲ್‌ಸ್ಕೂಲ್ ಕೇಂದ್ರಬಿಂದುವಾಗಿತ್ತು. ಅಂದು ಹೆತ್ತೂರಿನಲ್ಲಿ ಸುಗ್ಗಿಯ ಸಂಭ್ರಮ. ಅದೇ ಮೊದಲು ಸಾಕಷ್ಟು ಲಾಡು ತಿಂದದ್ದು.

* * * *

ಜೂನ್ ತಿಂಗಳ ಕೊನೆಯ ಭಾಗ, ಆರಿದ್ರಮಳೆ ಆರ್ಭಟಿಸಿ ಒಂದೇ ಸಮನೆ ಸುರಿಯುತ್ತಿತ್ತು. ಹಳ್ಳ ಕೊಳ್ಳಗಳೆಲ್ಲ ತುಂಬಿ ಹರಿಯುತ್ತಿದ್ದವು. ಗದ್ದೆ ನಾಟಿಯ ಕೆಲಸ ಭರದಿಂದ ಸಾಗುತ್ತಿತ್ತು. ಎಲ್ಲರಂತೆ ಮೈಕೈ ಕೆಸರುಮಾಡಿಕೊಂಡು ನಾನೂ ಗದ್ದೆ ನೆಡುತ್ತಿದ್ದೆ. ಆರಂಭದ ಕೆಲಸಕ್ಕೆ ಕನಿಷ್ಠ ವಯೋಮಿತಿಯೇನಿರಲಿಲ್ಲ. ಆಗಿನ್ನೂ ವಿದ್ಯೆಯ ಗಂಧ ಮೈಗೂಡಿರಲಿಲ್ಲ. ಎಲ್ಲರಂತೆ ಸ್ಕೂಲಿಗೆ ಹೋಗಿ ಬರುವುದು, ಮನೆ ಕೆಲಸ ಮಾಡುವುದು, ಎಂಟನೆ ಕ್ಲಾಸ್ ಪಾಸಾದರೇನು, ಫೇಲಾದರೇನು, ಇದರ ಅಂತರ ಆಗ ನಾನು ಅರಿಯೆ. ಮುಂದಿನ ವಿದ್ಯಾಭ್ಯಾಸಕ್ಕೆ ಸಕಲೇಶಪುರಕ್ಕೆ ಹೋಗಿ ಹಾಸ್ಟಲಿನಲ್ಲಿದ್ದುಕೊಂಡು ಓದುವ ಅಥವಾ ಓದಿಸುವ ಯೋಜನೆ ನನಗಾಗಲೀ ಮನೆಯವರಿಗಾಗಲೀ ಇದ್ದ ಹಾಗೆ ಕಾಣಲಿಲ್ಲ. ದೊಡ್ಡಣ್ಣ ಹಿಂದಿನ ದಿವಸ ಹೆತ್ತೂರಿಗೆ ಹೋಗಿದ್ದರು. ಅಲ್ಲಿಗೆ ಬಂದಿದ್ದ ಪತ್ರಿಕೆಯಲ್ಲಿ ಹೆತ್ತೂರು ಮಿಡ್ಲ್‌ಸ್ಕೂಲಿನಲ್ಲಿ ಪರೀಕ್ಷೆ ಕಟ್ಟಿದ್ದ ಎಂಟರ ಪೈಕಿ ಆರು ಹುಡುಗರು ಪಾಸಾಗಿದ್ದರು. ಅದರಲ್ಲಿ ಒಂದು ಫಸ್ಟ್‌ಕ್ಲಾಸ್ (ಹಲಸಿನ ಮರ ಹತ್ತುತ್ತಿದ್ದ ನಮ್ಮ ಹಮ್ಮೀರ ಸುಬ್ಬ, ಈಗ ಆ ಊರಿನ ಗಣ್ಯರಲ್ಲಿ ಒಬ್ಬರು). ಹೆತ್ತೂರಿನವರಿಗೆಲ್ಲ ಹೆಮ್ಮೆ. ಹೆಡ್‌ಮಾಸ್ಟರ್ ಬಾಲಸುಬ್ರಹ್ಮಣ್ಯ ಮಾಸ್ಟರ್‌ರವರ ಇಬ್ಬರು ಮಕ್ಕಳೂ ಪಾಸಾಗಿದ್ದರು. ಅವರನ್ನು ಹೈಸ್ಕೂಲಿಗೆ ಸೇರಿಸುವುದೆಂದು ಅವರಾಗಲೇ ತೀರ್ಮಾನಿಸಿದ್ದರು. ಕರಿಯಪ್ಪ ಗೌಡ್ರು ಮತ್ತು ಬಾಲಸುಬ್ರಹ್ಮಣ್ಯ ಮಾಸ್ಟರು ದೊಡ್ಡಣ್ಣನಿಗೆ

ನಿಮ್ಮ ಹುಡುಗನನ್ನು ಕಳುಹಿಸು, ನಾಳೆಯೇ ಸಕಲೇಶಪುರಕ್ಕೆ ಕಳುಹಿಸಿ ಹೈಸ್ಕೂಲ್‌ಗೆ ಸೇರಿಸು ಎಂದು ಹೇಳಿದ್ದರು. ಅವರ ಮಾತಿಗೆ ಇವರು ಇಲ್ಲ ಅನ್ನುವ ಹಾಗಿಲ್ಲ. ಕೂಡಲೆ ಊರಿಗೆ ಬಂದವರೆ ಗದ್ದೆ ಹತ್ತಿರ ಬಂದು, ನೀನು ನಾಟಿ ಮಾಡಿದ್ದು ಸಾಕು ಬಾ, ನಾಳೆ ಸಕಲೇಶಪುರಕ್ಕೆ ಹೋಗಬೇಕು, ನೀನು ಪಾಸಾಗಿದ್ದೀಯಂತೆ, ಹೈಸ್ಕೂಲ್ ಸೇರಬೇಕಂತೆ, ಹಾಗೆಂದು ಹೆತ್ತೂರಿನಲ್ಲಿ ತಿಳಿಸಿದರು ಎಂದು ಹೇಳಿದರು. ನನಗೆ ಹೇಳಿದ್ದನ್ನು ಮಾಡುವುದೊಂದೆ ಗೊತ್ತಿತ್ತೇ ಹೊರತು ಏತಕ್ಕೆ ಏನು ಮಾಡುತ್ತಿದ್ದೇನೆಂದು ಆಗ ತಿಳಿಯದು.

ರಾತ್ರಿಯಲ್ಲಿ ಒಲೆ ಮುಂದೆ ಕುಳಿತು ಬೆಂಕಿಯ ಮುಂದೆ ನನ್ನ ಒದ್ದೆ ಬಟ್ಟೆಗಳನ್ನು ಒಣಗಿಸುತ್ತಿದ್ದದ್ದು ನೆನಪು. ಗೊರಗವನ್ನು (ಮಲೆನಾಡಿನಲ್ಲಿ ಮಳೆಗಾಲದಲ್ಲಿ ಗಾಳಿ ಮಳೆಗೆ ಕವಚವಾಗಿ ಓಟೆ ಬಾಸಿನಿಂದ ನೇಯ್ದಿದ್ದ ಕವಚ) ಹೊತ್ತು ತಲೆ ಕೂದಲೆಲ್ಲ ಅಡ್ಡಸೊಡ್ಡರಿನೆ ಬಾಚಿದರೂ ಬಾಗದು. ಮುಂಜಾನೆ ಹೊಳೆಮೆಟ್ಟಿಲು ದಾಟಿಸಿ ಬರಲು ಒಬ್ಬನನ್ನು ಜೊತೆಯಲ್ಲಿ ಕಳುಹಿಸಿ ನಾನು ಹೆತ್ತೂರಿಗೆ ಹೋಗಿ ಬೇರೆಯವರೊಡನೆ ಶುಕ್ರವಾರ ಸಂತೆಗೆ ನಡೆದು ಅಲ್ಲಿಂದ ಬಸ್ಸಿನಲ್ಲಿ ಹೋಗುವ ಏರ್ಪಾಡಾಯಿತು.

ಹಾನುಬಾಳು ಕೆಂಚೇಗೌಡರ ಮನೆ ಒಕ್ಕಲಿಗರ ವಿದ್ಯಾರ್ಥಿ ನಿಲಯ. ಸುಮಾರು ಮೂವತ್ತು ಹುಡುಗರು ಮಿಡ್ಲ್‌ಸ್ಕೂಲ್, ಹೈಸ್ಕೂಲ್‌ನಲ್ಲಿ ಓದುತ್ತಿರುವವರು ಇಲ್ಲಿದ್ದರು. ಕೆಲವು ಏಲಕ್ಕಿ ವ್ಯಾಪಾರಿಗಳು ಮತ್ತು ತಾಲ್ಲೂಕು ಕಛೇರಿಯ ಸಿಬ್ಬಂದಿಯವರು ಕೂಡ ಅಲ್ಲಿ ಊಟ ಮಾಡುತ್ತಿದ್ದರು. ಆಗ ಆಹಾರದ ಅಭಾವವಿದ್ದರಿಂದ ಅಳತೆಯಾಗಿ ಊಟ ಹಾಕುತ್ತಿದ್ದರು. ಹಳ್ಳಿಯಲ್ಲಿ ಇತಿ ಮಿತಿ ಇಲ್ಲದೆ ತಿಂದವರಿಗೆ ಅದೇನೋ ವಿಚಿತ್ರವಾಗಿ ಕಾಣುತ್ತಿತ್ತು. ವಾರಕ್ಕೊಮ್ಮೆ ಸ್ನಾನ. ಬಾವಿಯಿಂದ ನೀರು ಸೇದಿ ಅಡಿಗೆಗೆ, ಸ್ನಾನಕ್ಕೆ ಪೂರೈಸಬೇಕಿತ್ತು. ಕೆಲವು ಹುಡುಗರು ಮದುವೆ ವಯಸ್ಸಿಗೆ ಬಂದಿದ್ದರು. ಆಗಾಗ ಅವರ ಮದುವೆಯ ಮಾತೂ ಕೇಳಿ ಬರುತಿತ್ತು.

ಸಕಲೇಶಪುರದ ಲಿಂಗಾಯಿತರ ಹಾಸ್ಟಲನ್ನು ಯಾರೋ ದಾನಿಗಳು ಕಟ್ಟಿಸಿದ್ದರು. ಸಕಲೇಶಪುರ ಹೈಸ್ಕೂಲ್ ಪ್ರಾರಂಭವಾಗಿ ಒಂದು ವರುಷವಾಗಿತ್ತು. ನಮ್ಮ ತರಗತಿ ಎರಡನೇ ಬ್ಯಾಚ್. ಲಿಂಗಾಯಿತರ ಹಾಸ್ಟಲಿನಲ್ಲಿಯೆ ನಮ್ಮ ಸ್ಕೂಲ್. ಕೋಣೆಗಳು ಚಿಕ್ಕದಾಗಿದ್ದರಿಂದ ಹುಡುಗರು ಒತ್ತೊತ್ತಾಗಿ ಕುಳಿತುಕೊಳ್ಳಬೇಕಾಗಿತ್ತು. ಹುಡುಗಿಯರು ಎರಡು ಮೂರು ಸಾಲು ಮುಂದಿನ ಬೆಂಚಿನಲ್ಲಿ, ಅವರ ಹಿಂದೆ ಕ್ಲಾಸಿಗೆ ಚಿಕ್ಕವರಾಗಿದ್ದವರನ್ನು ಕೂರಿಸುತ್ತಿದ್ದರು. ದೊಡ್ಡ ಹುಡುಗರಿಗೆ ಹಿಂದಿನ ಬೆಂಚು. ಹೆಡ್‌ಮಾಸ್ಟರು ಸೇರಿದಂತೆ ನಾಲ್ಕು ಜನ ಉಪಾಧ್ಯಾಯರಿದ್ದರು. ಸೈನ್ಸ್ ಟೀಚರ್ಸ್ ಇಬ್ಬರು, ಇಂಗ್ಲೀಷ್ ಮತ್ತು ಇತರೆ ವಿಷಯಕ್ಕೆ ಒಬ್ಬರು. ಕನ್ನಡಕ್ಕೆ ಒಬ್ಬರು, ಪಾಠ ಪ್ರವಚನ ಚೆನ್ನಾಗಿ ನಡೆಯುತ್ತಿತ್ತೆಂದೇ ಹೇಳಬೇಕು. ಹೆಡ್‌ಮಾಸ್ಟರ್ ಕೇಶವಮೂರ್ತಿಗಳು ಅವರಲ್ಲಿ ನುರಿತವರು. ಸ್ವಲ್ಪ ಬಿಗುಮಾನದಿಂದಲೇ ಇರುತ್ತಿದ್ದರು. ಉಳಿದವರು ಹುಡುಗರೊಂದಿಗೆ ಬಹಳ ಸಲಿಗೆಯಿಂದ ವರ್ತಿಸುತ್ತಿದ್ದರು. ಕನ್ನಡ ಟೀಚರ್ ಮತ್ತೂ ಸಲಿಗೆ. ಅವರು ಹುಡುಗರಿಗೆ ಹೇಳುತ್ತಿದ್ದದ್ದು 'ಕಮ್ಮರ್ ಕಮ್‌ರ್, ಗೋಯರ್ ಗೋಯರ್, ನೋ ಆಸ್ಕರ್, ನೋ ಟೆಲ್ಲರ್' ಇಂದಿಗೂ ನೆನಪಿನಲ್ಲಿದೆ.

ಸ್ಕೂಲಿನ ಸಮಾರಂಭಕ್ಕೆ ಪಟ್ಟಣದವರೆಲ್ಲ ಬರುತ್ತಿದ್ದರು. ಹೊಸದಾಗಿ ಪ್ರಾರಂಭವಾದ ಸ್ಕೂಲ್ ಆದರೂ, ಸ್ಥಳಾವಕಾಶದ ಕೊರತೆಯಿದ್ದರೂ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲ

ವಿಜೃಂಭಣೆಯಿಂದ ನಡಿಯುತ್ತಿದ್ದವು. ಉಪಾಧ್ಯಾಯರ ಉತ್ಸುಕತೆಯೇ ಇದಕ್ಕೆ ಕಾರಣವೆಂದು ಹೇಳಬೇಕು. ಆಗಾಗ್ಗೆ ಟೂರ್ ಕರೆದುಕೊಂಡು ಹೋಗುತ್ತಿದ್ದರು. ಅವುಗಳಲ್ಲೆಲ್ಲ ಮದ್ರಾಸು ಬೆಂಗಳೂರಿಗೆ ಹೋಗಿದ್ದು ಸ್ಮರಣೀಯ. ನಮ್ಮಲ್ಲಿ ಅನೇಕರಿಗೆ ಜೀವನದಲ್ಲಿ ಮೊದಲು ರೈಲು ಪ್ರಯಾಣ ಮತ್ತು ಹಡಗು ನೋಡುವ ಅವಕಾಶ, ಬೆಂಗಳೂರು ಮದರಾಸು ಪಟ್ಟಣಗಳ ಪರಿಚಯ, ಫ್ಯಾನ್ ಅಡಿ ಕೂತದ್ದು, ಐಸ್‌ಕ್ರೀಮ್ ತಿಂದದ್ದು ಎಲ್ಲವೂ ಹೊಸದು. ಹೆಡ್‌ಮಾಸ್ಟರ್ ಮದ್ರಾಸಿನಲ್ಲಿ ಒಂದು ಪೊಮೇರಿಯನ್ ನಾಯಿ ಮರಿ ತೆಗೆದುಕೊಂಡಿದ್ದರು. ಅದಕ್ಕೊಂದು ಸರಿಯಾದ ಹೆಸರಿಟ್ಟವರಿಗೆ ಬಹುಮಾನ ಕೊಡುವುದಾಗಿ ಘೋಷಿಸಿದರು. ಅಲ್ಲಿದ್ದವರೆಲ್ಲ ಅವರವರಿಗೆ ತಿಳಿದಿದ್ದ ನಾಯಿಗಳ ಹೆಸರನ್ನೆಲ್ಲ ಸೂಚಿಸಿದರು. ಡಿ. ಎಂ. ಪುಟ್ಟೇಗೌಡ (ಮುಂದೆ ಅವರು ಇಂಜನೀಯರ್ ಪದವಿ ಪಡೆದು ಪಾರ್ಲಿಮೆಂಟ್ ಮೆಂಬರು ಕೂಡ ಆದರು) ರಸೂಲ್ ಎಂಬ ಹೆಸರು ಸೂಚಿಸಿದರು. ಅದೇ ಹೆಸರು ಒಪ್ಪಿಗೆಯಾಯಿತು. ಏಕೆಂದರೆ ನಾವು ನೋಡಿದ ಹಡಗಿನ ಹೆಸರು ರಸೂಲ್. ಅದರ ಜ್ಞಾಪಕಾರ್ಥವಾಗಿ ಆ ಹೆಸರನ್ನು ನಾಯಿಗೆ ಇಡಲಾಯಿತು. ಅವರಿಗೇನು ಬಹುಮಾನ ಕೊಟ್ಟರೋ ತಿಳಿಯದು!

ಮಾಗಿಯ ಕಾಲ ಬಂದರೆ ನನ್ನ ಎರಡು ಮುಂಗಾಲಿನಲ್ಲಿ ಇಸುಬು ಉಲ್ಬಣವಾಗುತ್ತಿತ್ತು. ಹೈಸ್ಕೂಲ್ ಮೊದಲನೇ ವರ್ಷ ನನ್ನ ಇಸುಬು ಇಕ್ಕಟ್ಟಿಗೆ ತಂದೊಡ್ಡಿತು. ಅದು ಉಲ್ಬಣವಾದಾಗ ನೀರೂರುತ್ತಿತ್ತು. ವಾಸನೆ ಬರುತ್ತಿತ್ತು. ಚಡ್ಡಿ ಹಾಕಿದರೆ ನೊಣಗಳ ಕಾಟ. ಪೈಜಾಮ ಹಾಕಿದರೆ ಅದಕ್ಕೆ ತಾಗಿ ನೋವಾಗುತ್ತಿತ್ತು. ಇಸುಬು ಜಾಸ್ತಿಯಾದಾಗ ತಿಂಡಿ ತಿನ್ನುವಾಗ, ಊಟ ಮಾಡುವಾಗ ಯಾರೂ ಇಲ್ಲದ ಸಮಯ ನೋಡಿ ಹೋಗಬೇಕಿತ್ತು. ಬೇರೆಯವರು ಅಸಹ್ಯ ಪಡುತ್ತಿದ್ದರು. ಕ್ಲಾಸಿಗೆ ಮೇಸ್ಟರು ಬಂದ ಮೇಲೆ ಒಳಗೆ ಹೋಗಬೇಕಿತ್ತು. ಒಂದು ದಿನ ನಾನು ಕ್ಲಾಸ್ ಒಳಗೆ ಹೋದಾಗ ನನ್ನ ಬೆಂಚಿನ ಹುಡುಗರೆಲ್ಲಾ ಮೂಗು ಮುಚ್ಚಿ ಹೊರಗೆ ಹೋಗಲು ಪ್ರಯತ್ನ ಮಾಡಿದರು. ನಾನೇ ಹೊರಗೆ ಬಂದು ಪಕ್ಕದಲ್ಲಿದ್ದ ಕ್ರಾಫರ್ಡ್ ಆಸ್ಪತ್ರೆಗೆ ಹೋಗಿ ದೊಡ್ಡ ಡಾಕ್ಟರ್ ಮುಂದೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭ ಮಾಡಿದೆ. ಅವರು ವಿಷಯ ತಿಳಿದು ಶುಶ್ರೂಷೆ ಮಾಡಲು ಪ್ರಾರಂಭಿಸಿದರು. ಸುಮಾರು ಎರಡು ವಾರ ಇಂಜೆಕ್ಷನ್, ಮುಲಾಂ ಕೊಟ್ಟು ಹತೋಟಿಗೆ ತಂದರು. ಡಾಕ್ಟರು ಈ ಕ್ರಮ ಕೈಗೊಳ್ಳದಿದ್ದರೆ ಅಂದಿನ ಪರಿಸ್ಥಿತಿಯಲ್ಲಿ ನಾನು ಏನು ಮಾಡಿಕೊಳ್ಳುತ್ತಿದ್ದೆನೋ ತಿಳಿಯದು!

ನನ್ನ ಇಸುಬು ನನ್ನ ತಾಯಿ ಮತ್ತು ಮನೆಯವರೆಲ್ಲರಿಗೆ ನಾನು ಮಗುವಾಗಿದ್ದಾಗಿನಿಂದಲೆ ಜಿಗುಪ್ಸೆಯನ್ನುಂಟು ಮಾಡಿರಬೇಕು. ಸುಮಾರು ಒಂದು ವರುಷದ ಮಗುವಾಗಿದ್ದಾಗಲೆ ಶುರುವಾದ ಇಸಬು ಎರಡನೆ ವಯಸ್ಸಿನಲ್ಲಿ ಮೈಯೆಲ್ಲಾ ಆವರಿಸಿ ಮುಟ್ಟಲು ಜಾಗವಿರು ತ್ತಿರಲಿಲ್ಲವೆಂದು ತಾಯಿಯು ಹೇಳುತ್ತಿದ್ದರು. ನೊಣಗಳು ಮೈ ತುಂಬ ಕುಳಿತು ಚಿತ್ರ ಹಿಂಸೆ ಕೊಡುತ್ತಿದ್ದವಂತೆ. ನವೆಗೆ ಕೆರೆದುಕೊಂಡು ಮೈಯೆಲ್ಲಾ ರಕ್ತವಾಗುತ್ತಿತ್ತಂತೆ. ಮಕ್ಕಳನ್ನು ಸದಾ ನೋಡಿಕೊಂಡು ಕೂರುವ ಕಾಲವಲ್ಲ. ಹೊರ ಕೆಲಸವನ್ನು ಬಿಟ್ಟು ಸಂಸಾರದ ಎಲ್ಲಾ ಕೆಲಸಗಳನ್ನು ಅವ್ವನೇ ಮಾಡಿಕೊಳ್ಳಬೇಕಾಗಿತ್ತು. ಗದ್ದೆ ಮತ್ತು ಕೊಟ್ಟಿಗೆ ಊರಿಂದ ಒಂದೂವರೆ ಮೈಲಿ ದೂರ. ಅವರಿಗೆ ಎಷ್ಟೇ ಮಾಡಿದರೂ ಮುಗಿಯದ ಕೆಲಸ. ಏಳೆಂಟು ವರ್ಷ ವಯಸ್ಸಿನ ಅಕ್ಕನ ವಶಕ್ಕೆ ನನ್ನನ್ನು ಬಿಟ್ಟು ಅವ್ವ ಹೊರಕೆಲಸಕ್ಕೆ ಹೋಗುತ್ತಿದ್ದರು. ನೊಣದ ಕಾಟವನ್ನು ತಪ್ಪಿಸುವುದ ಕ್ಕೋಸ್ಕರ ಒಮ್ಮೆ ಹೊಗೆ ಸೊಪ್ಪಿನ ರಸವನ್ನು ಮೈಮೇಲೆ ಸವರಿ ಕೆಲಸಕ್ಕೆ ಹೋಗಿದ್ದರಂತೆ.

ಮಧ್ಯಾಹ್ನದ ಹೊತ್ತಿಗೆ ಮಗು ಪ್ರಜ್ಞಾಹೀನವಾಗಿ ಮಲಗಿದ್ದು ಕಂಡು ಗಾಬರಿಯಾದ ಅಕ್ಕ ಅವ್ವನನ್ನು ಕೂಡಲೆ ಬರಹೇಳಿ, ಬಂದು ನೋಡಿದಾಗ ಪ್ರಾಣವೇ ಹೋಗಿದೆಯೆಂದು ಅಭಿಪ್ರಾಯ ಪಟ್ಟರಂತೆ. ಮೈ ಬೆಚ್ಚಗಿದ್ದರಿಂದ ಗಾಳಿ ಬೀಸಿ, ಮೈ ತೊಳೆದು, ಸುಧಾರಿಸಿದಾಗ ಕಣ್ಣು ಬಿಟ್ಟೆನಂತೆ.

ಮುಂಗಾಲು ಪಾದದ ಮೇಲೆ ಬರೆ ಹಾಕಿದ್ದು ನೆನಪಿದೆ. ತಾಯಿಯ ಸೋದರ ಮಾವ ನಮ್ಮ ಅಜ್ಜ, ಎತ್ತಹಳ್ಳಿಂದ ಬಂದು, ದಬ್ಬಳ ಕಾಯಿಸಿ ಎರಡೂ ಕಾಲಿಗೂ ಒಂದೊಂದು ಬರೆ ಹಾಕಿದಾಗ ವಿಲಿವಿಲಿ ಒದ್ದಾಡಿದ್ದು, ಯಾರೋ ಎತ್ತಿಕೊಂಡು ಹೋಗಿ ಕಾಲನ್ನು ಉರುವಿದ್ದು ಬಹಳ ದಿನ ಮರೆಯಲಿಲ್ಲ. ಜುಮ್ಮನಮಟ್ಟೆ (ಒಂದು ಬಗೆಯ ಮರದ ಚಕ್ಕೆ) ಯನ್ನು ನಿಂಬೆ ಹಣ್ಣಿನ ರಸದಲ್ಲಿ ತೇದು ಹಚ್ಚಿದಾಗ ಬೆಂಕಿಗೆ ಬಿದ್ದಷ್ಟು ಉರಿಯಾಗುತ್ತಿತ್ತು. ಗಂಧದೆಣ್ಣೆಯನ್ನೂ ಸವರುತ್ತಿದ್ದರು. ಚಿಕ್ಕಂದಿನಲ್ಲಿ ಇಸುಬು ಅಷ್ಟು ಉಲ್ಬಣವಾಗಿರದಿದ್ದರೆ ಮುಂದೆ ನನ್ನ ತಾಯಿಯ ಹಾಗೆ ನಾನೂ ಕೂಡ ಆಸ್ತಮ ಖಾಯಿಲೆಯಿಂದ ನರಳಬೇಕಿತ್ತೆಂದು ತಿಳಿದವರು ಹೇಳುತ್ತಾರೆ.

ಸಕಲೇಶಪುರದಲ್ಲಿ ಓದುತ್ತಿರುವಾಗ ನಡೆದ ಕೆಲವು ಘಟನೆಗಳು ಆಗಾಗ ಮರುಕಳುಹಿಸುತ್ತವೆ. ಫುಡ್ ಕಂಟ್ರೋಲ್ ಕಾಲವಾದ್ದರಿಂದ ಎಲ್ಲೆಲ್ಲೂ ಆಹಾರಕ್ಕೆ ಪರದಾಟ. ನಮ್ಮ ಹಾಸ್ಟಲಿನ ಒಂದು ರೂಮಿನಲ್ಲಿ ವಿದ್ಯಾರ್ಥಿಗಳಿಗೋಸ್ಕರ ಭತ್ತವನ್ನು ಸಂಗ್ರಹಿಸಿದ್ದೇವೆಂದು ಎರಡು ಕಡಿಕೆ (ಓಟೆಯಿಂದ ಚಾಪೆಯಂತೆ ನೇಯ್ದ ಎರಡು ತುದಿಯನ್ನು ಕೂಡಿಸಿ ಮೂರು ನಾಲ್ಕು ಅಡಿ ಅಗಲ ಆರು ಅಡಿ ಎತ್ತರಕ್ಕೆ ನಿಲ್ಲಿಸಿ ಅದರೊಳಗೆ ಭತ್ತ ತುಂಬಿ ಮೇಲೆ ಸಗಣಿಯಿಂದ ಮೆತ್ತುವುದು) ಕಟ್ಟಿದ್ದರು. ಕೆಲವು ದಿನಗಳ ನಂತರ ಕಡಿಕೆ ಖಾಲಿಯಾದ ಮೇಲೆ ತಿಳಿದಿದ್ದು ಅದರಲ್ಲಿದ್ದದ್ದು ಭತ್ತವಲ್ಲ, ಬ್ರಾಂದಿ ಬಾಟ್ಲಿಗಳು. ಪೊಲೀಸರಿಂದ ತಲೆಮರೆಸಿ ಮಾಡಿದ ಕುತಂತ್ರ. ಸ್ವಾತಂತ್ರ್ಯದ ನಂತರ ಜಾರಿಗೆ ಬಂದ ಪ್ರೊಹಿಬಿಷನ್ ಕೆಲವರನ್ನು ಲಕ್ಷಾಧೀಶರನ್ನಾಗಿ ಮಾಡಿತು.

ಟೂರಿಂಗ್ ಟಾಕೀಸ್‌ನಲ್ಲಿ ಸಿನೆಮಾ ನೋಡುತ್ತಿದ್ದುದ್ದು ಮುಂದೆ ನೆಲದ ಮೇಲೆ ಕುಳಿತು ಒಮ್ಮೆ ಪಕ್ಕದಲ್ಲಿದ್ದವನೊಬ್ಬ ಕಾಲು ಮಡಿಸಿ ಪಂಚೆಯನ್ನೆಲ್ಲಾ ತೊಡೆ ಸಂದು ಗುಡ್ಡೆ ಮಾಡಿಕೊಂಡು ಬೀಡಿ ಸೇದುತ್ತಾ ಸಿನೆಮಾ ನೋಡುತ್ತಿದ್ದ. ಇದ್ದಕ್ಕಿದ್ದ ಹಾಗೆ ಅವನು ಗಟ್ಟಿಯಾಗಿ ಕೂಗಿಕೊಂಡು, ಬಟ್ಟೆ ಸುಟ್ಟ ವಾಸನೆ ಬರುತ್ತಿದೆ ಎಲ್ಲರೂ ನೋಡಿಕೊಳ್ಳಿ ಎಂದು ಹೇಳುತ್ತಿದ್ದ. ಸ್ವಲ್ಪ ಹೊತ್ತಿನನಂತರ ಅವನ ತೊಡೆ ಸುಟ್ಟ ಮೇಲೆ ಅರಿವಾಗಿದ್ದು ಅವನ ಪಂಚೆಯೇ ಸುಡುತ್ತಿರುವುದು. ಬೀಡಿಯ ಹೋಕು ಬಿದ್ದು ಪಂಚೆಯೆಲ್ಲಾ ಸುಡುತ್ತಿದ್ದರೂ ಅವನಿಗೆ ಅರಿವೇ ಇರಲಿಲ್ಲ.

ಒಮ್ಮೆ ಸಕಲೇಶಪುರಕ್ಕೆ ಯಾರೋ ಮಹಾತ್ಮ ಬಂದಿದ್ದ. ಅವನು ಕೊಟ್ಟ ನೀರು ಕುಡಿದರೆ ಯಾವ ಖಾಯಿಲೆ ಇದ್ದರೂ ವಾಸಿಯಾಗುತ್ತದೆ ಎಂದು ಗುಲ್ಲೆದ್ದಿತು. ಗುರುವಾರ ಸಂತೆಯ ದಿನ ಸಕಲೇಶಪುರದ ಟೌನ್‌ನಲ್ಲಿ ಕಾಲಿಡಲು ಜಾಗವಿರಲಿಲ್ಲ. ಖಾಲಿ ಕ್ವಾರ್ಟರ್ ಬಾಟ್ಲಿಗೆ ಐದು ರೂಪಾಯಿ ಕೊಟ್ಟರೂ ಸಿಕ್ಕದು. ಬಾಟ್ಲಿಯಲ್ಲಿ ನೀರು ತೆಗೆದುಕೊಂಡು ಹೋಗಿ ಅವನು ಮುಟ್ಟಿದರೆ ಸಾಕು ಸಿದ್ಧೌಷಧಿಯಾಗುತ್ತದೆಂದು ನಂಬಿಕೆ. ಅದೆಲ್ಲಿಂದ ಅಷ್ಟು ಜನ ಬಂದಿದ್ದರೋ ತಿಳಿಯದು. ಅದರ ಪರಿಣಾಮ ತಿಳಿದು ಹುಡುಕಿದರೆ ಅವನೆಲ್ಲಿ ಹೋದನೆಂದು ಪತ್ತೆಯಿಲ್ಲ. ಅನಂತರ ತಿಳಿದದ್ದು ಕಾಕಾಗಳು ಕಲೆಕ್ಟ್ ಮಾಡಿದ ಕಾಲಿ ಸೀಸಗಳು ಖರ್ಚಾಗಲು ಮಾಡಿದ ಉಪಾಯವೆಂದು!

ಹೈಸ್ಕೂಲ್ ವ್ಯಾಸಂಗ, ಹಾಸ್ಟಲ್ ಜೀವನ, ವಿದ್ಯಾರ್ಥಿ ದಿಸೆಯಲ್ಲಿ ಅಪರೂಪದ ಅಂಕೆ ಶಂಕೆ ಇಲ್ಲದ ಅಹ್ಲಾದಕರ ದಿನಗಳೆಂದು ಹೇಳಬಹುದು. ಅಂದಿನ ಕಷ್ಟ ಸುಖಗಳ ಪರಿವಿಲ್ಲ. ಮುಂದಿನ ಜೀವನದ ಗೊತ್ತು ಗುರಿಯಿಲ್ಲ. ಸರಿಯಾದ ತಿಳಿವಳಿಕೆ ನೀಡುವ ಪೋಷಕರಿಲ್ಲದಿದ್ದರೆ ಯುವಕರು ದಾರಿತಪ್ಪುವುದು ಈ ಸಮಯದಲ್ಲೆ. ನನ್ನ ತರಗತಿಯಲ್ಲಿದ್ದ ಸುಮಾರು ಅರವತ್ತು ವಿದ್ಯಾರ್ಥಿಗಳ ಪೈಕಿ ಕೇವಲ ಆರು ಜನರು ಮುಂದೆ ಕಾಲೇಜು ವಿದ್ಯಾಭ್ಯಾಸ ಮಾಡಿ ವೃತ್ತಿ ಪರರಾಗಿ ಜೀವನ ಸಾಗಿಸಿದ್ದು ನೋಡಿದ್ದೇನೆ. ದಿನ ನಿತ್ಯದ ಪಾಠಪ್ರವಚನಗಳನ್ನು ಓದಿಕೊಳ್ಳಿ ಎಂದು ಹೇಳುವವರಿಲ್ಲ. ತರಗತಿಗಳಿಗೆ ಸರಿಯಾಗಿ ಹೋಗುತ್ತಿದ್ದಾನೆಯೇ ಇಲ್ಲವೇ ಎಂದು ವಿಚಾರಿಸುವವರಿಲ್ಲ. ಹೋಟೆಲು ಸಿನಿಮಾ ಸಿಗರೇಟುಗಳಿಗೆಷ್ಟು ಖರ್ಚು ಮಾಡುವರೆಂದು ನೋಡುವವರಿಲಿಲ್ಲ. ಎಲ್ಲರೂ ದೂರದ ಹಳ್ಳಿಯಿಂದ ಬಂದು ತಂತಮಗೆ ತಿಳಿದಂತೆ ಮಾಡುವವರೆ. ಆ ವಯಸ್ಸಿನಲ್ಲಿ ಮುಂದಿನ ಧ್ಯೇಯ ಧೋರಣೆಯನ್ನು ಯೋಚಿಸುವ ಶಕ್ತಿಯೂ ಇರುವುದಿಲ್ಲ. ಹೀಗಿದ್ದೂ ಕೆಲವರಾದರೂ ಮುಂದಿನ ಮಾರ್ಗವನ್ನು ನಿರೂಪಿಸಿಕೊಂಡಿದ್ದು ಅವರ ಪ್ರಯತ್ನವೋ ಅಥವಾ ದೈವೀ ಸಂಕಲ್ಪವೋ ತಿಳಿಯದು. ಇಂತಹವರಲ್ಲಿ ನಾನೂ ಒಬ್ಬ.

ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂರಲು ಹಾಸನಕ್ಕೆ ಹೋಗಬೇಕಿತ್ತು. ಅಲ್ಲಿರುವ ತನಕ ನಮ್ಮ ಸ್ಕೂಲಿನ ಉಪಾಧ್ಯಾಯರು ನಮ್ಮೊಡನೆ ಇರುತ್ತಿದ್ದರು. ಸಂಜೆ, ಮರುದಿನವಿರುವ ಪರೀಕ್ಷೆಯ ವಿಷಯವನ್ನು ತಿರುವಿ ಹಾಕಿಸುತ್ತಿದ್ದರು. ಮುಖ್ಯ ಪ್ರಶ್ನೆಗಳು ಹೀಗೆ ಬರಬಹುದೆಂದು ಅದಕ್ಕೆ ಉತ್ತರ ಹೀಗಿರಬೇಕೆಂದು ಹೇಳುತ್ತಿದ್ದರು. ನಾವು ಕೆಲವರು ಒಕ್ಕಲಿಗರ ಹಾಸ್ಟಲಿನಲ್ಲಿ ಇಳಿದುಕೊಂಡಿದ್ದೆವು. ಆ ಹಾಸ್ಟಲಿನ ವಿದ್ಯಾರ್ಥಿ ಒಬ್ಬ ಇಂಗ್ಲಿಷ್ ಪರೀಕ್ಷೆಯ ದಿವಸ ರಾತ್ರಿಯೆಲ್ಲ ಓದಿ ಬೆಳಿಗ್ಗೆ ಸ್ವಲ್ಪ ನಿದ್ದೆ ಹೋಗಿ ತಡವಾಗಿ ಪರೀಕ್ಷೆಗೆ ಹೋಗಿದ್ದಕ್ಕೆ ಪ್ರವೇಶವಿಲ್ಲದೆ ಜಿಗುಪ್ಸೆಗೊಂಡು ಕೆರೆಬಿದ್ದು ಪ್ರಾಣ ಕಳೆದುಕೊಂಡ. ಆದ್ದರಿಂದ ನಮ್ಮ ಟೀಚರ್ಸ್ ನಮ್ಮನ್ನು ಬಹಳ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ ಮುಂದೆ ಆ ವಿದ್ಯಾರ್ಥಿ ಎಲ್ಲಿ ಹೋಗುತ್ತಾನೆ, ಏನಾಗಿದ್ದಾನೆ ಎಂಬುದರ ಬಗ್ಗೆಯೂ ಕಾಳಜಿ ವಹಿಸುತ್ತಿದ್ದರು. ಫಿಜಿಕ್ಸ್ ಮತ್ತು ಮ್ಯಾಥಮೆಟಿಕ್ಸ್ ಟೀಚರ್ ಎಂ.ಟಿ.ಆರ್. ಎಲ್ಲರಿಗೂ ಅಚ್ಚುಮೆಚ್ಚಾದವರು. ಅವರ ಜೀವನವೆಲ್ಲಾ ತಾವು ಕಲಿತದ್ದನ್ನು ಸಾಧ್ಯವಾದ ಮಟ್ಟಿಗೆ ಬಹಳ ಜನಕ್ಕೆ ಕಲಿಸಬೇಕೆಂಬ ಆಕಾಂಕ್ಷೆ. ನಾನು ಕುಲಪತಿಯಾದ ಮೇಲೆ 48 ವರ್ಷಗಳ ನಂತರ ಕೃಷಿ ವಿಶ್ವವಿದ್ಯಾನಿಲಯಕ್ಕೆ ನನ್ನನ್ನು ಹುಡುಕಿಕೊಂಡು ಬಂದು ತಮ್ಮ ವಿದ್ಯಾರ್ಥಿ ಹೇಗಿದ್ದಾನೆಂದು ನೋಡಿಕೊಂಡು ಹೋಗಲು ಬಂದಿದ್ದರು. ಅವರ ಮುಖ ನೋಡಿದ ತಕ್ಷಣ ಗುರುತಿಸಿ ಅವರ ಕಾಲಿಗೆ ಬೀಳಲು ಹೋದಾಗ ಅವರಿಗಾದ ಪರಮಾನಂದ ಹೇಳತೀರದು. ಮನೆಗೆ ಕರೆದುಕೊಂಡು ಹೋಗಿ ಗಂಟೆಗಟ್ಟಲೆ ಮಾತಾಡಿ ಕಾರಿನಲ್ಲಿ ಅವರ ಮನೆಗೆ ಕಳುಹಿಸಿಕೊಟ್ಟೆ. ಅಂದು ನನಗೆ ಆದಂತಹ ಸಂತೋಷ ಹೇಳತೀರದು. ಆದರೂ ಮನಸ್ಸಿನಲ್ಲೇನೊ ಅಳುಕು. ನಾನು ಮೂವತ್ತೈದು ವರುಷ ಉಪಾಧ್ಯಾಯ ವೃತ್ತಿ ಮಾಡಿದ್ದರೂ ನಮ್ಮ ಉಪಾಧ್ಯಾಯರಿಗಿದ್ದ ನಿಷ್ಠೆ, ತ್ಯಾಗ ಮನೋ ಭಾವ, ಕರ್ತವ್ಯ ಪ್ರಜ್ಞೆ, ವಿದ್ಯಾರ್ಥಿಗಳ ಶ್ರೇಯಸ್ಸು ನನ್ನ ಶ್ರೇಯಸ್ಸೆಂದು ನಾನೆಂದಾದರೂ ಭಾವಿಸಿದ್ದೇನೆಯೇ ಎಂದು.

ಆಲಪ್ಪಶೆಟ್ಟಿ ಅಂಡ್ ಸನ್ಸ್, ಸಕಲೇಶಪುರ ತಾಲ್ಲೂಕಿಗೆ ಹೆಸರು ವಾಸಿಯಾದ ವ್ಯಾಪಾರಸ್ಥರು. ಸಕಲೇಶಪುರದಲ್ಲಿದ್ದ ಅವರ ಮಳಿಗೆ, ಬೆಂಗಳೂರು, ಮೈಸೂರಿನಲ್ಲಿಯೂ ಅಷ್ಟು ಸುಂದರವಾಗಿ

ಜೋಡಿಸಿದ್ದ ಮಳಿಗೆಗಳನ್ನು ನೋಡಿಲ್ಲವೆಂದು ತಿಳಿದವರು ಹೇಳುತ್ತಿದ್ದರು. ಅವರ ಅಂಗಡಿಯಲ್ಲಿ ಸಿಗದಿದ್ದ ಸಾಮಾನು ಇರಲಿಲ್ಲ. ಮೂರು ಜನ ಸಹೋದರರಲ್ಲಿ ನಾಗಣ್ಣಶೆಟ್ಟರು ಸಾಮಾನು ಸರಬರಾಜು ಮಾಡುತ್ತಿದ್ದರು. ಕೊನೆಯವರು ವಾಸನ್‌ಶೆಟ್ಟರು ಓದಿದವರು. ಒಮ್ಮೆ ಎಮ್.ಎಲ್.ಎ. ಕೂಡ ಆಗಿದ್ದರು. ಮಲ್ಲೇಗೌಡರ ಜೊತೆ ಯಾಲಕ್ಕಿ ಮಂಡಿ ನಡೆಸುತ್ತಿದ್ದರು. ಒಮ್ಮೆ ಒಂದು ಇಂಕ್‌ಬಾಟ್ಲಿ ಕೊಂಡು ಒಂದು ರೂಪಾಯಿ ಕೊಟ್ಟೆ. ಬಹಳ ಜನಸಂದಣಿಯಲ್ಲಿದ್ದ ನಾಗಣ್ಣಶೆಟ್ಟರು ಎಂಟಾಣೆ ವಾಪಸ್ಸು ಕೊಡುವ ಬದಲು ಒಂಬತ್ತೂವರೆ ರೂಪಾಯಿಕೊಟ್ಟರು. ನಾನು ಕೈಗೆ ತೆಗೆದುಕೊಂಡು ಕೊಂಚ ಹೊತ್ತು ಅಲ್ಲಿಯೇ ನಿಂತುಕೊಂಡೆ. ನಾನು ತೆಗೆದುಕೊಂಡು ಬಂದಿದ್ದರೂ ಬಹುಶಃ ಯಾರೂ ಗಮನಿಸುತ್ತಿರಲಿಲ್ಲ. ಆದರೆ ಯಾರಾದರೂ ನೋಡಿಯಾರೋ ಎಂಬ ಭಯದಿಂದಲೋ ಅಥವಾ ಸದಾ ಅವರ ಅಂಗಡಿಗೆ ಬರಬೇಕಲ್ಲ, ಹೇಗೆ ಮೋಸ ಮಾಡುವುದೆಂಬ ಅಳುಕಿನಿಂದಲೋ, ಆ ದುಡ್ಡನ್ನು ಮೇಜಿನ ಮೇಲೆಯೇ ಇಟ್ಟುಕೊಂಡು ನಿಂತೆ. ನಾಗಣ್ಣಶೆಟ್ಟರು ನನ್ನನ್ನು ನೋಡಿ, ಇನ್ನೂ ಇಲ್ಲಿಯೇ ಏನು ಮಾಡುತ್ತಿ. ಬೇರೆಯವರಿಗೆ ಜಾಗಬಿಡು. ಹೋಗು ಎಂದು ಗದರಿಸಿದರು. ಬೆಚ್ಚಿಬಿದ್ದು ನಾನು ಕೊಟ್ಟಿದ್ದು ಒಂದು ರೂಪಾಯಿ. ನೀವು ಒಂಬತ್ತೂವರೆ ಕೊಟ್ಟಿದ್ದೀರಿ ಎಂದು ಕೈ ಚಾಚಿದೆ. ಒಮ್ಮೆ ದೃಷ್ಟಿಸಿ ನೋಡಿ ದುಡ್ಡು ಗಲ್ಲಕ್ಕೆ ಹಾಕಿ, ಹೋಗೆಂದರು. ಅಂದಿನಿಂದ ಮೂರು ಜನ ಸಹೋದರರೂ ನನ್ನನ್ನು ಕಂಡಾಗಲೆಲ್ಲಾ ಬಹಳ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಬೆಂಗಳೂರಿನಲ್ಲಿದ್ದಾಗ ಮನೆಗೂ ಬರುತ್ತಿದ್ದರು. ನನ್ನ ವೃತ್ತಿಯಲ್ಲಿ ಮೇಲೆ ಬಂದಂತೆಲ್ಲ ಸಂತೋಷಿಸುತ್ತಿದ್ದರು. ಬೇರೆಯವರೊಂದಿಗೆ ನನ್ನ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಿದ್ದರು.

* * * *

ಎಸ್.ಎಸ್.ಎಲ್.ಸಿ. ಪಾಸಾಯಿತು. ಮತ್ತೇನು? ಇಲ್ಲಿಯವರೆಗೆ ಯಾವ ಗೊತ್ತು ಗುರಿಯಿಲ್ಲದೆ ಸ್ಕೂಲಿಗೆ ಹೋಗಿದ್ದೆ. ರಜೆ ಬಂದಾಗ ಅಣ್ಣಂದಿರ ಜೊತೆ ಕೆಲಸಕ್ಕೆ ಹೋಗುತ್ತಿದ್ದೆ. ಆ ಊರಿಗೆ ಎಸ್.ಎಸ್.ಎಲ್.ಸಿ. ಪಾಸುಮಾಡಿದವರಲ್ಲಿ ನಾನು ಎರಡನೆಯವನು ನನ್ನ ಚಿಕ್ಕಪ್ಪನ ಮಗ ಜಿ. ಡಿ. ರಾಮೇಗೌಡ್ರು ಮೊದಲಿಗರು. ದೊಡ್ಡಣ್ಣನಿಗೆ ಮುಂದೆ ಏನು ಮಾಡಬೇಕೆಂದು ತೋಚುತ್ತಿರಲಿಲ್ಲ. ಕೆಲವರು ಎಲ್.ಎಂ.ಪಿ. ಮಾಡಲಿ ಎನ್ನುತ್ತಿದ್ದರು. ಹೆತ್ತೂರಿನಿಂದ ಇಬ್ಬರು ಆಗಲೇ ಎಲ್.ಎಂ.ಪಿ.ಗೆ ಸೇರಿದ್ದರು. ಅವರಲ್ಲಿ ಡಾ॥ ಸಣ್ಣಮಲ್ಲಪ್ಪ ನಮ್ಮ ಹತ್ತಿರದ ಸಂಬಂಧದವರು. ಹೆಚ್ಚಿನ ರಜೆಯನ್ನು ಗೊದ್ದಿನಲ್ಲಿಯೆ ಕಳೆಯುತ್ತಿದ್ದರು. ಡಾಕ್ಟರ ಕೆಲಸಕ್ಕೆ ಓದುತ್ತಿದ್ದಾನೆಂದು ಅವರಿಗೆ ಎಲ್ಲಿಲ್ಲದ ಮರ್ಯಾದೆ ಗೌರವ. ಡಾ॥ ಹೆಚ್. ಕೆ. ದೊಡ್ಡೇಗೌಡರು ನನಗಿಂತ ಒಂದು ವರ್ಷಕ್ಕೆ ಸ್ಕೂಲಿನಲ್ಲಿ ಸೀನಿಯರ್. ಅವರಿಗೆ ಮೆಡಿಕಲ್ ಸ್ಕೂಲಿನಲ್ಲಿ ಸೀಟು ಸಿಕ್ಕ ಬೇಕಾದರೆ ಅವರು ವರ್ಣಿಸಿದ ಶ್ರಮ ನನಗಾಗಲೇ ಇದಾಗದ ಕೆಲಸವೆಂದೆಣಿಸಿತ್ತು. ಆಗ ಸಾರ್ವತ್ರಿಕ ಚುನಾವಣೆಯಲ್ಲಿ ಬೇಲೂರಿನ ಬಿ.ಎನ್. ಬೋರಣ್ಣಗೌಡರು ಗೆದ್ದು ಬಂದಿದ್ದರು. ಅವರ ಗೆಲುವಿಗೆ ಹೆತ್ತೂರು ಹೋಬಳಿ ಯಸಳೂರು ಹೋಬಳಿಯಲ್ಲಿ ಹೆಚ್.ಎಸ್. ಮಲ್ಲೇಗೌಡರ ನೇತೃತ್ವದಲ್ಲಿ ಮುನ್ನಡೆ ಕೊಟ್ಟಿದ್ದವು. ಆ ಚುನಾವಣೆಯಲ್ಲಿ ನಾನೂ ಕೂಡ ಪ್ರಚಾರದಲ್ಲಿ ಭಾಗವಹಿಸಿದ್ದೆ. ನಾನು ಇಂಟರ್‌ಮೀಡಿಯಟ್ ಪಾಸ್ ಮಾಡಿದರೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಬೋರಣ್ಣಗೌಡರು ಹೇಳಿದ್ದರು. ಆ ವರುಷ ಏಲಕ್ಕಿ

ಫಸಲು ಚೆನ್ನಾಗಿತ್ತು. ದುಡ್ಡಿಗಾಗಿ ತೊಂದರೆ ಎನ್ನುವಂತಿರಲಿಲ್ಲ. ಅಂತು ಕಾಲೇಜಿಗೆ ಸೇರುವುದೆಂದು ತೀರ್ಮಾನಿಸುವಷ್ಟರಲ್ಲಿ ಅರ್ಜಿ ಹಾಕಲು ಕೊನೆಯ ದಿನ ಕೇವಲ ಒಂದೆರಡು ದಿವಸ ಮಾತ್ರ ಇತ್ತು. ಮರುದಿನ ಸಕಲೇಶಪುರಕ್ಕೆ ಹೋಗಿ ಅಪ್ಲಿಕೇಷನ್ ಕಳುಹಿಸಲು ಹೊರಟೆ.


ಮೆಡಿಕಲ್ ಕಾಲೇಜಿಗೆ ಹೋಗುವ ದೃಷ್ಟಿಯಿಂದ ಸಿ.ಬಿ.ಜೆಡ್. ತೆಗೆದುಕೊಂಡರೆ ಒಳ್ಳೆಯದೆಂದು ಅನುಭವಿಗಳ ಸಲಹೆ. ಆಗ ಹಾಸನದ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಸಿ.ಬಿ.ಜೆಡ್. ಇರಲಿಲ್ಲ. ಮೈಸೂರು ಯುವರಾಜ ಕಾಲೇಜಿಗೆ ಮಾತ್ರ ಅರ್ಜಿ ಕಳುಹಿಸಿದ್ದೆ. ಮನೆಗೆ ಬೇಕಾದ ಸಾಮಾನುಗಳನ್ನೆಲ್ಲ ಕೊಂಡು, ಸಂಜೆ ರಾಮಾಂಜನೇಯ ಬಸ್ಸಿಗೆ ಹೋಗಲು ಸಕಲೇಶಪುರ ಬಸ್‌ಸ್ಟ್ಯಾಂಡಿನಲ್ಲಿ ಇದ್ದೆ. ಬಸ್ ಡ್ರೈವರ್ ಬಾಸೆಗೌಡರನ್ನು ಪಕ್ಕದ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದರಿಂದ ಬಸ್ಸು ಹೊರಡುವುದು ತಡವಾಗಿತ್ತು. ಅಷ್ಟರಲ್ಲಿ ನನ್ನ ಕ್ಲಾಸ್‌ಮೇಟ್ ಪುಟ್ಟಸ್ವಾಮಿ ಸಿಕ್ಕಿದರು. ಮುಂದಿನ ವಿದ್ಯಾಭ್ಯಾಸದ ವಿಷಯ ಮಾತನಾಡುತ್ತಿದ್ದಾಗ ಅವರಿಗೆ ಅಪ್ಲಿಕೇಷನ್ ಕಳುಹಿಸಲು ಸಾಧ್ಯವಾಗಲಿಲ್ಲವಂತೆ. ಏಕೆಂದರೆ ಟ್ರೆಷರಿಯಲ್ಲಿ ಒಂದು ರೂಪಾಯಿ ಕಟ್ಟಿ ಚೆಲನ್ ಅನ್ನು ಅರ್ಜಿ ಜೊತೆ ಲಗತ್ತಿಸಿ ಕಳುಹಿಸಬೇಕಾಗಿತ್ತು. ಟ್ರೆಷರಿ ಟೈಂ ಆಗಿ ಹೋಗಿದ್ದರಿಂದ ಅವರಿಗೆ ಕಟ್ಟಲಾಗಲಿಲ್ಲ. ಕಳುಹಿಸಲು ಅಂದೇ ಕೊನೆ ತಾರೀಖು. ಆದ್ದರಿಂದ ಮುಂದಿನ ವ್ಯಾಸಂಗದ ಬಗ್ಗೆ ಪೂರ್ಣ ವಿರಾಮವೆಂದು ನೊಂದುಕೊಂಡು ಹೇಳಿದರು. ಆಗ ನನ್ನ ತಪ್ಪು ಅರಿವಾಯಿತು. ಒಂದು ರೂಪಾಯಿಯ ಟ್ರೆಷರಿ ಚಲನ್ನನ್ನು ನನ್ನ ಅರ್ಜಿ ಜೊತೆ ಲಗತ್ತಿಸಿರಲಿಲ್ಲ. ನನ್ನ ಸ್ಥಿತಿ ಪುಟ್ಟಸ್ವಾಮಿಗಿಂತ ಹೆಚ್ಚೇನು ಇರಲಿಲ್ಲ. ಬಸ್ಸು ಸಕಾಲಕ್ಕೆ ಹೊರಟಿದ್ದರೆ, ಊರಿಗೆ ಹೋಗಿ ಕಾಲೇಜಿನಿಂದ ಅಡ್‌ಮಿಷನ್‌ಗೆ ಪತ್ರ ಬರುವುದಕ್ಕೆ ಕಾದುಕುಳಿತಿರುತ್ತಿದ್ದೆ. ಪರಿಣಾಮ ಏನಾಗುತ್ತಿತ್ತೆಂಬುದನ್ನು ಊಹಿಸಬಹುದು!

ದೇವರು ಅದೇನು ಬುದ್ಧಿ ಕೊಟ್ಟನೋ ತಿಳಿಯದು. ಊರಿಗೆ ಹೋಗುವವರ ಕೈಯಲ್ಲಿ ಸಾಮಾನೆಲ್ಲ ಕೊಟ್ಟು, ಹತ್ತಿರವಿದ್ದ ಹೆಚ್. ಕೆ. ತಮ್ಮೇಗೌಡರ ಮನೆಗೆ ಹೋಗಿ ಅವರ ಮುಂದೆ ಹೀಗಾಯಿತೆಂದು ವಿವರಿಸಿದೆ. ಅವರ ಜೊತೆ ಮಂಕನಹಳ್ಳಿ ವೆಂಕಟರಮಣನವರು ಇದ್ದರು. ಅವರಿಬ್ಬರು ತಮ್ಮ ವಿದ್ಯಾಭ್ಯಾಸ ಪೂರೈಸಿ ಸಕಲೇಶಪುರದಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದರು. ಅವರಿಗೆ ಮೈಸೂರಿನಲ್ಲಿ ಬಹಳ ಜನ ಆಪ್ತರಿದ್ದರು. ಅವರಲ್ಲಿ ಡಾ॥ ರಾಜು (ಹಿಂದಲೆಗೌಡ) ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದರು. ಇಪ್ಪತ್ತೈದು ರೂಪಾಯಿ ಮತ್ತು ಒಂದು ಕಾಗದ ನನ್ನ ಕೈಯಲ್ಲಿ ಕೊಟ್ಟರು. ರಾತ್ರಿ ಹಾಸನದಿಂದ ರೈಲಿನಲ್ಲಿ ಮೈಸೂರಿಗೆ ಪ್ರಯಾಣ ಬೆಳೆಸಿ, ಹಿಂದಲೆಗೌಡರನ್ನು ಸಂಪರ್ಕಿಸಿ, ಇಬ್ಬರೂ ಯುವರಾಜ ಕಾಲೇಜಿಗೆ ಹೋಗಿ, ಅವರಿಗೆ ಪರಿಚಯವಿರುವವರನ್ನು ಸಂಪರ್ಕಿಸಿ, ಒಂದು ರೂಪಾಯಿ ರಸೀತಿ ತೆಗೆದು, ತಿರಸ್ಕರಿಸಿದ್ದ ನನ್ನ ಅರ್ಜಿಗೆ ಲಗತ್ತಿಸಿ ವಾಪಸ್ಸು ಬಂದೆ. ಹಾಗೆ ಮಾಡಿರದಿದ್ದರೆ ಅಲ್ಲಿಗೆ ನನ್ನ ವಿದ್ಯಾಭ್ಯಾಸ ಕೊನೆಗೊಳ್ಳುತ್ತಿತ್ತು. ಸಕಲೇಶಪುರದಿಂದ ಬಸ್ಸು ತಡವಾಗಿ ಹೊರಡದಿದ್ದರೆ ಪುಟ್ಟಸ್ವಾಮಿ ಸಿಗುತ್ತಿರಲಿಲ್ಲ, ನಾನು ಕಾಲೇಜಿಗೆ ಸೇರುತ್ತಿರಲಿಲ್ಲ.


ಮೈಸೂರು ಯುವರಾಜ ಕಾಲೇಜಿಗೆ ಸೇರಿದ್ದಾಯಿತು. ಯಾವ ಹಾಸ್ಟಲ್‌ಗೆ ಸೇರಬೇಕೆಂದು ಇತ್ಯರ್ಥವಾಗಲಿಲ್ಲ. ನಜರಬಾದು ಒಕ್ಕಲಿಗರ ಹಾಸ್ಟಲು, ಒಂಟಿಕೊಪ್ಪಲು ರಾಮಯ್ಯ ಹಾಸ್ಟಲ್, ಮಹಾರಾಜ ಕಾಲೇಜು ಹಾಸ್ಟಲ್ ಈ ಮೂರು ಮನಸ್ಸಿನಲ್ಲಿದ್ದುವು. ಮೈಸೂರು ಮಹಾರಾಜ



ಇಂಗ್ಲೆಂಡಿನಲ್ಲಿ ವ್ಯಾಸಂಗ
ಮಾಡುತ್ತಿದ್ದಾಗ ಇಳಿದು
ಕೊಂಡಿದ್ದ ಮ್ಯಾನಾರ್ ಹೌಸ್
(ಪುಟ 128)



ಇಂಗ್ಲೆಂಡಿನಲ್ಲಿ ಹುಲ್ಲಿನ ಮನೆ
ಆಕ್ಸ್‌ಫರ್ಡ್‌ನ ಪಿಟಾನ್
ಹ್ಯಾಮ್‌ಷೈರ್‌ನಲ್ಲಿ (ಪುಟ 205)



ಲಂಡನ್‌ನಲ್ಲಿರುವ ವಿಶ್ವ
ವಿಖ್ಯಾತ ಬ್ರಿಟಿಷ್ ಮ್ಯೂಸಿಯಂ
ಆಫ್ ನ್ಯಾಚುರಲ್ ಹಿಸ್ಟರಿ
(ಪುಟ 129)




ನಾಟಿಂಗ್ ಹ್ಯಾಮ್
ಯೂನಿವರ್ಸಿಟಿಯಲ್ಲಿ
ತರಬೇತಿ ಪಡೆಯುತ್ತಿದ್ದಾಗ
ಪ್ರೊಫೆಸರ್‌ರೊಂದಿಗೆ
(ಪುಟ 130)




ಡಾ॥ ಪಾಲ್ ರಿಚರ್
ಒರೆಗಾನ್ ಸ್ಟೇಟ್
ಯೂನಿವರ್ಸಿಟಿ
(ಪುಟ 119-124)



ಅಮೆರಿಕೆಯ
ರೆಡ್ ಇಂಡಿಯನ್ಸ್
ಸಾಮನ್ ಮೀನು
ಬೇಯಿಸುತ್ತಿರುವುದು
(ಪುಟ 121)



ಒಹಾಯಿಯೋ
ಊಸ್ಟರ್‌ನಲ್ಲಿದ್ದಾಗ
ಡಾ॥ ನೇಮ್‌ಜಿಕ್
ಕುಟುಂಬದವರೊಂದಿಗೆ
(ಪುಟ 125)



ಡೈಮಂಡ್ ಹಾರ್‌ಬರ್
- ಹವಾಯಿ
ಜಪಾನೀಯರು ಬಾಂಬ್
ಹಾಕಿದ್ದ ದೃಶ್ಯ
(ಪುಟ 244)




ಗೆದ್ದಲಿನ ಸಂಶೋಧನೆಯಲ್ಲಿ ತೊಡಗಿದಾಗ
ಡಾ|| ಟಿ.ಜಿ. ವುಡ್‌ರವರ ಜೊತೆ
(ಪುಟ 143-47)



ಮುಖ್ಯ ಸಂಶೋಧನೆಯ ಒಂದು ಭಾಗವಾದ
ಬೇರು ತಿನ್ನುವ ಹುಳ ಮತ್ತು
ಗೊಬ್ಬರದ ಹುಳುಗಳ ಬಗೆಗಳು
(ಪುಟ 166-68)

ಮಣ್ಣನಲ್ಲಿ ದೊರೆಯುವ ವಿವಿಧ ಬಗೆಯ ಮೈಟ್ಸ್
(ಪುಟ 143-47)



ಜಪಾನ್ ಮಾದರಿಯ ಕಾಂಪೋಸ್ಟ್
ತಯಾರಿಸುವ ವಿಧಾನ
(ಪುಟ 245-248)





1992ರಲ್ಲಿ ಎಂ.ಒ.ಎ.
ನಿಯೋಗದೊಂದಿಗೆ
ಜಪಾನಿನಲ್ಲಿ
(ಪುಟ 247)



ಪ್ಯಾರಿಸ್‌ನಲ್ಲಿ ಪತ್ನಿ ಶಾರದೆ
(ಪುಟ 211)



ಥೈವಾನ್ ಚೈನಾದ ಕೃಪೆ
ಒಂದು ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿಕೊಟ್ಟಾಗ
(ಪುಟ 236)

ಕಾಲೇಜು ಹಾಸ್ಟಲ್, ಬೆಂಗಳೂರು ಸೆಂಟ್ರಲ್ ಕಾಲೇಜು ಹಾಸ್ಟಲ್ ಅಂದಿನ ಹಳೇ ಮೈಸೂರು ಸ್ಟೇಟಿಗೆ ಹೆಸರು ವಾಸಿಯಾಗಿದ್ದವು. ಐಶ್ವರ್ಯವಂತರ ಮಕ್ಕಳೇ ಅಲ್ಲಿ ಇರುವುದೆಂದು ಜನ ಸಾಮಾನ್ಯರ ನಂಬಿಕೆ. ನನ್ನಂತವನಿಗೆ ಅಲ್ಲಿ ಇರುವುದಕ್ಕೆ ಅರ್ಹತೆ ಇಲ್ಲವೆಂಬುವಂತಿತ್ತು. ಅಂತೂ ಕೊನೆಗೆ ಮಹಾರಾಜಾಸ್ ಕಾಲೇಜು ಹಾಸ್ಟಲಿಗೆ ಸೇರಿದ್ದಾಯಿತು. ಸುಮಾರು 200 ಹುಡುಗರಿರುವ ಹಾಸ್ಟಲಿನಲ್ಲಿ ಇಂಟರ್‌ಮೀಡಿಯಟ್‌ನವರು ಕೇವಲ ಹದಿನೆಂಟು. ಉಳಿದವರೆಲ್ಲ ಎಂ.ಎ., ಬಿ.ಎ. ಮಾಡುತ್ತಿದ್ದವರು. ಕೆಲವರು ಮಹಾರಾಜ ಕಾಲೇಜಿನ ಲೆಕ್ಚರರ್ ಕೂಡ ಇದ್ದರು.

ನಾನು ಮತ್ತು ಯಸಳೂರು ಅಣ್ಣಪ್ಪಶೆಟ್ಟರ ಮಗ ಶಿವಪ್ಪ ಮೊದಲನೆಯ ವರುಷ ಒಂದು ರೂಮಿನಲ್ಲಿ ಇದ್ದೆವು. ನಮ್ಮ ಅಕ್ಕಪಕ್ಕದಲ್ಲಿ ಮುಂದೆ ಹೆಸರಾಂತ ಅರ್ಥಶಾಸ್ತ್ರಜ್ಞರು, ಡಾ॥ ವೆಂಕಟಗಿರಿಗೌಡ್ರು ಮತ್ತು ಡಾ॥ ನಂಜಂಡಪ್ಪನವರಿದ್ದರು. ವರುಷದಲ್ಲಿ ಒಂದೆರಡು ಬಾರಿ ಅವರೊಂದಿಗೆ ಆಗ ಮಾತನಾಡಿದ್ದನೋ ಇಲ್ಲವೋ ತಿಳಿಯದು. ಮಲ್ಲಯ್ಯ ಎಂಬುವರು ಎಂ.ಎ. ಪಾಸು ಮಾಡಿ, ಲೆಕ್ಚರರ್ ಆಗಿ ಹಾಸ್ಟಲ್‌ನಲ್ಲಿಯೇ ಇದ್ದರು. ಅವರು ಎಂ.ಎ.ನಲ್ಲಿ ಏಳನೇ ರ್‍ಯಾಂಕ್ ಎಂದು ಹೇಳುತ್ತಿದ್ದರು. ಎಸ್.ಎಸ್.ಎಲ್.ಸಿ.ಯಲ್ಲಿ ಏಳನೇ ರ್‍ಯಾಂಕ್ ಎಂದರೆ ಹೆಮ್ಮೆ ಪಡುವಂತಹದು. ಆದ್ದರಿಂದ ಮೊದಮೊದಲು ಮಲ್ಲಯ್ಯನವರ ಹತ್ತಿರ ಹೋಗುವುದೆಂದರೆ ಒಂದು ತರ ಅಂಜಿಕೆ. ಕೊನೆ ಕೊನೆಗೆ ತಿಳಿದದ್ದು ಅವರ ಎಂ.ಎ. ತರಗತಿಯಲ್ಲಿ ಇದ್ದವರೆ ಏಳು ಜನರೆಂದು ಅವರದು ಏಳನೇ ರ್‍ಯಾಂಕ್ ಎಂದು.

ಕಾಲೇಜು ಹಾಸ್ಟಲ್ ವಾಚ್‌ಮನ್ ಮಂಚಯ್ಯ ಬೇಗ ಪರಿಚಯವಾದವರಲ್ಲಿ ಒಬ್ಬ. ಶರಾಫ್ ಅಣ್ಣೇಗೌಡರ ತಮ್ಮ ಹೆಚ್.ಎನ್. ಅನಂತಸ್ವಾಮಿಗೌಡರು ಮೈಸೂರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರಾಗಿದ್ದರು. ವಾಚ್‌ಮನ್ ಮಂಚಯ್ಯ ಕಳ್ಳನೊಬ್ಬನನ್ನು ಹಿಡಿದಿದ್ದಕ್ಕೆ ಒಂದು ರಿವಾಲ್ವರ್ ಕೊಡಿಸಿದ್ದರೆಂದು ಈ ಇನ್ಸ್‌ಪೆಕ್ಟರ ಮೇಲೆ ಅವನಿಗೆ ಬಹಳ ಗೌರವ. ಅವನ ಹತ್ತಿರ ಎಂದೂ ರಿವಾಲ್ವರ್ ಇದ್ದದ್ದು ನೋಡಿರಲಿಲ್ಲ. ಹೆಚ್.ಎನ್.ಎ. ಗೌಡರು ಕೋರ್ಟಿಗೆ ಹೋಗಬೇಕಾದರೆ ಹಾಸ್ಟಲ್ ಮುಂದೆಯೇ ಹೋಗಬೇಕಿತ್ತು. ಅವರು ದೂರದಿಂದ ಬರುತ್ತಿರುವಾಗಲೇ ನಾನು ಎಲ್ಲಿದ್ದರೂ ಓಡಿ ಬಂದು "ಸ್ವಾಮಿ ನಿಮ್ಮ ಮಾವ ಬರುತ್ತಿದ್ದಾರೆ" ಎಂದು ತಿಳಿಸುತ್ತಿದ್ದ. ನಾನು ತಕ್ಷಣ ರೂಮಿಗೆ ಹೋಗಿ ಓದುತ್ತ ಕುಳಿತಿರುತ್ತಿದ್ದೆ. ಹೀಗಾಗಿ ನಾನಿದ್ದ ಎರಡು ವರುಷ ಅವರು ಬಂದಾಗಲೆಲ್ಲಾ ರೂಮಿನಲ್ಲಿ ಓದುತ್ತ ಕುಳಿತಿರುತ್ತಿದ್ದೆ. ಅವರ ಮನೆಯಲ್ಲಿ ನನ್ನ ಉದಾಹರಣೆಯನ್ನು ಹೇಳಿ 'ಅವನಿಗೆ ಹೇಳುವವರು ಕೇಳುವವರು ಯಾರೂ ಇಲ್ಲದಿದ್ದರೂ ಸದಾ ಓದಿ ಕೊಳ್ಳುತ್ತಿರುತ್ತಾನೆ' ಎಂದು ಅವರ ಮಕ್ಕಳಿಗೆಲ್ಲಾ ಹೇಳುತ್ತಿದ್ದರಂತೆ. ನಿಮ್ಮಿಂದ ನಮಗೆ ಬೈಗಳ ತಪ್ಪುವುದಿಲ್ಲವೆಂದು ನನ್ನನ್ನು ಕಂಡಾಗಲೆಲ್ಲ ಅವರ ಮಕ್ಕಳು ಹೇಳುತ್ತಿದ್ದರು.

ಮಹಾರಾಜ ಕಾಲೇಜು ಹಾಸ್ಟಲಿನಲ್ಲಿ ಮತ್ತೊಬ್ಬ ಮರೆಯಲಾಗದ ವ್ಯಕ್ತಿ ಎಂದರೆ ಹೆಡ್ ಕುಕ್ ಗಯೂಸಾಬ್. ಅವನ ಕೈಯಲ್ಲಿ ಏನು ಚಳಕವಿತ್ತೋ ತಿಳಿಯದು. ಅವನ ಅಡಿಗೆ ಅದರಲ್ಲೂ ಮಾಂಸಾಹಾರ ಮತ್ತು ಎಗ್‌ಸ್ಪೀಟ್ ಮತ್ತೊಬ್ಬ ಮಾಡಿರಲಾರ. ಅವನು ಯಾವತ್ತೂ ಯಾವ ಹುಡುಗರ ಮುಂದೆಯೂ ತಲೆಎತ್ತಿ ನಿಂತವನಲ್ಲ. ಹೆಗಲ ಮೇಲಿದ್ದ ಟವಲಿನಿಂದ ಹೆಂಗಸರು ಸೆರಗನ್ನು ಮುಖಕ್ಕೆ ಮುಚ್ಚಿಕೊಳ್ಳುವ ಹಾಗೆ ಯಾರನ್ನಾದರೂ ಕಂಡರೆ ಮುಚ್ಚಿಕೊಳ್ಳುತ್ತಿದ್ದ.

ಮಹಾರಾಜ ಕಾಲೇಜು ಹಾಸ್ಟಲಿನ ಮಂತ್ ಎಂಡ್ ಫೀಸ್ಟ್ ಬಹಳ ಅದ್ದೂರಿಯಾಗಿರುತ್ತಿತ್ತು. ಮೂರು ನಾಲ್ಕು ತರಹ ನಾನ್‌ವೆಜ್, ಮೂರು ನಾಲ್ಕು ಬಗೆ ಸಿಹಿ ಮತ್ತು ಮಿಕ್ಕೆಲ್ಲ ಭಕ್ಷ್ಯಗಳು. ಅವುಗಳಲ್ಲಿ ಯಾವುದನ್ನೂ ನಮ್ಮ ಮನೆಯಲ್ಲಿ ನೋಡಿರಲಿಲ್ಲ. ಪಾಯಸ ತಂಬಿಟ್ಟು, ಸಿಹಿ ಕಡುಬು ಬಿಟ್ಟರೆ ಬೇರೆ ಸಿಹಿ ನೋಡಿರಲಿಲ್ಲ. ಹೀಗಿದ್ದರೂ ಕೆಲವು ಹುಡುಗರು ಅರ್ಧಂಬರ್ಧ ತಿಂದು ಅಡಿಗೆಯವರಿಗೆ, ಪ್ರಿಫೆಕ್ಟರಿಗೆ ಬಾಯಿಗೆ ಬಂದಂತೆಲ್ಲ ಬೈದು, ಊಟ ಬಿಟ್ಟು ಹೋಗುತ್ತಿದ್ದರು. ಅವರ ಮನೆಗಳಲ್ಲಿ ಇನ್ನೆಂತಹ ಊಟ ಮಾಡುತ್ತಾರೆಂದು ನನಗೆ ವಿಸ್ಮಯವಾಗುತ್ತಿತ್ತು. ಎಷ್ಟೋ ಬಾರಿ ಹಾಸ್ಟಲಿನ ಹಬ್ಬದ ಊಟದ ಮುಂದೆ ಕುಳಿತಾಗ ಮನೆಯವರ ಯೋಚನೆ ಬರುತ್ತಿತ್ತು. ಅವರು ಜೀವನದಲ್ಲಿ ಒಮ್ಮೆಯಾದರೂ ಇಂತಹ ಊಟ ನೋಡಿದವರಲ್ಲ ಎಂಬ ಚಿಂತನೆ. ಉಂಡರೂ ಮನಸ್ಸಿಗೆ ಸಂತೋಷವಾಗುತ್ತಿರಲಿಲ್ಲ.

ಎರಡನೇ ವರುಷ ನಂದಿಪುರ ಎನ್. ಎಂ. ಜಯರಾಂ ಮತ್ತು ನಾನು ರೂಮ್‌ಮೇಟ್. ಅವರು ದೊಡ್ಡ ಪ್ಲಾಂಟರ್ ಫ್ಯಾಮಿಲಿಯಿಂದ ಬಂದವರು. ಅವರ ಸಂಬಂಧಿಕರೇ ಚಿಕ್ಕಮಗಳೂರು ಶಿವಮೊಗ್ಗದಿಂದ ಬಂದವರು ಏಳೆಂಟು ಹುಡುಗರಿದ್ದರು. ಅವರ ಚಿಕ್ಕಪ್ಪನ ಮಗ ಎನ್.ಎಲ್. ಸುಂದರೇಶ್ವರ ನನ್ನ ಕ್ಲಾಸ್‌ಮೇಟ್. ಅವರು, ಖ್ಯಾತ ಸಾಹಿತಿ ಹಾ.ಮಾ. ನಾಯಕರ ರೂಮ್‌ನಲ್ಲಿದ್ದರು. ನಾನು ಮಲೆನಾಡಿನವನೆಂಬ ಕಾರಣದಿಂದ ಅವರಲ್ಲಿ ನಾನೊಬ್ಬನೆಂದು ಪರಿಗಣಿಸಿದ್ದರು. ಆದರೆ ಖರ್ಚು ವೆಚ್ಚದಲ್ಲಿ ಅವರಿಗೆ ಸರಿಸಾಟಿಯಾಗಿರಲು ಸಾಧ್ಯವೇ ಇರಲಿಲ್ಲ. ಊಟದನಂತರ ಎಲ್ಲರೂ ಸೇರಿ ಹರಟೆ ಹೊಡೀಬೇಕು. ಜಯರಾಂ ರವರ ಚಿಕ್ಕಪ್ಪ (ತಾಯಿ ತಂಗಿ ಗಂಡ) ಕಡಿದಾಳ್ ಮಂಜಪ್ಪನವರು ಮಂತ್ರಿಯಾಗಿದ್ದರು. ಅವರ ಭೂ ಸುಧಾರಣೆ ಕಾನೂನು ಇವರಾರಿಗೂ ಹಿಡಿಸುತ್ತಿರಲಿಲ್ಲ. ಅಪ್ಪಣ್ಣಹೆಗ್ಗಡೆ ಕಮ್ಯೂನಿಷ್ಟ ತತ್ವಪರ. ಮಲೆನಾಡಿನ ಇತರೆಯವರಿಗೆ ಇವರ ತತ್ವ ಹಿಡಿಸದಿದ್ದರೂ ದಿನಕ್ಕೆ ಒಂದು ಬಾರಿಯಾದರೂ ಅವರೊಡನೆ ಕುಳಿತು ಮಾತನಾಡುವ ಚಪಲ. ಈ ಮಧ್ಯೆ ಸೀನಿಯರ್ ಇಂಟರ್‌ಮೀಡಿಯಟ್ ಪರೀಕ್ಷೆ ನನ್ನ ಮುಂದಿನ ವಿದ್ಯಾಭ್ಯಾಸದ ಅಳಿವು ಉಳಿವಾಗಿತ್ತು. ಇವರೊಡನೆ ಹರಟೆ ಹೊಡೆದು ಅವರೆಲ್ಲ ಮಲಗಿದ ಮೇಲೆ ಓದಿಕೊಳ್ಳುತ್ತಿದ್ದೆ. ಪರೀಕ್ಷೆ ಫಲಿತಾಂಶ ಬಂದಮೇಲೆ ಇವನು ಹೇಗೆ ಪಾಸಾದ ಎಂದು ಎಲ್ಲರ ಅನಿಸಿಕೆ.

ಜಯರಾಂರವರಿಗೆ ಊರಿನಿಂದ ಹಬ್ಬದಲ್ಲೆಲ್ಲ ತಿಂಡಿ ತಿನಿಸು ಕಳುಹಿಸುತ್ತಿದ್ದರು. ಒಮ್ಮೆ ಯಾವುದೋ ಬಸ್ಸಿನಲ್ಲಿ ಒಂದು ಬುಟ್ಟಿಯನ್ನು ಕಳುಹಿಸಿ ಅದನ್ನು ಬಸ್‌ಸ್ಟಾಂಡಿನಿಂದ ಇಳಿಸಿಕೊಂಡು ಬರಬೇಕಾಗಿ ಸೂಚನೆ ಬಂದಿತ್ತು. ಅದರಲ್ಲಿರುವ ಮುಖ್ಯ ಐಟಂಗಳು ಕೂಡ ತಿಳಿದಿತ್ತು. ಅಂದು ಸಂಜೆ ನಮಗೆ ಮೆಸ್ಸ್‌ನಲ್ಲಿ ಊಟ ಬೇಡವೆಂದು ಹೇಳಿ ಈ ಹಬ್ಬದೂಟಕ್ಕಾಗಿ ಕಾದುಕುಳಿತೆವು. ದೊಡ್ಡ ಬುಟ್ಟಿ ಬಂತು. ಬಿಚ್ಚಿದ್ದಾಗ ಕಂಡದ್ದು ಬೂದುಗುಂಬಳಕಾಯಿ, ಧಾನ್ಯಗಳು, ಬಗೆಬಗೆಯ ದಾನದ ವಸ್ತುಗಳು. ಆ ಬುಟ್ಟಿಯನ್ನು ತಂದವರು ಹೇಳಿದ್ದು, ಬಸ್ಸಿನ ಮೇಲೆ ಎರಡು ಬುಟ್ಟಿ ಇತ್ತು, ಇನ್ನೊಂದು ಬುಟ್ಟಿಯನ್ನು ಯಾರೋ ಪುರೋಹಿತರು ಇಳಿಸಿಕೊಂಡರು, ಇದನ್ನು ನಾವು ತಂದೆವು ಎಂದು. ನಮ್ಮಗತಿ ಹೀಗಾಯಿತಲ್ಲ ಎಂದು ಚಿಂತಿಸುವುದಕ್ಕಿಂತ ಆ ಪುರೋಹಿತರ ಗತಿ ಏನಾಗಿರಬೇಕು ಎಂದು ಚಿಂತನೆ! ಅದರಲ್ಲಿದ್ದ ಮಾಂಸಾಹಾರ ಪುರೋಹಿತರಿಗೆ ಷಾಕ್ ಆಗಿರಬೇಕು. ಎಲ್ಲರೂ ಬಿದ್ದು ಬಿದ್ದು ನಕ್ಕಿದ್ದಾಯಿತು. ಅದೇ ಅಂದಿನ ಭರ್ಜರಿ ಊಟ.

ಜಯರಾಂರವರು ಒಂದು ಒಳ್ಳೆ ಸೈಕಲ್ ಇಟ್ಟಿದ್ದರು. ಯುಗಾದಿಯ ಹಬ್ಬದ ದಿನ ರಾಜಾ ಮಾರ್ಕೆಟ್ಟಿಗೆ ಹೋಗಿ ಏನನ್ನೊ ತರಬೇಕೆಂದು ಸೈಕಲ್ ತೆಗೆದುಕೊಂಡು ಹೋದೆ. ಶ್ರೀರಾಂ ಪೇಟೆಯಿಂದ ಮಾರ್ಕೆಟ್ಟಿಗೆ ಒಳಗೆ ಹೋಗುವಾಗ ಅರಳಿ ಮರವನ್ನು ಬಳಸಿ ಹೋಗಬೇಕಿತ್ತು. ನಾನು ನೆಟ್ಟಗೆ ಹೋದೆ. ಅಲ್ಲಿದ್ದ ಪೊಲೀಸ್‌ನವನು ರಾಂಗ್‌ಸೈಡಿನಲ್ಲಿ ಹೋದೆನೆಂದು ಹಿಡಿದುಕೊಂಡ. ಎಷ್ಟಾದರೂ ಬಿಡಲಿಲ್ಲ. ಅಲ್ಲಿಯೇ ಪಾದರಕ್ಷೆ ಹೊಲಿಯುವವನ ಹತ್ತಿರ ನನ್ನನ್ನು ಕಳುಹಿಸಿದ. ಅವನು ಇನ್ನೇನು ಮಾಡುತ್ತೀರಿ ಸ್ವಾಮಿ ನಾಲ್ಕು ಆಣೆಕೊಟ್ಟು ಹೋಗಿ ಎಂದು ಹೇಳಿದ. ನನ್ನ ಜೇಬಿನಲ್ಲಿ ನಾಲ್ಕಾಣೆ ಕೂಡ ಇರಲಿಲ್ಲ. ನಾಳೆ ಪೊಲೀಸ್ ಸ್ಟೇಷನ್‌ಗೆ ಬಂದು ಫೈನು ಕಟ್ಟಿ ತೆಗೆದುಕೊಂಡು ಹೋಗು ಎಂದು ಹೇಳಿ ಒಂದು ಚೀಟಿಯನ್ನು ಕೊಟ್ಟುಕಳುಹಿಸಿದ. ಹೀಗಾಯಿತೆಂದು ಜಯರಾಂಗೆ ಹೇಳಲೇಇಲ್ಲ. ಇನ್ಸ್‌ಪೆಕ್ಟರ್ ಹೆಚ್.ಎನ್.ಎ. ಗೌಡರು ಅಂದು ಸಂಜೆ ಹಬ್ಬದ ಪ್ರಯುಕ್ತ ಮನೆಗೆ ಬರಹೇಳಿದ್ದರು. ಸೆಂಟ್ರಲ್ ಪೊಲೀಸ್ ಸ್ಟೇಷನ್ ಮಹಡಿ ಮೇಲೆ ಅವರ ವಾಸ. ಕೆಳಗಡೆ ಒಂದು ದೊಡ್ಡ ಹಾಲ್‌ನಲ್ಲಿ ಕಾನೂನು ಬಾಹಿರ ಸೈಕಲ್‌ಗಳನ್ನೆಲ್ಲಾ ಇಟ್ಟಿದ್ದರು. ಅವುಗಳ ಮಧ್ಯೆ ನನ್ನ ಸೈಕಲ್ ಎದ್ದು ಕಾಣುತ್ತಿತ್ತು. ಮಹಡಿ ಮೇಲೆ ಹೋಗುವುದಕ್ಕೆ ಮುಂಚಿತವಾಗಿಯೇ ಅವನ್ನು ನೋಡಿಕೊಂಡು ಹೋಗಿದ್ದೆ. ತಿಂಡಿ ತಿನಿಸೆಲ್ಲ ಆದಮೇಲೆ ನಾನು ಹೋಗುತ್ತೇನೆಂದು ಹೇಳಿ ಹೊರಟೆ. ಹೇಗೆ ಬಂದಿದ್ದಿ ಎಂದು ಕೇಳಿದರು. ಸೈಕಲ್‌ನಲ್ಲಿ, ಕೆಳಗೆ ಸೈಕಲ್‌ಗಳೆಲ್ಲ ಇರುವಲ್ಲಿ ಇಟ್ಟಿದ್ದೇನೆಂದೆ. ಅಲ್ಲಿಯಾಕಿಡಲು ಹೋದೆ, ಅವೆಲ್ಲ ಕಳ್ಳ ಸೈಕಲ್ಲುಗಳು ಎಂದು ಹೇಳಿ ಯಾವುದೋ ನಂಬರಿನ ಒಬ್ಬ ಪೋಲಿಸ್ ಪೇದೆಯನ್ನು ಕರೆದು ಕೆಳಗಡೆ ರೂಮ್‌ನಲ್ಲಿ ಸೈಕಲ್ ಇಟ್ಟಿದ್ದಾರಂತೆ ತೆಗೆದುಕೊಡು ಎಂದು ಹೇಳಿದರು. ಸೈಕಲ್ ಹತ್ತಿ ಹಾಸ್ಟಲಿಗೆ ಹೋದೆ.

ಕೆಲವು ದಿನಗಳು ಕಳೆದ ನಂತರ ಬೆಳಿಗ್ಗೆ ಆರು ಗಂಟೆಗೆ ಒಬ್ಬ ಪೊಲೀಸ್ ಪೇದೆ ನನ್ನ ರೂಮ್ ಬಾಗಿಲ ಮುಂದೆ ನಿಂತಿದ್ದ. ನಾನು ಸ್ನಾನ ಮಾಡಿಕೊಂಡು ಬಂದು ಇವನನ್ನು ನೋಡಿದೊಡನೆ ಮೈಯೆಲ್ಲಾ ಬೆವರೂರಿತು. ಅವನಿಗೂ ನನ್ನನ್ನು ನೋಡಿ ಏನೋ ಒಂದು ತರ ಆಯಿತು. ಇವನೆ ಅಂದು ಯುಗಾದಿ ಹಬ್ಬದ ದಿವಸ ನನ್ನ ಸೈಕಲ್ ಹಿಡಿದದ್ದು. ಇಂದು ಅವನ ಕೈಯಲ್ಲಿ ಒಂದು ಚೀಟಿಯನ್ನು ಕೊಟ್ಟು ಕಳುಹಿಸಿದ್ದರು. ಅದರಲ್ಲಿ ನಾನು ಮತ್ತು ಇನ್ಸ್‌ಪೆಕ್ಟರ ಎರಡನೇ ಮಗ ಪುಟ್ಟಸ್ವಾಮಿ ಇಬ್ಬರು ಪ್ಯಾಲೇಸ್ ದರ್ಬಾರಿಗೆ ಹೋಗಲು ಪಾಸ್ ತೆಗೆದಿಟ್ಟಿರುವುದಾಗಿ ಅದೇ ಪೊಲೀಸ್ ನಮ್ಮಿಬ್ಬರನ್ನು ಕರೆದುಕೊಂಡು ಹೋಗಿ ಪೇಟ, ಕರಿಕೋಟು ಹಾಕಿಸಿ ಒಳಗೆ ಬಿಡುತ್ತಾನೆಂದು ತಿಳಿಸಿದ್ದರು. ಸದ್ಯ ಬದುಕಿದೆ ಎಂದು ಒಳಗೆ ಹೋದೆ. ಅವನಿಗೂ ಅಂದು ಏನಾಯಿತೆಂದು ತಿಳಿದಿರಬೇಕು.

ಒಂದು ದಿನ ಸಿರಗೂರು ಎನ್.ಕೆ. ಪುಟ್ಟೇಗೌಡರು, ಅವರ ಮಗ ಕಲ್ಲಪ್ಪ, ಅಣ್ಣನ ಮಗ ಜಯರಾಮ್, ತಮ್ಮನ ಮಗ ಸುಂದರೇಶ್‌ರವರನ್ನು ನೋಡಲು ನಮ್ಮ ರೂಮಿಗೆ ಬಂದಿದ್ದರು. ಅವರಾರು ಇಲ್ಲದ ಪ್ರಯುಕ್ತ ನನ್ನೊಡನೆ ಸಂಭಾಷಣೆ ಪ್ರಾರಂಭಿಸಿ, ನಾನು ಯಾರು, ಎಲ್ಲಿಂದ ಬಂದಿದ್ದೇನೆ, ಏನು ಓದುತ್ತಿರುವೆ ಎಲ್ಲವನ್ನೂ ವಿಚಾರಿಸಿದ ನಂತರ ಗೊದ್ದು ದೊಡ್ರೆ ಮನೆ ತಮ್ಮಣ್ಣ ಗೌಡರು ನಿಮಗೇನಾಗಬೇಕೆಂದು ಕೇಳಿದರು. ಅವರು ನನ್ನ ದೊಡ್ಡಪ್ಪ ಎಂದ ಮೇಲೆ ಒಳಗೆ ಬಂದು ಆಸೀನರಾಗಿ ತಮ್ಮಣ್ಣಗೌಡರ ಬಗ್ಗೆ ನಾಲ್ಕಾರು ಮೆಚ್ಚುಗೆ ಮಾತನಾಡಿದರು.

ಆಗಿನ ಕಾಲದಲ್ಲಿ ವಿದ್ಯಾಭ್ಯಾಸ ದುಸ್ತರವಿದ್ದರೂ ತಮ್ಮಣ್ಣಗೌಡರು ಓದಿದ್ದು, ಮಂಗಳೂರಿಗೆ ಹೋಗಿ ಕಾಫಿ ವ್ಯಾಪಾರ ಮಾಡುತ್ತಿದ್ದದ್ದು, ಶೇಂದಿ ಕಂಟ್ರಾಕ್ಟ್ ಮಾಡುತ್ತಿದ್ದದ್ದು, ಆ ಪ್ರದೇಶಕ್ಕೆ ಅವರು ಹೆಚ್ಚಿನ ಕಂದಾಯ ಕಟ್ಟುತ್ತಿದ್ದದ್ದು ಮುಂತಾದ, ನನಗೆ ತಿಳಿಯದ, ಅನೇಕ ವಿಷಯಗಳನ್ನು ಅವರಿಂದ ಕೇಳಿದಾಗ ಆಶ್ಚರ್ಯವಾಯಿತು. ತಮ್ಮಣ್ಣಗೌಡರನ್ನು ಅವರು ಮೊದಲು ಸಂಧಿಸಿದ ಸಂದರ್ಭ, ಮಲೆನಾಡು ಒಕ್ಕಲಿಗರ ಪುರೋಭಿವೃದ್ಧಿ ಸಂಘದ ಸಭೆ 1910ರ ದಶಕದಲ್ಲಿ ಹೆತ್ತೂರಿನಲ್ಲಿ ಸೇರಿದಾಗ. ನಂತರ ಇವರು 1941ರ ಚುನಾವಣೆಯಲ್ಲಿ ಎಂ.ಆರ್.ಎ.ಗೆ ನಿಂತಾಗ ಪ್ರಚಾರದ ಸಮಯದಲ್ಲಿ ಒಂದು ದಿನ ಗೊದ್ದಿನಲ್ಲಿ ನಮ್ಮ ಹಳೆಮನೆಯಲ್ಲಿ ಉಳಿದಿದ್ದನ್ನು ಜ್ಞಾಪಿಸಿಕೊಂಡರು. ಒಕ್ಕಲಿಗರ ಸಂಘದ ಚಟುವಟಿಕೆಗಳಲ್ಲಿ ನಂದೀಪುರದ ಸಹೋದರರ ಪಾತ್ರ ಹಿರಿದು. ಸಂಘವು ಕೈಗೊಂಡ ನಿರ್ಣಯಗಳಲ್ಲಿ ಮುಖ್ಯವಾಗಿ ಮದ್ಯಪಾನ ನಿಷೇಧ, ಮಲೆನಾಡಿನ ಮದುವೆಗಳಲ್ಲಿ ಮದ್ಯ–ಮಾಂಸಗಳನ್ನು ಮಾಡುವುದನ್ನು ನಿಲ್ಲಿಸುವುದು, ದುಂದುವೆಚ್ಚ ಕಡಿಮೆ ಮಾಡುವುದು, ತೆರಿನ ಹಣ ತಪ್ಪಿಸುವುದು, ಚೌಡಿ ದೆವ್ವಗಳಿಗೆ ಬಲಿ ಕೊಡುವುದು ನಿಲ್ಲಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಒಕ್ಕಲಿಗರ ಹಾಸ್ಟಲ್ ತೆರೆಯುವುದು ಮುಂತಾದ ಸುಧಾರಣೆ ಕ್ರಮಗಳನ್ನು ಮೆಚ್ಚಿಕೊಂಡು ಸರ್. ಎಮ್. ವಿಶ್ವೇಶ್ವರಯ್ಯನವರು ಸ್ವಯಂ ಪ್ರೇರಿತ ಮೂಡುಗೆರೆ ಸಂಘದ ಸಭೆಯಲ್ಲಿ ಭಾಗವಹಿಸಿದ್ದನ್ನು ಪ್ರಸ್ತಾಪಿಸಿದರು.

ಒಟ್ಟಿನಲ್ಲಿ ನಾನು ಗೊದ್ದು ತಮ್ಮಣ್ಣಗೌಡರ ಕುಟುಂಬದವನೆಂದು ತಿಳಿದ ಮೇಲೆ ನನ್ನ ಮೇಲಿನ ಅಭಿಮಾನ ಹೆಚ್ಚಾಯಿತೆಂದು ತೋರುತ್ತದೆ. ಮುಂದೆ ಅವರ ಅಂತ್ಯ ಕಾಲದವರೆಗೂ ನನ್ನನ್ನು ಕಂಡಾಗಲೆಲ್ಲಾ ಬಹಳ ಆತ್ಮೀಯವಾಗಿ ಕಾಣುತಿದ್ದರಲ್ಲದೆ, ಮಲೆನಾಡಿನ ಜನ ಜೀವನದ ಬಗ್ಗೆ ಹೆಚ್ಚು ಕಾಳಜಿ ತೋರಿಸುತ್ತಿದ್ದರು. ಇದನ್ನು ನಾನು ಇಲ್ಲಿ ಏಕೆ ಪ್ರಸ್ತಾಪಿಸಿದೆ ಎಂದರೆ ಅಂದಿನ ಮಲೆನಾಡಿನಲ್ಲಿ ಅಕ್ಷರಸ್ತರಾಗಿ ವ್ಯವಹಾರಜ್ಞಾನವುಳ್ಳವರಿಗಿದ್ದ ಸ್ಥಾನಮಾನ, ಕೆಲವೇ ವಿದ್ಯಾವಂತ ಮುಖಂಡರು ಕೈಗೊಂಡ ಸುಧಾರಣೆ ಕ್ರಮಗಳು ಜನಾಂಗದ ಇಂದಿನ ಪೀಳಿಗೆಯ ಅರಿವಿಗೆ ಬರದೇ ಇರಬಹುದು. ನಾನು ಮೊದಲೇ ತಿಳಿಸಿರುವಂತೆ ನಮ್ಮ ಕುಟುಂಬ ದಲ್ಲಿ ತಮ್ಮಣ್ಣಗೌಡರನ್ನು ಬಿಟ್ಟು ಅವರ ಸಹೋದರಿಗಾರಿಗೂ ಅಕ್ಷರ ಗಂಧವಿರಲಿಲ್ಲ. ಅವರ ದೂರ ದೃಷ್ಟಿಯಿಂದ ಅನುಕೂಲವಿಲ್ಲದಿದ್ದರೂ ಒಬ್ಬ ವಿದ್ಯಾವಂತನಿಗೆ ಹೆಣ್ಣು ಕೊಟ್ಟು ಸಂಬಂಧ ಮಾಡಿದ್ದು, ತತ್ಸಂಬಂಧದಿಂದ ನಮ್ಮ ಕುಟುಂಬದ ಅನೇಕರು ವಿದ್ಯಾವಂತ ರಾಗಿದ್ದು ಸಣ್ಣವಿಷಯವೇನಲ್ಲ.

ಮೈಸೂರಿನಲ್ಲಿ ಮೊದಲನೆ ವರುಷ ನಾನು ಮತ್ತು ನನ್ನ ರೂಮ್‌ಮೇಟ್ ಕ್ರಾಫರ್ಡ್ ಹಾಲಿನಲ್ಲಿ ನಡೆಯುತ್ತಿದ್ದ ವೈಜಯಂತಿಮಾಲಾಳ ಡ್ಯಾನ್ಸ್ ನೋಡಲು ಹೋಗಿದ್ದೆವು. ಒಳಗೆ ಹೋಗಲು ಅಷ್ಟು ದುಡ್ಡು ಎಲ್ಲಿಂದ ಬರಬೇಕು. ಕಾಸ್ಮೊಪಾಲಿಟನ್ ಕ್ಲಬ್ಬಿನವರ ನಿಧಿ ಸಂಗ್ರಹಣೆಗೆ ಆ ಡ್ಯಾನ್ಸ್ ವ್ಯವಸ್ಥೆ ಮಾಡಿದ್ದರು. ನಾವು ಕುತೂಹಲದಿಂದ ಕಿಟಕಿಯ ಗ್ಲಾಸಿನಲ್ಲಿ ಇಣುಕಿ ನೋಡುತ್ತಿದ್ದೆವು. ಒಬ್ಬ ಪೊಲೀಸ್ ಹಿಂದಿನಿಂದ ಬಂದು ಇಬ್ಬರ ಕುತ್ತಿಗೆ ಪಟ್ಟಿಯನ್ನು ಹಿಡಿದು, ಬನ್ನಿ ಸಾಹೇಬರು ಕರೆಯುತ್ತಾರೆ ಎಂದು ಹೇಳಿ ಎಳೆದುಕೊಂಡು ಹೋದ. ಎಷ್ಟು ದಮ್ಮಯ್ಯ ಹಾಕಿದರೂ ಅವನು ಬಿಡಲಿಲ್ಲ. ನೋಡಿದರೆ ಮುಂದೆ ಇದ್ದವರು ಇನ್ಸ್‌ಪೆಕ್ಟರ್ ಹೆಚ್.ಎನ್.ಎ. ಗೌಡರು. ಅವರೇ ನಮ್ಮನ್ನು ಕರೆ ತರಲು ಅವರ ಪೋಲಿಸ್ ಗತ್ತಿನಲ್ಲಿ ಹೇಳಿದ್ದರು.

ಅಪರಾಧಿಗಳನ್ನು ಹಿಡಿದುಕೊಂಡು ಬಂದ ಹಾಗೆ ನಮ್ಮಿಬ್ಬರನ್ನು ಕರೆತಂದಿದ್ದ. ಇವರಿಬ್ಬರನ್ನು ಕರೆದುಕೊಂಡು ಹೋಗಿ ಮುಂದೆ ಕೂರಿಸು ಎಂದು ಹೇಳಿ·ಆ ಪೊಲೀಸ್‌ನವನ ಜೊತೆ ಕಳುಹಿಸಿಕೊಟ್ಟರು. ವೈಜಯಂತಿಮಾಲಾರ ಡ್ಯಾನ್ಸ್ ನೋಡಿದ್ದು ಹೀಗೆ.

ಮೈಸೂರಿನಲ್ಲಿ ಎರಡು ವರುಷ ಇಂಟರ್‌ಮೀಡಿಯಟ್ ಮಾಡಿದ್ದು ನನ್ನ ಮುಂದಿನ ಜೀವನದ ನಾಂದಿಯಾಯಿತೆಂದು ಅಂದುಕೊಂಡಿದ್ದೇನೆ. ಓದಿದ್ದೆಲ್ಲ ಯುವರಾಜ ಕಾಲೇಜಿನಲ್ಲಿ, ಬಿಡುವೆಲ್ಲ ಕಳೆದದ್ದು ಮಹಾರಾಜ ಕಾಲೇಜು ಜೂನಿಯರ್ ಲೆಕ್ಚರ್ ಹಾಲ್‌ನಲ್ಲಿ. ಯುವರಾಜ ಕಾಲೇಜು ಸೀಬಯ್ಯನ ಫ್ಯಾಕ್ಟ್ರಿ ಎಂದು ಕರೆಯುತ್ತಿದ್ದರು. ಆಗ ಅದರ ಪ್ರಿನ್ಸಿಪಾಲ್ ಡಾ॥ ಸೀಬಯ್ಯ. ಇಂಟರ್‌ಮೀಡಿಯಟ್‌ನಲ್ಲಿ ಅದೆಷ್ಟು ಸೆಕ್ಷನ್ ಇದ್ದವೋ ತಿಳಿಯದು. ನಾನು ಇದ್ದದ್ದು "ಇ" ಸೆಕ್ಷನ್ ಸಿ.ಬಿ.ಜೆಡ್. ಜೊತೆಗೆ ಬಿ.ಎಸ್‌ಸಿ. ತರಗತಿಗಳು ಕೂಡ ನಡೆಯುತ್ತಿದ್ದವು. ಆಗ ಇಂಟರ್‌ಮೀಡಿಯಟ್ ಐದು ಸಾರಿ ಫೇಲಾದರೆ ಆರನೆ ಸಾರಿಗೆ ಖಡ್ಡಾಯವಾಗಿ ಕಾಲೇಜಿಗೆ ಸೇರಬೇಕಿತ್ತು. ಹಾಗೆ ಸೇರಿದವರು ನಮ್ಮ ಕ್ಲಾಸ್‌ನಲ್ಲಿ ಶೇಕಡ ಹತ್ತು ಹದಿನೈದರಷ್ಟಿದ್ದರು. ಅವರ ಗಲಾಟೆ ಹೇಳತೀರದು. ಆಗ ಆ ಕಾಲೇಜಿನ ಕಿಟಕಿಗಳಿಗೆ ರಾಡ್ಸ್ ಇರಲಿಲ್ಲ. ಅಟೆಂಡೆನ್ಸ್ ಗೋಸ್ಕರ ಬರುತ್ತಿದ್ದವರು ಬಹಳ. ಅಟೆಂಡೆನ್ಸ್ ಹಾಕಿದ ತಕ್ಷಣ ಕಿಟಕಿಯ ಮೂಲಕ ಹಿಂದಿದ್ದವರೆಲ್ಲ ಹೊರಗೆ ಹೋಗುತ್ತಿದ್ದರು. ಉಪಾಧ್ಯಾಯರು ಕೂಡ ಅದನ್ನೇ ಬಯಸು ತ್ತಿದ್ದರೆಂದು ಕಾಣುತ್ತದೆ. ಆ ವರ್ಷ ನಮ್ಮ ಕ್ಲಾಸ್‌ನಲ್ಲಿ 125 ಕ್ಕೆ ಪಾಸಾದವರು ಹನ್ನೊಂದು ಹುಡುಗರು ಮಾತ್ರ. ನಾನು ಹನ್ನೊಂದನೆಯವನು. ಅಂಕದಲ್ಲಲ್ಲ, ನನ್ನ ಫಲಿತಾಂಶ ಹೊರಬೀಳಬೇಕಾದರೆ ತಡವಾಯಿತು. ಹಾಸ್ಟಲ್ ಡ್ಯೂಸ್ ಕಟ್ಟಿದ ಮೇಲೆ ಅನೌನ್ಸ್ ಮಾಡಿದರು.

ಸಂಜೆ ಕಾಲೇಜು ಬಿಟ್ಟ ಮೇಲೆ ಹಾಸ್ಟಲ್‌ನಲ್ಲಿ ಕಾಫಿ ಕುಡಿದು ಮಹಾರಾಜ ಕಾಲೇಜು ಜೂನಿಯರ್ ಹಾಲ್‌ನಲ್ಲಿ ಹೋಗಿ ಕೂರುವುದು ವಾಡಿಕೆಯಾಗಿತ್ತು. ನಾನು ಅಲ್ಲಿಯ ತನಕ ಯಾವ ಆಟ ಆಡಿದವನಲ್ಲ. ಆದ್ದರಿಂದ ನನ್ನಂತವರಿಗೆ ಯಾವ ಆಟಕ್ಕೂ ಸೇರಿಸುತ್ತಿರಲಿಲ್ಲ. ಬೇರೆ ಹವ್ಯಾಸಕ್ಕೆ ದುಡ್ಡಿರುತ್ತಿರಲಿಲ್ಲ. ಯಾವ ಖರ್ಚಿಲ್ಲದ ಮನರಂಜನೆ ಅಂದರೆ ಇದೊಂದೆ. ಕಾಲಕ್ರಮೇಣ ಇದೇ ಒಂದು ಹವ್ಯಾಸವಾಗಿ ಪರಿಣಮಿಸಿತು. ನಾವು ಯುವರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದುತ್ತಿದ್ದರೂ, ಮಹಾರಾಜ ಕಾಲೇಜ್ ಹಾಸ್ಟಲಿನಲ್ಲಿದ್ದುದರಿಂದ ಮಹಾರಾಜ ಕಾಲೇಜಿನಲ್ಲಿದ್ದ ಎಲ್ಲಾ ಸಂಘಗಳಿಗೆ 5 ರೂಪಾಯಿ ಕೊಟ್ಟು ಮೆಂಬರ್ ಆಗಬಹುದಿತ್ತು. ಆಗ ಮಿತ್ರಮೇಳ ಸಂಘ ಬಹಳ ಚುರುಕಾಗಿತ್ತು. ದೇಶ ವಿದೇಶಗಳಿಂದ ಬರುತ್ತಿದ್ದ ಗಣ್ಯರಿಂದ ಉಪನ್ಯಾಸಗಳು ನಡೆಯುತ್ತಿದ್ದವು. ಅಲ್ಲಿದ್ದ ಪ್ರಾಧ್ಯಾಪಕರೆಲ್ಲಾ ಒಬ್ಬರಿಗಿಂತ ಒಬ್ಬರನ್ನು ಮೀರಿಸಿದವರು. ಡಾ॥ ಡಿಸೋಜ, ಡಾ॥ ಪುರುಷೋತ್ತಮ ಉಪನ್ಯಾಸಕ್ಕೆ ನಿಂತರೆಂದರೆ ಪಿನ್‌ಡ್ರಾಪ್ ಸೈಲೆನ್ಸ್ ಇರುತ್ತಿತ್ತು. ಎಸ್.ವಿ. ರಂಗಣ್ಣ, ಡಾ॥ ಕೃಷ್ಣರಾವ್, ಗೋಪಾಲಸ್ವಾಮಿ ಐಯಂಗಾರ್, ಸಿ. ಡಿ. ನರಸಿಂಹಯ್ಯ, ಡಾ॥ ಕೆ. ವಿ. ಪುಟ್ಟಪ್ಪ ಇವರನ್ನೆಲ್ಲ ಮರೆಯುವಂತಿಲ್ಲ. ಕೆ. ವಿ. ಪುಟ್ಟಪ್ಪನವರ ಭಾಷಣಕ್ಕಿಂತ ಅವರ ಬರಹವೇ ಮೇರು. ಆ ದಿನಗಳಲ್ಲಿ (1952-54) ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ನೃತ್ಯ, ಕಲೆ, ಸಂಗೀತ, ನಾಟಕ ನನ್ನಂತಹ ಹಳ್ಳಿ ಯಿಂದ ಹೋದ ಹುಡುಗರಿಗೆ ಬೆರಗುಗೊಳಿಸುವಂತಹವಿದ್ದವು. ಇವನ ಯೋಗ್ಯತೆ ಮೀರಿ ಮಹಾರಾಜ ಕಾಲೇಜು ಹಾಸ್ಟೆಲಿಗೆ ಸೇರಿದ ಎಂದು ಅಂದು ಬೈಸಿಕೊಂಡಿದ್ದು ಮುಂದೆ ನನ್ನ ಜೀವನದ ರೂಪ ರೇಷೆಗಳನ್ನು ತಿದ್ದುವಲ್ಲಿ ಈ ಎರಡು ವರುಷಗಳಲ್ಲಿ ಆದ ಅನುಭವ

ಅರಿತೋ ಅರಿಯದೆಯೋ ನನ್ನ ಮನಸ್ಸಿನ ಅಂತರಾಳದಲ್ಲಿ ಹೊಕ್ಕಿ ಸುಪ್ತಾವಸ್ಥೆಯಲ್ಲಿದ್ದು ಆಗಾಗ ಹೊರಹೊಮ್ಮುತ್ತಿದ್ದವು. ಮುಂದಿನ ಕಾಲೇಜು ವ್ಯಾಸಂಗ ಒಂದು ಯಾಂತ್ರಿಕವಾಗಿ· ನಡೆದಿತ್ತು. ಯಾವುದೇ ತತ್ವಾಧಾರಿತ ಜೀವನ ಮೌಲ್ಯಾಧಾರಗಳನ್ನು ವಿಕಾಸಗೊಳಿಸಲು ಸಹಾಯವಾಗಲಿಲ್ಲವೆಂದರೆ ತಪ್ಪಾಗಲಾರದು.

ಮೈಸೂರಿನಲ್ಲಿ ಇಂಟರ್‌ಮೀಡಿಯಟ್ ಓದುತ್ತಿದ್ದಾಗ ಮತ್ತೊಂದು ಮರೆಯಲಾರದ ದೃಶ್ಯವೆಂದರೆ ಖೆಡ್ಡ ಆಪರೇಷನ್ ನೋಡಿದ್ದು. ಮಹಾರಾಜ ಕಾಲೇಜು ಹಾಸ್ಟಲ್ ವಿದ್ಯಾರ್ಥಿಗಳಿಗೋಸ್ಕರವೇ ಒಂದು ದಿನ ಖೆಡ್ಡ ಆಪರೇಷನ್ ನೋಡಲು ಅನುಕೂಲ ಮಾಡಿ ಕೊಟ್ಟಿದ್ದರು. ಅಂದು ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರು ಕೂಡ ಬಂದಿದ್ದರು. ದಿನವೆಲ್ಲ ಮೂವಿ ಕ್ಯಾಮೆರ ಹಿಡಿದು ಕಾಡಾನೆಗಳನ್ನು ಗುಂಪಿನಿಂದ ಅಗಚಿ ರಿಂಗಿಗೆ ತಂದು ಹಗ್ಗಹಾಕಿ ಕಟ್ಟಿ ಹೊರಗೆ ಎಳೆಸಿಕೊಂಡು ಹೋಗುವ ದೃಶ್ಯವೆಲ್ಲವನ್ನು ಸೆರೆ ಹಿಡಿಯುತ್ತಿದ್ದರು.

* * * *

ಇಂಟರ್‌ಮೀಡಿಯಟ್ಟಿಗೆ ಹೋಗುವ ತನಕ ನನ್ನ ವಿದ್ಯೆ ಅಡ್ಡಗೋಡೆ ಮೇಲೆ ದೀಪ ಇಟ್ಟಹಾಗೆ ಇತ್ತು. ಪಾಸು ಫೇಲಿನ ಅಂತರ ಮನೆಯಲ್ಲಿ ಯಾರಿಗೂ ಏನೂ ಅನಿಸುತ್ತಿರಲಿಲ್ಲ. ಏಕೆಂದರೆ ಎಂದಾದರೂ ಒಂದು ದಿನ ಇವನು ಮನೆಗೆ ಬಂದು ಇತರರಂತೆ ಜೀವನ ಸಾಗಿಸಲು ಅನಿವಾರ್ಯ ಎಂದುಕೊಂಡಿದ್ದರು. ಇಂಟರ್‌ಮೀಡಿಯಟ್ ಪರೀಕ್ಷೆ ಕಟ್ಟಿ ಊರಿಗೆ ಬಂದ ಮೇಲೆ ಮುಂದೆ ಇವನು ಎರಡರಲ್ಲಿ ಒಂದು ಆಗಲೇಬೇಕೆಂದು ತೀರ್ಮಾನಿಸಿದ್ದ ಹಾಗಿತ್ತು. ಫೇಲಾದರೆ ಮನೆಯಲ್ಲಿ ನಾಲ್ಕು ಆರು ಕಟ್ಟುವುದು ಖಂಡಿತ (ನಾಲ್ಕು ಜನ ಅಣ್ಣ ತಮ್ಮಂದಿರು). ಪಾಸಾದರೆ ಮುಂದೆ ಕಳುಹಿಸದೆ ವಿಧಿ ಇಲ್ಲ. ಅಲ್ಲಿಯ ತನಕ ಆ ಊರಲ್ಲಿ ಯಾರೂ ಇಂಟರ್‌ಮೀಡಿಯಟ್ ಪಾಸ್ ಮಾಡಿರಲಿಲ್ಲ. ನನ್ನ ಮನಸ್ಸಿನಲ್ಲಿ ಹಿಂದೆಂದೂ ಆಗದ ದುಗುಡ ಆಗಾಗ ಆಗುತ್ತಿತ್ತು. ಆದರೂ ಪಾಸಾಗುವೆನೆಂಬ ನಂಬಿಕೆಯೂ ಇತ್ತು. ಫಲಿತಾಂಶ ಹೊರಬೀಳುವ ಸಮಯ ಹತ್ತಿರವಾದ ಹಾಗೆಲ್ಲಾ ಮನಸ್ಸಿನಲ್ಲಿ ಕಳವಳ. ಸತತವಾಗಿ ಸುರಿಯುವ ಮಳೆ. ಎಲ್ಲರೂ ಗದ್ದೆ ನೆಡುವ ಭರದಲ್ಲಿದ್ದರು. ಊರಿನಲ್ಲಿ ಯಾರೂ ವೃತ್ತ ಪತ್ರಿಕೆ ತರಿಸುತ್ತಿರಲಿಲ್ಲ. ಹೆತ್ತೂರಿನಲ್ಲಿ ಒಬ್ಬಿಬ್ಬರು ತರಿಸುತ್ತಿದ್ದರು. ಹೆತ್ತೂರಿನಿಂದ ಬರುವವರ ಹತ್ತಿರ ಪೋಸ್ಟ್‌ಮಾಸ್ಟರ್ ಕರಿಯಪ್ಪ ಭಾವ ಫಲಿತಾಂಶ ಪ್ರಕಟವಾದ ಪೇಪರ್ ಕಳುಹಿಸಿಕೊಟ್ಟಿದ್ದರು. ಸಂಜೆ ಗದ್ದೆ ಕೆಲಸವೆಲ್ಲ ಆದ ಮೇಲೆ ಅಂಗಡಿ ಮುಂದೆ ಕುಳಿತು ಚಾ ಕುಡಿದು ಬೀಡಿ ಸೇದಿ ಹರಟೆ ಹೊಡೆದು ಮನೆಗೆ ಹೋಗುವವರನೇಕರಿದ್ದರು. ಅಲ್ಲಿಗೆ ನನ್ನನ್ನು ಕರೆದು ಪೇಪರಿನಲ್ಲಿ ನಿನ್ನ ನಂಬರು ಇದೆಯೇ ಎಂದು ತಿರುವಿ ಮುರವಿ ಹುಡುಕಿಸಿದರು. ಯಾವ ಪಾರ್ಟ್‌ನಲ್ಲೂ ನನ್ನ ನಂಬರು ಇರಲಿಲ್ಲ. ವಿತ್‌ಹೆಲ್ಡ್ ಆದ ನಂಬರು ಇರುತ್ತಿರಲಿಲ್ಲ. ಮೂರು ಪಾರ್ಟ್‌ನಲ್ಲಿಯೂ ಫೇಲಾಗುವಂತಹ ವಿದ್ಯಾರ್ಥಿಯೇನಾಗಿರಲಿಲ್ಲ. ಆದರೂ ಅದೃಷ್ಟವನ್ನು ಕಂಡು ಹಿಡಿದವರಾರು? ಅಂಗಡಿ ಮುಂದೆ ಇದ್ದವರೆಲ್ಲ ನಿನಗೆ ಗೊರಗ ಗಟ್ಟಿ (ಮಳೆ ಕವಚ), ಕೆಸರಿನ ಬಟ್ಟೆ ಬದಲಾಯಿಸಬೇಕಿಲ್ಲವೆಂದು ಮಾತಾಡಿಕೊಂಡರು. ಮನೆಯವರಂತು ಏನನ್ನು ಹೇಳಲಿಲ್ಲ. ಗದ್ದೆ ಕೆಲಸ ಮಾಡಿ ಹಸಿದಿದ್ದೀಯ, ಮೊದಲು ಊಟ ಮಾಡು ನಂತರ ಮುಂದಿನದನ್ನು ಯೋಚಿಸುವಂತೆ ಎಂದು ಅವ್ವ ಹೇಳಿದರು.

ಮೂರು ಪಾರ್ಟಿನಲ್ಲೂ ನನ್ನ ನಂಬರು ಇಲ್ಲದಿದ್ದದ್ದು ಒಂದು ಬಗೆಯ ಧೈರ್ಯ ನನ್ನಲ್ಲಿ ಉದ್ಭವಿಸಿತು. ಏನೋ ಎಡವಟ್ಟಾಗಿರಬೇಕು. ಯೂನಿವರ್ಸಿಟಿ ಆಫೀಸಿನಲ್ಲಿ ಅಥವಾ ಯುವರಾಜ ಕಾಲೇಜಿನಲ್ಲಿ ವಿಚಾರಿಸಿದರೆ ಮಾತ್ರ ಇದರ ಸತ್ಯಾಂಶ ತಿಳಿಯುವುದೆಂದು ನಿರ್ಧರಿಸಿದೆ. ದೊಡ್ಡಣ್ಣನನ್ನು ದುಡ್ಡು ಕೇಳುವ ಧೈರ್ಯ ಬರಲಿಲ್ಲ. ಹೆತ್ತೂರು ಅತ್ತಿಗೆ ಅಂದರೆ ದೊಡ್ಡಣ್ಣನ ಹೆಂಡತಿ ಹತ್ತಿರ 25 ರೂಪಾಯಿ ಕೇಳಿದೆ. ನನ್ನ ಸ್ಥಿತಿಯನ್ನು ನೋಡಿ ಅವರಿಗೆ ಕನಿಕರ ಬಂದಿರಬೇಕು. ನನ್ನ ಹತ್ತಿರ ಇಲ್ಲ, ಆದರೆ ಯಾರಿಂದಲಾದರೂ ಕೇಳಿಕೊಡುತ್ತೇನೆಂದು ಹೇಳಿದರು. ಮುಂಜಾನೆ ಎಲ್ಲರೂ ಏಳುವ ಮುಂಚೆ ಮನೆ ಬಿಟ್ಟೆ. ಮೈಸೂರು ಸೇರಿ ಮರುದಿನ ಯುವರಾಜಾ ಕಾಲೇಜಿನಲ್ಲಿ ವಿಚಾರಿಸಿದಾಗ ನನ್ನ ರಿಸಲ್ಟ್ ವಿತ್‌ಹೆಲ್ಡ್ ಆಗಿತ್ತು. ಕಾರಣ ಹಾಸ್ಟಲಿಗೆ 27 ರೂಪಾಯಿ ಬಾಕಿ ಇತ್ತು. ಅದನ್ನು ಕಟ್ಟಿದ ಮೇಲೆ ಬಿಡುಗಡೆ ಎಂದು ತಿಳಿಯಿತು. ಪುನಃ ಹೆಚ್.ಎನ್.ಎ. ಗೌಡರ ಸಹಾಯ ಪಡೆದು, ಪಾಸಾಗಿದೆಯೆಂದು ತಿಳಿದು ಊರಿಗೆ ಮರಳಿದೆ. ಪಾಸಾಗಿದೆಯೆಂದರೆ ನಂಬುವವರು ಯಾರು. ಕೆಲವರು ದುಡ್ಡುಕೊಟ್ಟು ಪಾಸು ಮಾಡಿಸಿಕೊಂಡು ಬಂದಿದ್ದಾನೆಂದು ಹೇಳಿದರು.

ಮುಂದಿನ ಗುರಿ ಮೆಡಿಕಲ್ ಕಾಲೇಜು ಸೇರುವುದು. ಅಣ್ಣನಿಗೆ ದುಡ್ಡಿನ ವ್ಯವಸ್ಥೆ ಮಾಡುವುದು ಆ ಮಳೆಗಾಲದಲ್ಲಿ ದುಸ್ಸಾಧ್ಯ. ನಾನು ಸಕಲೇಶಪುರಕ್ಕೆ ಹೋಗಿ ಹೆಚ್. ಎಸ್. ಮಲ್ಲೇಗೌಡರನ್ನು ಕಂಡೆ. ಅವರು ನಮ್ಮವರಲ್ಲಿ ನಮ್ಮ ತಾಲ್ಲೂಕಿಗೆ ಬಿ.ಎ. ಮಾಡಿದವರಲ್ಲಿ ಎರಡನೆಯವರು. ಮೊದಲಿಗರು ಮೇಕನಗದ್ದೆ ಪಟ್ಟೇಗೌಡರು. ವಾಸಣ್ಣಶೆಟ್ಟಿ ಮಲ್ಲೇಗೌಡರ ಏಲಕ್ಕಿ ಮಂಡಿ ತಾಲ್ಲೂಕಿಗೆ ಪ್ರಸಿದ್ಧಿ. ಮಲ್ಲೇಗೌಡರನ್ನು ಕಂಡರೆ ಎಲ್ಲರಿಗೂ ಗೌರವ. ಅವರೂ ಅಷ್ಟೇ ಧಾರಾಳಿ, ಏನು ಕೇಳಿದರೂ ಯಾರಿಗೂ ಇಲ್ಲವೆಂದವರಲ್ಲ. ಈ ದೊಡ್ಡ ಗುಣವೇ ಕೊನೆಗೆ ಲಕ್ಷಾಂತರ ರೂಪಾಯಿಯ ವ್ಯವಹಾರ ಮುಚ್ಚಬೇಕಾಯಿತು. ಮಲ್ಲೇಗೌಡರು ನನ್ನ ಪರೀಕ್ಷೆ ಫಲಿತಾಂಶ ಕೇಳಿ ಮುಂದಿನ ಮಾರ್ಗಕ್ಕೆ ಸೂಚನೆ ಇತ್ತರು. ಬಿ. ಎನ್. ಬೋರಣ್ಣಗೌಡರಿಗೆ (ಎಂ.ಎಲ್.ಎ) ಸಂಪರ್ಕಿಸಿ ನನಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಿಸಬೇಕೆಂದು ಹೇಳಿದರು. ಬಿ.ಎನ್.ಬೋರಣ್ಣಗೌಡರಿಗೆ ಮಲ್ಲೇಗೌಡರನ್ನು ಕಂಡರೆ ಅಪಾರ ಗೌರವ. ಮಲ್ಲೇಗೌಡರಿಗೆ ಎಂ.ಎಲ್.ಎ. ಆಗುವ ಎಲ್ಲ ಅರ್ಹತೆ ಇದ್ದರೂ ಅವರಿಗಾಗಿ ಎಲೆಕ್ಷನ್‌ನಲ್ಲಿ ಕೆಲಸ ಮಾಡಿದವರು. ಬೋರಣ್ಣಗೌಡರು ಮುಖ್ಯಮಂತ್ರಿ ಹನುಮಂತಯ್ಯನವರಿಗೆ ಆಪ್ತರು. ಮಲೆನಾಡಿಗೆ ಮೀಸಲಾಗಿ ನನಗೊಂದು ಸೀಟು ಕೊಡಿಸುವುದಾಗಿ ವಾಗ್ದಾನ ಮಾಡಿದ್ದರು. ಅಂತೆಯೇ ಅವರು ನಡೆದುಕೊಂಡರು. ದುರದೃಷ್ಟಕ್ಕೆ ಆ ವರುಷ ಕುರುಬರಿಗೆ ಒಂದು ಸೀಟು ಕೊಡಬೇಕೆಂದು ಎಂ.ಎಲ್.ಎ. ಲಕ್ಷ್ಮಿದೇವಿರಾಮಣ್ಣನವರು ಹಟ ಹಿಡಿದಿದ್ದರಿಂದ ಮುಖ್ಯಮಂತ್ರಿಗಳು ಮಣಿದು ಅವರಿಗೆ ಒಂದು ಸೀಟು ಕೊಡಿಸಿದರು. ಆಗ ನನಗೆ ಸಿಕ್ಕಬೇಕಿದ್ದ ಸೀಟು ತಪ್ಪಿಹೋಯಿತು. ಆಗ ಮೈಸೂರು ಮೆಡಿಕಲ್ ಕಾಲೇಜು ಸ್ಟೇಟಿಗೆ ಒಂದೇ. ಅರವತ್ತರ ಮೇಲೆ ಒಂದು ಸೀಟು ಕೂಡ ಹೆಚ್ಚಿಗೆ ತೆಗೆದುಕೊಳ್ಳುತ್ತಿರಲಿಲ್ಲ.

ನಾನು ಮತ್ತೆಲ್ಲೂ ಅರ್ಜಿ ಹಾಕಿದವನಲ್ಲ. ಅಷ್ಟೊತ್ತಿಗಾಗಲೆ ಎಲ್ಲಾ ಕಾಲೇಜುಗಳ ಅಡ್‌ಮಿಷನ್ ಕ್ಲೋಸ್ ಆಗಿತ್ತು. ನಾನು ಬಯಸಿದ್ದು ಒಂದು, ಆದದ್ದು ಮತ್ತೊಂದು. ಇನ್ಸ್‌ಪೆಕ್ಟರ್ ಹೆಚ್.ಎನ್.ಎ. ಗೌಡರು ನನ್ನ ಭವಿಷ್ಯ ಹಾಳಾಗುವುದಲ್ಲಾ ಎಂದು ಮರುಗಿ,

ಇರು, ನಾಳೆ ಏನಾದರೂ ಮಾಡಿದರಾಯಿತೆಂದು ಹೇಳಿ ಸಮಾಧಾನ ಮಾಡಿದರು. ಅಂದೇ ಒಬ್ಬ ಪೊಲೀಸನನ್ನು ಬೆಂಗಳೂರಿಗೆ ಕಳುಹಿಸಿ ಅಗ್ರಿಕಲ್‌ಚರ್ ಕಾಲೇಜಿನಿಂದ ಒಂದು ಅರ್ಜಿ ಫಾರಂ ತರಸಿ ಭರ್ತಿಮಾಡಿಸಿ ಅದಕ್ಕೆ ಬೇಕಾದ ಸರ್ಟಿಫಿಕೇಟುಗಳನ್ನು ಲಗತ್ತಿಸಿ ಅವನೊಂದಿಗೆ ಪುನಃ ಕಳುಹಿಸಿಕೊಟ್ಟರು. ಆಗ ನನಗೆ ಒಂದು ಅಗ್ರಿಕಲ್‌ಚರ್ ಕಾಲೇಜು ಇದೆಯೆಂದೂ ತಿಳಿಯದು. ಊರಿಗೆ ಹೋಗಿ ಅಗ್ರಿಕಲ್‌ಚರ್ ಕಾಲೇಜಿನ ಅಡ್‌ಮಿಷನ್‌ಗೆ ಕಾದು ಕುಳಿತೆ. ಇಂಟರ್‌ವ್ಯೂವ್ ಕಾರ್ಡು ಬಂತು. ಆದರೆ ಹೋಗಲು ಸಾಧ್ಯವಾಗಲಿಲ್ಲ. ಭಾರಿ ಮಳೆ. ಹೊಳೆ ದಾಟುವ ಹಾಗಿರಲಿಲ್ಲ. ಅಂದೇ ಹೋಗದಿದ್ದರೆ ಕಾಲ ಮೀರಿ ಹೋಗುತ್ತದೆ. ಮರುದಿನ ಸಕಲೇಶಪುರದಿಂದ ಟೆಲಿಗ್ರಾಂ ಕಳುಹಿಸಿ, ಇಂಟರ್‌ವ್ಯೂವ್ ಕಾರ್ಡು ಸಿಕ್ಕಿದ್ದು ತಡವಾಯಿತೆಂದು ತಿಳಿಸಿದೆ. ಅಲ್ಲಿಗೆ ನನ್ನ ಅಧ್ಯಾಯ ಪೂರೈಸಿತೆಂದುಕೊಂಡು ಮನೆಗೆ ಹೋದೆ. ಎಂಟು ದಿವಸದ ನಂತರ ಮತ್ತೊಂದು ಕಾರ್ಡು ಬಂತು. ಸೀಟು ಸಿಕ್ಕಿದೆ, ಬಂದು ಸೇರುವುದೆಂದು ತಿಳಿಸಿ ಬರೆದಿತ್ತು. ಅದನ್ನು ನನ್ನ ಸ್ನೇಹಿತರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ ಎ. ವಿಷಕಂಠಯ್ಯನವರು ಕಳುಹಿಸಿದ್ದರು.

ಬೆಂಗಳೂರಿಗೆ ಹೋಗಿ ಸೆಂಟ್ರಲ್ ಕಾಲೇಜು ಹಾಸ್ಟಲಿನಿಂದ ವಿಷಕಂಠಯ್ಯನವರನ್ನು ಕರೆದುಕೊಂಡು ಹೆಬ್ಬಾಳ ಕೃಷಿ ಕಾಲೇಜಿಗೆ ಹೋಗಿ ವಿಚಾರಿಸಿದೆವು. ಇಂಟರ್‌ವ್ಯೂವಿಗೆ ಬಂದಿರಲಿಲ್ಲ, ಆದರೂ ಸೀಟು ಕೊಟ್ಟಿದ್ದೀರಿ ನಿಜವೆ? ಎಂದು. ರಾಮಚಂದ್ರರಾವ್ ಎನ್ನುವರು ಕಾಲೇಜು ಸ್ಥಾಪನೆಯಾದಾಗಿನಿಂದಲೂ ಅಡ್‌ಮಿಷನ್ ಕಾರುಬಾರು ನೋಡಿಕೊಳ್ಳುತ್ತಿದ್ದರು. ಫೀಜು ತಂದಿದ್ದರೆ ಕಟ್ಟಿ ಸೇರಿ ಕೊಳ್ಳಿ ಉಳಿದ ವಿಷಯಗಳು ನಿಮಗೇಕೆ? ಎಂದರು. ಕೊನೆಗೊಮ್ಮೆ ಅವರೇ ಹೇಳಿದ್ದು, ಆ ವರುಷ 80 ಹುಡುಗರಿಗೆ ಸೇರಿಸಿ ಕೊಂಡಿದ್ದವರಲ್ಲಿ ಇಬ್ಬರು ಮಾತ್ರ ಇಂಟರ್‌ಮೀಡಿಯಟ್‌ನಲ್ಲಿ ಮೊದಲನೆ ಅಟೆಮ್ಪ್ಟ್‌ನಲ್ಲಿ ಪಾಸುಮಾಡಿದವರಿದ್ದರಂತೆ, ಅದರಲ್ಲಿ ನಾನೊಬ್ಬ. ಜಕ್ಕೂರು ಭೈರೇಗೌಡರು (ಎಂ.ಎಲ್.ಎ.) ಅಡ್‌ಮಿಷನ್ ಕಮಿಟಿಯ ಮೆಂಬರು. ಅವರೇ ನನ್ನ ಅಡ್‌ಮಿಷನ್‌ಗೆ ಕಾರಣ ಎಂದು ಹೇಳಬೇಕು. ಏಕೆಂದರೆ ಮೊದಲನೆ ಅಟೆಮ್ಪ್ಟ್‌ನಲ್ಲಿ ಪಾಸಾದ ಹುಡುಗರು ಅಗ್ರಿಕಲ್‌ಚರ್ ಕಾಲೇಜಿಗೆಲ್ಲಿ ಬರುತ್ತಾರೆ, ಕೊನೇಪಕ್ಷ ಇವರಿಬ್ಬರಾದರೂ ಸೇರಬಹುದೆಂದು ಹೇಳಿದರಂತೆ.

ನಾವು ಸೇರಿದ ವರುಷ ಹೆಬ್ಬಾಳ ಕೃಷಿ ಕಾಲೇಜಿಗೆ ಒಂದು ಹೊಸ ಜೀವ ಬಂದಂತಾಗಿತ್ತು. ಪ್ರಾರಂಭವಾದಾಗಿನಿಂದ ಯಾವ ವರುಷವೂ 80 ಹುಡುಗರನ್ನು ತೆಗೆದುಕೊಂಡಿರಲಿಲ್ಲ. ಅಷ್ಟು ತೆಗೆದುಕೊಂಡಿದ್ದು ಬಹುಶಃ ಬಹಳ ಜನ ಬಿಟ್ಟು ಬೇರೆ ಕಡೆ ಸೇರಬಹುದೆಂಬ ಶಂಕೆ ಇರಬೇಕು. ಆದರೆ ಆ ವರುಷ ಯಾರೂ ಹೆಚ್ಚಿಗೆ ಬಿಟ್ಟು ಹೋಗಲಿಲ್ಲ. ಸೆಕೆಂಡ್ ಇಯರ್‌ನಲ್ಲಿ 28 ಹುಡುಗರಿದ್ದರು. ಅದರಲ್ಲಿ ಅರ್ಧಕ್ಕಿಂತ ಕಡಿಮೆ ಮೈಸೂರಿನವರು. ಉಳಿದವರು ಕೇರಳ, ಕೊಡಗಿನವರು. ಫೈನಲ್ ಇಯರ್‌ನಲ್ಲಿ ಹನ್ನೊಂದು ಜನ ಇದ್ದರು. ಅದರಲ್ಲಿ ಮೂರು ಜನ ಮಾತ್ರ ಮೈಸೂರಿನವರು.

ನಮ್ಮ ಕಾಲೇಜು, ಲ್ಯಾಬರೇಟರಿ, ಹಾಸ್ಟಲ್ ಎಲ್ಲ ಲಾಹೋರ್ ಶೆಡ್ಡುಗಳಲ್ಲಿ. ಈಗಿರುವ ಹೆಬ್ಬಾಳ್ ಫಾರಂ ಸೂಪರ್‌ಇನ್‌ಟೆಂಡೆಂಟ್ ಆಫೀಸು ಆಗಿನ ಪ್ರಿನ್ಸಿಪಾಲರ ಕಛೇರಿ. ಅದರ ಎಡಕ್ಕೆ ಬಲಕ್ಕೆ ಇದ್ದ ಎರಡು ಕೊಠಡಿಗಳೆ ಕ್ಲಾಸ್ ರೂಮ್‌ಗಳು. ಕಾಲೇಜಿಗೆಂದೇ ಆಯ್ಕೆಯಾಗಿದ್ದ ಉಪಾಧ್ಯಾಯರು ಕೇವಲ ನಾಲ್ಕೈದು. ಉಳಿದವರೆಲ್ಲ ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ವಿಭಾಗದ ಮುಖ್ಯಸ್ಥರು ಮತ್ತು ಅವರ ಸಹೋದ್ಯೋಗಿಗಳು ಪಾಠ ನಡೆಸುತ್ತಿದ್ದರು. ಕೆಲವರು

ಎನಿಮಲ್ ಹಸ್‌ಬೆಂಡರಿ ಡಿಪಾರ್ಟ್‌ಮೆಂಟಿನಿಂದಲೂ ಇದ್ದರು. ಕೆಮಿಸ್ಟ್ರಿ ಪ್ರಾಕ್ಟಿಕಲ್ ಶೇಷಾದ್ರಿ ರೋಡಿನಲ್ಲಿರುವ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿಯೇ ನಡೆಯುತ್ತಿತ್ತು. ಕಮಾನಿದ್ದ ಒಂದು ಲಾರಿ ಹುಡುಗರನ್ನು ಪ್ರಾಕ್ಟಿಕಲ್‌ಗೆ ಕರೆದುಕೊಂಡು ಹೋಗುತ್ತಿತ್ತು. ಓದಲು ಈಗಿರುವಷ್ಟು ವಿಷಯಗಳಿರುತ್ತಿರಲಿಲ್ಲ. ಪ್ರಾಕ್ಟಿಕಲ್ ಹೆಚ್ಚಾಗಿ ನಡೆಯುತ್ತಿದ್ದವು. ಇದ್ದ ವಿಷಯಗಳನ್ನು ಎಲ್ಲರೂ ಚೆನ್ನಾಗಿ ಹೇಳಿಕೊಡುತ್ತಿದ್ದರು. ಕಲಿತದ್ದು ಮನದಟ್ಟಾಗಿ ಬಹಳ ಸಮಯ ನೆನಪಿನಲ್ಲಿರುತ್ತಿತ್ತು.

ಆರ್. ಎಸ್. ಐಯಂಗಾರ್ ಅಗ್ರಾನಮಿ ಪಾಠ ತೆಗೆದುಕೊಳ್ಳುತ್ತಿದ್ದರು. ನಾವು ಸೇರುವಷ್ಟರಲ್ಲಿ ಅವರಿಗೆ ಸುಮಾರು ಮೂರು ದಶಕಗಳ ಅನುಭವ ಅಗ್ರಾನಮಿಯಲ್ಲಿತ್ತು. ದೇಶದ ವಿವಿಧ ಅಗ್ರೋಕ್ಲೈಮಾಟಿಕ್ ಜೋನ್‌ನಲ್ಲಿ ಮಣ್ಣಿನ ಮಾರ್ಪಾಡು, ಅಲ್ಲಿಯ ಬೆಳೆಗಳು, ಅವುಗಳ ಸಾಧಕ ಬಾಧಕ, ಬೆಳೆಯುವ ರೀತಿ ನೀತಿ ಎಲ್ಲವನ್ನು ಅರೆದು ಕುಡಿದಿದ್ದರೆನ್ನಬಹುದು. ಆದರೆ ನೋಡಲು ಆಧುನಿಕ ಪ್ರೊಫೆಸರ್‌ಗಳಿಗಿರುವ ಗತ್ತು ಇರಲಿಲ್ಲ. ಅವರ ಪ್ಯಾಂಟು ಕೋಟು ಇಸ್ತ್ರಿ ಕಂಡು ಎಷ್ಟು ವರುಷಗಳಾಗಿತ್ತೋ! ನಿತ್ಯ ಮುಖ ಕ್ಷೌರ ಕೂಡ ಮಾಡುತ್ತಿರಲಿಲ್ಲ. ಮನಸ್ಸಿಗೆ ಬಂದಾಗೊಮ್ಮೆ ಟೈ ಕಟ್ಟುತ್ತಿದ್ದರು. ಅವರು ಮೊದಲ ದಿವಸ ಕ್ಲಾಸಿಗೆ ಬಂದಾಗ ಯಾರೊ ಅಟೆಂಡರ್ ಬಂದಿರಬೇಕೆಂದು ಹುಡುಗರೆಲ್ಲ ಅತ್ತಕಡೆ ಗಮನ ಹರಿಸಿರಲಿಲ್ಲ. ಕೊಂಚ ಹೊತ್ತು ಎಲ್ಲರತ್ತ ಗಮನ ಹರಿಸಿ ಮುಗುಳ್ನಗೆ ತೋರಿ ಬೋರ್ಡ್ ಕಡೆಗೆ ತಿರುಗಿದಾಗಲೇ ಅವರು ಪಾಠ ಮಾಡಲು ಬಂದಿದ್ದಾರೆಂದು ತಿಳಿಯಿತು. ಕ್ಲಾಸ್ ಆದನಂತರ ಸೀನಿಯರ್ ಸ್ಟೂಡೆಂಟ್‌ಗಳಿಂದ ಅವರ ಪಾಂಡಿತ್ಯದ ಬಗ್ಗೆ ಅವಗಾಹನೆ ಆದನಂತರ ಮುಂದೆಂದೂ ಯಾರೂ ಅವರನ್ನು ಅಗೌರವದಿಂದ ಕಂಡವರಿಲ್ಲ.

ವಿದ್ಯಾರ್ಥಿಗಳಿಂದ ಬಹಳ ಗೌರವಕ್ಕೆ ಪಾತ್ರರಾಗಿದ್ದ ಮತ್ತೊಬ್ಬ ಪ್ರಾಧ್ಯಾಪಕರೆಂದರೆ ಡಾ॥ ಎಂ. ಪುಟ್ಟರುದ್ರಯ್ಯ. ಅವರು ಅಮೆರಿಕೆಯ ಕ್ಯಾಲಿಫೋರ್ನಿಯಾದಿಂದ ಕೀಟಶಾಸ್ತ್ರದಲ್ಲಿ ಪಿ.ಹೆಚ್.ಡಿ. ಪದವಿ ಪಡೆದು ಜರ್ಮನಿಯಲ್ಲಿ ಹೆಚ್ಚಿನ ಪರಿಣತೆ ಗಳಿಸಿ ಬಂದಿದ್ದರು. ಸ್ಟೇಟ್ ಎಂಟಮಾಲಜಿಸ್ಟ್ ಆಗಿದ್ದುದರ ಜೊತೆಗೆ ಕಾಲೇಜಿನಲ್ಲಿ ಪ್ರಾಧ್ಯಾಪಕರೂ ಆಗಿದ್ದರು. ಅವರ ಡಿಪಾರ್ಟ್‌ಮೆಂಟಿನಲ್ಲಿ ಅಷ್ಟೇ ಶ್ರದ್ಧೆಯಿಂದ ದುಡಿಯುತ್ತಿದ್ದ ಉಸ್‌ಮಾನ್, ಚೆನ್ನಬಸವಣ್ಣ, ಶೇಷಗಿರಿರಾವ್, ಅಪ್ಪಣ್ಣ ಕೂಡ ಕ್ಲಾಸ್ ತೆಗೆದು ಕೊಳ್ಳುತ್ತಿದ್ದರು. ಬೆಳಿಗ್ಗೆ ಎಂಟು ಗಂಟೆಗೆ ಕ್ಲಾಸ್ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಡಾ॥ ಪುಟ್ಟರುದ್ರಯ್ಯ ಬಂದಿರುತ್ತಿದ್ದರು. ಅವರು ವಿದೇಶದಿಂದ ಹಿಂದಿರುಗುವಾಗ ಜರ್ಮನಿಯಿಂದ ತಂದಿದ್ದ ಬೈಸಿಕಲ್, ಅವರು ಪ್ರಿನ್ಸಿಪಾಲ್ ಆಗುವವರೆಗೆ ಇಟ್ಟುಕೊಂಡಿದ್ದರು. ಜಯನಗರದಿಂದ ಸೈಕಲ್‌ನಲ್ಲೇ ದಿನನಿತ್ಯ ಆಫೀಸಿಗೆ ಬರುತ್ತಿದ್ದರು. ಮಳೆ ಇರಲಿ, ಬಿಸಿಲಿರಲಿ ಕ್ಲಾಸಿಗೆ ಮಾತ್ರ ಯಾವತ್ತೂ ತಡವಾಗಿ ಬಂದವರಲ್ಲ. ಪಾಠವನ್ನು ಸ್ಪಷ್ಟವಾಗಿ ವಿಶದವಾಗಿ ಒತ್ತಿ ಹೇಳುತ್ತಿದ್ದರು. ಅವರ ಮನಸ್ಸಿಗೆ ಯಾವುದಾದರೂ ವಿಷಯ ಹುಡುಗರಿಗೆ ಸ್ಪಷ್ಟವಾಗಿ ಅರ್ಥವಾಗಿಲ್ಲವೆಂದು ತಿಳಿದಾಗ ಕ್ಷಣ ಮಾತ್ರ ಹುಡುಗರ ಮುಂದೆ ಮೌನವಾಗಿ ನಿಂತು ಪುನಃ ಹೇಳುತ್ತಿದ್ದರು. ಪರೀಕ್ಷೆಯಲ್ಲಿ ಅಷ್ಟೇ ಉದಾರಿ. ವಿದ್ಯಾರ್ಥಿಗಳು ಅವರಾಗಿಯೇ ಫೇಲಾಗಬೇಕಿತ್ತೇ ಹೊರತು ಇವರು ಫೇಲು ಮಾಡುತ್ತಿರಲಿಲ್ಲ.

ಬಿ.ಎಸ್‌ಸಿ.ಯಲ್ಲಿ ಸ್ವರ್ಣಪದಕದೊಂದಿಗೆ ಪಾಸಾಗಿದ್ದ ಡಿ. ಶೇಷಗಿರಿರಾಯರಿಗೆ ಇಂಗ್ಲಿಷ್‌ನಲ್ಲಿ ಬಹಳ ಪಾಂಡಿತ್ಯವಿತ್ತು. ಜ್ಯೂಆಲಜಿ ತೆಗೆದುಕೊಳ್ಳುತ್ತಿದ್ದರು. ಅವರಿಗೆ ಮೂಗಿನ ತುದಿಯಲ್ಲಿ ಸಿಟ್ಟು. ಕ್ಲಾಸಿನಲ್ಲಿ ಯಾರಾದರೂ ಗಲಾಟೆ ಮಾಡಿದರೆಂದರೆ ತಡೆಯ ಲಾರದಷ್ಟು ಕೋಪ. ಕೆಂಪಗಿದ್ದ ಮುಖ, ಸಿಟ್ಟೇರಿದಾಗ ರಕ್ತವೇ ಹೊರಡುತ್ತಿದೆ ಎಂದು ಕಾಣುತ್ತಿತ್ತು. ನಮ್ಮ ಕ್ಲಾಸ್‌ನಲ್ಲಿ ಕೆಲವರು ಘಟಿಂಗರಿದ್ದರು. ಡಿ. ಶೇಷಗಿರಿರಾಯರು ಬೋರ್ಡ್ ಕಡೆ ತಿರುಗಿದಾಗ ಏನಾದರೂ ಕುಚೇಷ್ಟೆ ಮಾಡಿ ಅವರು ತಿರುಗುವುದರೊಳಗೆ ಏನೂ ಮಾಡದವರ ಹಾಗೆ ಕುಳಿತಿರುತ್ತಿದ್ದರು. ಗೊತ್ತಾದರೆ ಕತ್ತು ಹಿಸುಕಿ ಬಿಡುತ್ತೇನೆಂದು ಗದರಿಸುತ್ತಿದ್ದರು. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗವನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ ಹೆಮ್ಮೆ ಇವರಿಗಿತ್ತು. 'ರ್‍ಯಾಂಬಲ್ಸ್ ಆಫ್ ತಿಮ್ಮ' ಡಿ.ವಿ.ಜಿ.ಯವರ ಮೆಚ್ಚುಗೆಯನ್ನು ಗಳಿಸಿತ್ತು.

ಕಾಲೇಜು ಪ್ರಾರಂಭವಾದಾಗಿನಿಂದ ಪೂರ್ಣ ಪ್ರಮಾಣದ ಕೇವಲ ಕೆಲವು ಪ್ರಾಧ್ಯಾಪಕರು ಗಳಲ್ಲಿ ಕೆ.ಎಸ್. ಕೃಷ್ಣಶಾಸ್ತ್ರಿಯವರೊಬ್ಬರು. ಅವರು ರಿಟೈರ್ ಆಗುವವರೆಗೆ ಅದೇ ಕಾಲೇಜಿನಲ್ಲಿ ನಾಲ್ಕು ದಶಕಗಳಿಗಿಂತಲೂ ಹೆಚ್ಚಿಗೆ ಮೂರು ತಲೆಮಾರಿನವರಿಗೆ ಬೋಧಿಸಿದ್ದಾರೆ. ಕೃಷಿ ಕಾಲೇಜಿನಲ್ಲಿ ಬಾಟನಿ ಒಂದು ಮುಖ್ಯವಾದ ವಿಷಯ. ಎಲ್ಲರೂ ಇವರಿಂದ ಕಲಿತವರೆ. ಪಾಠವನ್ನು ಎಷ್ಟು ಚೆನ್ನಾಗಿ ಮಾಡುತ್ತಿದ್ದರೊ ಅಷ್ಟೇ ಸಲಿಗೆಯಿಂದ ಹುಡುಗರೊಂದಿಗೆ ವರ್ತಿಸುತ್ತಿದ್ದರು. ಟೂರ್ ಹೋದಾಗಲೆಲ್ಲ ಇವರನ್ನು ಇಸ್ಪೀಟ್ ಆಟದಲ್ಲಿ ಸೋಲಿಸಿದವರಿಲ್ಲ. ಪರೀಕ್ಷೆಯಲ್ಲಿ ಸರಿಯಾಗಿ ಬರೆಯದಿದ್ದವರಿಗೆ ಯಾರೇ ಆಗಲಿ ಕನಿಕರ ತೋರಿಸುತ್ತಿರಲಿಲ್ಲ. ಇವರು ಒಂದು ಶಿಸ್ತಿನ ಸಿಪಾಯಿಗಳನ್ನೇ ತಯಾರು ಮಾಡಿ, ಬಾಟನಿಯಿಂದ ಕ್ರಾಪ್‌ಫಿಜಿಯಾಲಜಿ ವಿಷಯವನ್ನು ಬೇರ್ಪಡಿಸಿ ಹೊಸ ಡಿಪಾರ್ಟ್‌ಮೆಂಟ್ ಮಾಡಿ, ಅದು ಉತ್ತಮ ಮಟ್ಟಕ್ಕೆ ಬಂದದ್ದನ್ನು ನೋಡಿ ತೃಪ್ತಿಯಿಂದ ಕಣ್ಮುಚ್ಚಿದರು.

ಮಹಾರಾಜಾ ಕಾಲೇಜು ಹಾಸ್ಟಲಿನಲ್ಲಿದ್ದು ಹೆಬ್ಬಾಳ ಕೃಷಿ ಕಾಲೇಜು ಹಾಸ್ಟಲಿಗೆ ಸೇರಿದಾಗ ಅದೆಂತಹ ಬದಲಾವಣೆ ಎಂದು ಅನುಭವಿಸಿದವರಿಗೆ ಗೊತ್ತು. ಲಾಹೋರ್ ಶೆಡ್ಡುಗಳೆ ನಮ್ಮ ರೂಮ್. ಒಂದೊಂದರಲ್ಲಿ ಎಂಟರಂತೆ ಮಂಚ ಟೇಬಲ್ ಇದ್ದವು. ರಾತ್ರಿ ಮಲಗಿ, ಮೇಲೆ ನೋಡಿದರೆ ಇಲಿ, ಹೆಗ್ಗಣಗಳು ಸಾಲಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಮಾನಿನಂತಿದ್ದ ಮರದ ಮೇಲ್ಛಾವಣಿಯಲ್ಲಿ ಓಡಾಡುತ್ತಿದ್ದರೆ ಯಾವಾಗ ಮೈಮೇಲೆ ಬಿದ್ದಾವೊ ಎಂದು ಗಾಬರಿಯಾಗುತ್ತಿತ್ತು. ಮೊದಲ ದಿವಸ ಇಬ್ಬರೇ ಇದ್ದೆವು. ದೊಡ್ಡ ಹಾಲ್‌ನಂತೆ ಇದ್ದ ರೂಮ್‌ನಲ್ಲಿರುವುದಕ್ಕೆ ಗಾಬರಿಯಾಗುತ್ತಿತ್ತು. ಇಲಿಗಳ ಓಡಾಟ ನೋಡಿ ನನ್ನ ಸಹಪಾಠಿಗೆ ಅಂದು ಜ್ವರವೇ ಬಂದಿತ್ತು. ಎರಡು ಮೂರು ದಿನ ಕಳೆದ ಮೇಲೆ ಎಲ್ಲರೂ ಸೇರಿದನಂತರ ಬಹುಶಃ ಇಲಿಗಳಿಗೆ ಜ್ವರ ಬಂದಿರಬೇಕು!

ಊಟಕ್ಕೆ ಕೂರುವುದಕ್ಕೆ ಚಾಪೆ ಅಥವಾ ಮಣೆ, ಅದೂ ಕೂಡ ಲಾಹೊರ್ ಶೆಡ್ಡಿನಲ್ಲಿ. ಲ್ಯಾಬೊರೆಟರಿ ಕೂಡ ಶೆಡ್ಡುಗಳಲ್ಲೆ. ಎರಡನೆ ವರುಷದ ನಂತರ ಹೆಂಚಿನ ಛಾವಣಿಯ ರೂಮು ಗಳು ಸಿಕ್ಕಿದವು. ಒಂದೊಂದರಲ್ಲಿ ಮೂರು ಜನ ಮಾತ್ರ. ಆಗ ಸಿಟಿಯಿಂದ ಹೆಬ್ಬಾಳಕ್ಕೆ ಬರುವುದೆಂದರೆ ಬೇರೆ ಊರಿಗೆ ಹೋದ ಹಾಗೆ. ಕುಮಾರ ಪಾರ್ಕ್ ಆಗತಾನೆ ಲೇಔಟ್ ಆಗಿತ್ತು. ಗುಟ್ಟಹಳ್ಳಿಯಿಂದ ಮೇಖ್ರಿ ಸರ್ಕಲ್ ವರೆಗೆ ಪ್ಯಾಲೇಸ್ ಆರ್ಚರ್ಡ್ ಮಾವಿನ ತೋಪು. ಅಲ್ಲಿ

ಒಬ್ಬರೆ ರಾತ್ರಿ ಹೊತ್ತು ಹೋಗುತ್ತಿರಲಿಲ್ಲ. ಕಂಟೋನ್‌ಮೆಂಟ್ ರೈಲ್ವೆ ಸ್ಟೇಷರ್ನನಿಂದ ಮೇಖ್ರಿ ಸರ್ಕಲ್‌ವರೆಗೆ ಅಲ್ಲಲ್ಲಿ ಮಿಲಿಟರಿಯವರ ಮನೆ ಬಿಟ್ಟರೆ ಕಾಡೇ. ನಾವು ಸಿಟಿಗೆ ಬರಬೇಕಾದರೆ ಸೈಕಲ್‌ನಲ್ಲಿ ನಾಲ್ಕೈದು ಜನ ಒಟ್ಟೊಟ್ಟಾಗಿ ಬರುತ್ತಿದ್ದೆವು. ಹೀಗೆಲ್ಲಾ ಇದ್ದರೂ ಜುಗುಪ್ಸೆ ಯಾಗುವ ಪರಿಸ್ಥಿತಿ ಉದ್ಭವಿಸಲಿಲ್ಲ. ನಮ್ಮದೇ ಆದ ಒಂದು ಜೀವನವನ್ನು ರೂಢಿಸಿಕೊಂಡಿದ್ದೆವು. ನಮ್ಮ ಹಾಸ್ಟಲಿನ ಮಸಾಲೆ ದೋಸೆ. ಮಂತ್ ಎಂಡ್ ಫೀಸ್ಟ್ ಅಂದರೆ ಸಿಟಿಯಲ್ಲಿರುವವರಿಗೆ ಬಾಯಿ ನೀರೂರುತ್ತಿತ್ತು. ಹಾಸ್ಟಲಿನ ಗಣೇಶನ ಪೂಜೆ ಆಕರ್ಷಣೀಯವಾಗಿರುತ್ತಿತ್ತು. ಕಾಲೇಜಿನ ಪ್ರಾಧ್ಯಾಪಕರೆಲ್ಲ ಭಾಗವಹಿಸುತಿದ್ದರು. ನಮ್ಮ ಹಾಕಿ ಟೀಂ ಬೆಂಗಳೂರಲ್ಲಿದ್ದ ಕಾಲೇಜುಗಳಲ್ಲೆಲ್ಲಾ ಉತ್ತಮವಾದದ್ದು. ಡಿಬೇಟಿನಲ್ಲೂ ಒಂದು ಕೈ ಮೇಲು. ಮೂರು ವರ್ಷದಲ್ಲಿ ಯಾವ ಸ್ಟ್ರೈಕನ್ನು ಕಂಡವರಲ್ಲ.

ಕೃಷಿ ಕಾಲೇಜಿನ ಕನ್ನಡ ಸಂಘವನ್ನು ಸ್ಥಾಪನೆ ಮಾಡಿದ್ದು ನಮ್ಮ ಬ್ಯಾಚಿನಿಂದ. ಇದರ ಉದ್ಘಾಟನೆ ಒಂದು ಸ್ಮರಣೀಯವಾದ ಸಂಗತಿ. ನಾನು ಮತ್ತು ಎಂ.ಟಿ. ಜಯಣ್ಣ ಸೈಕಲಿನಲ್ಲಿ ಅದೆಷ್ಟು ಸುತ್ತಿದ್ದೇವೆಯೋ ತಿಳಿಯದು. ಉದ್ಘಾಟನೆಗೆ ಮುಖ್ಯ ಅತಿಥಿಯನ್ನು ಒಪ್ಪಿಸಲು ಬಹಳ ಪ್ರಯತ್ನ ಪಡಬೇಕಾಯಿತು. ಕೊನೆಗೂ ಅ.ನ. ಕೃಷ್ಣರಾಯರು ಒಪ್ಪಿಕೊಂಡಿದ್ದು ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ಆಹ್ವಾನ ಪತ್ರಿಕೆಯನ್ನು ಮುದ್ದಾಮಾಗಿ ಕೊಡಲು ನಾವಿಬ್ಬರು ಹೋಗಿ ಅ.ನ. ಕೃಷ್ಣರಾಯರಿಗೆ ಕೊಟ್ಟೆವು. ಲಕೋಟೆಯನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಇನ್‌ವಿಟೇಷರ್ನ ಇರಲಿಲ್ಲ. ತಕ್ಷಣ ಕೋಪಿಸಿಕೊಂಡವರಂತೆ ನಾನು ನಿಮ್ಮ ಫಂಕ್ಷನ್‌ಗಳಿಗೆ ಬರುವುದಿಲ್ಲ. ನೀವು ಬೇಜವಾಬ್ದಾರಿ ಹುಡುಗರು. ಹಾಗೆಂದು ಒಳಗೆ ಹೋದರು. ನಮ್ಮಿಬ್ಬರ ಪೇಚಾಟ ಹೇಳತೀರದು. ಸ್ವಲ್ಪ ಸಮಯದ ನಂತರ ಕೋಟು ಪೇಟ ಧರಿಸಿ ಕೊಡೆಯನ್ನು ಹಿಡಿದು ಏನೂ ಮಾತನಾಡದೆ ಹೊರಟರು. ನಾವು ಅವರನ್ನು ಹಿಂಬಾಲಿಸಿದೆವು, ಅಂಗಲಾಚಿದೆವು. ಕೊನೆಗೆ ಬರುವುದಾಗಿ ಒಪ್ಪಿಕೊಂಡರು. ಸಮಾರಂಭದ ದಿವಸ ಈ ವಿಷಯ ಪ್ರಸ್ತಾಪ ಮಾಡಿ ನಾನು ಅಂದು ನೀವು ಕೊಟ್ಟ ಖಾಲಿ ಲಕೋಟೆ ನೋಡಿ ಬರುವುದಿಲ್ಲವೆಂದದ್ದು ಮುಂದೆ ನೀವು ಹೀಗೆ ಮಾಡದಿರಲಿ ಎಂದು. ಕನ್ನಡ ಸಂಘ ಪ್ರಾರಂಭಿಸಿದ್ದಕ್ಕೆ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಆಶೀರ್ವದಿಸಿದರು. ಜೀವನದಲ್ಲಿ ಅದೆಂತಹ ದೊಡ್ಡ ಪಾಠ ಅಂದು ಕಲಿತೆನೆಂದರೆ ಮುಂದೆ ಯಾವ ಇನ್ವಿಟೇಷನ್ ಕೊಡುವಾಗಲೂ ಒಮ್ಮೆ ಪರೀಕ್ಷಿಸಿ ನೋಡದೆ ಕೊಡುತ್ತಿರಲಿಲ್ಲ.

ಪ್ರಿನ್ಸಿಪಾಲ್ ವೆಂಕೋಬರಾಯರು ಅಮೆರಿಕೆಯಿಂದ ಎಂ.ಎಸ್. ಪದವಿ ಪಡೆದು ಬಂದಿದ್ದರು. ಯಾವಾಗಲೂ ಪೈಪ್ ಸೇದುತ್ತಿದ್ದರು. ಹುಡುಗರೊಡನೆ ಕನ್ನಡದಲ್ಲಿ ಮಾತನಾಡುತ್ತಿದ್ದುದು ವಿರಳ. ಕನ್ನಡ ಸಂಘ ಉದ್ಘಾಟನೆಗೆ ಅವರೇ ಅಧ್ಯಕ್ಷರು. ಒಪ್ಪಿಕೊಳ್ಳು ವಾಗಲೆ ಹೇಳಿದ್ದರು ಕನ್ನಡದಲ್ಲಿ ಮಾತನಾಡಿ ಅಭ್ಯಾಸವಿಲ್ಲವೆಂದು. ಅವರು ಹೇಳಿದ ಹಾಗೆಯೇ ಪ್ರಾರಂಭದಲ್ಲೇ ಅವರು .... ಕರ್ನಾಟಕ ಸಂಘಕ್ಕೆ ನನ್ನನ್ನು ಕರೆದು .... ಇದು ಮಾಡಿದ್ದಕ್ಕಾಗಿ... ಎಂದು. ಅದಾಗಿ ಕೇವಲ ಆರು ತಿಂಗಳಲ್ಲಿ ಸ್ವಚ್ಛವಾಗಿ ಸರಳವಾಗಿ ಕನ್ನಡದಲ್ಲಿ ಭಾಷಣ ಮಾಡುತ್ತಿದ್ದರು. ಕನ್ನಡ ಸಂಘ ಪ್ರಾರಂಭ ಮಾಡುವ ಮೊದಲು ಅವರೇನು ಅಷ್ಟು ಉತ್ಸುಕರಾಗಿರದಿದ್ದರೂ ಕೊನೆಗೆ ಕನ್ನಡ ಸಂಘದ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದರು.

ಮೈಸೂರು ಸ್ಟೇಟ್ ಟೂರ್ ಹೋಗಿದ್ದೆವು. (ಆಗಿನ್ನು ಕರ್ನಾಟಕವಾಗಿರಲಿಲ್ಲ) ಶಿವಮೊಗ್ಗದಿಂದ ಬೆಂಗಳೂರಿಗೆ ರೈಲಿನಲ್ಲಿ ಬರುವಾಗ ಅರಸೀಕೆರೆಯಲ್ಲಿ ನಾವಿದ್ದ ಬೋಗಿಯನ್ನು ಡಿಟಾಚ್ ಮಾಡಿ ಪೂನಾ ಬೆಂಗಳೂರು ಗಾಡಿಗೆ ಸೇರಿಸುವಾಗ ಸುಮಾರು ಎರಡು ಗಂಟೆ ತಡವಾಗಿರಬಹುದು. ಲೈಟು ಇರಲಿಲ್ಲ. ಮಧ್ಯರಾತ್ರಿ ಎಲ್ಲರೂ ನಿದ್ರೆ ಹೋಗಿದ್ದೆವು. ಬೆಂಗಳೂರಿಗೆ ಬಂದಿಳಿದಾಗ ನಮ್ಮ ಬಟ್ಟೆ ಟ್ರಂಕು ಎಲ್ಲವೂ ಮಾಯವಾಗಿದ್ದವು. ಬನಿಯನ್ ಚೆಡ್ಡಿಯಲ್ಲೇ ಹಾಸ್ಟಲ್ ತಲುಪಿದೆವು.

ನಮ್ಮ ಸ್ನೇಹಿತರು ಎ.ಪಿ. ಚಂದ್ರಪ್ಪ ಸೋಮವಾರಪೇಟೆ ಪ್ಲಾಂಟರ್ ಮನೆಯಿಂದ ಬಂದವರು. ಮನೆಯಿಂದ ಅವರು ಬಯಸಿದಷ್ಟು ದುಡ್ಡು ಕಳುಹಿಸಿಕೊಡುತ್ತಿದ್ದರು. ಒಮ್ಮೆ ಅವರ ರೂಮ್‌ನಿಂದ ಒಂದು ನೂರು ರೂಪಾಯಿ ಕಳವಾಗಿತ್ತು. ಅವರ ರೂಮ್‌ಮೇಟ್ ಯಾರೋ ತೆಗೆದುಕೊಂಡಿರುವರೆಂದು ಅವರಿಗೆ ಬಲವಾದ ನಂಬಿಕೆ. ಏನೇನು ಮಾಡಿದರೂ ಯಾರೂ ಹೇಳಲಿಲ್ಲ. ಆಗ ಫ್ರೇಜರ್ ಟೌನ್‌ನಲ್ಲಿ ಜೈನಸಿದ್ಧಾಂತ ಜ್ಯೋತಿಷಾಲಯವಿತ್ತು. ಒಂದು ರೂಪಾಯಿ ಕೊಟ್ಟು ಮೂರು ಪ್ರಶ್ನೆ ಕೇಳಬಹುದಿತ್ತು. ಪ್ರಶ್ನೆಗೆ ಸಮಂಜಸವಾದ ಉತ್ತರ ಹೇಳುತ್ತಾರೆಂದು ತಿಳಿದವರು ಹೇಳಿದ್ದರು. ಅಲ್ಲಿಗೆ ಹೋಗಿ ಒಂದು ಚೀಟಿಯಲ್ಲಿ ಮೂರು ಪ್ರಶ್ನೆ ಬರೆದು ಕೊಟ್ಟೆವು. ಆ ಚೀಟಿಯನ್ನು ಬಿಚ್ಚಿ ನೋಡದಯೇ ಒಂದು ಕಡೆ ಇಟ್ಟು ನೀವು ಕೇಳುವ ಪ್ರಶ್ನೆ ಕಳವಿಗೆ ಸಂಬಂಧ ಪಟ್ಟದ್ದು, ನಿಮ್ಮವರಲ್ಲೇ ಯಾರೋ ತೆಗೆದಿದ್ದಾರೆ. ಪ್ರಯತ್ನ ಪಟ್ಟರೆ ಸಿಕ್ಕುವುದೆಂದರು. ಕೊನೆಯ ಪ್ರಶ್ನೆಗೆ ಹೆಸರು ಹೇಳುವುದನ್ನು ನಿರಾಕರಿಸಿದರು. ಏಕೆಂದರೆ ಅದು ಅವರಿಗೆ ತಿಳಿದಿದ್ದರೂ ಹೇಳಬಾರದೆಂಬ ತತ್ವಕ್ಕೆ ಬದ್ಧರಾಗಿದ್ದರು. ಆದರೂ ನಾವಿನ್ನು ಹುಡುಗರಿದ್ದುದರಿಂದ ತೆಗೆದುಕೊಂಡಿರುವವರ ಹೆಸರಿನ ಮೊದಲ ಮೂರು ಅಕ್ಷರವನ್ನು ಮಾತ್ರ ಹೇಳುತ್ತೇನೆ, ಉಳಿದಿದ್ದನ್ನು ನೀವು ಕೂಡಿಸಿಕೊಳ್ಳಬೇಕೆಂದರು. ನಾವು ಊಹಿಸಿದ ವ್ಯಕ್ತಿಗೂ ಅವರು ಹೇಳಿದ ಮೊದಲ ಮೂರು ಅಕ್ಷರಗಳಿಗೂ ತಾಳೆಯಾದವು. ಅಂತೂ ಕೊನೆಗೆ ದುಡ್ಡು ಸಿಕ್ಕಿತು.

ನನ್ನ ಸಹಪಾಠಿಗಳೆಲ್ಲಾ ಅನುಕೂಲಸ್ಥರ ಮನೆಯಿಂದ ಬಂದಿದ್ದವರು. ನನಗೆ ಅವರ ಸರಿಸಮಾನ ಖರ್ಚು ಮಾಡುವ ಯೋಗ್ಯತೆ ಇರದಿದ್ದರೂ ಅವರು ನನ್ನನ್ನು ಬಿಡಲೊಲ್ಲರು. ಬೇರೆಯವರು ನಾನೂ ಕೂಡ ಪ್ಲಾಂಟರ್ ಮನೆಯವನಿರಬಹುದೆಂದು ಗ್ರಹಿಸಿದ್ದರು. ಇದು ನನಗೆ ಹಿಡಿಸುತ್ತಿರಲಿಲ್ಲ. ಜೊತೆಗೆ ಗರೀಬನ ಹಾಗೆ ವರ್ತಿಸುತ್ತಲೂ ಇರಲಿಲ್ಲ. ಅನುಕೂಲದಲ್ಲಿ ಚಿಕ್ಕಮಗಳೂರು ಎ.ಸಿ. ಫ್ಯಾಮಿಲಿಯವರು ಹೆಸರುವಾಸಿಯಾದವರು. ಎ. ಎಂ. ಮಲ್ಲೇಶಗೌಡರು, ಎ.ಸಿ. ಮಲ್ಲೇಶಗೌಡರ ಕೊನೆಯಪುತ್ರ. ನಮ್ಮ ಕ್ಲಾಸ್‌ಮೇಟ್ ಮತ್ತು ಸ್ನೇಹಿತರು. ಅವರಿಗೆ ಒಂದು ಮಾರಿಸ್ ಮೈನರ್ ಕಾರಿತ್ತು. ಆಗಾಗ ಆ ಕಾರಿನಲ್ಲಿ ನಾಲ್ಕೈದು ಸ್ನೇಹಿತರು ವೀಕ್ ಎಂಡ್ ಮಾಡುತ್ತಿದ್ದೆವು. ನಾವು ಕಾಲೇಜಿನಲ್ಲಿರುವ ವರೆಗೆ ಅವರನ್ನು ಸಾಹುಕಾರರೆಂದೇ ಕರೆಯುತ್ತಿದ್ದೆವು. ಆಗ ಬಾರ್‌ಗೆ ಹೋಗಿ ಬೀರು ಕುಡಿಯುವುದು, ವಿದ್ಯಾರ್ಥಿಗಳಿಗೆ ಅವಮಾನದ ಕೆಲಸ. ಮಲ್ಲೇಶಗೌಡರು, ಅರಸೀಕೆರೆ ಶಾಂತಪ್ಪ, ಸೋಮವಾರ ಪೇಟೆ ಚಂದ್ರಪ್ಪ ಸಸ್ಯಾಹಾರಿ ಮನೆಯಿಂದ ಬಂದವರು. ಇವರು ಹಾಸ್ಟಲಿನಲ್ಲಿ ವೆಜಿಟೇರಿಯನ್ ಮೆಸ್‌ನಲ್ಲಿ ಇದ್ದರೂ ಆಗಾಗ ಎನ್.ವಿ. ಮೆಸ್‌ನ ಸ್ವಾದವನ್ನು ಅನುಭವಿಸುತ್ತಿದ್ದರು. ಆದರೆ ಯಾರಿಗೂ ಬೀರು ಕುಡಿದು ಅಭ್ಯಾಸವಿರಲಿಲ್ಲ.

ಪೆರೇಡ್‌ಕೆಫೆ, ಕೋಷಿಶ್ ಕೆಫೆಗೆ ಹೋಗಿ ಕೇಕ್ ತಿಂದು ಕಾಫಿ ಕುಡಿಯುವುದೆಂದರೆ ವಿಶೇಷ. ಒಂದು ಪ್ಲೇಟ್ ತುಂಬ ಕೇಕ್ ತಂದಿಡುತ್ತಿದ್ದರು. ಬೇಕಾದಷ್ಟನ್ನು ತಿಂದು ಉಳಿದಿದ್ದನ್ನು ಬಿಡಬಹುದಿತ್ತು. ತಿಂದಷ್ಟಕ್ಕೇ ಮಾತ್ರ ಚಾರ್ಜ್ ಮಾಡುತ್ತಿದ್ದರು. ನನ್ನ ಸ್ನೇಹಿತರಿಗೆಲ್ಲ ಆಗಲೇ ಇದರ ಅನುಭವವಾಗಿತ್ತು. ನನಗೆ ಹೊಸದು. ಟಿಪ್ಸ್ ಬಿಡುವ ಪದ್ಧತಿಯೂ ಗೊತ್ತಿರಲಿಲ್ಲ. ನನ್ನ ರೂಮ್‌ಮೇಟ್ ಒಬ್ಬರು ಒಮ್ಮೊಮ್ಮೆ ಕಾಫಿ ಕುಡಿಯಲು ನಮ್ಮ ಜೊತೆ ಬರುತ್ತಿದ್ದರು. ಒಂದು ಸಾರಿ ತಟ್ಟೆಯಲ್ಲಿ ಬಿಟ್ಟಿದ್ದ ಚಿಲ್ಲರೆ ಟಿಪ್ಸ್‌ನ್ನು ಎತ್ತಿಕೊಂಡು ಬಂದು 'ತಗೊಳ್ಳಿ ದುಡ್ಡು, ನಿಮಗೇನು ದುಡ್ಡು ಹೆಚ್ಚಾಗಿದೆಯೇ? ಏಕೆ ಯಾವಾಗಲೂ ದುಡ್ಡು ಬಿಟ್ಟು ಬರುವುದು?' ಎಂದರು. ಪಾಪ ನನ್ನ ಹಾಗೆ ಅವರಿಗೂ ಟಿಪ್ಸ್ ಕೊಟ್ಟು ಗೊತ್ತಿರಲಿಲ್ಲ!

ನಾವು ಅಂತಿಮ ವರ್ಷ ಬಿ.ಎಸ್‌ಸಿ. (ಅಗ್ರಿ)ಯಲ್ಲಿದ್ದಾಗ ಹೆಬ್ಬಾಳ ಕೃಷಿ ಕಾಲೇಜಿನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿತು (1956-57). ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ನೆರವೇರಿಸಿದರು. ಸಿಟಿಯ ಗಣ್ಯರೆಲ್ಲಾ ನೆರೆದಿದ್ದರು. ವಿಶಾಲವಾದ ಪೆಂಡಾಲ್‌ನಲ್ಲಿ ಭವ್ಯವಾಗಿ ಅಲಂಕರಿಸಿದ ಪೀಠೋಪಾಸನಗಳು. ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ಕೆಲವರನ್ನು ವಾಲೆಂಟಿಯರ್‌ನ್ನಾಗಿ ತೆಗೆದುಕೊಂಡಿದ್ದರು. ಅದರಲ್ಲಿ ನಾನೂ ಒಬ್ಬ. ಒಂದು ಸಂಗೀತ ಕಛೇರಿಯೂ ಏರ್ಪಾಟಾಗಿತ್ತು. ಅವರನ್ನು ಮುಖ್ಯಮಂತ್ರಿಯ ಎದುರು ಸಭಿಕರ ಹಿಂದೆ ಕೂಡಿಸಿದ್ದರು. ಹಾಡುತ್ತಿದ್ದವರು ಹೆಸರುವಾಸಿಗಳಾಗಿದ್ದರೆಂದು ಕಾಣುತ್ತದೆ. ಸಂಗೀತಗಾರರನ್ನೇಕೆ ಅಷ್ಟುದೂರ ಕೂಡಿಸಿದ್ದು. ಇಲ್ಲಿ ಪಕ್ಕದಲ್ಲಿ ಕೂರಿಸಬಹುದಿತ್ತಲ್ಲವೆಂದು ಸ್ವಲ್ಪ ಅಸಂತೃಪ್ತಿಯಿಂದ ಹೇಳಿದ ಮಾತು ನನ್ನ ಕಿವಿಗೂ ಬಿತ್ತು. ಕಾರ್ಯಕ್ರಮ ಮುಗಿದ ಮೇಲೆ ಹನುಮಂತಯ್ಯನವರು ಅವರಿಗೆ ಕೈಯಲ್ಲಿದ್ದ ಹಣ್ಣು ಕೊಟ್ಟು ಸಂಜೆ ಅವರ ಮನೆಯಲ್ಲಿ ಕಛೇರಿ ಮಾಡಬೇಕೆಂದು ಹೇಳಿ ಹೊರಟರು.

ಎರಡನೆ ವರುಷದ ಕೀಟ ಶಾಸ್ತ್ರ ಅಂತಿಮ ಪರೀಕ್ಷೆಯಲ್ಲಿ ಪ್ರಾಕ್ಟಿಕಲ್ ಮತ್ತು ವೈವಾ ಇರುತ್ತಿತ್ತು. ಕೀಟಶಾಸ್ತ್ರದ ಪ್ರಾಧ್ಯಾಪಕ ಪುಟ್ಟರುದ್ರಯ್ಯ ಮತ್ತು ಹೈದರಾಬಾದಿನಲ್ಲಿದ್ದ ಆಂಧ್ರದ ಕೀಟಶಾಸ್ತ್ರದ ಮುಖ್ಯಸ್ಥ ಬಾಪರೆಡ್ಡಿ ಎಕ್ಸ್‌ಟರ್ನಲ್ ಎಗ್ಸಾಮಿನರ್ ಆಗಿದ್ದರು, ವೈವಾ ಪರೀಕ್ಷೆಯಲ್ಲಿ ನನ್ನನ್ನು ಯಾವ ಊರು ಎಂದು ಪುಟ್ಟರುದ್ರಯ್ಯ ಕೇಳಿದರು. ಸಕಲೇಶಪುರ ತಾಲ್ಲೂಕು ಎಂದೆ. ಊರ ಹೆಸರು ಕೇಳಿದರೆ ತಾಲ್ಲೂಕ ಹೇಳುತ್ತಿಯಲ್ಲಪ್ಪ, ನಿನಗೆ ಊರೇ ಇಲ್ಲವೇ ಎಂದರು. ಗೊದ್ದು ಅಂದ ಮೇಲೆ ತಂಬಲಗೇರಿಗೆ ಎಷ್ಟು ದೂರವೆಂದರು. ಎರಡು ಮೈಲು ಅಂದೆ. ಮುಂದೆ ನನ್ನನ್ನು ಏನನ್ನೂ ಕೇಳಲಿಲ್ಲ. ಬಾಪರೆಡ್ಡಿಯವರ ಕಡೆಗೆ ತಿರುಗಿ, ಈ ಮಲೆನಾಡಿನ ಜನ ಅತಿಥಿ ಸತ್ಕಾರಕ್ಕೆ ಹೆಸರಾದವರು ಎಂತಹ ಅಪರಿಚಿತರನ್ನೂ ಶಂಕಿಸುವವರಲ್ಲ, ಊಟ ಉಪಚಾರ ಹೇಳತೀರದು. ಎರಡು ದಿವಸದ ಹಿಂದೆ ಏಲಕ್ಕಿ ಕಂಬಳಿ ಹುಳದ ಬಾಧೆಯನ್ನು ವೀಕ್ಷಿಸಲು ಹೋಗಿ ತಂಬಲಗೇರಿ ಪಟೇಲರ ಮನೆಯಲ್ಲಿ ಇಳಿದುಕೊಂಡಿದ್ದು ಅವರ ಆದರದ ಆತಿಥ್ಯವನ್ನು ಅವರಿಗೆ ವರ್ಣಿಸಿದರು.

ಎಂಜನೀಯರಿಂಗ್ ಪ್ರಾಧ್ಯಾಪಕ ದೊರೆಸ್ವಾಮಿ ಐಯ್ಯಂಗಾರ್ ಕೋಟು ಪ್ಯಾಂಟು, ಪೇಟವನ್ನು ಧರಿಸಿ ಹಣೆಯ ಮೇಲೆ ಉದ್ದನೆಯ ಕೆಂಪುನಾಮವಿಟ್ಟು ಬರುತ್ತಿದ್ದರು. ಅವರಿಗೆ ಸಿಟ್ಟು ಅಂದರೆ ಏನು ಅಂತ ಅರಿಯರು. ಅವರು ಕ್ಲಾಸಿಗೆ ಬರುವುದಕ್ಕೆ ಮುಂಚೆ ಕೆಲವು ಹುಡುಗರು

ಹೊರಗೆ ಹೋಗುತ್ತಿದ್ದರು. ಏಕೆಂದರೆ ಒಂದು ನಿಮಿಷ ಮುಂಚಿತವಾಗಿ ಬಿಡುತ್ತಿರಲಿಲ್ಲ. ವಿಷಯಗಳನ್ನು ವಿಶದವಾಗಿ ಹೇಳುತ್ತಿದ್ದರು. ಆದರೆ ಅದು ನಮ್ಮ ಡಿಗ್ರಿಗೆ ತುಂಬ ಹೆಚ್ಚಾಯಿತೆಂದು ವಿದ್ಯಾರ್ಥಿಗಳ ಅನಿಸಿಕೆ. ಪರೀಕ್ಷೆಯಲ್ಲಿ ಅವರು ಅಷ್ಟೇ ಸರಳ. ಉದಾಹರಣೆಗೆ ಅಟೆಂಡರ್ ರಾಚಯ್ಯನನ್ನು ಕರೆದು, ಎದುರಿನ ವಿದ್ಯಾರ್ಥಿಗೆ ಕೇಳುವಂತೆ "ಆ ರೇಂಜಿಂಗ್ ರಾಡ್ ತೆಗೆದುಕೊಂಡು ಬಾ ಎಂದು" ಹೇಳಿ ಇದೇನೆಂದು ಕೇಳುತ್ತಿದ್ದರು. ಆಗಲೂ ಹೇಳದಿದ್ದರೆ ಇದು ರೇಂಜಿಂಗ್ ರಾಡ್ ಅಲ್ವೇನಯ್ಯ ಎಂದು ಹೇಳಿ ಹೋಗೆನ್ನುತ್ತಿದ್ದರು.

ಆಗಿನ ಉಪಾಧ್ಯಾಯರುಗಳಿಗೆ ಹುಡುಗರಿಗೆ ಏನನ್ನಾದರೂ ಕಲಿಸಬೇಕೆಂಬ ಹಂಬಲ. ಎಷ್ಟು ಕಲಿತಿದ್ದಾರೆ ಎಂದು ಪರೀಕ್ಷಿಸುವುದೇ ಮುಖ್ಯ ಗುರಿಯಾಗಿರಲಿಲ್ಲ.

* * * *

ಪರೀಕ್ಷೆ ಪೂರೈಸಿ ಮನೆಗೆ ಬಂದಾಗ (1957) ಮುಂದೇನು ಎಂಬ ಪ್ರಶ್ನೆ, ಕಂಡವರೆಲ್ಲ ಕೇಳುತ್ತಿದ್ದರು. ನಾನು ಪಾಸಾಗುವುದರಲ್ಲಿ ಯಾರಿಗೂ ಅನುಮಾನವಿರಲಿಲ್ಲ. ಮನೆಯಲ್ಲಿಯೇ ಇರುವುದನ್ನು ಯಾರೂ ಅಪೇಕ್ಷಿಸಲಿಲ್ಲ. ಬಿ.ಇ. ಅಥವಾ ಎಂ.ಬಿ.ಬಿ.ಎಸ್. ಮಾಡಿದ್ದರೆ ಕೂಡಲೇ ಕೆಲಸ ಸಿಗುತ್ತಿತ್ತು. ಬಿ.ಎಸ್‌ಸಿ.(ಅಗ್ರಿ.) ಮಾಡಿದವರಿಗೆ ಸುಲಭವಾಗಿ ಕೆಲಸ ಸಿಗುತ್ತಿರಲಿಲ್ಲ. ಸೇರಿದರೆ ವ್ಯವಸಾಯ ಇಲಾಖೆಗೆ ಸೇರಬೇಕಿತ್ತು. ಬಿ.ಎ., ಬಿ.ಎಸ್‌ಸಿ. ಮಾಡಿದ್ದರೆ ಗುಮಾಸ್ತೆಯ ಕೆಲಸವೋ ಅಥವಾ ಹೈಸ್ಕೂಲ್ ಟೀಚರೋ ಆಗಬಹುದಿತ್ತು. ಬಿ.ಎಸ್‌ಸಿ.(ಅಗ್ರಿ.) ಮಾಡಬೇಕೆಂದು ನಾನು ಬಯಸಿದ್ದವನಲ್ಲ. ಆಗ ಅದನ್ನು ಬಿಟ್ಟರೆ ಬೇರೆ ದಾರಿ ಇರಲಿಲ್ಲ. ಆಗ ಎಲ್ಲರಿಗೂ ತಿಳಿದಿದ್ದು ಓದಿದವರೆಲ್ಲಾ ಡಾಕ್ಟರ್, ಇಂಜನಿಯರು ಅಥವಾ ರೆವಿನ್ಯೂ ಡಿಪಾರ್ಟ್ ಮೆಂಟಿನಲ್ಲಿ ಅಮಲ್ದಾರರು ಆಗುವರೆಂದು. ಭಾವಿ ಅಳಿಯಂದಿರಿಗೆ ಭವಿಷ್ಯವಿದ್ದದ್ದೂ ಈ ಹುದ್ದೆಗಳಿಗೆ ಹೋಗುವವರಿಗೆ ಮಾತ್ರ. ಈಗಿನ ಹಾಗೆ ಖಾಸಗಿ ಉದ್ಯಮಗಳು ಬಿ.ಎಸ್‌ಸಿ.(ಅಗ್ರಿ.) ಓದಿದವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದದ್ದನ್ನು ಕೇಳಿರಲಿಲ್ಲ. ಅರ್ಜಿ ಕರೆದಾಗ ಅಪ್ಲೈ ಮಾಡಬೇಕು, ಇಲ್ಲವೇ ಶಿಫಾರಸ್ಸು ಮೂಲಕ ಗಿಟ್ಟಿಸಬೇಕು. ಶಿಫಾರಸ್ಸು ಮೂಲಕ ಕೆಲಸ ಕೊಡಿಸುವಂತಹವರು ನನಗಾರು ಇರಲಿಲ್ಲ. ಮೊದಲಿಂದಲೂ ರಾಜಕೀಯದವರ ಸಂಪರ್ಕ ಬೆಳೆಸಲಿಲ್ಲ. ನಮ್ಮ ಕ್ಷೇತ್ರದಿಂದ ಆರಿಸಿ ಬಂದಿದ್ದ ಬೇಲೂರಿನ ಬೋರಣ್ಣಗೌಡರು (ಎಂ.ಎಲ್.ಎ.) ವ್ಯವಸಾಯ ಇಲಾಖೆಯ ಕಾರ್ಯ ವೈಖರಿ ಬಗ್ಗೆ ಕೆಂಡ ಕಾರುತ್ತಿದ್ದರು. ಅಸೆಂಬ್ಲಿಯಲ್ಲಿ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟವರನ್ನೆಲ್ಲಾ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈ ಡಿಪಾರ್ಟ್‌ಮೆಂಟ್ ಇಲ್ಲದಿದ್ದರೂ ವ್ಯವಸಾಯ ನಡೆಯುತ್ತದೆ. ಆದ್ದರಿಂದ ಆ ಇಲಾಖೆಯನ್ನು ಮುಚ್ಚುವುದೊಳ್ಳೆಯದೆಂದು ಹೇಳುತ್ತಿದ್ದವರಲ್ಲಿ ಇವರೊಬ್ಬರು. ಆಗ ಈ ಡಿಪಾರ್ಟ್‌ಮೆಂಟ್ ಇದ್ದದ್ದು ಹಾಗೆ. ಹೊಸತಳಿ, ಹೊಸ ತಾಂತ್ರಿಕತೆ, ಫರ್ಟಿಲೈಸರ್ ಸಬ್ಸಿಡಿ, ಕೀಟನಾಶಕದ ಬಳಕೆ, ಇದಾವೂ ಇರಲಿಲ್ಲ. ಅಲ್ಪಸ್ವಲ್ಪ ಬೇಡಿಕೆ ಇದ್ದದ್ದು ಎಂಟಮಾಲಜಿಗೆ. ಏಕೆಂದರೆ ಆಗತಾನೆ ಡಿ.ಡಿ.ಟಿ., ಬಿ.ಹೆಚ್.ಸಿ. ಮಾರ್ಕೆಟ್ಟಿಗೆ ಬಂದಿದ್ದವು. ಎಲ್ಲಾ ಕೀಟಬಾಧೆಗೆ ರಾಮಬಾಣವಾಗಿ ಉಪಯೋಗವಾಗುತ್ತಿದ್ದವು. ಕಾಫಿಬೋರರ್ ಕಂಟ್ರೋಲ್‌ಗೆ ಬಿ.ಹೆಚ್.ಸಿ. ಬಳಕೆ ಬಹಳ ಪ್ರಯೋಜನಕಾರಿಯಾಗಿತ್ತು. ಆಗ ಕಾಫಿ ಸಂಶೋಧನೆ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಿತ್ತು.

ಮೈದಾನ ಪ್ರದೇಶದಲ್ಲಿ ಕೆಂಪು ತಲೆ ಕಂಬಳಿ ಹುಳ, ಕಪ್ಪು ತಲೆ ಕಂಬಳಿ ಹುಳ ಆಗಾಗ ಪೀಡೆಯಾಗಿ ಪರಿಣಮಿಸುತ್ತಿದ್ದವು. ಎಂಟಮಾಲಜಿ ಡಿಪಾರ್ಟ್‌ಮೆಂಟಿನಲ್ಲಿ ಕೋಲ್‌ಮನ್ ಕಾಲದಿಂದ ನುರಿತ ಪರಿಣಿತರಿದ್ದರು. ಇವೆಲ್ಲರಿಂದಾಗಿ ಈ ಡಿಪಾರ್ಟ್‌ಮೆಂಟಿಗೆ ಹೆಚ್ಚಿನ ಬೇಡಿಕೆಯಿತ್ತು.

ಬೋರಣ್ಣಗೌಡರಿಂದ ಶಿಫಾರಸು ಮಾಡಿಸಿದರೂ ಆರು ತಿಂಗಳು ಕಾಯಬೇಕಾಯಿತು. ಡಿಸೆಂಬರ್ ತಿಂಗಳ ಹೊತ್ತಿಗೆ (1957) ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್‌ಚರ್‌ನಿಂದ ಅಪಾಯಿಂಟ್‌ಮೆಂಟ್ ಆರ್ಡರ್ ಬಂತು. ಮಂಗಳೂರಿನಲ್ಲಿದ್ದ ಕಂಕನಾಡಿ ಭತ್ತ ಸಂಶೋಧನಾ ಕೇಂದ್ರದಲ್ಲಿ ರೀಸರ್ಚ್ ಅಸಿಸ್ಟೆಂಟ್ ಆಗಿ ನೇಮಕವಾಗಿತ್ತು. ಜನವರಿಯ ಹೊತ್ತಿಗೆ ಅಲ್ಲಿಗೆ ಹೋಗಿ ಸೇರಿಕೊಂಡೆ.

ಮಂಗಳೂರು, ಮದರಾಸು ಪ್ರಾಂತ್ಯದಿಂದ ಮೈಸೂರು ಪ್ರಾಂತ್ಯಕ್ಕೆ (ಆಗಿನ್ನೂ ಕರ್ನಾಟಕ ನಾಮಕರಣವಾಗಿರಲಿಲ್ಲ) ಹಿಂದಿನ ವರುಷ ಸೇರ್ಪಡೆಯಾಗಿತ್ತು. ಹಳೇ ಮೈಸೂರಿನ ಆಫೀಸರ್ಸ್ ಅಲ್ಲಿದ್ದದ್ದು ಬಹಳ ಕಡಿಮೆ. ಹಂಪನಕಟ್ಟೆಯಲ್ಲಿ ಕೆಲವು ತಾರ್ಸಿ ಮನೆಗಳನ್ನು ಬಿಟ್ಟರೆ ಮಂಗಳೂರಿನಲ್ಲಿ ಎಲ್ಲವೂ ಹೆಂಚಿನ ಮನೆಗಳೇ. ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಆಗಿರಲಿಲ್ಲ, ಪ್ರತಿ ಮನೆಗೊಂದು ಬಾವಿ. ಹೊಸಬರಿಗೆ ಎದ್ದು ಕಾಣುತ್ತಿದ್ದದ್ದು ಆನೆ ಕಾಲು ರೋಗ. ವರುಷಕ್ಕೆ ಎರಡು ಕೊಡೆ ಬೇಕಿತ್ತು. ಮಳೆಗಾಲಕ್ಕೊಂದು ಬಿಸಿಲುಗಾಲಕ್ಕೊಂದು. ನಾನು ಇಳಿದುಕೊಂಡಿದ್ದು ಬಲ್‌ಮಠ ಮಿಷನ್ ಕಾಂಪೌಂಡಿನಲ್ಲಿ ಸೊನ್ಸರ ಮನೆಯಲ್ಲಿ. ಕಂಕನಾಡಿ ಫಾರಂನಲ್ಲಿ ಮತ್ತೊಬ್ಬ ರೀಸರ್ಚ್ ಅಸಿಸ್ಟೆಂಟ್ ಗೋಪಾಲಕೃಷ್ಣರಾವ್ ಮೊದಲು ಇಲ್ಲಿದ್ದರು. ಫಾರಂನಲ್ಲೆ ಅವರಿಗೊಂದು ಮನೆ ಸಿಕ್ಕಿದ್ದರಿಂದ ಈ ಮನೆ ಬಿಟ್ಟು ಹೋಗಿದ್ದರು. ನಾನು ಕಂಕನಾಡಿ ಫಾರಂನಲ್ಲಿ ಕೆಲಸಕ್ಕೆ ಸೇರಿದ ಮೇಲೆ ಅವರು ಈ ಮನೆಯನ್ನು ಗೊತ್ತು ಮಾಡಿ ಕೊಟ್ಟರು. ಆ ಮನೆಯಲ್ಲಿ ಇಬ್ಬರು ದಂಪತಿಗಳು, ಒಬ್ಬ ಮಗ ಇದ್ದರು. ಒಂದು ಹಾಲ್ ನನಗೆ ಬಿಟ್ಟು ಕೊಟ್ಟಿದ್ದರು. ಭಾನುವಾರ ಮಾತ್ರ ಬೆಳಿಗ್ಗೆ 10 ಘಂಟೆಯಿಂದ ಸಂಜೆಯವರಿಗೆ ಈ ಹಾಲನ್ನು ಅವರ ಉಪಯೋಗಕ್ಕೆ ಬಿಟ್ಟುಕೊಡಬೇಕಿತ್ತು.

ನಾನು ಕೊಡುತ್ತಿದ್ದ ಹದಿನೈದು ರೂಪಾಯಿ ಬಾಡಿಗೆಗೆ ಸೊನ್ಸರು ಸದಾ ನನ್ನ ಯೋಗ ಕ್ಷೇಮ ಕೇಳುತ್ತಿದ್ದರು. ಮಳೆಗಾಲದಲ್ಲಿ ಆಗಾಗ ಹೋಟಲಿನಿಂದ ಊಟ ತಂದು ಕೊಡು ತ್ತಿದ್ದರು. ಫಾರಂನಿಂದ ತಡವಾಗಿ ಬಂದರೆ 'ರಾಯರೆ, ನೀವು ಈವತ್ತು ದಣಿದಿದ್ದೀರಿ ಕಾಲು ಹಿಸುಕಿ ಕೊಡುತ್ತೇನೆಂದು' ಹೇಳುತ್ತಿದ್ದರು. ವಯಸ್ಸಿನಲ್ಲಿ ನನಗಿಂತಲೂ ಎಷ್ಟೋ ವರುಷಕ್ಕೆ ಹಿರಿಯರು. ಸಣ್ಣಪುಟ್ಟ ಕೆಲಸ ಮಾಡಿ ದಿನಕ್ಕೆ ಎರಡು ಮೂರು ರೂಪಾಯಿ ತರುತ್ತಿದ್ದರೆಂದು ಕಾಣುತ್ತದೆ. ಅವರ ಹೆಂಡತಿ ರೊಸಲೇನ್, ಸ್ಕೂಲ್ ಟೀಚರ್ ಆಗಿದ್ದರು. ಮಗ ಐ.ಟಿ.ಐ.ನಲ್ಲಿ ಏನೋ ಕಲಿಯುತ್ತಿದ್ದ. ಅವರ ಮನೆಯಲ್ಲಿ ಎಂಟು ಬೆಕ್ಕುಗಳಿದ್ದವು. ಸೊನ್ಸರ ಸಂಪಾದನೆ ಮಾಡಿದ್ದೆಲ್ಲಾ ಆ ಬೆಕ್ಕುಗಳಿಗೆ ಆಗುತ್ತಿತ್ತು. ಅದರಲ್ಲಿ ಒಂದು ದೊಡ್ಡ ಬೆಕ್ಕು 'ಬೇಬಿ' ಎಂದು. ಎರಡು ಮೂರು ಕೆ.ಜಿ. ತೂಕವಿರಬಹುದು. ಅದಕ್ಕೆ ಯಾರ ಮೇಲಾದರೂ ಹೊಟ್ಟೆಯ ಮೇಲೆ ಮಲಗುವ ಅಭ್ಯಾಸ. ನನಗಂತೂ ಅದು ಹತ್ತಿರ ಬಂದರೆ ಭಯ ವಾಗುತ್ತಿತ್ತು. ಸೊನ್ಸರಿಗೆ ಏನೇ ಮಾಡಿದರೂ ಬೇಜಾರಿಲ್ಲ. ಆದರೆ ಆ ಬೆಕ್ಕಿಗೆ ಮಾತ್ರ ಏನನ್ನೂ ಬೈಯಬಾರದು. ನಿತ್ಯ ಬೆಕ್ಕಿಗೋಸ್ಕರ ಚಕ್ಕುಲಿ ಕಟ್ಟಿಸಿಕೊಂಡು ಬರುತ್ತಿದ್ದರು, ಹೆಂಡತಿ

ಮಗನಿಗೂ ಕೊಡುತ್ತಿರಲಿಲ್ಲ. ಅವರನ್ನು ಸಂತೋಷ ಪಡಿಸಬೇಕೆಂದಿದ್ದರೆ ಒಂದಿಷ್ಟು ಚಕ್ಕುಲಿ ಕಟ್ಟಿಸಿಕೊಂಡು ಹೋಗಿ ಬೆಕ್ಕಿಗೆ ಹಾಕಿದರೆ ಅವರಿಗೆ ಪರಮಾನಂದ.

ಕಂಕನಾಡಿ ಫಾರಂನಲ್ಲಿ ನಾಲ್ಕು ಜನ ರೀಸರ್ಚ್ ಅಸಿಸ್ಟೆಂಟ್ (ಆರ್.ಎ.), ಒಬ್ಬರು ಫಾರಂ ಸೂಪರ್‌ಇನ್‌ಟೆಂಡೆಂಟ್ ಭತ್ತದ ಸಂಶೋಧನೆ ಕಾರ್ಯದಲ್ಲಿ ತೊಡಗಿದ್ದರು. ಫಾರಂನಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ವಿನಯ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಫೀಲ್ಡ್ ಅಸಿಸ್ಟೆಂಟ್ ರೆಬೆಲೊ ನಾವು ನಾಲ್ಕು ಜನ ಆರ್.ಎ.ಗಳು ಕೂರುವಲ್ಲಿ ಕೂರುತ್ತಿದ್ದರು. ಮಾವಿನ ಫಸಲು ಬಂದಾಗ ಹರಾಜು ಮಾಡುತ್ತಿದ್ದರು. ಹರಾಜಿನಲ್ಲಿ ಕೊಂಡವನಿಂದ ಒಂದೊಂದು ಬುಟ್ಟಿ ಮಾವಿನ ಕಾಯನ್ನು ಕೊಂಡು ಇಟ್ಟಿದ್ದು, ಹಣ್ಣಾದ ಹಾಗೆಲ್ಲಾ ತಿನ್ನುತ್ತಿದ್ದೆವು. ರೆಬೆಲೊ ನಿತ್ಯ ನೋಡುತ್ತಿರಲಿಲ್ಲ. ಅವರ ಬುಟ್ಟಿಯಲ್ಲಿ ಹಣ್ಣಾದ್ದನ್ನು ತೆಗೆದು ಕಾಯನ್ನು ಅವರ ಬುಟ್ಟಿಗೆ ಇಡುತ್ತಿದ್ದೆವು. ನಮ್ಮ ಬುಟ್ಟಿ ಖಾಲಿಯಾದರೂ ಅವರ ಬುಟ್ಟಿಯ ಕಾಯಿ ಹಣ್ಣೇ ಆಗಿರುತ್ತಿರಲಿಲ್ಲ. ಅವರಿಗೆ ಇದೇಕೆ ಹೀಗಾಯಿತೆಂದು ಆಶ್ಚರ್ಯ. ನಾವು ಹೀಗೆ ಮಾಡುತ್ತಿದ್ದೆವೆಂದು ಶಂಕಿಸುತ್ತಿರಲಿಲ್ಲ. ಎಷ್ಟೋ ದಿವಸವಾದ ಮೇಲೆ ನಾವೇ ಹೇಳುತ್ತಿದ್ದೆವು.

ಈಗಿರುವ ಮೀನುಗಾರಿಕೆ ಕಾಲೇಜು ಇರುವಲ್ಲಿ ಅಥವಾ ಅದರ ಹತ್ತಿರ ಒಬ್ಬ ದಿವಂಗತ ಆರ್ಮಿ ಆಫೀಸರ್ ಹೆಂಡತಿ ವಾಸಿಸುತ್ತಿದ್ದರು. ನಿತ್ಯ ಹಸುವಿನ ಹಾಲನ್ನು ಕಾಯಿಸಿ ನಾವೆಲ್ಲಿದ್ದರೂ ಅಲ್ಲಿಗೆ ತಂದು ಕೊಡುತ್ತಿದ್ದರು. ಅವರಿಗೆ ತಿಂಗಳಿಗೊಮ್ಮೆ ದುಡ್ಡು ಕೊಡುತ್ತಿದ್ದೆವು. ನಾನು ದಿನೇ ದಿನೇ ಸಣ್ಣಗಾಗುತ್ತಿರುವುದನ್ನು ನೋಡಿ ಅವರಿಗೆ ಅಯ್ಯೋ ಎನಿಸುತ್ತಿತ್ತು. ಆದಷ್ಟು ಗಟ್ಟಿಯಾದ ಹಾಲನ್ನೇ ತಂದು ಕೊಡುತ್ತಿದ್ದರು. ನನಗೂ ಆಗ ಹಾಲು ಅಲರ್ಜಿ ಎಂದು ತಿಳಿದಿರಲಿಲ್ಲ. ಪಾಪ ಆ ತಾಯಿ ಎಷ್ಟು ಕಷ್ಟದಿಂದ ಅದರಲ್ಲೂ ಮಳೆಗಾಲದಲ್ಲಿ ಕೊಡೆ ಹಿಡಿದುಕೊಂಡು ಬಂದು ಕೊಡುತ್ತಿದ್ದರು. ನಾನು ಮಂಗಳೂರು ಬಿಟ್ಟಮೇಲೆಯೇ ಹಾಲಿನ ಅಲರ್ಜಿ ಗೊತ್ತಾದದ್ದು. ಮೊದಲೆ ತಿಳಿದಿದ್ದರೆ ಅವರಿಗೆ ಈ ತೊಂದರೆ ಕೊಡುತ್ತಿರಲಿಲ್ಲ.

ಆರ್ಮಿಯಲ್ಲಿದ್ದವರೊಬ್ಬ ನಾಯಕ್ ಎನ್ನುವರು ಫೀಲ್ಡ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಅವರೂ ಫಾರಂನಲ್ಲೇ ವಾಸಿಸುತ್ತಿದ್ದರು. ತುಂಬಾ ಚೆನ್ನಾಗಿ ಅಡುಗೆ ಮಾಡುತ್ತಿದ್ದರು. ಅವರು ಮಾಡಿದ ಅಡುಗೆ ಉಂಡವರಿಗೆಲ್ಲಾ ನಾಯಕ್‌ರ ನೆನಪು ಇರುವುದು. ಒಮ್ಮೆ ಬಾಲಕೃಷ್ಣರಾಯರು ನಾಯಕ್ ಕೈಯಲ್ಲಿ ಅಡುಗೆ ಮಾಡಿಸಿ ನಮ್ಮನ್ನೆಲ್ಲಾ ಊಟಕ್ಕೆ ಕರೆದಿದ್ದರು. ಊಟ ಮಾಡಿ ಹರಟೆ ಹೊಡೆದು ಮನೆಗೆ ಹೋಗಬೇಕಾದರೆ ರಾತ್ರಿ ಹನ್ನೆರಡು ಘಂಟೆ. ನಾನು ಮಲಗುವ ಮುನ್ನ ಬಾಗಿಲು ಶಬ್ದವಾಯಿತು. ತೆಗೆದು ನೋಡಿದರೆ ನಾಯಕ್ ಕೈಕಟ್ಟಿ ನಿಂತಿದ್ದಾರೆ. ಏನೋ ತೊಂದರೆಯಾಗಿರಬೇಕೆಂದು ಗಾಬರಿಯಿಂದ ಕೇಳಿದರೆ, ಬಹಳ ವಿನಯದಿಂದ ಮೃದು ಧ್ವನಿಯಲ್ಲಿ 'ರಾಯರು ಊಟ ಮಾಡಿ ಏನೂ ಹೇಳಲಿಲ್ಲ. ಊಟ ಸರಿಯಾಯಿತೋ ಇಲ್ಲವೋ ತಿಳಿಯದು' ಎಂದರು. ಅವರು ಇದಕ್ಕಾಗಿ ಎರಡು ಮೈಲಿ ಆ ಮಧ್ಯರಾತ್ರಿ ನಡೆದು ಬಂದಿದ್ದರು. ಒಳ್ಳೆಯ ಅಡುಗೆ ಕಂಠಪೂರ್ತಿ ಉಂಡು, ಒಂದು ಕೃತಜ್ಞತೆಯ ಮಾತನ್ನೂ ಹೇಳದೆ ಬಂದ ನಾನೆಂತಹ ಮೂರ್ಖ ಎಂದು ಬಹಳ ಮನಸ್ಸಿಗೆ ನೋವಾಯಿತು. ಅಂದಿನಿಂದ ಊಟಕ್ಕೆ ಎಲ್ಲಿಗೆ ಹೋಗಲಿ, ಹೇಗೆ ಇರಲಿ, ಊಟ ಚೆನ್ನಾಗಿತ್ತು ಎಂದು ಹೇಳಲು ಮರೆಯುವುದಿಲ್ಲ.

ನಮ್ಮ ಫಾರಂನಲ್ಲಿ ಮತ್ತೊಬ್ಬ ರೀಸರ್ಚ್ ಅಸಿಸ್ಟೆಂಟ್ ಸಾಯಿಲ್ ಸರ್ವೆಯಲ್ಲಿ ಇದ್ದರು. ಅದು ಸೆಂಟ್ರಲ್ ಗೌರ್ನಮೆಂಟಿನದು. ಇಬ್ಬರಿಗೂ ಸಂಬಳ ಒಂದೇ (ನೂರು ರೂಪಾಯಿ) ಆದರೂ ಡಿ.ಎ. ಮಾತ್ರ ನಮಗೆ ಮೂವತ್ತು ರೂಪಾಯಿ ಸೆಂಟ್ರಲ್‌ನವರಿಗೆ ಅರವತ್ತು ರೂಪಾಯಿ. ಆ ಮೂವತ್ತು ರೂಪಾಯಿಯ ಅಂತರ ನಮ್ಮಿಬ್ಬರ ನಡುವೆ ಖರ್ಚು ಮಾಡುತ್ತಿದ್ದ ವೈಖರಿ ಬಹಳ ಇರುತ್ತಿತ್ತು. ಆಗ ನನ್ನ ಆಸೆ ನನಗೂ ಮೂವತ್ತು ರೂಪಾಯಿ ಹೆಚ್ಚಿಗೆ ಬಂದಿದ್ದರೆ ಜೀವನ ಎಷ್ಟು ಸುಖವಾಗಿರುತ್ತಿತ್ತು ಅಂದುಕೊಳ್ಳುತ್ತಿದ್ದೆ. ಮುಂದೆ ಮೂವತ್ತಕ್ಕಿಂತ ಎಷ್ಟೋ ಪಾಲು ಹೆಚ್ಚಿಗೆ ಸಂಬಳ ತೆಗೆದರೂ ನೂರಮೂವತ್ತು ರೂಪಾಯಿ ಬರುವಾಗ ಇದ್ದ ಸಂತೋಷ ಮತ್ತೆ ಸಿಗಲಿಲ್ಲ.

ನಾನಿದ್ದ ಸೂನ್ಸರ ಮನೆಯ ಪಕ್ಕದಲ್ಲೇ ನಮ್ಮ ಆಫೀಸಿನ ಕ್ಲಾರ್ಕ್ ಕ್ಯಾರಟ್ ಇದ್ರು. ಅವರು 24 ಘಂಟೆ ಕುಡಿಯುತ್ತಿದ್ದರು. ಎಷ್ಟೋ ಬಾರಿ ಆಫೀಸಿನಲ್ಲಿ ರಾದ್ಧಾಂತ ಮಾಡು ತ್ತಿದ್ದರು. ಅವರಿಗೆ ಒಬ್ಬ ಮಗಳು. ಬಹುಶಃ ಮಿಡ್ಲ್‌ಸ್ಕೂಲ್‌ನಲ್ಲಿ ಓದುತ್ತಿದ್ದಿರಬಹುದು. ನಾನು ಫಾರಂಗೆ ಹೋಗುವಾಗ, ಬರುವಾಗ ಅವರ ಮನೆ ಮುಂದೆಯೇ ಬರಬೇಕಿತ್ತು. ಆದರೆ ಒಂದು ದಿನವು ಅವರ ಹೆಂಡತಿ ಮತ್ತು ಮಗಳೊಂದಿಗೆ ಮಾತಾಡಿದ ನೆನಪಿಲ್ಲ. ಅವರ ಸಂಸಾರ ಕಷ್ಟದಲ್ಲೇ ಸಾಗಿತ್ತೆಂದು ಕಾಣುತ್ತದೆ. ಆಗಾಗ ಸೂನ್ಸರ ಹತ್ತಿರ ಬಂದು 'ರಾಯರಿಗೆ ಹೇಳಿ, ಅವರು ಮನೆಗೆ ಸರಿಯಾಗಿ ದುಡ್ಡುಕೊಡುತ್ತಿಲ್ಲ' ಎನ್ನುತ್ತಿದ್ದರೆಂತೆ. ಆದರೆ ಕ್ಯಾರಟ್ ಯಾರ ಮಾತನ್ನೂ ಕೇಳುವಂತಿರಲಿಲ್ಲ.

ಮಂಗಳೂರು ಬಿಟ್ಟು ಸುಮಾರು 20 ವರುಷದ ನಂತರ ಉಡುಪಿಯ ಹತ್ತಿರ ಬಾರ್ಕೂರು ಪಂಡಿತರಲ್ಲಿಗೆ ನನ್ನ ಪತ್ನಿ ಮತ್ತು ಮಗಳು ಕವಿತಳನ್ನು ಕರೆದುಕೊಂಡು ಹೋಗಿದ್ದೆ. ಬಾರ್ಕೂರು ನಂಬಿಯಾರ್ ಪಂಡಿತರು ಬಹಳ ಹೆಸರುವಾಸಿಯಾದ ಆಯುರ್ವೇದ ಪಂಡಿತರು. ಬೇರೆಲ್ಲೂ ವಾಸಿಯಾಗದಿದ್ದ ಖಾಯಿಲೆ ಇದ್ದವರು ಅಲ್ಲಿಗೆ ಹೋಗುತ್ತಿದ್ದರು. ಯಾರಿಂದಲೂ ಹೆಚ್ಚಿಗೆ ದುಡ್ಡು ತೆಗೆದುಕೊಂಡವರಲ್ಲ. ಅವರ ಒಂದೇ ವ್ಯಥೆ ಎಂದರೆ ಅವರ ವೃತ್ತಿ ಅವರ ನಂತರ ಎಲ್ಲಿ ನಿಂತು ಹೋಗುತ್ತದೋ ಎಂದು. ಅಂದು ಅಲ್ಲಿಗೆ ಒಬ್ಬ ಸ್ಫುರದ್ರೂಪಿಯಾದ ಹೆಂಗಸರೊಬ್ಬರು ಬಂದಿದ್ದರು. ಎಲ್ಲರನ್ನು ಆಕರ್ಷಿಸುವಂತಹ ಲಕ್ಷಣ, ಮೈತುಂಬ ಒಡವೆ ಧರಿಸಿದ್ದರು. ಯಾರೋ ಆಗರ್ಭ ಶ್ರೀಮಂತರ ಮನೆಯವರಿರಬೇಕೆಂದು ಅಲ್ಲಿಗೆ ಬಂದವರಿಗೆಲ್ಲ ಅನಿಸಿರಬೇಕು. ನಾವು ಹೋದ ಕೆಲಸವಾದ ಮೇಲೆ ಪಂಡಿತರ ಮನೆಯಿಂದ ಹೊರಗೆ ಬರುತ್ತಿರುವಾಗ ಬಾಗಿಲಲ್ಲಿ ಆ ಹೆಂಗಸು 'ರಾಯರೇ ನೀವು ಕಂಕನಾಡಿ ಫಾರಂನಲ್ಲಿ ನಮ್ಮ ತಂದೆ ಕ್ಯಾರಟ್ ಇರುವಾಗ ಇದ್ದವರಲ್ಲವೆ? ನಿತ್ಯ ನಮ್ಮ ಮನೆಯ ಮುಂದೆ ಹೋಗುತ್ತಿದ್ದಿರಿ ಅಲ್ಲವೆ' ಎಂದರು. ಹೌದು ಎಂದು ಅಷ್ಟೆ ಹೇಳಿದೆ. ನೀವು ಯಾರು ಎಂಬ ಪ್ರಶ್ನೆಗೆ ಅವರೇ ಹೇಳಿದ್ದರು. ಅವರ ತಂದೆ ಆಗಲೇ ತೀರಿಕೊಂಡಿದ್ದು ತಿಳಿದಿತ್ತು. ಇವರ ಮತ್ತು ಇವರ ತಾಯಿ ಯೋಗಕ್ಷೇಮವನ್ನು ವಿಚಾರಿಸದಿರಲು ಕಾರಣ ಏನೆಂದು ನನಗೆ ತಿಳಿಯದು. ಬಹುಶಃ, ನಾವೆಲ್ಲಾ ಹೊರಡುವ ಆತುರದಲ್ಲಿದ್ದೇವೆಂದು ಕಾಣುತ್ತದೆ.

ಮಂಗಳೂರಿಗೆ ಹೋದನಂತರ ಊಟಕ್ಕೆ ಹೋಟಲೇ ಗತಿ. ಆದರೆ ಯಾವುದೊಂದು ನಿರ್ದಿಷ್ಟವಾದ ಹೋಟೆಲ್ ಅಂತ ಇರಲಿಲ್ಲ. ಮನಸ್ಸಿಗೆ ಬಂದಂತೆ ಊಟ ಮಾಡಿದರೆ ಆಯಿತು

ಇಲ್ಲದಿದ್ದರೆ ಇಲ್ಲ. ಆದರೂ ಕಂಕನಾಡಿಯಲ್ಲಿದ್ದ ದೇವಾರ್ ಹೋಟಲ್‌ಗೆ ಆಗಾಗ ಹೋಗುವ ವಾಡಿಕೆ ಇತ್ತು. ಅಲ್ಲಿಯ ಕುಸಲಕ್ಕಿ ಅನ್ನ, ಮೀನಿನ ಕರಿ ಹಿಡಿಸಿತ್ತು. ಒಮ್ಮೊಮ್ಮೆ ರೂಪಾಯಿಗೆ ಹದಿನಾರು, ಅಂಗೈ ಅಗಲದ ಪಾಂಪ್ಲೆಟ್ ಫ್ರೈ ಸಿಗುತ್ತಿತ್ತು. ಕೀರ್ತಿಮಹಲ್‌ನಲ್ಲಿ ಒಳ್ಳೇ ವೆಜಿಟೇರಿಯನ್ ಊಟ ದೊರೆಯುತ್ತಿತ್ತು. ಊರಿನ ಕಡೆಯವರು ಯಾರಾದರೂ ಬಂದರೆ ಇವೆರಡರಲ್ಲಿ ಒಂದಕ್ಕೆ ಹೋಗುತ್ತಿದ್ದೆವು. ಆಗ ಮಂಗಳೂರಿನಲ್ಲಿ ಮದ್ಯಪಾನ ನಿಷೇಧವಿತ್ತು. ಊರಿನವರು ಯಾರಾದರು ಬಂದರೆ ಸೋಡಾ ಅಂಗಡಿಗೆ ಹೋಗಿ ಇವನಿಗೊಂದು ಸಿಹಿ ಸೋಡಾ ಕೊಡಿ ನಮಗೆ ಕಾರ ಸೋಡ ಕೊಡಿ ಎಂದು ಕೇಳುತ್ತಿದ್ದರು. ಸಿಹಿ ಸೋಡಾಕ್ಕೆ ಹತ್ತು ಪೈಸೆ. ಕಾರ ಸೋಡಾಕ್ಕೆ ಐವತ್ತು ಪೈಸೆ. ಈ ವ್ಯತ್ಯಾಸ ಕೇಳಿದರೆ ನಿನಗೆ ಗೊತ್ತಿಲ್ಲ ಸುಮ್ಮನಿರು ಎನ್ನುತ್ತಿದ್ದರು. ಕೊನೆಗೆ ತಿಳಿಯಿತು, ಕಾರ ಸೋಡ ಸಾರಾಯಿ ಸೋಡ ಎಂದು.

ನಾನಿರುವ ಸಮಯದಲ್ಲಿ ಜಾಪನೀಸ್ ಮೆಥೆಡ್ ಆಫ್ ಪ್ಯಾಡಿ ಕಲ್ಟಿವೇಷನ್ ಸ್ಕೀಮ್‌ನಲ್ಲಿ ಮಡಿಕೇರಿಯಿಂದ ಮಂಗಳೂರಿಗೆ ಮಂದಣ್ಣ ಎನ್ನುವರು ಟ್ರಾನ್ಸ್‌ಫರ್ ಆಗಿ ಬಂದಿದ್ದರು. ಅವರು ಐದು ಮಕ್ಕಳ ತಂದೆ. ಸಂಸಾರವೆಲ್ಲಾ ಮಡಿಕೇರಿಯಲ್ಲಿ. ಇವರು ವಾರಕ್ಕೆ ಅಥವಾ ಹದಿನೈದು ದಿವಸಕ್ಕೊಮ್ಮೆ ಮಡಿಕೇರಿಗೆ ಹೋಗಿ ಬರುತ್ತಿದ್ದರು. ನಾವಿಬ್ಬರು ಆಗಾಗ ಒಟ್ಟಿಗೆ ಸೇರುತ್ತಿದ್ದೆವು. ಬಹಳ ಹ್ಯೂಮರಸ್ ವ್ಯಕ್ತಿ. ಮಾತಾಡುತ್ತಿದ್ದರೆ ಗಂಟೆ ಗಟ್ಟಲೆ ಕೇಳಬಹುದಿತ್ತು. ಅವರು ಯಾವತ್ತೂ ಫ್ಯಾನ್ ಅಡಿ ಕೂರುತ್ತಿರಲಿಲ್ಲ. ಏಕೆಂದರೆ 24 ಘಂಟೆ ತಿರುಗುತ್ತಿರುತ್ತದೆ, ಯಾವಾಗ ತಲೆ ಮೇಲೆ ಬಿದ್ದು ಬಿಡುತ್ತದೆಯೋ ಎಂಬ ಹೆದರಿಕೆ. ಅವರ ಜೀವನದ ರಸಿಕತೆ ಗಳನ್ನು ವರ್ಣಿಸುತ್ತಿದ್ದರೆ ಸಿನೆಮಾ ನೋಡುವುದೇ ಬೇಡ! ಮಧ್ಯವಯಸ್ಸು ಮೀರಿದ್ದರು ಜೀವನದ ನೋವು ನಲಿವಿನಲ್ಲಿ ಸಿಲುಕಿದ್ದರೂ ಹುಡುಗಾಟ ಬಿಟ್ಟಿರಲಿಲ್ಲ. ಬಲಮಟದ ಮೈದಾನದಲ್ಲಿ ಅಂಗಾತ ಮಲಗಿ ಆಕಾಶ ನೋಡುತ್ತ ಘಂಟೆಗಟ್ಟಲೆ ಮಾತನಾಡುತ್ತ ರಾತ್ರಿ ಕಳೆದಿರುವ ದಿವಸಗಳೆಷ್ಟೋ! ಮೂವತ್ತೈದು ವರುಷಗಳ ನಂತರ ನಾವಿಬ್ಬರೂ ಬೆಂಗಳೂರಿನಲ್ಲೇ ಇರುವುದು ತಿಳಿಯಿತು. ಮತ್ತೆ ಸಂಧಿಸಿದಾಗಲೂ ಅವರ ಹಾಸ್ಯ ಪ್ರಜ್ಞೆ ಮೊದಲಿನ ಹಾಗೆಯೇ ಇತ್ತು.

ಮತ್ತಿಬ್ಬರು ಕೊಡಗಿನ ದಂಪತಿಗಳು, ಹೈಸ್ಕೂಲ್ ಟೀಚರ್ಸ್ ಪರಿಚಯವಾದ ನಂತರ ಆಗಾಗ ಅವರ ಜೊತೆ ತಿರುಗಾಡಲು ಹೋಗುತ್ತಿದ್ದೆ. ಆಗ ತಾನೆ ಕೆಲಸಕ್ಕೆ ಸೇರಿ ಒಂಟಿಯಾಗಿದ್ದು ದರಿಂದ ನಾನೆಲ್ಲಿ ದಾರಿ ತಪ್ಪುವೆನೋ ಎಂಬ ಶಂಕೆ ಅವರಿಗೆ. ಅವರ ಬುದ್ಧಿವಾದಗಳೆಲ್ಲ ಸಂದರ್ಭೋಚಿತವಾಗಿ ಹೇಳುತ್ತಿದ್ದದ್ದು ಮನಸ್ಸಿನೊಳ ಹೊಕ್ಕು, ಸುಪ್ತವಾಗಿರುತ್ತಿದ್ದವು. ಕ್ಲಿಷ್ಟ ಸಂದರ್ಭದಲ್ಲಿ ಎಚ್ಚರಿಸುತ್ತಿದ್ದವು. ಅವರ ಸಂಘ ಕೇವಲ ಕೆಲವೇ ತಿಂಗಳುಗಳಾದರೂ ಅವರ ಹಿತನುಡಿಗಳು ನನ್ನಲ್ಲಿ ಆಳವಾಗಿ ಬೇರೂರಿದವು. ಅವರು ಹೇಳುತ್ತಿದ್ದ ಕೆಲವು ಹಿತವಚನಗಳಲ್ಲಿ ಮರೆಯದೆ ಇರುವುದು, ಕಮ್ಮಾರನ ಮಗನ ವಿಷಯ. ಮಗ ಶಾಲೆ ಬಿಟ್ಟು ಪೋಲಿ ಅಲೆಯುತ್ತಿದ್ದಾಗ ಕಮ್ಮಾರ ಅವನ ಮಗನಿಗೆ ಏನಾದರೂ ಸಂಪಾದನೆ ಮಾಡಿದರೆ ಮಾತ್ರ ಮನೆಗೆ ಪ್ರವೇಶವೆಂದು ಕಟ್ಟುನಿಟ್ಟು ಮಾಡಿದ. ಪ್ರತಿದಿನ ಸಂಜೆ ತಾಯಿಯನ್ನು ಗೋಗರೆದು ಒಂದು ರೂಪಾಯಿ ಸಂಪಾದಿಸಿ ಕುಲುಮೆಯಲ್ಲಿದ್ದ ತಂದೆಗೆ ಕೊಡುತ್ತಿದ್ದ. ಅದನ್ನು ತೆಗೆದುಕೊಂಡು ತಂದೆ ಬೆಂಕಿಗೆ ಹಾಕುತ್ತಿದ್ದ. ಕೆಲವು ದಿನಗಳಾದ ಮೇಲೆ, ತಾಯಿ ಕೊಟ್ಟ ದುಡ್ಡನ್ನು ತಂದೆ ಒಲೆಗೆ ಹಾಕುವುದನ್ನು ಹೇಳಿದ. ಅಂದು ಅವನಿಗೆ ಸ್ವಂತ ನೀನೇ ಸಂಪಾದನೆ ಮಾಡಿ ತಂದು ಕೊಡು ಎಂದಳು ತಾಯಿ. ಎಲ್ಲಿಯೋ ಕೂಲಿ ಮಾಡಿ ಉಳಿದಿದ್ದ ಎರಡು ಆಣೆಯನ್ನು ಅಂದು ಸಂಜೆ ತಂದೆಗೆ ಕೊಟ್ಟ. ಅದನ್ನೂ ಒಲೆಗೆ

ಹಾಕಿದಾಗ ತಕ್ಷಣ ಮಗ ಬೆಂಕಿಯೊಳಗೆ ಕೈ ಹಾಕಿ ತೆಗೆಯಲು ಪ್ರಯತ್ನಪಟ್ಟ. ಕಷ್ಟಪಟ್ಟು ದುಡಿದ ದುಡ್ಡಿಗೆ ಬೆಲೆ ಇರುವುದು ಅಂದು ಅವನಿಗೆ ಅರಿವಾಯಿತು. ಇಂದು ನಮ್ಮ ಸಮಾಜದಲ್ಲಿ ತಂದೆ ತಾಯಿಯವರು ಸುಲಭವಾಗಿ ಸಂಪಾದಿಸಿದ ಹಣವನ್ನು ಮಕ್ಕಳಿಗೆ ಧಾರಾಳವಾಗಿ ಕೊಡುತ್ತಿರುವುದರಿಂದ ಎಷ್ಟೋ ಅನರ್ಥಗಳಾಗುವುದನ್ನು ನೋಡುತ್ತಿದ್ದೇವೆ.

ನಾನು ಸಿನೆಮಾ ನೋಡುತ್ತಿದ್ದದ್ದು ಸ್ನೇಹಿತರ ಒಟ್ಟಿಗೆ. ಒಬ್ಬನೇ ಸಿನಿಮಾಕ್ಕೆ ಹೋಗುವ ಅಭ್ಯಾಸವಿರಲಿಲ್ಲ. ಆದರೆ ಮಂಗಳೂರಿಗೆ ಬಂದ ಮೇಲೆ ಭಾನುವಾರ ಕೆಲವೊಮ್ಮೆ ನಾಲ್ಕು ಸಿನೆಮಾ ನೋಡುತ್ತಿದ್ದದ್ದು ಇತ್ತು. ನಾನು ಮಲಗುತ್ತಿದ್ದ ಹಾಲ್ ಅನ್ನು ಭಾನುವಾರ ಬೆಳಿಗ್ಗೆಯೇ ಬಿಡಬೇಕಿತ್ತು. ಯಾವುದಾದರೂ ಹೋಟಲಿನಲ್ಲಿ ತಿಂಡಿ ಮಾಡಿ ಬೆಳಗಿನ ಪ್ರದರ್ಶನಕ್ಕೆ ಹೋಗುತ್ತಿದ್ದೆ. ಊಟ ಮಾಡಿ ಎರಡನೆ ಷೋ. ಕಾರಣ ಸಿನೆಮಾ ನೋಡೋ ಹುಚ್ಚಲ್ಲ. ಮನೆಯಲ್ಲಿ ಫ್ಯಾನ್ ಇರಲಿಲ್ಲ. ಶಖೆ ತಾಪ ತಡೆಯಲು ಸಿನೆಮಾ ಮಂದಿರ ಒಂದೇ ದಾರಿ. ಅಲ್ಲಿ ಫ್ಯಾನ್ ಅಥವಾ ಹವನಿಯಂತ್ರ ಇರುತ್ತಿದ್ದಿತು. ನನಗೆ ಬೇರೆ ಸ್ನೇಹಿತರೂ ಯಾರೂ ಇದ್ದಿಲ್ಲ. ಮಂದಣ್ಣನವರು ಶನಿವಾರ ಭಾನುವಾರ ಮಡಿಕೇರಿಗೆ ಹೋಗುತ್ತಿದ್ದರು. ಮಂಗಳೂರು ಬಿಟ್ಟಮೇಲೆ ಸಿನೆಮಾ ನೋಡಿದ್ದೇ ಅಪರೂಪ.

ಇದೇ ವರುಷ (1958) ನನ್ನ ಮೊದಲನೆ ಡಿಗ್ರಿಯನ್ನು ಕಾನ್ವಕೇಷನ್‌ನಲ್ಲಿ ಖುದ್ದಾಗಿ ತೆಗೆದುಕೊಂಡದ್ದು. ಹೊಸದಾಗಿ ಕಟ್ಟಿದ್ದ ಕ್ರಾಫರ್ಡ್ ಹಾಲ್‌ನಲ್ಲಿ ಘಟಿಕೋತ್ಸವ ಸಮಾರಂಭ ನಡೆದಿತ್ತು. ಹಳೇ ಮೈಸೂರು ಸಂಸ್ಥಾನಕ್ಕೆಲ್ಲಾ ಒಂದೆ ವಿಶ್ವವಿದ್ಯಾನಿಲಯ. ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರು ಕುಲಾಧಿಪತಿ (ಛಾನ್ಸಲರ್). ಹಿಂದೆ ಜಯಚಾಮರಾಜ ಒಡೆಯರನ್ನು ಬಹಳ ಹತ್ತಿರದಿಂದ ನೋಡಿದ್ದು ನಾನು ಇಂಟರ್ ಮೀಡಿಯಟ್ ಓದುತ್ತಿದ್ದಾಗ. ಕಾಕನ ಕೋಟೆ ಖೆಡ್ಡ ಆಪರೇಷನ್‌ನಲ್ಲಿ ಆನೆಗಳನ್ನು ಹಿಡಿಯುವ ದೃಶ್ಯವನ್ನು ಮೂವಿ ಕ್ಯಾಮರಾದಿಂದ ಓಡಾಡಿ ತೆಗೆಯುತ್ತಿದ್ದರು. ಪ್ರಖ್ಯಾತ ಚರಿತ್ರೆಕಾರರು ಡಾ॥ ರಾಧಾಕುಮುದ್ ಮುಖರ್ಜಿ ಘಟಿಕೋತ್ಸವ ಭಾಷಣವನ್ನು ಮೂರು ಗಂಟೆಗಳ ಕಾಲ ಮಾಡಿದರು. ಅದೊಂದು ದೀರ್ಘಕಾಲದ ಘಟಿಕೋತ್ಸವ ಭಾಷಣದ ದಾಖಲೆ ಇರಬೇಕು!

ಮಂಗಳೂರಿನಲ್ಲಿರುವಾಗ ನನ್ನ ಸ್ನೇಹಿತರು ಡೆಲ್ಲಿಯಲ್ಲಿರುವ ಐ.ಎ.ಆರ್.ಐ. ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಕೂಲಿಗೆ ಎಂ.ಎಸ್‌ಸಿ.ಗೆ ಸೇರಲು ಅಪ್ಲಿಕೇಷನ್ ತರಿಸಿದ್ದರು. ನನಗೂ ಒಂದು ಕೊಟ್ಟು ಅಪ್ಲೈ ಮಾಡುವಂತೆ ಪ್ರಚೋದಿಸಿದರು. ನಾನಿದ್ದ ಸ್ಥಿತಿಯಲ್ಲಿ ನಾನೆಲ್ಲಿ? ಡೆಲ್ಲಿಯೆಲ್ಲಿ? ಆದರೂ ಅರ್ಜಿಹಾಕುವುದಕ್ಕೆ ಕಳೆದುಕೊಳ್ಳುವುದೇನಿದೆ. ಕಳುಹಿಸಿದ್ದೂ ಆಯಿತು. ಆದರೆ ಅತ್ತಕಡೆ ಗಮನವೇ ಇಲ್ಲ. ಒಂದು ದಿನ ಡೆಲ್ಲಿಯಿಂದ ಸ್ನೇಹಿತ ಬಿ. ಎಸ್. ಪುಟ್ಟಸ್ವಾಮಿಗೌಡರಿಂದ ಪತ್ರ ಬಂತು. ಇಂಟರ್‌ವ್ಯೂವ್ ಕರೆದಿರುವ ಲಿಸ್ಟಿನಲ್ಲಿ ನನ್ನ ಹೆಸರೂ ಇರುವುದಾಗಿ, ಸೆಲೆಕ್ಟ್ ಆದರೆ ಒಂದಲ್ಲ ಒಂದು ಸ್ಕಾಲರ್‌ಶಿಪ್ ದೊರೆಯುವುದಾಗಿಯೂ, ಈ ಸದಾವಕಾಶ ಕಳೆದು ಕೊಳ್ಳಬಾರದಾಗಿ ಬರೆದಿದ್ದರು. ಮನಸ್ಸಿನ ಹೊಯ್ದಾಟ ಪ್ರಾರಂಭವಾಯಿತು. ನನ್ನ ಸಹೋದ್ಯೋಗಿಗಳು ಕೂಡ ಪ್ರೋತ್ಸಾಹಿಸಲು ಪ್ರಾರಂಭಿಸಿದರು. ನಾನೇನಾದರೂ ಸೇರಿದ ಮೇಲೆ ಸ್ಕಾಲರ್‌ಶಿಪ್ ಸಿಗದಿದ್ದರೆ ನನ್ನಗತಿಯೇನು? ಇತ್ತ ಕೆಲಸವನ್ನೂ ಕಳೆದುಕೊಂಡು ಅತ್ತ ಓದಲೂ ಆಗದಿದ್ದರೆ ಮುಂದೇನು ಗತಿ? ಸಂದರ್ಶನದ ಚೀಟಿಯೂ ಬಂತು. ದೇವರ ಮೇಲೆ ಭಾರ ಹಾಕಿ

ರಜೆ ಚೀಟಿಯನ್ನು ಬರೆದಿಟ್ಟು, ಸಕಲೇಶಪುರಕ್ಕೆ ಬಂದು, ಹೆಚ್.ಎಸ್. ಮಲ್ಲೇಗೌಡರೊಡನೆ ಮಾತನಾಡಿ ಮುಂದೇನಾದರೂ ಕಷ್ಟಕ್ಕೆ ಸಿಕ್ಕಿದರೆ ಸಹಾಯ ಮಾಡಬೇಕೆಂದು ಕೇಳಿಕೊಂಡೆ. ಆಗ ಅವರ ಪರಿಸ್ಥಿತಿಯೂ ಸರಿ ಇರಲಿಲ್ಲ. ವ್ಯಾಪಾರದಲ್ಲಿ ಏನ್ನಡೆಯಾಗಿತ್ತು. ಸುಮಾರು ಹನ್ನೊಂದು ಲಕ್ಷ ರೂಪಾಯಿ ಬೆಳೆಗಾರರಿಂದ ಬಾಕಿ ಸಿಂತು ತೊಂದರೆಯಲ್ಲಿದ್ದರು. ನಮ್ಮ ಮನೆಯವರದೂ ಕೂಡ ಬಾಕಿ ಇತ್ತು. ಅವರ ಸಂಕಟ ನನಗೆ ಅರಿವಾಯಿತು. ಅವರು ಹೋಗು ಅಥವಾ ಬೇಡವೆಂದು ಏನನ್ನೂ ಹೇಳಲಿಲ್ಲ. ವಿಧಿ ನನ್ನನ್ನು ಡೆಲ್ಲಿಯ ಕಡೆಗೆ ಎಳೆದಿತ್ತು. ಕಾಸಿಲ್ಲದೆ ಕೈಲಾಸ ನೋಡುವ ಪ್ರಯತ್ನ ನನ್ನದಾಗಿತ್ತು!

ಮಂಗಳೂರು ಹಂಪನಕಟ್ಟೆ ದಾಟಿದ ಮೇಲೆ ಒಂದು ವಿಶಾಲವಾದ ಮೈದಾನವಿತ್ತು. ಸಂಜೆ ಹೊತ್ತು ಜನರೆಲ್ಲರೂ ಅಡ್ಡಾಡಲು ಅಲ್ಲಿಗೆ ಹೋಗುತ್ತಿದ್ದರು. ಆಗಾಗ ನಾನೂ ಹೋಗುತ್ತಿದ್ದೆ. ನಾನು ಡೆಲ್ಲಿಗೆ ಹೋಗುವ ನಾಲ್ಕೈದು ದಿನ ಮುಂಚೆ ಒಂದು ಸಂಜೆ ಹತ್ತಾರು ಜನರ ಗುಂಪೊಂದು ಏನನ್ನೋ ವೀಕ್ಷಿಸುತ್ತಿದ್ದಂತೆ ಇತ್ತು. ಕುತೂಹಲದಿಂದ ನಾನೂ ಹತ್ತಿರ ಹೋಗಿ ವೀಕ್ಷಿಸಿದಾಗ ಒಬ್ಬ ಸನ್ಯಾಸಿ ಶುಭ್ರವಾದ ಕಾವಿ ಧರಿಸಿ ಬಲಗೈಯಲ್ಲಿ ವಾಚ್‌ಕಟ್ಟಿ ನೀಳವಾದ ಕೂದಲನ್ನು ಹಿಂದಕ್ಕೆ ಬಾಚಿ ಗಂಧದ ಬೊಟ್ಟಿಟ್ಟು, ಒಂದು ಎತ್ತರವಾದ ಆಸನದ ಮೇಲೆ ಕುಳಿತು, ಇಂಗ್ಲಿಷ್‌ನಲ್ಲಿ ಸ್ವಚ್ಛವಾಗಿ ಮಾತನಾಡುತ್ತಿದ್ದರು. ಅವರ ಮಾತು ಮುಗಿಯುವ ವೇಳೆಗೆ ಸಭಿಕರನ್ನು ಉದ್ದೇಶಿಸಿ ನಾಳೆ ಇದೇ ಸಮಯಕ್ಕೆ ಸಂಜೆ ಆರರಿಂದ ಏಳರವರೆಗೆ ಉಪನ್ಯಾಸವಿರುತ್ತದೆ, ನೀವು ಮತ್ತು ನಿಮ್ಮ ಸ್ನೇಹಿತರೊಡನೆ ಬನ್ನಿ ಎಂದು ಹೇಳಿ ಹೊರಟುಹೋದರು. ನಂತರ ಅಲ್ಲಿ ನೆರೆದಿದ್ದವರೊಬ್ಬರನ್ನು ವಿಚಾರಿಸಿದಾಗ ಅವರು ಸ್ವಾಮಿ ಚಿನ್ಮಯಾನಂದ, "ಓಂ" ಮೇಲೆ ಮಾತಾಡುತ್ತಾರೆ ಎಂದರು. ಆಗ ನನಗೆ ಬೇಗ ಮನಸ್ಸಿಗೆ ಹೊಳೆದದ್ದು, ಬೆಂಗಳೂರಿನಲ್ಲಿ ಕಾಲೇಜು ಹಾಸ್ಟಲಿನಲ್ಲಿ ಕೆಲವು ಹುಡುಗರು ಮಾತನಾಡಿಕೊಳ್ಳುತ್ತಿದ್ದದ್ದು, ಯಾರೋ ಸ್ವಾಮಿ ಚಿನ್ಮಯಾನಂದ ಮಲ್ಲೇಶ್ವರಂ ಮೈದಾನದಲ್ಲಿ ಉಪನ್ಯಾಸ ಮಾಡುತ್ತಾರಂತೆ, ಬಹಳ ಜನ ಹುಡುಗಿಯರೂ ಕೂಡ ಬರುತ್ತಾರಂತೆ, ನಾವೂ ಕೂಡ ಅವರನ್ನು ನೋಡಬಹುದೆಂದೆಲ್ಲ ಆಡಿಕೊಳ್ಳುತ್ತಿದ್ದರು. ಆದರೆ ಅಂದು ಅಂತಹ ದೃಶ್ಯವೇನೂ ಕಾಣಲಿಲ್ಲ. ಮರುದಿನದಿಂದ ನಾನೂ ಕೂಡ ಸಕಾಲಕ್ಕೆ ಹೋಗಿ ಸಭಿಕರ ಮಧ್ಯೆ ಕಾಲು ಮಡಿಚಿ ಕೂರುತ್ತಿದ್ದೆ. ನನಗೆ ಅರಿಯದೇ ಇದ್ದ, ಅರಿಯಬೇಕೆಂಬ ಹಂಬಲದಿಂದ ಹೊಸ ಹೊಸ ವಿಷಯಗಳು ಅವರ ಮಾತಿನಿಂದ ತಿಳಿಯುತ್ತಿತ್ತು. ಇನ್ನೂ ಕೇಳಬೇಕೆಂಬ ಆಸೆ ಇದ್ದರೂ ಮೂರು ನಾಲ್ಕು ದಿನಗಳ ನಂತರ ಊರು ಬಿಡಬೇಕಾಯಿತು.

ಡೆಲ್ಲಿಗೆ ಹೋಗಿ ಸುಮಾರು ಆರು ತಿಂಗಳ ನಂತರ ಹಾಸ್ಟಲಿನಲ್ಲಿ ಒಂದು ಪೋಸ್ಟರ್ ಹಾಕಿತ್ತು. ಸ್ವಾಮಿ ಚಿನ್ಮಯಾನಂದ, ನಂ. 42 ಅಶೋಕ ರೋಡಿನಲ್ಲಿ ಭಗವದ್ ಗೀತೆಯ ಬಗ್ಗೆ ಮಾತನಾಡುತ್ತಾರೆಂದು ಅದರಲ್ಲಿತ್ತು. ತಪ್ಪದೇ ಅಲ್ಲಿಗೆ ಹೋಗುತ್ತಿದ್ದೆ. ಅಲ್ಲಿಂದ ಪ್ರಾರಂಭವಾದ ಅವರ ಸಂಪರ್ಕ ಅವರ ಅಂತ್ಯದವರೆಗೂ ಅವರು ಬೆಂಗಳೂರಿಗೆ ಬಂದಾಗಲೆಲ್ಲಾ ಸಂಜೆ ಗೀತ ಯಜ್ಞ ಮತ್ತು ಬೆಳಿಗ್ಗೆ ಉಪನಿಷತ್‌ಗಳನ್ನು ಕೇಳಲು ಹೋಗುತ್ತಿದ್ದೆ. ಅಷ್ಟಿಷ್ಟು ನನ್ನ ಅಳಿಲು ಸೇವೆಯನ್ನು ಕೂಡ ಚಿನ್ಮಯಾ ಮಿಷನ್‌ಗೆ ಮಾಡುವ ಅವಕಾಶ ದೊರೆಯಿತು. ಶೂದ್ರರಿಗೆ ಶಾಸ್ತ್ರ ಉಪನಿಷತ್‌ಗಳನ್ನು ಪರಿಚಯಿಸುವುದು ಅಪ್ರಸ್ತುತವೆಂದು ತಿಳಿದಿದ್ದ ಕಾಲದಲ್ಲಿ ಸ್ವಾಮಿ ಚಿನ್ಮಯಾನಂದರವರು ದಾರಿ ಹೋಕರಿಗೆಲ್ಲಾ ಗೀತ ಉಪನಿಷತ್‌ಗಳನ್ನು ಹೇಳುವುದನ್ನು

ಕಂದಾಚಾರರು ಖಂಡಿಸುತ್ತಿದ್ದರು. ಇಲ್ಲಸಲ್ಲದ ಅಪಪ್ರಚಾರಗಳನ್ನು ಕೂಡ ಮಾಡುತ್ತಿದ್ದರು. ಕೆಲವರಿಗೆ ಅವರು ಹೇಳುತ್ತಿದ್ದಕ್ಕಿಂತ ಅವರ ಪೂರ್ವ ಚರಿತ್ರೆಯೇ ಸ್ವಾರಸ್ಯವಾಗಿ ಕಾಣುತ್ತಿತ್ತು. ಆದರೆ ನನ್ನಂತ ಅನೇಕರಿಗೆ ಮನೆಗಳಲ್ಲಾಗಲಿ, ಸ್ಕೂಲು ಕಾಲೇಜುಗಳಲ್ಲಾಲಿ, ವೇದ ಉಪನಿಷತ್ ಗೀತೆಗಳನ್ನು ಹೇಳಿಕೊಡುವುದಿರಲಿ, ಸಂಸ್ಕೃತ ಕಲಿಯಲೂ ಅವಕಾಶವಿರಲಿಲ್ಲ. ಅಂತಹವರಿಗೆ ಅವರು ಒಂದು ವರಪ್ರದಾನವಾಗಿ ಪರಿಣಮಿಸಿದರು.

ಭಾರತದ ಉದ್ದಗಲಕ್ಕೆ ನಾಲ್ಕು ದಶಕಗಳಿಗೂ ಹೆಚ್ಚಿಗೆ ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಿದ್ದ ಅಕ್ಷರಸ್ಥ ಇಂಗ್ಲಿಷ್ ಬಲ್ಲ 'ಅವಿದ್ಯಾವಂತರಿಗೆ' ಹಿಂದೂ ಸಂಸ್ಕೃತಿ, ವೇದ ಉಪನಿಷತ್, ಬ್ರಹ್ಮಸೂತ್ರಗಳನ್ನು ಪರಿಚಯಿಸಿದ ಹೆಗ್ಗಳಿಕೆ ಸ್ವಾಮಿ ವಿವೇಕಾನಂದರ ನಂತರ ಬಂದವರಲ್ಲಿ ಸ್ವಾಮಿ ಚಿನ್ಮಯಾನಂದರಿಗೆ ಸಲ್ಲುತ್ತದೆ. ಭಾರತದ ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವವು ಸುಭದ್ರವಾಗಿ ನಿಲ್ಲಲು ವಿದ್ಯಾವಂತ ಮಧ್ಯಮ ವರ್ಗದ ಪ್ರಜೆಗಳಿಗೆ ಅವರ ಗುರುತರ ಜವಾಬ್ದಾರಿಯನ್ನು ಎಚ್ಚರಿಸುವಲ್ಲಿ ಮಾಡಿದ ಸ್ವಾಮಿ ಚಿನ್ಮಯಾನಂದರ ಪ್ರಯತ್ನ ಅಳೆಯಲಸಾಧ್ಯ! ಅವರು ಮಾಡಿದ 500 ಕ್ಕೂ ಹೆಚ್ಚು ಗೀತಜ್ಞಾನ ಯಜ್ಞಗಳು ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿತ್ತು. ಗೀತಜ್ಞಾನ ಯಜ್ಞ ಮಾಡುವ ಎಲ್ಲಾ ಸ್ಥಳಗಳಲ್ಲಿ ಬೆಳಿಗ್ಗೆ ಉಪನಿಷತ್‌ಗಳನ್ನು ತೆಗೆದುಕೊಳ್ಳುತ್ತಿದ್ದರು. ದೈನಂದಿನ ವಿಚಾರಗಳನ್ನು ಉದಾಹರಣೆ ಮೂಲಕ ವೇದಾಂತದ ಕ್ಲಿಷ್ಟವಾದ ವಿಷಯಗಳನ್ನು ಮನದಟ್ಟು ಮಾಡುವಲ್ಲಿ ಯಶಸ್ವಿಯಾಗಿದ್ದರು. ಅವರು ಸ್ಥಾಪಿಸಿದ ಬಾಲ ವಿಹಾರಗಳು ಮಕ್ಕಳನ್ನು ಮೊಳಕೆಯಿಂದಲೇ ಪ್ರಜ್ಞಾವಂತರನ್ನಾಗಿ ಮಾಡುವ ಸಾಧನ. ಸಾವಿರಾರು ಸಂಖ್ಯೆಯಲ್ಲಿ ಭಾರತದ ಉದ್ದಗಲದಲ್ಲಿ ಮಕ್ಕಳು ಅವರ ಮೂಲ ತತ್ವದ ಕಡೆಗೆ ಮನ ಸೆಳೆಯುವಂತೆ ಮಾಡಿವೆ. ಬೊಂಬಾಯಿಯ ಪೊವಾಯಿಯಲ್ಲಿ ಸ್ಥಾಪಿಸಿದ "ಸಾಂದೀಪನಿ" ಸಾಧನಾಯಲದಲ್ಲಿ ಗುರುಕುಲ ಮಾದರಿಯಲ್ಲಿ ನಾಲ್ಕು ವರುಷ ವೇದ, ಉಪನಿಷತ್, ಬ್ರಹ್ಮ ಸೂತ್ರಗಳಲ್ಲಿ ಪರಿಣತೆ ಪಡೆಯುವ ಕೋರ್ಸ್‌ನ್ನು ಸ್ಥಾಪಿಸಿದರು. ಈ ಶಿಕ್ಷಣ ಪೂರೈಸಿದವರು, ಸನ್ಯಾಸವನ್ನಾದರೂ ಸ್ವೀಕರಿಸಬಹುದು, ಇಲ್ಲವೇ ಗೃಹಸ್ಥರಾಗಿ ಉಳಿಯಬಹುದು. ನೂರಾರು ಮಂದಿ ಯುವಕರು ಇದರ ಉಪಯೋಗವನ್ನು ಪಡೆದಿದ್ದಾರೆ. ನಾನಾ ವಿಧದಲ್ಲಿ ಸ್ವಾಮಿ ಚಿನ್ಮಯಾನಂದರು ಈ ದೇಶಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದದ್ದು.

* * * *

ಇಂಡಿಯನ್ ಅಗ್ರಿಕಲ್‌ಚರ್ ರೀಸರ್ಚ್ ಇನ್‌ಸ್ಟಿಟ್ಯೂಟ್ (ಐ.ಎ.ಆರ್.ಐ.) ಬಹಳ ಜನಕ್ಕೆ ಗೊತ್ತಿರುವುದು ಪೂಸಾ ಇನ್‌ಸ್ಟಿಟ್ಯೂಟ್ ಎಂದು. ಬಿಹಾರಿನ ಪೂಸಾದಲ್ಲಿ ಸ್ಥಾಪಿತವಾಗಿದ್ದ ಇಂಪೀರಿಯಲ್ ಅಗ್ರಿಕಲ್ಚರ್ ರೀಸರ್ಚ್ ಇನ್‌ಸ್ಟಿಟ್ಯೂಟ್ 1936 ರಲ್ಲಿ ಭೂಕಂಪದಿಂದ ಕುಸಿದು ಬಿದ್ದ ನಂತರ ಡೆಲ್ಲಿಗೆ ವರ್ಗಾಯಿಸಲ್ಪಟ್ಟಿತು. ಸ್ವಾತಂತ್ರ್ಯದನಂತರ ಇಂಪೀರಿಯಲ್ ತೆಗೆದು ಇಂಡಿಯನ್ ಅಗ್ರಿಕಲ್‌ಚರ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮಾಡಿದರು. ಮೊದಲಿಗೆ ಭಾರತದಲ್ಲಿ ಕೃಷಿಯಲ್ಲಿ ಎಂ.ಎಸ್‌ಸಿ., ಪಿ.ಹೆಚ್‌ಡಿ. ಪದವಿ ದೊರೆಯುತ್ತಿದ್ದಿದ್ದು ಐ.ಎ.ಆರ್.ಐ. (IARI) ಒಂದರಲ್ಲೇ. ಇಲ್ಲಿಯ ಅಡ್‌ಮಿಷನ್‌ಗೆ ಆದ್ಯತೆ ಕೊಡುತ್ತಿದ್ದದ್ದು ರಾಜ್ಯ ಸರಕಾರಗಳು ಡೆಪ್ಯೂಟೇಷನ್ ಕಳುಹಿಸುತ್ತಿದ್ದವರಿಗೆ ಮಾತ್ರ. ಪ್ರತಿ ರಾಜ್ಯದಿಂದ ವರುಷಕ್ಕೆ ಮೂರು ನಾಲ್ಕು

ಜನರನ್ನು ತೆಗೆದುಕೊಳ್ಳುತ್ತಿದ್ದರು. ಹಾಗೆ ಬಂದವರಿಗೆ ಸಂಬಳದ ಜೊತೆಗೆ ಡೆಪ್ಯೂಟೇಷನ್ ಅಲೋಯನ್ಸ್ ಕೂಡ ಕೊಡುತ್ತಿದ್ದರು. ನಾನು ಸೇರಿದ ವರುಷ (1958) ಎಲ್ಲಾ ವಿಷಯಗಳನ್ನೊಳಗೊಂಡಂತೆ ನೂರು ಜನರನ್ನು ಎಂ.ಎಸ್‌ಸಿ.ಗೆ ಸೇರಿಸಿಕೊಂಡಿದ್ದರು. ಹಿಂದೆ ಐ.ಎ.ಆರ್.ಐ. ಎಂದು ಕೊಡುತ್ತಿದ್ದ ಡಿಪ್ಲೊಮಾವನ್ನು ಎಂ.ಎಸ್‌ಸಿ.ಯಾಗಿ ಪರಿವರ್ತಿಸಿ, ಪೋಸ್ಟ್‌ಗ್ರ್ಯಾಜುಯೇಟ್ ಸ್ಕೂಲ್ ಪ್ರಾರಂಭವಾಗಿತ್ತು. ಅಮೆರಿಕನ್ ಲ್ಯಾಂಡ್‌ಗ್ರ್ಯಾಂಟ್ ಕಾಲೇಜಿನ ಮಾದರಿಯಲ್ಲಿ ಟ್ರೈಮೆಸ್ಟರ್ ಪದ್ಧತಿ ವ್ಯಾಸಂಗ ಭಾರತದಲ್ಲಿ ಪ್ರಾರಂಭವಾಗಿದ್ದು ನಮ್ಮ ಬ್ಯಾಚಿನಿಂದ. ನಂತರ ಅರವತ್ತರ ದಶಕದಲ್ಲಿ ಪ್ರಾರಂಭವಾದ ಸ್ಟೇಟ್ ಅಗ್ರಿಕಲ್ಚರ್ ಯೂನಿವರ್ಸಿಟಿಗಳೆಲ್ಲವು ಇದೇ ಮಾದರಿಯನ್ನು ಅಳವಡಿಸಿಕೊಂಡವು.

ಆ ವರುಷ ನೂರು ಜನ ಎಂ.ಎಸ್‌ಸಿ.ಗೆ ಸೇರಿದವರಲ್ಲಿ ಇಬ್ಬರಿಗೆ ಮಾತ್ರ ಯಾವ ಸ್ಕಾಲರ್‌ಶಿಪ್ಪೂ ಬರುತ್ತಿರಲಿಲ್ಲ. ಅದರಲ್ಲಿ ನಾನೊಬ್ಬ. ಮೊದಮೊದಲು ಯಾವುದಾದರೂ ಸಿಕ್ಕಬಹುದೆಂಬ ನಿರೀಕ್ಷೆಯಿಂದ ಓದನ್ನು ಮುಂದುವರಿಸಿ ಮುಕ್ಕಾಲು ವರುಷ ಕಳೆದಿತ್ತು. ಹಿಂದೆ ಬರುವ ಹಾಗಿಲ್ಲ, ಮುಂದೆ ಹೋಗುವ ಹಾಗಿಲ್ಲದ ಪರಿಸ್ಥಿತಿಯಲ್ಲಿ ಸಿಲುಕಿದೆ. ಹಾಸ್ಟಲಿನಿಂದ ಡಿವಿಜನ್‌ಗಳು ಕನಿಷ್ಠ ಮೈಲಿಗಿಂತ ಹೆಚ್ಚು ಇದ್ದವು. ಒಂದು ಡಿವಿಜನ್‌ನಿಂದ ಮತ್ತೊಂದು ಡಿವಿಜನ್ ಕೂಡ ದೂರವಿದ್ದವು. ಖಡ್ಡಾಯವಾಗಿ ಎಲ್ಲರಿಗೂ ಸೈಕಲ್ ಬೇಕಿತ್ತು. ಆದರೆ ನನ್ನ ಹತ್ತಿರ ಅದೂ ಕೂಡ ಇರಲಿಲ್ಲ. ನನ್ನ ಸ್ನೇಹಿತ ಅಸ್ಸಾಮಿನ ಪ್ರಿಯೋಬ್ರತ ಧಾರ್ ನಿತ್ಯ ನನ್ನನ್ನು ಕ್ಯಾರಿಯರ್ ಮೇಲೆ ಕೂರಿಸಿ ಕರೆದುಕೊಂಡು ಹೋಗುತ್ತಿದ್ದರು. ರಜಕ್ಕೆ ಊರಿಗೆ ಬಂದ ಮೇಲೆ ಅಲ್ಪ ಸ್ವಲ್ಪ ಸಾಲದ ವ್ಯವಸ್ಥೆಯನ್ನೂ ಮಾಡಿದ್ದಾಯಿತು. ಹೆಚ್.ಎಸ್. ಮಲ್ಲೇಗೌಡರೂ ಕೂಡ ನೆರವಿಗಿದ್ದರು. ಆಗ ಡೆಲ್ಲಿ ಬಹಳ ದುಭಾರಿ ಇರಲಿಲ್ಲ. ನೂರು ರೂಪಾಯಿ ಒಳಗೆ ಹಾಸ್ಟಲ್ ಬಿಲ್ ಬರುತ್ತಿತ್ತು. ಕನಿಷ್ಠ ಇನ್ನೂರು ರೂಪಾಯಿ ಇದ್ದರೆ ಸುಧಾರಿಸಬಹುದಿತ್ತು. ಎರಡು ಮೂರು ತಿಂಗಳು ಮೆಸ್ ಬಿಲ್ ಕಟ್ಟದಿದ್ದರೂ ನಡೆಯುತ್ತಿತ್ತು. ನನಗಿದ್ದ ಅಂದಿನ ಪರಿಸ್ಥಿತಿಯಲ್ಲಿ ಹೇಗೆ ನಾನು ಎರಡು ವರುಷ ಡೆಲ್ಲಿಯಲ್ಲಿ ಎಂ.ಎಸ್‌ಸಿ. ಮಾಡಿದೆ ಎಂದು ತಿಳಿಯದು! ದೈವಕೃಪೆ ಇಲ್ಲದಿದ್ದರೆ ಇದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲವೆಂದು ನನ್ನ ದೃಢವಾದ ನಂಬಿಕೆ.

ಛಳಿಗಾಲದಲ್ಲಿ ತೊಡಲು ಸರಿಯಾದ ಬೆಚ್ಚನೆಯ ಬಟ್ಟೆ ಇರಲಿಲ್ಲ. ಶನಿವಾರ ಮಧ್ಯಾಹ್ನದ ನಂತರ ಹಾಸ್ಟಲಿನ ಮೆಸ್ ಕ್ಲೋಸ್ ಮಾಡುತ್ತಿದ್ದರು. ಎಲ್ಲರೂ ಒಂದಲ್ಲ ಒಂದು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಕೆಲವರು ನನ್ನ ಪರಿಸ್ಥಿತಿ ಅರಿತು ಹಿಂಸೆ ಮಾಡಿ, ಊಟ, ತಿಂಡಿಗೆ ಕರೆದುಕೊಂಡು ಹೋಗುತ್ತಿದ್ದರು. ಆದರೂ ಏನಾದರೂ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಎರಡನೆ ವರುಷದಿಂದ ಪಿಹೆಚ್.ಡಿ. ಮಾಡುತ್ತಿದ್ದ ಪ್ರಭಾಕರ್ ರಾವ್‌ರವರ ರೂಮಿನಲ್ಲಿ ಶನಿವಾರ ಕಳೆಯುತ್ತಿತ್ತು. ಅವರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕೇಳುವ ಗೀಳು. ಪ್ರತಿ ಶನಿವಾರ ರಾತ್ರಿ 9.30 ರಿಂದ 11.00 ಘಂಟೆಯವರೆಗೆ ದಕ್ಷಿಣ ಭಾರತ ಸಂಗೀತ ಕಛೇರಿ ಆಕಾಶವಾಣಿಯಂದ ಬಿತ್ತರಿಸುತ್ತಿದ್ದರು. ಅವರಿಗೆ ಸ್ನೇಹಿತರನ್ನೆಲ್ಲಾ ಕೂರಿಸಿಕೊಂಡು ಕೇಳುವುದೆಂದರೆ ಮತ್ತೂ ಸಂತೋಷ. ಸ್ನೇಹಿತರೆಲ್ಲರಿಗೂ ಕರ್ನಾಟಕ ಸಂಗೀತದ ಗೀಳು ಇರಲಿಲ್ಲ. ಅದರಲ್ಲಿ ನಾನೂ ಒಬ್ಬ. ಶನಿವಾರ ಸಂಜೆ ಹೊರಗಡೆ ಊಟಕ್ಕೆ ಹೋಗುವ ಬದಲು ರೂಮಿಗೆ ಬಗೆಬಗೆಯ ತಿಂಡಿಯನ್ನು ತಂದು ಸ್ನೇಹಿತರೊಡನೆ ಹಂಚಿ ತಿನ್ನುತ್ತಿದ್ದರು. ಮೊದಮೊದಲು ತಿಂಡಿಯ ಆಸೆಗೆ

ಅವರ ರೂಮಿಗೆ ಹೋಗಿ ಕುಳಿತುಕೊಳ್ಳುತ್ತಿದ್ದೆ. ಕ್ರಮೇಣ ನನಗೂ ಶಾಸ್ತ್ರೀಯ ಸಂಗೀತ, ಅದರಲ್ಲೂ ಕರ್ನಾಟಕ ಸಂಗೀತದ ರುಚಿ ಹಿಡಿಯಿತು. ಮುಂದೆ ಬೆಂಗಳೂರಿಗೆ ಬಂದ ಮೇಲೆ ರಾಮನವಮಿ ಸಂಗೀತ ಕಛೇರಿಗಳಿಗೆ ಹೋಗುತ್ತಿದ್ದೆ. ಬಿಡುವು ಸಿಕ್ಕಿದಾಗ ರೇಡಿಯೋ ಕೇಳ ಬೇಕೆಂದಿದ್ದರೆ, ಕರ್ನಾಟಕ ಶಾಸ್ತ್ರೀಯ ಸಂಗೀತ ಕೇಳುವ ಅಭ್ಯಾಸವಾಯಿತು. ಅಂತಹ ಸಮಯದಲ್ಲಿ ಪ್ರಭಾಕರ್ ರಾವ್‌ರನ್ನು ನೆನೆಸಿಕೊಳ್ಳುತ್ತೇನೆ. ಚಿಕ್ಕವಯಸ್ಸಿನಲ್ಲಿ ಯಾವುದೇ ಚಟ ಮೈಗೂಡ ಬೇಕಾದರೆ ಸಹವಾಸದೋಷ ಅನ್ನುವುದಕ್ಕೆ ಇದೊಂದು ನಿದರ್ಶನ!

ಹಣದ ಮುಗ್ಗಟ್ಟಿನಿಂದ ಡೆಲ್ಲಿಯಲ್ಲಿ ದಿನ ತಳ್ಳುವುದು ತೊಂದರೆ ಇದ್ದರೂ ನಾನೆಂದೂ ನನ್ನ ಕಷ್ಟವನ್ನು ಯಾರ ಮುಂದೆಯೂ ತೋಡಿಕೊಳ್ಳುತ್ತಿರಲಿಲ್ಲ. ಅದರ ಬದಲು ಕಂಡವರೊಡನೆ ಆತ್ಮೀಯತೆಯಿಂದ ವರ್ತಿಸುತ್ತಿದ್ದೆ. ಪ್ರತಿ ಶನಿವಾರ ರಾಮಕೃಷ್ಣ ಆಶ್ರಮಕ್ಕೆ ಹೋಗುತ್ತಿದ್ದೆ. ಅಲ್ಲಿ ಸ್ವಾಮಿ ರಂಗನಾಥಾನಂದರವರ ಉಪನ್ಯಾಸವಿರುತ್ತಿತ್ತು. ಕೇಂದ್ರ ಮಂತ್ರಿಯಾಗಿದ್ದ ಹೆಚ್.ಸಿ. ದಾಸಪ್ಪನವರು ಕೂಡ ಪ್ರತಿ ಶನಿವಾರ ಅಲ್ಲಿಗೆ ಬರುತ್ತಿದ್ದರು. ಅವರು ಮತ್ತು ಸ್ವಾಮಿ ರಂಗನಾಥಾನಂದರವರು ಮೈಸೂರಿನಲ್ಲಿದ್ದಾಗ ಬಹಳ ಆತ್ಮೀಯರಾಗಿದ್ದರಂತೆ, ಅಲ್ಲದೆ ಸ್ವಾಮಿ ರಂಗನಾಥಾನಂದರವರ ಭಾಷಣ ಅದ್ವಿತೀಯವಾಗಿದ್ದವು. ಬಹಳ ಜನ ಗಣ್ಯರು, ಅನೇಕ ರಾಯ ಭಾರಿ ಕಛೇರಿಯವರು ಅವರ ಭಾಷಣ ಕೇಳಲು ಬರುತ್ತಿದ್ದರು.

ಹೆಚ್.ಸಿ. ದಾಸಪ್ಪನವರ ಪರಿಚಯವಾದ ಮೇಲೆ ಉಪನ್ಯಾಸ ಕೇಳಲು ಹೋದಾಗಲೆಲ್ಲಾ ಅವರನ್ನು ಕಂಡು ನಮಸ್ಕರಿಸಿ ಬರುತ್ತಿದ್ದೆ. ಅವರು ನನ್ನನ್ನು ಸ್ವಾಮಿ ರಂಗನಾಥಾನಂದರವರಿಗೂ ಪರಿಚಯಿಸಿದರು. ಕಿರಿಯ ವಯಸ್ಸಿನಲ್ಲೇ ಆಧ್ಯಾತ್ಮದ ಕಡೆಗೆ ಗಮನ ಹರಿಸಿರುವನೆಂದು ಸಂತೋಷಿಸುತ್ತಿದ್ದರು. ಕೇಂದ್ರೀಯ ಮಂತ್ರಿಯಾಗಿ ಉಪನ್ಯಾಸ ಕೇಳುವಷ್ಟು ಸಮಯ ಅವರಿಗೆ ಹೇಗೆ ದೊರೆಯುತ್ತಿತ್ತೆಂದು ತಿಳಿಯದು! ಈಗಿನ ಮಂತ್ರಿಗಳಿಗೆ ಯಾವುದಾದರೂ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನಾಗಿ ಕರೆದರೆ ನಿಗದಿತ ಸಮಯಕ್ಕೆ ಬರುವುದೇ ಬಹಳ ವಿರಳ. ಗಂಟೆಗಟ್ಟಲೆ ತಡವಾಗಿ ಬರುವುದರಲ್ಲಿ ಅವರಿಗೆ ಹೆಮ್ಮೆ. ಎಷ್ಟೋ ಸಮಯ ಗಂಟೆಗಟ್ಟಲೆ ಕಾಯಿಸಿ ಬಾರದೆ ಹೋಗುವುದೂ ಉಂಟು!

ನಾನು ಡೆಲ್ಲಿಯಲ್ಲಿರುವಾಗ ನನ್ನ ನೆಚ್ಚಿನ ಪ್ರೊಫೆಸರಲ್ಲಿ ಒಬ್ಬರಾದ ಕೃಷ್ಣಶಾಸ್ತ್ರಿಯವರು ಬಂದು ಹೆಚ್.ಸಿ. ದಾಸಪ್ಪನವರನ್ನು ಕಾಣಬೇಕೆಂದು, ನಾನು ಅವರನ್ನು ಕರೆದುಕೊಂಡು ಹೋಗಿ ಪರಿಚಯಿಸಬೇಕೆಂದು ಕೇಳಿಕೊಂಡರು. ಕೃಷ್ಣಶಾಸ್ತ್ರಿಯವರಿಗೆ ಅಮೇರಿಕಾ ಹೋಗಲು ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಸಿಕ್ಕಿತ್ತು. ಆದರೆ ಅಮೇರಿಕಾಕ್ಕೆ ಹೋಗಲು ಏನೋ ಅಡ್ಡಿ ಆತಂಕವಿತ್ತು. ದಾಸಪ್ಪನವರ ಮನೆಗೆ ಹೋಗಿ ಶಾಸ್ತ್ರಿಗಳನ್ನು ಪರಿಚಯಿಸಿದೆ. ರಾತ್ರಿ ಎಂಟು ಗಂಟೆಯಾಗಿತ್ತು. ಶಾಸ್ತ್ರಿಗಳಿಗಿದ್ದ ತೊಂದರೆಯನ್ನು ಹೇಳಿಕೊಂಡರು. ಕೂಡಲೆ ಅವರ ಸೆಕ್ರೆಟರಿಯವರನ್ನು ಕರೆದು ಸಂಬಂಧಪಟ್ಟವರಿಗೆ ಫೋನ್ ತೆಗೆದುಕೊಳ್ಳಲು ಹೇಳಿ ಮಾತನಾಡಿದರು. ಅವರು ಬಂದ ಕೆಲಸವಾಯಿತು. ಹೊರಡುವ ಮುನ್ನ ಶಾಸ್ತ್ರಿಯವರೊಂದಿಗೆ ನನ್ನ ಬಗ್ಗೆ ಎರಡು ಮೆಚ್ಚುಗೆಯ ಮಾತನಾಡಿದರು. ಹೊರಗೆ ಬಂದ ಮೇಲೆ ಶಾಸ್ತ್ರಿಗಳು ನಿನಗೆ ದಾಸಪ್ಪನವರು ಇಷ್ಟು ಗೊತ್ತಿದ್ದಾರೆಂದು ಮೊದಲೇ ತಿಳಿದಿದ್ದರೆ ಯಾರ್‍ಯಾರನ್ನೋ ಅಂಗಲಾಚುವ ಆವಶ್ಯಕತೆ ಇರಲಿಲ್ಲ. ನಾನೇನೋ ನೀನು ಕುಲಬಾಂಧವ, ತಿಳಿದಿದ್ದರೂ ತಿಳಿದಿರಬೇಕೆಂದು ಒಂದು ಛಾನ್ಸ್ ತೆಗೆದು

ಕೊಂಡೆ ಎಂದರು. ಬಹುಶಃ ಕೊನೆಯವರಿಗೂ ದಾಸಪ್ಪನವರಿಗೆ ನಾನು ಕುಲಬಾಂಧವನೆಂದು ತಿಳಿದಿರಲಿಲ್ಲವೆಂದು ನನ್ನ ಅನಿಸಿಕೆ. ಏಕೆಂದರೆ ಎಂದೂ ನಾನು ನನ್ನ ಜಾತಿ, ನೆಂಟಸ್ಥನ, ಊರು ಕೇರಿಯ ಮೂಲಕ ಪರಿಚಯಿಸಿಕೊಂಡವನಲ್ಲ ಅಥವಾ ಇವುಗಳ ಆಧಾರದ ಮೇಲೆ ಯಾವ ಲಾಭವನ್ನು ಪಡೆದವನೂ ಅಲ್ಲ!

ಡೆಲ್ಲಿಯಲ್ಲಿ ನನಗೆ ಇಬ್ಬರು ಎಂ.ಪಿ.ಗಳು ಪರಿಚಯವಿದ್ದರು. ಒಬ್ಬರು ಹಾಸನದ ಎಂ.ಡಿ. ಸಿದ್ದನಂಜಪ್ಪನವರು ನಮ್ಮ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿ ಬಂದವರು. ನನ್ನನ್ನು ಯಾರಿಗಾದರೂ ಪರಿಚಯ ಮಾಡಿಕೊಡುವಾಗ ಇವನು ನಮ್ಮ ಕ್ಷೇತ್ರದ ಹುಡುಗ. ಇಲ್ಲಿ ಎಂ.ಎಸ್‌ಸಿ. ಓದಲು ಬಂದಿದ್ದಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಹೋದಾಗಲೆಲ್ಲಾ ಭರ್ಜರಿಯಾದ ಊಟ ತಿಂಡಿ ತಿನ್ನಿಸುತ್ತಿದ್ದರು. ಮೊದಲು ಅವರನ್ನು ಕಾಣಲು ಹೋದಾಗ ಹೇಳಿದ ಮಾತು ಇಂದಿಗೂ ನೆನಪಿದೆ. ಡೆಲ್ಲಿಯಲ್ಲಿ ಏನನ್ನೂ ಕಲಿಯದಿದ್ದರೂ ಒಳ್ಳೆಯ ಊಟ ಮಾಡುವುದನ್ನಾದರೂ ಕಲಿಯಬಹುದು ಎಂದು ಹೇಳಿದ್ದರು.

ಮತ್ತೊಬ್ಬ ಎಂ.ಪಿ. ಮಂಡ್ಯದ ಶಿವನಂಜಪ್ಪನವರು. ಇವರು ಹೆಚ್.ಎಸ್. ಮಲ್ಲೇಗೌಡ ಮತ್ತು ಎಂ.ವಿ. ಕೃಷ್ಣಪ್ಪನವರು ಜೊತೆಯಲ್ಲಿ ಓದುತ್ತಿದ್ದರಂತೆ. ಹೆಚ್.ಎಸ್. ಮಲ್ಲೇಗೌಡ ರೆಂದರೆ ಇವರಿಗೆ ತುಂಬಾ ಅಭಿಮಾನ. ಒಮ್ಮೆ ಒಂದು ಭಾನುವಾರ ಅವರ ಮನೆಯಲ್ಲಿ ನಾನ್ ವೆಜಿಟೇರಿಯನ್ ಊಟವಿತ್ತು. ನಾನೂ ಹೋಗಿದ್ದೆ. ಎಂ.ವಿ. ಕೃಷ್ಣಪ್ಪನವರೂ ಬರುವವರಿದ್ದರು. ಅವರಿಗಾಗಿ ಫೋನ್ ಮಾಡಿದಾಗ, ವೀರೇಶ್ ಮತ್ತು ಪುಟ್ಟಸ್ವಾಮಿಗೌಡರು ಬಂದಿದ್ದಾರೆ ಎಂದು ಹೇಳಿದಾಗ ಶಿವನಂಜಪ್ಪನವರೊಂದಿಗೆ ನಾನು ಲಿಂಗಾಯಿತರೆಂದು ತಿಳಿದಿದ್ದೆ ಎಂದು ಹೇಳಿದರಂತೆ. ಆಗ ಶಿವನಂಜಪ್ಪನವರು ಇವರು ಹೆಚ್.ಎಸ್. ಮಲ್ಲೇಗೌಡರ ಸಂಬಂಧಿ ಎಂದು ಹೇಳಿದ ಮೇಲೆ ಇವರೇಕೆ ಇಷ್ಟರವರೆಗೆ ಹಾಗೆ ಹೇಳಲಿಲ್ಲ. ನಾನೂ ಇವರನ್ನು ಯಾವಾಗಲಾದರೂ ಕರೆಯಬಹುದಿತ್ತು ಎಂದರಂತೆ. ಅಲ್ಲಿಗಾಗಲೇ ನಾನು ಡೆಲ್ಲಿಗೆ ಹೋಗಿ ಒಂದೂವರೆ ವರುಷವಾಗಿತ್ತು. ಮತ್ತೆ ಕೃಷ್ಣಪ್ಪನವರ ಮನೆಗೆ ಊಟಕ್ಕೆ ಹೋಗುವ ಅವಕಾಶ ದೊರೆಯಲಿಲ್ಲ.

ನಾನು ಡೆಲ್ಲಿಯಲ್ಲಿ ಓದುತ್ತಿರುವ ಸಮಯದಲ್ಲಿ ಕರ್ನಾಟಕದಿಂದ ರೈತರ ಸ್ಪೆಷಲ್ ರೈಲು ಭಾರತ ದರ್ಶನಕ್ಕೆಂದು ವಿಶೇಷವಾಗಿ ಏರ್ಪಾಡಾಗುತ್ತಿತ್ತು. ಸುಮಾರು ಸಾವಿರ ಸಂಖ್ಯೆಯಲ್ಲಿ ರೈತರು ಎರಡು ಮೂರು ದಿವಸ ಡೆಲ್ಲಿಯಲ್ಲಿರುತ್ತಿದ್ದರು. ಅವರಿಗೆ ಊಟ ವಸತಿ ಎಲ್ಲಾ ರೈಲಿನಲ್ಲೇ. ಊಟದ ವ್ಯವಸ್ಥೆಯನ್ನು ಸ್ಪೆಷಲ್ ಕ್ಯಾಟೆರರ್ ಮಾಡುತ್ತಿದ್ದರು. ರೈತರು ಡೆಲ್ಲಿಯ ಪ್ರವಾಸ ಸಮಯದಲ್ಲಿ ಪೂಸ ಇನ್‌ಸ್ಟಿಟ್ಯೂಟ್‌ನಲ್ಲಿದ್ದ ಕರ್ನಾಟಕದ ಹುಡುಗರೆಲ್ಲಾ ತಂಡ ತಂಡವಾಗಿ ಅವರನ್ನು ಕರೆದುಕೊಂಡು ಹೋಗಿ ತೋರಿಸಲು ಎಂ.ವಿ. ಕೃಷ್ಣಪ್ಪನವರಿಂದ ಇನ್‌ಸ್ಟಿಟ್ಯೂಟ್ ಡೈರೆಕ್ಟರಿಗೆ ಆದೇಶ ಬರುತ್ತಿತ್ತು. ಹಾಗೆ ನಾವು ರೈತರೊಡನೆ ಹೋಗುತ್ತಿದ್ದೆವು. ಒಮ್ಮೆ ಒಂದು ರೈಲಿನಲ್ಲಿ ನಮ್ಮ ಸಂಬಂಧಿಕರಾದ ಅತ್ತಿಹಳ್ಳಿ ಸುಬ್ಬೇಗೌಡರು ಮತ್ತು ಗುಡ್ಡದೂರು ಶೇಷೆಗೌಡರು ಕೂಡ ಇದ್ದರು. ಮೊದಲನೆ ದಿವಸವೇ ಇವರಿಬ್ಬರು ಮತ್ತೆ ಇತರ ಕೆಲವು ಸ್ನೇಹಿತರು ಅಷ್ಟು ದಿವಸ ರೈಲಿನಲ್ಲಿ ವೆಜಿಟೇರಿಯನ್ ಊಟ ತಿಂದು ಬೇಸತ್ತು ಎಲ್ಲಿಯಾದರೂ ಎನ್.ವಿ. ಊಟಕ್ಕೆ ಕರೆದುಕೊಂಡು ಹೋಗೆಂದು ದಂಬಾಲು ಬಿದ್ದರು. ಆಗ ಡೆಲ್ಲಿಯಲ್ಲಿ ಹೋಟೆಲ್ ಎಂದರೆ

ಬಹುಜನ ಉಪಯೋಗಿಸುತ್ತಿದ್ದ ಡಾಬಾ ಟೈಪು ಬಿಟ್ಟರೆ ದೊಡ್ಡ ದೊಡ್ಡ ದುಬಾರಿ ಹೋಟಲ್. ನವದೆಹಲಿಯ ರೈಲ್ವೇ ಸ್ಟೇಷನ್ ಹತ್ತಿರ ಕನ್ನಾಟ್ ಪ್ಲೇಸಿನ ಹೊರ ವೃತ್ತದಲ್ಲಿ ಕಕಾಡೆ ಹೋಟೆಲ್ ಎಂಬ ಡಾಬಾ ಹೋಟಲ್ ಇತ್ತು. ಅನೇಕ ಬಾರಿ ಅವರಿವರೊಂದಿಗೆ ಅಲ್ಲಿ ನಾನೂ ತಿಂದಿದ್ದೆ. ಬಹಳ ರುಚಿಯಾದ ತಂದೂರಿ ಚಿಕನ್ ಕೊಡುತ್ತಿದ್ದ. ಆಗ ಅದಕ್ಕೆ ಕೇವಲ ಎರಡೂವರೆ ರೂಪಾಯಿ. ನನ್ನ ಸಂಬಂಧಿಕರು ಮತ್ತೆ ಕೆಲವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ, ಇಲ್ಲಿ ನಿಮಗೆ ಸರಿಹೋಗಬಹುದೆಂದು ಹೇಳಿ ತೋರಿಸಿದೆ. ಆ ಡಾಬಾ ಮಾಲೀಕನ ಮಲೀನ ಬಟ್ಟೆ, ಗಡ್ಡ, ರುಮಾಲು ನೋಡಿ ಎನ್. ವಿ. ಇಲ್ಲದಿದ್ದರೂ ಚಿಂತೆಯಿಲ್ಲ ಇಲ್ಲಿ ಬೇಡವೆಂದು ನನ್ನ ಸಂಬಂಧಿಗಳು ಹೇಳಿದರು. ಹಾಗಾದರೆ ನಾಳೆ ಬೇರೆ ಎಲ್ಲಿಯಾದರೂ ಹೋಗುವುದೆಂದು ಹೇಳಿ ನಾನು ಹಾಸ್ಟಲಿಗೆ ಬಂದೆ. ಮರುದಿನ ಇವರನ್ನು ನೋಡಲು ರೈಲಿನ ಹತ್ತಿರ ಹೋದರೆ ಇವರಾರೂ ಇರಲಿಲ್ಲ. ಎಲ್ಲರೂ ಕಕಾಡೆ ಹೋಟೆಲ್ ಮುಂದೆ ಒಬ್ಬರ ಮೇಲೊಬ್ಬರು ಬಿದ್ದು ತಿನ್ನುತ್ತಿದ್ದರು. ಅವನ ತಂದೂರಿ ಚಿಕನ್ ಮುಂದೆ ಅವನ ಮೈಮೇಲಿದ್ದ ಕೊಳೆಯಾಗಲಿ ಸುತ್ತಮುತ್ತಲಿನ ಗಲೀಜಾಗಲಿ ಇವರಿಗೆ ಪರಿವೇ ಇರಲಿಲ್ಲ. ಅಂತು ಎನ್.ವಿ. ಊಟಕ್ಕೆ ಕರೆದುಕೊಂಡು ಹೋಗುವ ಕೆಲಸ ನಿರಾಯಾಸವಾಯಿತು.

ಮುಖ್ಯವಾಗಿ ರೈತರು ನೋಡುತ್ತಿದ್ದುದ್ದು ಪೂಸಾ ಇನ್‌ಸ್ಟಿಟ್ಯೂಟ್ (ಐ.ಎ.ಆರ್.ಐ.) ಮತ್ತು ಪ್ರೆಸಿಡೆಂಟ್, ವೈಸ್‌ಪ್ರೆಸಿಡೆಂಟ್, ಪ್ರೈಮ್‌ಮಿನಿಸ್ಟರ್, ಉಳಿದ ಸೈಟ್‌ಸೀನ್‌ಗಳನ್ನೆಲ್ಲಾ ಕಂಡಕ್ಟಡ್ ಟೂರ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ರೈತರೊಂದಿಗೆ ಹೋದಾಗ ಜವಾಹರ್‌ಲಾಲ್ ನೆಹರು, ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್‌ರವರನ್ನು ಬಹಳ ಹತ್ತಿರದಿಂದ ನೋಡುವ ಮತ್ತು ಅವರೊಂದಿಗೆ ಫೋಟೋ ತೆಗೆಸಿಕೊಳ್ಳುವ ಅವಕಾಶವಿತ್ತು. ಅತ್ತಿಹಳ್ಳಿ ಸುಬ್ಬೇಗೌಡರು ತಂದಿದ್ದ ಏಲಕ್ಕಿ ಹಾರಗಳಲ್ಲಿ ಒಂದನ್ನು ನೆಹರೂರವರಿಗೆ ಹಾಕಲು ನನಗೂ ಒಪ್ಪಿಸಿದ್ದರು. ಸುಮಾರು ಹದಿನೈದು ಅಡಿ ದೂರದಲ್ಲಿ ಎಲ್ಲರೂ ವೃತ್ತಾಕಾರವಾಗಿ ನೆಹರೂರವರ ಮನೆಯ ಮುಂದೆ ನಿಲ್ಲುತ್ತಿದ್ದರು. ನೆಹರೂರವರು ಮಧ್ಯೆ ಬಂದು ನಿಂತುಕೊಂಡ ಮೇಲೆ, ಹಾರ ತಂದಿರುವವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಸೆಕ್ಯೂರಿಟಿಯವರು ಕರೆದು ಹಾಕಿಸಿ ಹಿಂದೆ ಕಳುಹಿಸುತ್ತಿದ್ದರು.

ಪ್ರೆಸಿಡೆಂಟ್ ರಾಜೇಂದ್ರ ಪ್ರಸಾದ್ ಮತ್ತು ವೈಸ್ ಪ್ರೆಸಿಡೆಂಟ್ ಸರ್ವಪಳ್ಳಿ ರಾಧಾಕೃಷ್ಣನ್ ರವರು ಮಾತ್ರ ಅವರವರ ಮನೆಯ ಮುಂದಿನ ಲಾನ್‌ನಲ್ಲಿ ಒಂದೆಡೆ ಕುರ್ಚಿಯಲ್ಲಿ ಕುಳಿತಿದ್ದರು. ರೈತರೆಲ್ಲಾ ಅರ್ಧವೃತ್ತಾಕಾರದಲ್ಲಿ ಆಸೀನರಾಗಿರುತ್ತಿದ್ದರು. ಹಾರ ಹಾಕುವ ರೈತರು ಒಬ್ಬೊಬ್ಬರಾಗಿ ಹೋಗಿ ಹಾರ ಹಾಕುತ್ತಿದ್ದರು.

ರಾಧಾಕೃಷ್ಣನ್‌ರವರ ಮನೆಗೆ ಹೋದಾಗ ನಾವಿದ್ದ ಬಸ್ಸು ಮೊದಲು ಹೋಯಿತು. ಉಳಿದ ಬಸ್ಸುಗಳು ಬರುವುದು ತಡವಾಯಿತು. ಆಗಲೇ ಹನ್ನೊಂದು ಗಂಟೆ ಬಿಸಿಲು ಜೋರಾಗಿತ್ತು. ರಾಧಾಕೃಷ್ಣನ್‌ರವರು ಮುಂಚೆಯೆ ಬಂದು ಕುಳಿತರು. ಯಾರೋ ಒಂದು ಛತ್ರಿಯನ್ನು ಕೊಟ್ಟರು. ಅದನ್ನು ನೆರಳಾಗಿ ಹಿಡಿದು ಅವರ ಹಿಂದೆ ನಾನು ನಿಂತೆ. ನಾವಿದ್ದ ಬಸ್ಸಿನಲ್ಲಿ ಬಂದವರಲ್ಲಿ ಒಬ್ಬರು ರಾಧಾಕೃಷ್ಣನ್‌ರ ವಿದ್ಯಾರ್ಥಿ. ರಾಧಾಕೃಷ್ಣನ್‌ರವರು ಮೈಸೂರು ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿದ್ದಾಗ ಕೆಲವು ಘಟನೆಗಳನ್ನು ನೆನೆಸಿಕೊಂಡು ಆ ವಿದ್ಯಾರ್ಥಿಯೊಡನೆ

ಮಾತನಾಡಲು ಪ್ರಾರಂಭಿಸಿದರು. ಅದರಲ್ಲಿ ಒಂದು ಸ್ವಾರಸ್ಯವಾದ ವಿಷಯವೇನೆಂದರೆ, ರಾಧಾಕೃಷ್ಣನ್‌ರವರಿಗೆ ಸರಿಯಾದ ಒಂದು ಕುರ್ಚಿಯೂ ಕೂಡ ಇರಲಿಲ್ಲವಂತೆ. ಅವರಿಗಿದ್ದದ್ದು ಮೂರು ಕಾಲಿನ ಕುರ್ಚಿ. ಅವರೇನಾದರೂ ರೂಮಿನಲ್ಲಿ ಕೂರಬೇಕಿದ್ದರೆ ಅದನ್ನು ಸರಿಯಾಗಿ ಗೋಡೆಗೆ ಒತ್ತರಿಸಿ ಕೂರಬೇಕಿತ್ತಂತೆ. ಅವರಿಗೆ ಆಗ ಬರುತ್ತಿದ್ದ ಸಂಭಾವನೆ ತಿಂಗಳಿಗೆ ಎಪ್ಪತ್ತು ರೂಪಾಯಿ.

ರಾಧಾಕೃಷ್ಣನ್‌ರವರ ಭಾಷಣ ಕೇಳುವುದೆಂದರೆ ಮೈನವಿರೇಳುತ್ತಿತ್ತು. ಅವರಿರುವವರೆಗೆ ಅವರ ಭಾಷಣ ಆಕಾಶವಾಣಿಯಲ್ಲಿ ಬಿತ್ತರಿಸುವುದೆಂದು ತಿಳಿದರೆ ಎಲ್ಲೇ ಇದ್ದರೂ ಕೇಳದೆ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವರ ನೆನಪಿನಲ್ಲಿ ಇಂದಿಗೂ ದೇಶಾದ್ಯಂತ ಸೆಪ್ಟಂಬರ್ ಐದನೇ ತಾರೀಖು ಟೀಚರ್ಸ್ ಡೇ ಮಾಡುತ್ತಾರೆ. ಆದರೆ ಅಂದು ಅವರ ಬಗ್ಗೆ ನಾಲ್ಕು ಮಾತು ಆಡುವುದಾಗಲೀ, ಅವರ ವಿದ್ವತ್ತನ್ನು ಕುರಿತು ಉಪನ್ಯಾಸ ಮಾಡುವುದಾಗಲೀ ಅಥವಾ ಉಪಾಧ್ಯಾಯರ ವೃತ್ತಿಯಲ್ಲಿ ತೊಡಗಿಸಿಕೊಳ್ಳಬೇಕಾದ ಕೆಲವು ಮೌಲ್ಯಾಧಾರಿತ ತತ್ವಗಳನ್ನು ಅನುಸರಿಸುವ ಪಣ ತೊಡುವುದಾಗಲೀ ಬಹಳ ಕಡೆ ಕಾಣುವುದಿಲ್ಲ. ರೈತರ ಜೊತೆ ಹೋಗಿ, ಗಣ್ಯ ವ್ಯಕ್ತಿಗಳ ಜೊತೆ ಫೋಟೋ ತೆಗೆಸಿಕೊಂಡವುಗಳಲ್ಲಿ ರಾಧಾಕೃಷ್ಣನ್ ಜೊತೆ ಕೊಡೆ ಹಿಡಿದು ನಿಂತಿರುವ ಫೋಟೋ ಮಾತ್ರ ಇಂದಿಗೂ ಇದೆ. ಉಳಿದವೆಲ್ಲ ಏನಾದವೋ ಅಥವಾ ಇದೊಂದು ಹೇಗೆ ಉಳಿಯಿತೋ ಎನ್ನುವುದೂ ಸೋಜಿಗ.

ಇಂಗ್ಲೆಂಡಿನ ರಾಣಿ ಎಲಿಜಬೆತ್ ಮತ್ತು ಅವರ ಪತಿ ಪ್ರಿನ್ಸ್ ಫಿಲಿಪ್ಸ್ ಭಾರತಕ್ಕೆ ಬಂದಿದ್ದಾಗ ನಮ್ಮ ಇನ್‌ಸ್ಟಿಟ್ಯೂಟಿಗೂ ಭೇಟಿಕೊಟ್ಟಿದ್ದರು. ಅಂದು ನಾನು ಲೈಬ್ರರಿಯಲ್ಲಿ ಏನೋ ರೆಫರೆನ್ಸ್ ನೋಡುತ್ತಿದ್ದೆ. ನಾನು ಮಧ್ಯೆ ಇದ್ದು ಎಡಕ್ಕೆ ಬಲಕ್ಕೆ ರಾಣಿ ಮತ್ತು ಅವರ ಪತಿ ನಿಂತಿದ್ದ ಒಂದು ಫೋಟೋವನ್ನು ಒಬ್ಬ ಫೋಟೋಗ್ರಾಫರ್ ತೆಗೆದಿದ್ದನ್ನು ತಂದು ಮೂರು ರೂಪಾಯಿ ಕೊಟ್ಟರೆ ಆ ಫೋಟೋವನ್ನು ಕೊಡುವುದಾಗಿ ಹೇಳಿದ. ನನ್ನಲ್ಲಿ ದುಡ್ಡೂ ಇರಲಿಲ್ಲ. ಅದರ ಆವಶ್ಯಕತೆಯೂ ಅಂದು ಕಾಣಲಿಲ್ಲ. ಅನಂತರ ನನ್ನ ಸ್ನೇಹಿತರನೇಕರು ನಾನು ಎಂತಹ ಮೂರ್ಖ. ಬಹಳ ಜನಕ್ಕೆ ಸಿಗದ ಅವಕಾಶ ನಿನಗೆ ದೊರೆತದ್ದನ್ನು ಕಳೆದುಕೊಂಡೆ. ಮೂರು ರೂಪಾಯಿಗೋಸ್ಕರ ಆ ಫೋಟೋವನ್ನು ಏಕೆ ಬೇಡವೆಂದೆ ಅಂದರು. ಆಗ ಮೂರು ರೂಪಾಯಿ ಮಹತ್ವ ನನಗೆ ತಿಳಿದಷ್ಟು ಬೇರೆಯವರಿಗೇನು ಗೊತ್ತು? ಅದಂತು ಬಯಸದೆ ಬಂದದ್ದು, ಜೀವನದಲ್ಲಿ ಒಂದೇ ಬಾರಿ ಕೆಲವೇ ನಿಮಿಷ ದೊರೆತ ಹೆಮ್ಮೆಯ ಸಮಯ. ಹೇಳಿದರೂ ನಂಬದೇ ಇರಬಹುದಾದ ಸಂಗತಿ. ಈಗ ಆ ಫೋಟೋ ಇದ್ದಿದ್ದರೆ ಅದೆಷ್ಟು ನಿಜವಾಗಿರುತ್ತಿತ್ತು! ಮತ್ತೆ ಎರಡನೆ ಎಲಿಜಬೆತ್ ರಾಣಿ, ಅವರ ಪತಿ ಮತ್ತು ರಾಯಲ್ ಫ್ಯಾಮಿಲಿಯನ್ನು ಹತ್ತಿರದಿಂದ ನೋಡಿದ್ದು 1975 ರಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗ, ವಿಂಬಲ್‌ಡನ್ ಫೈನಲ್‌ನ ದಿನ. ಡೆಲ್ಲಿಯಲ್ಲಿ ನನ್ನ ಗೈಡ್ ಆಗಿದ್ದ ಡಾ॥ ಸುಬ್ಬರಾವ್ ಆಗ ಬ್ರಿಟಿಷ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಅವರ ಅಣ್ಣ ಬಿ.ಆರ್. ಕಪನಿಪತಿ ಯವರಂತೆ ಲಾನ್ ಟೆನ್ನಿಸ್‌ನಲ್ಲಿ ಬಹಳ ಆಸಕ್ತಿ ಮತ್ತು ಆಟಗಾರರೂ ಕೂಡ. ಅವರು ವಿಂಬಲ್‌ಡನ್ ಕ್ಲಬ್ ಮೆಂಬರು ಕೂಡ ಆಗಿದ್ದರು. ನನಗಾಗಿ ಒಂದು ಟಿಕೆಟ್ ತೆಗೆದು ರಾಯಲ್ ಫ್ಯಾಮಿಲಿ ಕೂರುವ ಗ್ಯಾಲರಿಯ ಹಿಂದಿನ ಸಾಲಿನಲ್ಲಿ ಕೂರಿಸಿದ್ದರು. ಹೀಗೆ ಇಂಗ್ಲೆಂಡಿನ ರಾಣಿ ಮತ್ತು ಅವರ ಪತಿಯನ್ನು ಮತ್ತೊಮ್ಮೆ ಹತ್ತಿರದಿಂದ ನೋಡುವ ಅವಕಾಶ ದೊರೆತದ್ದು.

ಒಮ್ಮೆ ದೆಹಲಿಯಲ್ಲಿ ಚಿಕ್ಕದಾಗಿ ಭೂಕಂಪವಾಯಿತು. ಸುಮಾರು ರಾತ್ರಿ ಎಂಟು ಗಂಟೆಯ ಸಮಯ ಹುಡುಗರೆಲ್ಲರೂ ಅವರವರ ಮೆಸ್‌ನಲ್ಲಿ ಊಟಕ್ಕೆ ಹೋಗುವ ಸಮಯ. ಕೆಲವೇ ಸೆಕೆಂಡುಗಳು ಒಂದು ದೊಡ್ಡ ಶಬ್ದದ ನಂತರ ಹಾಸ್ಟೆಲ್ ಬಾಗಿ ನೆಟ್ಟಗಾಯಿತು. ರೂಮಿನಲ್ಲಿ ಕಬೋರ್ಡಿನಲ್ಲಿದ್ದ ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿಯಾದವು. ಹಾಸ್ಟಲ್‌ನಲ್ಲಿ ತಟ್ಟೆ ಲೋಟಗಳೆಲ್ಲ ಕೆಳಗೆ ಬಿದ್ದು ದೊಡ್ಡ ಶಬ್ದವಾಯಿತು. ಹುಡುಗರೆಲ್ಲ ಭಯಪಟ್ಟು ಕಿರುಚಿಕೊಂಡು ಅತ್ತಿತ್ತ ಗಾಬರಿಯಿಂದ ಓಡತೊಡಗಿದರು. ನಾನು ಕ್ವಾಡ್ರಾಂಗ್‌ನಲ್ಲಿದ್ದರಿಂದ ಸ್ವಲ್ಪ ತತ್ತರಿಸಿದ ಹಾಗಾಯಿತೆ ಹೊರತು ಹೆಚ್ಚಿನದೇನು ಕಾಣಲಿಲ್ಲ. ಆದರೆ ಬೇರೆ ಹುಡುಗರ ಪರದಾಟ ನೋಡಿದ ಮೇಲೆ, ಸಾಮಾನುಗಳು ಬಿದ್ದ ಶಬ್ದ ಕೇಳಿದ ಮೇಲೆ ನನಗೂ ಭಯವಾಯಿತು. ಕೆಲವು ಕಡೆ ಗೋಡೆ ಬಿರುಕಾಯಿತು. ಕ್ಷಣ ಮಾತ್ರದಲ್ಲಿ ಅದೆಷ್ಟು ಜನಕ್ಕೆ ಪ್ರಾಣ ಕಳೆದುಕೊಳ್ಳುವ ಭಯ! ಆ ಭೂಕಂಪ ಸ್ವಲ್ಪ ಹೆಚ್ಚಿಗೆ ಕಂಪಿಸಿದ್ದರೆ ಅದೆಂತಹ ಅನಾಹುತವಾಗುತ್ತಿತ್ತು. ಸಾವು ಬದುಕಿನ ಮಧ್ಯೆ ಅಂತರವೆಷ್ಟು ಕಿರಿದು! ಹೀಗೆಲ್ಲ ಅಂದು ಇಡೀ ರಾತ್ರಿ ಎಲ್ಲರ ಬಾಯಲ್ಲೂ ಮಾತು. ಕರ್ನಾಟಕದಿಂದ ಬಂದಿದ್ದ ನನ್ನ ಸ್ನೇಹಿತರೊಬ್ಬರು ಇದನ್ನು ನೆನೆಸಿಕೊಂಡು ಎರಡು ಮೂರು ದಿವಸ ಸರಿಯಾಗಿ ನಿದ್ದೆ ಮಾಡಲಿಲ್ಲ.

ಹಿಂದೆ ಕರ್ನಾಟಕದವರು ರೈಲಿನಲ್ಲಿ ಡೆಲ್ಲಿಗೆ ಬರಬೇಕಾದರೆ ಮದರಾಸಿಗೆ ಬಂದೆ ಬರಬೇಕಿತ್ತು. ಅಲ್ಲಿಂದ ಎರಡು ರೈಲು ಹೊರಡುತ್ತಿದ್ದವು. ಜನತಾ ಎಕ್ಸ್‌ಪ್ರೆಸ್ ಮತ್ತು ಗ್ರಾಂಟ್‌ಟ್ರಂಕ್ ಎಕ್ಸ್‌ಪ್ರೆಸ್ ಡೆಲ್ಲಿ ತಲುಪಲು ಸುಮಾರು ನಲವತ್ತೆಂಟು ಗಂಟೆಗಳ ಕಾಲ ಹಿಡಿಯುತ್ತಿತ್ತು. ರೈಲಿನಲ್ಲೆ ಕ್ಯಾಟರಿಂಗ್ ಇರುತ್ತಿತ್ತು. ರೈಲೊಳಗೆ ಕೊಡುತ್ತಿದ್ದ ಊಟ ರೈಲ್ವೇ ಸ್ಟೇಷನ್‌ಗಳಲ್ಲಿ ಸಿಕ್ಕುತ್ತಿದ್ದಕ್ಕಿಂತ ರುಚಿಯಾಗಿ ಶುಚಿಯಾಗಿ ಇರುತ್ತಿತ್ತು. ಯಾವಾಗಲೂ ಮೂರು ನಾಲ್ಕು ಜನ ಒಟ್ಟೊಟ್ಟಾಗಿ ಪ್ರಯಾಣ ಮಾಡುತಿದ್ದೆವು. ಒಮ್ಮೆ ಡೆಲ್ಲಿಯಿಂದ ಮದ್ರಾಸಿಗೆ ಬರುವಾಗ ಮೂರನೆ ತರಗತಿ ನಮ್ಮ ಬೋಗಿಯಲ್ಲಿ ಒಬ್ಬ ವಯಸ್ಸಾದ ದೃಢ ಕಾಯನಾದ ವ್ಯಕ್ತಿ ಇದ್ದರು. ತಲೆಯ ನೆತ್ತಿಯ ಮೇಲೆ ಬೆರಳುಗಾತ್ರದ ಜುಟ್ಟು ಇತ್ತು. ಆದ್ದರಿಂದ ನನ್ನ ಸ್ನೇಹಿತರು ಅವರನ್ನು ಪೆಗ್‌ವಾಲ ಎಂದುಕೊಳ್ಳುತ್ತಿದ್ದರು. ಕೆಂಪು ಅಂಚಿನ ಒಂದು ಪಂಚೆ, ಅರ್ಧ ತೋಳಿನ ಹೊಲಿಸಿದ ಬನಿಯನ್, ದಪ್ಪನೆಯ ಕೈಗಡಿಯಾರ, ಒಂದು ಬಟ್ಟೆಯ ಗಂಟು ಇವರ ಸ್ವತ್ತು. ನಿಗದಿತ ವೇಳೆಯಲ್ಲಿ ವಾಚು ನೋಡಿಕೊಂಡು ಗಂಟು ಬಿಚ್ಚಿ ಎರಡು ಹೊತ್ತು ಊಟ ಮಾಡುತ್ತಿದ್ದರು. ಮಣ್ಣಿನ ಹೂಜಿಯಿಂದ ನೀರು ಬಸಿದು ಕುಡಿಯುತ್ತಿದ್ದರು. ಯಾವ ಸ್ಟೇಷನ್‌ನಲ್ಲೂ ಇಳಿದವರಲ್ಲ. ಮಧ್ಯೆ ಕಾಫಿ ಟೀ ಕೂಡ ಸೇವಿಸಿದವರಲ್ಲ. ಅವರನ್ನು ನೋಡಿಕೊಂಡು ನನ್ನಿಬ್ಬರು ಸ್ನೇಹಿತರು ಬಾಯಿಗೆ ಬಂದ ಹಾಗೆ ಕನ್ನಡದಲ್ಲಿ ಆಡಿಕೊಳ್ಳುತ್ತಿದ್ದರು. ಎರಡು ರಾತ್ರಿ ಒಂದು ಹಗಲು ಕಳೆಯುವವರೆಗೆ ಅವರು ಬಾಯಿಬಿಟ್ಟವರಲ್ಲ. ತೆನ್ನಾಲಿ ಹತ್ತಿರ ಬರುತ್ತಿದ್ದಾಗ ರೈಲು ವೇಗವಾಗ ಹೋಗುತ್ತಿತ್ತು. ಒಬ್ಬ ಅರವತ್ತು ಮೈಲಿ ಸ್ಪೀಡಿನಲ್ಲಿ ಹೋಗುತ್ತಾ ಇದೆಯೆಂದರೆ ಮತ್ತೊಬ್ಬ ಇಲ್ಲ ಎಂದು ಜೋರಾಗಿ ವಾದ ವಿವಾದ ಮಾಡುತ್ತಿದ್ದರು. ಇಷ್ಟರವರೆಗೆ ಸುಮ್ಮನಿದ್ದ ಈ ವ್ಯಕ್ತಿ ಇದ್ದಕಿದ್ದ ಹಾಗೆಯೇ ಅವರನ್ನು ಕುರಿತು, ಏಕೆ ಜಗಳ ಮಾಡುತ್ತೀರಿ? ಟೆಲಿಗ್ರಾಫ್ ಕಂಬಗಳನ್ನು ಎಣಿಸಿ, ಇಪ್ಪತ್ತೆರಡು ಕಂಬಗಳು ಒಂದು ಮೈಲಿ. ಗಡಿಯಾರ ನೋಡಿ ಲೆಕ್ಕ ಹಾಕಿ. ಅದಕ್ಕೇಕೆ ಇಷ್ಟು ವಾಗ್ ವಿವಾದ ಎಂದು ಸ್ಪಷ್ಟವಾಗಿ ಕನ್ನಡದಲ್ಲಿ ಹೇಳಿದರು. ಇವರಿಬ್ಬರಿಗೆ ಜಂಗಾಬಲವೇ ಅಡಗಿ ಹೋಯಿತು. ಏನು ಹೇಳಬೇಕೆಂದು ತೋಚಲಿಲ್ಲ. ಇಷ್ಟರವರೆಗೆ ಅವರಿಗೆ ಕನ್ನಡ

ಅರ್ಥವಾಗುವುದಿಲ್ಲವೆಂದು ಅವರ ಬಗ್ಗೆ ಏನೇನೂ ಮಾತನಾಡಿಕೊಂಡಿದ್ದು ಅವರಿಗೆ ಪೂರ್ತಿ ಅರ್ಥವಾಗಿದೆಯೆಂದು ಅರಿವಾಯಿತು. ಅನಂತರ ಕೈ ಕೈ ಹಿಚುಕಿಕೊಂಡು, ನಾವು ಇಷ್ಟರವರೆಗೆ ಮಾತನಾಡಿದ್ದು ತಪ್ಪಾಯಿತೆಂದು ಕ್ಷಮೆ ಕೇಳಿದರು. ಅದಕ್ಕೆ ಅವರು ನಲವತ್ತು ವರುಷಕ್ಕೂ ಮೀರಿ ನಿಮ್ಮಂತಹ ವಿದ್ಯಾರ್ಥಿಗಳನ್ನು ಸಾವಿರಾರು ನೋಡಿದ್ದೇನೆ. ವಯಸ್ಸಿಗೆ ಸಹಜವಾಗಿಯೇ ವರ್ತಿಸಿದ್ದೀರಿ, ನೀವು ಕ್ಷಮೆ ಕೇಳುವಂತಹ ತಪ್ಪೇನು ಮಾಡಲಿಲ್ಲವಲ್ಲ ಎಂದರು.

ಅವರು ಪಾಲ್‌ಘಾಟಿನವರು. ಹೈಸ್ಕೂಲ್ ಹೆಡ್‌ಮಾಸ್ಟರ್ ಆಗಿ ನಿವೃತ್ತಿಯಾದವರು. ಅವರ ಮೂರು ಅಳಿಯಂದಿರು ಐ.ಸಿ.ಎಸ್. ಆಫೀಸರ್ಸ್, ಡೆಲ್ಲಿಯಲ್ಲಿ ಕೆಲಸದಲ್ಲಿದ್ದರು. ಮಗಳಂದಿರನ್ನು ನೋಡಿಕೊಂಡು ವಾಪಸ್ಸು ಬರುತ್ತಿದ್ದರು. ಅವರ ಅಳಿಯಂದಿರು ಎಷ್ಟೇ ಒತ್ತಾಯಮಾಡಿದರೂ ವಿಮಾನದಲ್ಲಿ ಹೋಗಲು ನಿರಾಕರಿಸಿ ಕೊನೆಗೆ ರೈಲಿನಲ್ಲಿ ಫಸ್ಟ್‌ಕ್ಲಾಸಿನಲ್ಲೂ ಪ್ರಯಾಣ ಮಾಡದೆ, ಊರಿಂದ ಹೊರಡುವಾಗಲೇ ಕೊಂಡಿದ್ದ ರಿಟರ್ನ್ ಟಿಕೆಟಿನಲ್ಲಿ ಮೂರನೇ ದರ್ಜೆಯಲ್ಲಿ ಬರುತ್ತಿದ್ದರು. ಅವರ ವಾದ, ಜೀವನದಲ್ಲಿ ಎಂದೂ ಮಾಡದಿದ್ದವವನು ಈಗೇಕೆ ಪರರ ದುಡ್ಡಿನಲ್ಲಿ ಹಾರುವುದು, ಹವಾನಿಯಂತ್ರಿತ ಬೋಗಿಯಲ್ಲಿ ಬರುವುದು. ಅದರಿಂದ ಅವರ ಗೌರವ ಇರುವುದಕ್ಕಿಂತ ಹೆಚ್ಚುವುದಿಲ್ಲ ಅಥವಾ ಮೂರನೆ ದರ್ಜೆಯಲ್ಲಿ ಪ್ರಯಾಣ ಮಾಡುವುದರಿಂದ ಇರುವ ಗೌರವ ಕುಗ್ಗುವುದಿಲ್ಲ. ನನ್ನ ಅನೇಕ ವಿದ್ಯಾರ್ಥಿಗಳು ಡೆಲ್ಲಿಯಲ್ಲಿ ಮತ್ತೆ ಇತರ ಕಡೆ ದೊಡ್ಡ ದೊಡ್ಡ ಹುದ್ದೆಯಲ್ಲಿದ್ದಾರೆ. ಅವರನ್ನೆಲ್ಲ ನೋಡಿ ಸಂತೋಷಿಸುತ್ತೇನೆ. ಅದಕ್ಕಿಂತ ಹೆಚ್ಚಿನದೇನುಬೇಕು ಅಂದರು. ಅಂದಿನಿಂದ ನಾನು ಎಲ್ಲಿಯೇ ಪ್ರಯಾಣ ಮಾಡಿದರೂ ಮತ್ತೊಬ್ಬರ ಬಗ್ಗೆ ಮಾತನಾಡುವುದಿಲ್ಲ. ಎಲ್ಲವನ್ನೂ ತಿಳಿದವರು, ಜ್ಞಾನಿಗಳು, ಜೀವನದಲ್ಲಿ ಕಹಿ ಸಿಹಿ ಅನುಭವಿಸಿದವರು ಯಾವಾಗಲೂ ಮಿತಭಾಷಿಗಳು, ಸರಳ ಜೀವಿಗಳು. ಅಂತಹವರ ಬಗ್ಗೆ ಅರಿಯದೆ ದುಡುಕಿ ಮಾತನಾಡುವುದು ಎಷ್ಟು ಅವಿವೇಕವೆಂದು ಅಂದು ಅರ್ಥವಾಯಿತು. ಇಂತಹ ಘಟನೆಗಳು ಜೀವನದಲ್ಲಿ ದೊಡ್ಡ ಪಾಠ ಕಲಿಸುತ್ತವೆ. ಅದಕ್ಕೇ ತಿಳಿದವರು "ದೇಶ ಸುತ್ತಬೇಕು ಕೋಶ ಓದಬೇಕು" ಅನ್ನುವುದು.

ಫಿರೋಜ್‌ಗಾಂಧಿಯವರು ತೀರಿಕೊಂಡ ದಿವಸ ಶಿವನಂಜಪ್ಪನವರ ಮನೆಗೆ ಊಟಕ್ಕೆ ಹೋಗಿದ್ದೆ. ಅಂದು ನನ್ನ ಸ್ನೇಹಿತರು ಬಿ.ಎಸ್. ಪುಟ್ಟಸ್ವಾಮಿಗೌಡರು ಕೂಡ ಇದ್ದರು. ಶಿವನಂಜಪ್ಪನವರು ಸೌತ್ ಅವಿನ್ಯೂನಲ್ಲಿ ಇದ್ದರು. ಪ್ರಧಾನಮಂತ್ರಿ ಜವಾಹರ್‌ಲಾಲ್ ನೆಹರುರವರ ಮನೆ ತೀನ್‌ಮೂರ್ತಿ ಭವನ ಇವರ ಮನೆಗೆ ಬಹಳ ಸಮೀಪ. ಮಧ್ಯಾಹ್ನದ ಊಟದ ನಂತರ ಶಿವನಂಜಪ್ಪನವರಿಗೆ ಫಿರೋಜ್‌ಗಾಂಧಿಯವರು ತೀರಿಕೊಂಡರೆಂದು ಫೋನ್ ಬಂತು. ಎಲ್ಲರೂ ಬರುವ ಮುಂಚೆ ನಾವು ಹೋಗಿ ಬರೋಣ ಎಂದರು. ನಾವು ಮೂವರು ಹೋದೆವು. ತೀನ್‌ಮೂರ್ತಿ ಮನೆಯ ಮಹಡಿಯ ಮೇಲೆ ಬಲಭಾಗದ ಹಾಲ್‌ನಲ್ಲಿ ಸುಮಾರು ಒಂದು ಅಡಿ ಎತ್ತರದ ಆಸನದ ಮೇಲೆ ಶವವನ್ನು ಮಲಗಿಸಿದ್ದರು. ಐದು ಮಂದಿ ಹೆಂಗಸರು ಬಿಳಿ ಸೀರೆ ಸೆರಗನ್ನು ತಲೆಗೆ ಹೊದ್ದು ಶವದ ತಲೆಯ ಕಡೆ ಕುಳಿತಿದ್ದರು. ಅವರಲ್ಲಿ ಇಂದಿರಾಗಾಂಧಿಯವರು ಯಾರೆಂದು ಗುರುತಿಸಲು ಕಷ್ಟವಾಯಿತು. ಮಹಡಿಯ ಮೆಟ್ಟಲು ಹತ್ತಿದ ತಕ್ಷಣ ಕಾರಿಡಾರಿನಲ್ಲಿ ಮೆಟ್ಟಲಿಗೆ ಎದುರಾಗಿ ಹೊರಗಡೆ ಏನನ್ನೂ ವೀಕ್ಷಿಸುತ್ತಿದ್ದಂತೆ ನೆಹರೂರವರು ನಿಂತಿದ್ದರು. ಶಿವನಂಜಪ್ಪನವರು ಸರಸರನೆ ಮುಂದೆ ಹೋದರು. ನೆಹರುರವರು ಮುಂದೆ ನಿಂತದ್ದು ನೋಡಿ ನಾನು ಮೆಟ್ಟಲಿನಲ್ಲಿಯೆ ನಿಂತುಕೊಂಡೆ. ಹಿಂತಿರುಗಿ ನಾನು ನಿಂತದ್ದು

[illegible]

[illegible]

[illegible]

ಡೆಲ್ಲಿಗೆ ಮೀಟಿಂಗಿಗೆ ಬಂದಾಗಲೆಲ್ಲ ಹಾಸ್ಟಲಿನಲ್ಲಿ ಇಳಿದುಕೊಳ್ಳುತ್ತಿದ್ದರು. ಆಗ ಗೆಸ್ಟ್ ಹೌಸ್‌ಗಳು ಐ.ಎ.ಆರ್.ಐ. ಕ್ಯಾಂಪಸ್ಸಿನಲ್ಲಿ ಯಾವೂ ಇರಲಿಲ್ಲ. ಆಗ ಸರ್ಕಾರ ಕೊಡುತ್ತಿದ್ದ ದಿನ ಭತ್ಯೆ ಹೋಟೆಲ್ ಬಾಡಿಗೆಗೆ ಏನೇನು ಸಾಲುತ್ತಿರಲಿಲ್ಲ. ಪುಟ್ಟರುದ್ರಯ್ಯರವರು ಬರುವ ದಿನ ತಿಳಿದೊಡನೆ ಯಾರಾದರೂ ಸ್ನೇಹಿತರ ರೂಮಿಗೆ ಮುಂಚೆಯೇ ಮಲಗಲು ಬರುತ್ತೇನೆಂದು ಹೇಳಿರುತ್ತಿದ್ದೆ, ಏನೂ ಮಾಡಿದರೂ ನಮ್ಮನ್ನು ಕೆಳಗಡೆ ಮಲಗಿಸಿ ಅವರು ಮಂಚದ ಮೇಲೆ ಮಲಗುತ್ತಿರಲಿಲ್ಲ. ಈ ತಾಪತ್ರಯಕೋಸ್ಕರ ನಮ್ಮ ಸ್ನೇಹಿತರೊಬ್ಬರು ಊರಿಗೆ ಹೋಗಿದ್ದಾರೆ, ಅವರ ರೂಮ್ ಖಾಲಿ ಇದೆ, ಅಲ್ಲಿ ಮಲಗುತ್ತೇನೆಂದು ಹೇಳಿ ಹೋಗುತ್ತಿದ್ದೆ. ಇಲ್ಲದಿದ್ದರೆ ಸ್ನೇಹಿತರ ರೂಮಿನಲ್ಲಿ ಕೆಳಗೆ ಮಲಗುತ್ತಾನೆಂದು ಅದಕ್ಕೂ ಬಿಡುತ್ತಿರಲಿಲ್ಲ. ಕಾಫಿ, ತಿಂಡಿ, ಊಟ ಏನನ್ನಾದರೂ ಹಾಸ್ಟಲಿನಲ್ಲಿ ಅವರು ತೆಗೆದುಕೊಂಡರೆ ಅದಕ್ಕೆ ದುಡ್ಡು ಕೊಡದೆ ಬಿಡುತ್ತಿರಲಿಲ್ಲ. ಈಗ ನಾವು ಹೋಗುವಲ್ಲಿ ನಮ್ಮ ವಿದ್ಯಾರ್ಥಿಗಳೇನಾದರೂ ಇದ್ದರೆ, ಮುಂಚಿತವಾಗಿಯೆ ತಿಳಿಸಿ, ಬಸ್ ಸ್ಟ್ಯಾಂಡಿನಿಂದಲೋ, ರೈಲ್ವೇ ಸ್ಟೇಷನ್ನಿಂದಲೋ ಅವರೆ ದುಡ್ಡುಕೊಟ್ಟು ಆಟೋ, ಟ್ಯಾಕ್ಸಿಯಲ್ಲಿ ಕರೆದುಕೊಂಡು ಹೋಗಿ ಅವರು ಮಲಗುವ ಹಾಸಿಗೆಯನ್ನು ಬಿಟ್ಟುಕೊಟ್ಟು. ಬರುವವರೆಗೆ ಊಟ, ತಿಂಡಿ ವ್ಯವಸ್ಥೆಯನ್ನೆಲ್ಲ ನೋಡಿಕೊಂಡಿದ್ದರೂ, ಸೌಜನ್ಯಕ್ಕಾದರೂ ನನ್ನ ಖರ್ಚು ಎಷ್ಟಾಯಿತಪ್ಪ ತೆಗೊ ಅಂತ ಹೇಳುವುದಿರಲಿ, ಅವನ ಗುರುದಕ್ಷಿಣೆ ಅಷ್ಟಾದರೂ ಮಾಡದಿದ್ದರೆ ಹೇಗೆ ಎಂದು ಹೇಳುವವರೂ ಉಂಟು. ಅವನ ಗುರು ಎಂದು ಹೇಳಿಕೊಳ್ಳುವುದಕ್ಕೆ ಕ್ಲಾಸ್‌ನಲ್ಲಿ ಸಂಬಳ ಕೊಟ್ಟಿದ್ದಕ್ಕೆ ಶಂಖ ಹೊಡೆದದ್ದನ್ನು ಬಿಟ್ಟರೆ ಮತ್ತೇನನ್ನು ಬೋಧಿಸಿರಲಾರ ಅಥವಾ ಮಾದರಿಯಾಗಿ ನಡೆದುಕೊಂಡಿರಲಾರ. ಆದರೂ ಈಗಿನ ಕಾಲದ ಹುಡುಗರು ಎಷ್ಟು ಕೆಟ್ಟಿದ್ದಾರಪ್ಪ ಅನ್ನುವುದನ್ನು ಬಿಡುವುದಿಲ್ಲ. ಹುಡುಗರು ಕೆಟ್ಟಿದ್ದರೆ ಕಾರಣ ಯಾರು?

* * * *

ಎಂ.ಎಸ್‌ಸಿ. ಮಾಡಿ ಮನೆಗೆ ಬಂದ ಮೇಲೆ ಮುಂದೇನು? ಕೆಲಸ ಖಾಲಿ ಇದ್ದರೂ ವಿದ್ಯಾರ್ಹತೆ ಮೇಲೆ ನೇಮಿಸುವ ಕಾಲವೆ? ಸಂಬಂಧಪಟ್ಟವರನ್ನು ಕೇಳಿದರೆ ಯಾರಿಂದಲಾದರೂ ಸ್ಟ್ರಾಂಗ್ ಆಗಿ ಹೇಳಿಸಬೇಕಪ್ಪ ಇಲ್ಲದಿದ್ದರೆ ಕಷ್ಟ ಅನ್ನುತ್ತಿದ್ದರು. ಎಂಟಮಾಲಜಿ ಡಿಪಾರ್ಟಮೆಂಟಿನಲ್ಲಿ ಒಂದು ಲೆಕ್ಚರರ್ ಕೆಲಸ ಖಾಲಿ ಇತ್ತು. ಪುಟ್ಟರುದ್ರಯ್ಯನವರ ಸಲಹೆ ಮೇರೆಗೆ ಡೆಲ್ಲಿಯಿಂದ ಬರುವಾಗ ಬೆಂಗಳೂರಿನಲ್ಲಿ ಒಂದು ದಿನ ನಿಂತು ಅರ್ಜಿಯನ್ನು ಕೊಟ್ಟು ಬಂದಿದ್ದೆ. ಅಲ್ಲಿಯ ತನಕ ಅಗ್ರಿಕಲ್ಚರ್ ಕಾಲೇಜಿನಲ್ಲಿ ಅವರ ಸ್ವಂತ ಖರ್ಚಿನಿಂದ ಎಂ.ಎಸ್‌ಸಿ. ಮಾಡಿ ಲೆಕ್ಚರರ್ ಕೆಲಸಕ್ಕೆ ಸೇರಿದವರು ಯಾರೂ ಇರಲಿಲ್ಲ. ಎಲ್ಲರೂ ಸರ್ಕಾರದ ಖರ್ಚಿನಿಂದ ಡೆಪ್ಯುಟೇಷನ್ ಮೇಲೆ ಹೋಗಿ ಎಂ.ಎಸ್‌ಸಿ., ಪಿಹೆಚ್.ಡಿ. ಮಾಡಿದವರೇ. ಮೊದಲ ಬಾರಿಗೆ ಎಂ.ಎಸ್‌ಸಿ. ಅಗ್ರಿ ಮಾಡಿ ಬಂದು ಕೆಲಸ ಕೇಳುತ್ತಿರುವುದರಿಂದ ನಿನಗೇನು ತೊಂದರೆಯಿಲ್ಲದೆ ಸಿಕ್ಕುವುದೆಂದು ಪುಟ್ಟರುದ್ರಯ್ಯನವರು ಹೇಳುತ್ತಿದ್ದರು. ಆರ್ಡರ್ ಬರುವುದೆಂದು ಮನೆಯಲ್ಲಿ ಕಾದುಕುಳಿತೆ. ತಿಂಗಳು ಎರಡು ಮೂರಾದರೂ ಸುದ್ದಿ ಇಲ್ಲ. ದಿನ ಕಳೆದಂತೆ ಹಳ್ಳಿಯ ವಾತಾವರಣ ಸುತ್ತುಗಟ್ಟುತಿತ್ತು. ಒಂದಲ್ಲ ಒಂದು ಸಮಸ್ಯೆ ಉದ್ಭವವಾಗುತ್ತಿತ್ತು. ಡೆಲ್ಲಿಯವರೆಗೆ ಹೋಗಿ ಓದಿ ಬಂದಿದ್ದಾನೆ, ಇವನನ್ನು ಕೇಳಿ ಎಂದು ಊರಿನವರು ಅಣಕಿಸುವ ರೀತಿಯಲ್ಲಿ ಸಮಸ್ಯೆ ಬಂದಾಗ ಹೇಳುತ್ತಿದ್ದರು.

ಯಾವುದೋ ಆಸ್ತಿಗೋಸ್ಕರ ಊರಿನಲ್ಲಿ ಇಬ್ಬರ ಮಧ್ಯೆ ಸಮಸ್ಯೆ ತಲೆದೋರಿತು. ಇದನ್ನು ಪಂಚಾಯಿತಿ ಮುಂದೆ ಇಟ್ಟು ಪರಿಹರಿಸುವುದೆಂದು ತೀರ್ಮಾನಿಸಿ ಪಂಚಾಯಿತಿಗೆ ಕೂಡಿಸಿದರು. ಊರಿನಲ್ಲಿ ಇಬ್ಬರು ಮೂರು ಜನ ನ್ಯಾಯಪಂಚಾಯಿತಿಯಲ್ಲಿ ನುರಿತವರಿದ್ದರು, ಅಲ್ಲದೆ ನ್ಯಾಯಯುಕ್ತವಾಗಿ ಸಲಹೆ ಮಾಡುತ್ತಿದ್ದರು. ಇವರಲ್ಲಿ ಓಡಳ್ಳಿ ಪಟೇಲ್ ತಮ್ಮೇಗೌಡರು, ಜಿ.ಆರ್. ರಾಮೇಗೌಡರು, ಕೆರಳ್ಳಿ ಪಟೇಲ್ ಮರಿಗೌಡರು ಹೇಳಿದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು. ಇದರಲ್ಲಿ ಗ್ರಾಮ ಪಟೇಲ್ ಮಲ್ಲೇಗೌಡರಿಗೆ ಆಸಕ್ತಿ ಇದ್ದುದರಿಂದ ಮೋಜಿನದಾರರನ್ನು ಕರೆಸಿ ಅಳತೆ ಮಾಡಿಸಿ ಕಾನೂನಾಗಿ ಯಾರದ್ದು ಯಾರಿಗೆ ಸೇರಿದೆಯೊ ತಿಳಿದು ಅವರವರದನ್ನು ಇತ್ಯರ್ಥಮಾಡಿಕೊಳ್ಳಲಿ ಎಂದರು. ಗ್ರಾಮ ಪಟೇಲರಿಗೆ ಓದು ಬರೆಯಲು ಬರುತ್ತಿರಲಿಲ್ಲ. ಆದರೆ ಗೊದ್ದು ಗ್ರಾಮದ ಗಡಿ, ಹದ್ದು ಬಸ್ತು, ಬಾಂದು. ಯಾರು ಯಾರದು ಎಷ್ಟಿದೆ ಎಲ್ಲಿದೆ ಎನ್ನುವುದರ ಬಗ್ಗೆ ಪೂರ್ಣ ಮಾಹಿತಿ ಇತ್ತು. ಸುಮಾರು ಶತಮಾನದ ಹಿಂದೆ ಸರ್ವೆ ಮಾಡಿ, ಬಾಂದು ಕಲ್ಲುಗಳನ್ನು ಗುಡ್ಡೆಮಾಡಿ ಗುರುತಿಸಿದ್ದ ಜಾಗಗಳೆಲ್ಲ ಕಾಡು ಬೆಳೆದು ಹುಲ್ಲುಹುಟ್ಟಿ ಸರ್ವೆಯರ್‌ರಿಂದಲೂ ಗುರುತಿಸಲಾಗದ್ದನ್ನು ಇವರು ತೋರಿಸಿ ಕೊಡುತ್ತಿದ್ದರು. ಇವುಗಳಲ್ಲಿ ನನಗೆ ಎಳ್ಳಷ್ಟು ಪರಿಜ್ಞಾನವಿರಲಿಲ್ಲ. ನನಗೆ ಗೊತ್ತಿಲ್ಲ ಎಂದು ಹೇಳಿದರೆ, ನೀನು ಡೆಲ್ಲಿಯವರೆಗೆ ಹೋಗಿ ಮತ್ತೇನು ಕಲಿತೆ ಎನ್ನುತ್ತಿದ್ದರು.

ಓದಿದವನೆಂದು ಊರಿನ ಪಂಚಾಯಿತಿಯಲ್ಲಿ ನನ್ನನ್ನೂ ಕುಳ್ಳಿರಿಸಿ ಸಲಹೆಯನ್ನು ಕೇಳುತ್ತಿದ್ದರು. ಅಲ್ಲಿ ಬರುತ್ತಿದ್ದ ಸಮಸ್ಯೆಗಳು ಅಲ್ಲಿಯ ಜನ ಜೀವನದಲ್ಲಿ ಹಾಸು ಹೊಕ್ಕಾಗಿ ಒಂದುಕ್ಕೊಂದು ಅಂಟಿಕೊಂಡಿರುತ್ತಿದ್ದವು. ಅವುಗಳ ಆಗು ಹೋಗುಗಳನ್ನು ವಿವೇಚನೆಯಿಂದ ವಿಚಾರ ಮಾಡಬೇಕಿತ್ತೆ ಹೊರತು ನ್ಯಾಯದ ತಕ್ಕಡಿಯಲ್ಲಿ ತೂಗಿ ಬಗೆ ಹರಿಸುವಂತಿರಲಿಲ್ಲ. ಅಲ್ಲಿ ಹುಟ್ಟಿ ಬೆಳೆದ ನನಗೇ ಅರ್ಥವಾಗದ ಸಮಸ್ಯೆ ಕೋರ್ಟಿನಲ್ಲಿ ಲಾಯರುಗಳು ವಾದ ಮಾಡಿದ ಆಧಾರದ ಮೇಲೆ ನ್ಯಾಯಾಧೀಶರು ಇತ್ಯರ್ಥ ಮಾಡಿದ ಕೇಸುಗಳು ಎಷ್ಟರ ಮಟ್ಟಿಗೆ ನ್ಯಾಯವಿರಬಹುದೆಂದು ಯೋಚಿಸುತ್ತೇನೆ. ನಮ್ಮ ಊರಿನಲ್ಲಿ ಇಷ್ಟರವರೆಗೆ ಯಾವುದೇ ಜಗಳ ವೈಷಮ್ಯದಿಂದ ಗುಂಪಾಗಲಿ ಜಿದ್ದಾಗಲಿ ತಲೆದೋರಿರಲಿಲ್ಲ. ಕೆಲವು ಬಾರಿ ಆಸ್ತಿ ವಿಷಯಕ್ಕೆ ಕೋರ್ಟಿಗೆ ಹೋಗಿದ್ದರೂ ಊರಿನ ಒಗ್ಗಟ್ಟನ್ನು ಕಳೆದುಕೊಳ್ಳಲಿಲ್ಲ. ಒಮ್ಮೆ ಒಬ್ಬ ಅವಿವೇಕಿ ಯಾರನ್ನೊ ಗುಂಡಿಟ್ಟುಕೊಂದ. ಕಾನೂನಿನ ಪ್ರಕಾರ ಕೇಸಾಗಿ ಕೋರ್ಟಿನಲ್ಲಿ ಇತ್ಯರ್ಥವಾಯಿತೆ ಹೊರತು ಯಾರೂ ಇದರಲ್ಲಿ ಅನಾವಶ್ಯಕವಾಗಿ ಹತ್ತಿಕ್ಕಲು ಪ್ರಯತ್ನಪಡಲಿಲ್ಲ. ಚುನಾವಣೆಗಳು ಪ್ರಾರಂಭವಾದ ಮೇಲೆ ಪಾರ್ಟಿಯ ಆಧಾರದ ಮೇಲೆ ಚುನಾವಣೆಗಳು ನಡೆದರೂ ಊರಿನ ಒಗ್ಗಟ್ಟಿಗೆ ಧಕ್ಕೆ ಬಂದಿಲ್ಲ. ಎಷ್ಟೋ ಊರುಗಳಲ್ಲಿ ತಲತಲಾಂತರಗಳಿಂದ ವೈಮನಸ್ಸು ಬೆಳೆಸಿಕೊಂಡು ಬಂದು ಸಣ್ಣ ಪುಟ್ಟ ವಿಷಯಗಳಿಗೆ ಕಾದಾಡುವುದು ನೋಡಿದರೆ ನನ್ನ ಊರಿನ ಬಗ್ಗೆ ನಾನು ಹೆಮ್ಮೆಪಡುತ್ತೇನೆ. ನಮ್ಮ ಹಿರಿಯರ ಬಗ್ಗೆ ಬಹಳ ಗೌರವವಿದೆ. ಅವರುಗಳ ವಿಚಾರಧಾರೆ, ಸಮಾನದೃಷ್ಟಿ, ನ್ಯಾಯಕ್ಕೆ ಅಂಜಿ ನಡೆಯುತ್ತಿದ್ದ ಸರಳ ಜೀವನ, ಸಮಸ್ಯೆಗಳನ್ನು ಪರಸ್ಪರ ಬಗೆ ಹರಿಸಿಕೊಳ್ಳುತ್ತಿದ್ದ ರೀತಿ ಎಲ್ಲವೂ ಗಾಂಧೀಜಿಯವರು ಆಶಿಸುತ್ತಿದ್ದ ಗ್ರಾಮರಾಜ್ಯಕ್ಕೆ ಸ್ಪಂದಿಸುತಿದ್ದವು.

ಹಿಂದೆ ರಜದಲ್ಲಿ ಬಂದಾಗಲೆಲ್ಲ ಮನೆ ಕೆಲಸಗಳಲ್ಲಿ ಸಹೋದರರೊಡನೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೆ. ಈ ಬಾರಿ ಎರಡು ಕಾರಣಗಳಿಂದ ಹಾಗೆ ಮಾಡಲಿಲ್ಲ. ಅಣ್ಣಂದಿರಿಬ್ಬರು

ಬೇರೆ ಬೇರೆಯಾಗಿದ್ದರು. ನಾನು ಎರಡನೆ ಅಣ್ಣನ ಜೊತೆ ಇರುವುದೆಂದು ತೀರ್ಮಾನಿಸಿದ್ದರು. ಅವರವರ ಕೆಲಸ ಅವರೇ ಮಾಡುತ್ತಿದ್ದರು. ನಾನು ಉದ್ಯೋಗಕ್ಕಾಗಿ ಕಾಯುತ್ತಿದ್ದರಿಂದ ಇಂದು ನಾಳೆ ಬರಬಹುದೆಂದು ಕಾದೇ ಕಾಲಕಳೆಯಿತು. ಮನೆ ಕೆಲಸದ ಕಡೆಗೆ ಗಮನ ಹರಿಸಲಿಲ್ಲ.

ನಾನು ಡೆಲ್ಲಿಯಲ್ಲಿ ಓದುತ್ತಿದ್ದಾಗ ನನ್ನ ಜೊತೆ ಓದುತ್ತಿದ್ದ ಸ್ನೇಹಿತರೊಬ್ಬರಿಗೆ ಎರಡು ಸ್ಕಾಲರ್‌ಶಿಪ್ಸ್ ಬರುತ್ತಿದ್ದವು. ಮನೆಯಿಂದಲೂ ಅವರಿಗೆ ದುಡ್ಡು ಕಳುಸಿಸುತ್ತಿದ್ದರು. ನಾನು ತೊಂದರೆಯಲ್ಲಿದ್ದಾಗ ಧನ ಸಹಾಯ ಮಾಡಿದ್ದರು. ಅವರಿಗೆ ಹುಷಾರಿಲ್ಲದೆ ಯಾವುದೇ ದೇವಸ್ಥಾನದಲ್ಲಿ ಮಂತ್ರವಾದಿಯಿಂದ ಬುದ್ಧಿಮಾಂಧ್ಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆಂದು ತಿಳಿಯಿತು. ಡೆಲ್ಲಿಯಲ್ಲಿ ಇರುವಾಗಲೇ ಅವರಿಗೆ ಈ ತರಹದ ಚಿನ್ಹೆಗಳು ಕಾಣಿಸಿಕೊಳ್ಳುತ್ತಿದ್ದವು. ಅವರು ಕರ್ನಾಟಕದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನ್‌ರ ಹುದ್ದೆಗೆ ಅರ್ಜಿಹಾಕಿ ಪರೀಕ್ಷೆ ತೆಗೆದುಕೊಂಡು ಇಂಟರ್‌ವ್ಯೂವಿಗೋಸ್ಕರ ಕಾಯುತ್ತಿದ್ದರು. ಸಿಕ್ಕೇ ಸಿಗುವುದೆಂಬ ಭರವಸೆಯೂ ಇತ್ತು. ಅದಕ್ಕಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದರು. ಇಂಟರ್‌ವ್ಯೂವಿಗೆ ಬಂದರೆ ಸಾಕು ಉಳಿದದ್ದೆಲ್ಲಾ ಮಾಡಿದ್ದೇವೆಯೆಂದು ಅವ್ವರ ಕಡೆಯವರಿಂದ ಆಶ್ವಾಸನೆ ಸಿಕ್ಕಿತ್ತು. ಸಂದರ್ಶನದ ಕಾರ್ಡಿಗಾಗಿ ಕಾದು ನಿತ್ಯವೂ ಪೋಸ್ಟ್‌ಮ್ಯಾನ್‌ನನ್ನು ಕೇಳುತ್ತಿದ್ದರು. ಒಂದು ದಿನ ಅವರ ಮನೆಯವರಿಂದ ಕಾಗದ ಬಂತು. ಸಂದರ್ಶನ ದಿನ ನಾವೆಲ್ಲಾ ಬೆಂಗಳೂರಿನಲ್ಲಿ ಕಾದಿದ್ದೆವು. ನೀನೇಕೆ ಬರಲಿಲ್ಲ. ಸಂದರ್ಶನದ ಕಾರ್ಡು ಕಳುಹಿಸಿರುವುದನ್ನೂ ಕೂಡ ದೃಢಪಡಿಸಿಕೊಂಡಿದ್ದೆವು. ಒಂದು ಒಳ್ಳೆಯ ಅವಕಾಶ ಕಳೆದುಕೊಂಡೆ ಎಂದು ಬರೆದಿದ್ದರು. ಕಾಗದ ಓದಿದ ತಕ್ಷಣ ಅವರಿಗೆ ಷಾಕ್ ಆಗಿ ಅಂದಿನಿಂದ ಏನೋ ಒಂದು ತರಹ ವರ್ತಿಸುತ್ತಿದ್ದರು. ಅವರ ದ್ರೋಹಿಗಳು ಏನೋ ಮೋಸ ಮಾಡಿರಬೇಕೆಂದು ಶಂಕಿಸಿದರು. ಆ ಸಮಯದಲ್ಲಿ ಅವರ ರೂಮನ್ನು ಬದಲಾಯಿಸಿ ಬೇರೆ ರೂಮಿಗೆ ಹೋಗಿದ್ದರು. ಮೊದಲಿದ್ದ ರೂಮನ್ನು ಮತ್ತೊಬ್ಬರಿಗೆ ಅಲಾಟ್ ಮಾಡಿದ್ದರು. ಅವರು ರೂಮ್ ಬೀಗ ಹಾಕಿ ಊರಿಗೆ ಹೋಗಿದ್ದರು. ಸಂದರ್ಶನದ ಕಾರ್ಡನ್ನು ಪೋಸ್ಟ್‌ಮ್ಯಾನ್ ಆ ರೂಮಿಗೆ ಹಾಕಿದ್ದರು. ರಜದಿಂದ ಬಂದ ಮೇಲೆ ಆ ರೂಮಿನವರು ಆ ಕಾರ್ಡ್‌ನ್ನು ಇವರಿಗೆ ತಂದುಕೊಟ್ಟರು. ಅದನ್ನು ನೋಡಿ ಅವರಿಗೆ ಮತ್ತಷ್ಟು ಬೇಜಾರಾಯಿತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ತುಂಬಾ ವ್ಯಥೆಪಟ್ಟರು. ಇದರ ಪರಿಣಾಮ ಮನೋರೋಗ ಪ್ರಾರಂಭವಾಯಿತು. ಹಿಂದೆ ಮಾಡಿದ್ದೇನೂ ನೆನಪಿಲ್ಲದೆ ಹೋಯಿತು. ನನಗೆ ಕೊಟ್ಟಿದ್ದ ದುಡ್ಡಿನ ವಿಷಯವನ್ನು ಕೂಡ ಅವರ ಮನೆಯಲ್ಲಿ ಹೇಳಿರಲಿಲ್ಲ.

ಕಷ್ಟಕಾಲದಲ್ಲಿ ಸಹಾಯ ಮಾಡಿದವರಿಗೆ ಹೀಗಾಯಿತಲ್ಲ ಎಂದು ಅವರು ಕೊಟ್ಟಿದ್ದ ದುಡ್ಡನ್ನಾದರೂ ಅವರಿಗೆ ಕೊಡಬೇಕೆಂದು, ನನ್ನ ಎರಡನೆ ಅಕ್ಕನ ಗಂಡ, ಕಲ್ಲಹಳ್ಳಿ ಭಾವ, ತಮ್ಮೇಗೌಡರ ಹತ್ತಿರ ಸಾಲ ತೆಗೆದು ನನ್ನ ಸ್ನೇಹಿತರ ಊರಿಗೆ ಹೋಗಿ ಅವರ ತಂದೆ ತಾಯಿಗಳಿಗೆ ಹಿಂದೆ ನಡೆದ ವಿಷಯವನ್ನು ತಿಳಿಸಿ ದುಡ್ಡನ್ನು ಅವರ ಹತ್ತಿರ ಕೊಟ್ಟು ಮರುದಿನ ಸೋಮನಾಥಪುರ ದೇವಸ್ಥಾನದಲ್ಲಿ ಅವರನ್ನು ನೋಡಿಕೊಂಡು ನಾನು ಬೆಂಗಳೂರಿಗೆ ಹೋದೆ. ಸ್ವಲ್ಪ ದಿವಸದಲ್ಲೇ ನನಗೆ ಲೆಕ್ಚರರ್ ಹುದ್ದೆಯೂ ದೊರೆಯಿತು. ಈ ನನ್ನ ಸ್ನೇಹಿತರನ್ನು ಬೆಂಗಳೂರು ಆಸ್ಪತ್ರೆಯೊಂದಕ್ಕೆ ಸೇರಿಸಿದ್ದರು. ಆಗಾಗ ನೋಡಿಕೊಂಡು ಬರುತ್ತಿದ್ದೆ. ಅವರ ಮನೆಯವರಿಗೆಲ್ಲರಿಗೂ ನಾನು ಹಿಂತಿರುಗಿಸಿ ಕೊಟ್ಟ ಸಾಲ ಸೋಜಿಗವನ್ನುಂಟುಮಾಡಿತ್ತು. ಎಲ್ಲರೂ ಬಹಳ ಆತ್ಮೀಯರಾದರು. ಅದರಲ್ಲೂ ನನ್ನ ಸ್ನೇಹಿತರ ಅಣ್ಣ ಆಗಾಗ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು.

ಒಮ್ಮೆ ಸುದರ್ಶನ್ ಚಿಟ್ ಫಂಡಿನಿಂದ ಹತ್ತು ಸಾವಿರ ಸಾಲ ಪಡೆಯಲು ನನ್ನಿಂದ ಜಾಮೀನು ಪಡೆದಿದ್ದರು. ಆ ಸಾಲ ಪಡೆಯಲು ಯಾರಾದರೂ ಸರ್ಕಾರಿ ನೌಕರಿಯಲ್ಲಿರುವವರ ಹತ್ತಿರ ಎರಡು ರುಜು ಆಗಬೇಕಿತ್ತು. ಇವರ ಮನೆ ಸ್ಥಿತಿಗತಿಗಳೆಲ್ಲ ಸರಿಯಾಗಿಯೇ ಇದ್ದುದರಿಂದ ನನ್ನ ಸಹಪಾಟಿ ಡಾ॥ ರಂಗಸ್ವಾಮಿಯವರಿಗೂ ಕೂಡ ಮತ್ತೊಂದು ಸಹಿ ಹಾಕಲು ಪ್ರೇರೇಪಿಸಿದೆ. ಇಷ್ಟರಲ್ಲಿ ನನ್ನ ಸ್ನೇಹಿತರ ದೇಹಸ್ಥಿತಿ ಸರಿಹೋಯಿತು. ಅವರಿಗೂ ಕೂಡ ಬೆಂಗಳೂರಿನಲ್ಲೇ ಕೆಲಸವಾಯಿತು. ಒಂದು ದಿನ ಅಣ್ಣ ತಮ್ಮ ಇಬ್ಬರೂ ಒಟ್ಟಿಗೆ ಬಂದು ನಾನು ಡಿಪಾರ್ಟ್‌ಮೆಂಟಿನಲ್ಲಿರುವಾಗ ನನ್ನ ಮತ್ತು ನನ್ನ ಸ್ನೇಹಿತರ ರುಜು ಹಾಕಿಸಿಕೊಂಡು ಹೋದರು.

ವರುಷ ಕಳೆದ ಮೇಲೆ ನಮ್ಮಿಬ್ಬರಿಗೂ ನೋಟೀಸು ಬಂತು. ಸಾಲ ತೆಗೆದುಕೊಂಡಿದ್ದವರು ಇಷ್ಟರವರೆಗೆ ಏನೂ ಕಟ್ಟಿಲ್ಲ. ನೀವು ಕಟ್ಟದಿದ್ದರೆ ಕಾನೂನಿನ ರೀತಿ ಕ್ರಮತೆಗೆದುಕೊಳ್ಳುತ್ತೇವೆಂದು ಬರೆದಿತ್ತು. ರಂಗಸ್ವಾಮಿಯವರು ಏನಾದರೂ ಮಾಡಿ ಈ ಸಂಕಲೆಯಿಂದ ಬಿಡಿಸಿ ಎಂದು ನನ್ನನ್ನು ಒತ್ತಾಯ ಮಾಡಲು ಪ್ರಾರಂಭಿಸಿದರು. ನನ್ನ ಸ್ನೇಹಿತರ ಊರಿನವರೆ ನಮ್ಮ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದವರಿಂದ ತಿಳಿದಿದ್ದೇನೆಂದರೆ, ನನ್ನ ಸ್ನೇಹಿತರ ಅಣ್ಣ ಅವರ ಮನೆಯವರಿಗೂ ತಿಳಿಯದೆ ಬಹಳ ಅವ್ಯವಹಾರ ಮಾಡಿ ಕಷ್ಟದಲ್ಲಿದ್ದಾರೆಂದು. ನನ್ನ ಸ್ನೇಹಿತನನ್ನು ಕೇಳಿದಾಗ ಈ ವ್ಯವಹಾರ ನಿಮಗೂ ನನ್ನ ಅಣ್ಣನಿಗೂ ಸೇರಿದ್ದು ನನ್ನ ತಂಟೆಗೆ ಬರಬಾರದು ಅಂದರು. ಕೊನೆಗೆ ನನ್ನ ಕೆಲಸಕ್ಕೆ ಧಕ್ಕೆ ಬರುವ ಸ್ಥಿತಿ ಬಂತು. ನನ್ನ ಸ್ನೇಹಿತರು ನಗುನಹಳ್ಳಿ ಗೋಸೇಗೌಡರ ಮಗ ಕೃಷ್ಣಪ್ಪ, ಬೆಂಗಳೂರು ಫೋರ್ಸಲೇನ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಸ್ನೇಹಿತರ ಊರಿನವರೊಬ್ಬರು ಮೈಸೂರಿನಲ್ಲಿ ಲಾಯರ್ ಆಗಿದ್ದರು. ಅವರಿಗೂ ಕೃಷ್ಣಪ್ಪನವರಿಗೂ ತುಂಬಾ ಸ್ನೇಹ. ಮರುದಿನ ಮೈಸೂರಿನ ಕೋರ್ಟಿನಲ್ಲಿ ನಾನು ಹಾಜರಾಗಬೇಕಿತ್ತು. ಅಂದು ರಾತ್ರಿಯೇ ಹೊರಟು ಮೈಸೂರಿನಲ್ಲಿ ಮಧ್ಯರಾತ್ರಿಯಲ್ಲಿ ಅಲೆದು, ಕೃಷ್ಣಪ್ಪನವರಿಗೆ ಪರಿಚಯವಿದ್ದವರನ್ನೆಲ್ಲಾ ವಿಚಾರಿಸಿ ಅವರ ಸ್ನೇಹಿತ ಲಾಯರ್ ಮನೆಗೆ ಹೋಗಿ ಇದ್ದ ವಿಷಯವನ್ನೆಲ್ಲಾ ಹೇಳಿದ್ದಾಯಿತು. ಒಂದು ಕಂತು ಸಾಲವನ್ನು ಕಟ್ಟಲೇ ಬೇಕು ಉಳಿದದ್ದನ್ನು ನಾನು ನೋಡಿಕೊಳ್ಳುತ್ತೇನೆಂದು ಲಾಯರು ಹೇಳಿದರು. ಕೃಷ್ಣಪ್ಪನವರಿಗೆ ಪರಿಚಯವಿರುವರ ಹತ್ತಿರವೆಲ್ಲ ಕೋರ್ಟಿಗೆ ಕಟ್ಟಲು ಬೇಕಾದ ದುಡ್ಡನ್ನು ಒದಗಿಸಿಕೊಂಡು ಹತ್ತು ಗಂಟೆಯ ಹೊತ್ತಿಗೆ ಕೋರ್ಟಿಗೆ ಹೋಗಿ ಲಾಯರ್ ಮುಖಾಂತರ ಅದನ್ನು ಕಟ್ಟಿ ಇನ್ನು ಮುಂದೆ ನಮ್ಮನ್ನು ಕೇಳದೆ ಹಾಗೆ ಸಾಲಗಾರರ ಆಸ್ತಿಯನ್ನೇ ಅಟಾಚ್ ಮಾಡುವಂತೆ ಮಾಡಿ ಬಂದದ್ದಾಯಿತು. ನೀವು ಹೇಗೆ ಈ ಸಾಲಕ್ಕೆ ಜಾಮೀನು ಸಹಿ ಹಾಕಿದಿರಿ ಎಂದು ಕೇಳಿದರು. ಅವರ ತಮ್ಮನ ಮುಖಾಂತರ ಇವೆಲ್ಲ ನಡೆದದ್ದು. ಅಲ್ಲದೆ ಅವರಿಗೆ ಸಾಕಷ್ಟು ಜಮೀನು ಇತ್ತು. ನನ್ನ ಸ್ನೇಹಿತನ ಹತ್ತಿರವೇ ಸಾಕಷ್ಟು ಹಣವೂ ಇತ್ತು. ಕಷ್ಟ ಕಾಲದಲ್ಲಿ ಸಹಾಯ ಮಾಡಿದ್ದರು. ಅವರನ್ನಲ್ಲದೆ ಮತ್ತಾರನ್ನು ನಂಬುವುದು ಎಂದೆ. ಅದಕ್ಕೆ ಅವರು ದೊಡ್ಡ ದೊಡ್ಡ ಮೋಸಹೋಗುವುದು ನಂಬಿಕಸ್ಥರಿಂದಲೆ. ಮುಂದಾದರೂ ಎಚ್ಚರಿಕೆಯಿಂದಿರಬೇಕೆಂದರು. ಕೈ ಸುಟ್ಟುಕೊಂಡು ಪಾಠ ಕಲಿತಿದ್ದಾಯಿತು. ಆದರೂ ಕೆಲವು ಸಂದರ್ಭದಲ್ಲಿ ಆಗದು ಎಂದು ಹೇಳಲು ಕಷ್ಟ. ಒಬ್ಬರಿಗೊಬ್ಬರು ಆಗಲೇ ಬೇಕಲ್ಲ!

4 ಹೊಸ ಅಧ್ಯಾಯ ಪ್ರಾರಂಭ

ಮೇ 18, ಸಾವಿರದ ಒಂಭೈನೂರ ಅರವತ್ತೊಂದರಲ್ಲಿ ಅಗ್ರಿಕಲ್‌ಚರಲ್ ಕಾಲೇಜು ಕೀಟಶಾಸ್ತ್ರ ವಿಭಾಗದಲ್ಲಿ ಲೆಕ್ಚರರ್ ಆಗಿ ರಿಪೋರ್ಟ್ ಮಾಡಿಕೊಂಡೆ. ಹೆಬ್ಬಾಳದಲ್ಲಿ ಹೊಸದಾಗಿ ಕಟ್ಟಿದ್ದ ವ್ಯವಸಾಯ ಕಾಲೇಜು ಅಂದಿಗೆ ವಿಶಾಲವಾಗಿಯೇ ಇತ್ತು. ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಡಿಪಾರ್ಟ್‌ಮೆಂಟ್‌ಗಳೆಲ್ಲವು ಶೇಷಾದ್ರಿ ರೋಡಿನಲ್ಲಿದ್ದ ವ್ಯವಸಾಯ ಇಲಾಖೆ ವಸತಿಯಿಂದ ಹೆಬ್ಬಾಳಿಗೆ ವರ್ಗಾಯಿಸಿದ್ದವು. ನಾನೂರು ಹುಡುಗರಿಗೆ ಇರಲು ಹಾಸ್ಟಲ್ ಮತ್ತು ಕ್ಯಾಂಟೀನು ಕೂಡ ಇತ್ತು.

ಈಗಿನ ಹಾಗೆ ವ್ಯವಸಾಯ ಕಾಲೇಜಿನಲ್ಲಿ ಹದಿನೇಳು ವಿಭಾಗಗಳಿರಲಿಲ್ಲ. ಇದ್ದ ಆರೇಳು ಡಿಪಾರ್ಟ್‌ಮೆಂಟುಗಳಲ್ಲಿ ಅಗ್ರಾನಮಿ ಮತ್ತು ಇಂಜನೀಯರಿಂಗ್ ವಿಭಾಗಗಳು ಮೊದಲಿದ್ದ ಜಾಗದಲ್ಲೆ ಉಳಿದಿದ್ದವು. ಕಾಲೇಜಿನ ನಾಲ್ಕು ವಿಭಾಗಗಳಲ್ಲಿ ಕೆಳಗೆ ಮೇಲೆ ಸೇರಿ ಕ್ರಮವಾಗಿ ಎಂಟಮಾಲಜಿ, ಪ್ಲಾಂಟ್ ಪೆಥಾಲಜಿ, ಕೆಮಿಸ್ಟ್ರಿ ಮತ್ತು ಬಾಟನಿ ವಿಭಾಗಗಳಿದ್ದವು. ಮುಂಭಾಗದ ಮೇಲೆ ಕೆಳಗೆ ಲೆಕ್ಚರ್ ಹಾಲ್, ಲೈಬ್ರರಿ ಮತ್ತು ಪ್ರಿನ್ಸಿಪಾಲರ ಆಫೀಸು. ಆಗ ಕೀಟಶಾಸ್ತ್ರ ವಿಭಾಗವೇ ಸಿಬ್ಬಂದಿಗಳಲ್ಲಿ ದೊಡ್ಡದೆಂದು ಹೇಳಬಹುದು. ಸುಮಾರು ಎಂಟು ಹತ್ತು ಸಂಶೋಧಕರಿದ್ದರು.

ಸಾವಿರದ ಒಂಭೈನೂರ ಅರವತ್ತೆರಡರಲ್ಲಿ ಇಂಡೋ ಚೈನ ಯುದ್ಧ ಪ್ರಾರಂಭವಾದಾಗ ದೇಶವೇ ತಲ್ಲಣಿಸಿತ್ತು. ನೆಹರೂರವರ ವಿಶಾಲ ಹೃದಯ, ಪಂಚಶೀಲ ತತ್ವದ ಹಿನ್ನೆಲೆಯಲ್ಲಿ ಕುತಂತ್ರವಿದ್ದ ಚೈನಾದವರ ಅತಿಕ್ರಮವನ್ನು ಸಹಿಸಿಕೊಳ್ಳಲಾಗಲಿಲ್ಲ. ದೇಶ ಆಹಾರ ಮುಗ್ಗಟ್ಟಿನಿಂದ ತತ್ತರಿಸುತ್ತಿತ್ತು. ದುರ್ಭಿಕ್ಷೆಗೆ ಅಧಿಕ ಆಷಾಡವೆನ್ನುವಂತೆ ಈ ಯುದ್ಧ ದೇಶವನ್ನು ಅಸಹಾಯಕತೆಗೆ ತಂದೊಡ್ಡಿತು. ದೇಶಾದ್ಯಂತ ಜನರೆಲ್ಲ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಲು ಎದ್ದು ನಿಂತರು. ನಮ್ಮ ಕಾಲೇಜಿನಲ್ಲೂ ಅಂದಿನ ಕೃಷಿ ಮಂತ್ರಿ ಜಿ. ನಾರಾಯಣಗೌಡರ ನೇತೃತ್ವದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಸಭೆ ಸೇರಿ ಅವರವರ ಶಕ್ತ್ಯಾನುಸಾರ ಸಹಾಯವನ್ನು ಘೋಷಿಸಬೇಕೆಂದು ಕರೆ ನೀಡಿದರು. ಒಂದು ತಿಂಗಳ ಸಂಬಳವನ್ನು ಯುದ್ಧನಿಧಿಗೆ ಕೊಡಬೇಕೆಂಬ ಸಲಹೆಗೆ ಮೌನವೇ ಉತ್ತರವಾಗಿತ್ತು. ಆಗ ಬರುತ್ತಿದ್ದ ಸಂಬಳವೂ ತಿಂಗಳು ನಿಭಾಯಿಸುವುದು ನೌಕರರಿಗೆ ಕಷ್ಟವಾಗಿತ್ತು. ಸದ್ಯಕ್ಕೆ ನಿಮ್ಮಲ್ಲಿರುವ ದುಡ್ಡು, ಒಡವೆ ಮತ್ತೇನನ್ನಾದರೂ ಕೊಡಬೇಕೆಂದು ಕೇಳಿಕೊಂಡರು. ಸಭಾಂಗಣದಲ್ಲಿದ್ದವರಲ್ಲಿ ಇಬ್ಬರು ಎದ್ದು ಅವರಲ್ಲಿದ್ದ ಉಂಗುರವನ್ನು ಕೊಡಲು ಮುಂದೆ ಬಂದರು. ನಾನು ಮತ್ತು ಪ್ಲಾಂಟ್ ಪೆಥಾಲಜಿಯಲ್ಲಿದ್ದ ರಾಜೇಂದ್ರನು ನಮ್ಮಲ್ಲಿದ್ದ ಒಂದೊಂದು ಚಿನ್ನದ ಉಂಗುರವನ್ನು ಕೊಟ್ಟೆವು. ಸಭೆಯಲ್ಲಿ ಏನೋ

ಒಂದು ಬಗೆಯ ಸಣ್ಣ ಗುಸುಗುಸು ಕೇಳಿಸುತ್ತಿತ್ತು. ಅದು ಸಮ್ಮತಿಯೋ ಅಸಮ್ಮತಿಯೋ ತಿಳಿಯಲಿಲ್ಲ. ಭಾಷಣಗಳ ಸುರಿಮಳೆಯೇನೋ·ಆದವು. ಆದರೆ ನಿರೀಕ್ಷಿಸಿದಷ್ಟು ನಿಧಿ ಬರಲಿಲ್ಲ. ನಾವು ಕೊಟ್ಟ ಉಂಗುರಕ್ಕೆ ಅದು ಎಲ್ಲಿಗೆ ಮುಟ್ಟಬೇಕಿತ್ತೋ ಅಲ್ಲಿಗೆ ಮುಟ್ಟಿದ್ದಕ್ಕೆ ಪುರಾವೆಗಳೇನು ದೊರೆಯಲಿಲ್ಲ. ಸಭೆಯಿಂದ ಹೊರಗೆ ಬಂದ ಮೇಲೆ ನಿನಗೆ ಬುದ್ಧಿ ಇಲ್ಲ ಎಂದು ಹೇಳುವವರೇ ಹೆಚ್ಚಿಗೆ ಇದ್ದರು!

ಕೀಟಶಾಸ್ತ್ರದ ವಿಭಾಗದಲ್ಲಿ ನುರಿತ ತಜ್ಞರಿದ್ದರು. ಡಾ॥ ಎಂ. ಪುಟ್ಟರುದ್ರಯ್ಯನವರು ಮುಖ್ಯಸ್ಥರು ಅವರೊಬ್ಬರೆ ಪಿಹೆಚ್.ಡಿ. ಮಾಡಿದ್ದರು. ಚನ್ನಬಸವಣ್ಣ ಮತ್ತು ಉಸ್ಮಾನ್ ಎಂ.ಎಸ್ಸಿ. ಮಾಡಿದ್ದರು. ಉಳಿದ ಟೆಕ್ನಿಕಲ್ ಸಿಬ್ಬಂದಿಯೆಲ್ಲ ಬಿ.ಎಸ್ಸಿ. ಅಗ್ರಿ ಅಥವಾ ಬಿ.ಎಸ್ಸಿ. ಆಗಿದ್ದವರು. ಆದರೆ ಅವರಲ್ಲಿ ಶೇಷಗಿರಿರಾವ್, ಅಪ್ಪಣ್ಣ, ಮಹೇಶ್ವರಯ್ಯ, ಶಿವಶಂಕರ ಶಾಸ್ತ್ರಿಯವರಿಗೆ 25-30 ವರುಷಗಳ ಅನುಭವವಿತ್ತು. ಅಷ್ಟೇ ನುರಿತ ಫೀಲ್ಡ್ ಅಸಿಸ್ಟೆಂಟ್ ಇದ್ದರು. ಕಲಿಯುವವರಿಗೆ, ಕೆಲಸ ಮಾಡುವವರಿಗೆ ಕೀಟಶಾಸ್ತ್ರ ವಿಭಾಗದಲ್ಲಿ ಒಳ್ಳೇ ವಾತಾವರಣವಿತ್ತು. ಕ್ಲಾಸ್ ಇಲ್ಲದಿದ್ದಾಗ ಪ್ರತಿಯೊಬ್ಬರು ಅಪರಾಹ್ನ ಫೀಲ್ಡ್‌ಗೆ ಹೋಗಿ ಕೈಗೆ ಸಿಕ್ಕಿದ ಕ್ರಿಮಿಕೀಟ ಹೊಡೆದ ಬೆಳೆ ಅಥವಾ ಹುಲ್ಲು, ಗಿಡ, ಮರಗಳ ಭಾಗಗಳನ್ನು ತಂದು ವಿಂಗಡಿಸಿ ಪರೀಕ್ಷಿಸಿ ಅವುಗಳ ತೊಂದರೆ ಮತ್ತು ನಿವಾರಣೆಗಳನ್ನು ಬರೆದಿಡಬೇಕಿತ್ತು. ಕರ್ನಾಟಕದ ಯಾವುದೇ ಭಾಗದಿಂದ ಕೀಟ ಬಾಧೆಯ ವಿಷಯ ತಿಳಿದ ತಕ್ಷಣ ಒಬ್ಬಿಬ್ಬರು ಅಲ್ಲಿಗೆ ಹೋಗಿ ಪೂರ್ಣ ಮಾಹಿತಿ ತಂದು ಹಿರಿಯರ ಮುಂದೆ ತರ್ಕಿಸಿ ನಿವಾರಣೋಪಾಯಗಳನ್ನು ಕಳುಹಿಸ ಬೇಕಿತ್ತು. ಆಗ ಹೆಚ್ಚಿಗೆ ಪ್ರಚಲಿತವಿದ್ದ ಕೀಟ ಬಾಧೆಯೆಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೇರು ತಿನ್ನುವ ಹುಳ, ಹಾವೇರಿ ಗದಗ್ ಸೈಡಿನಲ್ಲಿ ಕೊಲ್‌ಮಾನಿಯ ಮಿಡತೆ (ರೆಕ್ಕೆ ಇಲ್ಲದ ಮಿಡತೆ) ಮೈಸೂರು ಜಿಲ್ಲೆಯಲ್ಲಿ ಜೋಳಕ್ಕೆ ಬೀಳುತಿದ್ದ ಕೀಟಗಳು, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಕಪ್ಪು ಮತ್ತು ಕೆಂಪು ತಲೆ ಕಂಬಳಿ ಹುಳ, ಮಲೆನಾಡಿನಲ್ಲಿ ಕಾಫಿ ಬೋರರ್ ಮತ್ತು ಏಲಕ್ಕಿ ಕಂಬಳಿಹುಳ. ಪ್ರತಿ ವರ್ಷ ಆಯಾ ಸೀಜನ್‌ನಲ್ಲಿ ಅಲ್ಲಲ್ಲಿಗೆ ಹೋಗಿ ಸೂಕ್ತ ಸಲಹೆಗಳನ್ನು ಕೊಡಬೇಕಿತ್ತು.

ಇಲಾಖೆಯ ಮುಖ್ಯಸ್ಥ ಡಾ॥ ಪುಟ್ಟರುದ್ರಯ್ಯ ಎಲ್ಲರಿಗಿಂತ ಮುಂಚಿತವಾಗಿ ಡಿಪಾರ್ಟ್ ಮೆಂಟಿಗೆ ಬಂದು ಎಲ್ಲರೂ ಹೋದ ಮೇಲೆ ಹೋಗುತ್ತಿದ್ದರಿಂದ ಯಾರೂ ಓತ್ಲ ಹೊಡೆಯುವ ಹಾಗಿರಲಿಲ್ಲ. ಯಾರಿಗೂ ಯಾಕೆ ತಡವಾಗಿ ಬಂದೆ? ಯಾಕೆ ಮುಂಚಿತವಾಗಿ ಹೋಗುತ್ತೀಯ? ಎಂದು ಕೇಳಿದವರಲ್ಲ. ಆದರೂ ಅವರನ್ನು ಕಂಡರೆ ಎಲ್ಲರಿಗೂ ಒಂದು ಭಕ್ತಿಭಾವದ ಹೆದರಿಕೆ. ಅವರಿಗೆ ಸದಾ ಕೆಲಸದ ಯೋಚನೆ. ನಾಲ್ಕು ಹೆಣ್ಣು ಮಕ್ಕಳ ತಂದೆಯಾಗಿದ್ದರೂ ಅವರ ವೈಯಕ್ತಿಕ ತೊಂದರೆಗಳನ್ನು ಯಾರಿಗೂ ಹೇಳಿಕೊಂಡವರಲ್ಲ. ಕೆಂಗಲ್ ಹನುಮಂತಯ್ಯನವರು (ಮುಖ್ಯ ಮಂತ್ರಿ) ಇವರ ಕ್ಲಾಸ್‌ಮೆಟ್ ಆಗಿದ್ದರೂ ಇವರ ಬಡ್ತಿಗೆ ರಾಜಕೀಯ ಶಕ್ತಿಯನ್ನು ಬಳಸಿದವರಲ್ಲ. ಇವರಿಗೆ ಕಾಯಕವೇ ಕೈಲಾಸ. ಹತ್ತು ವರ್ಷ ಇವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದೇ ನನ್ನ ಮುಂದಿನ ಎಲ್ಲಾ ಶ್ರೇಯಸ್ಸಿಗೆ ಕಾರಣವೆಂದು ನಂಬಿದ್ದೇನೆ. ಕಷ್ಟದ ದುಡಿಮೆ ಅಥವಾ ಸೋಮಾರಿತನವೂ ಕೂಡ ಸಹವಾಸದ ಬಲದಿಂದ ವೃದ್ಧಿಯಾಗುತ್ತದೆ. ಎಷ್ಟೋ ಜನ ತಮ್ಮ ಎಳೆತನದಲ್ಲಿ ಮುಂದೆ ಏನನ್ನಾದರೂ ಸಾಧಿಸಬೇಕೆಂಬ ಆಸೆ ಇಟ್ಟು ಕೊಂಡವರು ಪ್ರಾರಂಭದಲ್ಲಿ

ಸರಿಯಾದ ನೆಲೆ ದೊರೆಯದೆ ಮುಂದುವರಿಯಲು ಆಗದಿರುವುದುಂಟು. ಅಷ್ಟೇನೂ ಬುದ್ಧಿವಂತರಾಗದಿದ್ದರೂ ನಿಷ್ಠಾವಂತರ ಅಡಿಯಲ್ಲಿ ಕಷ್ಟದ ದುಡಿಮೆಯಿಂದ ಮೇಲೆ ಬಂದು ಹೆಸರುವಾಸಿಯಾದವರು ಅನೇಕರಿದ್ದಾರೆ.

ನಾನು ಕೆಲಸಕ್ಕೆ ಸೇರಿ ಒಂದು ವರ್ಷದ ಒಳಗೆ ನಡೆದ ಎರಡು ಘಟನೆಗಳು ಪುಟರುದ್ರಯ್ಯ ನವರ ವ್ಯಕ್ತಿತ್ವವನ್ನು ಬಿಂಬಿಸುತ್ತವೆ.

ಹಾವೇರಿ ಗದಗ್ ಸುತ್ತಮುತ್ತ ಸುಮಾರು ಹತ್ತು ಸಾವಿರ ಎಕರೆ ಜಮೀನಿನಲ್ಲಿ ಕೊಲ್‌ಮಾನಿಯ ಮಿಡತೆ ಹಾವಳಿ ಪ್ರಾರಂಭವಾಗಿತ್ತು. ಸರ್ಕಾರದಿಂದ ಮತ್ತು ಅಲ್ಲಿಯ ರಾಜಕೀಯ ವ್ಯಕ್ತಿಗಳಿಂದ ಈ ಕೀಟದ ಹತೋಟಿಗೆ ಬಹಳ ಒತ್ತಡ ಬರುತ್ತಿತ್ತು. ಡಾ॥ ಕೊಲ್‌ಮನ್ ಕಾಲದಿಂದಲೂ ಈ ಕೀಟದ ಬಗ್ಗೆ ಸಂಶೋಧನೆ ನಡೆದು ಅದರ ಹತೋಟಿಯ ಕ್ರಮಗಳನ್ನೆಲ್ಲಾ ತಿಳಿದಿದ್ದರು. ಕೆಲವರು ಇದಕ್ಕೆ ಏರಿಯಲ್ ಸ್ಪ್ರೇ ಮಾಡಿದರೆ ಕೂಡಲೆ ಹತೋಟಿಗೆ ಬರುವುದೆಂದು ವಾದ. ಪುಟ್ಟರುದ್ರಯ್ಯನವರಿಗೆ ಇದು ಸರಿಕಾಣುತ್ತಿರಲಿಲ್ಲ. ಜೋಳಕ್ಕೆ ಬಿದ್ದಿದ್ದ ಈ ಕೀಟದ ಹತೋಟಿಗೆ, ಇಡೀ ಪ್ರದೇಶದಲ್ಲಿ ವಿಷಹರಡಿ ಉಪಯುಕ್ತ ಕೀಟಗಳೂ, ಇತರೆ ಪ್ರಾಣಿಗಳು ನಾಶವಾಗುತ್ತವೆ; ಪರಿಸರ ಮಾಲಿನ್ಯವಾಗುತ್ತದೆ; ಸುಲಭದ ಬೇರೆ ವಿಧಾನಗಳಿವೆ, ಅವುಗಳಿಂದಲೇ ಇದನ್ನು ಹತೋಟಿ ಮಾಡಬಹುದೆಂದು ಇವರ ವಾದ. ಆ ಸಮಯದಲ್ಲಿ ಡಿ.ಡಿ.ಟಿ., ಬಿ.ಹೆಚ್.ಸಿ. ರಾಮಬಾಣವಿದ್ದಂತೆ ಎಲ್ಲ ಕೀಟ ಬಾಧೆಗೆ ಇದೊಂದೆ ಮದ್ದು. ಆಡಳಿತ ಸೂತ್ರ ವಹಿಸಿದವರಿಗೂ ಕೀಟನಾಶಕಗಳನ್ನು ಮಾರುವವರಿಗೂ ಆಗಿನ ಕಾಲದಲ್ಲಿ ಹೆಚ್ಚಿನ ಸಂಪರ್ಕವಿತ್ತು. ಇದರಿಂದಾಗಿ ಸ್ಟೇಟ್ ಎಂಟಮಲಾಜಿಸ್ಟ್ ಪುಟ್ಟರುದ್ರಯ್ಯರವರ ಧ್ವನಿ ಕೇಳಿಸಲೇ ಇಲ್ಲ. ಏರಿಯಲ್ ಸ್ಪ್ರೇ ಆಯಿತು. ನಾವೆಲ್ಲ ಹೋಗಿದ್ದೆವು. ಎಷ್ಟೋ ಕಾಣದ ಜೀವಿಗಳು ನಾಶವಾಗುತ್ತವಲ್ಲ ಎಂದು ಹಂಬಲಿಸುತ್ತಿದ್ದರು. ಕಂಡ ಕೀಟಗಳನ್ನೆಲ್ಲ ಕೊಲ್ಲಿ ಅನ್ನುವ ಮನೋಭಾವನೆ ಇವರದಲ್ಲ. ಎಲ್ಲ ತಂತ್ರಗಳನ್ನು ಬಳಸಿಯೂ ಹತೋಟಿಗೆ ಬಾರದಿದ್ದರೆ ಕೀಟನಾಶಕಗಳನ್ನು ಬಳಸಿ ಎನ್ನುತ್ತಿದ್ದರು. ಕೀಟನಾಶಕಗಳು ಎರಡು ಕಡೆಯೂ ಹರಿತವಾದ ಕತ್ತಿಯಂತೆ. ಎತ್ತ ಬೀಸಿದರು ಕತ್ತರಿಸುತ್ತದೆ. ಆದ್ದರಿಂದ ಎಚ್ಚರಿಕೆ ವಹಿಸಬೇಕೆನ್ನುತ್ತಿದ್ದರು.

ಪುಟ್ಟರುದ್ರಯ್ಯರವರಿಗೆ ಅರಿಯದೆ ಸೆಂಟ್ರಲ್ ಗೌರ್ನಮೆಂಟ್ ಒಂದು ಹುದ್ದೆಗೆ ಅರ್ಜಿ ಹಾಕಿದ್ದೆ. ಮುಖ್ಯ ಉದ್ದೇಶ, ಸಂದರ್ಶನಕ್ಕೆ ಕರೆ ಬಂದರೆ ಸರ್ಕಾರದ ಖರ್ಚಿನಿಂದ ಡೆಲ್ಲಿಗೆ ಹೋಗಿ ನನ್ನ ಸ್ನೇಹಿತರನ್ನೆಲ್ಲಾ ನೋಡಿ ಬರಬಹುದಲ್ಲ ಎಂದು. ಆ ಹುದ್ದೆ ಬಿಹಾರ್‌ನ ರಾಂಚಿಯಲ್ಲಿ ನಾಂಕುಂ ಲ್ಯಾಕ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಅಸಿಸ್ಟೆಂಟ್ ಎಂಟಮಲಾಜಿಸ್ಟ್ ಆಗಿ. ಅದು ಕ್ಲಾಸ್ ಒನ್ ಪೋಸ್ಟ್ (450-900 ರೂ.) ಆಗ ನನಗೆ ಬರುತ್ತಿದ್ದದ್ದು ರೂ. 100+35. ಸಂದರ್ಶನ ಚೀಟಿಯೂ ಬಂತು. ಎರಡು ಹುದ್ದೆಗೆ 140 ಅಭ್ಯರ್ಥಿಗಳಿದ್ದರು. ಅವರಲ್ಲಿ ಅನೇಕರು ಪಿಹೆಚ್.ಡಿ. ಇದ್ದವರು. ಒಮ್ಮೆಗೆ ನಾಲ್ಕು ಅಭ್ಯರ್ಥಿಗಳನ್ನು ಒಟ್ಟಾಗಿ ಕರೆದು ಇಂಟರ್‌ವ್ಯೂವ್ ಮಾಡುತ್ತಿದ್ದರು. ಅಗ್ರಿಕಲ್ಚರ್ ಕಮೀಷನರ್ ಡಾ॥ ಪಟೇಲ್ ಮತ್ತು ಪ್ಲಾಂಟ್ ಪ್ರೊಟೆಕ್ಷನ್ ಅಡ್ವೈಸರ್, ಬಾಪರೆಡ್ಡಿಯವರು ಎಕ್ಸ್‌ಪರ್ಟ್ಸ್ ಕಮಿಟಿಯಲ್ಲಿದ್ದವರು. ಹೆಬ್ಬಾಳದಲ್ಲಿ ಓದುತ್ತಿದ್ದಾಗ ಬಾಪರೆಡ್ಡಿಯವರು ನಮಗೆ ಫಾರಿನ್ ಎಗ್ಸಾಮಿನರ್ ಆಗಿ ಬಂದಿದ್ದರು.

ಪುಟ್ಟರುದ್ರಯ್ಯನವರಿಗೆ ಬಹಳ ಆಪ್ತರು. ನಾನು ಟೀಚಿಂಗ್‌ನಲ್ಲಿದ್ದುದರಿಂದ ಅಲ್ಲದೆ ಕೇವಲ ಒಂದು ವರುಷದ ಹಿಂದೆ ಎಂ.ಎಸ್ಸಿ. ಮಾಡಿದ್ದರಿಂದ ಅವರು ಕೇಳುತ್ತಿದ್ದ ಪ್ರಶ್ನೆಗಳು ಕಷ್ಟವಾಗಿ ಕಾಣುತ್ತಿರಲಿಲ್ಲ. ನನ್ನ ಜೊತೆ ಇದ್ದ ಇತರೆ ಮೂವರು ಉತ್ತರಿಸಲಾಗದಿದ್ದನ್ನು ಉತ್ತರಿಸುತ್ತಿದ್ದೆ. ಅಂತೂ ಒಂದೆರಡು ದಿನ ಡೆಲ್ಲಿಯಲ್ಲಿ ಸ್ನೇಹಿತರೊಡನೆ ಕಾಲಕಳೆದು ವಾಪಸು ಬಂದೆ. ಈ ಕೆಲಸ ಸಿಕ್ಕುವ ಬಗ್ಗೆ ಎಳ್ಳಷ್ಟು ನಂಬಿಕೆ ಇರಲಿಲ್ಲ. ಸಿಕ್ಕಿದರೂ ಹೋಗುವ ಮನಸ್ಸಿರಲಿಲ್ಲ. ಎರಡು ವಾರ ಕಳೆದ ಮೇಲೆ ನಾನು ಆ ಹುದ್ದೆಗೆ ಆಯ್ಕೆಯಾಗಿರುವುದಾಗಿ, ರಾಂಚಿಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಪತ್ರ ಬಂತು. ರಾಂಚಿಗೆ ಹೋಗುವ ಮನಸ್ಸಿಲ್ಲದಿದ್ದರೂ ಕೆಲಸ ಸಿಕ್ಕಿದೆಯಲ್ಲ ಎಂಬ ಹೆಮ್ಮೆಯಿಂದ ಆ ಪತ್ರವನ್ನು ತೆಗೆದುಕೊಂಡು ಹೋಗಿ ಪುಟ್ಟರುದ್ರಯ್ಯನವರಿಗೆ ತೋರಿಸಿ ಅದನ್ನು ನೋಡಿ ಸಂತೋಷಪಟ್ಟು ಆಶೀರ್ವದಿಸಿ ಹೋಗು ಎಂದು ಹೇಳಬಹುದೆಂಬ ನಂಬಿಕೆಯಿಂದ ನಿಂತಿದ್ದೆ. ಓದಿ, ಒಂದು ಕ್ಷಣ ಸಂತೋಷಕ್ಕಿಂತ ಖಿನ್ನರಾಗಿ ಕಾಗದವನ್ನು ಮಡಿಸಿ ನನ್ನ ಕಡೆ ಎಸೆದರು. 'ನನಗೆ ಒಂದು ಕಾಲು ಒಳಗೆ ಒಂದು ಕಾಲು ಹೊರಗೆ ಇಟ್ಟಿರುವುದು ಇಷ್ಟವಿಲ್ಲ. ಏನೂ ಗುರುತರವಾದ ಕೆಲಸ ಮಾಡದೆ ಮುಂದೆ ಹೋಗಬೇಕೆಂಬ ಈಗಿನವರ ಚಪಲ ನನಗೆ ಹಿಡಿಸುವುದಿಲ್ಲ. ನಿನಗೆ ಇಷ್ಟವಿದ್ದಂತೆ ಮಾಡು' ಅಂದರು. ಎರಡು ಮೂರು ದಿನ ಕಳೆದ ಮೇಲೆ ಇನ್ನೂ ಏಕೆ ಹೋಗಿಲ್ಲ ಅಂದರು. ರಾಂಚಿಗೆ ಹೋಗುವುದು ಇಷ್ಟವಿಲ್ಲವೆಂದೆ. ಅದಕ್ಕೇನು ಪ್ರತಿಕ್ರಿಯೆ ತೋರಿಸಲಿಲ್ಲ. ಅವರು ಅಂದು ಹಾಗೆ ವರ್ತಿಸಿದ್ದು ಇವನಿಗೆ ದೊಡ್ಡಕೆಲಸ ಸಿಕ್ಕಿದೆಯಲ್ಲ ಎಂಬ ಅಸೂಯೆಯಿಂದಲ್ಲ. ಈಗನ ಕಾಲದ ಹುಡುಗರು ಒಂದೆಡೆ ನಿಂತು ಕೆಲಸ ಮಾಡದೆ ಅವಕಾಶ ಸಿಕ್ಕಿದಲ್ಲೆಲ್ಲ ಹಾರುತ್ತಿರುತ್ತಾರಲ್ಲ; ಹೋದಲ್ಲಿಯೂ ಸರಿಯಾಗಿ ನಿಂತು ಕೆಲಸ ಮಾಡದೆ ಮುಂದೆ ಏನು ಸಿಕ್ಕಬಹುದೆಂದು ಯೋಚಿಸುತ್ತಿರುತ್ತಾರಲ್ಲ, ಎಂದು. ಈಗ ಅವರ ಚಿಂತನೆಗೆ ಮಾನ್ಯತೆ ದೊರೆಯುತ್ತಿತ್ತೋ ಇಲ್ಲವೋ ತಿಳಿಯದು. ಆದರೆ ಅವರು ಆಗ ಬೇಕಾದ ಕಡೆ ಹೋಗಬಹುದಿತ್ತು. ಕ್ಯಾಲಿಫೋರ್ನಿಯ ಸ್ಟೇಟ್ ಯೂನಿವರ್ಸಿಟಿಯಲ್ಲಿ ಎರಡೇ ವರುಷದಲ್ಲಿ ಪಿಹೆಚ್.ಡಿ.ಯನ್ನು ಪಡೆದಿದ್ದರು. ಅಮೇರಿಕಾದಲ್ಲಿ ಎಲ್ಲಿ ಬೇಕಾದರೂ ಕೆಲಸ ಸಿಕ್ಕುತ್ತಿತ್ತು. ಅದೆಷ್ಟು ಜನ ಸರ್ಕಾರದ ಸ್ಕಾಲರ್‌ಶಿಪ್ ಪಡೆದು ಹೊರದೇಶದಲ್ಲಿ ಓದಿ ವಾಪಸು ಬರದೆ ಇರುವವರು ಇದ್ದಾರೆ. ವಾಪಸ್ ಬಂದರೂ ಹೆಚ್ಚಿನ ಸಂಭಾವನೆಗೋಸ್ಕರ ಸರ್ಕಾರದ ಕೆಲಸ ಬಿಟ್ಟು ಖಾಸಗಿ ಸಂಸ್ಥೆಗೆ ಸೇರಿಲ್ಲ?

ಇದಾಗಿ ಕೆಲವು ದಿನಗಳ ಮೇಲೆ ಪಾಂಡಿಚೆರಿ ಅರವಿಂದ ಆಶ್ರಮಕ್ಕೆ ಥಿಯೋಸೊಫಿಕಲ್ ಸೊಸೈಟಿ ಕೃಷ್ಣಮೂರ್ತಿಯವರೊಡನೆ ಹೋಗಿದ್ದೆ. ಅವರಿಗೆ ಪಾಂಡಿಚೆರಿ ಆರವಿಂದೋ ಆಶ್ರಮದ ಪರಿಚಯವಿತ್ತು. ಮದರ್ ದರ್ಶನವೂ ಆಯಿತು. ವಾಪಸು ಹೊರಡುವಷ್ಟರಲ್ಲಿ ಸೈಕ್ಲೋನ್ ಕಾರಣದಿಂದ ವಾಹನಗಳ ಚಲನೆ ಏನೂ ಇರಲಿಲ್ಲ. ನಾಲ್ಕು ದಿವಸದವರೆಗೆ ಅಲ್ಲಿಯೆ ಇರಬೇಕಾಯಿತು. ನಾವು ಇಳಿದುಕೊಂಡಿದ್ದ ಹೋಟಲ್ ಪಕ್ಕದ ರೂಮಿನಲ್ಲಿ ಪೆಸ್ಟ್‌ಕಂಟ್ರೋಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮಾಲೀಕರಾದ ಪಿ.ಎಸ್.ರಾವ್‌ರವರು ಇಳಿದುಕೊಂಡಿದ್ದರು. ಆಶ್ರಮದಲ್ಲಿದ್ದ ಅವರ ಮಗನನ್ನು ನೋಡಲು ಬಂದಿದ್ದರು. ಅವರೂ ಕೂಡ ಸೈಕ್ಲೋನ್ ದೆಸೆಯಿಂದ ಬೊಂಬಾಯಿಗೆ ವಾಪಸು ಹೋಗಲಾಗಿರಲಿಲ್ಲ. ಇದ್ದ ಸಮಯವನ್ನೆಲ್ಲಾ ಊಟ, ತಿಂಡಿ, ಮಾತಿನಲ್ಲಿ ಕಳೆಯಬೇಕಾಗಿತ್ತು.

ಪರಸ್ಪರ ಪರಿಚಯವಾದ ಮೇಲೆ ನಾನು ಎಂ.ಎಸ್‌ಸಿ. ಎಂಟಮಾಲಜಿ, ಕಾಲೇಜಿನಲ್ಲಿ ಲೆಕ್ಚರರ್ ಎಂದು ತಿಳಿದ ಮೇಲೆ ರಾವ್‌ರವರು ನನ್ನೊಡನೆ ಹೆಚ್ಚು ಆತ್ಮೀಯರಾದರು. ಕೆಲವು ವಾರಗಳು ಕಳೆದು ಬೆಂಗಳೂರಿಗೆ ಬರುತ್ತೇನೆ; ಆಗ ನಿಮ್ಮನ್ನು ಕಾಣಬೇಕು; ಒಂದು ದಿವಸ ಬಿಡುವು ಮಾಡಿಕೊಳ್ಳಿ ಎಂದು ಹೇಳಿದರು. ಅದಕ್ಕೆ ಒಪ್ಪಿದೆ. ಹೇಳಿದ್ದ ಹಾಗೆ ಒಂದು ಸಂಜೆ ಕಾಲೇಜಿಗೆ ಬಂದು ಕಾರಿನಲ್ಲಿ ವೆಸ್ಟ್ ಎಂಡ್ ಹೋಟಲಿಗೆ ಕರೆದುಕೊಂಡು ಹೋಗಿ ಪುಷ್ಕಳವಾದ ಊಟ ಹಾಕಿಸಿ ಅವರ ಸಂಸ್ಥೆಯು ಮಾಡುತ್ತಿರುವ ಕೆಲಸ, ಅದರ ಬ್ರಾಂಚ್‌ಗಳು ಎಲ್ಲೆಲ್ಲಿವೆ ಎಲ್ಲವನ್ನು ಹೇಳಿ, ನಾನು ಒಪ್ಪಿದರೆ ಅವರ ಸಂಸ್ಥೆಗೆ ತೆಗೆದುಕೊಳ್ಳುವ ಇಚ್ಛೆಯನ್ನು ವ್ಯಕ್ತ ಪಡಿಸಿದರು. ಬೇಕಾದರೆ ಬೆಂಗಳೂರಿನಲ್ಲೇ ಇರಬಹುದು, ಆಫೀಸು ಮನೆ ಒಂದರಲ್ಲೆ, ಪ್ರಾರಂಭದಲ್ಲಿ ತಿಂಗಳಿಗೆ ಎಂಟುನೂರು ರೂಪಾಯಿ ಸಂಭಾವನೆ ಎಂದರು. ತಕ್ಷಣ ನನಗೆ ಏನು ಹೇಳಬೇಕೋ ತೋಚಲಿಲ್ಲ, ನನಗೆ ಬರುತ್ತಿದ್ದಕ್ಕಿಂತ ಏಳೆಂಟು ಪಟ್ಟು ಹೆಚ್ಚಿನ ಸಂಬಳ, ಮನೆ, ಅದೂ ಬೆಂಗಳೂರಿನಲ್ಲೇ, ನಾನು ಬಯಸಿದ್ದೇ ಅಲ್ಲ, ಅದಾಗಿ ಬಂದದ್ದು. ನನಗೆ ಒಂದು ದಿನ ಸಮಯ ಕೊಡಬೇಕೆಂದು ಕೇಳಿ ಧನ್ಯವಾದಗಳನ್ನು ಹೇಳಿ ಮನೆಗೆ ಹೋದೆ. ರಾತ್ರಿಯೆಲ್ಲ ಇದರ ಆಗುಹೋಗುಗಳನ್ನು ತುಲನಮಾಡಿದೆ. ಯಾರನ್ನಾದರೂ ಕೇಳೋಣವೆಂದರೆ ಪುನಃ ಪುಟ್ಟರುದ್ರಯ್ಯನವರನ್ನೇ ಕೇಳಬೇಕು. ಡಿಪಾರ್ಟ್‌ಮೆಂಟಿನಲ್ಲಿ ಬೇರೆಯವರನ್ನು ಕೇಳಿದರೆ ಬೇಡವೆಂದು ಯಾರು ಹೇಳುತ್ತಾರೆ? ವಿದ್ಯಾವಂತರು ಖಾಸಗಿ ಸಂಸ್ಥೆಗಳಿಗೆ ಸೇರಿದ್ದವರನೇಕರು ಕಾಲೇಜಿಗೆ ಬರುತ್ತಿದ್ದರು. ಅವರ ಸಂಸ್ಥೆಯ ಪ್ರಾಡಕ್ಟ್ ಟೆಸ್ಟ್ ಮಾಡಿಸುವುದಕ್ಕಾಗಲಿ ಅಥವಾ ಫೀಲ್ಡ್ ಟ್ರಯಲ್‌ಗಾಗಲಿ ಕಾಲೇಜಿನ ಮುಖಾಂತರವೇ ಆಗಬೇಕಿತ್ತು. ಅವರ ಚಲನವಲನ, ಮಾತಿನ ಶೈಲಿ, ಪಾರ್ಟಿಗಳನ್ನು ಏರ್ಪಡಿಸುತ್ತಿದ್ದ ರೀತಿ ಎಲ್ಲವೂ ಏನೋ ಒಂದು ವಿಧ ಕೃತಕವಾಗಿ ತೋರುತ್ತಿತ್ತು. ವರುಷದ ಕೊನೆಯಲ್ಲಿ ಅವರ ಟಾರ್‌ಗೆಟ್ ಮೀಟ್ ಮಾಡುವುದೇ ಅವರ ಗುರಿ. ಅದನ್ನು ಹೇಗೆ ಸಾಧಿಸಬೇಕೆನ್ನುವುದು ಅವರವರಿಗೆ ಬಿಟ್ಟದ್ದು. ನನ್ನ ಜೊತೆ ಓದುತ್ತಿದ್ದ ಕೆಲವರು ಖಾಸಗಿ ಸಂಸ್ಥೆಗೆ ಸೇರುವ ದೃಷ್ಟಿಯಿಂದಲೇ ಕಲಿಯುತ್ತಿದ್ದರು. ಆದರೆ ಅದೊಂದೂ ನನಗೆ ಅನುಭವವಿರಲಿಲ್ಲ. ಸಂದರ್ಭಕ್ಕೆ ತಕ್ಕಂತೆ ವರ್ತಿಸುವ ಲಕ್ಷಣಗಳೂ ನನ್ನಲ್ಲಿರಲಿಲ್ಲ. ಅಂತರಾಳದಲ್ಲಿ ಸಂಶೋಧನೆ ಮತ್ತು ಬೋಧನೆ ಕಡೆ ಮನಸ್ಸು ಎಳೆಯುತ್ತಿತ್ತು. ಹಾಗಾಗಿ ಸರ್ಕಾರದ ಬೇರೆ ಯಾವುದೇ ಹುದ್ದೆಗೆ ಪ್ರಯತ್ನಪಟ್ಟವನಲ್ಲ. ಮನಸ್ಸು ಮಾಡಿದ್ದರೆ ಯಾವುದಾದರೂ ಪ್ರೊಬೇಷನರಿ ಗೆಜೆಟೆಡ್ ಹುದ್ದೆಗೆ ಪ್ರಯತ್ನ ಮಾಡಿ ಹೋಗಬಹುದಿತ್ತು. ಈಗ ರಾವ್‌ರವರು ಹಾಕಿದ ಗಾಳ ನನ್ನ ಸತ್ವ ಪರೀಕ್ಷೆಯ ಸಮಯವಾಗಿತ್ತು. ಅರ್ಜುನನ ದೌರ್ಬಲ್ಯದಿಂದ ಯುದ್ಧದಲ್ಲಿ ತನ್ನ ಬಂಧುಮಿತ್ರರನ್ನು ಕೊಲ್ಲುವುದು ಪಾಪವೆಂದು ಯುದ್ಧ ಮಾಡುವುದಿಲ್ಲವೆಂದು ಕೃಷ್ಣನಿಗೆ ಹೇಳಿದ ಹಾಗೆ ಜೀವನದ ಅನಿಶ್ಚಿತತೆಯನ್ನು ಎದುರಿಸುವ ಧೈರ್ಯ ಇಲ್ಲದೆ ಆಕರ್ಷಕವಾದ ಹುದ್ದೆಯನ್ನು ಬಿಟ್ಟು, ಕೊಟ್ಟಷ್ಟೆ ಸಾಕು, ಖಾಯಂ ಆದ ಹುದ್ದೆ ಇದ್ದರೆ ಆಯಿತೆಂಬ ಮನೋ ದೌರ್ಬಲ್ಯವೋ ಅಥವಾ ಸಮಯ ಬಂದಂತೆ ವರ್ತಿಸುವ ಚಾಣಕ್ಷತೆ ಇಲ್ಲದೆಯೋ, ರಾವ್‌ರವರಿಗೆ ಬೇಡವೆಂದು ಹೇಳುವ ನಿರ್ಧಾರ ಮಾಡಿ ಮರುದಿನ ಸಂಜೆ ವೆಸ್ಟೆಂಡ್ ಹೋಟಲಿಗೆ ಹೋದೆ.

ಪುನಃ ಅಂದು ಸಂಜೆ ಅಲ್ಲಿಯೇ ಊಟ ಮಾಡಿ ಎಂದು ಒತ್ತಾಯಿಸಿದರು. ಏನೋ ನೆಪಹೇಳಿ ಬೇಡವೆಂದೆ. ತಾವು ನೆನ್ನೆ ನನಗೆ ತೋರಿದ ಆದರದ ಆಹ್ವಾನ ಬಹಳ ಅಪರೂಪದ ಅದೃಷ್ಟ.

ನನಗೇನೊ ಅದು ನಾನು ಊಹಿಸದ್ದಕ್ಕಿಂತ ದೊಡ್ಡದೇ ಆಗಿದೆ. ಆದರೆ ನಿಮ್ಮ ಸಂಸ್ಥೆಗೆ ಎಷ್ಟು ಉಪಯೋಗವಾಗುವುದೋ ತಿಳಿಯದು. ನಾನು ಸಂಶೋಧನೆ, ಬೋಧನೆ ಕಡೆಗೆ ಗಮನ ಹರಿಸಿದ್ದೇನೆ. ಯಾವುದೇ ವ್ಯಾಪಾರ ಔದ್ಯೋಗಕ್ಕೆ ತಕ್ಕವನಲ್ಲವೆಂದು ನನ್ನ ಅಭಿಪ್ರಾಯ. ತಮ್ಮ ಪ್ರೀತಿಯ ಕೊಡಿಗೆಗೆ ತುಂಬಾ ಧನ್ಯವಾದಗಳು ಎಂದು ಹೇಳಿದೆ. ಅವರು ಮಂದಹಾಸವನ್ನು ಬೀರಿ, ತಾವು ತೆಗೆದುಕೊಂಡಂತಹ ನಿರ್ಧಾರ ಶ್ಲಾಘನೀಯವಾದದ್ದು. ದೇವರು ನಿಮಗೆ ಒಳ್ಳೆಯದು ಮಾಡಲಿ, ನನ್ನ ಜೀವನಪರ್ಯಂತ ನೀವು ನನ್ನ ವೆಲ್‌ವಿಶರ್ ಆಗಿರುವಿರಿ ಎಂದರು.

ಅವರು, ಮುಂದೆ ಬೆಂಗಳೂರಿಗೆ ಬಂದಾಗಲೆಲ್ಲ ಸಮಯ ಸಿಕ್ಕಿದಾಗ ನನ್ನನ್ನು ಸಂಪರ್ಕಿಸುತ್ತಿದ್ದರು. ಆತ್ಮೀಯವಾಗಿ ಮಾತನಾಡುತ್ತಿದ್ದರು. ಅವರ ವೃತ್ತಿಯನ್ನು ಪ್ರಾರಂಭಿಸಿದ ವೈಖರಿ, ಅವರ ಕಂಪನಿಯಲ್ಲಿ ಕೆಲಸ ಮಾಡುವವರೆಲ್ಲ ಸಂಬಳಕ್ಕೆ ಇರುವವರಲ್ಲ, ಅವರೆಲ್ಲ ದೊಡ್ಡ ಸಂಸಾರದ ಒಬ್ಬ ಸದಸ್ಯ, ತಮ್ಮ ಯೋಗಕ್ಷೇಮ ಎಷ್ಟು ದೊಡ್ಡದೋ ಅವರ ಯೋಗಕ್ಷೇಮವೂ ಅಷ್ಟೇ ದೊಡ್ಡದು, ಅವಕಾಶ ದೊರೆತಾಗಲೆಲ್ಲ ಮತ್ತೊಬ್ಬರಿಗೆ ಸಹಾಯವಾಗಬೇಕು, ಹೀಗೆ ಹಲವಾರು ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರು.

ಒಮ್ಮೆ ವೆಸ್ಟೆಂಡ್ ಹೋಟಲಿನಲ್ಲಿರುವಾಗ ಸಂಜೆ ಕರೆಂಟ್ ಹೋಗಿ ಅರ್ಧ - ಮುಕ್ಕಾಲು ಗಂಟೆ ಬರಲಿಲ್ಲ. ಏರ್‌ಕಂಡೀಷನ್ ರೂಮ್ ಆಗಿದ್ದರಿಂದ ಸೆಕೆ ಆಗುತ್ತಿತ್ತು. ಅವರು ತಡಬಡಿಸುತ್ತಿದ್ದರು. ನಾನು ಸುಮ್ಮನೆ ಕುಳಿತಿದ್ದನ್ನು ನೋಡಿ ನಿಮಗೇನು ಸೆಕೆ ಆಗುವುದಿಲ್ಲವೇ ಎಂದರು. ಇದು ಮಾಮೂಲಿನ ಸೆಕೆ ತಡೆಯಲಾಗದಷ್ಟೇನಿಲ್ಲ ಎಂದೆ. ಅದಕ್ಕೆ ಅವರು, ಪ್ರಾರಂಭದಲ್ಲಿ ಬೊಂಬಾಯಿಯ ಬೀದಿಗಳಲ್ಲಿ ಸ್ಪ್ರೇಯರ್ ಹಿಡಿದು ಮನೆ ಮನೆಗಳಿಗೆ ಹೋಗಿ ಸ್ಪ್ರೇ ಮಾಡಿ ಸಿಕ್ಕಿದ ಕಡೆ ಮಲಗುತ್ತಿದ್ದಾಗ ಸೆಕೆ, ಮಳೆ ಗಾಳಿ ಏನೂ ಗೊತ್ತಾಗುತ್ತಿರಲಿಲ್ಲ. ಕ್ರಮೇಣ ಕಂಪನಿ ದೊಡ್ಡದಾಗುತ್ತಾ ಬಂದಹಾಗೆಲ್ಲಾ ಸವಲತ್ತುಗಳು ಜಾಸ್ತಿಯಾಗುತ್ತಾ ಬಂದವು. ಈಗ ಇಂತಹ ಸಣ್ಣಪುಟ್ಟ ತೊಂದರೆಯನ್ನು ಎದುರಿಸುವುದೂ ಕಷ್ಟವಾಗಿ ಕಾಣುತ್ತದೆ. ಒಳ್ಳೆಯ ಬದುಕಿಗೆ ಈ ಮಾರ್ಗ ಸರಿಯಲ್ಲ ಎಂದರು.

ಮುಂದೆ ನಾನು ಒಂದು ಕಾನ್ಫರನ್ಸ್‌ಗೆ ರಷ್ಯಾಕ್ಕೆ ಹೋಗಲು ಇವರು ಸಹಾಯ ಮಾಡಿದರು. ಆ ಸಮಯದಲ್ಲಿ ಎನ್.ಎಸ್. ರಾವ್‌ರವರು ಭಾರತ ರಷ್ಯ ಫ್ರೆಂಡ್‌ಷಿಪ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದರು. ಈ ಅಸೋಸಿಯೇಷನ್ ಮುಖಾಂತರ ನಾನು ರಷ್ಯಾಕ್ಕೆ ಹೋಗುವುದೆಂದು ಏರ್ಪಾಡಾಗಿತ್ತು. ಕಾರಣಾಂತರದಿಂದ ಭಾರತ ಇಂಡಿಯ ಫ್ರೆಂಡ್‌ಷಿಪ್ ಅಸೋಸಿಯೇಷನ್‌ನಿಂದ ಟ್ರಾವಲ್ ಗ್ರಾಂಟ್ ಸಿಗಲಿಲ್ಲ. ಹೊರಡಲು ವಾರವಿದ್ದಾಗ ರಾವ್‌ರವರು ದೂರವಾಣಿ ಮುಖಾಂತರ ನಾನು ರಷ್ಯ ಟ್ರಿಪ್‌ನ್ನು ಕ್ಯಾನ್ಸಲ್ ಮಾಡಬಾರದಾಗಿ, ಆ ಮೀಟಿಂಗಿಗೆ ಹೋಗಿ ಮುಂದಿನ ಸಮ್ಮೇಳನವನ್ನು ಭಾರತದಲ್ಲಿ ನಡೆಸುವ ಏರ್ಪಾಡು ಮಾಡಬೇಕೆಂದು, ರಷ್ಯಕ್ಕೆ ಹೋಗಿ ಬರುವ ವೆಚ್ಚವನ್ನು ಅವರು ಭರಿಸುವುದಾಗಿ ವಾಗ್ದಾನ ಮಾಡಿದರು. ಅದರಂತೆ ರಷ್ಯಾಕ್ಕೆ ಹೋಗಿ ಮುಂದಿನ ಸಮ್ಮೇಳನವನ್ನು ಭಾರತದಲ್ಲಿ ಜರುಗಿಸುವ ಏರ್ಪಾಡು ಮಾಡಿ ಬಂದೆ. ವಾಗ್ದಾನ ಮಾಡಿದಂತೆ ರಾವ್‌ರವರು ವಿಮಾನಯಾನದ ಖರ್ಚನ್ನು ಅವರ ಕಂಪನಿಯ ಬೆಂಗಳೂರು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಡಾ॥ ಮಂಜುನಾಥರ ಮುಖಾಂತರ ಕಳುಹಿಸಿದ್ದಲ್ಲದೆ ನಾನು ಹೋಗಿದ್ದಕ್ಕೆ

ಧನ್ಯವಾದಗಳನ್ನು ಹೇಳಿದ್ದರು. ಮುಂದೆ ಇಂತಹ ಸಹಾಯ ಮಾಡುವ ಅವಕಾಶ ಅವರಿಗೆ ದೊರೆತರೆ ಸಂತೋಷಿಸುವೆನೆಂದು ಕೂಡ ತಿಳಿಸಿದ್ದರು.

ಆಗಿನ ಕಾಲದಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಂಸಾರವಿಲ್ಲದ ನೌಕರರಿಗೆ ತಿಂಗಳಿಗೆ 25-30 ರೂಪಾಯಿ ಕೊಟ್ಟರೆ ಹೋಟಲ್‌ನಲ್ಲಿ ವಸತಿ ದೊರೆಯುತ್ತಿತ್ತು. ಹಾಗೆಯೇ ತಿಂಗಳಿಗೆ ಎರಡು ಹೊತ್ತು ಊಟಕ್ಕೆ 25-30 ರೂಪಾಯಿ ಆಗುತ್ತಿತ್ತು. ಹೆಬ್ಬಾಳದ ಕಡೆ ಕೆಲಸ ಮಾಡುವವರಿಗೆ ಮಲ್ಲೇಶ್ವರಂನ ಸಂಪಿಗೆ ರೋಡಿನಲ್ಲಿ ರತನ್ ಕೆಫೆ ಮತ್ತು ಗಣೇಶ ಲಾಡ್ಜ್ ಊಟ ವಸತಿಗೆ ಅನುಕೂಲವಾಗಿದ್ದವು. ನಾನೂ ಕೂಡ ಕೆಲಸಕ್ಕೆ ಸೇರಿದ ಮೊದಲು ರತನ್ ಕೆಫೆಯಲ್ಲಿ ಇದ್ದೆ. ಸಂಜೆ ಶ್ರೀರಾಂಪುರದಲ್ಲಿದ್ದ ನನ್ನ ಸ್ನೇಹಿತರು ವಿಷಕಂಠಯ್ಯನವರ ಮನೆಯಲ್ಲಿ ಊಟ ಮಾಡುತ್ತಿದ್ದೆ. ಬೆಳಗಿನ ತಿಂಡಿ ಹೋಟಲ್‌ನಲ್ಲಿ, ಮಧ್ಯಾಹ್ನದ ಊಟ ಹೇಗೋ ನಡೆಯುತ್ತಿತ್ತು. ಅದೇ ಹೋಟಲ್‌ನಲ್ಲಿ ನನ್ನ ಸಂಬಂಧಿ ದೊಡ್ಡ ಏಲಕ್ಕಿ ಬೆಳೆಗಾರರ ಮನೆಯವರೂ ಆದ ಅತ್ತಿಹಳ್ಳಿ ಮಲ್ಲೇಶ್ ಮತ್ತು ಅವರ ಸ್ನೇಹಿತ ಕಾಫಿ ಪ್ಲಾಂಟರ್ ಶಂಕರಕೊಡಿಗೆ ನಾರಾಯಣ ಹೆಗ್ಗಡೆ ಇಬ್ಬರೂ ಒಂದು ರೂಮಿನಲ್ಲಿ ಓದಿಕೊಂಡಿದ್ದರು. ಅವರನ್ನು ನೋಡುತ್ತಿದ್ದದ್ದು ವಾರಕ್ಕೊಮ್ಮೆ ಭಾನುವಾರ. ಉಳಿದ ದಿವಸ ನಾನು ಮಲಗಿದ ಮೇಲೆ ಅವರು ರೂಮ್‌ಗೆ ಬರುತ್ತಿದ್ದರು. ನಾನು ಕಾಲೇಜಿಗೆ ಹೋದನಂತರ ಏಳುತ್ತಿದ್ದರು. ಭಾನುವಾರ ಮಾತ್ರ ಬೆಳಗಿನ ತಿಂಡಿಗೆ ಒಟ್ಟಿಗೆ ಹೋಗುತ್ತಿದ್ದೆವು. ಒಂದು ದಿನ ಇಡ್ಲಿ ಸಾಂಬಾರಿನಲ್ಲಿ ಬೆರಳು ಗಾತ್ರದ ಮಿಡತೆ ಸಿಕ್ಕಿತು. ಅಂದೇ ಬೇರೆ ಮನೆ ಮಾಡುವ ನಿರ್ಧಾರ ಮಾಡಿ ಹುಡುಕಲು ಪ್ರಾರಂಭಿಸಿದೆವು. ಆಗ ಮಲ್ಲೇಶ್ವರಂನಲ್ಲಿ ಸಂಸಾರವಿಲ್ಲದವರಿಗೆ ಬಾಡಿಗೆಗೆ ಮನೆ ಕೊಡುತ್ತಿರಲಿಲ್ಲ. ಸಂಸಾರವಿದ್ದರೂ ಮಾಂಸಾಹಾರಿಗಳೆಂದರೆ ಎಲ್ಲಾ ಕಡೆ ದೊರೆಯುತ್ತಿರಲಿಲ್ಲ. ಹೋಟಲಿಗೆ ಸಮೀಪ ಆರನೇ ಕ್ರಾಸ್‌ನಲ್ಲಿ ಒಂದು ಮನೆ ಖಾಲಿ ಇತ್ತು. ಅದರ ಮಾಲೀಕ ಒಬ್ಬ ಸೇಟು ನೆಹರುನಗರದಲ್ಲಿ ಇದ್ದರು. ಆ ಮನೆಯನ್ನು ಅವರು ಹರಾಜಿನಲ್ಲಿ ತೆಗೆದುಕೊಂಡಿದ್ದರು. ಅಜುಬಾಜಿನವರು ಈ ಮಾಲೀಕನೊಂದಿಗೆ ಕೊಂಚ ತಕರಾರಿನಲ್ಲಿದ್ದರು. ಮನೆ ಬಾಡಿಗೆ ತಿಂಗಳಿಗೆ ಎಂಭತ್ತು ರೂಪಾಯಿ. ಆಗಿನ ಕಾಲಕ್ಕೆ ಜಾಸ್ತಿಯೆಂದು ಯಾರೂ ಬಂದಿರಲಿಲ್ಲ. ನನಗೆ ಅಲ್ಪಸ್ವಲ್ಪ ಹಿಂದಿ ಬರುತ್ತಿದ್ದರಿಂದ ಕನ್ನಡ ಚೆನ್ನಾಗಿ ಬರದಿದ್ದ ಸೇಟುವಿನೊಡನೆ ಮಾತನಾಡಿ ಮನೆಯನ್ನು ಗೊತ್ತು ಮಾಡಿಕೊಂಡೆವು. ಆದರೂ ಮನಸ್ಸಿನಲ್ಲಿ ಅಳುಕು. ಏಕೆಂದರೆ ಈ ಸೇಟು ಪಾಕಿಸ್ತಾನದಿಂದ ಬಂದವರು; ಬರುವಾಗ ಆರು ಮುಸಲ್ಮಾನರನ್ನು ಕೊಂದು ಬಂದು ಹಿಂದೂಸ್ಥಾನ ವಿಮಾನ ಕಾರ್ಖಾನೆಗೆ ಕೆಲಸಕ್ಕೆ ಸೇರಿ, ಕೆಲವು ವರ್ಷಗಳ ನಂತರ ಸ್ವಂತ ಉದ್ಯಮೆ ಪ್ರಾರಂಭಮಾಡಿ ಅನುಕೂಲಕ್ಕೆ ಬಂದಿದ್ದರು. ನೋಡುವುದಕ್ಕೆ ಗಟ್ಟಿಮುಟ್ಟಾದ ವ್ಯಕ್ತಿ. ಬಾಡಿಗೆ ಸರಿಯಾಗಿ ಕೊಡದಿದ್ದರೆ ನಿಮ್ಮನ್ನು ಆಚೆಗೆ ಹಾಕುತ್ತೇನೆಂದು ಮಕ್ಕಳ ಮುಂದೆ ಹಿರಿಯವರು ಗದರಿಸುವಂತೆ ಹೇಳಿದ್ದರು. ಮುನ್ನೂರು ರೂಪಾಯಿ ಅಡ್ವಾನ್ಸ್ ಕೇಳಿದ್ದರು. ಸ್ವಲ್ಪ ದಿವಸದಲ್ಲಿ ಕೊಡುತ್ತೇವೆಂದು ಹೇಳಿ ಮನೆ ಸೇರಿ ಕೊಂಡೆವು. ಸಂಸಾರ ಹೂಡುವುದೆಂದರೆ ಸುಲಭವೇ? ಮಲ್ಲೇಶ್‌ರವರ ಮನೆಯಿಂದ ಕನಿಷ್ಠ ಬೇಕಿದ್ದ ಪಾತ್ರೆ, ಅಕ್ಕಿ ಬಂತು. ಪ್ರಾರಂಭದಲ್ಲಿ ನಾನು, ಮಲ್ಲೇಶ್, ನಾರಾಯಣ ಹೆಗ್ಗಡೆ ಹಾಗೂ ಇವರಿಬ್ಬರ ಸ್ನೇಹಿತರು ಮತ್ತು ನಮ್ಮ ವಿದ್ಯಾರ್ಥಿ ಮೃತ್ಯುಂಜಯ ನಾಲ್ಕು ಜನ ಇದ್ದೆವು. ಅಡಿಗೆಯವನನ್ನು ಗೊತ್ತುಮಾಡುವ ಪ್ರಯತ್ನದಲ್ಲಿದ್ದೆವು.

ಒಂದು ದಿನ ಮನೆ ಮುಂದೆ ನಿಂತಿರುವಾಗ ಒಬ್ಬ ಹುಡುಗ ಒಂದು ಟ್ರಂಕನ್ನು ತಲೆಯ ಮೇಲಿಟ್ಟುಕೊಂಡು ಹೋಗುತ್ತಿದ್ದ: ಅವನನ್ನು ಕರೆದು ವಿಚಾರಿಸಿದಾಗ ಅಡಿಗೆ ಮಾಡುವುದಾಗಿ ಒಪ್ಪಿಕೊಂಡ. ಇನ್ನೇನು ಮನೆ ಊಟ ನೆನೆಸಿಕೊಂಡ ಸಂತೋಷದಲ್ಲಿ ಅಂದು ಸಂಜೆ, ಸ್ಪೆಷಲ್ ಊಟ ಮಾಡಬೇಕೆಂದು ತೀರ್ಮಾನಿಸಿ ಸಾಮಾನು ತಂದು ಕೊಟ್ಟೆವು. ಆ ಹುಡುಗ ಅಂದೆ ರಾತ್ರಿ ಅವನು ತಂದಿದ್ದ ಪೆಟ್ಟಿಗೆಯನ್ನು ಕೂಡ ಅಲ್ಲಿಯೇ ಬಿಟ್ಟು ಕಣ್ಮರೆಯಾದ. ಅವನಾರೋ ಬ್ರಾಹ್ಮಣ ಹುಡುಗನಿರಬಹುದೆಂದು ಮಾತನಾಡಿಕೊಂಡೆವು. ಆ ಮನೆಯಲ್ಲಿ ಇದ್ದ ಐದು ವರುಷದಲ್ಲಿ ಇವನೊಬ್ಬನೆ ತಂದಿದ್ದ ಪೆಟ್ಟಿಗೆ ಬಿಟ್ಟು ಹೋಗಿದ್ದವನು, ಆನಂತರ ಬಂದವರೆಲ್ಲಾ ಏನನ್ನಾದರೂ ತೆಗೆದುಕೊಂಡೇ ಹೋದವರು!

ಆ ಮನೆಗೆ ಹೋದ ದಿನವೇ ಸಂಜೆ ಹೆತ್ತೂರು ಕೆರೆಗಂಡಿ ಸಿದ್ದೇಗೌಡ್ರು ಬಂದು ಇಳಿದು ಕೊಂಡರು. ಅಂದು ಪ್ರಾರಂಭವಾದ ಆತಿಥ್ಯ ನಾವು ಮನೆ ಬಿಟ್ಟು ಹೊರಡುವಾಗ ಅಲ್ಲಿರಲು ಬಂದ ಬಸಗುಳದ ಬಸವರಾಜು ನಿರಾಶರಾಗಿ ಹೋಗುವವರೆಗೆ ಗೆಸ್ಟ್ ಇಲ್ಲದ ದಿನವಿಲ್ಲ. ಕಾಲಕ್ರಮೇಣ ನಮ್ಮ ಸಂಸಾರವೂ ದೊಡ್ಡದಾಯಿತು. ಒಂದು ಸಮಯದಲ್ಲಿ ಹನ್ನೆರಡು ಜನ ಆ ಮನೆಯಲ್ಲಿದ್ದೆವು. ಮಲ್ಲೇಶನ ಅಣ್ಣನ ಮಕ್ಕಳು ಶಿವು, ಕೃಷ್ಣ, ವಿಜಯ, ಭವಾನಿ, ಕನ್ಯಾ, ನನ್ನ ಅಣ್ಣನ ಮಗ ದೊರೆಸ್ವಾಮಿ, ಹೆಚ್.ಎಸ್. ಮಲ್ಲೇಗೌಡರ ಮಗ ಚೋಟಾ ಕೃಷ್ಣ (ಈಗ ಅವರು ಹಾಸನ ಜಿಲ್ಲಾ ಪಂಚಾಯತ್ ಅಧ್ಯಕ್ಷರು), ಗೊದ್ದು ನಾ. ಪ. ಬಸವೇಗೌಡರ ಪುತ್ರ ವಿಜಯ, ಬಾಚಳ್ಳಿ ಗುಂಡ, ಹೆಚ್.ಎ. ಪರಮೇಶ್ ಇವರೆಲ್ಲಾ ಇದ್ದರು. ಆ ಮನೆ ಒಟ್ಟಾರೆ ಆರನೂರು ಚದರಡಿ ಇತ್ತೋ ಇಲ್ಲವೋ, ಒಂದೇ ಬಚ್ಚಲು ಒಂದೇ ಕಕ್ಕಸು, ಮುಂದೆ ಬಾಗಿಲು ತೆಗೆದರೆ ಬೀದಿ, ಹಿಂದೆ ಬಾಗಿಲು ತೆಗೆದರೆ ಸಂಸಾರಸ್ಥರ ಮನೆ. ಅದರ ಪಕ್ಕದಲ್ಲಿ ಸೇಟುವಿನ ಸ್ನೇಹಿತೆ, ಅವನ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಬರುತ್ತಿದ್ದ ಕಣ್ಣಾದ ವ್ಯಕ್ತಿಯನ್ನು ಅಲ್ಲಿರಿಸಿ ಹಂಗಾಮಿ ಸಂಸಾರ ನಡೆಸಿದ್ದರು. ಈ ಮಧ್ಯೆ ಹೋಗಿ ಬರುವವರು, ಗೆಸ್ಟುಗಳು ಮತ್ತು ನಮ್ಮ ಹುಡುಗರ ಸ್ನೇಹಿತರು. ಕೆಲವು ಸಾರಿ ನಿಲ್ಲಲೂ ಜಾಗವಿರುತ್ತಿರಲಿಲ್ಲ. ಅಡುಗೆಗೆ ಬಂದವರೂ ಯಾರು ತಿಂಗಳು ಗಟ್ಟಲೆ ನಿಂತಿದ್ದಿಲ್ಲ. ಎಷ್ಟೋ ದಿವಸ ಸಂಜೆ ಕಾಲೇಜಿನಿಂದ ಬಂದು ಮನೆಯಲ್ಲಿ ನೋಡಿದರೆ ಅಡುಗೆಯವನೇ ಇರುತ್ತಿರಲಿಲ್ಲ. ಅಷ್ಟೊಂದು ಜನ ಒಂದು ಹೊತ್ತು ಹೋಟಲಿಗೆ ಹೋಗಿ ಊಟ ಮಾಡುವುದೆಂದರೂ ದುಡ್ಡಿರುತ್ತಿರಲಿಲ್ಲ. ನಾವೇ ಸೌಟು ಹಿಡಿಯಬೇಕಿತ್ತು.ಹುಡುಗರೆಲ್ಲರೂ ಸಹಕರಿಸುತ್ತಿದ್ದರು. ನಾವು ಮಾಡಿದ್ದೇ ನಳಪಾಕ. ಯಾರೂ ಕಂಪ್ಲೇಂಟ್ ಮಾಡುತ್ತಿರಲಿಲ್ಲ. ಐದು ವರುಷದಲ್ಲಿ ಅಡುಗೆ ಮಾಡದೆ ಹೋಟಲಿಗೆ ಹೋಗಿ ಉಂಡಿದ್ದ ದಿನವಿಲ್ಲ.

ಮೊದಮೊದಲು ಆ ಬೀದಿಯಲ್ಲಿದ್ದವರಿಗೆಲ್ಲ ಒಂದು ವಿಧದ ಆಶ್ಚರ್ಯ. ಇಷ್ಟೊಂದು ಜನ ಈ ಮನೆಯಲ್ಲಿ ಹೇಗೆ ವಾಸಿಸಬಹುದು, ಅವರು ಹೇಗೆ ಜೀವನ ನಡೆಸುತ್ತಾರೆ; ಆದರೂ ಮನೆಯಲ್ಲಿ ಗೌಜಿಲ್ಲ; ಗಲಾಟೆಯಿಲ್ಲ, ನೆರೆಹೊರೆಯವರ ತಂಟೆಗೆ ಹೋಗಲ್ಲ; ಮನೆಯಲ್ಲಿ ಹೆಂಗಸರಿಲ್ಲ, ಅವರಲ್ಲೆಲ್ಲ ಒಬ್ಬನಿಗೆ ವೃತ್ತಿ, ಬೇರೆಯವರೆಲ್ಲ ಓದುತ್ತಾರೋ ಅಲೆದಾಡುತ್ತಾರೋ ಒಂದೂ ಗೊತ್ತಿಲ್ಲ. ಸಂಸಾರ ಹೇಗೆ ಸಾಗುತ್ತದೆ ಎಂಬ ಹತ್ತಾರು ಯೋಚನೆಗಳು ಅವರದು. ವರುಷ ಕಳೆದನಂತರ ಮಹಡಿಯ ಮೇಲಕ್ಕೆ ಮಂಗಳೂರಿನ ಅಚ್ಯುತ್ತಯ್ಯನವರ ಸಂಸಾರ ಬಾಡಿಗೆಗೆ ಬಂದರು. ಅಚ್ಯುತ್ತಯ್ಯನವರು ಪೋಲೀಸ್ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದರು. ಆ ಮನೆಗೆ

ಅವರ ಸಂಸಾರವೂ ದೊಡ್ಡದೆಂದೇ ಹೇಳಬೇಕು, ಆರು ಮಕ್ಕಳು, ಗಂಡ ಹೆಂಡತಿ, ಒಂದು ಆಳು. ದೊಡ್ಡ ಮಗ ಮತ್ತು ಮಗಳು ಮೈಸೂರಿನಲ್ಲಿ ಓದುತ್ತಿದ್ದರು. ಇನ್‌ಸ್ಪೆಕ್ಟರ್ ಅಚ್ಯುತ್ತಯ್ಯ ಯಾವಾಗಲು ಪ್ರವಾಸದಲ್ಲಿರುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಅವರ ಪತ್ನಿ ತಿಂಡಿ ತಿನಸು ಕೊಡುತ್ತಿದ್ದರು. ಅವರ ಮಕ್ಕಳು ಕೇಶವ, ಗಣೇಶ, ಶೋಭ, ಜ್ಯೋತಿ ನಮ್ಮೊಂದಿಗೆ ಬಹಳ ಸಲಿಗೆಯಿಂದ ವರ್ತಿಸುತ್ತಿದ್ದರು. ಅವರ ತಾಯಿಯನ್ನು ನಾವೆಲ್ಲ ಅಮ್ಮ ಎಂದು ಸಂಬೋಧಿಸುತ್ತಿದ್ದೆವು. ಅವರು ಬಂದ ಮೇಲೆ ನಮಗೇನೋ ಒಂದು ಆಶ್ರಯ ಸಿಕ್ಕಿದ ಹಾಗಾಯಿತು.

ಮನೆಯಲ್ಲಿ ಕೂಡಲು ಕುರ್ಚಿಯಾಗಲಿ ಮಲಗಲು ಮಂಚವಾಗಲಿ ಇರಲಿಲ್ಲ. ನಾನು ಮತ್ತು ಮಲ್ಲೇಶ್ ಒಂದು ದಿವಸ ಸಿನೆಮಾಕ್ಕೆ ಸಿಟಿ ಮಾರ್ಕೆಟಿನ ಹತ್ತಿರವಿದ್ದ ಚಿತ್ರಮಂದಿರಕ್ಕೆ ಹೋದೆವು. ಹೌಸ್‌ಫುಲ್ ಆದಕಾರಣ ನಮಗೆ ಟಿಕೆಟ್ ಸಿಗಲಿಲ್ಲ. ಇಬ್ಬರಿಂದ ಇದ್ದದ್ದು ಐದು ರೂಪಾಯಿ. ಹಾಗೆಯೇ ಬಂಬೂ ಬಜಾರಿನಲ್ಲಿ ನಡೆದುಕೊಂಡು ಬಂದು ಯಾವುದಾದರೂ ಸುಲಭ ಬೆಲೆಯ ಮಂಚ ಸಿಕ್ಕಿದರೆ ಕಂತಿನಲ್ಲಿ ಕೊಳ್ಳುವುದೆಂದು ಯೋಚಿಸಿ ಹೋದೆವು. ಒಂದು ಮಂಚಕ್ಕೆ ಇಪ್ಪತ್ತೈದು ರೂಪಾಯಿಯಂತೆ ಎರಡು ಮಂಚ ಖರೀದಿ ಮಾಡಿ ಸಿನೆಮಾಕ್ಕೇಂತ ತಂದಿದ್ದ ಐದು ರೂಪಾಯಿ ಅಡ್ವಾನ್ಸ್‌ಕೊಟ್ಟು ಹೋದೆವು. ಆ ಮಂಚಗಳೆ ನಮಗೆ ಸರ್ವಸ್ವ; ಕೂರಲು, ಮಲಗಲು ಅದರಡಿಗೆ ಸಾಮಾನು ಇಟ್ಟುಕೊಳ್ಳಲು ಎಲ್ಲದಕ್ಕೂ. ಆದರೆ ನಾವಿಬ್ಬರೂ ಆ ಮಂಚದ ಮೇಲೆ ಮಲಗಿದ್ದೇ ಅಪರೂಪ. ನಿತ್ಯ ಬರುತ್ತಿದ್ದ ಗೆಸ್ಟ್‌ಗಳಿಗೇ ಅದು ಮೀಸಲು. ಎಷ್ಟೋ ದಿವಸ ರಾತ್ರಿ ಹತ್ತು ಗಂಟೆಯ ನಂತರ, ಈವತ್ತು ಯಾರೂ ಮಂಚದ ಮೇಲೆ ಮಲಗಲು ಬರುವುದಿಲ್ಲವೆಂದು ಮಲಗಿದ್ದರೆ, ರಾತ್ರಿ ಹನ್ನೆರಡು ಗಂಟೆಗೋ ಒಂದು ಗಂಟೆಗೋ ಯಾರಾದರೂ ಬರುತ್ತಿದ್ದರು!

ಆ ಮನೆಗೆ ನಾವಿದ್ದ ಐದು ವರುಷದಲ್ಲಿ ಸಕಲೇಶಪುರ, ಚಿಕ್ಕಮಗಳೂರು ಕಡೆಯಿಂದ ಅದೆಷ್ಟು ಜನ ಬಂದು ಹೋದರೋ ಲೆಕ್ಕವಿಲ್ಲ! ಅದರಲ್ಲೂ ಹೆತ್ತೂರು ಹೋಬಳಿ ಯಸಳೂರು ಹೋಬಳಿಯಿಂದ ಬೆಂಗಳೂರಿಗೆ ಬರಬಾರದವರೆಲ್ಲ ಬಂದು ನಮ್ಮ ಮನೆಯಲ್ಲಿ ತಂಗಿದ್ದು ಹೋದರು. ಒಮ್ಮೆ ಗೊದ್ದು ಓಡಳ್ಳಿ ಪಟೇಲ್ ತಮ್ಮೇಗೌಡರು ಬಂದಿದ್ದರು. ಸಾಮಾನ್ಯವಾಗಿ ಅವರು ಯಾರ ನೆಂಟರಿಷ್ಟರ ಮನೆಗೂ ಹೋಗಿ ತಂಗಿದ್ದವರಲ್ಲ. ಆಗಿನ ಕಾಲಕ್ಕೆ ಅವರು ಊರಿಗೆ ಲಕ್ಷಾಧೀಶರು. ಅವರು ಓಣಿಯಲ್ಲಿ ಹೋಗುತ್ತಿದ್ದರೆ ಕೂತವರೆಲ್ಲ ಎದ್ದು ನಿಲ್ಲುತ್ತಿದ್ದರು. ಭಯದಿಂದಲ್ಲ, ಭಕ್ತಿಯಿಂದ. ಬಹಳ ಜನಕ್ಕೆ ಉಪಕಾರಿಯೂ ಆಗಿದ್ದರು. ನ್ಯಾಯ ಪಂಚಾಯತಿಗೆ ಕುಳಿತರೆ ಕಡ್ಡಿ ತುಂಡಾದಂತೆ ಮಾತನಾಡುತ್ತಿದ್ದರು. ಸಂಜೆ ಐದು ಗಂಟೆಯ ನಂತರವೇ ಕಳ್ಳು ಕುಡಿಯುತ್ತಿದ್ದರು. ಅದರಲ್ಲೂ ಅವರ ತೋಟದ ಬಗನೆಯಿಂದ ಇಳಿಸಿದ ಕಳ್ಳಾಗಬೇಕಿತ್ತು. ಸಾಲ ಕೇಳುವವರೆಲ್ಲರೂ, ಸಂಜೆಯ ಹೊತ್ತೇ ಹೋಗುತ್ತಿದ್ದರು. ಅವರಿಗೆ ಏನಾದರೂ ಹೇಳಿ ಒಪ್ಪಿಸಿ ನಾಳೆ ಬಾ ಕೊಡುತ್ತೀನಿ ಎಂದು ಹೇಳಿದನಂತರವೇ ಹೋಗುತ್ತಿದ್ದರು. ಕೊಟ್ಟ ಮಾತಿಗೆ ತಪ್ಪುತ್ತಿರಲಿಲ್ಲ. ಕೆಲವು ವರುಷಗಳ ನಂತರ ಅನಾರೋಗ್ಯದ ಕಾರಣಕ್ಕಾಗಿ ಕುಡಿಯುವುದನ್ನು ಬಿಟ್ಟಿದ್ದರು. ಅದಾದನಂತರ ಕೇಳಿದವರಿಗೆಲ್ಲಾ ಸಾಲಕೊಡಲು ವಾಗ್ದಾನ ಮಾಡುತ್ತಿರಲಿಲ್ಲ. ಸಾಲಕ್ಕೆ ಹೋಗುತ್ತಿದ್ದ ಜನರೆಲ್ಲ ಕುಡಿಯುವುದನ್ನು ಬಿಡಲು ಹೇಳಿದ ಡಾಕ್ಟರನ್ನು ಬಯ್ಯುತ್ತಿದ್ದರು.

ತಮ್ಮೇಗೌಡರು ಬೆಂಗಳೂರಿಗೆ ಬಂದಾಗ ಅವರ ಹತ್ತಿರವಿದ್ದ ದುಡ್ಡನ್ನು ಇಡಲು ಕೊಟ್ಟಿದ್ದರು. ಬೆಳಿಗ್ಗೆ ಅವರು ಸ್ನಾನ ಮಾಡುತ್ತಿದ್ದಾಗ ಅವರ ದುಡ್ಡನ್ನಿಟ್ಟರುವ ಜಾಗವನ್ನು ಹೇಳಿ ಬೇಕಿದ್ದಷ್ಟನ್ನು ತೆಗೆದುಕೊಳ್ಳಿ ಎಂದು ಹೇಳಿ ಕಾಲೇಜಿಗೆ ಹೋದೆ. ಇದನ್ನು ಕೇಳಿಸಿಕೊಂಡ ಅಡುಗೆಯ ರಾಮ ಅವರು ಸ್ನಾನದಿಂದ ಬರುವ ಮುಂಚೆಯೆ ಆ ಹಣವನ್ನೆಲ್ಲಾ ತೆಗೆದುಕೊಂಡು ಪರಾರಿಯಾದ. ನಾನು ಸಂಜೆ ಮನೆಗೆ ಬರುವಾಗ ವಿಷಯ ತಿಳಿಯಿತು. ಕೂಡಲೆ ಡಿ.ಐ.ಜಿ. ರೇವಣ್ಣನವರ ಹತ್ತಿರ ಹೋಗಿ ವಿಷಯ ತಿಳಿಸಿದೆ. ಅವರು ಸಂಬಂಧಪಟ್ಟವರಿಗೆಲ್ಲ ಹೇಳಿ ತಲಾಶ್ ಮಾಡಿಸಿದರು. ರಾಮನ ತಮ್ಮ ಒಂದು ಹೋಟಲಿನಲ್ಲಿ ಕೆಲಸ ಮಾಡುತ್ತಿದ್ದ. ಅವನನ್ನು ಪೊಲೀಸರು ವಿಚಾರಿಸುತ್ತೇವೆ ತೋರಿಸಿ ಎಂದು ಆ ಹೋಟಲಿಗೆ ಕರೆದುಕೊಂಡು ಹೋದರು. ನಮ್ಮನ್ನು ನೋಡಿದ ತಕ್ಷಣ ರಾಮ ಅವನ ತಮ್ಮ ಅಲ್ಲಿಂದ ಪರಾರಿಯಾದರು. ಪೊಲೀಸರು ಏನನ್ನೂ ಮಾಡಲಿಲ್ಲ.

ಮತ್ತೊಬ್ಬ ಅಡುಗೆಯವನು ಮನೆಗೆ ಬಂದ ಗೆಸ್ಟುಗಳ ಜೇಬಿನಿಂದ ರಾತ್ರಿ ಎಲ್ಲಾ ಮಲಗಿದ ಮೇಲೆ ದುಡ್ಡು ತೆಗೆಯುತ್ತಿದ್ದ. ಬಹಳ ಜನ ಹೀಗಾಯಿತೆಂದು ಹೇಳುತ್ತಿರಲಿಲ್ಲ. ಏಕೆಂದರೆ ಇಷ್ಟು ಜನ ಹುಡುಗರಿರುವಾಗ ಯಾರು ಮಾಡಿದರೆಂದು ಹೇಳುವುದು. ಒಂದು ದಿನ ಎಲ್ಲರೂ ಏಳುವ ಮುಂಚೆಯೇ ಮನೆಗೆ ಬಂದಿದ್ದವರೊಬ್ಬರ ಜೇಬಿನಿಂದ ರಾತ್ರಿ ಯಾರೋ ದುಡ್ಡು ತೆಗೆದಿದ್ದಾರೆ, ಮಲಗುವಾಗ ನೋಡಿದ್ದು ಈಗಿಲ್ಲ ಎಂದರು. ಮನೆಯಿಂದ ಯಾರೂ ರಾತ್ರಿ ಹೊರಗೆ ಹೋದ ಲಕ್ಷಣವಿರಲಿಲ್ಲ. ಆದ್ದರಿಂದ ಇಲ್ಲಿದ್ದವರೆ ಯಾರೋ ಮಾಡಿರಬೇಕು. ಹುಡುಗರಾರೂ ಆ ಕೆಲಸ ಮಾಡುವವರಲ್ಲ ಮಾಡಿದ್ದರೆ ಅಡುಗೆ ಶಿವಣ್ಣನಿರಬೇಕು. ಆದರೆ ಅವನು ಬಹಳ ನಿಷ್ಠೆಯಿಂದ ಇದ್ದ. ಸಾಮಾನಿಗೆ ಕೊಟ್ಟ ದುಡ್ಡಿನಲ್ಲಿ ಒಂದು ಕಾಸೂ ಮುಟ್ಟುತ್ತಿರಲಿಲ್ಲ. ಬಹಳ ವಿಧೇಯನಾಗಿದ್ದ. ಅವನನ್ನು ಹೇಗೆ ಶಂಕಿಸುವುದು. ಆದರೂ ಮನೆಯನ್ನೆಲ್ಲಾ ಜಪ್ತಿ ಮಾಡುವುದೆಂದು ನಿರ್ಧರಿಸಿ ಹುಡುಕಿದಾಗ ರಾಗಿ ಹಿಟ್ಟಿನ ಡಬ್ಬದಲ್ಲಿ ಹೂಳಿಟ್ಟಿದ್ದು ಸಿಕ್ಕಿತು. ಶಿವಣ್ಣ ನಾನೇ ಮಾಡಿದ್ದೆಂದು ಒಪ್ಪಿಕೊಂಡ. ಕೂಡಲೆ ಅವನನ್ನು ಮನೆಯಿಂದ ಕಳುಹಿಸಿದ್ದಾಯಿತು. ಮುಂದೇನು? ಅಡುಗೆ ಮಾಡುವವರು ಯಾರು? ಈ ಗೆಸ್ಟ್‌ಗಳಿಂದ ಆದ ತಾಪತ್ರಯಕ್ಕೆ ಅನುಭವಿಸುವವರು ಯಾರು? ನಮ್ಮಿಂದ ಯಾರೂ ಏನನ್ನೂ ಕದ್ದುಕೊಂಡು ಹೋಗುವ ಹಾಗಿರಲಿಲ್ಲ. ಏಕೆಂದರೆ ಕದ್ದುಕೊಂಡು ಹೋಗುವಂತಹ ಬೆಲೆಬಾಳುವ ವಸ್ತುಗಳೇನೂ ಇರಲಿಲ್ಲ. ಒಂದು ರೇಡಿಯೋ ಕೂಡ ಇರಲಿಲ್ಲ. ಇದ್ದ ಲೋಟ ತಟ್ಟೆ ನಾವೆಷ್ಟಿದ್ದೆವೋ ಅಷ್ಟೇ ಇದ್ದವು. ಒಂದು ಕಡಿಮೆಯಾದರೂ ಗೊತ್ತಾಗುತ್ತಿತ್ತು. ಜರತಾರಿ ಬಟ್ಟೆಗಳೇನಿರಲಿಲ್ಲ. ಇದ್ದವು ಒಂದೆರಡು ಜೊತೆ ಶರಟು ಪ್ಯಾಂಟು ಪ್ರತಿಯೊಬ್ಬರಿಗೆ. ನನಗೆ ಒಂದೋ ಎರಡೋ ಸೂಟು. ತರುತ್ತಿದ್ದ ಸಾಮಾನು ಅಂದಂದಿಗೆ ಆಗುವಷ್ಟು. ಆದ್ದರಿಂದ ಈ ಮನೆಯಲ್ಲಿ ನಮಗೆ ಕಳ್ಳಕಾಕರ ಭಯವಿರಲಿಲ್ಲ. ಯಾವಾಗಲೂ ತೆರೆದ ಬಾಗಿಲು ಬಂದು ಹೋಗುವವರು ಲೆಕ್ಕವಿಲ್ಲ.

ಒಂದು ಸಾರಿ ಮಲ್ಲೇಶ್‌ರವರ ತಾಯಿ ಮತ್ತು ಅವರ ಚಿಕ್ಕಮ್ಮ ಬಂದಿದ್ದರು. ಕೆಲವು ದಿವಸ ಇದ್ದರು. ಮನೆಯಲ್ಲಿ ಆರು ತಿಂಗಳಿಂದ ಅಡುಗೆ ಮಾಡಿಕೊಂಡಿದ್ದ ಹುಡುಗನನ್ನು ವಿಚಾರಿಸಿದ್ದಾರೆ. ಅವನ ಊರು ಕೇರಿ ಕುಲ ಗೋತ್ರ ಎಲ್ಲ ತಿಳಿದ ಮೇಲೆ ಇಲ್ಲಿ ಊಟ ಮಾಡುವುದಿಲ್ಲ, ಊರಿಗೆ ಕಳುಹಿಸಿಕೊಡಿ ಎಂದು ಒತ್ತಾಯಿಸಿದರು. ಅವರಿಬ್ಬರು ಸಂಪ್ರದಾಯಸ್ಥರು. ಅವನನ್ನು ಬೇರೆ ಕೆಲಸಕ್ಕೆ ಹಾಕಿ ಬೇರೆಯವರನ್ನು ಅಡಿಗೆಗೆ ವ್ಯವಸ್ಥೆ

ಮಾಡಿದ್ದಾಯಿತು. ಎಂದೂ ಆ ಮನೆಯಲ್ಲಿ ನೀನು ಯಾವ ಜಾತಿ, ಎಲ್ಲಿಂದ ಬಂದೆ ಅಥವಾ ಯಾರಿಂದಲಾದರೂ ಶಿಫಾರಸು ತರಬೇಕೆಂದು ಕೇಳಿದವರಲ್ಲ. ಕೈಕಾಲು ಕಣ್ಣು ಸರಿ ಇದ್ದರೆ ಆಯಿತು. ಯಾವ ಅನುಭವವೂ ಬೇಕಿರಲಿಲ್ಲ. ಬಂದ ಹುಡುಗರೆಲ್ಲಾ ಒಳ್ಳೆಯವರಾಗಿಯೇ ಇದ್ದರು. ಕೆಲವರು ಕಳ್ಳತನ ಮಾಡಿದರೆ ಅವರು ಹುಟ್ಟು ಕಳ್ಳರಲ್ಲ. ಕಳ್ಳತನಕ್ಕೆ ಕೈ ಹಾಕುವ ಆಸೆ ಹುಟ್ಟಿಸುವಂತಹ ಪ್ರಸಂಗಗಳು ಉದ್ಭವವಾದಾಗಲೇ ಹಾಗೆ ಮಾಡಿದ್ದಾರೆ, ಅವರ ಸ್ಥಿತಿಯಲ್ಲಿ ನಾವಿದ್ದರೂ ಅದೇ ಮಾಡುತ್ತಿದ್ದೆವು. ಎಷ್ಟೋ ಮನೆಗಳಲ್ಲಿ ಮನೆ ಕೆಲಸದ ಆಳುಗಳಿಗೆ ಈ ಸಂಕಟಕ್ಕೆ ಸಿಲುಕಿಸುವವರು ಮನೆಯವರೇ.

ಮತ್ತೊಬ್ಬ ಹುಡುಗ ಏನನ್ನೋ ತೆಗೆಯಲು ಮೇಲೆ ಹತ್ತಿ ಬಿದ್ದು ಕಾಲು ಮುರಿದುಕೊಂಡ. ಅವನನ್ನು ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡುತ್ತಿದ್ದೆವು. ಅಷ್ಟರಲ್ಲಿ ಮಲ್ಲೇಶ್ರ ಅಣ್ಣ ಸುಬ್ಬೇಗೌಡರು ಬಂದರು. ನೀವು ಅವನನ್ನು ಆಸ್ಪತ್ರೆಗೆ ಸೇರಿಸಿದರೆ ಕನಿಷ್ಠ ಎರಡು ಮೂರು ವಾರಗಳಾದರೂ ಅವನಿಗೆ ಊಟ ತಿಂಡಿ ಕೊಟ್ಟು ನೋಡಿಕೊಳ್ಳಬೇಕು. ಇಲ್ಲಿ ಮನೆಯಲ್ಲಿ ಮಾಡುವವರು ಯಾರು? ನಾನು ಅವನಿಗೆ ಸರಿಪಡಿಸುತ್ತೇನೆಂದು ಹೇಳಿ ಚಾಮರಾಜ ಪೇಟೆಯಲ್ಲಿದ್ದ ಪುತ್ತೂರು ಪಂಡಿತರ ಹತ್ತಿರ ಹಸಿರು ಔಷಧಿ ಹಾಕಿಸಿಕೊಂಡು ಬಂದು ಒಂದೆರಡು ದಿನ ಅವನು ಗಟ್ಟಿಯಾಗಿ ಕಾಲೂರುವುದು ಬೇಡ ನಂತರ ಸರಿಹೋಗುತ್ತದೆ ಎಂದರು. ಒಂದೆರಡು ದಿವಸ ಸುಧಾರಿಸಿದ ಮೇಲೆ ಸರಿಹೋದ. ಅದರಿಂದ ನಮಗೆ ಹೆಚ್ಚಿನ ತೊಂದರೆ ಆಗಲಿಲ್ಲ. ಕೆಲವು ವೇಳೆ ವಿದ್ಯಾವಂತರ ವೈಜ್ಞಾನಿಕ ದೃಷ್ಟಿಗೂ ಹಳ್ಳಿಯವರ ಅನುಭವದ ಜ್ಞಾನಕ್ಕೂ ಎಷ್ಟು ಅಂತರ. ನಮ್ಮ ದೇಶದ ಆರು ಲಕ್ಷ ಹಳ್ಳಿಗಳ ಜನ ಜೀವನ ಸುಧಾರಿಸುಕೊಂಡಿದ್ದರೆ ಸ್ಥಳದಲ್ಲೇ ದೊರೆಯುವ ಅನುಭವ ಅನುಕೂಲಗಳನ್ನು ಉಪಯೋಗಿಸಿಕೊಳ್ಳುತ್ತಿರುವುದರಿಂದ ಆಗಿದೆಯೇ ಹೊರತು ಆಸ್ಪತ್ರೆ ತಜ್ಞರ ಸಹಾಯದಿಂದಲ್ಲ!

ಮಲ್ಲೇಶ್ವರಂನಲ್ಲಿ ಇರುವಾಗ ಚಿನ್ಮಯ ಮಿಷನ್‌ನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಸ್ವಾಮಿ ಚಿನ್ಮಯಾನಂದರವರು ಗೀತಜ್ಞಾನಯಜ್ಞ ಮಾಡುವಾಗ ಬೆಳಿಗ್ಗೆ ಸಂಜೆ ಎರಡು ಹೊತ್ತು ಅಲ್ಲಿಯ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಿತ್ತು. ಪ್ರತಿ ಶನಿವಾರ ಸ್ಟಡಿ ಗ್ರೂಪಿಗೆ ಹೋಗುತ್ತಿದ್ದೆ. ಗೀತ, ಉಪನಿಷತ್‌ಗಳ ಪ್ರವಚನದಲ್ಲಿ ಭಾಗವಹಿಸುತ್ತಿದ್ದೆ. ಆಗ ಮಲ್ಲೇಶ್ವರಂ ವೇಮಾ ಲಾಡ್ಜ್ ಮತ್ತು ಅಲಸೂರಿನ ನೀಲವೇಣಿಯಮ್ಮನ ಮನೆ ಚಿನ್ಮಯ ಮಿಷನ್ನಿನ ಚಟುವಟಿಕೆಗಳಿಗೆ ಕೇಂದ್ರಿಕೃತವಾಗಿದ್ದವು. ನಾನು ಪ್ರತಿ ಶನಿವಾರ ರಾತ್ರಿ ಊಟ ಮಾಡುತ್ತಿರಲಿಲ್ಲ. ಹಣ್ಣು ಹಾಲು ತೆಗೆದುಕೊಳ್ಳುತ್ತಿದ್ದೆ. ಮನೆಯಲ್ಲಿದ್ದ ಹುಡುಗರೆಲ್ಲ ನಮಗೂ ಶನಿವಾರ ಊಟ ಬೇಡ ಹಾಲು ಹಣ್ಣು ತಿನ್ನುತ್ತೇವೆ ಎನ್ನುತ್ತಿದ್ದರು. ಎಲ್ಲರಿಗೂ ಒಂದೂ ಹೊತ್ತು ಹಾಲು, ಹಣ್ಣು ತಿನ್ನುವಷ್ಟು ದುಡ್ಡು ಇರಲಿಲ್ಲ. ಅಂದಿನಿಂದ ಶನಿವಾರ ಹಾಲು ಹಣ್ಣು ತಿನ್ನುವುದನ್ನು ಬಿಟ್ಟೆ.

ಸಮಯ ಸಿಕ್ಕಿದಾಗಲೆಲ್ಲಾ ಶನಿವಾರ ಬಸವನಗುಡಿಯಲ್ಲಿರುವ ರಾಮಕೃಷ್ಣ ಆಶ್ರಮಕ್ಕೆ ಹೋಗುತ್ತಿದ್ದೆ. ಮಲ್ಲೇಶ್ವರಂ ಸರ್ಕಲ್‌ನಿಂದ ಬಸ್ಸು ಹತ್ತಿ ಬಸವನಗುಡಿಯಲ್ಲಿ ಇಳಿದು ವಿದ್ಯಾರ್ಥಿ ಭವನದಲ್ಲಿ ದೋಸೆ ತಿಂದು ಆಶ್ರಮಕ್ಕೆ ಹೋಗಿ ರಾತ್ರಿ ಎಂಟು ಗಂಟೆಯ ನಂತರ ಮನೆಗೆ ಬರುತ್ತಿದ್ದೆ. ಒಮ್ಮೆ ಹೀಗೆ ದೋಸೆ ತಿಂದು ಕಾಫಿ ಕುಡಿದು ಬಿಲ್ಲು ಕೊಡಲು ಹೋದಾಗ ಜೇಬಿನಲ್ಲಿದ್ದ ದುಡ್ಡು ಮಾಯವಾಗಿತ್ತು. ಯಾರೋ ಪಿಕ್‌ಪಾಕೆಟ್ ಮಾಡಿದ್ದರು. ಗಲ್ಲದಲ್ಲಿ

ಕುಳಿತಿದ್ದವರಿಗೆ ನನ್ನ ಮುಖ ಬೆವರಿದ್ದು ನೋಡಿ ಅರ್ಥವಾಯಿತು. ಮುಂದಿನ ಸಾರಿ ಬಂದಾಗ ಕೊಡಿ ಎಂದು ಹೇಳಿ ಬಿಲ್ಲನ್ನು ಟೇಬಲಿನ ಗ್ಲಾಸ್ ಅಡಿ ಇಟ್ಟುಕೊಂಡರು. ವಾಪಸು ಹೋಗುವ ಬಗೆ ಹೇಗೆ? ಬಸ್ ಟಿಕೆಟ್ಟಿಗೆ ಇಪ್ಪತ್ತೈದು ಪೈಸೆ ನನ್ನಲ್ಲಿರಲಿಲ್ಲ. ಆಶ್ರಮಕ್ಕೆ ಹೋಗಿ ಯಥಾಪ್ರಕಾರ ಉಪನ್ಯಾಸ ಕೇಳಿ, ಪೂಜೆ ಭಜನೆ ಪೂರೈಸಿ, ಬಸವನಗುಡಿ ಬಸ್‌ಸ್ಟಾಂಡಿಗೆ ಬಂದು ಬಸ್ಸಿನಲ್ಲಿ ಮುಂದೆ ಕುಳಿತುಕೊಂಡೆ. ಟಿಕೆಟ್ ಕೊಡಲು ಬಂದಾಗ ಕಂಡಕ್ಟರಿಗೆ ಏನು ಹೇಳುವುದು? ಆಗಿದ್ದನ್ನು ನಿಜ ಹೇಳಿ ಇಲ್ಲವೆಂದು ಹೇಳುವುದೆ? ಸುಂಕದವನ ಹತ್ತಿರ ಸುಖ ದುಃಖ ಹೇಳಬೇಡವೆಂದು ಗಾದೆ ಇದೆಯಲ್ಲ. ನಿನ್ನಂಥವರನ್ನು ಕಂಡಿದ್ದೀನಿ ಇಳಿಯಯ್ಯ ಅಂದರೆ ಏನು ಗತಿ? ಕೆಲವು ಸಾರಿ ಮೂರು ನಾಲ್ಕು ಜನ ಹೋಗುವಾಗ ಹಿಂದಿನವರು ಅಥವಾ ಮುಂದಿನವರು ಟಿಕೆಟ್ ತೆಗೆದುಕೊಳ್ಳುತ್ತಾರೆಂದು ಹೇಳಿದ್ದು ನೆನಪಿಗೆ ಬಂತು. ಬಸ್ಸು ತುಂಬುವವರೆಗೆ ಸುಮ್ಮನಿದ್ದೆ. ಕಂಡಕ್ಟರ್ ಮುಂದಿನಿಂದ ಟಿಕೆಟ್ ಕೊಡಲು ಪ್ರಾರಂಭಿಸಿದ. ಹೆಬ್ಬೆರಳನ್ನು ಹಿಂದೆ ಮಾಡಿತೋರಿಸಿ ಹಿಂದಿನವರು ತೆಗೆದುಕೊಳ್ಳುತ್ತಾರೆಂದು ತಿಳಿಸಿ ಕುಳಿತೆ. ಮಲ್ಲೇಶ್ವರಂ ಬರುವ ವೇಳೆಗೆ ಬಸ್ಸಿನಲ್ಲಿ ನಿಲ್ಲಲೂ ಜಾಗವಿರಲಿಲ್ಲ. ಅಂತು ಮಲ್ಲೇಶ್ವರಂ ಸರ್ಕಲ್ಲಿಗೆ ಬಂದು ಇಳಿದು ಮನೆಗೆ ಹೋಗಿ ಅಂದು ನಡೆದ ಕತೆಯನ್ನು ಹೇಳಿದಾಗ ನಮ್ಮನ್ನೆಲ್ಲ ಬಿಟ್ಟು ದೋಸೆ ತಿಂದದ್ದಕ್ಕೆ ತಕ್ಕ ಪ್ರಾಯಶ್ಚಿತ್ತ ವಾಯಿತೆಂದರು ಹುಡುಗರು.

ಬೆಂಗಳೂರಿನಲ್ಲಿ ಬದಲಾವಣೆ ಆಗದಿದ್ದ ಕೆಲವೇ ಹೋಟೆಲ್ ಅಥವಾ ಒಂದೇ ಹೋಟೆಲ್ ಅಂದರೆ ತಪ್ಪಾಗಲಾರದು. ಅದು ಬಸವನಗುಡಿ ವಿದ್ಯಾರ್ಥಿಭವನ. ಗತಗಾಲದಲ್ಲಿ ನಡೆದ ಘಟನೆಗಳನ್ನು ನೆನಸಿಕೊಂಡು ಇತ್ತೀಚೆಗೆ ಹೆಂಡತಿಯನ್ನು ಕರೆದುಕೊಂಡು ಹೋಟಲಿಗೆ ಹೋದರೆ ಆ ಮನೆ, ಅಲ್ಲಿದ್ದ ಆಸನಗಳು, ಸಪ್ಲೈ ಮಾಡುತ್ತಿದ್ದ ರೀತಿ, ಸಂಜೆ ಜನ ಕ್ಯೂ ನಿಲ್ಲುತ್ತಿದ್ದದ್ದು ಏನೂ ಬದಲಾವಣೆಯಾಗಿರಲಿಲ್ಲ. ಹೋಟೆಲಿನ ಮುಂಭಾಗದ ಪುಟ್‌ಪಾತ್ ಮಾತ್ರ ಹಣ್ಣು, ಹೂವು, ತರಕಾರಿ ಮಾರುವರಿಂದ ತುಂಬಿಹೋಗಿತ್ತು.

ಮಲ್ಲೇಶ್ವರಂ ಮನೆಯಲ್ಲಿದ್ದಾಗ ತಿರುಪತಿಗೆ ಹೋಗಿದ್ದು ಮತ್ತು ಪುಟ್ಟಪರ್ತಿಗೆ ಹೋಗಿದ್ದು ಮನಸ್ಸಿನಲ್ಲಿ ಅಚ್ಚಾಗಿ ಉಳಿದಿದೆ. ಮೊದಲ ಬಾರಿಗೆ ತಿರುಪತಿಗೆ ಹೋಗಿದ್ದು ಅತ್ತಿಹಳ್ಳಿ ಬಸವೇಗೌಡ್ರು ಮತ್ತು ಅವರ ಪತ್ನಿ, ನಾನು, ಮೇಲಿನ ಮನೆ ಅಚ್ಯುತ್ತಯ್ಯನವರ ಮಗಳು ಶೋಭ, ಬೆಂಗಳೂರಿನಿಂದ ಬಸ್ಸಿನಲ್ಲಿ ಹೋಗಿ ತಿರುಪತಿಯಲ್ಲಿಳಿದು ಬೆಟ್ಟ ಹತ್ತಿ ಹೋದೆವು. ಬಹುಶಃ ಅದೇ ಮೊದಲು ಮತ್ತು ಕೊನೆ ಬೆಟ್ಟ ಹತ್ತಿದ್ದು. ದೇವಸ್ಥಾನದ ಹತ್ತಿರ ಹೋಗುವಾಗ ರಾತ್ರಿ ಹನ್ನೆರಡರ ಮೇಲಾಗಿತ್ತು. ನಮಗೆ ಛತ್ರಗಳ ಅನುಭವವಿರಲಿಲ್ಲ. ರೂಮ್ ಮಾಡಲೂ ಗೊತ್ತಿರಲಿಲ್ಲ. ಯಾವುದೋ ಒಂದು ಖಾಲಿ ಮನೆ ಇದ್ದ ಹಾಗೆ ಇತ್ತು. ಅಲ್ಲಿಯೇ ಒಂದೆರಡು ಗಂಟೆ ಸುಧಾರಿಸಿದರಾಯಿತೆನ್ನುವಷ್ಟರಲ್ಲಿ ಅದು ಕ್ಷೌರದ ಮನೆ ಎಂದು ಗೊತ್ತಾಯಿತು. ಬಹಳ ಜನ ರಸ್ತೆಯ ಇಕ್ಕೆಲದಲ್ಲಿ ಮಲಗಿದ್ದರು. ದೇವಸ್ಥಾನದ ಹತ್ತಿರವೆ ಮೈದಾನದಲ್ಲಿ ಮಲಗಿದೆವು. ಆದರೆ ಬಸವೇಗೌಡರ ಪತ್ನಿ ಮತ್ತು ಶೋಭ ಕುಳಿತೇ ಇದ್ದರು. ಮೂರೂವರೆ ಗಂಟೆ ಸುಪ್ರಭಾತ ಪ್ರಾರಂಭವಾದ ತಕ್ಷಣ ಎದ್ದವರು ನೆಟ್ಟಗೆ ದೇವಸ್ಥಾನಕ್ಕೆ ಹೋದೆವು. ನೂಕು ನುಗ್ಗಲೇನಿರಲಿಲ್ಲ. ಕ್ಯೂ ಮೊದಲೇ ಇಲ್ಲ. ಬಾಗಿಲಿನಲ್ಲಿ ಮುಂದೆ ಹೋಗಿ ಎಂದು ದಬ್ಬುವರಿರಲಿಲ್ಲ. ಗರ್ಭಗುಡಿಯ ಮುಂದೆ ಹತ್ತಾರು ಜನ ಕುಳಿತಿದ್ದರು. ನಾವು ಮುಂದೆ ಹೋಗಿ ಕುಳಿತೆವು. ವಿಶ್ವರೂಪ ದರ್ಶನ ಆನಂದವಾಗಿ ಮಾಡಿದೆವು. ವರ್ಣಿಸಲಾಗದ ದೃಶ್ಯ. ಅರ್ಧ ಗಂಟೆಗೂ ಹೆಚ್ಚಿಗೆ ನೋಡಿರಬೇಕು.

ಸ್ನಾನ ಜಪ ಮಡಿ ಮತ್ತೇನು ಕಾಣೆವು. ಬೆಳಗಿನ ತನಕ ದೇವಸ್ಥಾನದ ಸುತ್ತಾ ಸುತ್ತಾಡಿದೆವು. ಈಗಿರುವ ಸಾಲಾಗಿ ಹೋಗಲು ಮಾಡಿರುವ ಮೈಲುಗಟ್ಟಲೆ ಕ್ಯೂನಲ್ಲಿ ಸುತ್ತುವ ವ್ಯವಸ್ಥೆ ಏನೂ ಇರಲಿಲ್ಲ. ಆಗ ಅದರ ಅಗತ್ಯವೂ ಇರಲಿಲ್ಲ. ಇದಾದ ನಂತರ ಅದೆಷ್ಟೋ ಬಾರಿ ಹೋಗಿರ ಬಹುದು. ಕ್ಷಣವಾದರೂ ಮೊದಲು ನೋಡಿದ ದೃಶ್ಯವನ್ನು ನೋಡಬೇಕೆಂಬ ಹಂಬಲದಿಂದ ದರ್ಶನ ಮಾಡುವ ಎಲ್ಲಾ ವಿಧಾನಗಳನ್ನು ಅನುಸರಿಸಿದರೂ ಆ ಸೊಬಗು ಮತ್ತೆ ಸಿಗಲಿಲ್ಲ. ಈಗ ಯಾವುದೇ ಸಮಯದಲ್ಲಿ ಹೋದರೂ ಎಷ್ಟೇ ದುಡ್ಡಿನ ಟಿಕೆಟ್ ತೆಗೆದುಕೊಂಡರೂ ಒಂದೆರಡು ನಿಮಿಷ ನಿಂತು ನೋಡುವ ಅವಕಾಶ ಸಿಗದು. ತಿರುಪತಿ ತಿರುಮಲ ಈಗ ಒಂದು ದೊಡ್ಡ ಪಟ್ಟಣವೇ ಆಗಿದೆ. ಸಂತೋಷದ ವಿಷಯವೆಂದರೆ ತಿರುಮಲ ಬೆಟ್ಟ ಮೂವತ್ತೈದು ವರುಷದ ಹಿಂದಿಗಿಂತ ಈಗ ಹಸಿರಾಗಿದೆ. ಮರಗಿಡಗಳು ಪುಷ್ಕಳವಾಗಿ ಬೆಳೆದಿವೆ. ಯಾತ್ರಿಕರಿಗೆ ಬೆಟ್ಟ ಸಮೀಪಿಸುತ್ತಿದ್ದಂತೆಯೇ ದೇವರ ಸಾನಿಧ್ಯಕ್ಕೆ ಹೋಗುತ್ತಿದ್ದೇವೆಂಬ ಭಾವನೆ ಮೂಡುತ್ತದೆ.

ಪುಟ್ಟಪರ್ತಿಗೆ ಹೋದಾಗ ನಾನು, ಮಲ್ಲೇಶ್ ಮತ್ತು ಅವರ ತಾಯಿ, ಅವರ ಊರಿನವರಾದ ಪರಮೇಶ್‌ಗೌಡರ ತಮ್ಮ ಸುಬ್ಬಣ್ಣ ಇದ್ದೆವು. ಹೋಗಲು ಪ್ರೇರಣೆ ಮಲ್ಲೇಶ್‌ರವರ ತಾಯಿ ಮತ್ತು ಸುಬ್ಬಣ್ಣ. ಬಹುಶಃ 1962-63ರ ಸಮಯವಿರಬಹುದು. ಪುಟ್ಟಪರ್ತಿಯಲ್ಲಿ ಪ್ರಶಾಂತ ನಿಲಯ ಬಿಟ್ಟರೆ ಮತ್ತೇನೂ ಇರಲಿಲ್ಲ. ನಾವು ಹೋಗುವಾಗ ಮಧ್ಯಾಹ್ನ ಮೀರಿತ್ತು. ಪ್ರಶಾಂತ ನಿಲಯದ ಮುಂದೆ ಸಾವಿರಾರು ಜನ ಕುಳಿತ್ತಿದ್ದರು. ನಾವು ಕೂಡ ಒಂದೆಡೆ ಕುಳಿತು ಕೊಂಡೆವು. ಸುಮಾರು ಐದು ಗಂಟೆಯ ಸಮಯಕ್ಕೆ ಸಾಯಿಬಾಬ ಒಳಗಿನಿಂದ ಬಂದು ಸಭಿಕರನ್ನೆಲ್ಲಾ ವೀಕ್ಷಿಸುತ್ತಾ ಅಭಯ ಹಸ್ತ ತೋರಿಸುತ್ತಾ ಮಂದಹಾಸ ಬೀರುತ್ತಾ ನಿಧಾನವಾಗಿ ಅವರಿಗಾಗಿಯೇ ಬಿಟ್ಟಿದ್ದ ದಾರಿಯಲ್ಲಿ ನಡೆದು ಬಂದರು. ಹಾಗೆ ಬರುವಾಗ ಕ್ಷಣಕಾಲ ನಿಂತು ಅವರಿವರತ್ತ ದೃಷ್ಟಿ ಬೀರುತ್ತಿದ್ದರು. ಅವರ ಮುಂಬೆರಳನ್ನು ತೋರಿಸಿ ಯಾರನ್ನಾದರೂ ಬರುವಂತೆ ಸನ್ನೆ ಮಾಡುತ್ತಿದ್ದರು. ಬಾಬಾರವರ ಹಿಂದೆ ಒಬ್ಬಿಬ್ಬರು ಜೊತೆ ಇರುತ್ತಿದ್ದರು. ಬಾಬಾರವರು ಕರೆದವರನ್ನು ಗುರುತಿಸಿ ಅವರನ್ನು ಅಲ್ಲಿಯೇ ಇರುವಂತೆ ಹೇಳಿ ಕರೆದಾಗ ಬರುವಂತೆ ಹೇಳಿ ಮುಂದುವರಿಯುತ್ತಿದ್ದರು. ನಮ್ಮ ಹತ್ತಿರ ಬಂದಾಗ ನನ್ನನ್ನು ಮತ್ತು ಮಲ್ಲೇಶನನ್ನು ಕೈ ಸನ್ನೆ ಮಾಡಿ ಬರಲು ಸೂಚಿಸಿದರು. ತಕ್ಷಣ ನಾನು ಎದ್ದು ನಿಂತು ನಾವು ಬಂದಿರುವುದು ಇವರಿಬ್ಬರಿಗಾಗಿ ಅವರನ್ನೂ ಕರೆದುಕೊಂಡು ಬರುವುದಕ್ಕೆ ಅಪ್ಪಣೆಯಾದರೆ ಬರುತ್ತೇವೆಂದೆ. ಅದಕ್ಕೆ ಅವರು ಒಪ್ಪಿಗೆ ನೀಡಿದರು. ಅವರ ಹಿಂದೆ ಬರುತ್ತಿದ್ದವರು, ಕರೆಯುತ್ತೇವೆ ಇಲ್ಲಿಯೇ ಕುಳಿತಿರಿ ಎಂದರು. ನನ್ನ ಪಕ್ಕದಲ್ಲಿದ್ದವರು ರಾಜಾಸ್ಥಾನದಿಂದ ಬಂದು ಒಂದು ವಾರವಾಗಿತ್ತು. ಪ್ರತಿ ದಿನ ಹೀಗೆ ಬಂದು ಕೂರುವುದು, ನಾಳೆ ಕರೆದಾರೆಂದು ಪುನಃ ಬರುತ್ತಿದ್ದರಂತೆ. ಅವರ ಅಂಗಡಿಯನ್ನು ಮುಚ್ಚಿ ವಾರವಾಯಿತು; ಇನ್ಯಾರೂ ಅಂಗಡಿ ಬಾಗಿಲು ತೆಗೆದು ವ್ಯಾಪಾರ ಮಾಡುವವರಿಲ್ಲ; ನನ್ನ ಕರೆದಾರೆಂಬ ನಂಬಿಕೆಯಿಂದ ಇದ್ದೇನೆ ಎಂದು ದೈನ್ಯದಿಂದ ಹೇಳಿದರು. ಅವರಂತೆಯೇ ಸಾವಿರಾರು ಜನ ಎಲ್ಲೆಲ್ಲಿಂದ ಬಂದವರೂ ಕರೆಗೆ ಕಾದು ಕುಳಿತವರು. ದಿನಕ್ಕೆ ಹತ್ತು ಹನ್ನೆರಡು ಜನರನ್ನು ಮಾತ್ರ ಒಳಗೆ ಕರೆಯುತ್ತಿದ್ದರು. ನಾವು ಬಂದಿದ್ದು ಅವರ ದರ್ಶನವಾದರೆ ಸಾಕು ಎಂದುಕೊಂಡಿದ್ದೆವು. ಆದರೆ ನಮ್ಮನ್ನು ಒಳಗೆ ಕರೆದದ್ದು ಅತಿ ಸಂತೋಷವಾಯಿತು. ನಮ್ಮನ್ನು ಒಳಗೆ ಕರೆದ ಮೇಲೆ ಹೋದೆವು. ಒಬ್ಬೊಬ್ಬರನ್ನೇ ಅವರ ಕೋಣೆಗೆ ಬಿಡುತ್ತಿದ್ದರು. ವಿಭೂತಿಯನ್ನು ಹಣೆಗೆ ಇಟ್ಟು ಒಂದೋ ಎರಡೋ ಮಾತಿನಲ್ಲಿ ಅವರವರಿಗೆ ಅನುಸರಿಸಿದ್ದನ್ನು ಹೇಳುತ್ತಿದ್ದರು.

ಎಲ್ಲರೂ ಸಂದರ್ಶನ ಮಾಡಿದ ಮೇಲೆ ನಾವು ಹೊರಡುತ್ತೇವೆಂದು ಹೇಳಿ ಅವರ ಅನುಮತಿಗೆ ಕಾದೆವು. ನಾಳೆ ಹೋಗಿ ಎಂದು ಒಂದೇ ಮಾತಿನಲ್ಲಿ ಬೀಳ್ಕೊಟ್ಟರು. ಹೊರಗೆ ಬಂದು ಎಲ್ಲಿಯಾದರೂ ಇಳಿದುಕೊಳ್ಳುವುದಕ್ಕೆ ಜಾಗವಿದೆಯೇ ಎಂದು ನೋಡಿದರೆ ಮೈದಾನ ಬಿಟ್ಟರೆ ಮತ್ತೇನೂ ಇಲ್ಲ. ನೀರಡಿಕೆ, ಊಟ ತಿಂಡಿ ಪ್ರಶಾಂತ ಮಂದಿರದಲ್ಲಿ ಸಿಕ್ಕುತ್ತಿತ್ತೋ ಏನೋ ಅದನ್ನೂ ವಿಚಾರಿಸಲಿಲ್ಲ. ನಾವೇ ಆಗಿದ್ದರೆ ಅಂದು ರಾತ್ರಿ ಹೇಗೋ ಕಾಲ ಕಳೆಯಬಹುದಿತ್ತು. ವಯಸ್ಸಾದ ಮಲ್ಲೇಶ್‌ರವರ ತಾಯಿಗೋಸ್ಕರ ಅಂದೇ ವಾಪಸು ಹೋಗುವುದೆಂದು ತೀರ್ಮಾನಿಸಿದೆವು. ನಾವು ಉಳಿಯಲು ನಿರ್ಧರಿಸಿದ್ದರೆ ಅಮ್ಮನೂ ಕೂಡ ಒಪ್ಪುತ್ತಿದ್ದರು. ಕಾರಿನಲ್ಲೇ ಅವರಿಗೆ ಮಲಗಲು ವ್ಯವಸ್ಥೆ ಮಾಡಬಹುದಿತ್ತು. ಬರುವಾಗ ಉಳಿಯುವ ಯೋಚನೆ ಇಲ್ಲದಿದ್ದರಿಂದ ಅದಕ್ಕೆ ತಯಾರಾಗಿ ಬಂದಿರಲಿಲ್ಲ. ಬೆಂಗಳೂರಿಗೆ ಮೂರು ಗಂಟೆ ಪ್ರಯಾಣ. ರಾತ್ರಿ ಹತ್ತು ಹನ್ನೊಂದು ಗಂಟೆಗೆ ಊರು ಸೇರಬಹುದೆಂದು ಹೊರಟೆವು. ದಾರಿ ಉದ್ದಕ್ಕೂ ಒಂದಲ್ಲ ಒಂದು ಟೈರು ಪಂಕ್ಚರ್ ಆಗುತ್ತಾ ಬಂದವು. ಬೆಳಗಾಗುವುದರೊಳಗೆ ನಾಲ್ಕು ಟೈರಿಗೂ ಪಂಕ್ಚರ್ ಹಾಕಿಸುವ ಸ್ಥಿತಿ ತಲುಪಿದೆವು. ಹೊರಡುವಾಗ ಎಲ್ಲಾ ಟೈರ್‌ಗಳು ಆ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಮನೆ ತಲಪುವಾಗ ಮಧ್ಯಾಹ್ನವೇ ಆಯಿತು. ಮರುದಿನ ಬೆಳಿಗ್ಗೆ ಹೊರಟ್ಟಿದ್ದರೂ ಅಷ್ಟೇ ಹೊತ್ತಿಗೆ ಮನೆ ಸೇರುತ್ತಿದ್ದೆವು. ಇದು ಬಾಬರವರ ಮಹಿಮೆಯೋ ಅಥವಾ ಪ್ರಯಾಣದಲ್ಲಿ ಒಮ್ಮೊಮ್ಮೆ ಹೀಗಾಗುವುದು ಮಾಮೂಲೋ ತಿಳಿಯಲಾರದೆ ಹೋದೆವು. ಅತ್ತಿಹಳ್ಳಿ ಅಮ್ಮನಂತು ಕೈ ಕೈ ಹಿಸುಕಿಕೊಂಡು ಬಾಬಾರವರು ಹೇಳಿದ ಮಾತನ್ನು ಕೇಳಿದ್ದರೆ ಹೀಗಾಗುತ್ತಿರಲಿಲ್ಲ ದೊಡ್ಡ ತಪ್ಪಾಯಿತೆಂದು ಪಶ್ಚಾತಾಪ ಪಟ್ಟರು.

ಮತ್ತೊಮ್ಮೆ ಬಾಬರವರನ್ನು ನೋಡಲು ಹೋಗಿದ್ದು ಮೂವತ್ತೈದು ವರುಷದ ನಂತರ ವೈಟ್‌ಫೀಲ್ಡ್‌ನಲ್ಲಿ. ನನ್ನ ಎರಡನೆ ಮಗಳು ಸವಿತಳ ಸ್ನೇಹಿತರು ಬಾಬಾರವರ ಪರಮ ಭಕ್ತರು. ಪ್ರತಿವಾರ ಮುಂಜಾನೆ ಐದು ಗಂಟೆಗೆ ಹೋಗಿ ದರ್ಶನ ಮಾಡಿ ಬರುತ್ತಿದ್ದರು. ಒಮ್ಮೆ ಅವರ ಕಾರಿನಲ್ಲಿ ನಾನು, ಸವಿತ, ಮೊಮ್ಮಗ ಶಶಾಂಕ್ ಹೋದೆವು. ವಿಶಾಲವಾದ ಹಾಲ್‌ನಲ್ಲಿ ಸಾವಿರಾರು ಜನರು ಕೂರಲು ಅವಕಾಶವಿತ್ತು. ಬಾಬಾರವರಿಗೆ ಬರಲು ಮಧ್ಯೆ ಮಧ್ಯೆ ದಾರಿ ಯನ್ನು ಬಿಟ್ಟು ಕುಳಿತಿದ್ದರು. ಅಲ್ಲಲ್ಲಿ ಭಕ್ತಾದಿಗಳು ಬಿನ್ನವಿಸುವ ಪತ್ರಗಳನ್ನು ಕೈಗೆ ತೆಗೆದುಕೊಳ್ಳುತ್ತಿದ್ದರು. ಹಾಗೆ ತೆಗೆದುಕೊಂಡ ಪತ್ರಗಳಲ್ಲಿ ಕೇಳಿರುವ ಪ್ರಶ್ನೆಗಳಿಗೆಲ್ಲಾ ಉತ್ತರ ವನ್ನು ಬಾಬಾರವರೆ ಬರೆಯುತ್ತಾರಂತೆ. ಅಲ್ಲಿ ಕುಳಿತಿದ್ದ ಸಾವಿರಾರು ಭಕ್ತಾದಿಗಳಲ್ಲಿ ಶೇಕಡ 50 ಕ್ಕಿಂತ ಹೆಚ್ಚಿನವರು ವಿದೇಶಿಯರು.

ಮಲ್ಲೇಶ್‌ರವರು ಪೋಸ್ಟ್‌ಗ್ರಾಜುಯೇಷ ಇನ್ ಸೊಷಿಯಲ್ ಸೈನ್ಸ್ ಮಾಡುತ್ತಿದ್ದಾಗ ಕೆಲವು ತಿಂಗಳು ಸೆಂಟ್ರಲ್ ಜೈಲಿನಲ್ಲಿ ಅಲ್ಲಿಯ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡುತ್ತಿದ್ದರು. ಯಾರಾದರೂ ಊರಿನ ಕಡೆಯವರು ಮನೆಗೆ ಬಂದು ವಿಚಾರಿಸಿದರೆ, ಅವರು ಸೆಂಟ್ರಲ್ ಜೈಲಿನಲ್ಲಿದ್ದಾರೆಂದು ಅಡಿಗೆಯವನು ಹೇಳುತ್ತಿದ್ದ. ಹೀಗೆ ಬಂದು ಕೇಳಿದವರು ಊರಿಗೆ ಹೋಗಿ ಮಲ್ಲೇಶ್ ಸೆಂಟ್ರಲ್ ಜೈಲಿನಲ್ಲಿದ್ದಾನೆ ಎಂದು ಹೇಳಿದಾಗ ವಿಪರ್ಯಾಸಕ್ಕೆ ಇಟ್ಟುಕೊಳ್ಳುತ್ತಿತ್ತು.

ಒಮ್ಮೆ ಅಷ್ಟಗ್ರಹಗಳು ಒಂದು ಮನೆ ಸೇರಿ ಪ್ರಳಯವಾಗುತ್ತದೆಯೆಂದು ಎಲ್ಲೆಲ್ಲೂ ಗುಲ್ಲು. ನಮ್ಮ ಊರ ನಾಡ ಪಟೇಲ್ ಬಸವೇಗೌಡರು ಒಂದು ದಿನ ಬಂದು ಅವರ ಮಗ ವಿಜಯನನ್ನು

ಕರೆದುಕೊಂಡು ಹೋದರು. ಕಾರಣ ಪ್ರಳಯವಾಗುವ ಸಮಯದಲ್ಲಿ ಮನೆಯವರೆಲ್ಲ ಒಟ್ಟಿಗೆ ಇದ್ದು ಪ್ರಳಯದ ಹಿಂದಿನ ದಿನ ದೊಡ್ಡ ಹಬ್ಬ ಮಾಡಿ ಕೊನೆಯ ಸಾರಿ ಎಲ್ಲರ ಮುಖವನ್ನು ನೋಡಿ ಸಾಯುವುದೆಂದು. ಮನೆಯಲ್ಲಿ ಇನ್ನುಳಿದ ಹುಡುಗರಿಗೇನು ಅನ್ನಿಸಲಿಲ್ಲ. ಪ್ರಳಯದ ದಿನ ಕಳೆದ ಮೇಲೆ ಹಲವಾರು ಕಡೆಯಿಂದ ಪ್ರಳಯದ ಹಿಂದಿನದಿನ ನಡೆದುಕೊಂಡ ಪ್ರಸಂಗಗಳನ್ನು ಕೇಳಲು ಬಹಳ ಸ್ವಾರಸ್ಯವಾಗಿದ್ದವು. ಕೆಲವರ ಮನೆಯಲ್ಲಿ ಇದ್ದ ಕೋಳಿಗಳನ್ನೆಲ್ಲಾ ಕುಯ್ದು ತಿಂದಿದ್ದರೆ ಮತ್ತೆ ಕೆಲವರ ಮನೆಯಲ್ಲಿ ಅವರು ಕುಡಿಯಬೇಕಾಗಿದ್ದೆಲ್ಲವನ್ನು ತರಿಸಿ ಕುಡಿದು ಮಲಗಿದವರು ಎದ್ದು ನೋಡಿದಾಗ ಊಟಕ್ಕಿಲ್ಲದೆ ಪರದಾಡಿದವರೂ ಇದ್ದರು. ಅಂತು ಬುದ್ಧಿವಂತರು ಈ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಂಡರು.

ಬಸಗುಳದ ಡಾ॥ ರಾಜೇಗೌಡರು ಅಮೇರಿಕಾಕ್ಕೆ ಹೋಗುವ ದಿನ ನಾವಿದ್ದ ಮಲ್ಲೇಶ್ವರಂ ಮನೆಯು ಜೇನುಗೂಡಿನಂತಾಗಿತ್ತು. ಅಂದು ಆ ಚಿಕ್ಕಮನೆಯಲ್ಲಿ ಸುಮಾರು 150 ಜನ ಊಟ ಮಾಡಿದ್ದಾರೆ. ರಾಜೇಗೌಡರ ಪತ್ನಿ ಹೆಚ್. ಎಸ್. ಮಲ್ಲೇಗೌಡರ ಪುತ್ರಿ ಗಂಡನೊಡನೆ ಅಮೇರಿಕಾಕ್ಕೆ ಹೋಗುತ್ತಾರೆಂದು ಹೆತ್ತೂರಿಂದ ಒಂದು ಸ್ಪೆಷಲ್ ಬಸ್ ಮಾಡಿ ಬಂದಿದ್ದರು. ಮಲೆನಾಡಿನ ಸಂಪ್ರದಾಯದಂತೆ ಬಂದ ನೆಂಟರಿಗೆಲ್ಲ ಊಟವಾಗಲೇಬೇಕು. ಎಲ್ಲರೂ ಅನುಸರಿಸಿಕೊಂಡು ಹೋಗುವ ಮನಸ್ಸುಳ್ಳವರು. ಅವರವರೇ ಸುಧಾರಿಸಿಕೊಂಡು ಸಹಕರಿಸಿದರು. ಊಟವಂತು ಭರ್ಜರಿಯೆ ಆಗಿತ್ತು. ಆ ಬೀದಿಯಲ್ಲನೇಕರಿಗೆ ಹೊಸ ಹೊಸ ಪಾಕಗಳ ಸುವಾಸನೆ ಇದೇನಿರಬಹುದೆಂದಾಗಿರಬಹುದು. ಎಸಳೂರು, ಹೆತ್ತೂರು ಹೋಬಳಿಯಿಂದ ಹೊರದೇಶಕ್ಕೆ ಹೋದವರಲ್ಲಿ ಡಾ॥ ರಾಜೇಗೌಡ್ರು ಮತ್ತು ಅವರ ಪತ್ನಿ ಎರಡನೆಯವರಾಗಿದ್ದರು (1966). ಈ ಹಿಂದೆ ಡಾ॥ ಹೆಚ್. ಎ. ರಾಮಚಂದ್ರೇಗೌಡರು ಇಂಗ್ಲೆಂಡಿಗೆ ಹೋದಾಗ (1957) ಹೊರ ದೇಶಕ್ಕೆ ಹೋದವರಲ್ಲಿ ಮೊದಲಿಗರಾಗಿದ್ದರು. ಏರ್‌ಪೋರ್ಟ್‌ನಲ್ಲಿ ಬೀಳ್ಕೊಟ್ಟನಂತರ ಅಲ್ಲಿಂದಲೇ ಬಂದವರೆಲ್ಲ ಅವರವರ ಊರಿಗೆ ಹೋದರು. ಹೆಚ್.ಎಸ್. ಮಲ್ಲೇಗೌಡರು ಮತ್ತು ಎ.ಎಂ. ರಾಮೇಗೌಡರು ಮನೆಗೆ ಬಂದು ಅಂದು ತಂಗಿದ್ದರು. ಅಂದು ರಾತ್ರಿ ಮಲ್ಲೇಶ್ ಮತ್ತು ನನ್ನ ಮದುವೆಯ ಪ್ರಸಂಗ ಎತ್ತಿದರು. ಆ ವರುಷದ ಚೈತ್ರ ವೈಶಾಖದಲ್ಲಿ ಮದುವೆ ಮಾಡಬೇಕೆಂದು ನಿರ್ಧರಿಸಿರುವುದಾಗಿ ಹೇಳಿದರು. ನಮ್ಮ ಒಪ್ಪಿಗೆಯನ್ನೇನು ಅವರು ಅಪೇಕ್ಷಿಸಿರಲಿಲ್ಲ. ಹಿರಿಯರೆಲ್ಲ ಹೇಳಿದ ಹಾಗೆ ಕೇಳುವ ಕಾಲ ಆಗಿನ್ನೂ ಇತ್ತು. ಅತ್ತಿಹಳ್ಳಿ ರಾಮೇಗೌಡರು ನನ್ನ ಬಗ್ಗೆ ಅವರ ಮನಸ್ಸಿನಲ್ಲಿ ಏನೋ ತೀರ್ಮಾನ ತೆಗೆದುಕೊಂಡ ಹಾಗಿತ್ತು. ಮಲ್ಲೇಶ್‌ರವರಿಗೆ ಸೂಕ್ತವಾದ ಕಡೆ ನೋಡಬೇಕಿತ್ತು. ಆಗಿನ ಕಾಲಕ್ಕೆ ಮಲ್ಲೇಶ್ ಮನೆಯವರು ಸಕಲೇಶಪುರ ತಾಲ್ಲೂಕಿಗೆ ದೊಡ್ಡ ಏಲಕ್ಕಿ ಬೆಳೆಗಾರರು. ದೊಡ್ಡ ದೊಡ್ಡ ಸಂಬಂಧವಿದ್ದವರು. ಅವರ ತೂಕಕ್ಕೆ ತಕ್ಕಂತೆ ನೋಡಬೇಕಿತ್ತು. ಈ ಕಷ್ಟ ನನಗಿರಲಿಲ್ಲ. ಎಂ.ಎಸ್‌ಸಿ. ಮಾಡಿ ಲೆಕ್ಚರರ್ ಆಗಿರುವುದನ್ನು ಬಿಟ್ಟರೆ ಮತ್ತೇನಿರಲಿಲ್ಲ. ಓದುವ ಕಾಲದಲ್ಲಿ ಮಾಡಿದ್ದ ಸಾಲವನ್ನು ಬಿಟ್ಟರೆ ಮತ್ತೇನನ್ನೂ ಗಳಿಸಿರಲಿಲ್ಲ. ಮದುವೆ ಆಗಲೇಬೇಕೆಂಬ ಕಡ್ಡಾಯವೂ ಇರಲಿಲ್ಲ. ಉಳಿದ ಮೂರು ಜನ ಸಹೋದರರಿಗೆ ಸಾಕಷ್ಟು ಮಕ್ಕಳಿದ್ದರು. ಒಂದು ಸಮಯದಲ್ಲಿ ಅವರಿಗೆಲ್ಲ ವಿದ್ಯಾಭ್ಯಾಸಕ್ಕೆ ನೆರವಾಗಬೇಕೆಂಬ ಮನಸ್ಸು ಇತ್ತು. ನನ್ನ ಸ್ವಾಮಿ, ಸಾಧು ಸಂತರ ಸಂಪರ್ಕ ನೋಡಿ ಕೆಲವರು ಇವನು ಸನ್ಯಾಸಿ ಆಗುವನು, ಮದುವೆ ಆಗುವುದಿಲ್ಲವೆಂದು ತಿಳಿದಿದ್ದರು. ಒಬ್ಬ ಕಾವಿಧಾರಿ

ಸಾಧು ಆಗಾಗ ಮನೆಗೂ ಕೂಡ ಬರುತ್ತಿದ್ದರು. ಪ್ರತಿ ಶುಕ್ರವಾರ ಸಂಜೆ ಮನೆಯಲ್ಲಿ ಭಜನೆ ಮಾಡುತ್ತಿದ್ದೆವು. ಹುಡುಗರೆಲ್ಲ ಸಹಕರಿಸುತ್ತಿದ್ದರು.

ಪ್ರವಾಹದಲ್ಲಿ ನಾನೊಬ್ಬ ನೆರೆಬಂದ ಹಾಗೆ ತೇಲುವ ಸ್ವಭಾವದವನು. ಆದ್ದರಿಂದ ರಾಮೇಗೌಡರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೊ ಅದಕ್ಕೆ ನನ್ನ ಸಮ್ಮತಿ ಎಂದು ಹೇಳಿದ್ದೆ.

ಮಲ್ಲೇಶ್‌ರವರಿಗೆ ಎರಡು ಮೂರು ಕಡೆ ನೋಡಿ ಕೊನೆಗೆ ದುರ್ಗದಹಳ್ಳಿಯ ದೊಡ್ಡ ಕುಟುಂಬದಿಂದ ಹೆಣ್ಣು ಗೊತ್ತಾಯಿತು. ರಾಮೇಗೌಡರ ಮನಸ್ಸಿನಲ್ಲಿದ್ದಂತೆ ಗುಡ್ಡದೂರಿನಿಂದ ಅವರ ಸಂಬಂಧದಲ್ಲಿ ಹುಡುಗಿಯನ್ನು ತರುವುದೆಂದು ತೀರ್ಮಾನಿಸಿ ನಮ್ಮ ಕುಟುಂಬದವರಿಗೆ ಹೇಳಿ ಒಪ್ಪಿಗೆ ಪಡೆದಿದ್ದರು. ಒಂದು ಸಾರಿ ಹೆಣ್ಣು ಕೇಳುವುದಕ್ಕೆಂದು ಒಬ್ಬರ ಮನೆಗೆ ಹೋಗಿ ಹೆಣ್ಣು ಒಪ್ಪಿಗೆಯಾದರೆ ಮುಗಿಯಿತು. ಆ ಮದುವೆ ಆದಂತೆಯೆ. ನೆಂಟರಿಷ್ಟರಿಗೆಲ್ಲ ಸುದ್ದಿ ಹರಡಿ ಮದುವೆಯ ದಿನವನ್ನು ಕಾಯುತ್ತಿರುತ್ತಾರೆ. ನನ್ನ ವಿಷಯದಲ್ಲಿ ಜಾತಕ ನೋಡಿಸಿದ ಮೇಲೆ ಅದು ಸರಿಬರಲಿಲ್ಲವೆಂದು ನಮ್ಮ ಮನೆಯವರಿಗೆ ಒಪ್ಪಿಗೆಯಾಗಿಲ್ಲವೆಂಬ ಸುದ್ದಿ ರಾಮೇಗೌಡ್ರಿಗೆ ತಿಳಿದ ಮೇಲೆ, ಮನಸ್ಸಿಗೆ ಬಹಳ ಬೇಸರ ತಂದುಕೊಂಡು ಮುಂದೇನು ಮಾಡುವುದೆಂದು ಯೋಚಿಸುತ್ತಿದ್ದರು. ಅವರ ಚಿಂತನೆಗೆ ಆಧಾರವೂ ಇತ್ತು. ಗುಡ್ಡದೂರಿನವರು ಈ ಸಂಬಂಧಕ್ಕೆ ಸುಲಭವಾಗಿ ಒಪ್ಪಿರಲಾರರು ಅವರು ದೊಡ್ಡಕಾಫಿ ಬೆಳೆಗಾರರು. ಗುಡ್ಡದೂರು ಬೈರೇಗೌಡರಿಗೆ ಒಂಬತ್ತು ಗಂಡು, ಎಂಟು ಹೆಣ್ಣು ಮಕ್ಕಳು, ಎಲ್ಲರಿಗೂ ಕಾಫಿ ಪ್ಲಾಂಟರ್‌ಗಳಿಂದಲೇ ಸಂಬಂಧ. ಅವರ ಒಬ್ಬ ಮಗನಿಗೆ ರಾಮೇಗೌಡರ ಮನೆಯಿಂದ ಮದುವೆ ಆಗಿತ್ತು. ಆದ್ದರಿಂದ ನನ್ನ ಮನೆಯ ಸ್ಥಿತಿಗತಿಯೆಲ್ಲ ತಿಳಿದಿದ್ದರು. ಆದರೆ ರಾಮೇಗೌಡರ ಮಾತಿಗೆ ಅವರು ಇಲ್ಲ ಎಂದು ಹೇಳುವ ಹಾಗಿರಲಿಲ್ಲ. ಇಷ್ಟೆಲ್ಲ ಆಗಿ ಈಗ ಈ ಸಂಬಂಧ ಬೇಡವೆಂದು ಹೇಗೆ ಹೇಳುವುದು ಎಂದು ರಾಮೇಗೌಡ್ರ ಆತಂಕ. ಈ ಮಧ್ಯೆ ನಡೆದ ಪ್ರಸಂಗಗಳೇನೆಂದು ನಾನು ಅರಿಯೆ.

ರಾಮೇಗೌಡ್ರು ಬೆಂಗಳೂರಿಗೆ ಬಂದು ನಡೆದ ಸಂಗತಿಗಳನ್ನೆಲ್ಲ ಹೇಳಿ ಇದು ನನ್ನ ಮರ್ಯಾದೆಯ ಪ್ರಶ್ನೆ ನೀನೇನು ಹೇಳುತ್ತಿ ಎಂದರು. ನಾನು ಮೊದಲೆ ಹೇಳಿದ್ದೆ, ನಿಮ್ಮ ತೀರ್ಮಾನಕ್ಕೆ ನನ್ನ ಸಮ್ಮತಿ ಎಂದು, ಇಂದೂ ಅದೇ. ನೀವು ಹೇಳಿದ ದಿವಸ ಹೇಳಿದಲ್ಲಿ ಹೇಳಿದ ಹುಡುಗಿ ಯನ್ನು ಮದುವೆಯಾಗುತ್ತೇನೆಂದೆ. ನಾನು ಮದುವೆಯಾಗುವ ಹುಡುಗಿಯನ್ನು ನೋಡಲೂ ಕೂಡ ಹೋಗಿರಲಿಲ್ಲ. ಆದರೆ ಆರೇಳು ವರುಷದ ಹಿಂದೆ ಗುಡ್ಡದೂರಿಗೆ ಹೋಗಿದ್ದಾಗ ಈ ಹುಡುಗಿಯನ್ನು ಮದುವೆಯಾಗುವ ಕನಸನ್ನೂ ಕಂಡಿರಲಿಲ್ಲ.

ಮಲ್ಲೇಶ್ ಮತ್ತು ನನ್ನ ಮದುವೆ ಒಂದೆ ದಿನ ಒಂದೇ ವೇಳೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆಯಬೇಕೆಂದು ತೀರ್ಮಾನವಾಯಿತು. ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಮ್ಮ ಮದುವೆಯೇ ಮೊದಲು ಆಗಿದ್ದು. ಅದಕ್ಕಿಂತ ಮುಂಚೆ ಕುಮಾರಧಾರೆ ಹೊಳೆಯ ಹತ್ತಿರದ ಮಂಟಪದಲ್ಲಿ ಮದುವೆ ಆಗಿ ನಂತರ ನವದಂಪತಿಗಳು ದೇವಸ್ಥಾನಕ್ಕೆ ಹೋಗಿ ಕಾಣಿಕೆ ಒಪ್ಪಿಸುತ್ತಿದ್ದರು. ನಮ್ಮ ಮದುವೆ ದೇವಸ್ಥಾನದಲ್ಲೇ ಆಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿಯ ಒಪ್ಪಿಗೆ ದೊರೆತಿತ್ತು. ಆಡಳಿತ ಮಂಡಳಿಯಲ್ಲಿದ್ದವರು ಬಹುತೇಕ ನಮ್ಮ ಸಂಬಂಧದವರೆ.

ಮದುವೆಯ ಹಿಂದಿನ ರಾತ್ರಿ ಸುಬ್ರಹ್ಮಣ್ಯಕ್ಕೆ ಹತ್ತಿರವಿರುವ ಒಬ್ಬರ ಮನೆಯಲ್ಲಿ ಅತ್ತಿಹಳ್ಳಿ ಪರಮೇಶ್ವರವರು ಒಂದು ದೊಡ್ಡ ಔತಣಕೂಟವನ್ನೇರ್ಪಡಿಸಿದ್ದರು. ಅದನ್ನೆಲ್ಲ ಪೂರೈಸಿಕೊಂಡು ಸುಬ್ರಹ್ಮಣ್ಯಕ್ಕೆ ಹೋಗುವಾಗ ಮಧ್ಯರಾತ್ರಿ ಮೀರಿತ್ತು. ಮದುವೆ ಗಂಡುಗಳಿಗೆಂದು ಒಂದು ಸ್ಪೆಷಲ್ ರೂಮ್ ಬುಕ್ಕಾಗಿತ್ತು. ನಾನು, ಮಲ್ಲೇಶ್ ಮತ್ತು ನಮ್ಮಿಬ್ಬರ ಸ್ನೇಹಿತರಾದ ಹೆಚ್.ಪಿ. ರಾಮಕೃಷ್ಣ ಮತ್ತು ಆರ್ಟಿಸ್ಟ್ ಬಸವರಾಜು ಬಾಗಿಲು ತೆಗೆದು ಒಳಗೆ ಹೋದರೆ ಅಲ್ಲಿದ್ದದ್ದು ಎರಡು ಚಾಪೆ, ಒಂದು ಗಡಿಗೆ, ನೀರು ಅದರ ಮೇಲೆ ಒಂದು ಲೋಟ. ಹಿಂದಿನ ದಿನ ಓಡಾಡಿ ಶ್ರಮವಾದ್ದರಿಂದ ಚಾಪೆ ಕಂಡೊಡನೆ ಎಲ್ಲರೂ ಉರುಳಿಕೊಂಡೆವು. ಸ್ವಲ್ಪ ಸಮಯದ ನಂತರ ಎಲ್ಲರೂ ಎದ್ದು ಕುಳಿತೆವು. ಟಾರ್ಚ್ ಹಾಕಿ ನೋಡಿದರೆ ಇರುವೆಗಳ ದಂಡಿದ್ದಂತೆ ತಿಗಣೆಗಳು. ಆ ಪಾಟಿ ತಿಗಣೆಗಳನ್ನು ಹಿಂದೆಂದೂ ನೋಡಿರಲಿಲ್ಲ. ಮದುವೆಯಾಗುವ ಗಂಡುಗಳಿಗೆ ಈ ಸತ್ಕಾರವೇ ಎಂದು ಹೆಚ್.ಪಿ. ರಾಮಕೃಷ್ಣ ಮರುಗುತ್ತಿದ್ದರು. ಯಾರಿಗೂ ಏನನ್ನೂ ಹೇಳುವಂತಿರಲಿಲ್ಲ. ಎಡ ಬಲಕ್ಕೆ ಯಾರೂ ಇರಲಿಲ್ಲ. ಮದುವೆಗೆ ಬರುವವರೂ ಮತ್ತು ವಧುಗಳು ಮದುವೆಯ ದಿನ ಮುಂಜಾನೆ ಬರುವ ವ್ಯವಸ್ಥೆ ಇತ್ತು. ಮುಂದೆ ಜೀವನದಲ್ಲಿ ಅನುಭವಿಸಬೇಕಿದ್ದ 'ತಿಗಣೆಕಾಟವನ್ನು' ಇಂದೆ ಅನುಭವಿಸಿ ಪೂರೈಸುವುದೆಂದು ಬೆಳಕರಿಸಿದೆವು.

ಮದುವೆಯ ಮಂಟಪ, ಚಪ್ಪರ ಮತ್ತು ವಾದ್ಯ, ಹಿಂದೆಂದೂ ಸುಬ್ರಹ್ಮಣ್ಯದಲ್ಲಿ ನೋಡದಂತಹ ಭರ್ಜರಿಯ ಏರ್ಪಾಡಾಗಿದ್ದವು. ಕೂಜುಗೋಡು ಅಣ್ಣಾಜಿಗೌಡ್ರು ಇವುಗಳ ವ್ಯವಸ್ಥೆಯೆಲ್ಲವನ್ನು ಮಾಡಿದ್ದರು. ಸ್ವಕಾರ್ಯ ದೇವರಕಾರ್ಯವೆರಡೂ ಇದ್ದದರಿಂದ ಜನರಂತು ಸಾಕಷ್ಟು ಬಂದಿದ್ದರು. ಗರ್ಭಗುಡಿಯ ಸುತ್ತ ಒಳಾಂಗಣದಲ್ಲಿ ಜನರೆಲ್ಲ ಊಟಕ್ಕೆ ನೆರೆದಿದ್ದರೂ ಬಡಿಸುವುದು ತಡವಾದ್ದರಿಂದ ಸ್ವಸಹಾಯ ಪದ್ಧತಿಯಂತೆ ಮದುವೆಗೆ ಬಂದವರೆ ಬಡಿಸಲು ಪ್ರಾರಂಭಿಸಿದರು. ಇವೆರೆಲ್ಲ ಮುಟ್ಟಿ ಮೈಲಿಗೆಯಾಯಿತೆಂದು ಅಡುಗೆಯ ಭಟ್ಟರು ಮತ್ತು ಬಡಿಸುವವರು ಊಟ ಮಾಡಲಿಲ್ಲ ಮತ್ತು ಬಡಿಸಲೂ ಇಲ್ಲ. ಅಲ್ಲಿಯ ಸಂಸ್ಕೃತಿ ತಿಳಿಯದೆ ಈ ಅಚಾತುರ್ಯ ನಡೆಯಿತು.

ಮದುವೆಯ ನಂತರ ನಡೆಯಬೇಕಾದ ಶಾಸ್ತ್ರಗಳನ್ನೆಲ್ಲಾ ಪೂರೈಸಿ ಬೆಂಗಳೂರಿಗೆ ದಂಪತಿಗಳು ಹೊರಡುವ ಸಿದ್ಧತೆಗಳು ನಡೆಯುತ್ತಿದ್ದವು. ಮಾವನವರ ಮನೆ ಜೀಪಿನಲ್ಲಿ ಹತ್ತಿರದ ನೆಂಟರ ಮನೆಗಳಿಗೆಲ್ಲಾ ಹೋಗಿ ಬಂದು ಮರುದಿನ ಗುಡ್ಡದೂರಿಗೆ ಹೋಗಿ ನಂತರ ಬೆಂಗಳೂರಿಗೆ ಹೋಗುವುದೆಂದು ಎಲ್ಲರೂ ನಮ್ಮ ಮನೆಯಲ್ಲಿ ಮಲಗಿದ್ದೆವು. ನಮ್ಮ ಮಾವ ಗುಡ್ಡದೂರು ಬೈರೇಗೌಡರು ಜೊತೆಯಲ್ಲಿ ಇದ್ದರು. ಹೆಂಗಸರೆಲ್ಲ ಒಳಗೆ ಮಲಗಿದ್ದರು. ಗಂಡಸರೆಲ್ಲ ಜಗಲಿಯಲ್ಲಿ ಮಲಗಿದ್ದೆವು. ರಾತ್ರಿ ಸುಮಾರು ಎರಡು ಗಂಟೆ ಅಂದರೆ ಬೆಳಗಿನಜಾವ ಎರಡು ಗಂಟೆಗೆ ಗುಡ್ಡದೂರಿನಿಂದ ನನ್ನ ಒಬ್ಬ ಭಾವನೂ ಸೇರಿದಂತೆ ಜನ ಬಂದಿದ್ದರು. ಮದುವೆಯ ಓಡಾಟದಲ್ಲಿ ಬಹಳ ದಣಿವಾಗಿದ್ದರಿಂದ ಗಾಢ ನಿದ್ರೆ ಹತ್ತಿತ್ತು. ನನ್ನನ್ನು ಬಲವಂತವಾಗಿ ಎಬ್ಬಿಸಿದರು. ಕಣ್ಣು ಬಿಟ್ಟು, ನೋಡುವುದರೊಳಗೆ ನನ್ನನ್ನು ಸುತ್ತುಗಟ್ಟಿದ್ದರು. ಬಹಳ ಅರ್ಜೆಂಟಾಗಿ ಗುಡ್ಡದೂರಿಗೆ ಹೋಗಬೇಕಾಗಿದೆ ಏಳಿ ಅಂದರು. ಏನೊ ಅಚಾತುರ್ಯವಾಗಿರಬೇಕೆಂದು ಎದ್ದು ನೋಡಿದಾಗ ಮಾವನವರು ನಿಟ್ಟುಸಿರು ಬಿಡುತ್ತಿದ್ದರು. ನನ್ನ ಪತ್ನಿ ಶಾರದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಏನಾಯಿತು ಈ ರಾತ್ರಿ ಇಷ್ಟೇಕೆ ಅಳುತಿದ್ದೀ ಎಂದು ಕೇಳಿದೆ. ಅಕ್ಕ ಹೋಗಿಬಿಟ್ಟರಂತೆ ಅಂದಳು. ಅವರ ಮನೆಯವರೆಲ್ಲ ತಾಯಿಯನ್ನು ಅಕ್ಕ ಎಂದು ಕರೆಯುತ್ತಿದ್ದರು. ನನಗೆ ಇನ್ನೂ ಅವರು ಸರಿಯಾಗಿ

ಪರಿಚಯವಾಗಿರಲಿಲ್ಲ. ಪಕ್ಕದಲ್ಲಿದ್ದವರು ನಿಮ್ಮ ಅತ್ತೆ ತೀರಿಕೊಂಡರಂತೆ ನೀವೆಲ್ಲ ತಕ್ಷಣ ಹೊರಡಬೇಕಂತೆ ಎಂದರು. ಏನಾಗಿತ್ತು ಹೇಗಾಯಿತೆಂದು ವಿಚಾರಮಾಡುವಷ್ಟು ತಿಳಿಯಲಿಲ್ಲ. ತಕ್ಷಣ ಮನಸ್ಸಿನಲ್ಲಾದ ಪರಿವರ್ತನೆ, ಮದುವೆಯ ಹೆಣ್ಣು ಅಥವಾ ಗಂಡು ಕಾಲಿಟ್ಟ ಲಕ್ಷಣ ಎಂದು ಎಲ್ಲರೂ ಅಂದುಕೊಳ್ಳುವರು. ಎರಡು ವಾರಗಳ ಮುಂಚೆ ನಮಗೆಲ್ಲ ಪ್ರೀತಿ ಪಾತ್ರರಾಗಿದ್ದ ನಮ್ಮ ಚಿಕ್ಕಮ್ಮ (ಮಾಗೇರಿ ದೊಡ್ಡವ್ವ, ಜಿ.ಡಿ. ರಾಮೇಗೌಡರ ತಾಯಿ) ಇಷ್ಟೇ ಹಠಾತ್ತನೆ ತೀರಿಕೊಂಡಿದ್ದರು. ಕುಟುಂಬದಲ್ಲಿ ಸಾವಾದರೆ ಮದುವೆ ಮುಂದೂಡುವುದು ಸ್ವಾಭಾವಿಕ. ಆದರೆ ಎರಡು ಮದುವೆ ಒಂದೆ ದಿನವಿದ್ದರಿಂದ ಮುಂದೂಡುವುದು ಬೇಡ ಎಂದು ನಿರ್ಧರಿಸಿದ್ದರು. ಜಿ.ಡಿ. ರಾಮೇಗೌಡರಿಗೆ ನಾನು ತಮ್ಮನಾದರೆ ಮಲ್ಲೇಶ್ ಅವರ ಪತ್ನಿಯ ತಮ್ಮ.

ಮಾವನವರಿಗೆ ನನ್ನ ಅತ್ತೆ ಮೂರನೆ ಹೆಂಡತಿ. ಮೊದಲನೆಯವರು ಮೂರು ಮಕ್ಕಳ ನಂತರ ತೀರಿಕೊಂಡ ಮೇಲೆ ನನ್ನ ಅತ್ತೆಯ ಅಕ್ಕನನ್ನೇ ಎರಡನೆ ಮದುವೆಯಾಗಿದ್ದರು. ಅವರೂ ಕೂಡ ನಾಲ್ಕು ಮಕ್ಕಳನಂತರ ತೀರಿಕೊಂಡಾಗ, ಜಿ.ಬಿ. ಈರೇಗೌಡರು ಎದೆ ಹಾಲು ಕುಡಿಯುವ ಮಗು, ಆ ಮಗುವಿಗೋಸ್ಕರ ನೀನು ಇವರನ್ನು ಮದುವೆ ಆಗಲೇಬೇಕೆಂದು ನನ್ನ ಅತ್ತೆಯ ತಂದೆ ಒತ್ತಾಯಿಸಿ, ಹೆಣ್ಣಿಗೂ ಗಂಡಿಗೂ ವಯಸ್ಸಿನಲ್ಲಿ ಬಹಳ ಅಂತರವಿದ್ದರೂ ಮದುವೆ ಮಾಡಿದ್ದರಂತೆ. ಅವರೂ ಕೂಡ ಈಗ ಗಂಡನಿಗಿಂತ ಮುಂಚೆ ತೀರಿಕೊಂಡರು. ಎಷ್ಟೇ ಮಕ್ಕಳಿದ್ದರೂ ಇಳಿ ವಯಸ್ಸಿನಲ್ಲಿ ಹೆಂಡತಿಯಷ್ಟು ಸಹ ಬಾಳ್ವೆ ನಡೆಸಲಾರರು. ಇಷ್ಟಾಗಿದ್ದರೂ ಮಾವನವರು ಸಮತ್ವವನ್ನು ಕಳೆದುಕೊಳ್ಳದೆ ಮಕ್ಕಳಿಗೆಲ್ಲ ಧೈರ್ಯತುಂಬುತ್ತಿದ್ದರು.

ಗುಡ್ಡದೂರು ಬೈರೇಗೌಡರ ಮನೆ ಮುಂದುವರಿದ ದೊಡ್ಡ ಕುಟುಂಬವಾದರೂ ಅನುಕೂಲಕ್ಕೆ ಬರಬೇಕಾದರೆ ನಮ್ಮ ಅತ್ತೆಯವರೇ ಕಾರಣವೆಂದು ಮಾವ ಪದೇ ಪದೇ ಹೇಳುತ್ತಿದ್ದರು. ನೂರಾರು ಎಕರೆ ಆಸ್ತಿ ಮಾಡಿದ್ದೆಲ್ಲ ಅವರ ಧೈರ್ಯದಿಂದ. ತಮ್ಮಲ್ಲಿದ್ದ ಒಡವೆಗಳನ್ನೆಲ್ಲಾ ಅಡವಿಟ್ಟು ಆಸ್ತಿ ಕೊಂಡಿದ್ದರಂತೆ. ಅವರದೂ ಅಂತ ಅವರ ಮನೆಯಲ್ಲಿ ಒಂದು ಪೆಟ್ಟಿಗೆ ಅಥವಾ ಬೀಗದ ಕೈ ಕೂಡ ಇರಲಿಲ್ಲವೆಂದು ಅವರ ಸೊಸೆಯವರು ಹೇಳು ತ್ತಿದ್ದರು. ಇವರ ಏಳು ಗಂಡು ಮಕ್ಕಳು, ಮೂರು ಹೆಣ್ಣು ಮಕ್ಕಳ ಪೈಕಿ ನನ್ನ ಪತ್ನಿ ಶಾರದೆ ಕೊನೆಯ ಮಗಳು. ಶಾರದೆಯ ವ್ಯಾಸಂಗ ಹೈಸ್ಕೂಲು ಪೂರೈಸಿತ್ತು. ಮದುವೆಯ ಹಿಂದಿನ ವರುಷ ಸ್ಕೂಲ್ ಬಿಟ್ಟಿದ್ದಳು. ಮನೆಯಲ್ಲಿ ಐದು ಜನ ಅತ್ತಿಗೆಯವರು, ತಾಯಿ ಮತ್ತು ಅಷ್ಟೇ ಜನ ಮನೆ ಕೆಲಸಕ್ಕೆ ಇದ್ದುದರಿಂದ ಮನೆ ಕೆಲಸದ ಅನುಭವವೇನಿರಲಿಲ್ಲ. ಬೆಂಗಳೂರಿನಲ್ಲಿ ಹೊಸ ದಾಗಿ ಸಂಸಾರ ಹೂಡಬೇಕಾದರೆ ತಾಯಿಯ ಸಹಾಯ ಅಗತ್ಯವಿತ್ತು. ಆ ಸಮಯದಲ್ಲಿ ತಾಯಿಯನ್ನು ಕಳೆದುಕೊಂಡವಳಿಗೆ ಎಷ್ಟು ಆಘಾತವಾಗಿರಬಹುದೆಂದು ಊಹಿಸಬಹುದು.

ಗುಡ್ಡದ ಮನೆ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲ್ಲೂಕುಗಳಿಗೆ ಚಿರಪರಿಚಿತ. ಮಲೆನಾಡಿನ ಅವಿಭಾಜ್ಯ ದೊಡ್ಡ ಕುಟುಂಬಗಳ ಗೌಡಿಕೆಯ ಎಲ್ಲ ನಡೆವಳಿಕೆಗಳನ್ನು ಇಲ್ಲಿ ನೋಡಬಹುದಿತ್ತು. ಎಲ್ಲರಿಗೂ ಸ್ಥಾನಮಾನದ ಮೇಲೆ ಅಭಿಮಾನ. ಸಾಹುಕಾರ, ಮ್ಯಾನೇಜರ್, ರೈಟರ್, ಮೇಸ್ತ್ರಿ, ಆಳು, ಹರಿಕಾರ ಎಲ್ಲರಿಗೂ ಎಲ್ಲಿ ನಿಂತು ಮಾತಾಡಬೇಕೆಂದು ಅವರವರಿಗೆ ತಿಳಿದಿತ್ತು. ಎಲ್ಲಾ ಇದ್ದರೂ ಹಾಸ್ಯ ಪ್ರಜ್ಞೆಯ ಕೊರತೆ ಎದ್ದು ಕಾಣುತ್ತಿತ್ತು. ಒಮ್ಮೆ ಇವರ ಮನೆಯಲ್ಲಿ ನನ್ನ ಹಾಸ್ಯ ಪ್ರವೃತ್ತಿಯನ್ನು ಪ್ರದರ್ಶಿಸಿ ಪೀಕಲಾಟಕ್ಕೆ ಸಿಕ್ಕಿಬಿದ್ದೆ. ಮಲೆನಾಡಿನ ಮದುವೆಗಳಲ್ಲಿ ಮದುಮಗಳಿಗೆ ಮೈ ತುಂಬಾ ಆಭರಣ ಹಾಕುವ ವಾಡಿಕೆ ಈಗಲೂ ಇದೆ.

ಎಷ್ಟೇ ಅನುಕೂಲಸ್ಥರಿದ್ದರು, ತಲೆಯಿಂದ ಕಾಲಿನವರೆಗೆ ತುಂಬುವ ಒಡವೆಗಳೆಲ್ಲ ಒಬ್ಬರ ಮನೆಯಲ್ಲಿಯೇ ಇರುವುದಿಲ್ಲ. ಕೆಲವನ್ನು ಇದ್ದವರ ಮನೆಯಿಂದ ತಂದು ಮದುವೆ ಮುಗಿಯುವವರೆಗೆ ಅಲಂಕರಿಸಿ ವಾಪಸು ಕೊಡುತ್ತಿದ್ದರು. ಜಡೆ ಬಂಗಾರ, ಹತ್ತಕಟ್ಟು, ಏಳೆಸರ, ನಡುಪಟ್ಟಿ ಮುಂತಾದವನ್ನು ಕೆಲವರು ಮದುವೆಗೋಸ್ಕರವೇ ಮಾಡಿಸಿಟ್ಟಿರುತ್ತಾರೆ. ಕೇಳಿದವರಿಗೆ ಸಂಕೋಚವಿಲ್ಲದೆ ಕೊಡುತ್ತಾರೆ. ಶಾರದೆಯೂ ಕೂಡ ಇಂತಹವೆಲ್ಲವನ್ನು ಧರಿಸಿದ್ದಳು. ನನಗೆ ಮೊದಲಿನಿಂದಲೂ ಒಡವೆ ವಸ್ತ್ರಗಳ ಮೇಲೆ ವ್ಯಾಮೋಹವಿಲ್ಲ. ಎಷ್ಟೋ ಬಾರಿ ಅವರಿವರ ಒಡವೆ ಖರೀದಿ ಮಾಡಲು ಆಗಾಗ ಅವೆನ್ಯೂ ರಸ್ತೆಯ ಸ್ವರ್ಣಮಹಲಿಗೆ ಶಾರದೆ ಜೊತೆ ಹೋಗುತ್ತಿದ್ದಾಗ ನಾನು ಹೊರಗಡೆ ನಿಂತಿರುತ್ತಿದ್ದೆ. ನಾನು ಅವಳ ಗಂಡ ಅನ್ನುವುದು ಇಂದಿಗೂ ಅವರಿಗೆ ತಿಳಿದಿರಲಾರದು. ಏಕೆಂದರೆ ನನ್ನ ಮುಖ ನೋಡಿದರೆ ಚಿನ್ನ ಕೊಳ್ಳುವವನಂತೆ ಕಾಣುತ್ತಿರಲಿಲ್ಲ. ಮದುವೆಯಾಗಿ ಮೂರು ದಿನದ ನಂತರ ಬೇರೆಯವರ ಒಡವೆಗಳನ್ನು ಬಿಚ್ಚಿಕೊಡುವ ಸಮಯದಲ್ಲಿ ನನ್ನ ಕಣ್ಣು ಅತ್ತ ಹಾಯಿತು. ಹೆಗ್ಗಡತಿಯವರೆಲ್ಲರೂ ಸುತ್ತುಗಟ್ಟಿದ್ದರು. ಅವರಿಗೆಲ್ಲ ಕೇಳುವಂತೆ, ಮದುವೆಯ ದಿನ ಹಾಕಿದ್ದ ಒಡವೆಗಳ ಸಹಿತ ಕಳುಹಿಸಿದರೆ ಶಾರದೆಯನ್ನು ಕರೆದುಕೊಂಡು ಹೋಗುತ್ತೇನೆ, ಇಲ್ಲದಿದ್ದರೆ ಅವಳು ಇಲ್ಲಿಯೆ ಇರಬೇಕೆಂದು ತಮಾಷೆಗೆ ಹೇಳಿದೆ. ತಕ್ಷಣ ಮನೆಯೇ ಮೌನವಾಯಿತು. ಹತ್ತು ಇಪ್ಪತ್ತು ನಿಮಿಷ ಯಾರೂ ಹೊರಗೆ ಬರಲಿಲ್ಲ. ಒಳಗೆ ಹೋಗಿ ನೋಡಿದಾಗ ಒಡವೆ ಕೊಟ್ಟವರಿಗೆ ಏನು ಹೇಳುವುದು ಎಂದು ಎಲ್ಲರೂ ಗುಸುಗುಸು ಅನ್ನುತ್ತಿದ್ದರು. ಕೆಲವರು ಕಣ್ಣೀರು ಒರಸಿಕೊಳ್ಳುತ್ತಿದ್ದರು. ಮಾತಾಡಿದ್ದೆಲ್ಲ ನಿಜವೆಂದು ತಿಳಿಯುವ ಈ ಮುಗ್ಧ ಜನರ ಮುಂದೆ ನಾನೇಕೆ ಹೀಗೆ ಅಂದೆ ಎಂದು ಪಶ್ಚಾತಾಪ ಪಟ್ಟುಕೊಂಡು ಅವರಿಗೆಲ್ಲಾ ಸಮಾಧಾನ ಮಾಡಬೇಕಾದರೆ ಸಾಕಾಯಿತು. ಅಂದಿನಿಂದ ಆ ಮನೆಯಲ್ಲಿ ನನ್ನ ಹಾಸ್ಯ ಪ್ರವೃತ್ತಿಯನ್ನು ಪ್ರದರ್ಶಿಸುತ್ತಿರಲಿಲ್ಲ.

ನಾನು ಮದುವೆ ಆದಾಗ ಮಾವನವರಿಗೆ ವಯಸ್ಸು 80 ದಾಟಿತ್ತು. ಅವರ ಹಿರಿಯ ಮಗನಿಗೆ ಅರವತ್ತರ ಮೇಲೆ ವಯಸ್ಸಾಗಿತ್ತು. ಅವರಿಬ್ಬರು ಒಂದೇ ಸಮ ಕಾಣುತ್ತಿದ್ದರು. ಅವರ ಟೋಪಿ, ಕೋಟು, ಪಂಚೆ, ಮಾತನಾಡುವ ಶೈಲಿ ಎಲ್ಲ ಒಂದೆ. ಮದುವೆಯ ನಂತರ ನಮ್ಮ ಊರಿಗೆ ಹೋಗಿ ಮಾವನ ಮನೆಗೆ ಬಂದಾಗ ಕೆಲವು ಶಾಸ್ತ್ರಗಳನ್ನು ಮಾಡಿದ ನಂತರ ಅತ್ತೆಮಾವನವರಿಗೆ ನಮಸ್ಕಾರ ಮಾಡಬೇಕಿತ್ತು. ಮಾವನವರಿಗೆ ನಮಸ್ಕಾರ ಮಾಡಿ ಎಂದು ಜಗಲಿಯಲ್ಲಿ ಎದುರು ಬದರು ಕುಳಿತಿದ್ದ ಮಾವ ಮತ್ತು ದೊಡ್ಡ ಭಾವನವರ ಕಡೆ ತೋರಿಸಿದರು. ನನಗೆ ಇವರಲ್ಲಿ ಮಾವ ಯಾರು, ಭಾವ ಯಾರು, ಎಂದು ತಕ್ಷಣ ಗೊತ್ತಾಗಲಿಲ್ಲ. ಮಾವನ ವರನ್ನು ಬಿಟ್ಟು ಭಾವನವರಿಗೆ ನಮಸ್ಕರಿಸಲು ಹೋದಾಗ ಅವರಲ್ಲ ಇವರು ಎಂದು ಮಾವನ ಕಡೆ ಕೈ ತೋರಿಸಿದರು.

ಮಾವನವರು ತೊಂಭತ್ತೈದರ ಇಳಿ ವಯಸ್ಸಿನಲ್ಲಿ ಕನ್ನಡಕವಿಲ್ಲದೆ ವೃತ್ತ ಪತ್ರಿಕೆ ಗಳನ್ನು ಓದುತ್ತಿದ್ದರು. ಇವರು ವರುಷಕ್ಕೆ ಒಂದೆರಡು ಬಾರಿ ಕೆಂಜಿರುವೆ ಚಟ್ನಿ ಮಾಡಿ ತಿನ್ನುತ್ತಿದ್ದರಂತೆ. ಮಲೆನಾಡಿನ ಮರಗಳ ಮೇಲೆ ಎಲೆಗಳನ್ನು ಶೇಖರಿಸಿ ಗೂಡುಕಟ್ಟಿಕೊಂಡಿರುವ ಇರುವೆಗಳು ಸಾಕಷ್ಟು ಸಿಗುತ್ತವೆ. ಹಿಂದಿನವರು ವರುಷದಲ್ಲಿ ಒಂದೆರಡು ಬಾರಿ ಇವುಗಳನ್ನು ತಂದು ಹುರಿದು ಚಟ್ನಿ ಮಾಡಿ ಉಪಯೋಗಿಸುತ್ತಿದ್ದರಂತೆ. ಈಗಲೂ ಇರುವೆ ತಿಂದರೆ ಕಣ್ಣು ಕಾಣುತ್ತದೆ ಎಂದು ಹೇಳುವ ಸಾಮಾನ್ಯ ಮಾತಿನಲ್ಲಿ ಸತ್ಯವಿರಬಹುದೆಂದು ನಮ್ಮ ಮಾವನವರ

ಉದಾಹರಣೆಯಿಂದ ತಿಳಿಯಬಹುದು. ಇದನ್ನು ವೈಜ್ಞಾನಿಕವಾಗಿ ಸಂಶೋಧಿಸುವುದು ಸೂಕ್ತ. ಪ್ರಪಂಚದ ಹಲವಾರು ಕಡೆ ಇಂತಹ ಇರುವೆಗಳನ್ನು ತಿನ್ನುವವರು ಅನೇಕರಿದ್ದಾರೆ. ನೈಜೀರಿಯಾದಲ್ಲಿ ರಾಶಿರಾಶಿಯಾಗಿ ಗೆದ್ದಲನ್ನು ಹುರಿದು ಸಂತೆಯಲ್ಲಿ ಮಾರುವುದನ್ನು ನೋಡಿದ್ದೇನೆ. ಗೆದ್ದಲಿನ ಜೀವಂತ ರಾಣಿ ಹುಳವನ್ನು ನುಂಗುವವರನ್ನು ಇಲ್ಲಿಯೂ ಕಂಡಿದ್ದೇನೆ. ಗೆದ್ದಲಿನ ರಾಣಿಯನ್ನು ನುಂಗಿದರೆ ವೀರ್ಯವತ್ತಾಗುವರೆಂಬ ನಂಬಿಕೆ ಇದೆ.

* * * *

ಮದುವೆಯ ನಂತರ ಬೆಂಗಳೂರಿನಲ್ಲಿ ನಾವಿದ್ದ ಮನೆ ನನ್ನದಾಯಿತು. ಜೂನ್ ತಿಂಗಳಿಂದ ಸಂಸಾರ ನಡೆಸಲು ಏರ್ಪಾಡಾಗಿತ್ತು. ಮಲ್ಲೇಶ್ ದಂಪತಿಗಳು ವಿಲ್ಸನ್‌ಗಾರ್ಡನ್‌ನಲ್ಲಿ ಮನೆ ಮಾಡಿದರು. ಮನೆಯಲ್ಲಿ ಓದುತ್ತಿದ್ದ ಹುಡುಗರೆಲ್ಲ ಇಬ್ಬರಿಗೂ ಹಂಚಿಹೋದರು. ಮದುವೆಯಾದ ತಕ್ಷಣ ತಾಯಿ ತೀರಿಕೊಂಡದ್ದರಿಂದ ಶಾರದೆಯನ್ನು ಕರೆದು ಕೊಂಡು ಬಂದಿರಲಿಲ್ಲ. ಗುಡ್ಡದೂರಿನಿಂದ ಶಾರದೆಯ ಸಹೋದರರು ಮತ್ತು ಅವರ ಪತ್ನಿಯವರು ಸಂಸಾರಹೂಡಲು ಅಗತ್ಯವಿರುವ ಸಾಮಾನುಗಳನ್ನೆಲ್ಲಾ ಸಮಜಾಯಿಸುತ್ತಿದ್ದರು. ಅಷ್ಟರಲ್ಲಿ ನನಗೆ ಧಾರವಾಡಕ್ಕೆ ವರ್ಗಾವಣೆಯ ಆರ್ಡರ್ ಬಂತು. ಅದೇ ವರುಷ ಕರ್ನಾಟಕದಲ್ಲಿದ್ದ ಎರಡು ಅಗ್ರಿಕಲ್‌ಚರ್ ಕಾಲೇಜುಗಳು, ಒಂದು ವೆಟರಿನರಿ ಕಾಲೇಜು, ನಲವತ್ತೆಂಟು ಸಂಶೋಧನಾ ಕೇಂದ್ರಗಳನ್ನು ಹೊಸದಾಗಿ ಆಗಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲ್ಪಟ್ಟಿದ್ದವು. ನಾನು ಯಾವಾಗಲೂ, ಯಾವುದಕ್ಕೂ ರಾಜಕೀಯ ಒತ್ತಡ ತಂದವನಲ್ಲ. ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿಸಲು ಯಾರಿಂದಲಾದರೂ ಹೇಳಿಸುವ ಮನಸ್ಸು ಬರಲಿಲ್ಲ. ನಮ್ಮಲ್ಲಿ ಇಂದಿಗೂ ವರ್ಗಾವಣೆ ಮತ್ತು ಬಡ್ತಿಯ ಸಮಯದಲ್ಲಿ ಶಕ್ತಿಮೀರಿ ರಾಜಕೀಯ ಒತ್ತಡ ತರುವುದು ವಾಡಿಕೆಯಲ್ಲಿದೆ. ನನಗೂ ಆ ಸಮಯದಲ್ಲಿ ಧಾರವಾಡಕ್ಕೆ ಹೋಗುವುದಕ್ಕೆ ಕೆಲವು ಆತಂಕಗಳಿದ್ದವು. ಮುಖ್ಯವಾಗಿ ನನ್ನ ಪಿಹೆಚ್.ಡಿ. ಸಂಶೋಧನೆ ಪ್ರಾರಂಭಕ್ಕೆ ಎಲ್ಲಾ ಸಿದ್ಧತೆಗಳು ನಡೆದಿದ್ದವು.

ಚೀಫ್ ಜಸ್ಟೀಸ್ ಗೋವಿಂದ ಭಟ್ಟರ ಮನೆಯ ಕಾಂಪೌಂಡಿನಲ್ಲಿ ಬೇರು ತಿನ್ನುವ ಹುಳದ ಹಾವಳಿ ತುಂಬಾ ಇತ್ತು. ಜಸ್ಟೀಸ್ ಗೋವಿಂದ ಭಟ್ಟರಿಗೆ ತೋಟಗಾರಿಕೆಯಲ್ಲಿ ತುಂಬಾ ಆಸಕ್ತಿ ಮತ್ತು ಪರಿಜ್ಞಾನವೂ ಇತ್ತು. ಅವರ ಕೊಡಗಿನ ಕಾಫಿ ತೋಟದಲ್ಲಿಯೂ ಅಲ್ಲಲ್ಲಿ ಇದರ ಹಾವಳಿ ಇತ್ತು. ಅಂದಿಗೆ ಬೇರು ತಿನ್ನುವ ಹುಳದ ಬಗ್ಗೆ (ವೈಟ್‌ಗ್ರಬ್ಸ್) ಏನೂ ಮಾಹಿತಿ ಇರಲಿಲ್ಲ. ಆದ್ದರಿಂದ ಡಾ॥ ಪುಟ್ಟರುದ್ರಯ್ಯನವರು ಈ ಸಂಶೋಧನೆಯನ್ನು ನನಗೆ ವಹಿಸಿ ಮುಂದೆ ಇದನ್ನೇ ಪಿಹೆಚ್.ಡಿ. ಥೀಸೀಸ್‌ಗೆ ಉಪಯೋಗಿಸಬಹುದೆಂದು ಹೇಳಿದ್ದರು. ಮೇ-ಜೂನ್ ತಿಂಗಳಾಗಿದ್ದರಿಂದ ತಕ್ಷಣ ಸಂಶೋಧನೆಯ ಕೆಲಸವನ್ನು ಪ್ರಾರಂಭಿಸಬೇಕಿತ್ತು. ಬೇರು ತಿನ್ನುವ ವಯಸ್ಕ ಹುಳುಗಳನ್ನು ಮೇ-ಜೂನ್ ಬೀಟಲ್ಸ್ ಎಂದು ಕರೆಯುತ್ತಾರೆ. ಧಾರವಾಡಕ್ಕೆ ಹೋದರೆ ಈ ಸಂಶೋಧನೆ ನಿಂತಂತೆ. ಮುಂಗಾರು ಮಳೆ ಪ್ರಾರಂಭದಲ್ಲಿ ಈ ಹುಳುವಿನ ದುಂಬಿಗಳು ಸಂಜೆ ಕತ್ತಲಾಗುವ ಸಮಯದಲ್ಲಿ ಭೂಮಿಯೊಳಗಿಂದ ಹೊರಗೆ ಬಂದು ಹೆಣ್ಣುಗಂಡು ಸಂಪರ್ಕವಾಗಿ ರಾತ್ರಿಯಲ್ಲಿ ಬೇವಿನ ಮರದ ಎಲೆ ಅಥವಾ ಇನ್ನಿತರ ಆಶ್ರಯ ಗಿಡಗಳನ್ನು ಭಕ್ಷಿಸಿ ಬೆಳಗಾಗುವುದರೊಳಗೆ ಪುನಃ ಭೂಮಿಯೊಳಗೆ ಹೋಗುತ್ತವೆ. ಸಂಜೆಯಾದ ತಕ್ಷಣ ಜಸ್ಟೀಸ್ ಗೋವಿಂದ

ಭಟ್ಟರ ಮನೆಯಲ್ಲಿ ಅವರು, ಅವರ ಪತ್ನಿ, ಪುತ್ರಿ, ಆಳುಗಳು ಮತ್ತು ನಾನು ಗ್ಯಾಸ್‌ಲೈಟು ಹಿಡಿದು ಹೊರಗೆ ಬಂದ ದುಂಬಿಗಳನ್ನೆಲ್ಲಾ ಸಂಗ್ರಹಿಸುತ್ತಿದ್ದೆವು. ಸುಮಾರು ಹತ್ತು ಘಂಟೆಯ ನಂತರ ಹೆಬ್ಬಾಳ ಕಾಲೇಜು ಲ್ಯಾಬೋರೇಟರಿಗೆ ತೆಗೆದುಕೊಂಡು ಹೋಗಿ ವಿಂಗಡಿಸಿ ಕೇಜುಗಳಲ್ಲಿ ಹಾಕಿ ಅಹಾರ ಕೊಟ್ಟು ಮರುದಿನ ಮಾಡಬೇಕಾದ ಅಧ್ಯಯನಗಳನ್ನು ಮಾಡುತ್ತಿದ್ದೆ. ಧಾರವಾಡ ದಲ್ಲಿ ಈ ಸಲಕರಣೆಗಳಿರಲಿಲ್ಲ. ಜಸ್ಟೀಸ್ ಗೋವಿಂದ ಭಟ್ಟರು ನನ್ನ ಕೆಲಸವನ್ನು ಮೆಚ್ಚಿ ಕೊಂಡಿದ್ದರು. ಪ್ರಪಂಚದಲ್ಲಿ ಕೆಲವು ಕಡೆ ನಡೆದ ಮಾಹಿತಿಗಳನ್ನು ಸಂಗ್ರಹಿಸಿಕೊಡುತ್ತಿದ್ದರು. ಬಹುಶಃ, ಅವರಿಗೆ ಟ್ರಾನ್ಸ್‌ಫರ್ ಆದ ವಿಷಯವನ್ನು ಹೇಳಿದ್ದರೆ ಕೆ.ಸಿ. ನಾಯಕ್‌ರಿಗೆ ಹೇಳಿ ಕ್ಯಾನ್ಸಲ್ ಮಾಡಿಸುತ್ತಿದ್ದರೇನೋ! ಏಕೆಂದರೆ ಅವರಿಬ್ಬರೂ ಒಂದೇ ಜಿಲ್ಲೆಯಿಂದ ಬಂದವರಲ್ಲದೆ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು. ಟ್ರಾನ್ಸ್‌ಫರ್ ಮಾಡುವಾಗ ಪುಟ್ಟರುದ್ರಯ್ಯನವರ ಸಲಹೆಯನ್ನೇನು ಕೇಳಿರಲಿಲ್ಲ.

ಮರು ಮಾತನಾಡದೆ ಆರ್ಡರ್ ಕೈಗೆ ತೆಗೆದುಕೊಂಡು, ಇದ್ದ ಸಾಮಾನನ್ನೆಲ್ಲಾ ಪ್ಯಾಕ್ ಮಾಡಿ ಒಂದು ಲಾರಿಯಲ್ಲಿ ಕಳುಹಿಸಿ ಮನೆ ಖಾಲಿ ಮಾಡಿ ಯಾರಿಗೂ ಹೇಳದೆ ಧಾರವಾಡಕ್ಕೆ ಹೊರಟೆ. ಧಾರವಾಡದಲ್ಲಿ ಮನೆ ಮಾಡಿದ ನಂತರ ಶಾರದೆಯನ್ನು ಕರೆದುಕೊಂಡು ಬರುವುದಾಗಿ ಗುಡ್ಡದೂರಿಗೆ ತಿಳಿಸಿದೆ. ಪ್ರೊ|| ಜಡೆ ಶ್ರೀನಿವಾಸಮೂರ್ತಿ ಮತ್ತು ನಾನು ನರ್ಲೇಕರ್ ಲಾಡ್ಜ್‌ನಲ್ಲಿ ಇಳಿದುಕೊಂಡೆವು. ಆಗ ಧಾರವಾಡದಲ್ಲಿ ನಮ್ಮಂಥವರಿಗೆ ಇದ್ದದ್ದು ಇದೊಂದೆ ಹೋಟಲ್. ನನ್ನ ಹಾಗೆ ಹೋದವರು ಬೆಂಗಳೂರಿನವರು ಕೆಲವರಾಗಲೇ ಈ ಹೋಟೆಲ್‌ನಲ್ಲಿ ಇದ್ದರು. ಕಾಲೇಜಿನಿಂದ ಬಂದ ಮೇಲೆ ಸಂಜೆ ಮನೆ ಹುಡುಕುವುದು ದಿನನಿತ್ಯದ ಕೆಲಸದಲ್ಲಿ ಒಂದಾಗಿತ್ತು. ಜಡೆ ಶ್ರೀನಿವಾಸಮೂರ್ತಿ ಹೆಬ್ಬಾಳ ಕೃಷಿ ಕಾಲೇಜಿನ ಮೊದಲನೇ ತಂಡದ ಗ್ರ್ಯಾಜುಯೇಟ್. ಅವರು ದಾವಣಗೆರೆ ಹರಿಹರದ ಕಡೆಯವರಾದ್ದರಿಂದ ಉತ್ತರ ಕರ್ನಾಟಕದ ಭಾಷೆ ನಡೆ-ನುಡಿ ಚೆನ್ನಾಗಿ ಅರಿತವರಾಗಿದ್ದರು. ಸಂಜೆ ನಾವಿಬ್ಬರು ಒಟ್ಟಿಗೆ ಊಟ, ತಿಂಡಿ, ತಿರುಗಾಟ ಮಾಡುತ್ತಿದ್ದೆವು. ಒಂದು ಸಂಜೆ ಬಾಡಿಗೆ ಮನೆ ಹುಡುಕುತ್ತಿದ್ದಾಗ ಒಬ್ಬರ ಮನೆಗೆ ಹೋದೆವು. ಆ ಮನೆಯೊಡತಿ ಬಾಗಿಲು ತೆಗೆದು ಏನೋ ಮಾತಾಡಿ 'ಯಜಮಾನ್ರು ಈಗ ಇಲ್ಲಾರಿ, ಹಿಂದಾಗಡೆಯಿಂದ ಬನ್ನಿ' ಅಂದರು. ಹಿಂದಿನ ಬಾಗಿಲು ಎಲ್ಲಿದೆ ಎಂದು ನೋಡುವಷ್ಟರಲ್ಲಿ ನನ್ನ ಸ್ನೇಹಿತರು ಇಲ್ಲಿ ಹಿಂದಾಗಡೆ ಅಂದರೆ ನಂತರ ಅಂತ ಹೇಳಿ ಕರೆದುಕೊಂಡು ಹೋದರು. ಮತ್ತೊಮ್ಮೆ ಪ್ರೊ|| ಜಡೆ ಮತ್ತು ನಾನು ನಾಟಕಕ್ಕೆ ಹೋದೆವು. ಟಿಕೆಟ್ಟು ಕೊಳ್ಳುವಾಗ ಕುರ್ಚಿ ಬೇಕೋ ಹಾಸಿಗೆ ಬೇಕೋ ಎಂದು ಕೇಳಿದರು. ನಾಟಕ ಚೆನ್ನಾಗಿಲ್ಲದಿದ್ದರೆ ಮಲಗಿದರಾಯಿತೆಂದು ಹಾಸಿಗೆಗೆ ಟಿಕೆಟ್ ತೆಗೆದುಕೊಳ್ಳಿ ಎಂದೆ. ಅಲ್ಲಿದ್ದದ್ದು ಹಾಸಿಗೆಯಲ್ಲ ಚಾಪೆ. ಅಲ್ಲಿಯವರು ಚಾಪೆಗೆ ಹಾಸಿಗೆಯೆಂದು ಕರೆಯುತ್ತಾರೆಂದು ಆಗ ತಿಳಿಯಿತು.

ಡಾ|| ಎಸ್.ಡಬ್ಲ್ಯೂ. ಮೆಣಸಿನಕಾಯಿ ಧಾರವಾಡ ಕೃಷಿ ಕಾಲೇಜಿನ ಡೈರೆಕ್ಟರ್ (ಪ್ರಿನ್ಸಿಪಾಲ್) ಆಗಿದ್ದರು. ಹೊಸದಾಗಿ ಬಂದವರಿಗೆ ಆಗಾಗ ಕರೆದು ಅವರ ವಿಷಯಗಳಲ್ಲಿ ಮನಸ್ಸಿಗೆ ಬಂದ ಪ್ರಶ್ನೆಗಳನ್ನು ಕೇಳುವ ಅಭ್ಯಾಸವಿತ್ತು. ಅದರಲ್ಲೂ ಕೀಟ ಶಾಸ್ತ್ರದಲ್ಲಿ ಪ್ರಶ್ನೆ ಕೇಳುವುದಕ್ಕೆ ಪರಿಣತೆಯೇನೂ ಬೇಕಿಲ್ಲ. ಜೀವಕೋಟಿಗಳಲ್ಲಿ ಶೇಕಡ ಎಂಭತ್ತರಷ್ಟು ಕೀಟಗಳೇ ಇರುವುದರಿಂದ ಮಾನವರಿಗೆಲ್ಲಾ ಒಂದಲ್ಲಾ ಒಂದು ಕೀಟ ಪರಿಚಯವಿದ್ದೇ ಇರುತ್ತದೆ. ಮೆಣಸಿನ ಕಾಯಿಯವರು ಇದರಿಂದ ಹೊರತೇನಲ್ಲ. ಧಾರವಾಡದಲ್ಲಿ ಅವರು ಎಲ್ಲರಿಗೂ ಚಿರಪರಿಚಿತರು.

ಅವರು ಐವತ್ತೈದನೆಯ ವಯಸ್ಸಿನಲ್ಲಿ ಮದುವೆಯಾಗಿ ಮೂರು ಮಕ್ಕಳ ತಂದೆಯಾಗಿ, ಮಕ್ಕಳೆಲ್ಲಾ ವಿದ್ಯಾವಂತರಾಗಿ, ವೃತ್ತಿಯನ್ನವಲಂಬಿಸುವತನಕ ದೀರ್ಘಕಾಲ ಬಾಳಿದರು. ನನ್ನ ಸಹೋದ್ಯೋಗಿಗಳು ಆಗಲೇ ನನಗೆ ಹೇಳಿದ್ದರು, ನಿಮಗೆ ಯಾವಾಗಲಾದರೂ ಕರೆ ಬರಬಹುದು, ಕರೆದಾಗ ಈ ಧಾಟಿಯ ಪ್ರಶ್ನೆ ಕೇಳಬಹುದೆಂದು. ನಾನು ಹೋಗಿ ಒಂದೆರಡು ದಿನದಲ್ಲಿ ಅವರ ಆಫೀಸಿಗೆ ಕರೆಸಿದರು. ಕರೆದವರನ್ನು ಕುಳಿತುಕೊಳ್ಳಿ ಎನ್ನುವವರಲ್ಲ. ಉಭಯ ಕುಶಲೋಪರಿ ಯಾದ ನಂತರ ಗ್ರಹಿಸಿದ ಹಾಗೆ ಪ್ರಶ್ನೆಗಳನ್ನೇನು ಕೇಳಲಿಲ್ಲ. ಬದಲಿಗೆ ನಾನು ಮಾಡಬೇಕಾದ ಕೆಲಸವೊಂದನ್ನು ಹೇಳಿದರು. ಈ ಕ್ಯಾಂಪಸ್‌ನಲ್ಲಿ ಜನ ಎಲ್ಲೆಂದರೆ ಅಲ್ಲಿ ಮೂತ್ರ ಮಾಡುತ್ತಾರೆ, ಅಂತಹವರನ್ನು ಹಿಡಿದು ನನಗೆ ಹೇಳುವುದು ಎಂದರು. ಮಾನಿಟರ್ ಮಾಡುವ ಕೆಲಸವನ್ನು ವಹಿಸಿಕೊಂಡವನಂತೆ ಹೊರಗೆ ಬಂದೆ.

ಒಂದು ವಾರದ ನಂತರ ಮತ್ತೊಮ್ಮೆ ತುರ್ತಾಗಿ ಕರೆ ಬಂತು. ಅವರು ಹೇಳಿದ್ದ ಗಣತೆಗಳೇನು ನನ್ನಲ್ಲಿರಲಿಲ್ಲ. ನನಗೆ ಆಶ್ಚರ್ಯವಾಗುವಂತೆ ಕುಳಿತುಕೊಳ್ಳಿ ಎಂದು ಮುಂದಿನ ಕುರ್ಚಿಗೆ ಕೈ ತೋರಿಸಿದರು. 'ನೀವು ದೊಡ್ಡ ರಾಜಕೀಯ ಶಕ್ತಿಯ ಹಿನ್ನೆಲೆಯಿಂದ ಬಂದ ಹಾಗೆ ಕಾಣುತ್ತದೆ. ಯೂನಿವರ್ಸಿಟಿಯವರು ಪುನಃ ನಿಮ್ಮನ್ನು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿ, ಕೂಡಲೇ ಕಳುಹಿಸಿಕೊಡಿ ಎಂದು ತಂತಿ ಸಂದೇಶ ಕಳುಹಿಸಿದ್ದಾರೆ, ನಿಮ್ಮನ್ನು ರಿಲೀವ್ ಮಾಡಿದ್ದೇನೆ' ಎಂದರು. ತಮಾಷೆಯೋ, ನಿಜವೋ ನನಗೊಂದೂ ಅರ್ಥವಾಗಲಿಲ್ಲ. ಕಾನೂನಿನ ರೀತಿಯಲ್ಲಿ ವರ್ಗ ಮಾಡಿದವರನ್ನೇ ಅವರು ಅಷ್ಟು ಸುಲಭವಾಗಿ ರಿಲೀವ್ ಮಾಡಿದವರಲ್ಲ. ಅಂತಹದರಲ್ಲಿ ನನ್ನನ್ನು ರಿಲೀವ್ ಕೂಡ ಮಾಡಿದ್ದೇನೆಂದು ಹೇಳಿದ್ದನ್ನು ನಂಬುವುದೋ ಬಿಡುವುದೋ ತಿಳಿಯಲಿಲ್ಲ. ತುಂಬ ಧನ್ಯವಾದಗಳೆಂದು ಹೇಳಿ 'ನಾನು ಇಲ್ಲಿ ಬಂದದ್ದು ಕೆಲವು ವರುಷಗಳು ಇರುವುದಕ್ಕೆ; ಮನೆಯನ್ನು ಹುಡುಕುತ್ತಾ ಇದ್ದೇನೆ; ನನ್ನ ಸಾಮಾನೆಲ್ಲಾ ಲಾರಿ ಡಿಪೋವಿನಲ್ಲಿದೆ; ಐದು ವರುಷವಿದ್ದ ಮನೆಯನ್ನು ಖಾಲಿ ಮಾಡಿ ಬಂದಿದ್ದೇನೆ; ಮತ್ತೆ ಬೆಂಗಳೂರಿಗೆ ಹೋದರೆ ಮನೆ ಸಿಕ್ಕುವುದು ಕಷ್ಟ; ಯೂನಿವರ್ಸಿಟಿಯವರು ಕ್ವಾರ್ಟರ್ಸ್ ಕೊಟ್ಟರೆ ಹೋಗುತ್ತೇನೆ ಇಲ್ಲದಿದ್ದರೆ ದಯವಿಟ್ಟು ನನ್ನನ್ನು ಇಲ್ಲಿಯೇ ಇರಿಸಿಕೊಳ್ಳಿ' ಎಂದೆ. ಬಹುಶಃ, ಮೊದಲ ಬಾರಿಗೆ ಬೆಂಗಳೂರಿನಿಂದ ಬಂದವರು ಬೆಂಗಳೂರಿಗೆ ವರ್ಗಾಯಿಸಿದೆ ಎಂದು ಹೇಳಿದಾಗ ಹೀಗೆ ಹೇಳಿದ್ದನ್ನು ಅವರು ಕೇಳಿರಬೇಕು. ಸ್ವಲ್ಪ ಸಮಯ ಯೋಚಿಸಿ 'ನೀವು ಹೋಗಿ ನಾನು ಬೆಂಗಳೂರಿಗೆ ದೂರವಾಣಿಯಲ್ಲಿ ಮಾತನಾಡಿ ತಿಳಿಸುತ್ತೇನೆ' ಎಂದು ಹೇಳಿದರು. ಕೆಲವು ಘಂಟೆಗಳು ಕಳೆದ ನಂತರ 'ನಿಮಗೆ ಇರಲು ಮನೆಯನ್ನು ಕೊಡುತ್ತಾರಂತೆ, ನೀವು ಹೋಗಲೇ ಬೇಕಂತೆ' ಎಂದು ಹೇಳಿ ಕಳುಹಿಸಿದರು. ಬಯಸದೇ ಬಂದದ್ದು ಆಗಲಿ ಎಂದೆ. ಇಷ್ಟರಲ್ಲಿ ನನ್ನ ವರ್ಗಾವಣೆ ವಿಷಯ ಕ್ಯಾಂಪಸ್ಸಿನಲ್ಲಿ ಬೆಂಕಿಯಂತೆ ಹರಡಿತು. ಅವರವರಿಗೆ ತೋಚಿದ್ದನ್ನು ಹೇಳಲು ಪ್ರಾರಂಭಿಸಿದರು. ಬೆಂಗಳೂರಿಗೆ ಹೋಗಬೇಕೆಂದು ಬಹಳ ದಿನಗಳಿಂದ ಪ್ರಯತ್ನಪಡುತ್ತಿದ್ದ ಕೆಲವರು ದಯವಿಟ್ಟು ನನಗೂ ಮಾಡಿಸಿಕೊಡಿ ಅದೆಷ್ಟು ಖರ್ಚಾದರೂ ತೊಂದರೆಯಿಲ್ಲವೆಂದು ಹೇಳತೊಡಗಿದರು.

ಆಗ ಹೆಬ್ಬಾಳದಲ್ಲಿ ಎರಡು ಹಾಸ್ಟಲ್ ಇದ್ದವು. ಪಶು ವೈದ್ಯಕೀಯ ಕಾಲೇಜು ಹಾಸ್ಟಲ್, ಕೃಷಿ ಕಾಲೇಜು ಹಾಸ್ಟಲ್. ಎರಡು ಹಾಸ್ಟಲಿಗೂ ಅಲ್ಲಿಯ ತನಕ ಬೇರೆ ಬೇರೆ ವಾರ್ಡನ್‌ಗಳಿದ್ದರು. ಯೂನಿವರ್ಸಿಟಿಯಾದ ಮೇಲೆ ಒಬ್ಬ ಚೀಫ್ ವಾರ್ಡನ್ ಮತ್ತು ಎರಡು ಹಾಸ್ಟಲಿಗೂ,

ಒಬ್ಬೊಬ್ಬ ಅಸಿಸ್ಟೆಂಟ್ ವಾರ್ಡನ್‌ಗಳನ್ನು ನೂತನವಾಗಿ ಆಯ್ಕೆ ಮಾಡಿದ್ದರು. ಕೃಷಿ ಕಾಲೇಜು ಹಾಸ್ಟಲ್‌ನಲ್ಲಿ ನಾನೂರಕ್ಕೂ ಹೆಚ್ಚಿಗೆ ಹುಡುಗರಿದ್ದರು. ಹಾಸ್ಟಲಿನಲ್ಲಿ ಆಗಾಗ ಗಲಾಟೆಗಳು ನಡೆಯುತ್ತಿದ್ದವು. ಚೀಫ್ ವಾರ್ಡನ್ ಆಗಿ ವೆಟರಿನರಿ ಕಾಲೇಜಿನ ಡಾ॥ ರವಿವರ್ಮ ಹೆಗ್ಗಡೆ ಯವರನ್ನು ನೇಮಿಸಿದ್ದರು. ಪಶು ವೈದ್ಯಕೀಯ ಕಾಲೇಜು ಹಾಸ್ಟಲ್‌ಗೆ ಇವರಿಗೇನು ತೊಂದರೆ ಇರಲಿಲ್ಲ. ಆದರೆ ಕೃಷಿ ಕಾಲೇಜು ಹಾಸ್ಟಲಿಗೆ ಕೃಷಿ ಕಾಲೇಜಿನಲ್ಲಿ ಹುಡುಗರಿಗೆ ಒಪ್ಪಿಗೆಯಾಗು ವವರು ಮತ್ತು ಹಾಸ್ಟಲಿನ ಸಮಸ್ಯೆಗಳನ್ನು ನಿಭಾಯಿಸುವಂತಹವರನ್ನು ನೋಡುತ್ತಿದ್ದರು. ಪ್ರಾರಂಭದಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಆಗು ಹೋಗುಗಳನ್ನು ಪ್ರತಿ ದಿನ ಬೆಳಿಗ್ಗೆ ಕುಲಪತಿ ಗಳ ನೇತೃತ್ವದಲ್ಲಿ ಆಫೀಸರ್ಸ್ ಮೀಟಿಂಗ್‌ನಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಹಾಸ್ಟಲಿನ ಸಮಸ್ಯೆ ಬಂದಾಗ ಆಗ ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರಾಗಿದ್ದ ಕೆ. ಸುಬ್ಬಯ್ಯನವರು ವೀರೇಶ್ ಇದ್ದಿದ್ದರೆ ಅವರನ್ನು ಅಸಿಸ್ಟೆಂಟ್ ವಾರ್ಡನ್ನಾಗಿ ಮಾಡಬಹುದಿತ್ತು. ಈಗ ಅಂತಹವರು ಕೃಷಿ ಕಾಲೇಜಿನಲ್ಲಿ ಯಾರೂ ಕಾಣಲಿಲ್ಲವೆಂದರಂತೆ. ಕೂಡಲೆ ಕೆ.ಸಿ. ನಾಯಕ್‌ರವರು, ಅದಕ್ಕೇನಂತೆ ಅವರನ್ನೇ ಕರೆಸಿ ಎಂದರಂತೆ. ಬೇರೆಯವರು ಅದಕ್ಕೆದುರಾಗಿ ಏನನ್ನೂ ಹೇಳಲಿಲ್ಲ, ಹೇಳುತ್ತಲೂ ಇರಲಿಲ್ಲ. ಆಡಳಿತ ಅಧಿಕಾರಿ ನಂಜುಂಡಪ್ಪನವರು ಕೂಡಲೆ ಆರ್ಡರ್ ಹಾಕಿ, ತಂತಿ ಸಂದೇಶವನ್ನು ಕಳುಹಿಸಿದರು. ಇದರಲ್ಲಿ ಯಾವ ರಾಜಕೀಯ ಒತ್ತಡವೂ ಇರಲಿಲ್ಲ. ಇಂತಹ ಸಂದರ್ಭಗಳನ್ನು ಎಷ್ಟು ಅಪಾರ್ಥ ಮಾಡಿಕೊಳ್ಳುತ್ತಾರೆನ್ನುವುದಕ್ಕೆ ಇದೊಂದು ನಿದರ್ಶನ.

ಮುಂದಿನ ಆರು ವರುಷಗಳ ನನ್ನ ಕೃ.ವಿ.ವಿ. ಜೀವನ ಮತ್ತೊಂದು ಮಹತ್ವವುಳ್ಳ ಅಧ್ಯಾಯವೆಂದು ಹೇಳಬಹುದು. ಈ ಅವಧಿಯಲ್ಲಿ ಕೆಲವು ಸಲ ದಿನಕ್ಕೆ 14-16 ಘಂಟೆ ಕೆಲಸ ಮಾಡಿದ್ದೇನೆ. ಎಂಟಮಾಲಜಿ ವಿಭಾಗದಲ್ಲಿ ಡಾ॥ ಪುಟ್ಟರುದ್ರಯ್ಯ ವಿಭಾಗದ ಮುಖ್ಯಸ್ಥ ರಾಗಿದ್ದರು. ಅಸೋಸಿಯೇಟ್ ಪ್ರೊಫೆಸರ್ ಆಗಿದ್ದ ಡಾ॥ ತೊಂಟದಾರಯ್ಯರನ್ನು ನನ್ನ ಜಾಗದಲ್ಲಿ ಧಾರವಾಡಕ್ಕೆ ವರ್ಗಾಯಿಸಿದ್ದರು. ಉಳಿದ ಮೂವರು ಅಂದರೆ ಜಿ.ಪಿ. ಚೆನ್ನಬಸವಣ್ಣ, ಕೆ.ಸಿ. ದೇವರಾಜ ಅರಸು ಹಾಗೂ ಶಿವರಾಮ ರೈ ಹೆಚ್ಚಿನ ವ್ಯಾಸಂಗಕ್ಕೆ ಡೆಪ್ಯೂಟೇಷನ್ ಕಳುಹಿಸಿದ್ದರು. ಇವರ ಬದಲಿಗೆ ಬೇರೆ ಯಾರೂ ಇರಲಿಲ್ಲ. ಬೆಳಿಗ್ಗೆ ಎಂಟರಿಂದ ಸಂಜೆ ಐದರ ವರೆಗೆ ವಾರವೆಲ್ಲ ಬಿಡುವಿಲ್ಲದ ಕ್ಲಾಸುಗಳು. ವಾರ್ಡನ್ ಕೆಲಸವೂ ಸಾಕಷ್ಟಿತ್ತು. ಈ ಮಧ್ಯೆ ನನ್ನ ಪಿಹೆಚ್.ಡಿ. ರೀಸರ್ಚ್ ಮುಂದುವರೆದಿತ್ತು ಮನೆಯಲ್ಲಿ ಆರೇಳು ಘಂಟೆ ಮಲಗುವುದು ಬಿಟ್ಟರೆ ಉಳಿದ ವೇಳೆಯಲ್ಲಿ ಕಾಲೇಜು, ಹಾಸ್ಟಲು ಅಥವಾ ಫೀಲ್ಡ್‌ನಲ್ಲಿರುತ್ತಿದ್ದೆ. ನನ್ನ ಸಂಶೋಧನೆ ರೈತರ ಜಮೀನಲ್ಲೇ ಆಗಬೇಕಿತ್ತು. ಹೀಗಾಗಿ ನನ್ನ ಪತ್ನಿ ಶಾರದೆಗೆ ನನ್ನ ಜೀವನ ವಿಚಿತ್ರವಾಗಿ ಕಂಡಿರಬೇಕು. ಏಕೆಂದರೆ ಅವಳು ಹುಟ್ಟಿದ ಮನೆಯಲ್ಲಿಯಾಗಲಿ ಅಥವಾ ನಾನು ಹುಟ್ಟಿದ ಮನೆಯಲ್ಲಾಗಲಿ, ಸರ್ಕಾರಿ ನೌಕರಿಯಲ್ಲಾಗಲಿ ಅಥವಾ ನನ್ನ ಹಾಗೆ ಕಾಲೇಜಿನಲ್ಲಿ ಸಂಶೋಧನೆ ಕೆಲಸ ಮಾಡಿದವರಿರಲಿಲ್ಲ. ಅದರಲ್ಲೂ ಸಂಶೋಧನೆಯ ಗೀಳು ಇರುವವರು ಹುಚ್ಚರಿರ ಬಹುದೆಂದು ಕೆಲವರ ಅಭಿಪ್ರಾಯ.

ನನ್ನ ಮೊದಲನೆ ಮಗಳು ಕವಿತಳನ್ನು ಮೇಖ್ರಿ ಸರ್ಕಲ್ ಹತ್ತಿರ ಸೆಂಟ್ರಲ್ ಸ್ಕೂಲ್ ನರ್ಸರಿಗೆ ಬಿಟ್ಟು ಕರೆದುಕೊಂಡು ಬರುವುದಕ್ಕೂ ಬಿಡುವಿರುತ್ತಿರಲಿಲ್ಲ. ಒಮ್ಮೆ ಅವಳು ಆ ಸ್ಕೂಲಿಗೆ ಹೋಗುವಾಗ ಹೆಬ್ಬಾಳ ಹತ್ತಿರ ಬಳ್ಳಾರಿ ರೋಡನ್ನು ದಾಟುವಾಗ ವಾಹನಕ್ಕೆ ಸಿಕ್ಕಿ ಉಳಿದಿದ್ದೇ ಪುಣ್ಯ. ಯಾರೋ ಕಾಲೇಜಿಗೆ ಓಡಿ ಬಂದು ನಿಮ್ಮ ಮಗಳಿಗೆ ಅಪಘಾತವಾಗಿ

ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ; ಏನಾಗುವುದೋ ತಿಳಿಯದೆಂದು ಹೇಳಿದರು. ಆಸ್ಪತ್ರೆಯಲ್ಲಿ ಸರ್ಜರಿ ಟೇಬಲ್ ಮೇಲೆ ಸ್ಟಿಚಸ್ ಹಾಕುತ್ತಿದ್ದ ರಕ್ತಮಯವಾದ ಅವಳ ಮುಖ ನೋಡಿದ ತಕ್ಷಣ ಜೀವನ ಪರ್ಯಂತ ಅವಳು ಊನಾಗಿ ಉಳಿಯುವುದ ಕ್ಕಿಂತ ಇಲ್ಲದಿರುವುದೇ ಲೇಸೆನಿಸಿತು. ದೇವರದಯೆಯಿಂದ ಮುಖದಲ್ಲಿ, ತಲೆಯಲ್ಲಿ ಹೊಲಿಗೆ ಹಾಕಿದ್ದ ಗಾಯದ ಗುರುತುಗಳನ್ನು ಬಿಟ್ಟರೆ ಮತ್ತೇನೂ ಆಗಲಿಲ್ಲ.

ನನ್ನ ಎರಡನೆ ಮಗಳು ಸವಿತ ಸ್ಟೆಲ್ಲಾ ಮೇರಿಸ್ ಸ್ಕೂಲಿನಲ್ಲಿ ಪ್ರೈಮರಿ ಓದುತ್ತಿದ್ದಾಗ ಒಂದು ದಿನ ಮನೆಗೆ ಬರುವ ಕಾಲೇಜು ಬಸ್ ತಪ್ಪಿ ಸ್ಕೂಲಿನಲ್ಲಿಯೆ ಬಾಕಿಯಾಗಿದ್ದಳು. ಕತ್ತಲಾದ ಮೇಲೆ ಕಾಲೇಜಿನಿಂದ ಮನೆಗೆ ಬಂದ ಮೇಲೆ ಮಗು, ಮನೆಗೆ ಬಂದಿಲ್ಲವೆಂದು ತಿಳಿದು, ಸ್ಕೂಲಿನ ಹತ್ತಿರ ಹೋದಾಗ ಮೆಟ್ಟಲು ಮೇಲೆ ಕತ್ತಲೆಯಲ್ಲಿ ಒಬ್ಬಳೆ ಅನಾಥೆಯಂತೆ ಕುಳಿತಿರುವುದು ನೋಡಿ ಕರುಳು ಕಿತ್ತುಬಂದ ಹಾಗಾಯಿತು.

ಇದೇ ಸಮಯದಲ್ಲಿ ನನ್ನ ತಾಯಿಯವರು ತೀರಿಕೊಂಡರು. ಆಗ ದೂರವಾಣಿ ಸಂಪರ್ಕ ಈಗಿನ ಹಾಗಿರಲಿಲ್ಲ. ರಾತ್ರಿ ನನ್ನ ಅಣ್ಣನ ಮಗನನ್ನು ಸಕಲೇಶಪುರದಿಂದ ಬೆಂಗಳೂರಿಗೆ ಬರುವ ಲಾರಿಯಲ್ಲಿ ವರ್ತಮಾನ ತಿಳಿಸಲು ಕಳುಹಿಸಿದ್ದರು. ಮಧ್ಯರಾತ್ರಿ ಡ್ರೈವರ್ ದಾರಿಯಲ್ಲೆಲ್ಲೊ ಲಾರಿ ನಿಲ್ಲಿಸಿ ನಿದ್ದೆ ಮಾಡಿ ಬೆಳಿಗ್ಗೆ ಒಂಭತ್ತು ಗಂಟೆಗೆ ಬೆಂಗಳೂರು ತಲುಪಿದ್ದ. ಅಂದು ಬೆಂಗಳೂರು ಬಂದ್. ಯಾವ ವಾಹನ ಚಲನ ವಲನೆಗಳಿರಿಲಿಲ್ಲ. ನನ್ನ ಸ್ಕೂಟರನ್ನು ನಮ್ಮ ಭಾವ ಎಲ್ಲಿಗೊ ತೆಗೆದುಕೊಂಡು ಹೋಗಿದ್ದರು. ಎಷ್ಟೇ ಪ್ರಯತ್ನ ಮಾಡಿದರೂ ಯಾವ ಕಾರು ಟ್ಯಾಕ್ಸಿ ಸಿಗಲಿಲ್ಲ. ಸಂಜೆ ಐದು ಘಂಟೆಗೆ ದಹನ ಮಾಡುತ್ತಾರೆಂದು ಬಂದಿದ್ದವನು ಹೇಳಿದ. ನನಗೆ ಹೋಗಲಾಗಲೇ ಇಲ್ಲ. ಊರಲ್ಲಿ ಶವವನ್ನು ರಾತ್ರಿ ಎಂಟು ಗಂಟೆಯವರೆಗೆ ಇಟ್ಟು ಕಾದಿದ್ದರಂತೆ. ತಂದೆ ತೀರಿದಾಗ ಕತ್ತಲಾಗುತ್ತಿದ್ದರೂ ವಿಷಯ ತಿಳಿದ ಕೂಡಲೆ ಓಡಿ ಬಂದಿದ್ದಾನೆ, ಈಗ ಬಂದೇ ಬರುತ್ತಾನೆಂದು ಎಲ್ಲರೂ ಕಾದಿದ್ದರಂತೆ. ತಾಯಿಯ ಅಂತ್ಯಕ್ರಿಯೆಗೆ ಹೋಗ ಲಾಗಲಿಲ್ಲವೆಂಬ ಕೊರಗು ಕೊನೆಯವರೆಗೂ ಉಳಿಯುವಂತಾಯಿತು.

ನಾನು ವಾರ್ಡನ್ ಆಗಿದ್ದಾಗ ಎರಡು ಕ್ಲಿಷ್ಟ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ಒಂದು ಹಾಸ್ಟಲ್ ಗಣಪತಿ ಬಿಡುವ ವಿಷಯ; ಮತ್ತೊಂದು ಹಾಸ್ಟಲಿನ ಸುತ್ತ ತೆಂಗಿನ ಮರ ಹಾಕಿಸುವ ವಿಷಯ. ಹಾಸ್ಟಲಿನಲ್ಲಿ ಗುಂಪು ಘರ್ಷಣೆಗಳು ಆಗಾಗ ನಡೆಯುತ್ತಲೇ ಇದ್ದವು. ಆದರೆ ಅಹಿತಕರ ಘಟನೆಗಳೇನು ಆಗಿರಲಿಲ್ಲ. ಗಣೇಶನ ಹಬ್ಬದಲ್ಲಿ ಗಣೇಶನನ್ನು ವಿಸರ್ಜಿಸುವ ದಿನ ದೊಡ್ಡ ಔತಣವನ್ನು ಏರ್ಪಡಿಸಿ ಗಣಪತಿಯನ್ನು ಹೆಬ್ಬಾಳ ಕೆರೆಯಲ್ಲಿ ವಿಸರ್ಜಿಸಿದನಂತರ ಬಂದು ಊಟ ಮಾಡುತ್ತಿದ್ದರು. ಕೆಲವೊಮ್ಮೆ ಬೆಳಗಿನ ಜಾವ ಎರಡು ಘಂಟೆಯಾಗುತಿತ್ತು. ಆಗ ಕಾಲೇಜಿನ ಅಧ್ಯಾಪಕರನೇಕರು ಈ ಔತಣದಲ್ಲಿ ಭಾಗವಹಿಸುತ್ತಿದ್ದರು. ರಾತ್ರಿ ಬಹಳ ತಡವಾಗುತ್ತಿದ್ದರಿಂದ, ಬಸ್ಸಿನ ಸೌಕರ್ಯವಿಲ್ಲದಿದ್ದರಿಂದ ಬಹಳ ಜನಕ್ಕೆ ತೊಂದರೆಯಾಗುತ್ತಿತ್ತು. ಗಣಪತಿಯನ್ನು ಬಿಡಲು ಹೋಗುವಾಗ ಹುಡುಗರೆಲ್ಲರೂ ಪಟಾಕಿ ಹೊಡೆದು ದಾರಿಯುದ್ದಕ್ಕೂ ನರ್ತಿಸುತ್ತಿದ್ದರು. ಬೇಗ ವಿಸರ್ಜಿಸಲೂ ಬಿಡುತ್ತಿರಲಿಲ್ಲ. ಇವೆಲ್ಲ ಕಾರಣಕ್ಕಾಗಿ ಊಟದ ನಂತರ ಗಣಪತಿಯನ್ನು ಬಿಡುವುದು ಸೂಕ್ತವೆಂದು ಮೊದಲು ಊಟ ಮಾಡಿ ನಂತರ ವಿಸರ್ಜಿಸುವುದೆಂದು ತೀರ್ಮಾನ ತೆಗೆದುಕೊಂಡೆವು. ಹಾಸ್ಟೆಲ್ ಮ್ಯಾನೇಜ್‌ಮೆಂಟ್ ಕಮಿಟಿಯ ಒಪ್ಪಿಗೆಯೂ ಇತ್ತು.

ಅದರಲ್ಲಿ ಕೆಲವರು ಹಿಂದಿನಿಂದಲೂ ನಡೆದುಬಂದ ಪದ್ಧತಿಯನ್ನೆ ಅನುಸರಿಸಬೇಕು ಎಂದು ವಾದ ಮಾಡಿದರು. ಗುಂಪು ಕಟ್ಟಿದರು. ಗಣಪತಿಯನ್ನು ತೆಗೆಯಲು ಬಿಡುವುದೇ ಇಲ್ಲ ಎಂದು ಹಠ ಹಿಡಿದರು. ಮತ್ತೊಮ್ಮೆ ಹುಡುಗರನ್ನೆಲ್ಲ ಕೂಡಿಸಿ ಮೊದಲು ಊಟ ಮಾಡಿ ನಂತರ ಗಣಪತಿಯನ್ನು ಬಿಡುವುದರಿಂದ ಆಗುವ ಅನುಕೂಲ ಅನಾನುಕೂಲಗಳನ್ನು ತರ್ಕಿಸಿ, ಒಂದು ಒಮ್ಮತಕ್ಕೆ ಬಂದೆವು. ಮೊದಲು ಊಟ ಮಾಡುವವರು ಮಾಡಬಹುದು, ನಂತರ ಮಾಡುವವರೂ ಮಾಡಬಹುದು, ಎರಡಕ್ಕೂ ಏರ್ಪಾಡು ಮಾಡಿದೆವು. ಬೆರಳೆಣಿಸುವಷ್ಟು ಜನ ಬಿಟ್ಟರೆ ಎಲ್ಲರೂ ಮೊದಲೇ ಊಟ ಮಾಡಿದರು. ಇಪ್ಪತ್ತು ವರುಷಗಳಿಂದ ನಡೆದು ಬಂದ ಸಂಪ್ರದಾಯ ಅಂದಿಗೆ ಅಂತ್ಯವಾಯಿತು. ಅಂದಿನಿಂದ ಊಟದ ನಂತರ ಗಣಪತಿ ಬಿಡುವ ವಾಡಿಕೆ ರೂಢಿಯಾಯಿತು.

ಹಾಸ್ಟಲಿನ ಸುತ್ತು ತೆಂಗಿನ ಮರ ಹಾಕಿಸಬೇಕೆಂದು, ಇದಕ್ಕೆ ತಗಲುವ ಮುನ್ನೂರು ರೂಪಾಯಿ ಖರ್ಚನ್ನು ಹಾಸ್ಟಲ್‌ನ ರಿಸರ್ವ್ ಫಂಡಿನಿಂದ ಭರಿಸಬೇಕೆಂದು ನಿರ್ಧರಿಸಿದೆ. ಅದಕ್ಕೆ ಕೆಲವು ಹುಡುಗರಿಂದ ಅಡಚಣೆ. ತೆಂಗಿನಕಾಯಿ ಬಿಟ್ಟರೆ ಹಾಸ್ಟಲಿಗೆ ಸಿಕ್ಕುವುದಿಲ್ಲ. ಹುಡುಗರೇ ಕಿತ್ತು ಕುಡಿಯುತ್ತಾರೆ ಅಥವಾ ಬೇರೆಯವರು ತೆಗೆಯುತ್ತಾರೆ. ಇಂತಹ ಕೆಲಸಗಳಿಗೆ ವ್ಯರ್ಥವಾಗಿ ಹಾಸ್ಟಲಿನ ದುಡ್ಡನ್ನು ಖರ್ಚು ಮಾಡುವುದು ವಿವೇಕವಲ್ಲ ಎಂಬುದು ಅವರ ವಾದ. ಅದಕ್ಕೆ ಅವರಿಗೆ ಒಂದು ವಾಗ್ದಾನ ಮಾಡಿದೆ. ಮುಂದೆ ಇದರಿಂದ ಹಾಸ್ಟಲಿಗೆ ನಷ್ಟವಾಯಿತೆಂದು ಕಂಡು ಬಂದಾಗ ಇದಕ್ಕಾಗುವ ಖರ್ಚನ್ನು ನನ್ನ ಸಂಬಳದಲ್ಲಿ ಕಂತಿನಲ್ಲಿ ಹಿಡಿದುಕೊಳ್ಳುವಂತೆ ಬರೆದುಕೊಡುತ್ತೇನೆ ಎಂದೆ. ಅಂತು ತೆಂಗಿನ ಸಸಿಗಳನ್ನು ಹಾಕಿಸಿದ್ದಾಯಿತು. ಮುಂದೆ ಸಂಬಳವನ್ನು ಹಿಡಿದುಕೊಳ್ಳುವ ಪ್ರಸಂಗ ಬರಲಿಲ್ಲ. ಅವರಿವರು ಕದ್ದು ಕಿತ್ತರೂ ಕೂಡ ಹಾಸ್ಟಲಿಗೆ ಸಾಕಾಗುವಷ್ಟು ತೆಂಗಿನ ಕಾಯಿ ದೊರೆಯುತ್ತವೆ. ಹಾಸ್ಟಲಿಗೆ ಆಗುವಷ್ಟು ಹಾಲು ಮೊಟ್ಟೆಗೆ ಒಂದು ಡೈರಿ ಮತ್ತು ಪೌಲ್ಟ್ರಿಯನ್ನು ಮಾಡಬೇಕೆಂಬ ಹಂಬಲವಿತ್ತು. ಅದಕ್ಕೆ ಬೇಕಾದ ಪ್ರೋತ್ಸಾಹ ದೊರೆಯಲಿಲ್ಲ. ನಮ್ಮಲ್ಲಿ ಏನಾದರೊಂದು ಮಾಡುವುದಕ್ಕೆ ಮುಂಚಿತವಾಗಿಯೇ, ಮುಂದೆ ಅದು ಆಗದ ಕೆಲಸವೆಂದು ತರ್ಕಿಸಿ ತಡೆಯುವವರು ಅನೇಕರು. ಇದರಿಂದ ನಾವು ಬಯಸಿದಷ್ಟು ಮುಂದುವರೆಯುವುದಕ್ಕೆ ಆಗದು.

ವಿದ್ಯಾರ್ಥಿಗಳ ಹಾಸ್ಟಲ್ ಜೀವನ ಕಾಲೇಜಿನಲ್ಲಿ ಕಲಿತಷ್ಟೇ ಮಹತ್ವ ಉಳ್ಳದ್ದು. ನನ್ನ ಸ್ವಂತ ಅನುಭವವು ಹೌದು. ತಂಟೆ ತಕರಾರು, ಬೈದಾಟ, ಹೊಡೆದಾಟ, ಗುಂಪು ಘರ್ಷಣೆ, ಮದ್ಯಪಾನ, ಧೂಮಪಾನ ಇವೆಲ್ಲ ಹಾಸ್ಟಲ್ ಜೀವನದ ಅವಿಭಾಜ್ಯ ಅಂಗವಾಗಿರುತ್ತವೆ. ಎಲ್ಲವನ್ನೂ ನಿರ್ಮೋಹದಿಂದ ನೋಡಬೇಕೇ ಹೊರತು ಅವನ್ನೇ ಪ್ರಮೋದವನ್ನಾಗಿ ಮಾಡಬಾರದು. ಅನುಭವಿಸಿಯೇ ಅನುಭವ ಬರಬೇಕೇ ಹೊರತು, ಬೇರೆಯವರಿಂದ ಕೇಳಿ, ಪುಸ್ತಕ ಓದಿ ಬರುವುದಿಲ್ಲ. ಮಾಹಿತಿ ತೆಗೆದುಕೊಂಡರೆ ಹಾಸ್ಟಲ್‌ನಲ್ಲಿದ್ದವರು ಕೆಟ್ಟವರಾಗುವುದಕ್ಕಿಂತ ಒಳ್ಳೆಯವರಾದವರ ಸಂಖ್ಯೆ ಬಹುಪಾಲು ಹೆಚ್ಚು.

ಒಮ್ಮೆ ಹಾಸ್ಟಲಿನಲ್ಲಿ ಒಂದು ಬಗೆಯ ವಿಚಿತ್ರವಾದ ಕಳ್ಳತನ ನಡೆಯುತ್ತಿತ್ತು. ಯಾರೂ ಹೊರಗಿನವರು ಬಂದು ಕಳ್ಳತನ ಮಾಡುವ ಅವಕಾಶವಿರಲಿಲ್ಲ. ಇದ್ದಕ್ಕಿದ್ದ ಹಾಗೆ ಕೆಲವು ವಸ್ತುಗಳು ಕೆಲವರ ರೂಮಿನಿಂದ ಮಾಯವಾಗುತ್ತಿದ್ದವು. ವಿಚಾರಿಸಿದರೆ ಅವರ ಸ್ನೇಹಿತರನ್ನು ಬಿಟ್ಟರೆ ಬೇರೆ ಯಾರೂ ಅಂದು ಅವರ ರೂಮಿಗೆ ಬಂದಿರುತ್ತಿರಲಿಲ್ಲ. ಎಲ್ಲರಿಂದಲೂ ಒಳ್ಳೆಯವನೆನಿಸಿ

ಕೊಂಡಿದ್ದ ಹಾಸ್ಟಲ್ ಬೋರ್ಡರ್ ಒಬ್ಬ ಸಿಕ್ಕಿಬಿದ್ದ. ನಾಲ್ಕೈದು ಜನ ಹುಡುಗರು ಒಂದು ರೂಮಿನಲ್ಲಿ ಸೇರಿ ಮಾತನಾಡುತ್ತಿದ್ದಾಗ ಅವನು ಅಪೇಕ್ಷಿಸಿದ ವಸ್ತುವನ್ನು ಯಾರಿಗೂ ಕಾಣದ ರೀತಿಯಲ್ಲಿ ಕೈಗೆ ತೆಗೆದುಕೊಂಡು ಹೋಗಿ ಅವನ ಪೆಟ್ಟಿಗೆಯಲ್ಲಿ ಇಟ್ಟು ಬೀಗ ಹಾಕಿ ಇಡುತ್ತಿದ್ದ. ಯಾರಿಗೂ ಮಾರುತ್ತಿರಲಿಲ್ಲ. ಒಳ್ಳೆಯ ಅನುಕೂಲಸ್ಥರ ಮನೆಯಿಂದ ಬಂದ ಹುಡುಗ. ಅವನು ಸಿಕ್ಕಿ ಬಿದ್ದಾಗ ಅವನ ಸ್ನೇಹಿತರೆಲ್ಲ ರೊಚ್ಚಿಗೆದ್ದರು, ಹೊಡೆದರು. ಅಂದೇ ಅವನನ್ನು ಹಾಸ್ಟಲಿನಿಂದ ಬಿಡಿಸಿ ಕಳುಹಿಸಬೇಕೆಂದು ಹಠ ಹಿಡಿದರು. ನನಗೆ ಆ ಹುಡುಗ ಕಳ್ಳನೆಂದೆನಿಸಲಿಲ್ಲ. ಅವನಿಗೆ ಅದೊಂದು ಬಗೆಯ ತೆವಲು (ಚಟ) ಅಂತ ಹೇಳಬಹುದು. ಹುಡುಗರು ಅಷ್ಟು ರೊಚ್ಚಿಗೆದ್ದಾಗ ಅವನನ್ನು ಹಾಸ್ಟಲಿನಲ್ಲಿ ಇರಿಸುವುದು ಕ್ಷೇಮವಾಗಿ ಕಾಣಲಿಲ್ಲ. ಹಾಗೆಯೇ ಆಗಲೆಂದು ಹೇಳಿ ಆ ಹುಡುಗನನ್ನು ಕರೆದು ಸ್ವಲ್ಪ ದಿವಸ ನನ್ನ ಮನೆಯಲ್ಲಿ ಇರು ನಂತರ ಏನು ಮಾಡಬೇಕೆಂದು ವಿಚಾರ ಮಾಡೋಣ ಎಂದೆ. ನನ್ನ ಹೆಂಡತಿಗೂ ಅವನೇನು ಕೆಟ್ಟ ಹುಡುಗನ ಹಾಗೆ ಕಾಣಲಿಲ್ಲ. ಅವನ ತಾಯಿಗೂ ಈ ವಿಷಯ ತಿಳಿಸಲಿಲ್ಲ. ಕೆಲವು ವಾರಗಳ ನಂತರ ರೊಚ್ಚಿಗೆದ್ದ ಹುಡುಗರನ್ನು ಕರೆಸಿ ಅವನು ಮಾಡಿದ ತಪ್ಪನ್ನು ಕ್ಷಮಿಸಿ ಮತ್ತೊಮ್ಮೆ ಹಾಸ್ಟಲಿನಲ್ಲಿರಲು ಅವಕಾಶ ಕೊಡಿ. ಅವನು ಮಾಡಿದ್ದನ್ನು ಅಲ್ಲಿಗೆ ಮರೆತು ಮತ್ತೆಲ್ಲಿಯೂ ಈ ವಿಷಯ ಮಾತಾಡಕೂಡದೆಂದು ಹೇಳಿದೆ. ಅದಕ್ಕೆ ಅವರು ಒಪ್ಪಿದರು. ಮುಂದೆ ಆತ ಆದರ್ಶವ್ಯಕ್ತಿಯಾಗಿದ್ದನ್ನು ಕೇಳಿ ಸಂತೋಷವಾಯಿತು.

ಕಾಲೇಜಿನ ಬೋಧಕರಲ್ಲಿ ಬಹುತೇಕ ಮಂದಿ ನಿಗದಿತ ಕಾಲದಲ್ಲಿ ಪಾಠ ಮಾಡಿ ಮೌಲ್ಯ ಮಾಪನ ಮಾಡುವುದು ಬಿಟ್ಟರೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತಿಸುವುದಾಗಲಿ ಅಥವಾ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಿ ಮಾರ್ಗದರ್ಶನ ನೀಡುವುದಾಗಲಿ ಮಾಡುತ್ತಿರಲಿಲ್ಲ. ಮತ್ತೆ ಕೆಲವರು ಹುಡುಗರಿಂದ ಮೆಚ್ಚುಗೆ ಪಡೆಯಬೇಕೆಂದು ಶಿಕ್ಷಕರು ಮಾಡಬಾರದ್ದನ್ನು ಮಾಡಲು ಪ್ರಯತ್ನಿಸುವರೆ ಹೊರತು ನಿಷ್ಠೂರವಾದರೂ ಚಿಂತೆಯಿಲ್ಲ ಅವರು ಮುಂದೆ ಒಳ್ಳೆ ಪ್ರಜೆಗಳಾಗುವ ಮಾರ್ಗದರ್ಶನ ನೀಡಲು ಪ್ರಯತ್ನಿಸುತ್ತಿರಲಿಲ್ಲ. ಒಂದು ಸಮಯದಲ್ಲಿ ಕೃಷಿ ಕಾಲೇಜಿನಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯುತ್ತಿದ್ದು ಹಟಾತ್ತನೆ ಕ್ಷುಲ್ಲಕ ಕಾರಣಗಳಿಗಾಗಿ ಕಾಲೇಜು ಮುಚ್ಚಿಸುತ್ತಿದ್ದರು. ಕೇವಲ ಎರಡು ವಿದ್ಯಾರ್ಥಿಗಳ ಅಹಂಕಾರದಿಂದಾಗಿ ಮುಗ್ಧ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಡಚಣೆ ಉಂಟಾಗುವುದರ ಜೊತೆಗೆ ಗುಂಪುಗಾರಿಕೆ ನಡೆಯುತ್ತಿತ್ತು. ಕಾಲೇಜು ಬಸ್ಸು ತಡೆದು ನಿಲ್ಲಿಸುವುದು, ಬೀದಿ ದೀಪಗಳನ್ನು ಧ್ವಂಸ ಮಾಡುವುದು. ಕಾಲೇಜಿನ ಕಿಟಕಿ ಗಾಜುಗಳಿಗೆ ಕಲ್ಲು ಹೊಡೆಯುವುದು, ಕಾಲೇಜಿನ ಗೇಟಿಗೆ ಬೀಗ ಹಾಕುವುದು. ಇವೆಲ್ಲ ಪದೇ ಪದೇ ನಡೆಯುತ್ತಿತ್ತು. ಸಂಬಂಧಪಟ್ಟವರು ಈ ಗುಂಪುಗಳ ಲೀಡರ್ಸ್‌ನ್ನು ಕಾಲೇಜಿನಿಂದ ಹೊರಗೆ ಹಾಕಲು ಹಿಂಜರಿಯುತ್ತಿದ್ದರು. ಶಿಕ್ಷಕರು ಜವಾಬ್ದಾರಿ ತೆಗೆದುಕೊಂಡು ಏನಾದರೂ ಪರಿಹಾರ ಮಾಡುವ ಪ್ರಯತ್ನಕ್ಕೆ ಹೋಗುತ್ತಿರಲಿಲ್ಲ, ಏಕೆಂದರೆ ತಮ್ಮ ಮೇಲೆ ಹಲ್ಲೆ ಮಾಡಿಯಾರೆಂಬ ಭಯ!

ನಾನು ಕೀಟಶಾಸ್ತ್ರ ವಿಭಾಗದ ಮುಖ್ಯಸ್ಥನಾಗಿದ್ದಾಗ ಒಮ್ಮೆ ಒಂದು ಸಮಾರಂಭ, ವಿಭಾಗದ ಸಭಾಂಗಣದಲ್ಲಿ ನಡೆಯುತ್ತಿತ್ತು. ಕುಲಪತಿಗಳೂ ಸೇರಿದಂತೆ ವಿಶ್ವವಿದ್ಯಾನಿಲಯದ ಮುಖ್ಯಸ್ಥರೆಲ್ಲಾ ಹಾಜರಿದ್ದರು. ನಾಲ್ಕಾರು ಹುಡುಗರನ್ನೊಳಗೊಂಡ ಒಂದು ಗುಂಪು ಬಂದು ಗ್ರೇಡಿನ ವಿಷಯಕ್ಕೆ ಶಿಕ್ಷಕರ ಮೇಲೆ ಹಲ್ಲೆ ಮಾಡಿದರು. ಆ ಗುಂಪಿನ ನಾಯಕ ಒಬ್ಬ ಶಿಕ್ಷಕಿಯ

ಮೇಲೆ ಕಪಾಳ ಮೋಕ್ಷ ಮಾಡಿ ಬಿಟ್ಟ. ಅದು ಒಂದು ಅಕ್ಷಮ್ಯ ಅಪರಾಧ. ಪೊಲೀಸ್ ಕೇಸು ಮಾಡುವುದೆಂದು ಕೂಡಲೆ ಪೊಲೀಸ್ ಕರೆಸಿ ಅವರನ್ನು ಪೊಲೀಸ್ ವಶಕ್ಕೆ ವಹಿಸಿ, ಮೊಕದಮ್ಮೆ ಜಾರಿ ಮಾಡುವುದೆಂದು ತೀರ್ಮಾನಿಸಿದರು. ಶಿಕ್ಷಕರ ಸಂಘ ಆ ವಿದ್ಯಾರ್ಥಿಯನ್ನು ಕೂಡಲೆ ಅಮಾನತ್ತಿನಲ್ಲಿಡಬೇಕೆಂದು ಒತ್ತಾಯಿಸಿದರು. ಈ ವಿದ್ಯಾರ್ಥಿಯ ಗುಂಪು ಶಿಕ್ಷಕಿಯನ್ನೇ ತೆಗೆಯಬೇಕೆಂದು ಹಠ ಹಿಡಿದರು. ಕಾಲೇಜಿನ ವಾತಾವರಣವೇ ಗೊಂದಲಮಯವಾಯಿತು. ಆ ವಿದ್ಯಾರ್ಥಿಯನ್ನೇನಾದರೂ ಪೊಲೀಸರು ಕರೆದುಕೊಂಡು ಹೋದರೆ ಕ್ಯಾಂಪಸ್‌ನಲ್ಲಿ ಬೆಂಕಿಯ ಜ್ವಾಲೆಯೇ ಹಬ್ಬುವ ಸಂಭವವಿತ್ತು. ಅಪರಾಧಿ ವಿದ್ಯಾರ್ಥಿಯ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಶಿಕ್ಷಕರೆಲ್ಲಾ ಮುಷ್ಕರ ಹೂಡುವುದಾಗಿ ಬೆದರಿಕೆ ಹಾಕಿದರು. ಇದೆಲ್ಲಾ ಕುಲಪತಿಗಳ ಸಮಕ್ಷಮದಲ್ಲಿ ನಡೆದಿದ್ದರಿಂದ ಮುಚ್ಚುಮರೆ ಮಾಡುವಂತಿರಲಿಲ್ಲ. ಒಂದೆರಡು ಘಂಟೆ ಅವಕಾಶ ಕೊಟ್ಟರೆ ಇಬ್ಬರ ನಡುವೆ ಮಧ್ಯಸ್ಥಿಕೆ ವಹಿಸಿ, ಎರಡು ಕಡೆಯವರಿಗೂ ಸಮಾಧಾನವಾಗುವ ಉಪಾಯ ಕಂಡು ಹಿಡಿಯಬಹುದೆಂದು, ಕುಲಪತಿಗಳ ಅಪ್ಪಣೆ ಪಡೆದು ಜವಾಬ್ದಾರಿಯನ್ನು ತೆಗೆದುಕೊಂಡೆ. ನೀವು ಏನು ನಿರ್ಧಾರ ತೆಗೆದುಕೊಳ್ಳುತ್ತೀರೋ ಅದಕ್ಕೆ ನನ್ನ ಒಪ್ಪಿಗೆ ಇದೆಯೆಂದು ಕುಲಪತಿಗಳು ವಾಗ್ದಾನ ಮಾಡಿದರು. ಇವರಿಬ್ಬರ ನಡುವೆ ಸಂಧಾನ ಮಾಡುವ ಪ್ರಯತ್ನ ಬಹಳ ಕಠಿಣವಾದದ್ದೆಂದು ಎಲ್ಲರೂ ತಿಳಿದಿದ್ದರು. ಹಲ್ಲೆ ಮಾಡಿದ ವಿದ್ಯಾರ್ಥಿಯನ್ನು ಕರೆದು ಮುಂದೆ ಅವನಿಗಾಗಬಹುದಾದ ಶಿಕ್ಷೆಯನ್ನು ವಿವರಿಸಿ, ಅವನ ಮುಂದಿನ ಭವಿಷ್ಯದ ಬಗ್ಗೆ ನಿರ್ಧರಿಸುವಂತೆ ಹೇಳಿದೆ. ಮಾಡಿದ ತಪ್ಪು ಅವನಿಗೆ ಅರಿವಾಗಿತ್ತು. ಸಂವಿಧಾನದ ಪ್ರಕಾರ ಶಿಕ್ಷೆಯಾಗುತ್ತಿತ್ತು. ಆವೇಶದಲ್ಲಿ ಅಚಾತುರ್ಯವಾಯಿತೆಂದು ಪಶ್ಚಾತ್ತಾಪಪಟ್ಟುಕೊಂಡ. ವೈಯಕ್ತಿಕವಾಗಿ ಆ ವಿದ್ಯಾರ್ಥಿ ಒಳ್ಳೆಯವನೆಂದು ನನಗೆ ತಿಳಿದಿತ್ತು. ಗುಂಪುಗಾರಿಕೆಯಲ್ಲಿ ಮುಂದಾಳುತನ ವಹಿಸಿ ಆಗಾಗ ಗಲಭೆ ಮಾಡುತ್ತಿದ್ದರೂ, ಸ್ವಂತ ಜೀವನದಲ್ಲಿ ನಿಷ್ಠಾವಂತನಾಗಿದ್ದ. ಕುಡಿಯುತ್ತಿರಲಿಲ್ಲ. ಸಿಗರೇಟು ವಗೈರೆ ಸೇದುತ್ತಿರಲಿಲ್ಲ. ಅವರಿವರಿಂದ ಸುಲಿಗೆ ಮಾಡುತ್ತಿರಲಿಲ್ಲ. ಅವನ ಹಿನ್ನೆಲೆ ಯನ್ನು ನೆನಸಿಕೊಂಡು ಮರುಗುತ್ತಿದ್ದ. ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕೆಂಬ ಹಂಬಲವಿತ್ತು. ಈ ಹಂಬಲವೇ ಹಲವಾರು ಬಾರಿ ಅವನನ್ನು ಹಲ್ಲೆಗೆ ಎಳೆದು ತರುತ್ತಿತ್ತು. ಕಾಲೇಜಿನ ಮೊದಲ ವರ್ಷ ಇವನು ಎಲ್ಲಾ ವಿದ್ಯಾರ್ಥಿಗಳಂತೆ ಸರಳ ಸ್ವಭಾವದವನಾಗಿದ್ದಾಗ ಒಬ್ಬ ಮುಗ್ಧ ಹುಡುಗನ ಮೇಲೆ ಕೈ ಮಾಡಿದರೆಂದು ರೊಚ್ಚಿಗೆದ್ದು ಕುರಿಯಂತಿದ್ದವನು ಸಿಂಹದ ಹಾಗೆ ಗರ್ಜಿಸಿದ. ಅಂದಿನಿಂದ ಇವನು ಒಂದು ಗುಂಪಿನ ಮುಂದಾಳಾದ. ಇವನ ಹಿಂಬಾಲಕರು ಇಲ್ಲಸಲ್ಲದ ನೆಪಹೂಡಿ ಮುಷ್ಕರ, ಉಪಾಧ್ಯಾಯರ ಮೇಲೆ ಹಲ್ಲೆ, ಗುಂಪುಗಾರಿಕೆ, ಓದದೆ ಬರೆಯದೆ ಪರೀಕ್ಷೆಯಲ್ಲಿ ಮಾರ್ಕ್ಸ್ ಹಾಕಿಸುವ ಪ್ರಯತ್ನ ಮುಂತಾದವು ಮಾಡಿದಾಗ, ಇವನು ತನ್ನ ಮುಂದಾಳುತನವನ್ನು ಮುಂದುವರಿಸುವ ಹಂಬಲದಿಂದ ಇವರನ್ನು ಬೆಂಬಲಿಸುತ್ತಿದ್ದ.

ಹಲ್ಲೆಗೆ ಗುರಿಯಾದ ಶಿಕ್ಷಕಿ ಸ್ವಯಂ ಇಚ್ಛೆಯಿಂದ ಬೇರೆ ಕ್ಯಾಂಪಸ್ಸಿಗೆ ವರ್ಗಾಯಿಸಿಕೊಂಡು ಹೋಗುವುದಾಗಿ ತಿಳಿಸಿದರು. ಹಲ್ಲೆ ಮಾಡಿದ ಹುಡುಗರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಇವನಿಗೆ ಒಂದು ವರ್ಷ ವ್ಯಾಸಂಗ ಕಡಿತವಾಯಿತು. ಈತ ಅದು ಮುಗಿದ ನಂತರ ವ್ಯಾಸಂಗ ಮುಂದುವರಿಸಿ ಪದವಿ ಪಡೆದು ಊರು ಸೇರಿ ತನ್ನವರ ಹಿತರಕ್ಷಣೆಯಲ್ಲಿ ತೊಡಗಿದ. ಒಂದು ಶಾಲೆಯನ್ನು ಸ್ಥಾಪಿಸಿ ನೂರಾರು ಹುಡುಗರಿಗೆ ದಾರಿ ತೋರಿಸಿದ.

ರಾಜಕೀಯದಲ್ಲಿ ಮುಂದಾಳತ್ವ ವಹಿಸುವ ಎಲ್ಲಾ ಲಕ್ಷಣಗಳು ಇವನಲ್ಲಿ ಹೊರ ಹೊಮ್ಮುತ್ತಿದ್ದವು.

ಅಂದೇನಾದರೂ ಪೊಲೀಸ್ ಕರಸಿ ಮೊಕದಮ್ಮೆ ದಾಖಲು ಮಾಡಿ ಪೊಲೀಸರ ವಶಕ್ಕೆ ಕೊಟ್ಟಿದ್ದರೆ ಮುಂದೆ ಇವನ ಭವಿಷ್ಯ ಏನಾಗುತ್ತಿತ್ತೋ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಜಿದ್ದಿನಿಂದ ಮತ್ತಷ್ಟು ಕಾಲೇಜಿನ ವಾತಾವರಣ ಕಲುಷಿತಗೊಳ್ಳುತ್ತಿದ್ದುದರಲ್ಲಿ ಸಂದೇಹವಿರಲಿಲ್ಲ. ಮುಖ್ಯವಾಗಿ ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡಿ ಶಿಕ್ಷಣ ಕೊಡಬೇಕಾದ ಸಂಸ್ಥೆ ಶಿಕ್ಷೆ ಕೊಟ್ಟು ಬೀದಿಪಾಲು ಮಾಡಿದರೆ ಅವರು ಮತ್ತೆಲ್ಲಿಗೆ ಹೋಗಬೇಕು? ಉಪ್ಪು ಉಪ್ಪಿನಾಂಶವನ್ನು ಕಳೆದುಕೊಂಡರೆ ಅದಕ್ಕೆ ಮತ್ತೆಲ್ಲಿಂದ ಉಪ್ಪಿನಾಂಶ ತರುವುದು!

ಇದೇ ವೇಳೆಯಲ್ಲಿ ಮತ್ತೊಂದು ಬಯಸದೆ ಬಂದದ್ದನ್ನು ಹೇಳಲಿಚ್ಛಿಸುತ್ತೇನೆ. ಒಂದು ಭಾನುವಾರ ಬೆಳಿಗ್ಗೆ ನನ್ನ ಸ್ನೇಹಿತರು ಜಿ. ಕೃಷ್ಣಪ್ಪನವರ ಮನೆಗೆ ಹೋಗಿದ್ದೆ. ಅವರು ಗೌರ್ನಮೆಂಟ್ ಪೋರ್ಸಲೀನ್ ಫ್ಯಾಕ್ಟರಿಯ (ಈಗ ಬಿ.ಹೆಚ್.ಇ.ಎಲ್. ಸಂಸ್ಥೆ) ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಅಂದಿನ ಪೇಪರಿನಲ್ಲಿ ಗಂಗೇನಹಳ್ಳಿ ಲೇಔಟ್‌ನಲ್ಲಿ ನಿವೇಶನಗಳನ್ನು ಹಂಚುವುದಾಗಿ ಬಿ.ಡಿ.ಎ. ಜಾಹಿರಾತು ಹೊರಡಿಸಿತ್ತು. ನಿಮ್ಮ ಕಾಲೇಜಿನ ಹತ್ತಿರವೇ ಬಿ.ಡಿ.ಎ. ನಿವೇಶನಗಳನ್ನು ಕೊಡುತ್ತಾರಂತೆ ನೀವೇಕೆ ಪ್ರಯತ್ನ ಮಾಡಬಾರದು ಎಂದು ಪೇಪರಿನಲ್ಲಿದ್ದ ಜಾಹಿರಾತಿಗೆ ಗುರ್ತು ಮಾಡಿ ತೋರಿಸಿದರು. ನನ್ನನ್ನೇಕೆ ತಮಾಷೆ ಮಾಡುವಿರಿ. ಬಿ.ಡಿ.ಎ. ಸೈಟು, ಬೆಂಗಳೂರಿನಲ್ಲಿ ಮನೆ ಅಂದರೇನು, ನಾನೇನು, ಇದು ಆಗದ ಮಾತು ಎಂದೆ. ಪ್ರಯತ್ನ ಮಾಡುವುದಕ್ಕೆ ನೀವು ಕಳೆದುಕೊಳ್ಳುವುದೇನು ಬನ್ನಿ ಎಂದು ಅವರ ಛೇರ್‌ಮನ್‌ರ ಹತ್ತಿರ ಕರೆದುಕೊಂಡು ಹೋದರು. ಅವರ ಛೇರ್‌ಮೆನ್‌ಗೂ ಬಿ.ಡಿ.ಎ. ಟ್ರಸ್ಟಿ ವಿ.ಟಿ. ವೇಲುರವರಿಗೂ ಆಗತಾನೆ ಸಂಬಂಧವಾಗಿತ್ತು. ಪೋರ್ಸಲೀನ್ ಫ್ಯಾಕ್ಟರಿಗೆ ಅವಿರತವಾಗಿ ದುಡಿಯುತ್ತಿದ್ದ ಕೃಷ್ಣಪ್ಪನವರನ್ನು ಕಂಡರೆ ಛೇರ್‌ಮನ್‌ಗೆ ತುಂಬಾ ಅಭಿಮಾನ. ಇವರು ಏನು ಹೇಳಿದರೂ ಇಲ್ಲ ಅನ್ನುತ್ತಿರಲಿಲ್ಲ. ಅವರಿಗೆ ನನ್ನನ್ನು ಪರಿಚಯಿಸಿ, ಅವರಿಂದ ಒಂದು ಚೀಟಿಯನ್ನು ಕೊಡಿಸಿ, ವಿ.ಟಿ. ವೇಲು ಅವರನ್ನು ಕಂಡು, ಈ ಚೀಟಿಯನ್ನು ಕೊಡಬೇಕೆಂದು ಕಳುಹಿಸಿದರು. ಹೇಗೂ ಭಾನುವಾರವಾದ್ದರಿಂದ ವಿ.ಟಿ. ವೇಲು ಅವರ ಮನೆಗೆ ಹೋಗಿ ಚೀಟಿಯನ್ನು ಕೊಟ್ಟೆ. ನಿಮಗೆ ಯಾವ ಸೈಟು ಬೇಕು ಅಂದರು. ನಲವತ್ತು ಅರವತ್ತರ ಸೈಟು ಯಾವುದಾದರೂ ಸರಿ ಎಂದೆ. ಅಲ್ಲಿ 88 x 55ರ ಸೈಟು ಇದೆಯಲ್ಲ, ಅದರಲ್ಲಿ ಯಾವುದಾದರೂ ತೊಗೊಳ್ಳಿ ಅಂದರು. ಅಷ್ಟಕ್ಕೆ ನನ್ನಲ್ಲಿ ದುಡ್ಡಿಲ್ಲ, 60 x 40 ಸಾಕು ಎಂದೆ. ಅರ್ಜಿಯನ್ನು ಕೊಡಿ ಎಂದರು. ಬಿ.ಡಿ.ಎ. ಆಫೀಸಿನಲ್ಲಿ ನಡೆಯುತ್ತಿದ್ದ ಮರ್ಮಗಳೆಲ್ಲ ನನಗೆ ತಿಳಿಯವು. ಅದೃಷ್ಟವಶಾತ್ ಮರಿಲಿಂಗಯ್ಯ ಅನ್ನುವವರು ಅಕೌಂಟ್ಸ್ ಡಿಪಾರ್ಟ್‌ಮೆಂಟಿನಿಂದ ಡೆಪ್ಯೂಟೇಷನ್ ಮೇಲೆ ಬಿ.ಡಿ.ಎ.ನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಪರಿಚಯವಿತ್ತು. ಅವರಿಗೆ ನಡೆದದ್ದನ್ನೆಲ್ಲ ಹೇಳಿ ಮುಂದೇನು ಮಾಡಬೇಕೆಂದು ಕೇಳಿದೆ. ನೀವೇನೂ ಯೋಚನೆ ಮಾಡಬೇಡಿ, ಎಲ್ಲವನ್ನು ನಾನು ನೋಡಿಕೊಳ್ಳುತ್ತೇನೆ, ನೀವು ಅದೃಷ್ಟವಂತರು, ಎಲ್ಲರಿಗೂ ಈ ಅವಕಾಶ ದೊರೆಯುವುದಿಲ್ಲ. ಅರ್ಜಿ ಫಾರಂ ತಂದು ತುಂಬಿಸಿ ನಿಮ್ಮಿಂದ ಸೈನ್ ಮಾಡಿಸಿ ನಂತರ ಏನು ಮಾಡಬೇಕೆಂದು ಹೇಳುತ್ತೇನೆ ಎಂದರು. ಸೈಟು ಸಿಕ್ಕಿದರೆ ಆರು ಸಾವಿರ ರೂಪಾಯಿ ಕಟ್ಟುವ ಬಗೆ ಹೇಗೆ ಎಂದೆ. ಹೇಗೋ ಮೊದಲನೆ ಕಂತು ಸಾವಿರದ ಇನ್ನೂರು ರೂಪಾಯಿ ಕಟ್ಟಿ ಮುಂದಿನ

ಕಂತುಗಳನ್ನು ನಿಧಾನವಾಗಿ ಕಟ್ಟಿದರೂ ನಡೆಯುತ್ತದೆ, ಅದಕ್ಕೆಲ್ಲಾ ಯೋಚನೆ ಮಾಡಬೇಡಿ, ಬೇಕಿದ್ದರೆ ಮೊದಲನೆಯದನ್ನು ನಾನೇ ಕಟ್ಟುತ್ತೇನೆ ನಿಧಾನವಾಗಿ ಕೊಡಿ ಅಂದರು. ಇದೆಲ್ಲ ನನಗೆ ಕನಸೋ ನನಸೋ ಎಂಬಂತಾಯಿತು.

ನಾನು ಹಾಸ್ಟಲ್ ವಾರ್ಡನ್ ಆಗಿದ್ದರಿಂದ ಹಣಕಾಸಿನ ಅಧಿಕಾರಿ (ಕಂಟ್ರೋಲರ್) ಗುರುಸಿದ್ದಪ್ಪನವರ ಸಂಪರ್ಕವಿತ್ತು. ಅವರು ಯೂನಿವರ್ಸಿಟಿಯಲ್ಲಿ ಒಳ್ಳೆ ಹೆಸರುಗಳಿಸಿದ್ದರು. ಕಂಟ್ರೋಲರ್ ಎಂದರೆ ಕೊಕ್ಕೆ ಹಾಕುವವರು ಎಂಬ ಹೆಸರಿಗೆ ವಿರುದ್ಧವಾಗಿದ್ದ ಸ್ವಭಾವ. ನನಗೆ ಸೈಟ್ ಅಲಾಟ್ ಆಗಿರುವ ವಿಷಯವನ್ನು ಹೇಳಿ ಸೈಟಿಗೆ ಸಾಲ ಕೂಡಬೇಕಾಗಿ ಕೇಳಿದೆ. ತಕ್ಷಣ, ಸೈಟಿಗೆ ಏಕೆ, ಮನೆ ಕಟ್ಟುವುದಕ್ಕೂ, ಕೊಡೋಣವಂತೆ. ಸರ್ಕಾರದಿಂದ ಮ್ಯಾಚಿಂಗ್ ಗ್ರಾಂಟ್ಸ್ ಎರಡು ವರುಷದಿಂದ ಬಂದಿಲ್ಲ. ಅದು ಬರುವ ಹಾಗೆ ಮಾಡಿ. ಸಾಲ ಕೊಡುತ್ತೇನೆ ಅಂದರು. ನನಗೆ ಆ ಚೈತನ್ಯವಿದ್ದರೆ ನಿಮ್ಮ ಹತ್ತಿರ ಸಾಲಕ್ಕಾಗಿ ಏಕೆ ಬರುತ್ತಿದ್ದೆ. ಅದು ಆಗದ ಮಾತು ಎಂದು ಹೇಳಿ ಬಂದೆ.

ಚಿನ್ಮಯ ಮಿಷನ್ ಮುಖಾಂತರ ಮಲ್ಲೇಶ್ವರಂ ವೇಮಲಾಡ್ಜ್ ಕೃಷ್ಣಮೂರ್ತಿರಾವ್ ಸಾಹೇಬರ ಮನೆಯವರೊಂದಿಗೆ ನಿಕಟ ಸಂಪರ್ಕವಿತ್ತು. ಕೃಷ್ಣಮೂರ್ತಿ ರಾವ್‌ಸಾಹೇಬರು ಡೆಪ್ಯೂಟಿ ಸೆಕ್ರೆಟರಿ ಫೈನಾನ್ಸ್ ಆಗಿದ್ದರು. ಅವರ ಪತ್ನಿ ಉಷಾಬಾಯಿಯವರು ಚಿನ್ಮಯ ಬಾಲವಿಹಾರವನ್ನು ಬಹಳ ಯಶಸ್ವಿಯಾಗಿ ನಡೆಸುತ್ತಿದ್ದರು. ಸ್ವಾಮಿ ಚಿನ್ಮಯಾನಂದರು ನಡೆಸುತ್ತಿದ್ದ ಗೀತಜ್ಞಾನಯಜ್ಞದಲ್ಲಿ ಬಾಲವಿಹಾರ ಚಟುವಟಿಕೆಗಳಿಗೆ ಮಾರ್ಗದರ್ಶಕರಾಗಿದ್ದರು. ನಾನೂ ಕೂಡ ಮಿಷನ್ನಿನ ಕೆಲಸದಲ್ಲಿ ನನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಿದ್ದೆ. ಇದಕ್ಕಾಗಿ ಅವರ ಮನೆಯವರೆಲ್ಲರೂ ನನ್ನ ಮೇಲೆ ತುಂಬಾ ಅಭಿಮಾನವಿಟ್ಟಿದ್ದರು. ಕೆಲವು ವಾರಗಳ ನಂತರ ಅವರ ಮನೆಗೆ ಹೋದಾಗ ನನ್ನ ಸೈಟಿನ ಬಗ್ಗೆ ನಡೆದ ಸಂಗತಿಯನ್ನೆಲ್ಲಾ ಹೇಳಿ ಕಂಟ್ರೋಲರ್ ಗುರುಸಿದ್ದಪ್ಪನವರು ಹೇಳಿದ್ದನ್ನು ಹೇಳಿದೆ. ವೀರೇಶ್‌ಗೆ ಇದರಿಂದ ಏನಾದರೂ ಅನುಕೂಲವಾಗುವ ಹಾಗಿದ್ದರೆ ಸರ್ಕಾರದ ಕಂತನ್ನು ನಾಳೆಯೇ ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತೇನೆಂದು ಕೃಷ್ಣಮೂರ್ತಿರಾವ್ ಸಾಹೇಬರು ಹೇಳಿದರು. ಇವರ ವಂಶಸ್ಥರಿಗೆಲ್ಲ ''ರಾವ್ ಸಾಹೇಬ್'' ಬಿರುದು ಇತ್ತು. ಇವರು ದಿವಾನ್ ಪೂರ್ಣಯ್ಯನವರ ಸಂತತಿಯವರು. ಇವರ ಪತ್ನಿ ತಿರುವಾಂಕೂರು ದಿವಾನರ ಸಂತತಿಯವರು. ದಂಪತಿಗಳಿಬ್ಬರು ಆದರ್ಶ ಜೀವಿಗಳು. ಆಡಂಬರವನ್ನು ಕನಸಿನಲ್ಲೂ ಕಾಣರು. ಅವರ ಆಗರ್ಭ ಶ್ರೀಮಂತಿಕೆಯನ್ನು ಅವರ ಸರಳ ಜೀವನದ ನಡೆನುಡಿಯಲ್ಲಿ ಕಾಣಬಹುದಿತ್ತು. ಸರ್ವಸ್ವವನ್ನು ಆಧ್ಯಾತ್ಮಿಕ ಜೀವನದ ಕಡೆ ತಿರುಗಿಸಿದ್ದರು.

ಉಷಾಬಾಯಿಯವರ ತಾಯಿ ಸಂಪ್ರದಾಯಸ್ಥರು. ಅವರೇ ಮಾಡಿದ ಅಡುಗೆ, ದಿನಕ್ಕೆ ಒಂದೇ ಬಾರಿ ಊಟ. ತುಂಬ ವಯಸ್ಸಾಗಿದ್ದುದರಿಂದ ನಿಧಾನವಾಗಿ ನಡೆಯುತ್ತಿದ್ದರು. ಅವರೊಬ್ಬರೆ ಇದ್ದಾಗ ನಾನೇನಾದರೂ ಹೋದರೆ ಹಿಂದಿನ ವಿಷಯಗಳನ್ನೆಲ್ಲಾ ಮಾತನಾಡುತ್ತಿದ್ದರು. ಒಂದು ಸಾರಿ ಟ್ರಂಕೊಂದರಿಂದ ಏನೋ ಸಾಮಾನು ಬೇಕೆಂದು ಬೀಗದ ಕೈ ಕೊಟ್ಟು ತೆಗೆದುಕೊಡಿ ಎಂದರು (ಎಂದೂ ಏಕವಚನದಲ್ಲಿ ಮಾತನಾಡಿದವರಲ್ಲ). ಎಲ್ಲೋ ಮೂಲೆಯಲ್ಲಿದ್ದ ಹಳೇ ಟ್ರಂಕೊಂದನ್ನು ಬಿಚ್ಚಿ ನೋಡಿದಾಗ ನನಗೆ ಮೈಯೆಲ್ಲ ಬೆಚ್ಚಗಾಯಿತು. ಅದರಲ್ಲಿ ಇದ್ದ ಚಿನ್ನಬೆಳ್ಳಿ ಸಾಮಾನು ನೋಡಿ ಆಶ್ಚರ್ಯವಾಯಿತು. ಅಂಬೆಗಾಲು ಇಡುವ ಕೃಷ್ಣನ ಚಿನ್ನದ

ಪ್ರತಿಮೆ ಮತ್ತು ಬೇರೆ ಆಭರಣಗಳನ್ನೆಲ್ಲಾ ಮಕ್ಕಳ ಆಟದ ಸಾಮಾನು ಇಟ್ಟಹಾಗೆ ಅಷ್ಟು ಉದಾಸೀನವಾಗಿಟ್ಟಿದ್ದ ದೃಶ್ಯ ನೋಡಿ ಅವರಲ್ಲಿದ್ದ ವೈರಾಗ್ಯ ವ್ಯಕ್ತವಾಯಿತು. ವರುಷಗಳ ನಂತರ ಅವರ ಮೊಮ್ಮಗಳು ಚಂದ್ರಿಕ, ಕೊಯಮತ್ತೂರು ರೈಲ್ವೆ ಸ್ಟೇಷನ್ನಿನಲ್ಲಿ ಸಿಕ್ಕಿ ಅಜ್ಜಿ ಹತ್ತಿರವಿದ್ದ ಚಿನ್ನದ ಆಭರಣಗಳನ್ನೆಲ್ಲಾ ಗುರುವಾಯೂರು ತಿರುಪತಿ ಹುಂಡಿಗೆ ಹಾಕಿ ಎಂದಿದ್ದರು. ಹಾಗೆ ಮಾಡಿ ಗುರುವಾಯೂರಿನಿಂದ ಬರುತ್ತಿದ್ದೇನೆಂದು ಹೇಳಿದರು. ಅಂದರೆ ಅವರ ಮೊಮ್ಮಕ್ಕಳಿಗೂ ಅವುಗಳನ್ನು ಇಟ್ಟುಕೊಳ್ಳುವ ಹಂಬಲವಿರಲಿಲ್ಲ.

ಮತ್ತೆ ಕೆಲವು ವಾರಗಳ ನಂತರ ರಾವ್‌ಸಾಹೇಬರ ಮನೆಗೆ ಹೋದಾಗ ನಿಮ್ಮ ಸಾಲದ ಬಗ್ಗೆ ಏನಾಯಿತೆಂದು ಕೇಳಿದರು. ಸರ್ಕಾರದ ಮ್ಯಾಚಿಂಗ್ ಗ್ರ್ಯಾಂಟ್ಸ್ ಬಂತಂತೆ. ಆದರೆ ಎರಡು ವರುಷದಿಂದ ಕೊಡಬೇಕಾಗಿದ್ದವರಿಗೆಲ್ಲ ಕೊಟ್ಟು ಪೂರೈಸಿದೆ, ಮುಂದಿನ ವರುಷ ಕೊಡುತ್ತೇನೆಂದು ಕಂಟ್ರೋಲರ್ ಹೇಳಿದರು ಎಂದೆ. ಅದು ಹೇಗೆ ಸಾಧ್ಯ, ನಾಳೆ ಅವರೊಡನೆ ಮಾತನಾಡುತ್ತೇನೆಂದು ರಾವ್‌ಸಾಹೇಬರು ಅಂದರು. ಸಾಲಸಿಕ್ಕಿತು. ಆರು ಸಾವಿರ ಸೈಟಿಗೆ ಕಟ್ಟಿ ಉಳಿದ ಇಪ್ಪತ್ತೆರಡು ಸಾವಿರದಲ್ಲಿ ಮನೆ ಕಟ್ಟುವುದು ಕಷ್ಟವೆಂದು ಮುಂದಕ್ಕೆ ಹಾಕಿದೆ.

ಬಿ.ವಿ. ರೆಡ್ಡಿ ಅಂಡ್ ಬ್ರದರ್ಸ್ ನಮ್ಮ ಯೂನಿವರ್ಸಿಟಿಯ ಸಣ್ಣಪುಟ್ಟ ಕಂಟ್ರಾಕ್ಟ್ ಮಾಡುತ್ತಿದ್ದರು. ಒಮ್ಮೆ ಅವರಿಗೆ ತುರ್ತಾಗಿ ಹಣ ಬೇಕಿತ್ತು. ನಾನು ವಾರ್ಡನ್ ಆಗಿದ್ದರಿಂದ ಏನಾದರೂ ವ್ಯವಸ್ಥೆ ಮಾಡಬಹುದೆಂದು ಕೇಳಿದರು. ಅದು ನನ್ನಿಂದಾಗದ ಕೆಲಸ. ಆದರೆ ನಮ್ಮ ಅಟೆಂಡರ್ ಮುನಿಯಪ್ಪ ಮನೆ ಕಟ್ಟಿಸಬೇಕೆಂದು ದುಡ್ಡು ಕೂಡಿಸಿಟ್ಟಿದ್ದಾನೆ. ಅವನಿಗೆ ಅವನ ಹತ್ತಿರವಿರುವ ದುಡ್ಡಿಗೆ ಮನೆ ಕಟ್ಟಿ ಕೊಡುವುದಿದ್ದರೆ ಅವನಿಂದ ಕೊಡಿಸುತ್ತೇನೆಂದೆ. ಅದಕ್ಕೆ ಅವರು ಒಪ್ಪಿದರು. ಹೇಳಿದ ಹಾಗೆ ಮುನಿಯಪ್ಪನಿಗೆ ಎಂಟು ಚದುರ ಮನೆಯನ್ನು ಹನ್ನೆರಡು ಸಾವಿರ ರೂಪಾಯಿಗೆ ಕಟ್ಟಿಕೊಟ್ಟರು. ಮುನಿಯಪ್ಪನಿಗೆ ಎಲ್ಲಿಲ್ಲದ ಸಂತೋಷ. ಯಾವ ಆಧಾರವು ಇಲ್ಲದೆ ಕೊಡಿಸಿದ್ದ ದುಡ್ಡಿಗೆ ಸಾರ್ಥಕವಾದ ಕೆಲಸ ಮಾಡಿಕೊಟ್ಟದ್ದಕ್ಕೆ ನನಗೂ ಸಮಾಧಾನ. ರೆಡ್ಡಿಯವರಿಗೆ ಸಮಯದಲ್ಲಿ ಸಹಾಯವಾದುದಕ್ಕೆ ಕೃತಜ್ಞತೆಯಿಂದ ನಿಮ್ಮ ಮನೆಯನ್ನೂ ನಾನೇ ಕಟ್ಟಿ ಕೊಡುತ್ತೇನೆಂದು ಆಗಾಗ ಹೇಳುತ್ತಿದ್ದರು. ಈಗ ಆ ಸಮಯ ಬಂತು. ನಲವತ್ತು ಸಾವಿರ ರೂಪಾಯಿಯಲ್ಲಿ ಹದಿಮೂರು ಚದುರ ಮನೆ ಕಟ್ಟಲು ಪ್ಲಾನು, ಬಿ.ಡಿ.ಎ. ಸ್ಯಾಂಕ್ಷನ್, ಕಾರ್ಪೊರೇಷನ್ ಅನುಮತಿ ವಗೈರೆ ವಗೈರೆ ಎಲ್ಲವನ್ನೂ ತಂದು ನನ್ನ ಮುಂದೆ ಇಟ್ಟರು. ಮಂಜೂರಾದ ಸಾಲದಲ್ಲಿ ಇನ್ನುಳಿದಿರುವುದು ಇಪ್ಪತ್ತೆರಡು ಸಾವಿರ, ಇನ್ನೂ ಸುಮಾರು ಇಪ್ಪತ್ತು ಸಾವಿರ ಎಲ್ಲಿಂದ ತರುವುದು? ಸದ್ಯಕ್ಕೆ ಬೇಡವೆಂದು ನನ್ನ ವಾದ. ಯಾರು ಪೂರ್ತಿ ದುಡ್ಡು ಇಟ್ಟುಕೊಂಡು ಮನೆ ಕಟ್ಟಲು ಪ್ರಾರಂಭಿಸುವುದಿಲ್ಲ. ಇಂದಲ್ಲ ನಾಳೆಯಾದರೂ ಸಾಲ ಮಾಡಲೇಬೇಕು. ನಿಧಾನ ಮಾಡಿದಷ್ಟು ಖರ್ಚು ದುಬಾರಿಯಾಗುತ್ತದೆ, ಯೋಚನೆ ಮಾಡಿ ನೋಡಿ ಎಂದರು.

ನಮ್ಮ ನೆಂಟರು ಡಾ॥ ಬಸಗುಳದ ರಾಜಗೌಡರು ಅಮೇರಿಕಾಕ್ಕೆ ಹೋಗಿ ನಾಲ್ಕೈದು ವರುಷವಾಗಿತ್ತು. ಅವರಿಗೆ ಪತ್ರ ಬರೆದು ಏನಾದರೂ ಧನ ಸಹಾಯ ಸಿಕ್ಕಬಹುದೆ ಎಂದು ಕೇಳಿದೆ. ಮರು ಉತ್ತರದಲ್ಲಿ ನಿಮಗೊಬ್ಬರು ಹತ್ತು ಸಾವಿರ ರೂಪಾಯಿ ತಂದುಕೊಡುತ್ತಾರೆ, ನೀವು

ಮನೆ ಕಟ್ಟಲು ಪ್ರಾರಂಭಿಸಬಹುದು. ದೇವರು ಒಳ್ಳೆಯದು ಮಾಡಲಿ ಎಂದು ಬರೆದರು. ಕೆಲವು ಸಮಯ ಕಳೆದ ನಂತರ ಒಂದು ಮಧ್ಯಾಹ್ನ ಅಪರಿಚಿತರೊಬ್ಬರು ಒಂದು ತುಂಬಿದ ಗೋಣಿ ಕೈಚೀಲವನ್ನು ನನ್ನ ಟೇಬಲ್ ಮೇಲೆ ಇಟ್ಟು ಕ್ಲಾಸ್ ರೂಮಿನ ಹೊರಗಡೆ ನಿಂತಿದ್ದರು. ನಾನು ಬರುತ್ತಿದ್ದುದನ್ನು ನೋಡಿ ಪೈಜಾಮ ಹರಕಲು ಶರಟು ಹಾಕಿದ್ದ ಈ ವ್ಯಕ್ತಿ ಟೇಬಲ್ ಮೇಲೆ ಇಟ್ಟಿದ್ದೇನೆಂದು ಹೇಳಿ ಒಂದು ಸಲಾಮು ಹಾಕಿ ಹೋದ. ನನಗೇನು ಅರ್ಥವಾಗಲಿಲ್ಲ. ಒಳಗೆ ಬಂದು ಟೇಬಲ್ ಮೇಲಿದ್ದ ಗೋಣಿ ಕೈ ಚೀಲವನ್ನು ನೋಡಿದಾಗ ಒಳಗಡೆ ಕೆಲವು ನೋಟುಗಳ ಕಂತೆ ಇದ್ದವು. ಒಳಗಡೆ ಚೀಟಿಯಲ್ಲಿ ಇದರಲ್ಲಿ ನಲವತ್ತು ಸಾವಿರ ರೂಪಾಯಿ ಇದೆ. ನೀವು ಹತ್ತು ಸಾವಿರ ತೆಗೆದುಕೊಂಡು ಉಳಿದಿದ್ದನ್ನು ಮೂರು ಜನಕ್ಕೆ ಕೊಡಬೇಕೆಂದು ಅವರ ವಿಳಾಸ ಬರೆದಿದ್ದರು. ಯಾರು ಎಲ್ಲಿಂದ ಹೇಗೆ ಕಳುಹಿಸಿದರು ಎಂಬ ವಿವರವೇನಿರಲಿಲ್ಲ. ತಂದ ವ್ಯಕ್ತಿ ನಾನಾರೆಂಬುದನ್ನು ಕಾಲೇಜಿನಲ್ಲಿ ಕೇಳಿ ತಿಳಿದಿರಬಹುದು. ಆದರೆ ತಲುಪಿದ್ದಕ್ಕೆ ನನ್ನಿಂದ ಒಂದು ಚೀಟಿಯನ್ನೂ ಕೇಳಲಿಲ್ಲ. ಆಗಿನ ಕಾಲದಲ್ಲಿ ಒಂದು ವ್ಯವಸ್ಥಿತ ಹವಾಲ ನಡೆಯುತ್ತಿತ್ತೆಂದು ಕಾಣುತ್ತದೆ. ಅಮೇರಿಕೆಯಿಂದ ದುಡ್ಡು ಕಳುಹಿಸುವವರು, ಅಲ್ಲಿರುವ ಏಜೆಂಟರುಗಳಿಗೆ ಡಾಲರ್ ಕೊಡುತ್ತಿದ್ದರು. ಭಾರತದಲ್ಲಿ ಹೇಳಿದವರಿಗೆ ರೂಪಾಯಿ ಕೊಡುತ್ತಿದ್ದರು. ಏಜೆಂಟ್ ಬ್ಯಾಂಕಿನ ರೇಟಿಗಿಂತ ಹೆಚ್ಚಿನ ಹಣ ಕೊಡುತ್ತಿದ್ದರೆಂದು ಕಾಣುತ್ತದೆ. ಆದರೆ ಅವರ ವ್ಯವಸ್ಥೆಯಲ್ಲಿ ನಂಬಿಕೆ ಎಷ್ಟಿತ್ತೆಂದರೆ, ಲಕ್ಷಾಂತರ ರೂಪಾಯಿ ವ್ಯವಹಾರ ಯಾವ ಮುಚ್ಚಳಿಕೆಯೂ ಇಲ್ಲದೆ ನಂಬಿಕೆಯ ಮೇಲೆ ನಡೆಯುತ್ತಿತ್ತು.

ರಾಜೇಗೌಡರು ಕಳುಹಿಸಿದ್ದ ಹತ್ತು ಸಾವಿರ ರೂಪಾಯಿ ಮತ್ತು ಮೊದಲನೆ ಕಂತಿನ ಹತ್ತು ಸಾವಿರ ಸಾಲದ ಮೊತ್ತ ಒಟ್ಟು ಸೇರಿಸಿ ಕಂಟ್ರಾಕ್ಟರಿಗೆ ಕೊಟ್ಟು ಮನೆ ಪ್ರಾರಂಭಿಸಬೇಕೆಂದು ಹೇಳಿದೆ. ಪಾಯವನ್ನು ತೆಗೆದು ಆರು ತಿಂಗಳು ಏನನ್ನೂ ಮಾಡಲಿಲ್ಲ. ಎಲ್ಲರೂ ನಿನ್ನ ಗ್ರಹಚಾರ ಚೆನ್ನಾಗಿಲ್ಲ ಈ ದುಡ್ಡು ಹೋಯಿತು ಎನ್ನಲು ಪ್ರಾಂಭಿಸಿದರು. ಇದೇ ಸಮಯದಲ್ಲಿ ಹಿಂದೆ ಹೇಳಿದ ಸ್ನೇಹಿತರಿಗೆ ಸಹಿ ಹಾಕಿದ್ದ ಜಾಮೀನಿನ ಕೇಸು ಮೈಸೂರು ಕೋರ್ಟಿನಲ್ಲಿತ್ತು. ಅದರಿಂದ ಪಾರಾಗಲು ಪರದಾಡುತ್ತಿದ್ದೆ. ಇಷ್ಟಾದರು ಕಂಟ್ರಾಕ್ಟರ್ ರೆಡ್ಡಿಯವರಿಗೆ ತಗಾದೆ ಮಾಡಲಿಲ್ಲ. ಅವರು ಮೋಸ ಮಾಡುವ ವ್ಯಕ್ತಿಯಲ್ಲವೆಂದು ನನಗೆ ತಿಳಿದಿತ್ತು. ಕೊನೆಗೂ ಮನೆ ಕಟ್ಟಿ ಪೂರೈಸಿದರು. ಒಂದು ದಿನವಾದರೂ ಮನೆ ಹೀಗಿರಬೇಕೆಂದು ಸಲಹೆ ಮಾಡಿದವನಲ್ಲ. ಅವರ ಸ್ವಂತ ಮನೆಯಂತೆ ತಿಳಿದು ಮಾಡಿದರು. ಪೋರ್ಟಿಕೋದಲ್ಲಿ ಎರಡು ಕಂಬ ಹಾಕಿದ್ದಕ್ಕೆ ಬಿ.ಡಿ.ಎ.ಯವರು ಎಂಟುನೂರು ರೂಪಾಯಿ ಫೈನ್ ಹಾಕಿದರು. ಕಾನೂನು ಬಾಹಿರವಾಗಿ ಹೀಗೇಕೆ ಮಾಡಿದಿರಿ ಎಂದೆ. ನಿಮಗೆ ಬೇಜಾರಾದರೆ ಆ ಫೈನನ್ನು ನಾನೇ ಕಟ್ಟುತ್ತೇನೆಂದರು. ಮುಂದೆ ಮಹಡಿ ಹಾಕುವಾಗ ಈ ಕಂಬ ಬಹಳ ಉಪಯುಕ್ತವಾದವು. ಬಿ.ಡಿ.ಎ.ಯಲ್ಲಿ ಫೈನ್ ಹಾಕಲು ಕಾರಣರಾದ ವ್ಯಕ್ತಿ ಕೆಲವು ತಿಂಗಳು ಕಳೆದ ಮೇಲೆ ಮನೆ ನನ್ನದೆಂದು ತಿಳಿದು ಫೈನ್ ಹಾಕಿದ್ದಕ್ಕೆ ಕೈ ಹಿಸುಕಿಕೊಂಡರು. ಅವರ ಮಗನನ್ನು ನಮ್ಮ ಕಾಲೇಜಿಗೆ ಸೇರಿಸುವಾಗ ನನ್ನ ಸಹಾಯ ಪಡೆದಿದ್ದರು. ಆಗಾಗ ಅವನ ಯೋಗಕ್ಷೇಮವನ್ನು ಕೇಳಲು ನನ್ನ ಹತ್ತಿರ ಬರುತ್ತಿದ್ದರು. ಆ ಮನೆ ರೆಡ್ಡಿಯವರದೆಂದು ತಿಳಿದು ಎಷ್ಟು ಅಚಾತುರ್ಯವಾಯಿತೆಂದು ಪಶ್ಚಾತ್ತಾಪ ಪಟ್ಟುಕೊಂಡರು.

ಹೆಣ್ಣು ಹೊನ್ನು ಮಣ್ಣು ಯೋಗವಿದ್ದವರಿಗೆ ಲಭ್ಯವಾಗುವುದೆಂದು ಹೇಳುವ ಮಾತು ಎಷ್ಟು ಸತ್ಯ ಅನ್ನುವುದಕ್ಕೆ ಇದೊಂದು ನಿದರ್ಶನ. ಆ ವರ್ಷ ಸೈಟು ತೆಗೆದು ಮನೆ ಕಟ್ಟುವ ಸಾಧ್ಯತೆಯನ್ನು ಕನಸಿನಲ್ಲೂ ಕಂಡಿರಲಿಲ್ಲ. ನನಗೆ ಅಲಾಟ್ ಆದ ಸೈಟು ಸೇರಿದಂತೆ ಎಂಟು ಮಂದಿ ಪಶುವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರು ಸೈಟಿಗೆ ಎರಡು ಸಾವಿರ ರೂಪಾಯಿಯಂತೆ ರೆವೆನ್ಯೂ ಸೈಟನ್ನು ಕೊಂಡಿದ್ದರು. ಅವರಾರಿಗೂ ಸೈಟು ಆಗಲಿಲ್ಲ. ಬಿ.ಡಿ.ಎ. ಈ ಸೈಟುಗಳೂ ಸೇರಿದಂತೆ ಗಂಗೇನಹಳ್ಳಿಯ ಜಮೀನನ್ನೆಲ್ಲಾ ತಮ್ಮ ವಶಕ್ಕೆ ತೆಗೆದುಕೊಂಡು ಇವರುಗಳಿಗೆ ತಲಾ ಮುನ್ನೂರು ರೂಪಾಯಿ ಪರಿಹಾರ ಕೊಟ್ಟಿದ್ದರು. ನನ್ನ ಪಿಹೆಚ್.ಡಿ. ಥೀಸೀಸ್ ಬರೆಯುವುದಕ್ಕೆ ಕೃ.ವಿ.ವಿದ್ಯಾನಿಲಯದಿಂದ ಎರಡು ಸಾವಿರ ಸಾಲ ತೆಗೆದಿದ್ದೆ. ಹೀಗಿರುವಾಗ ಮನೆ ಕಟ್ಟಲು ದುಡ್ಡು ಎಲ್ಲಿಂದ ಬರಬೇಕು. ಅದು ಹೇಗೋ ಬಂತು. ಮನೆ ಕಟ್ಟಿದ್ದಾಯಿತು. ಮತ್ತೆ ಪುನಃ ಎಷ್ಟು ಪ್ರಯತ್ನ ಪಟ್ಟರೂ ಇನ್ನೊಂದು ಸೈಟು ಮಾಡಲಾಗಲಿಲ್ಲ. ಯು.ಎ.ಎಸ್. ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕರಲ್ಲಿ ನಾನೊಬ್ಬ. ಕೃಷಿನಗರದಲ್ಲಿ ಒಂದು ನಿವೇಶನವನ್ನು ನನಗೆ ಅಲಾಟ್ ಮಾಡಿದ್ದರು. ಮನೆ ಕಟ್ಟುವಾಗ ಇನ್ನು ಈ ಜನ್ಮದಲ್ಲಿ ಮತ್ತೊಂದು ಮನೆ ಬೇಡವೆಂದಾಗಿತ್ತು. ಒಂದು ಸಾವಿರ ರೂಪಾಯಿ ಕಟ್ಟಿದ್ದರೂ ಕೂಡ ಅದು ಬೇಡವೆಂದು ಮತ್ತೊಬ್ಬ ಮೆಂಬರಿಗೆ ಕೊಟ್ಟೆ. ಅವರು ಅದನ್ನು ಕೆಲವು ವರುಷಗಳ ನಂತರ ಐದು ಲಕ್ಷ ರೂಪಾಯಿಗೆ ಮಾರಿದರು. ನನ್ನ ಸಹಪಾಠಿಗಳನೇಕರು ನನ್ನ ಹೆಣ್ಣು ಮಕ್ಕಳಿಗಾದರೂ ಒಂದು ಸೈಟು ಮಾಡದಿದ್ದರೆ ನಿನ್ನನ್ನು ಏನೆಂದುಕೊಂಡಾರು ಅನ್ನುತ್ತಿದ್ದರು. ದೇವರ ದಯೆಯಿಂದ ಹೆಣ್ಣುಮಕ್ಕಳಿಬ್ಬರಿಗೂ ಸೈಟು ತೋರಿಸಿ ಮದುವೆ ಮಾಡುವ ಪ್ರಸಂಗ ಬರಲಿಲ್ಲ. ಮತ್ತೊಂದು ಸೈಟು ಮಾಡಲಿಲ್ಲವಲ್ಲ ಎಂಬ ಚಿಂತೆಯೂ ಇಲ್ಲ.

ನನ್ನ ಸ್ವಂತ ಮನೆಗೆ ಬಂದು ನೆಲಸಿದ್ದು 1972 ಜೂನ್‌ನಲ್ಲಿ. ಆಗ ಗಂಗೇನಹಳ್ಳಿಯಲ್ಲಿ ವೀವರ್ಸ್ ಕಾಲೋನಿಯ ಹತ್ತಿಪ್ಪತ್ತು ಮನೆಗಳನ್ನು ಬಿಟ್ಟರೆ ಬಳ್ಳಾರಿ ರೋಡಿನವರೆಗೆ ಮನೆಗಳಿರಲಿಲ್ಲ. ನಮ್ಮ ಬೀದಿಯಲ್ಲಿ ಎದುರಿಗೆ ಎರಡು ಮನೆಗಳನ್ನು ಕಟ್ಟುತ್ತಿದ್ದರು. ಮಕ್ಕಳಿಬ್ಬರು ಸ್ಟೆಲ್ಲಾ ಮೆರಿಸ್ ಸ್ಕೂಲಿಗೆ ಕಾಲೇಜು ಬಸ್ಸಿನಲ್ಲಿ ಹೋಗಿ ಬರುತ್ತಿದ್ದರು. ಬಸ್ಸು ಬಿನ್ನಿಮಿಲ್ ಹತ್ತಿರ ಬಂದದ್ದನ್ನು ಮನೆಯಿಂದಲೇ ನೋಡಿ ಕಾಲು ದಾರಿಯಲ್ಲಿ ಕಾಲೇಜಿನ ಮುಂದೆ ಹೋಗಿ ಮಕ್ಕಳನ್ನು ಇಳಿಸಿಕೊಂಡು ಬರುತ್ತಿದ್ದೆವು.

ಮನೆಗೆ ಬಂದ ಮರು ದಿವಸವೆ ಮಧ್ಯರಾತ್ರಿ ಸಮಯದಲ್ಲಿ ಹಿಂದಿನ ಬಾಗಿಲನ್ನು ಗಡಾರಿಯಿಂದ ಒಡೆಯುವ ಶಬ್ದಕೇಳಿ ಬಂತು. ಅಂದು ಮನೆಯಲ್ಲಿ ನಿವೃತ್ತ ಡಿ. ವೈ. ಎಸ್.ಪಿ. ಅನಂತಸ್ವಾಮಿಗೌಡರು, ಅತ್ತಿಹಳ್ಳಿ ರಾಮೇಗೌಡರು, ಗುಡ್ಡದೂರಿನ ನೆಂಟರೆಲ್ಲರು ಮನೆಯಲ್ಲಿ ಮಲಗಿದ್ದರು. ಮನೆಯಲ್ಲಿ ಫೋನ್ ಇರಲಿಲ್ಲ. ಕಿರುಚಿದರೂ ಅಕ್ಕಪಕ್ಕದವರಾರೂ ಇರಲಿಲ್ಲ. ಬಾಗಿಲು ಒಡೆಯುತ್ತಿದ್ದವನು ಒಬ್ಬನೇ ಆದರೂ ಮನೆಯವರನ್ನೆಲ್ಲ ಗಡಾರಿಯಿಂದ ಹೊಡೆದು ದೋಚುವ ಮನಸ್ಸು ಮಾಡಿದ್ದ. ಪುಣ್ಯಕ್ಕೆ ಬಾಗಿಲು ಅಷ್ಟು ಸುಲಭವಾಗಿ ಒಡೆಯುವಂತಿರಲಿಲ್ಲ. ಒಳಗಿದ್ದವರೆಲ್ಲ ಅದನ್ನು ಬಲವಾಗಿ ಅದುಮಿ ಹಿಡಿದುಕೊಂಡೆವು. ಆಗದಿದ್ದಕ್ಕೆ ಏನನ್ನೋ ಶಪಿಸಿಕೊಂಡು ಗಡಾರಿಯನ್ನು ಹೆಗಲ ಮೇಲೆ ಹಾಕಿಕೊಂಡು ಈ ಚಡ್ಡಿದಾರಿ ಗಡುವ ಹೋಗಿದ್ದನ್ನು

ಒಳಗಿನಿಂದ ಎಲ್ಲರೂ ನೋಡಿದೆವು. ಇಲ್ಲಿಂದ ಹೋದವನು ಯೂನಿವರ್ಸಿಟಿ ಕಾಲೋನಿಯೊಳಗೆ ನಾಲ್ಕು ಮನೆಗಳಿಗೆ ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗಿದ್ದ.

ಮರುದಿನ ಹಿಂದಿನ ರಾತ್ರಿ ನಡೆದ ಘಟನೆಗಳ ಬಗ್ಗೆ ಮಾತಾಡುತ್ತಿದ್ದಾಗ ಕಾಲೋನಿಯಲ್ಲೇ ಇದ್ದ ಬೇಸಿಕ್ ಸೈನ್ಸ್ ನಿರ್ದೇಶಕರಾಗಿದ್ದ ಡಾ॥ ನಾರಾಯಣರವರು ಹೇಳಿದ ಒಂದು ಪ್ರಸಂಗ ನೆನಪಿಗೆ ಬರುತ್ತದೆ.

ಅವರು ಅಮೆರಿಕಾದಿಂದ ಬಂದ ಮೇಲೆ ರಾಜಾಜಿನಗರದಲ್ಲಿರುವಾಗ ಒಂದು ರಾತ್ರಿ ಕುಖ್ಯಾತ ದರೋಡೆಕೋರ ಕೋಲಾರದ ಗೋವಿಂದ ಎಂಬುವನು ಮನೆಯೊಳಗೆ ನುಗ್ಗಿ ಪಿಸ್ತೂಲು ತೋರಿಸಿ ಮನೆಯವರನ್ನೆಲ್ಲಾ ಒಂದು ರೂಮಿಗೆ ಕೂಡಿ ಹಾಕಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗಿದ್ದ. ಎರಡು ವಾರ ಕಳೆದ ಮೇಲೆ ಅವನು ಪೊಲೀಸರಿಗೆ ಸಿಕ್ಕಿ ಬಿದ್ದ. ಹಿಂದೆ ಅವನು ಮಾಡಿದ್ದ ದರೋಡೆಗಳ ಮಾಹಿತಿ ಮೇರೆಗೆ ಡಾ॥ ನಾರಾಯಣರವರನ್ನು ಪೊಲೀಸ್ ಸ್ಟೇಷನ್‌ಗೆ ಕರೆಸಿ, ಅವರಲ್ಲಿ ನಡೆದ ಕಳ್ಳತನದ ವಿವರವನ್ನು ಕೇಳುತ್ತಿರುವಾಗ ಗೋವಿಂದನು ಅಲ್ಲಿದ್ದನಂತೆ. ಅವನನ್ನು ಉದ್ದೇಶಿಸಿ, ನನ್ನಂತಹ ಮೇಸ್ಟ್ರು ಮನೆಗೆ ನುಗ್ಗಿದರೆ ನಿನಗೇನು ಸಿಕ್ಕುತ್ತೆ ಎಂದರಂತೆ. ಅದಕ್ಕೆ ಅವನು ನಿಮ್ಮಲ್ಲಿದ್ದ ಇಂಪೋರ್ಟೆಡ್ ಕಾರು, ಡಾ॥ ನಾರಾಯಣ ಬೋರ್ಡ್ ನೋಡಿ ಯಾರೂ ದೊಡ್ಡ ಡಾಕ್ಟರು ಇರಬಹುದೆಂದು ತಿಳಿದು ನುಗ್ಗಿದೆ. ನೀವು ಮೇಸ್ಟ್ರು ಅಂತ ಬೋರ್ಡ್ ಹಾಕಿದ್ದರೆ ನಿಮ್ಮ ಮನೆ ಕಡೆ ತಿರುಗಿ ನೋಡುತ್ತಿರಲಿಲ್ಲವೆಂದನಂತೆ. ಡಾ॥ ನಾರಾಯಣ ಇದನ್ನು ಹೇಳಿದ ಮೇಲೆ ಡಾ॥ ವೀರೇಶ್ ಬೋರ್ಡ್ ತೆಗೆಸಿ ಪ್ರೊ॥ ವೀರೇಶ್ ನಾಮಫಲಕ ಹಾಕಿದೆ.

ಕಳ್ಳತನಕ್ಕೆ ಎಡೆ ಮಾಡುವವರೂ ನಾವೇ. ಕಳ್ಳನೆಂದು ದೂಷಿಸುವವರೂ ನಾವೇ. ಕೆಲವರು ನ್ಯಾಯವಲ್ಲದ ಸಂಪಾದನೆಯಿಂದ ತಮ್ಮ ಸಂಪತ್ತನ್ನು ಪ್ರದರ್ಶಿಸಿ ಕಳ್ಳತನಕ್ಕೆ ಕಾರಣರಾಗುವರು. ಮನೆಯಲ್ಲಿ ದುಡ್ಡು, ಒಡವೆಗಳನ್ನು ಕೈಗೆ ಸಿಕ್ಕುವಂತೆ ಇಟ್ಟು ಕೆಲಸದವರನ್ನು ಕಳ್ಳರನ್ನಾಗಿ ಮಾಡುವರು.

ನನ್ನ ಪಿಹೆಚ್.ಡಿ. ಸಂಶೋಧನೆಯನ್ನು ಮುಕ್ಕಾಲು ಭಾಗ ಪೂರೈಸಿದ್ದಾಗ ಅಮೆರಿಕಾಕ್ಕೆ ಹೋಗಲು ಆಯ್ಕೆಯಾಗಿದ್ದೆ. ನನ್ನ ಜೊತೆ ಹನ್ನೊಂದು ಜನಕ್ಕೆ ಆಯ್ಕೆಯಾಗಿತ್ತು. ಅವರಲ್ಲಿ ನಾನು ಸೇರಿದಂತೆ ಐದಾರು ಜನರು ಪಿಹೆಚ್.ಡಿ. ಮಾಡುತ್ತಿದ್ದೆವು. ಆಯ್ಕೆಯಾದ ತಕ್ಷಣ ಇಲ್ಲಿ ಪಿಹೆಚ್.ಡಿ. ಮಾಡುತ್ತಿದ್ದವರು ಎಲ್ಲರೂ ಕೈ ಬಿಟ್ಟು ಅಮೆರಿಕಾಕ್ಕೆ ಹೋಗುವುದನ್ನು ಕಾಯುತ್ತಿದ್ದರು. ಡೀನ್ ರಂಗಸ್ವಾಮಿಯವರು ನನ್ನ ಶ್ರಮ ನೋಡಿ, ನಿಮಗೇನು ಎರಡು ಪಿಹೆಚ್.ಡಿ. ಮಾಡುವ ಆಸೆಯೇ? ಹೇಗೋ ಅಮೆರಿಕಾದಲ್ಲಿ ಪಿಹೆಚ್.ಡಿ. ಮಾಡುವ ಅವಕಾಶ ದೊರೆತಿದೆ. ಇದನ್ನು ಬಿಟ್ಟರಾಗುವುದಿಲ್ಲವೇ ಎನ್ನುತ್ತಿದ್ದರು. ಹೋಗುವ ತನಕವಾದರೂ ಮಾಡುತ್ತಿರುತ್ತೇನೆ. ನಾನು ಕೈಗೊಂಡ ಸಂಶೋಧನೆ ರೈತರಿಗೆ ಶೀಘ್ರವಾಗಿ ಉಪಯೋಗವಾಗು ವಂತಹದು. ಅದನ್ನೇಕೆ ಕೈಬಿಡುವುದೆಂದು ಮುಂದುವರಿಸುತ್ತಿದ್ದೇನೆ ಎಂದೆ. ಎಲ್ಲರಿಗೂ ಸಂಯುಕ್ತ ಸಂಸ್ಥಾನದಲ್ಲಿರುವ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ದೊರೆಯಬೇಕಾದರೆ ಸುಮಾರು ವರುಷವೇ ಹಿಡಿಯಿತು. ಇನ್ನೇನು ಎಲ್ಲರೂ ಹೊರಡಬೇಕೆನ್ನುವಷ್ಟರಲ್ಲಿ ಇಂಡಿಯ-ಪಾಕಿಸ್ತಾನ ಯುದ್ಧ

ಪ್ರಾರಂಭವಾಯಿತು (1971). ರಾಜಕೀಯ ಧೋರಣೆಯಿಂದಾಗಿ ಅಮೆರಿಕಾ ಎಲ್ಲಾ ಸಹಾಯವನ್ನು ತಕ್ಷಣ ಸ್ಥಗಿತಗೊಳಿಸಿತು. ಹನ್ನೊಂದು ಜನರಲ್ಲಿ ಒಬ್ಬರು ಮಾತ್ರ ಈ ಆರ್ಡರ್ ಬರುವಾಗ ವಿಮಾನ ಹತ್ತಿದ್ದರು (ಕೀಟಶಾಸ್ತ್ರ ವಿಭಾಗದ ದಿವಂಗತ ಚಂದ್ರಶೇಖರ್). ಉಳಿದವರೆಲ್ಲ ಇಲ್ಲಿಯೇ ಇರಬೇಕಾಯಿತು. ಇಲ್ಲಿ ಪಿಹೆಚ್.ಡಿ. ಮಾಡುತ್ತಿದ್ದು ಬಿಟ್ಟವರು ಪುನಃ ಮಾಡಲೇ ಇಲ್ಲ. ಇದರಿಂದ ನನಗೇನು ಅನ್ಯಾಯವಾಗಲಿಲ್ಲ. ನಾನು ಇಲ್ಲಿ ಪಿಹೆಚ್.ಡಿ. ಮಾಡಿದ್ದು ಹೆಚ್ಚಲ್ಲ, ಆದರೆ ನಾನು ಮಾಡಿದಂತಹ ಸಂಶೋಧನೆ ದೇಶದಾದ್ಯಂತ ರೈತರಿಗೆ ಅನುಕೂಲವಾಯಿತು.

ಸಾವಿರದ ಒಂಭೈನೂರ ಎಪ್ಪತ್ತರ ದಶಕದ ಮೊದಲ ಭಾಗದಲ್ಲಿ ಮಹಾರಾಷ್ಟ್ರ, ಗುಜರಾತ್, ರಾಜಾಸ್ತಾನದಲ್ಲಿ ಬೇರು ತಿನ್ನುವ ಹುಳದ ಹಾವಳಿಯಿಂದ ನೆಲಗಡಲೆ ಬೆಳೆ ಪೂರ್ಣ ನಾಶವಾಯಿತು. ಎಣ್ಣೆಯ ಬೆಲೆ ಗಗನಕ್ಕೇರಿತು. ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳ ಸುರಿಮಳೆಯೇ ಆಯಿತು. ಕೃಷಿಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡರು. ಐ.ಸಿ.ಎ.ಆರ್. ಡೈರೆಕ್ಟರ್ ಜನರಲ್ ಡಾ॥ ಸ್ವಾಮಿನಾಥನ್‌ರವರಿಗೆ ಸರಿಯಾದ ಪರಿಹಾರ ಹೇಳಲು ಸಂಶೋಧನೆಯ ಫಲಿತಾಂಶ ದೊರೆತಿರಲಿಲ್ಲ. ಬೆಂಗಳೂರಿನ ಸಿ.ಐ.ಬಿ.ಸಿ. ಎಂಟಮಾಲಾಜಿಸ್ಟ್ ಆಗಿದ್ದ ಡಾ॥ ಶಂಕರಂರವರು ಕೃ.ವಿ.ವಿದ್ಯಾಲಯದಲ್ಲಿ ಇದರ ಬಗ್ಗೆ ಗಾಢವಾದ ಸಂಶೋಧನೆ ನಡೆಸಿದ್ದಾರೆಂದು ನನ್ನ ಹೆಸರನ್ನು ಹೇಳಿದ ಮೇಲೆ, ನಾಳೆಯೆ ಅವರನ್ನು ವಿಮಾನದಲ್ಲಿ ಕಳುಹಿಸಿಕೊಡಬೇಕೆಂದು ಡಾ॥ ಸ್ವಾಮಿನಾಥನ್‌ರವರು ಕೇಳಿಕೊಂಡರಂತೆ. ಅದರಂತೆಯೇ ನಾನು ಮಾಡಿದ್ದ ಸಂಶೋಧನೆಯ ಪೂರ್ಣ ಮಾಹಿತಿ ಮತ್ತು ಫೋಟೋಗ್ರಾಫ್‌ನೊಂದಿಗೆ ನಿವಾರಣೋಪಾಯಗಳನ್ನು ವಿವರಿಸಿ ಒಂದು ಪ್ರಬಂಧವನ್ನು ಸಿದ್ಧಪಡಿಸಿ ಐ.ಸಿ.ಎ.ಆರ್.ನಲ್ಲಿ ಸ್ವಾಮಿನಾಥನ್‌ರವರ ಮುಂದೆ ಮಂಡಿಸಿದೆ. ತುಂಬಾ ಸಂತೋಷಪಟ್ಟು ಪಾರ್ಲಿಮೆಂಟಿಗೆ ಉತ್ತರವನ್ನು ತಯಾರುಮಾಡಿ ನಾನೂ ಒಳ ಗೊಂಡಂತೆ ಒಂದು ಹೈ ಪವರ್ ಕಮಿಟಿಯನ್ನು ಮಾಡಿ ಬೇರು ಹುಳ (ವೈಟ್‌ಗ್ರಬ್ಸ್) ಪೀಡಿತ ಪ್ರದೇಶಗಳಿಗೆ ಭೇಟಿಕೊಟ್ಟು ಒಂದು ವರದಿಯನ್ನು ಸಲ್ಲಿಸುವಂತೆ ಸರ್ಕಾರಿ ಆದೇಶವನ್ನು ಹೊರಡಿಸಿದರು. ಇದರ ಪ್ರಯುಕ್ತ ಭಾರತದಲ್ಲಿ ಮೊಟ್ಟಮೊದಲಿಗೆ ಒಂದೇ ಹುಳದ ಅಧ್ಯಯನಕ್ಕೆ ಆಲ್ ಇಂಡಿಯಾ ಕೋ ಆರ್ಡಿನೇಟೆಡ್ ಪ್ರಾಜೆಕ್ಟ್ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಎರಡು ದಶಕಗಳಿಂದ ಬೇರು ಹುಳದ ಹಾವಳಿ ಉಲ್ಬಣವಾಗಿದ್ದ ವರದಿ ಆಗಿಲ್ಲ.

ಡಾ॥ ಪುಟ್ಟರುದ್ರಯ್ಯನವರು ಒಂದು ದಿನ ನನ್ನ ರೂಮಿಗೆ ಬಂದು ನೀನು ಅಮೇರಿಕಾಕ್ಕೆ ಹೋಗಲು ಸೆಲೆಕ್ಟ್ ಆಗಲಿಲ್ಲವೆಂದು ಬೇಜಾರು ಮಾಡಿಕೊಂಡಿದ್ದೆ. ಆಗ ಹೋಗಿದ್ದರೆ ಇದನ್ನು ಯಾರು ಮಾಡುತ್ತಿದ್ದರು? ಇಂದು ದೇಶಾದ್ಯಂತ ನಿನ್ನನ್ನು ನೆನಸಿಕೊಳ್ಳುವ ಕೆಲಸ ಮಾಡಿದೆ, ಅಲ್ಲಿ ಹೋಗಿದ್ದರೆ ಅಮೇರಿಕನ್ನರಿಗೆ ಬೇಕಿದ್ದ ಸಂಶೋಧನೆ ನಡೆಸಬೇಕಿತ್ತು, ಇದು ಸಂತೋಷವೋ ಅದು ಸಂತೋಷವೊ ಎಂದರು. ಕೃ.ವಿ. ವಿದ್ಯಾನಿಲಯದ ಪ್ರಾರಂಭದಲ್ಲಿ ಕೀಟಶಾಸ್ತ್ರ ವಿಭಾಗದಿಂದ ಎರಡು ಜನರನ್ನು ಅಮೆರಿಕಾಕ್ಕೆ ಪಿಹೆಚ್.ಡಿ.ಗೆ ಕಳುಹಿಸಲು ನಿರ್ಧರಿಸಿ, ಅರ್ಜಿಗಳನ್ನು ಆಹ್ವಾನಿಸಿದಾಗ, ಎಲ್ಲರ ಬಾಯಲ್ಲಿ ನನ್ನ ಹೆಸರು ಮೊದಲು ಬರುತ್ತಿತ್ತು. ಏಕೆಂದರೆ ಆ ವಿಭಾಗದಲ್ಲಿ ಎಂ.ಎಸ್‌ಸಿ. ಮಾಡಿ ಸೇರಿದ್ದವನು ನಾನೊಬ್ಬನೆ. ನನ್ನ ಸಹೋದ್ಯೋಗಿಗಳಿಬ್ಬರು ಆಗ ತಾನೆ ಎಂ.ಎಸ್‌ಸಿ. ಡೆಪ್ಯೂಟೇಷನ್ ಪೂರೈಸಿ ಬಂದಿದ್ದರು. ಕಾನೂನಿನ ಪ್ರಕಾರ ಕನಿಷ್ಠ ಒಂದೆರೆಡು ವರುಷ ಅವರು ಸೇವೆ ಸಲ್ಲಿಸಿದ ನಂತರವೆ ಮುಂದಿನ ಡೆಪ್ಯೂಟೇಷನ್ ಪರಿಗಣಿಸುವುದು.

ಅದೂ ಅಲ್ಲದೆ ಪುಟ್ಟರುದ್ರಯ್ಯರವರು ನನ್ನನ್ನು ಬಿಟ್ಟು ಬೇರೆಯವರನ್ನು ಆಯ್ಕೆ ಮಾಡಲು ಸಮ್ಮತಿಸುವುದಿಲ್ಲವೆಂಬ ನಂಬಿಕೆ ಬೇರೆ. ಆದರೆ ಬಯಸಿದ್ದು ಒಂದು, ಆದದ್ದು ಮತ್ತೊಂದು. ಮತ್ತೊಮ್ಮೆ ಅವರಿಬ್ಬರು ಡೆಪ್ಯೂಟೇಷನ್ನಿಗೆ ಆಯ್ಕೆಯಾದರು. ಪುಟ್ಟರುದ್ರಯ್ಯನವರು ಅಸಮಾಧಾನ ವ್ಯಕ್ತಪಡಿಸಿದರೂ, ಅವರಿಂದ ಇದನ್ನು ತಡೆಯಲಾಗಲಿಲ್ಲ. ಆಗುವುದೆಲ್ಲ ಒಳ್ಳೆಯದಕ್ಕೆಂದು ನಾನು ಸಮಾಧಾನ ತಂದುಕೊಂಡೆ. ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕ ಪದವಿಗೆ ಪಿಹೆಚ್.ಡಿ. ಇದ್ದರೇ ಅವಕಾಶಗಳು ಹೆಚ್ಚೆಂದು ತಿಳಿದಿದ್ದೆ. ಆದ್ದರಿಂದ ಇಲ್ಲಿಯೆ ಅದನ್ನು ಮಾಡುವುದೆಂದು ಅಂದೆ ನಿರ್ಧರಿಸಿದ್ದೆ.

ಮೊದಲೆ ತಿಳಿಸಿದಂತೆ 1966-72ರ ಅವಧಿ ನನ್ನ ಜೀವನದ ಒಂದು ನಿರ್ಣಾಯಕ ಹಂತ. ನಿಷ್ಠೆಯಿಂದ ಪ್ರಯತ್ನ ಮಾಡಿದವರೆಲ್ಲರಿಗೆ ದೇವರ ಬೆಂಬಲವಿರುವುದು ಸಹಜ. ನಾನು ಮಾಡಿದ್ದೆಲ್ಲ ನನ್ನಿಂದಲೆ ಆಯಿತೆಂದು ಎಂದೂ ಹೇಳಿದವನಲ್ಲ. ದೇವರ ಅನುಗ್ರಹವಿಲ್ಲದಿದ್ದರೆ ಎಷ್ಟೆ ಪ್ರಯತ್ನಪಟ್ಟರು ನಿರೀಕ್ಷಿಸಿದ ಫಲ ದೊರೆಯುವುದು ಕಷ್ಟ. ಅಡ್ಡಿ ಆತಂಕಗಳು ಹಲವಾರಿದ್ದವು. ಓದುವಾಗ, ಮದುವೆ ಆಗುವಾಗ, ಮನೆ ಕಟ್ಟುವಾಗ, ಪಿಹೆಚ್.ಡಿ. ಮಾಡುವಾಗ, ಹೊರದೇಶಕ್ಕೆ ಹೋಗಲು ಆಯ್ಕೆಯಾಗುವಾಗ, ತಾಯಿ ತೀರಿಕೊಂಡಾಗ ಹೀಗೆ ಎಲ್ಲರ ಜೀವನದಲ್ಲೂ ಕಾಣುವ ಅಡ್ಡಿ ಆತಂಕಗಳು ನನ್ನಲ್ಲಿಯೂ ಸಹಜವಾಗಿ ಕಂಡವು. ಡಿ.ವಿ.ಜಿ.ಯವರು ಹೇಳಿರುವಂತೆ "ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ವಿಧಿ ಮಳೆ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ" ಎನ್ನುವ ದಾಟಿಯಲ್ಲಿ ನಡೆದು ಬಂದಿದ್ದೇನೆ. ಈ ಅವಧಿಯಲ್ಲಿ ಹಾಕಿದ ಅಡಿಗಲ್ಲಿನ ಮೇಲೆ ನನ್ನ ಮುಂದಿನ ಶ್ರೇಯಸ್ಸೆಲ್ಲ ಹೊಂದಿಕೊಂಡಿತ್ತು.

5 ಹೊರದೇಶಗಳಲ್ಲಿ ಹೆಚ್ಚಿನ ಪರಿಣತೆ

ನಮ್ಮ ದೇಶದಲ್ಲಿ ಬಹಳಷ್ಟು ಜನರಿಗೆ ಪಿಹೆಚ್.ಡಿ. ಡಿಗ್ರಿ ಗಳಿಕೆ ಸಂಶೋಧನೆಯ ಕೊನೆಯ ಹಂತ. ನಂತರ ದೊಡ್ಡ ಹುದ್ದೆಗೆ ಹೋಗುವ ಹಂಬಲ. ಸಂಶೋಧನೆಯ ಕಡೆ ಗಮನ ಹರಿಸುವುದು ಕಡಿಮೆ. ಸಂಶೋಧನೆ ಅಥವಾ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಸಿಕ್ಕಿದರೆ, ಇವರ ಕೈ ಕೆಳಗೆ ಕೆಲಸ ಮಾಡುವವರು ಮಾಡಿದ ಸಂಶೋಧನೆ ಇವರದಾಗುತ್ತದೆ. ಸಕ್ರಿಯವಾಗಿ ಕಿರಿಯರೊಂದಿಗೆ ಕಲೆತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವವರು ಬಹಳ ವಿರಳ. ವಿಶ್ವವಿದ್ಯಾನಿಲಯದಲ್ಲಿ, ದೊಡ್ಡ ದೊಡ್ಡ ಸಂಶೋಧನಾ ಕೇಂದ್ರಗಳಲ್ಲಿ ಇಂತಹವರು ಇರುವುದು ಬೆರಳೆಣಿಸುವಷ್ಟು. ಇವರು ಎಲೆ ಮರೆ ಕಾಯಿಯಂತೆ ಸದಾ ಸಂಶೋಧನೆಯಲ್ಲಿ ನಿರತರಾಗಿದ್ದು, ಬೇರೆಯವರಿಗೆ ಸ್ಫೂರ್ತಿ ದಾಯಕರಾಗಿರುತ್ತಾರೆ. ಅವರ ವೈಯಕ್ತಿಕ ಕಷ್ಟಗಳನ್ನಾಗಲಿ ಅಥವಾ ಸಂಸ್ಥೆಯಲ್ಲಿರುವ ಎಡರು ತೊಡರು, ಸಂಭಾವನೆ, ಮುಂಬಡ್ತಿ ಮುಂತಾದುವುದರ ಬಗ್ಗೆಯಾಗಲಿ, ಯಾರಿಗೂ ಹೇಳಿ ಕೊಳ್ಳುವವರಲ್ಲ. ಅವರು ಮಾಡುತ್ತಿರುವ ಕೆಲಸಕ್ಕೆ ಯಾರೂ ಅಡ್ಡಿ ಮಾಡದಿದ್ದರೆ ಸಾಕು ಅನ್ನುವುದೊಂದೇ ಅವರ ಅಪೇಕ್ಷೆ. ದುರದೃಷ್ಟವಶಾತ್ ಕೆಲವು ಸಂದರ್ಭಗಳಲ್ಲಿ ಇಂತಹ ಅಡಚಣೆಗಳನ್ನು ಸಂಶೋಧಕರು ಅವರ ಹಿರಿಯ ಕಿರಿಯ ಸಹೋದ್ಯೋಗಿಗಳಿಂದ ಅನುಭವಿಸ ಬೇಕಾಗುತ್ತದೆ. ಈ ಕಾರಣಗಳಿಗಾಗಿ ಕೆಲವರು ದೇಶ ಬಿಟ್ಟು ಹೋಗಿರುವ ನಿದರ್ಶನಗಳಿವೆ. ಸಂಶೋಧನೆಯ ಫಲ ಸಾರ್ವಜನಿಕರದ್ದು. ಮುಖ್ಯ ಸಂಶೋಧನಾ ಕ್ಷೇತ್ರಗಳಲ್ಲಿ ಅರ್ಹತೆಗೆ ಆದ್ಯತೆ ಇರಬೇಕೇ ಹೊರತು ವ್ಯಕ್ತಿಯ ಹಿನ್ನಲೆಯ ಆಧಾರದ ಮೇಲೆ ಆಯ್ಕೆಯಾಗಬಾರದು. ಸಂಶೋಧನೆಯ ಗುಟ್ಟು ಸತತ ಪ್ರಯತ್ನ. ಹಗಲಿರುಳು ಏಕಾಗ್ರತೆಯಿಂದ ಚಿಂತಿಸುವವನಿಗೆ ಎಟುಕದಿರುವುದೇನಿದೆ? ದೇವರೇ ಪ್ರತ್ಯಕ್ಷನಾಗುತ್ತಾನೆಂದಾಗ ಪ್ರಕೃತಿಯಲ್ಲಿರುವ ಗುಟ್ಟು ಗೊತ್ತಾಗದೆ ಇರುವುದೆ? ಇಂತಹವರನ್ನು ಗುರುತಿಸಿ, ಪ್ರೋತ್ಸಾಹಿಸಿ ಸಂಶೋಧನೆಯಲ್ಲಿ ತೊಡಗಿಸಿದಾಗ ಪ್ರತಿಫಲ ತಾನಾಗಿಯೇ ಬರುತ್ತದೆ. ಕೆಲವು ಖಾಸಗೀ ಸಂಸ್ಥೆಗಳು ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನದ ಮುನ್ನಡೆಯಲ್ಲಿರುವುದಕ್ಕೆ ಇದೇ ಕಾರಣ.

ದಿನೇ ದಿನೇ ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ವ್ಯಾಧಿಯೆಂದರೆ ಕೆಲಸ ಮಾಡದೆ ಸುಖವನ್ನು ಬಯಸುವುದು. ಮನುಷ್ಯನಿಗೆ ಅತಿ ದೊಡ್ಡ ಶತ್ರು ಸೋಮಾರಿತನ. ಇದು ಹೆಚ್ಚಾಗಿ ಅಭ್ಯಾಸ ಬಲದಿಂದ ಬರುವುದು. ಕಷ್ಟದ ದುಡಿಮೆಯೂ ಅಷ್ಟೆ, ಚಿಕ್ಕಂದಿನಿಂದಲೆ ಕಷ್ಟದ ದುಡಿಮೆಯನ್ನು ಮೈಗೂಡಿಸಿಕೊಂಡರೆ ಮುಂದೆ ಅನಾಯಸವಾಗಿ ಕೆಲಸ ಒಂದು ಬಗೆಯ ಆಟದಂತಾಗುತ್ತದೆ. ಮನುಷ್ಯನಿಗೆ ದೊರೆಯುವ ಸಂತೋಷಗಳಲ್ಲಿ ಅತಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಸಂತೋಷಕೊಡುವ ಹವ್ಯಾಸವೆಂದರೆ ಅವನ ವೃತ್ತಿ. ವೃತ್ತಿಯಲ್ಲಿ ಸಕ್ರಿಯವಾಗಿ

ತೊಡಗಿಸಿಕೊಳ್ಳದ ವ್ಯಕ್ತಿಯ ಬಾಳು ಗೋಳು. ಇಂತಹವರು ಕೆಲಸ ಮಾಡುವವರನ್ನೂ ನೋಡಿಯು ಕೂಡ ಸಂತೋಷಿಸಲಾರರು.

ನಾನು ಪ್ರಾಧ್ಯಾಪಕನಾಗಿ ಆಯ್ಕೆಯಾದ ಸುದ್ದಿ ಇಂಗ್ಲೆಂಡಿನಲ್ಲಿ ರಾಥಮ್‌ಸ್ಟೆಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ನಲ್ಲಿದ್ದಾಗ ತಿಳಿಯಿತು. ನನ್ನ ಸಹ ವಿಜ್ಞಾನಿ ಡಾ|| ಸಿ. ಎ. ಎಡ್‌ವರ್ಡ್ಸ್ ಟೆಲೆಕ್ಸನ್ನು ತಂದು ಕೊಟ್ಟಾಗ ನನ್ನ ಮುಖದ ಮೇಲೆ ಅತ್ಯಾನಂದವನ್ನೇನೂ ಕಾಣದಿದ್ದಾಗ, ಆಶ್ಚರ್ಯಚಕಿತರಾಗಿ, ಇದರಿಂದ ನಿಮಗೇನು ಸಂತೋಷವಾಗಲಿಲ್ಲವೆ ಎಂದು ಕೇಳಿದರು. ಸುಮಾರು ಎರಡು ವರುಷದ ಹಿಂದೆಯೇ ಬರಬೇಕಾಗಿದ್ದದ್ದು ಈಗ ಬರುತ್ತಿದೆ. ಅದು ಬರದಿದ್ದರೂ ನನ್ನ ಕೆಲಸಕ್ಕೆ ಕುಂದೇನು ಬರುತ್ತಿರಲಿಲ್ಲ. ಈಗ ಪ್ರೊಫೆಸರ್ ಆಗಿದ್ದೇನೆಂದು ನಾನು ಕೈಗೊಂಡಿರುವ ಕೆಲಸವನ್ನು ಬಿಡುವುದಿಲ್ಲ. ಆದ್ದರಿಂದ ನನ್ನ ಮನಸ್ಸಿನ ಮೇಲೆ ಹೆಚ್ಚೇನು ಪರಿಣಾಮವಾಗಿಲ್ಲವೆಂದೆ. ಆದರೆ ಎಡ್‌ವರ್ಡ್ಸ್‌ರವರು ನನಗೆ ಅತ್ಯಂತ ಸಂತೋಷವಾಗಿದೆ. ಇದನ್ನು ಸೆಲಬರೇಟ್ ಮಾಡೋಣ ಬನ್ನಿ, **'ಸಿಲ್ವರ್‌ಕಪ್'**ನಲ್ಲಿ ಬೀರು ಕೊಡಿಸುತ್ತೇನೆಂದು ಕರೆದುಕೊಂಡು ಹೋದರು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಲ್ಲ ಹುದ್ದೆಗಳನ್ನು ಅಡ್ವರ್ಟೈಸ್ ಮಾಡಿ ಸೆಲೆಕ್ಟ್ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಸೆಲೆಕ್ಷನ್ ಕಮಿಟಿಯು ನಾಲ್ಕೈದು ಜನರಿಂದ ಕೂಡಿದ್ದು, ಅದರಲ್ಲಿ ಇಬ್ಬರು ಆಯಾ ವಿಷಯದಲ್ಲಿ ಪರಿಣಿತರಿದ್ದು, ಇವರನ್ನು ಹೊರ ರಾಜ್ಯಗಳಿಂದ ಕರೆಸಿಕೊಳ್ಳುವರು. ಆಯ್ಕೆ ಮಾಡುವಾಗ ಅಭ್ಯರ್ಥಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಿದ್ದ ಅರ್ಹತಾ ಪಟ್ಟಿಯ ಪ್ರಕಾರ ಅಭ್ಯರ್ಥಿಯ ಪರಿಣಿತಿಗೆ ಅನುಸಾರವಾಗಿ, ಸೇವಾ ಅವಧಿ, ಪ್ರಕಟಿತವಾಗಿರುವ ಸಂಶೋಧನಾ ಪೇಪರ್ಸ್, ಮೆಡಲ್ಸ್, ಅವಾರ್ಡ್ಸ್, ರೂರಲ್ ಸರ್ವೀಸ್ ಮುಂತಾದವುಗಳಿಗೆ ಕ್ರಮವಾಗಿ ಅಂಕಗಳು ಹಂಚಲ್ಪಡುತ್ತವೆ. ಉಳಿದ ಅಂಕಗಳು ಇಂಟರ್‌ವ್ಯೂ ಮತ್ತು ಪರ್ಸನಾಲಿಟಿಗೆ ಅಥವಾ ಕಾನ್‌ಫಿಡೆನ್ಸಿಯಲ್ ರಿಪೋರ್ಟಿಗೆ ಮೀಸಲಾಗಿದೆ. ಎಕ್ಸ್‌ಪರ್ಟ್ ಕಮಿಟಿಯವರು ಸೆಲೆಕ್ಟ್ ಮಾಡುವಾಗ ಮೆರಿಟ್‌ಗೆ ಆದ್ಯತೆ ಕೊಟ್ಟು ಮಾಡುವುದು ಸ್ವಾಭಾವಿಕ. ಯೂನಿವರ್ಸಿಟಿ ಕಾಯಿದೆ ಕಟ್ಟಲೆ ಪ್ರಕಾರ ಎಕ್ಸ್‌ಪರ್ಟ್ ಕಮಿಟಿ ಸೆಲೆಕ್ಟ್ ಮಾಡಿ ಮೆರಿಟ್‌ನ ಪ್ರಕಾರ ಕ್ರಮವಾಗಿ ಪ್ರತಿ ಹುದ್ದೆಗೆ ಮೂರು ಹೆಸರುಗಳ ಪಟ್ಟಿ ಮಾಡಬೇಕು. ಈ ಪಟ್ಟಿಯನ್ನು ಆಡಳಿತ ಮಂಡಲಿ ಪರಿಶೀಲಿಸಿ ಉತ್ತಮರನ್ನು ಆರಿಸುವುದೆಂದು ಇದೆ. ಕೆಲವು ಸಂದರ್ಭದಲ್ಲಿ ಪಟ್ಟಿಯಲ್ಲಿರುವ ಮೊದಲನೆ ಹೆಸರನ್ನು ಬಿಟ್ಟು ಎರಡನೆ ಹೆಸರೊ ಅಥವಾ ಮೂರನೆ ಹೆಸರನ್ನು ಆಯ್ಕೆ ಮಾಡಿರುವ ಪ್ರಸಂಗಗಳಿವೆ. ಇಂತಹ ಉದಾಹರಣೆಗಳನ್ನು ಎತ್ತಿಕೊಂಡು ಪಟ್ಟಿಯಲ್ಲಿರುವವರೆಲ್ಲ ಆಡಳಿತ ಮಂಡಳಿಯ ಸದಸ್ಯರ ಮುಂದೆ ತಮ್ಮನ್ನು ಆಯ್ಕೆ ಮಾಡಬೇಕೆಂದು ದುಂಬಾಲು ಬೀಳುತ್ತಾರೆ. ಇವರದು ಬೋರ್ಡಿನಲ್ಲಿ ಸೆಲೆಕ್ಷನ್ ಬಂದಾಗ ವಾದ ವಿವಾದಕ್ಕೆ ಆಸ್ಪದ ಕೊಟ್ಟು ವರುಷಗಟ್ಟಲೆ ಇತ್ಯರ್ಥವಾಗದ ಪ್ರಸಂಗಗಳನೇಕ ಇವೆ. ಇಂತಹುದೆ ಪ್ರಸಂಗ ನನ್ನ ಸೆಲೆಕ್ಷನ್‌ನಲ್ಲಿ ತಲೆದೋರಿ ಎರಡು ವರುಷಗಳ ಕಾಲ ವಿಳಂಬವಾಯಿತು. ನನ್ನ ಪಟ್ಟಿಯಲ್ಲಿ ಮೂರನೆ ಹೆಸರಿದ್ದವರಿಗೆ ಪ್ರಬಲವಾದ ರಾಜಕೀಯ ಹಿನ್ನೆಲೆ ಇದ್ದದರಿಂದ ಅವರಿಗೊಂದು ಸರಿಸಮಾನವಾದ ಹುದ್ದೆಯನ್ನು ನಿರ್ಮಿಸುವವರೆಗೂ ನನ್ನ ಆಯ್ಕೆಗೆ ತಡೆ ಹಿಡಿದಿದ್ದರು. ಬಹುಶಃ, ಕೆ. ಹೆಚ್. ಹನುಮೇಗೌಡರು ಬೋರ್ಡಿನಲ್ಲಿಲ್ಲದಿದ್ದರೆ ನನ್ನ ಹೆಸರು ಕೈಬಿಡುವ ಸಂದರ್ಭ ಹೆಚ್ಚಾಗಿತ್ತು. ಹಳ್ಳಿಯಿಂದ ಬಂದ ಹುಡುಗರಿಗೆ ಅರ್ಹತೆ ಇದ್ದರೂ, ಅನ್ಯಾಯ

ವಾಗುವುದನ್ನು ನೋಡಿ ಸಹಿಸಲಾರದೆ ರೊಚ್ಚಿದ್ದು ಘರ್ಜಿಸಿದರು. ನಾನು ದೇಶದಲ್ಲಿ ಇಲ್ಲದಿದ್ದರೂ ಪಟ್ಟು ಹಿಡಿದು ಮೂರನೆಯವರಿಗೆ ಬೇಕಾದರೆ ಸರಿಸಮಾನವಾದ ಹುದ್ದೆಯನ್ನು ಕಲ್ಪಿಸಿಕೊಡಿ. ಆದರೆ ಮೊದಲನೆಯವರಿಗೆ ಅನ್ಯಾಯವಾಗಬಾರದೆಂದು ವಾದಿಸಿ ಆಯ್ಕೆಗೆ ಅನುಕೂಲ ಮಾಡಿಕೊಟ್ಟರು.

ಮಣ್ಣುಜೀವ ಮತ್ತು ಪರಿಸರ ವಿಜ್ಞಾನದಲ್ಲಿ (ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ) ಹೆಚ್ಚಿನ ಪರಿಣತಿಗೆ ಯು.ಎನ್.ಡಿ.ಪಿ. ಫೆಲೋಶಿಪ್‌ನಲ್ಲಿ ನನ್ನನ್ನು 1975ರಲ್ಲಿ ಅಮೇರಿಕಾ ಮತ್ತು ಇಂಗ್ಲೆಂಡಿಗೆ ಕಳುಹಿಸಿದ್ದರು. ಮಣ್ಣು ಜೀವ ಮತ್ತು ಪರಿಸರ ವಿಜ್ಞಾನದಲ್ಲಿ ಹೆಸರಾಂತ ವಿಜ್ಞಾನಿ ಡಾ. ಸಿ.ಎ. ಎಡ್‌ವರ್ಡ್ಸ್ ನನ್ನ ಸಲಹೆಗಾರರಾಗಿದ್ದರು. ಅವರ ಸಲಹೆ ಮೇರೆಗೆ ಈ ವಿಷಯದಲ್ಲಿ ನೆದರ್‌ಲ್ಯಾಂಡಿನಲ್ಲಿ ನಡೆಯುತ್ತಿದ್ದ ಒಂದು ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಅಮೇರಿಕಾ ಇಂಗ್ಲೆಂಡಿಗೆ ಹೋಗುವ ಏರ್ಪಾಡಾಗಿತ್ತು. ಈ ಸಮ್ಮೇಳನಕ್ಕೆ ಪ್ರಪಂಚದ ಹಲವಾರು ಕಡೆಯಿಂದ ಬಂದಿದ್ದ ಮಣ್ಣು ಜೀವ ವಿಜ್ಞಾನಿಗಳ ಸಂಪರ್ಕ ನಮ್ಮ ದೇಶದಲ್ಲಿ ಮಣ್ಣು ಜೀವ ಮತ್ತು ಪರಿಸರ ವಿಜ್ಞಾನ ವಿಭಾಗವನ್ನು ತೆರೆಯಲು ಅನುಕೂಲವಾಯಿತು. ಅಷ್ಟರವರೆಗೆ ಮಣ್ಣು ಜೀವ ವಿಜ್ಞಾನದಲ್ಲಿ ಮೊಟ್ಟಮೊದಲಿಗೆ ಇಂಗ್ಲಿಷಿನಲ್ಲಿ ಹೊರತಂದಿದ್ದ "ಸಾಯಿಲ್ ಬಯಾಲಜಿ" ಪುಸ್ತಕದ ವಿಜ್ಞಾನಿ ಕುನ್‌ಹೆಲ್ಪರ ಪರಿಚಯವಾಯಿತು. ಸಾಯಿಲ್ ಬಯಾಲಜಿ ಲ್ಯಾಬೋರೇಟರಿ ತೆರೆಯಲು ಬೇಕಾದ ಸಲಕರಣೆಗಳ ಪರಿಚಯ ಮಾಡಿಕೊಳ್ಳಲು ಈ ಸಮ್ಮೇಳನ ಸಹಾಯವಾಯಿತು.

ಅಮೇರಿಕಾದ ಒರೆಗಾನ್ ಸ್ಟೇಟ್ ವಿಶ್ವವಿದ್ಯಾನಿಲಯ, ಕೋರ್‌ವಾಲಿಸ್‌ನಲ್ಲಿ ಪ್ರೊಫೆಸರ್ ಪಾಲ್ ರಿಚರ್ 35 ವರುಷಗಳಿಗೂ ಮೀರಿ ವೈಟ್‌ಗ್ರಬ್ಸ್ ಮೇಲೆ ಸಂಶೋಧನೆ ನಡೆಸುತ್ತಿದ್ದರು. ನಾನು ಡೆಲ್ಲಿಯಲ್ಲಿ ಎಂ.ಎಸ್‌ಸಿ. ಮಾಡುತ್ತಿದ್ದಾಗ ಇವರು ಒಂದು ವರುಷದ ಅವಧಿಯವರೆಗೆ ಸೆಬಾಟಿಕಲ್ ಲೀವ್‌ನಲ್ಲಿ ಪ್ರೊಫೆಸರ್ ಆಗಿ ಕೀಟಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನಮಗೆ ಕೆಲವು ಪಾಠಗಳನ್ನು ತೆಗೆದುಕೊಳ್ಳುತ್ತಿದ್ದರು. ನನಗೆ ವಹಿಸಿದ್ದ ಒಂದು ಸೆಮಿನಾರ್ ಟಾಪಿಕ್ 'ವೈಟ್‌ಗ್ರಬ್ಸ್ ಆಫ್ ಇಂಡಿಯ' ಸೆಮಿನಾರ್‌ಗೆ ತಯಾರು ಆಗುತಿದ್ದಾಗ ಆಗಾಗ ಇವರ ಸಲಹೆಯನ್ನು ಕೇಳುತ್ತಿದ್ದೆ. ನಮ್ಮ ದೇಶದಲ್ಲಿ ಈ ವಿಷಯದ ಬಗ್ಗೆ ಹೆಚ್ಚಿನ ಸಂಶೋಧನೆ ಆಗಿರಲಿಲ್ಲ. ಈ ಟಾಪಿಕ್ ನಾನು ಬಯಸಿದ್ದಲ್ಲ. ಆದರೆ ಅಲಾಟ್ ಆದ ಮೇಲೆ ಮಾಡದೆ ವಿಧಿ ಇಲ್ಲ. ಅಂತು ಲೈಬ್ರರಿಯಲ್ಲಿ ಕುಳಿತು ವಿಷಯಗಳನ್ನು ಸಂಗ್ರಹಿಸಿ ಸೆಮಿನಾರ್ ಕೊಟ್ಟದ್ದಾಯಿತು. ಅಂದು ಪ್ರೊಫೆಸರ್ ಪಾಲ್ ರಿಚರ್ ಪ್ರಸ್ತುತರಿದ್ದರು. ವಿಷಯ ಹೊಸದಾದ್ದರಿಂದ, ದೇಶದಲ್ಲಿ ಅಷ್ಟೇನು ಸಂಶೋಧನೆ ಆಗದಿದ್ದರಿಂದ ಬೇರೆಯವರಿಂದ ಹೆಚ್ಚಿನ ಪ್ರಶ್ನೆಗಳು ಉದ್ಭವಿಸಲಿಲ್ಲ. ಅವರಲ್ಲಿ ಪಾಲ್ ರಿಚರ್ ಒಬ್ಬರೆ ಪರಿಣಿತರಿದ್ದದ್ದರಿಂದ ಸೆಮಿನಾರ್ ಆದ ನಂತರ ಎದ್ದು ನಿಂತು ಇಲ್ಲಿ ನಾನು ಕೇಳಿರುವ ಸೆಮಿನಾರ್‌ಗಳಲ್ಲಿ ಇದೊಂದು ಅತ್ಯುತ್ತಮವಾದದ್ದೆಂದು ಹೇಳಿದರು. ಪ್ರೊ|| ಪ್ರಧಾನ್‌ರವರಿಗೆ ಎಲ್ಲಿಲ್ಲದ ಸಂತೋಷ. ಇದಾದ ಮೇಲೆ ಪ್ರೊಫೆಸರ್ ಪಾಲ್‌ರವರು ನನ್ನನ್ನು ಆಗಾಗ ವಿಚಾರಿಸಿಕೊಳ್ಳುತಿದ್ದರು. ಎಂ.ಎಸ್‌ಸಿ. ಆದ ನಂತರ ಹೆಚ್ಚು ವ್ಯಾಸಂಗಕ್ಕೆ ಅಮೆರಿಕಾಕ್ಕೆ ಬರುವುದಿದ್ದರೆ ಅವರ ಕೆಳಗೆ ಪಿಹೆಚ್.ಡಿ. ಮಾಡಲು ಫೆಲೋಶಿಪ್ ವ್ಯವಸ್ಥೆ ಮಾಡುವುದಾಗಿಯೂ ಹೇಳಿದ್ದರು. ಎಲ್ಲರೂ ಅಮೇರಿಕಾಕ್ಕೆ ಹೋಗಲು ಹಾತೊರೆಯುತ್ತಿರುವಾಗ

ನಾನೇಕೆ ಉದಾಸೀನ ಮಾಡಿದೆ ಎಂದು ತಿಳಿಯದು. ನಮ್ಮ ಮನೆ ಪರಿಸ್ಥಿತಿಯಲ್ಲಿ ಹೋಗುವ ದಾರಿ ಖರ್ಚನ್ನು ಹೊಂದಿಸುವುದು ಕಷ್ಟವಾಗಿದ್ದರಿಂದ ಅಂದಿಗೆ ಕೈಬಿಟ್ಟಿದ್ದೆ. ಆದರೆ ಬಯಸದೆ ಬಂದದ್ದು ಹದಿನೈದು ವರುಷಗಳ ನಂತರ ವಿಧಿಯ ಲೀಲೆ ಏನೆಂದು ಹೇಳುವುದು? ಅಂದು ಸೆಮಿನಾರ್‌ಗೆ ವೈಟ್‌ಗ್ರಬ್ಸ್ ಮೇಲೆ ಟಾಪಿಕ್ ತೆಗೆದುಕೊಂಡಿದ್ದಕ್ಕೂ, ಪಾಲ್ ರಿಚರ್‌ರ ಸಲಹೆಗೂ, ನಾನು ಪಿಹೆಚ್.ಡಿ.ಗೆ ಅದೇ ವಿಷಯವನ್ನು ಆರಿಸಿದ್ದಕ್ಕೂ ಏನೂ ಸಂಬಂಧವಿಲ್ಲ. ಚೀಫ್ ಜಸ್ಟೀಸ್ ಗೋವಿಂದಭಟ್ಟರ ಮನೆಯ ಕಾಂಪೌಂಡಿನಲ್ಲಿ ವೈಟ್‌ಗ್ರಬ್ಸ್‌ನ ತೊಂದರೆ ಇಲ್ಲದಿದ್ದರೆ, ನನ್ನನ್ನು ಡಾ॥ ಪುಟ್ಟರುದ್ರಯ್ಯರವರು ಅದರ ಹತೋಟಿಯ ಜವಾಬ್ದಾರಿ ವಹಿಸದಿದ್ದರೆ, ನಾನು ಆ ವಿಷಯವನ್ನು ನನ್ನ ಪಿಹೆಚ್.ಡಿ. ಸಂಶೋಧನೆಗೆ ಆರಿಸುತ್ತಿರಲಿಲ್ಲ. ಏಕೆಂದರೆ, ಆ ಕಾಲದಲ್ಲಿ ಬೇರು ತಿನ್ನುವ ಹುಳ ರಾಷ್ಟ್ರವ್ಯಾಪ್ತಿಯಾದ ಒಂದು ಪೀಡೆ ಎಂದು ಪರಿಗಣಿಸಿರಲಿಲ್ಲ. ಪಿಹೆಚ್.ಡಿ. ಮಾಡುವಾಗ ಹಲವಾರು ಸಂಶಯಗಳು ತಲೆದೋರಿದಾಗ ಪಾಲ್ ರಿಚರ್‌ರವರೊಂದಿಗೆ ಪತ್ರವ್ಯವಹಾರ ಮಾಡುತ್ತಿದ್ದೆ. ಆಗಾಗ ಅವರು ಅದಕ್ಕೆ ಸೂಕ್ತ ಸಲಹೆಗಳನ್ನು ಕೊಡುತ್ತಿದ್ದರು. ಆದರೂ ಅವರಲ್ಲಿಗೆ ಹೋಗಿ ಅದೇ ವಿಷಯದಲ್ಲಿ ಹೆಚ್ಚಿನ ಪರಿಣತೆ ಪಡೆಯುತ್ತೇನೆಂದು ತಿಳಿದಿರಲಿಲ್ಲ. ಈಗ ಅವರಲ್ಲಿಗೆ ಹೋಗುವ ಅವಕಾಶ ದೊರೆಯಿತು.

ನಾನು ಕೋರ್‌ವಾಲಿಸ್‌ಗೆ ಹೋಗುವ ದಿನದಂದು ಪ್ರೊಫೆಸರ್ ಪಾಲ್ ರಿಚರ್‌ರವರು ವಿಮಾನ ನಿಲ್ದಾಣದಲ್ಲಿ ಕಾದಿದ್ದು, ನಿಗಧಿತ ಫ್ಲೈಟ್‌ನಲ್ಲಿ ಬಾರದಿದ್ದು ನೋಡಿ ಬೇಸರವಾಗಿ ಮನೆಗೆ ಹೋಗಿದ್ದರು. ವಾಷಿಂಗ್‌ಟನ್‌ನಿಂದ ಕೋರ್‌ವಾಲಿಸ್‌ಗೆ ಹೋಗುವ ಫ್ಲೈಟ್ ವೇಳೆ ಬದಲಾಗಿದ್ದದ್ದು ಅವರಿಗೂ ಅರಿಯದು, ನನಗೂ ತಿಳಿಯದು. ಯು.ಎನ್.ಡಿ.ಪಿ. ಆಫೀಸಿನಿಂದ ಮೊದಲೇ ನನ್ನ ಕಾರ್ಯಕ್ರಮಗಳನ್ನು ಅವರಿಗೆ ತಿಳಿಸಿದ್ದರಿಂದ ಈ ಅಚಾತುರ್ಯವಾಯಿತು. ಅಂದು ನಾನು ನಿಗದಿತ ಸ್ಥಳಕ್ಕೆ ಹೋಗಲು ಸ್ವಲ್ಪ ತೊಂದರೆಯಾಯಿತು. ಮರುದಿನ ನಾನಿರುವ ಸ್ಥಳವನ್ನು ಪತ್ತೆ ಹಚ್ಚಿ ಅವರೇ ಬಂದರು. ನನಗೆ ಮತ್ತು ಅವರಿಗೆ ಕೊಟ್ಟಿದ್ದ ಪ್ರೋಗ್ರಾಂಗಳಲ್ಲಿ ವ್ಯತ್ಯಾಸವಿತ್ತು.

ಪ್ರೊಫೆಸರ್ ಪಾಲ್ ರಿಚರ್ ಹದಿನೈದು ವರುಷದ ಹಿಂದೆ ಇದ್ದಂತೆ ಇರಲಿಲ್ಲ. ಆರು ಅಡಿ ಎತ್ತರದ, ನೀಳ ದೇಹದ, ಸೌಮ್ಯಸ್ವಭಾವದ, ಸದಾ ಏನನ್ನಾದರೂ ಮಾಡುತ್ತಿದ್ದವರು ಅಂದು ವೀಲ್‌ಛೇರಿನಲ್ಲಿ ನನ್ನಲ್ಲಿಗೆ ಬಂದಾಗ ನನ್ನ ಕಣ್ಣುಗಳನ್ನು ನಾನೇ ನಂಬಲಾಗಲಿಲ್ಲ. ಏಕೆ ಹುಷಾರಿಲ್ಲವೆ ಎಂದು ಕೇಳಿದ್ದಕ್ಕೆ ಅದೆಲ್ಲವನ್ನು ಮುಂದೆ ಮಾತನಾಡುತ್ತೇನೆ, ಈಗ ನೀವು ಹೇಗಿದ್ದೀರಿ? ನಿನ್ನೆ ನಿಮಗೆ ತೊಂದರೆಯಾಗಿದ್ದರೆ ಕ್ಷಮೆ ಕೇಳುತ್ತೇನೆ. ನೀವು ಇಳಿದುಕೊಳ್ಳುವ ಹಾಸ್ಟಲಿನ ವ್ಯವಸ್ಥೆ ಎಲ್ಲವನ್ನು ನಾನೇ ಖುದ್ದಾಗಿ ಮಾಡಿದ್ದೇನೆ. ನಿಮಗೆ ಈಗ ಏನೂ ತೊಂದರೆ ಇಲ್ಲವೆಂದು ತಿಳಿಯುತ್ತೇನೆಂದು ಹೇಳಿ. ಅಮೆರಿಕಾದಲ್ಲಿ ಪಾಲಿಸಬೇಕಾದ ಕೆಲವು ನಿಯಮಗಳನ್ನು ತಿಳಿಸಿ, ಅವರ ಕಾರಿನಲ್ಲಿ ಲ್ಯಾಬ್‌ಗೆ ಕರೆದುಕೊಂಡು ಹೋದರು. ಅವರು ಕೆಲಸ ಮಾಡುತ್ತಿದ್ದದ್ದು ಐದನೇ ಮಹಡಿಯಲ್ಲಿ. ಕಾರನ್ನು ನಿಗದಿತ ಸ್ಥಳದಲ್ಲಿ ಬಿಟ್ಟು ಇಳಿಯುವ ಮುನ್ನವೇ ವೀಲ್‌ಛೇರನ್ನು ಕೆಳಗಿಳಿಸಿ ಸೀಟಿನಿಂದ ನಿಧಾನವಾಗಿ ಜರುಗಿ ವೀಲ್‌ಛೇರ್ ಮೇಲೆ ಕುಳಿತು ಹತ್ತಿರವಿದ್ದ ಲಿಫ್ಟ್‌ನವರೆಗೆ ಅವರೇ ತಳ್ಳಿಕೊಂಡು ಅನಾಯಾಸವಾಗಿ ಲಿಫ್ಟಿನೊಳಗೆ ಬಂದು ಐದನೆ ಮಹಡಿಯ ಬಟನ್ ಒತ್ತಿ ಮೇಲೆ ಬಂದು ಅವರ ರೂಮಿಗೆ ಹೋಗಿ ಆಸೀನರಾಗುವ ತನಕ ನಾನು ಮೂಕನಂತೆ ಬಾಯಿ ಬಿಡಲಿಲ್ಲ.

ಇವರು ಡೆಲ್ಲಿಯಿಂದ ವಾಪಸು ಬಂದ ನಂತರ, ಆಗ ಅಮೆರಿಕಾದಲ್ಲಿ ಇದ್ದ ಪದ್ಧತಿಯಂತೆ ನಲವತ್ತು ವಯಸ್ಸು ದಾಟಿದವರು ಮತ್ತೊಮ್ಮೆ ಪೋಲಿಯೋ ಲಸಿಕೆ ಹಾಕಿಸಿಕೊಳ್ಳುವ ಪದ್ಧತಿ ಇದ್ದದ್ದರಿಂದ ಇವರೂ ಹಾಕಿಸಿಕೊಂಡರು. ಲಸಿಕೆ ರಿಯಾಕ್ಟ್ ಆಗಿ ಇವರೂ ಸೇರಿದಂತೆ ಇವರ ಬ್ಯಾಚಿನ ಇನ್ನೂರು ಜನರಿಗೆ ಕೈಕಾಲು ಬಾರದಂತಾಯಿತು. ಅದೃಷ್ಟವಶಾತ್ ಇವರಿಗೆ ಸೊಂಟದಿಂದ ಕೆಳಗೆ ಬಲಹೀನವಾಗಿ ಕಾಲುಗಳು ಮಾತ್ರ ಉಪಯೋಗಕ್ಕೆ ಬಾರದಾದವು. ಆದರೆ ಸೊಂಟದ ಮೇಲೆ ಎಂದಿನಂತೆ ಇದ್ದರು. ಅವರ ಆತ್ಮ ಶಕ್ತಿಯಿಂದ ಕಷ್ಟಪಟ್ಟು ಕೆಲವು ವ್ಯಾಯಾಮಗಳನ್ನು ಮಾಡಿ ತಮ್ಮ ಎಲ್ಲಾ ಚಟುವಟಿಕೆಗಳನ್ನು ವೀಲ್‌ಛೇರಿನಿಂದ ಮಾಡುವಂತಾದರು. ಜೊತೆಗೆ ಅಮೆರಿಕಾದಲ್ಲಿ ದೇಹದಾರಢ್ಯ ಕುಂಟಿತವಾದವರಿಗೆಂದೇ ಅವರವರ ಅನುಕೂಲಕ್ಕೆ ತಕ್ಕಂತೆ ಕಾರು, ಶೌಚಾಲಯ, ಪಾರ್ಕ್ ಮಾಡಲು ಕಾದಿಟ್ಟ ನಿವೇಶನ ಎಲ್ಲಾ ಕಡೆಯೂ ದೊರೆಯುತ್ತವೆ. ನಮ್ಮಲ್ಲಿ ಕೈಕಾಲು ಕುಂಟಿತವಾದವರು ಭಿಕ್ಷೆ ಬೇಡುವುದೊಂದೇ ಮಾರ್ಗವೆಂದು ತಿಳಿಯುತ್ತಾರೆ! ಆದರೆ ಪಾಶ್ಚಾತ್ಯರು ಹಾಗಲ್ಲ. ಇವೆಲ್ಲ ಮನುಷ್ಯರು ಅನುಭವಿಸಬೇಕಾದ ತೊಂದರೆಗಳೆಂದು ಎದುರಿಸಲು ಸದಾ ಸಿದ್ಧರಿರುತ್ತಾರೆ. ಆದ್ದರಿಂದಲೇ ಅವರು ಸಾಹಸ ಪ್ರೇಮಿಗಳು. ಎಂತಹ ಕ್ಲಿಷ್ಟ ಪರಿಸ್ಥಿತಿಯನ್ನಾದರೂ ಎದುರಿಸುವ ಛಲ ಅವರದು. ರೈಟ್‌ಬ್ರದರ್ಸ್ ರೆಕ್ಕೆ ಕಟ್ಟಿ ಹಾರಲು ಪ್ರಯತ್ನಿಸದಿದ್ದರೆ ಈಗಿರುವ ವಾಯುಯಾನ ದಕ್ಕುತ್ತಿತ್ತೇ? ನಲವತ್ತು ವರುಷದ ಹಿಂದೆ ಚಂದ್ರಮಂಡಲಕ್ಕೆ ಮಾನವ ಕಾಲಿಡುತ್ತಾನೆಂದು ಯಾರಾದರೂ ಹೇಳಿದ್ದರೆ ನಂಬುತ್ತಿದ್ದರೆ?

ಪ್ರೊಫೆಸರ್ ಪಾಲ್ ರಿಚರ್ ಅವರು ತಮಗೆ ಹೀಗಾಯಿತಲ್ಲ ಎಂದು ಮರುಗಿದವರಂತೆ ಕಾಣುತ್ತಿರಲಿಲ್ಲ. ಪ್ರತಿ ವರ್ಷ ಅಮೆರಿಕಾದಲ್ಲಿ ಮೋಟಾರು ವಾಹನ ಅಪಘಾತ ಒಂದರಲ್ಲೇ ಸುಮಾರು ಐವತ್ತು ಸಾವಿರ ಜನ ಡಿಸೇಬಲ್ ಆಗುತ್ತಾರೆ. ಅಂತಹವರೆಲ್ಲರೂ ಹಾಸಿಗೆ ಹಿಡಿದು ಮಲಗುವುದಿಲ್ಲ. ಒಂದಲ್ಲ ಒಂದು ವೃತ್ತಿಯನ್ನು ಹಿಡಿದು ಜೀವನ ಸಾಗಿಸುತ್ತಾರೆ. ಆದ್ದರಿಂದ ಇದು ನನಗೊಬ್ಬನಿಗೆ ಬಂದಿರುವ ಆಪತ್ತಲ್ಲ – ಅದಕ್ಕಾಗಿ ಏಕೆ ಚಿಂತಿಸಬೇಕೆಂದು ಹೇಳಿದರು. ಇವರಿಗೆ ಹೀಗಾಗಿರುವುದು ಸಾಲದೆಂದು ಇವರ ಪತ್ನಿಯೂ ಕೂಡ ಇವರ ಹೊಸಮನೆಗೆ ಕಾಲಿಡುವಾಗ ಜಾರಿಬಿದ್ದು ಹಿಪ್‌ಜಾಯಿಂಟ್ ತುಂಡಾಗಿ ನಡೆಯುವ ಸ್ಥಿತಿಯಲ್ಲಿರಲಿಲ್ಲ. ಇವರಿಗಿದ್ದ ಒಬ್ಬಳೇ ಮಗಳು ಮದುವೆಯಾಗಿ ನ್ಯೂಯಾರ್ಕಿನಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ದೇಶದಲ್ಲಾಗಿದ್ದರೆ ತಂದೆ ತಾಯಿಯವರು ನಡೆಯುವ ಸ್ಥಿತಿಯಲ್ಲಿಲ್ಲವೆಂದು, ಅವರ ಆರೈಕೆಗಾಗಿ ಮಗಳು ಮನೆಯಲ್ಲಿ ಇದ್ದು, ಅವಳೂ ಒಂದು ಬಗೆಯ ಡಿಸೇಬಲ್ ಆಗಿರಬೇಕಾಗಿತ್ತು. ವಾರಕ್ಕೊಮ್ಮೆ ಒಬ್ಬ ಹುಡುಗ ಬಂದು ಲಾನ್ ಮೊವ್ ಮಾಡಿ, ಮನೆಯನ್ನೆಲ್ಲಾ ವ್ಯಾಕ್ಯೂಂ ಮಾಡಿ ಹೋಗುವುದನ್ನು ಬಿಟ್ಟರೆ, ಮತ್ತೆಲ್ಲ ಕೆಲಸವನ್ನು ಇವರೇ ಮಾಡಿಕೊಳ್ಳುತ್ತಿದ್ದರು.

ಪ್ರೊಫೆಸರ್ ಪಾಲ್ ರಿಚರ್ ಮದುವೆಯಾದ ಸಂದರ್ಭವೂ ಸ್ವಾರಸ್ಯವಾಗಿದೆ. ಒಂದು ದಿನ ಎಲ್ಲಿಯೋ ಹೋಗಿದ್ದವರು ಮಳೆಗೆ ಸಿಕ್ಕಿ ಹತ್ತಿರವಿದ್ದ ಒಂದು ಮನೆಯ ಸೂರಿನಡಿ ನಿಂತಿದ್ದರಂತೆ. ಮನೆಯವರು ಬಾಗಿಲು ತೆಗೆದು ಅಪರಿಚಿತರೊಬ್ಬರು ಹೊರಗೆ ನಿಂತಿರುವುದು ನೋಡಿ ಮಳೆ ಬಿಡುವ ತನಕ ಒಳಗೆ ಕುಳಿತಿದ್ದು ಹೋಗಿ, ಎಂದು ಕರೆದರಂತೆ. ಮಳೆ ಬಹಳ ಹೊತ್ತು ಬಿಡದಿದ್ದರಿಂದ ಮಾತು ಮುಂದುವರಿದು ಮನೆಯವರೆಲ್ಲ ಪರಿಚಯವಾಯಿತಂತೆ. ಇವರೂ ತಮ್ಮ ಪರಿಚಯ ಮತ್ತು ಇವರ ಪೂರ್ವೀಕರ ಹಿನ್ನೆಲೆ ಹೇಳಿದಾಗ, ಆ ಮನೆಯವರೂ

ಕೂಡ ನೂರು ವರುಷದ ಹಿಂದೆ ಇವರ ಹಿರಿಯರು ಬಂದ ಹಾಗೆ ಜರ್ಮನಿಯಿಂದ ಬಂದವರೆಂದು ತಿಳಿದು, ಅಲ್ಲಿಯೇ ಇದ್ದ ಅವರ ಮಗಳ ಒಪ್ಪಿಗೆಯನ್ನು ಪಡೆದು ಒಂದು ವಾರದಲ್ಲಿ ಮದುವೆಯಾಯಿತಂತೆ. ಅವರ ಹಿರಿಯರ ಕೆಲವು ಸಂಪ್ರದಾಯಗಳನ್ನು ಬಳಸಿಕೊಂಡು ಆದರ್ಶ ದಾಂಪತ್ಯ ನಡೆಸುತ್ತಿದ್ದರು.

ಭಾರತದ ಸಂಸ್ಕೃತಿ ಅವರಿಗೆ ಬಹಳ ಮೆಚ್ಚುಗೆಯಾಗಿತ್ತು. ಅವರು ಭಾರತದಲ್ಲಿದ್ದಾಗ ಅವರಿಗೆ ದೊರೆತ ಆದರದ ಆತಿಥ್ಯ ಆಗಾಗ ನೆನಪಿಸಿಕೊಂಡು ಸಮಯ ಸಿಕ್ಕಿದಾಗಲೆಲ್ಲಾ ಪ್ರತಿಯಾಗಿ ನನ್ನನ್ನು ಆದರಿಸುತ್ತಿದ್ದರು. ವಾರಾಂತ್ಯದಲ್ಲಿ ಕ್ಯಾಲಿಫೋರ್ನಿಯದ ಸಮುದ್ರ ತೀರದಲ್ಲಿದ್ದ ಕಾಟೇಜಿಗೆ ಕರೆದುಕೊಂಡು ಹೋಗುತ್ತಿದ್ದರು. ಒರೆಗಾನ್ ಕೌಂಟಿ ಕ್ಲಬ್ ಪ್ರತಿಷ್ಠಿತ ನಲವತ್ತು ಸದಸ್ಯರನ್ನು ಮಾತ್ರ ಒಳಗೊಂಡಿದ್ದವರಲ್ಲಿ ಇವರೊಬ್ಬರು. ಕೌಂಟಿ ಕ್ಲಬ್ ಡಿನ್ನರ್ ಎಂದರೆ ಕೋರ್‌ವಾಲಿಸ್‌ಗೆ ಹೆಸರುವಾಸಿಯಾಗಿತ್ತು. ವಾರಕ್ಕೊಮ್ಮೆ ಒಂದೊಂದು ಬಗೆಯ ಊಟವಿರುತ್ತಿತ್ತು. ಒಂದು ದಿನ ಸಮುದ್ರದಲ್ಲಿ ದೊರೆಯುವ ಎಲ್ಲ ಬಗೆಯ ಮೀನು, ಏಡಿ, ಸೀಗಡಿಗಳಿಂದ ತಯಾರುಮಾಡಿದ್ದ ಭಕ್ಷ್ಯ ಇದ್ದರೆ ಮತ್ತೊಂದು ದಿನ ಬರಿ ತರಕಾರಿಗಳಿಂದ ಮಾಡಿದ್ದು; ಇನ್ನೊಂದು ದಿನ ಬಗೆ ಬಗೆಯ ಮಾಂಸದ ಊಟವಿರುತ್ತಿತ್ತು. ಸಮಯ ಸಿಕ್ಕಿದಾಗಲೆಲ್ಲಾ ಕೌಂಟಿ ಕ್ಲಬ್ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು.

ಪಾಲ್ ರಿಚರ್ ಅಮೆರಿಕೆಯ ಅಂಗವಿಕಲ ಸಂಘದ ಅಧ್ಯಕ್ಷರಾಗಿದ್ದರು. ಅದಕ್ಕಾಗಿ ಅವರು ತಮ್ಮ ತನು, ಮನ, ಧನವನ್ನು ಧಾರೆಯೆರೆದಿದ್ದರು. ಅಮೆರಿಕಾದಲ್ಲಿರುವ ರೆಡ್ ಇಂಡಿಯನ್ ರಿಸರ್‌ವೇಷನ್‌ಗಳಲ್ಲಿ ಒರೆಗಾನ್ ರಿಸರ್‌ವೇಷ್ ಅತಿ ದೊಡ್ಡದರಲ್ಲಿ ಒಂದು. ಬೇರೆ ಯಾರಿಗೂ ಇಲ್ಲದ ಅನುಮತಿ ಇವರಿಗೆ ಆ ರಿಸರ್‌ವೇಷ್‌ಗೆ ಹೋಗಲು ಇತ್ತು. ರೆಡ್ ಇಂಡಿಯನ್ನರಿಗೂ ಸರ್ಕಾರಕ್ಕೂ ಒಂದು ಬಗೆಯ ಮಧ್ಯವರ್ತಿಯಂತೆ ಇವರು ನಡೆದುಕೊಳ್ಳುತ್ತಿದ್ದರು. ರೆಡ್ ಇಂಡಿಯನ್ಸ್ ಸೆಮೆನ್ ಮೀನನ್ನು ಬೇಯಿಸಿ ತಿನ್ನುತಿದ್ದ ವೈಖರಿ ವಿಶೇಷವಾಗಿತ್ತು. ನಮ್ಮಲ್ಲಿ ಎತ್ತಿನ ಗಾಡಿ ಚಕ್ರದ ಪಟ್ಟೆ ಬಿಡಿಸಲು ಬಳಸುತ್ತಿದ್ದ ಬೆರಣಿಯ ಸುತ್ತು ಒಲೆಯಂತೆ ಬೆಂಕಿಯನ್ನು ತಯಾರುಮಾಡಿ ಸುಮಾರು ಒಂದೂವರೆ ಅಡಿ ಎರಡಡಿ ಉದ್ದದ ಬೆರಳು ಗಾತ್ರದ ಕೋಲಿಗೆ ಮೀನಿನ ತುಂಡನ್ನು ಪೋಣಿಸಿ ಬೆಂಕಿಗೆ ಬಾಗಿದಂತೆ ಸುತ್ತಲೂ ನೆಟ್ಟು ನಿಧಾನವಾಗಿ ಬೇಯಿಸಿ ನಂತರ ಒಂದು ಬಗೆಯ ಎಲೆಯ ಮೇಲೆ ಬೇಯಿಸಿದ ಮೀನಿನ ತುಂಡನ್ನು ಇರಿಸಿ ಅದಕ್ಕೆ ಒಂದು ಬಗೆಯ ಖಾರವನ್ನು ಹಾಕಿ ತಿನ್ನುತ್ತಿದ್ದರು. ಅದರ ಜೊತೆ ಬಹುಶಃ ಅವರೇ ತಯಾರುಮಾಡಿದ ಮದ್ಯವನ್ನು ಸೇವಿಸುತ್ತಿದ್ದರು. ನಾವು ಹೋದ ದಿನ ವೀಕ್ಷಿಸಿದ ಕೂಟದಲ್ಲಿ ಸುಮಾರು ಇಪ್ಪತ್ತರಿಂದ ಮೂವತ್ತು ಜನರಿದ್ದರು. ಹೆಂಗಸರು ಗಂಡಸರೆಲ್ಲರೂ ಎರಡು ಜಡೆ ಉದ್ದನೆಯ ಕೂದಲು ಬಿಟ್ಟಿದ್ದರು. ನಾವು ಸುಮಾರು ಮೂವತ್ತು ಅಡಿ ದೂರದಲ್ಲೆ ನಿಂತು ವೀಕ್ಷಿಸುತ್ತಿದ್ದೆವು. ನಮಗೂ ಕೂಡ ಸೆಮೆನ್ ಮೀನನ್ನು ಕೊಟ್ಟರು. ಅದರ ಸ್ವಾದ ತಿಂದು ಅನುಭವಿಸಿದವರಿಗೇ ಗೊತ್ತು! ಈ ಅಪರೂಪದ ಅವಕಾಶ ಬೇರೆ ಯಾವ ಪ್ರವಾಸಿಗರಿಗೂ ದೊರೆಯದೆಂದು ನನ್ನ ಅನಿಸಿಕೆ.

ನಾನು ಇದ್ದಷ್ಟು ದಿವಸ ನಾನು ಕಲಿಯಬೇಕಿದ್ದ ವಿಷಯದ ಜೊತೆಗೆ ಅಲ್ಲಿಯ ಜನಜೀವನ, ನಡೆನುಡಿ, ಆಚಾರ, ವ್ಯವಹಾರ, ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಮುಂತಾದವುಗಳ

ಅನುಭವಗಳನ್ನು ಪಡೆಯಬೇಕೆಂದು ಅವರ ಅಭಿಲಾಷೆಯಾಗಿತ್ತು. ಒರೆಗಾನ್ ಸ್ಟೇಟ್ ಯೂನಿವರ್ಸಿಟಿ (ಓ.ಎಸ್.ಯು.) ಕೋರ್‌ವಾಲಿಸ್ ಕೀಟಶಾಸ್ತ್ರ ವಿಭಾಗ ನಮ್ಮ ವ್ಯವಸಾಯ ಕಾಲೇಜಿಗಿಂತಲೂ ದೊಡ್ಡದಾಗಿತ್ತು. ನಾನು ಹೋದ ಸಮಯದಲ್ಲಿ ಕೀಟಶಾಸ್ತ್ರ ವಿಭಾಗ ಒಂದರಲ್ಲೇ ನಲವತ್ತು ಪ್ರಾಧ್ಯಾಪಕರಿದ್ದರು. ಪುನಃ ನಾನು 1994ರಲ್ಲಿ ಹೋದಾಗ ಅಲ್ಲಿ ಕೇವಲ ಮೂರು ಜನ ಮಾತ್ರ ಪ್ರೊಫೆಸರ್‌ಗಳು ಇದ್ದರು. ಪ್ರೊಫೆಸರ್‌ಗಳಲ್ಲಿ ಯಾರಾದರೂ ಬೇರೆಯವರ ಜಮೀನಿಗೆ ಹೋಗಿ ಅಲ್ಲಿರುವ ತೊಂದರೆಗಳನ್ನು ವೀಕ್ಷಿಸಲು ಹೋಗುವಾಗ ನನ್ನನ್ನೂ ಕಳುಹಿಸುತ್ತಿದ್ದರು. ಹೋಗುವಾಗಲೆಲ್ಲಾ ಡಿಪಾರ್ಟ್‌ಮೆಂಟಿನ ವಾಹನಗಳನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಿ ವಾಪಸ್ಸು ತಂದು ಬಿಡಬಹುದಿತ್ತು. ಒಂದೊಂದು ದಿವಸ ನೂರಾರು ಮೈಲಿ ಹೋಗಿ ಬರುತ್ತಿದ್ದೆವು. ಒರೆಗಾನ್ ಸ್ಟೇಟ್ ಪಶ್ಚಿಮ ತೀರದಲ್ಲಿದ್ದು ನಮ್ಮ ಮಲೆನಾಡಿಗೆ ಹೋಲುತ್ತಿತ್ತು. ವಿಶಾಲವಾದ ಎತ್ತರ ತಗ್ಗು ಬೆಟ್ಟಗುಡ್ಡ ಸದಾ ಹಚ್ಚ ಹಸಿರು, ಒಪ್ಪುವಂತಹ ವಾತಾವರಣ ಎಲ್ಲರ ಮನ ಸೆಳೆದಿತ್ತು.

ಕೀಟಶಾಸ್ತ್ರ ವಿಭಾಗದ ಛೇರ್‌ಮನ್ ಡಾ|| ಕೀಟ್ಸ್ ಹೊಸದಾಗಿ ಆಯ್ಕೆಯಾಗಿ ಬಂದಿದ್ದರು. ಅವರು ಇಂಗ್ಲೆಂಡಿನವರಾದ್ದರಿಂದ ಒರೆಗಾನ್ ಸ್ಟೇಟಿನ ಅನುಭವಕ್ಕಾಗಿ ಸಮಯ ಸಿಕ್ಕಿದಾಗಲೆಲ್ಲಾ ಪ್ರವಾಸ ಹೋಗುತ್ತಿದ್ದರು. ಒಮ್ಮೆ ಅವರು ಪಕ್ಕದ ವಾಷಿಂಗ್‌ಟನ್ ಪರ್ವತ ಶ್ರೇಣಿಗಳನ್ನು ನೋಡಲು ಹೊರಟಾಗ ನನ್ನನ್ನೂ ಕರೆದುಕೊಂಡು ಹೋಗುವಂತೆ ಪಾಲ್‌ರಿಚರ್ ಡಾ|| ಕೀಟ್ಸ್‌ರನ್ನು ಕೇಳಿಕೊಂಡರು. ಅವರೂ ಒಬ್ಬರೆ ಇದ್ದದ್ದರಿಂದ ಮೂರು ದಿವಸದ ಪ್ರವಾಸಕ್ಕೆ ನನ್ನನ್ನೂ ಸೇರಿಸಿಕೊಂಡರು. ಊಟ ವಸತಿಯ ಖರ್ಚೆಲ್ಲವನ್ನೂ ಅವರೇ ನೋಡಿಕೊಂಡರು. ಸುಮಾರು ಒಂದೂವರೆ ಸಾವಿರ ಮೈಲಿಯ ಮೂರು ದಿನದ ಪ್ರವಾಸ ನಿರಾಯಾಸವಾಗಿ ಸಾಗಿತು. ಮೌಂಟ್ ಜಫರ್‌ಸನ್, ಮೌಂಟ್ ಬ್ಲಾಕ್, ಮೆಟೊಲಿಯಸ್ ಹೊಳೆಯ ಉಗಮಸ್ಥಾನ, ಮುಖ್ಯವಾದ ಪ್ರೇಕ್ಷಣೀಯ ಸ್ಥಳಗಳು. ಆರಿಜನ್ ಆಫ್ ಮೆಟೊಲಿಯಸ್ ರಿವರ್ ಎಲ್ಲರೂ ನೋಡಬೇಕಾದ ಸ್ಥಳವೆಂದು ದಾರಿ ಉದ್ದಕ್ಕೂ ಸೈನ್‌ಬೋರ್ಡ್‌ಗಳಿದ್ದವು. ಆ ಸ್ಥಳಕ್ಕೆ ಹೋಗಿ ನೋಡಿದಾಗ ಅದು ಒಂದು ದೊಡ್ಡ ಬುಗ್ಗೆಯ ಹಾಗೆ ನೆಲದಿಂದ ಉಕ್ಕಿ ಬರುತ್ತಿತ್ತು. ನನಗೇನು ಮೈನವಿರೇಳುವಂತಹ ಆಕರ್ಷಣೀಯವಾಗಿ ಕಾಣಲಿಲ್ಲ. ಬಹುಶಃ, ಚಿಕ್ಕಂದಿನಿಂದ ಮಲೆನಾಡಿನಲ್ಲಿ ಮಳೆಗಾಲ ನಿಂತ ತಕ್ಷಣ ಎಲ್ಲೆಲ್ಲೂ ವಿಧವಿಧವಾದ ಬುಗ್ಗೆಗಳು, ಚಿಲುಮೆಗಳನ್ನು ನೋಡಿ ಇದೂ ಅಂತಹವಲ್ಲಿ ಒಂದು ಎಂದು ಅನಿಸಿರಬಹುದು. ಆದರೆ ಆ ಒಂದು ಸಣ್ಣ ದೃಶ್ಯಕ್ಕೆ ಪ್ರವಾಸಿಗರನ್ನು ಆಕರ್ಷಿಸಲು ಮಾಡಿರುವ ಅನುಕೂಲಗಳನ್ನು ನೋಡಿ ಆಶ್ಚರ್ಯವಾಯಿತು. ಇದಕ್ಕಿಂತಲೂ ರಮ್ಯವಾದ ಪ್ರೇಕ್ಷಣೀಯ ಸ್ಥಳಗಳು ನಮ್ಮ ಪಶ್ಚಿಮ ಘಟ್ಟಗಳಲ್ಲಿ ಹೇರಳವಾಗಿ ಇವೆ. ಅವುಗಳನ್ನು ನೋಡಲು ಪ್ರವಾಸಿಗರನ್ನು ಆಕರ್ಷಿಸುವಂಥ ಅವಕಾಶಗಳನ್ನು ಕಲ್ಪಿಸಿಲ್ಲವೆಂದು ವ್ಯಥೆಯಾಯಿತು.

ವರುಷಕ್ಕೆ ಒಮ್ಮೆ ಓ.ಎಸ್.ಯು. ಹೊರದೇಶದ ವಿದ್ಯಾರ್ಥಿಗಳಿಗೋಸ್ಕರ ಒಂದು ಚರ್ಚಿನ ಸಂಘದವರು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ. ಅದರ ಪ್ರಕಾರ ಒಬ್ಬ ಅಥವಾ ಇಬ್ಬರು ವಿದ್ಯಾರ್ಥಿಗಳನ್ನು ಒಂದು ಸಂಸಾರದವರು ಮೂರು ದಿವಸ ಅವರ ಮನೆಯಲ್ಲಿ ಇಟ್ಟುಕೊಂಡು ವಿಚಾರ ವಿನಿಮಯ ನಡೆಸುತ್ತಿದ್ದರು. ಒಂದು ಶುಕ್ರವಾರ ಸಂಜೆ

ಹೋಗಿ ಸೋಮವಾರ ವಾಪಸು ಬರುವಂತಹದು. ಬಹುತೇಕ ಇದರ ಉದ್ದೇಶ, ನನಗೆ ಅನಿಸಿದ್ದು, ಕ್ರೈಸ್ತ ಧರ್ಮವನ್ನು ·ಮನದಟ್ಟು ಮಾಡುವ ವಿಧಾನವೆಂದು. ನಾನು ಮತ್ತು ನೈಜೀರಿಯನ್ ವಿದ್ಯಾರ್ಥಿಯೊಬ್ಬ ಡೇವಿಸ್ ಅನ್ನುವರ ಮನೆಯಲ್ಲಿ ಇದ್ದೆವು. ಡೇವಿಸ್ ಮತ್ತು ಅವರ ಪತ್ನಿ ಅರವತ್ತಕ್ಕೂ ಮೀರಿದ ವಯಸ್ಸಿನವರು. ಅವರ ಇಬ್ಬರು ಮಕ್ಕಳು ಬೇರೆ ಯಾವುದೋ ಊರಿನಲ್ಲಿದ್ದರು. ಡೇವಿಸ್‌ರವರು ಮುನ್ನೂರು ಎಕರೆ ಇರುವ ಸಣ್ಣ ಜಮೀನುದಾರರು. ಹೆಚ್ಚಿನದು ಹುಲ್ಲುಗಾವಲು. ದನಗಳನ್ನು ಹತ್ತು ಹನ್ನೊಂದು ತಿಂಗಳವರೆಗೆ ಸಾಕಿ ಕಟುಕರಿಗೆ ಕಳುಹಿಸುವುದು ಅವರ ಮುಖ್ಯ ಕಸುಬು.

ಡೇವಿಸ್ ಮತ್ತು ಅವರ ಪತ್ನಿ ಆತಿಥ್ಯದಲ್ಲಿ ಅತಿಥೇಂದ್ರರೆಂದೇ ಹೇಳಬೇಕು. ಬಹಳ ವರ್ಷಗಳ ನಂತರ ಅವರ ಮಕ್ಕಳು ಮನೆಗೆ ಬಂದಂತೆ ನಮ್ಮನ್ನು ನೋಡಿಕೊಂಡರು. ಅವರಿದ್ದ ಮನೆ ವಂಶಪಾರಂಪರ್ಯವಾಗಿ ಬಂದದ್ದು. ಕಾಲಕ್ಕೆ ತಕ್ಕಂತೆ ಮನೆ ಮತ್ತು ಮನೆಯೊಳಗಿನ ಸಾಮಾನುಗಳು ಮಾರ್ಪಾಟಾಗಿ ಹಳೆಯದು ಹೊಸದು ಮಿಲನವಾದ ದೃಶ್ಯ ಎದ್ದು ಕಾಣುತ್ತಿತ್ತು. ಆಶ್ಚರ್ಯವೆಂದರೆ ಕೇವಲ ಐವತ್ತು ವರುಷಗಳ ಹಿಂದೆ (ನಾನು ಹೋಗಿದ್ದು 1975ರಲ್ಲಿ) ಅವರ ಮನೆಯ ದಿನನಿತ್ಯದ ಬಳಕೆಯ ವಸ್ತುಗಳು ನಮ್ಮಲ್ಲಿರುವಂತಹವೆ ಇದ್ದವು. ಮರದ ಸೌಟು, ಮರದ ಬಟ್ಟಲು, ಕಲಾಯಿ ಮಾಡಿದ ತಾಮ್ರದ ಪಾತ್ರೆಗಳು, ಇಲಿ ಇರುವೆ ಬೆಕ್ಕುಗಳಿಗೆ ಎಟಕದಂತೆ ನೇತು ಹಾಕಿರುವ ಹಗ್ಗದಿಂದ ಮಾಡಿದ ನೆಲಿಗೆಗಳು, ಕಾಲುಮಣೆ, ಬೆಂಚುಕುರ್ಚಿ, ದನಗಳನ್ನು ಕಟ್ಟುವ ಗೂಟ, ಕೊಟ್ಟಿಗೆ ಮುಂತಾದವು ಇಲ್ಲಿರುವಂತಹವಕ್ಕೆ ಹೋಲುವಂತಹವು. ಅಮೆರಿಕಾದಲ್ಲಿ ಜನಜೀವನ ಹೆಚ್ಚಿಗೆ ಮಾರ್ಪಾಟಾಗಿದ್ದದ್ದು ಎರಡನೆ ಮಹಾ ಯುದ್ಧದ ನಂತರ. ಅದರಲ್ಲೂ ಮಾನವ ಚಂದ್ರ ಮಂಡಲಕ್ಕೆ ಕಾಲಿಟ್ಟ ನಂತರ ತಾಂತ್ರಿಕತೆಯ ಆಂದೋಳನವೇ ಆಗಿದೆ ಎಂದು ಹೇಳಬೇಕು. ಈಚೆಗಂತೂ ಕಂಪ್ಯೂಟರ್ ಪ್ರಭಾವದಿಂದ ಹಿಂದೆಂದೂ ಕಾಣದ ನವೀನತೆ ವರುಷದಿಂದ ವರುಷಕ್ಕೆ ಬದಲಾವಣೆಯಾಗುತ್ತಿವೆ. ಹಿಂದೆ ಯಾವುದಾದರೂ ಹೋಟೆಲಿನಲ್ಲಿ ಇಳಿದುಕೊಂಡರೆ ರೂಮಿನ ಬೀಗದ ಕೈಯನ್ನು ಒಂದು ಭಾರವಾದ ಲೋಹದ ಕೊಂಡಿಗೆ ಹಾಕಿ ಕೊಡುತ್ತಿದ್ದರು. ಇದರ ಉದ್ದೇಶ ಯಾರೂ ಜೇಬಿನಲ್ಲಿ ಇಟ್ಟುಕೊಂಡು ಹೋಗಬಾರದೆಂದು. ಈಗಿನ ಬೀಗದ ಕೈಗಳು ವಿಸಿಟಿಂಗ್ ಕಾರ್ಡ್ ಮಾದರಿ, ಕಳೆದಂತೆಲ್ಲಾ ಕೋಡ್ ಬದಲಾಯಿಸಿ ಹೊಸದನ್ನು ಕೊಡುತ್ತಾರೆ. ಹಳೆಯದರಲ್ಲಿ ಬಾಗಿಲು ತೆಗೆಯಲಾಗುವುದಿಲ್ಲ. ಯಾರೂ ಡೂಪ್ಲಿಕೇಟ್ ಕೀ ಮಾಡುವಂತಿಲ್ಲ. ಕೀ ಕಳೆದರೆ ಬಾಗಿಲು ಒಡೆದು ತೆಗೆಯಬೇಕೆಂದಿಲ್ಲ. ಕಂಪ್ಯೂಟರ್ ಸಹಾಯದಿಂದ ತೆಗೆಯಬಹುದು.

ಗೊಬ್ಬರದ ಹುಳ/ಬೇರು ತಿನ್ನುವ ಹುಳ/ಗೊಣ್ಣೆಹುಳ ಪ್ರಪಂಚದಾದ್ಯಂತ ವೈಟ್‌ಗ್ರಬ್ಸ್ ಎಂದು ಕರೆಯಲ್ಪಡುತ್ತವೆ. ಡಾ॥ ಪಾಲ್ ರಿಚರ್‌ರವರು ಈ ಹುಳುವಿನ ಬಗ್ಗೆ ಆಳವಾದ ಅಧ್ಯಯನ ಮಾಡಿ ಬೇರೆ ಬೇರೆ ಜಾತಿ, ಪಂಗಡ, ಬುಡಕಟ್ಟುಗಳನ್ನು ವಿಂಗಡಿಸುವ ವಿಧಾನವನ್ನು ಹೊಸದಾಗಿ ವೈಜ್ಞಾನಿಕವಾಗಿ ರೂಪಿಸಿದ್ದರು. ಇವುಗಳ ಪೂರ್ಣಮಾಹಿತಿಯನ್ನೊಳಗೊಂಡ 'ವೈಟ್‌ಗ್ರಬ್ಸ್ ಅಂಡ್ ದೇರ್ ಅಲೈಯ್ಸ್' ಎಂಬ ಹೊತ್ತಿಗೆಯನ್ನು ಹೊರತಂದರು. ಸಾಮಾನ್ಯರಿಗೆ ಬೇರು ತಿನ್ನುವ ಹುಳಕ್ಕೂ ಅದರ ತಾಯಿ ದುಂಬಿಗೂ ಸಂಬಂಧ ಕಲ್ಪಿಸುವುದು ಕಷ್ಟ. ಮರಿಗಳ ಕೆಲವು ಲಕ್ಷಣಗಳನ್ನು ನೋಡಿ ಇವು ಯಾವ ಪಂಗಡಕ್ಕೆ ಸೇರಿವೆ ಎನ್ನುವುದನ್ನು ಹೇಳಬಹುದು.

ಕೆಲವು ಸ್ಪೀಸೀಸ್ ವಯಸ್ಕ ದುಂಬಿಗಳಾಗಬೇಕಾದರೆ ಎರಡು ಮೂರು ವರುಷಗಳು ಬೇಕು. ಮತ್ತೆ ಕೆಲವು ಇನ್ನೂ ಹೆಚ್ಚು ಕಾಲ ತೆಗೆದುಕೊಳ್ಳುತ್ತವೆ. ಉದಾಹರಣೆಗೆ ಅಮೆರಿಕಾದ ಪಶ್ಚಿಮ ತೀರದ ಕಾಡಿನಲ್ಲಿ ದೊರೆಯುವ ರೈನ್‌ಬೀಟಲ್ಸ್ ಮೊಟ್ಟೆಯಿಂದ ಮರಿ ಆದದ್ದು ವಯಸ್ಕ ದುಂಬಿಯಾಗಬೇಕಾದರೆ ಹದಿನೇಳು ವರುಷಗಳು ಬೇಕು. ಹೀಗೆ ಹತ್ತಾರು ಬಗೆಯ ವೈಟ್‌ಗ್ರಬ್ಸ್‌ನ ಅಧ್ಯಯನಕ್ಕಾಗಿ ಇವರಲ್ಲಿಗೆ ನಾನು ಬಂದಿದ್ದೆ. ಈ ಗುಂಪಿನ ಹುಳುಗಳ ಅಧ್ಯಯನವನ್ನು ಸುಮಾರು ಹತ್ತು ವರುಷದಿಂದ ಮಾಡಿದ್ದರಿಂದ, ಆಗಾಗ ರಿಚರ್‌ರವರ ಸಲಹೆಗಳನ್ನು ಪಡೆಯುತ್ತಿದ್ದರಿಂದ ತರಬೇತಿ ಕಷ್ಟವಾಗಿ ಕಾಣಲಿಲ್ಲ. ಇವರಲ್ಲಿದ್ದ ಎಲ್ಲಾ ಸಂಬಂಧಪಟ್ಟ ಪೇಪರ್ಸ್, ಪುಸ್ತಕಗಳನ್ನು ನನಗೆ ಕೊಟ್ಟರು. ಅತ್ಯಮೂಲ್ಯವಾದ ಐದು ಪೂಸ ಪ್ರೊಸೀಡಿಂಗ್ಸ್ ಅವರಲ್ಲಿದ್ದವನ್ನು ಕೂಡ ನನಗೆ ಕೊಟ್ಟರು. ನಾನು ನಿವೃತ್ತಿಯಾಗುವಾಗ ಸುಮಾರು ಮುನ್ನೂರು ಪುಸ್ತಕಗಳನ್ನು ಯು.ಎ.ಎಸ್. ಬೆಂಗಳೂರು ಲೈಬ್ರರಿಗೆ ಕೊಟ್ಟವಲ್ಲಿ ಇವು ಸೇರಿವೆ. ಅವರಲ್ಲಿದ್ದ ನೂರಾರು ಟೈಪ್ ಸ್ಪೆಸಿಮನ್‌ನನ್ನು ಬಳುವಳಿಯಾಗಿ ಕೊಟ್ಟರು.

ನಾನು ಹೊರಡುವ ಕೆಲವು ದಿನಗಳ ಮುಂಚೆ ರಿಚರ್‌ರವರು ನನ್ನಲ್ಲಿಗೆ ಬಂದು ನೀವು ಅಮೆರಿಕಾಕ್ಕೆ ಬಂದು ಕಲಿತ ಕುರುಹುವಿಗಾಗಿ ನಿಮ್ಮ ದೇಶಕ್ಕೆ ಏನು ತೆಗೆದುಕೊಂಡು ಹೋಗಬೇಕೆಂದಿದ್ದೀರಿ ಎಂದು ಕೇಳಿದರು. ನನಗೆ ಏನು ಹೇಳಬೇಕೆಂದು ತೋಚಲಿಲ್ಲ. ನೀವು ಬಯಸಿದರೆ ನನ್ನದೊಂದು ಸಲಹೆ ಇದೆ. ಇಲ್ಲಿ ಒಬ್ಬ ಎಂಜಿನಿಯರ್ ಅಲಾಸ್ಕ ಪೈಪ್‌ಲೈನ್ ಹಾಕುವ ಯೋಜನೆಯಲ್ಲಿ ಹೋಗುವವರಿದ್ದಾರೆ. ಅವರ ಹತ್ತಿರ 'ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕ' ಪುಸ್ತಕದ ಸೆಟ್ಟುಗಳಿವೆ. ಅವುಗಳನ್ನು ನೂರೈವತ್ತು ಡಾಲರಿಗೆ ಕೊಡಲು ಒಪ್ಪಿದ್ದಾರೆ. ನೀವು ಕೊಂಡುಕೊಂಡರೆ ಅವುಗಳನ್ನು ಇಂಡಿಯಾಕೆ ರವಾನಿಸುವ ಜವಾಬ್ದಾರಿ ನನ್ನದು ಎಂದರು. ನಾನು ಸಂತೋಷವಾಗಿ ಒಪ್ಪಿಕೊಂಡೆ. ನಾನು ವಾಪಸು ಮನೆಗೆ ಬರಿ ಕೈಯಲ್ಲಿ ಬಂದಾಗ ಏನನ್ನೂ ತರಲಿಲ್ಲವೇಕೆಂದು ಮನೆಯವರು ಕೇಳಿದರು. ಎರಡು ಮೂಟೆಯನ್ನು ಹಡಗಿನಲ್ಲಿ ಕಳುಹಿಸಿದ್ದೇನೆ, ಇನ್ನೇನು ಬರಬಹುದೆಂದು ಹೇಳಿದಾಗ ಮಡದಿ ಮಕ್ಕಳೆಲ್ಲಾ ಕಾತುರರಾಗಿ ಕಾದು ಕುಳಿತರು. ಮೂಟೆಗಳೇನೋ ಬಂದವು. ಬಿಚ್ಚಿನೋಡಿದಾಗ ಬರಿ ಪುಸ್ತಕಗಳು. ಹತಾಶರಾಗಿ ಇವರ ಹಣೇ ಬರಹವೇ ಇಷ್ಟೆಂದು ಮನಸ್ಸಿನಲ್ಲೇ ನೊಂದುಕೊಂಡು ಸುಮ್ಮನಾದರು. ಕಾಲಕಳೆದಂತೆ ಮಕ್ಕಳು ದೊಡ್ಡವರಾಗಿ ಕಲಿಯಲು ಪ್ರಾರಂಭಿಸಿದಾಗ ಕೆಲವು ಸಮಸ್ಯೆಗಳಿಗೆ ಉತ್ತರ ಸಿಕ್ಕದಿದ್ದಾಗ ಎನ್‌ಸೈಕ್ಲೋಪೀಡಿಯಾದ ಕಡೆಗೆ ಕೈ ತೋರಿಸುತ್ತಿದ್ದೆ. ಆಗ ಅವರಿಗೆ ಅವುಗಳ ಮಹತ್ವ ಅರಿವಾಗುತ್ತಿತ್ತು. ನನ್ನ ಉಳಿದೆಲ್ಲಾ ಪುಸ್ತಕಗಳನ್ನು ಲೈಬ್ರರಿ ಅಥವಾ ಇತರರಿಗೆ ಕೊಟ್ಟರೂ ಇವುಗಳು ಮಾತ್ರ ಇನ್ನೂ ಶೋಭಾಯಮಾನವಾಗಿ ಮನೆಯಲ್ಲಿವೆ. ಅವುಗಳನ್ನು ನೋಡಿದಾಗ ಲೆಲ್ಲಾ ಪ್ರೊ॥ ಪಾಲ್ ರಿಚರ್ ನೆನಪು ಬರುತ್ತದೆ.

ಪ್ರೊ॥ ಪಾಲ್ ರಿಚರ್‌ರವರ ವಿದ್ಯಾರ್ಥಿ ಪ್ರೊ॥ ನೇಮ್‌ಜಿಕ್, ಊಸ್ಟರ್ ಒಹಾಯೊದ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ನಲ್ಲಿ ಬೇರು ತಿನ್ನುವ ಹುಳುಗಳ ಸಂಶೋಧನೆಯಲ್ಲಿ ನಿರತರಾಗಿದ್ದರು. ಅಮೆರಿಕಾದಲ್ಲಿ ಸುಮಾರು ಎಂಟು ಸಾವಿರ ಗಾಲ್ಫ್ ಕೋರ್ಸ್‌ಗಳಿವೆಯಂತೆ. ಅವುಗಳಲ್ಲಿ ಅನೇಕವು ವೈಟ್‌ಗ್ರಬ್ಸ್ ಹಾವಳಿಯಿಂದ ತೊಂದರೆಗೀಡಾಗಿವೆ. ಅವುಗಳ ನಿಯಂತ್ರಣದಲ್ಲಿ ಪ್ರೊ॥ ನೇಮ್‌ಜಿಕ್ ಪರಿಣಿತರಿದ್ದರು. ಇವರಲ್ಲಿಗೆ ಎರಡು ವಾರಗಳ ತರಬೇತಿಗೆ

ನನ್ನನ್ನು ರಿಚರ್‌ರವರು ಕಳುಹಿಸಿಕೊಟ್ಟಿದ್ದರು. ಇವರೊಂದಿಗೆ ಕಳೆದ ಎರಡು ವಾರಗಳು ಸ್ಮರಣೀಯ. ದಿನವೆಲ್ಲಾ ನೂರಾರು ಮೈಲಿಯಲ್ಲಿರುವ, ತೊಂದರೆಗೀಡಾಗಿರುವ ಗಾಲ್ಫ್ ಕೋರ್ಸ್‌ಗಳಿಗೆ ಭೇಟಿಕೊಟ್ಟು, ಸ್ಯಾಂಪಲ್ಸ್ ತೆಗೆದು ಪರೀಕ್ಷಿಸಿ ಹತೋಟಿ ಕ್ರಮಗಳನ್ನು ಹೇಳಿ ಅವರ ಕ್ಲಬ್‌ನಲ್ಲಿ ಭರ್ಜರಿಯಾದ ಊಟ ಹೊಡೆದು ಸಂಜೆಯ ವೇಳೆಗೆ ವಾಪಸು ಬರುತ್ತಿದ್ದೆವು. ಸಂಜೆ ಆರು ಗಂಟೆಗೆ ಇವರ ಮನೆಯಲ್ಲೇ ಊಟ ಮಾಡಿ ಪ್ರೊ॥ ನೇಮ್‌ಜಿಕ್, ಅವರ ಪತ್ನಿ ಮತ್ತು ಮೂರು ಮಕ್ಕಳು ನಾನೂ ಸೇರಿ ಮೀನು ಹಿಡಿಯಲು ಹೋಗುತ್ತಿದ್ದೆವು. ಪ್ರೊ॥ ನೇಮ್‌ಜಿಕ್‌ರಿಗೆ ಮೀನು ಹಿಡಿಯುವ ಗೀಳು. ಎಷ್ಟೇ ಮೀನು ಹಿಡಿದರೂ ಕೊನೆಗೆ ತರುತ್ತಿದ್ದದ್ದು ಎರಡು ಮಾತ್ರ. ಉಳಿದೆಲ್ಲವನ್ನು ವಾಪಸು ನೀರಿಗೆ ಬಿಡಬೇಕಿತ್ತು. ಅಲ್ಲಿಯ ನಿಯಮ ಹಾಗೆ. ಕೆಲವು ದಿನ ಊಸ್ಟರ್‌ನಿಂದ ಸಿನ್‌ಸಿನ್ನೈಟಿಗೆ ನಲವತ್ತು ಮೈಲಿ ದೂರ ರಿಬ್ಸ್ ತಿನ್ನಲು ಹೋಗುತ್ತಿದ್ದೆವು.

ಒಮ್ಮೆ ಅವರ ಲ್ಯಾಬ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ನಮ್ಮ ದೇಶದಲ್ಲಿ ಮದುವೆಗಳು ಆಗುವ ರೀತಿ ಪ್ರಸ್ತಾಪ ಬಂತು. ನಾನೂ ಕೂಡ ನಮ್ಮ ಪದ್ಧತಿಯಂತೆ ಹಿರಿಯರು ನಿಶ್ಚಯಿಸಿದ ಹುಡುಗಿಯನ್ನೇ ಮದುವೆಯಾದದ್ದೆಂದು ಹೇಳಿದ ಕೂಡಲೆ ಬಹಳ ಆಶ್ಚರ್ಯದಿಂದ ಹೆಂಡತಿಗೆ ಫೋನ್ ಮಾಡಿ "ಹನಿ, ಒಂದು ಆಶ್ಚರ್ಯವಾದ ಸಂಗತಿ ನಿನಗೆ ತಿಳಿಯದು, ಡಾ॥ ವೀರೇಶ್ ಅವರ ಹಿರಿಯರು ನಿಶ್ಚಯಿಸಿದ ಹುಡುಗಿಯನ್ನೇ ಮದುವೆ ಆದರಂತೆ! ಇದೊಂದು ತಮಾಷೆಯಲ್ಲವೇ" ಎಂದರು. ಅವರು ಫೋನ್ ಮಾಡಿದ್ದು ನನಗೆ ತಮಾಷೆಯಾಗಿ ಕಂಡಿತು.

ಊಸ್ಟರ್ ನಲ್ಲಿರುವಾಗ ಆಮಿಷ್ ಎಂಬ ಒಂದು ಗುಂಪಿನ ಜೀವನ ಪರಿಚಯವಾಯಿತು. ಪ್ರೊ॥ ನೇಮ್‌ಜಿಕ್‌ರವರ ಪ್ರಯತ್ನದಿಂದಾಗಿ ಬಹಳ ಹತ್ತಿರದಿಂದ ಆಮಿಷ್‌ರವರ ಜನಜೀವನ ತಿಳಿಯುವಂತಾಯಿತು. ಸುಮಾರು ಇನ್ನೂರು ವರುಷಗಳ ಹಿಂದೆ ಮೊದಲು ಅಮೆರಿಕಾಕ್ಕೆ ವಲಸೆ ಬಂದ ಜರ್ಮನಿಯವರ ಒಂದು ಪಂಗಡಕ್ಕೆ ಸೇರಿದವರು. ಅಂದಿನಿಂದ ಇಂದಿನ ವರೆಗೆ ಅವರ ಪೂರ್ವಿಕರು ಜರ್ಮನಿಯಲ್ಲಿ ಹೇಗೆ ಜೀವನ ನಡೆಸುತ್ತಿದ್ದರೋ ಹಾಗೆಯೇ ಇವರು ನಡೆದು ಕೊಳ್ಳುತ್ತಿದ್ದಾರೆ. ಕಾರ್ಯತಹ ಇವರು ಕೃಷಿಕರು. ಇವರ ಫಾರಂ ಮತ್ತು ಮನೆಗಳಲ್ಲಿ ಎಲೆಕ್ಟ್ರಿಕ್ ಕರೆಂಟ್ ಬಳಸುವುದಿಲ್ಲ. ಉಳುಮೆಗೆ ಟ್ರಾಕ್ಟರ್ ಉಪಯೋಗಿಸುವುದಿಲ್ಲ. ಕುದುರೆಗೆ ಕಟ್ಟಿದ ನೇಗಿಲಿಂದ ಬೇಸಾಯ. ಓಡಾಡಲು ಕಾರಿನ ಬದಲು ಜಟಕಾ ಬಂಡಿ. ಗಂಡಸರೆಲ್ಲರೂ ನೀಳವಾದ ಗಡ್ಡ ಬಿಟ್ಟು ಉದ್ದನೆ ತಲೆಕೂದಲು ಬಿಟ್ಟಿರುತ್ತಾರೆ. ಹೆಂಗಸರೆಲ್ಲರಿಗೆ ಲಂಗದೋಪಾದಿಯ ಉಡುಪು. ಕೈ ತುಂಬಾ ರವಿಕೆ. ತಲೆಗೆ ಕೊಡಗಿನವರು ಕಟ್ಟಿದ ಹಾಗೆ ವಸ್ತ್ರ. ಅವರೇ ತಯಾರು ಮಾಡಿದ ಬ್ರೆಡ್, ಅವರು ಸಾಕಿದ ಹಸುವಿನ ಹಾಲು, ಹಾಲಿನಿಂದ ತಯಾರಿಸಿದ ವಿವಿಧ ತಿಂಡಿ. ಕೋಳಿಗಳನ್ನು ಪಂಜರದಲ್ಲಿಡದೆ ಮೇಯಲು ಬಿಟ್ಟಿರುತ್ತಾರೆ. ಅವರ ಮಕ್ಕಳು ಅವರದೇ ಶಾಲೆಯಲ್ಲಿ ಕಲಿಯಬೇಕು. ಎಲ್ಲರೂ ಅಗತ್ಯವಿರುವ ಕಸೂತಿ ಕಲಿತಿರಬೇಕು. ಇಟ್ಟಿಗೆ ಮಾಡುವುದರಿಂದ ಮರಗೆಲಸ, ಮನೆ ಕಟ್ಟುವುದೆಲ್ಲ ಇವರಿಂದಲೇ. ಇವರು ಮೂಲತಃ ಕ್ರೈಸ್ತರಾಗಿದ್ದರೂ ಇವರ ಪೂಜೆ ಪುನಸ್ಕಾರ ಹಬ್ಬ ಹರಿದಿನಗಳು ಬೇರೆಯವರಿಗಿಂತ ಭಿನ್ನ. ಬೇರೆಯವರಿಗೆ ಇವರದು ಒಂದು ಬಗೆಯ ಕಷ್ಟದ ಜೀವನವಾಗಿ ಕಂಡರೂ ಇವರಿಗೆ ಮಾತ್ರ ಅವರ ಜೀವನವೇ ಸರಿ ಎಂದು ಸಂತೋಷಿಸುತ್ತಾರೆ. ಅಮೆರಿಕಾದಂತಹ ಆಧುನಿಕ ಜೀವನದ

ಮಧ್ಯದಲ್ಲೂ ಇಂತಹ ಜೀವನ ನಡೆಸುತ್ತಿರುವುದು ಅವರ ಮನಸ್ಸಿನ ಸ್ಥೈರ್ಯವನ್ನು ತೋರಿ ಸುತ್ತದೆ. ನಮ್ಮ ಸ್ನೇಹಿತರ ಪ್ರಕಾರ ಆಮಿಷ್‌ರ ಇಂದಿನ ಪೀಳಿಗೆ ಆಗಾಗ ಅವರ ಸಂಕೋಲೆಯಿಂದ ನುಣುಚಿ ಕೊಂಡು ಬಂದು ಮತ್ತೇ ಆ ಜೀವನಕ್ಕೆ ಹೋಗದಿರುವ ನಿದರ್ಶನಗಳಿವೆಯಂತೆ. ಊಸ್ಟರ್ ಹತ್ತಿರ ಸುಮಾರು ಇನ್ನೂರು ಅಮಿಷ್ ಸಂಸಾರಗಳಿವೆಯಂತೆ. ಅವರದೇ ಆದ ಡಯಲೆಕ್ಟ್‌ನಲ್ಲಿ ಮಾತನಾಡುತ್ತಾರೆ.

ಪ್ರೊ॥ ಪಾಲ್‌ರವರ ಸಲಹೆ ಮೇರೆಗೆ ಊಸ್ಟರಿಂದ ಕಾರ್ನೆಲ್ ಯೂನಿವರ್ಸಿಟಿ ಇಥಾಕಾಕ್ಕೆ ಹೋದೆ. ಕಾರ್ನೆಲ್ ಯೂನಿವರ್ಸಿಟಿ ಎಂಟಮಾಲಜಿ ಡಿಪಾರ್ಟ್‌ಮೆಂಟ್ ಬಹಳ ಹೆಸರುವಾಸಿಯಾದದ್ದು. ಅಲ್ಲಿದ್ದ ಒಬ್ಬ ಪ್ರೊ॥ ಗ್ಯೆರಿಸ್ಕೊ, ಪಾಲ್‌ರವರ ಸ್ನೇಹಿತರು. ಅವರಿಗೆ ನನ್ನನ್ನು ಪರಿಚಯಿಸಿ, ಕಾರ್ನೆಲ್ ಯೂನಿವರ್ಸಿಟಿಯಲ್ಲಿ ಬಹಳ ವರುಷಗಳಿಂದ ನಡೆದಿದ್ದ ವೈಟ್‌ಗ್ರಬ್ಸ್ ಸಂಶೋಧನೆಯ ಪರಿಚಯವನ್ನು ಮಾಡಿಸಿಕೊಡಬೇಕೆಂದು ಕೇಳಿ ಕೊಂಡರು. ಈ ಪ್ರೊಫೆಸರ್ ಕೂಡ ಸ್ಕೀಯಿಂಗ್ ಆಡುವಾಗ ಬಿದ್ದು ಹಿಪ್‌ಜಾಯಿಂಟ್ ಮುರಿದುಕೊಂಡು ಕುಂಟುತ್ತಿದ್ದರು. ಜೋರಾಗಿ ತಿರುಗಾಡಲು ಆಗುತ್ತಿರಲಿಲ್ಲ. ಇವರೊಂದಿಗೆ ಮಾತನಾಡುವಾಗ ಹಲವಾರು ಪೆಸ್ಟ್ ಹತೋಟಿಯ ಬಗ್ಗೆ ನನಗಿದ್ದ ಅರಿವು ತಿಳಿದು ಆಶ್ಚರ್ಯ ದಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದರು. ನನಗಾಗಲೇ ಹದಿನೈದು ವರುಷಗಳ ಕೀಟ ಶಾಸ್ತ್ರದ ಬೋಧನೆ ಸಂಶೋಧನೆಯ ಅನುಭವವಿತ್ತು. ನಮ್ಮ ದೇಶದಲ್ಲಿರುವ ಬೆಳೆಗಳ ಬಗೆಗಳು ಮತ್ತು ಅವುಗಳಿಗೆ ಬೀಳುವ ಕೀಟ ಮತ್ತು ರೋಗಗಳು ಮತ್ತಾವ ದೇಶದಲ್ಲಿ ಇರಲಾರವು. ನನ್ನ ವೃತ್ತಿ ಯಲ್ಲಿ ಯಾರೇ ಇದ್ದರೂ ಅವೆಲ್ಲವನ್ನು ತಿಳಿದವರಾಗಿಯೇ ಇರಬೇಕು.

ಇವರೊಂದಿಗೆ ಒಂದು ದಿನ ಮಹಡಿ ಹತ್ತುತ್ತಿದ್ದಾಗ ಒಂದು ಹೆಂಗಸು ಒಂದೇ ಕೈಯಿಂದ ಮೆಟ್ಟಿಲನ್ನು ಒರೆಸಿ ಸ್ವಚ್ಛಮಾಡುತ್ತಿದ್ದಳು. ಮತ್ತೊಂದು ಕೈ ಮುರಿದು ಬ್ಯಾಂಡೇಜ್ ಹಾಕಿದ್ದರು. ಈಕೆಗೆ ಸುಧಾರಿಸಿಕೊಳ್ಳಲು ರಜ ಕೊಟ್ಟಿದ್ದರೂ ನಿತ್ಯ ಬಂದು ಒರಸುತ್ತಿದ್ದಳು. ನನ್ನನ್ನು ಉದ್ದೇಶಿಸಿ ಅವರು ಹೇಳಿದ್ದು "ನೋಡಿ ಈಕೆ ಈ ಕೆಲಸವನ್ನು ಹದಿನೈದು ವರುಷದಿಂದ ಮಾಡಿಕೊಂಡು ಬಂದಿದ್ದಾಳೆ. ಅವಳು ಮನೆಯಲ್ಲಿ ಕುಳಿತರೆ ಬೇರೆಯವರು ಇದನ್ನು ಸರಿಯಾಗಿ ಸ್ವಚ್ಛ ಮಾಡದೆ ಹೊಲಸು ಮಾಡುವರೆಂಬ ಭಯ. ರಜ ಕೊಟ್ಟಿದ್ದರೂ ಹೀಗೆ ಬಂದು ಸ್ವಂತ ಮನೆಯಂತೆ ಮಾಡುತ್ತಾಳೆ" ಎಂದರು. ಕ್ಷಣ ಕಾಲ ನನಗೆ ಅನಿಸಿದ್ದು ನಮ್ಮಲ್ಲಿ ಇಂತಹ ನಿಷ್ಠಾವಂತ ರಿದ್ದಾರೆಯೇ? ನಮ್ಮ ಕಾಲೇಜು, ಕ್ಯಾಂಟೀನು ಹಾಸ್ಟಲ್‌ಗಳಲ್ಲಿ ಲ್ಯಾವಟರಿಗೆ ಕಣ್ಣು ಮೂಗು ಮುಚ್ಚಿಕೊಂಡು ಹೋಗಬೇಕು. ಬಸವಣ್ಣನವರ ವಚನ "ಕಾಯಕವೇ ಕೈಲಾಸ" ಎನ್ನುವುದು ಎಲ್ಲರ ಬಾಯಲ್ಲಿ ಇದೆ. ಆದರೆ ನಾವು ಮಾಡುವ ಕಾಯಕ ನಾಥ ಪಡಿಸುವಂತಹದೇ ಹೆಚ್ಚು.

ಮುಂದೆ ಕಾರ್ನೆಲ್ ಯೂನಿವರ್ಸಿಟಿಯ ಜಿನಿವಾ ಕ್ಯಾಂಪಸ್ಸಿಗೆ ಹೋಗಿ ಅಲ್ಲಿ ಪ್ರೊ॥ ಪಿಯೋರಿಯವರು ನಡೆಸುತ್ತಿದ್ದ ಸಂಶೋಧನೆಯನ್ನು ವೀಕ್ಷಿಸಿದೆ. ಅವರು ಕೈಗೊಂಡಿದ್ದ ಹಲವಾರು ಹತೋಟಿ ಕ್ರಮಗಳನ್ನು ಅವರ ಪ್ರಬಂಧಗಳನ್ನು ಓದಿ ತಿಳಿದಿದ್ದೆ. ಅವರು ಕೆಲವು ಮೂಲಭೂತ ಸಂಶೋಧನೆಯನ್ನು ಮಾಡಿ ವೈಟ್‌ಗ್ರಬ್ಬಿನ ಕೆಲವು ಸೂಕ್ಷ್ಮ ಚಲನವಲನ ಗಳನ್ನು ತಿಳಿದಿದ್ದರು. ಅವರೊಂದಿಗೆ ಮಾತನಾಡುವಾಗಲೂ ವೈಟ್‌ಗ್ರಬ್ಬಿನ ಹತೋಟಿ

ವಿಷಯಗಳಲ್ಲಿ ನನ್ನ ಮತ್ತು ಅವರ ಅನಿಸಿಕೆಗಳು ಒಂದೇ ದಾಟಿಯಲ್ಲಿದ್ದವು. ಅವರಿಗೆ ಒಂದೇ ವ್ಯಥೆ ಎಂದರೆ ಭಾರತದಲ್ಲಿ ಸಿಕ್ಕುವ ಬಗೆ ಬಗೆಯ ಬೇರು ಹುಳುಗಳು ಅಲ್ಲಿ ದೊರೆಯುವುದಿಲ್ಲ. ಎಲ್ಲ ಸಂಶೋಧನೆಯನ್ನು ಒಂದೇ ಬಗೆಯ ಬೇರು ಹುಳುವಿನ ಮೇಲೆ ಮಾಡಬೇಕು. ಆದ್ದರಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲ. ಹೀಗೆ ಕೊರಗುತ್ತಿದ್ದ ಮತ್ತೊಬ್ಬ ವಿಜ್ಞಾನಿ ಎಂದರೆ ಜಪಾನಿನ ಕಿಯೋಟೋ ಯೂನಿವರ್ಸಿಟಿಯ ಡಾ॥ ಅಬೆ. ಅವರು ಗೆದ್ದಲಿನ ಮೇಲೆ ಸಂಶೋಧನೆ ನಡೆಸುತ್ತಿದ್ದರು. ನಮ್ಮ ದೇಶದಲ್ಲಿರುವಂತೆ ನೂರಾರು ಬಗೆಯ ಗೆದ್ದಲು ಜಪಾನಿನಲ್ಲಿಲ್ಲ. ಅದಕ್ಕಾಗಿ ಅವರು ಆಫ್ರಿಕಾಕ್ಕೆ ಹೋಗಿ ಸಂಶೋಧನೆ ನಡೆಸಬೇಕಿತ್ತು. ನಮ್ಮಲ್ಲಿ ಕಣ್ಣು ತೆರೆದರೆ ಸಾಕು ನೂರೆಂಟು ಗೆದ್ದಲಿನ ಸಮಸ್ಯೆಗಳು ಮುಂದೆ ನಿಲ್ಲುತ್ತವೆ.

ಪ್ರೊ॥ ಪಾಲ್ ರಿಚರ್‌ರವರ ದೊಡ್ಡ ಹೃದಯ, ವಿಶಾಲವಾದ ಗ್ರಹಿಕೆಯಿಂದಾಗಿ ಕಲಿಯಲು ಮೂರು ವರುಷ ಬೇಕಿದ್ದ ಕಾಲವನ್ನು, ಮೂರು ತಿಂಗಳಲ್ಲಿ ನನಗೆ ದಕ್ಕುವಷ್ಟು ಜ್ಞಾನವನ್ನು ದಯಪಾಲಿಸಿ, ಇದ್ದ ಅವಕಾಶಗಳನ್ನೆಲ್ಲಾ ನನ್ನ ಮುಂದೆ ತೆರೆದಿಟ್ಟು, ನನ್ನ ಟ್ರೈನಿಂಗ್ ಅನ್ನು ಸಾರ್ಥಕಗೊಳಿಸಿ ಕಳುಹಿಸಿಕೊಟ್ಟರು. ಅವರಿಗೆ ನಾನು ಸದಾ ಚಿರಋಣಿಯಾಗಿದ್ದೇನೆ.

* * * *

ರಾಥ್‌ವಮ್‌ಸ್ಟೆಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್ ಹಾರ್‌ಪೆಂಡನ್‌ಗೆ ಲಂಡನ್ನಿನ ಸೇಂಟ್ ಪ್ಯಾನ್‌ಕ್ರಿಯಸ್ ಸ್ಟೇಷನ್‌ನಿಂದ ಸುಮಾರು ಇಪ್ಪತ್ತೊಂಭತ್ತು ಮೈಲಿ. ಅಲ್ಲಿ ಡಾ॥ ಸಿ.ಎ. ಎಡ್‌ವರ್ಡ್ಸ್‌ರವರು ನನ್ನ ಸಲಹೆಗಾರರಾಗಿದ್ದರು. ಹಾರ್‌ಪೆಂಡಿನಲ್ಲಿ ಹಾಸ್ಟಲ್ ವ್ಯವಸ್ಥೆ ತಕ್ಷಣವೇ ಇಲ್ಲದಿದ್ದರಿಂದ ಲಂಡನ್‌ನಲ್ಲಿ ಹೋಟೆಲೊಂದರಲ್ಲಿ ಇದ್ದುಕೊಂಡು ನಿತ್ಯ ಹೋಗಿ ಬರಬೇಕಾಗಿತ್ತು. ಇಂಪೀರಿಯಲ್ ಕಾಲೇಜಿನ ಹತ್ತಿರ ಕಾರ್ಟ್‌ರಿಡ್ಜ್ ಗಾರ್ಡನ್ಸ್‌ನಲ್ಲಿ ಇಳಿದುಕೊಳ್ಳಲು ಬ್ರಿಟಿಷ್ ಕೌನ್ಸಿಲ್ ವ್ಯವಸ್ಥೆ ಮಾಡಿತ್ತು. ಆಗ ರೂಮ್ ಬಾಡಿಗೆ ಬೆಳಗಿನ ತಿಂಡಿ ಸೇರಿ ದಿನಕ್ಕೆ ಮೂರು ಪೌಂಡು. ಅವರು ಕೊಡುವ ಕಾಂಟಿನೆಂಟಲ್ ಬ್ರೇಕ್‌ಫಾಸ್ಟ್ ಎಲ್ಲವನ್ನು ತಿಂದರೆ ಮಧ್ಯಾಹ್ನದ ಊಟ ಬೇಕಿರಲಿಲ್ಲ. ಡೈನಿಂಗ್ ಹಾಲ್‌ನಲ್ಲಿ ಟೇಬಲ್ ಮೇಲೆ ಊಟದ ತಟ್ಟೆ, ಪಕ್ಕದಲ್ಲಿ ಸಣ್ಣ ಖಾಲಿಪ್ಲೇಟು, ನಾಲ್ಕೈದು ಚಮಚ, ಕಾಫಿ, ಟೀ ಕುಡಿಯುವ ಕಪ್ ಸಾಸರ್, ಒಂದು ಗಾಜಿನ ಲೋಟ ಅದರೊಳಗೆ ಮಡಿಸಿಟ್ಟ ಒಂದು ನ್ಯಾಪ್‌ಕಿನ್ ಇರುತ್ತವೆ. ವೆಯ್‌ಟರಿಗೆ ನಮಗೆ ಬೇಕಾದ ಬ್ರೆಡ್‌ಟೋಸ್ಟ್, ಮೊಟ್ಟೆ ಹೇಗೆ ಬೇಯಿಸಬೇಕು, ಯಾವ ಬಗೆಯ ಜ್ಯೂಸ್ ಬೇಕು ಇವುಗಳನ್ನು ಮೊದಲೇ ಹೇಳಬೇಕು. ಉಳಿದೆಲ್ಲ ತಿಂಡಿಯನ್ನು ಕೌಂಟರಿನಿಂದ ಬೇಕಾದ್ದನ್ನು ತಟ್ಟೆಗೆ ಹಾಕಿಕೊಂಡು ಬಂದು ನಮಗೆ ನಿಗದಿತ ಟೇಬಲ್‌ನಲ್ಲಿ ಕುಳಿತುಕೊಳ್ಳಬೇಕು. ಮೊಟ್ಟೆಗೊಂದು, ಟೀಗೊಂದು, ಸೀರಿಯಲ್‌ಗೊಂದು, ಸೂಪಿಗೊಂದು, ಹೀಗೆ ವಿವಿಧ ರೀತಿಯ ಸ್ಪೂನ್‌ಗಳನ್ನು ನಾನು ಒಂದಕ್ಕೊಂದು ಮಿಕ್ಸ್‌ಮಾಡುತ್ತಿದ್ದುದನ್ನು ನೋಡಿ ದೂರದಲ್ಲಿದ್ದ ಒಂದು ಮುದುಕಿ ಓಡಿ ಬಂದು ಮೈ ಡಿಯರ್ ಬಾಯ್, ಯು ಮಸ್ಟ್ ಯೂಸ್ ದಿಸ್ ಟು ದಿಸ್, ಅಂಡ್ ದಿಸ್ ಟು ದಿಸ್ ಅಂತ ಹೇಳುತ್ತಿದ್ದಳು. ಬೇರೆಯವರು ಹೇಗೆ ತಿಂದರೂ ಅವಳಿಗೇನು ಅನಿಸುತ್ತಿರಲಿಲ್ಲ. ನನ್ನನ್ನು ಮಾತ್ರ ತಿದ್ದಲು ಬರುತ್ತಿದ್ದಳು. ಕರುಣೆಯಿಂದಲೋ, ಅಸೂಯೆಯಿಂದಲೋ, ಅಸಡ್ಡೆಯಿಂದಲೋ, ನಾನು ಇಂಡಿಯನ್ ಎಂದೂ ಅಥವಾ ಅವರ

ಸಂಸ್ಕೃತಿ ತಿಳಿಯದವನೆಂದೊ, ಅವಳು ಹೇಳುತ್ತಿದ್ದುದು ನನಗೆ ಅರ್ಥವಾಗುತ್ತಿರಲಿಲ್ಲ. ಅಂತು ಅಲ್ಲಿದ್ದ ಹದಿನೈದು ದಿವಸದೊಳಗೆ ಮತ್ತೆ ಅವಳಿಂದ ಹೇಳಿಸಿಕೊಳ್ಳುವ ಪ್ರಮೇಯ ಬರಲಿಲ್ಲ. ಬ್ರಿಟಿಷರಿಗೆ ಊಟ ತಿಂಡಿ ಕೂಟಗಳಿಗಿರುವ ರೀತಿ ರಿವಾಜು ಅಮೆರಿಕನ್ನರಿಗೆ ಇಲ್ಲ. ಅಲ್ಲಿ ವ್ಯಕ್ತಿಯ ಪೂರ್ಣಸ್ವಾತಂತ್ರ್ಯಕ್ಕೆ ಮಾನ್ಯತೆ ಇದೆ.

ಎರಡು ವಾರ ಕಳೆದ ನಂತರ ರಾಥಮ್‌ಸ್ಟೆಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್ ಹತ್ತಿರವಿರುವ ಮ್ಯಾನರ್ ಹೌಸ್‌ನಲ್ಲಿ ಸ್ಥಳ ದೊರೆಯಿತು. ಅದು ಹನ್ನೊಂದನೆ ಶತಮಾನದ ಅರಮನೆ. ಹೊರವಲಯದ ಇಟ್ಟಿಗೆ ಗೋಡೆ ಬಿಟ್ಟರೆ ಪೂರ್ತಿ ಮರದಿಂದಲೇ ಕಟ್ಟಿರುವ ವಿಶಾಲವಾದ ಮೂವತ್ತರಿಂದ ನಲವತ್ತು ಕೊಠಡಿಗಳುಳ್ಳ ಭವ್ಯವಾದ ಮನೆ, ಒಳಹೊಕ್ಕರೆ ಹೊರಪ್ರಪಂಚದಲ್ಲಿ ಏನು ನಡೆಯುತ್ತದೆಯೆಂದು ಯಾರಿಗೂ ತಿಳಿಯದು. ಹೊರಾಂಗಣದಲ್ಲಿ ನೂರಾರು ಎಕರೆ ಪಾರ್ಕ್, ಅಲ್ಲಲ್ಲಿ ಅಮೃತಶಿಲೆಯಿಂದ ಕೆತ್ತಿದ ಕಲಾ ಕೃತಿಗಳು, ಚಿಲುಮೆಗಳು, ಸರೋವರ, ಸದಾ ನೀರು ಹರಿಯುತ್ತಿರುವ ಕೊಲ್ಲಿಯ ಇಕ್ಕೆಲದಲ್ಲಿ ಅಲ್ಲಲ್ಲಿ ಆಸನಗಳು, ವ್ಯಕ್ತಿಗನುಗುಣವಾಗಿ ಆಟದ ಮೈದಾನಗಳು, ಸಮಯ ಇದ್ದವರಿಗೆ ಬೇಸರವಿಲ್ಲದೆ ಕಾಲಕಳೆಯಲು ಎಲ್ಲಾ ಅನುಕೂಲಗಳು ಇಲ್ಲಿ ಇದ್ದವು.

ರಾಥಮ್‌ಸ್ಟೆಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ಗೆ ಭವ್ಯವಾದ ನೂರ ಎಪ್ಪತ್ತೈದು ವರುಷಗಳ ಪರಂಪರೆ ಇದೆ. ಈ ಸಂಶೋಧನಾ ಕೇಂದ್ರ ಆಗುವ ಮುನ್ನ ಅದು ಒಬ್ಬನ ಖಾಸಗಿ ಸ್ವತ್ತು. ಆತನ ನೂರಾರು ಎಕರೆ ಈ ಜಮೀನನ್ನು ಹಲವರಿಗೆ ಗೇಣಿಗೆ ಕೊಟ್ಟಿದ್ದ. ಅವರು ಬೆಳೆದಿದ್ದ ಒಟ್ಟು ಸಾಮಾಗ್ರಿಯ ಒಂದು ಪಾಲನ್ನು ಜಮೀನುದಾರನಿಗೆ ಕೊಡಬೇಕಿತ್ತು. ಕೆಲವರು ಕಡಿಮೆ ಕೊಡುತ್ತಿದ್ದರು. ಕೆಲವರು ಜಾಸ್ತಿ ಕೊಡುತ್ತಿದ್ದರು. ಹೀಗೇಕೆ ಎಂದು ಮಾಲಿಕ ಕೊಯಿಲಿನ ಸಮಯದಲ್ಲಿ ಖುದ್ದಾಗಿ ವೀಕ್ಷಿಸುತ್ತಿದ್ದ. ಶ್ರಮ ಒಂದೇ ಆದರೂ ಕೆಲವು ಕಡೆ ಇಳುವರಿ ಸರಾಸರಿ ಬರುತ್ತಿತ್ತು. ಮತ್ತೆ ಕೆಲವು ಕಡೆ ಅಂದಾಜಿಗಿಂತಲೂ ಹೆಚ್ಚಿಗೆ ಬರುತ್ತಿತ್ತು. ಹೀಗೇಕೆ ಎಂದು ಯೋಚಿಸಿ ಆ ಜಮೀನಿನ ಪೂರ್ವ ಚರಿತ್ರೆಯನ್ನು ತಿಳಿದಾಗ ಒಂದು ಕಾಲದಲ್ಲಿ ಹೆಚ್ಚಿಗೆ ಇಳುವರಿ ಬರುವ ಪ್ರದೇಶದಲ್ಲಿ ಕಸಾಯಿ ಖಾನೆ ಇತ್ತೆಂದು, ರಕ್ತಮೂಳೆ ಯಥೇಚ್ಛವಾಗಿ ಅಲ್ಲಿ ಹರಡಿತ್ತೆಂದು ತಿಳಿಯಿತು. ಹಾಗಿದ್ದರೆ ಆಗಲೂ ಸಿಕ್ಕುತ್ತಿದ್ದ ಮೂಳೆ ರಕ್ತಗಳನ್ನು ಹಾಕಿದರೆ ಇಳುವರಿ ಜಾಸ್ತಿಯಾಗ ಬಹುದೆಂದು ಸಂಶೋಧನೆಗೆ ಪ್ರಾರಂಭಿಸಿದ. ಗ್ರಹಿಸಿದಂತೆ ಇಳುವರಿ ದ್ವಿಗುಣಗೊಂಡಿತು. ಅಲ್ಲಿಂದ ಮುಂದೆ ರಸಗೊಬ್ಬರಗಳ ಪ್ರಯೋಗವು ನಡೆಯಿತು. ಪ್ರಪಂಚದಲ್ಲಿ ಮೊಟ್ಟ ಮೊದಲಿಗೆ ರಸಗೊಬ್ಬರ ಬಳಕೆ ಚಾಲ್ತಿಗೆ ಬಂದದ್ದು ಇಲ್ಲಿ ನಡೆಸಿದ ಸಂಶೋಧನೆಯಿಂದ. ಇಂದಿಗೂ ಕೆಲವು ಪ್ಲಾಟುಗಳಲ್ಲಿ ಸತತವಾಗಿ ಪ್ರಾರಂಭದಿಂದ ರಸಗೊಬ್ಬರ ಹಾಕುತ್ತಿದ್ದು, ಅದರಿಂದ ಮಣ್ಣಿನ ಮೇಲೆ ಆಗುವ ಪರಿಣಾಮ ಮತ್ತು ಬೆಳೆಗಳಲ್ಲಿ ಆಗುವ ಪರಿವರ್ತನೆಯನ್ನು ವೀಕ್ಷಿಸಲಾಗುತ್ತಿದೆ. ಅದರ ಜೊತೆಯಲ್ಲಿ ಮಣ್ಣು ಜೀವಿಗಳ ಮೇಲೆ ರಸಗೊಬ್ಬರಗಳ ಪರಿಣಾಮವೇನೆಂದು ವೀಕ್ಷಿಸಲಾಗುತ್ತಿದೆ. ಚಾರ್ಲ್ಸ್ ಡಾರ್ವಿನ್‌ನ ಚರಿತ್ರಾರ್ಹವಾದ ಪುಸ್ತಕ ಬಿಡುಗಡೆಯಾದ ಮೇಲೆ (1881) ಮಣ್ಣು ಜೀವಿಗಳ ಮಹತ್ವ ಕುರಿತು ತೀವ್ರಗತಿಯಲ್ಲಿ ಸಂಶೋಧನೆ ಮುಂದುವರಿಯಿತು. ಮಣ್ಣಿನ ಫಲವತ್ತತೆಗೆ ಎರೆಹುಳುವಿನ ಪಾತ್ರ ಮತ್ತು ಅವುಗಳ ಜೀವನ ಚರಿತ್ರೆ ಎಂಬ ಡಾರ್ವಿನ್‌ನ ಪ್ರಬಂಧ, ವಿಜ್ಞಾನಿಗಳ ಮತ್ತು ರೈತರ ಕಣ್ಣು ತೆರೆಯಿತು. ರಾಥಮ್‌ಸ್ಟೆಡ್ ಸ್ಟೇಷನ್‌ನಲ್ಲಿ ಅಂದಿನಿಂದ ಸತತವಾಗಿ ಮಣ್ಣು ಜೀವಿಗಳ ಬಗ್ಗೆ

ಸಂಶೋಧನೆ ನಡೆಯುತ್ತಾ ಬಂದಿದೆ. ಇಂತಹ ಸಂಸ್ಥೆಯಲ್ಲಿ ಮಣ್ಣು ಜೀವಿಗಳ ಅಧ್ಯಯನ ಮಾಡಲು ಅವಕಾಶ ದೊರೆತದ್ದು ನನ್ನ ಸುದೈವವೆಂದು ತಿಳಿದಿದ್ದೇನೆ.

ಡಾ॥ ಸಿ.ಎ. ಎಡ್‌ವರ್ಡ್ಸ್ ಮಣ್ಣು ಜೀವಿ ಶಾಸ್ತ್ರ ವಿಜ್ಞಾನಿಗಳಲ್ಲಿ ಅಗ್ರಗಣ್ಯರು. ಎರೆಹುಳುವಿನ ಮೇಲೆ ಮೊಟ್ಟಮೊದಲಿಗೆ ಬರೆದ ಡಾರ್ವಿನ್ ಪುಸ್ತಕ (1881) ಬಿಟ್ಟರೆ ಎರಡನೆಯದು ಎಡ್‌ವರ್ಡ್ಸ್ ಮತ್ತು ಲಾಫ್ಟಿ ಬರೆದದ್ದೆ (1972). ಮಣ್ಣಿನಲ್ಲಿ ಸೇರುವ ಹಲವಾರು ರಾಸಾಯನಿಕ ವಸ್ತುಗಳು ಅದರಲ್ಲೂ ರಾಸಾಯನಿಕ ಗೊಬ್ಬರ ಮತ್ತು ರಾಸಾಯನಿಕ ಕೀಟನಾಶಕಗಳಿಂದ ಮಣ್ಣು ಜೀವಿಗಳ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದವರು. ಮುಂದೆ ಇವರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮಣ್ಣು ಜೀವಿ ಶಾಸ್ತ್ರ ವಿಭಾಗದ ತಜ್ಞ ಸಲಹೆಗಾರರಾಗಿ ಬಂದರು.

ಇಂದು ದೇಶದಾದ್ಯಂತ ಅದರಲ್ಲೂ ಕರ್ನಾಟಕದಲ್ಲಿ ವರ್ಮಿಕಾಂಪೋಸ್ಟ್ ಉಪಯೋಗ ಬಳಕೆಗೆ ಬರಬೇಕಿದ್ದರೆ ಅದರ ಬೀಜ ಅಂಕುರಿಸಿದ್ದು ಡಾ॥ ಎಡ್‌ವರ್ಡ್ಸ್‌ರವರ ಪ್ರಯತ್ನ ದಿಂದ ಎಂದು ಹೇಳಬಹುದು. ನಾನು ರಾಥಮ್‌ಸ್ಟೆಡ್‌ನಲ್ಲಿದ್ದಾಗ ಡಾ॥ ಸಿ.ಎ. ಎಡ್‌ವರ್ಡ್ಸ್‌ರವರು ಎರೆಹುಳುವಿನ ಗೊಬ್ಬರದ ಬಳಕೆಗೆ ಭಾರತದಲ್ಲಿ ಬಹಳ ಭವಿಷ್ಯವಿದೆಯೆಂದು ಹೇಳುತ್ತಿದ್ದರು. ಇದರ ತಾಂತ್ರಿಕತೆಯನ್ನು ವೃದ್ಧಿಪಡಿಸಿ ಪ್ರಪಂಚದಲ್ಲಿ ದೊರೆಯುವ ವಿವಿಧ ಜಾತಿಯ ಎರೆಹುಳುಗಳಲ್ಲಿ ಐಸೀನಿಯ ಮತ್ತು ಯುಡ್ರಿಲಸ್ ಜಾತಿಯವು ವರ್ಮಿಕಾಂಪೋಸ್ಟ್ ಮಾಡುವಲ್ಲಿ ಬಹಳ ಉಪಯುಕ್ತವು ಎಂದು ತಿಳಿಸಿದ್ದರು. ಅವರು ಬೆಂಗಳೂರಿಗೆ ಬಂದನಂತರ ನನ್ನ ಸಹಯೋಗದೊಂದಿಗೆ ಸಾಯಿಲ್ ಬಯಾಲಜಿ ಅಂಡ್ ಇಕಾಲಾಜಿ ವಿಭಾಗವನ್ನು ತೆರೆದು ಎರೆಹುಳುವಿನ ಸಂಶೋಧನೆಗೆ ಹೆಚ್ಚು ಒತ್ತು ಕೊಟ್ಟರು. ಮುಂದೆ ಜೂಆಲಜಿ ಡಿಪಾರ್ಟ್ ಮೆಂಟಿನಲ್ಲಿ ಡಾ॥ ರಾಧಕಾಳೆ ಮತ್ತು ಡಾ॥ ಕೂಬ್ರಬಾನುರವರು ವರ್ಮಿಕಾಂಪೋಸ್ಟ್‌ನ ಮೇಲೆ ಸಂಶೋಧನೆ ಮುಂದುವರಿಸಿ ಉಪಯುಕ್ತವಾದ ಮಾಹಿತಿ ಯನ್ನು ಸಂಗ್ರಹಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರು. ಇವರುಗಳು ಖಾಸಗಿ ಉದ್ಯಮಿಗಳಿಗೆ ವರ್ಮಿಕಾಂಪೋಸ್ಟ್ ಮಾಡುವ ತಾಂತ್ರಿಕ ಸಲಹೆಗಳನ್ನು ಕೊಟ್ಟು ವರ್ಮಿಕಾಂಪೋಸ್ಟ್ ಹೆಚ್ಚು ಬೆಳಕಿಗೆ ಬರಲು ನೆರವಾದರು.

ಮಣ್ಣು ಜೀವಿಗಳ ಅದರಲ್ಲೂ ವಿಶೇಷವಾಗಿ ಬೇರು ತಿನ್ನುವ ಹುಳುಗಳ ಪ್ರಭೇದಗಳನ್ನು ವಿಂಗಡಿಸುವಲ್ಲಿ ಅನುಕೂಲವಾಗಲು ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ನ್ಯಾಚುರಲ್ ಹಿಸ್ಟರಿ ಯಲ್ಲಿ ಎರಡು ವಾರಗಳನ್ನು ಕಳೆಯಬೇಕಾಯಿತು. ಬ್ರಿಟಿಷ್ ಮ್ಯೂಸಿಯಂ ನ್ಯಾಚುರಲ್ ಹಿಸ್ಟರಿ, ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಪ್ರಪಂಚದಾದ್ಯಂತ ಬರುವ ಟೂರಿಸ್ಟ್‌ಗಳಿಗೆ ಒಂದು ದೊಡ್ಡ ಆಕರ್ಷಣೆ. ಜೊತೆಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗದಿದ್ದ ಕಾಲದಲ್ಲಿ ಪ್ರಾಣಿ ಸಂಪತ್ತನ್ನು ಸಂಗ್ರಹಿಸಿ, ವಿಂಗಡಿಸಿ ಶತಮಾನ ಕಳೆದರೂ ಹಾಳಾಗದ ಹಾಗೆ ಸಂರಕ್ಷಿಸಿ ಇಟ್ಟಿರುವುದು ಜೀವಶಾಸ್ತ್ರದ ವಿಜ್ಞಾನಿಗಳಿಗೆ ಮೆಕ್ಕ ಇದ್ದಹಾಗೆ. ಜೀವಕೋಟಿಗಳಲ್ಲಿ ಶೇಕಡ ಎಂಭತ್ತರಷ್ಟಿರುವ ಕೀಟಗಳ ಸಂಗ್ರಹಣೆ ಇಲ್ಲಿ ಇಂದಿಗೂ ಪ್ರಪಂಚದಾದ್ಯಂತ ಹೆಸರುವಾಸಿಯಾಗಿದೆ. ಅದರಲ್ಲೂ ಭಾರತದಲ್ಲಿ ಸಿಕ್ಕುವ ಯಾವುದೇ ಕೀಟದ ಪರಿಚಯವಾಗಬೇಕಾದರೆ ಮೊದಲು ಇಲ್ಲಿಗೆ

ಕಳುಹಿಸಿ, ಇಲ್ಲಿರುವ ಸಂಗ್ರಹಣೆಗೆ ಹೋಲಿಸಿ, ಅದರ ಪ್ರಭೇದವನ್ನು ತಿಳಿದು ನಂತರ ಮುಂದಿನ ಅನ್ವೇಷಣೆಗೆ ಪ್ರಾರಂಭಿಸುವುದು ವಾಡಿಕೆ. ಬೇರು ತಿನ್ನುವ ನೂರಾರು ಜಾತಿಯ ಹುಳುಗಳ ಬಗ್ಗೆ ವಿಷಯ ತಿಳಿಯಲು ಇದೊಂದು ಸದಾವಕಾಶವಾಯಿತು. ನನ್ನ ಗುರುಗಳಾಗಿದ್ದ ಡಾ॥ ಬಿ. ಆರ್. ಸುಬ್ಬರಾವ್ ಅಲ್ಲಿಯೇ ತಜ್ಞರಾಗಿದ್ದರಿಂದ ಅವರ ಸಹೋದ್ಯೋಗಿಗಳ ಸಂಪರ್ಕ, ಸಹಾಯ, ಸಲಹೆ ಸುಲಭವಾಗಿ ದೊರೆಯಲು ಸಹಾಯವಾಯಿತು. ಮುಂದೆ ಭಾರತೀಯ ಕೃಷಿ ಅನುಸಂಧಾನ (ICAR) ಬೆಂಗಳೂರಿನ ಕೃ.ವಿ.ವಿ. ಕೀಟಶಾಸ್ತ್ರ ವಿಭಾಗವನ್ನು ಬೇರು ಹುಳುಗಳ ಎಲ್ಲ ಮಾಹಿತಿಗೆ ಕೇಂದ್ರವೆಂದು ಪರಿಗಣಿಸಿತು. ಬೇರು ಹುಳುಗಳ ವಿಶೇಷ ತರಬೇತಿಯನ್ನು ಕೂಡ ಈಗ ಇಲ್ಲಿ ಕೊಡಲಾಗುತ್ತಿದೆ.

ಮಣ್ಣು ಜೀವಿಗಳನ್ನು ಬೇರ್ಪಡಿಸಿ ವಿಂಗಡಿಸುವ ವಿಧಾನಗಳ ಬಗ್ಗೆ ವಿಶೇಷ ತರಬೇತಿಯನ್ನು ಪಡೆಯಲು ನಾಟಿಂಗ್‌ಹ್ಯಾಮ್ ಯೂನಿವರ್ಸಿಟಿಯಲ್ಲಿ ಎರಡು ವಾರ ಕಳೆದೆ. ಅದೇ ಸಮಯದಲ್ಲಿ ಮಣ್ಣು ಜೀವಿಗಳ ಬಗ್ಗೆ ಅಲ್ಲಿ ನಡೆದ ಅಂತರ ರಾಷ್ಟ್ರೀಯ ತರಬೇತಿಯಲ್ಲೂ ಕೂಡ ಭಾಗವಹಿಸಿದೆ.

ನಾಟಿಂಗ್‌ಹ್ಯಾಮ್‌ನಿಂದ ವಿಲಿಯಮ್ ಶೇಕ್ಸ್‌ಪಿಯರ್ ಹುಟ್ಟಿದ ಊರಾದ ಸ್ಟ್ರಾಟ್‌ಫೋರ್ಡ್ ಆನ್‌ಎವಾನ್ (ವಾರ್‌ವಿಕ್‌ಷೈರ್) ಗೆ ಹೋಗಿ, ಹದಿನಾರನೆ ಶತಮಾನದ ಅವನು ಹುಟ್ಟಿದ ಮನೆಯ ಮಹಡಿಯ ಮೇಲೆ ಸಂಗ್ರಹಿಸಿಟ್ಟಿರುವ ಅವನ ತೊಟ್ಟಿಲು, ಆಟದ ಸಾಮಾನು, ಅವನ ತಾಯಿ ಬಳಸುತ್ತಿದ್ದ ಮಡಿಕೆ, ಮರದ ಸಾಮಾನುಗಳನ್ನು ನೋಡಿದಾಗ, ಹಳ್ಳಿಯಲ್ಲಿ ಸಾಮಾನ್ಯನಂತೆ ಹುಟ್ಟಿ ದೊಡ್ಡ ನಾಟಕಕಾರನಾಗಿ, ಕವಿಯಾಗಿ, ಅದ್ವಿತೀಯ ಬರಹಗಾರನಾಗಿ ಬೆಳೆದುಬಂದದ್ದು ಕಣ್ಣಮುಂದೆ ಹಾದು ಹೋಯಿತು.

ಒಟ್ಟಿನಲ್ಲಿ ಈ ಎಲ್ಲಾ ತರಬೇತಿಗಳಿಂದ ಸಮಗ್ರ ಮಣ್ಣು ಜೀವಿಗಳ ಸ್ಥೂಲ ಪರಿಚಯ, ಅವುಗಳ ಬಗ್ಗೆ ಪ್ರಪಂಚದಾದ್ಯಂತ ಅಧ್ಯಯನ ಮಾಡಿದ ಮತ್ತು ಮಾಡುತ್ತಿರುವ ತಜ್ಞರ ವಿಷಯ, ಇವುಗಳನ್ನು ಅಧ್ಯಯನ ಮಾಡಲು ಬೇಕಾದ ಸಲಕರಣೆಗಳ ವಿವರಣೆ ದೊರೆತಂತಾಯಿತು. ಮೊಟ್ಟಮೊದಲಿಗೆ ಭಾರತದಲ್ಲಿ ಸಾಯಿಲ್ ಬಯಾಲಜಿ ಮತ್ತು ಇಕಾಲಜಿ ವಿಭಾಗವನ್ನು ಬೆಂಗಳೂರು ಕೃ.ವಿ.ವಿ.ಯಲ್ಲಿ ಪ್ರಾರಂಭಿಸಲು ಪ್ರೇರಣೆಯಾಯಿತು. 'ಇಂಡಿಯನ್ ಸೊಸೈಟಿ ಫಾರ್ ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಫೌಂಡರ್ ಪ್ರೆಸಿಡೆಂಟಾಗಿ ಹಾಗೂ ಫೌಂಡರ್ ಎಡಿಟರ್ ಆಗಿ ಒಂದು ಜರ್ನಲ್ ಕೂಡ ಹೊರ ತಂದು ಇಂದಿಗೂ ವರುಷಕ್ಕೆ ಎರಡು ಪ್ರತಿ ಪ್ರಕಟಣೆಯಾಗುತ್ತಿದೆ.

ಬ್ರಿಟಿಷ್ ಮ್ಯೂಸಿಯಂನಲ್ಲಿ ಅಧ್ಯಯನ ಮಾಡುವಾಗ ಗೆದ್ದಲಿನ ಪರಿಣಿತರಾದ ಡಾ॥ ಸ್ಯಾಂಡ್ಸ್ ಮತ್ತು ಡಾ॥ ಟಿ. ಜಿ. ವುಡ್‌ರ ಪರಿಚಯವಾಯಿತು. ಇವರಿಬ್ಬರೂ ಡಾ॥ ಎಡ್‌ವರ್ಡ್ಸ್‌ರ ಆಪ್ತ ಸ್ನೇಹಿತರು. ಭಾರತದಲ್ಲಿ ಡಾ॥ ರೂನ್‌ವಾಲ್ ಮತ್ತು ಅವರ ವಿದ್ಯಾರ್ಥಿಗಳು ಗೆದ್ದಲಿನ ಬಗ್ಗೆ ನಡೆಸಿದ ಸಂಶೋಧನೆ ಶ್ಲಾಘನೀಯವಾದದ್ದು. ಆದರೂ ಗೆದ್ದಲಿನ ಹತೋಟಿ ಬಗ್ಗೆ ಅದರಲ್ಲೂ ಬೆಳೆಗಳ ಸುರಕ್ಷತೆ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹವಾಗಿರಲಿಲ್ಲ. ಲಂಡನ್ನಿನ ಸಿ.ಓ.ಪಿ.ಆರ್. (ಸೆಂಟರ್ ಫಾರ್ ಓವರ್‌ಸೀಸ್ ಪೆಸ್ಟ್ ರೀಸರ್ಚ್)

ಇದರ ಬಗ್ಗೆ ಹೆಚ್ಚಿನ ಪರಿಣತೆ ಹೊಂದಿತ್ತು. ಇದರ ಅಂಗವಾಗಿ ಆಫ್ರಿಕಾ ಖಂಡದ ನೈಜೀರಿಯಾ ದಲ್ಲಿ ಟಿ.ಜಿ. ವುಡ್‌ರ ನೇತೃತ್ವದಲ್ಲಿ ಭಾರಿ ಪ್ರಮಾಣದ ಗೆಡ್ಡಲಿನ ಹತೋಟಿಯ ಫೀಲ್ಡ್ ಎಕ್ಸ್‌ಪೆರಿಮೆಂಟ್ ನಡೆಯುತ್ತಿದ್ದವು. ಸಾಯಿಲ್ ಬಯಾಲಜಿ ಅಂಗವಾದ ಗೆದ್ದಲಿನ ಹತೋಟಿ ಭಾರತಕ್ಕೆ ಬಹಳ ಅಗತ್ಯವಿತ್ತು. ಆದ್ದರಿಂದ ಒಂದು ತಿಂಗಳ ಅವಧಿಗೆ ನಾನು ನೈಜೀರಿಯಾಕ್ಕೆ ಹೋಗಿ, ಸಿ.ಓ.ಪಿ.ಆರ್. ತಂಡದವರೊಡನೆ ಅವರು ಮಾಡುವ ಸಂಶೋಧನೆಯಲ್ಲಿ ಭಾಗವಹಿಸ ಬೇಕೆಂದು ನನ್ನ ಸಲಹೆಗಾರರಾದ ಡಾ॥ ಎಡ್‌ವರ್ಡ್ಸ್ ಶಿಫಾರಸು ಮಾಡಿದರು. ಇಂಗ್ಲೆಂಡಿನಲ್ಲಿ ನನ್ನ ತರಬೇತಿ ಆದ ನಂತರ ನೈಜೀರಿಯಾಕ್ಕೆ ಹೋಗಬೇಕಾಯಿತು.

* * * *

ನೈಜೀರಿಯಾದಲ್ಲಿ ಗೆದ್ದಲಿನ ಬಗ್ಗೆ ತಿಳಿದದ್ದು ಬಹಳ ಮಹತ್ವವಾದದ್ದಾದರೂ ಅಲ್ಲಿಯ ಕೆಲವು ಅನುಭವಗಳು ಜೀವನ ಪರ್ಯಂತ ಮರೆಯುವಂತಿಲ್ಲ. ಅಲ್ಲಿಗೆ ಹೋದ ನಂತರ ಅಲ್ಲಿಯ ಅವ್ಯವಸ್ಥೆಯನ್ನು ನೋಡಿ ನನ್ನ ದೇಶದ ಮೇಲೆ ನನಗೆ ಗೌರವ ಹೆಚ್ಚಾಯಿತು. ನೈಜೀರಿಯಾ ದೇಶದಲ್ಲಿ ಹೇರಳವಾಗಿ ದೊರೆಯುವ ಪೆಟ್ರೋಲಿಯಂನಿಂದ ಆ ದೇಶಕ್ಕೆ ಆಫ್ರಿಕಾದ 'ಜಯಂಟ್' ಎಂಬ ಬಿರುದು ಬಂದಿತು. ಆದರೆ ವಿದ್ಯೆ, ಸಂಸ್ಕೃತಿ, ದೇಶಾಭಿಮಾನ ವಿಲ್ಲದಿದ್ದರೆ ಎಷ್ಟೇ ಸಂಪನ್ಮೂಲಗಳಿದ್ದರೂ ಗ್ರಹಿಸಿದಷ್ಟು ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲವೆನ್ನುವುದಕ್ಕೆ ಈ ದೇಶ ಒಂದು ಉದಾಹರಣೆ. ಈ ಹಿಂದೆ ಅಲ್ಲಿ ನಡೆದ ಬಯಾಫ್ರ ವಾರ್ ಒಂದು ದಶಲಕ್ಷ ಜನರನ್ನು ಆಹುತಿ ತೆಗೆದುಕೊಂಡಿತ್ತು. ಈ ಯುದ್ಧ ಹೊರದೇಶದವರ ಮೇಲಲ್ಲ, ಸಿವಿಲ್‌ವಾರ್ ಕೂಡ ಅಲ್ಲ, ಅಲ್ಲಿರುವ ವಿವಿಧ ಟ್ರೈಬ್‌ಗಳ ನಡುವೆ ನಡೆದ ಕಲಹ. ಯಾರನ್ನು ಕೇಳಿದರೂ ಮೊದಲು ಅವರುಗಳ ಟ್ರೈಬಿಗೆ ಸೇರಿದವರೆಂದು ಹೇಳುವರೆ ಹೊರತು, ನೈಜೀರಿಯದವರೆಂದು ಹೇಳುತ್ತಿರಲಿಲ್ಲ. ಹಾವುಜ, ಫಿಲಾನಿ, ಬೋರುವ ಮುಂತಾದ ಪಂಗಡಗಳು ಅವರವರಿಗೆ ತಿಳಿಯುವಂತಹ ಭಾಷೆಗಳಲ್ಲಿ ಮಾತನಾಡುವರು. ಅವರವರ ಪಂಗಡಕ್ಕೆ ಸೇರಿದವರೆಂದು ಗುರುತಿಸಲು ಮುಖದ ಮೇಲಿರುವ ಚಿನ್ಹೆಗಳೇ ಆಧಾರ. ಮಕ್ಕಳಿರುವಾಗಲೆ ಮುಖದ ಮೇಲೆ ಆ ಟ್ರೈಬಿನ ಗುರುತಿನ ಬರೆ ಹಾಕುವರು. ಎಲ್ಲರಿಗೂ ಅರ್ಥವಾಗುವ ಭಾಷೆ ಎಂದರೆ ಮಿಜಿಡ್ ಇಂಗ್ಲಿಷ್. ಇದು, ಆ ದೇಶ ಒಂದಾಗಲು ಮಾಡಿದ ಬ್ರಿಟಿಷರ ಕೊಡುಗೆ. ಇತ್ತೀಚೆಗೆ ವಿದ್ಯೆ ಹೆಚ್ಚಾದಂತೆಲ್ಲ ಟ್ರೈಬಲಿಸಂ ಕಡಿಮೆಯಾಗುತ್ತಿದೆ ಎಂದು ಕೇಳಿದೆ.

ಲಂಡನ್ನಿನಿಂದ ನೈಜೀರಿಯಾಕ್ಕೆ ಹೋಗುವ ದಿನ ನೈಜೀರಿಯನ್ ಏರ್‌ವೇಸ್ ವಿಮಾನದಲ್ಲಿ ಕುಳಿತುಕೊಂಡನಂತರ ಹೊರಡಬೇಕಾದರೆ ಸುಮಾರು ಮೂರು ಘಂಟೆ ತಡವಾಯಿತು. ಏಕೆ ತಡವಾಗುತ್ತಿದೆ ಎಂದು ಹೇಳುವವರೂ ಇಲ್ಲ. ವಿಮಾನದ ಹೊರಗೆ ಗ್ರೌಂಡಿನಲ್ಲಿ ಹತ್ತಾರು ಜನ ನಿಂತಿದ್ದರು. ಸಾಮಾನುಗಳನ್ನು ನಿಧಾನವಾಗಿ ತೆಗೆದು ತುಂಬಿಸುತ್ತಿದ್ದರು. ಏಕೆ ತಡವಾಯಿ ತೆಂದು ತಿಳಿದದ್ದು ನೈಜೀರಿಯಾದ ಕಾನು ಏರ್‌ಪೋರ್ಟ್ ತಲಪಿದ ಮೇಲೆ. ಮೊದಲು ವಿಮಾನ ಹತ್ತಿದ ಆರೇಳು ಜನರ ಸಾಮಾನು ಬಂದಿರಲಿಲ್ಲ. ಕೆಲವು ನೈಜೀರಿಯನ್ಸ್ ಕೊಂಡು ತಂದಿದ್ದ ಸಾಮಾನುಗಳನ್ನು ಹಾಕಲೇಬೇಕೆಂದು ಒತ್ತಾಯ ಮಾಡಿದಾಗ, ವಿಮಾನ ಚಾಲಕ ಹೆಚ್ಚಿನ ಲೋಡನ್ನು ತೆಗೆದುಕೊಳ್ಳಲು ನಿರಾಕರಿಸಿದ್ದಕ್ಕೆ ಮೊದಲು ತುಂಬಿದ್ದ ಸಾಮಾನುಗಳನ್ನು ಕೆಳಗೆ

ಇಳಿಸಿನಂತರ ಬಂದವರ ಸಾಮಾನನ್ನು ತುಂಬುವಾಗ ವಾದ ವಿವಾದಗಳಾಗಿ ಮೂರು ಗಂಟೆ ತಡವಾಗಿ ಹೊರಡಲು ಕಾರಣವಾದದ್ದು.

ಕಾನು ಏರ್‌ಪೋರ್ಟ್‌ನಲ್ಲಿ ಸಾಮಾನು ಬಾರದಿದ್ದವರೆಲ್ಲ ಒಂದು ಅರ್ಜಿಯನ್ನು ಬರೆದು ಸಂಬಂಧಪಟ್ಟವರಲ್ಲಿ ಸಲ್ಲಿಸಲು ಹೋದಾಗ ಆತನ ನಿರುತ್ಸಾಹ ನೋಡಿ, ಹೀಗೇಕೆ ಎಂದು ಕೇಳಿದಾಗ, ಆತ ಕೊಠಡಿಯ ತುಂಬ ತುಂಬಿದ್ದ ಇಂತಹ ಅರ್ಜಿಗಳತ್ತ ಕೈ ತೋರಿಸಿ, ಸಾಮಾನು ಕಳೆದುಕೊಂಡವರಲ್ಲಿ ನೀವೇನು ಮೊದಲಿಗರಲ್ಲ. ಇದು ದಿನನಿತ್ಯ ನಡೆಯುವ ಸಂಗತಿ, ಅದಕ್ಕೇಕೆ ನೀವು ಇಷ್ಟು ಆತುರಪಡಬೇಕು ಎಂದು ನಿರಾಯಾಸವಾಗಿ ಹೇಳಿದ. ಈ ಮಧ್ಯೆ ನಮ್ಮನ್ನು ಹಿಂಬಾಲಿಸುತ್ತಿದ್ದ ಅನೇಕರು ಎಷ್ಟು 'ನಯರ' ಕೊಡುತ್ತೀರಿ, ನಿಮ್ಮ ಕಸ್ಟಮ್ಸ್ ಕ್ಲಿಯರ್ ಮಾಡಿಸಿ ಕೊಡುತ್ತೇವೆಂದು ಕಾಡುವವರು ಬೇರೆ; ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ಬೇರೆ; ರಾತ್ರಿ ಒಂಭತ್ತು ಹತ್ತು ಗಂಟೆ ಸಮಯ ಅಲ್ಲಿಂದ ಅಹಮದ್‌ಬೆಲ್ಲೊ ಯೂನಿವರ್ಸಿಟಿ ಜಾರಿಯಾಕ್ಕೆ ಎಂಭತ್ತು ಮೈಲಿ ಕರೆದುಕೊಂಡು ಹೋಗಲು ಬರಬೇಕಿದ್ದವರು ಬಂದಿರಲಿಲ್ಲ. ಲಗ್ಗೇಜು ಬಾರದಿದ್ದದ್ದು, ನನ್ನನ್ನು ಕರೆದುಕೊಂಡು ಹೋಗಲು ಯಾರೂ ಇಲ್ಲದಿದ್ದದ್ದು, ಆ ಊರಿನಲ್ಲಿ ಮತ್ತಾರು ಪರಿಚಯಸ್ಥರು ಇಲ್ಲದಿದ್ದದ್ದು, ಮಾತೆತ್ತಿದರೆ ದುಡ್ಡು ಕೊಡಿ ನೀವು ಹೇಳಿದ್ದನ್ನು ಮಾಡುತ್ತೇನೆಂದು ಹೇಳುತ್ತಿದ್ದದ್ದು ಅದೊಂದು ನನಗೆ ಕರಾಳರಾತ್ರಿಯನ್ನಾಗಿ ಮಾಡಿತ್ತು. ಎಲ್ಲವೂ ಮಿಲಿಟರಿ ಆಡಳಿತದಲ್ಲಿದ್ದುದರಿಂದ ಹೆಜ್ಜೆ ಹೆಜ್ಜೆಗೂ ಸಂಬಂಧಪಟ್ಟ ಮಿಲಿಟರಿ ಆಫೀಸರ ಅನುಮತಿ ಇಲ್ಲದೆ ಏನೂ ಮಾಡುವ ಹಾಗಿರಲಿಲ್ಲ. ಆ ಊರಲ್ಲಿ ಆಗ ಇದ್ದ ಹೊರದೇಶದವರು ಉಳಿದುಕೊಳ್ಳುವಂತಹ ಹೋಟೆಲ್ ಒಂದೇ ಒಂದು. ನಮ್ಮ ದೇಶದ ಸರ್ವೇ ಸಾಮಾನ್ಯ ಹೋಟೆಲಿನಂತಿತ್ತು. ಗೋಡೆಯ ಮೇಲೆಲ್ಲ ತಿಗಣೆ ಕೊಂದಿದ್ದ ರಕ್ತದ ಕಲೆ; ಸರಿಯಾದ ಗಾಳಿ ಬೆಳಕಿಲ್ಲ; ಹವಾನಿಯಂತ್ರಣ ಮೊದಲೇ ಇಲ್ಲ. ಕೈಕಾಲು ಚಾಚುವಷ್ಟು ಜಾಗ, ಬಾಡಿಗೆ ನೋಡಿದರೆ ಅಮೆರಿಕಾದ ಅದ್ದೂರಿ ಹೋಟೆಲಿಗೆ ಕೊಡುವಷ್ಟು ಎಪ್ಪತ್ತೈದು ಡಾಲರ್‌ಗಳು. ಅಹಮದ್‌ಬೆಲ್ಲೊ ಯೂನಿವರ್ಸಿಟಿ ಜಾರಿಯಾಕ್ಕೆ ಸಂಪರ್ಕ ಬೆಳೆಸಿ ಅವರು ಬಂದು ಕರೆದುಕೊಂಡು ಹೋಗುವಷ್ಟರಲ್ಲಿ ಮೂರು ದಿವಸವಾಯಿತು. ನಾನು ಉಟ್ಟ ಬಟ್ಟೆ ಮತ್ತೆ ಕೆಲವು ಅಗತ್ಯ ವಸ್ತುಗಳನ್ನು ಬಿಟ್ಟರೆ ಮತ್ತೆಲ್ಲಾ ಸಾಮಾನು ಎರಡು ಸೂಟ್‌ಕೇಸಿನಲ್ಲಿ ಲಂಡನ್ನಿನಲ್ಲೇ ಬಾಕಿಯಾಗಿದ್ದವು. ಅವುಗಳನ್ನು ತರಿಸುವಂತಹ ಯಾವ ಸೂಚನೆಗಳೂ ನೈಜೀರಿಯನ್ ಏರ್‌ವೇಸ್‌ನಿಂದ ಕಾಣುತ್ತಿರಲಿಲ್ಲ.

ಎರಡನೆಯ ದಿನ ಬೆಳಿಗ್ಗೆ ಹೋಟಲಿನ ಡೈನಿಂಗ್ ಹಾಲ್‌ನಲ್ಲಿ ತಿಂಡಿ ತಿನ್ನಲು ಕುಳಿತಿದ್ದಾಗ, ಎರಡು ಟೇಬಲ್ ಆಚೆ ಕುಳಿತಿದ್ದ ಒಂದು ಹುಡುಗಿ ನನ್ನ ಹತ್ತಿರ ಬಂದು ನೀವು ಬಹಳ ಯೋಚನಾಕ್ರಾಂತರಾಗಿ ಕಾಣುತ್ತೀರಿ. ನಿಮಗೇನಾದರೂ ತೊಂದರೆ ಇದೆಯೇ, ನನ್ನಿಂದ ಏನಾದರೂ ಸಹಾಯಬೇಕೆ ಎಂದು ಕೇಳಿದಳು. ನನಗೆ ತಬ್ಬಿಬ್ಬಾಯಿತು. ಆಕೆ ವೆಸ್ಟ್‌ಇಂಡೀಸ್‌ನವಳು. ಆ ಊರಿನ ಒಂದು ಸ್ಕೂಲ್‌ನಲ್ಲಿ ಟೀಚರ್. ಆಕೆಯನ್ನು ನೋಡಿದರೆ ಅವಳ ಪೂರ್ವಿಕರು ಭಾರತೀಯರಾಗಿರಬೇಕೆಂದು ಅನಿಸುತ್ತಿತ್ತು. ನೀನು ಯಾರು ಎಂದು ಕೇಳುವವರಿಲ್ಲದ ಊರಿನಲ್ಲಿ ನಿಮಗೇನಾದರೂ ಸಹಾಯವಾಗಬೇಕೆ ಎಂದು ಕೇಳಿದಾಗ ಬೇಡ ಅನ್ನುವುದು ಹೇಗೆ? ಆದರೂ ಮನಸ್ಸಿನಲ್ಲಿ ಅಳುಕು. ಈಕೆ ನನ್ನನ್ನು ಮೋಸಪಡಿಸಿ ಬರಿಕೈ ಮಾಡುವಳೆ ಎಂದು.

ಮನಸ್ಸು ಗಟ್ಟಿಮಾಡಿ ಇದ್ದ ಸಂಗತಿಯನ್ನೆಲ್ಲಾ ಹೇಳಿದೆ. ಲಂಡನ್ನಿನಿಂದ ಸಾಮಾನು ಬಾರದಿದ್ದದ್ದು ಮುಂದೆ ನಾನು ಜಾರಿಯಾಕ್ಕೆ ಹೋಗಿ ಅಲ್ಲಿಂದ ದಕ್ಷಿಣದಲ್ಲಿದ್ದ ಒಂದು ಸಣ್ಣ ಊರು-ಮೊಕುವಾಕ್ಕೆ ಹೋಗಿ ಸಿ.ಓ.ಪಿ.ಆರ್.ಸೈಂಟಿಸ್ಟ್ ಜೊತೆ ಸೇರಿ ನಾನು ಮಾಡಬೇಕಿದ್ದ ಕೆಲಸವೆಲ್ಲವನ್ನೂ ವಿವರಿಸಿದೆ. ನಾನು ಒಬ್ಬ ಟೀಚರ್ ಸೈಂಟಿಸ್ಟ್ ಎಂದು ತಿಳಿದು ನನ್ನ ಮೇಲಿನ ಅಭಿಮಾನ ಕೊಂಚ ಹೆಚ್ಚಾಯಿತೆಂದು ಕಾಣುತ್ತದೆ. ಆಗ ಆಕೆ ನನಗೆ ಮತ್ತಷ್ಟು ಧೈರ್ಯ ತುಂಬಿ, ಈ ಊರಲ್ಲಿ ನಿಮಗೇನಾದರೂ ಸಹಾಯ ಬೇಕಿದ್ದರೆ, ನಿಮ್ಮ ಸಾಮಾನು ನಿಮ್ಮ ಕೈ ಸೇರಬೇಕಾದರೆ ನನ್ನಿಂದ ಆಗದಿದ್ದರೆ ಮತ್ತಾರಿಂದಲೂ ಸಾಧ್ಯವಿಲ್ಲವೆಂದು ಧೈರ್ಯವಾಗಿ ಹೇಳಿದಳು. ಇದಕ್ಕೆ ಪ್ರತಿಯಾಗಿ ಮತ್ತೇನನ್ನೂ ಆಕೆ ಕೇಳಲಿಲ್ಲ. ''ನಂಬಿ ನೀ ಕೆಡಲಿಲ್ಲ, ನಂಬದೆ ವಿಧಿಯಿಲ್ಲ'' ಎಂಬ ಪುರಂದರದಾಸರ ಹಾಡು ನೆನಪಿಗೆ ಬಂತು. ನಾನೇನು ಮಾಡಬೇಕೆಂದು ಕೇಳಿದೆ. ಹನ್ನೊಂದು ಗಂಟೆಗೆ ಸರಿಯಾಗಿ ಇಲ್ಲೇ ಇರಿ, ನಾನು ಬಂದು ನಿಮ್ಮನ್ನು ಕರೆದುಕೊಂಡು ಸಂಬಂಧಪಟ್ಟವರಲ್ಲಿಗೆ ಹೋಗಿ ಮುಂದೇನು ಮಾಡಬೇಕೆಂದು ಹೇಳುತ್ತೇನೆ ಎಂದಳು. ಅವಳು ಹೇಳಿದಂತೆ ಮಿಲಿಟರಿ ಭದ್ರತಾ ಪಡೆಯವರಿಂದ ಕಾವಲಿದ್ದ ಒಂದು ಆಫೀಸಿಗೆ ಹೋಗಿ ನನ್ನನ್ನು ಹೊರಾಂಗಣದಲ್ಲಿಯೇ ಕೂರಿಸಿ ಆಕೆ ಸೀದಾ ಒಳಗೆ ಹೋದಳು. ಬಾಗಿಲಲ್ಲಿ ಕಾವಲಿದ್ದವರಿಗೆ ಆಕೆ ಪರಿಚಯಸ್ಥಳಂತೆ ತೋರಿದಳು. ಅರ್ಧಗಂಟೆಯ ನಂತರ ಹೊರಗೆ ಬಂದು, 'ನಿಮ್ಮ ಕೆಲಸವಾಯಿತು. ಇಂದೋ ನಾಳೆಯೋ ನಿಮ್ಮ ಸಾಮಾನನ್ನು ಲಂಡನ್ನಿನಿಂದ ಇಲ್ಲಿಗೆ ರವಾನಿಸುವ ಏರ್ಪಾಡಾಗಿದೆ. ನೀವು ನಿಶ್ಚಿಂತೆಯಿಂದ ನಿದ್ದೆ ಮಾಡಬಹುದು' ಎಂದಳು.

ಲಗ್ಗೇಜು ಸಿಕ್ಕಿದ ಮೇಲೆ ಆಕೆಗೆ ಒಂದು ಧನ್ಯವಾದವನ್ನು ಹೇಳಿ ಬರಲು ಹೋದೆ. ಅವಳಿದ್ದದ್ದು ಆ ಊರಿನ ಭವ್ಯವಾದ ಬಂಗಲೆಯೆಂದೇ ಹೇಳಬೇಕು. ಅವಳ ಜೊತೆ ಇದ್ದ ಆಕೆಯ ಒಡನಾಡಿ ಅರಬ್ಬಿನ ಮಿಲಿನಿಯರಂತೆ ಕಾಣುತ್ತಿದ್ದ. ಅವಳಿಗಿಂತ ಮೂರು ಪಟ್ಟು ವಯಸ್ಸಿನಲ್ಲಿ ಹಿರಿಯವನಿರಬಹುದು. ಅವನು ನಡೆ ನುಡಿಯಲ್ಲಿ ಬಹಳ ಆತ್ಮೀಯವಾಗಿ ಕಂಡ. ನಾಲ್ಕೈದು ದಿನದಿಂದ ಮನಸ್ಸು ದೇಹ ಬಾಡಿ ಭಾರವಾಗಿದ್ದು, ಅವರೊಡನೆ ಕಲೆತ ಒಂದೆರಡು ಗಂಟೆಯಲ್ಲಿ ಹಗುರವಾಯಿತು. ನಾನಾ ವಿಧದ ಡ್ರೈ ಫ್ರೂಟ್ಸ್, ಬಿಸ್‌ಕತ್, ಜ್ಯೂಸ್ ಕಂಠಪೂರ್ತಿ ತಿಂದು ಮತ್ತೊಮ್ಮೆ ಕೈ ಜೋಡಿಸಿ ಮನಃಪೂರ್ವಕ ನಮಸ್ಕಾರ ಮಾಡಿ ಬಂದೆ. ಆಕೆ ಅಂದು ಸ್ವಯಂ ಪ್ರೇರಿತ ಬಂದು ವಿಚಾರಿಸಿ ಸಹಾಯ ಮಾಡದಿದ್ದರೆ ನನ್ನ ಬ್ಯಾಗೇಜಿನ ಗತಿ ಏನಾಗುತ್ತಿತ್ತೋ ತಿಳಿಯದು. ಲೆಫ್ಟ್ ಲಗ್ಗೇಜು ರೂಮಿನಲ್ಲಿ ಬಿದ್ದಿದ್ದ ಬ್ಯಾಗೇಜುಗಳನ್ನು ನೋಡಿದರೆ ಪ್ರಪಂಚದ ನಾನಾ ಕಡೆಯಿಂದ ಬಂದ ಪ್ರವಾಸಿಗರ ಗೋಳು ವ್ಯಕ್ತವಾಗುತ್ತಿತ್ತು. ಕಾನೂವಿನಿಂದ ಜಾರಿಯಾಕ್ಕೆ ಹೋದ ಮೇಲೆ ಅಲ್ಲಿರುವ ರಾಕ್‌ಫೆಲರ್ ಗೆಸ್ಟ್‌ಹೌಸ್‌ನಲ್ಲಿ ಇಳಿದುಕೊಳ್ಳುವ ವ್ಯವಸ್ಥೆ ಆಗಿತ್ತು. ಅಲ್ಲಿದ್ದ ಎಂಟು ಹತ್ತು ಜನ ಅಮೆರಿಕನ್ ಮತ್ತು ಬ್ರಿಟಿಷರೆಲ್ಲರೂ ನನ್ನ ಹಾಗೆ ಲಗ್ಗೇಜು ಕಳೆದುಕೊಂಡು ಅನುಭವಿಸಿದ ಕಥೆಗಳನ್ನು ಹೇಳಲು ಪ್ರಾರಂಭಿಸಿದರು. ಕೆಲವರಿಗೆ ಆಫ್ರಿಕಾದಲ್ಲಿ ಒಂದು ಊರಿಗೆ ಹೋಗಿ ಲಗ್ಗೇಜು ಕಳೆದುಕೊಂಡಿದ್ದನ್ನು, ಮತ್ತಾವುದೋ ಊರಿನಲ್ಲಿ ಸಿಕ್ಕಿದ ಪ್ರಸಂಗಗಳನ್ನೂ ಹೇಳುತ್ತಿದ್ದರು.

ಅಹಮದ್‌ಬೆಲ್ಲೊ ಯೂನಿವರ್ಸಿಟಿ (ಎ.ಬಿ.ಯು.), ಜಾರಿಯದಲ್ಲಿ ಮರಳುಗಾಡಿನಲ್ಲಿ ಒಂದು ಓಯಸಿಸ್ ಇದ್ದ ಹಾಗೆ. ಕ್ಯಾಂಪಸ್ ಒಳಗೆ ಆಧುನಿಕ ಸೌಲಭ್ಯಗಳೆಲ್ಲವು ಇದ್ದವು.

ಹೊರಗಡೆ ಊರು ಎಲ್ಲದರಲ್ಲೂ ಅವ್ಯವಸ್ಥೆ. ಐ.ಸಿ.ಎ.ಆರ್.ನಲ್ಲಿ ಹಾಲಿ ಅಸಿಸ್ಟೆಂಟ್ ಡೈರೆಕ್ಟರ್ ಜನರಲ್ ಆಗಿರುವ ಡಾ॥ ರಹೇಜರವರು ಎ.ಬಿ.ಯು.ನಲ್ಲಿ ಕೀಟಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅಲ್ಲಿಯ ಮುಖ್ಯಸ್ಥರು ಹ್ಯಾರಿ ಕಾಸ್‌ವೆಲ್ ಮತ್ತು ಅವರ ಪತ್ನಿ ಅಲ್ಲಿಯೇ ಲೈಬ್ರರಿಯನ್. ಅವರ ಮನೆಯ ಅರ್ಧಭಾಗ ಲೈಬ್ರರಿಯಿಂದ ತುಂಬಿತ್ತು. ನನಗೆ ಅದೇನು ಆಶ್ಚರ್ಯವಾಗಿ ಕಾಣಲಿಲ್ಲ. ಏಕೆಂದರೆ ಇಂಗ್ಲಿಷ್‌ನವರು ಎಲ್ಲಿಯೇ ಹೋದರೂ ಅವರ ಜೊತೆಯಲ್ಲಿ ಪುಸ್ತಕಗಳು ನಿಕಟವರ್ತಿಗಳಾಗಿರುತ್ತವೆ. ಇಂಗ್ಲೆಂಡಿನಲ್ಲಿ ಯಾವ ರೈಲಿನಲ್ಲಿ ಹೋದರೂ ಪ್ರತಿಯೊಬ್ಬ ಬ್ರಿಟಿಷರು ಒಂದು ಪುಸ್ತಕ/ಮ್ಯಾಗಜೀನ್/ಪತ್ರಿಕೆಯನ್ನು ಮುಖದ ಮುಂದೆ ಇಟ್ಟು ಮಗ್ನರಾಗಿರುತ್ತಾರೆ. ಎಲ್ಲವನ್ನೂ ಅವರು ಕೊಂಡೇ ಓದಬೇಕು. ಅವರು ಓದಿ ಆದ ನಂತರ ಎಸೆದ ಪತ್ರಿಕೆಯನ್ನು ಮತ್ತಾರಾದರು ತೆಗೆದುಕೊಂಡು ಓದಿದರೆ ಹೀನಾಯವಾಗಿ ನೋಡುತ್ತಾರೆ.

ನೈಜೀರಿಯಾದಲ್ಲಿ ಮನರಂಜನೆ ಕಾರ್ಯಕ್ರಮಗಳು ಮತ್ತೇನು ಇಲ್ಲ. ಸ್ಥಳೀಯ ಜನರು ಸಮಯ ಸಿಕ್ಕಿದಾಗಲೆಲ್ಲಾ ಕುಡಿದು ವಾದ್ಯಗಳನ್ನು ಮಾಡಿ ನರ್ತಿಸಿ ನಲಿಯುತ್ತಿರುತ್ತಾರೆ. ಕೆಲವೊಮ್ಮೆ ಪಟ್ಟಣಗಳಲ್ಲಿ ಹಳೆಯ ಭಾರತೀಯ ಸಿನೆಮಾಗಳನ್ನು ತಡಿಕೆಯಿಂದ ಕಟ್ಟಿದ ಮಂದಿರಗಳಲ್ಲಿ ಪ್ರದರ್ಶಿಸುತ್ತಾರೆ. ಎ.ಬಿ.ಯು.ನಲ್ಲಿ ಹತ್ತಾರು ಭಾರತೀಯರು ಪ್ರಾಧ್ಯಾಪಕರಾಗಿದ್ದರು. ಅವರಿಗೆ ಮುಖ್ಯ ಮನರಂಜನೆ ಎಂದರೆ ಒಂದೊಂದು ದಿವಸ ಒಬ್ಬೊಬ್ಬರ ಮನೆಯಲ್ಲಿ ಎಲ್ಲರೂ ಸೇರಿ ಔತಣ ಮಾಡುವುದು. ನಾನಿರುವಷ್ಟು ದಿವಸ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ ಸೇರುತ್ತಿದ್ದೆವು. ನಿಮಗೆ ಇದನ್ನು ಬಿಟ್ಟು ಬೇರೆ ಮನರಂಜನೆ ಏನಿದೆ ಎಂದು ಕೇಳಿದರೆ, ಆಗಾಗ ಬ್ಯಾಂಕ್ ಬ್ಯಾಲೆನ್ಸ್ ನೆನೆದುಕೊಂಡು ನಾವು ಲಕ್ಷಾಧೀಶರೆಂದು ಹೆಮ್ಮೆ ಪಟ್ಟುಕೊಳ್ಳುತ್ತೇವೆಂದು ತಮಾಷೆ ಮಾಡುತ್ತಿದ್ದರು.

ಡಾ॥ ರಹೇಜರವರ ಪತ್ನಿ ಡಾಕ್ಟರಾಗಿದ್ದರು. ಅವರು ಅಲ್ಲಿಯ ಜನರ ಸ್ಥೈರ್ಯವನ್ನು ನೋಡಿ ಆಶ್ಚರ್ಯಪಡುತ್ತಿದ್ದರು. ಹೆಂಗಸರು ಕೂಡ ಮಕ್ಕಳನ್ನು ಹೆರುವಾಗ ಕಷ್ಟಪಡು ತ್ತಿರಲಿಲ್ಲವಂತೆ. ಒಮ್ಮೆ ಒಬ್ಬ ಯುವಕನಿಗೆ ಯಾರೋ ಹಿಂದಿನಿಂದ ಬಾಕು ಹಾಕಿದ್ದು ಅದನ್ನು ತೆಗೆಯದೆ ಹಾಗೆ ಬಂದು ಆಸ್ಪತ್ರೆಯಲ್ಲಿ ಕ್ಯೂನಿಂತು ಅವನ ಸರದಿ ಬಂದಾಗ ತೊಂದರೆ ಏನೆಂದು ವಿಚಾರಿಸಿದಾಗ ಎಡಕ್ಕೆ ಹೆಬ್ಬೆರಳಿನಿಂದ ಅವನ ಬೆನ್ನಿನಲ್ಲಿ ಬಾಕು ಇರವುದನ್ನು ತೋರಿಸಿದನಂತೆ. ಅವನ ಮುಖದಲ್ಲಿ ಕೊಂಚವೂ ನೋವಿನ ಸೂಚನೆ ಇರಲಿಲ್ಲವಂತೆ!

ಜಾರಿಯಾದಿಂದ ಕಾನೂವಿಗೆ ನನ್ನ ಲಗ್ಗೇಜು ಬಿಡಿಸಿಕೊಳ್ಳುವದಕ್ಕೆ ಬರುತ್ತಿದ್ದಾಗ, ಒಂದು ದಿನ ಎಂಭತ್ತು ಮೈಲಿ ದೂರದುದ್ದಕ್ಕೂ ಹದಿಮೂರು ರಸ್ತೆ ಅಪಘಾತಗಳನ್ನು ನೋಡಿದೆ. ಅದರಲ್ಲಿ ಒಬ್ಬ ಪಾಕಿಸ್ತಾನೀಯನ ವಾಹನಕ್ಕೆ ಸಿಕ್ಕಿ ಹತ್ತು ಹನ್ನೆರಡು ವಯಸ್ಸಿನ ಮಗು ಮೃತಪಟ್ಟಿತ್ತು. ಅದರ ತಾಯಿಯ ಹತ್ತಿರ ಏನೋ ವ್ಯವಹರಿಸುತ್ತಿದ್ದ. ನನ್ನ ಜೊತೆಯಲ್ಲಿ ಇದ್ದ ಸ್ನೇಹಿತರು ಹೇಳಿದ್ದು ಅಂತಹ ಕೇಸ್‌ಗಳನ್ನು ಕೋರ್ಟಿಗೆ ಹೋಗದೆ ಸಂಬಂಧ ಪಟ್ಟವರಿಗೆ ಹಣ ಕೊಟ್ಟು ಇತ್ಯರ್ಥ ಮಾಡಿಕೊಳ್ಳಬಹುದು, ಅದಕ್ಕೆ ಆತ ಅವಳೊಂದಿಗೆ ವ್ಯವಹರಿಸುತ್ತಿದ್ದಾನೆ ಎಂದು.

ಜಾರಿಯಾದಿಂದ ಮೊಕುವಾಕ್ಕೆ ಹೋಗುವ ಮಧ್ಯೆ ನೈಜರ್ ನದಿಗೆ ಆಗತಾನೆ ಕಟ್ಟಿ ಪೂರೈಸಿದ್ದ ಅಣೆಕಟ್ಟನ್ನು ನೋಡಲು ಸ್ನೇಹಿತರೊಡನೆ ಹೊರಟೆ. ಅದು ಆ ದೇಶದ ಒಂದು ದೊಡ್ಡ ಸಾಧನೆಯೆಂದು ಅದನ್ನು ನೋಡಲು ಬರುವವರನ್ನು ನೋಡಿಕೊಳ್ಳುತ್ತಿದ್ದ ರೀತಿ, ಅಲ್ಲಿಗೆ ಹೋಗುವವರ ತಪಾಸಣೆ, ಎಲ್ಲರನ್ನು ಚಕಿತರನ್ನಾಗಿ ಮಾಡುತ್ತಿತ್ತು. ಅದು ನಮ್ಮ ಕನ್ನಂಬಾಡಿ ಕಟ್ಟೆಯ ಅರ್ಧದಷ್ಟು ಇರಲಿಲ್ಲ. ಆದರೂ ಅದೊಂದು ಆ ದೇಶದ ಹೆಮ್ಮೆಯ ಸಾಧನೆ.

ಹಳ್ಳಿಗಳ ಮನೆಗಳೆಲ್ಲಾ ಗುಂಪು ಗುಂಪಾಗಿ ಗೋಳಾಕಾರದ ಹುಲ್ಲುಚಾವಣಿಯ ಮನೆಗಳು. ಒರಿಸ್ಸಾ ಬಿಹಾರದಲ್ಲಿ ಇಂತಹ ಮನೆಗಳನ್ನು ಕಾಣಬಹುದು. ಹೆಂಗಸರೆಲ್ಲ ಅರೆ ಬೆತ್ತಲೆ, ಮಂಡಿಯ ಮೇಲೆ ಸೊಂಟದವರೆಗೆ ಅಡ್ಡಲಾಗಿ ಕಟ್ಟಿದ ಉಡುಪು ಬಿಟ್ಟರೆ ಮತ್ತೇನು ಇಲ್ಲ. ದಾರಿಯ ಹಳ್ಳಿಯೊಂದರಲ್ಲಿ ನಾಲ್ಕಾರು ಜನ ಹೆಂಗಸರಿದ್ದ ಒಂದು ಗುಂಪಿನ ಫೋಟೋ ತೆಗೆದುಕೊಂಡೆ. ಅವರೆಲ್ಲಾ ಕಿರುಚುತ್ತಾ ನನ್ನ ಕಡೆ ಓಡಿ ಬಂದರು. ನಾನು ಕೂಡಲೆ ಏನೋ ಅಪರಾಧವಾಯಿತು ಎಂದುಕೊಂಡು ಹೆದರಿ ನನ್ನ ಸ್ನೇಹಿತರಿದ್ದ ಕಡೆಗೆ ಓಡಿದೆ. ನೀವೇನು ಭಯಪಟ್ಟುಕೊಳ್ಳಬೇಕಿಲ್ಲ, ಹಾಗೆ ಫೋಟೋ ತೆಗೆಯುವುದನ್ನು ಅವರು ಸ್ವಾಗತಿಸುತ್ತಾರೆ, ಏಕೆಂದರೆ ಯೂರೋಪಿಯನ್ನರು ಫೋಟೋ ತೆಗೆದಮೇಲೆ ಅವರಿಗೇನಾದರೂ ಟಿಪ್ಸ್ ಕೊಡುತ್ತಾರೆ. ನೀವು ಏನಾದರೂ ಕೊಟ್ಟೀರೆಂದು ಬರುತ್ತಿದ್ದಾರೆ ಎಂದರು.

ಮೊಕುವ ಒಂದು ಸಣ್ಣ ಊರು. ಎಲ್ಲ ಮನೆಗಳು ಜಿಂಕ್‌ಶೀಟಿನ ಅಥವಾ ಹುಲ್ಲಿನ ಮಾಡು. ಆ ಊರಿನಲ್ಲಿ ಸಿ.ಓ.ಪಿ.ಆರ್. ಸೈಂಟಿಸ್ಟ್‌ಗಳು ಮೊಕ್ಕಾಂ ಹಾಕಿದ್ದರು. ಅವರ ಮನೆಗಳು ಕೂಡ ಹುಲ್ಲಿನ ಮಾಡು ಮತ್ತು ಮಣ್ಣಿನ ಗೋಡೆಯಿಂದ ಕಟ್ಟಿದ್ದರೂ ಒಳಾಂಗಣ ವಿಶಾಲವಾಗಿದ್ದು ಚೊಕ್ಕಟವಾದ ನೆಲ, ಮನೆಗೆ ಒಪ್ಪುವ ಪೀಠಾಸನಗಳು, ಆಧುನಿಕ ಅಡುಗೆ ಊಟದ ಹಾಲ್, ಬೋರ್‌ವೆಲ್ ನೀರು, ಸೆಪ್ಟಿಕ್ ಟ್ಯಾಂಕಿನಿಂದ ಕೂಡಿದ ಲಾವೆಟರಿ, ಇಂತಹ ನಾಲ್ಕಾರು ಮನೆಗಳು. ಒಂದು ಮನೆಯನ್ನು ಕ್ಲಬ್ ಮಾದರಿಯಾಗಿ ಪರಿವರ್ತಿಸಿದ್ದರು. ಅರ್ಧದಲ್ಲಿ ಗೆಸ್ಟ್‌ಗಳು ಬಂದರೆ ಉಳಿದುಕೊಳ್ಳಲು ಎರಡು ರೂಮ್ ಮತ್ತು ಆಟಾಚ್ಡ್ ಬಾತ್‌ರೂಮ್. ಇನ್ನುಳಿದ ಭಾಗದಲ್ಲಿ ಬಾರ್, ಟೇಬಲ್ ಟೆನ್ನಿಸ್, ಬಿಲಿಯರ್ಡ್ಸ್ ಟೇಬಲ್‌ಗಳಿದ್ದವು. ನಾನು ಇದರಲ್ಲೇ ಇಳಿದುಕೊಂಡಿದ್ದೆ. ಜೀವನದಲ್ಲಿ ಮೊದಲು ಮತ್ತು ಕೊನೆಯಬಾರಿ ಬಿಲಿಯರ್ಡ್ಸ್ ಆಡಿದ್ದು ಇಲ್ಲಿಯೇ. ಆ ಊರಿನ ಜನರಿಗೆಲ್ಲಾ ಇಲ್ಲಿರುವ ವಸತಿಗಳನ್ನು ನೋಡಿದರೆ ಸೋಜಿಗ. ಫೀಲ್ಡ್ ಎಕ್ಸ್‌ಪೆರಿಮೆಂಟಿಗೆ ಹೋಗಲು ನಾಲ್ಕಾರು ವಾಹನಗಳು. ಇವರುಗಳಿಗೆ ಸಹಾಯ ಮಾಡಲು ನಾಲ್ಕಾರು ಇಂಗ್ಲಿಷ್ ಬಲ್ಲ ನೈಜೀರಿಯನ್ನರು. ಈ ಮೊದಲೇ ಹೇಳಿದ ಹಾಗೆ ಬ್ರಿಟಿಷರು ಎಲ್ಲಿದ್ದರೂ ಅವರ ತಿಂಡಿ ಊಟ, ನಿಗದಿಯಾದ ವೇಳೆಯಲ್ಲಿ. ಆದರೆ ಕೆಲಸ ಮಾಡುವಾಗ ಅತ್ತಿತ್ತ ಮನ ಒಲಿಸರು. ದಿನದ ಕೆಲಸ ಪೂರೈಸಿದ ನಂತರ ಎಲ್ಲರೂ ಒಟ್ಟಿಗೆ ಸೇರಿ ಅವರವರಿಗೆ ಬೇಕಾದ ಪಾನೀಯ, ಮಧ್ಯದಲ್ಲಿ ಮಾತುಕತೆ, ಹರಟೆಯಲ್ಲಿ ಯಾವುದಾದರೂ ಒಂದು ಗಾಢವಾದ ವಿಷಯ ಪ್ರಸ್ತಾಪಿಸಿ ಅದರ ಬಗ್ಗೆ ತಿಳಿದಿರುವ ವಿಷಯಗಳೆಲ್ಲವನ್ನು ಚರ್ಚಿಸುವರು. ಮುಖ್ಯವಾಗಿ ಅವರು ಕೈಗೊಂಡಿರುವ ಕೆಲಸ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯವನ್ನೊಳಗೊಂಡಿರುತ್ತಿತ್ತು.

ನಾನು ಇದ್ದ ಸಮಯದಲ್ಲಿ ಒಟ್ಟು ಟಿ. ಜಿ. ವುಡ್ ಸೇರಿದಂತೆ ಐದು ಜನ ಬ್ರಿಟಿಷರು ಇಲ್ಲಿ ಇದ್ದರು. ಎಲ್ಲರೂ ಗೆದ್ದಲಿನ ಬಗ್ಗೆ ಸಂಶೋಧನೆ ನಡೆಸುತ್ತಿದ್ದರು. ಇಲ್ಲಿಗೆ ಆಗಾಗ

ಇಂಗ್ಲೆಂಡಿನ ಒಬ್ಬ ಮಹಿಳೆ ಬರುತ್ತಿದ್ದಳು. ಆಕೆಗೆ ಸುಮಾರು ಇಪ್ಪತ್ತು ವಯಸ್ಸಿರಬಹುದು. ಲಂಡನ್ ಇಂಪೀರಿಯಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಅಧ್ಯಯನ ಮಾಡುತ್ತಿದ್ದಳು. ಅದರ ಅಂಗವಾಗಿ ನೈಜೀರಿಯದ ಜನ ಜೀವನದ ಬಗ್ಗೆ ಒಂದು ಡೆಸರ್ಟೇಷನ್ ಮಾಡಬೇಕಿತ್ತು. ಆಕೆ ನೈಜರ್ ನದಿಯ ದಡದಲ್ಲಿ ನಿರ್ಜನವಾದ ಪ್ರದೇಶದಲ್ಲಿ ಒಂದು ಗುಡಿಸಿಲಿನಲ್ಲಿ ವಾಸಿಸುತ್ತಿದ್ದಳು. ಇವಳಿಗೆ ಹತ್ತಿರದ ನಿವಾಸಿಗಳು ಒಂದು ಕಿಲೋ ಮೀಟರ್ ದೂರದವರೆಗೆ ಇರಲಿಲ್ಲ. ಅಲ್ಲಿಂದ ನಾವಿದ್ದಲ್ಲಿಗೆ ಐದಾರು ಕಿಲೋ ಮೀಟರ್. ಒಮ್ಮೊಮ್ಮೆ ರಾತ್ರಿ ಹೊತ್ತು ಲಾಟೀನು ಹಿಡಿದು ಒಬ್ಬೊಬ್ಬಳೇ ಬರುತ್ತಿದ್ದಳು. ಸಾಮಾನ್ಯವಾಗಿ ಗಂಡಸರೇ ಇರದಂತಹ ಸ್ಥಳದಲ್ಲಿ ನೀನೊಬ್ಬಳೇ ವಾಸಿಸುತ್ತೀಯಲ್ಲ, ನಿನಗೇನು ಹೆದರಿಕೆಯಾಗುವುದಿಲ್ಲವೇ, ಎಂದು ಕೇಳಿದ್ದಕ್ಕೆ ಖಂಡಿತವಾಗಿಯೂ ಇಲ್ಲ. ಬದಲಾಗಿ ಅಲ್ಲಿರುವುದಕ್ಕೆ ಸಂತೋಷಿಸುತ್ತೇನೆ, ಹೀಗೆಲ್ಲ ಇದೆಯೆಂದು ತಿಳಿದಿದ್ದರೂ ಕೂಡ ಸ್ವಯಂ ಪ್ರೇರಿತ ನಾನೇ ಬಂದಿದ್ದೇನೆ, ಪ್ರಪಂಚದಲ್ಲಿ ಹುಡುಕಿದರೂ ಇಂತಹ ಜಾಗಗಳು ಸಿಕ್ಕುವುದು ಅಪರೂಪ ಎಂದು ನಿರಾಳವಾಗಿ ಹೇಳುತ್ತಿದ್ದಳು. ಅವಳ ಧೈರ್ಯ ಸ್ಥೈರ್ಯಗಳನ್ನು ನೋಡಿ ಬ್ರಿಟಿಷರು ಹೀಗಿರುವುದರಿಂದಲೇ ಪ್ರಪಂಚವನ್ನೇ ಆಳಲು ಶಕ್ತರಾದರು ಅಂದುಕೊಂಡೆ. ಇನ್ನೂರು ವರುಷಗಳ ಹಿಂದೆ ನಮ್ಮ ದೇಶಕ್ಕೆ ಬಂದ ಬ್ರಿಟಿಷರು ಅಸ್ಸಾಮ್ ಮತ್ತು ಪಶ್ಚಿಮ ಘಟ್ಟಗಳಂತಹ ಕಾಡುಮೇಡುಗಳಲ್ಲಿ ಯಾವ ರಸ್ತೆ ಸಾರಿಗೆ ಸಂಪರ್ಕ ಇಲ್ಲದ ಕಡೆ ಹೋಗಿ ಕಾಫಿ, ಟೀ, ತೋಟಗಳನ್ನು ಮಾಡಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ಭಾನುವಾರ ಡಾ|| ಟಿ.ಜಿ. ವುಡ್ ನನ್ನನ್ನು ಮೊಕುವಾದಿಂದ ಸುಮಾರು ನೂರು ಮೈಲಿ ದೂರದಲ್ಲಿದ್ದ ಪುರಾತನ ಹಳ್ಳಿಯಲ್ಲಿ ತಾಮ್ರದಿಂದ ತಯಾರು ಮಾಡುತ್ತಿದ್ದ ವಿವಿಧ ಚಿತ್ರಕಲೆ ಸ್ಥಳಕ್ಕೆ ಕರೆದುಕೊಂಡು ಹೋದರು. ಅವರು ಮಾಡುತ್ತಿದ್ದ ವಸ್ತುಗಳನ್ನು ನೋಡಿ ಎಷ್ಟು ಸುಂದರವಾಗಿವೆ, ಎಂದು ಸಂತೋಷದಿಂದ ನೀವು ಒಂದನ್ನು ಕೊಂಡುಕೊಳ್ಳಿ ಎಂದು ಹೇಳಿ ನೂರು ಡಾಲರ್ ಬೆಲೆ ಬಾಳುವ ಒಂದು ತಟ್ಟೆಯ ಕಡೆಗೆ ಕೈ ತೋರಿಸಿದರು. ಆಫ್ರಿಕಾದ ಕಲಾಕೃತಿಗೆ ಮೆಚ್ಚುವಂತಹವಾಗಿದ್ದರೂ ಭಾರತದಲ್ಲಿ ಬಹಳ ಕಡಿಮೆ ಬೆಲೆಗೆ ಇದಕ್ಕಿಂತಲೂ ಹೆಚ್ಚಿನ ಕಲಾಕೃತಿಯ ತಾಮ್ರದ ತಟ್ಟೆಗಳು ಸಿಗುತ್ತವೆ ನನಗೆ ಬೇಡವೆಂದೆ. ಆಗ ಅವರಿಗೆ ಸ್ವಲ್ಪ ಅಸಮಾಧಾನವಾಯಿತು. ಮುಂದೆ ಅವರು ಭಾರತಕ್ಕೆ ಬಂದಾಗ ಬೆಂಗಳೂರಿನಲ್ಲಿ ಕೆಲವು ಆರ್ಟ್ಸ್ ಎಂಪೋರಿಯಂಗೆ ಕರೆದುಕೊಂಡು ಹೋದಾಗ ಇಂತಹ ವಸ್ತುಗಳನ್ನು ನೋಡಿ, ನೀವು ಹಿಂದೆ ನೈಜೀರಿಯಾದಲ್ಲಿ ಹೇಳಿದ ಮಾತು ಸತ್ಯ. ಇವುಗಳ ಮುಂದೆ ಅವು ಏನೂ ಅಲ್ಲ ಅಂದರು.

ಡಾ|| ಟಿ.ಜಿ. ವುಡ್ ನಾಸ್ತಿಕರು ಅವರಿಗೆ ದೇವರು, ಚರ್ಚು, ಮಸೀದಿ, ದೇವಸ್ಥಾನಗಳಲ್ಲಿ ನಂಬಿಕೆ ಇರಲಿಲ್ಲ. ಇವಕ್ಕೆ ಸಂಬಂಧಪಟ್ಟಂತೆ ಏನು ಹೇಳಿದರೂ ಪ್ರತ್ಯುತ್ತರವಾಗಿ ಸಮಂಜಸವಾದ ಉತ್ತರ ಕೊಡುತ್ತಿದ್ದರು. ಅಲ್ಲದೆ ಯೂರೋಪಿಯನ್ ಛಾಂಪಿಯನ್‌ಷಿಪ್‌ನ ಓಟದಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದವರು. ನಾವಿಬ್ಬರೂ ಪ್ರವಾಸದಲ್ಲಿದ್ದಾಗ ಒಮ್ಮೆ ನಾಡಿಶಾಸ್ತ್ರದ ಪ್ರಸ್ತಾಪ ಬಂತು. ಬೆಂಗಳೂರಿನ ಚಾಮರಾಜಪೇಟೆ ನಾಲ್ಕನೆಯ ಮುಖ್ಯ ರಸ್ತೆಯಲ್ಲಿ ಗುಂಜೂರು ನಾರಾಯಣ ಶಾಸ್ತ್ರಿಗಳು ನಾಡಿ ಶಾಸ್ತ್ರದಲ್ಲಿ ಹೆಸರುವಾಸಿಯಾದವರು ಅವರ ಹತ್ತಿರ ಸುಮಾರು ಎರಡು ಸಾವಿರ ಓಲೆಗರಿ ಪುಸ್ತಕಗಳಿವೆಯಂತೆ, ನಿಮ್ಮ ಹುಟ್ಟಿದ ತಾರೀಖು ಹೇಳಿದರೆ ಸಾಕು ನಿಮಗೆ ಸಂಬಂಧಪಟ್ಟ ಪುಸ್ತಕ ತಂದು ನಿಮ್ಮ ಮುಂದೆ ಓದುತ್ತಾರೆ,

ನಿಮ್ಮ ಪೂರ್ಣ ವಿವರ ಅದರಲ್ಲಿ ಇರುತ್ತದೆಯೆಂದು ಹೇಳಿದೆ. ಅದಕ್ಕೆ ಅವರು ಒಂದು ಸಾರಿ ಗೊಳ್ಳೆಂದು ನಕ್ಕು, ನಾನು ಬೆಂಗಳೂರಿಗೆ ಬಂದಾಗ ಅವರಲ್ಲಿರುವ ಪುಸ್ತಕಗಳನ್ನು ನೋಡಬೇಕು ಅಂದರು. ಹಾಗೆಯೇ ಅವರು ಬಂದ ಮೇಲೆ ಕರೆದುಕೊಂಡು ಹೋಗಿದ್ದೆ. ಶಾಸ್ತ್ರಿಗಳು ಅವರ ಗಾಡ್ರೇಜ್ ಅಲ್‌ಮೈರಾದಲ್ಲಿದ್ದ ಓಲೆಗರಿ ಪುಸ್ತಕಗಳನ್ನೆಲ್ಲಾ ತೋರಿಸಿದರು. ಅವರನ್ನು ಒಳಗೆ ಕರೆದುಕೊಂಡು ಹೋಗಲು ಶಾಸ್ತ್ರಿಗಳಿಗೆ ಕೊಂಚ ಮುಜುಗರವಾದರೂ ಯಾರೋ ಅವರ ಭಕ್ತರು ಪೂಜೆ ಮಾಡಿಸುತ್ತಿದ್ದ ವಿಧಾನವನ್ನೆಲ್ಲಾ ತೋರಿಸಿದರು. ಹೊರಗೆ ಅವರು ನಾಡಿಶಾಸ್ತ್ರ ಹೇಳುತ್ತಿದ್ದ ರೂಮಿಗೆ ಬಂದು ಕುಳಿತಾಗ ಅಲ್ಲಿದ್ದ ಒಂದು ಫೋಟೋವನ್ನು ತೋರಿಸಿ ಅವರೆ ಶುಕ ಮುನಿಗಳು. ಎರಡು ಸಾವಿರ ವರುಷಗಳ ಹಿಂದೆ ಅವರು ಬರೆದ ಶುಕ ನಾಡಿಶಾಸ್ತ್ರ ನಿರಂತರವಾಗಿ ಬರುತ್ತಿದೆ. ಇದು ಯಾರ ಸ್ವತ್ತಲ್ಲ; ನನಗೂ ಯಾರೋ ತಂದು ಕೊಟ್ಟಿದ್ದು; ಮುಂದೆ ನಾನು ಯಾರಿಗೆ ಕೊಡಬೇಕೆಂದು ಇದರಲ್ಲಿ ಹೇಳಿದವರಿಗೆ ಕೊಡುತ್ತೇನೆ ಎಂದು ಹೇಳಿ ಪ್ರಾರಂಭಿಸಿದರು. ಮೊದಲೇ ನೂರು ರೂಪಾಯಿ ನೋಟನ್ನು ಅವರ ಟೇಬಲ್ ಮೇಲೆ ಇಟ್ಟ ತಕ್ಷಣ ಶಾಸ್ತ್ರಿಗಳು ಉಬ್ಬಿಹೋದರು. ಅದು ಇದು ಹುಡುಕಿ ಕೊನೆಗೆ ವುಡ್‌ರ ಹಣೆಬರಹ ಇರುವ ಪುಸ್ತಕವನ್ನು ತಂದು ಓದಲು ಪ್ರಾರಂಭಿಸಿದರು. ಒಂದು ಹಂತದಲ್ಲಿ, ಇವರ ಎಂಟು ಒಂಭತ್ತು ವಯಸ್ಸಿನ ಎರಡನೆ ಮಗನಿಗೆ ವಿದ್ಯೆಯಲ್ಲಿ ಆಸಕ್ತಿ ಇಲ್ಲ; ವ್ಯಾಪಾರದಲ್ಲಿ ಮುಂದುವರಿಯುತ್ತಾನೆ ಎಂದು ಹೇಳಿದ ತಕ್ಷಣ ವುಡ್‌ರವರು ಥಂಗನೆ ಕುರ್ಚಿಯಿಂದ ಎದ್ದು; ನಿಜ ಅವನಿಗೆ ಓದುವುದರಲ್ಲಿ ಆಸಕ್ತಿ ಇಲ್ಲ; ಈ ವಯಸ್ಸಿನಲ್ಲೇ ಬೆಳಿಗ್ಗೆ ಛಳಿಯಲ್ಲಿ ಮನೆಮನೆಗೆ ಪೇಪರ್ ಹಾಕಿ ಸಂಪಾದನೆ ಮಾಡುತ್ತಿದ್ದಾನೆ ಎಂದರು.

ಮೊಕುವಾದಲ್ಲಿ ಎರಡು ವಾರಗಳ ತರಬೇತಿ, ಗೆದ್ದಲಿನ ವಿವಿಧ ರೀತಿಯ ಜೀವನ ಮತ್ತು ಅವುಗಳ ಹತೋಟಿಕ್ರಮಗಳ ಬಗ್ಗೆ ನಡೆದಿತ್ತು. ನೈಜೀರಿಯ ಗೆದ್ದಲಿನ ಸ್ವರ್ಗವೆಂದೇ ಹೇಳ ಬಹುದು. ಮುಖ್ಯ ಕಾರಣ, ಸದಾ ದೊರೆಯುವ ಆಹಾರ, ಅನುಕೂಲಕರವಾದ ವಾತಾವರಣ ಮತ್ತು ಮಣ್ಣು. ಅತಿದೊಡ್ಡ ಗೆದ್ದಲಿನ ಹುತ್ತ ಮೂವತ್ತೆಂಟು ಅಡಿ ಎತ್ತರ ನೋಡಿದ್ದು ಇಲ್ಲೆ. ಅಷ್ಟೇ ಆಳದವರೆಗೆ ಹೋಗಿರುವ ಬೇಸ್‌ಮೆಂಟ್. ನಮ್ಮ ರೈತರು ನಂಬಿರುವಂತೆ ಗೆದ್ದಲಿನ ಹುತ್ತಕ್ಕೂ ಪರಿಸರದಲ್ಲಿರುವ ತೇವಾಂಶಕ್ಕೂ ಸಂಬಂಧ ಉಂಟು. ಆಧುನಿಕ ವಿಜ್ಞಾನ ಇಷ್ಟೊಂದು ಮುನ್ನಡೆದಿದ್ದರೂ ಗೆದ್ದಲು ಕಟ್ಟುವ ಹುತ್ತವನ್ನು ಕೃತಕವಾಗಿ ನಿರ್ಮಿಸಲು ಇಂದಿಗೂ ಸಾಧ್ಯವಾಗಿಲ್ಲ. ಅದೊಂದು ಅತ್ಯುತ್ತಮ ಏರ್‌ಕಂಡೀಷನ್ ಮನೆ ಇದ್ದಹಾಗೆ. ಎಷ್ಟೇ ಬರಗಾಲ ಬರಲಿ, ರಾಣಿ ವಾಸದಲ್ಲಿ ಸದಾ ಒಂದೇ ಸಮನಾದ ವಾತಾವರಣ. ಗೆದ್ದಲಿನ ರಾಣಿ ಹುಳ ಎಷ್ಟು ವರುಷ ಬದುಕಬಹುದೆಂದು ಕಂಡಿಲ್ಲ. ಸುಮಾರು ಹದಿನೈದು ವರುಷದಿಂದ ಎಪ್ಪತ್ತೈದು ವರುಷದವರೆಗೆ ಬದುಕಬಹುದೆಂದು ಅಂದಾಜು ಮಾಡಿದ್ದರೂ ಅದಾಗಿಯೇ ವಯಸ್ಸಾಗಿ ಸತ್ತ ಮಾಹಿತಿ ಇಲ್ಲ. ಹುತ್ತ ಹಾಳಾಗಬೇಕಾದರೆ ಯವುದೋ ಪಶು ಪ್ರಾಣಿ ಪಕ್ಷಿಯ ತೊಂದರೆಯಿಂದ. ರಾಣಿಹುಳ ಅಜೇಯವಾದರೂ ಅದನ್ನು ನೋಡಿಕೊಳ್ಳುವ ಗೆದ್ದಲು ಅಲ್ಪಾಯುಗಳು. ಪ್ರತಿ ನಿತ್ಯ ಸಾವಿರಾರು ಹುಟ್ಟುತ್ತಿರುತ್ತವೆ, ಸಾವಿರಾರು ಸಾಯುತ್ತಿರುತ್ತವೆ. ರಾಣಿಹುಳ ಒಂದು ಮೊಟ್ಟೆ ಇಡುವ ಯಂತ್ರದಂತೆ. ಸಾಮಾನ್ಯವಾಗಿ ಹೊರಗಡೆ ನೋಡುವ ಗೆದ್ದಲು ಸೇವಕ ಗೆದ್ದಲು, ಇವು ಸ್ಪೆಷಲ್ ಆಗಿ ತಯಾರು ಮಾಡಿದ ಆಹಾರವನ್ನು ಸದಾ ರಾಣಿ ಬಾಯಿಗೆ ಉಣಿಸುತ್ತಿರುತ್ತವೆ, ಹಿಂದಿನಿಂದ

ಅದು ಇಡುತ್ತಿರುವ ಮೊಟ್ಟೆಗಳನ್ನು ತೆಗೆದು ಬೇರ್ಪಡಿಸಿ ಪೋಷಿಸಿ ಸಾಕುತ್ತಿರುತ್ತವೆ. ಹೀಗಾಗಿ ರಾಣಿಯನ್ನು ಕೊಂದ ಹೊರತು ಗೆದ್ದಲಿನ ಹತೋಟಿ ಆಗದು.

ಪರಿಸರಕ್ಕೆ ತಕ್ಕಂತೆ ಅಲ್ಲಿಯ ಜನರು ಮತ್ತು ಗೆದ್ದಲು ಪುರಾತನ ಕಾಲದಿಂದಲೂ ಅನ್ಯೋನ್ಯವಾಗಿ ಬದುಕುತ್ತಿರುವಂತೆ ಕಾಣುತ್ತದೆ. ಅಲ್ಲಿಯ ಸಂತೆಗಳಿಗೆ ಹೋಗಿ ನೋಡಿದರೆ ಇದು ವ್ಯಕ್ತವಾಗುತ್ತದೆ. ನಮ್ಮಲ್ಲಿ ಹಿಂದೆ ರಾಶಿರಾಶಿಯಾಗಿ ಅಕ್ಕಿ ರಾಗಿಯನ್ನು ಸಂತೆಯಲ್ಲಿಟ್ಟು ಮಾರುತ್ತಿದ್ದಂತೆ ಅಲ್ಲಿ ಗೆದ್ದಲಿನ ರಾಶಿಯನ್ನು ನೋಡಬಹುದು. ಮಳೆ ಬಂದನಂತರ ರೆಕ್ಕೆಯುಳ್ಳ ಗೆದ್ದಲು ಲಕ್ಷಗಟ್ಟಲೆ ಹುತ್ತದಿಂದ ಹೊರಗೆ ಬರುವವನ್ನು ಅಲ್ಲಿಯೇ ಬಲೆಯನ್ನು ಹಾಕಿ ರೆಕ್ಕೆಗಳನ್ನು ಉದುರಿಸಿದ ಗೆದ್ದಲನ್ನು ಗುಡ್ಡೆ ಮಾಡಿ, ಹುರಿದು ಒಣಮೀನು ಸೀಗಡಿಯನ್ನು ಮಾರಿದಂತೆ ಸಂತೆಯಲ್ಲಿ ಮಾರುತ್ತಾರೆ. ಅಲ್ಲಿಯ ಜನರು ಇದನ್ನು ಆಹಾರವಾಗಿ ಉಪಯೋಗಿಸುತ್ತಾರೆ.

ನೈಜೀರಿಯನ್ನರು ಬೇಸಾಯದಲ್ಲಿ ನೇಗಿಲನ್ನು ಉಪಯೋಗಿಸಿದ್ದು ಕಾಣರು. ಅವರು ಬೆಳೆಯುತ್ತಿದ್ದ ಗೆಡ್ಡೆ ಗೆಣಸು, ಬಾಳೆ, ಕಾಳು ಮುಂತಾದುವನ್ನು, ಮಣ್ಣನ್ನು ರಾಶಿ ಮಾಡಿ ಅದರ ಮೇಲೆ ನೆಟ್ಟು, ಬೆಳೆಯುತ್ತಿದ್ದರು. ಆದ್ದರಿಂದ ಅವರಿಗೆ ಗೆದ್ದಲಿನ ಕಾಟ ಇರುತ್ತಿರಲಿಲ್ಲ. ಪೆಟ್ರೋಲಿಯಂನಿಂದ ದೇಶದ ವರಮಾನ ಹೆಚ್ಚಾದಂತೆ ಯಂತ್ರೋಪಕರಣಗಳನ್ನು ಉಪಯೋಗಿಸಿ ಭೂಮಿ ಸಾಗುವಳಿ ಮಾಡುವುದನ್ನು ಪ್ರಾರಂಭಿಸಿದರು. ಮುಸುಕಿನ ಜೋಳ, ಬಿಳಿ ಜೋಳ ಮುಂತಾದವನ್ನು ಬೆಳೆದಾಗ ಗೆದ್ದಲಿನ ಪ್ರಭಾವ ಜಾಸ್ತಿಯಾಯಿತು.

ನೈಜೀರಿಯದಲ್ಲಿ ನನ್ನ ಕಾರ್ಯಕ್ರಮ ಪೂರೈಸಿ ವಾಪಸು ಬರುವಾಗ ಇಬೆಡಾನ್ ಮುಖಾಂತರ ಬಂದೆ. ಬರುವ ಮುನ್ನ ಇಬೆಡಾನ್‌ಗೆ ಹತ್ತಿರವಿರುವ ಅಂತರ ರಾಷ್ಟ್ರೀಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಎರಡು ದಿವಸವಿದ್ದು, ಅಲ್ಲಿಯ ಕಾರ್ಯ ವೈಖರಿಯನ್ನು ವೀಕ್ಷಿಸಿದೆ. ಅಮೆರಿಕನ್ ಧನ ಸಹಾಯದಿಂದ ನಿರ್ಮಿಸಿದ್ದ ಈ ಸಂಶೋಧನಾ ಕೇಂದ್ರ ಮಿನಿ ಅಮೆರಿಕಾದ ಹಾಗೆ ಕಂಡಿತು. ಗೇಟಿನ ಒಳಗೆ ಹೋದ ತಕ್ಷಣ ಯಾವುದೋ ಅಮೆರಿಕೆಯ ಯೂನಿವರ್ಸಿಟಿ ಕ್ಯಾಂಪಸ್‌ಗೆ ಬಂದ ಹಾಗಾಯಿತು. ವಿಶಾಲವಾದ ಲಾನ್, ಬಹು ಅಂತಸ್ಥಿನ ಕಟ್ಟಡ, ಲೈಬ್ರರಿ, ಕ್ಯಾಂಟೀನ್, ಕಾರುಗಳು, ಫೋನಿನ ವ್ಯವಸ್ಥೆ, ವಿಜ್ಞಾನಿಗಳು ಇಳಿದುಕೊಳ್ಳುವ ಮನೆಗಳು, ಈಜುಕೊಳ, ಎಲ್ಲವನ್ನು ಅಮೆರಿಕಾದಲ್ಲಿ ಮಾಡಿ ಇಲ್ಲಿ ತಂದು ಜೋಡಿಸಿದ ಹಾಗಿತ್ತು. ಕ್ಯಾಂಟೀನ್‌ನಲ್ಲಿ ಇರುವ ತಿಂಡಿ ತಿನಸುಗಳೆಲ್ಲ ಅಮೆರಿಕಾದಲ್ಲಿರುವಂತಹವೆ ಮತ್ತು ಅವುಗಳನ್ನು ಸ್ವಸಹಾಯ ಪದ್ಧತಿಯಲ್ಲಿ ಕೊಂಡು ತಿಂದು ಪ್ಲೇಟುಗಳನ್ನು ವಾಪಸು ಇಡುವ ವಿಧಾನವೂ ಹಾಗೆಯೇ. ಆ ದೇಶಕ್ಕೆ ಅದು ಎಷ್ಟು ಅಪ್ರಸ್ತುತ ಎನ್ನುವುದು ಗೋಚರವಾಗುತ್ತಿತ್ತು. ಗುಡಿಸಿಲಿನಲ್ಲಿದ್ದು ಅರಬೆತ್ತಲೆ ಇದ್ದರೂ ಅವರ ಮುಖದಲ್ಲಿ ಸದಾ ಸಂತೋಷ ಇರುವಾಗ ಇಂತಹ ತಾರತಮ್ಯವನ್ನು ಮಧ್ಯದಲ್ಲಿ ತಂದಿಟ್ಟಾಗ ಅತೃಪ್ತಿ ತಲೆಯೆತ್ತುವುದು ಸಹಜ. ಈ ಸಂದರ್ಭದಲ್ಲಿ ಡಿ.ವಿ.ಜಿ.ಯವರ ಒಂದು ಕವನ ನೆನಪಿಗೆ ಬರುತ್ತದೆ.

ಗುಡಿಸಿಲೇನೊಣಹುಲ್ಲು ಕಡ್ಡಿ ಮಣ್ಣೆನ್ನುತಲಿ ಬಡವನಲಿ ಕೊರತೆಗಳ ನೆಡುವುದರಿದಲ್ಲ॥
ಕೆಡಿಸಿದಾ ಗುಡಿಸಿಲಿನ ನೆಮ್ಮದಿಯ ಮತ್ತೆಂತು ಕೊಡಲಹುದವಂಗೆ ನೀಂ – ಮಂಕುತಿಮ್ಮ॥

ಇಬೆಡಾನ್‌ನಿಂದ ಸಹರಾ ಮರುಭೂಮಿಯ ಮೇಲೆ ವಿಮಾನದಲ್ಲಿ ಬರುವಾಗ ಸಂಜೆ ಸೂರ್ಯ ಮುಗುಳುವ ಮುನ್ನ ಚಿನ್ನದ ರಾಶಿಯ ಮೇಲೆ ಹಾದು ಹೋದ ಹಾಗೆ ಭಾಸವಾಗುತ್ತದೆ. ಸಂಜೆಯ ಹೊಂಬಣ್ಣದ ಬಿಸಿಲು ಮರಗಿಡಗಳೇನಿಲ್ಲದ ಅಲೆಅಲೆಯ ಮರಳು ರಾಶಿಯ ಮೇಲೆಬಿದ್ದಾಗ ವರ್ಣಿಸಲಸಾಧ್ಯವಾದ ಚಿನ್ನದ ಬೆಳಕು ಸೂಸುತ್ತದೆ. ಅದರ ಆನಂದವನ್ನು ಅನುಭವಿಸಬೇಕೇ ಹೊರತು ವರ್ಣಿಸಲಾಗದು. ಆ ಸಮಯದಲ್ಲಿ ನನ್ನ ಸ್ಮರಣೆಗೆ ಬಂದ ಮತ್ತೊಂದು ರಮಣೀಯವಾದ ದೃಶ್ಯ, ಬೆಳಗಿನ ಜಾವ ಸೂರ್ಯ ಏರುತ್ತಿರುವಾಗ ಆಕಾಶ ನಿರ್ಮಲವಾಗಿದ್ದಾಗ, ಡೆಲ್ಲಿಯಿಂದ ಶ್ರೀನಗರಕ್ಕೆ ವಿಮಾನದಲ್ಲಿ ಹೋಗುವಾಗ, ಅಲೆ ಅಲೆಯಾದ ಬೆಟ್ಟ ಹಿಮದಿಂದ ಮುಚ್ಚಿದ ಹಿಮಾಲಯದ ದೃಶ್ಯ, ಮತ್ತು ಡೆಹರಾಡೂನ್‌ನಿಂದ ಕಾಣುವ ಬೆಳಗಿನ ಕಾಂಚನಗಂಗಾ ಪರ್ವತ – ಇವೆರಡೂ ನನ್ನ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿ ನಿಂತಿವೆ!

6 ಸಂಶೋಧನೆಯ ಕೊಡುಗೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಭಾರತದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳಂತೆ. ಬೋಧಕರ ಜವಾಬ್ದಾರಿ ಕೇವಲ ತರಗತಿಗಳಲ್ಲಿ ಪಾಠಮಾಡುವುದು ಒಂದೇ ಅಲ್ಲ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಗಳೆಲ್ಲದರಲ್ಲೂ ಭಾಗವಹಿಸುವ ಜವಾಬ್ದಾರಿ ಇದೆ. ಕೃ.ವಿ.ವಿ.ದ ಬೋಧಕರೆಲ್ಲರೂ ಸಕ್ರಿಯವಾಗಿ ಇವು ಮೂರರಲ್ಲೂ ತೊಡಗಿಸಿಕೊಳ್ಳುತ್ತಾರೆಂದು ಹೇಳುವುದು ಕಷ್ಟ. ಕನಿಷ್ಟ ಶೇಕಡ ಹತ್ತರಷ್ಟಾದರೂ ಬೋಧಕರು ಈ ತತ್ವಕ್ಕೆ ಬದ್ಧರಾಗಿದ್ದಾರೆ. ಅಮೆರಿಕಾದ ಲ್ಯಾಂಡ್‌ಗ್ರಾಂಟ್ ಕಾಲೇಜಿನ ಮಾದರಿಯ ಟ್ರೈಮೆಸ್ಟರ್ - ಸೆಮೆಸ್ಟರ್ ಪದ್ಧತಿಯ ಬೋಧನೆಯಲ್ಲಿ ಅವರವರ ವಿಷಯದಲ್ಲಿ ವಿದ್ಯಾರ್ಥಿಗಳನ್ನು ಮಾಪನ ಮಾಡಿ ಗ್ರೇಡು ಕೊಡುವುದು ಅವರವರಿಗೆ ಬಿಟ್ಟಿದ್ದು. ಆಗಾಗ ನಡೆಯುವ ಟೆಸ್ಟ್, ಕ್ವಿಜ್, ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳಿಗೆ ಹೇಗೆ ಬಿಡುವಿಲ್ಲದಿರುವುದೋ ಹಾಗೆ ಪ್ರಾಧ್ಯಾಪಕರುಗಳಿಗೂ ಕೂಡ ಬಿಡುವಿರುವುದಿಲ್ಲ. ಸದಾ ಕೋರ್ಸ್ ಕೊಡುವ ಉಪಾಧ್ಯಾಯರುಗಳಿಗೆ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಬಿಡುವು ಸಿಕ್ಕುವುದಿಲ್ಲ. ಆದರೂ ಒಬ್ಬ ಪ್ರಾಧ್ಯಾಪಕನ ಪ್ರಗತಿ ಅವನು ಎಷ್ಟು ವರುಷ ಎಷ್ಟು ಹುಡುಗರಿಗೆ ಪಾಠ ಹೇಳಿದ ಅನ್ನುವುದಕ್ಕಿಂತ, ಇಷ್ಟಿದ್ದರೂ ಎಷ್ಟು ರೀಸರ್ಚ್ ಪೇಪರ್ಸ್‌ಗಳನ್ನು ಪ್ರಕಟಿಸಿದ್ದಾನೆ, ಯಾವ ಜರ್ನಲ್‌ನಲ್ಲಿ ಪ್ರಕಟಿಸಿದ್ದಾನೆ, ಅದನ್ನು ಎಷ್ಟು ಜನ ರೆಫರ್ ಮಾಡಿರುತ್ತಾರೆ ಅನ್ನುವುದರ ಮೇಲೆ ನಿಂತಿರುತ್ತದೆ. ಮತ್ತೊಂದು ಮುಖ್ಯವಾದ ಅಂಶವೆಂದರೆ ಸಂಶೋಧನೆಯ ಫಲ ರೈತರಿಗೆ ಎಷ್ಟರ ಮಟ್ಟಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ, ಅನುಕೂಲವಾಗಿದೆ ಎಂದು. ಒಂದು ತಳಿ ಬಿಡುಗಡೆಯಾಗಬೇಕಾದರೆ ಅಥವ ತಾಂತ್ರಿಕತೆ ರೈತರಿಗೆ ಮುಟ್ಟಬೇಕಾದರೆ ಅದರ ಹಿಂದೆ ಹತ್ತಾರು ವಿಷಯಗಳ ತಜ್ಞರ ಶ್ರಮವಿರುತ್ತದೆ. ಆದ್ದರಿಂದ ನಿಗದಿತ ವೇಳೆಗಿಂತ ಹೆಚ್ಚು ಕಾಲ ಶ್ರಮವಹಿಸಲು ಸಿದ್ಧವಿರುವವನಿಗೆ ಮಾತ್ರ ಸಂಶೋಧನೆಯಲ್ಲಿ ತೊಡಗಲು ಸಾಧ್ಯ; ಮತ್ತು ವಿಜ್ಞಾನಕ್ಕೆ ಏನಾದರೂ ಕೊಡುಗೆ ಕೊಡಬಲ್ಲ.

ಕೃ.ವಿ.ವಿ. ಬೆಂಗಳೂರಿಗೆ ಎಪ್ಪತ್ತರ ದಶಕದಲ್ಲಿ ಒಂದು ಪ್ರತಿಷ್ಠಿತ ಯು.ಎನ್.ಡಿ.ಪಿ. ಪ್ರಾಜೆಕ್ಟ್ ದೊರೆಯಿತು. ಇದಕ್ಕೆ ಕೆ.ಸಿ. ನಾಯಕರ ಮತ್ತು ಡೀನ್ ರಂಗಸ್ವಾಮಿಯವರ ಕೊಡುಗೆ ಬಹಳ ಇತ್ತು. ಇದರ ಉದ್ದೇಶ ದೇಶದಲ್ಲೇ ಒಂದು ಅತ್ಯುನ್ನತ ಸಸ್ಯ ಸಂರಕ್ಷಣೆ ಕೇಂದ್ರವನ್ನು ಸ್ಥಾಪಿಸುವುದಾಗಿತ್ತು. ಎಂಟಮಾಲಾಜಿ, ಪ್ಲಾಂಟ್‌ಪೆತಾಲಜಿ, ಕೆಮಿಸ್ಟ್ರಿ ಮತ್ತು ವೀಡ್‌ಸೈನ್ಸ್ ವಿಭಾಗಗಳು ಇದರ ಕೇಂದ್ರ ಬಿಂದುವಾಗಿದ್ದವು. ಈ ಪ್ರಾಜೆಕ್ಟಿನ ಏಳು ವರುಷದ ಅವಧಿಯಲ್ಲಿ ಸುಮಾರು ಇಪ್ಪತ್ತೈದು ವಿಜ್ಞಾನಿಗಳು ಪ್ರಪಂಚದಾದ್ಯಂತ ಆರಿಸಿದ ಸಲಹೆಗಾರರು ವಾರದಿಂದ ಹಿಡಿದು ಕೆಲವು ತಿಂಗಳವರೆಗೆ ಇಲ್ಲಿಯೇ ಇದ್ದು ಆಯಾ ವಿಷಯದಲ್ಲಿ ಅಂತರರಾಷ್ಟ್ರೀಯ ಮಟ್ಟಕ್ಕೆ

ಹೋಲುವಂತಹ ಸಂಶೋಧನೆಯನ್ನು ಮಾಡಲು ಬೇಕಾದಂತಹ ಸಲಕರಣೆಗಳನ್ನು ನಿರೂಪಿಸಿ ಸಹಾಯ ಮಾಡಿದರು. ಈ ನಾಲ್ಕು ವಿಭಾಗಗಳಿಂದ ಸುಮಾರು ಇಪ್ಪತ್ತೈದು ತಾಂತ್ರಿಕ ತಜ್ಞರನ್ನು ಈ ಅವಧಿಯಲ್ಲಿ ಪ್ರಪಂಚದ ನಾನಾ ಕಡೆ ಹೆಚ್ಚಿನ ತರಬೇತಿಗಾಗಿ ಕಳುಹಿಸಲಾಗಿತ್ತು. ಈ ಯೋಜನೆಯ ಅಡಿಯಲ್ಲಿಯೆ ನಾನು ಕೂಡ ಅಮೆರಿಕಾ, ಇಂಗ್ಲೆಂಡ್, ನೈಜೀರಿಯಾ ದೇಶ ಗಳಿಗೆ ಹೋಗಿದ್ದೆ, ಇದರ ಉದ್ದೇಶ ಮಣ್ಣುಜೀವಿ ವಿಜ್ಞಾನ ವಿಭಾಗವನ್ನು ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಮಣ್ಣು ಜೀವಿಗಳನ್ನು ಜೀವಂತವಾಗಿ ಮಣ್ಣಿನಿಂದ ಬೇರ್ಪಡಿಸುವ ತಂತ್ರಗಳನ್ನು ಡಾ॥ ಸಿ.ಎ. ಎಡ್‌ವರ್ಡ್ಸ್‌ರವರು ಖುದ್ದಾಗಿ ತೆರೆಯುವುದಾಗಿತ್ತು. ಇಂಗ್ಲೆಂಡಿ ನಲ್ಲಿಯೇ ತಯಾರುಮಾಡಿಸಿ ತಂದು ಇಲ್ಲಿ ಜೋಡಿಸಿದ್ದರು. ಸಾಯಿಲ್ ಬಯಾಲಜಿ ಅಂಡ್ ಇಕಾಲಜಿಗೆ ಸಂಬಂಧಪಟ್ಟ ಎಲ್ಲಾ ಕೃತಿಗಳನ್ನು ಸಂಗ್ರಹಿಸಿ ಕೀಟಶಾಸ್ತ್ರ ವಿಭಾಗದ ಪುಸ್ತಕ ಭಂಡಾರಕ್ಕೆ ಸೇರಿಸಿದ್ದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಾಯಿಲ್ ಬಯಾಲಜಿ ಕೋರ್ಸನ್ನು ಕೊಡುವಲ್ಲಿ ಅನುವಾದರು.

ಮುಂದಿನ ಸಂಶೋಧನೆಯನ್ನು ರೂಪಿಸಬೇಕಾದರೆ ಅಲ್ಲಿಯ ತನಕ ದೇಶದಲ್ಲಿ ಆಗಿರುವ ಪ್ರಗತಿಯ ಪಕ್ಷಿ ನೋಟವನ್ನು ತಿಳಿಯಲು ಒಂದು ರಾಷ್ಟ್ರೀಯ ಮಟ್ಟದ ಸಮ್ಮೇಳನ (ಸಿಂಪೋಸಿಯಂ) ವನ್ನು 1976ರ ನವೆಂಬರ್ 22-26 ರಂದು ಕರೆಯಲಾಯಿತು. ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ದೇಶಾದ್ಯಂತ ತಜ್ಞರು ಹಾಜರಿದ್ದು ಪ್ರಬಂಧಗಳನ್ನು ಮಂಡಿಸಿದರು. ಮೊಟ್ಟಮೊದಲಿಗೆ ಕೃಷಿ ವಿಶ್ವ ವಿದ್ಯಾನಿಲಯಗಳು ಮತ್ತು ದೇಶದ ನಾನಾ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳು ಒಟ್ಟುಗೂಡಿ ಮಣ್ಣು ಜೀವಿಗಳ ಬಗ್ಗೆ ವಿಚಾರ ವಿನಿಮಯ ಮಾಡಿದರು. ಈ ಸಮ್ಮೇಳನದಲ್ಲಿ ಮಂಡಿಸಿದ್ದ ಪ್ರಬಂಧಗಳನ್ನೆಲ್ಲಾ ಎಡ್‌ವರ್ಡ್ಸ್ ಮತ್ತು ನಾನು ಸೇರಿ ಎಡಿಟ್ ಮಾಡಿದ ಪುಸ್ತಕ, ದೇಶದ ನಾನಾಭಾಗಗಳಲ್ಲಿ ಅಲ್ಲಿಯ ತನಕ ನಡೆದಿದ್ದ ಮತ್ತು ನಡೆಯುತ್ತಿದ್ದ ಸಂಶೋಧನೆಯ ಸುಳಿವು ಸಂಶೋಧಕರಿಗೆ ಒಂದೇ ಹೊತ್ತಿಗೆಯಲ್ಲಿ ಸಿಕ್ಕುವಂತಾಯಿತು. ಮುಂದೆ ಈ ವಿಭಾಗದಲ್ಲಿ ಹೆಚ್ಚು ಹೆಚ್ಚು ಸಂಶೋಧನೆಯ ಅಗತ್ಯವನ್ನು ಅರಿತು 'ಇಂಡಿಯನ್ ಸೊಸೈಟಿ ಆಫ್ ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ' ಎಂಬ ಸಂಘವನ್ನು ನನ್ನ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಯಿತು. ಈ ಸಂಘವು ಕೈಗೊಂಡ ಮೊದಲನೆ ಕರ್ತವ್ಯವೆಂದರೆ ಜರ್ನಲ್ ಆಫ್ ಸಾಯಿಲ್ ಬಯಾಲಜಿ ಮತ್ತು ಇಕಾಲಜಿ ಹೊರತಂದದ್ದು.

ಈ ವಿಭಾಗದ ಅಂಗವಾಗಿ "ಪೆಸ್ಟಿಸೈಡ್ ರೆಸಿಡ್ಯೂಸ್ ಇನ್ ದಿ ಎನ್‌ವೈರ್ನಮೆಂಟ್" ಎಂಬ ರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಕರೆದು ಅದರಲ್ಲಿ ಮಂಡಿಸಿದ್ದ ಪ್ರಬಂಧಗಳನ್ನು ಅಚ್ಚುಹಾಕಿಸಿ ಹೊರತರಲಾಯಿತು. ನಾಲ್ಕು ಜನರ ಎಡಿಟರ್‌ಗಳಲ್ಲಿ ನಾನೂ ಒಬ್ಬ. ಅಲ್ಲಿಯತನಕ ಅರಿವಾಗದಿದ್ದ ಪೆಸ್ಟಿಸೈಡ್ ರೆಸಿಡ್ಯೂವಿನ ಹಲವಾರು ಅಂಶಗಳು ಭಾರತ ಸರ್ಕಾರದ ಗಮನಕ್ಕೆ ಬರಲು ಈ ಪ್ರೊಸೀಡಿಂಗ್ಸ್ ಅನುಕೂಲವಾಯಿತು.

ಮುಂದಿನ ಹತ್ತು ವರ್ಷಗಳಲ್ಲಿ ಕೈಗೊಳ್ಳಬೇಕಾದ ಸಂಶೋಧನೆಯ ಗುರಿಯನ್ನು ಈ ವಿಭಾಗದಲ್ಲಿ ಕೈಗೆತ್ತಿಕೊಳ್ಳಲಾಯಿತು. ಸಾಯಿಲ್ ಮೈಕ್ರೊಬಯಾಲಜಿ ಬಗ್ಗೆ ಸಾಕಷ್ಟು ನುರಿತ ತಜ್ಞರಿದ್ದ ಮೈಕ್ರೋಬಯಾಲಜಿ ಡಿಪಾರ್ಟ್‌ಮೆಂಟ್ ಹಲವಾರು ಪ್ರಾಜೆಕ್ಟ್‌ಗಳನ್ನು ಕೈಗೆತ್ತುಕೊಂಡಿತು. ಆರ್ಗಾನಿಕ್ ಮ್ಯಾಟರ್ ಡಿಕಂಪೋಸಿಷನ್ (ಒ.ಎಮ್.ಡಿ. ಸ್ಕೀಮ್), ವಿ.ಎ.

ಮೈಕೋರೈಜಾ ಸ್ಕೀಮ್, ಬಯೋಫರ್ಟಿಲೈಜರ್ ಸ್ಕೀಮ್ ಹೀಗೆ ಹಲವಾರು ಪ್ರಾಜೆಕ್ಟ್‌ಗಳ ಮುಖಾಂತರ ಮಣ್ಣು ಜೀವಿ ವಿಜ್ಞಾನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನ ಸೆಳೆಯಿತು. ಜುಯಾಲಜಿ ಡಿಪಾರ್ಟ್‌ಮೆಂಟ್ ವರ್ಮಿಕಾಂಪೋಸ್ಟ್ ಬಗ್ಗೆ ಸಂಶೋಧನೆ ನಡೆಸಿ ಸಾಕಷ್ಟು ಮಾಹಿತಿ ಸಂಗ್ರಹಿಸಿ ತಾಂತ್ರಿಕತೆಯನ್ನು ಸಾರ್ವಜನಿಕರಿಗೆ ನೀಡುವಲ್ಲಿ ಸಫಲವಾಯಿತು. ಇಂದು ಹಲವಾರು ಖಾಸಗೀ ಉದ್ಯಮಿಗಳು ವರ್ಮಿಕಾಂಪೋಸ್ಟನ್ನು ಕಮರ್ಷಿಯಲ್ಲಾಗಿ ಮಾಡುತ್ತಿದ್ದರೆ ಬೆಂಗಳೂರಿನ ಕೃ.ವಿ.ವಿದ್ಯಾನಿಲಯದ ಕೊಡುಗೆ ಮಹತ್ವವಾದದ್ದು. ಉಳಿದ ಮಣ್ಣು ಜೀವಿಗಳೆಂದರೆ ಆರ್‌ತ್ರೊಪೋಡ್ ಗುಂಪಿಗೆ ಸೇರಿದ ಸಾಯಿಲ್ ಮೈಟ್ಸ್ ಬಹು ಸಂಖ್ಯೆಯಲ್ಲಿದ್ದರೂ ಅವುಗಳ ಬಗ್ಗೆ ಪ್ರತ್ಯೇಕ ಸಂಶೋಧನೆ ತೆಗೆದುಕೊಂಡಿಲ್ಲ. ಆದರೂ ಕೃ.ವಿ.ವಿದ್ಯಾನಿಲಯ, ಬೆಂಗಳೂರಿನಲ್ಲಿ ಡಾ॥ ಚನ್ನಬಸವಣ್ಣನವರ ನೇತೃತ್ವದಲ್ಲಿ ನಡೆದ ಪ್ಲಾಂಟ್ ಪ್ಯಾರಸೈಟಿಕ್ ಮೈಟ್ (ನುಸಿ ಶಾಸ್ತ್ರದ) ಸಂಶೋಧನೆ ಅಂತರ ರಾಷ್ಟ್ರೀಯ ಮಟ್ಟದ್ದಾಗಿದ್ದು ದೇಶದಲ್ಲೇ ಈ ದಿಸೆಯಲ್ಲಿ ಕೃ.ವಿ.ವಿ. ಮುಂಚೂಣಿಯಲ್ಲಿದೆ. ಈ ವಿಭಾಗ ಸಾಯಿಲ್ ಮೈಟ್ಸ್ ಬಗ್ಗೆಯೂ ಸಾಕಷ್ಟು ಮಾಹಿತಿ ಹೊಂದಿದೆ. ಇನ್ನುಳಿದ ಕೊಲಂಬೋಲ, ಪ್ರೊಟುರ, ಡಿಪ್ಲೂರ, ಸಿಂಫೈಲ ಮುಂತಾದವು ಮಣ್ಣಿನ ಆರೋಗ್ಯ ಪ್ರತಿಬಿಂಬಿಸುವ ಕುರುಹುಗಳು, ಅವುಗಳ ಬಗ್ಗೆ ಪ್ರತ್ಯೇಕ ಸಂಶೋಧನೆಯನ್ನು ಇನ್ನೂ ತೆಗೆದುಕೊಂಡಿಲ್ಲ.

ಆರ್‌ತ್ರೊಪೋಡಿನ ಶೇಕಡ ಎಂಭತ್ತರಷ್ಟಿರುವ ಕೀಟಗಳಲ್ಲಿ ಹಲವಾರು ಮಣ್ಣನ್ನು ಆಶ್ರಯಿಸಿ ಜೀವಿಸುವಂತಹವು ಇವೆ. ಅವುಗಳಲ್ಲಿ ಮುಖ್ಯವಾಗಿ ಬೇರುತಿನ್ನುವ ಹುಳ (ವೈಟ್ ಗ್ರಬ್ಸ್), ಗೆದ್ದಲು, ಇರುವೆ ನಮ್ಮ ದೇಶದಲ್ಲಿ ಬೆಳೆಗಳಿಗೆ ಹಾನಿ ಮಾಡುವಂತಹವು ಮತ್ತು ಅವುಗಳ ಹತೋಟಿಯೂ ಕೂಡ ಕಠಿಣವಾದದ್ದು. ಇವುಗಳ ಬಗ್ಗೆ ಚಿಂತನೆ ಹರಿಸುವುದು ಅಗತ್ಯವೆಂದು ಅರಿವಾಯಿತು. ಬೇರು ತಿನ್ನುವ ವೈಟ್‌ಗ್ರಬ್ಬಿನ ಬಗ್ಗೆ ನಡೆದ ಸಂಶೋಧನೆಯನ್ನು ಈ ಹಿಂದೆಯೆ ವಿವರಿಸಲಾಗಿದೆ. 'ಸ್ಟಡೀಸ್ ಆನ್ ರೂಟ್‌ಗ್ರಬ್ಸ್ ಇನ್ ಕರ್ನಾಟಕ' (ಯು.ಎ.ಎಸ್. ಮಾನೋಗ್ರಾಫ್ ಸೀರೀಸ್ ನಂ. 2) ಎಂಬ ಒಂದು ಮಾನೋಗ್ರಾಫನ್ನು ಪ್ರಕಟಿಸಿದ್ದೇನೆ. ಮುಂದಿನ ಹತ್ತು ವರುಷಗಳಲ್ಲಿ ಈ ವಿಷಯದಲ್ಲಿ ಹತ್ತು ಎಂ.ಎಸ್‌ಸಿ. ಮತ್ತು ಪಿಹೆಚ್.ಡಿ. ರೀಸರ್ಚ್ ಥೀಸೀಸ್‌ಗಳು ನನ್ನ ನಿರ್ದೇಶನದಲ್ಲಿ ಹೊರಬಂದವಲ್ಲದೆ, ಐ.ಸಿ.ಎ.ಆರ್. ಧನ ಸಹಾಯದಿಂದ ಮೂರು ಪ್ರಾಜೆಕ್ಟ್ಸ್ ಕೂಡ ಪೂರ್ಣಗೊಂಡವು. ಭಾರತದಲ್ಲೆಲ್ಲ ದೊರೆಯುವ ನೂರಾರು ಜಾತಿಯ ಬೇರು ತಿನ್ನುವ ಹುಳದ ಸಮಗ್ರ ಮಾಹಿತಿ ಯನ್ನು ಸಂಗ್ರಹಿಸಿದುದರ ಜೊತೆಗೆ, ಇಲ್ಲಿಯೆ ಮಾಡಿದ ಸುಮಾರು ಮೂರು ದಶಕಗಳ ನನ್ನ ಮತ್ತು ನನ್ನ ವಿದ್ಯಾರ್ಥಿಗಳ ಸಂಶೋಧನೆ ಫಲಿತಾಂಶ ಸಾಕಷ್ಟಿದೆ. ಇದೆಲ್ಲವನ್ನು ಒಟ್ಟುಗೂಡಿಸಿ ಒಂದು ಸಮಗ್ರ ಪಬ್ಲಿಕೇಶನ್ನನ್ನು ಹೊರತರುವ ನನ್ನ ಆಸೆ ಇನ್ನೂ ಕೈಗೂಡಲಿಲ್ಲ, ಕಾರಣ ದಿನ ಕಳೆದಂತೆ ಇತರೆ ಕೆಲಸಗಳ ಜವಾಬ್ದಾರಿ ಮೇಲಿಂದ ಮೇಲೆ ಬರಲು ಪ್ರಾರಂಭಿಸಿದವು. ಪ್ರೊಫೆಸರ್ ಹುದ್ದೆಯನ್ನು ಬಿಟ್ಟರೆ ಮತ್ತೆ ಯಾವ ಹುದ್ದೆಗೂ ಅರ್ಜಿಹಾಕಿ ಅಪೇಕ್ಷೆಪಟ್ಟು ಪಡೆದವನಲ್ಲ. ಆದರೂ ಸೀನಿಯಾರಿಟಿ ಮೇಲೆ ನಿಮ್ಮನ್ನು ಇಂತಹ ಹುದ್ದೆಗೆ ಇನ್ ಛಾರ್ಜ್ ಆಗಿ ನೇಮಿಸಲಾಗಿದೆ, ಈಗಿರುವ ಹುದ್ದೆಯ ಜೊತೆಗೆ ಇದನ್ನು ಮಾಡಬೇಕೆಂದು ವಿಶ್ವವಿದ್ಯಾನಿಲಯದಿಂದ ಆರ್ಡರ್ ಬರುತ್ತಿತ್ತು. ಸಾವಿರದ ಒಂಭೈನೂರ ಎಂಭತ್ತಾರರ ನಂತರ ಇಲಾಖೆಯ ಮುಖ್ಯಸ್ಥನಾಗಿ; ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ ಆಗಿ (1988-93); ಹತ್ತು

ಡಿಪಾರ್ಟ್‌ಮೆಂಟ್ ಇದ್ದ ಪ್ಲಾಂಟ್ ಮತ್ತು ಸಾಯಿಲ್ ಸೈನ್ಸ್ ಡಿವಿಜನ್ನಿನ ಮುಖ್ಯಸ್ಥನಾಗಿ (1986-94); ಡೀನ್ ಆಗಿ, ಹೊಸ ಕಾಲೇಜುಗಳ ಸ್ಥಾಪನೆಯ ಸ್ಪೆಶಲ್ ಆಫೀಸರ್ ಆಗಿ (1988-94) ಕಾರ್ಯನಿರ್ವಹಿಸಬೇಕಾಗಿ ಬಂತು. ಇಷ್ಟೆಲ್ಲಾ ಜವಾಬ್ದಾರಿ ಇದ್ದರೂ ಕೂಡ ಸಂಶೋಧನೆಯ ಸಂಪರ್ಕವನ್ನು ಕಳೆದುಕೊಳ್ಳಲಿಲ್ಲ. ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗಲೂ ಕೂಡ ನಾಲ್ಕು ವಿದ್ಯಾರ್ಥಿಗಳು ನನ್ನ ಮಾರ್ಗದರ್ಶನದಲ್ಲಿ ಪಿಹೆಚ್.ಡಿ.ಯನ್ನು ಪೂರೈಸಿದರು. ನನಗೆ ತಿಳಿದಿರುವಂತೆ ಹೀಗೆ ಬೇರಾವ ಕುಲಪತಿಗಳು ಈ ಕೆಲಸವನ್ನು ಮಾಡಿದಂತೆ ಗಮನಿಸಿಲ್ಲ. ಸಂಶೋಧನೆಯ ಗೀಳು ಇದ್ದವನಿಗೆ ಎಷ್ಟೇ ಒತ್ತಡ ಇದ್ದರೂ ಮನಸ್ಸು ಅತ್ತಕಡೆ ಎಳೆಯುತ್ತಲೇ ಇರುತ್ತದೆ. ನಾನು 1994 ರಲ್ಲಿ ನಿವೃತ್ತನಾದ ಮೇಲೆಯೂ ಎಂದಿನಂತೆ ಡಿಪಾರ್ಟ್‌ಮೆಂಟಿಗೆ ಹೋಗುತ್ತಿದ್ದೆ. ಎಮರೈಟಸ್ ಸೈಂಟಿಸ್ಟ್ ಆದನಂತರ ವೈಟ್‌ಗ್ರಬ್ಸ್ ಮೇಲೆ ಪುಸ್ತಕ ಬರೆಯುವ ಆಲೋಚನೆಯಿಂದ ಆ ಪ್ರಾಜೆಕ್ಟ್‌ನಲ್ಲಿ ಕೆಲಸಮಾಡುತ್ತಿದ್ದ ನನ್ನ ಕಿರಿಯ ಗೆಳೆಯರನ್ನು ಮನವೊಲಿಸಿ ವಿಷಯ ಸಂಗ್ರಹಿಸುವಷ್ಟರಲ್ಲೇ ಕುಲಪತಿ ಸ್ಥಾನಕ್ಕೆ ಆಯ್ಕೆಯಾಯಿತು. ಮತ್ತೆ ಅದನ್ನು ಯೋಚಿಸುವಷ್ಟು ಸಮಯ ದೊರೆಯಲಿಲ್ಲ. ಇಂತಹ ಸಂಶೋಧನೆಯ ಪಬ್ಲಿಕೇಶನ್ ಇಲ್ಲದಿದ್ದಾಗ ಹತ್ತಾರು ವರುಷಗಳು ಕಳೆದ ನಂತರ ಮುಂದಿನ ಪೀಳಿಗೆಗೆ ಹಿಂದೆ ಮಾಡಿದ್ದೆಲ್ಲ ಮತ್ತೊಮ್ಮೆ ಹೊಸದಾಗಿ ಕಾಣಬಹುದು.

ಬೇರು ತಿನ್ನುವ ಹುಳದ ಸಂಶೋಧನೆಯಿಂದ ರೈತರಿಗಾದ ಉಪಯೋಗವೇನೆಂದು ಕೇಳಬಹುದು. ನನ್ನ ಈ ಸಂಶೋಧನೆಯ ಫಲ ದೇಶದಾದ್ಯಂತ ಬೇರು ಹುಳುವಿನ ಬಾಧೆಯನ್ನು ತಡೆಯುವ ಸುಲಭದ ವಿಧಾನಗಳನ್ನು ರೈತರಿಗೆ ಮನವರಿಕೆ ಮಾಡಿಕೊಡುವಲ್ಲಿ ಸಹಾಯವಾಯಿತು. ಕರ್ನಾಟಕದಲ್ಲೇ ಅಲ್ಲದೆ, ಮಹಾರಾಷ್ಟ್ರ ರಾಜಸ್ಥಾನಗಳಲ್ಲಿ ಬೇರುಹುಳುವಿನ ಬಾಧೆಯನ್ನು ತಡೆಗಟ್ಟಲು ಅನುಕೂಲವಾಯಿತು.

ಕರ್ನಾಟಕದಲ್ಲಿ ಮಲೆನಾಡಿನ ಅಡಿಕೆ ತೋಟಗಳಲ್ಲಿ ಸದಾ ಬಾಧಿಸುತ್ತಿದ್ದ ಬೇರು ಹುಳುವಿನ ಕಾಟ ಮತ್ತು ಕಾಫಿ ತೋಟಗಳಲ್ಲಿ ಬರುವ ಬೇರು ಹುಳುಗಳ ಕಾಟ ಕಡಿಮೆಯಾಗಲು ಸಹಾಯವಾದದ್ದು ನಾವು ಮಾಡಿದ ಸಂಶೋಧನೆಯಿಂದ.

ಗೆದ್ದಲು ಸಂಖ್ಯೆಯಲ್ಲಿ ಮತ್ತು ಒಟ್ಟು ತೂಕದಲ್ಲಿ ಮಣ್ಣಿನಲ್ಲಿರುವ ಮಿಕ್ಕೆಲ್ಲ ಜೀವಿಗಳಿಗಿಂತ ಹೆಚ್ಚು. ಗೆದ್ದಲು ಮತ್ತು ಜಿರಲೆ ಒಂದೇ ಸಂತತಿಯವು. ಆಸ್ಟ್ರೇಲಿಯ, ಆಫ್ರಿಕ, ಇಂಡಿಯಾದಲ್ಲಿ ಕೆಲವು ಪ್ರದೇಶಗಳಲ್ಲಿ ಹೆಕ್ಟೇರಿಗೆ ಇನ್ನೂರೈವತ್ತಕ್ಕೂ ಹೆಚ್ಚು ಗೆದ್ದಲು ಗೂಡು ಇರುವುದು ತಿಳಿದಿದೆ. ಭೂಮಿಯ ಮೇಲೆ ಹುತ್ತ ಕಟ್ಟುವಂತಹವು ಒಂದು ಬಗೆ ಆದರೆ ಭೂಮಿಯ ಒಳಗೆ ಗೂಡುಕಟ್ಟಿ, ಕೇವಲ ಆಹಾರ ಅನ್ವೇಷಣೆಗೆ ಮೇಲೆ ಬರುವಂತಹವು ಅನೇಕ. ಇವಲ್ಲದೆ ಕೆಳಗಿಂದ ಮಣ್ಣನ್ನು ಮೇಲೆ ತಂದು ಮರದ ಮೇಲೆ ಮಣ್ಣಿನ ಗೂಡು ಮಾಡಿ ವಾಸಿಸುವವು ಮತ್ತೆ ಕೆಲವು. ಇಂದು ಹಲವಾರು ಜನ ಅಥವಾ ಸಂಸ್ಥೆಗಳು ಗೆದ್ದಲನ್ನು ಹತೋಟಿ ಮಾಡುವ ಉದ್ಯಮೆಯಲ್ಲಿ ತೊಡಗಿದ್ದಾರೆ. ನಿಜ ಹೇಳಬೇಕೆಂದರೆ ಗೆದ್ದಲಿನ ರಾಣಿಹುಳ ಕೊಲ್ಲದೆ ಗೆದ್ದಲಿನ ಪೂರ್ಣ ಹತೋಟಿ ಸಾಧ್ಯವಿಲ್ಲ. ತಾತ್ಕಾಲಿಕವಾಗಿ ಗೆದ್ದಲು ಬರದ ಹಾಗೆ ಮಾಡಬಹುದೇ ಹೊರತು ಮುಂದೆಂದೂ ಬರದ ಹಾಗೆ ಮಾಡಲಾಗುವುದಿಲ್ಲ. ಎಷ್ಟೋ ಬಾರಿ ಬಹು ಅಂತಸ್ಥಿನ ಮನೆಗಳಲ್ಲಿ ಹತ್ತನೆ ಮಹಡಿಯಲ್ಲಿ ಗೆದ್ದಲು ತಿನ್ನುತ್ತಿರುತ್ತದೆ. ಆದರೆ ಕೆಳಗಿನವರಿಗೆ ಅಥವಾ ಮೇಲಿನವರಿಗೆ ಏನೂ

ತೊಂದರೆ ಇರುವುದಿಲ್ಲ. ಉದಾಹರಣೆಗೆ ನನ್ನ ಮನೆಯಲ್ಲಿ ವಿದ್ಯುತ್ ಮೀಟರ್‌ಬೋರ್ಡ್‌ನ್ನು ನನ್ನ ಅರಿವಿಲ್ಲದೆ ಪೂರ್ಣ ತಿಂದು ಹಾಕಿತ್ತು. ಸುತ್ತಮುತ್ತ ಗೆದ್ದಲಿನ ಅರಿವೆ ಇಲ್ಲದಿರುವಾಗ ಹೀಗೇಕೆ ಆಯಿತೆಂದು ಪರೀಕ್ಷೆ ಮಾಡಿದಾಗ ನಮ್ಮ ಮನೆಯಿಂದ ಅರವತ್ತು ಅಡಿ ರಸ್ತೆ ಆಚೆ ಇರುವ ಎಲೆಕ್ಟ್ರಿಕ್ ಕಂಬದಿಂದ ಭೂಮಿಯೊಳಗಿನಿಂದ ತಂದ ಕೇಬಲ್ ಮುಖಾಂತರ ಬಂದು ಮೀಟರ್ ಬೋರ್ಡ್‌ನ್ನು ತಿಂದಿತ್ತು. ಕಣ್ಣಿಲ್ಲದ ಗೆದ್ದಲಿಗೆ ಇದರ ಅನ್ವೇಷಣೆ ಹೇಗಾಯಿತು? ಅದರ ಗೂಡು ಎಲ್ಲಿದೆ. ಪರಿಸರದಲ್ಲಿ ಸಾಕಷ್ಟು ಆಹಾರ ಇರಲಿಲ್ಲವೇ? ಆ ಕಂಬದ ಹತ್ತಿರವಿದ್ದ ಪಕ್ಕದ ಮನೆಯ ಮೀಟರ್ ಬೋರ್ಡಿಗೇಕೆ ಹೋಗಲಿಲ್ಲ? ಈ ಪ್ರಶ್ನೆಗಳಿಗೆಲ್ಲ ಇಂದಿಗೂ ಉತ್ತರ ದೊರೆತಿಲ್ಲ. ನಾನು ಚಿಕ್ಕವನಾಗಿರುವಾಗ ನೋಡಿದ ಮತ್ತೊಂದು ಪ್ರಸಂಗ, ಮುಂಗಾರು ಮಳೆಗೆ ಮುಂಚೆ ಮಲೆನಾಡಿನಲ್ಲಿ ತರಾತುರಿಯಾಗಿ ಕೂರಿಗೆಯಿಂದ ಗದ್ದೆ ಬಿತ್ತುವ ವಾಡಿಕೆಯಲ್ಲಿತ್ತು. ಅಂದು ಆರಂಭಸ್ಥರಿಗೆ ಶ್ರಮದ ದಿನ. ಊಟವಾದ ನಂತರ ವಿಶ್ರಾಂತಿಗಾಗಿ ಮರದ ನೆರಳಲ್ಲಿ ಮಲಗಿದ್ದವರೊಬ್ಬರ ಶರಟನ್ನು ಅವರು ಏಳುವುದರೊಳಗೆ ಶರಟಿನ ಬೆನ್ನು ಭಾಗವನ್ನು ಪೂರ್ತಿ ಗೆದ್ದಲು ತಿಂದಿತ್ತು. ಹೆಬ್ಬಾಳ ಫಾರಂ ಮನೆಯಲ್ಲಿದ್ದಾಗ ಕಪಾಟಿನಲ್ಲಿಟ್ಟಿದ್ದ ಎಂಟು ಹಾರ್ಡ್‌ಬೈಂಡ್ "ಕಂಪ್ಲೀಟ್ ವರ್ಕ್ಸ್ ಆಫ್ ವಿವೇಕಾನಂದ" ಪುಸ್ತಕಗಳನ್ನು ಆರು ತಿಂಗಳಲ್ಲಿ ಅರ್ಧ ಜೀರ್ಣಿಸಿದ್ದದ್ದು ಮನೆ ಬದಲಾಯಿಸುವಾಗ ತೆಗೆದಾಗಲೆ ಗೊತ್ತಾಗಿದ್ದು. ಮನೆಯಲ್ಲಿ ಮತ್ತೆಲ್ಲೂ ಇವುಗಳ ಸುಳಿವು ನಾವಿರುವವರೆಗೆ ತಿಳಿದಿರಲಿಲ್ಲ. ಇಂದು ಬಹುತೇಕ ಜನರು ಗೆದ್ದಲಿನ ಹತೋಟಿಯ ಹೆಸರಿನಲ್ಲಿ ಜೀವನ ನಡೆಸುತ್ತಿರುವುದು ಗೆದ್ದಲಿನ ಜಾಡು ಅದಕ್ಕೆ ಬಿಟ್ಟು ಮತ್ತಾರಿಗೂ ತಿಳಿಯದಿದ್ದರಿಂದ.

ನಾನು ನೈಜೀರಿಯಾದಲ್ಲಿ ಗೆದ್ದಲಿನ ಸಂಶೋಧನೆಯನ್ನು ನೋಡಿ ಬಂದಾದ ಮೇಲೆ ಸಾಯಿಲ್ ಬಯಾಲಜಿ ಸೆಕ್ಷನ್ನಲ್ಲಿ ಗೆದ್ದಲಿನ ಬಗ್ಗೆ ಅಧ್ಯಯನ ಪ್ರಾರಂಭಿಸಿದ್ದು. ನನ್ನ ಮೊದಲ ಪಿಹೆಚ್.ಡಿ. ವಿದ್ಯಾರ್ಥಿಗಳಲ್ಲೊಬ್ಬರಾದ ಡಿ. ರಾಜಗೋಪಾಲ್ ಸಾಕಷ್ಟು ಪರಿಶ್ರಮವಹಿಸಿ, ಸಂಶೋಧನೆ ಮಾಡಿ, ಅಪಾರ ಮಾಹಿತಿ ಸಂಗ್ರಹಿಸಿ ಒಂದು ಅತ್ಯುತ್ತಮವಾದ ಥೀಸೀಸ್ ಬರೆದರು. ಈ ಥೀಸೀಸ್‌ಗೆ ಜವಾಹರ್‌ಲಾಲ್ ನೆಹರೂ ಪ್ರಶಸ್ತಿ ಕೂಡ ಬಂತು. ಮುಂದೆ ನಾಲ್ಕಾರು ವಿದ್ಯಾರ್ಥಿಗಳು ನನ್ನ ಮಾರ್ಗದರ್ಶನದಲ್ಲಿ ಎಂ.ಎಸ್‌ಸಿ, ಪಿಹೆಚ್.ಡಿ., ಥೀಸೀಸ್‌ಗೆ ವಿವಿಧ ಬಗೆಯ ಗೆದ್ದಲಿನ ಸಂಶೋಧನೆಯನ್ನು ಕೈಗೊಂಡರು. ಇದರ ಜೊತೆಗೆ ಎರಡು ಐ.ಸಿ.ಎ.ಆರ್. ಪ್ರಾಜೆಕ್ಟ್‌ಗಳು ನನ್ನ ನೇತೃತ್ವದಲ್ಲಿ ನಡೆದವು. ಒಂದನೆಯದು ಪರಿಸರದಲ್ಲಿ ಗೆದ್ದಲಿನ ಪಾತ್ರ ಏನು ಎಂದು. ಎರಡನೆಯದು ಮಣ್ಣಿನ ಫಲವತ್ತತೆಗೆ ಗೆದ್ದಲಿನ ಪಾತ್ರವೇನು ಎಂದು. ಹಲವಾರು ನನ್ನ ವಿದ್ಯಾರ್ಥಿಗಳು ಮಾಡಿದ ಸಂಶೋಧನೆ ಮತ್ತು ಈ ಎರಡು ಪ್ರಾಜೆಕ್ಟ್‌ಗಳ ಫಲಿತಾಂಶ ಗೆದ್ದಲಿನ ಮೇಲೆ ಸುಮಾರು ಹತ್ತು ವರುಷಗಳಲ್ಲಿ ಸಾಧಿಸಿದ ಶ್ರಮ, ರಾಷ್ಟ್ರ ಮತ್ತು ಅಂತರರಾಷ್ಟ್ರದ ಮಟ್ಟದಲ್ಲಿ ಬೆಂಗಳೂರು ಕೃ.ವಿ.ವಿ. ಗೆದ್ದಲಿನ ಸಂಶೋಧನೆಗೆ ಒಂದು ಅಗ್ರಸ್ಥಾನವನ್ನು ಗಳಿಸಿಕೊಂಡಿತು.

ಇಂಗ್ಲೆಂಡಿನ ಡಾ॥ ಟಿ. ಜಿ. ವುಡ್ ಗೆದ್ದಲಿನ ಸಂಶೋಧನೆಯ ಎಕ್ಸ್‌ಪರ್ಟ್ ಸಲಹೆಗಾರರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಕೈಗೊಂಡ ಕೆಲವು ಸಂಶೋಧನೆಗಳ ಫಲಿತಾಂಶ ಬೇಗ ರೈತರಿಗೆ ಮುಟ್ಟುವಂತಾದವು. ಅರಣ್ಯ ಇಲಾಖೆಯವರು ಪ್ರತಿ ವರುಷ ನೂರಾರು ಎಕರೆ

ನೀಲಗಿರಿ ಸಸಿಗಳನ್ನು ನೆಡುತ್ತಿದ್ದರು. ಕೆಲವು ಪ್ರದೇಶದಲ್ಲಿ ಶೇಕಡ ಐವತ್ತಕ್ಕೂ ಹೆಚ್ಚು ಒಂದೆರೆಡು ವರುಷದ ಗಿಡ ಗೆದ್ದಲಿನ ಬಾಧೆಯಿಂದ ಸಾಯುತಿದ್ದವು. ಅದೃಷ್ಟವಶಾತ್ ಗೆದ್ದಲು ಬೆಳೆಯುತ್ತಿರುವ ಹಸಿರು ಗಿಡಗಳನ್ನು ತಿನ್ನುವುದು ಕಡಿಮೆ. ಆದರೆ ಸಣ್ಣ ನೀಲಗಿರಿ ಗಿಡಗಳಿಗೆ ಮಾತ್ರ ಮಾರಕವಾಗಿ ಪರಿಣಮಿಸುತ್ತವೆ. ಭೂಮಿಗೆ ಸಮಾನವಾಗಿ ಗಿಡದ ಸುತ್ತಲೂ ಉಂಗುರಾಕಾರಕ್ಕೆ ತೊಗಟೆಯನ್ನು ತಿನ್ನುತ್ತಿದ್ದರಿಂದ ಗಿಡ ಸತ್ತು ಹೋಗುತ್ತಿದ್ದವು. ಅರಣ್ಯ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಕೆ. ಟಿ. ಕೃಷ್ಣಪ್ಪನವರ ಸಹಾಯದಿಂದ ನಮ್ಮ ಸಲಹೆಯನ್ನು ಅನುಷ್ಠಾನಕ್ಕೆ ತಂದು ನೀಲಗಿರಿ ಗಿಡಗಳಿಗೆ ಗೆದ್ದಲಿನಿಂದ ಬರುತ್ತಿದ್ದ ತೊಂದರೆಯನ್ನು ನಿಭಾಯಿಸಿದಂತಾಯಿತು.

ಗೆದ್ದಲು ಏನೇ ತಿಂದರೂ ತಿನ್ನುವ ಪದಾರ್ಥವನ್ನು ಮೊದಲು ಮಣ್ಣಿನ ಕವಚದಿಂದ ಮುಚ್ಚಿ ನಂತರ ತಿನ್ನಲು ಪ್ರಾರಂಭಿಸುತ್ತದೆ. ಹೊಲಗದ್ದೆಗಳಲ್ಲಿ ಗೊಬ್ಬರ, ಕಸ, ಕಡ್ಡಿಗಳಿಗೆ ಗೆದ್ದಲು ಮಹಾ ಶತ್ರು. ಇದರ ಅರಿವು ನಮ್ಮ ರೈತರಿಗಿಲ್ಲ. ಎಲ್ಲವನ್ನು ಮಣ್ಣಿನಿಂದ ಮುಚ್ಚಿ ತಿನ್ನುವುದರಿಂದ ಗೊಬ್ಬರವೆಲ್ಲ ಭೂಮಿಯೊಳಗೆ ಸೇರಿದೆ ಎಂದು ತಿಳಿಯುತ್ತಾರೆ. ಸರಿಯಾಗಿ ಕೊಳೆತ ಗೊಬ್ಬರವನ್ನು ಗೆದ್ದಲು ತಿನ್ನುವುದಿಲ್ಲ. ಆದುದರಿಂದ ವೈಜ್ಞಾನಿಕವಾಗಿ ಮಾಡಿದ ಕಾಂಪೋಸ್ಟ್, ಪೌಷ್ಟಿಕಾಂಶದಲ್ಲಿ ಕೊಟ್ಟಿಗೆ ಗೊಬ್ಬರಕ್ಕಿಂತ ಎರಡು ಮೂರು ಪಟ್ಟು ಹೆಚ್ಚಾಗಿರುವುದರ ಜೊತೆಗೆ ಗೆದ್ದಲಿನ ಹಾವಳಿಯಿಂದಲೂ ಪಾರಾಗುತ್ತದೆ. ಒಮ್ಮೆ ಹೊಸಕೋಟೆ ಬಳಿ ಗಟ್ಟಿಪುರ ಅರಣ್ಯದಲ್ಲಿ ಗೆದ್ದಲಿನ ಮೇಲೆ ಪ್ರಯೋಗಗಳು ನಡೆಯುತ್ತಿರುವ ಸಂದರ್ಭದಲ್ಲಿ ಒಂದು ಗಾಡಿ ದನದ ಗೊಬ್ಬರವನ್ನು ಒಂದು ತಾಕಿನಲ್ಲಿ ಹಾಕುವ ಯೋಜನೆ ಇತ್ತು. ಅಂದು ಮಳೆಯ ಕಾರಣ ಈ ಗೊಬ್ಬರವನ್ನು ತಾಕಿನಲ್ಲಿ ಹಾಕಲಾಗಲಿಲ್ಲ. ಒಂದು ಕಡೆ ಗುಡ್ಡೆ ಮಾಡಿ ಮೂರು ವಾರಗಳ ನಂತರ ಹೋಗಿ ಇದನ್ನು ತಾಕುಗಳಲ್ಲಿ ಹಾಕಲು ಅಗೆದಾಗ ಗೊಬ್ಬರವೆಲ್ಲ ಮಣ್ಣಾಗಿತ್ತು. ಇದ್ದ ಗೊಬ್ಬರವನ್ನೆಲ್ಲ ಗೆದ್ದಲು ಹೊತ್ತುಕೊಂಡು ಹೋಗಿದ್ದವು. ಬೇರೆ ಕೀಟಗಳು ಬೆಳೆ ನಾಶಪಡಿಸಿದರೆ ಕೊನೆಯ ಪಕ್ಷ ಅವುಗಳ ಹಿಕ್ಕೆ ಭೂಮಿಗೆ ಗೊಬ್ಬರವಾಗುತ್ತದೆ. ಆದರೆ ಗೆದ್ದಲು ತಿಂದರೆ ತನ್ನ ಹಿಕ್ಕೆಯನ್ನು ಕೂಡ ಅದರ ಗೂಡಿಗೆ ಒಯ್ಯುತ್ತದೆ. ಗೊಬ್ಬರ ಅದರ ಆಹಾರ ಒಂದೇ ಅಲ್ಲ, ಗೂಡಿನಲ್ಲಿ ತನ್ನ ಸಂತತಿಗೆ ಆಹಾರವಾಗಿ ಬೆಳೆಯುವ ಅಣಬೆಗೆ ಆಹಾರವೂ ಹೌದು.

ರಾಗಿಯ ಹೊಲದಲ್ಲಿ ಕೊಯ್ಲು ಆದನಂತರ ಉಳಿಯುವ ಕೂಳೆ ಎಕರೆಗೆ ಸುಮಾರು ಒಂದೂವರೆ ಟನ್‌ನಷ್ಟಿರುತ್ತದೆ. ತೇವಾಂಶ ಇರುವಾಗಲೇ ಇದನ್ನು ಉತ್ತು ಮಣ್ಣಿನೊಳಗೆ ಸೇರಿಸದಿದ್ದರೆ, ಮುಂದಿನ ಮುಂಗಾರು ಬೇಸಾಯದ ಹೊತ್ತಿಗೆ ಒಂದು ಕಡ್ಡಿಯನ್ನೂ ಬಿಡದೆ ಗೆದ್ದಲು ತಿಂದಿರುತ್ತದೆ. ವರುಷವೆಲ್ಲ ಶೇಖರಿಸಿಟ್ಟ ತಿಪ್ಪೆ ಗೊಬ್ಬರವನ್ನು ಬಿಡುವು ಕಾಲದ ಬೇಸಿಗೆಯಲ್ಲಿ ಮಳೆ ಬರುವುದಕ್ಕೆ ಮುಂಚೆ ಹೊಲ ಗದ್ದೆಗಳಿಗೆ ಹರಡುವುದು ವಾಡಿಕೆ. ಲೆಕ್ಕಕ್ಕೆ ಎಕರೆಗೆ ಹತ್ತಿಪ್ಪತ್ತು ಗಾಡಿ ಗೊಬ್ಬರವನ್ನು ಹಾಕಿದೆ ಎನ್ನುವರು. ಅದರಲ್ಲಿರುವ ಪೌಷ್ಟಿಕಾಂಶವೆಷ್ಟು ಬೆಳೆಗೆ ಸೇರಿದೆ ಎಂದು ಯಾರಿಗೂ ತಿಳಿಯದು. ನನ್ನ ಅಂದಾಜಿನ ಪ್ರಕಾರ ಶೇಕಡ 5-6 ರಷ್ಟು ಸಿಕ್ಕಿದರೆ ಪುಣ್ಯ. ಉಳಿದದ್ದೆಲ್ಲ ಗಾಳಿ ಮಳೆ ಬಿಸಲಿನ ತಾಪಕ್ಕೆ ಸಿಕ್ಕಿ ಹಾಳಾಗುವುದರ ಜೊತೆಗೆ ಹೆಚ್ಚಿನಾಂಶ ಗೆದ್ದಲು ತಿಂದು ಹಾಳಾಗುತ್ತದೆ.

ಹಾವಿದೆಯೆಂದು ಹುತ್ತವನ್ನು ಪೂಜಿಸುವವರು ಗೆದ್ದಲನ್ನೇ ಪೂಜಿಸುತ್ತಾರೆ. ವಿಪರ್ಯಾಸವೆಂದರೆ ನಮ್ಮ ಶತ್ರುವನ್ನು ಹಾಲೆರೆದು ಪೂಜಿಸಿದ ಹಾಗೆ. ಬೆಳೆಯುತ್ತಿರುವ ಹುತ್ತದಲ್ಲಿ ಹಾವಿರಲು ಸಾಧ್ಯವೆ ಇಲ್ಲ. ಗೆದ್ದಲನ್ನು ಬಿಟ್ಟು ಮತ್ತಾವ ಪ್ರಾಣಿಯೂ ಒಳ ಹೋಗಲು ಸಾಧ್ಯವಿಲ್ಲ. ಅದು ಎಷ್ಟು ಚಾಕಚಕ್ಯತೆಯಿಂದ ಹುತ್ತವನ್ನು ಕಟ್ಟಿರುತ್ತದೆಯೆಂದರೆ ರೋಗಾಣುಗಳು ಕೂಡ ಒಳ ಒಕ್ಕಲು ಸಾಧ್ಯವಿಲ್ಲ. ಕೆಲವರ ಮನೆಯೊಳಗೆ ಹುತ್ತ ಬೆಳೆಯುವುದುಂಟು. ಗೆದ್ದಲಿನ ಹುತ್ತ ಭೂಮಿಯ ಮೇಲೆ ಕಾಣಿಸಬೇಕಾದರೆ ಗೆದ್ದಲು ಮೊಟ್ಟೆ ಇಡಲು ಪ್ರಾರಂಭ ಮಾಡಿದ ನಾಲ್ಕಾರು ವರುಷದ ನಂತರ. ಮನೆ ಕಟ್ಟುವಾಗ ಪಾಯವನ್ನೆಲ್ಲವನ್ನು ಒಂದರೆಡು ಅಡಿ ಅಗೆದು ಹದ ಮಾಡದಿದ್ದರೆ ಸಣ್ಣ ಗೂಡಿನಲ್ಲಿರುವ ರಾಣಿ ಹುಳ ಪತ್ತೆಯಾಗದೆ ಕ್ರಮೇಣ ಬೆಳೆಯುತ್ತಾ ಬಂದು ನಾಲ್ಕಾರು ವರುಷಗಳ ನಂತರ ಮನೆ ಒಳಗೆ ಹುತ್ತ ಕಾಣಿಸುತ್ತದೆ. ಕೆಲವರು ಅದರ ಉಪಯೋಗವನ್ನೂ ಪಡೆಯುತ್ತಾರೆ. ಮನೆಯನ್ನು ದೇವಸ್ಥಾನವನ್ನಾಗಿ ಪರಿವರ್ತಿಸಿ ಪೂಜೆ ಪುನಸ್ಕಾರಗಳನ್ನು ಮಾಡಿ ಕೆಲವು ಯಂತ್ರ ತಂತ್ರೋಪಾಯಗಳನ್ನು ಮಾಡುವ ನೆಪದಲ್ಲಿ ಸುಲಿಗೆ ಮಾಡವುದೂ ಉಂಟು. ಗೆದ್ದಲು ಹುತ್ತವನ್ನು ಕಟ್ಟುವಾಗ ಒಳಗಿನಿಂದಲೇ ಮಣ್ಣಿನ ಕಣಗಳನ್ನು ಒಂದೊಂದಾಗಿ ತಂದು ತನ್ನ ಜೊಲ್ಲನ್ನು ಸೇರಿಸಿ, ಇಟ್ಟಿಗೆಯೋಪಾದಿಯಲ್ಲಿ ತನ್ನ ಅನುಕೂಲಕ್ಕೆ ಬೇಕಾಗುವಂತೆ ಕಟ್ಟಿಕೊಳ್ಳುತ್ತದೆ. ಹಾಗೆ ಕಟ್ಟುವಾಗ ಗೆದ್ದಲನ್ನು ಹೊರಗಿನಿಂದ ನೋಡುವುದು ವಿರಳ. ಅವುಗಳು ಹುತ್ತದಿಂದ ಹತ್ತು ಇಪ್ಪತ್ತು ಅಡಿ ಉದ್ದದ ಭೂಮಿಯೊಳಗಿನ ಸುರಂಗದಲ್ಲಿ ಹೋಗಿ ಆಹಾರ ತರುತ್ತವೆ. ಆದ್ದರಿಂದ ಮನೆಯೊಳಗೆ ಅವುಗಳ ಚಲನವಲನೆ ಗಳನ್ನು ನೋಡವುದು ಕಷ್ಟ.

ಒಂದು ಸಾರಿ ಸುಮಾರು ನಲವತ್ತು ಹುತ್ತಗಳನ್ನು ಅಗೆದು ನೋಡಿದಾಗ ಎರಡು ಹಾಳು ಹುತ್ತದಲ್ಲಿ ಮಾತ್ರ ಹಾವಿದ್ದದ್ದು, ಮತ್ತೊಂದು ಹಾಳು ಹುತ್ತದಲ್ಲಿ ಮೊಲವಿದ್ದದ್ದು ದೊರೆಯಿತು. ಗೆದ್ದಲಿರುವ ಹುತ್ತದಲ್ಲಿ ಹಾವು ಮೊಲ ಇರಲು ಸಾಧ್ಯವಿಲ್ಲ. ಕೆಲವು ಸಮಯದಲ್ಲಿ ರಾಣಿಹುಳ ತಿನ್ನಲು ಇತರೆ ಪ್ರಾಣಿಗಳು ಅಥವಾ ಮನುಷ್ಯರು ಅಗೆದಾಗ ಮುಂದೆ ಅದು ಹಾಳು ಹುತ್ತವಾಗಿ ಹಾವು ಮೊಲ ಸೇರಿದಂತೆ ಇತರೆ ಪ್ರಾಣಿಗಳಿಗೆ ಆಶ್ರಯ ಸ್ಥಾನವಾಗುತ್ತದೆ. ಯಾರೂ ಹಾಳು ಹುತ್ತವನ್ನು ಪೂಜಿಸುವುದಿಲ್ಲ. ಕಲ್ಲು ನಾಗರಕ್ಕೆ ಹಾಲೆರೆದಂತೆ ಬೆಳೆಯುತ್ತಿರುವ ಹುತ್ತವನ್ನೇ ಪೂಜಿಸುವರು ಕಾರ್ಯತಃ ಗೆದ್ದಲನ್ನೆ ಪೂಜಿಸುವರು. ರಾಣಿಹುಳಗಳನ್ನು ಸಂಗ್ರಹಿಸಲು ಹುತ್ತಗಳನ್ನು ಅಗೆಯುವಾಗ ಕೆಲವು ಬಾರಿ ಅಗೆಯುವವರು ಬೆರಳು ಗಾತ್ರದ ಬೆಳ್ಳನೆಯ ಮೃದುವಾದ ರಾಣಿ ಹುಳುವನ್ನು ನುಂಗಿ ಬಿಡುತ್ತಿದ್ದರು. ಅದನ್ನು ನುಂಗಿದರೆ ವೀರ್ಯವತ್ತಾದ ದೃಢಕಾಯರಾಗುವರೆಂಬ ನಂಬಿಕೆ. (ಬಹುಶಃ, ಈಗಿನ ವಯಾಗ್ರ ಇದ್ದಂತೆ ಇರಬಹುದು.) ಹಲವಾರು ಗುಡ್ಡಗಾಡು ಬುಡಕಟ್ಟಿನ ಜನಾಂಗದವರು ಅಪೇಕ್ಷಪಟ್ಟು, ಹುಡುಕಿ ಅಗೆದು ರಾಣಿ ಹುಳವನ್ನು ತಾವೂ ತಿಂದು ಮಕ್ಕಳಿಗೂ ಕೊಡುತ್ತಾರೆ. ಇದರ ಮಹತ್ವವನ್ನು ಇಷ್ಟರ ವರೆಗೆ ಯಾರೂ ವೈಜ್ಞಾನಿಕವಾಗಿ ಪರೀಕ್ಷೆಮಾಡಿ ನೋಡಿಲ್ಲ. ಸಂಶೋಧನೆಗೆ ಇದೊಂದು ಒಳ್ಳೆಯ ವಿಷಯ.

ಮಳೆ ಬಂದು ನಿಂತಾಗ ಎಲ್ಲೆಲ್ಲೂ ಲಕ್ಷಗಟ್ಟಲೆ ರೆಕ್ಕೆ ಇರುವ ಗಂಡು ಹೆಣ್ಣು ಗೆದ್ದಲು ಹುತ್ತದಿಂದ ಹೊರಬಂದು ವಿಶೇಷವಾಗಿ ಬೆಳಕಿಗೆ ಆಕರ್ಷಿಸಿ (ಎಲ್ಲರ ಮನೆಯ ಅನುಭವ), ಸ್ವಲ್ಪ ಸಮಯದ ನಂತರ ರೆಕ್ಕೆಗಳನ್ನು ಕಳಚಿ ಅಳಿದುಳಿದ ಹೆಣ್ಣು ಗಂಡು ತಮ್ಮ ಸಂತತಿಯನ್ನು

ಮುಂದುವರಿಸುವ ದೃಷ್ಟಿಯಲ್ಲಿ ಆಶ್ರಯವನ್ನು ಹುಡುಕಲು ಪರದಾಡುತ್ತಿರುವುದನ್ನು ಅನೇಕರು ನೋಡಿರಬಹುದು. ಇವುಗಳು ಹುತ್ತದಿಂದ ಹೊರಬರುಪುದನ್ನು ಹತ್ತಾರು ಬಗೆಯ ಶತ್ರುಗಳು ಭಕ್ಷಿಸಲು ಕಾದಿರುತ್ತವೆ. ಒಂದು ಹುತ್ತದಿಂದ ಸಾವಿರಾರು ಹೊರಬಂದರೂ ಕೊನೆಗೆ ಸಂತಾನೋತ್ಪತ್ತಿಗೆ ಉಳಿಯುವವು ಅಲ್ಲೊಂದು ಇಲ್ಲೊಂದು ಒಂದೆರಡು. ಹೀಗೆ ಬದುಕಿದವು ಅದಕ್ಕೆ ಸೂಕ್ತವಾದ ಆಶ್ರಯ ಸ್ಥಾನ ಹುಡುಕಿ ಹೆಣ್ಣು ಗಂಡು ಜೊತೆ ವಾಸಿಸಲು ಪ್ರಾರಂಭಿಸುತ್ತವೆ. ಸುಮಾರು ನಲವತ್ತು ದಿವಸದ ನಂತರ ಹೆಣ್ಣು ತನ್ನ ಮೊದಲನೆ ಕಂತಿನ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. ಮೊದ ಮೊದಲು ಇಟ್ಟ ಮೊಟ್ಟೆಗಳಿಂದ ಬಂದ ಮರಿಗಳು ಸೇವಕರಾಗುತ್ತಾರೆ. ಆ ಗೂಡಿನ ಯೋಗಕ್ಷೇಮವೆಲ್ಲವೂ ಇವುಗಳ ಪಾಲು, ಗಂಡಿಗೆ ಆಗಾಗ ಹೆಣ್ಣಿನೊಂದಿಗೆ ಲೈಂಗಿಕ ವೃತ್ತಿ ಮತ್ತು ಹೆಣ್ಣಿಗೆ ಮೊಟ್ಟೆ ಇಡುವುದೊಂದೆ ಕೆಲಸ. ಒಂದು ಹುತ್ತದಲ್ಲಿ ಒಂದೇ ಗಂಡು (ರಾಜ), ಒಂದೇ ಹೆಣ್ಣು (ರಾಣಿ) ಇರುವವು. ಸುಮಾರು ಒಂದೂವರೆ ವರುಷದ ಹೊತ್ತಿಗೆ ಹೆಣ್ಣಿನ ಹೊಟ್ಟೆ ಬೆಳೆಯುತ್ತಾ ಹೋಗಿ ನಾಲ್ಕು ವರುಷದೊಳಗೆ ಪೂರ್ಣ ಗಾತ್ರದ ಬೆರಳಷ್ಟು ದಪ್ಪನೆಯ ಉದ್ದನೆಯ ರಾಣಿಹುಳವಾಗುತ್ತದೆ. ಆಗ ಅದಕ್ಕೆ ಚಲನೆ ವಲನೆ ಏನೂ ಆಗದು. ಅದರ ಸುತ್ತಲೂ ಭದ್ರವಾದ ಒಂದು ಕೋಟೆಯನ್ನು ಸೇವಕ ಹುಳುಗಳು ಕಟ್ಟುತ್ತವೆ. ಸೇವಕರು ಮಾತ್ರ ಹೋಗಿ ಬರಲು ರಂಧ್ರ ಬಿಟ್ಟರೆ ಮತ್ತೆಲ್ಲೂ ರಾಣಿ ವಾಸ ತೆರೆದಿರುವುದಿಲ್ಲ. ಗಂಡು ಕೂಡ ಮೊದಲಿದ್ದಕ್ಕಿಂತ ಎರಡು ಪಟ್ಟು ದೊಡ್ಡದಾಗಿ ಅರ್ಧ ಅಂಗುಲಕ್ಕೂ ಕಡಿಮೆ ಇರುತ್ತದೆ. ಸದಾ ರಾಣಿ ವಾಸದಲ್ಲಿರುತ್ತದೆ. ಎಷ್ಟೋ ಬಾರಿ ರಾಣಿ ಜೊತೆ ಇದು ಇಲ್ಲದಿರುವುದು ಕಂಡಿದೆ. ಹುತ್ತ ಬೆಳೆದಂತೆಲ್ಲ ಸೇವಕರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಹುತ್ತದ ಉಸ್ತುವಾರಿಗೆ ಸೈನಿಕರೂ ಇರುತ್ತವೆ. ಅಂದರೆ ಒಂದು ಗೆದ್ದಲಿನ ಸಂಸಾರದಲ್ಲಿ ಒಂದು ರಾಣಿ, ಒಂದು ರಾಜ, ಕೆಲವು ಸೈನಿಕರು, ಉಳಿದೆಲ್ಲವೂ ಸೇವಕರು. ವರುಷಕ್ಕೊಮ್ಮೆ ಆಯಾ ಜಾತಿಗೆ ತಕ್ಕಂತೆ, ವರುಷದ ಯಾವ ಸಮಯದಲ್ಲಾದರೂ, ಮುಂದಿನ ಸಂತತಿ ಬೆಳೆಯಲು ಗರ್ಭವತ್ತಾಗುವ (ರೀಪ್ರೊಡಕ್ಟೀವ್ಸ್) ಹೆಣ್ಣು ಗಂಡುಗಳು ಉತ್ಪತ್ತಿಯಾಗುತ್ತವೆ. ಇವಕ್ಕೆ ಮಾತ್ರ ರೆಕ್ಕೆಗಳು ಇರುತ್ತವೆ. ರೆಕ್ಕೆ ಬರುವ ಸಮಯದಲ್ಲಿ ಹುತ್ತದ ಹೊರಾಂಗಣದ ಒಂದು ಕೋಣೆಯಲ್ಲಿ ಇವೆಲ್ಲವನ್ನು ಸೇರಿಸಿ, ಸಂತಾನ ಉತ್ಪತ್ತಿಯಾಗುವ ಶಕ್ತಿಯನ್ನು ಹೊಂದುವುದಕ್ಕೆ ಬೇಕಾದ ಆಹಾರವನ್ನು ಕೊಟ್ಟು ಮಳೆ ಬರುವ ವರೆಗೆ ಸೇವಕರು ಇವುಗಳನ್ನು ಕಾದಿರುತ್ತವೆ. ಮಳೆ ಬಂದ ದಿನ ಹೊರಗೆ ಹೋಗಲು ಒಂದು ರಂಧ್ರವನ್ನು ಮಾಡಿ ಸೇವಕರೆಲ್ಲ ಸೇರಿ ಇವನ್ನು ಹೊರಗೆ ದಬ್ಬುತ್ತವೆ. ಎಲ್ಲವೂ ಹೊರಗೆ ಹೋದನಂತರ ರಂಧ್ರವನ್ನು ಮುಚ್ಚುತ್ತವೆ.

ಸೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ. ಒಂದಲ್ಲ ಒಂದು ಬಗೆಯ ಉಪಯೋಗ ಅಥವಾ ಕೆಡುಕು ಒಂದಕ್ಕೊಂದು ಹೊಂದಿಕೊಂಡಿರುತ್ತದೆ. ಮಾನವನಿಗೆ ಹಲವು ವಿಧದಲ್ಲಿ ಗೆದ್ದಲು ಕೆಡಕನ್ನುಂಟು ಮಾಡಿದರೂ ಪ್ರಕೃತಿಯಲ್ಲಿ ಅವುಗಳಿಂದ ಪರಿಸರಕ್ಕೆ ಉಪಯೋಗವೂ ಇದೆ. ಗಿಡಮರಗಳಲ್ಲಿರುವ ಮೂಲಭೂತವಾದ ಸೆಲ್ಯೂಲೋಸ್ ಎಂಬ ಪದಾರ್ಥವನ್ನು ಸುಲಭವಾಗಿ ಜೀರ್ಣಿಸುವ ಶಕ್ತಿ ಗೆದ್ದಲಿಗಿದೆ. ಸೆಲ್ಯೂಲೋಸನ್ನು ಕರಗಿಸುವಂತಹ ಜೀವಾಣುಗಳು ಭೂಮಿಯ ಮೇಲೆ ಹುತ್ತ ಕಟ್ಟುವ ಗೆದ್ದಲಿನ ಗಂಟಲಿನಲ್ಲಿ ವಾಸಿಸುತ್ತವೆ. ಸೆಲ್ಯೂಲೋಸ್ ಇರುವ ಎಂತಹ ಪದಾರ್ಥಗಳನ್ನು ಎಲ್ಲೇ ಇದ್ದರೂ ಹುಡುಕಿ ತಿನ್ನುವ ಚಾಣಾಕ್ಷತೆ ಇರುವುದು ಅದನ್ನು ಜೀರ್ಣಿಸುವಂತಹ ಈ ಜೀವಾಣುಗಳು ಅವುಗಳಲ್ಲಿ ಹುದುಗಿರುವುದರಿಂದ. ಭೂಮಿಯ

ಒಳಗೆ ಇರುವ ಗೆದ್ದಲಿಗೆ ಈ ಜೀವಾಣುಗಳು ಇರುವುದಿಲ್ಲ. ಅಂತಹವು ಸೆಲ್ಯೂಲೋಸ್ ಇರುವಂತಹ ಆಹಾರವನ್ನು ಸಂಗ್ರಹಿಸಿ, ಗೂಡಿನೊಳಗೆ ಕರಗ ಹಾಕಿ ಅಥವಾ ಅದರ ಮೇಲೆ ಅಣಬೆಯನ್ನು ಬೆಳಸಿ ಅವುಗಳನ್ನು ತಾವೂ ತಿಂದು ಮರಿಗಳಿಗೂ ಉಣಿಸುತ್ತವೆ. ಗೆದ್ದಲಿಲ್ಲ ದಿದ್ದರೆ ದೊಡ್ಡ ಕಾಡು ಮೇಡುಗಳಲ್ಲಿ ಬೀಳುವ ಮರಗಳು ಕೊಳೆತು ಗೊಬ್ಬರವಾಗಲು ಹಲವಾರು ವರುಷಗಳು ಬೇಕು. ಮೂಡಿಗೆರೆ ಏಲಕ್ಕಿ ಸಂಶೋಧನಾ ಕೇಂದ್ರದಲ್ಲಿ ಒಂದು ಕಡಿದಾದ ಗೆರೆಯನ್ನು ಶೋಧಿಸಿದಾಗ ಸುಮಾರು ಹತ್ತು ಹನ್ನೆರಡು ಅಡಿ ಆಳದವರೆಗೆ ಗೆದ್ದಲು ಗೂಡು ಮಾಡಿಕೊಂಡಿದ್ದದ್ದು ಕಂಡಿತು. ಮಳೆಗಾಲದಲ್ಲೂ ಕೂಡ ಮರದಿಂದ ಬಿದ್ದಿದ್ದ ದಟ್ಟಹೊದಿಕೆಯ ತಳದಡಿಯಿಂದ ಆಹಾರ ಶೇಖರಿಸುತ್ತಿರುವುದು ಕಂಡಿತು. ಹುತ್ತದ ಮಣ್ಣನ್ನು ಪರೀಕ್ಷಿಸಿದಾಗ ಸುತ್ತಮುತ್ತಲಿನ ಮಣ್ಣಿಗಿಂತ ಹುತ್ತದ ಮಣ್ಣು ನಾಲ್ಕಾರುಪಟ್ಟು ಫಲವತ್ತಾ ಗಿರುವುದು ಕಂಡಿತು. ಯಾರಿಗೂ ಅರಿಯದ ರೀತಿ ಪೋಲಾಗಿ ಹೋಗುತಿದ್ದ ಫಲವತ್ತತೆ ಯನ್ನು ಮಣ್ಣಿನೊಳಗೆ ಕೂಡಿಟ್ಟು ಪರೋಕ್ಷವಾಗಿ ಮರಗಿಡಗಳಿಗೆ ಪುನಃ ದೊರೆಯುವಂತೆ ಮಾಡುತ್ತಿದ್ದವು.

ಮತ್ತೊಂದು, ಮಣ್ಣನ್ನು ಆಶ್ರಯಿಸಿ ಜೀವಿಸುವ ಸರ್ವಾಂತರ್ಯಾಮಿ ಕೀಟವೆಂದರೆ ಇರುವೆ. ಕೀಟ ಶಾಸ್ತ್ರದ ಸಾಯಿಲ್ ಬಯಾಲಜಿ ವಿಭಾಗ ಇವುಗಳ ಅಧ್ಯಯನವನ್ನು ಕೂಡ ಕೈಗೊಂಡಿತು. ಮುಖ್ಯವಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇರುವೆಗಳಿಂದ ಬೇಸಾಯಕ್ಕೆ ಆಗುವ ಹಾನಿ ಅಥವಾ ಅವುಗಳಿಂದ ಆಗುವ ಲಾಭವೇನೆಂದು ಗಣನೆಗೆ ತೆಗೆದುಕೊಂಡು ಮುಖ್ಯವಾದವುಗಳ ಮೇಲೆ ಸಂಶೋಧನೆ ಕೈಗೊಂಡೆವು.

ಮಂಡ್ಯ ಜಿಲ್ಲೆಯ ಕಾರ್ಕಳ್ಳಿ ಸುತ್ತಮುತ್ತ ಸುಮಾರು ಎರಡು ಸಾವಿರ ಎಕರೆ ಪ್ರದೇಶದಲ್ಲಿ ಒಂದು ಬಗೆಯ ಪೆದರು ಇರುವೆ ಬಾಧಿಸುತಿತ್ತು. ಇದನ್ನು ಕಾರ್ಕಳ್ಳಿ ಕ್ರೇಜಿ ಆಂಟ್ ಎಂದು ಕರೆಯಲಾಯಿತು. ಈ ಪೆದರಿರುವೆ ಪ್ರಪಂಚದಾದ್ಯಂತ ಹರಡಿದೆ. ಇದರ ಮೂಲ ದಕ್ಷಿಣ ಅಮೆರಿಕಾ ಎಂದು ಕೆಲವರ ಅಭಿಪ್ರಾಯ. ಸಾಮಾನು ಸರಕು ಸಾಗಿಸುವ ಹಡುಗುಗಳಲ್ಲಿ ಪ್ರಪಂಚದ ಎಲ್ಲಾ ಮೂಲೆಗಳಿಗೆ ಹರಡಿದೆ. ಭಾರತಕ್ಕೂ ಹೀಗೆಯೆ ಬಂದಿರಬೇಕು. ಸಾಮಾನ್ಯವಾಗಿ ಕಸಕಡ್ಡಿ ಶೇಖರಿಸಿರುವ ತೇವಾಂಶ ಇರುವ ಜಾಗದಲ್ಲಿ ನೆಲಸಿ ಸಂತಾನೋತ್ಪತ್ತಿ ಮಾಡುತ್ತವೆ. ಮಾನವನ ಸಹಾಯವಿಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬಹಳ ದೂರ ಹೋಗಲಾರವು. ಕಾರ್ಕಳ್ಳಿಯ ಸುತ್ತ ಮುತ್ತ ಇದು ಪೀಡೆಯಾಗಿ ಪರಿವರ್ತಿಸಿದ್ದು ಹೇಗೆ ಎಂದು ವಿಚಾರಿಸಿದಾಗ ಆ ಊರಿನವರು ಒಂದು ಕಾಲದಲ್ಲಿ ಹೊಗೆ ಸೊಪ್ಪನ್ನು ಬೆಳೆಯುತ್ತಿದ್ದು ಅದನ್ನು ಒಣಗಿಸಲು ಕಾಡಿನಿಂದ ಕಟ್ಟಿಗೆಯನ್ನು ತರುತ್ತಿದ್ದಾಗ ಯಾವುದೊ ಮರದ ಪೊಟರೆಯ ಒಳಗೆ ಸೇರಿದ್ದ ಪೆದರಿರುವೆ ದಿಮ್ಮಿಗಳ ಜೊತೆ ಆ ಊರಿಗೆ ಬಂತು ಎಂದು ತಿಳಿಯಿತು. ಆ ಊರಿನ ಸುತ್ತಮುತ್ತ ಗೊಬ್ಬರದ ತಿಪ್ಪೆಗಳಿದ್ದು ಸಾಕಷ್ಟು ತೇವಾಂಶವಿದ್ದುದರಿಂದ ಬಹಳ ಬೇಗ ಇವುಗಳ ಸಂತತಿ ಹೆಚ್ಚಿದವು. ಗೊಬ್ಬರದ ಮುಖಾಂತರ ಸುತ್ತಮುತ್ತಲಿನ ಕಬ್ಬಿನ ಗದ್ದೆಗಳಿಗೆಲ್ಲ ಹರಡಿತು. ಇರುವೆಗಳಿಗೆ ಕಬ್ಬಿನ ಗದ್ದೆಯಲ್ಲಿ ಕಬ್ಬಿನ ರಸ ಆಹಾರವಾಯಿತು. ಕಬ್ಬಿನ ಬುಡದಲ್ಲಿ ಮಣ್ಣನ್ನು ಆಳವಾಗಿ ತೋಡಿ ಗೂಡು ಮಾಡಲು ಪ್ರಾರಂಭಿಸಿದವು. ಹೀಗೆ ಒಂದಕ್ಕೊಂದು ರಂಧ್ರಗಳಾಗಿ ಹಾಯಿಸಿದ ನೀರು ನಿಲ್ಲುತ್ತಿರಲಿಲ್ಲ. ಕಬ್ಬಿನ ಗದ್ದೆ ಒಣಗಿದವು. ರೈತರು ಕಂಗಾಲಾದರು. ಸುತ್ತ ಮುತ್ತ ಹಳ್ಳಿಯ ಮನೆಗಳಲ್ಲಿ ಮಕ್ಕಳ ಮೈಮೇಲೆಲ್ಲಾ ಹರಿದಾಡುತ್ತಿದ್ದವು. ಊಟಕ್ಕೆ ಕುಳಿತರೆ

ಅನ್ನದ ಮೇಲೆ ಹತ್ತಿ ಬರುತ್ತಿದ್ದವು. ಇವರ ಕೂಗು ವಿಧಾನಸೌಧ ಮುಟ್ಟಿತು. ವಿಧಾನ ಸಭೆಯಲ್ಲಿ ಸರ್ಕಾರ ಇದಕ್ಕೆ ಏನು ಕ್ರಮ ತೆಗೆದುಕೊಂಡಿತೆಂದು ಪ್ರಶ್ನಿಸಿದರು.

ಸರ್ಕಾರ ಕೃ.ವಿ.ವಿದ್ಯಾನಿಲಯವನ್ನು ಸಂಪರ್ಕಿಸಿ ಕೂಡಲೆ ಇದನ್ನು ಹತೋಟಿ ಮಾಡುವ ಕ್ರಮವನ್ನು ತಿಳಿಸಬೇಕೆಂದು ಕೇಳಿಕೊಂಡಿತು. ಹೊಸದಾಗಿ ಉದ್ಭವವಾದ ಈ ಸಮಸ್ಯೆಗೆ ಕೂಡಲೆ ಪರಿಹಾರವನ್ನು ಸೂಚಿಸುವಂತಿರಲಿಲ್ಲ. ನಾಲ್ಕಾರು ತಿಂಗಳು ಆ ಹಳ್ಳಿಯಲ್ಲಿ ಸತತವಾಗಿ ಪರೀಕ್ಷಿಸಿ ಈ ಇರುವೆಗಳು ವೃದ್ಧಿಯಾಗುವ ಸ್ಥಳಗಳು ಮತ್ತು ಅವು ವೃದ್ಧಿಯಾಗುವ ಕಾಲವನ್ನು ತಿಳಿದು ಸೂಕ್ತ ಕ್ರಮ ಕೈಗೊಂಡ ಮೇಲೆ ಇದರ ನಿಯಂತ್ರಣ ಸಾಧ್ಯವಾಯಿತು. ಇದೇ ವಿಷಯವಾಗಿ ನನ್ನ ಒಬ್ಬ ವಿದ್ಯಾರ್ಥಿ ಕೂಲಂಕಷವಾಗಿ ಪರಿಶೋಧಿಸಿ ಪಿಹೆಚ್.ಡಿ. ಪದವಿಯನ್ನು ಗಳಿಸಿದರು.

ಜನಸಾಮಾನ್ಯರಿಗೆ ಚಿರಪರಿಚಯವಿರುವ ಮತ್ತೊಂದು ಇರುವೆ ಎಂದರೆ ಆಗಾಗ ದಾರಿಗೆ ಅಡ್ಡಲಾಗಿ ಸಾಲಾಗಿ ಹೋಗುವ ಕಪ್ಪಿರುವೆ, ಕಟ್ಟಿರುವೆ. ಬಹಳ ಜನರಿಗೆ ಇದರ ಚಲನವಲನ, ಪರಿಸರದಲ್ಲಿ ಇದರ ಪಾತ್ರ, ಇದರ ಆಹಾರ ಮತ್ತು ಜೀವನದ ಬಗ್ಗೆ ತಿಳುವಳಿಕೆ ಇರಲಾರದು. ಕಟ್ಟಿರುವೆ ಕಚ್ಚುವುದೆಂದು ಮಾತ್ರ ಮಕ್ಕಳಿಂದ ದೊಡ್ಡವರಿಗೆ ತಿಳಿದಿದೆ. ಬಾಲ್ಯದಲ್ಲಿ ನಮ್ಮ ಮನೆ ದನಕಾಯುತ್ತಿದ್ದವನ ಜೊತೆ ಆಗಾಗ ಹೋಗುತ್ತಿದ್ದೆ. ನಾಲ್ಕಾರು ದನ ಕಾಯುವ ಹುಡುಗರು ಒಟ್ಟಾಗಿ ಯಾರಿಗಾದರೊಬ್ಬನಿಗೆ ಒಂದು ಬಗೆಯ ಬಳ್ಳಿಯ ಕಾಯಿಯಿಂದ ಹಾಲಿನಂತೆ ಬರುತಿದ್ದ ಸ್ರಾವವನ್ನು ಹಣೆಯ ಮೇಲಿಟ್ಟು ಕಟ್ಟಿರುವೆಯಿಂದ ಆ ಜಾಗದಲ್ಲಿ ಕಚ್ಚಿಸಿದರೆ ಅವನು ಮೂರ್ಛೆ ಹೋದಂತವನಾಗಿ ಅವನ ಮನಸ್ಸಿನಲ್ಲಿದ್ದದ್ದೆಲ್ಲವನ್ನು ಮಾತನಾಡುತ್ತಿದ್ದ. ನಂತರ ಅವನ ಹಣೆಯನ್ನು ತೊಳೆದು ಕುಡಿಯಲು ನೀರು ಕೊಟ್ಟಾಗ ಆ ಹುಡುಗ ಎದ್ದು ಕೂರುತ್ತಿದ್ದ. ಆ ಸ್ವಲ್ಪ ಸಮಯ ತನಗೇನಾಯಿತೆಂದು ಅವನಿಗೆ ತಿಳಿಯದು. ಕಟ್ಟಿರುವೆಯ ಮೇಲೆ ಸಂಶೋಧನೆ ತೆಗೆದುಕೊಂಡಾಗ ಇದರ ಗುಟ್ಟೇನು ಎಂದು ತಿಳಿಯಲು ಪ್ರಯತ್ನ ಪಟ್ಟೆ. ಆದರೆ ಆ ಗಿಡ ಯಾವುದೆಂದು ತಿಳಿಯಲಿಲ್ಲ. ದನಕಾಯುವವನು ಕೂಡ ಕಾಲವಾಗಿದ್ದನು.

ಈ ಕಟ್ಟಿರುವೆಯ ಆಹಾರ ಶೇಕಡ 99.9ರಷ್ಟು ಗೆದ್ದಲು. ಕಟ್ಟಿರುವೆಗಳಿಲ್ಲದಿದ್ದರೆ ಕೆಲವು ಪ್ರದೇಶಗಳೆಲ್ಲ ಗೆದ್ದಲುಮಯವಾಗುತ್ತಿದ್ದವು. ನನ್ನ ವಿದ್ಯಾರ್ಥಿ ಟಿ. ಶಿವಶಂಕರ್ ಬಹಳ ಶ್ರಮವಹಿಸಿ ಹಗಲು ರಾತ್ರಿ ಇವುಗಳನ್ನು ಕಾದು, ಗೂಡನ್ನು ಅಗೆದು, ಅವುಗಳು ವಾಸಿಸುತ್ತಿದ್ದ ತಾಣವನ್ನು ಶೋಧಿಸಿ ಜೀವನ ಚರಿತ್ರೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ಗೆದ್ದಲಿನ ಹಾಗೆ ಇವು ಒಂದೇ ಕಡೆ ವಾಸಿಸುವುದಿಲ್ಲ, ವಲಸೆ ಹೋಗುವ ಪ್ರವೃತ್ತಿ. ಒಂದು ಕಾಲೋನಿ (ಸಂಸಾರ) ಕೆಲವು ತಿಂಗಳು ಒಂದು ಕಡೆ ನಿಂತರೆ ಮತ್ತೆ ಕೆಲವು ಪದೇ ಪದೇ ದಿನಕ್ಕೊಮ್ಮೆ ವಾರಕ್ಕೊಮ್ಮೆ ಸ್ಥಳವನ್ನು ಬದಲಾಯಿಸುತ್ತಿದ್ದದ್ದನ್ನು ಕಂಡೆವು. ಹೀಗೆ ಬದಲಾಯಿಸುತ್ತಿದ್ದದ್ದು ಆಹಾರದ ಅನ್ವೇಷಣೆಗೆ ಅಥವಾ ವಾತಾವರಣದ ಏರುಪೇರಿಗಲ್ಲವೆಂದು ತಿಳಿಯಿತು. ಹೀಗೆ ಮಾಡುತ್ತಿದ್ದದ್ದು ಅದರ ಸುರಕ್ಷತೆಗೋ ಅಥವಾ ಹವ್ಯಾಸಕ್ಕೋ ತಿಳಿಯದು. ಸಾಮಾನ್ಯವಾಗಿ ಒಂದು ಗೂಡಿನಲ್ಲಿ ಐದಾರು ಸಾವಿರ ಇರುವೆಗಳು ಇರುತ್ತವೆ. ಸ್ವತಃ ಇವೇ ಗೂಡುಗಳನ್ನು ನಿರ್ಮಿಸುವುದಕ್ಕಿಂತ ಯಾವುದಾದರೂ ಪೊಟರೆ ಅಥವಾ ಬರಿದಾದ ಗೆದ್ದಲಿನ ಹುತ್ತ ಇಂತಹವಲ್ಲಿ ಸೇರಿಕೊಂಡು ನಂತರ ತಮಗೆ ಬೇಕಾದ ಹಾಗೆ ಮಣ್ಣು ಅಗೆದು ಗೂಡು ಮಾಡುತ್ತವೆ. ಮಣ್ಣನ್ನು

ಹೊರಹಾಕುವುದೂ ಉಂಟು. ಎಷ್ಟೋ ಸಾರಿ ದಬ್ಬಳ ಗಾತ್ರದ ರಂಧ್ರ ಮಾತ್ರ ಹೊರಗೆ ಕಾಣುತ್ತದೆ. ಇವಿರುವ ಗೂಡುಗಳು ಸಾಮಾನ್ಯವಾಗಿ ಹುಲ್ಲಿನಿಂದಲೋ ಪೊದೆಗಳಿಂದಲೋ ಮರೆಯಾಗಿರುತ್ತವೆ ಅಥವಾ ಮರದ ನೆರಳಡಿಯೇ ಇರುತ್ತವೆ. ಸದಾ ಬೆಳಕು ಬೀಳುವ ಜಾಗದಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಉರಿ ಬಿಸಿಲಿನಲ್ಲಿ ಅಥವಾ ಬೆಳಿಗ್ಗೆ ಹತ್ತರಿಂದ ಸಂಜೆ ನಾಲ್ಕರ ವರೆಗೆ ಇವುಗಳು ಹೊರಗೆ ಬರುವುದು ಅಪರೂಪ. ಆದರೆ ಮೋಡ ಕವಿದ ವಾತಾವರಣ ಇದ್ದರೆ ದಿನದ ಯಾವ ಸಮಯದಲ್ಲಾದರೂ ಇವು ಸಾಲಾಗಿ ಹೋಗುವುದನ್ನು ನೋಡಬಹುದು. ಇವುಗಳ ಚಲನವಲನ ಗೆದ್ದಲಿನ ಚಲನವಲನಗಳಿಗೆ ಹೋಲಿಕೊಂಡಿರುತ್ತದೆ. ಗೆದ್ದಲು ಹೊರಗೆ ಬಂದು ಆಹಾರ ಸಂಗ್ರಹಿಸುವ ಸಮಯದಲ್ಲಿ ಇವು ಕೂಡ ಸಾಲಾಗಿ ಹೊರಡುತ್ತವೆ. ಸಾಲಾಗಿ ಹೋಗುವಾಗ ಕಾದು ಕುಳಿತು ನೋಡಿದರೆ ಅವು ಪುನಃ ಅದೇ ದಾರಿಯಲ್ಲಿ ಬರುವಾಗ ಬಾಯಲ್ಲಿ ಒಂದೆರಡು ಗೆದ್ದಲನ್ನು ಕಚ್ಚಿ ತರುವುದನ್ನು ನೋಡಬಹುದು.

ಗೆದ್ದಲನ್ನು ಹಿಡಿಯುವಾಗ ನೂರಾರು ಕಟ್ಟಿರುವೆ ಗೆದ್ದಲಿರುವ ಪ್ರದೇಶವನ್ನು ಸುತ್ತುವರಿದು, ಸರಿಯಾದ ಸಮಯಕ್ಕೆ ಒಂದು ಬಗೆಯ ಶಬ್ದವನ್ನು ಮಾಡಿ ಎಲ್ಲವೂ ಸೈನ್ಯ ಮುತ್ತಿದ ಹಾಗೆ ಕ್ಷಣಾರ್ಧದಲ್ಲಿ ಗೆದ್ದಲನ್ನು ಹಿಡಿದು ತರುತ್ತವೆ. ಗೆದ್ದಲು ಕೂಡ ಒಮ್ಮೆ ಕಟ್ಟಿರುವೆ ಅಪ್ಪಳಿಸಿತೆಂದರೆ ಉಳಿದವು ಕೂಡಲೇ ಸುರಂಗವನ್ನು ಸೇರಿ ಬಾಗಿಲನ್ನು ಮಣ್ಣಿನಿಂದ ಮುಚ್ಚುತ್ತವೆ. ಇರುವೆ ಮತ್ತು ಗೆದ್ದಲಿನ ಚಮತ್ಕಾರಗಳನ್ನೇ ನೋಡಿದವರಿಗೆ ಇವುಗಳ ಅಸಾಧಾರಣ ಬುದ್ಧಿವಂತಿಕೆ ಅರಿವಾಗುತ್ತದೆ. ಕಾಡುಗಳು ಬರಿದಾದಲ್ಲಿ ಕಟ್ಟಿರುವೆ ಗೂಡುಗಳು ಕಡಿಮೆಯಾಗುತ್ತವೆ. ಗೆದ್ದಲು ಜಾಸ್ತಿಯಾಗುತ್ತದೆ. ಕಟ್ಟಿರುವೆ ಗೆದ್ದಲಿನ ಹುತ್ತವನ್ನು ದಾಳಿ ಮಾಡುವುದಿಲ್ಲ. ಗೆದ್ದಲು ಆಹಾರಕ್ಕೆ ಬಂದಾಗಲೇ ಅವನ್ನು ಹಿಡಿಯುವುದು. ಪ್ರಕೃತಿಯಲ್ಲಿ ಇವು ಬೆಳೆದು ಬಂದ ವಿಧಾನ, ಇವೆರಡರ ಅಳಿವು ಉಳಿವಿನ ಸಮತೋಲನವನ್ನು ತೋರಿಸುತ್ತದೆ. ಗೆದ್ದಲಿಗೆ ದಿನಕ್ಕೆ ಸಾವಿರಾರು ಮೊಟ್ಟೆ ಇಡುವ ಶಕ್ತಿ ಇರುವುದು ಗೆದ್ದಲನ್ನು ಅವಲಂಬಿಸಿ ಜೀವಿಸುವ ಹಲವಾರು ಪ್ರಾಣಿಗಳಿಗೆ ಜೀವದಾನ ಮಾಡಿದರೂ ಅದರ ವಂಶ ನಿರಂತರವಾಗಿ ಸಾಗುವುದಕ್ಕೆ ಕಾರಣ.

ಹೀಗೆ ನಾಲ್ಕಾರು ಬಗೆಯ ಇರುವೆಗಳ ಮೇಲೆ ಸಂಶೋಧನೆ ಕೈಗೊಂಡ ಮೇಲೆ ದೇಶದ ನಾನಾ ಕಡೆಯಿಂದ ಬಗೆಬಗೆಯ ಇರುವೆಗಳನ್ನು ಗುರುತಿಸುವುದಕ್ಕೋಸ್ಕರ ಕರೆ ಬರುತ್ತಿತ್ತು. ಪ್ರೊ॥ ಮಸ್ತಾಕ್ ಆಲಿಯವರು ನೂರಾರು ಜಾತಿಯ ಇರುವೆಗಳನ್ನು ಗುರುತಿಸುವ ತಜ್ಞರಲ್ಲಿ ಒಬ್ಬರಾದರು. ಸೊಲನಾಪ್ಸಿಸ್ ಎಂಬ ಕೆಂಪು ಇರುವೆ ಅಮೇರಿಕಾ ಖಂಡದಲ್ಲಿ ಪೀಡೆಯಾಗಿ ಪರಿಣಮಿಸಿ ಅದರ ಹತೋಟಿಗೆ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿ ವೆಚ್ಚವಾಗುತ್ತಿದೆ. ಇದೇ ಜಾತಿ ನಮ್ಮಲ್ಲಿದ್ದರೂ ಅಷ್ಟಾಗಿ ಹೆಚ್ಚದಿರಲು ಕಾರಣವೇನೆಂದು ಒಂದು ಅಧ್ಯಯನ ಮಾಡಲು ಅಮೆರಿಕಾದ ಧನ ಸಹಾಯದಿಂದ ನನ್ನ ನೇತೃತ್ವದಲ್ಲಿ ಒಂದು ಯೋಜನೆ ಜಾರಿಯಾಯಿತು. ನಾಲ್ಕು ವರ್ಷ ನಡೆದ ಈ ಅಧ್ಯಯನದಲ್ಲಿ ಇಷ್ಟರ ವರೆಗೆ ತಿಳಿಯದಿದ್ದ ಕೆಲವು ಅಂಶಗಳು ಬೆಳಕಿಗೆ ಬಂದವು. ಮುಖ್ಯವಾಗಿ ಕೆಂಪಿರುವೆ ಜನರ ವಾಸಸ್ಥಾನದ ಆಜುಬಾಜುವಿನಲ್ಲಿ ಗೂಡು ಕಟ್ಟಿ ವೃದ್ಧಿಯಾಗುತ್ತವೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಮನೆ ಮುಂದೆ ನಿಂತಿದ್ದಾಗ ಸಣ್ಣನೆಯ ಕೆಂಪು ಇರುವೆಗಳು ಕಾಲಿಗೆ ಮುತ್ತಿಕೊಂಡು ಕಚ್ಚಿಸಿಕೊಂಡಿರುವ ಅನುಭವ ಅನೇಕರಿಗೆ ಇರ ಬಹುದು. ಈ ಇರುವೆ ಪ್ರಾಣಿಜನ್ಯವಾದ ಆಹಾರಕ್ಕೆ ಆಕರ್ಷಿಸುತ್ತವೆ. ಮನೆಯಲ್ಲಿ ನಾಯಿ ಇದ್ದರೆ

ಅದು ಬಿಟ್ಟ ಮೂಳೆ ಎಲುಬುಗಳಿಗೆ ಈ ಇರುವೆ ಹತ್ತುತ್ತವೆ. ಮಕ್ಕಳು ತಿಂಡಿ ತಿನಸುಗಳನ್ನು ಬಿಸಾಕಿದವು ಕೂಡ ಇವಕ್ಕೆ ಆಕರ್ಷಣೆ. ನಮ್ಮ ಸಮೀಕ್ಷೆಯ ಪ್ರಕಾರ ದಿನೇ ದಿನೇ ಈ ಇರುವೆಯ ಸಂತತಿ ಹೆಚ್ಚುತ್ತಿದೆ. ಅದರಲ್ಲೂ ಸಾರ್ವಜನಿಕರು ತಿಂಡಿ ತಿನಸುಗಳನ್ನು ತಿಂದು ಚೆಲ್ಲಾಪಿಲ್ಲಿಯಾಗಿ ಚೆಲ್ಲುತ್ತಿದ್ದ ಜಾಗದಲ್ಲಿ ಹೆಚ್ಚುತ್ತವೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಂತಹ ಸ್ಥಳಗಳಲ್ಲಿ ಕೂರಲು ಹಾಕಿರುವ ಬೆಂಚಿನ ಸುತ್ತ ಇವುಗಳ ಗೂಡು ಇರುವುದು ಸಾಮಾನ್ಯ. ಜನರು ತಿಂಡಿ ತಂದು ತಿಂದು ಉಳಿದದ್ದನ್ನು ಅಲ್ಲಿಯೇ ಬಿಸಾಡಿಯೋ ಅಥವಾ ಚೆಲ್ಲಿರುವುದು ಈ ಇರುವೆಗಳಿಗೆ ಸದಾ ಆಹಾರ. ಇವಲ್ಲದೆ ಈ ಇರುವೆಗಳು ಬೇರೆ ಪ್ರಾಣಿಗಳ ಮೇಲೂ ದಾಳಿ ಮಾಡುತ್ತವೆ.

ಒಮ್ಮೆ ಬೆಂಗಳೂರು ಹೊರವಲಯದಲ್ಲಿ ಒಂದು ಕೋಳಿ ಫಾರಂನಲ್ಲಿ ಕೆಂಪಿರುವೆಗಳ ಕಾಟ ಜಾಸ್ತಿಯಾಗಿ ಆ ಜಾಗವನ್ನೇ ಬಿಡಬೇಕಾದ ಪ್ರಸಂಗ ಬಂತು. ರಾತ್ರಿ ಹೊತ್ತು ಕೋಳಿಯ ಸುರಕ್ಷತೆಗೋಸ್ಕರ ಎರಡು ಅಲ್‌ಸೇಶನ್ ನಾಯಿಗಳನ್ನು ಸಾಕಿದ್ದರು. ಅವಕ್ಕೆ ಸದಾ ಮಾಂಸ ವನ್ನು ತಂದು ಹಾಕುತ್ತಿದ್ದರು. ನಾಯಿಗಳು ತಿಂದು ಉಳಿದ ಮೂಳೆ ಮಾಂಸಕ್ಕೆ ಕೆಂಪಿರುವೆ ಆಕರ್ಷಿಸಿತು. ಕೆಲವು ತಿಂಗಳೊಳಗೆ ಅವುಗಳ ಸಂತತಿ ಹೆಚ್ಚಿತು. ಅವುಗಳ ಸಂತಾನ ಹೆಚ್ಚಿದಂತೆಲ್ಲಾ ನಾಯಿ ಬಿಟ್ಟಿದ್ದ ಮೂಳೆ ಮಾಂಸ ಸಾಲದೆಯೋ ಅಥವಾ ಅವುಗಳ ರುಚಿ ನೋಡಿಯೋ ಜೀವ ಸಹಿತವಿದ್ದ ಕೋಳಿಗಳ ಮೇಲೆ ದಾಳಿ ಮಾಡಿದವು. ಈ ಇರುವೆಗಳನ್ನು ಹತೋಟಿ ಮಾಡಲು ಕೈಗೊಂಡ ಉಪಾಯಗಳೆಲ್ಲಾ ವ್ಯರ್ಥವಾದವು. ಕೊನೆಗೆ ಆ ಜಾಗವನ್ನೇ ಖಾಲಿ ಮಾಡಬೇಕಾಯಿತು.

ಇದಾದ ಕೆಲವು ವರ್ಷಗಳ ನಂತರ ರಾಮನ್ ಇನ್‌ಸ್ಟಿಟ್ಯೂಟಿನ ಕಾಂಪೌಂಡು ಒಳಗೆ ಇರುವ ವಿಶಾಲವಾದ ಲಾನ್ ಮೇಲೆ ಒಂದು ಬಗೆಯ ಕೊಂಡಲಿ ಹುಳ ಹುಲ್ಲನ್ನು ತಿಂದು ಬರಿದು ಮಾಡಲು ಪ್ರಾರಂಭಿಸಿತು. ಆ ಲಾನ್‌ಗೆ ಪ್ರತಿ ದಿನ ನೂರಾರು ಹಕ್ಕಿ, ಮೊಲ ಮತ್ತಿತರೆ ಪ್ರಾಣಿಗಳು ಬರುತ್ತಿದ್ದರಿಂದ ಕೀಟ ನಾಶಕವನ್ನು ಬಳಸಲು ನಿಷೇಧಿಸಿದ್ದರು. ಡಾ॥ ಕೃಷ್ಣನ್ ರವರು ಇದರ ಹತೋಟಿಗೆ ಬೇರೆ ಏನಾದರೂ ಉಪಾಯವಿದೆಯೇ ಎಂದು ನನ್ನನ್ನು ಸಂಪರ್ಕಿಸಿದರು. ಪ್ರಯತ್ನ ಮಾಡುತ್ತೇನೆಂದು ಹೇಳಿ ಹಿಂದೆ ಹೇಳಿದ ಕೋಳಿ ಫಾರಂನ ಗೋಳನ್ನು ನೆನೆಸಿಕೊಂಡು ಆ ಇರುವೆಯನ್ನೇಕೆ ಇದರ ಹತೋಟಿಗೆ ಬಳಸಬಾರದೆಂದು ಯೋಚಿಸಿ ಎರಡು ಅಡಿ ಚದುರದ ಕಾರ್ಡ್‌ಬೋರ್ಡ್ ಹಲಗೆಗಳ ಮೇಲೆ ಮಾಂಸವನ್ನು ಕೈಮಾದ ಹಾಗೆ ಚೂರು ಚೂರು ಮಾಡಿ ಈ ಇರುವೆಗಳಿದ್ದ ಗೂಡಿನತ್ತ ಇಟ್ಟು ಅದಕ್ಕೆ ಅವು ಅಂಟಿಕೊಂಡ ನಂತರ ತೆಗೆದುಕೊಂಡು ಹೋಗಿ ಅಲ್ಲಲ್ಲಿ ಲಾನ್ ಮೇಲೆ ಇಟ್ಟೆವು. ಒಂದೆರಡು ದಿನದಲ್ಲಿ ಲಾನ್‌ನಲ್ಲಿ ಅಲ್ಲಲ್ಲಿ ಈ ಇರುವೆಗಳು ಗೂಡು ಮಾಡಿದ್ದು ಕಂಡು ಬಂದಿತು. ದಿನ ಕಳೆದಂತೆಲ್ಲಾ ಗೂಡಿನ ಸುತ್ತ ಸಿಂಬಿಯಾಕಾರದಲ್ಲಿ ಮಣ್ಣನ್ನು ಹೊರಹಾಕಿದ್ದು ಲಾನಿನಲ್ಲೆಲ್ಲಾ ಕೆಂಪು ಕೆಂಪಾದಮಣ್ಣು ಗುಡ್ಡೆಯಾದವು. ಹತ್ತಿರದಿಂದ ವೀಕ್ಷಿಸಿದಾಗ ಆ ಮಣ್ಣಿನ ಕಂತದಲ್ಲಿ ಕಂಡಿದ್ದು ನೂರಾರು ಕೊಂಡಲಿ ಹುಳುಗಳ ಬರಿ ತಲೆಚಿಪ್ಪುಗಳು. ಲಾನ್ ತಿನ್ನುತಿದ್ದ ಅರ್ಧ ಮುಕ್ಕಾಲು ಅಂಗಲ ಉದ್ದವಿದ್ದ ಕೊಂಡಲಿ ಹುಳುಗಳನ್ನು ಎಳೆದುಕೊಂಡು ಹೋಗಿ ತಿಂದು, ಅರಗಿಸಲಾಗದಿದ್ದ ತಲೆಯ ಚಿಪ್ಪನ್ನು (ಹೆಡ್‌ಕ್ಯಾಪ್‌ಸೂಲ್) ಹೊರಗೆ ತಂದು ಹಾಕುತ್ತಿದ್ದವು. ಚದುರ ಅಡಿಗೆ ಸುಮಾರು ನಲವತ್ತು ಹುಳುವಿದ್ದ ಲಾನ್‌ನಲ್ಲಿ ಎರಡು ವಾರದಲ್ಲಿ ಹುಳುಗಳ ಸಂಖ್ಯೆ ಚದರಡಿಗೆ ಎರಡರಂತೆ ಕಂಡವು. ಲಾನ್ ಕೊಂಚ ಅವ್ಯವಸ್ಥೆಯಾಗಿ ಕಂಡರೂ ಕೂಡ ಏನೂ ಖರ್ಚಿಲ್ಲದೆ ಪರಿಸರಕ್ಕೆ ಯಾವ

ಹಾನಿಯೂ ಇಲ್ಲದೆ ಪ್ರಾಣಿ ಪಕ್ಷಿಗಳಿಗೆ ಏನೂ ತೊಂದರೆಯಾಗದೆ ಹತೋಟಿಯಾದ ದೃಶ್ಯವನ್ನು ನೋಡಿ ಡಾ॥ ಕೃಷ್ಣನ್‌ರವರು ಸಂತೋಷ ಪಟ್ಟು,· ಅವರ ಸ್ನೇಹಿತರಿಗೆಲ್ಲಾ ನನ್ನನ್ನು ಕಂಡಾಗ ಇವರು ಒಂದು ಪವಾಡವನ್ನು ನಮ್ಮ ಲಾನ್‌ನಲ್ಲಿ ನಡೆಸಿದರೆಂದು ಹೇಳುತ್ತಿದ್ದರು.

ಸೊಲನಾಪ್ಸಿಸ್ ಪ್ರಾಜೆಕ್ಟ್ ಸಮರ್ಪಕವಾಗಿ ಪೂರ್ಣವಾದ ನಂತರ ರಿಪೋರ್ಟನ್ನು ಅಮೆರಿಕಾಕ್ಕೆ ಕಳುಹಿಸಿಕೊಟ್ಟ ಮೇಲೆ ಪ್ರತ್ಯುತ್ತರವಾಗಿ ಒಂದು ಸರ್ಟಿಫಿಕೇಟ್ ಆಫ್ ಅಪ್ರಿಸಿಯೇಷನ್‌ನನ್ನು ಯು. ಎಸ್. ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್‌ಚರ್ ಕಳುಹಿಸಿ ಕೊಟ್ಟಿತು. ಈ ಹಿಂದೆಯೇ ಬೇರು ಹುಳುವಿನ ಮೇಲೆ ನಡೆಸಿದ ಅತ್ಯುತ್ತಮ ಸಂಶೋಧನೆಗೆ ರಾಷ್ಟ್ರಮಟ್ಟದ ಹುಕ್‌ರ್ ಅವಾರ್ಡ್ ಮತ್ತು ಮಣ್ಣು ಜೀವಿಗಳ ಮೇಲೆ ಕುರಿತ ಅತ್ಯುತ್ತಮ ಸಂಶೋದನೆಗೆ ಕೃ.ವಿ. ವಿದ್ಯಾನಿಲಯದ ಅವಾರ್ಡ್‌ಗಳು ಬಂದಿದ್ದವು.

ಬೆಂಗಳೂರು ಕೃ.ವಿ. ವಿದ್ಯಾನಿಲಯದಲ್ಲಿ ಪ್ರಾರಂಭಿಸಿದ ಮಣ್ಣು ಜೀವಿ ಮತ್ತು ಪರಿಸರ ವಿಜ್ಞಾನ (ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ) ವಿಭಾಗ ದೇಶದಲ್ಲೇ ಮೊದಲನೆಯದು. ಮಣ್ಣು ಜೀವ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗೆ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸಿದ್ದು ಇಲ್ಲಿಯೇ ಮೊದಲು. ಈ ವಿಷಯದಲ್ಲಿ ರೆಫರೆನ್ಸ್ ಪುಸ್ತಕಗಳು ಇಲ್ಲದ ಕೊರತೆಯನ್ನು ನಿಭಾಯಿಸಲು 'ಅಪ್ಲೈಡ್ ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ' ಎಂಬ ಪುಸ್ತಕವನ್ನು ನಾನು ಮತ್ತು ಡಿ. ರಾಜಗೋಪಾಲ್ ಸಂಪಾದಕರಾಗಿ, ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ನೆರವಾಗುವಂತೆ ಹೊರತರಲಾಯಿತು. ಇದರ ಎರಡನೆ ಮುದ್ರಣವನ್ನು ಆಕ್ಸ್‌ಫರ್ಡ್ ಮತ್ತು ಐ.ಬಿ.ಹೆಚ್. ಪಬ್ಲಿಕೇಷನ್, ನ್ಯೂಡೆಲ್ಲಿಯವರು ಪ್ರಕಟಿಸಿದರು. ಇದರ ಜೊತೆಗೆ ವರ್ಷಕ್ಕೆ ಎರಡು ಪ್ರತಿಯಂತೆ 'ಜರ್ನಲ್ ಆಫ್ ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ' ಹೊರಬರುತ್ತಿವೆ. ಈ ವಿಷಯದಲ್ಲಿ ನಾಲ್ಕು ರಾಷ್ಟ್ರಮಟ್ಟದ ಸಿಂಪೋಸಿಯಮ್ ಕೂಡ ಮಾಡಿ ಅವುಗಳ ಪ್ರೊಸೀಡಿಂಗ್ಸ್ ಪ್ರಿಂಟ್ ಮಾಡಲಾಗಿದೆ. ಇವೆಲ್ಲಕ್ಕೂ ಮಿಗಿಲಾಗಿ ಮಣ್ಣು ಜೀವ ಶಾಸ್ತ್ರದಲ್ಲಿ ಸಾಧಿಸಿದ ಪ್ರಗತಿಯನ್ನು ಗುರುತಿಸಿ, ಮಾಸ್ಕೋ ಕಾಂಗ್ರೆಸ್‌ನಲ್ಲಿ ನನ್ನನ್ನು ಅಂತರರಾಷ್ಟ್ರೀಯ ಸಾಯಿಲ್ ಸೈನ್ಸ್ ಸೊಸೈಟಿಯ ಸಾಯಿಲ್ ಜೂಆಲಜಿ ಕಮೀಷನ್ನಿನ ವೈಸ್‌ಛೇರ್‌ಮನ್ ಆಗಿ ಆಯ್ಕೆ ಮಾಡಿದ್ದರು. ಮೊಟ್ಟಮೊದಲಿಗೆ ಯೂರೋಪ್ ಮತ್ತು ಅಮೆರಿಕಾದ ಹೊರಗೆ ಅಂತರರಾಷ್ಟ್ರೀಯ ಸಾಯಿಲ್ ಜೂಆಲಜಿ ಕಲೋಕಿಯಂ ನಡೆದದ್ದು 1988ರಲ್ಲಿ, ಬೆಂಗಳೂರಿನಲ್ಲಿ. ನಾಲ್ಕು ವರುಷಗಳಿಗೊಮ್ಮೆ ಹಿಂದೆ ನಡೆದಿದ್ದ ಎಲ್ಲಾ ಕಲೋಕಿಯಂಗಳಿಗೆ ಹೋಲಿಸಿದರೆ, ಇದು ಬಹಳ ಯಶಸ್ವಿಯಾದದ್ದೆಂದು ಹೆಸರುವಾಸಿಯಾಯಿತು. ನಂತರ ನಡೆದ ಸಮಾವೇಶಗಳಾವುವೂ ಇದರ ಮಟ್ಟಕ್ಕೆ ಬರಲಿಲ್ಲ. ಈ ಸಮ್ಮೇಳನ ಬೆಂಗಳೂರು ಅಶೋಕ ಹೋಟಲಿಗೆ ಒಂದು ಮೆರಗು ಕೊಟ್ಟಿತು. ಅಲ್ಲಿಯ ತನಕ ಅಶೋಕ ಹೋಟಲಿನಲ್ಲಿ ಅಂತರ ರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳನ್ನು ನಡೆಸಲು ಸರಿಯಾದ ಸವಲತ್ತುಗಳಿಲ್ಲವೆಂದು ಹಿಂಜರಿಯುತ್ತಿದ್ದರು. ಇದಾದನಂತರ ಅಶೋಕ ಹೋಟಲಿನಲ್ಲಿರುವ ವ್ಯವಸ್ಥೆ ಬೆಂಗಳೂರಿನ ಮತ್ತಾವ ಹೋಟಲಿನಲ್ಲಿಯೂ ಇಲ್ಲವೆಂದು ತಿಳಿದು, ಬಹುತೇಕ ಅಂತರರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳು ಇಲ್ಲಿ ನಡೆಯಲು ಪ್ರಾರಂಭವಾದವು.

* * * *

ಕೀಟಗಳಲ್ಲಿ ಮೇರು ಪರ್ವತದಂತೆ ಮೆರಗುವ ಸಂಘಜೀವಿಗಳೆಂದರೆ ಗೆದ್ದಲು, ಇರುವೆ, ಜೇನು ಮತ್ತು ಕಡಜ. ಇವೆಲ್ಲದರಲ್ಲೂ ಕುಟುಂಬದ ಮೇಟಿ ರಾಣಿ, ಗಂಡು ಕೇವಲ ಲೈಂಗಿಕ ಸಂಪರ್ಕಕ್ಕೆ ಮಾತ್ರ. ಸೇವಕರು ಮತ್ತು ಸೈನಿಕರು ಗೆದ್ದಲು ಮತ್ತು ಇರುವೆಗಳಲ್ಲಿ ಕಂಡರೆ, ಜೇನಿನಲ್ಲಿ ರಾಣಿ, ಡ್ರೋನ್ಸ್ (ಗಂಡು) ಮತ್ತು ವರ್ಕರ್ಸ್ (ಸ್ಟರೈಲ್ ಹೆಣ್ಣು) ಇರುತ್ತವೆ. ಎಲ್ಲದಕ್ಕೂ ಒಂದು ನಿಗಧಿಯಾದ ಕರ್ತವ್ಯವಿದೆ. ರಾಣಿಗೆ ಸಂತಾನೋತ್ಪತ್ತಿ ಮತ್ತು ಗಂಡಿಗೆ ಲೈಂಗಿಕ ಕ್ರಿಯೆ ಬಿಟ್ಟರೆ ಮತ್ತೇನು ಇಲ್ಲ. ವರ್ಕರ್ಸ್ ಅಥವಾ ಸೇವಕರೇ ಉಳಿದೆಲ್ಲ ಕೆಲಸವನ್ನು ನಿರ್ವಹಿಸುವುವು. ಈ ಸಂಘಜೀವಿ ಕೀಟಗಳ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಸಾಧನೆಯಾದದ್ದನ್ನು ಪರಿಗಣಿಸಿ 1986ರಲ್ಲಿ ಜರ್ಮನಿಯ ಮ್ಯೂನಿಕ್‌ನಲ್ಲಿ ನಡೆದ ಹತ್ತನೇ ಸಂಘಜೀವಿ ಕೀಟಗಳ ಅಧ್ಯಯನದ ಸಮ್ಮೇಳನ (ಐ.ಯು.ಎಸ್.ಎಸ್.ಐ.) ದಲ್ಲಿ ನನ್ನನ್ನು ಹನ್ನೊಂದನೆಯ ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿ ಆರಿಸಿ ಈ ಸಮ್ಮೇಳನ ಭಾರತದಲ್ಲಿ ನಡೆಯುವಂತೆ ತೀರ್ಮಾನ ತೆಗೆದುಕೊಂಡರು. ಆಗ ಫ್ರಾನ್ಸ್, ಬ್ರೆಜಿಲ್, ಇಸ್ರೇಲ್ ಹನ್ನೊಂದನೆಯ ಸಮ್ಮೇಳನವನ್ನು ಮಾಡಲು ಪೈಪೋಟಿ ನಡೆಸುತ್ತಿದ್ದವು. ಹತ್ತನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ॥ ರೆಂಬೋಲ್ಡ್ ಹಲವು ಸಾರಿ ಭಾರತಕ್ಕೆ ಬಂದಿದ್ದರು. ಭಾರತದಲ್ಲಿರುವಷ್ಟು ವೈವಿಧ್ಯಮಾನವಾದ ಕೀಟ ಪ್ರಪಂಚ ಮತ್ತೆಲ್ಲೂ ಇಲ್ಲವೆಂದು ಅವರು ತಿಳಿದಿದ್ದರು. ಅದರಲ್ಲೂ ಸಂಘಜೀವಿಗಳಾದ ಗೆದ್ದಲು, ಇರುವೆ, ಜೇನು, ಕಡಜ ಮತ್ತಿತರ ಆರ್‌ತ್ರೋಪೋಡಾಗಳ ಅಧ್ಯಯನ ಮಾಡುವವರಿಗೆ ಇಲ್ಲಿರುವ ಅವಕಾಶ ಮತ್ತೆಲ್ಲೂ ಇಲ್ಲವೆಂದು ತಿಳಿದಿದ್ದ ರೆಂಬೋಲ್ಡ್ ಭಾರತ ಕಂಟೆಸ್ಟ್ ಮಾಡಲೇಬೇಕೆಂದು ನನಗೆ ಒತ್ತಾಯಿಸಿದರು. ಈ ಸಮ್ಮೇಳಕ್ಕೆ ಅದೇ ಮೊದಲ ಬಾರಿಗೆ ನಾನು ಹೋಗಿದ್ದು. ನನ್ನ ಜೊತೆ ಭಾರತದಿಂದ ಇದ್ದ ಇತರ ನಾಲ್ವರು ಕೂಡ ಹೊಸಬರು. ಭಾರತದ ಪರವಾಗಿ ನಾನು ಸ್ಪರ್ಧೆಗೆ ನಿಂತೆ. ಪ್ರೊ॥ ರೆಂಬೋಲ್ಡರ ಪ್ರಯತ್ನದಿಂದ ಭಾರತಕ್ಕೆ ಗೆಲುವಾಯಿತು. ಆಗ ದಕ್ಷಿಣ ಆಫ್ರಿಕ, ಇಸ್ರೇಲ್ ಮತ್ತು ತೈವಾನ್ ದೇಶಗಳೊಡನೆ ಭಾರತ ರಾಯಭಾರವನ್ನಿಟ್ಟುಕೊಂಡಿರಲಿಲ್ಲ. ಭಾರತದಲ್ಲಿ ಈ ಸಮ್ಮೇಳನ ಆದರೆ ಈ ದೇಶದ ವಿಜ್ಞಾನಿಗಳಿಗೆ ತಡೆಯಾಗುವುದೆಂದು ಕೆಲವರು ವಾದ ಮಾಡಿದರು. ಅವೆಲ್ಲಕ್ಕೂ ಸಮರ್ಪಕವಾಗಿ ಉತ್ತರ ಕೊಟ್ಟು ರೆಂಬೋಲ್ಡ್ ಸಮ್ಮತಿಸಿದರು. ಅದರಂತೆ 1990ರಲ್ಲಿ ಬೆಂಗಳೂರಿನಲ್ಲಿ ಹನ್ನೊಂದನೆಯ ಸಮ್ಮೇಳನ ಅದ್ದೂರಿಯಾಗಿ ನಡೆಯಿತು. ನಲವತ್ತ ನಾಲ್ಕು ದೇಶಗಳಿಂದ ಮುನ್ನೂರ ಐವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಹನ್ನೆರಡನೆಯ ಸಮ್ಮೇಳನ 1994ರಲ್ಲಿ ಪ್ಯಾರಿಸ್‌ನಲ್ಲಿ ನಡೆದಾಗ ಇದರ ಮೆರಗು ಅಲ್ಲಿಲ್ಲದ್ದನ್ನು ನೋಡಿ ಅನೇಕರು ತಮ್ಮ ಅಭಿಪ್ರಾಯವನ್ನು ನನ್ನ ಮುಂದೆ ವ್ಯಕ್ತಪಡಿಸಿದರು. ಬೆಂಗಳೂರಿನಲ್ಲಿ ನಡೆದ ಸಮ್ಮೇಳನದ ಸಲುವಾಗಿ ಅಲ್ಲಿಯ ತನಕ ಭಾರತದಲ್ಲಿ ನಡೆದ ಸಂಘಜೀವಿ ಕೀಟಗಳ ಅಧ್ಯಯನದ ಬಗ್ಗೆ 'ಸೋಸಿಯಲ್ ಇನ್‌ಸೆಕ್ಟ್ಸ್ ಇನ್ ಇಂಡಿಯನ್ ಪರ್‌ಸ್ಪೆಕ್ಟೀವ್' ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಪುನಃ ಐ.ಯು.ಎಸ್.ಎಸ್.ಐ. ಇಂಡಿಯನ್ ಚಾಪ್ಟರ್ ಆಶ್ರಯದಲ್ಲಿ ಬೆಂಗಳೂರಿನಲ್ಲಿ 1993ರಲ್ಲಿ 'ಇಂಟರ್ ನ್ಯಾಷನಲ್ ಸಿಂಪೋಸಿಯಂ ಆನ್ ಪಾಲಿನೇಷನ್ ಇನ್ ಟ್ರಾಫಿಕ್ಸ್' ಎಂಬ ಅಂತರರಾಷ್ಟ್ರೀಯ ಸಮ್ಮೇಳನವನ್ನು ಮಾಡಿ ಅದರ ಪ್ರೊಸೀಡಿಂಗ್ಸ್ ಅನ್ನು ಪ್ರಿಂಟ್

ಮಾಡಿಸಲಾಯಿತು. ಇಳುವರಿ ಹೆಚ್ಚಿಸುವಲ್ಲಿ ಕೀಟಗಳಿಂದ ಆಗುವ ಪರಾಗಸ್ಪರ್ಶದ ಮಹತ್ವ ವನ್ನು ಕುರಿತು ಆದ ಈ ಸಮ್ಮೇಳನ ಮುಂದೆ ಈ ದಿಸೆಯಲ್ಲಿ ಭಾರತದಲ್ಲಿ ನಡೆಯಬೇಕಾದ ಸಂಶೋಧನೆಯತ್ತ ಗಮನ ಹರಿಸುವಲ್ಲಿ ಪರಿಣಾಮಕಾರಿಯಾಯಿತು.

ಮಾನವನ ಸಂಪನ್ಮೂಲಗಳಲ್ಲಿ ಕೀಟಗಳೂ ಒಂದು ಭಾಗ. ಕೀಟಗಳಿಂದ ಮಾನವನಿಗೆ ಅಪಾರಹಾನಿಯುಂಟಾಗಿದ್ದರೂ ಅವುಗಳಿಂದ ಉಪಯೋಗ ಕೂಡ ಆಗಿದೆ. ಒಂದು ಅಂದಾಜಿನ ಪ್ರಕಾರ ಪ್ರಪಂಚದಾದ್ಯಂತ ಕೀಟಗಳಿಂದ ಹರಡುವ ಕಾಯಿಲೆಯಿಂದ ಸತ್ತವರ ಸಂಖ್ಯೆ ಇಲ್ಲಿಯ ತನಕ ಎಲ್ಲ ಯುದ್ಧಗಳಲ್ಲಿ ಸತ್ತವರಿಗಿಂತ ಹೆಚ್ಚು. ಆದರೂ ಪರಿಸರದಲ್ಲಿ ಅವು ಒಂದು ಅವಿಭಾಜ್ಯ ಅಂಗ. ಪ್ರಪಂಚದಲ್ಲಿರುವ ಜೀವಕೋಟಿಗಳೆಲ್ಲದರ ಒಟ್ಟು ಶೇಕಡ ಎಂಭತ್ತರಷ್ಟು ಪ್ರಬೇಧಗಳು ಕೀಟಗಳೇ. ಅವುಗಳಿಂದ ಬೆಳೆಗಳಿಗೆ ಆಗುವ ಅನಾಹುತ ಅಷ್ಟಿಷ್ಟಲ್ಲ. ಯಾವುದಾದರೂ ಅಣ್ವಸ್ತ್ರದಿಂದ ಪ್ರಪಂಚವನ್ನೇ ಸುಟ್ಟರೂ ಏನಾದರೂ ಜೀವ ಉಳಿಯಲಿದ್ದರೆ ಕೀಟವಲ್ಲದೆ ಮತ್ತೇನು ಬದಕಲು ಸಾಧ್ಯವಿಲ್ಲ. ಇಂತಹ ಗುಣಗಳುಳ್ಳ ಕೀಟಗಳು ಮನುಷ್ಯನ ಶತ್ರು ಮತ್ತು ಮಿತ್ರನೂ ಹೌದು. ಕೀಟಗಳು ಕೀಟಗಳನ್ನೇ ತಿನ್ನದಿದ್ದರೆ, ಪ್ರಪಂಚವೆಲ್ಲಾ ಕೀಟಮಯವಾಗುತ್ತಿತ್ತು. ಇದನ್ನೇ ಜೈವಿಕ ಹತೋಟಿ ಎನ್ನುವುದು. ಕೀಟ ಗಳಿಂದ ಪರಾಗಸ್ಪರ್ಶವಾಗದಿದ್ದರೆ ಇಷ್ಟೊಂದು ವೈವಿಧ್ಯಮಯವಾದ ಬೆಳೆ, ಹಣ್ಣು ಹಂಪಲು ಔಷಧ ಗಿಡಗಳು ದೊರೆಯುತ್ತಿರಲಿಲ್ಲ. ಪುರಾತನ ಕಾಲದಿಂದಲೂ ಕೀಟಗಳಿಂದ ಉತ್ಪತ್ತಿಯಾದ ಪದಾರ್ಥಗಳಂತಹ ಜೇನು, ರೇಷ್ಮೆ, ಅರಗು ಮುಂತಾದವು ಬಳಕೆಯಲ್ಲಿವೆ. ಪಾಂಡವರನ್ನು ಕೊಲ್ಲಲು ನಿರ್ಮಿಸಿದ್ದ ಅರಗಿನ ಅರಮನೆ ಕೀಟದಿಂದ ಉತ್ಪತ್ತಿಯಾದ ಅರಗಿನಿಂದ ಕಟ್ಟಿದ್ದು. ನಾಲ್ಕು ಸಾವಿರ ವರುಷಗಳಿಂದ ಭಾರತದಲ್ಲಿ ರೇಷ್ಮೆ ಹುಳದಿಂದ ತೆಗೆದ ರೇಷ್ಮೆ ಬಳಕೆಯಲ್ಲಿದೆ. ಜೇನಿನ ಸ್ವಾದವನ್ನು ಕಾಡು ಮನುಷ್ಯನೇ ಮೊದಲು ಸವಿದಿರಬೇಕು. ಸ್ಪೇನ್ ದೇಶದಲ್ಲಿ ಸಿಕ್ಕಿರುವ ಶಿಲಾಶಾಸನದ ಪ್ರಕಾರ ಕಾಡು ಜೇನನ್ನು ತೆಗೆಯುವ ಕ್ರಮ ಸುಮಾರು ಹದಿನೈದು ಸಾವಿರ ವರುಷಗಳ ಹಿಂದೆಯೇ ಮಾನವರಿಗೆ ಗೊತ್ತಿತ್ತೆಂದು ತಿಳಿಯುತ್ತದೆ.

ಭಾರತದಲ್ಲಿ ಸ್ವಾಭಾವಿಕವಾಗಿ ಜೇನಿನ ಹೊಳೆಯೆ ಹರಿಯುತ್ತಿತ್ತೆಂದು ಹೇಳುವುದು ಸಾಮಾನ್ಯ. ಹೆಜ್ಜೇನು, ತುಡುವೆ ಜೇನು, ಕೋಲುಜೇನು ಇಲ್ಲದ ಜಾಗವಿರಲಿಲ್ಲ. ಕಾಡಿನಿಂದ ಸಂಗ್ರಹಿಸಿದ ಜೇನು ಹೇರಳವಾಗಿ ದೊರೆಯುತ್ತಿತ್ತು. ಕೆಲವರು ಮಡಿಕೆ ಜೇನನ್ನು ಸಾಕುತ್ತಿದ್ದರು. ಆಧುನಿಕ ಜೇನು ಸಾಕಾಣಿಕೆ ಚಾಲ್ತಿಗೆ ಬಂದದ್ದು ಸುಮಾರು ಒಂದು ಶತಮಾನದಿಂದೀಚೆಗೆ, ಒಬ್ಬ ಪಾದ್ರಿಯು ಮಾಡಿದ ನ್ಯೂಟನ್ ಹೈವ್‌ನಿಂದ ಜೇನು ಹುಳುಗಳಿಗೆ ತೊಂದರೆಯಾಗದಂತೆ ಜೇನನ್ನು ಸಂಗ್ರಹಿಸುವ ವಿಧಾನ ಪಾಶ್ಚಾತ್ಯ ದೇಶದಲ್ಲಿ ಬಹುಬೇಗ ಬಳಕೆಗೆ ಬಂದರೂ, ಭಾರತದಲ್ಲಿ ಇದರ ಬಳಕೆ ಮಂದಗತಿಯಲ್ಲೇ ಇತ್ತು. ಕಾರಣ ಪ್ರಕೃತಿಯಲ್ಲಿ ಹೇರಳವಾಗಿ ದೊರೆಯುತ್ತಿದ್ದ ಜೇನಿನ ಪ್ರಭಾವ ಇರಬೇಕು. ಕಾಡುಗಳು ನಾಶವಾದಂತೆಲ್ಲಾ ಇವುಗಳ ಸಂಖ್ಯೆಯೂ ಕಡಿಮೆ ಯಾಗುತ್ತಾ ಬಂತು. ಸುಮಾರು ಐವತ್ತು ವರುಷದಿಂದೀಚೆಗೆ ರಸಗೊಬ್ಬರ ಮತ್ತು ರಾಸಾಯನಿಕ ಔಷಧಿಗಳ ಬಳಕೆಯಿಂದ ಅವುಗಳ ಸಂಖ್ಯೆ ಮತ್ತಷ್ಟು ಕಡಿಮೆಯಾಯಿತು. ಜೇನು ಸಾಕುವುದು, ಜೇನು ಮತ್ತು ಮೇಣಕ್ಕೆಂದು ಜನ ತಿಳಿದಿದ್ದರೇ ಹೊರತು ಅವು ಪರೋಕ್ಷವಾಗಿ ಪರಾಗಸ್ಪರ್ಶ ಮಾಡುತ್ತಿದ್ದ ಕೆಲಸವನ್ನು ತಿಳಿದಿರಲಿಲ್ಲ. ಒಂದು ಜೇನು ನೊಣ ಒಂದು ದಿನದಲ್ಲಿ ಸುಮಾರು

ಐದು ಸಾವಿರ ಸಾರಿ ಹೂವಿನ ಸ್ಪರ್ಶ ಮಾಡುವುದೆಂದು ತಿಳಿದಿದೆ. ಮತ್ತಾವ ಕೀಟವೂ ಇದರಷ್ಟು ಉಪಯುಕ್ತವಾಗಿ ಪರಾಗಸ್ಪರ್ಶ ಮಾಡಲಾರವು. ಇದರ ಮಹತ್ವವನ್ನು ಅರಿತ ಯೋಜನ ಆಯೋಗ, ನಮ್ಮ ದೇಶದ ಆಹಾರ ಹೆಚ್ಚಳಕ್ಕೆ ಕೊನೆ ಪಕ್ಷ ಎಕರೆಗೆ ಎರಡು ಜೇನು ಗೂಡಾದರೂ ಇರಬೇಕು ಎಂದು ಸಿಫಾರಸು ಮಾಡಿತ್ತು. ಇದರ ಅಂದಾಜಿನ ಪ್ರಕಾರ ನೂರಾ ಐವತ್ತು ಕೋಟಿ ಜೇನು ಗೂಡುಗಳಿರಬೇಕು, ದುರಾದೃಷ್ಟಕ್ಕೆ ಅದರಲ್ಲಿ ಒಂದಂಶವಾದರೂ ಇವೆಯೇ ಎಂದು ಅನುಮಾನ.

ಐವತ್ತು ವರುಷದ ಹಿಂದೆ ಅಂದಿನ ಮೈಸೂರು ಸರ್ಕಾರ ಜೇನು ಸಾಕಾಣಿಕೆಯ ಆವಶ್ಯಕತೆಯನ್ನು ಅರಿತು, ವ್ಯವಸಾಯ ಇಲಾಖೆಯಿಂದ ಒಬ್ಬರನ್ನು ಇಂಗ್ಲೆಂಡಿಗೆ ಕಳುಹಿಸಿದ್ದರು. ಜೇನು ಸಾಕಾಣಿಕೆಯಲ್ಲಿ ಹೆಚ್ಚು ಪರಿಣತೆಯನ್ನು ಪಡೆದು ಬಂದ ಶ್ರೀ ಗುಪ್ತರವರು ಜೇನು ಸಾಕಾಣಿಕೆ ಜನಪ್ರಿಯವಾಗುವಲ್ಲಿ ಸಹಾಯವಾದರು. ಆದರೆ ಈ ಇಲಾಖೆಯನ್ನು ಹಲವಾರು ಇಲಾಖೆಗಳಿಗೆ ವರ್ಗಾಯಿಸಿ, ನಂತರ ವಾಣಿಜ್ಯ ಇಲಾಖೆಗೆ ವರ್ಗಾಯಿಸಿದ ನಂತರ ಜೇನು ಮತ್ತು ಮಯಣ ಮಾರಾಟದ ಬಗ್ಗೆ ಆಸಕ್ತಿ ವಹಿಸಿದಷ್ಟು ಜೇನು ಸಾಕಾಣಿಕೆಗೆ ಪ್ರೋತ್ಸಾಹ ಕೊಡಲಿಲ್ಲವೆಂದು ನನ್ನ ಅಭಿಪ್ರಾಯ. ಸಮಯ ಸಿಕ್ಕಿದಾಗಲೆಲ್ಲ ಸಂಬಂಧಪಟ್ಟವರಲ್ಲಿ ಪ್ರತಿ ರೈತರಿಗೆ ಕೊನೆ ಪಕ್ಷ ಒಂದು ಜೇನು ಗೂಡು ಮತ್ತು ಪೆಟ್ಟಿಗೆ ದೊರೆಯುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡೆ. ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳಿಗೆ ಕೊಡುವ ಅನುದಾನವನ್ನು ಜೇನು ಗೂಡುಗಳಿಗೆ ಕೊಟ್ಟು ಕಡ್ಡಾಯವಾಗಿ ಜೇನು ಪೆಟ್ಟಿಗೆಯನ್ನು ತೆಗೆದುಕೊಳ್ಳುವಂತೆ ಮಾಡಿದ್ದರೆ ಎಲ್ಲಾ ರೈತರ ಹತ್ತಿರ ಕೊನೆ ಪಕ್ಷ ಒಂದು ಪೆಟ್ಟಿಗೆಯಾದರೂ ಇರುತ್ತಿತ್ತು. ಕೇವಲ ಶೇಕಡ ಇಪ್ಪತ್ತೈದರಷ್ಟು ರೈತರು ಜೇನು ಗೂಡು ಸಾಕಿದ್ದರೂ ಪರಿಸರಕ್ಕೆ ಬಹಳ ಪ್ರಯೋಜನವಾಗುತ್ತಿತ್ತು. ಇಂದಿಗೂ ಜೇನು ಸಾಕಾಣಿಕೆ ಕರ್ನಾಟಕದಲ್ಲಿ ಜನಪ್ರಿಯವಾಗದಿದ್ದದ್ದು ದುರದೃಷ್ಟಕರ.

ಮೂವತ್ತು ವರುಷಗಳ ಹಿಂದೆ ಪಂಜಾಬಿನಲ್ಲಿ ಜೇನು ದೊರೆಯುವುದು ದುರ್ಲಭವಾಗಿತ್ತು. ಅಲ್ಲಿ ಇಂದು ಎರಡು ಸಾವಿರ ಟನ್ ಜೇನು ದೊರೆಯುವಂತಾಗಿದೆ. ಪಂಜಾಬ್ ಕೃ.ವಿ.ವಿದ್ಯಾನಿಲಯದ ಅಂದಿನ ಕೀಟ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ॥ ಅತವಾಲರ ಹಠಮಾರಿತನದ ಪ್ರಯತ್ನದಿಂದ ಯೂರೋಪಿಯನ್ ಜೇನು ನೊಣ (ಎಪಿಸ್ ಮೆಲ್ಲಿಫೆರ)ವನ್ನು ತಂದು ವೃದ್ಧಿ ಮಾಡಿದ್ದರಿಂದ ಇಂದು ಉತ್ತರ ಇಂಡಿಯಾದ ಹಿಮಾಲಯ ತಪ್ಪಲಿನ ಪ್ರದೇಶಗಳಾದ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ್, ಪಶ್ಚಿಮ ಬಂಗಾಳ ಮತ್ತು ಪೂರ್ವಪ್ರಾಂತಗಳಲ್ಲಿ ಈ ತಳಿ ವೃದ್ಧಿಯಾಗಿ ನಮ್ಮ ದೇಶದ ತಳಿ (ಎಪಿಸ್ ಸೆರೆನ) ಯ ಕಡೆ ಗಮನ ಕಡಿಮೆಯಗಿದೆ. ಯೂರೋಪಿಯನ್ ತಳಿಯಿಂದ ನೂರು ಕೆ.ಜಿ.ಯವರೆಗೆ ವರುಷಕ್ಕೆ ಒಂದು ಪೆಟ್ಟಿಗೆಯಿಂದ ಜೇನು ತೆಗೆಯುವ ಸಾಧ್ಯತೆ ಇದೆ. ನಮ್ಮ ದೇಶದ ತಳಿಯೂ ಕೂಡ ಸರಿಯಾಗಿ ಸಾಕಿದರೆ ಮೂವತ್ತು ಕೆ.ಜಿ. ಕೊಡಬಲ್ಲದು. ಕೊಡಗಿನಲ್ಲಿ ಕೆಲವರು ಇದನ್ನು ಸಾಬೀತುಮಾಡಿ ತೋರಿಸಿದ್ದಾರೆ. ಹೊರದೇಶದ ತಳಿಗೆ ಸಾಕಷ್ಟು ಆಹಾರ ದೊರೆಯದಿದ್ದರೆ, ಅನುಕೂಲ ವಾತಾವರಣವಿಲ್ಲದಿದ್ದರೆ, ಆಹಾರವನ್ನು ಹುಡುಕಿಕೊಂಡು ಹೋಗಿ ಮತ್ತೊಂದೆಡೆ ನೆಲಸುವ ಚೈತನ್ಯವಿಲ್ಲ. ದೇಶೀಯತಳಿ ಶತಮಾನಗಳಿಂದ ನಮ್ಮ ಹವಾಗುಣಕ್ಕೆ ಹೊಂದಿಕೊಂಡು

ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಿ ತನ್ನ ಸಂತತಿಯನ್ನು ವೃದ್ಧಿಸಿಕೊಂಡು ಬಂದಿದೆ. ಪರಾಗಸ್ಪರ್ಶದಲ್ಲಿ ವಿದೇಶಿಯ ತಳಿಗಿಂತ ಹೆಚ್ಚು ಪರಿಣಾಮಕಾರಿ.

ಎಪ್ಪತ್ತನೆಯ ದಶಕದಲ್ಲಿ ದೇಶಿಯ ತಳಿಗೆ ಒಂದು ಮಾರಕವಾದ ಖಾಯಿಲೆ ಬಂತು. ಇದನ್ನು 'ಥೈ ಸಾಕ್ ಬ್ರೂಡ್' ಎಂದು ಕರೆಯುತ್ತಾರೆ. ಮೊದಲು ಥೈಲಾಂಡಿನಲ್ಲಿ ಕಾಣಿಸಿಕೊಂಡು ನಂತರ ದಕ್ಷಿಣ ಏಷ್ಯಾದಲ್ಲೆಲ್ಲಾ ಹರಡಿ ಭಾರತಕ್ಕೂ ಬಂದು ಉತ್ತರ ಇಂಡಿಯಾದಲ್ಲಿ ಪಶ್ಚಿಮ ಬಂಗಾಳದಿಂದ ಕಾಶ್ಮೀರದವರೆಗೆ ಇದರ ಸಂತತಿಯೇ ಹಾಳಾಗುವಷ್ಟು ಪ್ರಮಾಣದಲ್ಲಿ ಒಂದೆರಡು ವರುಷದಲ್ಲಿ ಹರಡಿತು. ಜನರೂ ಕೂಡ ಇದರ ಬಗ್ಗೆ ನಿಗಾ ಕೊಡಲಿಲ್ಲ. ಏಕೆಂದರೆ ಅಷ್ಟರಲ್ಲಿ ವಿದೇಶಿ ತಳಿಯನ್ನು ಸಾಕುವವರೇ ಹೆಚ್ಚಾದರು.

ಬೆಂಗಳೂರು ಕೃ.ವಿ.ವಿದ್ಯಾನಿಲಯದ ಕೀಟ ಶಾಸ್ತ್ರ ವಿಭಾಗದಲ್ಲಿ ಜೇನು ಸಾಕಾಣಿಕೆ ಸಂಶೋಧನೆ ಪ್ರಾರಂಭದಿಂದ ಇರಲ್ಲಿಲ್ಲವೆಂದೇ ಹೇಳಬಹುದು. ಉಪಯುಕ್ತ ಕೀಟಗಳ ಬಗ್ಗೆ ಬೋಧಿಸುವಾಗ ಜೇನಿನ ಬಗ್ಗೆ ಒಂದೆರಡು ಪಾಠಗಳನ್ನು ಬಿಟ್ಟರೆ ತರಬೇತಿಯೂ ಕೂಡ ಇರಲಿಲ್ಲ. ಜೇನು ವ್ಯವಸಾಯದ ಅಗತ್ಯವನ್ನು ಕಂಡು ಡಾ॥ ಅರಕೆರೆಯವರು ಕುಲಪತಿಗಳಾಗಿದ್ದಾಗ ಬೆಂಗಳೂರು ಮತ್ತು ಧಾರವಾಡ ಕಾಲೇಜುಗಳಿಗೆ ಒಂದೊಂದು ಅಸೋಸಿಯೇಟ್ ಪ್ರೊಫೆಸರ್ ಹುದ್ದೆಯನ್ನು ಜೇನು ಸಾಕಾಣಿಕೆಗೋಸ್ಕರವೆಂದು ಸೃಷ್ಟಿ ಮಾಡಿ, ಇದರ ಬಗ್ಗೆ ಹೆಚ್ಚು ಸಂಶೋಧನೆ ಆಗಬೇಕೆಂದು ಅಪೇಕ್ಷಿಸಿದ್ದರು. ಅವರ ನಂತರ ಕಾರಣಾಂತರಗಳಿಂದ ಈ ಹುದ್ದೆಗಳನ್ನು ಎಂಟಮಾಲಜಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಪರಿಣಮಿಸಿದರು.

ಬೆಂಗಳೂರಿನ ಕೆಲವು ಖಾಸಗಿಯವರು ಸ್ವಯಂ ಪ್ರೇರಿತ ಜೇನು ಸಾಕಾಣಿಕೆಯ ಹವ್ಯಾಸವನ್ನಿಟ್ಟುಕೊಂಡಿದ್ದರು. ಬೆಂಗಳೂರು ಜೇನು ಸಾಕಾಣಿಕೆಗೆ ಸರಿಯಾದ ಸ್ಥಳವಲ್ಲವೆಂದಿದ್ದ ನಂಬಿಕೆ ಇವರಿಂದ ಸುಳ್ಳಾಯಿತು. ನೂರಾರು ಜನರು ಹವ್ಯಾಸವಾಗಿ ಜೇನುಸಾಕಾಣಿಕೆ ಪ್ರಾರಂಭಿಸಿದರು. ಆದರೆ ಹೊಸದಾಗಿ ಮಾಡಬೇಕೆನ್ನುವವರಿಗೆ ಸರಿಯಾದ ತಾಂತ್ರಿಕ ಜ್ಞಾನ, ಸಲಕರಣೆ ಮತ್ತು ಜೇನುಗೂಡುಗಳು ದೊರೆಯುವುದು ದುರ್ಲಭವಾದ್ದರಿಂದ ಅನೇಕರು ನಿರುತ್ಸಾಹಿಗಳಾಗುತ್ತಿದ್ದರು. ಇಂತಹವರಿಗೆ ಪ್ರೋತ್ಸಾಹಿಸಲು ಕೀಟಶಾಸ್ತ್ರ ವಿಭಾಗದಲ್ಲಿ ಜೇನು ಸಾಕಾಣಿಕೆಯನ್ನು ಸುಮಾರು ಎಪ್ಪತ್ತರ ದಶಕದ ಕೊನೆಯ ಭಾಗದಲ್ಲಿ ಪ್ರಾರಂಭಿಸಿದೆವು. ಅದೇ ಸಮಯದಲ್ಲಿ ಅಂದರೆ 1979 ರಲ್ಲಿ ಬೆಂಗಳೂರು ಜೇನು ಪೋಷಕರ ಸಹಕಾರ ಸಂಘವನ್ನು (ಬೆ.ಜೇ.ಸ.ಸ.) ಸ್ಥಾಪಿಸಿದೆವು. ಇದರ ಮೊದಲ ಅಧ್ಯಕ್ಷರು ಡಾ॥ ಚನ್ನಬಸವಣ್ಣನವರು ಆಗಿದ್ದರು. ನಂತರ ನಾನು ಆದೆ. ಕೃ.ವಿ.ವಿ. ಕೀಟಶಾಸ್ತ್ರ ವಿಭಾಗ ಮತ್ತು ಬೆಂಗಳೂರು ಬೀ ಕೀಪರ್ಸ್ ಅಸೋಸಿಯೇಷನ್ (ಬಿ.ಬಿ.ಎ.) ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿದ್ದ 'ಬೀ ಕೀಪಿಂಗ್ ಫಾರ್ ಬಿಗಿನರ್ಸ್' ಎಂಬ ಮೂರು ದಿನಗಳ ತರಬೇತಿ ಬಹಳ ಜನಪ್ರಿಯವಾಯಿತು. ವರುಷಕ್ಕೆ ನೂರಾರು ಜನರನ್ನು ತರಬೇತಿ ಮಾಡಿ, ಹೊಸದಾಗಿ ಪ್ರಾರಂಭಿಸುವವರಿಗೆ ಬೆ.ಜೇ.ಸ.ಸ. ಮುಖಾಂತರ ಪೆಟ್ಟಿಗೆ, ಜೇನು ಗೂಡು ಮತ್ತು ತಾಂತ್ರಿಕ ನೆರವನ್ನು ಒದಗಿಸಲಾಗುತ್ತಿತ್ತು. ಕರ್ನಾಟಕದ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಕಮಿಷನ್ ನೆರವಿನಿಂದ ಬಿ.ಬಿ.ಎ. ಮೆಂಬರುಗಳಿಗೆ ಸಾಲ ಸೌಲಭ್ಯವನ್ನು ಒದಗಿಸುವ ಏರ್ಪಾಡು ಮಾಡಲಾಯಿತು. ಮೆಂಬರುಗಳ ಉಪಯೋಗಕ್ಕೆಂದು ಒಂದು ನ್ಯೂಸ್ ಲೆಟರ್ ಕೂಡ ಪ್ರಾರಂಭಿಸಿದೆವು. ಒಂದು ಸಮಯದಲ್ಲಿ ಈ ಸಹಕಾರ ಸಂಘದ ಸದಸ್ಯತ್ವ ಆರು ನೂರಕ್ಕೆ

ಏರಿತ್ತು. ಈ ಸಂಘದ ವತಿಯಿಂದ ವರುಷಕ್ಕೆ ಸುಮಾರು ಹತ್ತು ಸಾವಿರ ಕೆ.ಜಿ. ಜೇನು ಬೆಂಗಳೂರಿನಲ್ಲೇ ದೊರೆಯುವಂತಾಯಿತು.

ಉತ್ತರ ಭಾರತದಲ್ಲಿ ವಿದೇಶಿ ತಳಿ ಜೇನು ವೃದ್ಧಿಯಾದದ್ದನ್ನು ಕಂಡು ದಕ್ಷಿಣ ಭಾರತದಲ್ಲೂ ಇದರ ಪ್ರಯೋಗ ಮಾಡುವ ಯೋಚನೆಯಾಯಿತು. ಭಾರತೀಯ ಕೃಷಿ ಅನುಸಂಧಾನ ಧನ ಸಹಾಯದಿಂದ 1990ರಲ್ಲಿ ವಿದೇಶಿ ತಳಿಯನ್ನು ದಕ್ಷಿಣ ಭಾರತದಲ್ಲಿ ಸಾಕಲು ಇರುವ ಸಾಧಕ ಬಾಧಕಗಳನ್ನು ಕಂಡುಹಿಡಿಯಲು ನನ್ನ ನೇತೃತ್ವದಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಹರಿಯಾಣದಿಂದ ಹತ್ತು ಕಾಲೋನಿಗಳನ್ನು ತಂದು ಪ್ರಾರಂಭಿಸಿದೆವು. ಸುಮಾರು ಐವತ್ತು ವರುಷಗಳ ಹಿಂದೆಯೇ ಪೂನಾದಲ್ಲಿ ವಿದೇಶಿ ತಳಿಯನ್ನು ಸಾಕಲು ಪ್ರಯತ್ನಿಸಿ ವಿಫಲವಾದ ಸುದ್ಧಿ ಇತ್ತು. ಈ ಮಧ್ಯೆ ಪರಿಸರ ಸಂರಕ್ಷಣೆ ಸಂಘದವರು ವಿದೇಶಿ ಜೇನು ನೊಣವನ್ನು ತರುವುದರಿಂದ ಇಲ್ಲಸಲ್ಲದ ತೊಂದರೆ ದೇಶೀಯ ಜೇನಿಗೆ ಬರುವ ಸಾಧ್ಯತೆಗಳಿವೆಯಾದ್ದರಿಂದ ಇದರ ಸಂಶೋಧನೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು. ದೇಶದಲ್ಲಾಗಲೇ ಈ ವಿದೇಶಿ ತಳಿ ಸಾಕಷ್ಟು ವೃದ್ಧಿಯಾಗಿರುವುದರಿಂದ ಹೊರದೇಶದಿಂದ ತರಿಸುವ ಪ್ರಮೇಯವಿರಲಿಲ್ಲವಾದ್ದರಿಂದ ಅಂತಹ ಆತಂಕಗಳು ಕೇವಲ ಊಹಾಪೋಹವೆಂದು ಸಂಶೋಧನೆಯನ್ನು ಮುಂದುವರಿಸಿದೆವು. ಮೊಟ್ಟಮೊದಲಿಗೆ ವೈಜ್ಞಾನಿಕವಾಗಿ ವಿದೇಶಿ ತಳಿಯನ್ನು ದಕ್ಷಿಣ ಭಾರತದ ಪರಿಸರದಲ್ಲಿ ಸಾಕುವ ಪ್ರಯತ್ನ ನಡೆದದ್ದು ಇಲ್ಲಿ. ನಂತರ ಆಂಧ್ರಪ್ರದೇಶದಲ್ಲಿ ಮತ್ತು ಕೇರಳದಲ್ಲಿಯೂ ಕೂಡ ಈ ಪ್ರಯತ್ನವನ್ನು ಪ್ರಾರಂಭಿಸಲಾಯಿತು. ಇದ್ದಕ್ಕಿದ್ದ ಹಾಗೆಯೇ 1991ರಲ್ಲಿ ಕೊಡಗಿನಲ್ಲಿ ಮತ್ತು ಪುತ್ತೂರಿನಲ್ಲಿ ನಮ್ಮ ದೇಶೀಯ ತಳಿ ಜೇನಿಗೆ ಥೈ ಸಾಕ್ ಬ್ರೂಡ್ ರೋಗ ಅಂಟಿತು. ಕಾಡು ಕಿಚ್ಚಿನಂತೆ ಕೇವಲ ಒಂದೆರಡು ತಿಂಗಳಲ್ಲಿ ಈ ಪ್ರದೇಶದಲ್ಲೆಲ್ಲಾ ಸಾಕಿದ ಮತ್ತು ತುಡುವೆ ಜೇನೆಲ್ಲ ನಾಶವಾಯಿತು. ಜೇನು ಸಾಕುವವರು ಕಂಗಾಲಾದರು. ಕೂಡಲೆ ಕೃ.ವಿ.ವಿ. ಕೀಟ ಶಾಸ್ತ್ರ ವಿಭಾಗವು ಇದರ ಸ್ಯಾಂಪಲ್ ಅನ್ನು ಇಂಗ್ಲೆಂಡಿಗೆ ಕಳುಹಿಸಿ ಅದು ಥೈಸಾಕ್ ಬ್ರೂಡ್ ಎಂದು ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಯಿತು. ಥೈ ಸಾಕ್ ಬ್ರೂಡ್ ಖಾಯಿಲೆ ವೈರಸ್‌ನಿಂದ ಬರುವಂತಹದ್ದಾಗಿದ್ದರಿಂದ ಇದಕ್ಕೆ ಪರಿಹಾರವೇನು ಇರಲಿಲ್ಲ. ಆದರೆ ಕೆಲವು ಉಪಾಯಗಳಿಂದ ಇದು ಬರದ ಹಾಗೆ ಮಾಡುವ ತಂತ್ರಗಳಿದ್ದವು. ಮೊದಲು ಮಾಡಬೇಕಾಗಿದ್ದು ಈ ರೋಗದ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವಂತಹದ್ದು. ಸಂಬಂಧ ಪಟ್ಟವರನ್ನೆಲ್ಲ ಕರೆದು ವಿಚಾರ ವಿನಿಮಯಮಾಡಿ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ (ಐ.ಎ.ಟಿ.) ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಿ ಸರ್ಕಾರದ ಗಮನವನ್ನು ಸೆಳೆದು, ಕರ್ನಾಟಕದಲ್ಲಿದ್ದ ಸುಮಾರು ಹದಿಮೂರು ಜೇನು ಸಾಕಾಣಿಕೆ ಸಹಕಾರ ಸಂಘಗಳು ಕೈಗೊಳ್ಳಬೇಕಾದ ಕಾರ್ಯಕ್ರಮ ಗಳನ್ನು ರೂಪಿಸಲಾಯಿತು. ಮಡಿಕೇರಿಯಲ್ಲಿ ಕರ್ನಾಟಕದ ಜೇನು ಸಾಕಾಣಿಕೆಗಾರರ ಒಂದು ಬೃಹತ್ ಮೇಳವನ್ನು ಅಂದಿನ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ನಡೆಸಲಾಯಿತು.

ಭಾಗಮಂಡಲ, ವಿರಾಜಪೇಟೆ, ಪುತ್ತೂರು, ಸಕಲೇಶಪುರ ಜೇನು ಸಾಕಾಣಿಕೆ ಸಹಕಾರ ಸಂಘಗಳು ಲಕ್ಷಾಂತರ ಕೇಜಿ ಜೇನು ವಹಿವಾಟು ಮಾಡುತ್ತಿದ್ದಂತಹವು ಈ ಖಾಯಿಲೆಯಿಂದಾಗಿ ಸ್ಥಗಿತಗೊಂಡವು. ಬಿಹಾರ ಮತ್ತು ಪಶ್ಚಿಮ ಬಂಗಾಳದಿಂದ ಜೇನನ್ನು ತರಿಸಿ ಸೊಸೈಟಿಗಳಲ್ಲಿ ಮಾರುವ ಗತಿ ಬಂತು. ಮುಂದಿನ ಎರಡು ಮೂರು ವರುಷಗಳಲ್ಲಿ ಕರ್ನಾಟಕದಾದ್ಯಂತ ಈ

ರೋಗ ಪಸರಿಸಿತು. ಆದರೆ ವಿದೇಶಿ ತಳಿಗೆ ಈ ರೋಗ ತಟ್ಟಲಿಲ್ಲ. ಎಲ್ಲ ಕಡೆಯೂ ವಿದೇಶಿ ತಳಿ ಫಲಪ್ರದವಾಗದಿದ್ದರೂ ಒಂದಲ್ಲ ಒಂದು ದಿನ ಇದು ಈ ಸ್ಥಳಮಾನಕ್ಕೆ ಹೊಂದಿಕೊಂಡು ದೇಶೀಯ ತಳಿಯ ಜೊತೆ ಸಹಕರಿಸಿ ಜೇನು ಉತ್ಪತ್ತಿಯಲ್ಲಿ ಸಹಾಯವಾಗುವುದೆಂಬ ನಂಬಿಕೆ ಇದೆ. ತಮಿಳುನಾಡು ಕೇರಳಗಳಲ್ಲಿ ಈಗಾಗಲೇ ಅಲ್ಲಲ್ಲಿ ಈ ವಿದೇಶಿ ತಳಿಯಿಂದ ನಿರೀಕ್ಷಿಸಿದ ಫಲ ದೊರೆಯುತ್ತಿದೆಯೆಂದು ಸುದ್ದಿ.

ಬ್ರಿಟಿಷ್ ಕೌನ್ಸಿಲ್ ಸಹಾಯದಿಂದ ರಾಥಮ್‌ಸ್ಟೆಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ನಲ್ಲಿ ಜೇನುನೊಣದ ಖಾಯಿಲೆ ತಜ್ಞರನ್ನು ಸಂಪರ್ಕಿಸಿ ಅವರನ್ನು ಕರೆತಂದು 1994ರ ಸೆಪ್ಟಂಬರ್‌ನಲ್ಲಿ ರಾಷ್ಟ್ರಮಟ್ಟದ ಒಂದು ಕಾರ್ಯಾಗಾರವನ್ನು ಏರ್ಪಡಿಸಿ ಜೇನಿಗೆ ಬರುವ ಖಾಯಿಲೆ ಮತ್ತು ಇತರೆ ಶತ್ರುಗಳಿಂದ ಆಗುವ ತೊಂದರೆಗಳನ್ನು ಪತ್ತೆ ಹಚ್ಚಿ ಪರಿಹಾರ ಕಂಡುಕೊಳ್ಳುವ ವಿಧಾನದ ಬಗ್ಗೆ ತರಬೇತಿಯನ್ನು ಕೊಡಲಾಯಿತು. ಇದು ಜೇನು ಸಾಕಾಣಿಕೆ ಮತ್ತು ಸಂಶೋಧನೆ ಯಲ್ಲಿ ಕಂಡು ಬರುವ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳುವ ತಂತ್ರಜ್ಞಾನ ದೇಶದಲ್ಲೇ ದೊರೆಯುವಂತಾಯಿತು.

ಈ ದೇಶದಲ್ಲಿ ಜೇನು ಸಾಕುವ ತಂತ್ರಜ್ಞಾನ, ಜೇನುನೊಣಗಳ ತಳಿ ಅಭಿವೃದ್ಧಿ ನಿರೀಕ್ಷಿಸಿದ ಮಟ್ಟಕ್ಕೆ ಮುಟ್ಟಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಜೇನಿನ ಬಗ್ಗೆ ಸಂಶೋಧನೆ, ಬೋಧನೆ, ವಿಸ್ತರಣೆ ಕೀಟಶಾಸ್ತ್ರದ ಅಥವ ಪ್ರಾಣಿಶಾಸ್ತ್ರದ ಒಂದು ಭಾಗವಾಗಿರುವುದರಿಂದ ಈ ವಿಷಯಕ್ಕೆ ದೊರೆಯಬೇಕಿದ್ದ ಪ್ರೋತ್ಸಾಹ ದೊರೆತಿಲ್ಲ. ಇದನ್ನು ಅರಿತು ನಾನು ಕುಲಪತಿ ಯಾಗಿದ್ದಾಗ ದೇಶದಲ್ಲೇ ಮೊಟ್ಟಮೊದಲಿಗೆ ಒಂದು ಪ್ರತ್ಯೇಕ ಜೇನುಸಾಕಾಣಿಕೆ (ಎಪಿಕಲ್‌ಚರ್) ವಿಭಾಗವನ್ನು ಕೃ.ವಿ.ವಿ. ಬೆಂಗಳೂರಿನಲ್ಲಿ ತೆರೆಯಲಾಯಿತು. ಬೇರೆ ವಿಭಾಗಗಳಿಗಿರುವ ಸವಲತ್ತೆಲ್ಲ ಈ ವಿಭಾಗಕ್ಕೂ ದೊರೆಯುವಂತಾಯಿತು. ಹಿಂದೆ ರೇಷ್ಮೆ ಕೃಷಿಯನ್ನು ಕೀಟ ಶಾಸ್ತ್ರದಿಂದ ಬೇರ್ಪಡಿಸಿ ಪ್ರತ್ಯೇಕ ಮಾಡಿದ್ದರಿಂದ ಇಂದು ಅದಕ್ಕಾಗಿಯೇ ಮೀಸಲಾದ ರೇಷ್ಮೆ ಕೃಷಿ ಕಾಲೇಜು ದೇಶದಲ್ಲೇ ಮೊದಲನೆಯದಾಗಿ ಪ್ರಾರಂಭವಾಗಿ ಚಿಂತಾಮಣಿಗೆ ವರ್ಗಾಯಿಸಲಾಗಿದೆ. ಹೀಗೆಯೇ ಮುಂದೆ ಜೇನು ಕೃಷಿ ಕಾಲೇಜು ಆಗಲೆಂದು ನನ್ನ ಹಾರೈಕೆ. ಕರ್ನಾಟಕದ ಎರಡು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಜೇನು ಕೃಷಿ ಸಂಶೋಧನೆಗೆ ಎಲ್ಲ ಪರಿಣತೆ, ತಂತ್ರಜ್ಞಾನ, ಸಲಕರಣೆಗಳು ಇದ್ದಾಗ್ಯೂ ಪ್ರತ್ಯೇಕ ಎಪಿಕಲ್‌ಚರ್ ಇನ್‌ಸ್ಟಿಟ್ಯೂಟ್ ಮಾಡಬೇಕೆಂಬ ಕೆಲವರ ಪ್ರಯತ್ನ, ದುಸ್ಥಿತಿಯಲ್ಲಿರುವ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳುವ ವಿವೇಚನೆ ಇಲ್ಲದಿರುವುದನ್ನು ತೋರಿಸುತ್ತದೆ.

* * * *

ಕಾರ್ಯತಃ ನಾನು ಪ್ರಾಧ್ಯಾಪಕನಾಗಿದ್ದರೂ ಸಂಶೋಧನೆಯಲ್ಲಿ ಹೆಚ್ಚುಕಾಲ ಕಳೆದಿದ್ದೇನೆ. ಬರುಬರುತ್ತಾ ಅದೊಂದು ಬಗೆಯ ಹವ್ಯಾಸವಾಯಿತು. ನನ್ನ ಮೊದಲ ಡಿಗ್ರಿ 1957 ರಲ್ಲಿ ಮುಗಿದ ನಂತರ ಮೊದಲು ಪ್ರಾರಂಭ ಮಾಡಿದ ವೃತ್ತಿ ಮಂಗಳೂರಿನಲ್ಲಿದ್ದ ಕಂಕನಾಡಿ ಭತ್ತ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆಯ ಅಸಿಸ್ಟೆಂಟಾಗಿ. ನನ್ನಂತೆಯೇ ಇತರ ಮೂವರು ಸಂಶೋಧನೆ ಅಸಿಸ್ಟೆಂಟ್ಸ್ ಆಗಿ ನನಗಿಂತ ಮುಂಚೆಯೇ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ನಮ್ಮ ಮೇಲಿದ್ದ ಅಧಿಕಾರಿ ಫಾರಂ ಸೂಪರಿನ್‌ಟೆಂಡೆಂಟ್ ಸೇರಿದಂತೆ ಯಾರೊಬ್ಬರಿಗೂ ಸ್ನಾತಕೋತ್ತರ ಪದವಿ ಇರಲಿಲ್ಲ. ಹೇಳಿದ ಕೆಲಸವನ್ನು ಬಿಟ್ಟು ತಾವಾಗಿಯೇ ಏನು ಸಂಶೋಧನೆ ಮಾಡಬೇಕೆಂದು ಯೋಚಿಸಿ, ಯೋಜಿಸುವ ಪರಿಣತೆಯಾಗಲಿ ಅಥವಾ ಮಾರ್ಗದರ್ಶನವಾಗಲಿ ಇರಲಿಲ್ಲ. ಅಲ್ಲಿ ಒಂದು ವರುಷ ಪೂರ್ತಿಯಾಗುವುದರೊಳಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಐ.ಎ.ಆರ್.ಐ. ಡೆಲ್ಲಿಗೆ ತೆರಳಬೇಕಾಯಿತು. ಯುವ ವಿಜ್ಞಾನಿಗಳಿಗೆ ಸಂಶೋಧನೆಯಲ್ಲಿ ನಿರತರಾಗಲು ಬೇಕಿದ್ದ ವಾತಾವರಣವೆಲ್ಲಾ ಐ.ಎ.ಆರ್.ಐ.ನಲ್ಲಿತ್ತು. ಪ್ರಯೋಗಶಾಲೆ, ಪುಸ್ತಕಭಂಡಾರ, ಮಾರ್ಗದರ್ಶನ ನೀಡುವ ನುರಿತ ವಿಜ್ಞಾನಿಗಳು ಮತ್ತು ದೇಶಾದ್ಯಂತ ಆರಿಸಿ ಬಂದ ಪ್ರತಿಭಾವಂತ ವಿದ್ಯಾರ್ಥಿಗಳು ಎಲ್ಲವೂ ಸೇರಿ ದೇಶದಲ್ಲೇ ಇದೊಂದು ಪ್ರತಿಷ್ಠಿತ ಕೃಷಿ ವಿಜ್ಞಾನ ಕೇಂದ್ರವೆಂದು ಹೆಸರು ಗಳಿಸಿತ್ತು. ನನ್ನಲ್ಲಿ ಸಂಶೋಧನೆಯ ಗೀಳು ಅರಿತೋ ಅರಿಯದೆಯೋ ಬರಬೇಕಾದರೆ ಇಲ್ಲಿಯ ವ್ಯಾಸಂಗ ಮೂಲ ಕಾರಣವೆಂದು ಹೇಳಬೇಕು. ಇದರಲ್ಲಿ ವಿಧಿಯ ಕೈವಾಡವೂ ಇತ್ತೆಂದು ಹೇಳಬಹುದು. ಏಕೆಂದರೆ ಆಗಿನ ಪರಿಸ್ಥಿತಿಯಲ್ಲಿ ಯಾರ ಬೆಂಬಲವೂ ಇಲ್ಲದೆ ಡೆಲ್ಲಿಯಲ್ಲಿ ಎಂ.ಎಸ್ಸಿ. ಮಾಡಲು ಹೋಗಿದ್ದು ಒಂದು ಹುಚ್ಚು ನಿರ್ಧಾರವೆಂದೇ ಹೇಳಬೇಕು. ಯಾವ ಗಳಿಗೆಯಲ್ಲಾದರೂ ಬಿಟ್ಟು ಹೋಗುವ ಭಯ ಸದಾ ಕಾಡುತ್ತಿತ್ತು. ಅಂತು ಅಲ್ಲಿ ನನ್ನ ವ್ಯಾಸಂಗ ಪೂರ್ತಿ ಮಾಡಿದ್ದು ಒಂದು ಪವಾಡವೆಂದೇ ಹೇಳಬೇಕು.

ಎಂ.ಎಸ್ಸಿ. ಆದ ನಂತರ ವ್ಯವಸಾಯ ಕಾಲೇಜಿಗೆ ಉಪನ್ಯಾಸಕನಾಗಿ ಸೇರಿದಾಗ ಕಾಲೇಜಿನಲ್ಲಿ ಉಪನ್ಯಾಸಕರು ಸಂಶೋಧನೆ ಮಾಡಲು ಯಾವ ಉತ್ತೇಜನವೂ ಇರಲಿಲ್ಲ. ಆದರೆ ವ್ಯವಸಾಯ ಇಲಾಖೆಯಲ್ಲಿದ್ದ ಸಂಶೋಧನಾ ವಿಭಾಗಗಳು ಹೆಬ್ಬಾಳ ಕೃಷಿ ಕಾಲೇಜಿಗೆ ಸ್ಥಳಾಂತರಿಸಿದ್ದು, ಕರ್ನಾಟಕದ ಕೃಷಿ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದವು. ಕೆಲವು ವಿಭಾಗಗಳು ಅಂದರೆ ಕೆಮಿಸ್ಟ್ರಿ, ಎಂಟಮಾಲಜಿ, ಪ್ಲಾಂಟ್‌ಪೆಥಾಲಜಿ, ಬಾಟನಿ ವಿಭಾಗಗಳಿಗೆ ಐವತ್ತು ವರುಷಗಳ ಸಂಶೋಧನೆಯ ಪಾರಂಪರ್ಯ ಇತ್ತು. ಕೆಲವು ಕ್ಲಿಷ್ಟ ಸಮಸ್ಯೆಗಳಿಗೆ ಉಪಯುಕ್ತವಾದ ಉಪಾಯಗಳನ್ನು ಕೂಡ ಕಂಡುಹಿಡಿದಿದ್ದರು.

ಡಾ॥ ಪುಟ್ಟರುದ್ರಯ್ಯನವರ ನೇತೃತ್ವದಲ್ಲಿ ಕೀಟಶಾಸ್ತ್ರ ವಿಭಾಗ ಚುರುಕಾಗಿ ಕೆಲಸ ಮಾಡುತ್ತಿತ್ತು. ಇವರ ಜೊತೆ ಚೆನ್ನಬಸವಣ್ಣ, ಉಸ್ಮಾನ್, ಡಿ. ಶೇಷಗಿರಿ ರಾವ್, ಅಪ್ಪಣ್ಣ, ಶಿವಶಂಕರ ಶಾಸ್ತ್ರಿ, ಮಹೇಶ್ವರಯ್ಯ ಮುಂತಾದವರು ಕೀಟಶಾಸ್ತ್ರದಲ್ಲಿ ಹಲವಾರು ಸಂಶೋಧನೆಯನ್ನು ನಡೆಸುತ್ತಿದ್ದರು. ಮಲೆನಾಡಿನಲ್ಲಿ ಅಡಿಕೆ ಬೇರುತಿನ್ನುವ ಹುಳದ ಬಾಧೆ, ಉತ್ತರ ಕರ್ನಾಟಕ ಶಿವಮೊಗ್ಗ ಶೃಂಗೇರಿ ವಿಭಾಗದಲ್ಲಿ ಬಹಳವಾಗಿತ್ತು. ಆದರೆ ಅವುಗಳ ಕೂಲಂಕಷ ಅಧ್ಯಯನದ ಕೊರತೆಯಿಂದಾಗಿ ಪರಿಣಾಮಕಾರಿಯಾದ ಹತೋಟಿ ಕ್ರಮಗಳನ್ನು ತೆಗೆದುಕೊಳ್ಳಲಾಗಿರಲಿಲ್ಲ. ಸಾವಿರದ ಒಂಭೈನೂರ ಅರವತ್ತೆರಡು ಅರವತ್ತ ಮೂರರಲ್ಲಿ ಬೆಂಗಳೂರಿನಲ್ಲಿ ಅಂದಿನ ಮುಖ್ಯ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಗೋವಿಂದ ಭಟ್ಟರ ಮನೆಯ ಕಾಂಪೌಂಡಿನಲ್ಲಿ ಬೇರು ತಿನ್ನುವ ಹುಳುವಿನ ಬಾಧೆ ಬಹಳವಾಗಿತ್ತು. ಅವರು ಆಗಾಗ ಪರಿಹಾರಕ್ಕಾಗಿ ಕೀಟಶಾಸ್ತ್ರ ವಿಭಾಗವನ್ನು ಸಂಪರ್ಕಿಸುತ್ತಿದ್ದರು. ಬೇರು ಹುಳುವಿನ ಜೀವನ ಚರಿತ್ರೆ ಸರಿಯಾಗಿ ತಿಳಿದಿರಲಿಲ್ಲವಾದ್ದರಿಂದ, ಅದನ್ನು ತಿಳಿದ ಹೊರತು, ಯಾವ ಕಾಲದಲ್ಲಿ ಏನು ಮಾಡಬೇಕೆಂದು ಹೇಳಲು ಸಮಂಜಸವಾದ ಉತ್ತರವಿಲ್ಲದಿದ್ದರಿಂದ ಆ ಕೆಲಸವನ್ನು ನನಗೆ ಅಂಟಿಸಿದರು. ಆ ಸಮಯದಲ್ಲಿ ಕಾಲೇಜಿನಲ್ಲಿ ಕೀಟಶಾಸ್ತ್ರ ವಿಭಾಗದಲ್ಲಿದ್ದ ಉಪನ್ಯಾಸಕರಲ್ಲಿ ಮೂವರು ಹೆಚ್ಚಿನ ವ್ಯಾಸಂಗಕ್ಕೆ

ಹೊರಗೆ ಹೋಗಿದ್ದರು. ಹೆಚ್ಚಿನ ಜವಾಬ್ದಾರಿ ನನ್ನ ಮೇಲಿದ್ದುದರಿಂದ ಬೆಳಗಿನಿಂದ ಸಂಜೆಯವರೆಗೆ ಬಿಡುವಿಲ್ಲದ ಕೆಲಸ ಕಾಲೇಜಿನಲ್ಲಿರುತ್ತಿತ್ತು: ವಿಧಿ ಇಲ್ಲದೆ ಪುಟ್ಟರುದ್ರಯ್ಯನವರು, ನನ್ನನ್ನು ಕರೆದು, ಈ ವಿಭಾಗದಲ್ಲಿ ಎಂ.ಎಸ್‌ಸಿ. ಆಗಿರುವವನು ನೀನೊಬ್ಬನೆ. ಈ ಕೆಲಸವನ್ನು ಮಾಡಲು ಸಮರ್ಥನಾಗಿರುವವನೂ ನೀನೆ. ಜಸ್ಟೀಸ್ ಗೋವಿಂದ ಭಟ್ಟರು ಬಹಳ ವಿಷಯ ತಿಳಿದವರು. ಹಲವಾರು ಪುಸ್ತಕಗಳನ್ನು ಓದಿ ಮಾಹಿತಿ ಸಂಗ್ರಹಿದ್ದಾರೆ. ನಮಗೆ ತಿಳಿಯದಿರುವ ವಿಷಯಗಳು ಅನೇಕ ಕೀಟಶಾಸ್ತ್ರದ ವಿಷಯದಲ್ಲಿ ಅವರಿಗೆ ತಿಳಿವಳಿಕೆ ಇದೆ. ಆದ್ದರಿಂದ ಬೇರೆಯವರನ್ನು ಕಳುಹಿಸಲು ಮನಸ್ಸುಬಾರದು. ಹೇಗಾದರು ಬಿಡುವು ಮಾಡಿಕೊಂಡು ರಜಾದಿನಗಳಲ್ಲಿ ಅಥವ ಸಂಜೆಯ ಹೊತ್ತು ಅಲ್ಲಿ ನಿಂತು ಕೂಲಂಕಷವಾಗಿ ಪರಿಶೋಧಿಸಿ ಸಮರ್ಪಕವಾದ ಹತೋಟಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದರು.

ಕಷ್ಟದ ಕೆಲಸವಾದರೂ ಇದೊಂದು ಬಗೆಯ ಬಯಸದೆ ಬಂದ ಭಾಗ್ಯವೆಂದೇ ಹೇಳಬೇಕು. ಏಕೆಂದರೆ ನನ್ನ ನಿಜವಾದ ಸಂಶೋಧನೆಯ ಕೆಲಸ ಪ್ರಾರಂಭವಾಗಿದ್ದು ಇಲ್ಲಿಂದಲೇ. ಅಧ್ಯಯನ ಮುಂದುವರಿದಂತೆಲ್ಲ ಹೊಸ ಹೊಸ ವಿಷಯಗಳು ಸಂಗ್ರಹವಾದಂತೆಲ್ಲ ಕುತೂಹಲ ಹೆಚ್ಚಿತು. ಜಸ್ಟೀಸ್ ಗೋವಿಂದ ಭಟ್ಟರು ಸಂಗ್ರಹಿಸಿದ್ದ ಅನೇಕ ಮಾಹಿತಿಗಳು ಸಂಶೋಧನೆಯನ್ನು ಮುಂದುವರಿಸಲು ಸಹಾಯಕವಾದವು. ವಯಸ್ಕ ಹುಳುವಿನ ಚಟುವಟಿಕೆ ಸಂಜೆ ಕತ್ತಲಾದ ಮೇಲೆ ಪ್ರಾರಂಭವಾಗುತ್ತಿತ್ತು. ನನಗೂ ಆ ಸಮಯ ಸರಿಯಾಗಿತ್ತು. ಕೆಲವು ದಿವಸ ರಾತ್ರಿ ಹನ್ನೆರಡು ಗಂಟೆಯವರಿಗೆ ಗೋವಿಂದ ಭಟ್ಟರು, ಅವರ ಪತ್ನಿ, ಮಗಳು, ಡ್ರೈವರ್ ಗ್ಯಾಸ್‌ಲೈಟು ಹಿಡಿದು ಹುಳಗಳನ್ನು ಸಂಗ್ರಹಿಸುತ್ತಿದ್ದೆವು. ದಾರಿಯಲ್ಲಿ ಹೋಗುವವರಿಗೆ ಇದೊಂದು ಸೋಜಿಗವಾಗಿ ಕಾಣುತ್ತಿತ್ತು. ಸಂಗ್ರಹಿಸಿದ ವಿವಿಧ ಹಂತದ ಹುಳುವನ್ನು ಪ್ರಯೋಗಾಲಯಕ್ಕೆ ತಂದು ಪರೀಕ್ಷಿಸಿ, ಸಾಕಿ, ಮಾಹಿತಿ ಸಂಗ್ರಹಿಸಲಾಗುತ್ತಿತ್ತು. ಹೀಗೆ ಸತತವಾಗಿ ಸಂಗ್ರಹಿಸಿದ ಎಲ್ಲಾ ಮಾಹಿತಿಯಿಂದಾಗಿ ಸಮಗ್ರ ಹತೋಟಿಕ್ರಮವನ್ನು ನಿರೂಪಿಸಿ, ಈ ಹುಳುವಿನ ಬಾಧೆಯನ್ನು ತಡೆಯುವಂತಾಯಿತು.

ಜಸ್ಟೀಸ್ ಗೋವಿಂದ ಭಟ್ಟರು ನನ್ನ ಕೆಲಸವನ್ನು ಪ್ರಶಂಸಿಸಿ ಡಾ॥ ಪುಟ್ಟರುದ್ರಯ್ಯನವರಿಗೆ ಹೇಳಿದಾಗ, ಅವರಿಗೆ ತಲೆನೋವು ತಂದಿದ್ದ ಸಮಸ್ಯೆ ಪರಿಹಾರವಾದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ ಮುಂದಿನ ಗುರಿಯ ಬಗ್ಗೆ ನನಗೆ ಮಾರ್ಗದರ್ಶನ ನೀಡಿದರು. ಕರ್ನಾಟಕದಲ್ಲಿ ವಿವಿಧ ಬಗೆಯ ಬೇರುತಿನ್ನುವ ಹುಳುಗಳು ಮೈದಾನ ಪ್ರದೇಶದಲ್ಲಲ್ಲದೆ, ಮಲೆನಾಡಿನಲ್ಲಿ ಕಾಫಿ ತೋಟ, ಅಡಿಕೆ ತೋಟ, ಕರಾವಳಿಯಲ್ಲಿ ತೆಂಗಿನ ತೋಟಗಳಲ್ಲಿ ಬಹಳ ವರುಷಗಳಿಂದ ಬಾಧಿಸುತ್ತಿದ್ದವು. ಅವುಗಳಿಗೆ ಸೂಕ್ತ ಪರಿಹಾರ ಕಂಡಿರಲಿಲ್ಲ. ಇವೆಲ್ಲದರ ಬಗ್ಗೆ ಸಂಶೋಧನೆ ನಡೆಸಿ ಪಿಹೆಚ್.ಡಿ. ಥೀಸೀಸ್ ಮಾಡಬಹುದೆಂದು ಸೂಚಿಸಿದರು. ಇದು ಒಂದು ಒಳ್ಳೆಯ ಸಲಹೆ ಎಂದು ಕೈಗೆತ್ತಿಕೊಂಡೆ. ಮುಂದಿನ ಐದಾರು ವರುಷದಲ್ಲಿ ಸುಮಾರು ಹನ್ನೆರಡು ಬಗೆಯ ಬೇರು ತಿನ್ನುವ ಹುಳುಗಳ ಲಕ್ಷಣ, ಜೀವನ ಚರಿತ್ರೆ, ಅವುಗಳನ್ನು ವಿಂಗಡಿಸುವ ಬಗೆ, ಅವುಗಳ ಸ್ವಾಭಾವಿಕ ಶತ್ರುಗಳು, ವಯಸ್ಕ ದುಂಬಿಗಳು ಅಪೇಕ್ಷಿಸುತ್ತಿದ್ದ ಗಿಡಮರಗಳು, ಅವುಗಳು ಹೊರಬರುವ ಸಮಯ ಮುಂತಾದುವನ್ನೆಲ್ಲಾ ಅಧ್ಯಯನ ಮಾಡಿ ಪಿಹೆಚ್.ಡಿ. ಥೀಸೀಸ್ ಮಾಡಿದ್ದಲ್ಲದೆ ಕರ್ನಾಟಕದಲ್ಲಿ ಬೇರು ತಿನ್ನುವ ಹುಳುಗಳು ಎಂಬ ಒಂದು ಸಂಶೋಧನೆಯ ಮಾನೋಗ್ರಾಫ್ (ಯು.ಎ.ಎಸ್. ಮಾನೋಗ್ರಾಫ್ ಸೀರೀಸ್ ನಂ 2) ಕೂಡ ಹೊರತಂದದ್ದಾಯಿತು. ನನ್ನ

ಮೊದಲನೆಯ ಹಂತದ ಸಂಶೋಧನೆ ಸಂಪೂರ್ಣವಾಗುವಷ್ಟರಲ್ಲಿ ದೇಶಾದ್ಯಂತ ಬೇರುತಿನ್ನುವ ಹುಳದ ಬಾಧೆ ತಲೆಎತ್ತಿ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಾಸ್ಥಾನದಲ್ಲಿ ನೆಲಗಡಲೆ ಬೆಳೆ ಪೂರ್ಣನಾಶವಾಗಿತ್ತು. ಲೋಕಸಭೆಯಲ್ಲಿ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಬಿರುಸಾದ ಚರ್ಚೆಯಾಯಿತು. ಅಂದಿನ ಐ.ಸಿ.ಎ.ಆರ್. ಡೈರೆಕ್ಟರ್ ಜನರಲ್ ಮತ್ತು ಅಗ್ರಿಕಲ್‌ಚರ್ ಎಜುಕೇಷನ್ ಅಂಡ್ ರಿಸರ್ಚ್ ಸೆಕ್ರೆಟರಿಯವರು ಆದ ಎಮ್. ಎಸ್. ಸ್ವಾಮಿನಾಥನ್‌ರವರಿಗೆ ಸೂಕ್ತ ಉತ್ತರವಿಲ್ಲದೆ ಕಂಗಾಲಾಗಿದ್ದಾಗ ನನ್ನ ಸಂಶೋಧನೆ ಅವರಿಗೆ ಉತ್ತರ ಕೊಡಲು ನೆರವಾದದ್ದಲ್ಲದೆ ಮುಂದೆ ನಿರೂಪಿಸಬೇಕಿದ್ದ ತಂತ್ರಕ್ಕೂ ಸಹಾಯವಾಯಿತು. ಆಲ್ ಇಂಡಿಯಾ ಕೋ ಆರ್ಡಿನೇಟೆಡ್ ರೀಸರ್ಚ್ ಪ್ರಾಜೆಕ್ಟ್ ಆನ್ ವೈಟ್‌ಗ್ರಬ್ಸ್ ಅಸ್ತಿತ್ವಕ್ಕೆ ಬಂತು. ಮುಂದಿನ ಇಪ್ಪತ್ತು ವರುಷ ಅದಕ್ಕೆ ಸಲಹೆಗಾರನಾಗಿ ಸಂಶೋಧಕನಾಗಿ ನೆರವಾದೆ. ಈ ಕೆಲಸಕ್ಕೆ 'ಹುಕರ್ ಅವಾರ್ಡ್' ಪುರಸ್ಕಾರವೂ ದೊರೆಯಿತು.

ರಾಮಾಯಣ ಬರೆದ ವಾಲ್ಮೀಕಿಯ ಮೈ ತುಂಬ ಹುತ್ತ ಬೆಳೆದ ಸಂಗತಿ ಎಲ್ಲರಿಗೂ ಗೊತ್ತಿದ್ದರೂ, ರಾಮಾಯಣದಷ್ಟೇ ಸ್ವಾರಸ್ಯವಾಗಿರುವ ಗೆದ್ದಲಿನ ಚರಿತ್ರೆಯನ್ನು ಬಲ್ಲವರು ಬಹಳ ವಿರಳ. ನಮ್ಮ ದೇಶದಲ್ಲಿ ಅವುಗಳನ್ನು ಅಧ್ಯಯನ ಮಾಡಿರುವವರ ಸಂಖ್ಯೆ ಮತ್ತೂ ಕಡಿಮೆ. ಆದರೆ ಗೆದ್ದಲಿನ ಪರಿಚಯ ಇಲ್ಲದವರು ಅಪರೂಪ. ಇದರ ಅಧ್ಯಯನದ ಬಗ್ಗೆ ಕೃ.ವಿ.ವಿದ್ಯಾನಿಲಯದಲ್ಲಿ ನಡೆದದ್ದನ್ನು ಈ ಹಿಂದೆಯೇ ಸಂಕ್ಷಿಪ್ತವಾಗಿ ಹೇಳಿದೆ. ಹಾಗೆಯೇ ಇರುವೆಗಳ ಶೋಧನೆಯ ಬಗ್ಗೆ ಮತ್ತು ಪಾಶ್ಚಿಮಾತ್ಯ ದೇಶದ ಜೇನುಗೂಡನ್ನು ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರಯೋಗ ಮಾಡಿದ ವಿಷಯವನ್ನು ವಿವರಿಸಿದೆ.

ಅಮೆರಿಕಾದ ಸ್ಮಿತ್‌ಸೋನಿಯನ್ ಇನ್‌ಸ್ಟಿಟ್ಯೂಟಿನ ಗ್ರಾಂಟ್‌ನಲ್ಲಿ ಒಂದು ಯೋಜನೆ ನನ್ನ ಮತ್ತು ಅಮೆರಿಕಾದ ಪೆನ್‌ಸ್ಟೇಟ್ ಯೂನಿವರ್ಸಿಟಿಯ ಡಾ॥ ಪಿಯರ್‌ಸನ್‌ರವರ ನೇತೃತ್ವದಲ್ಲಿ ಮಣ್ಣಿನಲ್ಲಿ ಜೀವಿಸುವ ಟೈಗರ್ ಬೀಟಲ್ಸ್ ಬಗ್ಗೆ ಅಧ್ಯಯನ ನಾಲ್ಕು ವರ್ಷಗಳ ಕಾಲ ನಡೆದಿತ್ತು. ಪ್ರಾರಂಭದಲ್ಲಿ ಈ ಯೋಜನೆ ಪಂಜಾಬಿನಲ್ಲಿ ನಡೆಯಬೇಕಿತ್ತು. ಅಲ್ಲಿ ಆತಂಕ ವಾದಿಗಳ ಚಟುವಟಿಕೆ ಬಹಳವಾದ್ದರಿಂದ ದಕ್ಷಿಣ ಭಾರತದಲ್ಲಿ ಈ ಯೋಜನೆಯ ಕೇಂದ್ರವನ್ನು ತೆರೆಯಲು ಒಬ್ಬ ಸಹವಿಜ್ಞಾನಿಯ ಸಹಾಯ ಬೇಕಿತ್ತು. ಅಮೆರಿಕನ್ ರಾಯಭಾರಿಯ ಮೂಲಗಳಿಂದ ನನ್ನ ಹೆಸರನ್ನು ಸೂಚಿಸಿದಾಗ ಒಪ್ಪಿ ಈ ಯೋಜನೆಯ ಕೇಂದ್ರ ಬೆಂಗಳೂರು ಕೃ.ವಿ.ವಿ. ಕೀಟಶಾಸ್ತ್ರ ವಿಭಾಗದಲ್ಲಿ ನನ್ನ ನೇತೃತ್ವದಲ್ಲಿ ಪ್ರಾರಂಭವಾಯಿತು. ಟೈಗರ್ ಬೀಟ್‌ಲ್ಸ್ ಮರಿ ಮತ್ತು ವಯಸ್ಕ ಹಂತವೆರಡೂ ಬೇರೆ ಹುಳುಗಳನ್ನು ತಿಂದು ಜೀವಿಸುತ್ತವೆ. ಇದರ ಅಧ್ಯಯನದ ಮುಖ್ಯ ಉದ್ದೇಶ ಪರಿಸರದಲ್ಲಿ ಟೈಗರ್ ಬೀಟ್‌ಲ್ಸ್ ಅಳಿವು ಉಳಿವು ಆ ಪರಿಸರದ ಮಾಪನವನ್ನಾಗಿ ಬಳಸಿ ಮಾಹಿತಿ ಸಂಗ್ರಹಿಸುವುದಾಗಿತ್ತು. ನಮ್ಮ ದೇಶದಲ್ಲಿ ಕೇವಲ ನಾಲ್ಕೈದು ಜಾತಿಯ ಟೈಗರ್ ಬೀಟ್‌ಲ್ಸ್ ಮಾತ್ರ ಗೊತ್ತಿತ್ತು. ಈ ಯೋಜನೆ ಪೂರ್ಣವಾಗುವುದರೊಳಗೆ ಸುಮಾರು ನೂರ ಮೂವತ್ತೈದಕ್ಕೂ ಹೆಚ್ಚು ಜಾತಿಗಳು ದೊರೆತವು. ಹೆಚ್ಚಿನ ಜಾತಿಯು ಕೇಂದ್ರೀಕೃತವಾಗಿದ್ದದ್ದು ಕರ್ನಾಟಕದ ದಾಂಡೇಲಿಯಲ್ಲಿ ಸುಮಾರು ಹದಿನೈದು ಜಾತಿ, ಮತ್ತು ಪಶ್ಚಿಮ ಬಂಗಾಳದ ಸಿಲ್‌ಗುರಿಯಲ್ಲಿ (ಸುಮಾರು ಮೂವತ್ತೈದು ಜಾತಿ) ಉಳಿದೆಲ್ಲ ಕಡೆ ಅಲ್ಲಲ್ಲಿ ಒಂದೆರಡು ದೊರೆಯುತ್ತಿದ್ದವು. ಟೈಗರ್ ಬೀಟ್‌ಲ್ಸ್ ಭೂಮಿಯಿಂದ ಹೊರಗೆ ಬರುವುದು

ಮಳೆಗಾಲ ಪ್ರಾರಂಭವಾದ ಮೇಲೆ. ಅವುಗಳನ್ನು ಹಿಡಿಯುವುದು ಸಾಮಾನ್ಯರಿಗೆ ಕಷ್ಟ. ಡಾ॥ ಪಿಯರ್‌ಸನ್, ನಾನು ಮತ್ತು ನನ್ನ ಇಬ್ಬರು ವಿದ್ಯಾರ್ಥಿಗಳು ಈ ವಿಷಯದ ಮೇಲೆ ಪಿಹೆಚ್.ಡಿ. ಮಾಡುತ್ತಿದ್ದವರು ದಿನವೆಲ್ಲ ಹಿಡಿದರೂ ಕೇವಲ ಹತ್ತಿಪ್ಪತ್ತು ಸಿಕ್ಕುತ್ತಿದ್ದವು. ನೋಡಿದ ತಕ್ಷಣ ಹಾರುತ್ತಿದ್ದ ಹುಳವನ್ನು ನೆಲದ ಮೇಲೆ ಕುಳಿತಾಗ ಜಾಣ್ಮೆಯಿಂದ ಬಲೆಯನ್ನು ಬೀಸಿ ಅದರೊಳಗೆ ಬಂದದ್ದನ್ನು ಹಿಡಿಯಬೇಕಿತ್ತು.

ಡಾ॥ ಪಿಯರ್‌ಸನ್‌ರವರು ಅಜಾನುಬಾಹು ವ್ಯಕ್ತಿ. ಆರು ಅಡಿ ನಾಲ್ಕು ಅಂಗುಲ ಎತ್ತರ, ಬೋಳುತಲೆ. ದಿನವೆಲ್ಲ ಊಟ ತಿಂಡಿ ಇಲ್ಲದೆ ನಡೆಯುತ್ತಿದ್ದರು. ಮಳೆ ಬಂದರೆ ನಾವೇನಾದರೂ ಹೋಗಿ ಮರದಡಿ ನಿಂತರೆ ಅವರಿಗೆ ಸಿಟ್ಟು. ಮಳೆ ಬಂದರೆ ನೀವೇನು ಕರಗಿ ಹೋಗುವಿರಾ, ಸ್ವಲ್ಪ ಸಮಯದ ನಂತರ ಆರಿ ಹೋಗುತ್ತದೆ ಎನ್ನುತ್ತಿದ್ದರು.ಅವರು ಹಾಕಿದ ಜೀನ್ಸ್ ಪ್ಯಾಂಟು ಮತ್ತು ಟೀಷರಟು ಮಳೆ ಬಿಸಿಲೆನ್ನದೆ ಅವರ ಎರಡು ತಿಂಗಳ ಭಾರತದ ಉದ್ದಗಲ ಪ್ರವಾಸದಲ್ಲಿ ಕಾಪಾಡುತ್ತಿದ್ದವು. ಅವರಿಗೆ ಕನ್ನಡ ಕಲಿಯಬೇಕೆಂಬ ಹಂಬಲ. ಅರ್ಧಂಬರ್ಧ ಅರ್ಥವಾಗು ತ್ತಿದ್ದರೂ ಮಗುಚಿ ಮಾತಾಡಲು ಬಾರದು. ಸಾಕು ಬೇಕೆನ್ನುವುದನ್ನು ತದ್‌ವಿರುದ್ಧವಾಗಿ ಉಪಯೋಗಿಸುತ್ತಿದ್ದರು. ಹೀಗಾಗಿ ಅವರು ಊಟ ಮಾಡುವಾಗ ಅನೇಕ ಸಾರಿ ಬೇಕಿದ್ದಾಗ ಬಡಿಸುತ್ತಿರಲಿಲ್ಲ. ಸಾಕಾಗಿದ್ದಾಗ ಬಿಡುತ್ತಿರಲಿಲ್ಲ.

ಒಮ್ಮೆ ಸಾಗರದಲ್ಲಿ ಊಟಕ್ಕೆಂದು ನಿಂತಾಗ ಅವರು ಮತ್ತು ನಾನು ಕಾರಿನಲ್ಲಿದ್ದೆವು. ನಮ್ಮ ಜೊತೆಯವರು ಊಟಕ್ಕೆ ಹೋಗಿದ್ದರು. ಹತ್ತಾರು ಸ್ಕೂಲು ಹುಡುಗರು ಕಂಟೆಸಾ ಕಾರನ್ನು ಸುತ್ತುವರಿದು ಕಾರಿನ ಬಗ್ಗೆ ಮತ್ತು ಪಿಯರ್‌ಸನ್‌ರ ಬಗ್ಗೆ ಮನಸ್ಸಿಗೆ ಬಂದಂತೆ ವ್ಯಾಖ್ಯಾನ ಮಾಡುತ್ತಿದ್ದರು. ಹೀಗೆ ಮಾತಾಡಿಕೊಳ್ಳುತ್ತಿದ್ದಾಗ ಒಬ್ಬ ಹುಡುಗ ಇವನೇನು ಇಷ್ಟು ದಡಿಯ ಕಾರು ತುಂಬ ಕುಳಿತಿದ್ದಾನಲ್ಲ ಎಂದ. ಆ ತಕ್ಷಣ ಪಿಯರ್‌ಸನ್ ಹೌದಾ ಅಂದರು. ಆ ಹುಡುಗರಿಗೆ ಇದನ್ನು ಕೇಳಿ ಜಂಘಾಬಲವೇ ಅಡಗಿ ಹೋಯಿತು. ಅಷ್ಟರವರೆಗೆ ಮಾತಾಡಿದ್ದೆಲ್ಲ ಇವರಿಗೆ ಅರ್ಥವಾಗಿದೆಯೆಂದು ತಿಳಿದು ಅಲ್ಲಿಂದ ಎಲ್ಲರೂ ಕಾಲುಕಿತ್ತರು. ಹುಡುಗರು ಹೇಳಿದ್ದು ಅರ್ಥವಾಗಿ ಇವರು ಹೌದಾ ಎಂದು ಹೇಳಿದ್ದಲ್ಲ! ನಾವು ನಾವೇ ಕನ್ನಡದಲ್ಲಿ ಮಾತಾಡಿಕೊಳ್ಳುತ್ತಿದ್ದಾಗ ಅವರು ಆಗಾಗ ಹೌದಾ ಅನ್ನುತ್ತಿದ್ದರು. ಹಾಗೆ ಆ ಹುಡುಗರು ಹೇಳಿದ್ದಕ್ಕೂ ಇವರು ಹೇಳಿದ್ದಕ್ಕೂ ಕಾಕತಾಳಿಯವಾಯಿತು.

ಪಿಯರ್‌ಸನ್ ಮನೆಗೆ ಬಂದಾಗ ಮಕ್ಕಳಿಗೆಲ್ಲ ಅತಿಶಯ ಸಂತೋಷ. ಅವರ ಹೆಬ್ಬೆರಳು ಮೊಟುಕಾಗಿ ಮೊಂಡಾಗಿತ್ತು. ಅವರು ಕೈ ಚಳಕ ಮಾಡಿ ಬೆರಳನ್ನೆಲ್ಲ ಗುಡ್ಡೆ ಮಾಡಿ ಹೆಬ್ಬೆರಳು ಯಾವುದೆಂದು ಗುರುತಿಸಿದವರಿಗೆ ಚಾಕಲೇಟು ಕೊಡುತ್ತೇನೆಂದು ಹೇಳುತ್ತಿದ್ದರು. ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಹೊರದೇಶದ ವಿಜ್ಞಾನಿಗಳು ನಮ್ಮ ಡಿಪಾರ್ಟ್‌ಮೆಂಟಿಗೆ ಕಾರ್ಯನಿಮಿತ್ತ ಬಂದಾಗಲೆಲ್ಲಾ ನಮ್ಮ ಮನೆಗೆ ಊಟಕ್ಕೆ ಬರುತ್ತಿದ್ದದ್ದು ವಾಡಿಕೆ. ಹಾಗೆ ಬಂದವರಲ್ಲೆಲ್ಲಾ ಇಂದಿಗೂ ಮರೆಯದೆ ಇರುವವರು ಡಾ॥ ಡೇವಿಡ್, ಎಲ್. ಪಿಯರ್‌ಸನ್, ಡಾ॥ ಕ್ಲೈವ್ ಎಡ್‌ವರ್ಡ್ಸ್, ಡಾ॥ ರೋಜರ್ ಮಿಟ್‌ಚಲ್, ಡಾ॥ ಟಿ. ಜಿ. ವುಡ್, ಡಾ॥ ಮೆಲ್‌ಕಾಂಕೊ, ಡಾ॥ ಪೀಟರ್ ವಾಕರ್ ಮೊದಲಾದವರು.

ಡಾ॥ ರೋಜರ್ ಮಿಟ್‌ಚಲ್ ಅಮೆರಿಕದ ಕೊಲಂಬಸ್ ವಿಶ್ವವಿದ್ಯಾನಿಲಯದಿಂದ ಒಂದು ವರುಷ ಸೆಬಾಟಿಕಲ್ ರಜೆಯಲ್ಲಿ ಬಂದು ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿದ್ದರು. ನಮ್ಮ ಮನೆಯ ಮುಂದಿನ ಸಾಲಿನಲ್ಲಿ ಮಹಡಿಯ ಮೇಲೆ ಬಾಡಿಗೆಗೆ ಇದ್ದು ಸ್ವತಃ ಅಡಿಗೆ ಮಾಡಿಕೊಳ್ಳುತ್ತಿದ್ದರು. ನಮ್ಮ ಹಾಗೆ ಪಂಚೆ ಉಟ್ಟು ಮನೆಯಲ್ಲಿದ್ದಾಗ ಬರಿಗಾಲಿನಲ್ಲಿ ನಡೆಯುತ್ತಿದ್ದರು. ಚಾಪೆಯ ಮೇಲೆ ಕೂರುವ ಅಭ್ಯಾಸವನ್ನು ಕೂಡ ಮಾಡಿದ್ದರು. ಅವರು ಬಂದಾಗ ಅವರಿಗೆ ಇಳಿವಯಸ್ಸು, ಮೂರು ಹೆಣ್ಣುಮಕ್ಕಳು ಮದುವೆ ಆಗಿದ್ದರೂ ಇವರು ಬಂದ ಒಂದೆರಡು ತಿಂಗಳಲ್ಲಿ ಅವರ ಪತ್ನಿ ಇವರನ್ನು ಡೈವೋರ್ಸ್ ಮಾಡಿರುವುದಾಗಿ ತಿಳಿಸಿದ್ದರು. ಇವರು ಬರುವ ಒಂದೆರಡು ತಿಂಗಳ ಮುಂಚೆ ಅವರ ಪತ್ನಿ ಸಮೇತ ಬರುವುದಾಗಿ ತಿಳಿಸಿದ್ದರು. ಈ ಹಿನ್ನೆಲೆಯನ್ನೇನು ಅರಿಯದ ನಾನು, ನಿಮ್ಮ ಪತ್ನಿ ಯಾವಾಗ ಬರುತ್ತಾರೆಂದು ಒಂದು ದಿನ ಕೇಳಿದೆ. ಅದಕ್ಕೆ ಅವರು ಕ್ಷಮೆಯನ್ನು ಕೇಳಿ ಮುಂಚೆ ನಾನೇ ಹೇಳಬೇಕಿತ್ತು. ಆಕೆ ಒಂದು ದೊಡ್ಡ ಕಂಪನಿಯಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದಳು. ನಾನು ಸದಾ ಕಾಲೇಜು, ಸಂಶೋಧನೆ ಎಂದು ಅವಳ ಜೊತೆ ಹೆಚ್ಚು ಕಾಲ ಕಳೆಯಲಾಗುತ್ತಿರಲಿಲ್ಲ. ಅವಳಿದ್ದ ಕಂಪನಿಯ ಮಾಲಿಕ ಅವಳಿಗಿಷ್ಟವಾಯಿತಂತೆ. ಅವಳಿಚ್ಛೆಯಂತೆ ಆಗಲಿ ಎಂದೆ ಅಂದರು. ಅವರು ಹೇಳುವಾಗ ಅದೊಂದು ಸಾಮಾನ್ಯ ಸಂಗತಿ ಎನ್ನುವ ರೀತಿ ಇತ್ತು. ಹಬ್ಬ ಹರಿದಿನಗಳಲ್ಲಿ ಅವರನ್ನು ಊಟಕ್ಕೆ ಕರೆಯುತ್ತಿದ್ದೆವು. ಅಮೆರಿಕನ್ನರು ಸಾಮಾನ್ಯವಾಗಿ ಎಲೆ ಅಡಿಕೆ ಬೀಡ ತಿನ್ನುತ್ತಿರಲಿಲ್ಲ. ಆದರೆ ಇವರು ಎಲೆ ಅಡಿಕೆ ಕೂಡ ಹಾಕಿಕೊಳ್ಳುತ್ತಿದ್ದರು. ರಾಗಿ ಹಿಟ್ಟು ಮಾತ್ರ ಉಣ್ಣಲು ಬರುತ್ತಿರಲಿಲ್ಲ. ಅದನ್ನು ಅಪೇಕ್ಷೆ ಕೂಡ ಮಾಡುತ್ತಿರಲಿಲ್ಲ. ಅಮೆರಿಕನ್ನರು ರಾಗಿ ಮುದ್ದೆ ಊಟ ಮಾಡಿದ್ದು ನಾನು ನೋಡಿಲ್ಲ. ಹಿಂದೆ ಕೆನಡಿಯನ್ ಡಾ॥ ಕೋಲ್‌ಮನ್ ಹಳ್ಳಿಗೆ ಹೋದರೆ ರಾಗಿ ಮುದ್ದೆ ತಿನ್ನುತ್ತಿದ್ದರೆಂದು ಬಲ್ಲವರು ಹೇಳುತ್ತಿದ್ದರು.

ಡಾ॥ ಮೆಲ್‌ಕಾಂಕೊ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರು ಗೊಬ್ಬರದ ಹುಳುವಿನ ತಜ್ಞರು. ಆಫ್ರಿಕಾ ಖಂಡದಲ್ಲಿ ಬಹಳ ವರ್ಷ ಸಂಶೋಧನೆ ಮಾಡಿ ಅಲ್ಲಿಯ ಕಾಡು ಪ್ರಾಣಿ ಮತ್ತು ಸಾಕಿದ ಪ್ರಾಣಿಗಳ ಮಲಮೂತ್ರಕ್ಕೆ ಆಕರ್ಷಿಸುವ ಗೊಬ್ಬರದ ಹುಳುಗಳ ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಿದ್ದರು. ಒಮ್ಮೆ ನಾನು ಆಕ್ಸ್‌ಫರ್ಡ್ ಯೂನಿವರ್ಸಿಟಿಗೆ ಹೋಗಿದ್ದಾಗ ನನ್ನ ವಿದ್ಯಾರ್ಥಿನಿಯೊಬ್ಬಳು ಗೊಬ್ಬರದ ಹುಳುವಿನ ಬಗ್ಗೆ ಪಿಹೆಚ್.ಡಿ. ರೀಸರ್ಚ್ ಮಾಡುತ್ತಿದ್ದಾಳೆಂದು ಹೇಳಿದಾಗ ಇಲ್ಲಿಗೆ ಬರುವ ಇಚ್ಛೆಯನ್ನು ವ್ಯಕ್ತಪಡಿಸಿ ಕೆಲವು ದಿನಗಳ ಮಟ್ಟಿಗೆ ಭಾರತಕ್ಕೆ ಬಂದು ಇಲ್ಲಿ ದೊರೆಯುವ ಗೊಬ್ಬರದ ಹುಳುವಿನ ಮಾಹಿತಿ ಸಂಗ್ರಹಿಸಿದ್ದರು. ಬೆಂಗಳೂರಿನಲ್ಲಿದ್ದಾಗ ಒಮ್ಮೆ ಮಧ್ಯಾಹ್ನ ಊಟಕ್ಕೆ ಬಂದಿದ್ದರು. ಊಟವಾದ ನಂತರ ಮನೆಯೊಳಗಿದ್ದ ದೊಡ್ಡ ದೊಡ್ಡ ಹಲ್ಲಿಗಳನ್ನೆಲ್ಲಾ ಹಿಡಿದು ಜೇಬಿಗೆ ತುಂಬಲು ಪ್ರಾರಂಭಿಸಿದರು. ಮನೆಯವರು ಬೆಚ್ಚಿಬಿದ್ದು ಒಂದು ರೂಮ್ ಒಳಗೆ ಹೋಗಿ ಬಾಗಿಲು ಹಾಕಿ ಕುಳಿತರು. ಮನೆಯ ಸುತ್ತ ಮುತ್ತ ಖಾಲಿ ಜಾಗವಿದ್ದುದರಿಂದ ಹೊರಗಿನಿಂದ ಬಂದ ದೊಡ್ಡ ದೊಡ್ಡ ಹಲ್ಲಿಗಳು ಮನೆಯ ಮೂಲೆ ಸೇರಿದ್ದವು. ಕೆಲವು ಸಾರಿ ಅವುಗಳನ್ನು ಗುಡಿಸಿ ಹೊರಗೆ ಎಸೆದರೆ ಮತ್ತೆ ಮನೆ ಸೇರುತ್ತಿದ್ದವು. ಮನೆ ಒಳಗೆ ಅವು ಇರುವುದು ಅಪಾಯ, ಅವಕ್ಕೇನಾದರೂ ಔಷಧಿ ಹೊಡೆಯಿರಿ ಎಂದು ಮನೆಯಲ್ಲಿ ಆಗಾಗ ಹೇಳುತ್ತಿದ್ದರು. ಅಂದು ಸುಮಾರು ಹತ್ತು ಹದಿನೈದು ಹಲ್ಲಿಗಳನ್ನು ಹಣ್ಣುಕುಯ್ದು ಜೇಬಿಗೆ ಹಾಕಿದ ಹಾಗೆ

ಹಿಡಿದುಕೊಂಡರು. ಹಲ್ಲಿ ಹಿಡಿಯುವುದು ಅವರಿಗೊಂದು ಹಾಬಿ. ಅವುಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅಂದಿನಿಂದ ನಮ್ಮ ಮನೆಯಲ್ಲಿ ಹಲ್ಲಿಗಳು ಅಷ್ಟಾಗಿ ಇಲ್ಲ.

ಕೃಷಿ ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕದ ಎಲ್ಲಾ ಕೃಷಿ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸುವ ಗುರುತರ ಜವಾಬ್ದಾರಿ ಇದ್ದರೂ ಕೆಲವು ಬೆಳೆಗಳಾದ ಕಾಫಿ, ಟೀ, ಅಡಿಕೆ ಮುಂತಾದ ಬೆಳೆಗಳ ಸಂಶೋಧನೆಗೆ ಆದ್ಯತೆ ಇರಲಿಲ್ಲ. ಏಕೆಂದರೆ ಇವಕ್ಕಾಗಿಯೇ ಪ್ರತ್ಯೇಕ ಸಂಶೋಧನಾ ಕೇಂದ್ರಗಳಿದ್ದು ಎಲ್ಲ ಸಮಸ್ಯೆಗಳ ಕೇಂದ್ರೀಕೃತ ಪರಿಹಾರಕ್ಕೆ ಅವು ಮೀಸಲಾಗಿದ್ದವು. ಬಾಳೆ ಹೊನ್ನೂರಿನಲ್ಲಿರುವ ಕಾಫಿ ಸಂಶೋಧನಾ ಕೇಂದ್ರ, ಕೂನೂರಿನಲ್ಲಿ ಟೀ ಸಂಶೋಧನಾ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ ವಿಟ್ಲದಲ್ಲಿ ಅಡಿಕೆ ಸಂಶೋಧನಾ ಕೇಂದ್ರ ಆಯಾ ಬೆಳೆಗೆ ಮೀಸಲಾಗಿದ್ದವು. ಭಾರತ ಸರ್ಕಾರವಾಗಲಿ ಅಥವಾ ಬೇರೆ ಸಂಘ ಸಂಸ್ಥೆಗಳಾದ ಐ.ಸಿ.ಎ.ಆರ್., ಡಿ.ಎಸ್.ಟಿ. ಈ ವಿಷಯಗಳ ಪರಿಶೋಧನೆಗೆ ಕೃ.ವಿ.ವಿ.ಕ್ಕೆ ಧನಸಹಾಯ ಮಾಡುತ್ತಿರಲಿಲ್ಲ. ನಾನು ಮಲೆನಾಡಿನಿಂದ ಬಂದವನಾದ್ದರಿಂದ ಮಲೆನಾಡಿನ ಬೆಳೆಗಳಾದ ಕಾಫಿ ಅಡಿಕೆ ಮುಂತಾದವುಗಳ ಸಸ್ಯ ಸಂರಕ್ಷಣೆ ಬಗ್ಗೆ ಆ ಬೇಳೆಗಾರರು, ನೀವು ಮಲೆನಾಡಿನವರಾಗಿ ಮಲೆನಾಡಿನ ಬೆಳೆಗಳ ಬಗ್ಗೆ ಏನು ಮಾಡಿದ್ದೀರಿ ಎಂದು ಹೋದಲ್ಲೆಲ್ಲಾ ಕೇಳುತ್ತಿದ್ದರು. ಅದರಲ್ಲೂ ಕಾಫಿ ಕಾಂಡಕೊರೆಯುವ ಹುಳ ಮತ್ತು ಕಾಫಿ ಮತ್ತು ಅಡಿಕೆ ಬೇರು ತಿನ್ನುವ ಹುಳದ ಬಗ್ಗೆ ಹೆಚ್ಚು ಹೆಚ್ಚು ಬೇಡಿಕೆಗಳು ಬರುತ್ತಿದ್ದವು.

ಕಾಫಿ ಕಾಂಡಕೊರೆಯುವ ಹುಳದ ಬಗ್ಗೆ ಕಾಫಿ ಸಂಶೋಧನಾ ಕೇಂದ್ರ ಸ್ಥಾಪಿತವಾದಾಗಿನಿಂದಲೂ ಸಂಶೋಧನೆ ನಡೆಯುತ್ತಿತ್ತು. ಸರ್ಕಾರ ಮೊದಲು ಕಾಫಿಯ ಬಗ್ಗೆ ಕಾಳಜಿ ವಹಿಸಿದ್ದು ಬೋರರ್ ಕಂಟ್ರೋಲ್ ಬಗ್ಗೆ. ಇದಕ್ಕಾಗಿಯೇ ಒಂದು ಕಾಯಿದೆ ತಂದು ಕಡ್ಡಾಯವಾಗಿ ಕಾಫಿ ಬೋರರ್ ಗಿಡಗಳನ್ನು ಪತ್ತೆಹಚ್ಚಿಸುವ ವ್ಯವಸ್ಥೆ ಇತ್ತು. ನಮ್ಮ ಹಿರಿಯ ಕೀಟಶಾಸ್ತ್ರಜ್ಞರಾದ ಡಾ॥ ಪುಟ್ಟರುದ್ರಯ್ಯ ಮತ್ತು ಡಾ॥ ಚನ್ನಬಸವಣ್ಣನವರ ವೃತ್ತಿ ಸುಮಾರು 1940 ರ ದಶಕದಲ್ಲಿ ಕಾಫಿ ಬೋರರ್ ಹತೋಟಿಯಿಂದಲೇ ಪ್ರಾರಂಭವಾಗಿದ್ದು. ಐವತ್ತರ ದಶಕದಲ್ಲಿ ಬಿ.ಹೆಚ್.ಸಿ. ಬಳಕೆಗೆ ಬಂದ ಮೇಲೆ ಬೋರರ್ ಹಾವಳಿ ನಿಯಂತ್ರಣಕ್ಕೆ ಬಂತು. ಆದರೆ ಅದನ್ನು ಸರಿಯಾದ ಕಾಲದಲ್ಲಿ ಸಮರ್ಪಕವಾಗಿ ಬಳಸದೆ ಬೋರರ್ ನಿಯಂತ್ರಣ ಮಂದಗತಿಯಲ್ಲಿ ನಡೆದು ಕೊನೆಗೆ ಬೋರರ್ ಬಿ.ಹೆಚ್.ಸಿ.ಗೆ ಸಾಯುವುದಿಲ್ಲವೆಂಬ ಕಲ್ಪನೆಯೂ ಮೂಡಿತು. ಸಾಗುವಳಿ ಹೆಚ್ಚಿದಂತೆಲ್ಲಾ ಬೋರರ್ ನಿಯಂತ್ರಣ ಕೂಲಿಕಾರರ ಜವಾಬ್ದಾರಿಯಾಗಿ ದಿನಕ್ಕೆ ನಿಗದಿತ ಸಂಖ್ಯೆಗೆ ಬಿ.ಹೆಚ್.ಸಿ. ಹಚ್ಚುವ ಏರ್ಪಾಡಾಯಿತು. ಏಪ್ರಿಲ್ ಮೇ ತಿಂಗಳಲ್ಲಿ ಕೂಲಿಕಾರರಿಗೆ ರಜೆ ದಿನಗಳಾದ್ದರಿಂದ ಈ ಕೆಲಸ ಮಾರ್ಚ್ ಮೂವತ್ತೊಂದರ ಒಳಗೆ ಪೂರ್ಣವಾಗಬೇಕಿತ್ತು. ಬೋರರ್ ಹಾರುವ ಕಾಲಕ್ಕೂ ಬಿ.ಹೆಚ್.ಸಿ. ಹಚ್ಚುವ ಕಾಲಕ್ಕೂ ಯಾವ ಸಂಬಂಧವೂ ಇರಲಿಲ್ಲ. ಬೇಸಿಗೆಯಲ್ಲಿ ಬೋರರ್ ಹುಳ ಗಿಡದೊಳಗಿಂದ ಹೊರಗೆ ಬಂದು ಹಾರುವುದು ಮೇ ಮೂರನೇ ವಾರದಿಂದ ಜೂನ್ ಮೊದಲನೆ ವಾರದೊಳಗೆ, ಚಳಿಗಾಲದಲ್ಲಿ ನವೆಂಬರ್ ಮಧ್ಯದಲ್ಲಿ ಹಾರುತ್ತವೆ. ಬೋರರ್ ಹುಳ ಕಾಫಿ ಕಾಂಡದ ತೊಗಟೆಯ ಮೇಲೆ ಮೊಟ್ಟೆ ಇಟ್ಟು ವಾರದಲ್ಲಿ ಮರಿ ಆಗಿ ಸುಮಾರು ಒಂದು ತಿಂಗಳು ತೊಗಟೆಯ ಒಳಗೆ ತಿಂದು ನಂತರ ಕಾಂಡದ ಒಳಗೆ ಸರಿಯುತ್ತದೆ. ಒಮ್ಮೆ ಕಾಂಡದ ಒಳಗೆ ಹೋದರೆ ಯಾವ ಔಷಧಿಯೂ ಇದನ್ನು ಕೊಲ್ಲಲಾರದು. ಬಿ.ಹೆಚ್.ಸಿ. ಪರಿಣಾಮಕಾರಿಯಾಗಿ ಬೋರರ್‌ರನ್ನು ಹತೋಟಿ ಮಾಡಬೇಕಿದ್ದರೆ

ಬೋರರ್ ಹಾರಿ ಬಂದ ಕೆಲವು ದಿನಗಳ ನಂತರ ಗಿಡಕ್ಕೆ ಬಿ.ಹೆಚ್.ಸಿ.ಯನ್ನು ಲೇಪಿಸಿದರೆ ಪೂರ್ಣ ಹತೋಟಿಯಾಗುವುದು. ಏಪ್ರಿಲ್‌ಗೆ ಮೊದಲೆ ಲೇಪಿಸಿದ್ದ ಬಿ.ಹೆಚ್.ಸಿ., ಬೋರರ್ ಹಾರುವ ಮೊದಲು, ಬಿಸಿಲು ಮಳೆಯಿಂದ ಅದರ ಕಾರವನ್ನು ಕಳೆದುಕೊಳ್ಳುತ್ತಿತ್ತು.

ಬೋರರ್ ಹಾರಿ ಬರುವ ಕಾಲವನ್ನು 1942 ರಲ್ಲೆ ಸುಬ್ರಹ್ಮಣ್ಯರವರು ತಿಳಿಸಿದ್ದರು. ಆದರೆ ಕಾಫಿ ಬೆಳೆಗಾರರು ಇದಕ್ಕೆ ಸಾಕಷ್ಟು ಗಮನ ಕೊಟ್ಟಿರಲಿಲ್ಲ. ಕಾಫಿ ಬೋರರ್ ಬಿ.ಹೆಚ್.ಸಿ. ಲೇಪನದಿಂದ ನಿಯಂತ್ರಣಕ್ಕೆ ಬರುತ್ತಿಲ್ಲವೆಂಬ ಕಾಫಿ ಬೆಳೆಗಾರರ ಕಂಪ್ಲೇಂಟ್ ಸರಿಯೇ? ಬೋರರ್ ಜೀವನ ಚಕ್ರವೇನಾದರೂ ಬದಲಾಗಿದೆಯೇ? ಬಿ.ಹೆಚ್.ಸಿ. ಬದಲಿಗೆ ಬೇರಾವ ಕೀಟನಾಶಕವಿಲ್ಲವೆ? (ಇಷ್ಟರಲ್ಲಿ ಬಿ.ಹೆಚ್.ಸಿ. ನಿಷೇಧ ಜಾರಿಗೆ ಬರುವುದರಲ್ಲಿತ್ತು) ಅಥವಾ ಕೀಟನಾಶಕ ಉಪಯೋಗವಿಲ್ಲದೆ ನಿಯಂತ್ರಣ ಮಾಡುವ ಉಪಾಯಗಳೇನಾದರೂ ಇವೆಯೇ, ಮೊದಲಾದ ಸಮಸ್ಯೆಗಳಿಗೆ ಉಳಿದ ಒಂದೇ ಮಾರ್ಗ ಕೂಲಂಕಷವಾದ ಸಂಶೋಧನೆ.

ಪಾಲಿಬೆಟ್ಟದ ಕನ್‌ಸಾಲಿಡೇಟೆಡ್ ಕಾಫಿ ಲಿಮಿಟೆಡ್‌ನಲ್ಲಿ ನನ್ನ ಜೊತೆ ಹೆಬ್ಬಾಳ ಕಾಲೇಜಿನಲ್ಲಿ ಓದುತ್ತಿದ್ದ ಕೆಲವು ಮಿತ್ರರು ಮೇಲ್ಮಟ್ಟದ ಹುದ್ದೆಯಲ್ಲಿದ್ದರು. ಪಾಲಿಬೆಟ್ಟದಲ್ಲಿ ಒಂದು ಸಂಶೋಧನಾ ವಿಭಾಗವೂ ಕೂಡ ಇತ್ತು. ಇದರ ಮುಖ್ಯ ಸಂಶೋಧಕ ನಮ್ಮ ವಿದ್ಯಾರ್ಥಿಯೇ ಆಗಿದ್ದ ಶ್ರೀಮಾನ್ ಸುಬ್ಬಯ್ಯನವರು ನನ್ನೊಡನೆ ಸಂಪರ್ಕವಿಟ್ಟುಕೊಂಡು ಆಗಾಗ ಬಂದು ಸಲಹೆಗಳನ್ನು ಕೇಳುತ್ತಿದ್ದರು. ಕಾಫಿ ಬೋರರ್ ಸಮಸ್ಯೆ ಅಲ್ಲಿಯೂ ಕೂಡ ಬಹಳ ತೀವ್ರ ಗತಿಯಲ್ಲಿತ್ತು. ಒಮ್ಮೆ ಪಾಲಿಬೆಟ್ಟದಲ್ಲಿ ಇವರನ್ನೆಲ್ಲಾ ಸಂಧಿಸಿ ಕನ್‌ಸಾಲಿಡೇಟೆಡ್ ಕಾಫಿ ಧನ ಸಹಾಯ ಮಾಡುವುದಿದ್ದರೆ ಇದರ ಸಂಶೋಧನೆಯನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಅದರಂತೆ ಸಂಬಂಧಪಟ್ಟವರು ಇದಕ್ಕೆ ಒಪ್ಪಿ ಮೂರು ವರುಷದ ಅವಧಿಗಾಗಿ ಎರಡೂವರೆ ಲಕ್ಷರೂಪಾಯಿ ರೀಸರ್ಚ್ ಗ್ರಾಂಟನ್ನು ಕೃ.ವಿ.ವಿ.ಕ್ಕೆ ಒಪ್ಪಿಸಿದರು. ನಮ್ಮ ಸ್ನೇಹಿತರು ಶ್ರೀ ನಾಯಿಡುರವರು ಮ್ಯಾನೇಜರ್ ಆಗಿದ್ದ ನಲ್ಲೂರು ಎಸ್ಟೇಟಿನಲ್ಲಿ ನಮ್ಮ ಸಂಶೋಧನೆಯನ್ನು ಪ್ರಾರಂಭಿಸಿದೆವು. ಕನ್‌ಸಾಲಿಡೇಟೆಡ್ ಕಾಫಿಯವರು ಈ ಧನಸಹಾಯದೊಂದಿಗೆ ಸಂಶೋಧನೆಗೆ ಬೇಕಿದ್ದ ಹಲವಾರು ಸವಲತ್ತುಗಳನ್ನು ಧಾರಾಳವಾಗಿ ಒದಗಿಸಿಕೊಟ್ಟರು. ಈ ಯೋಜನೆಯಲ್ಲಿ ರೀಸರ್ಚ್ ಅಸಿಸ್ಟೆಂಟ್ ಆಗಿದ್ದ ಇಬ್ಬರಿಗೆ ಇಳಿದುಕೊಳ್ಳಲು ಮನೆ, ಅವರಿಗೆ ಬೇಕಾದ ಸೇವಕ ಸಿಬ್ಬಂದಿ, ರಾತ್ರಿ ಹಗಲು ತೋಟದೊಳಗೆ ಎಲ್ಲಿ ಬೇಕಾದರೂ ಹೋಗಿ ಬರಲು ನೆರವು, ಸಂಶೋಧನೆಯ ಸಹಾಯಕ್ಕೆ ಬೇಕಿದ್ದ ಜನರು, ಸಾಮಾನು ಸರಕು ತರಲು ವಾಹನ ಮೊದಲಾದವೆಲ್ಲವನ್ನು ಕೊಟ್ಟಿದ್ದರು. ಅಲ್ಲಿ ಕೆಲವರು ನಮ್ಮ ಕಾಲೇಜಿನ ವಿದ್ಯಾರ್ಥಿಗಳೆ ಅಸಿಸ್ಟೆಂಟ್ ಮ್ಯಾನೇಜರುಗಳಾಗಿದ್ದರು. ಅವರ ಸಹಾಯವೂ ಬಹಳವಾಗಿ ದೊರೆಯಿತು. ಇಬ್ಬರು ಯುವಕ ಸಂಶೋಧಕರು ನಿಷ್ಠೆಯಿಂದ ಹೇಳಿದ ಕೆಲಸಗಳನ್ನೆಲ್ಲಾ ಮಾಡಿ ಮಾಹಿತಿ ಸಂಗ್ರಹಿಸುತ್ತಿದ್ದರು. ಇವೆಲ್ಲದರ ಪರಿಣಾಮ ಮೂವತ್ತು ವರುಷಗಳಿಂದ ಮಾಡದಿದ್ದ ಶೋಧನೆಯನ್ನು ಮೂರು ವರುಷದಲ್ಲಿ ಮಾಡಲಾಯಿತು. ಈ ಮಾಹಿತಿಗಳನ್ನೆಲ್ಲ ಒಳಗೊಂಡ ಚಿತ್ರ ಸಮೇತ ಒಂದು ಪುಸ್ತಕವನ್ನು ಅಚ್ಚು ಮಾಡಿ ಬೆಳೆಗಾರರಿಗೆ ದೊರೆಯುವಂತೆ ಮಾಡಲಾಯಿತು. ಈ ಪುಸ್ತಕದ ಅಚ್ಚಿಗಾಗಿ ಅರವತ್ತು ಸಾವಿರ ರೂಪಾಯಿಗಳನ್ನು ಅಮಾಲ್ಗಮೇಟೆಡ್ ಬೀನ್ ಕಾಫಿ ಮಾಲೀಕರೂ ಹಾಗೂ ಚಟ್ನಳ್ಳಿ ಎಸ್ಟೇಟ್ ಶ್ರೀ ಗಂಗಯ್ಯ ಹೆಗ್ಗಡೆಯ ಪುತ್ರರೂ ಆದ ಶ್ರೀ ಸಿದ್ಧಾರ್ಥರವರು ಉದಾರವಾಗಿ ಕೊಟ್ಟರು.

ಐವತ್ತು ವರುಷಗಳ ಹಿಂದೆಯೆ ಬೋರರ್ ಜೀವನದಲ್ಲಿ ಕಂಡಿದ್ದ ಕೆಲವು ಅಂಶಗಳು ಪುನಃ ದೃಢಪಟ್ಟವು. ಆದರೆ ಹಲವಾರು ವಿಷಯಗಳಲ್ಲಿ ಇಲ್ಲಿಯ ತನಕ ದೊರೆಯದಿದ್ದ ಅಂಶಗಳು ದೊರೆತವು. ಇಷ್ಟರವರೆಗೆ ಕಾಫಿ ಕಾಂಡ ಕೊರೆಯುವ ಹುಳವನ್ನು ತಿನ್ನುವ ಪರೋಪಜೀವಿ ಎರಡು ಮಾತ್ರ ಗೊತ್ತಿದ್ದವು. ಈ ಸಂಶೋಧನೆಯಿಂದ ಆರು ಹೊಸ ಪರೋಪಜೀವಿಗಳು ಬೆಳಕಿಗೆ ಬಂದವು. ಬಿ.ಹೆಚ್.ಸಿ ಬಳಸದೆ ಬೇರೆ ಕೀಟನಾಶಕ, ಅದರಲ್ಲೂ ಪರಿಸರಕ್ಕೆ ಹಾನಿಯಾಗದ ಬೇವಿನ ಬೀಜದ ರಸ ಕಾಂಡ ಕೊರೆಯುವ ಹುಳ ಕೊಲ್ಲಲು ಬಹಳ ಉಪಯುಕ್ತವೆಂದು ತಿಳಿಯಿತು. ಆದರೆ ಮನಸ್ಸಿನಲ್ಲಿಡಬೇಕಾದ ಮುಖ್ಯ ಅಂಶವೆಂದರೆ ಬೇವಿನ ಬೀಜದ ರಸವನ್ನು ದುಂಬಿ ಹಾರಿ ಒಂದೆರಡು ವಾರದ ನಂತರ ಉಪಯೋಗಿಸಬೇಕು. ಹುಳ ತೊಗಟೆಯನ್ನು ತಿನ್ನುವಾಗ ಪರಿಣಾಮಕಾರಿಯಾಗಿ ಹತೋಟಿಯಾಗುವುದು, ಮುಂಚೆ ಅಥವಾ ನಂತರ ಉಪಯೋಗಿಸಿದರೆ ಬೇವಿನ ರಸ ಉಪಯೋಗಕ್ಕೆ ಬರುವುದಿಲ್ಲ. ಕಾಂಡ ಕೊರೆಯುವ ಹುಳದ ವಯಸ್ಕದುಂಬಿ ಹಾರುವ ದಿನಗಳನ್ನು ಪತ್ತೆ ಹಚ್ಚಲು ವಿಶೇಷ ಬಲೆಗಳನ್ನು ಉಪಯೋಗಿಸಿ ನೋಡುವ ವಿಧಾನವನ್ನು ಪರಿಷ್ಕರಿಸಲಾಯಿತು. ಎಲ್ಲಕ್ಕಿಂತಲೂ ಹೆಚ್ಚಿನದಾಗಿ ಬೇಸಿಗೆ ಮತ್ತು ಚಳಿಗಾಲದಲ್ಲಿ ಹಾರುವ ದುಂಬಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಿಲ್ಲವೆಂದು ತಿಳಿಯಿತು ಮತ್ತು ಹತೋಟಿ ಕ್ರಮಗಳನ್ನು ಎರಡು ಕಾಲದಲ್ಲಿಯೂ ಕೈಗೊಳ್ಳಬೇಕೆಂದು ಮನವರಿಕೆಯಾಯಿತು. ಹತ್ತು ಹಲವಾರು ಆಸರೆ ಸಸಿ ಗಿಡಗಳಿದ್ದರೂ ಯಥೇಚ್ಛವಾಗಿ ಬೆಳೆಯುವ ಕಾಫಿ ಗಿಡಗಳಿಗೆ ಹೆಚ್ಚು ಹಾನಿ. ಇಷ್ಟರವರೆಗೆ ತಿಳಿದಿದ್ದ ಸಂಗತಿ ಬೋರರ್ ಆರೆಬಿಕಾ ಕಾಫಿಗೆ ಮಾತ್ರ ಬರುವುದು ನಿಜವಲ್ಲವೆಂಬುದನ್ನು ಸಾಬೀತು ಮಾಡಲಾಯಿತು. ರೋಬಸ್ಟ ಮತ್ತು ಸ್ಯಾಂಡ್ರೊಮಾನ್ ಕಾಫಿಗೂ ಹೊಡೆಯುತ್ತದೆ. ಬಯಲಾಜಿಕಲ್ ಕಂಟ್ರೋಲ್ ಕಾಫಿ ತೋಟದಲ್ಲಿ ಫಲಕಾರಿಯಾಗುವುದಿಲ್ಲವೆಂಬುದನ್ನು ಸಾಬೀತು ಮಾಡಲಾಗಿದೆ. ಏಕೆಂದರೆ ಬೋರ್ಡೋ ಔಷಧಿಯನ್ನು ಯಥೇಚ್ಛವಾಗಿ ಉಪಯೋಗಿಸು ವುದರಿಂದ ಅಲ್ಲದೆ ಅಷ್ಟೊಂದು ಪ್ರಮಾಣದಲ್ಲಿ ಪರೋಪಜೀವಿಗಳನ್ನು ಬೆಳಸಿ ಬಿಡುವುದು ದುಬಾರಿಯಾಗುವುದರಿಂದ ಬಯಾಲಜಿಕಲ್ ಕಂಟ್ರೋಲ್ ಸಾಧ್ಯವಿಲ್ಲ. ಕಾಫಿ ಬೋರರ್ ಮೇಲೆ ನಡೆಸಿದ ಸಂಶೋಧನೆ ತಕ್ಷಣ ಬೆಳೆಗಾರರಿಗೆ ಉಪಯೋಗವಾಗಿದ್ದು ಸಂಶೋಧಕರಿಗೆ ಸಂತೋಷ ತರುವಂತಹುದು.

ಕಾಫಿ ಬೇರು ತಿನ್ನುವ ಹುಳ ಮತ್ತು ಅಡಿಕೆ ಬೇರು ತಿನ್ನುವ ಹುಳಗಳ ಪರಿಶೋಧನೆಯೂ ಬೆಳೆಗಾರರಿಗೆ ಬೇಗ ಪರಿಹಾರ ದೊರೆಯುವಂತಾದವು. ಕಾಫಿ ಬೇರು ತಿನ್ನುವ ಹುಳ ಕಾಫಿ ತೋಟದಲ್ಲಿ ನೆರಳಿಗಾಗಿ ಬೆಳಸಿದ ಅತ್ತಿ ಮರದ ಎಲೆಗಳಿಗೆ ಆಕರ್ಷಿಸುತ್ತಿದ್ದರಿಂದ ಅವುಗಳನ್ನು ಸುಲಭವಾಗಿ ನಾಶ ಮಾಡಬಹುದು. ಮುಂಗಾರು ಮಳೆ ಅಂದರೆ ಹೂವಿನ ಮಳೆ, ರೇವತಿ, ಅಶ್ವಿನಿ, ಭರಣಿ ಮಳೆಗಳಲ್ಲಿ ಮೊದಲು ಮಳೆ ಬಿದ್ದ ದಿನ ಅಥವಾ ಮಾರನೆಯ ದಿನ, ಇವು ಭೂಮಿಯಿಂದ ಮೇಲೆ ಬಂದು ಅತ್ತಿ ಮರದ ಎಲೆಗಳನ್ನು ತಿಂದು ಸಂಭೋಗಿಸಿ ಬೆಳಗಾಗುವುದ ರೊಳಗೆ ಪುನಃ ಭೂಮಿಯೊಳಗೆ ಹೋಗುವವು. ಹಿಂದಿನ ವರುಷ ಬಾಧಿಸಿದ್ದ ಜಾಗದಲ್ಲಿ ಅತ್ತಿಮರಗಳಿಗೆ, ಮಳೆ ನಿಂತ ನಂತರ ಕೀಟನಾಶಕವನ್ನು ಸಿಂಪಡಿಸಿದರೆ ಅದನ್ನು ತಿಂದ ದುಂಬಿಗಳು ಸಾಯುವವು. ಇವು ಬೆಳಕಿಗೂ ಕೂಡ ಆಕರ್ಷಿಸುತ್ತವೆ. ಆದರೆ ಕಾಫಿ ತೋಟದಲ್ಲಿ ಮರಗಿಡಗಳಿರುವುದರಿಂದ ಎಲ್ಲವನ್ನೂ ದೀಪಕ್ಕೆ ಆಕರ್ಷಿಸುವುದು ಕಷ್ಟ. ಬೇರು ಹುಳುಗಳ ಬಾಧೆ ಇರುವಲ್ಲಿ ಒಂದೆರಡು ಹದ ಮಳೆ ಆದನಂತರ ಏಪ್ರಿಲ್ ಮೇ ತಿಂಗಳಲ್ಲಿ ಕಾಫಿ ಗಿಡದ

ಬುಡದ ಸುತ್ತಲೂ ಕೀಟನಾಶಕಗಳಾದ ಫೋರೇಟ್, ಕಾರ್ಬೋಫ್ಯುರಾನ್ ಮುಂತಾದ ಹರಳನ್ನು ಹಾಕುವುದರಿಂದ ಹತೋಟಿಯಾಗುವುದು. ಬಹಳ ಕಾಫಿ ಬೆಳೆಗಾರರು ಈ ಉಪಾಯಗಳಿಂದ ಬೇರುತಿನ್ನುವ ಹುಳದ ಬಾಧೆಯಿಂದ ಪಾರಾದರು.

ಸಕಲೇಶಪುರದ ಹತ್ತಿರ ಕೂಡನಹಳ್ಳಿ ಕಾಫಿ ಎಸ್ಟೇಟಿನಲ್ಲಿ ಬೇರುತಿನ್ನುವ ಹುಳದ ಜೊತೆಗೆ ಜೀರುಂಡೆ ಹುಳದ ತೊಂದರೆ ಬಹಳವಾಗಿತ್ತು. ಮಲೆನಾಡಿನಲ್ಲಿ ಮಳೆಗಾಲ ಪ್ರಾರಂಭವಾಗುವಾಗ ಕಿವಿ ಚಿಟ್ಟೆಂದು ಚೀರುವ ಜೀರುಂಡೆ ಹುಳದ (ಸಿಕಾಡ) ಮರಿಗಳು ಮರಗಿಡಗಳ ಬೇರುಗಳಿಂದ ನೆಲದೊಳಗೆ ರಸ ಹೀರಿ ಜೀವಿಸುತ್ತವೆ. ಕಾಫಿತೋಟದಲ್ಲಿ ಇವು ಇದ್ದಲ್ಲಿ ಕಾಫಿಗೂ ಬಹಳ ನಷ್ಟ, ಗಿಡ ಸಾಯದಿದ್ದರೂ ಫಸಲು ಬಿಡುವುದಿಲ್ಲ. ಇವನ್ನು 'ಸೆವೆನ್ ಇಯರ್ ಸಿಕಾಡ' ಎನ್ನುವರು. ಏಕೆಂದರೆ ಜೀರುಂಡೆ ಮರಿಗಳು ವಯಸ್ಸಿಗೆ ಬರಬೇಕಾಗದರೆ ಏಳು ವರುಷಗಳು ಬೇಕು. ಇವನ್ನೂ ಕೂಡ ಫೋರೇಟ್ ಅಥವಾ ಕಾರ್ಬೋಫ್ಯುರಾನ್‌ನಂತಹ ಔಷಧಿಗಳಿಂದ ಹತೋಟಿ ಮಾಡಬಹುದು. ಸುಮಾರು ನಲವತ್ತು ಎಕರೆ ಪ್ರದೇಶದಲ್ಲಿ ಎರಡು ಟನ್ ಕಾಫಿಯೂ ಆಗದಿದ್ದದ್ದು ಎರಡು ವರುಷದ ನಂತರ ಇಪ್ಪತ್ತು ಟನ್ ಕಾಫಿ ಆಗಿದ್ದು ನಮ್ಮ ಸಂಶೋಧನೆಯ ಫಲದಿಂದ.

ಅಡಿಕೆ ಬೇರುತಿನ್ನುವ ಹುಳದ ಸಮಗ್ರ ಸಂಶೋಧನೆಯನ್ನು ನನ್ನ ನೇತೃತ್ವದಲ್ಲಿ ನಡೆಯುತ್ತಿದ್ದ ಆಲ್ ಇಂಡಿಯಾ ಕೋ ಆರ್ಡಿನೇಟೆಡ್ ರೀಸರ್ಚ್ ಪ್ರಾಜೆಕ್ಟಿನ ಅಡಿಯಲ್ಲಿ ಅಳವಡಿಸಿಕೊಂಡು ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ, ಸಾಗರಗಳಲ್ಲಿ ಕೆಲವು ತೋಟಗಳನ್ನು ಗುರುತಿಸಿ ಮಾಲಿಕರ ಸಹಕಾರದಿಂದ ಸುದೀರ್ಘ ಸಂಶೋಧನೆಯನ್ನು ಕೈಗೊಂಡೆವು. ಈ ಪ್ರಾಜೆಕ್ಟ್‌ನಲ್ಲಿ ಸಂಶೋಧಕರಾಗಿದ್ದ ಹಾಗು ನನ್ನ ವಿದ್ಯಾರ್ಥಿ ಎ.ಆರ್.ವಿ. ಕುಮಾರ್‌ರವರು ಈ ಸಂಶೋಧನೆ ಯಲ್ಲಿ ಶ್ರಮವಹಿಸಿದ್ದು ಗುರುತರವಾದದ್ದು. ಇವರಿಗೆ ಸಹಕರಿಸಿದ ಅನೇಕ ಅಡಿಕೆ ಬೆಳೆಗಾರರಲ್ಲಿ ಮುಖ್ಯವಾಗಿ ಕಡಿದಾಳ್ ದಯಾನಂದ, ಹುಗುಲುವಳ್ಳಿ ಚಿನ್ನಯ್ಯಗೌಡ, ಬೇಗಾನೆ ಕಾಡಪ್ಪಗೌಡ, ಮೆಲ್‌ಮತ ಅಪ್ಪುನಾಯಕ್, ಕೋಣಂದೂರು ಗಿರಿರಾಜ್, ಆಮತಿ ದೇವಪ್ಪಗೌಡ, ಕಲಿಗೆ ಭಾಸ್ಕರಗೌಡ, ತೀರ್ಥಹಳ್ಳಿ ಪುರುಷೋತ್ತಮರಾವ್ ಮುಂತಾದವರು ಸಂಶೋಧನೆಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಇವರುಗಳ ಸಹಕಾರವಿಲ್ಲದಿದ್ದರೆ ಸುಮಾರು ಹತ್ತು ವರುಷಗಳಲ್ಲಿ ಏನನ್ನು ಸಾಧಿಸಿದ್ದೇವೆಯೋ ಅದು ಪರಿಪಕ್ವವಾಗಿ ಆಗುತ್ತಿರಲಿಲ್ಲವೆಂದು ನನ್ನ ಅನಿಸಿಕೆ.

ಮೈದಾನದಲ್ಲಿ ಮತ್ತು ಮಲೆನಾಡಿನ ಕಾಫಿ ತೋಟಗಳಲ್ಲಿರುವ ಬೇರು ತಿನ್ನುವ ಹುಳುವಿನ ಜಾತಿಗಳಿಗೂ ಮಲೆನಾಡಿನ ಅಡಿಕೆ ತೋಟಗಳಲ್ಲಿ ದೊರೆಯುವ ಬೇರು ಹುಳುಗಳಿಗೂ ವ್ಯತ್ಯಾಸ ವಿದೆ. ಭಾರತದಾದ್ಯಂತ ಮೈದಾನ ಪ್ರದೇಶದಲ್ಲಿ ದೊರೆಯುವ ಹೊಲೊಟ್ರೈಕಿಯ ಸೆರ್ರೆಟ ಮತ್ತು ಹೊಲೊಟ್ರೈಕಿಯ ಕಾನ್‌ಸಾಂಗ್ವಿನಿಯಗಳ ಜೀವನ ಚಕ್ರ ಒಂದು ವರುಷವಿದ್ದರೆ, ಕಾಫಿ ತೋಟದಲ್ಲಿ ದೊರೆಯುವ ಹೊಲೊಟ್ರೈಕಿಯ ನೀಲಗಿರಿಯ ಜೀವನ ಚಕ್ರ ವರುಷದಲ್ಲಿ ಎರಡು. ಆದರೆ ಅಡಿಕೆ ತೋಟದಲ್ಲಿ ಸಿಗುವ ಜಾತಿ ಬೇರೆ ವರ್ಗಕ್ಕೆ ಸೇರಿದ ಲ್ಯುಕೊಫೊಲಿಸ್ ಲೆಪಿಡೊಫೊರ ಬೆಟ್ಟಪ್ರದೇಶಕ್ಕೆ ಮಾತ್ರ ಸೀಮಿತ. ಮತ್ತೊಂದು ಲ್ಯುಕೊಫೊಲಿಸ್ ಕೊನಿಯೊಫೊರ ಬೆಟ್ಟ ಪ್ರದೇಶ ಮತ್ತು ಕರಾವಳಿ ಪ್ರದೇಶದಲ್ಲೂ ದೊರೆಯುತ್ತವೆ. ಇವೆರಡರ ಜೀವನ ಚರಿತ್ರೆಯೂ

ಬೇರೆ ಬೇರೆ. ಲ್ಯೂಕೊಫೊಲಿಸ್ ಲೆಪಿಡೊಫೊರ ಮತ್ತು ಗುಡ್ಡದಲ್ಲಿಸಿಕ್ಕುವ ಲ್ಯೂಕೊಫೊಲಿಸ್ ಕೊನಿಯೊಫೊರದ ಜೀವನ ಚಕ್ರ ಎರಡು ವರುಷ. ಅದೇ ಕರಾವಳಿಯಲ್ಲಿ ಸಿಕ್ಕುವ ಕೊನಿಯೊಫೊರ ತನ್ನ ಜೀವನವನ್ನು ಒಂದು ವರುಷದಲ್ಲಿ ಪೂರ್ತಿ ಮಾಡುತ್ತದೆ. ಲ್ಯೂ. ಕೊನಿಯೊಫೊರ ಮಳೆಗಾಲ ಪ್ರಾರಂಭವಾದ ಎರಡು ವಾರದಲ್ಲಿ ಕರಾವಳಿ ಮತ್ತು ಘಟ್ಟದ ಮೇಲೆ ಎರಡರಲ್ಲೂ ಭೂಮಿಯೊಳಗಿಂದ ಮೇಲೆ ಬರುತ್ತದೆ. ಆದರೆ ಲ್ಯೂ. ಲೆಪಿಡೊಫೊರ ಜುಲೈ ಕೊನೆಯ ಭಾಗದಲ್ಲಿ ಅಥವಾ ಆಗಸ್ಟ್ ಮೊದಲ ವಾರದಲ್ಲಿ ಅಂದರೆ ಮಳೆಗಾಲ ಪ್ರಾರಂಭವಾಗಿ 10-12 ವಾರಗಳ ನಂತರ ಮೇಲೆ ಹಾರುತ್ತದೆ. ಸಂಜೆ ಮೂರು ನಾಲ್ಕು ಘಂಟೆ ಮೇಲೆ ಹಾರಾಟ ಪ್ರಾರಂಭವಾಗಿ ರಾತ್ರಿ ಎಂಟು ಘಂಟೆಯವರೆಗೆ ಬರುತ್ತಿರುತ್ತವೆ. ಸಾಕಷ್ಟು ಗಾತ್ರವಿದ್ದು ನಿಧಾನವಾಗಿ ಹಾರುವುದರಿಂದ ಚಪ್ಪಟೆಯಾದ ಹಾಳೆಯಿಂದ ಹೊಡೆದು ನೆಲಕ್ಕೆ ಬಿದ್ದ ತಕ್ಷಣ ಆರಿಸಬಹುದು. ಕೆಲವರು ದಿವಸಕ್ಕೆ ಸಾವಿರ ದುಂಬಿ ಹಿಡಿದಿರುವ ನಿದರ್ಶನವಿದೆ. ದುಂಬಿ ಹಿಡಿಯುವುದರೊಂದರಲ್ಲೆ ಸಮರ್ಪಕವಾದ ಹತೋಟಿ ಆಗಲಾರದು. ಸಮಗ್ರ ಹತೋಟಿ ಕ್ರಮ ಬಳಸಿದಾಗಲೇ ಪರಿಣಾಮಕಾರಿಯಾಗುವುದು. ಕೀಟನಾಶಕ ಬಳಸುವ ಸಮಯ ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಮಳೆ ನಿಂತಾಗ, ಅಡಿಕೆ ಬೆಳೆಗಾರರನೇಕರಿಗೆ ಈ ವಿಧಾನಗಳು ಅರಿವಾಗಿವೆ. ಅವರವರೇ ಕಲೆತು ವಿಚಾರವಿಮರ್ಶೆ ಮಾಡಿ ಬೇರು ತಿನ್ನುವ ಹುಳವನ್ನು ಪತ್ತೆ ಮಾಡುವ ಮತ್ತು ಅದರ ಹತೋಟಿ ಮಾಡುವ ಕ್ರಮವನ್ನು ಒಬ್ಬರಿಂದೊಬ್ಬರು ತಿಳಿದುಕೊಳ್ಳುತ್ತಾರೆ. ಬಹಳ ವರುಷಗಳಿಂದ ಬಗೆ ಹರಿಯದ ಅಡಿಕೆ ಬೇರು ಹುಳುವಿನ ಬಾಧೆಗೆ ಪರಿಹಾರದ ದಾರಿ ಕಂಡಂತಾಯಿತು.

7 ಶಿಕ್ಷಣಕ್ಕೆ ಸೇವೆ

ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ (ಅಗ್ರಿ.), ಆಗಿದ್ದ ಆರು ವರುಷದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆ ಏನು ಎಂದು ಗಮನಿಸಿದಾಗ ಮನಸ್ಸಿಗೆ ಸಮಾಧಾನವಾಗುವಂತಹ ಒಂದೆರಡು ಕೆಲಸ ಜ್ಞಾಪಕಕ್ಕೆ ಬರುತ್ತವೆ. ಸುಮಾರು ಕಾಲು ಶತಮಾನದವರೆಗೆ ಕೃಷಿ ವಿಶ್ವ ವಿದ್ಯಾನಿಲಯ ದಲ್ಲಿ ಬೋಧಿಸುತ್ತಿದ್ದ ಪಠ್ಯಕ್ರಮಗಳು ಬದಲಾಗದೆ ಇದ್ದದ್ದು ಮನಸ್ಸಿನಲ್ಲಿ ಬಾಧಿಸುತ್ತಿತ್ತು. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಾಗಾಲೋಟದಲ್ಲಿ ನಡೆದ ಸಂಶೋಧನೆಯ ಫಲಗಳು ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಮುಟ್ಟುತ್ತಿರಲಿಲ್ಲ. ಅಲ್ಲದೆ ಮುಂದಿನ ಹತ್ತು ಇಪ್ಪತ್ತು ವರುಷಗಳಲ್ಲಿ ಬದಲಾಗಲಿರುವ ತಂತ್ರಜ್ಞಾನದ ದೃಶ್ಯ ತಿಳಿಯುತ್ತಿರಲಿಲ್ಲ. ಪ್ರತಿಭಾವಂತ ಶಿಕ್ಷಕರಿಗೆ ಇದರ ಅರಿವಿದ್ದರೂ ಶಿಕ್ಷಣ ಕ್ಷೇತ್ರದಲ್ಲಿದ್ದ ಬಹು ಮಂದಿಗೆ ಬದಲಾಯಿಸುವ ಇಚ್ಛೆ ಕಾಣುತ್ತಿರಲಿಲ್ಲ. ಭಾರತೀಯ ಕೃಷಿ ಅನುಸಂಧಾನದ (ಐ.ಸಿ.ಎ.ಆರ್.) ಎಜುಕೇಷನ್ ಪ್ಯಾನಲ್‌ನಲ್ಲಿದ್ದಾಗ ರಾಷ್ಟ್ರಮಟ್ಟದಲ್ಲಿ ಪಠ್ಯಕ್ರಮಗಳು ಬದಲಾಯಿಸುವ ಅಗತ್ಯವನ್ನು ಒತ್ತಾಯಿಸಿದವರಲ್ಲಿ ನಾನೂ ಒಬ್ಬ. ಆದರಂತೆ ಡೀನ್‌ಕಮಿಟಿ ಎಂಬ ಹೆಸರಿನಲ್ಲಿ ಕೃ.ವಿ.ವಿ.ಗಳಲ್ಲಿ ಬೋಧಿಸುತ್ತಿದ್ದ ವಿವಿಧ ವಿಷಯಗಳ ಏಕ್ಸ್‌ಪರ್ಟ್ ಕಮಿಟಿಯಲ್ಲಿ ನಾನೂ ಇದ್ದೆ. ಅಸ್ಸಾಮ್ ಕೃ.ವಿ.ವಿ. ಕುಲಪತಿ ಡಾ॥ ಉಪಾಧ್ಯಾಯ ಇದರ ಛೇರ್‌ಮನ್, ಮತ್ತಿಬ್ಬರು ಇದರ ಮೆಂಬರುಗಳು ಐ.ಸಿ.ಎ.ಆರ್. ಎಜುಕೇಷನ್ ಸೆಕ್ಷೆನ್‌ನಲ್ಲಿದ್ದ ಸೈಂಟಿಸ್ಟ್ ಡಾ॥ ಅರವಿಂದನ್ ಇದರ ಮೆಂಬರ್ ಸೆಕ್ರೆಟರಿ. ಕಾರಣಾಂತರಗಳಿಂದ ಇದರ ಛೇರ್‌ಮನ್ ಯಾವ ಮೀಟಿಂಗಿಗೂ ಬರಲಾಗಲಿಲ್ಲ. ಆ ಸಮಿತಿಯನ್ನು ಕರೆಯಲೂ ಇಲ್ಲ. ಕೊನೆಗೆ ನಾನು ಮತ್ತು ಡಾ॥ ಅರವಿಂದನ್ ಇಬ್ಬರು ಒಂದು ವಾರ ಬೆಂಗಳೂರಿನಲ್ಲಿ ಕುಳಿತು ಒಂದು ಕರಡು ಪ್ರತಿಯನ್ನು ತಯಾರು ಮಾಡಿದೆವು. ಅಷ್ಟರಲ್ಲಿ ಅರವಿಂದನ್ ಎಲ್ಲಾ ಕೃ.ವಿ.ವಿ.ಗಳಿಂದ ಮಾಹಿತಿಗಳನ್ನು ಸಂಗ್ರಹಿಸಿದ್ದರು. ಪಠ್ಯಕ್ರಮಗಳ ಕರಡು ಪ್ರತಿಯನ್ನು ಎಲ್ಲಾ ಕೃ.ವಿ.ವಿ. ನಿಲಯಗಳಿಗೆ ಕಳುಹಿಸಿ ಅವರವರ ಬೋರ್ಡ್ ಆಫ್ ಸ್ಟಡೀಸ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ನಲ್ಲಿಟ್ಟು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ರಾಷ್ಟ್ರಮಟ್ಟದ ಕಾರ್ಯಾಗಾರದಲ್ಲಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವುದೆಂದು ನಿರ್ಧರಿಸಲಾಯಿತು. ಅಂತೆಯೆ 1993 ಮೇ 12-14ರಂದು ಆಲ್ ಇಂಡಿಯ ವರ್ಕ್‌ಷಾಪ್ ಆನ್ ಕರಿಕ್ಯುಲಂ ಡೆವಲಪ್‌ಮೆಂಟ್ ಫಾರ್ ಆಗ್ರಿಕಲ್‌ಚರ್ ಎಂಬ ಕಾರ್ಯಾಗಾರವನ್ನು ಕರೆಯಲಾಯಿತು. ದೇಶದ ಎಲ್ಲಾ ಇಪ್ಪತ್ತೊಂಭತ್ತು ಕೃ.ವಿ.ವಿದ್ಯಾನಿಲಯಗಳ ಡೀನ್ಸ್ ಮತ್ತು ಪ್ರಿನ್ಸಿಪಾಲರುಗಳು ಭಾಗವಹಿಸಿ, ಚರ್ಚಿಸಿ ಒಂದು ನಿರ್ಣಯಕ್ಕೆ ಬಂದರು.

ಬೆಂಗಳೂರು ಕೃ.ವಿ.ವಿ.ದಲ್ಲಿ ಕರಡು ಪ್ರತಿಯನ್ನು ಬೋರ್ಡ್ ಆಫ್ ಸ್ಟಡೀಸ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಮುಂದೆ ಇಟ್ಟಾಗ ವಾದ ಪ್ರತಿವಾದಗಳು ಘರ್ಷಣೆಯ ಮಟ್ಟದಲ್ಲಿ

ನಡೆದವು. ಬೇಸಿಕ್ ಸೈನ್ಸ್ ವಿಭಾಗವು ಕೃ. ವಿ. ವಿ. ಪ್ರಾರಂಭದಲ್ಲಿ (1966) ವಿಷ್ಟು ವಿಷಯಗಳಿದ್ದವು, ಅವೆಲ್ಲವೂ ಮುಂದುವರಿಯಬೇಕೆಂದು ಹಟ ಹಿಡಿದರು. ಕೃ.ವಿ.ವಿ. ಪ್ರಾರಂಭದಲ್ಲಿ ಒಂದು ವರುಷದ ಪಿ.ಯು.ಸಿ.ವಿದ್ಯಾರ್ಥಿಗಳು ಸೇರುತ್ತಿದ್ದರಿಂದ ಅವರಿಗೆ ಹೆಚ್ಚಿನ ಬೇಸಿಕ್ ಕೆಮಿಸ್ಟ್ರಿ, ಬಾಟನಿ, ಜೂಆಲಜಿ ಅಗತ್ಯವಿದೆಯೆಂದು ಬೇಸಿಕ್ ಸೈನ್ಸ್ ವಿಭಾಗವನ್ನು ವಿಸ್ತರಿಸಿದ್ದರು. ನಂತರ ಪಿ.ಯು.ಸಿ. ಎರಡು ವರುಷದ ಅವಧಿಯಾದ ನಂತರ ಕೃ.ವಿ.ವಿ. ಬೋಧಿಸುತ್ತಿದ್ದಕ್ಕಿಂತ ಹೆಚ್ಚಿನದನ್ನೇ ಈ ವಿಷಯಗಳಲ್ಲಿ ಹೇಳುತ್ತಿದ್ದರು. ಹಾಗಾಗಿ ಕೃ.ವಿ.ವಿ. ಸೇರಿದ ವಿದ್ಯಾರ್ಥಿಗಳಿಗೆ ಮೊದಲನೆಯ ವರುಷದಲ್ಲಿ ತಾವೇನೂ ಹೊಸದನ್ನು ಕಲಿಯುತ್ತಿಲ್ಲವೆಂಬ ಭ್ರಮೆಯಾಗುತ್ತಿತ್ತು. ಕೃ.ವಿ.ವಿದ್ಯಾನಿಲಯದಿಂದ ಹೊರಬಂದ ಹುಡುಗರಿಗೆ ಅವರು ಕಲಿತ ವಿಷಯಗಳಲ್ಲಿ ಕ್ಷೇತ್ರಮಟ್ಟದಲ್ಲಿ ಸರಿಯಾದ ತರಬೇತಿ ಇಲ್ಲವೆಂಬ ಅಭಿಪ್ರಾಯ ಕೇಳಿಬರುತ್ತಿತ್ತು. ಈ ಕಾರಣಗಳಿಂದಾಗಿ ಕಲಿಯುತ್ತಿರುವ ವಿಷಯಗಳ ಬಗ್ಗೆ ಹೆಚ್ಚಿನ ಪರಿಜ್ಞಾನ ಬರಬೇಕಾದರೆ ಪ್ರಾಕ್ಟಿಕಲ್ಸ್ ಹೆಚ್ಚಾಗಿ ಆಗಬೇಕಿತ್ತು. ಬೇಕಿಲ್ಲದ ಎಷ್ಟೋ ವಿಷಯಗಳು ಹುಡುಗರ ಹೆಚ್ಚು ಕಾಲವನ್ನು ತಿನ್ನುತ್ತಿತ್ತು. ಇದಕ್ಕೆ ಬದಲಾಗಿ ಹೊಸವಿಷಯಗಳಾದ ಕಂಪ್ಯೂಟರ್ ಸೈನ್ಸ್, ಬಯೋಟೆಕ್ನಾಲಜಿ, ಬಯೋಕೆಮಿಸ್ಟ್ರಿ, ಸ್ಟ್ಯಾಟಿಸ್ಟಿಕ್ಸ್, ಆರ್‌ಗ್ಯಾನಿಕ್ ಅಗ್ರಿಕಲ್‌ಚರ್ ಮುಂತಾದುವುಗಳ ಅಗತ್ಯವಿತ್ತು. ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರಮಟ್ಟದ ಕಾರ್ಯಗಾರದಲ್ಲಿ ಮೇಲಿನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸುವಂತೆ ಒತ್ತಾಯಿಸಲಾಯಿತು. ಹಿಂದೆ ಇದ್ದ ಪಠ್ಯಕ್ರಮಗಳಲ್ಲಿ ಬೇಡದಿದ್ದದ್ದು ಬಹಳ ತೆಗೆಯಬೇಕಾಗಿ ಬಂತು. ಕಾರಣ, ವಾರದಲ್ಲಿ ಗರಿಷ್ಠ ನಲವತ್ತೆಂಟು ಘಂಟೆಗಳ ಕಾಲ ಮಾತ್ರ ಬೋಧನೆಗೆ ದೊರೆಯುತ್ತಿತ್ತು. ಕೆಲವು ವಿಶ್ವವಿದ್ಯಾನಿಲಯಗಳು ಹೊಸ ವಿಷಯಗಳಾದ ಕಂಪ್ಯೂಟರ್ ಸೈನ್ಸ್, ಬಯೋಟೆಕ್ನಾಲಜಿ, ಬಯೋಕೆಮಿಸ್ಟ್ರಿ, ಮುಂತಾದುವನ್ನು ಬೋಧಿಸಲು ಅನುಕೂಲತೆಗಳನ್ನು ಕಲ್ಪಿಸುವುದು ಹಣದ ಮುಗ್ಗಟ್ಟಿನಿಂದ ತೊಂದರೆಯಾಗುತ್ತದೆಯೆಂದು ವಾದಿಸಿದರು. ರಾಷ್ಟ್ರದ ಹಿತ ದೃಷ್ಟಿಯಿಂದ ಕೃಷಿ ಕ್ಷೇತ್ರದಲ್ಲಿ ಆಧುನಿಕ ವಿಜ್ಞಾನ, ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ಅತ್ಯವಶ್ಯಕ ಎಂದು ಮನವರಿಕೆ ಮಾಡಿ ಭಾರತೀಯ ಕೃಷಿ ಅನುಸಂಧಾನ ಈ ಖರ್ಚನ್ನು ಭರಿಸುವಂತೆ ಒತ್ತಾಯಿಸಲಾಯಿತು. ಅದನ್ನು ಐ.ಸಿ.ಎ.ಆರ್. ಕೂಡ ಒಪ್ಪಿಕೊಂಡಿತು.

ಡೀನ್ ಕಮಿಟಿಯ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಐ.ಸಿ.ಎ.ಆರ್. ಕೆಲವು ಸಮಯ ತೆಗೆದುಕೊಂಡಿತು. ಆದರೂ ಬೆಂಗಳೂರು ಕೃ.ವಿ.ವಿ. ಕಂಪ್ಯೂಟರ್ ಸೈನ್ಸ್ ಕೂಡ ಸೇರಿದಂತೆ ಮೇಲಿನ ವಿಷಯಗಳೆಲ್ಲವನ್ನು ಪಠ್ಯಕ್ರಮದಲ್ಲಿ ಸೇರಿಸಿ, ಸ್ನಾತಕ ವಿದ್ಯಾರ್ಥಿಗಳಿಗೆ ಬೋಧಿಸಲು ಪ್ರಾರಂಭಿಸಿದ್ದು, ದೇಶದಲ್ಲಿ ಮೊದಲನೆ ಕೃ.ವಿ.ವಿದ್ಯಾನಿಲಯವೆಂದು ಹೇಳಬಹುದು. ಕೃ.ವಿ.ವಿದ್ಯಾನಿಲಯದ ಎಲ್ಲಾ ಕಾಲೇಜುಗಳಲ್ಲಿ ಕಂಪ್ಯೂಟರ್ ಕೋರ್ಸ್‌ನ್ನು ಕೊಡಲು ಸುಮಾರು ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜು ಮಾಡಲಾಯಿತು. ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಬೇರೆ ಕೆಲಸಗಳಿಗೆ ಕಡಿತವನ್ನು ಮಾಡಿ ಇದಕ್ಕೆ ಆದ್ಯತೆ ಕೊಟ್ಟು ಪ್ರತಿ ವಿದ್ಯಾರ್ಥಿಗೂ ಒಂದರಂತೆ ಒಂದೊಂದು ಬ್ಯಾಚಿಗೂ ಕಂಪ್ಯೂಟರ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡಲಾಯಿತು. ಮುಂದೆ ನಾನು ಕುಲಪತಿ ಸ್ಥಾನ ತೆರವು ಮಾಡಿದ ನಂತರ (1998) ಅಮೆರಿಕಾಕ್ಕೆ ಹೋಗಿದ್ದಾಗ ಬೆಂಗಳೂರು ಕೃ.ವಿ.ವಿ.ದಿಂದ

ಬಂದಿದ್ದ ವಿದ್ಯಾರ್ಥಿಗಳನ್ನು ಸಂಧಿಸಿದಾಗ ವಿದೇಶದಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಈ ಕೋರ್ಸ್‌ಗಳು ಬಹಳ ಉಪಯುಕ್ತವಾದದ್ದನ್ನು ಸ್ಮರಿಸಿಕೊಂಡು, ಸಂತೋಷವನ್ನು ವ್ಯಕ್ತಪಡಿಸಿದರು.

ಬದಲಾದ ಪಠ್ಯ ಕ್ರಮದಲ್ಲಿ ಒಂದು ಷಣ್ ಮಾಸಿಕ ಪೂರ್ತಿ (ಸೆಮೆಸ್ಟರ್) ವಿದ್ಯಾರ್ಥಿಗಳು ಹಳ್ಳಿಯಲ್ಲೇ ರೈತರ ಜಮೀನಿನಲ್ಲಿ ರೈತರ ಸಮ್ಮುಖದಲ್ಲಿ ತಾವು ಕಲಿತ ವಿದ್ಯೆಯನ್ನು ಪ್ರದರ್ಶಿಸುವುದು ಮತ್ತು ರೈತರಿಂದ ಕಲಿಯುವುದು, ಇವರುಗಳ ಪರಸ್ಪರ ವಿಚಾರ ವಿನಿಮಯ ನಡೆಯುವಂತಹ ರಾವೆ (RAWE) ಕಾರ್ಯಕ್ರಮಗಳನ್ನು ಅಳವಡಿಸಿದ್ದು ಒಂದು ಮಹತ್ವ ಪೂರ್ಣ ಬದಲಾವಣೆ. ಹೀಗೆ ಪ್ರತಿ ವಿಷಯದಲ್ಲೂ ಅಂದರೆ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಅರಣ್ಯ, ಹೈನುಗಾರಿಕೆ, ಮೀನುಗಾರಿಕೆಗಳಲ್ಲಿ ರಾವೆ (ರೂರಲ್ ಅಗ್ರಿಕಲ್ಚರ್ ವರ್ಕ್ಸ್ ಎಕ್ಸ್‌ಪೀರಿಯನ್ಸ್) ಕಾರ್ಯಕ್ರಮಗಳನ್ನು ಅಳವಡಿಸಲಾಯಿತು. ಬೇರೆ ಯಾವ ಕೃ.ವಿ.ವಿದ್ಯಾನಿಲಯ ಗಳಲ್ಲಿ ಇದನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲಾಗಲಿಲ್ಲವೆಂದಾಗ ಬೆಂಗಳೂರು ಕೃ.ವಿ.ವಿ. ಈ ಕಾರ್ಯಕ್ರಮಗಳನ್ನು ಅಳವಡಿಸಿರುವುದು ಹೆಮ್ಮೆಯ ವಿಷಯ. ಇದಕ್ಕೂ ಕೂಡ ಸಂಪನ್ಮೂಲದ ಕೊರತೆಯಿಂದ ಪೂರ್ಣ ಪ್ರಮಾಣದಲ್ಲಿ ರಾವೆಯನ್ನು ಕಾರ್ಯಗತಮಾಡಲು ತೊಂದರೆ ಇದೆಯೆಂದು ಸಂಬಂಧಪಟ್ಟ ಇಲಾಖೆಗಳು ಕಳವಳ ವ್ಯಕ್ತಪಡಿಸಿದಾಗ ಬೇರೆ ಕಾರ್ಯಗಳು ಸ್ಥಗಿತವಾದರೂ ಇದನ್ನು ಕೈಬಿಡಬಾರದೆಂದು ಇದ್ದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದಾಗ ಎಲ್ಲರೂ ಈ ಕಾರ್ಯಕ್ರಮವನ್ನು ಮೆಚ್ಚಿಕೊಂಡರು.

ಕೃಷಿ ಕಾಲೇಜಿನಲ್ಲಿ ಹದಿನಾರು ವಿಭಾಗಗಳು ಇದ್ದು ಕೃ.ವಿ.ವಿದ್ಯಾನಿಲಯದ ಅತಿ ದೊಡ್ಡ ಫ್ಯಾಕಲ್ಟಿ ಎಂದು ಪರಿಗಣಿಸಿತ್ತು. ಕೃಷಿ ಕಾಲೇಜಿಗೆ ಸುಮಾರು ಇನ್ನೂರೈವತ್ತು ವಿದ್ಯಾರ್ಥಿಗಳನ್ನು ಪ್ರತಿವರ್ಷ ಸೇರಿಸಿಕೊಳ್ಳುತ್ತಿದ್ದು ಕೃ.ವಿ.ವಿ. ಒಟ್ಟು ಸೇರ್ಪಡೆಯ ಶೇಕಡ ಐವತ್ತಕ್ಕೂ ಹೆಚ್ಚು ಕೃಷಿ ಕಾಲೇಜಿನ ವಿದ್ಯಾರ್ಥಿಗಳಾಗಿರುತ್ತಿದ್ದರು. ಅಂದ ಮೇಲೆ ಕೃಷಿ ಕಾಲೇಜಿನ ಅಧ್ಯಾಪಕರ ಸಂಖ್ಯೆಯೂ ಕೂಡ ಬೇರೆ ಕಾಲೇಜುಗಳಿಗಿಂತ ಹೆಚ್ಚಿನದಾಗಿತ್ತು. ಆದರೆ ಬಹುತೇಕ ಅಧ್ಯಾಪಕರ ಚಿಂತೆ ಕೃಷಿ ಕಾಲೇಜಿನ ಮತ್ತು ಅದರ ವಿದ್ಯಾರ್ಥಿಗಳ ಹಿತಚಿಂತನೆಯಾಗಿತ್ತೆಂದು ಹೇಳಿ ಕೊಳ್ಳುವಷ್ಟು ನಂಬಿಕೆ ನನ್ನಲ್ಲಿ ಇರಲಿಲ್ಲ. ಅವರವರ ಡಿಪಾರ್ಟ್‌ಮೆಂಟಿನ ಒಟ್ಟಾರೆ ಪ್ರಗತಿಯ ಬಗ್ಗೆಯಾದರೂ ಎಲ್ಲರಲ್ಲೂ ಒಮ್ಮನಸ್ಸಿದ್ದಂತೆ ಕಾಣುತ್ತಿರಲಿಲ್ಲ. ಅವರವರ ಮಟ್ಟಿಗೆ ಅವರದೇ ಆದ ಒಂದು ಸಣ್ಣ ಸೀಮಿತವನ್ನು ನಿರ್ಮಿಸಿಕೊಳ್ಳುತ್ತಿದ್ದಂತೆ ತೋರುತ್ತಿತ್ತು. ಶೈಕ್ಷಣಿಕ ಕ್ಷೇತ್ರದಲ್ಲಿ ಇರಬೇಕಾದಂತಹ ತ್ಯಾಗ ಮನೋಭಾವ, ಮಾದರಿಯ ನಡವಳಿಕೆ, ಮಾರ್ಗದರ್ಶನ ನೀಡುವ ಪರಿಣತೆಯ ಕೊರತೆ ಎದ್ದು ಕಾಣುತ್ತಿದ್ದವು. ವಿದ್ಯಾರ್ಥಿಗಳು ಕ್ಷುಲ್ಲಕ ಕಾರಣಗಳಿಗಾಗಿ ಮುಷ್ಕರ ಹೂಡಿದರೆ ಅದರ ಕಾರಣ ತಿಳಿಯುವಷ್ಟು ಕಾಳಜಿಯನ್ನು ತೋರಿಸದಿದ್ದದ್ದು, ತಮಗೂ ಅದಕ್ಕೂ ಯಾವ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದದ್ದು, ಮುಷ್ಕರ ದಿನಗಳನ್ನು ವ್ಯರ್ಥವಾಗಿ ಕಾಲಹರಣ ಮಾಡುತ್ತಿದ್ದದ್ದು ಮನಸ್ಸಿಗೆ ನೋವುಂಟು ಮಾಡುತ್ತಿದ್ದವು. ಕೆಲವರಿಗೆ ಅವರಿವರ ಮೇಲೆ ಅನಾಮಧೇಯ ಪತ್ರ ಬರೆದು, ಬಿತ್ತಿ ಪತ್ರಗಳನ್ನು ಹಂಚಿ, ಪ್ರಸಾರ ಮಾಧ್ಯಮಕ್ಕೂ ಕೂಡ ಕೊಡುವಂತಹ ಪ್ರವೃತ್ತಿ ಇತ್ತು. ತಪ್ಪು ಕಂಡರೆ ಪ್ರತ್ಯಕ್ಷವಾಗಿ ಸಂಬಂಧಪಟ್ಟವರಿಗೆ ಹೇಳಿಕೊಳ್ಳುವುದಕ್ಕೆ ಸಂಕೋಚವೇಕೆಂದು ತಿಳಿಯುತ್ತಿರಲಿಲ್ಲ. ಶಿಕ್ಷಕರಿಗೆ ಅಗತ್ಯವಾಗಿ ಇರ

ಬೇಕಿದ್ದ ಯಾರ ಮುಂದಾದರೂ ಸತ್ಯವನ್ನು ಎತ್ತಿಹಿಡಿದು ತೋರಿಸುವಂತಹ ಮನೋಭಾವ ಉಳ್ಳವರು ಬಹಳ ಕಡಿಮೆ ಇದ್ದು ಅಲ್ಲಲ್ಲಿ ಕೆಲವರು ಮಾರ್ಗದರ್ಶಕರಾಗಿದ್ದದ್ದು ಸಂತೋಷದ ಸಂಗತಿ.

ಕೊನೆಯ ಪಕ್ಷ ತಿಂಗಳಿಗೊಮ್ಮೆಯಾದರೂ ಎಲ್ಲರೂ ಒಂದೆಡೆ ಕಲೆತು ಅವರವರ ವೈಯಕ್ತಿಕ ತೊಂದರೆಗಳನ್ನು ಮರೆತು ಶಿಕ್ಷಕರ ಧ್ಯೇಯ ಮತ್ತು ಸಾಧನೆಯ ಬಗ್ಗೆ ಅರಿವು ಮೂಡಿಸುವ ದೃಷ್ಟಿಯಿಂದ ಫ್ಯಾಕಲ್ಟಿ ಕ್ಲಬ್ ಅನ್ನು ಪುನಃಚೈತನ್ಯಗೊಳಿಸುವ ಪ್ರಯತ್ನ ಮಾಡಿದೆ. ನಿಗಧಿಯಾದ ದಿನ, ನಿಗಧಿಯಾದ ವೇಳೆಯಲ್ಲಿ, ನಿಗಧಿಯಾದ ಸ್ಥಳದಲ್ಲಿ, ತಿಂಗಳಿಗೊಮ್ಮೆ ಎಲ್ಲರೂ ಕೂಡಿ ಯಾರಾದರೊಬ್ಬರು ಅವರು ಸಾಧಿಸಿರುವ ಸಂಶೋಧನೆಯನ್ನು ಅಥವಾ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ವಿಧಾನಗಳನ್ನು ಅಳವಡಿಸಿರುವುದನ್ನು ವಿವರಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಯಿತು. ಇದರ ಜೊತೆಗೆ ಯಾರಾದರೂ ಪ್ರತಿಭಾವಂತ ವಿಜ್ಞಾನಿ ಹೊರಗಡೆಯಿಂದ ಆ ತಿಂಗಳಲ್ಲಿ ಬಂದಿದ್ದರೆ ಅವರ ಉಪನ್ಯಾಸವನ್ನು ಇಟ್ಟುಕೊಳ್ಳುವ ಏರ್ಪಾಡು ಇತ್ತು. ಮೊದಮೊದಲು ನಾಲ್ಕಾರು ಜನರು ಸೇರುವುದು ಕೂಡ ಕಷ್ಟವಾಗಿ ಕಂಡಿತು. ಕ್ರಮೇಣ ಹಾಜರಿ ಉತ್ತಮವಾಯಿತು. ನಾನು ನಿವೃತ್ತನಾದಾಗ ಫ್ಯಾಕಲ್ಟಿ ಕ್ಲಬ್ ಪೂರ್ಣ ಪ್ರಮಾಣದಲ್ಲಿ ಸೇರಿ ಬೀಳ್ಕೊಡುವಾಗ ಮುಂದೆ ಇದನ್ನು ಫಲಪ್ರದವಾಗಿ ನಡೆಸಿಕೊಂಡು ಹೋಗುವ ಭರವಸೆ ನೀಡಿದರು.

ಫ್ಯಾಕಲ್ಟಿ ಕ್ಲಬ್ ರಾಜಕೀಯರಹಿತವಾಗಿ ಯಾವ ಫಲಾಪೇಕ್ಷೆಯನ್ನು ಸಾಧಿಸುವ ದೃಷ್ಟಿ ಇಲ್ಲದೆ ಕೇವಲ ತಮ್ಮ ವೃತ್ತಿಯ ಬೆಳವಣಿಗೆಗೆ ಒಂದು ಒಳ್ಳೆಯ ಸಾಧನವೆಂದು ಅರಿತಿದ್ದೇನೆ. ಎಲ್ಲರೂ ಬಿಚ್ಚು ಮನಸ್ಸಿನಿಂದ ತಾವು ಮಾಡುತ್ತಿರುವ ಕೆಲಸ, ತಾವು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಧ್ಯೇಯಧೋರಣೆಗೆ ಅನುಗುಣವಾಗಿದೆಯೇ ಎಂದು ಆತ್ಮ ಪರೀಕ್ಷೆ ಮಾಡಿಕೊಳ್ಳಲು ಮತ್ತು ವಿಚಾರ ವಿನಿಮಯ ಮಾಡಿ ರೂಪರೇಖೆಗಳನ್ನು ತಿದ್ದಿಕೊಳ್ಳಲು, ಫ್ಯಾಕಲ್ಟಿ ಕ್ಲಬ್ ಸಹಾಯ ವಾಗುವುದು. ಇಂದು ಲೆಕ್ಕವಿಲ್ಲದಷ್ಟು ಸಂಘ ಸಂಸ್ಥೆಗಳು ನಾಯಿಕೊಡೆಯಂತೆ ವಿಶ್ವವಿದ್ಯಾನಿಲಯ ಗಳಲ್ಲಿ ಹುಟ್ಟಿಕೊಂಡಿರುವುದು ಸಂಸ್ಥೆಯ ಅಥವಾ ದೇಶದ ಹಿತದೃಷ್ಟಿಯಿಂದಲ್ಲ. ಎಲ್ಲರೂ ಈ ಸಂಸ್ಥೆ ನನಗೇನು ಮಾಡಿದೆ ಎಂದು ಕೇಳುವವರೆ ವಿನಃ ಈ ಸಂಸ್ಥೆಗೆ ನಾನೇನು ಮಾಡಿರುವೆ ಎಂದು ಚಿಂತಿಸುವವರು ವಿರಳ.

ನಾನು ಕೃಷಿ ಶಿಕ್ಷಣ ನಿರ್ದೇಶಕನಾಗಿದ್ದಾಗ ಮಾಡಿದ ಮತ್ತೊಂದು ಸಂತೋಷಕರ ಕೆಲಸವೆಂದರೆ ಹೊಸ ಕಾಲೇಜುಗಳನ್ನು ಸ್ಥಾಪಿಸಲು ಸ್ಪೆಶಲ್ ಆಫೀಸರ್ ಆಗಿ ಕಾರ್ಯ ನಿರ್ವಹಿಸಿದ್ದು. ಅಂದಿನ ಕೃಷಿ ಮಂತ್ರಿ ಬಂಗಾರಪ್ಪನವರ ದಿಟ್ಟಹೆಜ್ಜೆಯ ಪ್ರಯತ್ನದ ಫಲವಾಗಿ ಇಂದು ಶಿವಮೊಗ್ಗ, ಮಂಡ್ಯ, ಮೂಡಿಗೆರೆ, ಪೊನ್ನಂಪೇಟೆ, ಚಿಂತಾಮಣಿಗಳಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ರೇಷ್ಮೆಕೃಷಿ ಕಾಲೇಜುಗಳು ಕಾರ್ಯಾರಂಭ ಮಾಡುತ್ತಿವೆ. ಹೊಸ ಕಾಲೇಜುಗಳನ್ನು ತೆರೆಯುವ ಪ್ರಸ್ತಾಪ ಬಂದಾಗ ಇರುವ ಕಾಲೇಜುಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದಿರುವಾಗ ಹೊಸ ಕಾಲೇಜುಗಳನ್ನು ತೆರೆಯುವುದರಲ್ಲಿ ಅರ್ಥವಿಲ್ಲವೆಂಬ ವಾದ ಸಮರ್ಥನೀಯವಾಗಿ ಕಂಡಿರಬಹುದು. ಭಾರತೀಯ ಕೃಷಿ ಅನುಸಂಧಾನ ಕೂಡ ಹೊಸ ಕಾಲೇಜುಗಳನ್ನು ತೆರೆಯಲು ಒಪ್ಪಲಿಲ್ಲ ಮತ್ತು ಇವು ಯಾವುದಕ್ಕೂ ಧನ ಸಹಾಯ ಮಾಡಲಿಲ್ಲ.

ಹೊಸ ಕಾಲೇಜುಗಳನ್ನು ತೆಗೆಯುವ ವಿಷಯದಲ್ಲಿ ಕೃಷಿ ಮಂತ್ರಿಯವರ ಛೇಂಬರ್‌ನಲ್ಲಿ ಸಭೆ ಸೇರಿದ್ದವರಲ್ಲಿ ನಾನೂ ಒಬ್ಬ. ಎಲ್ಲ ತೊಂದರೆಗಳಿದ್ದರೂ ಕೃಷಿ ಕಾಲೇಜುಗಳನ್ನು ಹಳ್ಳಿಗಳತ್ತ ವಿಸ್ತರಿಸುವ ಅಗತ್ಯ ಮತ್ತು ತನ್ಮೂಲಕ ರಾಜ್ಯದ ರೈತರಿಗೆಲ್ಲ ಆಧುನಿಕ ಬೇಸಾಯಪದ್ಧತಿ ಅರಿವಾಗಬೇಕೆಂಬ ಮಂತ್ರಿಗಳ ಸಲಹೆಯನ್ನು ತೆಗೆದುಹಾಕುವಂತಿರಲಿಲ್ಲ.

ಈ ಸರಣಿಯಲ್ಲಿ ಮೊದಲು ಶಿವಮೊಗ್ಗದಲ್ಲಿ ಕೃಷಿ ಕಾಲೇಜು ಪ್ರಾರಂಭಿಸಲು ಸರ್ಕಾರದ ಆದೇಶ ಹೊರಡಿಸಲಾಯಿತು. ಜಾಗದ ಬಗ್ಗೆ ಇನ್ನೂ ತೀರ್ಮಾನಕ್ಕೆ ಬಂದಿರಲಿಲ್ಲ. ಕೃಷಿ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಕಾರ್ಯದರ್ಶಿಗಳು ಕೃ.ವಿ.ವಿ. ಕುಲಪತಿ ಮತ್ತು ಅವರ ಸಹೋದ್ಯೋಗಿಗಳು ಒಂದು ಸಭೆ ಸೇರಿ ಶಿವಮೊಗ್ಗದ ಹತ್ತಿರವಿರುವ ಹೊಸೂಡಿ ಗ್ರಾಮದಲ್ಲಿ ಮುನ್ನೂರು ಎಕರೆ ನೀರಾವರಿ ಪ್ರದೇಶ ಸರ್ಕಾರದ ಅಧೀನದಲ್ಲಿದೆ ಅಲ್ಲಿ ಕೃಷಿ ಕಾಲೇಜನ್ನು ಪ್ರಾರಂಭಿಸುವುದೆಂದು ತೀರ್ಮಾನ ತೆಗೆದುಕೊಂಡರು. ಆದರೆ ಆ ಜಮೀನು ತಕರಾರಿನಲ್ಲಿದ್ದು ಅದನ್ನು ಶೀಘ್ರವಾಗಿ ಬಿಡಿಸುವ ಪ್ರಯತ್ನ ಮಾಡುವುದಾಗಿ ಸಂಬಂಧ ಪಟ್ಟ ಕಾರ್ಯದರ್ಶಿಯವರು ಆಶ್ವಾಸನೆ ನೀಡಿದರು. ಈ ಜಾಗದ ಬಗ್ಗೆ ಕೆಲವು ಮಾಹಿತಿಗಳನ್ನು ಸಂಗ್ರಹಿಸಿದ್ದು ಅದು ಪೂರ್ಣ ಒತ್ತುವರಿಯಾಗಿರುವುದು ತಿಳಿದುಬಂತು. ಅಲ್ಲದೆ ಹಿಂದೆ ಈ ಜಾಗವನ್ನು ಭದ್ರಾವತಿಯಲ್ಲಿದ್ದ ಖಾಸಗಿ ಸಕ್ಕರೆ ಕಾರ್ಖಾನೆಗೆ ಕೊಟ್ಟಿತ್ತೆಂದು ಅದು ಮುಚ್ಚಿದ ನಂತರ ಅದರ ಮಾಲಿಕರು ಈ ಜಾಗವನ್ನು ಕಾನೂನು ಬಾಹಿರವಾಗಿ ಮಾರಿದ್ದರೆಂದೂ ವದಂತಿ ಇತ್ತು. ಅಂತು ಆ ಜಾಗವನ್ನು ವಶಕ್ಕೆ ತೆಗೆದುಕೊಳ್ಳುವುದು ಅಷ್ಟು ಸುಲಭವಾಗಿ ಕಾಣಲಿಲ್ಲ. ಆ ಜಾಗ ಸಿಕ್ಕಿದರೂ ಅಲ್ಲಿಗೆ ಪ್ರತ್ಯೇಕ ರೋಡು ಮಾಡಬೇಕಿತ್ತು. ಬೇರೆ ರೋಡಿನ ವ್ಯವಸ್ಥೆಯಾಗಲಿ ಅಥವಾ ಬಸ್ಸಿನ ವ್ಯವಸ್ಥೆಯಾಗಲಿ ಇರಲಿಲ್ಲ. ಕಾಲೇಜು, ಹಾಸ್ಟಲು, ಫಾರಂ ಡೆವಲೆಪ್‌ಮೆಂಟ್ ಮತ್ತಿತರ ಸೌಲಭ್ಯಗಳಿಗೆ ಸುಮಾರು ಹದಿನಾರು ಕೋಟಿ ರೂ. ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿತ್ತು. ಇಷ್ಟೆಲ್ಲಾ ಧನ ಸಹಾಯ ಒಂದೆರಡು ವರುಷದಲ್ಲಿ ಒದಗುವ ಸಾಧ್ಯತೆಗಳೂ ಇರಲಿಲ್ಲ. ಮೀಟಿಂಗ್ ಆದನಂತರ ಕೃಷಿ ಮಂತ್ರಿಯವರು, ಹಣಕಾಸು ಕಾರ್ಯದರ್ಶಿಗಳು ಕುಲಪತಿಯವರು ಅಲ್ಲಿಯೇ ಇದ್ದರು. ಕುಲಪತಿ ಕೃಷ್ಣಮೂರ್ತಿಯವರನ್ನು ಪಕ್ಕಕ್ಕೆ ಕರೆದು ಇಂದು ನಡೆದ ತೀರ್ಮಾನದಂತೆ ಹೊಸೂಡಿಯಲ್ಲಿ ಕಾಲೇಜನ್ನು ಕಟ್ಟುವುದಾದರೆ ಈ ಶತಮಾನದಲ್ಲಂತೂ ಆಗುವುದಿಲ್ಲ. ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ಕುಶಾಲನಗರದಲ್ಲಿ ಕೃಷಿ ಕಾಲೇಜೊಂದನ್ನು ತೆರೆಯಬೇಕೆಂದು ಸರ್ಕಾರದ ಆದೇಶವಾಗಿ ಅದಕ್ಕಾಗಿ ನೂರು ವಿದ್ಯಾರ್ಥಿಗಳನ್ನೂ ಕೂಡ ತೆಗೆದುಕೊಂಡಿದ್ದು ಮುಂದೆ ಅದು ಆಗದೆ ಇದ್ದದ್ದು ತಿಳಿದೇ ಇದೆ. ಇದೂ ಕೂಡ ಹಾಗೆ ಆಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈಗ ಸದ್ಯಕ್ಕೆ ಸರ್ಕಾರದವರು ಮೂವತ್ತು ಲಕ್ಷ ರೂಪಾಯಿ ಕೊಟ್ಟರೆ ಶಿವಮೊಗ್ಗದ ಹತ್ತಿರವಿರುವ ನವಿಲೆ ಫಾರಂನಲ್ಲಿ ಎನ್.ಎ.ಇ.ಪಿ. ಬಿಲ್ಡಿಂಗ್ ಮೇಲೆ ನಾಲ್ಕು ರೂಮ್‌ಗಳನ್ನು ಹಾಕಿದರೆ ಕ್ಲಾಸ್‌ರೂಮ್‌ಗಳಾಗುತ್ತವೆ. ಹಾಲಿ ಇರುವ ಲ್ಯಾಬೊರೇಟರಿ ಪ್ರಾಕ್ಟಿಕಲ್ಸ್‌ಗೆ ಆಗುತ್ತವೆ. ಎನ್.ಎ.ಇ.ಪಿ. ಟ್ರೈನಿಂಗ್ ಹಾಸ್ಟಲ್ ಹುಡುಗರ ಹಾಸ್ಟಲ್ ಆಗಿ ಪರಿವರ್ತಿಸಿದರೆ ಮೊದಲನೆ ವರ್ಷದ ಐವತ್ತು ಹುಡುಗರಿಗೆ ಸಾಕು. ಹಂತ ಹಂತವಾಗಿ ಉಳಿದಿದ್ದನ್ನು ಮುಂದಿನ ವರ್ಷಗಳಲ್ಲಿ ಮಾಡಬಹುದು. ಇದನ್ನು ಕೃಷಿ ಮಂತ್ರಿಯವರಿಗೆ ಹೇಳಿ ಕೂಡಲೇ ಹಣ ಬಿಡುಗಡೆ ಮಾಡುವಂತೆ ಆದೇಶಿಸಲಿ ಎಂದೆ. ಕುಲಪತಿಯವರು ಸ್ವಲ್ಪ ಯೋಚಿಸಿ ನೀವು ಹೇಳುವ ಸಲಹೆ ಸೂಕ್ತವಾಗಿ ಕಾಣುತ್ತದೆ. ನೀವೇ ಇದನ್ನು ಹೇಳಿ ಅಂದರು.

ತಾವು ಒಪ್ಪಿದರೆ ನನ್ನದೊಂದು ಸಲಹೆ ಇದೆ ಎಂದು ಕೃಷಿ ಮಂತ್ರಿಯವರಿಗೆ ಹೇಳಿದೆ. ಹೇಳಿ ವೀರೇಶ್ ಅದೇನು ಅಂದರು. ಹೊಸೂಡಿಯ ಜಾಗವನ್ನು ವಶಕ್ಕೆ ತೆಗೆದುಕೊಂಡು ಕಾಲೇಜು ಮತ್ತು ಹಾಸ್ಟಲನ್ನು ಕಟ್ಟಿ ಪ್ರಾರಂಭಿಸಲು ವರುಷಗಳು ಬೇಕಾಗಬಹುದು. ಈ ವರುಷದಿಂದಲೆ ಕಾಲೇಜು ಪ್ರಾರಂಭಿಸುವುದೆಂದು ಸರ್ಕಾರ ಆದೇಶ ಹೊರಡಿಸಿರುವುದರಿಂದ ಕನಿಷ್ಠ ಐವತ್ತು ವಿದ್ಯಾರ್ಥಿಗಳನ್ನು ಶಿವಮೊಗ್ಗ ಕಾಲೇಜಿಗೆ ತೆಗೆದುಕೊಂಡು ಅವರನ್ನು ಮೊದಲನೆ ವರುಷ ಹೆಬ್ಬಾಳದಲ್ಲೇ ಇಟ್ಟುಕೊಂಡಿದ್ದು ಮುಂದಿನ ವರುಷ ಶಿವಮೊಗ್ಗಕ್ಕೆ ಕಳುಹಿಸಬಹುದು. ಸಧ್ಯಕ್ಕೆ ಕನಿಷ್ಠ ಮೂವತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದರೆ ನವಿಲೆಯಲ್ಲಿ ಈಗಿರುವ ಎನ್.ಎ.ಇ.ಪಿ. ಸಂಶೋಧನಾ ಕೇಂದ್ರ ಮತ್ತು ಹಾಸ್ಟಲಿಗೆ ಮತ್ತಷ್ಟು ಸೇರಿಸಿ ಕಟ್ಟಿದರೆ ಮುಂದಿನ ವರುಷ ಅಲ್ಲಿಯೇ ಕಾಲೇಜು ನಡೆಸಬಹುದು. ಈ ಮಧ್ಯೆ ಹೊಸೂಡಿ ಜಾಗವನ್ನು ವಶಕ್ಕೆ ತೆಗೆದುಕೊಂಡು ಸರ್ಕಾರ ಹಣ ಮಂಜೂರು ಮಾಡಿದರೆ ಕೆಲಸ ಪ್ರಾರಂಭಿಸಿ ಪೂರ್ಣವಾದ ಮೇಲೆ ಕಾಲೇಜನ್ನು ಹೊಸೂಡಿಗೆ ಬದಲಾಯಿಸಬಹುದೆಂದು ಹೇಳಿದೆ.

ಹಣಕಾಸು ಕಾರ್ಯದರ್ಶಿಗಳು ಏನು ಹೇಳುತ್ತೀರಿ ಎಂದು ಮಂತ್ರಿಗಳು ಅವರ ಕಡೆ ತಿರುಗಿ ಕೇಳಿದರು. ಕೋಟಿಗಟ್ಟಲೆ ಹಣ ಎಲ್ಲಿ ಒದಗಿಸುವುದಪ್ಪ ಎಂದು ಯೋಚಿಸುತ್ತಿದ್ದ ಕಾರ್ಯದರ್ಶಿಗಳು ಕೂಡಲೆ ಆಗಲಿ ಎಂದರು. ಹಾಗಿದ್ದರೆ ವಿಳಂಬ ಮಾಡದೆ ಹಣ ಬಿಡುಗಡೆ ಮಾಡಿ ಎಂದು ಆದೇಶಿಸಿದರು. ಕುಲಪತಿಯವರು ಮುಂದಿನ ಕ್ರಮ ಏನು ಮಾಡಬೇಕೋ ಅದೆಲ್ಲವನ್ನು ಮಾಡಿ ಎಂದು ನನಗೆ ಆದೇಶಿಸಿದರು. ಆ ವರುಷ ಕೃ.ವಿ.ವಿ.ದ ಅಡ್ಮಿಷನ್ ಕಮಿಟಿಯ ಛೇರ್‌ಮನ್ ಕೂಡ ನಾನೇ ಆಗಿದ್ದೆ. ಒಟ್ಟು ಇನ್ನೂರೈವತ್ತು ವಿದ್ಯಾರ್ಥಿಗಳನ್ನು ಕೃಷಿಗೆ ಪ್ರತಿ ವರುಷ ತೆಗೆದುಕೊಳ್ಳುವಂತೆ ಆ ವರುಷವೂ ತೆಗದುಕೊಂಡು ಅದರಲ್ಲಿ ಐವತ್ತು ವಿದ್ಯಾರ್ಥಿಗಳನ್ನು ಶಿವಮೊಗ್ಗ ಕಾಲೇಜಿಗೆ ಅಲಾಟ್ ಮಾಡಿದೆವು. ವಾಗ್ದಾನ ಮಾಡಿದಂತೆ ಮೂವತ್ತು ಲಕ್ಷ ರೂಪಾಯಿಯನ್ನು ಸರ್ಕಾರ ಬಿಡುಗಡೆಮಾಡಿತು. ಕೆಲಸ ಪ್ರಾರಂಭಿಸಿದೆವು. ಮುಂದಿನ ವರುಷ ಎರಡು ಕೋಟಿ ಈ ಕಾಲೇಜಿಗೆಂದು ಯೂನಿವರ್ಸಿಟಿ ಬಡ್ಜೆಟ್ಟಿನಲ್ಲಿ ಸೇರಿಸಿ ಉಳಿದ ಸ್ಥಳಾವಕಾಶ, ಫೀಲ್ಡ್‌ಲ್ಯಾಬೊರೇಟರಿ, ಹಾಸ್ಟಲ್ ಮುಂತಾದುವನ್ನು ವಿಸ್ತರಿಸಲಾಯಿತು. ಶಿವಮೊಗ್ಗ ಟೌನ್ ಕಾಲೇಜಿಗೆ ನಾಲ್ಕು ಕಿ.ಮೀ. ದೂರ ಇದ್ದುದರಿಂದ ಸಿಬ್ಬಂದಿಯವರಿಗೆ ವಸತಿಗೆ ಒತ್ತಡ ವಿರಲಿಲ್ಲ. ಕೊನೆಗೆ ಹೊಸೂಡಿ ಜಾಗ ದಕ್ಕಲಿಲ್ಲ. ಅಲ್ಲಿಗೆ ಅಂದಾಜು ಮಾಡಿದ ಖರ್ಚಿನ ಮೂರರಲ್ಲಿ ಒಂದು ಭಾಗ ನವಿಲೆಯಲ್ಲಿ ಖರ್ಚು ಮಾಡಿರಬಹುದು. ಇಂದು ಇನ್ನೂರು ಜನ ವಿದ್ಯಾರ್ಥಿಗಳಿಗೆ ಹಾಸ್ಟಲು, ಕಾಲೇಜು, ಆಟದ ಮೈದಾನ ಮತ್ತಿತರ ಸೌಲಭ್ಯಗಳ ಜೊತೆಗೆ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟಿನಲ್ಲಿ ಇನ್ನೂರು ಎಕರೆಗೂ ನೀರಾವರಿ ಆಗುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಿಬ್ಬಂದಿ ಮತ್ತು ಪ್ರಾಧ್ಯಾಪಕರು ಶಿವಮೊಗ್ಗಕ್ಕೆ ಹೋಗಲು ಹಿಂಜರಿಯುವುದಿಲ್ಲ. ನವಿಲೆ, ರೀಜನಲ್ ಸಂಶೋಧನಾ ಕೇಂದ್ರವಾದ್ದರಿಂದ ಸಂಶೋಧನೆ ಮತ್ತು ವಿಸ್ತೀರ್ಣದಲ್ಲಿದ್ದ ತಜ್ಞರ ಸಹಾಯವಿದ್ದುದರಿಂದ ಪಾಠ ಪ್ರವಚನಗಳಿಗೆ ಅಡಚಣೆಯಾಗಲಿಲ್ಲ. ಪ್ರಾರಂಭದಲ್ಲಿ ಇವರುಗಳ ನೆರವು ಬಹು ಮುಖ್ಯವಾಗಿತ್ತು. ಇಲ್ಲದಿದ್ದರೆ ಆಯ್ಕೆಯಲ್ಲಿ ಹಲವಾರು ಎಡರು ತೊಡರುಗಳಿದ್ದದರಿಂದ ಪೂರ್ಣಪ್ರಮಾಣದ ಪ್ರಾಧ್ಯಾಪಕರನ್ನು ಒಮ್ಮೆಯೇ ಕಳಹಿಸುವುದು ಕಷ್ಟವಾಗುತ್ತಿತ್ತು.

ಅಂದಿನ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿ ನವಿಲೆಯಲ್ಲೇ ಕಾಲೇಜು ಪ್ರಾರಂಭಿಸಿ ನಂತರ ಹೊಸೂಡಿಗೆ ಬದಲಾಯಿಸುವ ಮತ್ತು ಅದಕ್ಕಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾಪ ಬಾರದಿದ್ದರೆ, ಬಂಗಾರಪ್ಪನವರು ಅದಕ್ಕೆ ಒಪ್ಪದಿದ್ದರೆ ಶಿವಮೊಗ್ಗ ಕೃಷಿ ಕಾಲೇಜು ಅಸ್ತಿತ್ವಕ್ಕೆ ಬರುತ್ತಿತ್ತೊ ಇಲ್ಲವೊ ತಿಳಿಯದು.

ಮಂಡ್ಯ ಕೃಷಿ ಕಾಲೇಜು ಪ್ರಾರಂಭಿಸುವಾಗ ಪ್ರಾರಂಭದಲ್ಲಿ ಹೊಸ ಕಾಲೇಜುಗಳಿಗೆ ಇರುವ ಕಷ್ಟಗಳೆಲ್ಲ ಇದಕ್ಕೂ ಇದ್ದರೂ ಕೂಡ ಪರಿಹರಿಸದಂತಹ ಸಮಸ್ಯೆಗಳು ತಲೆದೋರಲಿಲ್ಲ. ಜಿ.ಟಿ.ಸಿ. ಗ್ರಾಮಸೇವಕ ಟ್ರೈನಿಂಗ್ ಸೆಂಟರ್ ಮತ್ತು ಅದರ ಹಾಸ್ಟಲ್ ಮೊದಲ ವರ್ಷಗಳಲ್ಲಿ ಬಹಳ ಉಪಯುಕ್ತವಾದವು. ಆರನೂರು ಎಕರೆ ನೀರಾವರಿ ಜಮೀನು ವಿ.ಸಿ.ಫಾರಂ ಇದ್ದದ್ದರಿಂದ ಬೇರೆ ಜಾಗ ಹುಡುಕುವ ತೊಂದರೆ ಬರಲಿಲ್ಲ. ವಿ.ಸಿ.ಫಾರಂ ಕೂಡ ರೀಜನಲ್ ರೀಸರ್ಚ್ ಸ್ಟೇಷನ್ ಆಗಿದ್ದರಿಂದ ಅಲ್ಲಿರುವ ಸಂಶೋಧಕರು, ವಿಜ್ಞಾನಿಗಳು ಬಹುತೇಕ ವಿಷಯಗಳಲ್ಲಿ ಇದ್ದುದರಿಂದ ಮೊದಲ ವರ್ಷಗಳಲ್ಲಿ ಬೋಧನೆಗೆ ಅಡಚಣೆಯಾಗಲಿಲ್ಲ. ಈಗ ಸುಸಜ್ಜಿತವಾದ ಕಾಲೇಜು, ಹಾಸ್ಟಲು, ವಿಶಾಲವಾದ ಜಮೀನು ಇನ್ನೂರು ವಿದ್ಯಾರ್ಥಿಗಳಿಗೆ ಕೊರತೆ ಇಲ್ಲದೆ ನಡೆಯುತ್ತಿದೆ.

ಮೂಡಿಗೆರೆಯಲ್ಲಿ ತೋಟಗಾರಿಕೆ ಕಾಲೇಜು ಪ್ರಾರಂಭವಾಗುವಾಗ ಸಹಜವಾದ ತೊಂದರೆಗಳೆಲ್ಲ ಇದ್ದವು. ನಾನೂರು ಐವತ್ತು ಎಕರೆ ಜಾಗಬಿಟ್ಟರೆ ಮತ್ತೇನು ಸೌಕರ್ಯವಿರಲಿಲ್ಲ. ಮೂಡಿಗೆರೆ ಸಣ್ಣಪಟ್ಟಣವಾದ್ದರಿಂದ ಬಾಡಿಗೆಗೆ ಕಾಲೇಜು ಮತ್ತು ಹಾಸ್ಟಲ್ ನಡೆಸುವಂತಹ ಕಟ್ಟಡಗಳಾವುವೂ ಇರಲಿಲ್ಲ. ಈ ಮಧ್ಯೆ ಬೆಂಗಳೂರಿನಲ್ಲಿ ತೋಟಗಾರಿಕೆ ಕಾಲೇಜು ಪ್ರಾರಂಭವಾಗಿ ಕೆಲವು ವರ್ಷಗಳಾಗಿದ್ದು ಮತ್ತೊಂದು ತೋಟಗಾರಿಕೆ ಕಾಲೇಜಿನ ಆವಶ್ಯಕತೆ ಇದೆಯೆ ಎಂಬ ತರ್ಕ ನಡೆದಿತ್ತು. ಕೆಲವು ರಾಜಕೀಯ ಶಕ್ತಿಗಳೂ ಕೂಡ ತೋಟಗಾರಿಕೆ ಕಾಲೇಜು ಬೆಂಗಳೂರಿನಲ್ಲೇ ಇರಬೇಕೆಂದು ಒತ್ತಾಯಿಸುತ್ತಿದ್ದವು. ಎರಡು ತೋಟಗಾರಿಕೆ ಕಾಲೇಜುಗಳನ್ನು ನಡೆಸುವುದು ಕೃ.ವಿ.ವಿದ್ಯಾನಿಲಯಕ್ಕೆ ಸೂಕ್ತವಾಗಿ ತೋರಲಿಲ್ಲ. ಕಾರಣ ಅಭ್ಯರ್ಥಿಗಳೆಲ್ಲರೂ ಬೆಂಗಳೂರಿಗೆ ಸೇರುವುದಕ್ಕೆ ಆಶಿಸುವರೇ ಹೊರತು ಮೂಡಿಗೆರೆಗೆ ಹೋಗಲು ಇಷ್ಟಪಡುತ್ತಿರಲಿಲ್ಲ ಮತ್ತು ಪ್ರಾಧ್ಯಾಪಕರುಗಳನ್ನು ಮೂಡಿಗೆರೆಗೆ ಕಳುಹಿಸುವುದು ಕಷ್ಟವಾಗಿ ಪರಿಣಮಿಸುತ್ತಿತ್ತು. ಕಾಲೇಜು ಮತ್ತು ಹಾಸ್ಟಲುಗಳನ್ನು ಕಟ್ಟುವಷ್ಟು ಹಣವನ್ನು ಸರ್ಕಾರವು ಒಮ್ಮೆಯೆ ಬಿಡುಗಡೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ಭಾರತೀಯ ಕೃಷಿ ಅನುಸಂಧಾನ (ಐ.ಸಿ.ಎ.ಆರ್.) ನೇಮಿಸಿದ್ದ ಎಕ್ಸ್‌ಪರ್ಟ್ ಕಮಿಟಿಯೂ ಕೂಡ ಕಾರಣಾಂತರಗಳಿಂದ ಅಲ್ಲಿ ಮತ್ತೊಂದು ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸಲು ಸೂಕ್ತವಲ್ಲವೆಂದು ಶಿಫಾರಸು ಮಾಡಿತ್ತು. ಈ ಕಾರಣಗಳಿಂದಾಗಿ ಮೂಡಿಗೆರೆಯಲ್ಲಿ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸುವುದು ಅನುಮಾನಕ್ಕೆ ಆಸ್ಪದವಾಯಿತು.

ಹೊಸಕಾಲೇಜುಗಳ ಸ್ಥಾಪನೆಗೆ ಸ್ಪೆಷಲ್ ಆಫೀಸರ್ ಆಗಿದ್ದರಿಂದ ಕುಲಪತಿಯವರಿಗೆ ಒಂದು ಪತ್ರವನ್ನು ಬರೆದು, ಮೂಡಿಗೆರೆಯಲ್ಲಿ ಇಪ್ಪತ್ತು ಹುಡುಗರಿಗೆ ಸ್ಥಳಾವಕಾಶ ಒದಗಿಸುವ ಸಾಧ್ಯತೆ ಇರುವುದೆಂದು, ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿರುವ ಸ್ಥಳ ಮೊದಲ ಒಂದೆರಡು ವರುಷಗಳು ತರಗತಿ ನಡೆಸಬಹುದೆಂದು, ಅಪ್ಪಣೆ ಕೊಟ್ಟರೆ ಆ ವರುಷ ತೋಟಗಾರಿಕೆ ಕಾಲೇಜಿಗೆ

ತೆಗೆದುಕೊಳ್ಳಬೇಕಿದ್ದ ನಲವತ್ತು ವಿದ್ಯಾರ್ಥಿಗಳಲ್ಲಿ ಇಪ್ಪತ್ತು ಹುಡುಗರನ್ನು ಮೂಡಿಗೆರೆಗೆ ಕಳುಹಿಸಿ ಉಳಿದ ಇಪ್ಪತ್ತು ಹುಡುಗರನ್ನು ಬೆಂಗಳೂರಿಗೆ ತೆಗೆದುಕೊಂಡು ಮೂಡಿಗೆರೆಯಲ್ಲಿ ಕಾಲೇಜು ಪ್ರಾರಂಭಿಸಬಹುದೆಂದು ಸೂಚಿಸಿದೆ. ಇಪ್ಪತ್ತು ಹುಡುಗರು ಇಳಿದುಕೊಳ್ಳಲು ಖಾಲಿ ಇರುವ ಎರಡು 'ಎ' ಟೈಪು ಮನೆಗಳು ಸೂಕ್ತವಾಗಿದ್ದವು. ಪಾಠ ಪ್ರವಚನಗಳಿಗೆ ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿದ್ದ ಜಾಗ ಸದ್ಯಕ್ಕೆ ಸಾಕಾಗುತ್ತಿತ್ತು. ಅಲ್ಲಿರುವ ವಿಜ್ಞಾನಿಗಳ ಜೊತೆ ಅತಿ ಅವಶ್ಯಕವಿರುವ ಮೊದಲನೇ ವರುಷದಲ್ಲಿ ಬೋಧಿಸಬೇಕಿದ್ದ ವಿಷಯಗಳಿಗೆ ಅಲ್ಲಿಯೇ ತಾತ್ಕಾಲಿಕವಾಗಿ ನೇಮಿಸಬಹುದೆಂದು ಕೂಡ ಸಲಹೆ ಮಾಡಲಾಯಿತು. ವಿಶ್ವವಿದ್ಯಾನಿಲಯವು ಈ ಸೂಚನೆಯು ಸಮಂಜಸವಾಗಿದೆಯೆಂದು ತಿಳಿದು ಮೂಡಿಗೆರೆಯಲ್ಲಿ ಕಾಲೇಜು ಪ್ರಾರಂಭಿಸಬೇಕಿದ್ದರೆ ಈ ಮಾರ್ಗಬಿಟ್ಟು ಬೇರೆ ದಾರಿಯಿಲ್ಲವೆಂದು ಅನುಮತಿಯನ್ನು ಕೊಟ್ಟಿತು. ವಿದ್ಯಾರ್ಥಿಗಳ ಆಯ್ಕೆಯ ಕಮಿಟಿಯ ಛೇರ್‌ಮನ್ ಆಗಿದ್ದರಿಂದ ಆ ವರುಷ ಚಿಕ್ಕಮಗಳೂರು, ಮಂಗಳೂರು, ಕೊಡಗು, ಮೈಸೂರು ಜಿಲ್ಲೆಯಿಂದ ತೋಟಗಾರಿಕೆ ಕಾಲೇಜಿಗೆ ಸೇರಿದ್ದ ಇಪ್ಪತ್ತು ಹುಡುಗರನ್ನು ಮೂಡಿಗೆರೆ ಕಾಲೇಜಿಗೆ ಸೇರಿಸಲಾಯಿತು. ಅಲ್ಲಿಗೆ ತಾತ್ಕಾಲಿಕ ಒಬ್ಬ ಡೈರೆಕ್ಟರ್ ಆಫ್ ಇನ್ಸ್‌ಟ್ರಕ್ಷನ್ ಕೂಡ ನೇಮಿಸಲಾಯಿತು. ಮುಖ್ಯಮಂತ್ರಿ ಬಂಗಾರಪ್ಪನವರೆ ಆ ಕಾಲೇಜಿನ ಉದ್ಘಾಟನೆಯನ್ನು ಕೂಡ ಮಾಡಿದರು. ಕಾಲೇಜು ಮತ್ತು ಹಾಸ್ಟಲ್ ಕಟ್ಟಲು ಬೇಕಾದ ಹಣವನ್ನು ಬಿಡುಗಡೆ ಮಾಡಲು ಅಂದೇ ಆದೇಶ ನೀಡಿದರು. ಆ ವರುಷವೇ ಕಟ್ಟಡಗಳ ನಿರ್ಮಾಣ ಪ್ರಾರಂಭವಾಯಿತು. ಪೂರ್ಣಪ್ರಮಾಣದ ಕಾಲೇಜು ಪ್ರಾರಂಭವಾಗಲು ಎರಡು ಮೂರು ವರುಷಗಳು ಹಿಡಿದವು. ವಿದ್ಯಾರ್ಥಿಗಳು ಕೂಡ ಹಲವಾರು ಅನಾನುಕೂಲಗಳಿದ್ದರೂ ಬಹಳವಾಗಿ ಸಹಕರಿಸಿದರು. ಇಂದು ಸುಸಜ್ಜಿತವಾದ ಕಾಲೇಜು ಮತ್ತು ಹಾಸ್ಟಲ್ ಮಲೆನಾಡಿನ ಮಧ್ಯೆ ರಮಣೀಯವಾದ ಸ್ಥಳದಲ್ಲಿ ನಿಂತಿರುವುದನ್ನು ನೋಡಿದವರಿಗೆ ಹರ್ಷವನ್ನು ತರುವಂತಹುದಾಗಿದೆ. ತೋಟಗಾರಿಕೆ ಕಾಲೇಜಿನ ವಿದ್ಯಾರ್ಥಿಗಳು ಕೂಡ, ಬೇರೆ ಯಾವ ಹವ್ಯಾಸಕ್ಕೆ ಎಡೆ ಇಲ್ಲದಿರುವುದರಿಂದ, ಆಟ ಮತ್ತು ಪಾಠಗಳಲ್ಲಿ ಯೂನಿವರ್ಸಿಟಿಗೆ ಹೆಮ್ಮೆ ತರುವಂತೆ ಪ್ರದರ್ಶಿಸಿದ್ದಾರೆ.

ಪ್ರಾರಂಭದ ದಿನಗಳಲ್ಲಿ ಆ ಕಾಲೇಜು ಅಸ್ತಿತ್ವಕ್ಕೆ ಬರುವುದಕ್ಕೆ ಇದ್ದ ಅಡಚಣೆಗಳನ್ನು ನೆನೆಸಿಕೊಂಡರೆ ಇಂದು ಮೂಡಿಗೆರೆಯಲ್ಲಿ ಇಂತಹ ಒಂದು ಕಾಲೇಜು ಇದೆಯೇ ಎಂದು ನಂಬುವುದೇ ಕಷ್ಟ. ಏನೇ ಅಡ್ಡಿ ಆತಂಕಗಳಿದ್ದರೂ ಇಪ್ಪತ್ತು ಹುಡುಗರನ್ನು ಅಲ್ಲಿ ಸೇರಿಸುವ ತೀರ್ಮಾನ ತೆಗೆದುಕೊಳ್ಳದಿದ್ದರೆ, ಮುಖ್ಯಮಂತ್ರಿ ಬಂಗಾರಪ್ಪನವರು ಆ ವರುಷ ಅದನ್ನು ಉದ್ಘಾಟಿಸದಿದ್ದರೆ, ಆ ಕಾಲೇಜಿಗೆ ಬೇಕಿದ್ದ ಸಂಪನ್ಮೂಲಗಳನ್ನು ಒದಗಿಸಲು ಅವರು ಆಶ್ವಾಸನೆ ಕೊಡದಿದ್ದರೆ, ಅದರಲ್ಲೂ ಹೆಚ್ಚಿನ ಖರ್ಚಿಲ್ಲದೆ ಆವಾಗಲೆ ತೋಟಗಾರಿಕೆ ಕಾಲೇಜು ಬೆಂಗಳೂರಿನಲ್ಲಿ ನಡೆಯುತ್ತಿದ್ದದ್ದು, ಮೂಡಿಗೆರೆಯಲ್ಲಿ ಮತ್ತೊಂದು ಕಾಲೇಜನ್ನು ಪ್ರಾರಂಭಿಸಲು ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿಯಲ್ಲಿ ಉತ್ತೇಜನ ದೊರೆಯುತ್ತಿತ್ತೇ ಅನ್ನುವುದನ್ನು ಊಹಿಸಬಹುದು.

ಕೊಡಗಿನಲ್ಲಿ ಒಂದು ಅರಣ್ಯ ಕಾಲೇಜನ್ನು ಸ್ಥಾಪಿಸುವುದಾಗಿ ಸಾರ್ವಜನಿಕ ಸಭೆಯನ್ನು ದ್ದೇಶಿಸಿ ಮಾತನಾಡುವಾಗ ಬಂಗಾರಪ್ಪನವರು ಹೇಳಿದ್ದನ್ನು ಅಲ್ಲಿಯ ಜನರು ಹಿಂಬಾಲಿಸಿದರು. ಅದಕ್ಕೆ ಒಂದು ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಸರ್ಕಾರ ಬೆಂಗಳೂರು ಕೃ.ವಿ.ವಿ.ಕ್ಕೆ

ಆದೇಶಿಸಿತು. ಪ್ರಸ್ತಾವನೆಯಲ್ಲಿರುವ ಅರಣ್ಯ ಕಾಲೇಜು ಎಲ್ಲಿ ಆಗಬೇಕು ಎನ್ನುವ ಸಮಸ್ಯೆ ತಲೆದೋರಿತು. ಮೂರು ಜಾಗಗಳು ಸೂಕ್ತವೆಂದು ಆಯಾ ಕ್ಷೇತ್ರಗಳ ಶಾಸಕರು ಒತ್ತಡ ತಂದರು. ಗಾಳಿಬೀಡಿನಲ್ಲಿ ನೂರಾರು ಎಕರೆ ಜಮೀನು ದೊರೆಯುವುದರ ಜೊತೆಗೆ ಅಲ್ಲಿ ಟೀ ಕಂಪನಿಯವರು ಕಟ್ಟಿದ್ದ ಶೆಡ್ಡುಗಳು ಕಾಲೇಜು ಪ್ರಾರಂಭಿಸಲು ಸೂಕ್ತವೆಂದು ಒಂದು ಕಡೆಯಾದರೆ, ಕುಶಾಲನಗರದ ಕೂಡಿಗೆಯಲ್ಲಿ 450 ಎಕರೆ ಜಮೀನಿನಲ್ಲಾಗಲೆ ಕೆಲವು ತರಬೇತಿ ಕೇಂದ್ರಗಳಿರುವುದರಿಂದ ಅವುಗಳನ್ನು ವಶಕ್ಕೆ ತೆಗೆದುಕೊಂಡು ಅಲ್ಲಿ ಅರಣ್ಯ ಕಾಲೇಜು ಸ್ಥಾಪಿಸಲು ಒಳ್ಳೆಯ ಜಾಗವೆಂದು ಅಲ್ಲಿಯವರ ಸಲಹೆ. ತಿಥಿಮತಿಯಲ್ಲಿ ಬಹಳ ಅರಣ್ಯ ಪ್ರದೇಶವಿದ್ದು ಆನೆಗಳನ್ನು ಪಳಗಿಸುವ ಒಂದು ಕೇಂದ್ರವೂ ಸೇರಿದಂತೆ ಅರಣ್ಯ ಇಲಾಖೆಯ ಹಲವಾರು ಚಟುವಟಿಕೆಗಳು ಇರುವುದರಿಂದ ಅಲ್ಲಿ ಆಗಬೇಕೆಂದು ಮತ್ತೊಂದು ಬೇಡಿಕೆ. ನನ್ನ ನೇತೃತ್ವದಲ್ಲಿ ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿಗಳು ಅರಣ್ಯ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ ಒಂದು ಸಮಿತಿಯು ಈ ಜಾಗಗಳನ್ನೆಲ್ಲ ಪರಿಶೀಲಿಸಿ ಸೂಕ್ತ ಸಲಹೆಯನ್ನು ಸರ್ಕಾರಕ್ಕೆ ಕಳುಹಿಸುವಂತೆ ಆದೇಶ ಹೊರಡಿಸಿದರು. ಅದರಂತೆ ಈ ಕಮಿಟಿಯು ಈ ಎಲ್ಲ ಸ್ಥಳಗಳನ್ನು ಭೇಟಿಮಾಡಿ ವರದಿಯನ್ನು ಸಲ್ಲಿಸಿತು.

ಗಾಳಿಬೀಡಿಗೆ ಹೋಗಲು ಒಂದು ಸರಿಯಾದ ರೋಡು ಕೂಡ ಇರಲಿಲ್ಲ. ಅಲ್ಲಿ ಸ್ಥಾಪಿಸಿದ್ದ ಟೀ ತೋಟ ಕಾಡಾಗಿತ್ತು. ಯಾವ ಕಾರಣಕ್ಕೆ ಬಿಟ್ಟು ಹೋಗಿದ್ದರೆಂದು ತಿಳಿಯದು. ಬಹುಶಃ, ಅಲ್ಲಿಯ ಪ್ರಕೃತಿ ವಿಕೋಪಕ್ಕೆ ಕೆಲಸಕ್ಕೆ ಜನ ಬಾರದಿದ್ದದ್ದು ಒಂದು ಕಾರಣವಿರಬೇಕೆಂದು ಸ್ಥಳದವರ ಅಭಿಪ್ರಾಯ. ಅಲ್ಲಿದ್ದ ಶೆಡ್ಡುಗಳು ಕೂಲಿಕಾರರು ಇಳಿದು ಕೊಳ್ಳುವುದಕ್ಕೆ ಕಟ್ಟಿಸಿದ್ದಿರಬೇಕು, ಮುರಿದು ಮೊಟಕಾಗಿದ್ದವು. ಹೆಸರಿಗೆ ತಕ್ಕಂತೆ ಅದು ಗಾಳಿಯ ಬೀಡಾಗಿತ್ತು, ಜನರಿಗೆ ಬೇಡದಾಗಿತ್ತು.

ಕೂಡಿಗೆಯಲ್ಲಿ ದಾಖಲೆಗೆ 450 ಎಕರೆ ಇದ್ದರೂ ದೊರೆಯುತ್ತಿದ್ದದ್ದು ಸುಮಾರು 40 ಎಕರೆ ಇರಬಹುದು. ಗ್ರಾಮ ಸೇವಕ ಟ್ರೈನಿಂಗ್ ಸೆಂಟರನ್ನು ಬಿಟ್ಟುಕೊಡಲು ಒಲವಿದ್ದರೂ ಅವರಿಗೆ ಬದಲಿ ನಿವೇಶನ ಅಥವಾ ನಡೆಯುತ್ತಿದ್ದ ಕಾರ್ಯಕ್ರಮವನ್ನು ಮುಂದುವರಿಸುವ ಸಲಹೆ ಇರಲಿಲ್ಲ. ಅಲ್ಲಿಗೆ ಸಮೀಪ ಕಾವೇರಿ ನದಿ ತೀರದಲ್ಲಿದ್ದ ಜಮೀನನ್ನು ವಶಪಡಿಸಿಕೊಂಡು ಕಾಲೇಜು ಸ್ಥಾಪಿಸುವ ಸಲಹೆ ಸೂಕ್ತವಾಗಿ ಕಾಣಲಿಲ್ಲ.

ತಿಥಿಮತಿಯ ಹತ್ತಿರವಿದ್ದ ಸುಮಾರು ಒಂದು ಸಾವಿರ ಎಕರೆ ಪ್ರದೇಶದ ಅರಣ್ಯವನ್ನು ಕೊಡಗು ಹಣ್ಣು ಬೆಳೆಗಾರರ ಸಂಘಕ್ಕೆ ಕೊಟ್ಟಿದ್ದರಲ್ಲಿ, ನೂರು ಎಕರೆ ಪ್ರದೇಶವನ್ನು ಅರಣ್ಯ ಕಾಲೇಜಿಗೋಸ್ಕರ ಕೊಡುವುದಾಗಿ ಸೊಸೈಟಿಯವರು ಹೇಳಿದ್ದರು. ಆದರೆ ಕಾನೂನಿನ ಪ್ರಕಾರ ಅವರು ಹಾಗೆ ಬೇರೆಯವರಿಗೆ ಪರಬಾರೆ ಮಾಡುವ ಹಾಗಿರಲಿಲ್ಲ. ಪುನಃ ಅದನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಬಿಟ್ಟುಕೊಟ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಯೂನಿವರ್ಸಿಟಿಗೆ ವರ್ಗಾಯಿಸಬೇಕಿತ್ತು. ಆದರೆ ಭಾರತ ಸರ್ಕಾರದ ಅರಣ್ಯ ಸಂರಕ್ಷಣೆ ಕಾನೂನಿನ ಪ್ರಕಾರ ಅರಣ್ಯವನ್ನು ಬೇರೆ ಯಾವ ಕೆಲಸಕ್ಕೂ ಕೊಡಬಾರದೆಂಬ ಮುಟ್ಟುಗೋಲು ಹಾಕಿದ್ದು ನಮಗೂ ಅನ್ವಯಿಸುತ್ತಿತ್ತು. ತಿಥಿಮತಿಯಲ್ಲಿ ಅರಣ್ಯವನ್ನು ಬಿಟ್ಟು ಮತ್ತಾವ ಜಾಗವೂ ಇರಲಿಲ್ಲ.

ಮೇಲೆ ತಿಳಿಸಿದ ಕಾರಣಗಳಿಗಾಗಿ ಯಾವ ಜಾಗವೂ ಸೂಕ್ತವಾಗಿ ಕಾಣಲಿಲ್ಲ. ಆಗಾಗಲೆ ಐ.ಸಿ.ಎ.ಆರ್.ನ ಧನ ಸಹಾಯದಿಂದ ಅರಣ್ಯ ಕಾಲೇಜು ಬೆಂಗಳೂರಿನ ಜಿ.ಕೆ.ವಿ.ಕೆ.ಯಲ್ಲಿ ನಡೆಯುತ್ತಿದ್ದುದರಿಂದ ಕೂಡಲೆ ಅರಣ್ಯ ಕಾಲೇಜನ್ನು ಕೊಡಗಿನಲ್ಲಿ ಪ್ರಾರಂಭಿಸುವ ಒತ್ತಡವಿರಲಿಲ್ಲ. ಸೂಕ್ತ ನಿವೇಶನವನ್ನು ಕೊಡಗಿನಲ್ಲಿ ಕೊಟ್ಟರೆ ಕಾಲೇಜನ್ನು ಪ್ರಾರಂಭಿಸುವುದಾಗಿ ಕೃ.ವಿ.ವಿ. ಹೇಳುತ್ತಿತ್ತು. ಉಳಿದ ಒಂದೇ ಉಪಾಯವೆಂದರೆ ಪೊನ್ನಂಪೇಟೆಯಲ್ಲಿ ಇದ್ದ ಕೃಷಿ ಸಂಶೋಧನಾಲಯ ಕೃ.ವಿ.ವಿದ್ಯಾನಿಲಯದ ಆಡಳಿತದಲ್ಲಿದ್ದುದರಿಂದ ಅಲ್ಲಿಯೇ ಕಾಲೇಜನ್ನು ಪ್ರಾರಂಭಿಸುವುದು ಸೂಕ್ತವೆಂದು ಸಲಹೆ ಮಾಡಿದೆ. ಅಲ್ಲಿ ಕೆಲವು ವರುಷಗಳ ಹಿಂದೆಯೆ ಐ.ಸಿ.ಎ.ಆರ್. ಧನ ಸಹಾಯದಿಂದ ಎನ್.ಎ.ಇ.ಪಿ. ಕಾರ್ಯಕ್ರಮಕ್ಕೆಂದು ಕಟ್ಟಿಸಿದ್ದ ಕಟ್ಟಡ ಸುಮಾರು ನಲವತ್ತು ಜನ ಉಳಿದುಕೊಳ್ಳಲು ಡಾರ್ಮಿಟರಿ ಟೈಪ್ ಹಾಸ್ಟೆಲ್ ಮತ್ತು ಕ್ಲಾಸ್ ರೂಮ್‌ಗಳು ಇದ್ದವು. ಹದಿನೈದು ದಿವಸಕ್ಕೊಮ್ಮೆ ನಡೆಯುತ್ತಿದ್ದ ಬೈಮಂತ್ಲಿ ಮೀಟಿಂಗ್ ಬಿಟ್ಟರೆ ಮತ್ತೇನು ಚಟುವಟಿಕೆಗಳು ಅಲ್ಲಿರಲಿಲ್ಲ. ಅರಣ್ಯ ಕಾಲೇಜಿಗೆ ಬೇಕಾಗಿದ್ದು ನೂರು ವಿದ್ಯಾರ್ಥಿಗಳ ವಸತಿ ಮತ್ತು ಇಪ್ಪತ್ತೈದು ಹುಡುಗರಿಗೆ ಬೇಕಾಗುವ ನಾಲ್ಕು ತರಗತಿಗಳು. ಅದಕ್ಕೆ ಬೇಕಾದ ಪ್ರಯೋಗಾಲಯಗಳು ಆಗಿದ್ದ ಎನ್.ಎ.ಇ.ಪಿ. ಕಟ್ಟಡದ ಮೇಲೆ ಒಂದು ಅಂತಸ್ತನ್ನು ಕಟ್ಟಿದರೆ ಕಾಲೇಜಿಗೆ ಬೇಕಾದ ಎಲ್ಲಾ ಸ್ಥಳವಕಾಶವಾಗುವುದು. ಆದರೆ ಹಾಸ್ಟೆಲು ಪ್ರತ್ಯೇಕವಾಗಿ ಆಗಬೇಕಿತ್ತು. ಅರಣ್ಯ ಕಾಲೇಜಿನ ಹುಡುಗರಿಗೆ ಪ್ರಾಕ್ಟಿಕಲ್ಸ್ ಮತ್ತು ಸಂಶೋಧನೆಗೆ ಅರಣ್ಯ ಇಲಾಖೆಯಿಂದ ಒಂದು ನೂರು ಎಕರೆ ಕಾಡನ್ನು ಗುರುತಿಸಿ ಅದನ್ನು ಉಪಯೋಗಿಸಿಕೊಳ್ಳಲು ಅನುಮತಿಯನ್ನು ಪಡೆದರೆ ಸಾಕಾಗಿತ್ತು. ಅದಕ್ಕಾಗಿಯೆ ಪ್ರತ್ಯೇಕ ಅರಣ್ಯವನ್ನು ಕೃ.ವಿ.ವಿ.ಕ್ಕೆ ಕೊಡುವ ಆವಶ್ಯಕತೆ ಇರಲಿಲ್ಲ. ಬೇರೆ ವಿಷಯಗಳ ಪ್ರಾಕ್ಟಿಕಲ್ಸ್‌ಗೆ ಪೊನ್ನಂಪೇಟೆಯಲ್ಲಿ ಹಾಲಿ ಇದ್ದ ಜಾಗ ಸಾಕಾಗಿತ್ತು. ಇಂತಹ ಒಂದು ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯದ ಮುಂದಿಟ್ಟು ಒಪ್ಪಿಗೆ ಪಡೆದು ಕೆಲಸವನ್ನು ಪ್ರಾರಂಭಿಸಲಾಯಿತು. ಈ ಪ್ರಯತ್ನದಿಂದಾಗಿ ಇಂದು ಪೊನ್ನಂಪೇಟೆಯಲ್ಲಿ ಅರಣ್ಯ ಕಾಲೇಜು ನಡೆಯುವಂತಾಗಿದೆ. ಬೇರೆ ಜಾಗಗಳನ್ನು ವಶಪಡಿಸಿಕೊಂಡು ಹೊಸ ಕಾಲೇಜನ್ನು ಕಟ್ಟುವುದು ಈಗಿರುವ ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಕಷ್ಟವೆಂದರೆ ಕೆಲವು ಸಂದರ್ಭದಲ್ಲಿ ಸರ್ಕಾರದ ಅಡಿಯಲ್ಲಿರುವ ಜಾಗಗಳನ್ನು ಒಂದು ಡಿಪಾರ್ಟ್‌ಮೆಂಟಿನಿಂದ ಮತ್ತೊಂದು ಡಿಪಾರ್ಟ್‌ಮೆಂಟಿಗೆ ವರ್ಗಾಯಿಸುವುದೂ ಕೂಡ ಕಷ್ಟ. ಉದಾಹರಣೆಗೆ ಪೊನ್ನಂಪೇಟೆ ಅರಣ್ಯ ಕಾಲೇಜಿಗೆ ಒತ್ತಿ ಇರುವ ಸುಮಾರು ಎಂಟು ಎಕರೆ ಜಾಗವನ್ನು ತೋಟಗಾರಿಕೆ ಇಲಾಖೆಯಿಂದ ಕೃ.ವಿ.ವಿದ್ಯಾನಿಲಯಕ್ಕೆ ವರ್ಗಾಯಿಸಲು ಮಾಡಿದ ಪ್ರಯತ್ನ ಇಂದಿಗೂ ಸಫಲವಾಗಿಲ್ಲ. ಸಂಬಂಧಪಟ್ಟವರೆಲ್ಲರೂ ಇದಾಗಲೇಬೇಕೆನ್ನುವವರೇ ಹೊರತು ವರ್ಗಾಯಿಸುವ ಆದೇಶವನ್ನು ಹೊರಡಿಸಲಿಲ್ಲ. ತೋಟಗಾರಿಕೆ ಇಲಾಖೆಗೆ ಇದರಿಂದ ಖರ್ಚಿಗಿಂತ ಭಾರಿ ಉತ್ಪತ್ತಿಯೇನು ಹೆಚ್ಚಿಗೆ ಬರುವಂತೆ ಕಾಣಲಿಲ್ಲ.

ರೇಷ್ಮೆ ಕೃಷಿ ಕಾಲೇಜು ಕೋಲಾರ ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂಬ ಆದೇಶ ಬಂದಾಗಿನಿಂದ ಅಲ್ಲಿಯೂ ಕೂಡ ವಿವಿಧ ಜಾಗಗಳಿಂದ ಕಾಲೇಜು ಆಗಬೇಕೆಂದು ಬೇಡಿಕೆಗಳು ಬರಲಾರಂಭಿಸಿದವು. ಆದರೆ ಯಾರೊಬ್ಬರೂ ಕೂಡ ನಿಮಗೆ ಬೇಕಾಗಿರುವ ಇಷ್ಟು ಜಾಗವನ್ನು ನಿಮಗೊಪ್ಪಿಸಿದ್ದೇವೆಂದು ಸಂಬಂಧಪಟ್ಟ ಕಡತವನ್ನು ಕೈಗಿಟ್ಟವರಿಲ್ಲ. ಶ್ರೀನಿವಾಸಪುರದ ಸಮೀಪ ಸರ್ಕಾರಿ ಜಾಗ ದೊರೆಯುವುದೆಂದು ಅಲ್ಲಿ ಆಗಬೇಕೆಂದು ಅಲ್ಲಿಯವರು ಅಭಿಪ್ರಾಯಪಟ್ಟರೆ, ಕೋಲಾರ

ಸಮೀಪ ಜಾಗಕೊಡಿಸುವುದಾಗಿ ಅಲ್ಲಿದ್ದ ಶಾಸಕರೂ ಒತ್ತಾಯಿಸಿದರು. ಶಿಡ್ಲಘಟ್ಟದಲ್ಲಿ ರೇಷ್ಮೆ ಇಲಾಖೆ ವಶದಲ್ಲಿರುವ ಜಾಗ ಸೂಕ್ತವೆಂದು ಅಲ್ಲಿಯ ಮಾಜಿ ಮಂತ್ರಿಯವರಿಂದ ಒತ್ತಾಯ. ಈ ಹೊಯ್ದಾಟದಲ್ಲಿ ಎಲ್ಲಿಯೂ ಸೂಕ್ತವಾದ ಸಾಕಷ್ಟು ಜಾಗ ಜಾಗ್ರತೆಯಾಗಿ ದೊರೆಯುವ ಚಿಹ್ನೆಗಳು ಕಾಣಲಿಲ್ಲ. ಕಾಲವಿಳಂಬವಾಗುತ್ತಾ ಬಂತು. ಕನ್ನಡಿಯಲ್ಲಿರುವ ಗಂಟಗಿಂತ ಕೈಯಲ್ಲಿರುವ ದಂಟು ಮೇಲೆಂದು ಚಿಂತಾಮಣಿ ಹತ್ತಿರವಿರುವ ಕೃ.ವಿ.ವಿ. ಸಂಶೋಧನಾ ಕೇಂದ್ರದಲ್ಲಿ ಪ್ರಾರಂಭಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಸೂಕ್ತವೆಂದು ವರದಿಯನ್ನು ಒಪ್ಪಿಸಲಾಯಿತು. ಅದೇ ರೀತಿ ಕೃ.ವಿ.ವಿ. ತೀರ್ಮಾನ ತೆಗೆದುಕೊಂಡಿತು. ಈಗ ರೇಷ್ಮೆ ಕೃಷಿ ಕಾಲೇಜು ಇಲ್ಲಿ ನಡೆಯುತ್ತಿದೆ. ಚಿಕ್ಕದಾದ ಚೊಕ್ಕವಾದ ಕಾಲೇಜು, ಕ್ಯಾಂಪಸ್ಸು, ಹುಡುಗರಿಗೆ ಹುಡುಗಿಯರಿಗೆ ಪ್ರತ್ಯೇಕ ಹಾಸ್ಟಲು, ರೇರಿಂಗ್ ಮತ್ತು ರೀಲಿಂಗ್ ಹೌಸಸ್, ರೇಷ್ಮೆ ತೋಟ, ಒಳಗೊಂಡ ಸ್ವಯಂ ಪರಿಪೂರ್ಣವಾದ ರೇಷ್ಮೆಕೃಷಿ ಕಾಲೇಜು ನೋಡಿದವರಿಗೆ ಮುಂದೆ ಇದಕ್ಕೆ ಉತ್ತಮ ಭವಿಷ್ಯವಿದೆ ಎನ್ನಿಸುತ್ತದೆ. ಸರ್ಕಾರದ ಅಧೀನದಲ್ಲಿರುವ ಅರಣ್ಯ ಇಲಾಖೆಯ ಜಾಗದಲ್ಲಿ ರೇಷ್ಮೆ ಕೃಷಿ ಕಾಲೇಜಿಗೆ ಒತ್ತಾಗಿರುವ ಒಂದು ನೂರು ಎಕರೆ ಜಮೀನಿನ ಸ್ವಾಧೀನಕ್ಕಾಗಿ ಪಟ್ಟ ಪ್ರಯತ್ನ ಇನ್ನೂ ಸಫಲವಾಗಲಿಲ್ಲ. ಇದಕ್ಕಾಗಿಯೇ ಕೋಲಾರ ಜಿಲ್ಲೆಯಲ್ಲಿ ಬೇರೆ ಜಾಗ ಪಡೆದು ಕಾಲೇಜು ಕಟ್ಟುವ ಪ್ರಯತ್ನ ಮಾಡಿದ್ದರೆ ಇಂದಿಗೂ ಅದು ಆಗುತ್ತಿತ್ತೆನ್ನುವ ಭರವಸೆ ನನಗಿಲ್ಲ. ಅದೂ ಅಲ್ಲದೆ ಸುಸಜ್ಜಿತ ರೇಷ್ಮೆ ಕೃಷಿ ಕಾಲೇಜು ಬೆಂಗಳೂರಿನಲ್ಲಾಗಲೇ ನಡೆಯುತ್ತಿದ್ದದ್ದು ಇದನ್ನು ಬೇರೆ ಕಡೆಗೆ ವರ್ಗಾಯಿಸಲು ಯಾರಿಗೂ ಇಷ್ಟವಿದ್ದಂತೆ ತೋರುತ್ತಿರಲಿಲ್ಲ.

ಮೂರು ವರುಷಗಳ ಹಿಂದೆ ಹಾಸನಕ್ಕೆ ಕೃಷಿ ಕಾಲೇಜು ಮಂಜೂರಾಗಿ ಅಂದಿನ ಪ್ರಧಾನಿಯವರೆ ಶಂಕುಸ್ಥಾಪನೆಯನ್ನು ನೆರವೇರಿಸಿ, ಸ್ವತಃ ಕಾಳಜಿ ವಹಿಸಿದ್ದರೂ ಕೂಡ ಇನ್ನೂ ನಿವೇಶನವನ್ನು ಗುರುತಿಸಲಾಗಿಲ್ಲ. ಕಂದಲಿಯಲ್ಲಿರುವ ಕೃ.ವಿ.ವಿ. ಕೇಂದ್ರದಲ್ಲಿ ಕೃಷಿ ಕಾಲೇಜು ಸ್ಥಾಪಿಸಲು ಎಲ್ಲಾ ವಿವರದೊಂದಿಗೆ ಸೂಕ್ತವಾದ ಸ್ಥಳವೆಂದೂ ಸಲಹೆ ಮಾಡಿದ್ದನ್ನು ಸರ್ಕಾರ ಒಪ್ಪಿದ್ದರೆ ಇಷ್ಟರಲ್ಲಿ ಅಲ್ಲಿಯೇ ಕಾಲೇಜು ಪ್ರಾರಂಭಿಸಬಹುದಿತ್ತು. ನನ್ನನ್ನು ಹೊಸ ಕಾಲೇಜು ಗಳ ಸ್ಥಾಪನೆಗೆ ಸ್ಪೆಷಲ್ ಆಫೀಸರ್ ಎಂದು ಗುರುತಿಸಿ ಜವಾಬ್ದಾರಿ ಕೊಟ್ಟ ಮೇಲೆ ಸರಿಯಾದ ಸಮಯದಲ್ಲಿ ಸೂಕ್ತ ಸಲಹೆ ಮತ್ತು ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸದಿದ್ದರೆ, ಶಿವಮೊಗ್ಗ, ಮೂಡಿಗೆರೆ, ಪೊನ್ನಂಪೇಟೆ, ಚಿಂತಾಮಣಿ ಕಾಲೇಜುಗಳಿಗಿದ್ದ ತೊಂದರೆಗಳನ್ನು ನೆನೆಸಿಕೊಂಡರೆ, ಅವುಗಳ ಸ್ಥಾಪನೆ ಇಷ್ಟು ಶೀಘ್ರವಾಗಿ ಆಗುತ್ತಿತ್ತೋ ಇಲ್ಲವೋ ತಿಳಿಯದು. ಮಿತಿಮೀರಿದ ಶ್ರಮವಹಿಸಿದ್ದಕ್ಕೆ, ನೆನೆಸಿಕೊಳ್ಳುವಂತಹ ನಾಲ್ಕಾರು ಕಾಲೇಜುಗಳ ಸ್ಥಾಪನೆಯ ನನ್ನ ಪಾತ್ರ ಸಂತೋಷ ತರುವಂತಹದು. ಯಾವ ಸಂಭಾವನೆಯೂ ಇಲ್ಲದ ಈ ಸ್ಪೆಷಲ್ ಆಫೀಸರ್ ಗಿರಿ ನಾನು ಮಾಡುತ್ತಿದ್ದ ನಿಯಮಿತ ಹುದ್ದೆಗಳ ಜೊತೆಗೆ ನಿರ್ವಹಿಸಬೇಕಾಗಿದ್ದ ಜವಾಬ್ದಾರಿಯಾಗಿತ್ತು.

ಕೃಷಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ ನಾನು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಇತ್ತು. ಅನಂತರವೂ ಆಗೊಮ್ಮೆ ಈಗೊಮ್ಮೆ ಸರ್ಕಾರಕ್ಕೇನಾದರೂ ಕೃಷಿ ಪದವೀಧರರ ಕುಂದುಕೊರತೆಗಳನ್ನು ನಿವಾರಿಸಲು ನಿಯೋಗ ಹೋಗಬೇಕಿದ್ದಾಗ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ನಡೆಯುತ್ತಿತ್ತು. ಕೃಷಿ ವಿಶ್ವವಿದ್ಯಾನಿಲಯ ಆದನಂತರ ಇದು ಮಂದಗತಿಯಲ್ಲಿದ್ದು ನಂತರ ಸುಮಾರು 1980ರ ದಶಕದಲ್ಲಿ ಪುನರಾವರ್ತಿ ಚೇತನಗೊಳಿಸಲಾಯಿತು. ಆದರೆ ಯಾವ

ಕಾರ್ಯಕ್ರಮವೂ ಹಳೇ ವಿದ್ಯಾರ್ಥಿಗಳನ್ನು ಆಕರ್ಷಿಸಿ ಒಂದುಗೂಡಿಸುವಷ್ಟು ಚುರುಕಾಗಲಿಲ್ಲ. ಇದರ ಜವಾಬ್ದಾರಿಯನ್ನು ಕೆಲವು ಸಮಯಕ್ಕೆಂದು ನನಗೊಪ್ಪಿಸಲಾಯಿತು. ಸದಸ್ಯರನ್ನು ನೊಂದಾಯಿಸುವ ಕಾರ್ಯ ಭರದಲ್ಲಿ ಜರುಗಿತು. ಸದಸ್ಯರ ಸಂಖ್ಯೆ ಏರುತ್ತಿರುವಾಗ ಇದರ ಅಧ್ಯಕ್ಷರ ಸ್ಥಾನವನ್ನು ನನ್ನಿಂದ ಬೇರೆಯವರಿಗೆ ಒಪ್ಪಿಸುವುದಕ್ಕೆ ಸರ್ವಸಭೆ ಸಮ್ಮತಿಸಲಿಲ್ಲ. ಮೂರು ವರುಷಕ್ಕೊಮ್ಮೆ ಚುನಾವಣೆ ನಡೆದರೂ ಯಾರೂ ಕಾರ್ಯಕಾರಿ ಸಭೆಗೆ ಮೆಂಬರಾಗಲು ಮುಂದೆ ಬರುತ್ತಿರಲಿಲ್ಲ. ಹೇಗೋ ಕೆಲವರನ್ನು ಒತ್ತಾಯ ಮಾಡಿ ಸೇರಿಸಲಾಗುತ್ತಿತ್ತು. ಕೃ.ವಿ.ವಿದ್ಯಾನಿಲಯದ ಕಾನೂನು ಪ್ರಕಾರ ಒಬ್ಬ ಹಳೇ ವಿದ್ಯಾರ್ಥಿ ಸಂಘದ ಅಭ್ಯರ್ಥಿ ವಿ.ವಿ. ಆಡಳಿತ ಮಂಡಲಿಯಲ್ಲಿ ಸದಸ್ಯನಾಗಿರಬೇಕಿತ್ತು. ಆದ್ದರಿಂದ ಈ ಅರ್ಹತೆಯನ್ನು ಪಡೆಯುವುದಕ್ಕೆ ವಿಶ್ವವಿದ್ಯಾನಿಲಯದ ಹಳೇ ವಿದ್ಯಾರ್ಥಿ ಸಂಘವಾಗಬೇಕಿತ್ತು. ಕೃಷಿ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘವಿದ್ದಂತೆ ಕೃ.ವಿ.ವಿ.ದ ಎಲ್ಲಾ ಕಾಲೇಜುಗಳು ಅವರದೇ ಆದ ಹಳೆ ವಿದ್ಯಾರ್ಥಿ ಸಂಘವನ್ನು ಮಾಡಿಕೊಂಡಿದ್ದರು. ಅವರೆಲ್ಲರಿಗೂ ಅವರವರ ಹಕ್ಕು ಬಾಧ್ಯತೆಗಳನ್ನು ಬಿಡುವ ಮನಸ್ಸಿರಲಿಲ್ಲ. ಆದರೂ ಕೃ.ವಿ.ವಿ.ದ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಒಂದು ಹಳೇ ವಿದ್ಯಾರ್ಥಿಗಳ ಸಂಘದ ಅಗತ್ಯವಿತ್ತು. ಕೃ.ವಿ.ವಿದ್ಯಾನಿಲಯದ ಅತಿದೊಡ್ಡ ಕಾಲೇಜು ಆದ ಕೃಷಿ ಕಾಲೇಜು, ಹೆಬ್ಬಾಳ ಮತ್ತು ಧಾರವಾಡ ಎರಡರಿಂದ, ಹಲವು ಸಾವಿರ ಹಳೇ ವಿದ್ಯಾರ್ಥಿಗಳಿದ್ದರು. ಕೃಷಿ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘವೂ ಕೂಡ ಕೃ.ವಿ.ವಿ.ದ ಬೇರೆ ಕಾಲೇಜುಗಳ ಹಳೇ ವಿದ್ಯಾರ್ಥಿ ಸಂಘಗಳಿಗಿಂತ ಹಳೆಯದೆ.

ಕೃಷಿ ಕಾಲೇಜು ಹೆಬ್ಬಾಳ ಮತ್ತು ಧಾರವಾಡ ಕ್ರಮವಾಗಿ 1946 ಮತ್ತು 1947ರಲ್ಲಿ ಪ್ರಾರಂಭವಾಗಿದ್ದವು. ನಂತರ 1958ರಲ್ಲಿ ಹೆಬ್ಬಾಳದಲ್ಲಿ ಪಶುವೈದ್ಯಕೀಯ ಕಾಲೇಜು ಪ್ರಾರಂಭವಾಯಿತು. ಕೃಷಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘಕ್ಕೆ ಕೃ.ವಿ.ವಿ. ಮಟ್ಟದಲ್ಲಿ ಒಂದು ಹಳೇ ವಿದ್ಯಾರ್ಥಿಗಳ ಸಂಘದ ಆಗತ್ಯವನ್ನು ಮನವರಿಕೆ ಮಾಡಿ ಅದನ್ನು ವಿಸರ್ಜಿಸಿ ಹೊಸದಾಗಿ ಕೃ.ವಿ.ವಿ. ಹಳೇ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಲಾಯಿತು. ಅದಕ್ಕೂ ನನ್ನನ್ನು ವ್ಯವಸ್ಥಾಪಕ ಅಧ್ಯಕ್ಷನನ್ನಾಗಿ ಆರಿಸಲಾಯಿತು. ಇದರ ಅಡಿಯಲ್ಲಿ ಹಲವಾರು ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ನಾನು ಕೃಷಿ ಕಾಲೇಜಿನ ಡೈರೆಕ್ಟರ್ ಆಗಿದ್ದಾಗ ಕುಲಪತಿ ಆರ್.ವಿ. ರಾಮಕೃಷ್ಣರವರ ಸಹಾಯದಿಂದ ಇದರ ಕಟ್ಟಡಕ್ಕೆ ಕೃ.ವಿ.ವಿ. ದಿಂದ ಜಾಗವನ್ನು ಪಡೆದಿದ್ದಾಯಿತು. ಕೃ.ವಿ.ವಿ. ಆಡಳಿತ ಮಂಡಳಿಗೆ ಹಳೇ ವಿದ್ಯಾರ್ಥಿ ಸಂಘದ ಪರವಾಗಿ ಸರ್ಕಾರವೇ ನೇಮಿಸುತ್ತಿದ್ದ ಸದಸ್ಯತ್ವವನ್ನು ಸಂಘವು ಸೂಚಿಸಿದವರ ಐದು ಸದಸ್ಯರ ಪೈಕಿ ಒಬ್ಬರನ್ನು ಆಯ್ಕೆ ಮಾಡುವಂತೆ ಒತ್ತಾಯಿಸಿ ಸಂಘದ ವತಿಯಿಂದ ಆಡಳಿತ ಮಂಡಳಿಯಲ್ಲಿ ಪ್ರತಿನಿಧಿಯಾಗಿರುವಂತೆ ಮಾಡಲಾಯಿತು. ವರುಷಕ್ಕೆ ಕನಿಷ್ಠಪಕ್ಷ ಒಂದು ಸಾರಿಯಾದರೂ ಸಂಘವು ಸರ್ವಸದಸ್ಯರ ಸಭೆ ಸೇರಿ ಪ್ರತಿಭಾವಂತ ಹಳೇ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನ ಮಾಡುವ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಯಾವ ಸಂಘ ಸಂಸ್ಥೆಯೂ ಸಂಪನ್ಮೂಲವಿಲ್ಲದೆ ಗುರುತರವಾದ ಚಟುವಟಿಕೆಯನ್ನು ಮಾಡಲಾಗುವುದಿಲ್ಲ. ಯಾವ ಅನುದಾನವೂ ಇಲ್ಲದ ಹಳೇ ವಿದ್ಯಾರ್ಥಿ ಸಂಘ ತನ್ನೆಲ್ಲ ಚಟುವಟಿಕೆಗಳನ್ನು ಸದಸ್ಯತ್ವದ ಹಣದಿಂದಲೇ ಮಾಡಬೇಕಿತ್ತು. ನಾನು ಕುಲಪತಿಯಾಗುವ ತನಕ ಇದರ ಅಧ್ಯಕ್ಷನಾಗಿ ಮುಂದುವರಿದಿದ್ದೆ.

ನಾನು ಕೃ.ವಿ.ವಿ. ಕುಲಪತಿಯಾಗಿರುವ ಕಾಲದಲ್ಲಿ ಡಾ॥ ಜೀವರಾಜ ಆಳ್ವರ ನೇತೃತ್ವದಲ್ಲಿ ವರ್ಲ್ಡ್ ಭಂಟರ ಸಮ್ಮೇಳನವನ್ನು ಹೆಬ್ಬಾಳ ಆವರಣದಲ್ಲಿ ನಡೆಸಲು ತೀರ್ಮಾನ ತೆಗೆದುಕೊಂಡಿದ್ದರು. ಕೃಷಿಯೇತರ ಚಟುವಟಿಕೆಗಳಿಗೆ ಕೃ.ವಿ.ವಿ. ಆವರಣದಲ್ಲಿ ಯಾವ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅನುಮತಿ ಕೊಡುತ್ತಿರಲಿಲ್ಲ. ಕಾರ್ಯತಃ ಭಂಟರೆಲ್ಲರೂ ಕೃಷಿಕರೇ ಆಗಿದ್ದು ಅವರ ಸಂಸ್ಕೃತಿಯೆಲ್ಲವೂ ಕೃಷಿ ಮೂಲವಾದ್ದರಿಂದ ಸಮ್ಮೇಳನ ನಡೆಸಲು ಯಾರಿಂದಲೂ ಅಭ್ಯಂತರವಿಲ್ಲದೆಂದು ಸಂಬಂಧಪಟ್ಟ ಮೂಲಗಳು ಅನುಮತಿ ಕೊಡ ಬಹುದೆಂದು ಸೂಚಿಸಿದವು. ಅದರಂತೆ ಅದ್ದೂರಿಯಾದ ಸಮ್ಮೇಳನ ನಡೆಯಿತು. ಡಾ॥ ಜೀವರಾಜ ಆಳ್ವರನ್ನು ಕೇಳಿಕೊಂಡಾಗ ಸಭ್ಯತೆಯಿಂದ ಕೃ.ವಿ.ವಿ. ಹಳೇ ವಿದ್ಯಾರ್ಥಿ ಸಂಘಕ್ಕೆ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟರು. ಹಳೇ ವಿದ್ಯಾರ್ಥಿ ಸಂಘ ಮೊಟ್ಟ ಮೊದಲಿಗೆ ಒಂದು ಲಕ್ಷ ರೂಪಾಯಿ ನೋಡಿದ್ದು ಇದೇ ಮೊದಲು. ಇದರಿಂದ ಸಂಘದ ಚಟುವಟಿಕೆಗಳು ಚುರುಕುಗೊಂಡವು. ಕಾಸಿಲ್ಲದಿದ್ದರೂ ಕೋಟಿ ರೂಪಾಯಿಯ ಸಂಘದ ಕಟ್ಟಡವನ್ನು ಕಟ್ಟುವ ಯೋಜನೆ ಹಾಕಿಕೊಂಡಿತು. ಆರ್ಕಿಟೆಕ್ಟ್ ವೆಂಕಟಸ್ವಾಮಿಯವರು ಒಂದು ಉತ್ತಮವಾದ ಯೋಜನೆಯನ್ನು ತಯಾರು ಮಾಡಿಕೊಟ್ಟರು. ಸಂಘಕ್ಕೆ ಕೊಟ್ಟಿದ್ದ ಜಾಗ (1.8 ಎಕರೆ) ಬಳ್ಳಾರಿ ರೋಡಿಗೆ ಅಭಿಮುಖವಾಗಿ ಎಲ್ಲ ದೃಷ್ಟಿಯಿಂದ ಅತ್ಯುತ್ತಮ ಜಾಗವಾದ್ದರಿಂದ ಮುಂದೆ ಹತ್ತಾರು ವರುಷಗಳಿಗೆ ರೈತರಿಗೆ ಅನುಕೂಲವಾಗುವಂತಹ ಬೃಹತ್ ಸಭೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮತ್ತು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಸಮ್ಮೇಳನ ನಡೆಸಲು ಅನುಕೂಲವಾಗುವಂತೆ ಎಲ್ಲಾ ಸೌಕರ್ಯಗಳನ್ನು ಅಳವಡಿಸುವಂತೆ ಯೋಜನೆಯನ್ನು ಕೂಡಿಸಿ ದಾಗ ನಾಲ್ಕಾರು ಕೋಟಿ ವೆಚ್ಚವಾಗುವ ಸಂಭವ ಬಂತು. ಸಂಘದ ಅಧ್ಯಕ್ಷ ಶ್ರೀಮಾನ್ ಸಂಪಂಗಿಯವರು, ಕಾರ್ಯದರ್ಶಿ ಡಾ॥ ನಾರಾಯಣಗೌಡರ ಅವಿರತ ದುಡಿಮೆಯಿಂದ ಸಂಘವು ಈ ಕಟ್ಟಡವನ್ನು ಪೂರ್ಣಗೊಳಿಸುವ ಕನಸನ್ನು ಕಂಡಿತು. ನಾನೂ ಮತ್ತು ಸಂಪಂಗಿಯವರು ಸಮಯ ಸಿಕ್ಕಿದಾಗಲೆಲ್ಲಾ ದಾನಿಗಳನ್ನು ಭೇಟಿ ಮಾಡಿ ಹಣವನ್ನು ಸಂಗ್ರಹಿಸುವ ಕಾರ್ಯವನ್ನು ಕೈಗೊಂಡೆವು. ಹೋದಲ್ಲೆಲ್ಲ ಕೈಗೆ ದುಡ್ಡು ಕೊಡದಿದ್ದರೂ ಎಲ್ಲರೂ ಹುರುದುಂಬಿಸುತ್ತಿದ್ದರು. ನಾಲ್ಕಾರು ಲಕ್ಷ ರೂಪಾಯಿ ಸಂದಾಯವಾಯಿತು. ಕಟ್ಟಡದ ಅಡಿಗಲ್ಲು ಹಾಕಿಸಲು ಅಂದಿನ ಪ್ರಧಾನಮಂತ್ರಿ ದೇವೇಗೌಡರನ್ನೇ ಕರೆಸಿದೆವು. ಆ ಸಮಾರಂಭದಲ್ಲಿ ಪಾರ್ಲಿಮೆಂಟ್ ಸದಸ್ಯರಿಗಿರುವ ಒಂದು ಕೋಟಿ ರೂಪಾಯಿಯಲ್ಲಿ ಒಂದಷ್ಟನ್ನು ಈ ಕಟ್ಟಡಕ್ಕೆ ಕೊಡಬೇಕೆಂದು ಲೋಕಸಭಾ ಸದಸ್ಯರಾಗಿದ್ದ ಶ್ರೀಮಾನ್ ನಾರಾಯಣಸ್ವಾಮಿಯವರು ಬಿನ್ನವಿಸಿ ಕೊಂಡದ್ದಲ್ಲದೆ ಸ್ವತಃ ಅವರ ಪಾಲಿನಲ್ಲಿ ಹತ್ತು ಲಕ್ಷ ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದರು. ಮೊದಲ 50 ಲಕ್ಷ ರೂಪಾಯಿಯ ವೆಚ್ಚದಲ್ಲಿ ಮೊದಲನೆ ಹಂತದ ಕಟ್ಟಡವನ್ನು ಪ್ರಾರಂಭಿಸಿದ್ದಾಯಿತು. ಇದು ಪೂರ್ಣವಾದಾಗ ಬೆಂಗಳೂರಿನಲ್ಲೇ ಅತಿ ದೊಡ್ಡ ಸಭಾಂಗಣವಾಗುವುದರಲ್ಲಿ ಸಂಶಯವಿಲ್ಲ. ಇದರಲ್ಲಿ ನಾನು ಸಕ್ರಿಯವಾಗಿ ಪಾತ್ರವಹಿಸಿದ್ದೆ ಎನ್ನುವುದೇ ಸಮಾಧಾನ.

8 ದೇಶ ಪರ್ಯಟನೆ

ಜನಸಾಮಾನ್ಯರು ಹಳ್ಳಿಗಳಲ್ಲಿ ಆಡಿಕೊಳ್ಳುವ ಮಾತು, ಮನುಷ್ಯರಿಗೆ ವ್ಯವಹಾರ ಜ್ಞಾನ ಬರಬೇಕಾದರೆ ದೇಶ ಸುತ್ತಬೇಕು ಇಲ್ಲವೆ ಕೋಶ ಓದಬೇಕು ಎಂದು. ಹಿಂದಿನಿಂದಲೂ ನಮ್ಮ ದೇಶದ ಹಳ್ಳಿಗಳಲ್ಲಿ ಶಾಲೆಯ ಉಪಾಧ್ಯಾಯರಿಗೆ ದೊರೆಯುತ್ತಿದ್ದ ಗೌರವ ಮತ್ತಾರಿಗೂ ಸಲ್ಲುತ್ತಿರಲಿಲ್ಲ. ಏಕೆಂದರೆ ಉಪಾಧ್ಯಾಯರು ಓದಿದವರು ಜ್ಞಾನಿ ಎಂದು. ಈಗ ಆ ಗೌರವವನ್ನು ಎಷ್ಟರ ಮಟ್ಟಿಗೆ ಉಪಾಧ್ಯಾಯರುಗಳು ಉಳಿಸಿಕೊಂಡಿದ್ದಾರೆಯೋ ಅದು ಬೇರೆ ವಿಷಯ. ನಾನು ಚಿಕ್ಕವನಾಗಿರುವಾಗ ನನ್ನ ಊರಲ್ಲಿ ಈ ಮಾತು ಸತ್ಯವಿತ್ತು.

ಕಾಸರಗೋಡಿನಿಂದ ಕಾಕಾಗಳು ವ್ಯಾಪಾರಕ್ಕೆ ಬರುತ್ತಿದ್ದಾಗ ಅವರ ಅನುಭವಗಳನ್ನು ಕೇಳಲು ಜನಸುತ್ತುವರಿಯುತ್ತಿದ್ದರು. ಅವರಲ್ಲನೇಕರಿಗೆ ಕೊಲ್ಲಿ ರಾಷ್ಟ್ರಗಳಿಗೆ ದೋಣಿಯಲ್ಲಿ ಹೋಗಿ ಬಂದ ಅನುಭವದೊಂದಿಗೆ ಮಂಗಳೂರು, ಬೊಂಬಾಯಿ ಪಟ್ಟಣಗಳ ಜನಜೀವನದ ಅರಿವು ಅವರಿಗಿತ್ತು. ಕೆಲವೊಮ್ಮೆ ಅವರ ಮಾತುಗಳಲ್ಲಿ ಉತ್ಪ್ರೇಕ್ಷಣೆ ಇದ್ದರೂ ಅವರು ದೇಶ ಸುತ್ತುತ್ತಿದ್ದ ವರಾದ್ದರಿಂದ ಜನರು ನಿಜವೆಂದು ನಂಬುತ್ತಿದ್ದರು. ಹಳ್ಳಿಗಳಲ್ಲಿ ಅದರಲ್ಲೂ ಮಲೆನಾಡಿನ ಕೊಂಪೆಗಳಲ್ಲಿ ಐವತ್ತು ಅರವತ್ತು ವರುಷಗಳ ಹಿಂದೆ ಬಸ್ಸು ಕಾರು ಲಾರಿ ನೋಡಿದ್ದವರು ಬೆರಳೆಣಿಸುವಷ್ಟು ಇರಲಿಲ್ಲ. ವಿಮಾನದ ಶಬ್ದ ಕೇಳಿದರೆ ಓಡಿ ಹೋಗಿ ಮರದಡಿಯೋ ಮನೆಯೊಳಗೋ ಸೇರುತ್ತಿದ್ದರು. ಏಕೆಂದರೆ ಅವರು ಕೇಳಿದ್ದು ವಿಮಾನಗಳನ್ನು ಬಾಂಬು ಹಾಕಲು ಮಾತ್ರ ಉಪಯೋಗಿಸುವರೆಂದು. ಮೇಲೆ ಹೇಳಿರುವ ಮಾತಿನ ಅರ್ಥ ಪೂರ್ಣ ಅರಿವಾಗಿದ್ದು ನಾನು ಹೊರದೇಶಗಳಿಗೆ ಹೋಗಲು ಪ್ರಾರಂಭಿಸಿದ ನಂತರ. ದೇಶ ವಿದೇಶಗಳ ಬಗ್ಗೆ ಎಷ್ಟೇ ಪುಸ್ತಕಗಳನ್ನು ಓದಿದ್ದರೂ, ಅವುಗಳನ್ನು ನೋಡಿದ ಮೇಲೆ ಆಗುವ ಅನುಭವಕ್ಕೂ ಪುಸ್ತಕದಲ್ಲಿ ಹೇಳಿರುವುದಕ್ಕೂ ಅಜಗಜಾಂತರ.

ನನ್ನ ನಲವತ್ತು ವರುಷದ ಸೇವೆಯಲ್ಲಿ (1958-98) ನನಗಾಗಿರುವ ಅನುಭವವನ್ನು ನೆನಪಿಸಿಕೊಂಡರೆ ನನ್ನ ಕೊಡಿಗೆ ನಾಡಿಗೆ, ದೇಶಕ್ಕೆ ಅಲ್ಪವೆಂದೇ ಹೇಳಬೇಕು. ಏಕೆಂದರೆ 95 ಕೋಟಿ ದೇಶದ ಜನರಲ್ಲಿ ನಾನೊಬ್ಬ ತೃಣ ಮಾತ್ರ. ಆದರೆ ನಾನು ಬಯಸದೆ ಒದಗಿ ಬಂದ ಅವಕಾಶಗಳು ಬಹಳ ಜನರಿಗೆ ಪ್ರಯತ್ನ ಪಟ್ಟರೂ ದೊರೆಯದಂತಹವು. ಸ್ವಾತಂತ್ರ್ಯ ಬಂದು ಐವತ್ತು ವರುಷಗಳಾದರೂ ನಮ್ಮ ದೇಶದಲ್ಲಿ ಇನ್ನೂ ಶೇಕಡ ಮೂವತ್ತಕ್ಕೂ ಮೀರಿ ಅನಕ್ಷರಸ್ಥರಿದ್ದಾರೆ. ಶೇಕಡ ಎಪ್ಪತ್ತೈದರಷ್ಟು ಜನ ಹಳ್ಳಿಯಲ್ಲಿ ವ್ಯವಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಉದ್ಯೋಗದಲ್ಲಿದ್ದಾರೆ. ದಿನವೆಲ್ಲ ದುಡಿದರೂ ಮೈತುಂಬ ಬಟ್ಟೆ ವರ್ಷವಿಡೀ ಅನ್ನದೊರೆಯುವುದು ಅನೇಕರಿಗೆ ದುರ್ಲಭ. ವಿದ್ಯೆ ಲಕ್ಷಾಂತರ ಮಕ್ಕಳಿಗೆ ಎಟುಕದ ಮಾತು. ಹಳ್ಳಿಯಲ್ಲಿ ಅನಕ್ಷರಸ್ಥರ ಬಡ ಕುಟುಂಬದಲ್ಲಿ ಹುಟ್ಟಿ ನಾನು ವಿದ್ಯಾವಂತನಾದದ್ದು ಹೇಗೆ?

ನಾನು ನಡೆದುಬಂದ ದಾರಿಯನ್ನು ನೆನೆಸಿಕೊಂಡರೆ ಇದು ನನ್ನ ಅಥವಾ ನನ್ನವರ ಪ್ರಯತ್ನದಿಂದಲೆ. ಹಾಗಿದ್ದರೆ ನನ್ನ ಸಹೋದರರು, ನನ್ನ ಕುಟುಂಬದವರು, ಊರಿನವರು ಯಾರಾದರೂ ಏನಾದರೂ ಆಗಬಹುದಿತ್ತು. ಇದರಲ್ಲಿ ನಮಗೆ ಅರಿಯದ ಯಾವುದೋ ಶಕ್ತಿಯ ಕೈವಾಡ ಇರಬಹುದೆ? ಪ್ರಯತ್ನ ಮನುಷ್ಯರದು ಫಲ ಅವನದು ಎಂದು ಹೇಳುವುದರಲ್ಲಿ ಅರ್ಥವಿರಬಹುದೆ? ಹೀಗೆ ಜೀವನದುದ್ದಕ್ಕೂ ಆಗೊಮ್ಮೆ ಈಗೊಮ್ಮೆ ನನ್ನ ಅರಿವಿಲ್ಲದೆ ನನ್ನ ಅಂತರಾಳದಿಂದ ಇಂತಹ ಪ್ರಶ್ನೆಗಳು ಏಳುತ್ತಿದ್ದವು.

ನನ್ನ ಮತ್ತು ನನ್ನವರ ಅವಶ್ಯಕತೆಗಳನ್ನು ಪೂರೈಸುವಷ್ಟು ನನ್ನ ವರಮಾನವಿದ್ದರೂ ಆಸೆಗಳನ್ನೆಲ್ಲಾ ಪೂರೈಸುವಷ್ಟಿರಲಿಲ್ಲ. ಆದರೆ ಅತೃಪ್ತಿ ಪಟ್ಟವನಲ್ಲ. ಬದಲಾಗಿ ನನಗಿಂತ ದುರ್ಬಲರಿಗೆ ಹೋಲಿಸಿಕೊಂಡು ನಾನೆಷ್ಟು ಅದೃಷ್ಟವಂತ ಎಂದುಕೊಳ್ಳುತ್ತಿದ್ದೆ. ಇದರಿಂದ ಕೆಲವೊಮ್ಮೆ ದೂಷಣೆಗಳಿಗೆ ಗುರಿಯಾಗುತ್ತಿದ್ದೆ. ಎಷ್ಟೋ ಅವಕಾಶಗಳಿರುವಾಗ ಆರ್ಥಿಕವಾಗಿ ಮುಂದುವರಿಯಲು ಮನಸ್ಸು ಕೊಡುವುದಿಲ್ಲ ಎಂದು ನನ್ನವರಿಂದ ದೂರು. ಆದರೆ ಅದರಿಂದ ನಾನು ಸಾಧಿಸಬೇಕಾದ್ದು ಏನು ಎಂದು ಯಾರೂ ಹೇಳರು. ಭಾರತದಾದ್ಯಂತ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಪೂರಿಯಿಂದ ದ್ವಾರಕಾದವರೆಗೆ, ಹಿಮಾಲಯದ ಬದರೀನಾಥ್, ಕೇದಾರನಾಥ್, ಡೆಹರಡೂನ್‌ನಿಂದ ಡಾರ್ಜೀಲಿಂಗ್‌ನವರೆಗೆ, ಪೂರ್ವದಲ್ಲಿ ಅಸ್ಸಾಮ್, ತ್ರಿಪುರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಅಂಡಮಾನ್ ದ್ವೀಪ ಎಲ್ಲವನ್ನು ನೋಡುವ ಭಾಗ್ಯ ನನಗೆ ದೊರೆತಿರುವಷ್ಟು ಮತ್ತೆಷ್ಟು ಭಾರತೀಯರಿಗೆ ದೊರೆತಿರಬಹುದು. ದುಡ್ಡಿರುವವರು ಎಷ್ಟು ಜನ ಭಾರತದೆಲ್ಲೆಡೆ ಹೋಗಿ ವಿವಿಧತೆಯ ಮಧ್ಯೆ ಏಕತೆ ಕಂಡಿದ್ದಾರೆ. ಬಹಳ ಜನ ಭಾರತೀಯರು ಹೊರದೇಶಕ್ಕೆ ಹೋಗಲು ಹಾತೊರೆಯುತ್ತಿರುತ್ತಾರೆ. ಅವರಲ್ಲನೇಕರು ಅವರ ಪ್ರದೇಶವನ್ನು ಬಿಟ್ಟು ಭಾರತದಲ್ಲಿ ಮತ್ತೆಲ್ಲೂ ಹೋಗಿರಲಾರರು. ಹಲವಾರು ಭಾರತೀಯರನ್ನು ಹೊರದೇಶಗಳಲ್ಲಿ ಭೇಟಿ ಮಾಡಿದ ಮೇಲೆ ನನ್ನ ಗ್ರಹಿಕೆ ಸರಿಯೆಂದು ತೋರುತ್ತದೆ. ದಕ್ಷಿಣ ಅಮೆರಿಕಾ ಖಂಡವನ್ನು ಹೊರತುಪಡಿಸಿ ಉಳಿದೆಲ್ಲ ಖಂಡಗಳಲ್ಲಿ ಹದಿನೆಂಟು ಬಾರಿ ಹೊರದೇಶಗಳಿಗೆ ಹೋಗಿ ಬಂದಮೇಲೆ ನನಗನಿಸಿದ್ದು ಭಾರತದಲ್ಲಿರುವಷ್ಟು ವೈವಿಧ್ಯಮಾನವಾದ ಜಾಗ, ಜನ, ಪ್ರೇಕ್ಷಣೀಯ ಸ್ಥಳಗಳು, ಆಚಾರ ವ್ಯವಹಾರ, ಊಟ ಉಡುಗೆಗಳು, ಕಲೆ ಸಂಸ್ಕೃತಿ ಮತ್ತಾವ ದೇಶದಲ್ಲಿಯೂ ದೊರೆಯಲಾರವು. ಶತಮಾನಗಳ ದಾಸ್ಯ ಸಂಕಲೆ ನಮ್ಮದನ್ನು ನಾವು ಮರೆಯುವಷ್ಟು ಮಾಡಿದೆ. ಈಗೀಗ ಜನ ಜಾಗೃತರಾಗುತ್ತಿರುವುದು ಕಂಡು ಬರುತ್ತದೆ.

ನನಗೆ ದೇಶ ಪರ್ಯಟನೆ ಮಾಡುವ ಹಂಬಲವಿರಲಿಲ್ಲ. ಮೊದಲ ಬಾರಿಗೆ ಕರ್ನಾಟಕದ ಹೊರಗೆ ಹೋಗಿದ್ದು ವಿದ್ಯಾರ್ಥಿಗಳ ರಾಜ್ಯ ಪ್ರವಾಸದಲ್ಲಿ. ಈ ಪ್ರವಾಸದಲ್ಲಿ ನಡೆದ ಒಂದು ಘಟನೆ ಮರೆಯುವಂತಿಲ್ಲ. ಪ್ರವಾಸದ ಕೊನೆಯ ಹಂತ ಅರಸೀಕೆರೆಯಿಂದ ಬೆಂಗಳೂರಿಗೆ ಬರುವಾಗ ನಮ್ಮ ಪೆಟ್ಟಿಗೆಗಳನ್ನೆಲ್ಲ ಒಂದು ಕಂಪಾರ್ಟ್‌ಮೆಂಟಿನಲ್ಲಿ ಇಟ್ಟು ನಾಲ್ಕೈದು ಸ್ನೇಹಿತರು ಮತ್ತು ನಮ್ಮ ಜೊತೆ ಇದ್ದ ಇಬ್ಬರು ಸೇವಕರನ್ನು ಕಾವಲಿಗೆ ಬಿಟ್ಟು ಬೇರೆ ಕಂಪಾರ್ಟ್‌ಮೆಂಟಿನಲ್ಲಿ ಎರಡು ಮೂರು ಗುಂಪಿನಲ್ಲಿ ಇಸ್ಪೀಟ್ ಆಡುತ್ತಿದ್ದೆವು. ಕೆಲವು ಘಂಟೆಗಳ ಕಾಲ ರೈಲು ಅರಸೀಕೆರೆಯಲ್ಲಿ ನಿಂತಿತು. ಬೋಗಿಯನ್ನು ಬೇರೆ ಗಾಡಿಗೆ ಸೇರಿಸುವುದಿದ್ದರಿಂದ ಕೆಲ ಸಮಯ ಲೈಟ್ ಇರಲಿಲ್ಲ. ನಂತರ ರೈಲು ಹೊರಟು ಬೆಂಗಳೂರಿಗೆ ಸೇರಿದಾಗ ನಮ್ಮ ಪೆಟ್ಟಿಗೆಗಳು ಒಂದೂ

ಪತ್ತೆ ಇಲ್ಲವಾಗಿದ್ದವು. ಕೆಲವರಿಗೆ ಉಟ್ಟಿದ್ದ ಚಡ್ಡಿ ಬನಿಯನ್ ಬಿಟ್ಟರೆ ಮತ್ತೇನು ಇರಲಿಲ್ಲ. ಗೊಬ್ಬರದ ಲಾರಿ ಎಂದು ಕರೆಯುತ್ತಿದ್ದ ಕಾಲೇಜಿನ ಲಾರಿ ನಾವಿದ್ದ ಸ್ಥಿತಿಯಲ್ಲೇ ಎಲ್ಲರನ್ನೂ ರೈಲ್ವೆ ಸ್ಟೇಷನ್ನಿನಿಂದ ಹಾಸ್ಟಲಿಗೆ ಕರೆದುಕೊಂಡು ಹೋಯಿತು. ನಮ್ಮ ಸಾಮಾನುಗಳು ನಮ್ಮ ಭದ್ರತೆಯಲ್ಲಿರಬೇಕೆಂಬ ಮೊದಲ ಪಾಠ ಆಗ ಕಲಿತದ್ದು ಮುಂದೆಂದೂ ಪ್ರವಾಸದಲ್ಲಿ ಸಾಮಾನು ಕಳೆದುಕೊಳ್ಳಲಿಲ್ಲ.

ಸುಮಾರು ನಲವತ್ತು ವರುಷಗಳಲ್ಲಿ ಭಾರತದಾದ್ಯಂತ ಪ್ರವಾಸ ಮಾಡಿದ್ದರಲ್ಲಿ ಸ್ವಪೇಕ್ಷೆಯಿಂದ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿದ್ದು ನೆನಪಿಲ್ಲ. ಎಲ್ಲವೂ ಒಂದಲ್ಲ ಒಂದು ಕಾರ್ಯನಿಮಿತ್ತ ಹೋದಾಗ ಅಲ್ಲಿಯವರು ಆಯಾ ಪ್ರದೇಶದಲ್ಲಿರುವ ಮುಖ್ಯಜಾಗಗಳಿಗೆ ಕರೆದುಕೊಂಡು ಹೋಗುತ್ತಿದ್ದದ್ದು ಮುಖ್ಯಕಾರಣ. ಮುಖ್ಯವಾಗಿ ನಾನು ಕೈಗೊಂಡಿದ್ದ ಸಂಶೋಧನೆಯೇ ಭಾರತ ಪ್ರವಾಸಕ್ಕೆ ಮೂಲಕಾರಣವೆಂದು ಹೇಳಬಹುದು. ದೇಶದ ಕೃಷಿ ವಿಶ್ವವಿದ್ಯಾನಿಲಯಗಳು, ಭಾರತೀಯ ಕೃಷಿ ಅನುಸಂಧಾನದ ಸಂಶೋಧನಾ ಕೇಂದ್ರಗಳು ಭಾರತದೆಲ್ಲೆಡೆ ಹರಡಿರುವುದು ಮತ್ತೊಂದು ಕಾರಣ. ಏಕೆಂದರೆ ಒಂದಲ್ಲ ಒಂದು ಕಾರಣಕ್ಕೆ ಇವುಗಳಿಗೆ ಭೇಟಿ ಕೊಡಬೇಕಾಗಿರುತ್ತಿತ್ತು. ವರ್ಕ್‌ಷಾಪ್, ಸೆಮಿನಾರ್, ರಿವ್ಯೂ, ಪಂಚವಾರ್ಷಿಕ ಪುನರವಲೋಕನ, ಕೋಆರ್ಡಿನೇಟೆಡ್ ಪ್ರಾಜೆಕ್ಟ್ಸ್, ವಾರ್ಷಿಕ ಸಮ್ಮೇಳನ ಹೀಗೆ ಹತ್ತು ಹಲವು ಕಾರ್ಯನಿಮಿತ್ತಗಳಿಂದ ದೇಶಪರ್ಯಟನೆಯಾಗುತ್ತಿತ್ತು. ಉದಾಹರಣೆಗೆ ವಾರ್ಷಿಕ ವೈಟ್‌ಗ್ರಬ್ ವರ್ಕ್‌ಷಾಪ್ ಒಮ್ಮೆ ಉತ್ತರ ಪ್ರದೇಶದ ರಾಣಿಶೌರಿಯಲ್ಲಿ ನಡೆಯಿತು. ನನ್ನ ಕೆಲವು ಮಿತ್ರರು ಅಲ್ಲಿಂದ ಬದರೀನಾಥ್ ಕೇದಾರನಾಥ್‌ಗೆ ಹೋಗಲು ವ್ಯವಸ್ಥೆ ಮಾಡಿಕೊಂಡಿದ್ದರು. ಅವರ ವಾಹನಗಳಲ್ಲಿ ನನಗೊಂದು ಜಾಗವಿರುವುದರಿಂದ ಬರಬಹುದೆಂದು ಸೂಚಿಸಿದರು. ಹಾಗೆ ಬದರೀನಾಥ್ ಮತ್ತು ಕೇದಾರನಾಥ್ ತೀರ್ಥಯಾತ್ರೆಯೂ ಆಯಿತು. ಆಲ್ ಇಂಡಿಯ ಕೋ ಆರ್ಡಿನೇಟೆಡ್ ಪ್ರಾಜೆಕ್ಟ್ ಆನ್ ಬಯಲಾಜಿಕಲ್ ಕಂಟ್ರೋಲ್‌ನ ಪಂಚವಾರ್ಷಿಕ ಪುನರವಲೋಕನ ಸಮಿತಿಯ ಛೇರ್‌ಮನ್ ಆಗಿದ್ದಾಗ ಗುಜರಾತ್‌ನ ಆನಂದ್ ಮತ್ತು ಜುನಾಗಡ್‌ನಲ್ಲಿ ಇದರ ಕೆಲಸವಿದ್ದದ್ದರಿಂದ ದಾರಿಯಲ್ಲಿ ಪೋರ್‌ಬಂದರ್, ದ್ವಾರಕ, ಸೋಮನಾಥ್ ಮುಂತಾದುವನ್ನು ನೋಡುವ ಅವಕಾಶವಾಯಿತು. ಇದರಡಿಯಲ್ಲಿ ಭಾರತದ ಉದ್ದಗಲಕ್ಕೂ ಕಾಶ್ಮೀರದಿಂದ ಕನ್ಯಾಕುಮಾರಿಯವರಿಗೆ ಜೋರ್‌ಹಾಟ್‌ನಿಂದ ಜುನಾಗಡ್‌ವರೆಗೆ ಇರುವ ಹದಿನಾರು ಕೇಂದ್ರಗಳಿಗೆ ಭೇಟಿ ನೀಡಬೇಕಾಯಿತು. ಹೀಗೆ ಹೊಗೆಸೊಪ್ಪಿನ ಸಂಶೋಧನೆ, ಪ್ಲಾಂಟೇಷನ್ ಬೆಳೆಗಳ ಸಂಶೋಧನೆ, ಅರಗು ಸಂಶೋಧನೆ, ಎನ್.ಸಿ.ಐ.ಪಿ.ಎಮ್. ಟೀ ರೀಸರ್ಚ್, ಕಾಫಿ ರೀಸರ್ಚ್ ಮುಂತಾದುವುಗಳ ಪಂಚವಾರ್ಷಿಕ ಪುನರವಲೋಕನ ಸಮಿತಿ ಸದಸ್ಯನಾಗಿ, ಛೇರ್ಮನ್ ಆಗಿ ಈ ವಿಷಯಗಳ ಬಗ್ಗೆ ಸಂಶೋಧನೆ ಆಗುವ ಸ್ಥಳಗಳಿಗೆಲ್ಲ ಭೇಟಿ ಕೊಡಬೇಕಾಯಿತು. ದೇಶದ ಎಲ್ಲಾ ರಾಜ್ಯಗಳಲ್ಲಿ ಒಂದಲ್ಲ ಒಂದು ಸಂಶೋಧನೆ ಕೇಂದ್ರಗಳಿರುವುದರಿಂದ ಇದು ಒಂದು ಬಗೆಯ ದೇಶದ ಐಕ್ಯತೆಯನ್ನು ಸಾಧಿಸಲು ಅನುಕೂಲವಾಗಿದೆ.

ಒಮ್ಮೆ ಉದಯಪುರದಲ್ಲಿ ಸಮ್ಮರ್‌ಸ್ಕೂಲಿನ ಸ್ಪೆಷಲಿಸ್ಟ್ ಆಗಿ ಹೋಗಿದ್ದಾಗ ಭಾನುವಾರದಂದು ಮುಂಜಾನೆ ಆರು ಗಂಟೆಗೆ ಬಾಗಿಲನ್ನು ತಟ್ಟಿ ನಿಮ್ಮ ಸ್ನೇಹಿತರು ನಿಮಗಾಗಿ

ಒಂದು ಕಾರು ಕಳುಹಿಸಿದ್ದಾರೆ, ನೀವು ಎಲ್ಲಿಗೆ ಬೇಕಾದರೂ ಹೋಗಬಹುದೆಂದು ಡ್ರೈವರ್ ಹೇಳಿದರು. ಡೆಲ್ಲಿಯಲ್ಲಿ ನನ್ನ ಕ್ಲಾಸ್‌ಮೇಟ್ ಆಗಿದ್ದ ಡಾ|| ಕೌಲರನ್ನು ಕರೆದು ಎಲ್ಲಿಗೆ ಹೋಗಬಹುದೆಂದು ಕೇಳಿದೆ. ಅವರು ಇಲ್ಲಿಗೆ ಎಂಭತ್ತು ಕಿ.ಮೀ. ದೂರ ನಾಥದ್ವಾರ ಎಂಬ ಪುಣ್ಯಸ್ಥಳವಿದೆ, ದಕ್ಷಿಣದಲ್ಲಿ ತಿರುಪತಿ ಎಷ್ಟು ಮುಖ್ಯವೋ ಹಾಗೆ ಉತ್ತರದಲ್ಲಿ ನಾಥದ್ವಾರದ ಕೃಷ್ಣನ ದೇವಸ್ಥಾನ ಮುಖ್ಯ. ಅಲ್ಲಿಗೆ ಹೋಗಬಹುದೆಂದು ಸೂಚಿಸಿದರು. ಈ ಪುಣ್ಯಕ್ಷೇತ್ರದ ದರ್ಶನವೂ ಆಯಿತು. ಇದನ್ನೇಕೆ ಇಲ್ಲಿ ಪ್ರಸ್ತಾಪಿಸಿದೆ ಎಂದರೆ ಇಂತಹ ಅವಕಾಶಗಳು ನನಗೆ ತಿಳಿಯದೆ ಅರಿಯದೆ ತಾವಾಗಿಯೆ ಬಂದು ಬಾಗಿಲ ತಟ್ಟಿ ಕರೆದುಕೊಂಡು ಹೋದ ಪ್ರಸಂಗಳು ಅನೇಕವಿವೆ. ಗೌಹಾಟಿ ಹತ್ತಿರವಿರುವ ಕಾಮಾಕ್ಯ ದೇವಸ್ಥಾನ, ಅಲಹಬಾದ್ ಸಂಗಮಸ್ನಾನ, ಪೂರಿ ಜಗನ್ನಾಥ ಮತ್ತು ಕೊನಾರಕ್, ಹಿರಾಕುಡ್ ಡ್ಯಾಮ್, ಶ್ರೀನಗರದ ಶಂಕರಾಚಾರ್ಯರ ದೇವಸ್ಥಾನ, ಮಹಾರಾಷ್ಟ್ರದಲ್ಲಿರುವ ಪಂಚಲಿಂಗ ದರ್ಶನ, ಎಲ್ಲೋರ ಅಜಂತ ಗುಹೆಗಳು, ಬೇಲೂರು, ದಕ್ಷಿಣೇಶ್ವರ, ರಾಮಕೃಷ್ಣಮಠ, ಪಾಂಡಿಚೆರಿ ಅರವಿಂದ ಆಶ್ರಮ, ದಕ್ಷಿಣದಲ್ಲಿ ರಾಮೇಶ್ವರ ಇವೆಲ್ಲವನ್ನು ನೋಡಿದ್ದು ಹೀಗೆಯೇ ಅನಿರೀಕ್ಷಿತವಾಗಿಯೆ.

ಡಾರ್ಜಿಲಿಂಗ್‌ನಲ್ಲಿ ಎರಡು ಬಾರಿ ಮುಂಜಾನೆ ಮೂರು ಘಂಟೆಗೆ ಎದ್ದು ಟೈಗರ್ ಹಿಲ್‌ಗೆ ಸ್ಪೆಷಲ್ ಜೀಪ್ ಮಾಡಿಕೊಂಡು ಹೋಗಿ ಕಾದು ಕುಳಿತು ಮುಸುಕಿದ್ದ ಮಂಜು ಮರೆಯಾಗಿದ್ದರಿಂದ, ಕಾಂಚನಜುಂಗ ಪರ್ವತವನ್ನು ಸೂರ್ಯ ಏರುವಾಗ ನೋಡಲು ಆಗದೆ ನಿರಾಸೆಯಾಗಿ ವಾಪಸ್ಸು ಬಂದಿದ್ದೆವು. ಮತ್ತೊಮ್ಮೆ ನಾವು ಇಳಿದುಕೊಂಡಿದ್ದ ಹೋಟಲಿನಿಂದಲೆ ನೋಡಿದಾಗ ಮನೋರಮಣೀಯವಾದ ಬೆಳಗಿನ ಹೊಂಬಣ್ಣದ ಬಿಸಿಲು ಕಾಂಚನಜುಂಗ ಪರ್ವತದ ಮೇಲೆ ಬಿದ್ದಾಗ ಕಂಡ ದೃಶ್ಯ ವರ್ಣಿಸಲಸಾಧ್ಯ. ಇದೊಂದು ಬೆಳಗಿನ ದೃಶ್ಯ ಮತ್ತೊಂದು ಸಹರಾ ಮರುಭೂಮಿಯ ಮರಳಿನ ಮೇಲೆ ಸಂಜೆ ಸೂರ್ಯ ಮುಳುಗುವಾಗ ಬಿದ್ದ ಬೆಳಕಿನ ದೃಶ್ಯ ಮನಸ್ಸಿನಲ್ಲಿ ಚಿರಾಯುವಾಗಿ ನಿಂತಿವೆ.

ಕೋಶ ಓದಿ ತಿಳಿಯುವ ವಿದ್ಯೆ ಜ್ಞಾನಾರ್ಜನೆಗೆ ಆದರೆ ದೇಶ ಸುತ್ತಿ ತಿಳಿಯುವಂತಹ ವಿದ್ಯೆ ಜ್ಞಾನವನ್ನು ಬಳಸುವ ರೀತಿಯನ್ನು ತಿಳಿಸುತ್ತದೆ ಎಂದು ನನ್ನ ಅಭಿಪ್ರಾಯ. ಒಂದು ಸಾರಿ ಪಂಜಾಬ್ ಅಗ್ರಿಕಲ್‌ಚರ್ ಯೂನಿವರ್ಸಿಟಿ ಲೂದಿಯಾನಕ್ಕೆ ಹೋಗಿದ್ದಾಗ ರೈಲ್ವೆ ಸ್ಟೇಷನ್‌ನಿಂದ ಕ್ಯಾಂಪಸ್‌ಗೆ ಹೋಗಲು ಬೆಳಗಿನ ಜಾವ ನಾಲ್ಕು ಗಂಟೆಯಲ್ಲಿ ಒಂದು ಸೈಕಲ್ ರಿಕ್ಷಾವನ್ನು ಗೊತ್ತುಮಾಡಬೇಕಿತ್ತು. ರಿಕ್ಷಾದವರು ತಂಟೆ ತಕರಾರು ಮಾಡುವುದನ್ನು ನೋಡಿದ್ದರಿಂದ ನಿಷ್ಕರ್ಷೆಯಾಗಿ ಎಷ್ಟು ಕೊಡಬೇಕೆಂದು ಇಲ್ಲಿಯೇ ಹೇಳು, ಅಲ್ಲಿ ಹೋದಮೇಲೆ ಚೌಕಾಸಿ ಮಾಡಬೇಡ ಎಂದು ರಿಕ್ಷಾದವರಿಗೆ ಹೇಳಿದೆ. ಅದಕ್ಕೆ ಪ್ರತ್ಯುತ್ತರವಾಗಿ ನಾನು ಎಂದೂ ಹಾಗೆ ಮಾಡಿದವನಲ್ಲ. ನನ್ನ ವೃತ್ತಿಯೂ ಇದಲ್ಲ. ನಾನೊಬ್ಬ ಹಾಲು ವ್ಯಾಪಾರಿ. ದಿವಸಕ್ಕೆ ಸಾವಿರಾರು ರೂಪಾಯಿ ವಹಿವಾಟು ಮಾಡುತ್ತೇನೆ, ವ್ಯಾಯಾಮಕ್ಕಾಗಿ ಬೆಳಗಿನ ಜಾವ ಒಂದು ಗಂಟೆ ನನ್ನ ಸ್ನೇಹಿತನಿಂದ ಸೈಕಲ್ ರಿಕ್ಷಾವನ್ನು ದೇಣಿಗೆಗೆ ತೆಗೆದುಕೊಂಡು ಬಂದು ಈ ಕಸುಬು ಮಾಡುತ್ತೇನೆ. ವ್ಯಾಯಾಮವೂ ಆದ ಹಾಗಾಯಿತು, ಸಂಪಾದನೆಯೂ ಆಯಿತು ಎಂದು ಹೇಳಿ ಬೇಕಿದ್ದರೆ ನೋಡಿ ಎಂದು ಜೇಬಿನಿಂದ ಐದು ಸಾವಿರ ರೂಪಾಯಿ ತೆಗೆದುತೋರಿಸಿ, ನಾನು ಹೋಗುವಾಗ ಇದನ್ನು ಹಾಲಿನವರಿಗೆ ಕೊಟ್ಟು ಹೋಗಬೇಕು ಎಂದ. ಅಪನಂಬಿಕೆ ಹೇಗೆ ಅಪಾರ್ಥಕ್ಕೆ ಈಡು ಮಾಡುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನ!

ಒಮ್ಮೆ ಮದ್ರಾಸಿನಿಂದ ಡೆಲ್ಲಿಗೆ ಹೋಗುವಾಗ ಸ್ಲೀಪರ್ ಕ್ಲಾಸಿನಲ್ಲಿ ಒಬ್ಬ ಪ್ರಯಾಣಿಕ ಒಳ್ಳೆ ಉಡುಪು ಹಾಕಿದ್ದ ಸುಸಂಸ್ಕೃತ ವಿದ್ಯಾವಂತನಂತೆ ಕಾಣಿಸುತ್ತಿದ್ದ. ಎಲ್ಲರ ಜೊತೆಯಲ್ಲಿ ಸಲಿಗೆಯಿಂದ ಸಹಕರಿಸುವವನಂತೆ ವರ್ತಿಸುತ್ತಿದ್ದ. ವಂಚಿಸುವವರಿಂದ ಹೇಗೆ ದೂರವಿರಬೇಕೆಂದು ಸಲಹೆಗಳನ್ನು ಕೊಡುತ್ತಿದ್ದ. ಆ ಕಂಪಾರ್ಟ್‌ಮೆಂಟಿನಲ್ಲಿ ಕೆಲವು ಗಂಟೆಯೊಳಗೆ ಎಲ್ಲರ ಮನಸೆಳೆಯುವ ಬಿಂದುವಾದ. ತಿಂಡಿ ತಿನಸು ಮಾರಾಟಕ್ಕೆ ಬಂದಾಗ ಉದಾರವಾಗಿ ಎಲ್ಲರಿಗೂ ಕೊಂಡು ಕೊಡುತ್ತಿದ್ದ. ನಾನು ಕಿಟಕಿ ಪಕ್ಕದ ಒಂಟಿ ಸೀಟಿನಲ್ಲಿ ಕುಳಿತಿದ್ದು, ಹೊರಗೆ ನೋಡುವುದರಲ್ಲಿ ನಿರತನಾಗಿದ್ದು, ಆಗೊಮ್ಮೆ ಈಗೊಮ್ಮೆ ಇವನ ಕಡೆ ಗಮನ ಹರಿಸುತ್ತಿದ್ದೆ. ಈ ವ್ಯಕ್ತಿಯ ವರ್ತನೆ ನೋಡಿ ನನ್ನ ಮನಸ್ಸಿನಲ್ಲಿ ಏನೋ ಒಂದು ಬಗೆಯ ಅಳುಕು. ರಾತ್ರಿ ಮಲಗುವ ಸಮಯದಲ್ಲಿ ಇವನಿಗಿದ್ದ ಲೋವರ್ ಬರ್ತ್ ಕೇಳಿದವರಿಗೆ ಬಿಟ್ಟುಕೊಟ್ಟು ಮೇಲೆ ಮಲಗಿದ. ಡೆಲ್ಲಿಗೆ ಹೋಗುವ ಈ ಪ್ರಯಾಣಿಕ ಬೆಳಿಗ್ಗೆ ಎದ್ದು ನೋಡಿದರೆ ಪತ್ತೆ ಇಲ್ಲ. ಇವನು ಬಿಟ್ಟುಕೊಟ್ಟಿದ್ದ ಲೋವರ್ ಬರ್ತ್‌ನಲ್ಲಿ ಮಲಗಿದ್ದ ಹೆಣ್ಣುಮಗುವಿನ ಆಭರಣ ಮತ್ತು ತಾಯಿಯ ಚಿನ್ನದ ಸರ ಇರಲಿಲ್ಲ. ಮತ್ತೊಬ್ಬರು ಒಂದು ಸಾವಿರ ರೂಪಾಯಿ ಸೊಂಟಕ್ಕೆ ಕಟ್ಟಿಕೊಂಡು ಮಲಗಿದ್ದು ನಾಪತ್ತೆ. ಅವನೆಲ್ಲಿ ಇಳಿದು ಹೋದನೆಂದು ಯಾರಿಗೂ ತಿಳಿಯದು. ಕಂಪಾರ್ಟ್‌ಮೆಂಟಿನ ಅಟೆಂಡರ್ ಕೇಳಿದರೆ ಮಧ್ಯರಾತ್ರಿ ಯಾರೋ ಕಾಫಿ ಕುಡಿಯಲು ಇಳಿದರು ಮತ್ತೆ ಬರಲಿಲ್ಲವೆಂದ. ಮುಂದಿನ ಇಪ್ಪತ್ನಾಲ್ಕು ಗಂಟೆ ಡೆಲ್ಲಿ ತಲಪುವ ತನಕ ಕಂಪಾರ್ಟ್‌ಮೆಂಟಿನಲ್ಲಿ ಎಲ್ಲರ ಬಾಯಲ್ಲೂ ಅವನದೇ ಮಾತು. ಆಶ್ಚರ್ಯ, ವಿಸ್ಮಯ ಜನರು ಹೀಗೂ ಇದ್ದಾರಾ ಎಂಬ ಅನುಮಾನ, ಎಲ್ಲರ ಮನಸ್ಸಿನಲ್ಲಿ ಕಾಡಿತ್ತು.

ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಹತ್ಯೆಯಾದ ದಿವಸ ನಾನು ಬನಾರಸ್ ಯೂನಿವರ್ಸಿಟಿಯಲ್ಲಿ ಒಂದು ಕಾನ್‌ಫರೆನ್ಸ್‌ನಲ್ಲಿದ್ದೆ. ಸುಮಾರು ಹತ್ತು ಗಂಟೆಯ ಸಮಯ. ನೂರಕ್ಕೂ ಮೇಲ್ಪಟ್ಟು ಇದ್ದ ಸಮಾವೇಶದಲ್ಲಿ ಯಾರೋ ಒಬ್ಬರು ಬಂದು ವೇದಿಕೆಯ ಮೇಲಿದ್ದ ಸಭಾಧ್ಯಕ್ಷರ ಕಿವಿಯಲ್ಲಿ ಏನೋ ಹೇಳಿದರು. ಸಭಾಧ್ಯಕ್ಷರು ಸಮಾವೇಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದೇನೆ, ಟೀ ವಿರಾಮದ ನಂತರ ಮತ್ತೆ ಸೇರೋಣವೆಂದು ಹೇಳಿ ಎದ್ದರು. ಕಾರಣ ತಿಳಿಯದ ಜನ ಗುಜುಗುಜು ಪ್ರಾರಂಭಿಸಿದರು. ಅಷ್ಟರಲ್ಲಿ ಯಾರೋ ಒಂದು ಟ್ರಾನ್‌ಸಿಸ್ಟರ್ ತಂದು ಸತತವಾಗಿ ಬರುತ್ತಿದ್ದ ವರ್ತಮಾನವನ್ನು ಕೇಳುವಂತೆ ಕೈಯಲ್ಲಿ ಎತ್ತಿಹಿಡಿದರು. ಇಂದಿರಾ ಗಾಂಧಿಯವರನ್ನು ಬಹಳ ಹತ್ತಿರದಿಂದ ಯಾರೋ ಗುಂಡಿಟ್ಟಿದ್ದಾರೆ, ಆಸ್ಪತ್ರೆಗೆ ಸಾಗಿಸಲಾಗಿದೆ ಎಂದಷ್ಟೇ ಬರುತ್ತಿತ್ತು. ಅಷ್ಟರಲ್ಲಿ ಮತ್ತೊಬ್ಬರು ಬಂದು ತೀರಿಕೊಂಡ ಸಮಾಚಾರ ಬಿ.ಬಿ.ಸಿ.ಯಲ್ಲಿ ಬಂದಿದೆ ಎಂದರು. ಕೂಡಲೆ ಕಾರ್ಯಕ್ರಮಗಳನ್ನೆಲ್ಲ ನಿಲ್ಲಿಸಿ ರೇಡಿಯೋಗೆ ಕಿವಿಕೊಟ್ಟು ನಿಂತೆವು. ಕ್ಯಾಂಪಸ್‌ನಿಂದ ಯಾರೂ ಹೊರಗಡೆ ಹೋಗಬಾರದಾಗಿ ವಿನಂತಿಸಿದ್ದರಿಂದ ಕಾನ್‌ಫರೆನ್ಸಿಗೆ ಬಂದಿದ್ದವರೆಲ್ಲ ಗೆಸ್ಟ್ ಹೌಸ್‌ನಲ್ಲೇ ನಿಂತೆವು. ಸಂಜೆಯ ತನಕ ಗಳಿಗೆಗೊಂದು ವದಂತಿ ಬರುತ್ತಿದ್ದವು. ಅಲ್ಲಲ್ಲಿ ಗಲಭೆ ಪ್ರಾರಂಭವಾಗಿದೆಯೆಂಬ ಸುದ್ದಿಯೂ ಬರುತ್ತಿತ್ತು. ದೂರ ಪ್ರಯಾಣದ ರೈಲುಗಳನ್ನು ಸಧ್ಯಕ್ಕೆ ಸ್ಥಗಿತಗೊಳಿಸಲಾಗಿದೆಯೆಂದು ರೈಲ್ವೆ ಸ್ಟೇಷನ್‌ನಿಂದ ವರ್ತಮಾನ ಬರುತ್ತಿತ್ತು. ನನಗೆ ಮರುದಿವಸ ಮದ್ರಾಸಿಗೆ ಟಿಕೆಟ್ ಕಾದಿರಿಸಲಾಗಿತ್ತು. ಅದನ್ನು ಬಿಟ್ಟರೆ ಮತ್ತೆ ಯಾವಾಗ ಸಿಕ್ಕುವುದೆಂಬ ಭರವಸೆ ಇರಲಿಲ್ಲ. ನಾನು ಮತ್ತು ನನ್ನ ಸಹೋದ್ಯೋಗಿಗಳಿಬ್ಬರು ಡಾ॥ ಕುಬ್ರಬಾನು ಮತ್ತು ಡಿ. ರಾಜಗೋಪಾಲ್ ಗಟ್ಟಿ ಮನಸ್ಸು ಮಾಡಿ ಹೊರಟೆವು.

ಅಲ್ಲಿಯ ವ್ಯವಸ್ಥಾಪಕರು ಪ್ರಯಾಣ ಬೇಡವೆಂದು ಬಹಳವಾಗಿ ಕೇಳಿಕೊಂಡರು. ಮುಂದಿನ ದಿನಗಳ ಅನಿಶ್ಚಿತೆಗಳನ್ನು ಗ್ರಹಿಸಿ ಹೇಗಾದರಾಗಲಿ ಎಂದು ಮರುದಿನ ಮಧ್ಯಾಹ್ನ ಮದರಾಸ್ ರೈಲಿಗೆ ಹೊರಟೆವು. ಅಂದು ಬೆಳಗಿನಿಂದ ಬನಾರಸ್‌ನಲ್ಲಿ ನಡೆಯುತ್ತಿದ್ದ ಹಲವಾರು ಅಹಿತಕರ ಘಟನೆಗಳನ್ನು ವಿವರಿಸುತ್ತಿದ್ದರು. ಕ್ಯಾಂಪಸ್‌ನ ಗೇಟಿನಲ್ಲಿಯೆ ಇದ್ದ ಸಿಖ್ಖರ ಶಾಪ್‌ಗಳನ್ನು ಸುಟ್ಟಿದ್ದು, ಕೆಲವರನ್ನು ಅಟ್ಟಿಸಿಕೊಂಡು ಹೋಗಿ ಸಜೀವವಾಗಿ ಸುಟ್ಟಿದ್ದು. ಹೀಗೆಲ್ಲ ವದಂತಿಗಳು ಬರುತ್ತಿದ್ದವು. ನಾವು ಮೂವರು ಸೈಕಲ್ ರಿಕ್ಷಾದಲ್ಲಿ ಹೊರಟಾಗ ಬೀದಿಗಳೆಲ್ಲ ನಿರ್ಜನವಾಗಿದ್ದವು. ಅಂಗಡಿ ಬಾಗಿಲೆಲ್ಲ ಮುಚ್ಚಿದ್ದವು. ಅಲ್ಲಲ್ಲಿ ಪೊಲೀಸ್ ಗಸ್ತು ಹೊಡೆಯುತ್ತಿದ್ದರು. ರೈಲ್ವೇ ಸ್ಟೇಷನ್‌ಗೆ ಬಂದಾಗ ರೈಲು ಹೊರಡುವುದೇ ಇಲ್ಲವೆ ಎಂದು ಯಾರೂ ಹೇಳುವವರಿಲ್ಲ. ಕೆಲವು ಗಂಟೆಗಳ ನಂತರ ಹೊರಡುವುದು ಖಚಿತವಾಯಿತು. ಆದರೆ ದಾರಿಯುದ್ದಕ್ಕೂ ಗಲಭೆಗಳಾಗುತ್ತಿವೆಯೆಂದು ರೈಲು ಮಧ್ಯದಲ್ಲಿ ಎಲ್ಲಿಯಾದರೂ ನಿಲ್ಲಿಸುವ ಸಂಭವ ಇದೆಯೆಂದು ರೈಲ್ವೆ ವಕ್ತಾರರು ಹೇಳಿದರು.

ನಮ್ಮ ಬೋಗಿಯಲ್ಲಿ ಇಬ್ಬರು ಮದರಾಸಿಗೆ ಹೋಗುವ ಸಿಖ್ಖರಿದ್ದರು. ಅವರ ಯೋಗ ಕ್ಷೇಮಕ್ಕಿಂತ ಅವರಿಂದ ಬೋಗಿಯಲ್ಲಿದ್ದವರಿಗೆ ತೊಂದರೆಯಾಗುವ ಭಯ ಎಲ್ಲರನ್ನೂ ಕಾಡುತ್ತಿತ್ತು. ಅವರನ್ನು ಹೇಗೆ ರಕ್ಷಿಸುವುದೆಂದು ಎಲ್ಲರೂ ಸಮಾಲೋಚನೆ ಮಾಡಿ ಅದು ರಿಸರ್ವ್ ಕಂಪಾರ್ಟ್‌ಮೆಂಟ್ ಆದ್ದರಿಂದ ಬೇರೆಯವರನ್ನು ಒಳಗೆ ಬಿಡಬಾರದೆಂದು; ಸ್ಟೇಷನ್ ಬಂದಾಗ ಇವರು ಲ್ಯಾವಟರಿಯಲ್ಲಿರಬೇಕೆಂದು; ರೈಲು ಹೊರಟ ನಂತರ ಹೊರಗೆ ಬರಬೇಕೆಂದು; ಆದಷ್ಟು ಇವರು ತಲೆ ಮುಖ ಮುಚ್ಚಿಕೊಂಡಿರಬೇಕೆಂದು ನಿರ್ಧರಿಸಿದರು. ಆಂಧ್ರಪ್ರದೇಶವನ್ನು ಪ್ರವೇಶಿಸುವವರಗೆ ಹೆಚ್ಚಿನ ತೊಂದರೆಯಾಗಲಿಲ್ಲ. ಆಂಧ್ರಪ್ರದೇಶದುದ್ದಕ್ಕೂ ಎಲ್ಲಾ ಸ್ಟೇಷನ್‌ಗಳಲ್ಲಿ ರೈಲು ನಿಲ್ಲಿಸಿ ಹತ್ತಾರು ಯುವಕರು ಒಳಗೆ ಬಂದು ಹುಡುಕಿ ಇಂದಿರಾಗಾಂಧಿಕಿ ಜೈ ಎಂದು ಕೂಗುತ್ತಿದ್ದರು. ಬೋಗಿಯಲ್ಲಿದ್ದವರು ಜೈ ಎನ್ನದಿದ್ದರೆ ಅವರನ್ನು ಜಗಿದು ಜೈ ಹೇಳುವವರೆಗೆ ಬಿಡುತ್ತಿರಲಿಲ್ಲ. ನಿಮ್ಮಲ್ಲಿ ಸಿಖ್ಖರು ಯಾರಾದರೂ ಇದ್ದರೆ ಹೇಳಿ ಎಂದು ಅರಚುತ್ತಿದ್ದರು. ನಮ್ಮ ಬೋಗಿಯಲ್ಲಿದ್ದ ಇಬ್ಬರು ಸಿಖ್ಖರನ್ನು ಗಡ್ಡ ತೆಗೆದುಬಿಡಿ ಎಂದು ಹೇಳಿದರೆ ಸಾವಿಗೆ ಸಿದ್ಧ ಎಂದರೇ ಹೊರತು ಗಡ್ಡ ತೆಗೆಯಲು ಒಪ್ಪುತ್ತಿರಲಿಲ್ಲ. ಘರ್ಷಣೆ ಯಾಗುತ್ತಿದ್ದ ಸ್ಟೇಷನ್‌ಗಳಲ್ಲಿ ಲ್ಯಾವಟರಿ ಒಳಗೆ ಇವರನ್ನು ಕೂರಿಸಿ ಬಾಗಿಲಲ್ಲಿ ಹೆಂಗಸರನ್ನು ನಿಲ್ಲಿಸಿ ಒಳಗೆ ಹೆಂಗಸರಿದ್ದಾರೆಂದು ಹೇಳಿ ಕಳುಹಿಸುತ್ತಿದ್ದರು. ನಲವತ್ತು ಗಂಟೆಯಲ್ಲಿ ಸೇರಬೇಕಿದ್ದ ರೈಲು ತೊಂಭತ್ತು ಗಂಟೆಗೂ ಮಿಗಿಲಾಗಿ ಮದರಾಸು ಸೇರಿತು. ಎಲ್ಲರೂ ದೀರ್ಘ ನಿಟ್ಟುಸಿರು ಬಿಟ್ಟರು.

ಬ್ರಿಟಿಷ್ ವಿಜ್ಞಾನಿ ಪೀಟರ್ ವಾಕರ್ ತಜ್ಞ ಸಲಹೆಗಾರರಾಗಿ ನಮ್ಮ ಡಿಪಾರ್ಟ್‌ಮೆಂಟಿಗೆ ಬಂದಿದ್ದರು. ಅವರು ಇಂಗ್ಲೆಂಡಿಗೆ ವಾಪಸು ಹೋಗುವ ದಿನ ಬೊಂಬಾಯಿಗೆ ಹೋಗುವ ವಿಮಾನ ತಪ್ಪಿತ್ತು. ಆಗ ಪೂರ್ವಾಹ್ನ ಎರಡು ವಿಮಾನ ಬೊಂಬಾಯಿಗೆ ಹೋಗುವುದಿತ್ತು. ಇವರಿಗೆ ಗೋವಾ ಮುಖಾಂತರ ಹೋಗುವುದರಲ್ಲಿ ಟಿಕೆಟ್ ಆಗಿತ್ತು. ಆದರೆ ಇವರು ಡೈರೆಕ್ಟ್ ಹೋಗುವುದರಲ್ಲೆಂದು ತಿಳಿದು ಹತ್ತುಗಂಟೆಗೆ ಏರ್‌ಪೋರ್ಟಿಗೆ ಹೋಗಿ ಕೌಂಟರ್‌ನಲ್ಲಿ ವಿಚಾರಿಸಿದಾಗ ಇವರ ವಿಮಾನ ಬೆಳಿಗ್ಗೆಯೇ ಹೋಗಿತ್ತು. ಹನ್ನೊಂದು ಗಂಟೆಗೆ ಹೋಗುವುದರಲ್ಲಿ ಸುಮಾರು ಮೂವತ್ತು ಜನ

ವೈಟಿಂಗ್ ಲಿಸ್ಟ್‌ನಲ್ಲಿದ್ದರು. ಅಂದು ಅವರು ಹೋಗದಿದ್ದರೆ ಇಂಗ್ಲೆಂಡ್‌ಗೆ ಹೋಗುವ ವಿಮಾನ ತಪ್ಪುತ್ತಿತ್ತು. ಎಷ್ಟು ಗೋಗರೆದರೂ ಆಗುವುದಿಲ್ಲವೆಂದು ಖಡ್ಡಾಯವಾಗಿ ಹೇಳಿದರು.· ಏನೂ ತೋಚದೆ ಜೋಲುಮುಖ ಹಾಕಿ ಕುಳಿತಿದ್ದೆವು. ಬೊಂಬಾಯಿಯಿಂದ ವಿಮಾನದಲ್ಲಿ ಬಂದ ನನ್ನ ಸ್ನೇಹಿತರಾದ, ಸೀಬಾಗ್ಯೆಗಿಯಲ್ಲಿ ಕೆಲಸ ಮಾಡುತ್ತಿದ್ದ ಡಾ॥ ಸೋಮಶೇಖರ್ ನನ್ನನ್ನು ನೋಡಿ ಏಕೆ ವೀರೇಶ್ ಬಹಳ ಯೋಚನಾಕ್ರಾಂತರಾಗಿರುವಂತೆ ಕಾಣುತ್ತೀರಿ ಎಂದರು. ಇದ್ದ ವಿಷಯ ತಿಳಿಸಿದೆ. ಸ್ವಲ್ಪ ತಡೆಯಿರಿ ಪ್ರಯತ್ನ ಮಾಡಿ ನೋಡುತ್ತೇನೆಂದು ಹೇಳಿ ಒಳಗೆ ಹೋಗಿ ಬಂದು ನಿಮ್ಮ ಕೆಲಸವಾಯಿತೆಂದರು. ಅದು ಹೇಗೆ ಎಂದು ಕೇಳಿದೆ. ನಾವು ಖಾಸಗಿಯವರು ಇದನ್ನೆಲ್ಲಾ ಮಾಡದಿದ್ದರೆ ನಮ್ಮ ಕರ್ತವ್ಯ ನಿಭಾಯಿಸುವುದು ಕಷ್ಟ. ಹೇಗಾಯಿತೆಂದು ಕೇಳಬೇಡಿ ಅಂದರು. ಡಾ ಪೀಟರ್ ವಾಕರ್‌ರವರಿಗೆ ಅವರ ಜೀವನದಲ್ಲಿ ಕಂಡ ಅತ್ಯಾಶ್ಚರ್ಯದ ಸಂಗತಿ ಎನಿಸಿತಂತೆ. ಹೀಗೆಯೂ ಇದೆ ನಮ್ಮ ದೇಶ.

9 ಪ್ರಪಂಚ ಪರ್ಯಟನೆ

ನನ್ನ ಮೊದಲ ಹೊರದೇಶದ ಪ್ರವಾಸ 1975ರ ಮಾರ್ಚಿಯಲ್ಲಿ ನೆದರ್‌ಲ್ಯಾಂಡಿನ ಜೈಸ್ಟ್‌ನಲ್ಲಿ ನಡೆಯಬೇಕಿದ್ದ ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಬಯಲಾಜಿಕಲ್ ಸೈನ್ಸಸ್ ಕನ್‌ವೆನ್‌ಷನ‌ನಲ್ಲಿ ಭಾಗವಹಿಸಲು ಹೊರಟಿದ್ದೆ. ಯೂರೋಪ್‌ನಲ್ಲಿ ಮಾರ್ಚಿ ತಿಂಗಳಲ್ಲಿ ಚಳಿಗಾಲ ಮುಂದುವರಿದಿತ್ತು. ಆಮ್‌ಸ್ಟರ್‌ಡಾಮ್ ಶಿಫೋಲ್ ಏರ್‌ಪೋರ್ಟಿನಲ್ಲಿ ಇಳಿದಾಗ ದಾರಿಯಲ್ಲಿ ಅಕ್ಕಿ ರಾಶಿಗಳನ್ನು ಹಾಕಿದ ಹಾಗೆ ಹಿಮದ ತುಂತುರು ಗುಡ್ಡೆ ಗುಡ್ಡೆಯಾಗಿ ಇದ್ದವು. ಏರ್‌ಪೋರ್ಟಿನಿಂದ ರೈಲ್ವೆ ಸ್ಟೇಷನ್‌ಗೆ ಹೋಗಿ ಆಮ್‌ಸ್ಟರ್‌ಡಾಮಿನಿಂದ ಯೂಟಿರೆಕ್ಟ್‌ಗೆ ಹೋಗಬೇಕಿತ್ತು. ಯೂಟಿರೆಕ್ಟ್‌ನಿಂದ ಟ್ಯಾಕ್ಸಿಯಲ್ಲಿ ಜೈಸ್ಟ್ ಹತ್ತಿರ ಒಂದು ಕಾಡಿನಲ್ಲಿದ್ದ ವುಡ್ಸ್ ಹೋಟೆಲ್‌ನಲ್ಲಿ ಕನ್‌ವೆನ್‌ಶನ್ ನಡೆಯುವ ಸ್ಥಳಕ್ಕೆ ಹೋಗಲು ಟ್ಯಾಕ್ಸಿಯವನಿಗೆ ಕೈಸನ್ನೆ ಬಾಯಿಸನ್ನೆ ಮಾಡಿ ಹೇಳಬೇಕಾಯಿತು. ಭಾರತೀಯರು ತಿಳಿದಿರುವಂತೆ ಯೂರೋಪಿಯನ್‌ರಿಗೆಲ್ಲ ಇಂಗ್ಲಿಷ್ ಭಾಷೆ ಬಾರದು. ಪ್ರವಾಸಿಗರು ಇಂಗ್ಲಿಷ್‌ನಲ್ಲಿ ಏನನ್ನಾದರೂ ಕೇಳಬೇಕಿದ್ದರೆ ನೆದರ್‌ಲ್ಯಾಂಡಿನ ಮುಖ್ಯ ಸ್ಥಳಗಳಲ್ಲಿ 'ವಿವಿವಿ' ಎಂಬ ಮೂರು ಇಂಗ್ಲೀಷ್ ಅಕ್ಷರಗಳನ್ನು ತ್ರಿಕೋಣದೊಳಗೆ ಬರೆದ ಬೋರ್ಡ್‌ಗಳಿರುವಲ್ಲಿ ಮಾತ್ರ ಸಾಧ್ಯ. ಬೇರೆಯವರಿಗೆ ಇಂಗ್ಲಿಷ್ ಬಾರದು. ಟ್ಯಾಕ್ಸಿಯವನು ಹೋಟೆಲ್ ಮುಂದೆ ನಿಲ್ಲಿಸಿ ಮರುಮಾತಾಡದೆ ಕೊಟ್ಟ ದುಡ್ಡಿಗೆ ಚಿಲ್ಲರೆ ಕೊಟ್ಟು ಹೊರಟುಹೋದ. ಅಂದು ಭಾನುವಾರವಾದ್ದರಿಂದ ಎಲ್ಲರಿಗೂ ರಜ, ಹೊರಗಡೆ ಯಾರೊಬ್ಬರೂ ಇಲ್ಲ. ಕೊರೆಯುವ ಚಳಿ, ನನ್ನಲ್ಲಿ ಓವರ್ ಕೋಟಾಗಲಿ ಹ್ಯಾಟಾಗಲಿ ಬೆಚ್ಚನೆಯ ಉಡುಪಾಗಲಿ ಏನೂ ಇರಲಿಲ್ಲ. ಸೂಟ್‌ಕೇಸ್ ಹಿಡಿದ ಕೈ ಮರದಂತಾಗಿತ್ತು. ಬಾಗಿಲಲ್ಲಿದ್ದ ಬೆಲ್ ಒತ್ತಿದಾಗ ಹುಡುಗಿಯೊಬ್ಬಳು ಬಂದು ಮಿಣ ಮಿಣನೆ ಮುಖ ನೋಡಿದಳು. ಅವಳಿಗೆ ಇಂಗ್ಲಿಷ್ ಬಾರದು ನನಗೆ ಡಚ್‌ಬಾರದು. ಪುಣ್ಯಕ್ಕೆ ಎದುರಿಗೆ ಒಂದು ಬೋರ್ಡ್, ನಾಳಿನ ಕಾರ್ಯಕ್ರಮವನ್ನು ವಿವರಿಸಿ ಬರೆದಿತ್ತು. ಅದರತ್ತ ಕೈ ತೋರಿಸಿದೆ. ಆಗ ಅವಳಿಗೆ ನಾನು ಬಂದ ಉದ್ದೇಶ ಅರ್ಥವಾಯಿತು. ಕನ್‌ವೆನ್‌ಶನ್‌ಗೆ ಬರುವವರ ಪಟ್ಟಿಯನ್ನು ತೆಗೆದು ನೋಡಿ ನಾನು ಭಾರತೀಯನಾದ್ದರಿಂದ ನನ್ನ ರೂಮು ಗುರುತಿಸಲು ಸಾಧ್ಯವಾಯಿತೆಂದು ಕಾಣುತ್ತದೆ. ಕೈಸನ್ನೆ ಮಾಡಿ ಕರೆದಳು. ಅವಳನ್ನು ಹಿಂಬಾಲಿಸಿದೆ, ನಾಲ್ಕನೆಯ ಮಹಡಿಯ ಮೇಲಿದ್ದ ರೂಮ್ ಒಂದನ್ನು ತೆರೆದು ಬೀಗದಕೈ ಕೈಗೆ ಕೊಟ್ಟು ಮಾಯವಾದಳು.

ಹಿಂದಿನ ದಿನ ಮಧ್ಯಾಹ್ನ ಊಟ ಮಾಡಿದ್ದು. ಬೊಂಬಾಯಿಂದ ರಾತ್ರಿ ಒಂದು ಗಂಟೆಗೆ ಹೊರಟ ವಿಮಾನದಲ್ಲಿ ಊಟ ಕೊಟ್ಟಿದ್ದು ಸರಿಯಾಗಲಿಲ್ಲ. ಮುಂಜಾನೆ ಪ್ಯಾರಿಸ್ ಸೇರಿದಾಗ ಆಮ್‌ಸ್ಟರ್‌ಡಾಮಿಗೆ ಹೋಗುವ ವಿಮಾನ ಹೊರಡುವ ಸಿದ್ಧತೆಯಲ್ಲಿತ್ತು. ಯೂರೋಪ್ ಅಮೇರಿಕಾದಲ್ಲಿ ಪ್ರಯಾಣ ಒಂದು ಗಂಟೆಯ ಒಳಗಿದ್ದರೆ ನಮ್ಮಲ್ಲಿ ಕೊಟ್ಟ ಹಾಗೆ ಕಾಫಿ ತಿಂಡಿ

ಏನೂ ಕೊಡುವುದಿಲ್ಲ. ಯೂಟಿರೆಕ್ಟ್ ರೈಲ್ವೆ ಸ್ಟೇಷನ್‌ನಲ್ಲಿ ಏನಾದರೂ ತಿನ್ನಬಹುದಿತ್ತು. ಹೇಗಿದ್ದರೂ ಹೋಟೆಲಿಗೆ ಹೋಗುತಿದ್ದೇನಲ್ಲ ಅಲ್ಲಿ ತಿನ್ನಬಹುದೆಂದು ದಾರಿಯಲ್ಲಿ ಏನನ್ನೂ ತಿನ್ನಲಿಲ್ಲ. ಭಾನುವಾರವಾದ್ದರಿಂದ ನಾನು ಇಳಿದುಕೊಂಡಿದ್ದ ಹೋಟೆಲಿನಲ್ಲಿ ಊಟ ತಿಂಡಿಯ ವ್ಯವಸ್ಥೆ ಏನೂ ಇರಲಿಲ್ಲ. ಅದೂ ಅಲ್ಲದೆ ಆ ಹೋಟೆಲ್ ಕನ್‌ವೆನ್‌ಷನ್ ಕಾನ್‌ಫರೆನ್ಸ್‌ಗಳಿಗೆ ಮೀಸಲಾಗಿತ್ತು. ಹೊಟ್ಟೆ ಹಸಿದು ಸಂಕಟವಾಗುತ್ತಿತ್ತು. ಹೋಟೆಲ್ ಇಡೀ ಹುಡುಕಿದರೂ ಯಾರೊಬ್ಬರ ಸದ್ದಿಲ್ಲ. ಬಾಗಿಲು ತೆಗೆದ ಹುಡುಗಿಯ ಸುಳಿವೇ ಇಲ್ಲ. ಕಾರಿಡಾರ್‌ಗಳಲ್ಲಿ ತಿಂಡಿ ಪಾನೀಯ ಇಟ್ಟಿದ್ದ ಕಪಾಟುಗಳಿದ್ದವು. ಕಾಯಿನ್ ಹಾಕಿ ತೆಗೆಯಲು ನನ್ನಲ್ಲಿ ಅವಕ್ಕೆ ಸೂಕ್ತವಾದ ಕಾಯಿನ್‌ಗಳಿರಲಿಲ್ಲ. ಹೊರದೇಶದ ಪ್ರಯಾಣದನುಭವವಿಲ್ಲದ್ದರಿಂದ ಬ್ಯಾಗಿನಲ್ಲಿ ಬಿಸ್ಕತ್ ಅಥವಾ ಬೇರೆ ತಿಂಡಿಯನ್ನೇನು ತಂದಿರಲಿಲ್ಲ. ರೂಮಿನಲ್ಲಿ ಸದಾ ಬರುತ್ತಿದ್ದ ಬಿಸಿ ನೀರೇ ಆಧಾರ. ನನಗೆ ಗ್ಯಾಸ್ಟ್ರಿಕ್ ತೊಂದರೆ ಇದ್ದದರಿಂದ ಮತ್ತೂ ತೊಂದರೆಯಾಯಿತು. ಮರುದಿನ ಮುಂಜಾನೆಯ ತನಕ ಜಾಗರಣೆ ಮಾಡಿದ್ದಾಯಿತು. ದೂರ ಪ್ರಯಾಣಕ್ಕೆ ತಿನ್ನಲು ಏನಾದರೂ ಜೊತೆಯಲ್ಲಿ ರಬೇಕೆಂಬ ಮೊದಲಪಾಠ ಅಂದೇ ಅರಿವಾಯಿತು. ಮುಂದೆ ಎಲ್ಲಿ ಹೊರಟರೂ ಮಡದಿ ಮಾಡಿದ ಅವಲಕ್ಕಿ, ಕೊಬ್ಬರಿ, ಕಡಲೆಬೀಜ, ದ್ರಾಕ್ಷಿ ಗೋಡಂಬಿಯನ್ನು ಹದವಾಗಿ ಬೆರಸಿದ ಬುತ್ತಿ ತಯಾರಾಗುತ್ತಿತ್ತು. ಮುಂದೆಂದೂ ಇಂತಹ ಹಸಿವಿನ ಬಾಧೆಗೆ ಎಡೆಯಾಗಲಿಲ್ಲ.

ಜೈಸ್ಟ್‌ನಲ್ಲಿ ಈ ಕಾಡೊಳಗಿದ್ದ ಭವ್ಯವಾದ ಹೋಟಲಿನ ವಾತಾವರಣ ಸೌಮ್ಯವಾಗಿತ್ತು. ನಾಲ್ಕು ದಿವಸದ ಕನ್‌ವೆನ್‌ಶನ್‌ನಲ್ಲಿ ಬಂದ ಉದ್ದೇಶವನ್ನು ಬಿಟ್ಟರೆ ಬೇರೆ ಯಾವ ಹವ್ಯಾಸವೂ ಇರಲಿಲ್ಲ. ಸುಮಾರು ನೂರು ಜನರೊಳಗಿದ್ದ ಈ ಸಮಾವೇಶದಲ್ಲಿ, ನಾಲ್ಕು ದಿವಸದಲ್ಲಿ ನಿಕಟವಾದ ಸಂಪರ್ಕ ಬೆಳೆಯಿತು. ಮುಂದೆ ಹತ್ತಾರು ವರುಷಗಳವರೆಗೂ ಕೆಲವರು ಪತ್ರವ್ಯವಹಾರ ನಡೆಸುತ್ತಿದ್ದರು ಹಾಗೂ ಬೆಂಗಳೂರಿಗೆ ಭೇಟಿಕೊಡುತ್ತಿದ್ದರು. ನಾನು ಹಿಮಾಲಯ ವಿರುವ ದೇಶದಿಂದ ಹೋಗಿದ್ದರೂ ಹಿಮ ಬೀಳುವುದು ನೋಡಿದ್ದು ಮೊದಲ ಬಾರಿಗೆ ಇಲ್ಲಿ. ಒಂದು ದಿನವೆಲ್ಲ ಹೂವು ಉದುರಿದ ಹಾಗೆ ಹಿಮ ಬೀಳುತ್ತಿತ್ತು, ಕಾಡೆಲ್ಲ ಬೆಳ್ಳಗಾಯಿತು.

ಅರಿಯದೆ ಬೀಫನ್ನು ತಿಂದಿದ್ದು ಮೊದಲು ಇಲ್ಲಿಯೇ. ಷೆಲ್ ಕಂಪನಿಯವರು ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಆ ದೇಶದ ಅತ್ಯುತ್ತಮವಾದ ಆಹಾರವಾದ ಒಂದು ಬಗೆಯ ಮಾಂಸದ ಭಕ್ಷ್ಯ. ಕೈಮದ ಹಾಗೆ ಸಣ್ಣ ಸಣ್ಣ ಚೂರು ಮಾಡಿದ ಮಾಂಸದ ಗುಡ್ಡೆ. ಅದಕ್ಕೆ ಪಕ್ಕದಲ್ಲಿ ಚಾಕಲೇಟಿನ ಸಾಸೇಜ್ ಕಪ್ಪಿನಲ್ಲಿಟ್ಟಿದ್ದರು. ಬೇರೆಯವರು ಹೇಗೆ ತಿನ್ನಲು ಪ್ರಾರಂಭಿಸಿದರೋ ಹಾಗೆ ನಾನು ಸಾಸೇಜನ್ನು ಆ ಭಕ್ಷ್ಯೆಯ ಮೇಲೆ ಹಾಕಿಕೊಂಡು ತಿನ್ನಲು ಪ್ರಾರಂಭಿಸದೆ. ಐಸ್‌ಕ್ರೀಮಿನ ಹಾಗೆ ತಣ್ಣಗಿರುವುದನ್ನು ಬಿಟ್ಟು ಬೇರೆ ಯಾವ ತರಹದ ಗಮನವಾಗಲಿ ಅಥವಾ ಮಾಂಸದ ಸುಳಿವಾಗಲಿ ತೋರುತ್ತಿರಲಿಲ್ಲ. ನನ್ನ ಪಕ್ಕದಲ್ಲಿ ಕುಳಿತಿದ್ದ ಮಿತ್ರರು ಡಾ|| ಸಿ.ಎ. ಎಡ್‌ವರ್ಡ್ಸ್ ನನ್ನ ಕಡೆ ನೋಡಿ ನೀವು ತಿನ್ನುತ್ತಿರುವುದೇನೆಂದು ತಿಳಿಯಿತೆ! ಅದು ಬೇಯಿಸದೆ ಇರುವ ಬೀಫ್ ಅಂದರು. ಅಷ್ಟರಲ್ಲಿ ಅರ್ಧಭಾಗ ಮುಗಿಸಿದ್ದೆ. ಅವರು ಹೇಳಿದ ನಂತರ ಮನಸ್ಸಿನಲ್ಲಿ ಏನೋ ಒಂದು ಬಗೆಯ ಕಸಿವಿಸಿ, ಮಾಡಬಾರದದ್ದೇನನ್ನೋ ಮಾಡಿರುವ ದೋಷ ಅನ್ನುವ ಹಾಗಾಯಿತು. ನಂತರ ಆ ಭಕ್ಷ್ಯದ ರುಚಿಯೇ ಬೇರೆ ಆಯಿತು. ಅವರ ಸಮಾಧಾನಕ್ಕೋಸ್ಕರ ನನಗೇನೂ ಹಾಗೆ ಅನ್ನಿಸಲಿಲ್ಲ ಚೆನ್ನಾಗಿದೆ ಎಂದೆ. ಅದು ಬೇಯಿಸದಿದ್ದರೂ ಚಿಲ್ಲಿಂಗ್ ಮಾಡಿದ್ದರಿಂದ ಬೇಯಿಸಿದಷ್ಟೇ ಮೃದುವಾಗಿತ್ತು. ಅಂತು ಮುಂದೆ ಅದನ್ನು ಪೂರ್ತಿ

ತಿನ್ನಲಾಗಲಿಲ್ಲ. ಅದು ಮನಸ್ಸಿನ ಭ್ರಮೆಯೆ ಹೊರತು ಆಹಾರಕ್ಕೆ ಅಂಟಿದ ಪಾಪದಿಂದಲ್ಲ. ಹಿಂದೂಗಳು ಬೀಫ್ ತಿನ್ನುವುದು ಪಾಪ ಅನ್ನುವುದು ಎಷ್ಟು ರಕ್ತಗತವಾಗಿ ಬಂದಿದೆ ಅಂದರೆ ಮನಸಾರೆ ಇಷ್ಟಪಟ್ಟು ಬೀಫ್ ತಿನ್ನಲು ಇಂದಿಗೂ ಆಗದು. ವಿಮಾನದಲ್ಲೂ ಕೂಡ ಹಿಂದೂ ಮೀಲ್ ಎಂದು ಪ್ರತ್ಯೇಕ ಕೊಡುತ್ತಾರೆ. ಇದು ಸಸ್ಯಾಹಾರಕ್ಕಿಂತ ಭಿನ್ನ. ಮಾಂಸಹಾರ ಊಟ ಕೊಡುವಾಗ ಬೀಫ್‌ಗೆ ಬದಲಾಗಿ ಚಿಕನ್, ಲ್ಯಾಂಬ್ ಅಥವಾ ಫಿಷ್ ಕೊಟ್ಟರೆ ಅದು ಹಿಂದೂಮೀಲ್. ಮುಸಲ್ಮಾನರು ಹಂದಿಯನ್ನು ತಿನ್ನದಿರುವುದಕ್ಕೆ ಒಂದು ವೈಜ್ಞಾನಿಕ ಕಾರಣವಿದೆ. ಆದರೆ ಮಾಂಸಹಾರಿ ಹಿಂದೂಗಳು ದನ ತಿನ್ನದಿರುವುದಕ್ಕೆ ವೈಜ್ಞಾನಿಕ ಕಾರಣ ಹೇಳುವುದು ಕಷ್ಟ. ಬಹುಶಃ, ಗೋವು ನಮ್ಮೆಲ್ಲರ ಕಾರ್ಯಭಾರದ ಬಿಂದುವಾಗಿದ್ದರಿಂದ ಗೋಮಾಂಸ ನಿಷೇಧವಿರಬೇಕು.

ನೆದರ್‌ಲ್ಯಾಂಡಿನವರು ತಿನ್ನುವಷ್ಟು ಕೊಕೊವನ್ನು ಬಹುಶಃ ಮತ್ತಾವ ದೇಶದವರು ತಿನ್ನಲಾರರೆಂದು ನನ್ನ ನಂಬಿಕೆ. ಇದನ್ನು ಉಪಯೋಗಿಸದ ಆಹಾರವಿಲ್ಲವೆಂದು ಹೇಳಬಹುದು. ಚಾಕೋಲೇಟ್ ಅಲ್ಲದೆ ವಿವಿಧ ರೂಪದಲ್ಲಿ ಕೊಕೊ ಉಪಯೋಗಿಸುತ್ತಾರೆ. ಈ ಕಾರಣದಿಂದ ಲೇನೋ ಡಚ್ಚರು ಎತ್ತರದಲ್ಲಿ ಪ್ರಪಂಚದ ಇತರೆ ದೇಶಗಳ ಸರಾಸರಿ ಎತ್ತರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಎತ್ತರವಿರುವುದು. ಮುನ್ನೂರು ಮೈಲಿ ಉದ್ದದ ಈ ದೇಶ ಯೂರೋಪಿನಲ್ಲಿ ಅತಿ ಹೆಚ್ಚು ಜನ ಸಂಖ್ಯೆ ಪ್ರತಿ ಚ.ಕಿ.ಮೀ.ಗೆ ಇಲ್ಲಿ ಇರುವುದು. (419/ಚ.ಕಿ.ಮೀ.- 1987). ಇಲ್ಲಿ ಅತಿ ಹೆಚ್ಚು ಎತ್ತರವಾದ ಪ್ರದೇಶ ಸಮುದ್ರ ಮಟ್ಟಕ್ಕಿಂತ 300 ಅಡಿ ಎತ್ತರದ್ದು. ಎಲ್ಲೆಲ್ಲೂ ನೀರು ತುಂಬಿದ ಕಾಲುವೆಗಳು, ವಿಂಡ್‌ಮಿಲ್ ಏತಗಳು. ಆಮ್‌ಸ್ಟರ್‌ಡಾಮ್ ನಗರದಲ್ಲಿ ಪ್ರತಿ ಮನೆಗೆ ಕಾರಿನಲ್ಲೂ ಹೋಗಬಹುದು, ದೋಣಿಯಲ್ಲೂ ಹೋಗಬಹುದು. ಈ ಊರಲ್ಲಿ ಒಟ್ಟು ಒಂದು ಸಾವಿರ ಸೇತುವೆಗಳಿವೆಯಂತೆ.

ಸೋಮವಾರದಿಂದ ಗುರುವಾರದವರೆಗೆ ನಡೆದ ಕನ್‌ವೆನ್‌ಷ‌ ಆದ ನಂತರ ಶುಕ್ರವಾರ ಸಂಜೆ ಲಂಡನ್ನಿಗೆ ಹೋಗಲು ಟಿಕೆಟ್ ಆಗಿತ್ತು. ಆದರೆ ವೀಸ ಇರಲಿಲ್ಲ. ಆಮ್‌ಸ್ಟರ್‌ಡಾಮಿಗೆ ಹೋಗಿ ಬ್ರಿಟಿಷ್ ಎಂಬಸಿಯಿಂದ ವೀಸಾ ತೆಗೆದುಕೊಂಡು ಹೋಗಲು ತೊಂದರೆ ಇಲ್ಲ, ಸುಲಭವಾಗಿ ದೊರೆಯುವುದೆಂದು ನಾನು ಇಂಡಿಯಾದಿಂದ ಹೊರಡುವ ಮುನ್ನವೇ ಹೇಳಿದ್ದರು. ಅದೇ ಪ್ರಕಾರ ಜೈಸ್ಟ್‌ನಿಂದ ಕಾರಿನಲ್ಲಿ ಬಂದು ಆಮಸ್ಟರ್‌ಡಾಮಿನಲ್ಲಿ ವಿಚಾರಿಸಿದಾಗ ವೀಸಾ ಕೊಡುವುದು ರಾಟರ್‌ಡಾಮಿನಲ್ಲಿ ಎಂದಾಯಿತು. ನನ್ನ ಹತ್ತಿರವಿದ್ದದ್ದು ಕೇವಲ ಹತ್ತು ಪೌಂಡು. ರಾಟರ್‌ಡಾಮ್ ಅಲ್ಲಿಂದ 80 ಮೈಲಿ. ಹೇಗೆ ಮಾಡಿದರೂ ಅಂದು ರಾಟರ್‌ಡಾಮ್‌ಗೆ ಹೋಗಿ ವೀಸ ತೆಗೆದುಕೊಂಡು ಪುನಃ ಆಮ್‌ಸ್ಟರ್‌ಡಾಮಿಗೆ ಬಂದು ಐದು ಗಂಟೆಯೊಳಗೆ ವಿಮಾನ ಹತ್ತುವ ಸಾಧ್ಯತೆ ಇರಲಿಲ್ಲ. ಆಗಲೆ ಮಧ್ಯಾಹ್ನ ಒಂದು ಗಂಟೆ ಸಮಯ. ಮರುದಿನ ಶನಿವಾರ ರಜ. ಅಲ್ಲಿ ಮೂರು ರಾತ್ರಿ ಕಳೆಯಬೇಕಿತ್ತು. ಮುಂಚೆಯೇ ಕಾದಿರಿಸದಿದ್ದರೆ ವಾರಾಂತ್ಯದಲ್ಲಿ ಯಾವ ಹೋಟೆಲಿನಲ್ಲೂ ಜಾಗ ಸಿಗುವುದಿಲ್ಲ, ಜೊತೆಗೆ ದುಡ್ಡಿಲ್ಲ. ಯೂರೋಪಿನಲ್ಲಿ ಆವಮ್‌ಸ್ಟರ್‌ಡಾವಮ್ ಮತ್ತು ಕೋಪನ್‌ಹೇಗ್ ಪ್ರವಾಸಿಗರಿಗೆ ಆಕರ್ಷಿಸುವ ಎಲ್ಲಾ ಮನರಂಜನೆಯೂ ದೊರೆಯುವ ಸ್ಥಳಗಳು. ನನ್ನನ್ನು ಕಾರಿನಲ್ಲಿ ಇಳಿಸಿ ಹೋಗಿದ್ದ ಜಾಗ ಡೈಮ್‌ಗೆ ಪುನಃ ಹೋದೆ. ನನ್ನ ಸ್ನೇಹಿತರು ಕ್ಲೈವ್ ಎಡ್‌ವರ್ಡ್ಸ್ ಒಂದೆರಡು ಗಂಟೆ ಅಲ್ಲಿದ್ದು

ಹೋಗುತ್ತೇವೆಂದು ಹೇಳಿದ್ದರು. ಅದೃಷ್ಟವಶಾತ್ ಅವರು ಸಿಕ್ಕಿದರು. ಅವರಿಂದ ನಲವತ್ತು ಪೌಂಡು ಸಾಲ ಪಡೆದು ಅವರ ನೆರವಿನಿಂದಲೇ ದುಬಾರಿಯಲ್ಲದ ಒಂದು ಹೋಟೆಲ್ ಬುಕ್ ಮಾಡಿ ಇಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದಾಯಿತು.

ಹಿಂದಿನ ಭಾನುವಾರ ಊಟವಿಲ್ಲದೆ ಸೊರಗಿದ ಪ್ರಯುಕ್ತವೇನೋ ಅಂದು ರಾತ್ರಿ ವಿಪರೀತ ಹೊಟ್ಟೆನೋವು ಪ್ರಾರಂಭವಾಯಿತು. ಮಲದಲ್ಲಿ ರಕ್ತಸ್ರಾವವೂ ಕಂಡಿತು. ರಾತ್ರಿ ಎರಡು ಗಂಟೆಯ ಸಮಯದಲ್ಲಿ ಹೋಟೆಲ್ ಮಾಲಿಕ ಇದ್ದ ಕೊಠಡಿಗೆ ಹೋಗಿ ಬಾಗಿಲು ತಟ್ಟಿದೆ. ಅವನು ಸಿಟ್ಟಿನಿಂದಲೆ ಬಾಗಿಲು ತೆಗೆದು ನನ್ನ ಮುಖ ನೋಡಿದಾಗ ಏನೋ ತೊಂದರೆ ಇರಬೇಕೆಂದು, ಅವನಿಗೆ ತಿಳಿದಿದ್ದ ಅರ್ಧಂಬರ್ಧ ಇಂಗ್ಲಿಷ್‌ನಲ್ಲಿ ಏನಾಯಿತೆಂದು ಕೇಳಿದ. ನನ್ನ ದುಸ್ಥಿತಿಯನ್ನು ಹೇಳಿಕೊಂಡೆ. ಸ್ವಲ್ಪ ಸಮಯ ಯೋಚಿಸಿ ಅಲ್ಲಿಯೆ ಕುಳಿತುಕೊಳ್ಳಲು ಹೇಳಿ, ಹೊರಗಡೆ ಮತ್ತೊಂದು ರೂಮಿನ ಬಾಗಿಲು ತಟ್ಟಿ ಒಬ್ಬರನ್ನು ಕರೆದುಕೊಂಡು ಬಂದರು. ಆತ ಪ್ಯಾರಿಸ್ಸಿನ ಡಾಕ್ಟರು. ವಾರಕ್ಕೆ, ಎರಡು ವಾರಕ್ಕೊಮ್ಮೆ ಬಂದು ಈ ಹೋಟೆಲಿನಲ್ಲಿ ಇಳಿದುಕೊಂಡು ತನ್ನ ಹವ್ಯಾಸವನ್ನು ತೀರಿಸಿಕೊಂಡು ಹೋಗುತ್ತಿದ್ದ. ನನ್ನ ತೊಂದರೆಯನ್ನು ಕೇಳಿ ಎರಡು ಗುಳಿಗೆಗಳನ್ನು ಕೊಟ್ಟು ಆಗೊಂದು ಮತ್ತೆ ಬೆಳಿಗ್ಗೆ ಒಂದರಂತೆ ತೆಗೆದುಕೊಂಡು ಗುಣವಾಗದಿದ್ದರೆ ತಕ್ಷಣ ಆಸ್ಪತ್ರೆಗೆ ಸೇರಬೇಕೆಂದು ಹೇಳಿದ. ಅವನು ಆಸ್ಪತ್ರೆಗೆ ಸೇರ ಬೇಕೆಂದಾಗಲೆ ನನಗೆ ಅರ್ಧ ಜೀವವಾಯಿತು. ಗುಳಿಗೆ ತಿಂದು ಮಲಗಿದ ಮೇಲೆ ಬೆಳಿಗ್ಗೆ ಎಂಟು ಗಂಟೆಯವರೆಗೆ ಎಚ್ಚರವಿಲ್ಲ. ಹೋಟೆಲಿನ ಮಾಲಿಕ ಬೆಳಿಗ್ಗೆ ಬಂದು ವಿಚಾರಿಸಿದಾಗ ನನಗೆ ಸರಿಹೋಗಿತ್ತು. ನೀನು ಅದೃಷ್ಟವಂತ, ಆ ಡಾಕ್ಟರ್ ಇಲ್ಲಿಗೆ ಬಂದಿದ್ದರು. ಇಲ್ಲದಿದ್ದರೆ ಅಷ್ಟುಹೊತ್ತಿನಲ್ಲಿ ಏನು ಮಾಡಬೇಕಿತ್ತೆಂದು ನನಗೂ ತಿಳಿಯದು ಎಂದ. ಆಪತ್ಕಾಲದಲ್ಲಿ ಆದವನೇ ನೆಂಟ. ನಾನು ಯಾರು, ಎಲ್ಲಿಂದ ಬಂದೆ, ಏತಕ್ಕೆ ಬಂದಿದ್ದೆ, ಮುಂದೆಲ್ಲಿಗೆ ಹೋಗು ವುದು, ನನ್ನಲ್ಲಿರುವ ದುಡ್ಡು ಎಷ್ಟು ಎಂದು ಎಲ್ಲವನ್ನು ಕೇಳಿದ ಮೇಲೆ ಮುಂದಿನ ಎರಡು ದಿವಸ ಆಮ್‌ಸ್ಟರ್‌ಡಾಮ್‌ನಲ್ಲಿ ಹೆಚ್ಚಿನ ಖರ್ಚಿಲ್ಲದೆ ಏನನ್ನು ನೋಡಬಹುದು, ಏನನ್ನು ತಿನ್ನಬಹುದು, ರೋಟರ್‌ಡಾಮಿಗೆ ಹೋಗಿ ಬರಲು ಸುಲಭದ ದಾರಿ ಎಲ್ಲವನ್ನು ವಿವರಿಸಿ ಸಹಾಯ ಮಾಡಿದ.

ಆಮ್‌ಸ್ಟರ್‌ಡಾಮಿನಲ್ಲಿ ಒಳ್ಳೊಳ್ಳೆ ಮ್ಯೂಸಿಯಂಗಳು ಇವೆ. ಅದರಲ್ಲಿ ರೈಕ್ಸ್ ಮ್ಯೂಸಿಯಂ ಪ್ರಸಿದ್ಧವಾದದ್ದು. ರೆಂಬ್ರಾಂಟ್, ಹಾಲ್‌ರವರ ಒರಿಜಿನಲ್ ಪೇಂಟಿಗ್ಸ್ ಕೆಲವು ಇಲ್ಲಿವೆ. ದಿನವೆಲ್ಲ ನೋಡಿದರೂ ಮುಗಿಯದಷ್ಟು ಇವೆ. ನಾವು ಬೆಳಿಗ್ಗೆ ಎದ್ದು ಹಲ್ಲು ಉಜ್ಜಿ ಮುಖ ತೊಳೆ ಯುವ ಹಾಗೆ ಡಚ್ಚರು ಮೊದಲು ಮಾಡುವುದು ಕಿಟಕಿ ಗಾಜುಗಳನ್ನು ಒರಸಿ ಹೂವುಗಳನ್ನು ಅಲಂಕಾರವಾಗಿ ಜೋಡಿಸಿ ಇಡುವುದು. ಅದರಿಂದಲೇ ಏನೋ ಆಮ್‌ಸ್ಟರ್‌ಡಾಮ್ ಹೂವಿನ ಮಾರುಕಟ್ಟೆ ಪ್ರಪಂಚಕ್ಕೇ ಹೆಸರುವಾಸಿಯಾಗಿರುವುದು. ಸಿಟಿ ಬಸ್ಸಿಗೆ ಎಲ್ಲಿಗೆ ಹೋದರೂ ಒಂದೇ ರೇಟು. ಆ ಟಿಕೆಟು ಹೋಗಿ ಬರಲು ಎರಡಕ್ಕೂ ಉಪಯೋಗ. ಟಿಕೆಟ್ ಕೊಡಲು ಕಂಡಕ್ಟರ್ ಇಲ್ಲ, ಡ್ರೈವರ್ ಕೊಡುವುದು. ಯಾರೂ ಚೆಕ್ ಮಾಡುವುದಿಲ್ಲ. ಆದರೆ ಯಾರೂ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವುದಿಲ್ಲ. ಆ ದಿನವನ್ನು ಯಾವತ್ತು ಕಂಡೇವು ನಮ್ಮ ದೇಶದಲ್ಲಿ ಅನಿಸುತ್ತಿತ್ತು.

ಲಂಡನ್‌ಗೆ ಹೋದ ತಕ್ಷಣ ಮೊದಲು ಮಾಡಿದ ಕೆಲಸ ಕ್ಲೈವ್ ಎಡ್‌ವರ್ಡ್ಸ್‌ರ ಸಹಾಯದಿಂದ ಹೊಟ್ಟೆಯ ತಜ್ಞ ಡಾಕ್ಟರನ್ನು ಕಂಡು ಸಲಹೆ ಪಡೆದದ್ದು. ಬರ್‌ನಾಡ್ ಷಾ ರವರು ಹೇಳಿರುವ ಹಾಗೆ ಭಾರತೀಯರು ಬೆಂಕಿ ತಿನ್ನುವವರು (ಕಾರ ತಿನ್ನುವವರು). ನೀವು ಕಡಿಮೆಮಾಡಬೇಕೆಂದು ಎಚ್ಚರಿಸಿದರು. ಕೆಲವು ಸಮಯ ಹಾರ್‌ಪೆಂಡಿನಲ್ಲಿ ಒಂದು ಪ್ರೈವೇಟ್ ಹೋಟೆಲಿನಲ್ಲಿ ಎಡ್‌ವರ್ಡ್ಸ್‌ರವರು ನನ್ನನ್ನು ಇಳಿಸಿದ್ದರು. ಇದು ಒಂದು ಬಗೆಯ ಗೆಸ್ಟ್ ಹೌಸ್ ಮಾದರಿ. ಆದರೆ ಯಾವ ಸಂಸ್ಥೆಗೂ ಸೇರಿದ್ದಲ್ಲ. ಖಾಸಗಿಯವರು ನಡೆಸುತ್ತಿದ್ದ ಹೋಟೆಲ್. ಗುರುತು ಪರಿಚಯವಿರುವವರು ಮತ್ತು ಖಾಯಂ ಆಗಿ ಬರುವವರಿಗೆ ಮಾತ್ರ ಮೀಸಲು. ಬೇರೆಯವರಿಗೆ ಪ್ರವೇಶ ಇರಲಿಲ್ಲ. ಅದು ಎಡ್‌ವರ್ಡ್ಸ್‌ರವರ ತಾಯಿಯ ಕಡೆಯವರದಾಗಿದ್ದರಿಂದ ನನ್ನನ್ನು ಅಲ್ಲಿ ಇರಿಸಿದ್ದರು.

ಆ ಹೋಟೆಲ್ ಎಂಟು ಹತ್ತು ರೂಮ್‌ಗಳಿರುವ ದೊಡ್ಡಮನೆ. ಆದರೆ ವಿಶಾಲವಾದ ಡ್ರಾಯಿಂಗ್ ರೂಮ್, ಲೈಬ್ರರಿ, ಬಿಲಿಯರ್ಡ್ಸ್ ರೂಮ್, ಬಾರ್, ಈಜುಕೊಳ, ಹೊರಗಡೆ ಸುಂದರವಾದ ಉದ್ಯಾನ. ಒಮ್ಮೆ ಹತ್ತು ಇಪ್ಪತ್ತು ಜನರಿಗೆ ಮಾತ್ರ ಇಳಿದುಕೊಳ್ಳಲು ಅವಕಾಶ. ನಾನಿರುವಾಗ ಆರು ಸಂಸಾರ ಇಳಿದುಕೊಂಡಿದ್ದರು. ಪ್ರತಿ ಸಂಸಾರದಲ್ಲಿ ಗಂಡ ಹೆಂಡತಿ, ಒಬ್ಬ ಅಥವಾ ಇಬ್ಬರು ಮಕ್ಕಳು. ಮಕ್ಕಳು ಒಂದು ಗುಂಪು, ದೊಡ್ಡವರೆಲ್ಲ ಒಂದು ಗುಂಪು. ನಾನಿದ್ದ ಮೂರು ದಿನ ಅಲ್ಲಿ ಕಳೆದ ಅನುಭವ ಹಲವು ವಿಧದಲ್ಲಿ ಪಾಶ್ಚಾತ್ಯ ದೇಶದಲ್ಲಿ ನಡೆದುಕೊಳ್ಳಬೇಕಾದ ರೀತಿ, ರಿವಾಜುಗಳ ಬಗ್ಗೆ ಪಾಠವಿದ್ದಂತೆ ಆಯಿತು. ಎಲ್ಲರೂ ಒಟ್ಟು ಸೇರುತ್ತಿದ್ದದ್ದು ಬೆಳಿಗ್ಗೆ ತಿಂಡಿ ತಿನ್ನುವ ಸಮಯದಲ್ಲಿ ಮತ್ತು ಸಂಜೆ ಆರು ಗಂಟೆಗೆ ಊಟದ ನಂತರ ಕೂಟದಲ್ಲಿ. ನಮ್ಮ ಹಾಗೆ ಅಡ್ಡದಿಡ್ಡಿ ಕೈಗೆ ಸಿಕ್ಕಿದ್ದನ್ನು ಗಬಗಬನೆ ತಿನ್ನುವ ಜನರಲ್ಲ. ಟೇಬಲ್ ಅರೇಂಜ್ ಮಾಡುವ ಮೊದಲಿಂದ, ತಿಂದು ಬಾಯಿ ಒರಸಿಕೊಳ್ಳುವವರೆಗೆ ಎಲ್ಲವೂ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತದೆ. ಅಲ್ಲಿ ಕೈ ಬಾಯಿ ತೊಳೆಯುವ ಗೋಜಿಲ್ಲ. ಅಕ್ಕಪಕ್ಕದವರಿಗೆ ಸಹಕರಿಸಿ ತಿನ್ನುವ ಪದ್ಧತಿ. ಯಾರಾದರೂ ಬಡಿಸಿಕೊಳ್ಳುವಾಗ ಚೆಲ್ಲಿದರೆ, ತಿನ್ನುವಾಗ ಮೈ ಮೇಲೆ ಬೀಳಿಸಿಕೊಂಡರೆ ದೊಡ್ಡ ಅವಮಾನ ಮಾಡಿದಂತೆ. ಬ್ರಿಟಿಷರು ಸಂಜೆ ಊಟಕ್ಕೆ ಮುಂಚೆ ಕುಡಿಯುವುದು ಸ್ವಲ್ಪ. ಊಟದ ನಂತರ ನಿಧಾನವಾಗಿ ಗಂಟೆ ಗಟ್ಟಲೆ ಕೂತು ಕುಡಿದು ಹರಟೆ ಹೊಡೆಯುವ ವಾಡಿಕೆ. ಯಾರೊಬ್ಬರೂ ಅಮಲೇರಿ ಬೀಳುವ ಸ್ಥಿತಿ ಮುಟ್ಟುವುದಿಲ್ಲ. ಅದು ಅನಿವಾರ್ಯವಾದರೆ ತೋರ್ಪಡಿಸಿಕೊಳ್ಳದೆ ರೂಮ್ ಸೇರುವರು.

ನಾಲ್ಕಾರು ಜನ ಕುಳಿತು ಮಾತನಾಡುವಾಗ ಆ ಮಾತಿನ ವೈಖರಿಯೇ ಬೇರೆ. ಮತ್ತೊಬ್ಬರನ್ನು ತೆಗಳಿ ಮಾತನಾಡುವಾಗಲೂ ನಯ ನಾಜೂಕು ಇರುತ್ತದೆ. ಬಹಳ ಕೇವಲ ಆಪ್ತರನ್ನು ಬಿಟ್ಟರೆ ಬೇರೆಯವರ ಮುಂದೆ ಮನಬಿಚ್ಚಿ ಮಾತನಾಡುವವರಲ್ಲ. ಎಷ್ಟೆ ವಿದ್ಯಾವಂತರಾಗಿದ್ದರೂ ಏಷ್ಯನ್ ಆಫ್ರಿಕನ್ನರ ಮಧ್ಯೆ ಕುಳಿತು ಊಟ ತಿಂಡಿ ಮಾಡುವುದನ್ನು ಮನಸಾರೆ ಸಹಿಸರು. ಆದರೂ ಅದನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಬೇರೆಯವರ ನಡೆ ನುಡಿ, ಉಡಿಗೆ ತೊಡಿಗೆ, ಆಚಾರ ವ್ಯವಹಾರ ಗಳನ್ನು ವೀಕ್ಷಿಸುವಾಗ ಪೂರ್ವಾಗ್ರಹಿಸಿ ತಿಳಿದುಕೊಳ್ಳುವರು. ಎದುರಿಗೆ ಎಲ್ಲವೂ ಚೆನ್ನಾಗಿದೆ ಎಂದು ಹೇಳುವವರೆ ಹೊರತು ತಮಗೆ ಹಿಡಿಸದಿದ್ದನ್ನು ಚೆನ್ನಾಗಿಲ್ಲವೆಂದು ಬಹಿರಂಗವಾಗಿ ಹೇಳುವುದಿಲ್ಲ. ಬ್ರಿಟಿಷರು ಪ್ರಪಂಚದಲ್ಲೇ ತಮ್ಮ ಹಿರಿಮೆ ಹೆಚ್ಚೆಂದು ತಿಳಿದವರು. ಊಟದ

ನಂತರ ಮಾತಿಗೆ ಕುಳಿತರೆ ಪ್ರತಿಯೊಬ್ಬರೂ ಒಂದಲ್ಲ ಒಂದು ಸ್ವಾರಸ್ಯಕರವಾದ ಘಟನೆಯನ್ನು ಪ್ರಪಂಚದ ಯಾವುದೋ ಮೂಲೆಯಲ್ಲಿ ನಡೆದದ್ದನ್ನು ಪ್ರಸ್ತಾಪಿಸಿ ಮಾತನಾಡುವರು. ಬಹುತೇಕ ಬ್ರಿಟಿಷರಿಗೆ ಪ್ರಪಂಚದ ಒಂದಲ್ಲ ಒಂದು ಭಾಗದ ಅನುಭವ ಇದ್ದೇ ಇರುತ್ತದೆ. ಮಾತನಾಡುವಾಗ ಮತ್ತೊಬ್ಬರದನ್ನು ಕಿವಿಗೊಟ್ಟು ಕೇಳುವರು. ಅವರ ಮಾತು ಪೂರೈಸುವವರೆಗೆ ಮಧ್ಯೆ ಬಾಯಿ ಹಾಕುವವರಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಬ್ರಿಟಿಷರು ಬೇರೆ ಯೂರೋಪಿಯನ್ನರಿಗೆ ಅಥವಾ ಅಮೆರಿಕನ್ನರಿಗೆ ಹೋಲಿಸಿದರೆ ಹಲವಾರು ವಿಷಯಗಳಲ್ಲಿ ಭಿನ್ನವಾಗಿ ಕಾಣುತ್ತಾರೆ. ಈ ಭಿನ್ನತೆಯನ್ನು ಸೂಕ್ಷ್ಮವಾಗಿ ವೀಕ್ಷಿಸಿದವರಿಗೆ ಮಾತ್ರ ತಿಳಿಯುವುದು. ಈ ಭಿನ್ನತೆಯು ಅವರನ್ನು ಒಂದು ಕಾಲದಲ್ಲಿ ಅವರ ರಾಜ್ಯದಲ್ಲಿ ಸೂರ್ಯನೆ ಮುಳುಗುವುದಿಲ್ಲವೆಂಬ ಬಿರುದು ಗಳಿಸುವುದಕ್ಕೆ ಕಾರಣವಿರಬಹುದೆಂದು ನನ್ನ ಊಹೆ. ಇಂಗ್ಲೆಂಡು ಅಷ್ಟು ಸಣ್ಣ ದೇಶವಾಗಿದ್ದರೂ ಅವರಲ್ಲಿರುವ ಭಿನ್ನತೆ ಬಹಳ ಇದೆ. ನಮ್ಮ ದೇಶದಲ್ಲಿ ಇಷ್ಟೊಂದು ಜಾತಿ ಭಾಷೆಗಳಿವೆ, ಎಂದೂ ಒಗ್ಗಟ್ಟಾಗುವುದಿಲ್ಲವೆಂದು ಹೇಳುತ್ತಿದ್ದ ಪ್ರಧಾನಿ ಚರ್ಚಿಲ್, ಅವರ ದೇಶದಲ್ಲಿರುವ ಜಾತಿ ಭಾಷೆಗಳನ್ನು ಮರತಿದ್ದರೆಂದು ಕಾಣುತ್ತದೆ. ಇಂಗ್ಲೆಂಡ್, ಸ್ಕಾಟ್‌ಲೆಂಡ್ ವೇಲ್ಸ್, ಐರ್‌ಲೆಂಡ್ ಭೌಗೋಳಿಕವಾಗಿ ಒಂದೇ ಇದ್ದರೂ ಅವರದೇ ಆದ ಭಾಷೆ, ಸಂಸ್ಕೃತಿ ಬೇರೆ ಬೇರೆ ಇವೆ. ಅವರವರ ಮಾತಿನ ಶೈಲಿಯಲ್ಲಿ ಇವನು ಎಡ್‌ವರ್ಡಿಯನ್, ಸ್ಕಾಟಿಷ್, ವೇಲ್ಸ್ ಎಂದು ಹೇಳಬಹುದು.

ನಾನು ಮೊದಲು ಅಮೆರಿಕಾಕ್ಕೆ ಹೋದಾಗ ಒಂದು ದಿನ ವಾಷಿಂಗ್‌ಟನ್‌ನಲ್ಲಿ ಉಳಿದು ಮರುದಿನ ಯು.ಎನ್.ಡಿ.ಪಿ. ಆಫೀಸಿಗೆ ಹೋಗಿ ದುಡ್ಡು ತೆಗೆದುಕೊಂಡು ಮುಂದೆ ಹೋಗ ಬೇಕಿತ್ತು. ವಾಷಿಂಗ್‌ಟನ್ ಸೇರುವಾಗ ಸಂಜೆ ಐದು ಗಂಟೆಯ ಸಮಯ. ನಾವಿಳಿದುಕೊಂಡಿದ್ದ ಜಾಗ ವಸತಿಗೆ ಮಾತ್ರ, ಊಟ ಪಾನೀಯವಿರಲಿಲ್ಲ. ಸಂಜೆ ಊಟಕ್ಕೆ ಹೋಗಲು ಹೋಟೆಲ್‌ನವರನ್ನು ಎಲ್ಲಿ ಹೋಗಬೇಕೆಂದು ಕೇಳಿದಾಗ ಆ ರೋಡಿನಲ್ಲಿ ಎರಡು ಬ್ಲಾಕ್ ಬಿಟ್ಟ ನಂತರ ಊಟದ ಹೋಟೆಲ್ ಇದೆ ಹೋಗಿ ಎಂದರು. ಅದೊಂದು ಇಟಾಲಿಯನ್ ರೆಸ್ಟೋರೆಂಟ್. ಬಾಗಿಲಲ್ಲಿ ಛತ್ರಿ, ಹ್ಯಾಟು, ಓವರ್‌ಕೋಟು, ತೆಗೆದುಕೊಳ್ಳಲು ಒಬ್ಬ, ಎಲ್ಲಿ ಕೂರಬೇಕೆಂದು ತೋರಿಸಲು ಒಬ್ಬ, ಏನು ಬೇಕೆಂದು ಕೇಳಿ ಬರೆದುಕೊಳ್ಳಲು ಒಬ್ಬ, ಹೇಳಿದ್ದನ್ನು ತಂದುಕೊಡುವವನು ಬೇರೆ. ನಾನು ಕೇಳಿದ್ದು ಅಮೆರಿಕಾದ ಹೋಟೆಲ್‌ಗಳಲ್ಲಿ ಸ್ವಸಹಾಯ ಪದ್ಧತಿ, ಬೇಕಾದ್ದನ್ನು ಆರಿಸಿ ಅದರ ಬೆಲೆಕೊಟ್ಟು ತಿಂದು ತಟ್ಟೆಯನ್ನು ಪುನಃ ವಾಪಸು ಇಡಬೇಕೆಂದು. ಇಲ್ಲಿ ನೋಡಿದರೆ ವಿಚಾರಿಸಿಕೊಳ್ಳಲು ಇಷ್ಟೊಂದು ಜನ. ನನ್ನ ಜೇಬಿನಲ್ಲಿದ್ದದ್ದು ಇಪ್ಪತ್ತು ಡಾಲರ್. ಮೆನುಕಾರ್ಡ್ ನೋಡಿ ಅತಿ ಕಡಿಮೆ, ಹತ್ತೊಂಭತ್ತು ಡಾಲರ್‌ಗೆ ಇದ್ದ ವೆಜಿಟೇರಿಯನ್ ಐಟಮ್ ಹೇಳಿ ಕುಳಿತೆ. ಕುಡಿಯಲು ಏನು ಬೇಕು ಎಂದು ಕೇಳಿದ. ನೀರು ಎಂದು ಹೇಳಿದಾಗ ಅವನ ಕಿವಿ ನೆಟ್ಟಗಾಯಿತು. ಅರ್ಧ ಗಂಟೆಯಲ್ಲಿ ಊಟ ಬಂತು. ಆರು ಅಂಗುಲ ಉದ್ದದ ಎರಡು ಕೆಸವಿನ ದಂಟು, ಏಳೆಂಟು ತುಂಡು ಫ್ರೆಂಚ್‌ಫ್ರೈ ಪೊಟಾಟೋ, ಮೂರು ನಾಲ್ಕು ಹೂವುಕೋಸಿನ ತುಂಡುಗಳು. ರುಚಿಗೆ ಹಾಕಿಕೊಳ್ಳಲು ಟೇಬಲ್ ಮೇಲಿದ್ದ ನಾಲ್ಕೈದು ಬಾಟ್ಲಿ ವಿನಿಗರ್ ವಗೈರೆ. ಅದನ್ನು ತಿನ್ನುವಾಗ ಹತ್ತೊಂಭತ್ತು ಡಾಲರಿಗೆ ರೂಪಾಯಿ ಎಷ್ಟಾಯಿತೆಂದು ಮನಸ್ಸಿನಲ್ಲಿ ಲೆಕ್ಕಾಚಾರ ಹಾಕಿ ಆ ದುಡ್ಡಿಗೆ ಇಂಡಿಯಾದಲ್ಲಿ ಏನೇನು ತಿನ್ನಬಹುದಿತ್ತು ಎಂಬ ಯೋಚನೆ ಹೊಟ್ಟೆ ತುಂಬಿತ್ತು. ಊಟದ ನಂತರ ಉಳಿದ ಒಂದು ಡಾಲರ್

ಟಿಪ್ಸ್ ಬಿಡುವ ಮನಸ್ಸೂ ಇರಲಿಲ್ಲ. ಏಕೆಂದರೆ ಮರುದಿನದವರೆಗೆ ಅದಷ್ಟೇ ದುಡ್ಡು ನನ್ನ ಹತ್ತಿರ. ನಾನು ಊಟಕ್ಕೆ ಬರುವಾಗ ಇಳಿದುಕೊಂಡಿದ್ದ ಹೋಟೆಲ್‌ನವನನ್ನು ಊಟಕ್ಕೆ ಎಲ್ಲಿ ಎಂದು ಕೇಳಿದೆನೆ ವಿನಃ, ಇಲ್ಲಿ ಸಮೀಪದಲ್ಲಿ ಎಲ್ಲಿಯಾದರೂ ತಿನ್ನುವ ಕುಡಿಯುವ ಜಾಗಗಳಿವೆಯೆ ಎಂದು ಕೇಳಲಿಲ್ಲ. ಹಾಗೆ ಕೇಳಿದ್ದರೆ ಬಹುಶಃ ಆಗ ಬರ್ಗರ್‌ಕಿಂಗೋ, ಮೆಕ್‌ಡೊನಾಲ್ಡೋ, ಪಿಜ್ಜಾನೋ, ವಿಂಪಿನೋ ತೋರಿಸುತ್ತಿದ್ದರು. ಎರಡು ಡಾಲರ್‌ನಲ್ಲಿ ಹೊಟ್ಟೆ ತುಂಬುವಷ್ಟನ್ನು ತಿನ್ನಬಹುದಿತ್ತು.

ಎರಡನೆ ಬಾರಿ ನಾನು ಅಮೆರಿಕಾಕ್ಕೆ ಹೋಗಿದ್ದು ಆಗಸ್ಟ್ 1979 ರಲ್ಲಿ. ಸಿರಾಕೂಸ್‌ನಲ್ಲಿ ನಡೆದ ಏಳನೆಯ ಅಂತರರಾಷ್ಟ್ರೀಯ ಸಾಯಿಲ್ ಜೂಆಲಜಿ ಕಲೋಕಿಯಂನಲ್ಲಿ ಭಾಗವಹಿಸಲು ಹೋಗಿದ್ದೆ. ಸಿರಾಕೂಸ್‌ನಲ್ಲಿರುವಾಗ ಡಾ॥ ಚಂಪರವರ ಮನೆಯಲ್ಲಿ ಇಳಿದುಕೊಂಡಿದ್ದೆ. ಅಲ್ಲಿಯ ಕೌಂಟಿ ಕ್ಲಬ್ಬಿನವರು ಸಮ್ಮೇಳನದಲ್ಲಿ ಭಾಗವಹಿಸಿದ್ದವರಿಗೆ ಒಂದು ಡಿನ್ನರ್ ಕೊಟ್ಟರು. ಆ ದಿನವೆಲ್ಲ ಸಂಜೆಯವರಿಗೆ ಕೌಂಟಿ ಕ್ಲಬ್ಬಿನ ಕ್ಲಾಮ್‌ಬೇಕ್ ಡಿನ್ನರಿನ ಬಗ್ಗೆ ಎಲ್ಲರ ಬಾಯಲ್ಲೂ ಮಾತು. ನಿಜಕ್ಕೂ ಇದೊಂದು ದೊಡ್ಡ ಡಿನ್ನರ್ ಇರಬೇಕೆಂದು ನಾನು ತಿಳಿದಿದ್ದೆ. ಏಕೆಂದರೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕೌಂಟಿ ಕ್ಲಬ್ಬುಗಳು ಪ್ರತಿಷ್ಠಿತವಾದವು. ಅಲ್ಲಿಯ ಮೆಂಬರ್‌ಷಿಪ್ ಕೆಲವರಿಗೆ ಮಾತ್ರ ಸೀಮಿತ. ಅವರ ಡಿನ್ನರ್‌ಗಳು ಕೂಡ ಭರ್ಜರಿಯಾಗಿರುತ್ತವೆ.

ಸಂಜೆ ಆರು ಗಂಟೆಗೆ ಡಿನ್ನರ್‌ಗೆ ಹೋದಾಗ ಸದ್ದುಗದ್ದಲವೇನು ಹೆಚ್ಚಾಗಿರಲಿಲ್ಲ. ಒಂದು ಹಾಲ್‌ನಲ್ಲಿ ಎರಡು ದೊಡ್ಡ ಡ್ರಮ್‌ಗಳು, ಪಕ್ಕದಲ್ಲಿ ಬೀರಿನ ಪೀಪಾಯಿ, ಚಿಪ್ಸ್ ತುಂಬಿದ ಟ್ರೇಗಳು, ನಾಲ್ಕೈದು ಬಗೆಯ ಸಾಸೇಜ್, ದೊಡ್ಡ ಪಿಂಗಾಣಿ ಊಟದ ತಟ್ಟೆಗಳನ್ನು ಒಂದರ ಮೇಲೊಂದು ಒಟ್ಟಿದ್ದರು. ಎರಡು ಡ್ರಮ್‌ಗಳಲ್ಲಿ ಇದ್ದ ಕ್ಲಾಮ್‌ಗಳಲ್ಲಿ ಒಂದರಲ್ಲಿ ಬೇಯಿಸಿದ ಕ್ಲಾಮ್, ಮತ್ತೊಂದರಲ್ಲಿ ಬೇಯಿಸದೆ ಇದ್ದ ಕ್ಲಾಮ್. ಕ್ಲಾಮ್ ಅಂದರೆ ಸಮುದ್ರದಲ್ಲಿ ಸಿಕ್ಕುವ ಕಪ್ಪೆ ಚಿಪ್ಪಿನ ಮಾದರಿಯ ಉಂಡನೆಯ ಚಿಪ್ಪಿನ ಮೀನು. ಕರಾವಳಿಯಲ್ಲಿ ಇದನ್ನು ಇಲ್ಲಿಯೂ ಉಪಯೋಗಿಸುವವರಿದ್ದಾರೆ. ಅಮೆರಿಕಾದವರಿಗೆ ದೊಡ್ಡ ಸೀಗಡಿಯಂತೆ ಕ್ಲಾಮ್ ಅಪರೂಪದ ಆಹಾರ. ಬೇಯಿಸಿದ ಅಥವಾ ಬೇಯಿಸದೆ ಇದ್ದ ಕ್ಲಾಮ್ ಅವರವರಿಗೆ ಇಷ್ಟವಿದ್ದಂತೆ ತಟ್ಟೆಯಲ್ಲಿ ಹಾಕಿಕೊಂಡು, ರುಚಿಗೆ ತಕ್ಕಂತೆ ಅವರಿಗೆ ಬೇಕಾದ ಸಾಸ್ ತಟ್ಟೆಯ ಪಕ್ಕದಲ್ಲಿ ಇಟ್ಟುಕೊಂಡು, ಎರಡು ಚಿಪ್ಪಿನೊಳಗಿರುವ ಕ್ಲಾಮ್‌ನ್ನು ಬಿಡಿಸಿ, ನಾವು ಕಡಲೆಕಾಯಿ ಸಿಪ್ಪೆ ಬಿಡಿಸಿ ಬಾಯಲ್ಲಿ ಹಾಕಿಕೊಂಡ ಹಾಗೆ ಬಾಯೊಳಗೆ ಹಾಕಿ ತಿನ್ನುವುದು. ಆಗಾಗ ಚಿಪ್ಪಿಗೆ ಸಾಸ್ ಅದ್ದಿ ಉಪ್ಪಿನ ಕಾಯಂತೆ ನೆಂಚಿಕೊಳ್ಳುತ್ತಿದ್ದರು. ಇವನ್ನು ಹೊಟ್ಟೆ ತುಂಬುವಷ್ಟು ತಿಂದು ಬೀರು ಕುಡಿಯುವುದು ಆವತ್ತಿನ ಕ್ಲಾಮ್‌ಬೇಕ್ ಡಿನ್ನರ್. ಅದೇ ಮೊದಲ ಬಾರಿಗೆ ಕ್ಲಾಮ್ ತಿನ್ನುವುದನ್ನು ನಾನು ನೋಡಿದ್ದು. ತಿಂದವರು ಬಹಳ ರುಚಿಯಾಗಿರುತ್ತದೆಯೆಂದು ಹೇಳುತ್ತಾರೆ. ಆದರೆ ಅನುಭವ ಅಭಿರುಚಿ ಇಲ್ಲದ ನನಗೆ ತಿನ್ನುವ ಪ್ರಯತ್ನ ಮಾಡುವ ಮನಸ್ಸೂ ಬರಲಿಲ್ಲ. ಹೊಟ್ಟೆ ತುಂಬಿಸಲು ಬೀರು ಕುಡಿದು ಸಾಕಷ್ಟು ಚಿಪ್ಸ್ ತಿಂದಿದ್ದಾಯಿತು. ಮನೆಗೆ ಬಂದು ಸಿಂಕ್‌ನಲ್ಲಿ ವಾಂತಿ ಮಾಡಿದಾಗ ಮನೆಯವರಿಗೆ ಗಾಬರಿ. ನಡೆದದ್ದನ್ನು ಹೇಳಿದಮೇಲೆ, ಖಾಲಿ ಹೊಟ್ಟೆಯಲ್ಲಿ ಮಲಗಬಾರದೆಂದು

ಉಪ್ಪಿಟ್ಟು ಮಾಡಿ ಬಡಿಸಿದರು. ಪ್ರಪಂಚದ ಜನರೆಲ್ಲ ಮನುಕುಲಕ್ಕೆ ಸೇರಿದವರಾದರೂ ಒಬ್ಬರಿಗೆ ಅಮೃತವಾದದ್ದು ಮತ್ತೊಬ್ಬರಿಗೆ ವಿಷ.

ಮತ್ತೊಂದು ದಿನ ಪ್ರೊಫೆಸರ್ ಒಬ್ಬರು ಪಂಚ್ ಪಾರ್ಟಿಗೆ ಮನೆಗೆ ಕರೆದಿದ್ದರು. ಟೊಮಾಟೋ ಹಣ್ಣಿನ ರಸಕ್ಕೆ ಕೊಂಚ ವೈನೋ, ವಿಸ್ಕಿಯನ್ನೋ ಸೇರಿಸಿ ರುಚಿಗೆ ತಕ್ಕಂತೆ ಮತ್ತೇನನ್ನೋ ಸೇರಿಸಿ ಕುಡಿಯುವ ಪಾನೀಯಕ್ಕೆ ಪಂಚ್ ಎನ್ನುವರು. ಈ ಹೆಸರು ನಮ್ಮ ದೇಶದ ಪಂಚಾಮೃತದಂತೆ ಐದು ಬಗೆಯ ಪದಾರ್ಥಗಳನ್ನು ಮಿಕ್ಸ್ ಮಾಡಿರುವುದಕ್ಕೆ ಪಂಚ್ ಎಂದು ಹೇಳುವರು. ಆ ಪಾರ್ಟಿಯಲ್ಲಿ ಚಿಪ್ಸಿನ ಜೊತೆಗೆ ಪಕೋಡ ಮಾದರಿಯ ಕುಕ್ಕೀಸ್ ಇಟ್ಟಿದ್ದರು. ತಿನ್ನಲು ರುಚಿರುಚಿಯಾಗಿದ್ದವು. ಪಾರ್ಟಿ ಆದ ನಂತರ ಹೊರಡಲು ಸಿದ್ದವಾದಾಗ ಆ ಕುಕ್ಕೀಸ್‌ನ ಒಳಗಡೆ ಏನಿತ್ತೆಂದು ಯಾರಾದರೂ ನೋಡಿದ್ದೀರಾ ಎಂದು ಅಲ್ಲಿದ್ದವರೊಬ್ಬರು ಕೇಳಿದರು. ಒಡೆದು ನೋಡಿದರೆ ಒಳಗೆ ಸಣ್ಣ ಮಿಡತೆ. ತಿನ್ನುವಾಗ ಗರಿಗರಿ ಅನ್ನುತ್ತಿದ್ದದ್ದು ಇವೆ. ಈ ಜಾತಿಯ ಮಿಡತೆಗಳು ಹೇರಳವಾಗಿ ಸಿಕ್ಕುವುದು ಅಪರೂಪವಾದ್ದರಿಂದ ಎಲ್ಲೆಲ್ಲೂ ಇದರಿಂದ ಮಾಡಿದ ತಿಂಡಿ ಸಿಕ್ಕುವುದಿಲ್ಲವೆಂದು ಅದನ್ನು ತಂದವರು ಹೇಳಿದರು. ನಾನು ಚಿಕ್ಕವನಾಗಿರುವಾಗ ಮಲೆನಾಡಿನಲ್ಲಿ ಕೆಲವರು ಕಾಡಿನಲ್ಲಿ ಮರದ ಮೇಲೆ ಗೂಡು ಕಟ್ಟುವ ಕೆಂಪಿರುವೆ ಗೂಡನ್ನು ತಂದು ಹುರಿದು ಚಟ್ನಿ ಮಾಡಿ ತಿನ್ನುತ್ತಿದ್ದರು. ರುಚಿಯ ಜೊತೆಗೆ ಆರೋಗ್ಯಕ್ಕೆ ಒಳ್ಳೆಯದೆಂದು, ಅದರಲ್ಲೂ ವಯಸ್ಸಾದವರಿಗೆ ಕಣ್ಣು ಚೆನ್ನಾಗಿ ಕಾಣುತ್ತವೆಯೆಂಬ ನಂಬಿಕೆ. ವಯಸ್ಸಾದವರು ಕನ್ನಡಕವಿಲ್ಲದೆ ಓದುತ್ತಿದ್ದರೆ ಅವರು ಚಿಗುಳಿ (ಕೆಂಪಿರುವೆ) ತಿಂದವರು ಎಂದು ಹೇಳುತ್ತಿದ್ದರು.

ಮತ್ತೊಮ್ಮೆ ಮೇರಿಲ್ಯಾಂಡಿನಲ್ಲಿ ಡಾ॥ ಗಂಗಾರವರ ಮನೆಯಲ್ಲಿ ಇಳಿದುಕೊಂಡಿದ್ದೆ. ಡಾ॥ ಗಂಗಾರವರು ಬೆಂಗಳೂರು ಪ್ಯಾಲೇಸ್ ಗುಟ್ಟಹಳ್ಳಿಯವರು. ಮೆರಿಲ್ಯಾಂಡಿನ ಅವರ ಮನೆ ಹದಿನೇಳನೆಯ ಮಹಡಿಯ ಮೇಲಿತ್ತು. ಒಂದು ಸಂಜೆ ಹೊರಗಡೆ ಹೋಗುವ ಮುನ್ನ ಅವರ ಆಟೋಮ್ಯಾಟಿಕ್ ರೈಸ್‌ಕುಕ್ಕರ್ ಒಲೆಯ ಮೇಲಿಟ್ಟು ಹೋಗಿದ್ದೆವು. ಹಿಂದೆ ಹಲವಾರು ಸಾರಿ ಹೀಗೆ ಮಾಡಿದ್ದರು. ಅಂದು ಆಟೋಮ್ಯಾಟಿಕ್ ನಿಲ್ಲುವುದು ಹಾಳಾಗಿದ್ದು, ಅನ್ನವೆಲ್ಲ ಸುಟ್ಟು ಮನೆಯಲ್ಲೆಲ್ಲಾ ಹೊಗೆ ತುಂಬಿ ಹೋಗಿತ್ತು. ಅಮೆರಿಕಾದ ಮನೆಗಳಲ್ಲೆಲ್ಲಾ ಸ್ವಲ್ಪಹೊಗೆ ಆವರಿಸಿದರೆ ಅಲಾರಾಮ್ ಬೆಲ್ಲು ಹೊಡೆಯಲು ಪ್ರಾರಂಭಿಸುತ್ತದೆ. ಬಹು ಅಂತಸ್ತಿನ ಮನೆಗಳಾದರೆ ಕಾರಿಡಾರ್‌ನಲ್ಲೆಲ್ಲ ಬೆಲ್ ಬಾರಿಸಲು ಪ್ರಾರಂಭಿಸುತ್ತದೆ. ಆಗ ಆ ಕಟ್ಟಡದಲ್ಲಿದ್ದ ವರೆಲ್ಲ ಮೆಟ್ಟಲು ಮುಖಾಂತರವೇ ಕೆಳಗಿಳಿದು ಬರಬೇಕು. ಬೆಂಕಿ ಅನಾಹುತವಾದಾಗ ಲಿಫ್ಟ್‌ನಲ್ಲಿ ಬರುವುದು ನಿಷಿದ್ಧ. ಹತ್ತಿರವಿರುವ ಅಗ್ನಿಶಾಮಕ ದಳಕ್ಕೆ ಬೆಂಕಿಹತ್ತಿದ ಸೂಚನೆ ಕೂಡಲೆ ತಿಳಿಯುತ್ತದೆ. ಅವರು ಧಾವಿಸಿಬಂದು ಹೊರಗಡೆಯಿಂದ ಕ್ರೇನ್ ಮುಖಾಂತರ ಬೆಂಕಿ ತಗುಲಿದ ಮಹಡಿಗೆ ನೇರವಾಗಿ ಕಿಟಕಿಯಿಂದ ಧುಮುಕಿ ಬೆಂಕಿಯನ್ನು ಶಮನಮಾಡುವರು. ನಾವು ಬರುವಷ್ಟರಲ್ಲಿ ನೂರಾರು ಜನ ಕೆಳಗಿಳಿದು ಹೊರಗೆ ನಿಂತಿದ್ದರು. ಅಗ್ನಿಶಾಮಕ ದಳದವರು ಹೊರಗಿನಿಂದ ಕಿಟಕಿ ಗಾಜು ಒಡೆದು ಒಳಗೆ ಹೋಗಿ ಪ್ರತಿಯೊಂದನ್ನು ವೀಕ್ಷಿಸಿದ್ದರು. ಎಲ್ಲಿಯೂ ಬೆಂಕಿಯ ಸುಳಿವಿರಲಿಲ್ಲ. ಆದರೆ ಹೊಗೆ ಮಾತ್ರ ಮನೆಯಲ್ಲೆಲ್ಲ ತುಂಬಿ ಹೋಗಿತ್ತು. ಡಾ॥ ಗಂಗಾರವರು ದೂರದಿಂದಲೆ ಬಹಳ ಗಾಬರಿ ಪಟ್ಟುಕೊಂಡು ಮನೆಯೊಳಗೆ ಹೋದಾಗ ಪುಣ್ಯಕ್ಕೆ ಏನೂ ಅನಾಹುತವಾಗಿರಲಿಲ್ಲ. ಆದರೆ ಆ ಕಟ್ಟಡದಲ್ಲಿದ್ದವರೆಲ್ಲರ ದೂಷಣೆಗೆ ಒಳಗಾದರು. ನೂಕು ನುಗ್ಗಲಲ್ಲಿ ಕೆಲವರಿಗೆ ಪೆಟ್ಟಾಗಿತ್ತು. ಅಂತು ಕ್ಷಣಾರ್ಧದಲ್ಲಿ ಅಗ್ನಿಶಾಮಕ

ದಳದವರು ಅಲ್ಲಿಗೆ ಬರಲು, ಅಲ್ಲಿರುವ ಮುನ್ನೆಚ್ಚರಿಕೆ ಕ್ರಮಗಳ ಸಲಕರಣೆಗಳನ್ನು ಪ್ರಯೋಗ ಮಾಡಿ ನೋಡಿದ ಹಾಗಾಯಿತು.

ಅಂತರರಾಷ್ಟ್ರೀಯ ಸಾಯಿಲ್ ಜೂಆಲಜಿ ಕಲೋಕಿಯಂ ಬೆಲ್ಜಿಯಂನ ಲೊವೆನ್‌ಲಾನುವೆಯಲ್ಲಿ 1982 ರಲ್ಲಿ ನಡೆದಾಗ ಯೂರೋಪಿನ ಎಂಟು ದೇಶಗಳನ್ನು ನೋಡುವ ಅವಕಾಶ ದೊರೆಯಿತು. ಭಾರತದಿಂದ ಹೊರಡುವ ಮುನ್ನ ಯುರೈಲ್ ಪಾಸ್ ಕೊಂಡಿದ್ದರೆ ಬಹಳ ಕಡಿಮೆ ಖರ್ಚಿನಲ್ಲಿ ಪ್ರಯಾಣ ಮಾಡಬಹುದು. ಆಗ ಒಟ್ಟು ಇನ್ನೂರೈವತ್ತು ಡಾಲರ್‌ಗೆ ಎಂಟು ದೇಶಗಳಿಗೆ ಹೋಗಬಹುದಿತ್ತು.

ವಸತಿಗೆ ಅಲ್ಲಲ್ಲಿ ನನ್ನ ಸ್ನೇಹಿತರು ವ್ಯವಸ್ಥೆ ಮಾಡಿದ್ದರು. ಇಂಗ್ಲೆಂಡಿನಲ್ಲಿ ಬ್ರಿಟಿಷ್ ಕೌನ್ಸಿಲ್, ಫ್ರಾನ್ಸಿನಲ್ಲಿ ರೋಲ್‌ಪೊಲಾಂಕ್ ಕಂಪನಿಯವರು, ಜರ್ಮನಿಯಲ್ಲಿ ಬೇಯರ್ ಕಂಪನಿಯವರು, ಸ್ವಿಟ್ಜರ್‌ಲ್ಯಾಂಡಿನಲ್ಲಿ ಸಾಂಡೋಸ್ ಕಂಪನಿಯವರು ವ್ಯವಸ್ಥೆಮಾಡಿದ್ದರು. ಬೆಲ್ಜಿಯಂನ ಬ್ರಸಲ್ಸ್ ಒಂದು ಸುಂದರವಾದ ನಗರ. ಇಲ್ಲಿಯ ಲೊವೆನ್‌ಲಾನುವೆ ಯೂನಿವರ್ಸಿಟಿಯಲ್ಲಿ ನಾಲ್ಕು ದಿನ ನಡೆದ ಎಂಟನೆ ಕಲೋಕಿಯಂಗೆ ಎಲ್ಲ ಸಿದ್ಧತೆ ನಡೆದಿದ್ದವು. ತಮಿಳುನಾಡಿನಿಂದ ಬಾಲಸುಬ್ರಹ್ಮಣ್ಯಂ ಇಲ್ಲಿ ಪಿಹೆಚ್.ಡಿ. ಮಾಡುತ್ತಿದ್ದರು. ನನ್ನ ಯೋಗಕ್ಷೇಮವನ್ನು ಇವರೆ ನೋಡಿಕೊಳ್ಳುತ್ತಿದ್ದರು. ಇವರಿಲ್ಲದಿದ್ದರೆ ಬೆಲ್ಜಿಯಂನ ಜನಜೀವನದ ಬಗ್ಗೆ ಪೂರ್ಣ ಮಾಹಿತಿ ದೊರೆಯುತ್ತಿರಲಿಲ್ಲ. ಆ ಒಂದು ಚಿಕ್ಕ ದೇಶದಲ್ಲಿ ಆರುನೂರು ಬಗೆಯ ಬೀರು ಮಾಡುತ್ತಾರಂತೆ. ಕಾನ್ಫರೆನ್ಸಿನ ಕೊನೆಯ ದಿನ ಡಿನ್ನರ್ ಮಾಡಿದ್ದರಲ್ಲಿ ಅರವತ್ತು ಬಗೆ ಭಕ್ಷ್ಯಗಳಿದ್ದವು. ರಾತ್ರಿ ಎಂಟು ಗಂಟೆಯವರೆಗೆ ನಡೆದ ಸಮಾರಂಭದಲ್ಲಿ ಬೆಲ್ಜಿಯಂನ ನೃತ್ಯಕಲೆಗಳನ್ನು ಪ್ರದರ್ಶಿಸಿದರು. ನನ್ನ ಜೊತೆ ಇದ್ದ ಇನ್ನಿತರ ಮೂರು ಭಾರತೀಯರಲ್ಲಿ ಒಬ್ಬರು ಕುಡಿದು ಅಮಲೇರಿ ನಾಚಿಸುವಂತೆ ವರ್ತಿಸಿದರು. ಮತ್ತೆ ಕೆಲವರು ಅವರಿಗೆಷ್ಟು ಬೇಕೆಂದು ತಿಳಿಯದೆ ಎಲ್ಲವನ್ನು ತಟ್ಟೆಗೆ ಹಾಕಿಕೊಂಡು ಬಿಟ್ಟಿದ್ದು, ನಾವೆಷ್ಟು ಅತಿಯಾಸೆಯವರೆಂದು ತೋರಿಸಿದ ಹಾಗಾಯಿತು.

ಡೆನ್‌ಮಾರ್ಕ್‌ನಲ್ಲಿ ಬೆಂಗಳೂರು ಪಶುವೈದ್ಯ ಕಾಲೇಜಿನಲ್ಲಿದ್ದವರೊಬ್ಬರು ಕೊಪನ್‌ಹೇಗ್‌ನಲ್ಲಿ ಹೆಚ್ಚಿನ ಪರಿಣತೆಯನ್ನು ಪಡೆಯುತ್ತಿದ್ದರು. ಅವರ ರೂಮಿನಲ್ಲಿ ಮೂರು ದಿವಸ ಇರುವುದಕ್ಕೆ ಎಲ್ಲ ವ್ಯವಸ್ಥೆ ಮಾಡಿದ್ದೇನೆಂದು ನಾನು ಭಾರತವನ್ನು ಬಿಡುವ ಮುನ್ನ ತಿಳಿಸಿದ್ದರು. ಬೆಲ್ಜಿಯಂನಲ್ಲಿ ಕಾನ್‌ಫರೆನ್ಸ್ ಪೂರೈಸಿ ಡೆನ್‌ಮಾರ್ಕಿಗೆ ಹೊರಡುವ ಮುನ್ನ ನಾನು ಕೊಪನ್‌ಹೇಗ್ ಸೇರುವ ಸಮಯವನ್ನು ತಾರ್ ಮೂಲಕ ತಿಳಿಸಿದ್ದೆ. ಬೆಲ್ಜಿಯಂನಲ್ಲಿ ಲೊವೆನ್‌ಲಾನುವೆಯಲ್ಲಿ ಪಿಹೆಚ್.ಡಿ. ಮಾಡುತ್ತಿದ್ದ ತಮಿಳುನಾಡಿನ ಬಾಲಸುಬ್ರಹ್ಮಣ್ಯಂರವರು ಫೋನ್ ಮಾಡಿ ತಿಳಿಸುತ್ತೇನೆಂದು ಹೇಳಿದ್ದರು. ಮರುದಿನ ಮುಂಜಾನೆ ಎಂಟು ಗಂಟೆ ಸಮಯಕ್ಕೆ ಕೊಪನ್‌ಹೇಗ್ ರೈಲ್ವೆಸ್ಟೇಷನ್ ತಲುಪಿದಾಗ ನನ್ನ ಸ್ನೇಹಿತರು ಕಾಣಲಿಲ್ಲ. ಒಂದು ಟ್ಯಾಕ್ಸಿಯನ್ನು ತೆಗೆದುಕೊಂಡು ಅವರ ವಿಳಾಸವನ್ನು ಹುಡುಕಿಕೊಂಡು ಹೊರಟೆ. ಅವರ ರೂಮ್ ತಲುಪಿದಾಗ ಬೀಗ ಹಾಕಿತ್ತು. ಪಕ್ಕದವರು ಅವರು ಬಿಟ್ಟು ಎಂಟು ದಿವಸವಾಯಿತು. ಬೇರೆ ಕಡೆ ಹೋಗಿದ್ದಾರೆ ವಿಳಾಸ ತಿಳಿಯದು ಎಂದರು. ಅವರು ರೂಮ್ ಬಿಟ್ಟ ಮೇಲೆ ಬದಲಾಯಿಸಿದ ವಿಳಾಸವನ್ನು ಯೂನಿವರ್ಸಿಟಿಗೆ ಕಳುಹಿಸಿದ್ದರು. ಆದರೆ ಅದನ್ನು ನನಗಾರೂ ತಲುಪಿಸಿರಲಿಲ್ಲ.

ಟ್ಯಾಕ್ಸಿಡ್ರೈವರ್ ಮಿಡ್ಲ್ ಈಸ್ಟ್‌ನವ, ಅವನಿಗೆ ಅರ್ಧಂಬರ್ಧ ಇಂಗ್ಲಿಷ್ ಬರುತ್ತಿತ್ತು. ಇಲ್ಲಿ ನಿನಗೆ ಯಾರಾದರೂ ಭಾರತೀಯರು ಪರಿಚಯಸ್ಥರಿದ್ದಾರಾ ಎಂದು ಕೇಳಿದೆ. ಇದ್ದಾರೆಂದು ಕರೆದುಕೊಂಡು ಹೋದ. ಅವನು ತೋರಿಸಿದ ವ್ಯಕ್ತಿ ಪಾಕಿಸ್ತಾನದವರು. ಅಲ್ಲಿಯೂ ಬುಚರ್ ಕೆಲಸವನ್ನು ಮಾಡಿಕೊಂಡಿದ್ದವರು. ಅವರೆ ಮತ್ತೊಂದು ವಿಳಾಸ ಹೇಳಿ ನಾಲ್ಕು ಬ್ಲಾಕ್ ದಾಟಿ ಹೋದರೆ, ಒಬ್ಬ ಇಂಡಿಯನ್ ಒಂದು ವೀಡಿಯೋ ಪಾರ್ಲರ್ ಇಟ್ಟುಕೊಂಡಿದ್ದಾರೆ ಎಂದರು. ಅಲ್ಲಿ ಜಿ. ಸುಂದರ್ (ಗಣೇಶ್) ಅನ್ನುವರು ಇದ್ದರು. ನನ್ನ ಪರಿಸ್ಥಿತಿಯನ್ನು ವಿವರಿಸಿದೆ. ಯೂರೋಪ್‌ನಲ್ಲಿ ಮುಂಚೆಯೇ ಕಾದಿರಿಸದಿದ್ದರೆ ಅಥವಾ ಪರಿಚಯಸ್ಥರ ಮುಖಾಂತರ ಹೋಗದಿದ್ದರೆ ರೂಂ ಖಾಲಿ ಇದ್ದರೂ ಅಪರಿಚಿತರಿಗೆ ಕೊಡುವುದಿಲ್ಲ. ಈ ಕಾರಣಕ್ಕಾಗಿ ನನಗೊಬ್ಬರು ಸಹಾಯಕ್ಕೆ ಬೇಕಿತ್ತು. ಅವರು ಸ್ವಲ್ಪ ಯೋಚಿಸಿ, ಈ ಶಾಪಿನ ಮೇಲೆ ಒಂದು ರೂಮ್ ಇದೆ, ಅದು ವಾರಾಂತ್ಯದಲ್ಲಿ ಯಾವಾಗಲೂ ಬುಕ್ಕಾಗಿರುತ್ತದೆ, ನೀವು ಸಹಕರಿಸಿದರೆ ಅಲ್ಲಿ ಇಳಿದುಕೊಳ್ಳಬಹುದೆಂದರು. ಅದೇನೆಂದು ಕೇಳಿದಾಗ ರಾತ್ರಿ ಹತ್ತು ಗಂಟೆಯವರೆಗೆ ನೀವು ಅಲ್ಲಿರಲಾಗುವುದಿಲ್ಲ. ನಂತರ ಮಧ್ಯಾಹ್ನದವರೆಗೆ ಇರಬಹುದೆಂದರು. ಆಗಲಿ ಎಂದು ಒಪ್ಪಿಕೊಂಡೆ. ಇಷ್ಟರಲ್ಲಿ ಮಧ್ಯಾಹ್ನವಾಗುತ್ತಾ ಬಂದಿತ್ತು. ರೂಮಿಗೆ ಹೋಗಿ ನನ್ನ ನಿತ್ಯಕರ್ಮಗಳನ್ನು ಪೂರೈಸುವುದಕ್ಕೆ ಅಣಿಯಾಗುತ್ತಿದ್ದಾಗ ಅವರು ಮೇಲೆ ಬಂದು ಇದು ನಿಮಗೆ ಆರಾಮವೆ ಎಂದು ಕೇಳಿದರು. ನಾನು ಬಯಸಿದ್ದಕ್ಕಿಂತ ಹೆಚ್ಚಾಗಿದೆಯೆಂದು ಧನ್ಯವಾದ ಗಳನ್ನು ಹೇಳಿ ನನ್ನಲ್ಲಿದ್ದ ಒಂದು ಪ್ಯಾಕು ಚಾರ್‌ಮಿನಾರ್ ಸಿಗರೇಟು ಕೊಟ್ಟೆ. ಅದನ್ನು ಕೈಗೆತ್ತಿಕೊಂಡು ಸ್ವಲ್ಪ ಸಮಯ ದೀರ್ಘ ಆಲೋಚನೆ ಮಾಡಿ ಭಾವಾವೇಶದಿಂದ ತುಂಬ ಧನ್ಯವಾದವೆಂದರು. ಅವರ ಕಣ್ಣಿನ ಕುಡಿ ಒದ್ದೆಯಾಯಿತು. ಏಕೆಂದು ಕೇಳಿದಾಗ ಹದಿನೈದು ವರುಷಗಳ ಹಿಂದೆ ಭಾರತದಲ್ಲಿದ್ದಾಗ ಚಾರ್‌ಮಿನಾರ್ ಸಿಗರೇಟು ನನ್ನ ಪ್ರಾಣ. ಏನನ್ನು ಬಿಟ್ಟರೂ ಅದನ್ನು ಬಿಡಲು ತಯಾರಿರಲಿಲ್ಲ. ವಿಧಿ ನನ್ನನ್ನು ಇಲ್ಲಿಗೆ ಎಳೆದುಕೊಂಡು ಬಂತು. ಸ್ನೇಹಿತರ ಸಹಾಯದಿಂದ ಕಾನೂನು ಬಾಹಿರ ನಾನು ಇಲ್ಲಿ ಬಂದೆ. ಹೇಗೋ ನನಗೆ ಇಲ್ಲಿ ನೆಲೆಯಾಯಿತು. ಮತ್ತೆ ನಾನು ಭಾರತಕ್ಕೆ ಹೋಗಲಿಲ್ಲ. ಹೋದರೆ ಪುನಃ ಬರಲು ಅಡ್ಡಿ ಆತಂಕಗಳು ಬರಬಹುದೆಂಬ ಶಂಕೆ. ನನ್ನವರು ಹುಡುಗಿಯನ್ನು ಇಲ್ಲಿಗೆ ಕರೆತಂದು ಮದುವೆ ಮಾಡಿದರು. ನಾನು ಒಂದು ಮಗುವಿನ ತಂದೆ. ಈಗ ಸುಖವಾಗಿದ್ದೇನೆ ಎಂದು ದೈನ್ಯದಿಂದ ಹೇಳಿಕೊಂಡರು. ನಾನು ಭಾರತ ಬಿಟ್ಟಮೇಲೆ ಪುನಃ ಚಾರ್‌ಮಿನಾರ್ ಸಿಗರೇಟು ನೋಡಿದ್ದು ಇದೇ ಮೊದಲು ಎಂದರು. ಉಳಿದಿದ್ದ ಮತ್ತೊಂದು ಪ್ಯಾಕನ್ನು ಕೊಟ್ಟೆ. ಬಹಳ ಕೃತಜ್ಞತೆಯಿಂದ ಇನ್ನು ನೀವು ಇಲ್ಲಿರುವ ತನಕ ನನ್ನ ಅತಿಥಿ, ನನಗೆ ಮಧ್ಯಾಹ್ನದ ಊಟ ಇಲ್ಲಿಗೆ ಬರುತ್ತದೆ. ಮನೆಯವರಿಗೆ ಫೋನ್ ಮಾಡಿ ನಿಮಗೂ ಕಳುಹಿಸಲು ಹೇಳುತ್ತೇನೆ ಎಂದರು. ಇದೆಂತಹ ವಿಪರ್ಯಾಸ. ಒಂದು ಗಂಟೆ ಮುಂಚೆ ಈ ಊರಲ್ಲಿ ನಾನು ಯಾರೂ ಅಲ್ಲ. ಮುಂದಿನ ಮೂರು ದಿನ ಎಲ್ಲಿರುವುದೆಂಬ ಸಮಸ್ಯೆ ಇತ್ತು. ಆಪತ್ಕಾಲದಲ್ಲಿ ಆದವರೆ ನೆಂಟನೆಂಬಂತೆ ಈಗ ಒಬ್ಬ ಆಪ್ತ ನೆಂಟ ಸಿಕ್ಕಿದ್ದಾನೆ. ನನ್ನ ದೇವರಿಗೆ ಮನದಲ್ಲೇ ಧನ್ಯವಾದ ಹೇಳಿ ಆಗಲಿ ಎಂದೆ. ನಾನು ಆ ಊರು ಬಿಡುವಾಗ ದಂಪತಿಗಳಿಬ್ಬರೂ ರೈಲ್ವೆ ಸ್ಟೇಷನ್‌ಗೆ ಬಂದು ಬೀಳ್ಕೊಟ್ಟರು. ಆಗ ನನಗೆ ನೆನಪು ಬಂದದ್ದು ನಾನು ಚಿಕ್ಕವನಾಗಿದ್ದಾಗ ನನ್ನ ಅಕ್ಕನ ಮನೆಗೆ ನಮ್ಮ ಮನೆ ನಾಯಿ ಬಂದರೆ ತೌರೂರಿನಿಂದ ನಾಯಿ ಬಂದಿದೆಯೆಂದು ಅದೆಷ್ಟು ಮುದ್ದಾಡುತ್ತಿದ್ದಳು, ಮಾತನಾಡುತ್ತಿದ್ದಳು. ನಾನು

ಅಪರಿಚಿತನಾದರೂ ತೌರೂರಿಂದ ಬಂದವನೆಂಬ ಪ್ರೀತಿ ಉಕ್ಕಿ ಬಂದಿರಬೇಕು. ಬಾಡಿಗೆ ಏನನ್ನು ತೆಗೆದುಕೊಳ್ಳಲಿಲ್ಲ.

ಹಿಂದೆ ಅಮೆರಿಕಾಕ್ಕೆ ಹೋಗಿದ್ದಾಗ ಒಮ್ಮೆ ನಮ್ಮ ಕ್ಲಾಸ್‌ಮೇಟ್ ಮೆಹಬೂಬಾಲಿಯವರ ಜೊತೆ ನ್ಯೂಜೆರ್ಸಿಯಲ್ಲಿ ಒಂದು ವಾರವಿದ್ದೆ. ಆಗ ಅವರು ಹೇಳಿದ್ದರು ಮುಂದೆ ನೀವು ಯೂರೋಪ್ ಅಮೆರಿಕಾ ಕಡೆ ಬರುವಾಗ ಇಂಡಿಯನ್ ಸ್ನೇಹಿತರಿಗೆ ಏನಾದರೂ ಕೊಡುವುದಿದ್ದರೆ ಚಾರ್‌ಮಿನಾರ್ ಸಿಗರೇಟು ನಿಮ್ಮ ಜೊತೆಯಲ್ಲಿರಲಿ ಎಂದು. ಅದರಂತೆ ಆಗಿನಿಂದ ನಾನು ಸಿಗರೇಟು ಸೇದದಿದ್ದರೂ ಜೊತೆಯಲ್ಲಿ ಚಾರ್‌ಮಿನಾರ್ ಸಿಗರೇಟು ತರುತ್ತಿದ್ದೆ. ಚಾರ್‌ಮಿನಾರ್ ಸಿಗರೇಟು ಅದರ ಪ್ರೇಮಿಗಳಲ್ಲಿ ಎಷ್ಟು ಪ್ರಸಿದ್ಧವಾಗಿತ್ತೆಂದರೆ ಅದರ ಮಾರಾಟದ ಮುಂದೆ ಬೇರೆ ಸಿಗರೇಟು ತಲೆ ಎತ್ತಲಾರವೆಂಬ ಭಯದಿಂದ ವಿಲ್ಸ್ ಕಂಪನಿಯವರು ಚಾರ್‌ಮಿನಾರ್ ಕಂಪನಿ ಹೇಳಿದ ಬೆಲೆಗೆ ಕೊಂಡುಕೊಂಡು ಇಂದು ಆ ಬ್ರಾಂಡೇ ಇಲ್ಲದಂತೆ ಮಾಡಿದರು.

ಕೊಪನ್‌ಹೇಗ್‌ನಿಂದ ಜರ್ಮನಿಯ ಕ್ಯಲ್ನ್‌ಗೆ ಬಂದಾಗ ಬೇಯರ್ ಕಂಪನಿಯ ಡಾ|| ಡಯಟ್‌ಮನ್ ಕಾದಿದ್ದರು. ಅಲ್ಲಿಂದ ಲೆವರ್‌ಕುಶನ್ ಹೋಗಿ ಬೇಯರ್ ಕಂಪನಿಯ ಅತಿಥಿ ಗೃಹದಲ್ಲಿ ಇಳಿದುಕೊಂಡೆ. ಈ ಅತಿಥಿ ಗೃಹದ ವೈಶಿಷ್ಟ್ಯವೇನೆಂದರೆ ವಿಜ್ಞಾನಿಗಳಿಗೆ ಮಾತ್ರ ಇದು ಮೀಸಲು. ಬೇರೆ ದೇಶದ ಪ್ರಧಾನ ಮಂತ್ರಿಗಳು ಬಂದರೂ ಇಲ್ಲಿ ಅವಕಾಶವಿಲ್ಲವೆಂದು ಡಾ|| ಡಯಟ್‌ಮನ್ ಹೇಳಿದರು. ಅದು ನಿಜಕ್ಕೂ ಅದ್ದೂರಿಯಾದ ಅತಿಥಿ ಗೃಹ. ಯಾವುದಕ್ಕೂ ಕುಂದು ಕೊರತೆಯಿಲ್ಲ. ಇತರೆ ದೇಶಗಳಿಂದ ಬಂದ ವಿಜ್ಞಾನಿಗಳು ಅಲ್ಲಿ ಇದ್ದರು. ಬೇಯರ್ ಕಂಪನಿಯು ವಿವಿಧ ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಅಗ್ರಗಣ್ಯತೆ ಪಡೆದಿದೆ. ಅದರಲ್ಲೂ ಪಾಲಿಡಾಲ್ ನಂತಹ ಕೀಟನಾಶಕಗಳನ್ನು ಕಂಡುಹಿಡಿದ ಹೆಮ್ಮೆ ಇದಕ್ಕಿದೆ. ನಾನು ಇಲ್ಲಿಗೆ ಹೋಗಿದ್ದ ಮುಖ್ಯ ಉದ್ದೇಶ ಬೇಯರ್ ಕಂಪನಿಯವರು ಕೀಟನಾಶಕಗಳನ್ನು ಬಿಡುಗಡೆ ಮಾಡುವ ಮುನ್ನ ವಿವಿಧ ಪ್ರಾಣಿಗಳ ಸುರಕ್ಷತೆಗೆ ಏನು ಕ್ರಮ ತೆಗೆದುಕೊಳ್ಳುವರೆಂದು ತಿಳಿಯಲು. ಯಾವುದೇ ಕೀಟನಾಶಕದ ಸುರಕ್ಷತೆ, ಜೇನು ಹುಳುಗಳ ಮೇಲೆ ಆಗುವ ಪರಿಣಾಮದ ಮೇಲೆ ನಿಂತಿರುತ್ತದೆ. ಇದನ್ನು ಪರೀಕ್ಷಿಸಲು ವಿವಿಧ ತಂತ್ರಜ್ಞಾನಗಳನ್ನು ಬಳಸುವ ರೀತಿ, ಅದಕ್ಕೆ ಬಳಸಿರುವ ಉಪಕರಣಗಳು, ಜೇನು ಹುಳುಗಳನ್ನು ಪಳಗಿಸಿ ನಿರ್ದಿಷ್ಟವಾದ ಜಾಗಕ್ಕೆ ಹೋಗಲು ಮಾಡಿರುವ ಉಪಾಯ ಎಲ್ಲವೂ ಕಲಿಯಬೇಕಾದಂತಹ ಸಂಗತಿಗಳು. ಆಗಿನ ಅಲ್ಲಿಯ ಡೈರೆಕ್ಟರ್ ಡಾ|| ಹೀಸ್ಕೆಯವರು ನನಗೆ ನೋಡಲು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರು.

ಒಂದು ಸಂಜೆ ಕ್ಯಲ್ನ್ ಅಂಗಡಿ ಬೀದಿಯಲ್ಲಿ ಸುತ್ತಾಡುತ್ತಿದ್ದಾಗ ನನ್ನ ಜೊತೆ ಇದ್ದ ಡಾ|| ಡಯಟ್‌ಮನ್‌ರ ಸ್ನೇಹಿತರ ಅಂಗಡಿಗೆ ಹೋದೆವು. ಅದು ಆಮದು ಮಾಡಿಕೊಂಡ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಮಳಿಗೆ. ಅದರ ಮಾಲಿಕರು ಒಂದು ತುಂಡು ಉಲನ್ ಬಟ್ಟೆಯನ್ನು ಮುಂದಿಟ್ಟು ಇದು ಕೊನೆಯ ಕೋಟ್ ಪೀಸ್, ಕಾಶ್ಮೀರದಿಂದ ತಂದದ್ದು, ಅತ್ಯುತ್ತಮವಾದ ಉಣ್ಣೆ, ನಿಮಗೆ ಇದನ್ನು ಉಡುಗೊರೆಯಾಗಿ ಕೊಡುತ್ತೇನೆ ತೆಗೆದುಕೊಳ್ಳಿ ಎಂದರು. ಕನಿಷ್ಠ ಅದರ ಬೆಲೆಯನ್ನಾದರೂ ತೆಗೆದುಕೊಳ್ಳಿ ಎಂದು ಹೇಳಿದ್ದಕ್ಕೆ ಅದೆಲ್ಲ ಬಂದಾಗಿದೆ. ನೀವು ಏನೂ ಕೊಡುವುದು ಬೇಡ. ಇದು ನಿಮ್ಮ ದೇಶದ್ದು ಎಂದರು. ನಮ್ಮ ದೇಶದ ರೈತರು

ಬೆಳೆದಿದ್ದರಲ್ಲಿ ಒಳ್ಳೆಯದನ್ನು ಮಾರಿ, ಕಳಪೆಯನ್ನು ತಿನ್ನುವಂತೆ ನಮ್ಮ ಜನ ಒಳ್ಳೆ ವಸ್ತುಗಳನ್ನು ಹೊರದೇಶಕ್ಕೆ ಕಳುಹಿಸಿ ಕಳಪೆ ಮಾಲನ್ನು ದೇಶೀಯರಿಗೆ ಮಾರುತ್ತಾರೆ. ಆದರೆ ಪಾಶ್ಚಿಮಾತ್ಯರು ಅವರಿಗೆ ಬೇಡದನ್ನೇ ನಮ್ಮ ದೇಶಕ್ಕೆ ಕಳುಹಿಸುವುದು!

ನೆದರ್‌ಲ್ಯಾಂಡಿನಲ್ಲಿ ಮುಖ್ಯವಾಗಿ ಲೈಡನ್‌ನಲ್ಲಿ ಡಾ॥ ಕ್ರಿಕನ್ ಜೊತೆ ಅಧ್ಯಯನ ಮಾಡುವುದಿತ್ತು. ಅವರು ಸ್ಕೆರಾಬಿಡ್ ಬೀಟಲ್ಸ್ ಮೇಲೆ ಅಧ್ಯಯನ ನಡೆಸುತ್ತಿದ್ದರು. ಅವರ ಪತ್ನಿ ಅಲ್ಲಿಯ ಲೈಬ್ರರಿಯನ್. ಇಬ್ಬರೂ ಬಂದು ರೈಲ್ವೆ ಸ್ಟೇಷನ್‌ನಿಂದ ಕರೆದುಕೊಂಡು ಹೋಗಿ ಅವರ ಮನೆಯಲ್ಲೇ ಸತ್ಕರಿಸಿದನಂತರ ಅವರು ಕೆಲಸ ಮಾಡುತ್ತಿದ್ದ ರೈಕ್ಸ್ ಮ್ಯೂಸಿಯಂಗೆ ಹೋದೆವು. ಅವರ ಹತ್ತಿರ ಎಂಟು ಸಾವಿರ ಬಗೆಯ ಸ್ಕೆರಾಬಿಡ್ ಬೀಟಲ್ಸ್ ಇದ್ದವು. ಈ ಗುಂಪಿಗೆ ಬೇರು ತಿನ್ನುವ ಹುಳವೂ ಸೇರಿದೆ. ಪ್ರತಿಯೊಂದು ಹುಳವನ್ನು ಬಂಗಾರಕ್ಕಿಂತಲೂ ಹೆಚ್ಚಿನ ಬೆಲೆಯುಳ್ಳದ್ದರ ಹಾಗೆ ಪೆಟ್ಟಿಗೆಯೊಳಗಿಟ್ಟು ಬೀಗ ಹಾಕಿ ಇವರಪ್ಪಣೆ ಇಲ್ಲದೆ ಬೇರೆ ಯಾರೂ ಮುಟ್ಟುವ ಹಾಗಿರಲಿಲ್ಲ. ನೂರು ಇನ್ನೂರು ವರುಷಗಳಿಂದ ಯೂರೋಪಿಯನ್ನರು ಸಂಗ್ರಹಿಸಿದ್ದ ಭಾರತದ ಸ್ಕೆರಾಬಿಡ್ ಬೀಟಲ್ಸ್ ಅನೇಕ ಇವರಲ್ಲಿದ್ದವು. ಇವರಲ್ಲಿದ್ದಷ್ಟು ಬ್ರಿಟಿಷ್ ಮ್ಯೂಸಿಯಂನಲ್ಲೂ ಕೂಡ ಈ ಗುಂಪು ಇರಲಿಲ್ಲ. ಈ ಭೇಟಿಯಿಂದ ನಾನು ಕೈಗೊಂಡಿದ್ದ ಬೇರು ಹುಳುವಿನ ಸಂಶೋಧನೆಯಲ್ಲಿ ಬಗೆ ಬಗೆಯ ಜಾತಿಗಳನ್ನು ಗುರುತಿಸುವುದಕ್ಕೆ ಅನುಕೂಲವಾಯಿತು.

ಮುಂದೆ ಸ್ವಿಡ್ಜರ್‌ಲ್ಯಾಂಡಿಗೆ ಹೋದಾಗ ಬಾಸಲ್‌ನಲ್ಲಿ ಪಿ.ಇ. ಸ್ಟೀವನ್‌ಸನ್‌ರವರು ಬರಮಾಡಿಕೊಂಡರು. ಅವರು ಸಾಂಡೋಸ್ ಕಂಪನಿಯಲ್ಲಿ ಸಂಶೋಧನೆಯಲ್ಲಿದ್ದ ಮುಖ್ಯಸ್ಥರನ್ನೆಲ್ಲ ಪರಿಚಯಿಸಿದರು. ಕೆಲವು ಇತ್ತೀಚಿನ ಸಂಶೋಧನೆಯ ಪರಿಚಯವೂ ಆಯಿತು. ಕಾರ್ಯಕ್ರಮ ಮುಗಿದ ಮೇಲೆ ಸಂಜೆ ಹೋಟೆಲ್ ಕಾವಲಿಯರ್‌ಗೆ ಬಿಡುವ ಮುನ್ನ ಸ್ಟೀವ್‌ನ್‌ಸನ್‌ರವರು ಸಂಜೆ ಊಟಕ್ಕೆ ಬೇರೆ ಕಡೆ ವ್ಯವಸ್ಥೆ ಆಗಿದೆ. ನಾನು ಬರುವಾಗ ನನ್ನ 'ಕಾಮನ್ ವೈಫ್' ಕರೆದುಕೊಂಡು ಬರುತ್ತೇನೆ. ನಿಮ್ಮ ಅಭ್ಯವಂತರವೇನಿಲ್ಲವೆ ಎಂದರು. ನನ್ನದೇನು ಅಭ್ಯಂತರವಿಲ್ಲ. ಅವರು ಖಂಡಿತ ಬರಲಿ ಅಂದೆ. ನನಗೆ ಈ 'ಕಾಮನ್ ವೈಫ್'ನ ಮರ್ಮ ಅರ್ಥವಾಗಲಿಲ್ಲ. ಮನಸ್ಸಿನೊಳಗೆ ಏನೇನೋ ಕಲ್ಪನೆ! ಆ ಊರಲ್ಲಿದ್ದ ಹೆಸರು ವಾಸಿಯಾದ ಚಿಕ್ಕದಾದ ಚೊಕ್ಕಟವಾದ ಹೋಟೆಲ್ ಒಂದಕ್ಕೆ ನಾವು ಮೂವರು ಹೋದೆವು. ಬಹುಶಃ, ಒಳ್ಳೆಯ ಸ್ಟೇಕಿಗೆ ಅದು ಹೆಸರು ವಾಸಿಯಾದದ್ದೆಂದು ತೋರುತ್ತದೆ. ಅವರೇ ಆರ್ಡರ್ ಮಾಡಿದರು. ನನಗೆ ಬೀರ್ ಬಿಟ್ಟು ಮತ್ತೇನು ಕುಡಿಯಲು ಆಗುತ್ತಿರಲಿಲ್ಲ. ಅವರಿಬ್ಬರು ಅವರಿಗೆ ಬೇಕಾದ ವೈನ್ ಆರ್ಡರ್ ಮಾಡಿದರು. ನಮ್ಮ ದೇಶದಲ್ಲಿರುವ ಜಾತಿಗಳಷ್ಟು ಯೂರೋಪ್‌ನಲ್ಲಿ ವೈನ್ ಮಾದರಿಗಳಿವೆ. ಊಟ ನಿಧಾನವಾಗಿ ಬಂತು. ಕ್ರಿಕೆಟ್ ಚೆಂಡಿಗಿಂತಲೂ ದೊಡ್ಡದಾದ ಉಂಡನೆಯ ದಪ್ಪ ಸಿಪ್ಪೆಯ ಆಲೂಗಡ್ಡೆ ಬೇಯಿಸಿ ಬಿರುಕು ಬಿಟ್ಟಿತ್ತು. ಅದರ ಮೇಲೆ ಒಂದು ಬೆಣ್ಣೆ ಉಂಡೆ, ಜೊತೆಯಲ್ಲಿ ಕ್ರಿಕೆಟ್ ಬಾಲಿನಷ್ಟು ದಪ್ಪನೆಯ ವೆಲ್‌ಡನ್ ಸ್ಟೇಕ್. ಅದಕ್ಕೆ ಬೇಕಿದ್ದ ಸಾಸೇಜ್. ಅಷ್ಟು ರುಚಿಯಾದ ಬೇಯಿಸಿದ ಆಲೂಗಡ್ಡೆ ಹಿಂದೆಂದೂ ನಾನು ತಿಂದಿರಲಿಲ್ಲ. ಸ್ಟೇಕ್ ಕೂಡ ಅಷ್ಟೇ ವಿಶೇಷವಾಗಿತ್ತು. ಇದಾದ ನಂತರ ಮುಂದೆ ಇನ್ನೊಂದು ಕೋರ್ಸ್ ಬರಬಹುದೆಂದಿದ್ದವನು ಇದನ್ನು ಪೂರ್ತಿಯಾಗಿ ತಿನ್ನುವಷ್ಟರಲ್ಲಿ ಸುಸ್ತಾಯಿತು.

ಊಟದನಂತರ ಸೈನ್ ನದೀತೀರಕ್ಕೆ ವಿಹಾರಕ್ಕಾಗಿ ಹೋದೆವು. ಅಲ್ಲಿ ಒಂದು ಕಡೆ ನನ್ನನ್ನು ಬಿಟ್ಟು, ನೀವು ಇಲ್ಲಿ ಎಲ್ಲಿ ಬೇಕಾದರೂ ಸುತ್ತಾಡಬಹುದು, ರಮ್ಯವಾದ ಸ್ಥಳ ಎಂದು ಹೇಳಿ ಅವರಿಬ್ಬರೂ ಅತ್ತ ಕಡೆ ಹೋದರು. ಅದು ನಿಜಕ್ಕೂ ರಮ್ಯವಾದ ಸ್ಥಳ. ಅಲ್ಲಲ್ಲಿ ಕೂರಲು ಆಸನಗಳಿದ್ದವು. ಪುಳಪುಳನೆ ಹರಿಯುವ ಹೊಳೆ. ಆಲ್ಫೈನ್ ಪರ್ವತದಿಂದ ಕರಗಿದ್ದ ಹಿಮದ ನೀರು ಅಷ್ಟೇ ಸ್ವಚ್ಛವಾಗಿತ್ತು. ನಾನೂ ಒಂದೆಡೆ ಕುಳಿತೆ. ನನ್ನ ಮುಂದೆ ಹತ್ತು ಹದಿನೈದು ಅಡಿ ದೂರದಲ್ಲಿ ಅಂಥ ಪ್ರೇಮಿಗಳಿಬ್ಬರು ಕುಳಿತಿದ್ದರು. ಅವರ ಚಕ್ಕಂದದಲ್ಲಿ ಅಶ್ಲೀಲತೆ ಒಂದಿಷ್ಟೂ ಇರಲಿಲ್ಲ. ಕಣ್ಣಿದ್ದ ಪ್ರೇಮಿಗಳು ಜನರ ಮಧ್ಯೆ ಆಲಿಂಗನ ಮಾಡಿ ತಬ್ಬಿ ಬಾಯಿಗೆ ಬಾಯಿ ಕೂಡಿಸಿ ಮುತ್ತಿಟ್ಟು ಪ್ರೇಮಿಸುವ ದೃಶ್ಯ ಐರೋಪ್ಯದಲ್ಲಿ ಸಾಮಾನ್ಯ. ಇವರು ಅದನ್ನೂ ಮಾಡುತ್ತಿರಲಿಲ್ಲ. ಪ್ರೇಮಕ್ಕೆ ಕಣ್ಣಿಲ್ಲವೆಂಬುದು ತತ್ವಶಃ ನಿಜವೆಂದುಕೊಂಡೆ. ಸ್ಟೀವನ್‌ಸನ್ ಮತ್ತು ಅವರ ಕಾಮನ್‌ವೈಫ್ ಬಂದ ಮೇಲೆ ಅಲ್ಲಿಯ ಹಲವಾರು ದೃಶ್ಯಗಳನ್ನು ಬಣ್ಣಿಸುವಾಗ ಈ ಅಂಥ ಪ್ರೇಮಿಗಳ ಮಿಲನವನ್ನೂ ಪ್ರಸ್ತಾಪಿಸಿ ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ನನ್ನನ್ನು ಹೋಟಲಿಗೆ ಬಿಡುವ ಮುನ್ನ ಈ ಕಾಮನ್ ವೈಫಿನ ಅರ್ಥವೇನೆಂದು ಕೇಳಿದೆ. ಅದಕ್ಕೆ ಅವರು ಕೊಂಚ ನಸು ನಕ್ಕು ಇದೊಂದು ಬಗೆಯ ಹೊಂದಾಣಿಕೆ. ನಾನು ಸ್ವಿಡ್ಜರ್‌ಲ್ಯಾಂಡಿಗೆ ಬಂದು ಹನ್ನೆರಡು ವರುಷವಾಯಿತು. ಕಾನೂನು ರೀತಿ ಮದುವೆಯಾಗಿದ್ದರೂ ಬೇರೆ ಬೇರೆ ವಾಸಿಸುತ್ತೇವೆ. ಒಂದೇ ಸಂಸಾರದಲ್ಲಿದ್ದರೆ ಇಬ್ಬರ ವರಮಾನ ತೆರಿಗೆ ಬಹಳ ದುಬಾರಿಯಾಗುತ್ತದೆ. ಬೇರೆ ಬೇರೆ ಇದ್ದರೆ ಕಡಿಮೆ. ಇಬ್ಬರೂ ಇಷ್ಟಪಟ್ಟಾಗ ಅಥವಾ ಇಂತಹ ಸಂದರ್ಭ ಬಂದಾಗ ಒಟ್ಟಾಗಿ ಸೇರುತ್ತೇವೆ ಅಂದರು. ಈ ತರಹ ದಂಪತಿಗಳಿರುವುದು ಸ್ವಿಡ್ಜರ್‌ಲ್ಯಾಂಡಿನಲ್ಲಿ ವಿಶೇಷ ಎಂದರು.

ಸೆಪ್ಟಂಬರ್ ಹನ್ನೊಂದು 1982ರ ಶನಿವಾರ ಆಲ್ಫೈನ್ ಪರ್ವತ ಶ್ರೇಣಿಯ ಮನೋಹರ ವಾದ ದೃಶ್ಯ ನೋಡಲು ನಾನೊಬ್ಬನೆ ಬಾಸಲ್‌ನಿಂದ ಮುರೆನ್‌ಗೆ ಹೋಗಿ ಅಲ್ಲಿಂದ ಷಿಲ್‌ಥ್ರೋನ್ ಪರ್ವತಕ್ಕೆ ಕೇಬಲ್‌ಗಾಡಿಯಲ್ಲಿ ಹೋದೆ. ಬಾಸಲ್‌ನಿಂದ ಷಿಲ್‌ಥ್ರೋನ್‌ಗೆ ಹೋಗುವಾಗ ಕಂಡ ಸರೋವರಗಳು, ಹಳ್ಳ, ಕೊಲ್ಲಿ, ತಪ್ಪಲು. ಅಲ್ಲಲ್ಲಿ ಹರಡಿರುವ ಮನೆಗಳು ನೋಡಲು ರಮ್ಯವಾಗಿದ್ದವು. ಸ್ವಚ್ಛತೆಯಲ್ಲಿ ಹೆಸರುವಾಸಿಯಾಗಿರುವ ಸ್ವಿಡ್ಜರ್‌ಲ್ಯಾಂಡ್ ಪರಿಸರಕ್ಕೆ ಒಪ್ಪುವಂತೆ ಸಾರ್ವಜನಿಕರ ಸ್ಥಳ ಮತ್ತು ಖಾಸಗೀ ಸ್ಥಳಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಮುರೇನ್‌ನಿಂದ ಷಿಲ್‌ಥ್ರೋನ್‌ಗೆ ಸುಮಾರು ಹದಿನೈದು ಕಿ.ಮಿ. ರೋಪ್‌ವೆ ಇದೆ. ದೂರದಿಂದ ನೋಡಿದಾಗ ಸಣ್ಣ ಪೆಟ್ಟಿಗೆ ಹೋಗುತ್ತಿದ್ದಂತೆ ಕಾಣುತ್ತದೆ. ಅದರಲ್ಲಿ ಕುಳಿತಾಗಲೇ ಗೊತ್ತಾಗುವುದು. ಐವತ್ತು ಜನಕ್ಕೂ ಮೇಲ್ಪಟ್ಟು ಹಿಡಿಸುವಷ್ಟು ದೊಡ್ಡದಾಗಿದೆ ಯೆಂದು. ಬೇಸಿಗೆಯಲ್ಲಿ ಪ್ರವಾಸಿಗರು ದಿನವೆಲ್ಲ ಮುತ್ತಿರುತ್ತಾರೆ. ಎಲ್ಲೂ ಗದ್ದಲ, ಗಡಿಬಿಡಿ, ಗಾಬರಿ ಇಲ್ಲದೆ ವ್ಯವಸ್ಥಿತ ರೀತಿಯಲ್ಲಿ ಪ್ರವಾಸಿಗರನ್ನು ಮನರಂಜಿಸುತ್ತಿರುವುದು ಅವರ ಕಾರ್ಯ ಕುಶಲತೆಯ ಕುರುಹು ಎನ್ನಬಹುದು. ಆಲ್ಪ್ಸ್ ಪರ್ವತಗಳು ಹಿಮಾಲಯ ಪರ್ವತದಷ್ಟು ರಮಣೀಯವಾಗಿಲ್ಲದಿದ್ದರೂ ಹಿಮಾಲಯವನ್ನು ನೋಡದಿದ್ದವರಿಗೆ ನೋಡಬೇಕಾದ ಸ್ಥಳ. ಸದಾ ಹಿಮದಿಂದ ಕೂಡಿರುವ ಮರಗಿಡಗಳಿಲ್ಲದ ಕಲ್ಲು ಬೆಟ್ಟಗಳ ಪ್ರದೇಶ. ಪ್ರಪಂಚದಾದ್ಯಂತ ಪ್ರವಾಸಿಗರನ್ನು ಆಕರ್ಷಿಸುತ್ತದೆ. ನಮ್ಮಲ್ಲಿ ಟೂರಿಸಮ್ ವೃದ್ಧಿಪಡಿಸಿದರೆ ಅಲ್ಲಿಗಿಂತಲೂ ಬಹುಪಾಲು ಪ್ರವಾಸಿಗರನ್ನು ಹಿಮಾಲಯಕ್ಕೆ ಆಕರ್ಷಿಸಬಹುದು.

ಫ್ರಾನ್ಸಿನ ಪ್ರವಾಸವನ್ನು ಗಯಿಸಪ್ಪೆ ಗಾಲಿನಲ್ಲಿ ನೋಡಿಕೊಂಡಿದ್ದರು. ಹಿಂದೆ ಎರಡು ಬಾರಿ ಅವರು ಭಾರತಕ್ಕೆ ಬಂದಿದ್ದಾಗ ಅವರ ಪರಿಚಯವಿತ್ತು, ಅವರು ಸ್ವಿಡ್ಜರ್‌ಲ್ಯಾಂಡ್ ದೇಶದವರು. ಪ್ಯಾರಿಸ್‌ನಲ್ಲಿ ರೋನ್ ಪೊಲಾಂಕ್ ಅಗ್ರೋ ಕೆಮಿಕಲ್ ಕಂಪನಿಯ ಪಶ್ಚಿಮ ಯೂರೋಪಿನ ಟೆಕ್ನಿಕಲ್ ಡೆಲಿಗೇಟ್ ಆಗಿದ್ದರು. ಬಹಳ ಆತ್ಮೀಯರು. ಭಾರತ ಮತ್ತು ಭಾರತೀಯರನ್ನು ಮೆಚ್ಚಿಕೊಂಡಿದ್ದರು. ನಾನು ಬಾಸಲ್ ಬಿಡುವ ಮುನ್ನ ನನಗೆ ಫೋನ್ ಮಾಡಿ, ಪ್ಯಾರಿಸ್ ರೈಲ್ವೆ ಸ್ಟೇಷನ್‌ನಿಂದ ಟ್ಯಾಕ್ಸಿ ತೆಗೆದುಕೊಂಡು ನೇರ ಫಾಂಡ್ಸ್ ಎಲಸಿಯಲ್ಲಿರುವ ವೆಸ್ಟೆಂಡ್ ಹೋಟೆಲ್‌ಗೆ ಬರಬೇಕೆಂದು ಟ್ಯಾಕ್ಸಿ ಚಾರ್ಜ್ ಸುಮಾರು ನಲವತ್ತು ಫ್ರಾಂಕ್ ಆಗಬಹುದೆಂದು ಹೇಳಿದ್ದರು. ಅದರಂತೆ ಏನೂ ತೊಂದರೆ ಇಲ್ಲದೆ ಹೋಟೆಲ್ ಸೇರಿದೆ.

ಬಾಸಲ್‌ನಿಂದ ಪ್ಯಾರಿಸ್ಸಿಗೆ ರೈಲು ಪ್ರಯಾಣ ಕುಡಿದ ನೀರು ಅಲ್ಲಾಡದ ರೀತಿ ಇತ್ತು. ಯೂರೋಪಿನ ಉದ್ದಗಲಕ್ಕೆ ರೈಲುಗಳು ನಿಮಿಷಕ್ಕೆ ಸರಿಯಾಗಿ ಬಿಡುವುದು ಸೇರುವುದು ಭಾರತೀಯರಿಗೆ ಸೋಜಿಗವಾಗಿ ತೋರಬಹುದು. ನಾನು ಬಾಸಲ್ ಬಿಡುವಾಗ ಒಂದು ರೈಲು ಹೊರಡುವುದರಲ್ಲಿತ್ತು. ಅವಸರವಾಗಿ ಹತ್ತಲು ಹೋದೆ. ನನ್ನನ್ನು ಕಳುಹಿಸಲು ಬಂದಿದ್ದ ಸ್ಟೀವನ್‌ಸನ್ ತಡೆಯಿರಿ ಅವಸರ ಬೇಡ, ಇನ್ನು ಐದು ನಿಮಿಷದಲ್ಲಿ ಮತ್ತೊಂದು ಹೊರಡುವು ದೆಂದರು. ಸಮಯಕ್ಕೆ ಸರಿಯಾಗಿ ಮತ್ತೊಂದು ಹೊರಟಿತು. ನೂರು ಜನ ಕೂರುವ ಬೋಗಿಯಲ್ಲಿ ಐದು ಜನ ಮಾತ್ರ ಇದ್ದೆವು. ಬಾಸಲ್‌ನಿಂದ ಪ್ಯಾರಿಸ್ಸಿಗೆ ಸುಮಾರು ಐನೂರು ಮೈಲಿಯನ್ನು ನಾಲ್ಕೂವರೆ ಗಂಟೆಯಲ್ಲಿ ಸೇರಿತು. ಪ್ರಪಂಚದ ಶೇಕಡ ಐದರಷ್ಟು ಜನ ಯೂರೋಪಿಯನ್ನರು ಈ ಪ್ರಪಂಚದಲ್ಲಿ ದೊರೆಯುವ ಸಂಪನ್ಮೂಲದ ಶೇಕಡ ಅರವತ್ತರಷ್ಟು ಬಳಸಿ ಭೋಗಿಸುವರು. ಇವರ ಮಟ್ಟವನ್ನು ತಲುಪಬೇಕೆಂದು ಅಭಿವೃದ್ಧಿ ಪಡುತ್ತಿರುವ ದೇಶಗಳು ಧಾವಿಸುತ್ತಿವೆ. ಎಲ್ಲರೂ ಆ ಮಟ್ಟವನ್ನು ಮುಟ್ಟಲು ಈ ನೆಲದ ಮೇಲಿರುವ ಸಂಪನ್ಮೂಲ ಸಾಲುತ್ತದೆಯೇ? ಮಾನವನ ಸಂತೋಷಕ್ಕೆ ಎಲ್ಲ ಆಸೆಗಳ ಈಡೇರಿಕೆ ಅಗತ್ಯವೆ? ಗಾಂಧೀಜಿಯವರು ಹೇಳಿರುವ ಹಾಗೆ ಪ್ರಪಂಚದಲ್ಲಿ ಮಾನವನ ಆವಶ್ಯಕತೆಗಳಿಗೆ ಸಾಕಷ್ಟು ಸಂಪನ್ಮೂಲಗಳಿವೆಯೇ ಹೊರತು ಎಲ್ಲರ ದುರಾಸೆಗಳಿಗೆ ಸಾಕಾಗುವಷ್ಟಿಲ್ಲ!

ಪ್ಯಾರಿಸ್‌ನಲ್ಲಿ ಹೋಟೆಲ್‌ಗೆ ಬಂದ ಮೇಲೆ ಕೌಂಟರ್‌ನಲ್ಲಿ ನನಗಾಗಿ ಗೆಲ್ಲಿನೆಲ್ಲಿಯವರ ಪತ್ರ ಕಾದಿತ್ತು. ಅಂದು ಭಾನುವಾರವಾದ್ದರಿಂದ ಆಫೀಸ್‌ಗಳಿಗೆ ರಜೆ ಇರುವುದರಿಂದ ಆ ಸಮಯವನ್ನು ಪ್ಯಾರಿಸ್ ನೋಡುವುದರಲ್ಲಿ ಕಳೆಯಬಹುದು, ನಾನಿಳಿದುಕೊಂಡಿರುವಲ್ಲಿಂದ ಮೆಟ್ರೋದಲ್ಲಿ ಟುಯಲೇರಿಯಸ್‌ಗೆ ಹೋಗಿ ಅಲ್ಲಿಂದ ಸಿಟಿರಾಮ ಬಸ್ ತೆಗೆದುಕೊಂಡರೆ, ಪ್ಯಾರಿಸ್ಸಿನ ಮುಖ್ಯ ಸ್ಥಳಗಳನ್ನೆಲ್ಲಾ ತೋರಿಸುವರೆಂದು ಬರೆದಿದ್ದರು. ಅದರಂತೆ ಮೆಟ್ರೋದಲ್ಲಿ ಟುಯಲೇರಿಯಸ್‌ಗೆ ಹೋಗಿ "ಗೋ ರೌಂಡ್ ಪ್ಯಾರಿಸ್ ಸಿಟಿರಾಮ" ಬಸ್ ಹತ್ತಿ ಸುಂದರವಾದ ಪ್ಯಾರಿಸ್ ನಗರವನ್ನು ದಿನವೆಲ್ಲ ನೋಡಿದೆ. ಹತ್ತಾರು ಸ್ಥಳಗಳನ್ನು ನೋಡಿರುವಲ್ಲಿ ಕೆಲವು ಮಾತ್ರ ನನ್ನ ನೆನಪಿನಲ್ಲಿವೆ. ಅವೆಂದರೆ ಲೂವೆ ಮೂಸಿಯಂ, ನಾಟ್ರೆಡಾಂ ಕೆಥಡ್ರಲ್, ನ್ಯಾಷನಲ್ ಅಸೆಂಬ್ಲಿ, ಎಫಿಲ್‌ಟವರ್, ಛಾಂಪ್ಸ್‌ಎಲಿಸಿ, ಎಲಿಸಿ ಪ್ಯಾಲೆಸ್, ಅಪೇರ, ಪಿರಮಿಡ್‌ಪ್ಲೇಸ್ ಮುಂತಾದವು. ನಂತರ ಮೂರು ನಾಲ್ಕು ಬಾರಿ ಪ್ಯಾರಿಸ್ಸಿಗೆ ಹೋದಾಗ ಸಮಯ ಸಿಕ್ಕಿದಾಗಲೆಲ್ಲ ಲೂವೆ (ಲೂವ್ರ್) ಆರ್ಟ್‌ಗ್ಯಾಲರಿಯನ್ನು ನೋಡಲು ಮರೆಯುತ್ತಿರಲಿಲ್ಲ. ಅಲ್ಲಿರುವ ಒರಿಜಿನಲ್ ರೆಂಬ್ರಾಂಟ್ ಪೇಂಟಿಂಗ್ಸ್ ಲೋಕಪ್ರಸಿದ್ಧಿ. ಲಿಯಾನಾರ್ಡೋ ಡಾ॥ ವಿಂಚಿಯವರ

ಚಿತ್ರಕಲೆ ಕಣ್ಮನ ಸೆಳೆಯುವಂತಹವು. 'ಮಾನೊಲಿಸ' ಇಂದಿಗೂ ಸಾವಿರಾರು ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ಅದನ್ನು ಕಾಪಾಡಲು ಕಟ್ಟಿರುವ ದಿಗ್ಬಂಧಗಳು ಪ್ರೇಕ್ಷಕರಿಗೆ ಅಡಚಣೆಯಿದ್ದಂತಿದೆ. ಎಫಿಲ್ ಟವರ್, 1900 ರಲ್ಲಿ ನಡೆದ ಪ್ಯಾರಿಸ್ ಎಕ್ಸ್‌ಪೋಸಿಷನ್‌ನ ಜ್ಞಾಪಕಾರ್ಥವಾಗಿ ಕಟ್ಟಿದ, ಪ್ರಪಂಚದಲ್ಲಿ ಅತಿ ಎತ್ತರದ ಮನುಷ್ಯ ಮಾಡಿದ ಕೃತಿಗಳಲ್ಲೊಂದೆಂದು ಹೆಸರು ವಾಸಿಯಾಗಿರುವುದು. ಸ್ವಾಮಿ ವಿವೇಕಾನಂದರವರು 1900 ಸೆಪ್ಟಂಬರ್‌ನಲ್ಲಿ ನಡೆದ ಹಿಸ್ಟರಿ ಆಫ್ ರಿಲಿಜಿಯನ್ಸ್ ಸಮ್ಮೇಳನದಲ್ಲಿ ಭಾಗವಹಿಸಲು ಪ್ಯಾರಿಸ್ಸಿಗೆ ಹೋಗಿದ್ದಾಗ ಇದನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಎಲಿಸಿ ಪ್ಯಾಲೆಸ್‌ನ ಗಾರ್ಡ್ಸ್ ಬದಲಾಗುವುದನ್ನು ನೋಡಲು, ಹೈದರಾಬಾದಿನ ಸಾಲಾರ್ ಜಂಗ್ ಮ್ಯೂಸಿಯಂನ ಗಂಟೆ ಹೊಡೆಯುವುದನ್ನು ನೋಡಲು ನಿಂತ ಹಾಗೆ ನೂರಾರು ಜನರು ಕಾದಿರುತ್ತಾರೆ. ನಾಟ್ರೆಡಾಂ ಕೆಥಡ್ರಲ್ ನೋಡುವಾಗ ನಾಟ್ರೆಡಾಂ ನಾನೂರು ವರುಷಗಳ ಹಿಂದೆ ನುಡಿದಿದ್ದ ಭವಿಷ್ಯಗಳು ನಿಜವಾಗುತ್ತಿರುವುದು ಜ್ಞಾಪಕಕ್ಕೆ ಬರುತ್ತಿತ್ತು.

ಮರುದಿನ ಅಂದರೆ ಸೋಮವಾರ ಗಯಸೆಪ್ಪೆ ಗೆಲ್ಲಿನಲ್ಲಿ ಹೋಟೆಲಿನಿಂದ ನನ್ನನ್ನು ಕರೆದುಕೊಂಡು ಹೋಗಿ ಲಿಯಾನ್‌ನಲ್ಲಿರುವ ರೋನ್ ಪೊಲಾಂಕ್ ಆಗ್ರೋಕೆಮಿ ರೀಸರ್ಚ್ ಫೆಸಿಲಿಟಿ ತೋರಿಸಿ, ಅಲ್ಲಿ ಹಲವಾರು ನೂತನ ಕೀಟನಾಶಕಗಳನ್ನು ಅಭಿವೃದ್ಧಿ ಪಡಿಸುವ ವಿಧಾನಗಳನ್ನು ವಿವರಿಸಿದರು. ಮಧ್ಯಾಹ್ನ ಊಟದ ಸಮಯದಲ್ಲಿ ಕಂಪನಿಯ ಮುಖ್ಯ ಸಂಶೋಧಕರನ್ನು ಪರಿಚಯಿಸಲಾಯಿತು. ಅದರಲ್ಲಿ ಕೆಲವರು ಸಧ್ಯದಲ್ಲಿ ಭಾರತಕ್ಕೆ ಬರುವವರಿದ್ದರು.

ಇಂಗ್ಲೆಂಡ್ ಪ್ರವಾಸವನ್ನು ಬ್ರಿಟಿಷ್ ಕೌನ್ಸಿಲ್ ಏರ್ಪಾಡು ಮಾಡಿತ್ತು. ಡಾ॥ ಪೆನ್ನಿ ಆಸ್‌ಪೆಡನ್ ಹಿಂದೆ ಮದ್ರಾಸಿನಲ್ಲಿ ಬ್ರಿಟಿಷ್ ಕೌನ್ಸಿಲ್‌ನ ಮುಖ್ಯಸ್ಥರಾಗಿದ್ದರು. ಒಂದೆರಡು ಬಾರಿ ನಮ್ಮ ಡಿಪಾರ್ಟ್‌ಮೆಂಟಿಗೆ ಭೇಟಿಕೊಟ್ಟು ನನ್ನ ಕೆಲಸವನ್ನು ವೀಕ್ಷಿಸಿದ್ದರು. ಇಂಗ್ಲೆಂಡಿಗೆ ಅವರು ಹೋದನಂತರ ಇಂಗ್ಲೆಂಡಿನ ಕೆಲವು ವಿಶ್ವವಿದ್ಯಾನಿಲಯಗಳು ಕೈಗೊಂಡಿರುವ ಸಂಶೋಧನೆ ಮತ್ತು ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಿರುವ ಹಲವು ವಿಷಯಗಳಲ್ಲಿ ಸಹಕರಿಸಬಹುದೆಂದು, ಬ್ರಿಟಿಷ್ ಕೌನ್ಸಿಲ್ ಮುಖಾಂತರ ನನಗೆ ಆಹ್ವಾನ ಕಳುಹಿಸಿದ್ದರು. ಇದರ ಪ್ರಕಾರ ಸಿ.ಒ.ಪಿ.ಆರ್ ಲಂಡನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ, ಸೌತಾಮ್‌ಟನ್ ಯೂನಿವರ್ಸಿಟಿ, ಕಾರ್ಡಿಫ್ ಯೂನಿವರ್ಸಿಟಿಗಳಿಗೆ ಹೋಗುವ ಅವಕಾಶ ದೊರೆಯಿತು.

ಸೌತ್‌ಕೆನ್ಸಿಂಗ್‌ಟನ್‌ಲಿದ್ದ ಸಿ.ಒ.ಪಿ.ಆರ್. (ಸೆಂಟರ್ ಫಾರ್ ಒವರ್‌ಸೀಸ್ ಪೆಸ್ಟ್ ರೀಸರ್ಚ್) ನಲ್ಲಿ ನನಗೆ ಹಿಂದೆಯೆ ಪರಿಚಯವಿದ್ದ ಡಾ॥ ಟಿ. ಜಿ. ವುಡ್‌ರ ನೆರವಿನಿಂದ ಅಲ್ಲಿ ಆಗುತ್ತಿರುವ ಸಂಶೋಧನೆಯ ಸ್ಥೂಲ ಪರಿಚಯವಾಯಿತು. ಹೀಗೆಯೇ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಪರಿಚಯವಿದ್ದ ಡಾ॥ ಮೆಂಡಲ್‌ಸ್ಕೀಮ್‌ರವರ ಮುಖಾಂತರ ಕೆಮಿಸ್ಟ್ರಿ ಮತ್ತು ಜೂಆಲಜಿ ಡಿಪಾರ್ಟ್‌ಮೆಂಟ್‌ಗಳಲ್ಲಿ ನನ್ನ ಸಂಶೋಧನೆಗೆ ನೇರ ಸಹಾಯವಾಗುವಂತಹವರನ್ನು ಪರಿಚಯಿಸಿ ಅಲ್ಲಿ ನಡೆಯುತ್ತಿರುವ ಸಂಶೋಧನೆಯನ್ನು ತಿಳಿಯಪಡಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಭೇಟಿ ಒಂದು ಬಗೆಯ ಭಾವನಾತ್ಮಕವಾಗಿತ್ತು. ಮೈಸೂರು ಯುವರಾಜ ಕಾಲೇಜಿನಲ್ಲಿ ನಾನು ಇಂಟರ್‌ಮೀಡಿಯೆಟ್ ಓದುತ್ತಿದ್ದಾಗ ಇಂಗ್ಲಿಷ್ ಪ್ರಾಧ್ಯಾಪಕರು

ವರ್ಣಿಸುತ್ತಿದ್ದಂತಹ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಯೂನಿವರ್ಸಿಟಿಗಳ ಕೊಡಿಗೆ ಪ್ರಪಂಚದ ಆಧುನಿಕತೆ ವಿಕಸನಕ್ಕೆ ಮಾರ್ಗದರ್ಶನ ನೀಡಿರುವಲ್ಲಿ ಅಗ್ರಗಣ್ಯ ಎಂದು ಹೇಳುತ್ತಿದ್ದಾಗ ಮುಂದೆ ಎಂದಾದರೂ ಒಂದು ದಿನ ಇವನ್ನು ನೋಡುತ್ತೇನೆಂದು ಕನಸು ಕಂಡಿರಲಿಲ್ಲ. ಆರನೂರು ವರುಷಕ್ಕೂ ಹಿರಿಯದಾದ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವನ್ನು ಈಗ ನೋಡಿದಾಗ ಅದರ ಚರಿತ್ರೆಯನ್ನು ತಿಳಿದವರು ನಮ್ಮ ಹಾಳು ಹಂಪೆಯ ಗತಕಾಲದ ವೈಭವವನ್ನು ವರ್ಣಿಸುವಂತೆ ಮುರುಕುಗೋಡೆಗಳು, ಹಳೆಯ ಕಟ್ಟಡಗಳತ್ತ ಕೈ ತೋರಿಸಿ ಅಲ್ಲಿ ಪ್ರಸಿದ್ಧವಾದ ವಿಜ್ಞಾನಿಗಳು, ಕಲೆ ಸಂಸ್ಕೃತಿ ಕಾವ್ಯಗಳಿಗೆ ಹೆಸರಾದವರು ಕುಳಿತಿರುತ್ತಿದ್ದ, ಪಾಠ ಮಾಡುತ್ತಿದ್ದ ಜಾಗಗಳನ್ನು ವಿವರಿಸುವರು. ಹಿಂದಿನದನ್ನು ಮರೆಯದಂತೆ ಮುಂದಿನದನ್ನು ಬೆಳೆಸಿಕೊಂಡು ಹೋಗುವ ಪರಿಪಾಠವನ್ನು ಇಲ್ಲಿ ಕಂಡಿದ್ದೇನೆ.

ಡಾ॥ ಮೆಂಡಲ್‌ಸ್ಟೀಮ್ ಬಯೊಕೆಮಿಸ್ಟ್ರಿಯಲ್ಲಿ ಹೆಸರಾಂತ ವಿಜ್ಞಾನಿ. ಅವರ ಪತ್ನಿ ಲಂಡನ್‌ನಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕಿ. ಒಂದು ಭಾನುವಾರವಿಡೀ ಅವರ ಜೊತೆ ಕಾಲಕಳೆಯುವ ಅವಕಾಶ ದೊರೆಯಿತು. ಅವರಿಬ್ಬರ ವೃತ್ತಿಯ ವಿಷಯವಲ್ಲದೆ, ಅವರಲ್ಲಿದ್ದ ಅಪಾರವಾದ ಪ್ರಾಪಂಚಿಕ ಜ್ಞಾನ ಅವರನ್ನು ಸಂಧಿಸಿದವರೆಲ್ಲರಿಗೂ ಪುಳಕಿತಗೊಳಿಸುತ್ತಿತ್ತು. ಅಂದು ಸಂಜೆ ಆಕ್ಸ್‌ಫರ್ಡ್ ಪ್ಲೇಹೌಸ್ ಕಂಪನಿಯವರು ಪ್ರಸ್ತುತಪಡಿಸಿದ್ದ ಆನ್‌ಟೋನ್ ಚೆಕೋವ್ ರವರ 'ದಿ ಚರಿ ಬ್ಲಾಸಂ' ನಾಟಕವನ್ನು ನೋಡಿದೆವು. ಆ ನಾಟಕದ ಮುಖ್ಯ ತಾತ್ಪರ್ಯ, ಅಂದಿನ ರಷ್ಯನ್ ಲ್ಯಾಂಡ್‌ಲಾರ್ಡ್ಸ್ ತಮ್ಮ ಭೋಗವಿಲಾಸಕ್ಕೆ ಸಾಲಗಾರರಾಗಿ ಅದನ್ನು ತೀರಿಸಲಾಗದೆ ಅವರ ಎಸ್ಟೇಟ್ ಚರಿಬ್ಲಾಸಂ ಆರ್‌ಚರ್ಡ್ ಮಾರುವಾಗ ಅದರ ಮಾಲಿಕನ ಪತ್ನಿಗೆ ಆಗುತ್ತಿದ್ದ ಆಘಾತ, ಆಕೆ ಅದರ ಪೂರ್ವಿಕರು ಬದುಕಿ ಬಾಳಿ ಪ್ರಸಿದ್ಧವಾಗಿದ್ದ ಕಾಲವನ್ನು ನೆನೆಸಿಕೊಂಡು ರೋಧಿಸುತ್ತಿದ್ದ ನೋಟ ಎಲ್ಲರ ಕಣ್ಣಿನಲ್ಲಿ ನೀರೂರುವಂತೆ ಮಾಡಿತ್ತು. ಆ ಸಂದರ್ಭದಲ್ಲಿ ಡಾ॥ ಮೆಂಡಲ್‌ಸ್ಟೀಮ್‌ರವರು ಹೇಳಿದ್ದು ಭಾರತದಲ್ಲೂ ದೊಡ್ಡದೊಡ್ಡ ಜಮೀನ್‌ದಾರರ ಸ್ಥಿತಿ ಹೀಗಿತ್ತೆಂದು ನಾನು ಕೇಳಿದ್ದೇನೆಂದರು. ಅವರು ಹೇಳಿದ್ದರಲ್ಲಿ ಅತಿಶಯೋಕ್ತಿ ಏನೂ ಕಾಣಲಿಲ್ಲ.

ಆಕ್ಸ್‌ಫರ್ಡ್ ಯೂನಿವರ್ಸಿಟಿ ಜೂಆಲಜಿ ವಿಭಾಗದಲ್ಲಿ ಡಾ॥ ಮೆಲ್‌ಕಾಮ್‌ಕೂರವರು ನಡೆಸುತ್ತಿದ್ದ ಗೊಬ್ಬರದ ಹುಳುವಿನ ಅಧ್ಯಯನ ನನ್ನ ಮನಸ್ಸನ್ನು ಸೆಳೆದಿತ್ತು. ಅವರು ಆಫ್ರಿಕಾ ಖಂಡದಲ್ಲಿ ಇಪ್ಪತ್ತು ವರುಷ ಇವುಗಳ ಮೇಲೆ ಅಧ್ಯಯನಮಾಡಿ ಪಾಂಡಿತ್ಯ ಪಡೆದಿದ್ದರು. ನಮ್ಮ ದೇಶದ ಗೊಬ್ಬರದ ಹುಳುವಿನ ಪರಿಚಯ ಹವ್ಯಾಸಿ ಸಂಗ್ರಹಕಾರರು ಮಾಡಿದ ಗೊಬ್ಬರದ ಹುಳುವಿನ ಸಂಗ್ರಹಣೆ ಬಿಟ್ಟರೆ ಅಧ್ಯಯನ ಮಾಡಿದ ಕೆಲಸ ಬಹಳ ಕಡಿಮೆ. ಪುರಾತನ ಕಾಲದಿಂದಲೂ ವ್ಯವಸಾಯಕ್ಕೆ ಪ್ರಸಿದ್ಧವಾದ ನಮ್ಮ ದೇಶದಲ್ಲಿ ಪಶುಪಾಲನೆ ಮತ್ತು ಕಾಡು ಮೃಗಗಳ ಗೊಬ್ಬರದ ವಿಲೇವಾರಿಯಲ್ಲಿ ಗೊಬ್ಬರದ ಹುಳುವಿನ ಪಾತ್ರವನ್ನು ಯಾರೂ ಗ್ರಹಿಸಿರಲಾರರು. ಇಂಗ್ಲಿಷ್‌ನವರು ಆಸ್ಟ್ರೇಲಿಯ ದೇಶಕ್ಕೆ ಹೋಗಿ ನೆಲೆಸಲು ಪ್ರಾರಂಭ ಮಾಡಿದ ಮೇಲೆ, ದನ ಸಾಕುವ ರೂಢಿಯಾಯಿತು. ಕ್ರಮೇಣ ದನಗಳ ಸಂಖ್ಯೆ ಜಾಸ್ತಿಯಾದಂತೆಲ್ಲ ಹುಲ್ಲುಗಾವಲಿನಲ್ಲಿ ದನಗಳ ತೊಪ್ಪೆ ರೊಟ್ಟಿಯಾಗಿ ಗಟ್ಟಿಯಾಗುತ್ತಿದ್ದರಿಂದ ಹುಲ್ಲು ಹುಟ್ಟದೆ ಮೇವು ಕಡಿಮೆಯಾಗುತ್ತಾ ಬಂತು. ಇದರ ಜೊತೆಗೆ ದನಗಳನ್ನು ಬಾಧಿಸುತ್ತಿದ್ದ ಕ್ರಿಮಿಕೀಟಗಳು ಈ ಸಗಣಿಯಿಂದ ಹೆಚ್ಚಾಗುತ್ತಿದ್ದವು. ಇದರ ಪರಿಹಾರಕ್ಕಾಗಿ ಸಾವಿರಾರು ಸಂಖ್ಯೆಯಲ್ಲಿ

ಆಫ್ರಿಕಾಖಂಡದಿಂದ ಗೊಬ್ಬರದ ಹುಳುವನ್ನು ತಂದು ಬಿಟ್ಟರು. ಕೆಲವು ವರುಷಗಳಲ್ಲಿ ಗೊಬ್ಬರ ಗುಪ್ಪೆಯಾಗುವುದು ನಿಂತಿತು. ಈ ಗೊಬ್ಬರದ ಹುಳುಗಳು ಗೊಬ್ಬರವನ್ನು ತಿಂದು ತಮ್ಮ ಸಂತತಿಗೂ ತಿನಿಸಲು ಭೂಮಿಯೊಳಕ್ಕೆ ಉಂಡೆಮಾಡಿ ಕೊಂಡೊಯ್ಯುತ್ತವೆ. ಪ್ರಪಂಚದಲ್ಲೇ ಹೆಚ್ಚು ಜನ ಮತ್ತು ದನವಿರುವಂತಹ ನಮ್ಮ ದೇಶದಲ್ಲಿ ಸಾವಿರಾರು ಬಗೆ ಬಗೆಯ ಗೊಬ್ಬರದ ಹುಳುವಿಲ್ಲದಿದ್ದರೆ ಜನರ ಮತ್ತು ಜಾನುವಾರುಗಳ ಗೊಬ್ಬರ ಕರಗದೆ ಗೊಂದಲಮಯವಾಗುತ್ತಿತ್ತು. ಜಾನುವಾರುಗಳು ತೊಪ್ಪೆ ಹಾಕಿದ ಕೆಲವು ನಿಮಿಷದೊಳಗಾಗಿ ಆ ವಾಸನೆಗೆ ಪರಿಸರದಲ್ಲಿದ್ದ ಗೊಬ್ಬರದ ಹುಳು ಬೀಟಲ್ಸ್ ಆಕರ್ಷಿಸಿ ಮುತ್ತಿಗೆ ಹಾಕಿ ಭೂಮಿಯೊಳಗೆ ಸೇರಿಸುತ್ತವೆ. ಗೆದ್ದಲೂ ಕೂಡ ಗೊಬ್ಬರ ತಿನ್ನುತ್ತವೆ. ಆದರೆ ಅದೆಲ್ಲವನ್ನು ಹುತ್ತದೊಳಕ್ಕೆ ಕೊಂಡೊಯ್ಯುತ್ತವೆ.

ನಾನು ಕೈಗೊಂಡಿದ್ದ ಸಂಶೋಧನೆಯ ವಿಷಯ ಬೇರುತಿನ್ನುವ ಹುಳ. ಬೇರುತಿನ್ನುವ ಹುಳ ಮತ್ತು ಗೊಬ್ಬರದ ಹುಳ ಒಂದೇ ಕುಟುಂಬಕ್ಕೆ ಸೇರಿದವು. ಕೆಲವು ಹಂತದಲ್ಲಿ ಬೇರುತಿನ್ನುವ ಹುಳವೂ ಗೊಬ್ಬರವನ್ನು ತಿನ್ನುತ್ತದೆ. ಆದರೆ ಅವಕ್ಕೆ ಬೆಳೆಯುತ್ತಿರುವ ಬೇರು ಜೀವನ ಪೂರ್ತಿಮಾಡಲು ಬೇಕೇಬೇಕು. ಗೊಬ್ಬರದ ಹುಳು ಹಾಗಲ್ಲ. ಜೀವನವಿಡೀ ಗೊಬ್ಬರವನ್ನೇ ತಿಂದು ಬದುಕುತ್ತದೆ. ಕೆಲವು ರೈತರ ತಪ್ಪು ಕಲ್ಪನೆಯಿಂದ ಬೇರು ತಿನ್ನುವ ಹುಳ ಗೊಬ್ಬರ ತಿಪ್ಪೆಯಿಂದ ಬರುತ್ತದೆಯೆಂದು ತಿಳಿದಿದ್ದಾರೆ. ಈ ತಪ್ಪು ಕಲ್ಪನೆಗೆ ಕಾರಣವೂ ಇದೆ. ಬೇರು ತಿನ್ನುವ ಹುಳ ಮತ್ತು ಗೊಬ್ಬರದ ಹುಳ ಆಕಾರದಲ್ಲಿ ಒಂದೇ ಸಮ ಕಾಣುತ್ತವೆ. ಇವುಗಳ ಬಗ್ಗೆಯೂ ಸಂಶೋಧನೆ ಪ್ರಾರಂಭಿಸಬೇಕೆಂದು ಡಾ॥ ಮೆಲ್‌ಕಾಮ್‌ಕೂರವರನ್ನು ಭಾರತಕ್ಕೆ ಆಹ್ವಾನಿಸಿ ಅವರ ಅನುಭವವನ್ನೂ ಹಂಚಿಕೊಳ್ಳಲಾಯಿತು. ಡಾ॥ ವೀಣಾಕುಮಾರಿಯವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕದಲ್ಲಿ ದೊರೆಯುವ ವಿವಿಧ ಗೊಬ್ಬರದ ಹುಳುವಿನ ಮೇಲೆ ಸಂಶೋಧನೆ ಕೈಗೊಂಡು ನೂರಕ್ಕೂ ಮಿಗಿಲಾದ ಗೊಬ್ಬರದ ಹುಳುಗಳ ಜಾತಿಯನ್ನು ಸಂಗ್ರಹಿಸಿ, ಅವುಗಳಲ್ಲಿ ಮುಖ್ಯವಾದವುಗಳ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಿ ಪಿಹೆಚ್.ಡಿ. ಪಡೆದಿದ್ದಾರೆ.

ಆಕ್ಸ್‌ಫರ್ಡ್‌ನಿಂದ ಸ್ಯಾಲಿಸ್‌ಬರಿಗೆ ಹೋಗಿ ಅಲ್ಲಿರುವ ಸಿ.ಒ.ಪಿ.ಆರ್. ಕೆಮಿಕಲ್ ಕಂಟ್ರೋಲ್ ಡಿವಿಜನ್ ನೋಡುವ ಕಾರ್ಯಕ್ರಮವಿತ್ತು. ಅದನ್ನು ಪಿ.ಟಿ. ವಾಕರ್ ನಿರ್ವಹಿಸಿದ್ದರು. ಇವರು ಹಿಂದೆ ನನ್ನೊಂದಿಗೆ ಕೆಲವು ದಿನಗಳನ್ನು ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ಕಳೆದಿದ್ದರು. ಸ್ಯಾಲಿಸ್‌ಬರಿ ರೈಲ್ವೆ ಸ್ಟೇಷನ್‌ನಿಂದ ನನ್ನನ್ನು ಕರೆದುಕೊಂಡು ಹೋಗಿ ಸಿ.ಒ.ಪಿ.ಆರ್. ಮುಖ್ಯಸ್ಥರಾದ ಡಿ. ಲಿಯಾಸ್‌ರವರನ್ನು ಪರಿಚಯಿಸಿ ಅವರ ಮುಖಾಂತರ ಅಲ್ಲಿ ನಡೆಯುತ್ತಿದ್ದ ಕೀಟ ಹತೋಟಿಯಲ್ಲಿ ರಾಸಾಯನಿಕಗಳನ್ನು ಬಳಸುವ ವಿಧಾನಗಳನ್ನು ಪರಿಷ್ಕರಿಸುತ್ತಿದ್ದದ್ದನ್ನು ತೋರಿಸಿದರು. ಮಧ್ಯಾಹ್ನದ ನಂತರ ವಾಕರ್‌ರವರು ಸ್ಯಾಲಿಸ್‌ಬರಿ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶವನ್ನು ತೋರಿಸಿದರು. ಸುಮಾರು ಎರಡು ಮೈಲಿ ದೂರದಲ್ಲಿದ್ದ ಸಣ್ಣಹಳ್ಳಿ (ನಮ್ಮ ಹಳ್ಳಿಗಳಿಗೆ ಹೋಲುವಂತಹವಲ್ಲ) ಪಿಟಾನ್-ಹ್ಯಾಂಪ್‌ಷೈರ್‌ನಲ್ಲಿ ಊಟ ಮುಗಿಸಿ ಅಲ್ಲಿಯ ಅಜುಬಾಜಿನಲ್ಲಿದ್ದ ಹುಲ್ಲಿನ ಮನೆಗಳನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ಕೇವಲ ನೂರು ನೂರೈವತ್ತು ವರುಷಗಳ ಹಿಂದೆ ನಮ್ಮಂತೆಯೆ ಹಳ್ಳಿಯಲ್ಲಿ ಹುಲ್ಲಿನ ಮನೆಗಳಲ್ಲಿ ವಾಸಿಸುತ್ತ ಮಣ್ಣಿನ ಮಡಿಕೆ ಪಾತ್ರೆಗಳು ಮತ್ತು ಮರದ ಬಟ್ಟಲುಗಳನ್ನು ಉಪಯೋಗಿಸುತ್ತಿದ್ದ ಸಂಸ್ಕೃತಿಯನ್ನು ಕಾಣಬಹುದಿತ್ತು. ಇನ್ನೂರು ವರುಷಗಳ ಹಿಂದೆ ಪ್ರಾರಂಭವಾದ ಔದ್ಯೋಗಿಕ ಕ್ರಾಂತಿಯ

ಹಿನ್ನೆಲೆಯಲ್ಲಿ ಪ್ರಪಂಚದ ಬಹು ಪಾಲಿನ ಸಾರ್ವಭೌಮತೆ ಪಡೆದಿದ್ದರೂ ಇಂಗ್ಲೆಂಡಿನ ಜನಸಾಮಾನ್ಯರಿಗೆಲ್ಲ ಸಂಪತ್ತು ಸರಿಯಾಗಿ ಹಂಚಿರಲಿಲ್ಲವೆಂದು ವ್ಯಕ್ತವಾಗುತ್ತದೆ. ಈಗ ಆ ಹುಲ್ಲಿನ ಮನೆಗಳ ಒಡೆತನ ಐಶ್ವರ್ಯವಂತರ ಕೈಯಲ್ಲಿದೆ. ಏಕೆಂದರೆ ಅವುಗಳ ಮೂಲ ರೂಪವನ್ನು ಉಳಿಸಿಕೊಳ್ಳಬೇಕಾದರೆ ಪ್ರತಿ ವರ್ಷ ದುಬಾರಿ ಖರ್ಚಾಗುವುದು. ಹನ್ನೆರಡನೆ ಶತಮಾನದ ಸ್ಯಾಲಿಸ್‌ಬರಿ ಕ್ಯಾಥೆಡ್ರಲ್ ಇಂಗ್ಲೆಂಡಿನಲ್ಲೇ ಬಹಳ ಎತ್ತರವಾದ ಮತ್ತು ಯೂರೋಪಿನಲ್ಲೇ ಎರಡನೆ ಅತಿ ದೊಡ್ಡ ಕ್ಯಾಥೆಡ್ರಲ್ ಎಂದು ಹೆಸರು ವಾಸಿಯಾಗಿದೆ. ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ದೇವಸ್ಥಾನಗಳು ಎಲ್ಲಾ ಕಾರ್ಯಚಟುವಟಿಕೆಗಳ ಬಿಂದುವಂತಿದ್ದ ಹಾಗೆ ಇಂಗ್ಲೆಂಡಿನ ಚರ್ಚುಗಳು ಇದ್ದುವು. ಬೇಲೂರು ಹಳೇಬೀಡು ದೇವಸ್ಥಾನಗಳನ್ನು ನಾವು ಎಷ್ಟು ಆದರ್ಶಿಸುತ್ತೇವೆಯೋ ಹಾಗೆ ಈ ಕ್ಯಾಥೆಡ್ರಲ್‌ನ್ನು ಆದರ್ಶಿಸುತ್ತಾರೆ.

ಮುಂದಿನ ಗುರಿ ಸೌಥಾಮ್ಟನ್ ಯೂನಿವರ್ಸಿಟಿ. ಅಲ್ಲಿ ಪ್ರೊಫೆಸರ್ ಪಿ.ಇ. ಹೌಸ್‌ರವರು ಫೆರೊಮೊನ್ ಬಗ್ಗೆ ಸಂಶೋಧನೆಯನ್ನು ಮಾಡುತ್ತಿದ್ದರು. ಪ್ರತಿ ಪ್ರಾಣಿಯು ತನ್ನದೇ ಆದ ಒಂದು ಆಕರ್ಷಕ ಪರಿಮಳವನ್ನು ಪ್ರಾಪ್ತವಯಸ್ಸಿನಲ್ಲಿ ಹೊರಹೊಮ್ಮಿಸುತ್ತದೆ. ಮುಖ್ಯವಾಗಿ ಇವುಗಳಲ್ಲಿ ಲಿಂಗಬೇಧವಿದೆ. ಹೆಣ್ಣು ಗಂಡನ್ನು ಅಥವಾ ಗಂಡು ಹೆಣ್ಣನ್ನು ಆಕರ್ಷಿಸುವ ಒಂದು ಉಪಾಯ. ಸ್ವಾಭಾವಿಕವಾಗಿ ಆಯಾ ಪ್ರಾಣಿಗಳಲ್ಲಿ ಪ್ರಾಪ್ತವಯಸ್ಸಿನಲ್ಲಿ ಈ ಪರಿಮಳ ಉದ್ಭವವಾಗುತ್ತದೆ. ಇದನ್ನು ಫೆರೊಮೊನ್ ಎನ್ನುವರು. ಉದಾಹರಣೆಗೆ, ನಾಯಿ ಬೆಕ್ಕು ಜಾನುವಾರುಗಳಲ್ಲಿ ಒಂದು ನಿಯಮಿತಕಾಲದಲ್ಲಿ ಗಂಡು ಹೆಣ್ಣನ್ನು ಹಿಂಬಾಲಿಸಿ ಹೋಗುವುದನ್ನು ನೋಡಿದ್ದೇವೆ. ಹೆಣ್ಣು ಒಂದು ಬಗೆಯ ಫೆರೊಮೊನನ್ನು ವಿಸರ್ಜಿಸುವುದರಿಂದ ಅದು ಹೋದಲ್ಲೆಲ್ಲಾ ಗಂಡು ವಾಸನೆಯನ್ನು ಹಿಡಿದು ಹಿಂಬಾಲಿಸುತ್ತದೆ. ಆಯಾ ಜಾತಿಗೆ ಅದು ತಿಳಿಯುವುದೆ ಹೊರತು ಬೇರೆ ಜಾತಿಗೆ ವಾಸನೆ ಸಿಗುವುದಿಲ್ಲ. ಆದರೆ ಪುನಗು ಬೆಕ್ಕಿನ ಫೆರೊಮೊನ್ ವಾಸನೆ ನಮಗೂ ತಿಳಿಯುತ್ತದೆ. ಕೀಟಗಳಲ್ಲಿ ಹೆಣ್ಣು ಗಂಡು ಪರಸ್ಪರ ಮಿಲನಕ್ಕೆ ಫೆರೊಮೊನ್ ಒಂದೇ ಆಧಾರ. ಆಕಾರ ಗುರುತಿಸುವ ಶಕ್ತಿ ಕೀಟಗಳಿಗಿಲ್ಲ. ಕೆಲವು ಕೀಟಗಳ ಫೆರೊಮೊನ್‌ನನ್ನು ವಿಶ್ಲೇಷಿಸಿ ಕೃತಕವಾಗಿ ಸಂಯೋಜಿಸಿ ಕೀಟ ನಿಯಂತ್ರಣದಲ್ಲಿ ಉಪಯೋಗಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಇದರ ಬಗ್ಗೆ ಹೆಚ್ಚು ಹೆಚ್ಚು ಸಂಶೋಧನೆ ಪ್ರೊಫೆಸರ್ ಹೌಸ್‌ರ ನೇತೃತ್ವದಲ್ಲಿ ಸೌಥಾಮ್ಟನ್ ಯೂನಿವರ್ಸಿಟಿಯಲ್ಲಿ ನಡೆಯುತ್ತಿತ್ತು. ನಮ್ಮಲ್ಲಿಯೂ ಇದರ ಬಗ್ಗೆ ಅಧ್ಯಯನ ಕೈಗೊಳ್ಳಬೇಕೆಂಬ ಉದ್ದೇಶದಿಂದ ಇವರ ಸಂಪರ್ಕ ಬೆಳೆಸಲಾಗಿತ್ತು. ಮನುಷ್ಯರಲ್ಲಿ ಈ ಬಗೆಯ ಆಕರ್ಷಕ ಫೆರೊಮೊನ್ ಯಾವ ಸಂದರ್ಭದಲ್ಲಿಯಾದರೂ ಹೊರ ಹೊಮ್ಮುವುದೆ ಎಂಬ ಪ್ರಶ್ನೆಗೆ ಒಬ್ಬ ಪುರುಷ ತನ್ನ ಕೆಲಸದಲ್ಲಿ ಮಗ್ನನಾಗಿದ್ದಾಗ ಸ್ತ್ರೀ ಒಬ್ಬಳು ಸೊಂಟದ ಮೇಲೆ ನಗ್ನವಾಗಿರುವ ಕಡೆ ತನ್ನ ದೃಷ್ಟಿಯನ್ನು ಹಾಯಿಸುವ ಫೋಟೋವನ್ನು ತೋರಿಸಿ ಇದು ಮನುಷ್ಯರಲ್ಲಿ ಹೊರಹೊಮ್ಮುವ ಫೆರೊಮೊನ್ ಎಂದರು.

ಪ್ರೊಫೆಸರ್ ಹೌಸ್‌ರವರ ಸಂಶೋಧನಾಲಯದಲ್ಲಿ ಕಳೆದ ಕಾಲ ಅರ್ಥಪೂರ್ಣವಾಗಿತ್ತು. ಅವರ ಜೊತೆ ಏಳೆಂಟು ಪಿಹೆಚ್.ಡಿ. ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ತೊಡಗಿದ್ದರು. ಆ ದೇಶದಲ್ಲಿ ಇಲ್ಲದ ಮಿಡತೆ ಮತ್ತು ಎಲೆ ಕತ್ತರಿಸಿ ಗೂಡು ಮಾಡುವ ಇರುವೆ (ಲೀಫ್‌ಕಟರ್ ಆನ್ಟ್)ಗಳನ್ನು ಆ ವಾತಾವರಣದಲ್ಲಿ ಸಾಕುತ್ತಿದ್ದ ರೀತಿ ವಿಸ್ಮಯ ಪಡಿಸುವಂತಿತ್ತು. ಬಹಳ

ದೊಡ್ಡ ಕೀಟ ಬಾಧೆಗಳಲ್ಲಿ ಇವೆರಡು ಕೀಟಗಳು ಶತಮಾನಗಳಿಂದ ಮಾನವನನ್ನು ಬಾಧಿಸುತ್ತಿವೆ. ನಾನು ಹೋಗಿದ್ದಾಗ ಇವರಲ್ಲಿ ಪಿಹೆಚ್.ಡಿ. ಪೂರೈಸುತ್ತಿದ್ದ ಒವನ್ ಟಿ. ಜೋನ್ಸ್ ಮುಂದೆ ಕಾಫಿ ಬೋರ್ಡಿನ ಆಮಂತ್ರಣದ ಮೇರೆಗೆ ಕಾಫಿ ಕಾಂಡ ಕೊರಕದ ಜೈವಿಕ ಹತೋಟಿಯ ಬಗ್ಗೆ ತಾಂತ್ರಿಕ ಸಲಹೆಗಾರರಾಗಿ ಬಂದಿದ್ದರು. ಮುಖ್ಯವಾಗಿ ಕಾಫಿ ಬೋರರ್‌ನ ಫೆರೊಮೋನ್ ಕಂಡುಹಿಡಿಯುವ ಸಾಧ್ಯಾಸಾಧ್ಯತೆಗಳ ಬಗ್ಗೆ ಇವರ ಸಲಹೆ ಅಪೇಕ್ಷಿಸಿದ್ದರೆಂದು ತೋರುತ್ತದೆ. ಬಹುಶಃ, ಅವರು ಕಾಫಿ ಗಿಡವನ್ನು ನೋಡಿದ್ದು ಅದೇ ಮೊದಲೆಂದೂ ಕಾಣುತ್ತದೆ.

ಪ್ರೊಫೆಸರ್ ಹೌಸ್‌ರವರು ನಾನು ಇಳಿದು ಕೊಂಡಿದ್ದ ಮೋಟ್‌ಹೌಸ್ ಹೋಟೆಲ್‌ಗೆ ಬಂದಾಗ ನನ್ನ ರೂಮ್ ನೋಡಿ, ನನ್ನನ್ನು ಉದ್ದೇಶಿಸಿ ಹೇಳಿದ ಮಾತು, ಆ ರೂಮಿನಲ್ಲಿ ಇಂಗ್ಲೀಷ್‌ನ ಸುಪ್ರಸಿದ್ಧ ಕವಿಗಳು ನಾಟಕಕಾರರು ಒಂದು ಸಮಯದಲ್ಲಿ ಇಳಿದು ಕೊಳ್ಳುತ್ತಿದ್ದರು ಎಂದರು. ಬ್ರಿಟೀಷರಿಗೆ ಗತಕಾಲದ ಚರಿತ್ರೆಯನ್ನು ನೆನೆದುಕೊಳ್ಳುವುದೆಂದರೆ ಬಹಳ ಹೆಮ್ಮೆ. ಪುರಾತನ ವಸ್ತು ಕಲೆ ಕೃತಿಗಳನ್ನು ರಕ್ಷಿಸುವುದಕ್ಕೆ ಕೆಲವರು ಅವರ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಅವರು ಆಳಿದ ದೇಶಗಳಲ್ಲೆಲ್ಲ ಪುರಾತನವನ್ನು ಪುನೀತಗೊಳಿಸಿದ್ದಾರೆ. ಇತ್ತೀಚೆಗೆ ಹಂಪೆಗೆ ಹೋಗಿದ್ದಾಗ ಅಲ್ಲಿಯ ಮುಖ್ಯ ದೇವಸ್ಥಾನದ ಮಹಾದ್ವಾರವನ್ನು ಮೊದಲಿದ್ದ ಸ್ಥಿತಿಯಲ್ಲಿ ರಕ್ಷಿಸಲು ಇಂಗ್ಲೆಂಡಿನಿಂದ ದೊಡ್ಡ ದೊಡ್ಡ ಕಬ್ಬಿಣದ ತೊಲೆಗಳನ್ನು ತಂದು ಬೀಳದ ಹಾಗೆ ರಕ್ಷಿಸಿದ್ದನ್ನು ನೋಡಿ ಇವರಿಗೂ ಮೊಗಲ್‌ರಿಗೂ ಇದ್ದ ವ್ಯತ್ಯಾಸವನ್ನು ಕಂಡೆ.

ಸೌಥಾಮ್ಟನ್ ಹಾರ್‌ಬರ್‌ಗೆ ಕರೆದುಕೊಂಡು ಹೋಗಿ ಹನ್ನೆರಡನೆ ಶತಮಾನದ ಕೋಟೆ, ಅಲ್ಲಿ ನಿರ್ಮಿಸಿದ್ದ ಮೊದಲ ಹಡಗು 'ಮೇಫ್ಲವರ್' ಹಾಗೂ 'ಟೈಟಾನಿಕ್', 2233 ಜನರನ್ನು ಅಮೆರಿಕಾಕ್ಕೆ ಕೊಂಡೊಯ್ಯುವಾಗ ದುರ್ಗತಿಗೆ ಈಡಾಗಿದ್ದು ಅದರದೆ ಆದ ವಸ್ತು ಸಂಗ್ರಾಲಯ ಎಲ್ಲವನ್ನು ಪ್ರೊ॥ ಹೌಸ್ ತೋರಿಸಿ ವಿವರಿಸಿದರು. ಏಪ್ರಿಲ್ 10, 1912 ರಲ್ಲಿ ಸೌತಾಮ್ಟನ್ ಬಂದರ್‌ನಿಂದ ಹೊರಟ ಟೈಟಾನಿಕ್ ಹಡಗು ತೇಲುವನಗರ ಎಂದು ಹೆಸರು ಪಡೆದಿತ್ತು. ಅದು ಮೂರು ಫುಟ್‌ಬಾಲ್ ಮೈದಾನದ ಉದ್ದ, ಹನ್ನೆರಡು ಅಂತಸ್ತಿನ, ಎಲ್ಲ ಸಂಪತ್ಭರಿತ ಭವ್ಯ ಹಡಗಾಗಿತ್ತು. ಸೌಥಾಮ್ಟನ್ ಬಂದರು ಬಿಟ್ಟು ಫ್ರಾನ್ಸಿನ ಷರ್‌ಬರೋ ಹಾಗೂ ಐರ್‌ಲ್ಯಾಂಡಿನ ಕ್ವೀನ್ಸ್ ಟೌನ್‌ನಲ್ಲಿ ನಿಂತು ಮುಂದೆ ಸಾಗಿ, ಸೌಥಾಮ್ಟನ್ ಬಿಟ್ಟು ನಾಲ್ಕುದಿವಸದ ನಂತರ, ಸಮುದ್ರದ ಮಂಜುಗಡ್ಡೆಯ ಗುಡ್ಡಕ್ಕೆ ಡಿಕ್ಕಿ ಹೊಡೆದು ಎರಡೂವರೆ ಕಿಲೋ ಮೀಟರ್ ಆಳಕ್ಕೆ ಮುಳುಗಿತು. ಅದರಲ್ಲಿದ್ದ 2233 ಜನರ ಪೈಕಿ 706 ಜನ ಮಾತ್ರ ದೋಣಿಯಲ್ಲಿ ಬದುಕಿ ಬಂದರು. ಬೇರೆಯವರಿಗೆ ದೋಣಿಗಳು ಸಾಲದೆ ಮುಳುಗಿ ಸತ್ತರು. ಇದರ ಅವಶೇಷಗಳನ್ನು 1985 ರಲ್ಲಿ ಮೆರೈನ್ ಜುಯಾಲಜಿಸ್ಟ್ ಬೆಲ್ಲಾರ್ಡ್ ಎಂಬುವರು ಪತ್ತೆ ಹಚ್ಚಿದರು. ಇದರ ಬಗ್ಗೆ ಒಂದು ಅತ್ಯುತ್ತಮವಾದ ಸಿನೆಮಾವನ್ನು ತೆಗೆದಿದ್ದಾರೆ.

ವೆಲ್‌ಸಿಕಾಲ್ ಕಂಪನಿಯ ಡಾ॥ ವಾಲ್ಟರ್ ಫರ್‌ನೆಸ್, ವಿಂಡ್‌ಸರ್ ರೈಲ್ವೆ ಸ್ಟೇಷನ್‌ನಲ್ಲಿ ಸಂಧಿಸಿದರು. ಅಲ್ಲಿಂದ ರೆಡಿಂಗ್‌ನಲ್ಲಿದ್ದ ವೆಲ್‌ಸಿಕಾಲ್ ಕಂಪನಿ ಆಫೀಸಿಗೆ ಹೋಗಿ ಆ ಕಂಪನಿಯ ವಹಿವಾಟಿನಲ್ಲಿದ್ದ ಕೆಲವು ಮುಖ್ಯ ಕೀಟನಾಶಕಗಳ ಬಳಕೆಯ ಬಗ್ಗೆ ಚರ್ಚಿಸಲಾಯಿತು. ಭೂಮಿಯೊಳಗೆ ಬಾಧಿಸುವ ಕೀಟ ಹತೋಟಿಗೆ ಅದರಲ್ಲೂ ಗೆದ್ದಲು ಮತ್ತು ಬೇರು ತಿನ್ನುವ ಹುಳುಗಳ ಹತೋಟಿಗೆ ಮುಖ್ಯವಾಗಿ ಉಪಯೋಗಿಸುತ್ತಿದ್ದ ಆಲ್‌ಡ್ರಿನ್, ಡೈಆಲ್‌ಡ್ರಿನ್,

ಎನ್‌ಡ್ರಿನ್, ಹೆಪ್ಟಾಕ್ಲೋರ್ ಮತ್ತು ಕ್ಲೋರೋಡೇನ್ ವೆಲ್‌ಸಿಕಾಲ್ ಕಂಪನಿಯ ಮೊದಲ ಕೀಟನಾಶಕಗಳು. ಸುಮಾರು 1946 ರಲ್ಲಿ ಪ್ರಾರಂಭವಾದ ಪ್ರಯೋಗಗಳಿಂದ ಈ ಕೀಟ ನಾಶಕಗಳು, 1950 ರ ಹೊತ್ತಿಗೆ ಯೂರೋಪಿನಾದ್ಯಂತ ಬಳಕೆಗೆ ಬಂದವು. ನಂತರ ಹೆಪ್ಟಾಕ್ಲೋರ್ ಮತ್ತು ಕ್ಲೋರೋಡೇನನ್ನು ವೆಲ್‌ಸಿಕಾಲ್ ಉಳಿಸಿಕೊಂಡು, ಉಳಿದಿದ್ದನ್ನು ಷೆಲ್ ಕಂಪನಿಗೆ ವಹಿಸಿತು. ನನ್ನ ಅಧ್ಯಯನ ಮಣ್ಣು ಜೀವಿಗಳನ್ನು ಕುರಿತಾದ್ದರಿಂದ ಮೇಲೆ ತಿಳಿಸಿದ ಕೀಟನಾಶಕಗಳ ಉಪಯೋಗದಿಂದ ಪರಿಸರಕ್ಕೆ ಆಗುವ ಹಾನಿಯ ಬಗ್ಗೆ ನನಗೆ ಕಳವಳವಿತ್ತು. ಗ್ಯಾಮಾ ಕ್ಲೋರೋಡೇನ್ ವಿಷ ಮಣ್ಣಿನಲ್ಲಿ ನಾಲ್ಕೈದು ವರುಷ ಇರುತ್ತದೆಯೆಂದು ಅಷ್ಟರಲ್ಲಿ ತಿಳಿದಿತ್ತು. ಹತ್ತಾರು ವರುಷಗಳ ನಂತರ ಈ ಕೀಟನಾಶಕಗಳ ಬಳಕೆಯನ್ನು ಪ್ರಪಂಚದಾದ್ಯಂತ ಕಡಿತ ಗೊಳಿಸಿ ಕ್ರಮೇಣ ಬಹಿಷ್ಕರಿಸಲಾಯಿತು. ಇವೆಲ್ಲವೂ ಡಿ.ಡಿ.ಟಿ, ಬಿ.ಹೆಚ್.ಸಿ.ಯ ಹಾಗೆ ಮೂಲತಹ ಕ್ಲೋರಿನೇಟೆಡ್ ಹೈಡ್ರೋಕಾರ್ಬನ್ಸ್ ಆಗಿದ್ದರಿಂದ ಪರೋಕ್ಷವಾಗಿ ಪ್ರಾಣಿ, ಪಕ್ಷಿ, ಮತ್ಸ್ಯಗಳಿಗೆ ಮಾರಕವಾದ್ದರಿಂದ ಇವುಗಳ ಬಳಕೆಯನ್ನು ನಿಷೇಧಿಸಬೇಕಾಯಿತು. ಇಲ್ಲದಿದ್ದರೆ ಇವುಗಳಷ್ಟು ಪರಿಣಾಮಕಾರಿಯಾದ, ಸುಲಭ ಬೆಲೆಗೆ ದೊರೆಯುವ ಮತ್ತಾವ ಕೀಟ ನಾಶಕಗಳು ಇಂದು ದೊರೆಯಲಾರವು.

ಆ ಸಮಯದಲ್ಲಿ ವಿಂಡ್ಸರ್‌ನ ಕಾಸೆಲ್ ಹೋಟಲ್‌ನಲ್ಲಿ ಇಳಿದುಕೊಂಡಿದ್ದಾಗ ಶ್ರೀಮತಿ ಶೀಲಾದಾಸ್‌ರವರು ನನ್ನನ್ನು ನೋಡಲು ಬಂದಿದ್ದರು. ಇಂಟರ್ ನ್ಯಾಷನಲ್ ಟ್ರಾವಲ್ ಸರ್ವೀಸ್ ಬೆಂಗಳೂರು ಮತ್ತು ಮುಂಬೈನ ಮಾಲಿಕರು. ಇವರ ಪತಿ ದಾಸ್‌ರವರು ನನ್ನ ಬಾಲ್ಯ ಸ್ನೇಹಿತರು. ನನ್ನ ದೇಶ ವಿದೇಶಗಳ ವಿಮಾನಯಾನವೆಲ್ಲವನ್ನು ಇವರು ಇಂದಿಗೂ ನೋಡಿಕೊಳ್ಳುತ್ತಾರೆ. ನಾನು ಹೋಗಿ ಬರುವ ಕಾಲ, ದೇಶ, ವೇಳೆ, ಇಳಿದುಕೊಳ್ಳುವ ಸ್ಥಳ ಎಲ್ಲವೂ ಇವರ ಮಾಹಿತಿಯಲ್ಲಿರುತ್ತದೆ. ನನ್ನ ಯೂರೋಪ್ ಮತ್ತು ಇಂಗ್ಲೇಂಡಿನ ಈ ಪ್ರವಾಸವನ್ನು ಆಗಸ್ಟ್ 27 ರಿಂದ ಅಕ್ಟೋಬರ್ ಏಳರವರೆಗೆ (1982) ಇವರೆ ನಿಯೋಜಿಸಿದ್ದರು. ನನ್ನ ಅರಿವೆ ಇಲ್ಲದೆ ಇವರು ಬಂದು ಬಾಗಿಲು ಬೆಲ್ ಮಾಡಿ ಒಳಗೆ ಬಂದಾಗ ಆಶ್ಚರ್ಯವಾಯಿತು. ಶ್ರೀಮತಿ ಶೀಲಾದಾಸ್‌ರವರು ಬಹಳ ಹಾಸ್ಯ ಪ್ರಜ್ಞರು, ಬಾರ್ ಅಟ್ ಲಾ ಓದಿದ್ದರೂ, ಇವರ ಯಜಮಾನರು ಸಾಕಷ್ಟು ಸಂಪಾದಿಸುತ್ತಿದ್ದರೂ, ಇವರದೇ ಸ್ವಂತ ಉದ್ದಿಮೆ ಟ್ರಾವಲ್ ಏಜೆನ್ಸಿ ಮಾಡುತ್ತಿದ್ದಾರೆ. ಒಳಗೆ ಬಂದವ್ರರೆ, ನೀವು ಹೊರದೇಶದಲ್ಲಿ ಹೋಗಿ ಏನಾದರೂ ದಾರಿ ತಪ್ಪಿದ್ದೀರ ಎಂದು ನೋಡಿ ನಿಮ್ಮ ಪತ್ನಿಯವರಿಗೆ ತಿಳಿಸಲು ಖುದ್ದಾಗಿ ಬಂದೆ, ನೀವು ಬರುವಾಗ ಹೆಚ್ಚಿನ ದುಡ್ಡೇನು ತರದೆ ಇಂತಹ ಹೋಟೆಲ್‌ಗಳಲ್ಲಿ ಹೇಗೆ ಇಳಿದುಕೊಳ್ಳುತ್ತೀರಿ ಎಂದು ನೋಡಿ ಹೋಗಲು ನನ್ನ ಸ್ನೇಹಿತರು ರಾಮನ್ ಕೆ. ಟನ್ನಾರವರನ್ನು ಕರೆದುಕೊಂಡು ಈ ಹೋಟೆಲ್‌ನ್ನು ಪತ್ತೆ ಹಚ್ಚಿ ಬಂದೆ ಎಂದರು. ಅವರ ಉದ್ದಿಮೆಯ ನಿಮಿತ್ತ ಲಂಡನ್‌ನಲ್ಲಿ ನಡೆದ ಒಂದು ಸಮ್ಮೇಳನಕ್ಕೆ ಬಂದಿದ್ದರು.

ಮರುದಿನ ಭಾನುವಾರ ವಾಲ್ಟರ್ ಫರ್‌ನೆಸ್‌ರವರು ವಿಂಡ್ಸರ್ ಪ್ಯಾಲೇಸಿಗೆ ಕರೆದುಕೊಂಡು ಹೋದರು. ಬಕಿಂಗ್‌ಹ್ಯಾಮ್ ಪ್ಯಾಲೇಸಿಗೂ ವಿಂಡ್ಸರ್ ಪ್ಯಾಲೇಸಿಗೂ ಹೋಲಿಸುವ ಹಾಗಿಲ್ಲ. ಕಲ್ಲಿನ ಕೋಟೆಯಂತಿರುವ, ಈ ಅರಮನೆಯ ಒಳಗೆ ಗತಗಾಲದ ವೈಭವೆಲ್ಲವನ್ನು ಪ್ರದರ್ಶಿಸಿದ್ದಾರೆ. ಬ್ರಿಟಿಷರು ಮೂರನೆ ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನನನ್ನು ಕೊಂದು

ಅವನಲ್ಲಿದ್ದ ಚಿನ್ನದ ಸಿಂಹವನ್ನು ಕೊಂಡೊಯ್ದು ಇಲ್ಲಿಟ್ಟಿದ್ದಾರೆ. ಸುಪ್ರಸಿದ್ಧ ಚಿತ್ರಕಾರರಾದ ರೆಂಬ್ರಾಂಟ್, ರೂಬೆನ್, ವಾನ್‌ಡೂಕ್ ಮುಂತಾದವರ ಒರಿಜಿನಲ್ ಪೇಂಟಿಂಗ್ಸ್ ಇಲ್ಲಿವೆ. ಬ್ರಿಟಿಷರು ದಂಡೆಯಾತ್ರೆ ಮಾಡಿದ್ದ ಯುದ್ಧದಲ್ಲಿ ಜಯಗಳಿಸಿದ ಲಾರ್ಡ್ ವೆಲಿಂಗ್‌ಡನ್ ನಂತಹ ನೂರಾರು ಯೋಧರ ಫೋಟೋಗಳ ಪೇಂಟಿಂಗ್ಸ್ ಇಲ್ಲಿವೆ. ಈ ಅರಮನೆಗೆ ಹೊಂದಿಕೊಂಡಿದ್ದ ಚರ್ಚ್‌ನಲ್ಲಿ ಫರ್‌ನೆಸ್‌ರವರ ಜೊತೆಯಲ್ಲಿ ಪ್ರೇಯರ್‌ನಲ್ಲಿ ಭಾಗವಹಿಸಿ ಏಸುಕ್ರಿಸ್ತನಿಗೆ ತಲೆಬಾಗಿನಮಿಸಿ ಬಂದೆ. ಶ್ರೀರಾಮ, ಶ್ರೀ ಕೃಷ್ಣ, ಮಹಾತ್ಮ ಗಾಂಧಿ, ಬುದ್ಧದೇವ, ಏಸುಕ್ರಿಸ್ತ, ಶ್ರೀ ರಾಮಕೃಷ್ಣ ಪರಮಹಂಸ ನನ್ನ ಆರಾಧನ ಆದರ್ಶಿಗಳು.

ವಾಲ್ಟರ್ ಫರ್‌ನೆಸ್‌ರವರಿಗೆ ಒಮ್ಮೆ ಭಾರತಕ್ಕೆ ಭೇಟಿ ನೀಡುವ ಬಯಕೆ ಇತ್ತು. ಮುಖ್ಯ ಉದ್ದೇಶ ಭಾರತವನ್ನು ನೋಡುವುದಕ್ಕಿಂತ ಸುಮಾರು ಇಪ್ಪತ್ತೈದು ವರುಷದ ಹಿಂದೆ ಅವರ ಜೊತೆಯಲ್ಲಿದ್ದ ರಾಮನ್ ನೋಡುವ ಬಯಕೆ. ಅವರಿಬ್ಬರು ಅಗಲಿದ ನಂತರ ಕೆಲವು ಸಮಯ ಪತ್ರವ್ಯವಹಾರ ಮಾಡಿ ನಂತರ ಸಂಪರ್ಕವೇ ಇಲ್ಲದೆ ಪ್ರಿಯತಮನಿಗೆ ಹಾತೊರೆಯುವಂತೆ ಅವರನ್ನು ಮತ್ತೆ ಕಾಣುವ ಬಯಕೆ ಅವರದಾಗಿತ್ತು. ನೀವೇನಾದರೂ ರಾಮನ್ ನೋಡಿದ್ದೀರಾ, ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಕೆಲಸಮಾಡುತ್ತಾರೆ ಎಂದು ನನ್ನನ್ನು ಕೇಳಿದರು. ಅವರ ವೃತ್ತಿ ಏನು, ಯಾವ ಡಿಪಾರ್ಟ್‌ಮೆಂಟ್, ಅಲ್ಲಿಯೇ ಈಗಲೂ ಇದ್ದಾರ ಒಂದೂ ಅವರಿಗೆ ತಿಳಿಯದು. ಅವರ ಆಸೆಯಂತೆ ಎರಡು ವರುಷಗಳ ನಂತರ ಬೆಂಗಳೂರಿಗೆ ಬಂದರು. ನನ್ನ ಅತಿಥಿಯಾಗಿದ್ದರು. ಅವರ ಕಂಪನಿಯ ಕೆಲಸದ ನಿಮಿತ್ತ ಸಿಲೋನಿಗೆ ಹೋಗಿದ್ದವರು ಬೆಂಗಳೂರು ಮುಖಾಂತರ ಇಂಗ್ಲೆಂಡಿಗೆ ಹೋಗುವವರಿದ್ದರು. ನನಗೆ ತುರ್ತು ಕೆಲಸವಿದ್ದದ್ದರಿಂದ ಒಂದು ಸಂಜೆ ಅವರೊಬ್ಬರೇ ಪೇಟೆಯಲ್ಲಿ ಅಲೆದಾಡಿ ಬರುತ್ತೇನೆಂದು ಹೋಗಿದ್ದರು. ರಾತ್ರಿ ಊಟಕ್ಕೆ ನಮ್ಮ ಗೆಸ್ಟ್‌ಹೌಸ್‌ನಲ್ಲಿ ಏರ್ಪಾಡಾಗಿತ್ತು. ಎಲ್ಲಿಂದಲೋ ಫೋನ್ ಮಾಡಿ, ದಯವಿಟ್ಟು ಕ್ಷಮಿಸಿ ಊಟಕ್ಕೆ ಬರುವುದಕ್ಕಾಗುವುದಿಲ್ಲ; ರಾತ್ರಿ ಮಲಗಲು ಬರುತ್ತೇನೆ; ನಿಮ್ಮೊಂದಿಗೆ ನಾಳೆ ಮಾತನಾಡುತ್ತೇನೆಂದು ಹೇಳಿದರು. ಮರುದಿನ ಬೆಳಿಗ್ಗೆ ಕಾಲೇಜಿಗೆ ಕರೆದುಕೊಂಡು ಹೋಗಲು ಹೋದಾಗ ಫರ್‌ನೆಸ್‌ರವರು "ಡಾ॥ ವೀರೇಶ್ ನಾನು ಈಗ ಹೇಳುವುದನ್ನು ನೀವು ಖಂಡಿತ ನಂಬುವುದಿಲ್ಲ, ಆದರೆ ಇದು ಸತ್ಯ, ನೆನ್ನೆ ಸಂಜೆ ಮೆಜೆಸ್ಟಿಕ್‌ನಲ್ಲಿ ಹೋಗುತ್ತಿರುವಾಗ ಎದುರಿಗೆ ರಾಮನ್ ಸಿಕ್ಕಿದರು. ಇಬ್ಬರು ಕೆಲವು ನಿಮಿಷ ಒಬ್ಬರಿಗೊಬ್ಬರು ನೋಡಿ ಪರಿಚಯಿಸಿಕೊಂಡೆವು. ಅವರ ಜೊತೆ ಮಲ್ಲೇಶ್ವರಂನಲ್ಲಿ ಅವರ ಮನೆಗೆ ಹೋಗಿ ಊಟಮಾಡಿ ಮಾತಾಡಿ ಇಲ್ಲಿಗೆ ಬಂದಾಗ ಮಧ್ಯ ರಾತ್ರಿಯಾಗಿತ್ತು" ಎಂದರು. ನಾನು ನಂಬಿದರೆಷ್ಟು ಬಿಟ್ಟರೆಷ್ಟು ಆದರೆ ಅವರ ಮುಖದಲ್ಲಿದ್ದ ತೃಪ್ತಿ ಯಾವುದೋ ಕಳೆದು ಹೋದ ನಿಧಿ ಸಿಕ್ಕಿದಷ್ಟು ಸಂತೋಷವಾಗಿತ್ತು. ಶ್ರೀ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಹಾಗೆ ದಿನವೂ ಹಂಬಲಿಸಿ ಅತ್ತರೆ ದೇವರೂ ಕೂಡ ಪ್ರತ್ಯಕ್ಷನಾಗುತ್ತಾನೆ. ಇವರ ಈ ಗಾಢವಾದ ಬಯಕೆ ಈಡೇರಿದ್ದು ಒಂದು ದೈವ ಸಂಕಲ್ಪವಿರಬೇಕೆಂದೆನಿಸಿತು ನನಗೆ.

ಮುಂದಿನ ಎರಡು ದಿವಸ ಬ್ರಿಟಿಷ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ, ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಎಂಟಮಾಲಜಿ ಮತ್ತು ಬ್ರಿಟಿಷ್ ಕೌನ್ಸಿಲ್‌ಗೆ ಹೋಗುವ ಕಾರ್ಯಕ್ರಮವಿತ್ತು. ಬ್ರಿಟಿಷ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿಯಲ್ಲಿ 1975 ರಲ್ಲಿ

ಎರಡು ವಾರಗಳಿಸಿದ್ದ ಸಂಪರ್ಕ ಮತ್ತು ನನ್ನ ಗುರುಗಳಾಗಿದ್ದ ಬಿ. ಆರ್. ಸುಬ್ಬರಾವ್‌ರವರನ್ನು ಸಂಧಿಸಿ, ಪುನಃ ಚೇತನಗೊಳಿಸುವ ಉದ್ದೇಶವಾಗಿತ್ತು. ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಎಂಟಮಾಲಜಿಯ ಮುಖ್ಯಸ್ಥರಾಗಿ ಮೊದಲ ಬಾರಿಗೆ ಭಾರತೀಯರೊಬ್ಬರು ಇದ್ದದ್ದು ಡಾ॥ ಎನ್. ಸಿ. ಪಟೇಲ್. ನಾನು ಡೆಲ್ಲಿಯಲ್ಲಿ ಎಂ.ಎಸ್‌ಸಿ. ಮಾಡುತ್ತಿದ್ದಾಗ ಪ್ರಾಧ್ಯಾಪಕ ರಾಗಿದ್ದರು ಹಾಗೂ ಡಾ॥ ಸುಬ್ಬರಾವ್‌ರವರ ಸಹೋದ್ಯೋಗಿಗಳಾಗಿದ್ದರು. ಅದರ ಹೆಸರಿಗೆ ತಕ್ಕಂತೆ ಕಾಮನ್‌ವೆಲ್ತ್ ರಾಷ್ಟ್ರಗಳ ಎಲ್ಲಾ ಕೀಟ ಸಮಸ್ಯೆಗಳಿಗೆ ಇದೊಂದು ಕೇಂದ್ರವಾಗಿತ್ತು. ಭಾರತ ವರುಷಕ್ಕೆ ಒಂದು ಲಕ್ಷ ಪೌಂಡು (ಅಂದರೆ ಸುಮಾರು 50 ಲಕ್ಷ ರೂಪಾಯಿ) ಇದರ ಕಾರ್ಯ ನಿರ್ವಹಣೆಗೆ ಕೊಡುತ್ತಿತ್ತು. ಆದರೆ ಅದರಲ್ಲಿ ಕೆಲಸ ಮಾಡುತ್ತಿದ್ದ 400 ಜನರಲ್ಲಿ ಕೇವಲ ನಾಲ್ಕು ಜನ ಮಾತ್ರ ಭಾರತೀಯರಿದ್ದರು. ಸ್ವಾತಂತ್ರ್ಯ ಬಂದ ನಂತರವೂ ಕಾಮನ್‌ವೆಲ್ತ್ ಹೆಸರಿನಲ್ಲಿ ಒಂದಲ್ಲ ಒಂದು ವಿಧದಲ್ಲಿ ಭಾರತದ ದುಡ್ಡು ಬ್ರಿಟಿಷರಿಗೆ ಪರೋಕ್ಷವಾಗಿ ಸಂದಾಯವಾಗುತ್ತಿತ್ತು. ಪ್ರತಿಯಾಗಿ ಬ್ರಿಟನ್‌ನಿಂದ ಭಾರತಕ್ಕೆ ಹಲವು ಬಗೆಯ ಪ್ರಯೋಜನವೂ ಆಗಿದೆ.

ಬ್ರಿಟಿಷ್ ಕೌನ್ಸಿಲ್‌ನಿಂದ ಇಂಗ್ಲೆಂಡಿನ ನನ್ನ ಕಾರ್ಯಕ್ರಮ ರೂಪುಗೊಂಡಿದ್ದರಿಂದ ಅದು ಮುಗಿದ ನಂತರ ಒಂದು ರಿಪೋರ್ಟ್ ಕೊಡುವುದು ಪ್ರತೀತಿ. ಹೀಗೆಯೇ ಮುಂದೆ ಭಾರತ ದಲ್ಲಿ ಕೈಗೊಳ್ಳುವ ಕೆಲಸದ ಕರಡು ಪ್ರತಿಯನ್ನು ಕೊಡುವುದು ಪ್ರತೀತಿ. ಟ್ರಫಾಲ್‌ಗರ್ ಸ್ಕ್ವೇರ್‌ನಲ್ಲಿರುವ ಸ್ಪ್ರಿಂಗ್‌ಗಾರ್ಡನ್ ಬ್ರಿಟಿಷ್ ಕೌನ್ಸಿಲ್ ಕಛೇರಿಗೆ ಹೋಗುವ ದಿನ ಟ್ರಫಾಲ್‌ಗರ್ ಚೌಕವನ್ನು ದಾಟಲು ಮೂರು ಗಂಟೆ ಹಿಡಿಯಿತು. ಒಂದು ದೊಡ್ಡ ಟ್ರೇಡ್ ಯೂನಿಯನ್‌ನ ಜಾತ ಹೋಗುತ್ತಿತ್ತು. ಭಾರತದಲ್ಲಿ ಪ್ರತಿ ದಿನ ಇಂತಹ ಯೂನಿಯನ್‌ನ ಜಾತ ನಡೆಯುತ್ತಲೇ ಇರುತ್ತವೆ. ಆದರೆ ನಾನು ಕೇಳಿದ್ದು ಅಥವಾ ನೋಡಿದ್ದು ಇಂಗ್ಲೆಂಡ್, ಯೂರೋಪ್, ಅಮೆರಿಕಾದಲ್ಲಿ ಇಂತಹ ಜಾತಾಗಳು ನಡೆಯುವುದಿಲ್ಲವೆಂದು ಅಥವಾ ಬಹಳ ಅಪರೂಪವೆಂದು. ಅಂತಹ ಅಪರೂಪದ ದೃಶ್ಯ ನನಗೆ ಸಿಕ್ಕಿದ್ದು ಸಂತೋಷ ತರಲಿಲ್ಲ. ಏಕೆಂದರೆ, ಹತ್ತು ಗಂಟೆಗೆ ನಾನು ಸಂಧಿಸಬೇಕಿದ್ದ ಭಾರತದ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರನ್ನು ನೋಡಲಾಗಲಿಲ್ಲ. ಕೇವಲ ಐದು ಹತ್ತು ನಿಮಿಷ ತಡವಾದರೂ ಸಹಿಸದ ಈ ಜನ, ಮೂರು ಗಂಟೆ ಕಾದಾರೆ! ಭಾರತದಲ್ಲಿ ಸ್ಟ್ರೈಕ್, ರೋಡ್ ಬ್ಲಾಕ್, ಮುಷ್ಕರಗಳ ಮಧ್ಯೆ ಗಂಟೆಗಟ್ಟಲೆ ತಡವಾಗಿ ಆಫೀಸಿಗೆ ಹೋಗಿ ಕಾರಣ ಹೇಳಿ ಮೀಟಿಂಗ್ ಮಾಡಿರುವುದನ್ನು ನೋಡಿದ್ದರಿಂದ ಅವರ ಆಫೀಸಿನ ಮುಂದೆಯೇ ಈ ಜಾತ ಹೋಗಿದ್ದರಿಂದ ಕಾದಿರಬಹುದೆಂದು ಗ್ರಹಿಸಿ ಹೋದೆ. ಬಾಗಿಲಲ್ಲಿ ಕಂಡ ಕಪ್ಪನೆ ಹುಡುಗಿ ಹಿಲರಿ ಒ ಬ್ರಿಯನ್ ನೀವು ಏನು ಹೇಳಬೇಕೆಂದಿರುವಿರೋ ಅದನ್ನು ಬರೆದುಕೊಡಲು ಹೇಳಿದ್ದಾರೆ ತಂದಿದ್ದರೆ ಕೊಡಿ ಎಂದು ನಾನು ತಯಾರು ಮಾಡಿದ್ದ ರಿಪೋರ್ಟ್‌ನ್ನು ಕೈಗೆ ತೆಗೆದುಕೊಂಡು ಥ್ಯಾಂಕ್ಸ್ ಹೇಳಿ ಕಳುಹಿಸಿದರು.

* * * *

ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ಎ. ಅಂಡ್ ಎಮ್. ಯೂನಿವರ್ಸಿಟಿಯಲ್ಲಿ 1984ರಲ್ಲಿ ನಡೆದ ಅಂತರರಾಷ್ಟ್ರೀಯ ಸೋರ್ಗಂ ಎಂಟಮಾಲಜಿ ಮೀಟಿಂಗಿಗೆ ನನ್ನನ್ನು ಆಹ್ವಾನಿಸಿದ್ದರು. ಮಣ್ಣು ಜೀವಿಗಳಿಂದ ಜೋಳಕ್ಕೆ ಆಗುವ ತೊಂದರೆ ಮತ್ತು ಅವುಗಳ ಹತೋಟಿಯ ಬಗ್ಗೆ

ಪ್ರಬಂಧವನ್ನು ಮಂಡಿಸಬೇಕಿತ್ತು. ನನಗೆ ಪಶ್ಚಿಮ ರಾಷ್ಟ್ರಗಳ ಕಡೆ ಹೋಗುವ ಸಮಯದಲ್ಲಿ ಬ್ರಿಟಿಷ್ ಕೌನ್ಸಿಲ್ಲಿನ ಫೆಲೋಶಿಪ್, ಇಂಗ್ಲೆಂಡಿನಲ್ಲಿ ಮೊದಲೆ ಸಂಪರ್ಕಿಸಿದ್ದ ಆಕ್ಸ್‌ಫರ್ಡ್, ಸೌಥಾಮ್ಟನ್, ಕಾರ್ಡಿಫ್ ಯೂನಿವರ್ಸಿಟಿಗಳಿಗೆ ಹೋಗಲು ಅನುಮತಿ ಇತ್ತು. ನನ್ನ ಹತ್ತಿರದ ಸಂಬಂಧಿಗಳು ಇಂಗ್ಲೆಂಡಿನಲ್ಲಿದ್ದ ಡಾ॥ ಹೆಚ್. ಎಮ್. ಪುಟ್ಟೇಗೌಡ, ಅಮೆರಿಕಾದಲ್ಲಿದ್ದ ಡಾ॥ ಬಿ. ಪಿ. ರಾಜುಗೌಡ ಮತ್ತು ಡಾ॥ ಹೆಚ್. ಎಮ್. ಅಪ್ಪಸ್ವಾಮಿಗೌಡ ಇವರುಗಳು ಊರಿಗೆ ಬಂದಾಗಲೆಲ್ಲ ಮುಂದೆ ಇಂಗ್ಲೆಂಡ್ ಅಮೆರಿಕಾಕ್ಕೆ ಬರುವಾಗ ಮನೆಯವರನ್ನು ಕರೆದು ಕೊಂಡು ಬರಬೇಕೆಂದು ಸುಮಾರು ಹತ್ತು ವರುಷಗಳಿಂದ ಒತ್ತಾಯಿಸುತ್ತಿದ್ದರು. ನನ್ನ ಪತ್ನಿ ಶಾರದಳ ತೌರೂರಿನ ಮನೆಯವರು ಏರ್ ಟಿಕೆಟ್ ಕೊಂಡು ಕೊಡಲು ಸಿದ್ಧವಿದ್ದರು. ಇವೆಲ್ಲ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಪತ್ನಿ ಸಮೇತ 1984 ರ ಜುಲೈ ನಾಲ್ಕರಂದು ಬೆಂಗಳೂರಿಂದ ಪ್ರಯಾಣ ಬೆಳೆಸಿದೆವು. ಮುಂಬೈಗೆ ಬೆಳಿಗ್ಗೆ ಹತ್ತು ಗಂಟೆಗೆ ತಲುಪಿದ್ದರಿಂದ ಮುಂದಿನ ಪ್ರಯಾಣ ರಾತ್ರಿ ಒಂದು ಗಂಟೆಗೆ ಇದ್ದದರಿಂದ ಶಾರದೆಗೆ ಬೊಂಬಾಯಿ ದರ್ಶನವನ್ನು ಸ್ನೇಹಿತರ ಸಹಾಯದಿಂದ ಮಾಡಿಸಿದ್ದಾಯಿತು.

ನಮ್ಮ ಮೊದಲ ಹಾಲ್ಟ್ ಪ್ಯಾರಿಸ್‌ನಲ್ಲಿ. ಎರಡು ದಿವಸಕ್ಕೆ ನನ್ನ ಸ್ನೇಹಿತರಾದ ಗಯಿಸಪ್ಪೆ ಗಾಲಿನಲ್ಲಿಯವರು ಹೋಟೆಲ್ ಶೆಟಾಯ ಫ್ರಾಂಟೆನಾಕ್‌ನಲ್ಲಿ (ಪಯಿರೆ ಚಾರನ್ ಸ್ಟ್ರೀಟ್, ಪ್ಯಾರಿಸ್) ರಿಸರ್ವ್ ಮಾಡಿದ್ದರು. ಅವರನ್ನು ಸಂಧಿಸಲು ತಂಬಾ ಕಾತರನಾಗಿದ್ದೆ. ಹೋಟಲಿಗೆ ಹೋದ ಮೇಲೆ ಕಾರಣಾಂತರದಿಂದ ನಾನು ಬರಲಾಗಲಿಲ್ಲ. ಹೋಟೆಲ್ ಬಿಡುವಾಗ ಬಿಲ್ಲಿಗೆ ರುಜು ಮಾಡಿ ಹೋದರೆ ಸಾಕು ಎಂದು ಒಂದು ಚೀಟಿ ಬರೆದಿಟ್ಟಿದ್ದರು. ನಮ್ಮ ಪ್ರವಾಸವನ್ನು ಮುಗಿಸಿ ಭಾರತಕ್ಕೆ ಬಂದ ನಂತರ ಅವರ ಅಕಾಲಿಕ ಮರಣದ ದುರ್ವಾರ್ತೆ ತಿಳಿಯಿತು. ಅವರೆ ಸ್ವಂತ ಅವರ ಮನೆಯನ್ನು ಸ್ವಿಡ್ಜರ್‌ಲೆಂಡಿನಲ್ಲಿ ಕಟ್ಟುತ್ತಿದ್ದಾಗ ಹಠಾತ್ತಾನೆ ಹೃದಯಾಘಾತದಿಂದ ಮೃತಪಟ್ಟರೆಂದು ಗಾಲಿನಲ್ಲಿ ಹಾಗೂ ನನಗೂ ಸ್ನೇಹಿತರಾದ ಶ್ರೀಮಾನ್ ಪಿಳ್ಳಬೈರಪ್ಪನವರು ತಿಳಿಸಿದರು. ನನ್ನ ಒಡಹುಟ್ಟಿದವರೊಬ್ಬರನ್ನು ಕಳೆದುಕೊಂಡಷ್ಟೇ ನೋವಾಯಿತು.

ಹೋದ ದಿವಸವೇ ಬಸ್ಸಿನಲ್ಲಿ ಪ್ಯಾರಿಸ್ ನೋಡಿದ್ದಾಯಿತು. ಬೋಟ್ ರೈಡಿಂಗ್ ಹೋದೆವು. ಮರುದಿವಸ ಲೂವೆ ಮ್ಯೂಸಿಯಂ ನೋಡಿ. ಎಲಿಸಿ ಸ್ಟ್ರೀಟ್‌ನಲ್ಲಿ ಅಡ್ಡಾಡಿ ಸಂಜೆ ಲಿಡೋ ಥಿಯೇಟರಲ್ಲಿ ಕ್ಯಾಬರೆ ಡಾನ್ಸ್ ನೋಡಿದೆವು. ಹೊರದೇಶದ ನನ್ನ ಪ್ರವಾಸಗಳಲ್ಲಿ ಕ್ಯಾಬರೆ ನೃತ್ಯ ನೋಡಿದ್ದು ಅದೇ ಮೊದಲು ಮತ್ತು ಕೊನೆ. ಹೋಟೆಲಿನಲ್ಲಿ ಎಲ್ಲ ಬಗೆಯ ಪಾನೀಯಗಳಿದ್ದರೂ ನಮ್ಮಿಬ್ಬರಿಗೆ ಅವುಗಳಾವುದರ ರುಚಿಯೂ ಗೊತ್ತಿರಲಿಲ್ಲ. ಆದರೂ ಎಲ್ಲರ ಬಾಯಲ್ಲಿ ಶಾಂಫೇನ್ ಹೆಸರು ಕೇಳಿ ಬರುತ್ತಿದ್ದರಿಂದ ಕುಡಿಯಲು ರುಚಿಯಿರ ಬಹುದೆಂದು ಪ್ಯಾರಿಸ್‌ನ ಪ್ರವಾಸದ ಗುರುತಿಗಾಗಿ ಶಾಂಫೇನ್ ಕುಡಿಯುವುದೆಂದು ತೀರ್ಮಾನ ಮಾಡಿ ಬಾಟ್ಲ್ ಓಪನ್ ಮಾಡಿ ಗ್ಲಾಸುಗಳಿಗೆ ಹಾಕಿ ಬಾಯಿಗಿಟ್ಟರೆ ಗುಟಗಿಸಲಾಗಲಿಲ್ಲ. ಅದೇ ಮೊದಲು ಶಾಂಫೇನ್ ಸ್ವಾದ ನೋಡಿದ್ದು ಅದನ್ನು ಮತ್ತೆ ಮುಚ್ಚುಳ ಹಾಕಿ ಇಟ್ಟೆವು.

ಮರುದಿನ ಡಿಗಾಲ್ ಏರ್ ಪೋರ್ಟ್‌ಗೆ ಹೋಗಿ ಕ್ಲೋಕ್ ರೂಂನಲ್ಲಿ ಇಟ್ಟಿದ್ದ ಬ್ಯಾಗುಗಳನ್ನು ತೆಗೆದುಕೊಂಡು ಟರ್‌ಮಿನಲ್ ಎ ಇಂದ ಬಿ ಗೆ ಸುರಂಗಮಾರ್ಗದಲ್ಲಿ ಹೋಗಿ ಲಂಡನ್‌ಗೆ ಹೋಗುವ ವಿಮಾನ ಹತ್ತಿದ್ದೆವು. ಲಂಡನ್ ಹೀಥ್ರೊ ವಿಮಾನ ನಿಲ್ದಾಣದಿಂದ

ಟ್ಯೂಬ್ ಟ್ರೈನ್‌ನಲ್ಲಿ ವಿಕ್ಟೋರಿಯ ಟರ್ಮಿನಲ್‌ಗೆ ಹೋಗಿ ಬ್ರಿಟಿಷ್ ಕೌನ್ಸಿಲಿನ ರೆಪ್ರಸೆಂಟೇಟಿವ್ ಸಂಧಿಸಿ ನನ್ನ ಮುಂದಿನ ಕಾರ್ಯಕ್ರಮವನ್ನು ನಿರೂಪಿಸಿ, ·ನಂತರ ಅವರ ವಾಹನದಲ್ಲಿ ಪ್ಯಾಡಿಂಗ್‌ಟನ್ ಸ್ಟೇಷನ್‌ಗೆ ಹೋಗಿ, ಕಾರ್ಡಿಫ್‌ಗೆ ಹೋಗುವ ರೈಲು ಹತ್ತಿದೆವು. ಕಾರ್ಡಿಫ್‌ನಲ್ಲಿ ಡಾ॥ ಪುಟ್ಟೇಗೌಡ ಮತ್ತು ಅವರ ಪತ್ನಿ ಉಜ್ವಲ ಕಾದಿದ್ದರು. ಮುಂದಿನ ಎರಡು ದಿವಸ ಶನಿವಾರ, ಭಾನುವಾರ ಅವರೊಂದಿಗೆ ಕಾಲಕಳೆದು ಶಾರದಳನ್ನು ಅವರ ಮನೆಯಲ್ಲೇ ಬಿಟ್ಟು ಸೋಮವಾರದಿಂದ ನನ್ನ ಕಾರ್ಯಕ್ರಮಕ್ಕೆ ಅನುವಾದೆ.

ಕಾರ್ಡಿಫ್ ಯೂನಿವರ್ಸಿಟಿಯಲ್ಲಿ ಡಾ॥ ಮೊರ್ಗಾನ್ ಮತ್ತು ಅವರ ಸಹೋದ್ಯೋಗಿಗಳು ಮಾಡುತ್ತಿದ್ದ ಸಂಶೋಧನೆಯನ್ನು ವೀಕ್ಷಿಸಿ ಸಂಜೆ ಲಂಡನ್‌ಗೆ ಪ್ರಯಾಣ ಬೆಳೆಸಿದೆ. ಪ್ಯಾಡಿಂಗ್ ಸ್ಟೇಷನ್ನಿಂದ ಸೌತ್‌ಕೆನ್ಸಿಂಗ್ ಸ್ಟೇಷನ್‌ಗೆ ಟ್ಯೂಬ್ ಟ್ರೈನಲ್ಲಿ ಹೋಗಿ ನಂ. 42 ಆನ್‌ಸ್ಲೋಗಾರ್ಡನ್‌ನಲ್ಲಿ ಗೊತ್ತು ಮಾಡಿದ್ದ ಹೋಟಲಿಗೆ ಹೋದೆ. ಮುಂದಿನ ಮೂರು ದಿನಗಳಲ್ಲಿ ನನಗೆ ನಿಗಧಿ ಮಾಡಿದ್ದ ಕಾರ್ಯಕ್ರಮಗಳನ್ನು ಪೂರೈಸುವಷ್ಟರಲ್ಲಿ ಡಾ॥ ಪುಟ್ಟೇಗೌಡ ಅವರ ಪತ್ನಿ ಉಜ್ವಲ, ಮಾಸ್ಟರ್ ಪ್ರೀತಮ್ ಮತ್ತು ಶಾರದ ನನ್ನೊಂದಿಗೆ ಸೇರಿದರು. ಅಂದು ಸಂಜೆ ಶೆಲ್ ಕಂಪನಿಯ ಡೈರೆಕ್ಟರ್ ಜೆಫ್ರಿಯವರು ನಮ್ಮಿಬ್ಬರನ್ನು ಊಟಕ್ಕೆ ಕರೆದಿದ್ದರು. ಇಂಡಿಯನ್ ರೆಸ್ಟೋರೆಂಟ್ ರೆಡ್‌ಫೋರ್ಟ್‌ಗೆ ಹೋಗಿ ಊಟ ಮಾಡಿದೆವು. ಊಟ ಮಾಡುತ್ತಿದ್ದಾಗ ಕಿಟಕಿಯ ಕಡೆ ಕೈತೋರಿಸಿ ಎದುರಿಗೆ ಇರುವ ಮನೆಯಲ್ಲಿ ಕಾರ್ಲ್‌ಮಾರ್ಕ್ಸ್ ವಾಸವಾಗಿದ್ದರೆಂದು ಜೆಫ್ರಿಯವರು ತೋರಿಸಿದರು. ಈ ಹಿಂದೆ ಹಲವು ಸಲ ಲಂಡನ್‌ಗೆ ಹೋಗಿದ್ದರೂ ಪ್ರವಾಸಿಗನಂತೆ ಲಂಡನ್ ಪಟ್ಟಣವನ್ನು ನೋಡಿರಲಿಲ್ಲ. ಈ ಬಾರಿ ಡಾ॥ ಪುಟ್ಟು ಫ್ಯಾಮಿಲಿಯೊಂದಿಗೆ ಲಂಡನ್ ನಗರವನ್ನು ನೋಡುವ ಅವಕಾಶವಾಯಿತು. ಕೊನೆಯಲ್ಲಿ ಅವರೇ ಹೀಥ್ರೊ ಏರ್‌ಪೋರ್ಟಿಗೆ ಹೋಗಲು ಸೌತ್ ಕೆನ್ಸಿಂಗ್‌ಟನ್ ಸ್ಟೇಷನ್‌ಗೆ ತಂದು ಬಿಟ್ಟರು. ಪಿಕಾಡಿಲೆ ಲೈನ್ ಹಿಡಿದು ಹೀಥ್ರೊ ಏರ್‌ಪೋರ್ಟಿಗೆ ಹೋಗಿ ನ್ಯೂಯಾರ್ಕ್ ಪ್ಲೇನು ಹತ್ತಿದೆವು (13-7-84).

ನ್ಯೂಯಾರ್ಕ್ ಜೆ.ಎಫ್.ಕೆ. ಏರ್‌ಪೋರ್ಟಿನಿಂದ ಬೇರೆ ವಿಮಾನದಲ್ಲಿ ವಾಷಿಂಗ್‌ಟನ್‌ಗೆ ಹೋದಾಗ ಡಾ॥ ಅಪ್ಪಸ್ವಾಮಿ ಅವರ ಪತ್ನಿ ರಮಾ ಮತ್ತು ಪುತ್ರಿ ಕಾದಿದ್ದರು. ಎಲ್ಲರೂ ಮೆರಿಲ್ಯಾಂಡ್ ಶವರ್ಲೆಯಲ್ಲಿದ್ದ ಅವರ ಮನೆಗೆ ಹೋದೆವು. ಮರುದಿನ ಎಲ್ಲರೂ ವಾಷಿಂಗ್‌ಟನ್‌ಗೆ ಸುಮಾರು ನೂರು ಮೈಲಿ ದೂರದಲ್ಲಿರುವ ಲವುರೆ ಟಾವರನ್ ನೋಡಲು ಹೋದೆವು. ಅದೊಂದು ಅದ್ಭುತ, ಸುಂದರ, ಸೌಮ್ಯನೋಟ, ಸುಮಾರು 300 ಅಡಿ ನೆಲಮಾಳಿಗೆಗೆ ಲಿಫ್ಟ್‌ನಲ್ಲಿ ಇಳಿದರೆ ಸ್ವಾಭಾವಿಕವಾಗಿ ಮಾರ್ಪಾಟಾಗಿದ್ದ ಜೇನು ಶಿಲೆಗಳ ಅವತಾರ ಹೇಳಿ ಮಾಡಿಸಿದ ಹಾಗೆ ನಿರ್ಮಿತವಾಗಿದ್ದವು. ಅದಕ್ಕೆ ಒಪ್ಪುವ ಹಾಗೆ ಬೆಳಕು ದಾರಿ ಮಾಡಿದ್ದಾರೆ. ಸ್ವಾಭಾವಿಕ ಸುರಂಗದಲ್ಲಿ ಕಿಲೋಮೀಟರ್ ಉದ್ದಕ್ಕೆ ನಡೆಯುತ್ತಿದ್ದರೆ ಕಗ್ಗತ್ತಲಿನಲ್ಲಿ ಕಾಡಿನ ದಾರಿಯಲ್ಲಿ ನಡೆದಂತೆ ಭಾಸವಾಗುತ್ತಿತ್ತು. ಸದಾ ಹರಿಯುತ್ತಿರುವ ಹೊಳೆಯ ಉಗಮವನ್ನು ನೋಡಲು ಅದರ ಅಭಿಮುಖವಾಗಿ ಹೊರಟೆವು. ಎಲ್ಲಿಯೋ ದೊಡ್ಡ ಜಲಪಾತದಿಂದ ನೀರು ಬಿದ್ದ ಶಬ್ದ ಬರುಬರುತ್ತಾ ಜೋರಾಗಿ ಕೇಳಲು ಪ್ರಾರಂಭಿಸಿತು. ಹತ್ತಾರು ಅಡಿ ಎತ್ತರದ ಸುರಂಗಮಾರ್ಗ ಇದ್ದಕ್ಕಿದ್ದ ಹಾಗೆ ನೂರಾರು ಅಡಿ ಎತ್ತರಕ್ಕೆ ಕಾಣಿಸಿತು. ಸುಮಾರು ಮುನ್ನೂರು

ಅಡಿ ಎತ್ತರದಿಂದ ಬೀಳುತ್ತಿದ್ದ ಜಲಪಾತ ವೇದ್ಯವಾಯಿತು. ಎಲ್ಲರೂ ಅಬ್ಬಾ ಎಂದು ಕಣ್ತೆರೆದರು. ಈ ಕಾಲದಲ್ಲಿ ಎಲ್ಲೆಲ್ಲಿಯೂ ಬೋರ್‌ವೆಲ್ ತೆಗೆಯುವವರು ಅದನ್ನು ನೋಡಬೇಕು. ನೂರಾರು ಅಡಿ ಆಳದಲ್ಲಿ ಹಳ್ಳಕೊಳ್ಳ ಜಲಪಾತಗಳು ಹರಿಯುವುದು ಹೇಗೆ ಎಂದು. ಹರಿಯುವ ಹಳ್ಳಕೊಳ್ಳಗಳ ಗುಂಡಿಗೆ ಸರಿಯಾಗಿ ಬೋರ್ ಸಿಕ್ಕಿದರೆ ಯಥೇಚ್ಛವಾಗಿ ನೀರು ಸಿಕ್ಕುವುದು ಹೇಗೆ? ಅದು ತಪ್ಪಿದರೆ ಸಾವಿರ ಅಡಿ ಹೋದರೂ ಸಿಕ್ಕದಿರುವುದು ಹೇಗೆಂದು ಅರ್ಥವಾಗುತ್ತದೆ. ಈ ಟಾವರನ್ ಪತ್ತೆ ಹಚ್ಚಿದ್ದು ಕೂಡ ಆಕಸ್ಮಿಕವಾಗಿ, ಒಬ್ಬ ಕುರಿ ಕಾಯುವ ಹುಡುಗ ಕಲ್ಲು ಬೀಸಿದಾಗ ಒಂದು ಕಂದರಕ್ಕೆ ಬಿದ್ದು ಅವನ ಕುತೂಹಲ ಕೆರಳಿಸಿ ಪತ್ತೆಯಾಯಿತೆಂದು ಹೇಳಿದರು.

ಶಾರದಳನ್ನು ಡಾ॥ ಅಪ್ಪಸ್ವಾಮಿ ಮನೆಯಲ್ಲಿ ಬಿಟ್ಟು ನಾನು ಟೆಕ್ಸಾಸ್‌ಗೆ ಬಂದ ಕಾರ್ಯ ನಿಮಿತ್ತ ಹೋದೆ. ಟೆಕ್ಸಾಸ್‌ನ ಹೂಸ್ಟನ್ ಏರ್‌ಪೋರ್ಟ್ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿದ ಮಾದರಿ ವಿಮಾನ ನಿಲ್ದಾಣ. ಅಲ್ಲಿರುವ ಮೂರು ಟರ್‌ಮಿನಲ್‌ಗಳಿಗೆ ಆಟೋಮ್ಯಾಟಿಕ್ ಕಾರ್ ಟ್ರೈನಲ್ಲಿ ಹೋಗಬೇಕು. ಹೂಸ್ಟನ್ನಿಂದ ಕಾಲೇಜ್ ಸ್ಟೇಷನ್ನಿಗೆ ಕೇವಲ ಎಂಭತ್ತು ಮೈಲಿ ಬೇರೆ ವಿಮಾನದಲ್ಲಿ ಹೋಗಬೇಕು. ಹದಿನೈದು ಸೀಟಿನ ಈ ವಿಮಾನ ನಾಲ್ಕೈದು ಸಾವಿರ ಅಡಿ ಎತ್ತರದಲ್ಲಿ ಹಾರಿ ಕೆಳಗಿರುವವರು ಕೈಗೆಟುಕುವರೆ ಎಂದು ಭಾಸವಾಗುತ್ತಿತ್ತು. ಕಾಲೇಜ್ ಸ್ಟೇಷನ್ ಎ. ಅಂಡ್ ಎಮ್. ಯೂನಿವರ್ಸಿಟಿಯ ಖಾಸಗಿ ವಿಮಾನ ನಿಲ್ದಾಣದಲ್ಲಿ ನಮ್ಮ ಕಾಲೇಜಿನಲ್ಲಿ ಓದಿದ್ದ ಏಳು ವಿದ್ಯಾರ್ಥಿಗಳು ಕಾದಿದ್ದು ನೋಡಿ ನನಗೆ ಆಶ್ಚರ್ಯವಾಯಿತು. ಅವರಿಗಾರಿಗೂ ನಾನು ಬರುವುದನ್ನು ಬರೆದಿರಲಿಲ್ಲ. ಅಂತರರಾಷ್ಟ್ರೀಯ ಸೋರ್ಗಂ ಮೀಟಿಂಗಿಗೆ ಬರುವವರ ಹೆಸರಿನಲ್ಲಿ ನನ್ನ ಹೆಸರಿದ್ದದ್ದನ್ನು ನೋಡಿ ನಾನು ಬರುವ ವೇಳೆಯನ್ನು ಮೀಟಿಂಗಿನ ವ್ಯವಸ್ಥಾಪಕರಾಗಿದ್ದ ಡಾ॥ ಜಾರ್ಜ್ ಎಲ್. ಟೀಟ್ಸ್‌ರಿಂದ ತಿಳಿದು ಬಂದಿದ್ದರು. ಮೂರು ದಶಕಗಳಿಗೂ ಮೀರಿ ಪ್ರಾಧ್ಯಾಪಕ ವೃತ್ತಿ ಮಾಡಿದ ಬಹು ದೊಡ್ಡ ಹೆಮ್ಮೆ ಎಂದರೆ ನಾನು ದೇಶ ವಿದೇಶಗಳಲ್ಲಿ ಹೋದಲೆಲ್ಲ ಕಾಣುವ ನಮ್ಮ ವಿದ್ಯಾರ್ಥಿಗಳು ಆತ್ಮೀಯವಾಗಿ ಕಂಡು ಮಾತನಾಡಿಸುತ್ತಿದ್ದದ್ದು. ಕೆಲವೊಮ್ಮೆ ಆದರಿಸಿ ಸತ್ಕರಿಸುತ್ತಿದ್ದದ್ದು. ನನ್ನ ಊಟ ವಸತಿಗೆ ಪ್ರತ್ಯೇಕ ಏರ್ಪಾಡು ಮಾಡಿದ್ದರೂ ಹೆಚ್ಚಿನ ಕಾಲವನ್ನು ನಾನಿದ್ದಷ್ಟು ದಿವಸ ಇಲ್ಲಿ ಇವರೊಂದಿಗೆ ಕಳೆದಿದ್ದೇನೆ. ದಿನಕ್ಕೊಬ್ಬರು ಅವರೇ ಮಾಡಿದ ಅಡಿಗೆ ಎಲ್ಲರೂ ಕಲೆತು ಊಟ ಮಾಡುವಾಗ ಸಿಗುವ ಸಂತೋಷ ಪಂಚತಾರಾ ಹೋಟಲುಗಳಲ್ಲೂ ದೊರೆಯಲಾರದು. ಅಲ್ಲಿಂದ ಹೊರಡುವ ದಿನ ಅವರೆಲ್ಲರೂ ವಿಮಾನ ನಿಲ್ದಾಣಕ್ಕೆ ಬಂದು ಬೀಳ್ಕೊಡುವಾಗ ತನ್ನದಾದದ್ದನ್ನು ಏನನ್ನೋ ಬಿಟ್ಟು ಹೋಗುತ್ತಿದ್ದೇನೆಯೋ ಎಂದು ಭಾಸವಾಗುತ್ತಿತ್ತು. ಈ ಮೀಟಿಂಗಿಗೆ ಧಾರವಾಡ ಕೃಷಿ ಕಾಲೇಜಿನ ಪ್ರಾಧ್ಯಾಪಕ ಡಾ॥ ಕೆ. ಎ. ಕುಲಕರ್ಣಿಯವರೂ ಬಂದಿದ್ದರು. ಹೂಸ್ಟನ್‌ನಲ್ಲಿ ವಿಮಾನ ಹತ್ತುವಾಗ ಕ್ಯೂನಲ್ಲಿ ಬೆಂಗಳೂರಿನ ಖೋಡೆ ಕಂಪನಿಯ ಮಾಲೀಕರು ಹರಿಖೋಡೆಯವರು ನಿಂತಿದ್ದರು. ಅವರು ಎ. ಅಂಡ್ ಎಮ್. ಯೂನಿವರ್ಸಿಟಿಯಲ್ಲಿ ಅಪೇಕ್ಷಿಸಿದ ಒಂದು ಮೆಷನರಿ ನೋಡಲು ಬಂದಿದ್ದರಂತೆ.

ಚಿಕಾಗೋ ತಲಪುವ ವೇಳೆಗೆ ಸರಿಯಾಗಿ ವಾಷಿಂಗ್‌ಟನ್‌ನಿಂದ ಶಾರದ ಬಂದಿದ್ದಳು. ನಮ್ಮ ಬಾಲ್ಯ ಸ್ನೇಹಿತರೂ, ಆಪ್ತರೂ ಮತ್ತು ಹತ್ತಿರದ ಸಂಬಂಧಿ, ಡಾ॥ ರಾಜು ಮತ್ತು ಅವರ ಪತ್ನಿ ರತ್ನ ನಮಗಾಗಿ ಓಹೆರ್ ಏರ್‌ಪೋರ್ಟಿನಲ್ಲಿ ಕಾದಿದ್ದರು. ಎಲ್ಲರೂ ಒಲಂಪಿಯಾ

ಫೀಲ್ಡ್ಸ್‌ನಲ್ಲಿದ್ದ ಅವರ ಮನೆಗೆ ಹೋದೆವು. ಇಷ್ಟರಲ್ಲಿ ನನ್ನ ನಿಗದಿತ ಕಾರ್ಯಕ್ರಮಗಳೆಲ್ಲ ಮುಗಿದಿದ್ದವು. ಮುಂದಿನ ಸುಮಾರು ಮೂರು ವಾರಗಳ ಅಮೆರಿಕಾ ಪ್ರವಾಸಕ್ಕೆ ಸಜ್ಜಾಗಿದ್ದೆವು. ಡಾ॥ ರಾಜು ಎಲ್ಲ ವ್ಯವಸ್ಥೆಯನ್ನು ಮಾಡಿ ಸಾಕಷ್ಟು ರಜವನ್ನು ತೆಗೆದುಕೊಂಡು ನಮ್ಮೊಡನೆ ಇರಲು ಅವಕಾಶ ಮಾಡಿಕೊಂಡಿದ್ದರು.

ಡಾ॥ ರಾಜು ಮತ್ತು ನಾನು ಒಂದೇ ಪರಿಸರದಿಂದ ಬಂದಿದ್ದೇವೆ. ವಯಸ್ಸಿನಲ್ಲಿ, ಓದಿನಲ್ಲಿ ನನಗಿಂತ ಎರಡು ವರುಷಕ್ಕೆ ಕಿರಿಯವರಾದ ಡಾ॥ ರಾಜು ಶ್ರಮದಲ್ಲಿ ನನಗಿಂತ ಒಂದು ಪಟ್ಟು ಮೇಲೆಂದು ಹೇಳಬಹುದು. ವಿದ್ಯಾರ್ಜನೆಯಲ್ಲಿ ಆರ್ಥಿಕವಾಗಿ ನನ್ನಷ್ಟು ಬಳಲಿದವರಲ್ಲ. ಊರಿಗೆ ಅವರು ಶ್ರೀಮಂತರು. ಆದರೂ ಎಂದೂ ಅವರ ಶ್ರೀಮಂತಿಕೆಯನ್ನು ಪ್ರದರ್ಶಿಸಿದವರಲ್ಲ. ಅವರ ಸಹೋದರರೆಲ್ಲರೂ ಶ್ರಮದಲ್ಲಿ ಸಂತೋಷವನ್ನು ಕಂಡವರು. ನಾನು ನನ್ನ ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲ್ ವ್ಯಾಸಂಗವನ್ನು ಅವರಿವರ ಮನೆಯಲ್ಲಿ ಇದ್ದುಕೊಂಡು ಮುಸುರೆ ತಿಕ್ಕಿ ಬಟ್ಟೆ ಒಗೆದು ದನಕಾಯ್ದು ಓದಿದ್ದರೆ ಡಾ॥ ರಾಜು ಅವರ ಮನೆಯಿಂದ ಪ್ರತಿನಿತ್ಯ ನಾಲ್ಕಾರು ಮೈಲಿ ನಡೆದು ಸ್ಕೂಲಿಗೆ ಹೋಗಿ ರಜಾ ದಿನಗಳಲ್ಲಿ ಸಹೋದರರಿಗೆ ಕೆಲಸದಲ್ಲಿ ಸಹಕರಿಸು ತ್ತಿದ್ದರು. ಮನೆಯಲ್ಲಿ ಹತ್ತಾರು ಆಳುಗಳಿದ್ದರೂ ರಜಾ ದಿನಗಳಲ್ಲಿ ಸ್ವಯಂ ಪ್ರೇರಿತ ದನ ಕಾಯುವವನನ್ನು ಕೆಲಸಕ್ಕೆ ಕಳುಹಿಸಿ ಅವನ ಕೆಲಸವನ್ನು ಇವರು ಮಾಡುತ್ತಿದ್ದರು. ಆ ಸಮಯದಲ್ಲಿ ಇವರನ್ನು ನೋಡಿದವರು ಮುಂದೆ ಇವರು ಅಮೆರಿಕಾದಲ್ಲಿ ಒಬ್ಬ ದೊಡ್ಡ ಪ್ರಖ್ಯಾತ ಡಾಕ್ಟರ್ ಆಗುತ್ತಾರೆಂದು ಕನಸಿನಲ್ಲೂ ಕಂಡಿರಲಿಲ್ಲ. ಇವರು ಧಾರಾಳತನಕ್ಕೆ ಹೆಸರಾದವರು. ಸಹಾಯಕ್ಕೆಂದು ಕೈ ಚಾಚಿದವರಿಗೆ ಎಂದೂ ಇಲ್ಲ ಅಂದವರಲ್ಲ. ಇವರ ಧಾರಾಳತನವನ್ನು ದುರುಪಯೋಗಪಡಿಸಿ ಕೊಂಡವರೂ ಇದ್ದಾರೆ. ಅಮೆರಿಕಾದಲ್ಲಿ ಇವರ ಆತಿಥ್ಯವನ್ನು ಆದಿ ಚುಂಚನಗಿರಿ ಮಹಾ ಸ್ವಾಮಿಗಳಿಂದ ಹಿಡಿದು ಮಾಜಿ ಪ್ರಧಾನಿಯವರೂ ಅನುಭವಿಸಿದ್ದಾರೆ. ನಾನು ಅಮೆರಿಕಾಕ್ಕೆ ಹೋದಾಗಲೆಲ್ಲಾ ಇವರನ್ನು ಕಂಡು ಮಾತನಾಡಿಸದೆ ಬಂದವನಲ್ಲ. ಇಂದು ಬೆಂಗಳೂರಿನಲ್ಲಿ ನನಗೊಂದು ನೆಲೆ ಇದ್ದರೆ ಅದರಲ್ಲಿ ಇವರ ಕೊಡುಗೆಯೂ ಇದೆ. ನನ್ನ ಪತ್ನಿ ಈ ಬಾರಿ ಅಮೆರಿಕಾಕ್ಕೆ ಬರುವುದಕ್ಕೆ ಪ್ರೇರೇಪಿಸಿದವರೂ ಇವರೇ. ಆದ್ದರಿಂದ ಅವರೇ ಅಮೆರಿಕಾದ ಮುಖ್ಯಸ್ಥಳಗಳನ್ನು ತೋರಿಸಲು ಅಣಿಯಾಗಿದ್ದರು.

ನಾವು ಡಾ॥ ರಾಜುರವರ ಮನೆಯಲ್ಲಿದ್ದಷ್ಟು ದಿವಸ ಪ್ರತಿನಿತ್ಯ ಇವರ ಮನೆಯಲ್ಲಿ ಅಥವಾ ಇವರ ಆಪ್ತರ ಮನೆಯಲ್ಲಿ ಕೂಟ ಏರ್ಪಾಡಾಗಿರುತ್ತಿತ್ತು. ಚಿಕಾಗೋದಲ್ಲಿ ನೋಡುವುದನ್ನೆಲ್ಲ ಪೂರೈಸಿ, ದಕ್ಷಿಣಾಭಿಮುಖವಾಗಿ ಸುಮಾರು ಎರಡು ಸಾವಿರ ಮೈಲಿ ಪ್ರವಾಸವನ್ನು ಕೈಗೊಂಡೆವು. ಡಾ॥ ರಾಜು ಅವರ ಪತ್ನಿ, ಮೂರು ಮಕ್ಕಳು, ನಾನು ನನ್ನ ಪತ್ನಿ, ಅವರ ದೊಡ್ಡ ಪಾಂಟಿಯಾಕ್ ಕಾರಿನಲ್ಲಿ ಪೂರ್ತಿ ಪ್ರವಾಸವನ್ನು ರಾಜುರವರೇ ಚಲಿಸಿದರು. ಫ್ಲಾರಿಡಾಕ್ಕೆ ಹೋಗುವ ದಾರಿಯಲ್ಲಿ ಟೆನಿಸಿಯಲ್ಲಿ ಡಾ॥ ಲಕ್ಷ್ಮಿಕಾಂತರವರ ಮನೆಯಲ್ಲಿ ಒಂದು ದಿನ ತಂಗಿದ್ದು, ಮುಂದೆ ಪ್ರಯಾಣ ಬೆಳೆಸಿ, ಓರ್‌ಲ್ಯಾಂಡೋಗೆ ಇನ್ನೂರು ಮೈಲಿ ಇರುವಾಗ ಕೈರೋ ಎಂಬಲ್ಲಿ ಒಂದು ಮೋಟಲಿನಲ್ಲಿ ಮತ್ತೊಂದು ರಾತ್ರಿ ಕಳೆದು ಓರ್‌ಲ್ಯಾಂಡೋವನ್ನು ತಲುಪಿದೆವು. ಎರಡು ದಿವಸ ಇಲ್ಲಿದ್ದು ಎಪ್‌ಕಾಟ್ ಸೆಂಟರ್, ಡಿಸ್ನಿಲ್ಯಾಂಡ್, ಹೊರದೇಶಗಳು ಪ್ರದರ್ಶಿಸಿದ್ದ ವಸ್ತು ಪ್ರದರ್ಶನ ವೆಲ್ಲವನ್ನೂ ನೋಡಿದೆವು. ಅಮೆರಿಕಾದ ಆರ್ಥಿಕ ಸ್ಥಿತಿ 1960-70 ರ ದಶಕದಲ್ಲಿ ಉತ್ತುಂಗ

ದಲ್ಲಿದ್ದಾಗ ಖಾಸಗಿಯವರು ನಿರ್ಮಿಸಿದ ಈ ಮಾಯಾಜಾಲ ನೋಡುವವರ ಕಣ್ಮನ ಸೂರೆಗೊಂಡಿದ್ದವು.· ವಾಪಸು ಬರುವಾಗ ರೂಬಿಫಾಲ್ಸ್ ನೋಡಿಕೊಂಡು ದಾರಿಯಲ್ಲಿ ಡಾ॥ ರಾಜುರವರ ಮಿತ್ರರು ಡಾ॥ ಹಿರಿಯಣ್ಣಗೌಡ್ರ ಮನೆಯಲ್ಲಿ ತಂಗಿದ್ದು, ಮುಂದಿನ ಪ್ರಯಾಣ ಬೆಳೆಸಿದೆವು. ಡಾ॥ ಹಿರಿಯಣ್ಣಗೌಡ್ರು ಕಿವಿ ತಜ್ಞರಾಗಿದ್ದುದರಿಂದ ಮಂದವಾಗಿದ್ದ ನನ್ನ ಕಿವಿಯ ಪರೀಕ್ಷೆ ಮುಫತ್ತಾಗಿ ಆಯಿತು. ಆದರೆ ಡಾಕ್ಟರ್ ಸಲಹೆ ಮೇರೆಗೆ ನನಗೊಂದು ಹಿಯರಿಂಗ್ ಎಯಿಡನ್ನು ಮುನ್ನೂರು ಡಾಲರ್ ಕೊಟ್ಟು ಡಾ॥ ರಾಜುರವರು ನನಗೆ ಉಡುಗೊರೆಯಾಗಿ ಕೊಟ್ಟರು. ಆದರೆ ಅದನ್ನು ಸರಿಯಾಗಿ ಇಟ್ಟುಕೊಳ್ಳಲಾಗಲಿಲ್ಲ. ಮುಖ್ಯವಾಗಿ ಸೆಮಿನಾರ್, ಸಿಂಪೋಸಿಯಂಗೆ ಹೋದಾಗ ಉಪಯೋಗಿಸಬೇಕೆಂದಿದ್ದನ್ನು ನನ್ನ ಮಿತ್ರರೊಬ್ಬರು ಇದನ್ನು ಸಾಲವಾಗಿ ಪಡೆದು ಸರಿಯಾಗಿ ಉಪಯೋಗಿಸದೆ ಹಾಳಾಯಿತು. ಡಾ॥ ರಾಜುರವರ ಉಧಾರತನವನ್ನು ದುರುಪಯೋಗಪಡಿಸಿಕೊಂಡ ನಿದರ್ಶನಗಳಲ್ಲಿ ಇದೊಂದು.

ಓರ್‌ಲ್ಯಾಂಡೋದಿಂದ ವಾಪಸು ಬಂದು ಒಂದೆರಡು ದಿನ ಸುಧಾರಿಸಿಕೊಂಡು ನಯಾಗರ ಫಾಲ್ಸ್ ನೋಡಲು ಹೋದೆವು. ನಯಾಗರದಲ್ಲಿ ಮುಂಚೆಯೇ ಹೋಟಲನ್ನು ಕಾದಿರಿಸದಿದ್ದರಿಂದ ನಯಾಗರ ಫಾಲ್ಸ್ ನೋಡಿಕೊಂಡು ರಾತ್ರಿ ಹತ್ತು ಗಂಟೆ ಸಮಯದಲ್ಲಿ ಹೋಟೆಲ್ ಹುಡುಕಿದರೆ ಎಲ್ಲೂ ದೊರೆಯಲಿಲ್ಲ. ಪುನಃ ವಾಪಸು ಹೊರಟು ಬೆಳಿಗ್ಗೆ ಎಂಟು ಗಂಟೆಗೆ ಚಿಕಾಗೋ ತಲುಪಿದೆವು. ಇಪ್ಪತ್ತನಾಲ್ಕು ಗಂಟೆ ಕಾರಿನಲ್ಲೇ ಇದ್ದದ್ದು ಇದೇ ಮೊದಲು ಮತ್ತು ಕೊನೆ.

ಜಿ. ಲಕ್ಷ್ಮಣರವರು ಚಿಕಾಗೋದಲ್ಲಿ ಇದ್ದಾಗ ಅವರ ತಾಯಿಯೂ ಜೊತೆ ಇದ್ದರು. ಅವರ ಮನೆಯಲ್ಲಿ ಒಂದು ದಿವಸ ಇಳಿದುಕೊಂಡಿದ್ದೆವು. ಲಕ್ಷ್ಮಣ್ ಅವರ ತಾಯಿ ಮತ್ತು ನಾವಿಬ್ಬರು ಒಟ್ಟಿಗೆ ವಿಸ್‌ಕಾನ್‌ಸಿನ್‌ನಲ್ಲಿ ನಡೆಯುತ್ತಿದ್ದ ಏರ್‌ಆಕ್ರೊಬ್ಯಾಟಿಕ್ಸ್ ನೋಡಲು ಹೋದೆವು. ಬಗೆ ಬಗೆಯ ವಿಮಾನಗಳು ಮೇಲಕ್ಕೆ ಜಿಗಿದು ಎತ್ತರದಿಂದ ಧುಮುಕಿ ಮತ್ತೆ ಎದ್ದು ಪಲ್ಟಿ ಹೊಡೆದು ಪ್ರದರ್ಶಿಸುತ್ತಿದ್ದ ನೋಟವನ್ನು ಕಣ್ಣಿಂದ ನೋಡಬಹುದೇ ಹೊರತು ಮಾತಿನಿಂದ ಹೇಳಲು ಸರಿಯಾದ ಪದಗಳು ದೊರೆಯುವುದಿಲ್ಲ. ಎಷ್ಟೋ ಬಾರಿ ನಮ್ಮ ತಲೆಯ ಮೇಲೆ ಬಿದ್ದ ಹಾಗೆ ಭಾಸವಾಗಿ ಜನರೆಲ್ಲ ಅರಿಚಿಕೊಳ್ಳುತ್ತಿದ್ದರು. ದಿನವೆಲ್ಲ ನಡೆದ ಈ ನಾಟಕ ದಲ್ಲಿ ಯಾರಿಗೂ ಏನೂ ತೊಂದರೆಯಾಗಲಿಲ್ಲ. ಅದೊಂದು ಚಿರಸ್ಮರಣೀಯ ದೃಶ್ಯ.

ಡಾ॥ ಪದ್ಮರಾಜು ಮತ್ತು ಡಾ॥ ರಾಜುರವರು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದಿದವರು. ಮೈಸೂರು ಮೆಡಿಕಲ್ ಕಾಲೇಜಿನಿಂದ ಅಮೆರಿಕಾಕ್ಕೆ ಬಂದ ಮೊದಲಿಗರಲ್ಲಿ ಇವರಿಬ್ಬರು. ಸುಮಾರು 1965-66ರಲ್ಲಿ ಇವರು ಅಮೆರಿಕಾಕ್ಕೆ ಹೋಗುವಾಗ ಈಗಿನಂತೆ ಮಾರ್ಗದರ್ಶನ ನೀಡುವರಾರಿರಲಿಲ್ಲ. ಮೊದಮೊದಲು ಇವರುಗಳು ಅಮೆರಿಕಾದಲ್ಲಿ ಕಷ್ಟ ಪಟ್ಟಿದ್ದನ್ನು ಇವರ ಬಾಯಿಂದಲೇ ಕೇಳಬೇಕು. ಅದರಲ್ಲೂ ಶ್ರೀಮತಿ ರತ್ನ ಮತ್ತು ಅವರ ಪತಿ ಡಾ॥ ರಾಜು ಬೇಸತ್ತು ವಾಪಸು ಹೋಗಲು ನಿರ್ಧರಿಸಿದ್ದ ಕಾಲವೂ ಇತ್ತು. ಇವರಿಬ್ಬರಿಗೂ ಜೀವನ ನಡೆಸಲು ಅಮೆರಿಕಾಕ್ಕೆ ಬರಬೇಕಾದ ಪ್ರಮೇಯವಿರಲಿಲ್ಲ. ಏನೋ ಒಂದು ಬಗೆಯ ಸಾಹಸ ಮಾಡಿದಂತೆ ಬಂದ ಇವರು ಹೇಗಾದರೂ ಇದ್ದು ಜಯಿಸಬೇಕೆಂದು ಅಲ್ಲಿಯೇ ನೆಲೆಯಾದರು. ಡಾ॥ ಪದ್ಮರಾಜುರವರ ಪತ್ನಿ ಜಯ, ರತ್ನರವರ ಹಾಗೆ ಸಕಲೇಶಪುರದವರು. ರಾಜು ಮತ್ತು ಪದ್ಮರಾಜು ಹೇಗೆ ಸ್ನೇಹಿತರೋ ಜಯ ಮತ್ತು ರತ್ನರೂ ಕೂಡ ಹಾಗೆ.

ಪದ್ಮರಾಜು ಬೆಂಗಳೂರಿನವರೇ. ಬೆಂಗಳೂರಿಗೆ ಬಂದಾಗಲೆಲ್ಲಾ ನಮ್ಮ ಮನೆಗೆ ಬರುತ್ತಿದ್ದರು. ಹಾಗಾಗಿ ನಾವು ಅವರನ್ನು ಅಮೆರಿಕಾದಲ್ಲಿ ನೋಡಬೇಕಿತ್ತು. ಅವರಿದ್ದದ್ದು ಚಿಕಾಗೋನಿಂದ ಎಂಟುನೂರು ಮೈಲಿ ಟೊಪಿಕಾದಲ್ಲಿ. ಡಾ॥ ರಾಜುರವರ ರಜವೆಲ್ಲ ಮುಗಿದಿತ್ತು. ಮತ್ತೆ ಒಂದು ದಿನ ಕೂಡ ಅವರಿಗೆ ಬಿಡುವಿರಲಿಲ್ಲ. ಅಮೆರಿಕಾದಲ್ಲಿ ಸ್ನೇಹಿತರಿಗಾಗಿ ಏನನ್ನಾದರೂ ಕೊಟ್ಟಾರು, ಆದರೆ ರಜೆ ತೆಗೆದುಕೊಳ್ಳುವುದು ದುರ್ಲಭ! ಇಲ್ಲಿಯ ಹಾಗೆ ಮನಸ್ಸಿಗೆ ಬಂದ ಹಾಗೆ ರಜೆ ಹಾಕುವ ಹಾಗಿಲ್ಲ. ಬಹಳ ಕಷ್ಟಪಟ್ಟು ಉಳಿಸಿದರೆ ವರುಷಕ್ಕೆ ಗರಿಷ್ಟ ಹದಿನೈದು ದಿನ ರಜೆ ತೆಗೆಯಬಹುದು. ಶ್ರೀಮತಿ ರತ್ನಗೆ ನಮ್ಮನ್ನು ಟೋಪಿಕಾಕ್ಕೆ ಕರೆದುಕೊಂಡು ಹೋಗುವುದೆಂದು ರಾಜುರವರ ಅಪ್ಪಣೆಯಾಯಿತು. ಅಂತೆಯೆ ಅವರೊಬ್ಬರೆ ಎಂಟುನೂರು ಮೈಲಿ ದಿನವಿಡಿಯೆಲ್ಲ ಡ್ರೈವ್ ಮಾಡಿ ಕರೆದುಕೊಂಡು ಹೋದರು. ಅವರ ಹಿರಿಯ ಮಗಳು ವಾಣಿ ಸೇರಿದಂತೆ ನಾಲ್ವರು ಉದ್ದಕ್ಕೂ ಅಮೆರಿಕಾದ ಜನ ಜೀವನ, ಭಾರತದಿಂದ ಬಂದವರ ಬವಣೆ, ಅವರಲ್ಲನೇಕರು ಅಮೆರಿಕನ್ ಪ್ರಜೆಯಾದರೂ ಭಾರತದಿಂದ ಬೇರು ಬಿಡುವ ಮನಸ್ಸಿಲ್ಲದವರು. ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಇರುವ ಕಳವಳ, ಅಮೆರಿಕಾದಲ್ಲಿ ಹುಟ್ಟಿ ಬೆಳೆದರೂ ಭಾರತೀಯ ಸಂಸ್ಕೃತಿಯನ್ನು ಬಯಸುವ ತಂದೆ ತಾಯಿಗಳ ಆಸೆ, ಅಲ್ಲಿಯ ವಾತಾವರಣದಲ್ಲಿ ಹಾಸು ಹೊಕ್ಕಾಗಿ ಬೆಳೆದ ಭಾರತೀಯ ಮಕ್ಕಳ ದ್ವಂದ್ವ ಪೇಚಾಟ, ಬೇರೆಯವರಂತೆ ಹದಿನೆಂಟು ಮೀರಿದ ನಂತರ ಅವರ ಮನಸ್ಸಿಗೆ ಬಂದಂತೆ ತಂದೆ ತಾಯಿಯನ್ನು ಅಗಲಿ ಸ್ವಂತ ಜೀವನ ನೆಡೆಸಲು ಅಳುಕು, ತಂದೆ ತಾಯಿ ಹೇಳಿದ ವಧು ವರರನ್ನು ಒಪ್ಪಲು ಆಗದ ಮನಸ್ಸು ಮುಂತಾದವುಗಳ ಬಗ್ಗೆ ಮಾತನಾಡಿಕೊಂಡು ಹೋದ ಪಯಣ ಮುಗಿದುದರ ಪರಿವೆ ಇಲ್ಲದಂತೆ ಸಾಗಿತು.

ಡಾ॥ ಪದ್ಮರಾಜುರವರ ಮನೆಯಲ್ಲಿ ನಾವು ಹೋದ ದಿವಸ ಹಬ್ಬದ ಸಂಭ್ರಮ. ಪದ್ಮರಾಜುರವರಿಗೆ ಕೆಲವು ಅಡಿಗೆಗಳನ್ನು ಅವರೆ ಖುದ್ದಾಗಿ ಮಾಡಿ ಬಡಿಸುವ ಆಸೆ. ವಿವಿಧ ಬಗೆಯ ಪಾನೀಯಗಳು ಇದ್ದರೂ ಅವರ ಒಂದು ಕೊರಗೆಂದರೆ ಒಂದೆರಡು ಗ್ಲಾಸು ಬೀರನ್ನು ಬಿಟ್ಟು ಮತ್ತೇನನ್ನು ನಾನು ತೆಗೆದುಕೊಳ್ಳದಿದ್ದದ್ದು ಅವರ ಆತಿಥ್ಯಕ್ಕೆ ಅಡ್ಡ ಬಂದಂತೆ. ಪದ್ಮರಾಜುರವರ ಇಬ್ಬರು ಪುತ್ರಿಯರಲ್ಲಿ ದೊಡ್ಡವಳು ಹೊರ ಊರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಎರಡನೆಯವಳು ಮತ್ತು ವಾಣಿ ಬಾಲ್ಯ ಸ್ನೇಹಿತರು. ವಾಣಿ ಕಲಿತಿದ್ದ ಭರತನಾಟ್ಯದ ಪ್ರದರ್ಶನ ಇವರ ಮನೆಯಲ್ಲಿ ನಡೆಯಿತು. ಭಾರತದಿಂದ ಹೋಗಿರುವವರೆಲ್ಲರಿಗೆ ಭಾರತದಲ್ಲಿ ಇರುವವರಿಗಿಂತ ಭಾರತದ ಮೇಲೆ ಹೆಚ್ಚು ದೇಶಭಕ್ತಿ. ಅದರಲ್ಲೂ ಸ್ತ್ರೀಯರಿಗೆ ಅವರ ದೇಶದ ಸಂಸ್ಕೃತಿ, ಕಲೆ, ಸಂಗೀತವನ್ನು ಅವರ ಮಕ್ಕಳಿಗೆ ಕಲಿಸಬೇಕೆಂಬ ಹಂಬಲ. ಅದಕ್ಕಾಗಿ ಭಾರಿ ಹಣವನ್ನು ವ್ಯಯ ಮಾಡುವರು. ಗಂಡಸರು ಯಾರೊಂದಿಗಾದರೂ ಕೆಲಸದ ವೇಳೆಯಲ್ಲಿ ಕಲೆತು ಕೆಲಸ ಮಾಡಿದರೂ ನಂತರ ಬಿಡುವಿನಲ್ಲಿ ಬಹುತೇಕ ಅವರ ಸುತ್ತ ಮುತ್ತಲಿರುವ ಭಾರತೀಯರೊಡನೆ ಕಳೆಯುವರು. ಬೇರೆಯವರು ಶನಿವಾರ, ಭಾನುವಾರ ವಿಹಾರಕ್ಕಾಗಿ ಬೇರೆ ಎಲ್ಲಿಗಾದರೂ ಹೋದರೆ, ಭಾರತೀಯರು ಅವರಿವರ ಸ್ನೇಹಿತರ ಮನೆಗೆ ಹೋಗಿ ದಿನವೆಲ್ಲ ಉಂಡು ತಿಂದು ಕಾಲ ಕಳೆಯುವರು. ಇಲ್ಲವೆ ಅವರವರ ಸಂಘಗಳಿಗೆ ಹೋಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಭಾರತದಲ್ಲಿ ಎಷ್ಟು ರಾಜ್ಯಗಳಿವೆಯೋ ಅಷ್ಟೇ ಸಂಘಗಳು ಅಮೆರಿಕಾದಲ್ಲಿವೆ. ಅವರವರ ಪ್ರೀತಿಯ ದೇವರ ದೇವಸ್ಥಾನಗಳನ್ನೂ

ನಿರ್ಮಿಸಿಕೊಂಡು ಪೂಜೆ ಪುನಸ್ಕಾರಗಳನ್ನು ಮಾಡುವರು. ಕೆಲವೊಮ್ಮೆ ಅವರ ಸಮಾರಂಭಗಳಲ್ಲಿ ನಡೆಯುವ ಗದ್ದಲ, ಗಜಿಬಿಜಿ, ತಿಂಡಿ ತಿನಿಸನ್ನು ಚೆಲ್ಲಾಪಿಲ್ಲಿಯಾಗಿ ಎಸೆದಿರುವುದನ್ನು ವೀಕ್ಷಿಸಿದರೆ ನಮ್ಮ ಹುಟ್ಟು ಗುಣ ಸಾಗರದಾಟಿದರೂ ಹೋಗದು ಎಂಬಂತೆ ಕಾಣುತ್ತದೆ.

ಕಾನ್ಸಾಸ್‌ನಲ್ಲಿ ನಡೆದ ಒಂದು ಬೇಸ್‌ಬಾಲ್ ಮ್ಯಾಚಿಗೆ ನಾವೆಲ್ಲಾ ಹೋಗಿದ್ದೆವು. ಹಿಂದಿನ ದಿನವೇ ಟಿ.ವಿ.ಯ ಮುಂದೆ ಕುಳಿತು ಆ ವರುಷದಲ್ಲಿ ಯಾವ ಟೀಮು ನ್ಯಾಷನಲ್ ಛಾಂಪಿಯನ್ ಆಗಬಹುದೆಂಬ ತರ್ಕ ನಡೆದಿತ್ತು. ಬೇಸ್‌ಬಾಲ್ ಮ್ಯಾಚು ನೋಡಲು ಹೋಗುವುದೆಂದರೆ ನಾವು ಚಿಕ್ಕವರಾಗಿದ್ದಾಗ ದೊಡ್ಡಯ್ಯನ ಜಾತ್ರೆಗೆ ಹೋಗುವ ಸಂಭ್ರಮವಿದ್ದಂತೆ. ಅಂದು ಯಾರು ಏನು ಬೇಕಾದರೂ ತಿನ್ನಬಹುದು, ಕುಡಿಯಬಹುದು. ಪದ್ಮರಾಜುರವರು ಆ ಊರಲ್ಲಿದ್ದ ಒಂದು ಒಳ್ಳೆಯ ಹೋಟೆಲ್‌ನಲ್ಲಿ ಭರ್ಜರಿಯಾದ ಊಟ ಹಾಕಿಸಿದ್ದಲ್ಲದೆ, ಸ್ಟೇಡಿಯಂನಲ್ಲಿ ತಿನ್ನಲು ಸಾಕಷ್ಟು ಕಟ್ಟಿಸಿಕೊಂಡಿದ್ದರು. ಸ್ಟೇಡಿಯಂ ಕಿಕ್ಕಿರಿದು ನೆರೆದಿತ್ತು. ನಮಗೆ ಆಟಗಾರರ ಪರಿಚಯವಾಗಲಿ ಅಥವಾ ಟೀಮಿನ ಹೆಸರಾಗಲಿ ತಿಳಿಯದು. ಆಟ ಮೊದಲೇ ಗೊತ್ತಿಲ್ಲ. ಸ್ಟೇಡಿಯಂ ಸುತ್ತ ಸರದಿಯ ಪ್ರಕಾರ ಅಲೆ ಅಲೆಯಾಗಿ ಎದ್ದು ಕಿರುಚುತ್ತಿದ್ದರು. ನಮ್ಮ ಸರದಿ ಬಂದಾಗ ನಾವೂ ಎದ್ದು ಕೂರುತ್ತಿದ್ದೆವು. ನಮ್ಮ ಪಕ್ಕದಲ್ಲಿದ್ದವರು ಒಂದು ಬಗೆಯ ವೀಕ್ಷಕ ವಿವರಣೆಯನ್ನು ಕೊಟ್ಟ ಹಾಗೆ ಪ್ರತಿಯೊಬ್ಬ ಆಟಗಾರನ ವರುಷದ ಆದಾಯ, ವರುಷಕ್ಕೆ ಒಬ್ಬೊಬ್ಬ ಎಷ್ಟು ದಶಲಕ್ಷ ಡಾಲರ್ ಸಂಪಾದಿಸುತ್ತಾರೆ. ಎಲ್ಲೆಲ್ಲಿ ಅವರಿಗೆ ಕರೆ ಬಂದಿರುತ್ತದೆ, ಮುಂದಿನ ವರುಷ ಯಾವ ಟೀಮಿಗೆ ಆಡುತ್ತಾರೆ ಎಂದೆಲ್ಲಾ ವಿವರಿಸುತ್ತಿದ್ದರು. ಅಮೆರಿಕಾದಲ್ಲಿ ಮಕ್ಕಳಿಂದ ಮುದುಕರವರೆಗೆ ಪ್ರತಿಯೊಂದನ್ನು ಡಾಲರ್ ಮಾಪನದಲ್ಲಿ ಅಳೆಯುತ್ತಾರೆ. ಆಟ, ನೃತ್ಯ, ಕಲೆ ಸಂಗೀತ ಮೊದಲುಗೊಂಡು ಪ್ರತಿಯೊಂದು ವೃತ್ತಿಗೂ ಬೆಲೆ ಎಷ್ಟೆಂದು ಲೆಕ್ಕ ಹಾಕುತ್ತಾರೆ. ಟಿ.ವಿ.ಯಲ್ಲಿ ಇಪ್ಪತ್ತನಾಲ್ಕು ಗಂಟೆ ಯಾವ ಛಾನಲ್ ತಿರುಗಿಸಿದರೂ ಬರ್ಗರ್‌ರಿಂದ ಹಿಡಿದು ಬಂಗಲೆವರೆಗೆ ಬೆಲೆ ವಿವರಗಳು, ಅವುಗಳನ್ನು ಹೇಗೆ ಕೊಂಡರೆ ಎಷ್ಟು ಉಳಿತಾಯ ಮಾಡಬಹುದೆಂಬ ಜಾಹಿರಾತು ಇದ್ದೇ ಇರುತ್ತದೆ. ಒಟ್ಟಿನಲ್ಲಿ ಅಮೆರಿಕಾದ ಆರ್ಥಿಕತೆ ಅಲ್ಲಿಯ ಪ್ರಜೆಗಳ ಖರ್ಚಿನ ಮೇಲೆ ನಿಂತಿರುತ್ತದೆ. ಸಂಪಾದನೆಯ ಶೇಕಡ ತೊಂಬತ್ತೈದರಷ್ಟನ್ನು ಖರ್ಚು ಮಾಡಿಸುವ ವಿಧಾನಗಳನ್ನೇ ಹುಡುಕುತ್ತಿರುತ್ತಾರೆ. ಕೆಲಸದಿಂದ ನಿವೃತ್ತಿಯಾದವರೆಲ್ಲರಿಗೂ ಅವರ ಜೀವನಕ್ಕೆ ಸಾಕಾಗುವಷ್ಟನ್ನು ಸರ್ಕಾರ ವಹಿಸಿರುವುದರಿಂದ ಯಾರೂ ಕೂಡಿಡುವ ಗೋಜಿಗೆ ಹೋಗುವುದಿಲ್ಲ. ಮಕ್ಕಳು ತಂದೆ ತಾಯಿಗಳ ಸ್ವತ್ತನ್ನು ಆಶಿಸುವುದಿಲ್ಲ ಅಥವಾ ತಂದೆತಾಯಂದಿರು ಮಕ್ಕಳು ಮೊಮ್ಮಕ್ಕಳಿಗೆ ಕೂಡಿಡುವುದಿಲ್ಲ. ನಮ್ಮ ದೇಶದಲ್ಲಿ ಏಳು ಜನ್ಮಕ್ಕೆ ಸಾಕಾಗುವಷ್ಟನ್ನು ಮಾಡಿಟ್ಟಿದ್ದರೂ ಎಂಟನೇ ಜನ್ಮದವರಿಗೆ ಸಾಲದೆ ಹೋಯಿತಲ್ಲ ಎಂದು ಕೊರಗಿ ಸಾಯುವವರಿದ್ದಾರೆ.

ಅಮೆರಿಕಾ ವಿಸ್ತೀರ್ಣದಲ್ಲಿ ನಮ್ಮ ದೇಶದ ಮೂರರಷ್ಟಿದ್ದು, ಜನಸಂಖ್ಯೆಯಲ್ಲಿ ನಮ್ಮ ದೇಶದ ಕಾಲುಭಾಗ ಮಾತ್ರ. ಸುಮಾರು ಇನ್ನೂರ ಇಪ್ಪತ್ತು ವರುಷಗಳ ಹಿಂದೆ ಯೂರೋಪಿಯನ್ನರು ಇಲ್ಲಿಗೆ ವಲಸೆ ಬಂದು, ಅಲ್ಲಿದ್ದ ರೆಡ್ ಇಂಡಿಯನ್ನರನ್ನು ಸದೆಬಡಿದು ಮೂಲೆ ಗುಂಪು ಮಾಡಿ, ಶ್ರಮ ಪಟ್ಟು ಸಂಪತ್ತನ್ನು ಉತ್ಪತ್ತಿ ಮಾಡಿದರು. ಏಬ್ರಾಹಿಂ ಲಿಂಕನ್‌ರ ನೇತೃತ್ವದಲ್ಲಿ ಹರಿದು ಹಂಚಿದ್ದ ರಾಜ್ಯಗಳನ್ನು ಸಂಯುಕ್ತ ಸಂಸ್ಥಾನಗಳನ್ನಾಗಿ ಮಾಡಿ ಪ್ರಜಾತಂತ್ರ ರಾಜ್ಯವನ್ನು ಹುಟ್ಟು ಹಾಕಿದರು. ಇಂದು ಹವಾಯಿಯೂ ಸೇರಿದಂತೆ ಐವತ್ತೆರಡು ಸ್ಟೇಟ್‌ಗಳ

ಯುನೈಟೆಡ್ ಸ್ಟೇಟ್ ಆಫ್ ಅಮೆರಿಕಾ ಪ್ರಪಂಚದಲ್ಲೇ ಪ್ರಬಲ ರಾಷ್ಟ್ರವಾಗಿ ನಿಂತಿದೆ. ನೀವು ಅಮೆರಿಕಾದಲ್ಲಿ ಎಲ್ಲಿ ಹೋದರೂ, ಯಾರನ್ನು ಕಂಡರೂ ಅವರು ಅಲ್ಲಿಯ ಪೂರ್ವಿಕರಲ್ಲ. ಪೂರ್ವಿಕರಾದ ರೆಡ್ ಇಂಡಿಯನ್ಸ್ ನೋಡಲು ಅವರ ರಿಸರ್ವ್‌ಗೆ ಹೋಗಿ ನೋಡಬೇಕು. ಉಳಿದವರೆಲ್ಲ ಇನ್ನೂರು ವರುಷಗಳಿಂದ ವಲಸೆ ಬಂದವರ ಸಂತತಿಯವರು ಅಥವಾ ನೆನ್ನೆ ಮೊನ್ನೆ ಬಂದವರಿರಬಹುದು. ಅಲ್ಲಿ ಯಾರೊಬ್ಬರಿಗೂ ನಾನು ಮಣ್ಣಿನ ಮಗ ನಿಮಗೆ ಅವಕಾಶವಿಲ್ಲವೆಂದು ಹೇಳುವ ಸ್ಥೈರ್ಯ ಇಲ್ಲ. ದಕ್ಷಿಣ ಭಾಗದಲ್ಲಿ ಕೆಲವರು ಅಲ್ಲಲ್ಲಿ ಆಗಾಗ ವರ್ಣಭೇದ ಕೆದಕಿ ಒಳಗಿನವರು ಹೊರಗಿನವರು ಎಂಬ ಇಬ್ಬಂದಿತನವನ್ನು ತೋರಿಸುತ್ತಾರೆ. ಅಮೆರಿಕಾದಲ್ಲಿ ವ್ಯಕ್ತಿ ಸ್ವಾತಂತ್ರ್ಯವಿರುವಷ್ಟು ಮತ್ತೆಲ್ಲೂ ಇಲ್ಲವೆಂದು ಹೇಳಬಹುದು. ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ಬಿಟ್ಟರೆ ಉದ್ದಗಲಕ್ಕೆ ಅಮೆರಿಕಾ ಒಂದೇ ಎಂದು ತೋರುತ್ತದೆ. ಎಲ್ಲಾ ಊರುಗಳಲ್ಲಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಾಭಿಮುಖವಾಗಿ ರೂಲು ಎಳೆದಂತೆ ರೋಡು, ಮನೆಗಳು, ಯಾರೊಬ್ಬರಿಗೂ ಮ್ಯಾಪ್ ಹಿಡಿದುಕೊಂಡು ಮನೆ ಹುಡುಕಬಹುದು. ಇಂಟರ್ ಸ್ಟೇಟ್ ಹೈವೇ (ರೂಟ್)ಗಳು ಕೂಡ ಹೀಗೆ, ಸುಮಾರು 48,000 ಮೈಲಿಗಳಷ್ಟು ಉದ್ದಗಲಕ್ಕೆ, ಅವಕ್ಕೆ ಸಂಧಿಸುವ ಲಕ್ಷಾಂತರ ಮೈಲಿ ರೋಡುಗಳು, ಸೇತುವೆಗಳು, ಫ್ಲೈಓವರ್ ಪ್ರಪಂಚದಲ್ಲಿ ಮತ್ತೆಲ್ಲೂ ಇರಲಾರದು. ಒಂದು ಸಮೀಕ್ಷೆಯ ಪ್ರಕಾರ ದೇಶದ ಶೇಕಡ 17 ರಷ್ಟು ಜಾಗ ಟಾರ್ ಸಿಮೆಂಟಿನಿಂದ ಮುಚ್ಚಲ್ಪಟ್ಟಿದೆಯಂತೆ. ಪ್ರತಿಯೊಬ್ಬನಿಗೂ ಒಂದು ಕಾರಿನಂತೆ ಜನರೆಷ್ಟಿದ್ದಾರೆ ಅಷ್ಟೇ ವಾಹನಗಳು. ದಿನದ 24 ಗಂಟೆಯಲ್ಲಿ ಕನಿಷ್ಟ ಗಂಟೆಗೆ 55 ಮೈಲಿ ವೇಗದಲ್ಲಿ ನಿರಾಳವಾಗಿ ಚಲಿಸುವಂತೆ ಮಾಡಿರುವ ಸಾರಿಗೆ ವ್ಯವಸ್ಥೆ ಆ ದೇಶದ ಹಿರಿಮೆಗೆ ತಕ್ಕದ್ದಾಗಿದೆ.

ಟೊಪಿಕಾದಿಂದ ವಾಪಸು ಚಿಕಾಗೋಕ್ಕೆ ಬಂದು ಕೆಲವು ದಿನ ಡಾ॥ ರಾಜುರವರ ಮನೆಯಲ್ಲಿದ್ದು ಚಿಕಾಗೋದಲ್ಲಿ ಪ್ಲಾನಟೋರಿಯಂ, ಅಕ್ವೇರಿಯಂ, ಭಾಹಯಿ ಟೆಂಪಲ್, ಸೀಯರ್ಸ್ ಟವರ್, ಶ್ರೀ ರಾಮಕೃಷ್ಣಮಠ ಮುಂತಾದವನ್ನು ನೋಡಿದೆವು. ಚಿಕಾಗೋ ನಗರದ ದೇವಾನ್ ಸ್ಟ್ರೀಟಿನಲ್ಲಿ ಸಂಜೆ ಆರು ಗಂಟೆಯ ಸಮಯದಲ್ಲಿ ಹೋದರೆ ಭಾರತದಲ್ಲಿದ್ದಂತೆ ಭಾಸವಾಗುತ್ತದೆ. ಬಹಳ ಜನ ಭಾರತೀಯರು ಅಲ್ಲಿಗೆ ಕೊಳ್ಳಲು ಹೋಗುತ್ತಾರೆ.

ನಮ್ಮ ಅಮೆರಿಕಾ ಪ್ರವಾಸ ಮುಗಿಸಿ ಮರಳಿ ಭಾರತಕ್ಕೆ ಬರುವ ದಿವಸ ಒಹೆರ್ ಏರ್ ಪೋರ್ಟ್‌ನಲ್ಲಿ ಒಂದು ಅಚಾತುರ್ಯ ಸಂಭವಿಸಿತು. ನಮ್ಮನ್ನು ಬೀಳ್ಕೊಡಲು ರತ್ನ ಅವರ ಕೊನೆಯ ಮಗಳು ಐದಾರು ವಯಸ್ಸಿನ ವಿನೋದಿನಿಯೊಡನೆ ಬಂದಿದ್ದರು. ನಾವು ಚೆಕ್ ಇನ್ ಮಾಡುವಾಗ ನಮ್ಮ ಸೂಟ್‌ಕೇಸುಗಳನ್ನು ತೂಕ ಹಾಕಿಸಿ ಕನ್‌ವೇಯರ್ ಬೆಲ್ಟಿನಲ್ಲಿಟ್ಟಾಗ ಮಗು ವಿನೋದಿನಿ ನಮ್ಮ ಅರಿವಿಲ್ಲದೆ ಕನ್‌ವೇಯರ್ ಬೆಲ್ಟಿನ ಮೇಲೆ ಹತ್ತಿ ಪೆಟ್ಟಿಗೆ ಹಿಡಿದು ನಿಂತಿದ್ದುದನ್ನು ಗಮನಿಸಲೇ ಇಲ್ಲ. ನಮ್ಮ ಮೂವರ ಗಮನ ಟಿಕೆಟ್ ಚೆಕ್ ಮಾಡುವವನು ಕೇಳುತ್ತಿದ್ದ ಪ್ರಶ್ನೆಗಳತ್ತ ಮಗ್ನವಾಗಿತ್ತು. ಟಿಕೆಟನ್ನು ಕೈಗೆತ್ತಿಕೊಂಡು ತಿರುಗಿ ನೋಡುವಾಗ ವಿನೋದಿನಿ ಅಲ್ಲಿರಲಿಲ್ಲ. ಪೆಟ್ಟಿಗೆಗಳ ಜೊತೆಯಲ್ಲಿ ಆ ಪಕ್ಕಕ್ಕೆ ಅವಳನ್ನು ಬೆಲ್ಟು ಕೊಂಡೊಯ್ದಿತ್ತು. ಮಗು ಎಲ್ಲಿ, ಮಗು ಎಲ್ಲಿ ಎಂದು ಮೂವರೂ ಕಿರುಚಾಡಿದರೂ ಯಾರೂ ಹೇಳುವವರಿಲ್ಲ. ನಾವು ಚೆಕ್ ಇನ್ ಕೌಂಟರಿನ ಹಿಂಬದಿ ಹೋಗುವ ಹಾಗಿಲ್ಲ. ಅರ್ಧ ಗಂಟೆ ಯಾದರೂ ಮಗುವಿನ ಸುಳಿವಿಲ್ಲ. ಒಹೆರ್ ಏರ್‌ಪೋರ್ಟ್ ಅಮೆರಿಕಾದಲ್ಲೆಲ್ಲಾ ಅತಿ ಬಿಜಿ

ಏರ್‌ಪೋರ್ಟೆಂದು ಹೆಸರಾಗಿತ್ತು. ಪ್ರತಿ ನಿಮಿಷಕ್ಕೊಂದು ವಿಮಾನ ಹೊರಡುವುದು ಮತ್ತು ಬರುವುದಿತ್ತು. ಎಲ್ಲೆಲ್ಲೂ ಜನ ನೂಕು ನುಗ್ಗಲು. ನಮಗಾಗಲೇ ಹೊರಡಲು ಅನುವಾಗುವಂತೆ ಕರೆ ಬರುತ್ತಿತ್ತು. ಈ ಸ್ಥಿತಿಯಲ್ಲಿ ರತ್ನರೊಬ್ಬರನ್ನೇ ಬಿಟ್ಟು ಹೋಗುವ ಹಾಗಿಲ್ಲ. ಹೋಗದೆ ವಿಧಿಯಿಲ್ಲ. ನಾವು ಟಿಕೆಟನ್ನು ಪರಿಶೀಲಿಸಿ ಸಾಮಾನು ಕಳುಹಿಸಿದ ಕೌಂಟರಿನಿಂದ ಮೆಟ್ಟಲಿಳಿದು ಮುಂದೆ ಹೋಗಬೇಕಿತ್ತು. ಹಿಂದೆ ತಿರುಗಿ ಮೆಟ್ಟಲಿಳಿದು ಹೋಗುವಾಗ ನಾಲ್ಕು ಮೆಟ್ಟಲ ಕೆಳಗೆ ವಿನೋದಿನಿ ಕುಳಿತಿದ್ದನ್ನು ನೋಡಿ ನಮಗೆ ಅದು ಕನಸೋ ನನಸೋ ಎಂಬಂತಾಯಿತು. ಅವಳು ಎಲ್ಲಿಗೆ ಹೋಗಿದ್ದಳು? ಹೇಗೆ ಅಲ್ಲಿಗೆ ಬಂದಳು? ಅನ್ನುವುದನ್ನು ಹೇಳಲೇ ಇಲ್ಲ. ಅವಳ ಮುಖದಲ್ಲಿ ತಾಯಿಯನ್ನು ಅಗಲಿದ ಹೆದರಿಕೆಯಾಗಲಿ, ಅಳುವನ್ನಾಗಲಿ ಕಾಣಲಿಲ್ಲ. ಅವಳ ಕೆನ್ನೆಗೆ ಒಂದು ಮುತ್ತಿಟ್ಟು ರತ್ನರಿಗೆ ವಿದಾಯಿ ಹೇಳಿ ಹೊರಟೆವು.

* * * *

ಮಾಸ್ಕೋದಲ್ಲಿ ಒಂಭತ್ತನೆಯ ಅಂತರರಾಷ್ಟ್ರೀಯ ಸಾಯಿಲ್ ಜೂಆಲಜಿ ಸಮ್ಮೇಳನ 1985 ಆಗಸ್ಟ್ 12 ರಿಂದ 21 ರವರೆಗೆ ನಡೆಯುವುದಿತ್ತು. ಬೆಲ್ಜಿಯಂನಲ್ಲಿ ನಡೆದ ಎಂಟನೆ ಸಮ್ಮೇಳನದಲ್ಲಿ ಒಂಬತ್ತನೆಯದು ಮಾಸ್ಕೋದಲ್ಲಿ, ಹತ್ತನೆಯದು ಬೆಂಗಳೂರಿನಲ್ಲಿ ನಡೆಯ ಬೇಕೆಂದು ತೀರ್ಮಾನವಾಗಿತ್ತು. ಪ್ರೊ॥ ಗಿಲರಾವ್ ಮತ್ತು ಡಾ॥ ಡಿ. ಎ. ಕ್ರಿವೊಲುಟ್‌ಸ್ಕಿಯವರು ಬೆಲ್ಜಿಯಂ ಕಾಂಗ್ರೆಸ್ಸಿಗೆ ಬಂದಿದ್ದರು. ಪ್ರೊ॥ ಗಿಲರಾವ್ ಮಾಸ್ಕೋದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎವಲೂಷನರಿ ಎನಿಮಲ್ ಮಾರ್ಫಾಲಜಿ ಅಂಡ್ ಇಕಾಲಜಿಯಲ್ಲಿ ಹೆಸರಾಂತ ವಿಜ್ಞಾನಿ. ಅವರು ಯು.ಎಸ್.ಎಸ್.ಆರ್. ಅಕಾಡೆಮಿ ಆಫ್ ಸೈನ್ಸ್‌ನ ಸದಸ್ಯರೂ ಆಗಿದ್ದರು. ಅವರ ಹೆಸರನ್ನು ಹಿಂದೆ ನಾನು ಕೇಳಿದ್ದೆನಾದರೂ ಅವರನ್ನು ನೋಡಿದ್ದು ಅದೇ ಮೊದಲು. ಯು.ಎಸ್.ಎಸ್.ಆರ್. 1985 ರಲ್ಲಿ ಇನ್ನೂ ಶೀತಲ ಸಮರದ ಹೊಗೆಯಲ್ಲಿ ಇತ್ತು. ಅಲ್ಲಿಯ ವಿಜ್ಞಾನಿಗಳು ಸೋವಿಯತ್ ಒಕ್ಕೂಟವನ್ನು ಬಿಟ್ಟು ಬೇರೆ ಹೋಗುತ್ತಿದ್ದದ್ದು ಕಡಿಮೆ. ಭಾರತ ರಷ್ಯಾದೊಂದಿಗೆ ಒಳ್ಳೆಯ ಬಾಂಧವ್ಯ ಹೊಂದಿದ್ದರಿಂದ ರಷ್ಯನರಿಗೆ ಭಾರತೀಯರನ್ನು ಇಂತಹ ಸಮ್ಮೇಳನದಲ್ಲಿ ಕಂಡರೆ ಇತರರಿಗಿಂತ ಹತ್ತಿರದವರೆಂದು ಭಾವಿಸುತ್ತಿದ್ದರು. ನಮ್ಮ ಮೊದಲ ಭೇಟಿಯಲ್ಲೇ ಬಹಳ ದಿನಗಳಿಂದ ಪರಿಚಯ ಇದ್ದವರಂತೆ ಮಾತನಾಡಿದೆವು. ಆಗ ಅವರಿಗೆ ಎಂಬತ್ತರ ಹತ್ತಿರ ವಯಸ್ಸಾಗಿರಬಹುದು. ಇಂಗ್ಲಿಷ್‌ನಲ್ಲಿ ಸರಳವಾಗಿ ಮಾತಾಡಬಲ್ಲವರಿದ್ದರು. ಬೆಲ್ಜಿಯಂನಲ್ಲಿ ನಡೆದ ಸಮ್ಮೇಳನದಲ್ಲಿ ಮುಂದಿನ ಸಮ್ಮೇಳನವನ್ನು ಭಾರತದಲ್ಲಿ ಮಾಡುವುದಾಗಿ ನಾನು ಆಹ್ವಾನಿಸಿದ್ದೆ. ಪ್ರೊ॥ ಗಿಲರಾವ್‌ರವರ ಪ್ರತಿಭೆ ಮತ್ತು ವಯಸ್ಸು ನೋಡಿ ಮುಂದಿನದನ್ನು ಮಾಸ್ಕೋದಲ್ಲಿ ಮಾಡಿದರೆ ಒಳ್ಳೆಯದೆಂದು ಕೆಲವು ಹಿರಿಯ ವಿಜ್ಞಾನಿಗಳು ಅಭಿಪ್ರಾಯ ಪಟ್ಟರು. ಆದರೆ ಪ್ರೊ॥ ಗಿಲರಾವ್‌ರಿಗೆ ಕೊಂಚ ಅಳುಕು. ಏಕೆಂದರೆ ಹೊರದೇಶದ ವಿಜ್ಞಾನಿಗಳಿಗೆಲ್ಲ ಅಲ್ಲಿ ಬರಲು ಅನುಮತಿ ದೊರೆಯುವುದೋ ಇಲ್ಲವೋ ಎಂದು. ಅಂತೂ ಕೊನೆಗೆ ಒಪ್ಪಿಕೊಂಡರು. ಆಗ ನನ್ನನ್ನು ಕರೆದು ನೀವು ಮಾಸ್ಕೋದ ನಂತರದ್ದನ್ನು ಮಾಡಿ ನಾನು ಬರುತ್ತೇನೆ ಅಂದರು. ನನ್ನ ಸಂತೋಷವನ್ನು ವ್ಯಕ್ತಪಡಿಸಿದೆ. ಅವರು ಹಿಂದೆ ಎರಡು ಬಾರಿ ಭಾರತಕ್ಕೆ ಬಂದಿದ್ದರು. ಅದರಲ್ಲಿ ಒಂದು ಸಾರಿ ಬೆಂಗಳೂರಿಗೂ ಬಂದು ನಮ್ಮ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ನಡೆದ ಒಂದು ಸಮ್ಮೇಳನದಲ್ಲಿ ಭಾಗವಹಿಸಿದ್ದರಂತೆ. ಬೆಲ್ಜಿಯಂನಲ್ಲಿದ್ದ ನಾಲ್ಕೈದು ದಿನದಲ್ಲಿ ದಿನಕ್ಕೆ

ಒಂದು ಬಾರಿಯಾದರೂ ನನ್ನನ್ನು ಸಂಧಿಸಿ ಭಾರತದ ವಿದ್ಯಮಾನವನ್ನು ವಿಚಾರಿಸುತ್ತಿದ್ದರು. ಮಾಸ್ಕೋದಲ್ಲಿ ನಡೆಯುವ ಸಮ್ಮೇಳನಕ್ಕೆ ನನ್ನ ಸಹಕಾರವನ್ನು ಕೋರಿ ಪತ್ರವ್ಯವಹಾರ ನಡೆಸುವುದಾಗಿ ಹೇಳಿದ್ದರು. ಅದರಂತೆಯೆ ಅವರು ಪತ್ರವ್ಯವಹಾರ ನಡೆಸುತ್ತಿದ್ದರು.

ಸಮ್ಮೇಳನ ಇನ್ನೂ ಒಂದು ವರ್ಷ ಇರುವಾಗ ಇದ್ದಕ್ಕಿದ್ದ ಹಾಗೆಯೇ ಮಾಸ್ಕೋದಿಂದ ಏನೂ ವಿಷಯ ತಿಳಿಯುತ್ತಿರಲಿಲ್ಲ. ಆ ಸಮ್ಮೇಳನದ ಕಾರ್ಯದರ್ಶಿ ಡಾ॥ ಕ್ರಿವೊಲುಟ್‌ಸ್ಕಿ ಕೂಡ ಬರೆಯಲಿಲ್ಲ. ಮಾಸ್ಕೋದ ಸಮ್ಮೇಳನದ ಬಗ್ಗೆ ಮೊದಲ ಒಂದು ಸುತ್ತೋಲೆಯ ನಂತರ ಮತ್ತೇನು ಬಹಳ ಕಾಲ ಬರಲಿಲ್ಲ. ಕೆಲವರಿಗೆ ಈ ಸಮ್ಮೇಳನ ಅಲ್ಲಿ ನಡೆಯುವುದೆ ಎಂಬ ಸಂಶಯ. ಇನ್ನು ಸಮ್ಮೇಳನ ಎರಡು ತಿಂಗಳು ಇದೆ ಅನ್ನುವಾಗ ಗಿಲರಾವ್‌ರವರ ಸೆಕ್ರಟರಿ ಟಾರ್ಷನಾನಿವ ಒಂದು ಪತ್ರವನ್ನು ಬರೆದು, ಗಿಲರಾವ್‌ರವರು ಬಹಳ ದಿನ ಅಸ್ವಸ್ಥರಾಗಿದ್ದು ತೀರಿಕೊಂಡ ವಿಷಯ ತಿಳಿಸಿ, ಅವರು ಇರುವಾಗ ನಿಮ್ಮ ಬಗ್ಗೆ ಬಹಳ ಹೇಳುತ್ತಿದ್ದರು, ನೀವು ಈ ಸಮ್ಮೇಳನಕ್ಕೆ ಬರಬೇಕಾಗಿ ಅಪೇಕ್ಷೆ ಪಡುತ್ತಿದ್ದರು, ಮುಂದಿನದನ್ನು ಭಾರತದಲ್ಲಿ ಮಾಡಿದಾಗ ಹೋಗುವುದಾಗಿಯೂ ಹೇಳಿದ್ದರು, ಆದ್ದರಿಂದ ತಾವು ಈ ಸಮ್ಮೇಳನಕ್ಕೆ ಬರಬೇಕಾಗಿ ಸಮ್ಮೇಳನ ವ್ಯವಸ್ಥಾಪಕರು ಅಪೇಕ್ಷಿಸುತ್ತಾರೆಂದು ತಿಳಿಸಿದ್ದರು.

ಪ್ರೊ॥ ಗಿಲರಾವ್ ಇಲ್ಲದ ಮಾಸ್ಕೋ ನನಗೆ ಶೂನ್ಯವಾಗಿ ಕಂಡಿತು. ಆದರೆ ಅಲ್ಲಿಗೆ ಹೋಗುವ ಬಗೆ ಹೇಗೆ. ಪ್ರೊ॥ ಗಿಲರಾವ್ ಇದ್ದಿದ್ದರೆ ಹೋಗುವ ಖರ್ಚನ್ನು ಭರಿಸುತ್ತಿದ್ದರು. ಕೈಯಿಂದ ಖರ್ಚುಮಾಡಿ ಹೋಗುವ ಸ್ಥಿತಿಯಲ್ಲಿರಲಿಲ್ಲ. ಬೇರೆ ಮತ್ತಾವ ಮೂಲಗಳೂ ಇದರ ಖರ್ಚನ್ನು ಭರಿಸುವ ಸೂಚನೆ ಕಾಣಲಿಲ್ಲ. ಆದರೂ ಶ್ರೀಮತಿ ಟಾರ್ಷನಾನಿವ್‌ರವರಿಗೆ ಪತ್ರ ಬರೆದು ಗಿಲರಾವ್‌ರವರ ನಿಧನಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸಿ ಆ ಸಮ್ಮೇಳನಕ್ಕೆ ಬರಲು ಪ್ರಯತ್ನ ಮಾಡುತ್ತೇನೆಂದು ಬರೆದಿದ್ದೆ. ಡಾ॥ ಕ್ರಿವೊಲುಟ್‌ಸ್ಕಿಯವರಿಗೆ ಮತ್ತೊಂದು ಕಾಗದ ಬರೆದು ವ್ಯವಸ್ಥಾಪಕರೇನಾದರೂ ಕನಿಷ್ಠ ಮಾಸ್ಕೋದಲ್ಲಿ ನನ್ನ ಊಟ ವಸತಿಯನ್ನು ನೋಡಿಕೊಳ್ಳಬಹುದೆ ಎಂದು ಕೇಳಿದ್ದಕ್ಕೆ ಸಮಂಜಸವಾದ ಉತ್ತರ ಬರಲಿಲ್ಲ. ಬದಲಾಗಿ ಗಿಲರಾವ್‌ರವರು ತೀರಿಕೊಂಡ ಮೇಲೆ ಅವರ ಸ್ಥಾನದಲ್ಲಿ ಮತ್ತಾರು ನಿಲ್ಲಲು ಶಕ್ತರಲ್ಲದ್ದರಿಂದ ಸಮ್ಮೇಳನಕ್ಕೆ ಬೇಕಾಗುವ ಖರ್ಚನ್ನು ಭರಿಸುವುದೇ ಕಷ್ಟವೆಂದು ಬರೆದಿದ್ದರು. ಮುಂದಿನ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಬೇಕಿದ್ದರೆ ನಾನು ಆ ಸಮ್ಮೇಳನಕ್ಕೆ ಹೋಗುವುದು ಅತ್ಯವಶ್ಯಕವಾಗಿತ್ತು. ಅಂತರರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳನ್ನು ಭಾರತದಲ್ಲಿ ನಡೆಸಲು ಎಲ್ಲಾ ವಿಜ್ಞಾನಿಗಳು ಪ್ರಯತ್ನ ಪಡಬೇಕೆಂದು ಎಲ್ಲರೂ ಹೇಳುವವರೆ, ಆದರೆ ಅವುಗಳನ್ನು ತರಲು ಪ್ರೋತ್ಸಾಹಿಸುವವರಾರಿರಲಿಲ್ಲ. ಭಾರತದಲ್ಲಿ ಮೊಟ್ಟ ಮೊದಲಿಗೆ ಮಣ್ಣು ಜೀವಶಾಸ್ತ್ರದ ವಿಭಾಗವನ್ನು ಕೃ.ವಿ.ವಿ. ಬೆಂಗಳೂರಿನಲ್ಲಿ ಪ್ರಾರಂಭಿಸಿ, ಹಲವು ಸಂಶೋಧನೆಯ ಯೋಜನೆಗಳನ್ನು ಕೈಗೊಂಡು, ಒಂದು ಸೊಸೈಟಿಯನ್ನು ಸ್ಥಾಪಿಸಿ, ಜರ್ನಲ್‌ನ್ನು ವರುಷಕ್ಕೆ ಎರಡು ಬಾರಿ ಮುದ್ರಿಸುತ್ತಿದ್ದು ಈ ಸಮ್ಮೇಳನವನ್ನು ಈಗ ಮಾಡದಿದ್ದರೆ ಮುಂದೆ ಮತ್ತಾರು ಮಾಡಲಾರರೆಂದು ತಿಳಿದಿದ್ದೆ. ಹೇಗಾದರೂ ಪ್ರಯತ್ನಪಟ್ಟು ಹೋಗುವುದೆಂದು ನಿರ್ಧರಿಸಿದ್ದೆ.

ಇಂಡೋ ಯು.ಎಸ್.ಎಸ್.ಆರ್. ಫ್ರೆಂಡ್‌ಶಿಪ್ ಸೊಸೈಟಿಯ ಅಧ್ಯಕ್ಷರಾಗಿದ್ದ ಪಿ.ಸಿ.ಐ. (Pest Control India)ನ ಪಿ.ಎಸ್.ರಾವ್‌ರವರಿಗೆ ಪತ್ರ ಬರೆದು ನನ್ನ ಉದ್ದೇಶವನ್ನು ತಿಳಿಸಿದೆ.

ಮರು ಉತ್ತರದಲ್ಲಿ ಬೆಂಗಳೂರು-ಮಾಸ್ಕೋ-ಬೆಂಗಳೂರು ವಿಮಾನಯಾನ ಖರ್ಚನ್ನು ಫ್ರೆಂಡ್‌ಶಿಪ್ ಸೊಸೈಟಿಯಿಂದ ಭರಿಸುವುದಾಗಿ ಉಳಿದ ಖರ್ಚನ್ನು ನಾನೇ ಭರಿಸಬೇಕೆಂದು ಬರೆದಿದ್ದರು. ಇವರ ಉತ್ತರ ನಾನು ಮಾಸ್ಕೋಕ್ಕೆ ಹೋಗುವುದಕ್ಕೆ ಪುಷ್ಟಿಕೊಟ್ಟಿತು.

ಅಂದಿನ ಕಮ್ಯುನಿಸ್ಟ್ ರಷ್ಯದ ವಿದ್ಯಮಾನಗಳು ಸಾಮಾನ್ಯರಿಗೆ ಗೋಚರಿಸುತ್ತಿರಲಿಲ್ಲ. ಹೊರಗಿನವರಿಗೆ ಸಮಾಚಾರ ಪತ್ರಿಕೆಗಳೆ ಆಧಾರ. ಅವುಗಳಲ್ಲಿ ಸತ್ಯ ಅಸತ್ಯಗಳ ಬೇಧ ಕಾಣುತ್ತಿರಲಿಲ್ಲ. ಮಾಸ್ಕೋ ಏರ್‌ಪೋರ್ಟ್‌ನಲ್ಲಿ ಸುಮಾರು ನಾಲ್ಕು ಘಂಟೆಗಳ ಕಾಲ ವಿನಾಕಾರಣ ತಪಾಸಣೆಗೆ ಒಳಗಾದಾಗ ಕಬ್ಬಿಣದ ತೆರೆಮರೆಯ ಹಿಂದಿನ ಅಗೋಚರ ಕೈವಾಡ ಎಷ್ಟು ಪ್ರಬಲವಾಗಿತ್ತೆಂದು ತಿಳಿಯಬಹುದಿತ್ತು. ಈ ಹಿಂದೆ ಒಮ್ಮೆ ಪ್ಯಾರಿಸ್ಸಿಗೆ ಹೋಗುವಾಗ ಮಾಸ್ಕೋ ಮೂಲಕ ಪ್ರಯಾಣ ಬೆಳೆಸಿದ್ದೆ. ಕೇವಲ ಹತ್ತಾರು ಜನವಿದ್ದ ಆ ವಿಮಾನದಲ್ಲಿ ಒಬ್ಬ ಪ್ರಯಾಣಿಕ ಕುಡಿದು ಅಮಲೇರಿ ಅಸಭ್ಯತೆಯಿಂದ ವರ್ತಿಸುತ್ತಿದ್ದ. ಗಗನಸಖಿಯರಿಗೆ ಅವನನ್ನು ಸುಧಾರಿಸುವುದು ಅಸಾಧ್ಯವಾಯಿತು. ಮಾಸ್ಕೋ ವಿಮಾನ ನಿಲ್ದಾಣದಲ್ಲಿ ಅವನನ್ನು ಕಡ್ಡಾಯವಾಗಿ ಇಳಿಸಿ ಪೊಲೀಸ್‌ರ ವಶಕ್ಕೆ ಕೊಡಬೇಕಾಯಿತು. ಆಗ ಅವನು ನನ್ನನ್ನು ಏನಾದರೂ ಮಾಡಿ, ಆದರೆ ಪೊಲೀಸ್‌ರ ವಶಕ್ಕೆ ಕೊಡಬೇಡಿ ಎಂದು ಗೋಗರೆಯುತ್ತಿದ್ದ. ಸುಮಾರು ಮೂರು ಗಂಟೆಗಳ ಕಾಲ ವಿಮಾನ ಮಾಸ್ಕೋ ಏರ್‌ಪೋರ್ಟ್‌ನಲ್ಲಿ ನಿಂತಿತ್ತು. ಆದರೆ ಯಾರಿಗೂ ಕೆಳಗೆ ಇಳಿಯಲು ಬಿಡಲಿಲ್ಲ. ಬೇರೆ ಎಲ್ಲಿಯಾಗಿದ್ದರೂ ಅಷ್ಟು ಹೊತ್ತು ಪ್ರಯಾಣಿಕರನ್ನು ವಿಮಾನದೊಳಗೆ ಕೂರಲು ಬಿಡುತ್ತಿರಲಿಲ್ಲ. ಅವರಿಗೆ ಕನಿಷ್ಟ ವಿಮಾನದಿಂದ ಇಳಿದು ಒಂದು ಕಡೆ ಕೂರುವುದಕ್ಕಾದರೂ ಬಿಡುತ್ತಿದ್ದರು.

ಏರ್‌ಪೋರ್ಟಿನಲ್ಲಿ ಪಾಸ್‌ಪೋರ್ಟ್ ಮತ್ತು ಇಮಿಗ್ರೇಷನ್ ಚೆಕ್ ಮಾಡುವವರಿಗೆ ಇಂಗ್ಲಿಷ್ ಬಾರದು. ನಮಗೆ ಅವರ ಭಾಷೆ ಬಾರದು. ನನ್ನ ಜೊತೆ ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾನಿಲಯದ ಡಾ॥ ಹಕ್ ಇದ್ದರು. ನಮ್ಮ ಅಸಹಾಯಕತೆ ನೋಡುತ್ತಿದ್ದ ನಮ್ಮ ಹಿಂದೆ, ನಾಲ್ಕು ಜನರ ಹಿಂದೆ ನಿಂತಿದ್ದ ಪಿ.ಟಿ.ಐ.ನ ವರದಿಗಾರ ಬೆಂಗಳೂರಿನವರೆ ಆದ ಶ್ರೀ ಗುಪ್ತರವರು ಮುಂದೆ ಬಂದು ನಮ್ಮ ಸಂಕಷ್ಟವನ್ನು ಪರಿಹರಿಸಿದರು. ಏರ್‌ಪೋರ್ಟ್‌ನಿಂದ ಹೊರಗೆ ಬಂದಾಗ ನಾವು ನಿರೀಕ್ಷಿಸಿದಂತೆ ಯಾರೂ ನಮಗಾಗಿ ಕಾದಿರಲಿಲ್ಲ. ನಮಗೆ ಇನ್‌ಟೂರಿಸ್ಟ್ ಹೋಟಲಿನಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದೆಯೆಂದು ಮೊದಲೆ ತಿಳಿದಿತ್ತು. ಗುಪ್ತರವರ ಸಹಾಯದಿಂದ ಹೋಟಲ್ ತಲುಪಿದೆವು. ಪರಸ್ಪರ ಪರಿಚಯವಾದ ನಂತರ ಗುಪ್ತರವರು ತಮ್ಮ ಕಾರ್ಡನ್ನು ಕೊಟ್ಟು ತೊಂದರೆ ಆದಾಗ ಅವರನ್ನು ಸಂಪರ್ಕಿಸಬೇಕೆಂದು ಹೇಳಿ, ನಾವು ಮಾಸ್ಕೋಕ್ಕೆ ಬಂದ ಕಾರಣ, ಮುಂದೆ ಭಾರತದಲ್ಲಿ ನಡೆಸಬೇಕಿದ್ದ ಸಮ್ಮೇಳನ ಎಲ್ಲದರ ಬಗ್ಗೆ ಭಾರತದ ಪತ್ರಿಕೆಗಳಲ್ಲಿ ವರದಿ ಮಾಡುವುದಾಗಿ ಭರವಸೆ ನೀಡಿದರು.

ಮಾಸ್ಕೋ ಸಮ್ಮೇಳನಕ್ಕೆ ಹೊರದೇಶದಿಂದ ಬಂದಿದ್ದ ಪ್ರತಿನಿದಿಗಳಿಗೆಲ್ಲ ಪ್ರತ್ಯೇಕ ವ್ಯವಸ್ಥೆ ಇನ್‌ಟೂರಿಸ್ಟ್ ಹೋಟಲಿನಲ್ಲಿ ಮಾಡಿದ್ದರು. ಹೋಟಲಿನಲ್ಲಿ ಊಟ ತಿಂಡಿ, ಮಾಸ್ಕೋ ಯೂನಿವರ್ಸಿಟಿಯಲ್ಲಿ ನಡೆಯುತ್ತಿದ್ದ ಸಮ್ಮೇಳನಕ್ಕೆ ಕರೆದುಕೊಂಡು ಹೋಗಿ ತಂದು ಬಿಡುವುದು ಮತ್ತೆ ಎಲ್ಲಿಗಾದರೂ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವುದಕ್ಕೆ ಪ್ರತ್ಯೇಕ ಏಜೆಂಟರಿಗೆ ವಹಿಸಿದ್ದರು. ಇದರ ಖರ್ಚೆಲ್ಲವನ್ನು ಡಾಲರ್‌ನಲ್ಲಿ ಕೊಡಬೇಕಿತ್ತು. ಆದರೆ ನಮಗೆ ಇದು

ಬಹಳ ದುಬಾರಿಯಾಗಿತ್ತು. ನನ್ನಲ್ಲಿದ್ದ ಡಾಲರ್ ಈ ಖರ್ಚಿಗೆ ಎರಡು ದಿವಸಕ್ಕೆ ಸಾಲುತ್ತಿರಲಿಲ್ಲ. ಮರುದಿವಸ ಕಾನ್‌ಫರೆನ್ಸ್ ನಡೆಯುತ್ತಿದ್ದ ಸ್ಥಳದಲ್ಲಿ ಪ್ರೊ|| ಗಿಲ್‌ರಾವ್‌ರವರ ಸೆಕ್ರಟರಿ ಟಾರ್ಷನಾನಿವ್‌ರನ್ನು ಕಂಡು ನನ್ನ ಪರಿಸ್ಥಿತಿಯನ್ನು ವಿವರಿಸಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಾಗಿ ಭರವಸೆ ಕೊಟ್ಟು ಮುಂದೆ ನಾನಿರುವತನಕ ನನಗೆ ತುಂಬ ಸಹಕರಿಸಿದ್ದರಲ್ಲದೆ ಬಿಡುವಿದ್ದಾಗಲೆಲ್ಲ ಮಾಸ್ಕೋದಲ್ಲಿದ್ದ ಪ್ರೇಕ್ಷಣೀಯ ಸ್ಥಳಗಳಿಗೆಲ್ಲ ಅವರ ಖರ್ಚಿನಲ್ಲೆ ಕರೆದುಕೊಂಡು ಹೋಗಿ ತೋರಿಸುತ್ತಿದ್ದರು.

ಡಾ|| ಹಕ್ ಮತ್ತು ನಾನು, ಇನ್‌ಟೂರಿಸ್ಟ್ ಹೋಟಲಿನಲ್ಲಿ ಒಂದೇ ರೂಮಿನಲ್ಲಿದ್ದೆವು. ಆ ಹೋಟಲಿನ ಊಟ ತಿಂಡಿ ಪಾನೀಯ ರೂಮ್ ಬಾಡಿಗೆ ಎಲ್ಲವೂ ಪಂಚತಾರಾ ಹೋಟಲಿಗೆ ಸಮಾನವಾಗಿದ್ದರೂ ನಮ್ಮ ದೇಶದ ಸಾಮಾನ್ಯ ಹೋಟಲಿಗಿಂತ ಕೊಂಚ ಉತ್ತಮವಿದ್ದಂತೆ ಇತ್ತು. ವಿವಿಧ ಬಗೆಯ ತಿಂಡಿ ತಿನಸುಗಳೇನೂ ದೊರೆಯುತ್ತಿರಲಿಲ್ಲ. ಇಡೀ ಕೋಳಿಗಳನ್ನು ಬೇಯಿಸಿ ಫ್ರೀಜರ್‌ನಲ್ಲಿಟ್ಟಿದ್ದು ಮತ್ತು ಬ್ರೆಡ್ ಸದಾ ದೊರೆಯುತ್ತಿತ್ತು. ಡಾ|| ಹಕ್, ಕೋಳಿಗಳನ್ನು ಕೂಡ ತಿನ್ನುತ್ತಿರಲಿಲ್ಲ, ಏಕೆಂದರೆ ಅವನ್ನು ಶಾಸ್ತ್ರೋಕ್ತವಾಗಿ ಮಾಡಿಲ್ಲವೆಂದು. ಅಂತು ಒಂದು ವಾರ ಅವರಿಗೆ ಒಂದು ಬಗೆಯ ಉಪವಾಸವಿದ್ದಂತಾಯಿತು.

ನಾವು ಹೋದ ಮರುದಿನ ಮುಂಜಾನೆ ಕಿಟಕಿಯಿಂದ ಹೊರಗೆ ನೋಡಿದಾಗ ಒಂದು ದೊಡ್ಡ ಕ್ಯೂ ನಿಂತಿತ್ತು. ಸ್ವಲ್ಪ ಸಮಯದ ನಂತರ ಬಾಳೆ ಹಣ್ಣಿನ ಕೈಗಾಡಿಯೊಂದು ಬಂತು. ಅರ್ಧಗಂಟೆಯೊಳಗೆ ಎಲ್ಲವೂ ಖಾಲಿ ಆಯಿತು. ಆದರೂ ಕ್ಯೂ ನಿಂತಿದ್ದವರೆಲ್ಲರಿಗೂ ದೊರೆಯಲಿಲ್ಲ. ಗಲಾಟೆ ಗಜಿಬಿಜಿಯೇನೂ ಕಾಣಲಿಲ್ಲ. ರಷ್ಯನ್ನರಿಗೆ ಕ್ಯೂ ನಿಂತು ಕೊಳ್ಳುವುದು ಬಹಳ ಸ್ವಾಭಾವಿಕ. ನಮ್ಮ ಹಾಗೆ ನೂಕು ನುಗ್ಗಲನ್ನು ಎಲ್ಲಿಯೂ ನೋಡಲಿಲ್ಲ. ಮತ್ತೊಮ್ಮೆ ನಾ ಕಂಡ ದೃಶ್ಯವೆಂದರೆ ಸಿಟಿ ಬಸ್ಸಿಗೆಂದು ನಾನೂ ಕ್ಯೂನಲ್ಲಿದ್ದೆ, ನನ್ನ ಮುಂದೆ ಹತ್ತಾರು ಜನರು ನಿಂತಿದ್ದರು, ಇದ್ದಕ್ಕಿದ್ದ ಹಾಗೆಯೆ ಕ್ಯೂನಲ್ಲಿದ್ದವರೆಲ್ಲ ಚದುರಿ ಮತ್ತೊಂದೆಡೆಯಲ್ಲಿ ಸಾಲಾಗಿ ನಿಂತರು. ನನಗೆ ಕೊಂಚ ಗಾಬರಿಯೇ ಆಯಿತು. ಏನು ಮಾಡಬೇಕೆಂದು ತೋಚಲಿಲ್ಲ. ಅಷ್ಟರಲ್ಲಿ ಐಸ್‌ಕ್ರೀಮ್ ಮಾರುವವನನ್ನು ನೋಡಿದಾಗ ಸಮಾಧಾನವಾಯಿತು. ಎಲ್ಲರೂ ಐಸ್‌ಕ್ರೀಮ್ ಕೊಳ್ಳಲು ಬಸ್ಸಿಗೆ ಕಾಯುವುದನ್ನು ಬಿಟ್ಟು ಮತ್ತೊಂದು ಕ್ಯೂ ಮಾಡಿಕೊಂಡರೆಂದು. ಅದೂ ಕೂಡ ಕ್ಯೂನಿಂತವರೆಲ್ಲರಿಗೆಲ್ಲ ದೊರೆಯಲಿಲ್ಲ.

ನಾನು ರಷ್ಯಕ್ಕೆ ಹೊರಡುವ ಮುನ್ನ ಬೆಂಗಳೂರಿನಲ್ಲಿದ್ದ ಕೇರಳದವರೊಬ್ಬರು ಅವರ ಸಂಬಂಧಿಕರಿಗೆ ಮಸಾಲೆ ಪುಡಿಗಳ ಒಂದು ಕಟ್ಟನ್ನು ಕೊಡಲು ಕೊಟ್ಟಿದ್ದರು. ಮಾಸ್ಕೋದಲ್ಲಿ ಅವರನ್ನು ವಿಚಾರಿಸಿದಾಗ ಇರಲಿಲ್ಲ. ಭಾರತಕ್ಕೆ ಬಂದಿದ್ದರೆಂದು ತಿಳಿಯಿತು. ಸುಮಾರು ಎರಡು ಕೆ.ಜಿ.ಯಷ್ಟಿದ್ದ ಮಸಾಲೆ ಚಟ್ನಿ ಪುಡಿಗಳನ್ನು ಏನು ಮಾಡುವುದೆಂದು ಯೋಚನೆಯಾಯಿತು. ಮಾಸ್ಕೋ ಏರ್‌ಪೋರ್ಟಿನಲ್ಲಿ ಸಿಕ್ಕಿದ್ದ ಪಿ.ಟಿ.ಐ.ನ ಗುಪ್ತರವರಿಗೆ ಫೋನ್ ಮಾಡಿ ವಿಷಯ ತಿಳಿಸಿ ತೆಗೆದುಕೊಂಡು ಹೋಗಲು ಸಲಹೆಮಾಡಿದೆ. ಅವರು ಸಂತೋಷದಿಂದ ಒಪ್ಪಿ ಒಂದು ಸಂಜೆ ಊಟಕ್ಕೆ ಆಹ್ವಾನಿಸಿದರು. ಹೋಟಲಿನಿಂದ ಅವರ ಮನೆಗೆ ಹೋಗುವ ವಿಧಾನವನ್ನು ಹೇಳಿದರು. ಅದರಂತೆ ಹೋಟಲಿನಿಂದ ಅವರು ಹೇಳಿದ ಕಡೆ ಸ್ವಲ್ಪ ದೂರ ನಡೆದು, ಮೆಟ್ರೋರೈಲನ್ನು ಹಿಡಿದು ಹೊರಗೆ ಬಂದ ನಂತರ, ಸಿ.ಟಿ. ಬಸ್ ಹತ್ತಿ ನಿಗದಿತ ಸ್ಥಳದಲ್ಲಿ

ಇಳಿದಾಗ ಅವರು ಅಲ್ಲಿದ್ದು ಮನೆಗೆ ಕರೆದುಕೊಂಡು ಹೋದರು. ಅವರ ಮನೆಯಲ್ಲಿ ಕಳೆದ ಮೂರು ಗಂಟೆ ರಷ್ಯದ ಜನಜೀವನದ ಬಗ್ಗೆ ತಿಳಿಯಲು ಅನುಕೂಲವಾಯಿತು. ದಾರಿಯಲ್ಲಿ ಬಸ್ಸಿಗೆ ಕ್ಯೂ ನಿಂತಿದ್ದಾಗ ನಡೆದ ಘಟನೆಯನ್ನು ವಿವರಿಸಿದೆ. ಇದನ್ನು ಕೇಳಿದ ಗುಪ್ತರವರು ಇದು ದಿನನಿತ್ಯ ನೋಡುವ ದೃಶ್ಯ ಎಂದರು. ಜನರ ಹತ್ತಿರ ದುಡ್ಡಿದೆ ಆದರೆ ಕೊಳ್ಳಲು ಸಾಮಾನಿಲ್ಲ. ಯಾವ ಹೋಟೆಲಿಗೆ ಹೋದರೂ ತಿನ್ನುವಷ್ಟು ಧಾರಾಳವಾದ ಬ್ರೆಡ್ ದೊರೆಯುತ್ತಿತ್ತು. ಆದರೆ ಹಣ್ಣು ಹಂಪಲು ಐಸ್‌ಕ್ರೀಮ್, ಸಿಹಿತಿಂಡಿ ಮುಂತಾದವು ದುರ್ಲಭ. ಭಾರತದಲ್ಲಿ ಯಾವ ಅಂಗಡಿಯಲ್ಲೂ ತುಂಬಿ ತುಳುಕುವಷ್ಟು ಸಾಮಾನು ಸಂಗ್ರಹವಾಗಿರುವುದನ್ನು ಜ್ಞಾಪಿಸಿಕೊಂಡು ಅಲ್ಲಿ ದಿನನಿತ್ಯ ಬಳಕೆಯ ವಸ್ತುಗಳ ಅಭಾವ ಕಂಡು ಮನಕರಗಿತು. ರಷ್ಯ ಮತ್ತು ಅಮೆರಿಕಾವನ್ನು ಒಂದು ತಕ್ಕಡಿಯಲ್ಲಿಟ್ಟು ಸಮಾನವಾಗಿ ನೋಡುತ್ತಿದ್ದ ಹೊರಗಿನವರಿಗೆ ಅಲ್ಲಿಯ ಒಳ ವಿದ್ಯಮಾನಗಳು ಆಶ್ಚರ್ಯ ತರುವಂತಹವಿದ್ದವು. ಶೀತಲ ಸಮರದಲ್ಲಿ ಅಮೆರಿಕನ್ನರಿಗೆ ಸರಿಸಮಾನವಾಗಿ ಸಟೆಸುತ್ತಿದ್ದು ಅಂತರಿಕ್ಷಯಾನದಲ್ಲಿ ಅವರಿಗಿಂತ ಒಂದು ಕೈ ಮೇಲೆಂದು ಹೇಳಿಕೊಳ್ಳುತ್ತಿದ್ದ ದೇಶದಲ್ಲಿ ಅಲ್ಲಿಯ ಪ್ರಜೆಗಳ ಕನಿಷ್ಠ ಆವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗಿದ್ದದ್ದು ವಿಪರ್ಯಾಸವಾಗಿ ಕಾಣುತ್ತಿತ್ತು.

ರಷ್ಯನ್ ಕ್ರಾಂತಿ ಆಗುವ ಮುನ್ನ ಸೋವಿಯತ್ ರಷ್ಯಾದಲ್ಲಿ ಎರಡು ಪಂಗಡವಿತ್ತು. ಅತಿ ಬಡವರು ಮತ್ತು ಅತಿ ಶ್ರೀಮಂತರು. ನಂತರದ ವರುಷಗಳಲ್ಲಿ ಮತ್ತೊಂದು ಬೃಹತ್ ಪಂಗಡ ಸೃಷ್ಟಿಯಾಯಿತು. ಅದೇ ಮಧ್ಯಮ ವರ್ಗದ ಜನ. ಇವರು ಬುದ್ಧಿಜೀವಿಗಳು, ಶ್ರಮ ಜೀವಿಗಳು, ಸಾಕಷ್ಟು ವರಮಾನ ಉಳ್ಳವರು. ಆದರೆ ದುಡ್ಡಿದ್ದರೂ ಖರ್ಚು ಮಾಡುವ ಅವಕಾಶಗಳಿಲ್ಲ. ಜೀವನಮಟ್ಟ ಸುಧಾರಿಸುವ ಅವಕಾಶಗಳಿಲ್ಲ. ಹೊರದೇಶಗಳ ಸಂಪರ್ಕವಿಲ್ಲ. ಆದರೆ ಆಡಳಿತದ ಚುಕ್ಕಾಣಿ ಹಿಡಿದವರಿಗೆ ಎಲ್ಲಾ ಸವಲತ್ತುಗಳಿದ್ದವು. ಅವರ ವೈಯಕ್ತ ಜೀವನ ಜಾರ್ ದೊರೆಗಳಿಗೇನು ಕಡಿಮೆ ಇರಲಿಲ್ಲ. ಜನರಲ್ಲಿ ಅತೃಪ್ತಿ ಬೂದಿ ಮುಚ್ಚಿದ ಕೆಂಡದಂತೆ ಒಳಗೊಳಗೆ ಕುದಿಯುತ್ತಿತ್ತು. ಮುಂದೆ ಎಂದಾದರೂ ಒಂದು ದಿನ ಸ್ಫೋಟಗೊಳ್ಳುವ ಚಿನ್ಹೆಗಳು ಕಾಣುತ್ತಿದ್ದವು. ತೊಂಬತ್ತರ ದಶಕದಲ್ಲಿ ರಷ್ಯ ಸಾಮ್ರಾಜ್ಯ ಒಡೆಯುವುದಕ್ಕೆ ಜನರಲ್ಲಿದ್ದ ಅತೃಪ್ತಿ ಮುಖ್ಯ ಕಾರಣವೆಂದು ಹೇಳಬಹುದು.

ಮೊದಲೇ ತಿಳಿಸಿದಂತೆ ಶ್ರೀಮತಿ ಟಾರ್ಷನಾನಿವ ನನಗೆ ತುಂಬ ಉಪಕಾರ ಮಾಡಿದರು. ಸಮ್ಮೇಳನದಲ್ಲಿ ಮಿನರಲ್ ವಾಟರ್ ಬಿಟ್ಟರೆ ಕಾಫಿ, ಟೀ, ಕೂಡ ದೊರೆಯುತ್ತಿರಲಿಲ್ಲ. ಆಗಾಗ ಅವರ ರೂಂಗೆ ಕರೆದುಕೊಂಡು ಹೋಗಿ ಸೈಬೀರಿಯನ್ ಟೀ ಮಾಡಿಸಿ ಕೊಡುತ್ತಿದ್ದರು. ಸಾಕಷ್ಟು ಕುಕ್ಕೀಸ್ ಕೂಡ ಇಟ್ಟಿದ್ದರು. ಅಷ್ಟು ಉತ್ತಮವಾದ ಟೀಯನ್ನು ಮತ್ತೆಲ್ಲೂ ಕಾಣಲಿಲ್ಲ. ಹಾಲಿಲ್ಲದೆ ಟೀ ಕುಡಿಯುವ ಅಭ್ಯಾಸ ಅಲ್ಲಿಂದಲೇ ಪ್ರಾರಂಭವಾದದ್ದು. ಕೊನೆಯ ಕೆಲವು ದಿನಗಳನ್ನು ಹೋಟೆಲ್‌ನಿಂದ ಹಾಸ್ಟಲಿಗೆ ಬದಲಾಯಿಸಲು ಇವರು ನೆರವಾದರು. ಈ ಸವಲತ್ತು ಸೋವಿಯತ್ ಒಕ್ಕೂಟಕ್ಕೆ ಸೇರಿದ ರಾಜ್ಯಗಳಿಗೆ ಮಾತ್ರ ಮೀಸಲು. ಉಳಿದವರೆಲ್ಲ ಹೊರಗಿನವರು. ಹೊರಗಿನವರಿಗೆ ದಿನಕ್ಕೆ ಮೂವತ್ತು ಡಾಲರ್ ಬಾಡಿಗೆ. ಸೋವಿಯತ್ ಒಕ್ಕೂಟಕ್ಕೆ ಸೇರಿದ ರಾಜ್ಯ ಪ್ರತಿನಿಧಿಗಳಿಗೆ ದಿನಕ್ಕೆ ಒಂದು ರೂಬೆಲ್. ಇದರ ಖರ್ಚನ್ನು ಟಾರ್ಷಾನಾನಿವ್‌ರೆ ವಹಿಸಿಕೊಂಡರು. ಮಾಸ್ಕೊ ಯೂನಿವರ್ಸಿಟಿ ಹಾಸ್ಟಲ್ ಅಂತರರಾಷ್ಟ್ರೀಯ ಮಟ್ಟದ್ದು. ಎಲ್ಲ

ಸುಸಜ್ಜಿತ, ಸ್ವಚ್ಛ, ಕ್ರಮಬದ್ಧ, ಆಹಾರವೂ ಒಪ್ಪುವಂತಹದು. ಆದರೆ ಬಿಸಿ ಆಹಾರ ದೊರೆಯುವುದು ದುಸ್ತರ.

ಸಮ್ಮೇಳನದ ಬಹುಪಾಲು ರಷ್ಯನ್ ಭಾಷೆಯಲ್ಲಿ ವ್ಯವಹರಿಸಲಾಗುತ್ತಿತ್ತು. ಇಂಗ್ಲಿಷ್ ತರ್ಜುಮೆ ಮಾಡಿ ಏಕಕಾಲದಲ್ಲಿ ಭಾಷಾಂತರ ಕೇಳುವ ವ್ಯವಸ್ಥೆ ಇರಲಿಲ್ಲ. ಕೆಲವು ಪ್ರತಿಷ್ಠಿತ ಮಂಡನೆಗೆ ಹಾಜರಿದ್ದು ಉಳಿದ ಸಮಯ ಟಾರ್ಷನಾನಿವ್‌ರ ಜೊತೆ ಮಾಸ್ಕೋದ ಮುಖ್ಯ ಸ್ಥಳಗಳನ್ನು ನೋಡುವುದರಲ್ಲಿ ಕಳೆದೆ. ಪ್ರತಿಯಾಗಿ ನಾನು ಅವರಿಗೆ ಮಾಡಿದ್ದು ವೊಡ್ಕಾ ಬೇಕಾದಾಗ ಕೊಂಡು ಕೊಡುವುದು. ಬಹಳ ಜನ ರಷ್ಯನ್ನರು ಕುಡಿಯುವ ಹವ್ಯಾಸವಿಟ್ಟುಕೊಂಡಿದ್ದರಿಂದ ವೊಡ್ಕಾ ಮಾರಾಟವನ್ನು ದಿನದಲ್ಲಿ ಕೇವಲ ಎರಡು ಮೂರು ಗಂಟೆಗಳ ಕಾಲ ಮಾಡುತ್ತಿದ್ದರು. ದಿನಗಟ್ಟಲೆ ಕ್ಯೂ ನಿಂತರೂ ಎಲ್ಲರಿಗೂ ದೊರೆಯುತ್ತಿರಲಿಲ್ಲ. ಆದರೆ ಹೊರದೇಶದವರು ಕ್ಯೂ ನಿಲ್ಲದೆ ಕೊಳ್ಳಬಹುದಿತ್ತು.

ಲೆನಿನ್‌ನ ಮುಸೋಲಿಯಂ (Mausoleum) ಇವರಿಲ್ಲದಿದ್ದರೆ ನೋಡಲು ಸಾಧ್ಯವಾಗುತ್ತಿರಲಿಲ್ಲ. ಕೆಂಪು ಚೌಕದಲ್ಲಿ ಲೆನಿನ್‌ನ ಪಾರ್ಥಿವ ಶರೀರವನ್ನಿಟ್ಟಿದ್ದ ಮುಸೋಲಿಯಂ ರಷ್ಯನ್ನರಿಗೆ ಮೆಕ್ಕವಿದ್ದಂತೆ. ಪ್ರತಿ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಜನರು ಕ್ಯೂ ನಿಂತು ಕಾದು ನೋಡುವ ಕಾತುರರಾಗಿರುತ್ತಿದ್ದರು. ಆದರೆ ಅದನ್ನು ತೆರೆಯುವುದು ಮತ್ತು ಮುಚ್ಚುವ ಕಾಲ ನಿಗದಿತವಿರಲಿಲ್ಲ. ದಿನದಲ್ಲಿ ಯಾವಾಗಲಾದರೂ ಒಂದೆರಡು ಗಂಟೆಗಳ ಕಾಲ ತೆರೆದಿದ್ದು ಮುಚ್ಚುತ್ತಿದ್ದರು. ಒಳಾಂಗಣದ ಉಷ್ಣತೆ ಕೊಂಚ ಏರುಪೇರಾದರೂ ಮುಚ್ಚಿ ಬಿಡುತ್ತಿದ್ದರು. ನಾವು ಹೋದ ದಿವಸ ಸುಮಾರು ಒಂದು ಕಿಲೋಮೀಟರ್ ದೂರ ಜನ ಸಾಲುಗಟ್ಟಿದ್ದರು. ಯಾವಾಗ ತೆರೆಯುತ್ತಾರೆನ್ನುವುದೂ ಅವರಿಗೆ ಗೊತ್ತಿಲ್ಲ.

ನೀವು ಏನನ್ನು ನೋಡಲು ಇಷ್ಟಪಡುತ್ತೀರೆಂದು ಟಾರ್ಷನಾನಿವ ನನ್ನನ್ನು ಕೇಳಿದಾಗ ಎರಡು ಜಾಗಗಳನ್ನು ನೋಡಲು ಬಯಸಿದ್ದು ಉಳಿದದ್ದು ಅವರಿಗೆ ಬಿಟ್ಟಿದ್ದು ಎಂದಿದ್ದೆ. ಲೆನಿನ್‌ನ ಮುಸೋಲಿಯಂ ಒಂದು ಮತ್ತು ಪ್ರೊ॥ ಗಿಲ್‌ರಾವ್‌ರವರ ಸಮಾಧಿಗೆ ಪುಷ್ಪಗುಚ್ಛ ಅರ್ಪಿಸುವುದು ನನ್ನ ಎರಡು ಬಯಕೆಗಳಾಗಿದ್ದವು. ಆದ್ದರಿಂದ ಏನಾದರೂ ಮಾಡಿ ಲೆನಿನ್ ಮುಸೋಲಿಯಂ ತೋರಿಸಲೇಬೇಕೆಂದು ನಿರ್ಧರಿಸಿದರು. ನಾವು ಕ್ಯೂನಲ್ಲಿ ನಿಲ್ಲಲಿಲ್ಲ. ನಿಲ್ಲುವಷ್ಟು ಸಮಯವೂ ಇರಲಿಲ್ಲ. ನಾವು ಹೋದ ಸಮಯದಲ್ಲಿ ಆಗ ತಾನೆ ಮುಸಲೋನಿಯಂ ತೆರೆದಿತ್ತು. ಬಾಗಿಲ ಹತ್ತಿರ ಹೋಗಿ ಕ್ಯೂನಿಂತಿದ್ದ ಇಬ್ಬರು ವಯಸ್ಸಾದವರನ್ನು ಜಾಗಕೊಡುವಂತೆ ಕೇಳಿಕೊಂಡರು. ಮೊದಲೆ ತಿಳಿಸಿದಂತೆ ರಷ್ಯನ್ನರಿಗೆ ಭಾರತೀಯರನ್ನು ಕಂಡರೆ ಅಭಿಮಾನ. ಅದರಲ್ಲೂ ವಯಸ್ಸಾದವರಿಗೆ ಹೆಚ್ಚಿನ ವಿಶ್ವಾಸ. ಅವರು ಒಪ್ಪಿ ನಮ್ಮನ್ನು ಕ್ಯೂನಲ್ಲಿ ಸೇರಿಸಿಕೊಂಡರು. ಒಳಗೆ ಇದ್ದ ಬಂದೋಬಸ್ತ್ ನೋಡಿದರೆ ಜೀವವಿದ್ದ ಯಾವ ಚಕ್ರವರ್ತಿಗೂ ಅಷ್ಟು ಬೆಂಗಾವಲು ಇರುವುದು ಕಾಣೆ. ಹೆಜ್ಜೆ ಹೆಜ್ಜೆಗೂ ಪ್ರತಿಯೊಂದನ್ನೂ ಶೋಧಿಸಿ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದರು. ಹೊರಾಂಗಣ ಒಳಾಂಗಣ ಸಾಣೆ ಹಿಡಿದ ಅತ್ಯುತ್ತಮ ಶಿಲೆಗಳಿಂದ ನಿರ್ಮಿತವಾಗಿತ್ತು. ಲೆನಿನ್‌ರ ಪಾರ್ಥೀವ ಶರೀರವನ್ನು ನಾಲ್ಕು ಅಡಿ ಎತ್ತರದ ದಿಬ್ಬದ ಮೇಲೆ ಗ್ಲಾಸುಗಳಿಂದ ಮುಚ್ಚಿದ ಆಸನದಲ್ಲಿ ಮಲಗಿಸಿದ್ದರು. ಮುಖದ ಮೇಲಿನ ಮೀಸೆ ಎದ್ದು ಕಾಣುವಂತೆ ಇತ್ತು. ಒಮ್ಮೆಗೆ ನಾಲ್ಕು ಜನ ಅರ್ಧ ನಿಮಿಷ ನೋಡಬಹುದಿತ್ತು. ಹೊರಗೆ ಬಂದ

ನಂತರ ಟಾರ್ಷನಾನಿವ ನಾನು ಇಷ್ಟು ಸುಲಭವಾಗಿ ನೋಡಲು ಆಗುತ್ತದೆಯೆಂದು ತಿಳಿದಿರಲಿಲ್ಲ. ನಾನು ನೋಡಿದಾಗಲೂ ಹಲವಾರು ವರುಷಗಳ ಹಿಂದೆ ಎರಡು ಮೂರು ದಿವಸ ಪ್ರಯತ್ನ ಪಡಬೇಕಾಯಿತು. ಅಂತು ನಿಮ್ಮದೊಂದು ಆಸೆಯನ್ನು ಪೂರೈಸಿದ ಹಾಗಾಯಿತೆಂದರು.

ಪ್ರೊ॥ ಗಿಲ್‌ರಾವ್‌ರವರ ಸಮಾಧಿ ನೋಡುವುದು ಸುಲಭದ ಕೆಲಸವಾಗಲಿಲ್ಲ. ರಷ್ಯದ ಪ್ರತಿಷ್ಠಿತ ಗಣ್ಯವ್ಯಕ್ತಿಗಳಿಗೆ ಮೀಸಲಾಗಿದ್ದ ಸ್ಮಶಾನ ಒಂದರಲ್ಲಿ ಇವರನ್ನು ಹೂಳಲಾಗಿತ್ತು. ಸ್ಟಾಲಿನ್‌ನ ಪತ್ನಿ, ಕುರ್ಷೇವ್ ಮುಂತಾದವರನ್ನು ಇಲ್ಲಿ ಸಮಾಧಿ ಮಾಡಲಾಗಿದೆ. ಹತ್ತಿರದ ಕುಟುಂಬದವರಿಗೆ ಮಾತ್ರ ವರುಷಕ್ಕೆ ಒಂದು ಸಾರಿ ಸತ್ತವರ ಹುಟ್ಟುದಿನದಂದೋ ಅಥವಾ ಸಮಾಧಿ ಮಾಡಿದ ದಿನದಂದೋ ಬಿಡುವುದನ್ನು ಬಿಟ್ಟರೆ ಮತ್ತಾರಿಗೂ ಅಲ್ಲಿ ಪ್ರವೇಶವಿಲ್ಲ. ನಾನು ಹೋದ ದಿನ ಪ್ರೊ॥ ಗಿಲ್‌ರಾವ್‌ರವರ ಹುಟ್ಟು ದಿನವೂ ಅಲ್ಲ. ಸತ್ತ ದಿನವೂ ಅಲ್ಲ. ಮಿಗಿಲಾಗಿ ನಾನು ಅವರ ಸಂಬಂಧಿಯೂ ಅಲ್ಲ. ಹೀಗಿದ್ದೂ ಒಳಗೆ ಹೋಗುವುದೆಂದರೆ ಹೇಗೆ. ಟಾರ್ಷನಾನಿವರಿಗೆ ಇದೊಂದು ಕಷ್ಟದ ಕೆಲಸವೆನಿಸಿತು. ನಮ್ಮಲ್ಲಿ ಸ್ಮಶಾನವೆಂದರೆ ಸತ್ತವರನ್ನು ಸುಟ್ಟು ಹಿಂದಿರುಗಿದರೆ ಮತ್ತೆ ಹೋಗುವುದು ಇನ್ನೊಂದು ಇಂತಹ ಸಂದರ್ಭ ಬಂದಾಗಲೇ. ಮುಸಲ್ಮಾನ್, ಕ್ರಿಶ್ಚಿಯನ್ನರು ಕಲ್ಲನ್ನಾದರೂ ನೆಟ್ಟು ಅವರವರ ಶಕ್ತ್ಯಾನುಸಾರ ಹೆಸರು ಬರೆಸಿ ಅಥವಾ ಗೋರಿ ಕಟ್ಟಿಸಿ, ಜ್ಞಾಪಕಾರ್ಥವಾಗಿ ಗುರುತನ್ನು ಬಿಟ್ಟಿರುತ್ತಾರೆ. ಹಿಂದೂಗಳಿಗೆ ಈ ಸಂಸ್ಕೃತಿ ಇಲ್ಲದಿರುವುದರಿಂದ ದೊಡ್ಡ ಪಟ್ಟಣಗಳನ್ನು ಬಿಟ್ಟರೆ ಅವರ ಸ್ಮಶಾನಕ್ಕೆ ಹದ್ದು ಬಸ್ತು ಕೂಡ ಇರುವುದಿಲ್ಲ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಸ್ಮಶಾನ ಒಂದು ಪ್ರೇಕ್ಷಣೀಯವಾದ ಸ್ಥಳ. ನಾನು ಅಮೆರಿಕಾದ ಊಸ್ಟರ್‌ನಲ್ಲಿರುವಾಗ ಹೋಟಲಿನಿಂದ ರೀಸರ್ಚ್ ಸ್ಟೇಷನ್‌ಗೆ ನೇರದಾರಿ ಯಿದ್ದರೂ ಸ್ಮಶಾನದ ಮಧ್ಯದಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ಅಲ್ಲಿ ಬಗೆಬಗೆಯ ಗುಲಾಬಿ ಗಿಡಗಳನ್ನು ಬೆಳೆಸಿದ್ದು ಹಚ್ಚನೆಯ ಹಸಿರು ಹುಲ್ಲು ಬಗೆಬಗೆಯ ಆಕಾರದ ಸ್ಮಾರಕಗಳು ನೋಡಲು ಅಂದವಾಗಿದ್ದವು. ಮಾಸ್ಕೋದಲ್ಲಿ ಕೂಡ ಇದೊಂದು ಪ್ರೇಕ್ಷಣೀಯ ಸ್ಥಳವಾಗಿತ್ತು. ಆದರೆ ಬಹಳ ಕಾವಲಿದ್ದರಿಂದ ಬೇರೆಯವರಿಗೆ ಒಳಗೆ ಹೋಗಲು ಅವಕಾಶವಿಲ್ಲ. ಹಾಗೆ ಹೋಗುವುದಾದರೆ ಸಂಬಂಧಪಟ್ಟವರಿಂದ ಅನುಮತಿ ಪಡೆದು, ಮೊದಲೇ ನಿಗದಿತ ದಿನ, ವೇಳೆಯಲ್ಲಿ ಪಾಸ್ ತೋರಿಸಿ ಹೋಗಬಹುದು. ನಮ್ಮಲ್ಲಿ ಅಂತಹುದೇನು ಇರಲಿಲ್ಲ. ಟಾರ್ಷನಾನಿವರು ಸುಮಾರು ಎರಡು ಗಂಟೆಗಳ ಕಾಲ ಅವರಿಗೆ ತಿಳಿದವರೆಲ್ಲರಿಗೂ ಸಂಪರ್ಕಿಸಿ, ಕೊನೆಗೆ ಪ್ರೊ॥ ಗಿಲ್‌ರಾವ್‌ರವರು ಹೆಸರಾಂತ ವಿಜ್ಞಾನಿಯಾಗಿದ್ದರಿಂದ ಹೊರದೇಶದ ವಿಜ್ಞಾನಿಯೊಬ್ಬರು ತಮ್ಮ ಗೌರವ ಸಲ್ಲಿಸಲು ಬಂದಿದ್ದರಿಂದ ಅರ್ಧಗಂಟೆ ಅವಕಾಶ ಕೊಡಬೇಕೆಂದು ಹುಕುಂ ಆಯಿತು. ಆದರೆ ಸುಮಾರು ಎರಡು ಗಂಟೆ ಒಳಗೆ ಕಾಲಕಳೆದೆವು. ಪ್ರೊ॥ ಗಿಲ್‌ರಾವ್‌ರವರ ಸಮಾಧಿಗೆ ಪುಷ್ಪಗುಚ್ಛ ಇಟ್ಟನಂತರ ಇತರೆ ಹೆಸರಾಂತ ಕವಿಗಳು ಕಾದಂಬರಿಕಾರರು, ವಿಜ್ಞಾನಿಗಳ ಸ್ಮಾರಕಗಳನ್ನು ನೋಡಿದೆವು. ಸ್ಟಾಲಿನ್ ಪತ್ನಿಯ ಸುಂದರ ಆಕೃತಿಯ ಅಮೃತ ಶಿಲೆ ವಿಗ್ರಹ ಮತ್ತು ಅವರ ಮಕ್ಕಳ ಸ್ಮಾರಕ ಎಲ್ಲರ ಕಣ್‌ಸೆಳೆಯುವಂತಿದ್ದವು.

ಮತ್ತೊಂದು ನೆನಪಿಸಿಕೊಳ್ಳಬೇಕಾದ ಸ್ಥಳ ಮಕ್ಕಳು ಬಿಡಿಸಿದ ಚಿತ್ರ ಸಂಗ್ರಾಲಯ. ವಿಶಾಲವಾದ ಭವ್ಯ ಮನೆಯಲ್ಲಿ ಮಕ್ಕಳ ಪೇಂಟಿಂಗ್ಸ್ ಪ್ರದರ್ಶನ ಮನಸೆಳೆಯುವಂತಿದ್ದವು. ರಷ್ಯದಲ್ಲಿ ಮಕ್ಕಳು ಮತ್ತು ವಯಸ್ಸಾದವರಿಗೆ ಹೆಚ್ಚಿನ ಪ್ರಾಶಸ್ತ್ಯ. ರಷ್ಯದ ಅಣ್ವಸ್ತ್ರ ಮಿಲಿಟರಿ ಪ್ರಾಬಲ್ಯದ ಉಕ್ಕಿನ ತೆರೆಯ ಹಿಂದೆ ಮೃದುವಾದ ಕೋಮಲ ಮುಗ್ಧ ಜನರ ಮನೋವೃತ್ತಿಯನ್ನು

ಕಾಣಬಹುದಿತ್ತು. ರಷ್ಯನ್ನರ ಚಿತ್ರಕಲೆ, ಸಂಗೀತ, ನಾಟಕ, ಬ್ಯಾಲೆ, ಸರ್ಕಸ್, ಹೆಸರಾಂತವಾದವು. ನಾನು ಹೋಗುವಾಗ ಕಾವೇರಿಯಿಂದ ಕೆಲವು ಸಣ್ಣ ಸಣ್ಣ ಕೆತ್ತನೆಯ ಚಿತ್ರಕಲೆಗಳನ್ನು ತೆಗೆದುಕೊಂಡು ಹೋಗಿದ್ದೆ. ಸಮ್ಮೇಳನದಲ್ಲಿ ಪರಿಚಯವಾದ ರಷ್ಯನ್ ವಿಜ್ಞಾನಿಯೊಬ್ಬರಿಗೆ ಒಂದನ್ನು ಜ್ಞಾಪಕಾರ್ಥವಾಗಿ ಕೊಟ್ಟೆ. ಅದಕ್ಕೆ ಪ್ರತಿಯಾಗಿ ರಷ್ಯದ ಜ್ಞಾಪಕಾರ್ಥ ಏನಾದರೂ ನಾನು ತೆಗೆಕೊಳ್ಳಬೇಕೆಂದು ನನ್ನನ್ನು ಕೆಲವು ಅಂಗಡಿಗಳಿಗೆ ಕರೆದುಕೊಂಡು ಹೋಗಿ ನಿಮಗೆ ಬೇಕಾದ್ದನ್ನು ಆರಿಸಿಕೊಳ್ಳಿ ಎಂದರು. ಅದಕ್ಕೆ ನಾನು ಒಪ್ಪಲಿಲ್ಲ. ಅವರಿಗೇ ಆರಿಸಿಕೊಳ್ಳಲು ಬಿಟ್ಟೆ. ಕೆಲವು ಗಂಟೆಗಳು ಅವರೊಡನೆ ಸುತ್ತಾಡಿದಾಗ ಅವರಿಗಿದ್ದ ರಷ್ಯನ್ ಕಲೆ, ಸಂಸ್ಕೃತಿ, ಸಾಹಿತ್ಯದ ಪರಿಜ್ಞಾನ ಎಷ್ಟು ಆಳವಾಗಿತ್ತೆಂದರೆ, ಹೊರನೋಟಕ್ಕೆ ಸಾಮಾನ್ಯರಂತಿದ್ದರೂ ಅವರಲ್ಲಿ ಜ್ಞಾನ ಭಂಡಾರವೇ ತುಂಬಿ ತುಳುಕುತ್ತಿತ್ತು. ಕೊನೆಗೆ ಪಾಶಿಮಲ್ಶೆ ಪೇಂಟ್ ಮಾಡಿದ ಒಂದು ಮರದ ಕುಡಿಕೆಯನ್ನು ಕೈಗೆತ್ತಿಕೊಂಡು, ಇದೊಂದು ದೊಡ್ಡ ಕೊಡಿಗೆಯಲ್ಲ, ಆದರೆ ಇದರ ಹಿನ್ನೆಲೆಯ ಕಲೆ ಬಹಳ ಪುರಾತನವಾದದ್ದು, ಅದರ ಕುರುಹು ಆಗಿ ಇದನ್ನು ತೆಗೆದುಕೊಳ್ಳಿ ಎಂದರು. ಮೂರು ವರುಷಗಳ ನಂತರ ಬೆಂಗಳೂರಿನಲ್ಲಿ ನಡೆದ ಸಾಯಿಲ್ ಜೂಆಲಜಿ ಸಮ್ಮೇಳನಕ್ಕೆ ಬಂದಿದ್ದವರಲ್ಲಿ ಒಬ್ಬರು ನಮ್ಮ ಮನೆಗೆ ಬಂದಾಗ ಇದನ್ನು ನೋಡಿ ನಿಮಗೆ ರಷ್ಯನ್ ಕಲೆಯ ಪರಿಚಯವಿರುವ ಹಾಗಿದೆ, ಎಂದಾಗ ಅದನ್ನು ಕೊಂಡ ಸಂಗತಿಯನ್ನು ಹೇಳಿದೆ.

ಮಾಸ್ಕೋ ಸಮ್ಮೇಳನದ ಅಂಗವಾಗಿ ಒಂದು ದಿನ ಮಾಸ್ಕೋಗೆ ಸುಮಾರು ನೂರು ಮೈಲಿ ದೂರದ ಒಂದು ಅರಣ್ಯಕ್ಕೆ ಮಣ್ಣು ಜೀವಿಗಳ ಸಂಗ್ರಹಣೆಗೆಂದು ಕರೆದುಕೊಂಡು ಹೋಗಿದ್ದರು. ಅಲ್ಲಿಯ ಸುತ್ತಮುತ್ತಲ ಹಳ್ಳಿಯ ಸ್ಥೂಲ ಪರಿಚಯವಾಯಿತು. ಅವರ ಜೀವನ ಸ್ಥಿತಿ ನಮ್ಮ ಹಳ್ಳಿಯವರಿಗಿಂತ ಹೆಚ್ಚೇನು ಕಾಣಲಿಲ್ಲ. ಅವರು ವಾಸಿಸುತ್ತಿದ್ದ ಮನೆ, ಸುತ್ತಮುತ್ತ ಕಳೆ, ಹಂದಿ, ಕೋಳಿ, ಅವರ ಉಡುಗೆ ತೊಡಿಗೆ ಸರಳ ಜೀವನ ನಮ್ಮ ಹಳ್ಳಿಯ ವಾತಾವರಣ ಹೋಲುತ್ತಿತ್ತು. ಆದರೆ ಕುಡಿತದಲ್ಲಿ ಒಂದು ಕೈ ಮೇಲೆಂದು ಕಾಣುಸುತ್ತಿದ್ದ ಜನ ಪಟ್ಟಣ ವಾಸಿಗಳಿಗಿಂತ ಎಷ್ಟು ಭಿನ್ನ ಎನ್ನುವುದು ಎದ್ದು ಕಾಣುತ್ತಿತ್ತು.

ಸಮ್ಮೇಳನದ ಕೊನೆಯ ದಿನ ಏರ್ಪಡಿಸಿದ್ದ ಔತಣಕೂಟ ನಿಜವಾಗಿಯೂ ಇದು ರಷ್ಯದಲ್ಲಿ ನಡೆಯುತ್ತಿದೆಯೆ ಎಂಬ ಅನುಮಾನ ಉಂಟಾಯಿತು. ಬೆಲ್ಜಿಯಂನಲ್ಲಿ ನಡೆದದ್ದಕ್ಕಿಂತ ಅದ್ದೂರಿಯಾಗಿರದಿದ್ದರೂ ಇಷ್ಟು ದೊಡ್ಡ ಔತಣವನ್ನು ರಷ್ಯಾದಲ್ಲಿ ಏರ್ಪಡಿಸುವರೆಂದು ನೆರದಿದ್ದ ಸಮ್ಮೇಳನದ ಪ್ರತಿನಿಧಿಗಳು ನಿರೀಕ್ಷಿಸಿರಲಿಲ್ಲ. ಜೊತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಗಳೂ ಇದ್ದವು. ಸಂಜೆ ಸುಮಾರು ಏಳು ಗಂಟೆಗೆ ಪ್ರಾರಂಭವಾಗಿ ಮಧ್ಯರಾತ್ರಿ ಮೀರಿದ ಸಮಯದವರೆಗೂ ನಡೆಯಿತು. ಇದ್ದವರ ಜೊತೆಯಲ್ಲಿ ಅನ್ಯೋನ್ಯವಾಗಿ ವ್ಯವಹರಿಸಲು ಭಾಷೆ ಅಡ್ಡವಿದ್ದದ್ದರಿಂದ ಇಂಗ್ಲಿಷ್ ಬಲ್ಲ ಕೆಲವರಲ್ಲಿ ಮಾತ್ರ ಮಾತನಾಡುವ ಅವಕಾಶವಿತ್ತು. ಅವರ ಪ್ರಕಾರ ಇಂತಹ ಪಾರ್ಟಿಗಳು ಸಾಮಾನ್ಯರಿಗೆ ಎಟುಕದಿದ್ದರೂ, ಉನ್ನತ ಅಧಿಕಾರಿಗಳಿಗೆ, ರಾಜಕೀಯ ಧುರೀಣರಿಗೆ ಸರ್ವೇಸಾಮಾನ್ಯವೆಂದು ಹೇಳುತ್ತಿದ್ದರು. ವೋಡ್ಕಾದ ಜೊತೆಗೆ ಸ್ಕಾಚ್ ವಿಸ್ಕಿ ಹೊಳೆ ಹರಿಯುತ್ತಿತ್ತು. ಆದರೆ ರಷ್ಯನ್ ಒಕ್ಕೂಟ ರಾಷ್ಟ್ರಗಳ ಪ್ರತಿನಿಧಿಗಳು ವೋಡ್ಕಾವನ್ನೇ ಹೆಚ್ಚಾಗಿ ಅಪೇಕ್ಷಿಸುತ್ತಿದ್ದರು. ಬಣ್ಣದಲ್ಲಿ, ಖಾರದಲ್ಲಿ ವೋಡ್ಕಾ ನಮ್ಮ ದೇಸದ ಬಟ್ಟಿಸಾರಾಯಿಗೆ ಹೋಲಬಹುದು. ಆದರೆ ಅದು ಅಲ್ಲಿಯ ರಾಷ್ಟ್ರೀಯ ಪಾನೀಯ.

ರಷ್ಯದಲ್ಲಿ ಭೋಗವಸ್ತುಗಳಿಗೆ ಅಭಾವವಿರಲಿಲ್ಲ. ಆದರೆ ಅವುಗಳು ದೊರೆಯುತ್ತಿದ್ದದ್ದು ಕೆಲವರಿಗೆ ಮಾತ್ರ. ಪ್ರವಾಸಿಗರಿಗೆ ಡಾಲರ್ ಕೊಟ್ಟುಕೊಳ್ಳುವವರಿಗೆಂದೇ ಪ್ರತ್ಯೇಕ ಮಳಿಗೆಗಳು ಸರ್ಕಾರದ ವತಿಯಿಂದ ವ್ಯವಸ್ಥಿತವಾಗಿದ್ದವು. ಪ್ರಪಂಚದ ಬೇರೆ ದೊಡ್ಡ ನಗರಗಳಲ್ಲಿ ದೊರೆಯುವ ವಸ್ತುಗಳೆಲ್ಲ ಇಲ್ಲಿ ದೊರೆಯುತ್ತಿದ್ದವು. ಅಲ್ಲದೆ ರಷ್ಯದಲ್ಲಿ ತಯಾರಾದ ರಫ್ತಿಗೆಂದು ಸೀಮಿತವಾದ ವಸ್ತುಗಳು ಇಲ್ಲಿ ದೊರೆಯುತ್ತಿದ್ದವು. ಅಲ್ಲಿ ಕೊಂಡಿದ್ದ ರಷ್ಯನ್ ಮೇಡ್ ಒಂದು ಪುಟ್ಟ ಸರಳವಾದ ಗಟ್ಟಿಮುಟ್ಟಾದ ಸ್ಲೈಡ್ ಪ್ರೊಜೆಕ್ಟರ್ ಇಂದಿಗೂ ಉಪಯೋಗಿಸುತ್ತಿದ್ದೇನೆ. ಬಹುಶಃ, ಇಂತಹ ವಸ್ತುಗಳನ್ನು ಹೆಚ್ಚು ಹೆಚ್ಚು ತಯಾರು ಮಾಡಿ, ಜಪಾನೀಯರಂತೆ, ಹೊರದೇಶಗಳ ಮಾರುಕಟ್ಟೆಯಲ್ಲಿ ತುಂಬಿದ್ದರೆ ರಷ್ಯದ ಆರ್ಥಿಕ ಸ್ಥಿತಿ ಇನ್ನೂ ಉತ್ತಮವಾಗುತ್ತಿತ್ತೆಂದು ನನ್ನ ಅನಿಸಿಗೆ. ಅವರು ಹೆಚ್ಚು ಹೆಚ್ಚು ದೊಡ್ಡ ದೊಡ್ಡ ಮಿಲಿಟರಿ ಯಂತ್ರೋಪಕರಣಗಳನ್ನೇ ತಯಾರುಮಾಡುವುದರಲ್ಲಿ ನಿರತರಾದರು. ಜನ ಸಾಮಾನ್ಯರ ದಿನ ನಿತ್ಯ ಬಳಕೆಯ ವಸ್ತುಗಳನ್ನು ತಯಾರು ಮಾಡುವ ಕಡೆ ಹೆಚ್ಚು ಗಮನ ಕೊಡಲಿಲ್ಲ. ಆ ಸ್ಥಾನವನ್ನು ಬೇರೆಯವರು ಕಬಳಿಸಿದ್ದಾರೆ. ಈಗ ಪೈಪೋಟಿ ಮಾಡಿ ಅವರ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಚಲಾವಣೆ ಮಾಡುವುದು ಕಷ್ಟವಾಗಬಹುದು.

ರಷ್ಯನ್ನರ ಆರ್ಥಿಕ ಹಿನ್ನಡೆಗೆ ಡಾಲರ್ ರೂಬೆಲ್‌ಗಳ ವಿನಿಮಯ ಸರ್ಕಾರದ ಬೆಲೆಗೂ ಹೊರಗೆ ನಡೆಯುತ್ತಿದ್ದದ್ದಕ್ಕೂ ಬಹಳ ಅಂತರವಿದ್ದದ್ದು ಒಂದು ಕಾರಣ. ಬ್ಯಾಂಕುಗಳ ದರ ಡಾಲರ್ ಒಂದಕ್ಕೆ ಎರಡು ರೂಬೆಲ್ಲಿಗೆ ಕಡಿಮೆ ಇದ್ದದ್ದು ಹೊರಗಡೆ ಡಾಲರಿಗೆ ಆರು ರೂಬೆಲ್ ಕೊಟ್ಟು ಕೊಳ್ಳುವವರಿದ್ದರು. ವ್ಯವಹಾರ ಮಾತ್ರ ಬಹಳ ಗುಟ್ಟಾಗಿ ನಡೆಯುತ್ತಿತ್ತು. ಪಬ್ಲಿಕ್ ಟೆಲಿಫೋನ್ ಬೂತ್‌ನಲ್ಲಿ ಮಾತನಾಡುವವರಂತೆ ನಟಿಸಿ ಡಾಲರ್ ರೂಬೆಲ್‌ಗಳ ವಿನಿಮಯ ಮಾಡಿಕೊಳ್ಳುತ್ತಿದ್ದರು. ಪ್ರವಾಸಿಗಳ ಮಾರ್ಗದರ್ಶಿಯವರ ಮೂಲಕ ಸಂಪರ್ಕ ಬೆಳೆಸಿ ವಿದೇಶಿ ವಿನಿಮಯ ನಡೆಸುತ್ತಿದ್ದರು.

ನಮ್ಮ ರಾಯಭಾರಿ ಕಛೇರಿಗಳು ಹೊರದೇಶದಲ್ಲಿ ಹೇಗೆ ಕೆಲಸ ಮಾಡುತ್ತಿವೆಯೆಂಬ ಸೂಕ್ಷ್ಮ ಪರಿಚಯ ಇಲ್ಲಿ ಆಯಿತು. ರಾಯಭಾರಿಯವರೇನೋ ಎರಡು ದೇಶಗಳ ಮಧ್ಯೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸದಾ ನಿರತರಾಗಿದ್ದರೂ, ಅಲ್ಲಿಯ ಸಿಬ್ಬಂದಿಯವರು ಹೆಚ್ಚಿನದಾಗಿ ಅವರವರ ಅನುಕೂಲತೆಗಳ ಬಗ್ಗೆ ಹೆಚ್ಚಿಗೆ ಚಿಂತಿಸುವವರಂತೆ ಕಂಡರು. ವಾರಕ್ಕೆ ಎರಡು ಬಾರಿ ವಿಮಾನದಲ್ಲಿ ಭಾರತದಿಂದ ಬರುತ್ತಿದ್ದ ದಿನನಿತ್ಯದ ವಸ್ತುಗಳ ವಿಲೇವಾರಿ ಬಗ್ಗೆ ಹೆಚ್ಚಿನ ಕಾಲಕಳೆದಂತೆ ತೋರುತ್ತಿತ್ತು. ಭಾರತದಲ್ಲಿ ಭಾರತೀಯರಿಗೆ ಸಿಗದಂತ ಉತ್ತಮವಾದ ಹಾಲು, ತರಕಾರಿ, ಹಣ್ಣು ಮೊದಲುಗೊಂಡು ಪ್ರತಿಯೊಂದು ದಿನನಿತ್ಯದ ಬಳಕೆಯ ವಸ್ತುಗಳು ಇವರಿಗೆ ಸರಬರಾಜಾಗುತ್ತಿತ್ತು. ಸಿಬ್ಬಂದಿಯವರು ಬಯಸಿದ್ದನ್ನು ಪಟ್ಟಿಮಾಡಿ, ಮುಂದಿನ ಸಾರಿ ತರುವ ವ್ಯವಸ್ಥೆ ಮಾಡಬಹುದಿತ್ತು. ಆ ದೇಶದಲ್ಲಿರುವ ಭಾರತೀಯರ ಕುಂದುಕೊರತೆಗಳನ್ನು ಗಮನಿಸಿ ಸೂಕ್ತ ಪರಿಹಾರ ದೊರಕಿಸುವ ಯೋಚನೆಯನ್ನು ಯಾರೂ ಮಾಡುವಂತೆ ಕಾಣುತ್ತಿರಲಿಲ್ಲ. ಬಹುಶಃ, ರಾಯಭಾರಿ ಕಛೇರಿಯಲ್ಲಿ ದೊರೆಯುವ ಸವಲತ್ತಿಗಾಗಿ ಜನ ಹೊರದೇಶದ ರಾಯಭಾರಿ ಕಛೇರಿಯಲ್ಲಿ ಕೆಲಸ ಮಾಡಲು ತವಕಿಸುತ್ತಿದ್ದರೇ ವಿನಃ, ಸೇವಾ ಮನೋಭಾವದಿಂದಲ್ಲವೆಂಬುದು ವ್ಯಕ್ತವಾಗುತ್ತಿತ್ತು. ಯಾರಿಗಾದರೂ ರಾಯಭಾರಿ ಕಛೇರಿಯಿಂದ

ಕೆಲಸವಾಗಬೇಕಿದ್ದರೆ ಅಲ್ಲಿ ಯಾರಾದರೂ ಪರಿಚಯಸ್ಥರಿದ್ದು ಅಥವಾ ಇಲ್ಲಿಂದ ಶಿಫಾರಸು ಇದ್ದರೆ ವಿನಃ ಸಾಮಾನ್ಯರಿಗೆ ಸಹಾಯ ದೊರೆಯುವುದು ದುರ್ಲಭ. ಇದು ಬಹಳ ಜನರ ಅನುಭವವೂ ಕೂಡ.

* * * *

ಇಪ್ಪತ್ತಮೂರನೆ ಜನರಲ್ ಅಸೆಂಬ್ಲಿ ಆಫ್ ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಬಯಾಲಜಿಕಲ್ ಸೈನ್ಸಸ್, 1988ರ ಆಗಸ್ಟ್‌ನಲ್ಲಿ ಆಸ್ಟ್ರೇಲಿಯಾದ ಕ್ಯಾನ್‌ಬರಾದಲ್ಲಿ ನಡೆಯುವುದಿತ್ತು. ಅದರಲ್ಲಿ ಭಾಗವಹಿಸುವಂತೆ ನನಗೂ ಕರೆ ಬಂದಿತ್ತು. ಮುಖ್ಯ ಉದ್ದೇಶ ಸಿ.ಎಸ್.ಐ.ಆರ್.ಒ. ಕ್ಯಾನ್‌ಬರಾದಲ್ಲಿ ಹೆಸರಾಂತ ಕೀಟಶಾಸ್ತ್ರಜ್ಞರಿದ್ದರು, ಅವರನ್ನು ಸಂಧಿಸಿ ವಿಚಾರ ವಿನಿಮಯ ಮಾಡಿಕೊಳ್ಳಲು ಒಳ್ಳೆಯ ಅವಕಾಶವೆಂದು ಕ್ಯಾನ್‌ಬರಾಕ್ಕೆ ಹೋಗಲು ಒಪ್ಪಿಕೊಂಡೆ. ಸಿಡ್ನಿಯಲ್ಲಿ ನನ್ನ ಸಹೋದ್ಯೋಗಿ ಡಾ॥ ಶಿವಪ್ಪಶೆಟ್ಟರ ಮಗಳು ಅಪರ್ಣ ಇದ್ದರು. ಇವರು ಮತ್ತು ನನ್ನ ಮಕ್ಕಳು ಕವಿತ ಮತ್ತು ಸವಿತರು ಒಂದೇ ಸ್ಕೂಲ್‌ನಲ್ಲಿ ಓದುತ್ತಿದ್ದು ಆತ್ಮೀಯರಾಗಿದ್ದರು. ಅವರ ಒತ್ತಾಯದ ಮೇರೆಗೆ ಎರಡು ದಿವಸ ಸಿಡ್ನಿಯಲ್ಲಿದ್ದು ನಂತರ ಕ್ಯಾನ್‌ಬರಾಕ್ಕೆ ಪ್ರಯಾಣ ಬೆಳಸಿದೆ. ಅಪರ್ಣರವರು ಎರಡು ದಿವಸ ರಜೆ ತೆಗೆದು ಕೊಂಡು ಸಿಡ್ನಿಯನ್ನೆಲ್ಲಾ ತೋರಿಸಿದರು. ಜೊತೆಗೆ ಮನೆಯಲ್ಲಿ ಬಗೆಬಗೆ ಭಕ್ಷ್ಯಗಳನ್ನು ಕೂಡ ಮಾಡಿ ಸತ್ಕರಿಸಿದರು. ಅವರ ಶ್ರಮದ ದುಡಿಮೆ, ಚಾಕಚಕ್ಯತೆ ಅವರ ವೃತ್ತಿಯಲ್ಲಿ ಗಳಿಸಿದ ಪರಿಣತೆಯಿಂದಾಗಿ ಅವರಿಗಿದ್ದ ಮುಂಬಡತಿಯ ಅವಕಾಶಗಳನ್ನು ನೋಡಿ ಹೆಮ್ಮೆ ಪಟ್ಟುಕೊಂಡೆ. ಭಾರತೀಯ ಹೆಣ್ಣು ಮಕ್ಕಳು ಗಂಡು ಹುಡುಗರಿಗಿಂತ ಹೊರದೇಶದಲ್ಲಿ ಹೆಚ್ಚಿನ ಗೌರವಕ್ಕೆ ಪಾತ್ರರಾಗಿದ್ದಾರೆ. ಅವಿರತ ದುಡಿಮೆಯ ಮಧ್ಯದಲ್ಲೂ ಕೂಡ ಸಂಸಾರದ ಹೊಣೆಯನ್ನು ಹೊತ್ತು ಭಾರತೀಯ ಸಂಸ್ಕೃತಿಯನ್ನು ಬಿಡದೆ, ಆಯಾ ದೇಶಗಳಿಗೆ ಹೊಂದಿಕೊಂಡು, ತಾವರೆ ಎಲೆಯ ಮೇಲಿನ ನೀರಿನಂತೆ, ಯಾವುದಕ್ಕೂ ಅಂಟಿಕೊಳ್ಳದೆ, ತಮ್ಮ ದೇಶದ ಮೂಲವನ್ನು ಕಳೆದುಕೊಳ್ಳದೆ ಜೀವನ ನಡೆಸುತ್ತಿದ್ದದ್ದನ್ನು ನಾನು ಹೋದಲ್ಲೆಲ್ಲಾ ನೋಡಿದ್ದೇನೆ. ಭಾರತೀಯ ಸಂಸ್ಕೃತಿ ಹೊರದೇಶಗಳಿಗೆ ಪರಿಚಯವಾಗುವುದು ಹೆಚ್ಚಾಗಿ ಇಂತಹ ಭಾರತೀಯ ಮಹಿಳೆ ಯರಿಂದ, ರಾಯಭಾರ ಕಛೇರಿಗಳಿಂದಲ್ಲ.

ಕ್ಯಾನ್‌ಬೆರಾದಲ್ಲಿ ಡಾ॥ ಟಲಾಲ್ ಯೂನಸ್, ಐ.ಯು.ಬಿ.ಎಸ್. (International Union for Biological Science) ಕಾರ್ಯದರ್ಶಿ ನನ್ನ ವಸತಿಯ ಏರ್ಪಾಡು ಮಾಡಿದ್ದರು. ಸಿ.ಎಸ್.ಐ.ಆರ್.ಒ. (Council for Scientific and Industrial Research Organisation) ದಲ್ಲಿ ಶ್ರೀಮತಿ ಗ್ರೀನ್ಸ್‌ಲಾಡ್‌ರವರು ನನ್ನ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದರು. ಶ್ರೀಮತಿ ಗ್ರೀನ್ಸ್‌ಲಾಡ್‌ರವರು ಮತ್ತು ನಾನು ಒಟ್ಟಿಗೆ ಇಂಗ್ಲೆಂಡಿನಲ್ಲಿ ರಾಥಮ್‌ಸ್ಟಡ್ ಎಕ್ಸ್‌ಪೆರಿಮೆಂಟಲ್ ಸ್ಟೇಷನ್‌ನಲ್ಲಿ ಡಾ॥ ಸಿ. ಎ. ಎಡ್‌ವರ್ಡ್ಸ್‌ರವರ ಲ್ಯಾಬ್‌ನಲ್ಲಿ ಕೆಲಸಮಾಡುತ್ತಿದ್ದೆವು. ಆಗ ಅವರು ಜೂನಿಯರ್ ಅಸಿಸ್ಟೆಂಟ್ ಆಗಿದ್ದರು. ವಾರದಲ್ಲಿ ಒಂದೆರಡು ದಿನವಾದರೂ ಸಂಜೆ ಯಾವುದಾದರೂ ಒಂದು ಪಬ್‌ನಲ್ಲಿ ಎಡ್‌ವರ್ಡ್ಸ್, ಲಾಫ್ಟಿ, ಫ್ರೇಸರ್, ಗ್ರೀನ್ಸ್‌ಲಾಡ್, ಕೃಷ್ಣಿ ಮತ್ತು ನಾನೂ ಸೇರಿ ಒಂದೊಂದು ಪೈಂಟ್‌ಬೀರನ್ನು ಮುಂದೆ

ಇಟ್ಟುಕೊಂಡು ಹರಟೆ ಹೊಡೆಯುತ್ತಿದ್ದೆವು. ಅದರಲ್ಲಿ ಎಡ್‌ವರ್ಡ್ಸ್‌ರ ಪ್ರಪಂಚದಾದ್ಯಂತ ಪ್ರವಾಸದ ಅನುಭವಗಳು ಹೆಚ್ಚಾಗಿ ಪ್ರಸ್ತಾಪವಾಗುತ್ತಿದ್ದವು. ಮುಖ್ಯವಾಗಿ ಸಾಯಿಲ್ ಬಯಾಲಜಿ ವಿಷಯಗಳಿಗೆ ಸಂಬಂಧಪಟ್ಟಂತೆ ಮಾತು ಮುಂದುವರಿಯುತ್ತಿತ್ತು. ಎರಡು ಮೂರು ಗಂಟೆಗಳು ಕಳೆದರೂ ನನಗೆ ಒಂದು ಪೈಂಟ್ ಬೀರು ಪೂರೈಸಲಾಗುತ್ತಿರಲಿಲ್ಲ. ಎಡ್‌ವರ್ಡ್ಸ್ ಮತ್ತು ಲಾಫ್ಟಿ ಅದೆಷ್ಟು ಕುಡಿಯುತ್ತಿದ್ದರೆಂದು ಕೊಡುವವನಿಗೇ ಲೆಕ್ಕ ಸಿಕ್ಕುತ್ತಿದ್ದದ್ದು. ಗ್ರೀನ್‌ಸ್ಲಾಡ್‌ರವರು ಎರಡನ್ನಾದರೂ ಪೂರೈಸುತ್ತಿದ್ದರು.

ಸಾಯಿಲ್ ಜೂಆಲಜಿ ಹತ್ತನೇ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಿದಾಗ ಶ್ರೀಮತಿ ಗ್ರೀನ್‌ಸ್ಲಾಡ್‌ರವರು ಆಸ್ಟ್ರೇಲಿಯಾದಿಂದ ಬಂದಿದ್ದರು. ಆಗ ನಮ್ಮ ಮನೆಗೂ ಬಂದಿದ್ದರು. ಇವರು ಮತ್ತು ಇವರ ಪತಿ ಇಬ್ಬರೂ ಸಿ.ಎಸ್.ಐ.ಆರ್.ಓ.ಕ್ಯಾನ್‌ಬರಾದಲ್ಲಿ ಕೀಟಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನಾನು ಆಸ್ಟ್ರೇಲಿಯಾಕ್ಕೆ ಹೋಗುವ ಮುನ್ನವೇ ಇವರು ನನಗೆ ಪತ್ರ ಬರೆದು, ನಾನು ಆಸ್ಟ್ರೇಲಿಯಾಕ್ಕೆ ಹೋಗುವ ಸಮಯ ಸೂಕ್ತವಾಗಿದ್ದು ಅವರು ಮತ್ತು ಅವರ ಪತಿ ಒಂದೆರಡು ದಿನ ನನ್ನ ಜೊತೆ ಇರುವ ಸಾಧ್ಯತೆ ಇದೆಯೆಂದು ತಿಳಿಸಿದ್ದರು. ಇನ್ನು ಒಂದು ವಾರ ತಡವಾಗಿದ್ದರೆ ಗ್ರೀನ್‌ಸ್ಲಾಡರವರು ಆರು ತಿಂಗಳು ಸಿಗುತ್ತಿರಲಿಲ್ಲ. ಅವರು ಎರಡನೇ ಬಾರಿಗೆ ಆಸ್ಟ್ರೇಲಿಯಾದ ಅಂಟಾರ್ಟಿಕ್ ಎಕ್ಸ್‌ಪಿಡಿಷನ್ ತಂಡದೊಡನೆ ಹೋಗುವವರಿದ್ದರು. ಇವರ ಜೊತೆ ಕಳೆದ ಎರಡು ದಿನಗಳು ಅಂಟಾರ್ಟಿಕಾದ ಅನುಭವ ಹಂಚಿಕೊಳ್ಳಲು ಅನುಕೂಲವಾದವು.

ಸಿ.ಎಸ್.ಐ.ಆರ್.ಓ. ಕ್ಯಾನ್‌ಬರಾದ ಕೀಟಶಾಸ್ತ್ರ ವಿಭಾಗ ಸುಸಜ್ಜಿತ ಅತ್ಯಾಧುನಿಕ ಸಂಶೋಧನಾಲಯವೆಂದು ಹೇಳಬಹುದು. ಅಲ್ಲಿರುವ ಕೀಟಸಂಗ್ರಹಣೆ ಶತಮಾನಗಳ ತನಕ ಕೆಡದ ಹಾಗೆ ಸಂರಕ್ಷಿಸಲ್ಪಟ್ಟಿದ್ದವು. ಡಾ|| ವಾಟರ್ ಹೌಸ್ ಬಹಳ ವರ್ಷಗಳ ಸೇವೆಯ ನಂತರ ಅಲ್ಲಿಯ ಮುಖ್ಯಸ್ಥ ಹುದ್ದೆಯಿಂದ ಆಗ ತಾನೆ ನಿವೃತ್ತರಾಗಿದ್ದರೂ ಅವರಿಗಾಗಿ ಪ್ರತ್ಯೇಕ ಸ್ಥಾನವನ್ನು ಅನುವು ಮಾಡಿಕೊಟ್ಟಿದ್ದರು. ಸಸ್ಯ ಸಂರಕ್ಷಣೆಯಲ್ಲಿ ಹೆಸರಾಂತ ವಿಜ್ಞಾನಿ ಅವರೊಡನೆ ಸಂಧಿಸುವ ಕಾಲ ಅರ್ಧಗಂಟೆ ಮಾತ್ರ ನಿಗದಿಯಾಗಿತ್ತು. ಮಾತು ಮುಗಿದಾಗ ಮೂರು ಗಂಟೆಗೂ ಹೆಚ್ಚುಕಾಲ ಕಳೆದಿತ್ತು. ಭಾರತದಲ್ಲಿನ ಸಸ್ಯ ಸಂರಕ್ಷಣೆಯ ಕಾಯಿದೆ ಕಾನೂನುಗಳಿಂದ ಹಿಡಿದು, ವಿವಿಧ ಪ್ರಾಂತ್ಯಗಳಲ್ಲಿ ತಲೆದೋರುವ ಕೀಟದ ಬಾಧೆ, ಅವುಗಳ ನಿಯಂತ್ರಣ, ಸಂಶೋಧನೆ, ನನ್ನ ವೈಯಕ್ತಿಕ ಸಂಶೋಧನೆಯ ವಿವರಗಳನ್ನೆಲ್ಲಾ ಕೂಲಂಕಷವಾಗಿ ಚರ್ಚಿಸಿ ಹೊರಗೆ ಬರುವಾಗ ಬಾಗಿಲವರೆಗೆ ಬಂದು ನನ್ನ ಬೆನ್ನು ಮೇಲೆ ಕೈಯಿಟ್ಟು ನಿಮ್ಮಲ್ಲಿರುವ ಸಸ್ಯ ಸಂರಕ್ಷಣೆಯ ಪರಿಜ್ಞಾನ ಮೆಚ್ಚುವಂತಹುದು. ನನಗೆ ನಿಮ್ಮನ್ನು ಭೇಟಿಯಾದದ್ದು ತುಂಬಾ ಸಂತೋಷ. ಮುಂಚೆಯೇ ನಿಮ್ಮ ಪರಿಚಯವಿದ್ದಿದ್ದರೆ ಬೈಜಿಂಗ್‌ನಲ್ಲಿ ನಡೆಯುವ ಎಂಟಮಾಲಜಿ ಕಾಂಗ್ರೆಸ್ಸಿಗೆ ಆಹ್ವಾನಿಸುತ್ತಿದ್ದೆ. ಈಗಲಾದರೂ ಇಂಡೋನೇಷಿಯ ಬೋಗಾರ್ ನಲ್ಲಿ ನಡೆಯಲಿರುವ ಸೂಬಾಬೂಲ್ ಸಮ್ಮೇಳನಕ್ಕೆ ಆಹ್ವಾನಿಸುವಂತೆ ಕಾರ್ಯಕರ್ತರಿಗೆ ಕಾಗದ ಬರೆಯುತ್ತೇನೆ. ಜನವರಿಯಲ್ಲಿ ನಡೆಯುವ ಆ ಕಾರ್ಯಗಾರದಲ್ಲಿ ನೀವು ಭಾಗವಹಿಸಬೇಕೆಂದು ಅಪೇಕ್ಷಿಸುತ್ತೇನೆಂದರು. ಆಗಲಿ ಎಂದು ಅವರಿಂದ ಬೀಳ್ಕೊಂಡು ಹೊರಗೆ ಬಂದೆ. ಗ್ರೀನ್‌ಸ್ಲಾಡ್ ದಂಪತಿಗಳು ಹೊರಗೆ ಬಹಳ ಹೊತ್ತಿನಿಂದ ನನಗಾಗಿ ಕಾದಿದ್ದರು. ಅರ್ಧಗಂಟೆ ಕಾಲಾವಕಾಶ ಕೊಟ್ಟು ಮೂರು ಗಂಟೆಗೆ ಮಿಗಿಲಾಗಿ ಮತ್ತೊಬ್ಬರೊಡನೆ ಡಾ|| ವಾಟರ್‌ಹೌಸ್‌ರವರು

ಮಾತನಾಡಿರುವುದು ನೋಡಿದ್ದು ಇದೇ ಮೊದಲು ಎಂದು ಗ್ರೀನ್ಸ್‌ಲಾಡ್‌ರವರ ಪತಿ ಹೇಳಿದರು. ಊರ ಹೊರಗೆ ಇದ್ದ ಒಂದು ಫೀಲ್ಡ್ ಸ್ಟೇಷನ್ ತೋರಿಸುವುದಕ್ಕೆ ಅವರು ಕಾತರರಾಗಿದ್ದರು. ಆದರೆ ಅಲ್ಲಿಗೆ ಹೋಗಿ ಬರಲು ಕಾಲಾವಕಾಶವಿಲ್ಲದ್ದರಿಂದ ಊಟದ ನಂತರ ಕ್ಯಾನ್‌ಬರಾದಲ್ಲಿ ಹೊಸದಾಗಿ ನಿರ್ಮಿಸಿದ್ದ ಆಸ್ಟ್ರೇಲಿಯ ಪಾರ್ಲಿಮೆಂಟ್ ಹೌಸ್ ತೋರಿಸಲು ಕರೆದುಕೊಂಡು ಹೋದರು. ಕೋಟ್ಯಾಂತರ ಡಾಲರ್ ಖರ್ಚುಮಾಡಿ ನಿರ್ಮಿಸಿದ್ದ ಈ ಭವ್ಯ ಭವನ ಬೇರೆ ದೇಶಗಳಲ್ಲೆಲ್ಲೂ ಇಲ್ಲದ ಶಿಲ್ಪಕಲೆಯಿಂದ ಕೂಡಿದೆ.

ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಬಯಾಲಾಜಿಕಲ್ ಸೈನ್ಸಸ್ (ಐ.ಯು. ಬಿ.ಎಸ್.) ಸಮ್ಮೇಳನದ ಅಂಗವಾಗಿ ಒಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಔತಣಕೂಟ ವನ್ನು ಏರ್ಪಡಿಸಿದ್ದರು. ಆಸ್ಟ್ರೇಲಿಯದ ಆದಿವಾಸಿಗಳ ತಾಳಮೇಳವೂ ಇತ್ತು. ಒಂದು ಉದ್ದನೆಯ, ಕೊಂಚ ಬಾಗಿದ, ಬಿದರಿನ ಬುರುಗು ಊದುವ ವೈಖರಿ ನಮ್ಮ ದೇಶದ ಪೂರ್ವಪ್ರಾಂತದಲ್ಲಿ ಅಂದರೆ ಮಣಿಪುರ, ತ್ರಿಪುರ, ಮೇಘಾಲಯಗಳಲ್ಲಿ ಉಪಯೋಗಿಸುತ್ತಿದ್ದ ಬುರುಗಿನ ಮಾದರಿ ಮತ್ತು ಮಟ್ಟು ಅದೇ ತರಹದಿತ್ತು. ಪಕ್ಕದಲ್ಲಿದ್ದವರಿಗೆ, ನಮ್ಮ ದೇಶದಲ್ಲಿಯೂ ಈ ಬಗೆಯ ವಾದ್ಯಮೇಳ ಪೂರ್ವಪ್ರಾಂತದಲ್ಲಿ ಇದೆ. ಅದಕ್ಕೂ ಇದಕ್ಕೂ ವ್ಯತ್ಯಾಸ ಕಾಣುತ್ತಿಲ್ಲವೆಂದೆ. ಪ್ರತ್ಯುತ್ತರವಾಗಿ ಅವರು ನಮ್ಮ ಆದಿವಾಸಿಗಳ ಮೂಲ ಅವರೇ. ಸುಮಾರು ನಲವತ್ತು ಸಾವಿರ ವರುಷಗಳ ಹಿಂದೆ ಏಷ್ಯಾ ಆಸ್ಟ್ರೇಲಿಯಾ ದೂರ ಸರಿದಾಗ ನಿಮ್ಮ ದೇಶದ ಪೂರ್ವಪ್ರಾಂತದ ಒಂದು ತುಂಡು ಆಸ್ಟ್ರೇಲಿಯಾಕ್ಕೆ ಸೇರ್ಪಡೆಯಾಯಿತು, ಅದರಲ್ಲಿದ್ದ ಆದಿವಾಸಿಗಳು ಅಲ್ಲಿಯ ಸಂಸ್ಕೃತಿಯನ್ನೇ ಬೆಳೆಸಿಕೊಂಡು ಬಂದಿದ್ದಾರೆ ಅಂದರು. ಆಸ್ಟ್ರೇಲಿಯಾದ ಆದಿವಾಸಿಗಳಿಗೂ ನಮ್ಮ ದೇಶದ ಪೂರ್ವೋತ್ತರ ಭಾಗದ ಜನರಿಗೂ ಲಕ್ಷಣದಲ್ಲಿ ಬಹಳ ಹೋಲಿಕೆ ಇದೆ. ಯೂರೋಪಿಯನ್ನರು ಆಸ್ಟ್ರೇಲಿಯಾಕ್ಕೆ ವಲಸೆ ಬಂದಾಗ ಅಲ್ಲಿಯ ಆದಿವಾಸಿಗಳನ್ನು ಕಾಡುಮೃಗಗಳನ್ನು ಬೇಟೆಯಾಡುವಂತೆ ಬೆನ್ನತ್ತಿ ದಯಾದಾಕ್ಷಿಣ್ಯವಿಲ್ಲದೆ ಕೊಂದರು. ಆಗ ತಲೆತಪ್ಪಿಸಿಕೊಂಡು ಅಲ್ಲಲ್ಲಿ ಅಳಿದು ಉಳಿದ ಆದಿವಾಸಿಗಳು ಮಾತ್ರ ಈಗ ಇದ್ದಾರೆ. ಯೂರೋಪಿ ಯನ್ನರು ಕಾಲಿಟ್ಟು ಸುಮಾರು ಇನ್ನೂರು ವರುಷಗಳು ಕಳೆದರೂ ಆದಿವಾಸಿಗಳು ತಮ್ಮ ಮೂಲವನ್ನು ಬಿಟ್ಟುಕೊಟ್ಟಿಲ್ಲ. ಈಗ ಅವರದೆ ಒಂದು ಸ್ವತಂತ್ರ ರಾಜ್ಯವಾಗಬೇಕೆಂಬ ಕೂಗು ಕೇಳಿಬರುತ್ತಿದೆ.

ಪ್ರೊ॥ ವಾಟರ್ ಹೌಸ್ ಹೇಳಿದಂತೆ ಇಂಡೋನೇಶಿಯದ ಬೋಗಾರ್‌ನಲ್ಲಿ ನಡೆದ ಸೂಬಾಬೂಲ್ ಸಿಲ್ಲಿಡ್ ಕಾರ್ಯಾಗಾರಕ್ಕೆ ಆಹ್ವಾನ ಬಂತು. ಜನವರಿ, ಸಾವಿರದ ಒಂಬೈನೂರು ಎಂಬತ್ತೊಂಬತ್ತರಲ್ಲಿ ನಡೆದ ಈ ಕಾರ್ಯಗಾರದಲ್ಲಿ ಭಾಗವಹಿಸಲು ಬೆಂಗಳೂರು ಕೃ.ವಿ. ವಿದ್ಯಾನಿಲಯದ ಪರವಾಗಿ ಅಂದಿನ ಸಂಶೋಧನಾ ನಿರ್ದೇಶಕರಾಗಿದ್ದ ಡಾ॥ ಕೆ. ಕೃಷ್ಣಮೂರ್ತಿ ಯವರು ಕೂಡ ಭಾಗವಹಿಸಿದ್ದರು. ಇಬ್ಬರೂ ಜೊತೆಯಲ್ಲಿ ಪ್ರಯಾಣ ಬೆಳೆಸಿದೆವು. ಸಿಂಗಪುರ ದಿಂದ ಜಕಾರ್ತಕ್ಕೆ ಹೋಗುವಾಗ ನನ್ನ ಪಕ್ಕದಲ್ಲಿ ಸಿಂಗಪುರದಲ್ಲಿ ಓದುತ್ತಿದ್ದ ಕಾಲೇಜು ಹುಡುಗಿಯೊಬ್ಬಳು ಜಕಾರ್ತದಲ್ಲಿರುವ ಅವಳ ತಂದೆ ಮನೆಗೆ ಹೋಗುತ್ತಿದ್ದಳು. ಅವಳ ತಂದೆಯ ಉದ್ಯೋಗ ಇಂಡೋನೇಶಿಯ ಭಾಗದಲ್ಲಿ ದೊರೆಯುವ ವಿವಿಧ ಬಗೆಯ ಕಾಡು ಹಕ್ಕಿಗಳನ್ನು ಹಿಡಿದು ಅಥವಾ ಸಾಕಿ ಹೊರದೇಶಗಳಿಗೆ ಮಾರುವುದು. ಅದರಲ್ಲಿ ಅವಳಿಗೂ ಸಾಕಷ್ಟು ಪರಿಣತೆ ಇತ್ತು. ಮುಂದೆ ಅದೇ ಉದ್ಯೋಗದಲ್ಲಿ ನಿರತಳಾಗುವ ಉದ್ದೇಶವನ್ನು ತಿಳಿಸಿದಳು. ಅವಳ

ಹೆಸರು ಯಾಂತಿ ಅಂದಳು. ಇದರ ಅರ್ಥವೇನೆಂದು ಕೇಳಿದಾಗ ಅವಳ ಪೂರ್ಣ ಹೆಸರು ದಮಯಂತಿ. ಆದರೆ ಎಲ್ಲರೂ ಅವಳನ್ನು ಯಾಂತಿ ಎಂದು ಕರೆಯುತ್ತಾರೆಂದಳು. ಇಸ್ಲಾಂ ಧರ್ಮಕ್ಕೆ ಸೇರಿದವಳಾದರೂ ಹಿಂದೂ ಹೆಸರನ್ನೇಕೆ ಇಟ್ಟುಕೊಂಡಿದ್ದಿ ಎಂದು ಕೇಳಿದಾಗ ಇಂಡೋನೇಶಿಯಾ ದಲ್ಲಿ ಇಂತಹ ಹಿಂದೂ ಹೆಸರುಗಳು ಬಹಳ ಸಾಮಾನ್ಯ. ಮನುಷ್ಯರಷ್ಟೇ ಅಲ್ಲ, ಮನೆ, ಬೀದಿ ಮೊದಲಾದ ಹೆಸರುಗಳು ಕೂಡ ಹಿಂದೂ ಹೆಸರಿರುವುದು ಸಾಮಾನ್ಯ ಅಂದಳು. ಅವಳು ಹೇಳಿದ ಮಾತು ಸತ್ಯವೆಂದು ನಾನಿದ್ದ ಎಂಟು ದಿವಸದಲ್ಲಿ ಗೊತ್ತಾಯಿತು.

ಬೋಗಾರ್, ಜಕಾರ್ತಕ್ಕೂ ಬಾಂಡುಂಗಿಗೂ ನಡುವೆ ಪರ್ವತಶ್ರೇಣಿಯ ಮಧ್ಯೆ ಒಂದು ರಮಣೀಯವಾದ ಸ್ಥಳದಲ್ಲಿದೆ. ಇಂಡೋನೇಶಿಯ ಇಸ್ಲಾಂ ಧರ್ಮವನ್ನು ಪಾಲಿಸಿದರೂ ತಮ್ಮದೇ ಆದ ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದು ಅಲ್ಲಲ್ಲಿ ಎದ್ದು ಕಾಣುತ್ತದೆ. ಅವರ ನೃತ್ಯ ಗಾಯನ ದಕ್ಷಿಣ ಭಾರತೀಯ ನೃತ್ಯ ಗಾಯನಗಳಿಗೆ ನಿಕಟವಾಗಿ ಹೋಲುತ್ತವೆ. ಅವರ ಬಾಲಿ ನೃತ್ಯ ಭರತನಾಟ್ಯದಿಂದ ಬಂದಿದೆಯೆಂದು ಹೇಳುವರು. ಅವರ ಊಟ ತಿಂಡಿ ನಮ್ಮ ಊಟ ತಿಂಡಿಗಳಿಗೆ ಹೋಲುವಂತಿದ್ದರೂ ಹೆಚ್ಚಿಗೆ ಮೀನು, ಮಾಂಸಾಹಾರವೇ. ಹಾಲು ಮೊಸರನ್ನು ಯಾರೂ ಉಪಯೋಗಿಸಿದ್ದನ್ನು ನೋಡಲಿಲ್ಲ. ಹಾಲಿಲ್ಲದ ಕಾಫಿ, ಟೀ, ಮಜ್ಜಿಗೆ, ಮೊಸರಿಲ್ಲದ ಊಟ. ಅಲ್ಲಿದ್ದ ಎಂಟು ದಿವಸದಲ್ಲಿ ನಾವು ಇಳಿದುಕೊಂಡಿದ್ದ ಹೋಟಲಿನವರಿಗೆ ಮೊಸರು ಹೇಗಿರುತ್ತದೆ ಯೆಂದು ಅವರಿಗೆ ಅರ್ಥೈಸುವುದೇ ಕಷ್ಟವಾಯಿತು. ಕೊನೆಗೂ ಅಲ್ಲಿ ಮೊಸರಿನ ಮುಖ ನೋಡಲಿಲ್ಲ.

ಬೋಗಾರ್ ಬಾಂಡುಂಗ್ ಮಧ್ಯೆ ದಟ್ಟನೆಯ ಕಾಡೊಂದನ್ನು ನೋಡಲು ಹೋಗಿದ್ದೆವು. ಅಷ್ಟು ಹಚ್ಚ ಹಸುರಾದ ದಟ್ಟನೆಯ ಕಾಡನ್ನು ಮತ್ತೆಲ್ಲೂ ಕಂಡಿರಲಿಲ್ಲ. ಮೂರು ಅಂತರದ ದಟ್ಟನೆಯ ಕಾಡು ಬೆವತು ಹನಿಯುತ್ತಿದ್ದದ್ದು ನೋಡಿದಾಗ ನಾನು ಚಿಕ್ಕಂದಿನಲ್ಲಿ ಸುಬ್ರಹ್ಮಣ್ಯಕ್ಕೆ ನಡೆದುಕೊಂಡು ಹೋಗುವಾಗ ಏಳುಸಾಲುಗುಡ್ಡ ದಾಟಿ ಕುಳುಗುಂದಕ್ಕೆ ಇಳಿಯುವತನಕ ನೋಡುತ್ತಿದ್ದ ಮುಗಿಲೆತ್ತರದ ಮರ, ತಣ್ಣನೆಯ ನೆಲ, ತೊಟ್ಟಿಕ್ಕುವ ಹನಿ ನೆನಪಿಗೆ ಬರುತ್ತಿತ್ತು. ಆದರೆ ಪಶ್ಚಿಮ ಘಟ್ಟದಲ್ಲಿ ಮೂರು ಅಂತರದ ಕಾಡು ಇಲ್ಲಿಯ ಹಾಗೆ ಇರಲಿಲ್ಲ. ನಿಜವಾದ ಟ್ರಾಪಿಕಲ್ ರೈನ್ ಫಾರೆಸ್ಟ್ ಸಿಕ್ಕುವುದು ಇಲ್ಲಿ. ಸುಮಾರು ಮೂವತ್ತು ಅಡಿಯಷ್ಟು ಬೆಳದಿರುವ ಒಂದು ಬಗೆಯ ತೆರುಮೆ (ಫರ್ನ್); ಅದರ ಮೇಲೆ ನಲವತ್ತು ಐವತ್ತು ಅಡಿ ಎತ್ತರ ಒಂದು ಬಗೆಯ ಗಿಡಗಳು ನಂತರ ನೂರ ಇಪ್ಪತ್ತು ಅಡಿಗೂ ಮಿಗಿಲಾಗಿ ಎತ್ತರಕ್ಕೆ ಹೋಗಿರುವ ಗಗನ ಚುಂಬಿಸುವ ದೊಡ್ಡ ದೊಡ್ಡ ಮರಗಳು. ಇಂಡೋನೇಶಿಯಾದ ಕಾಡು ಯಾತ್ರಾರ್ಥಿಗಳಿಗೆ ನೋಡಲು ಒಂದು ಪ್ರೇಕ್ಷಣೀಯ ಸ್ಥಳ.

ಕಾಡಿನ ಮಧ್ಯೆ ಕಾಡು ಸಂಪತ್ತನ್ನು ಪ್ರದರ್ಶಿಸಿರುವ ಒಂದು ವಸ್ತು ಸಂಗ್ರಹಾಲಯಕ್ಕೆ (Taman Safari Indonesia) ಭೇಟಿಕೊಟ್ಟಿದ್ದೆವು. ಸಂಗ್ರಹಾಲಯವನ್ನು ನೋಡಿದ ನಂತರ ಮರದ ಕೆತ್ತನೆಯ ವಸ್ತುಗಳನ್ನು ಕೊಂಡುಕೊಳ್ಳುವವರಿಗೆ ಒಂದು ಪ್ರತ್ಯೇಕ ಮನೆ ಇದೆ. ನನ್ನ ಜೊತೆ ಇದ್ದವರೆಲ್ಲ ಒಳಗೆ ಹೋಗಿದ್ದರು. ಸ್ವಲ್ಪ ಸಮಯದ ನಂತರ ನಾನೊಬ್ಬನೆ ಹೋದಾಗ ಯಾವ ಬಾಗಿಲಿಂದ ಒಳಗೆ ಹೋಗಬೇಕೆಂದು ಅರಿಯದೆ ಅಕ್ಕಪಕ್ಕದಲ್ಲಿ ಯಾರನ್ನೂ ಕಾಣದೆ ತಬ್ಬಿಬ್ಬಾದೆ. ಆಗ ಒಂದು ಸ್ಪಷ್ಟವಾದ ಹೆಂಗಸಿನ ಧ್ವನಿ ಇಂಗ್ಲಿಷ್‌ನಲ್ಲಿ ಒಳಗೆ ಬನ್ನಿ ಒಳಗೆ ಬನ್ನಿ

(ಗೆಟ್‌ಇನ್ ಪ್ಲೀಸ್, ಗೆಟ್‌ಇನ್ ಪ್ಲೀಸ್) ಅನ್ನುವುದು ಕೇಳುತ್ತಿತ್ತು. ನೋಡಿದರೆ ಯಾರೂ ಇರಲಿಲ್ಲ. ಪಕ್ಕದಲ್ಲಿ ಪಂಜರದಲ್ಲಿ ಪಾರಿವಾಳದಂತಿದ್ದ ಒಂದು ಬಗೆಯ ಪೆಸಂಟ್ ಹಕ್ಕಿಯನ್ನು ನಾನು ಗಮನಿಸಿರಲಿಲ್ಲ. ನಿನ್ನ ಹೆಸರೇನು, ಎಲ್ಲಿಂದ ಬಂದೆ, ಏನು ಬೇಕು, ಎಂದೆಲ್ಲ ಮಾತನಾಡಬಲ್ಲ ಹಕ್ಕಿಯನ್ನು ಯಾರು ತಾನೆ ಪ್ರೇಮಿಸುವುದಿಲ್ಲ. ವಿಮಾನದಲ್ಲಿ ಯಾಂತಿ ಹೇಳಿದ ಮಾತು ಜ್ಞಾಪಕಕ್ಕೆ ಬಂತು. ಇಲ್ಲಿಯ ಹಕ್ಕಿಗಳಿಗೆ ಹೊರದೇಶದಲ್ಲಿ ತುಂಬ ಬೇಡಿಕೆ ಇದೆಯೆಂದು. ಮರುಕ್ಷಣದಲ್ಲಿ ಮರುಕವೂ ಹುಟ್ಟಿತು. ದುರಾಸೆಯ ವ್ಯಾಪಾರಸ್ಥರು ಇಂತಹ ಅರಣ್ಯ ಸಂಪತ್ತನ್ನು ಎಂದು ಬರಿದುಮಾಡುವರೋ ಎಂದು!

ಹಿಂದಿರುಗುವಾಗ ಕೌಲಲಾಂಪುರದ ಮಾರ್ಗವಾಗಿ ಬಂದೆ. ಎರಡುದಿವಸ ಕೌಲಲಾಂಪುರ ದಲ್ಲಿ ನನ್ನ ವಿದ್ಯಾರ್ಥಿಯೊಬ್ಬರ ಆತಿಥ್ಯದಿಂದ ಮಲೇಶಿಯಾದ ರಾಜಧಾನಿಯಲ್ಲಿ ಕಳೆದೆ. ಇಂಡೋನೇಶಿಯ ಮತ್ತು ಮಲೇಶಿಯಾಗಳು ಏಷ್ಯಾ ಖಂಡದಲ್ಲಿದ್ದರೂ ಇತರೆ ಏಷ್ಯನ್ನರಿಗಿಂತ ಭಿನ್ನ ಕಾಣುವರು. ದಿನನಿತ್ಯ ಜೀವನದಲ್ಲಿ ಒಂದು ಬಗೆಯ ಶಿಸ್ತನ್ನು ಮೈಗೂಡಿಸಿ ಕೊಂಡಿರುವಂತೆ ತೋರುತ್ತಿದ್ದರು. ಯಾವುದಾದರೂ ದೇಶಕ್ಕೆ ಹೊಸದಾಗಿ ಹೋದಾಗ ಅಲ್ಲಿಯ ಮ್ಯೂಸಿಯಂ ಮತ್ತು ಆರ್ಟ್‌ಗ್ಯಾಲರಿ ನೋಡುವ ಅಭ್ಯಾಸವನ್ನಿಟ್ಟುಕೊಂಡಿದ್ದೆ. ಅದರಂತೆ ಕೌಲಲಾಂಪುರ ದಲ್ಲಿ ಒಂದು ವಸ್ತು ಸಂಗ್ರಹಾಲಯಕ್ಕೆ ಹೋಗಿದ್ದೆ. ಅಲ್ಲಿ ಒಂದು ಕಡೆ ಆ ದೇಶದ ಮುಖ್ಯ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮುಂತಾದವುಗಳ ಬಗ್ಗೆ ವಿವರಗಳನ್ನು ನೀಡಿದ್ದರು. ಅಡಿಕೆ ಬೆಳೆ ಮಲೇಶಿಯಾದಲ್ಲಿ ಒಂದು ಪ್ರಮುಖ ಬೆಳೆಯೆಂದು, ಇತರೆ ದೇಶಗಳಿಗೆ ಹೋಲಿಸಿ ಅಲ್ಲಿಯ ಉತ್ಪಾದನೆ ಮತ್ತು ಬೇರೆ ದೇಶಗಳ ಉತ್ಪಾದನೆ ವಿವರಗಳನ್ನು ಕೊಟ್ಟಿದ್ದರು. ಆ ನಕಾಶೆಯಲ್ಲಿ ಅಡಿಕೆ ಬೆಳೆಯುವ ದೇಶಗಳಲ್ಲಿ ಭಾರತದ ಹೆಸರೇ ಇರಲಿಲ್ಲ. ಆ ವಿಭಾಗದ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರೊಬ್ಬರನ್ನು, ಭಾರತವನ್ನೇಕೆ ಅಡಿಕೆ ಬೆಳೆಯುವ ದೇಶಗಳಲ್ಲಿ ಸೇರಿಸಿಲ್ಲ ವೆಂದು ಕೇಳಿದೆ. ಅದಕ್ಕೆ ಅವರು ಭಾರತದಲ್ಲಿ ಅಡಿಕೆ ಬೆಳೆಯುವುದಿಲ್ಲ. ಅದಕ್ಕಾಗಿ ಸೇರಿಸಿಲ್ಲವೆಂದರು. ನಮಗೆ ತಿಳಿದಿರುವಂತೆ ಭಾರತದಿಂದ ಅಡಿಕೆಯನ್ನು ಸಿಂಗಪೂರ್, ಮಲೇಶಿಯಾ, ಇಂಡೋನೇಶಿಯಾಗಳಿಗೂ ಕಳುಹಿಸುತ್ತಿದ್ದೇವೆ.

ಹಾಂಕಾಂಗಿಗೆ ನಾಲ್ಕು ಬಾರಿ ಹೋದಾಗಲೆಲ್ಲ ಹೆಚ್ಚು ಕಾಲಕಾಳೆಯಲು ಇಷ್ಟವಾಗು ತ್ತಿರಲಿಲ್ಲ. ಅದೊಂದು ದೊಡ್ಡ ಕಾನ್‌ಕ್ರೀಟ್ ಜಂಗಲ್‌ನಂತೆ, ಪ್ರತಿಯೊಬ್ಬರು ಯಂತ್ರದ ಹಾಗೆ ಅವರವರ ಉದ್ಯೋಗದಲ್ಲಿ ತೊಡಗಿರುತ್ತಿದ್ದದ್ದು, ಆತ್ಮೀಯತೆ ಔದಾರ್ಯ ಕಾಣುತ್ತಿರಲಿಲ್ಲ. ವೃತ್ತಪತ್ರಿಕೆಗಳಲ್ಲಿ ಆಗಾಗ ಹೊಗಳಿ ಬರೆಯುತ್ತಿದ್ದ ಹಾಂಕಾಂಗ್ ಪ್ರವಾಸಿಗರ ಸ್ವರ್ಗವೆಂದು ಅನಿಸಲಿಲ್ಲ. ಮುಗಿಲೆತ್ತರಕ್ಕೆ ಎದ್ದಿರುವ ಬಹು ಅಂತಸ್ಥಿನ ಒತ್ತೊತ್ತಾದ ಮನೆಗಳಲ್ಲಿ ಇರುವೆ ಗೆದ್ದಲಿನಂತೆ ಸದಾ ಜನರ ಗಜಿಬಿಜಿ. ಆದರೆ ದೂರದಿಂದ ನೋಡುವುದಕ್ಕೆ ರಮಣೀಯವಾದ ಪಟ್ಟಣ. ಸಮುದ್ರದ ಪಕ್ಕದಲ್ಲಿ ಹಟಾತ್ತನೆ ಎದ್ದಿರುವ ಗುಡ್ಡದ ಮೇಲೆ ಸಮುದ್ರಕ್ಕೆ ಮುಖವಾಗಿ ಕಟ್ಟಿರುವ ಮನೆಗಳು. ರಾತ್ರಿ ವೇಳೆ ಲೈಟಿನಿಂದ ಝುಗಝುಗಿಸುತ್ತಿರುತ್ತದೆ. ಪಟ್ಟಣ ಎತ್ತರವಾಗಿ ಬೆಳೆಯಬಹುದೆ ಹೊರತು ಅಗಲವಾಗಿ ವಿಸ್ತರಿಸಲು ಜಾಗವಿಲ್ಲ. ಸಮುದ್ರಕ್ಕೆ ಚಾಚಿರುವ ಜಾಗದಲ್ಲಿ ಕಟ್ಟಿರುವ ವಿಮಾನ ನಿಲ್ದಾಣ ವಿಮಾನಗಳು ಇಳಿಯುವಾಗ ಹಾರುವಾಗ ಇಕ್ಕೆಲದಲ್ಲಿರುವ ಹಡಗು ದೋಣಿಗಳಿಗೆ ಮುತ್ತಿಡುವವೋ ಎಂದು ಭಾಸವಾಗುತ್ತದೆ. ಹಾಂಕಾಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಬೃಹತ್ ವಿಮಾನಗಳ ಸಂಖ್ಯೆ ಬೆಂಗಳೂರು ವಿಮಾನ

ನಿಲ್ದಾಣಕ್ಕೆ ಬಂದು ಹೋಗುವ ಹತ್ತು ಪಟ್ಟು ಇರಬಹುದು. ಅಷ್ಟು ಚಿಕ್ಕ ಜಾಗದಲ್ಲಿ ಅಷ್ಟೊಂದು ಬೃಹತ್ ಪ್ರಮಾಣದ ವಿಮಾನ ಸಂಚಾರಮಾಡುವಾಗ ಬೆಂಗಳೂರಿನಲ್ಲೇಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾವಿರಾರು ಎಕರೆ ಜಮೀನಿಗಾಗಿ ಹಲವಾರು ವರುಷಗಳಿಂದ ತಕರಾರು ನಡೆಯುತ್ತಿರುವುದೆಂದು ತಿಳಿಯದು.

ಥೈಲಾಂಡಿನ ಮುಖ್ಯ ಪಟ್ಟಣವಾದ ಬಾಂಕಾಕ್ ಏಳೆಂಟು ವರುಷಗಳಲ್ಲಿ ಬೆಳೆದ ವೈಖರಿಯನ್ನು ನೋಡಿ ಚಕಿತನಾದೆ. ಬೆಂಗಳೂರು ಅಷ್ಟೇ ವೇಗದಲ್ಲಿ ಬೆಳೆದರೂ, ಜನಸಂಖ್ಯೆ ನಾಲ್ಕಾರು ಪಟ್ಟು ಹೆಚ್ಚಾಯಿತೆ ಹೊರತು ಅದಕ್ಕೆ ಸಮನಾಗಿ ಸವಲತ್ತುಗಳು ಬೆಳೆಯಲಿಲ್ಲ. ಮೊದಲು 1988 ರಲ್ಲಿ ಬಾಂಕಾಕಿಗೆ ಹೋದಾಗ ಸಿಟಿ ಬಸ್ಸುಗಳು, ಆಟೋರಿಕ್ಷಾಗಳು, ಅಂಗಡಿ ಬೀದಿಗಳಲ್ಲಿ ಡಾಬಾದಂತೆ ಆಹಾರದ ಅಂಗಡಿಗಳು, ಬಹುತೇಕ ಭಾರತದ ದೊಡ್ಡ ಪಟ್ಟಣಗಳನ್ನು ಹೋಲುವಂತಿತ್ತು. ಬಹಳ ಜನ ಪ್ರವಾಸಿಗರು ಬಾಂಕಾಕ್ ಹಾದು ಹೋಗುವಾಗ ಒಂದು ದಿನ ತಂಗಿದ್ದು ಹೋಗುವುದಕ್ಕೆ ಆಸೆ ಪಡುತ್ತಿದ್ದರು. ಏಕೆಂದರೆ ಅಲ್ಲಿ ಎಲ್ಲಾ ವಸ್ತುಗಳು ಸುಲಭ ಬೆಲೆಗೆ ದೊರೆಯುತ್ತಿದ್ದವು. ಅಗ್ಗದ ಆಹಾರ, ದುಬಾರಿಯಿಲ್ಲದ ಹೋಟಲು, ಹೆಚ್ಚಾಗಿ ಎಷ್ಟು ನೋಡಿದರೂ ಮುಗಿಯದ ಪ್ರೇಕ್ಷಣೀಯ ಸ್ಥಳಗಳು ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. ಕೇವಲ ಇನ್ನೂರು ಮುನ್ನೂರು ರೂಪಾಯಿಯಲ್ಲಿ ಸಂಜೆ ಆರ್ಡರ್ ಕೊಟ್ಟರೆ ಮರುದಿನ ಒಂದು ಸೂಟ್ ತಯಾರುಮಾಡಿಕೊಡುತ್ತಿದ್ದರು. ಶೂ, ಚಪ್ಪಲಿಗಳಂತೂ ಕೇಳಿದ ಬೆಲೆಗೆ ಸಿಗುತ್ತಿದ್ದವು. ಹೋಟಲ್‌ಗಳ ಮುಂದೆ ದೊಡ್ಡ ದೊಡ್ಡ ಗ್ಲಾಸ್ ತೊಟ್ಟಿಗಳಲ್ಲಿ ಹಲವು ಬಗೆಯ ಮೀನು, ಸೀಗಡಿ, ಏಡಿ, ಆಮೆ, ಹಾವುಗಳನ್ನು ಜೀವಂತವಾಗಿ ಇಟ್ಟಿರುತ್ತಿದ್ದರು. ಇಷ್ಟಪಟ್ಟಿದ್ದನ್ನು ತೋರಿಸಿ ಕುಳಿತರೆ ಅರ್ಧಗಂಟೆಯಲ್ಲಿ ದುಬಾರಿಯಿಲ್ಲದ ಭಕ್ಷ್ಯ ತಯಾರುಮಾಡಿ ತಂದಿಡುತ್ತಿದ್ದರು. ಪುನಃ ತೊಂಬತ್ತೈದರಲ್ಲಿ ಹೋದಾಗ ನನ್ನ ಕಣ್ಣುಗಳನ್ನು ನಾನೇ ನಂಬದಂತಾಯಿತು. ರೋಡಿನ ಮೇಲೆ ರೋಡುಗಳು, ನಾಲ್ಕು ನಾಲ್ಕು ಸಾಲುಗಳ ಜಾಪನೀಸ್ ಕಾರುಗಳು ಒಂದಕ್ಕೊಂದು ಅಂಟಿಕೊಂಡಂತೆ ಚಲಿಸುವಾಗ ರಸ್ತೆಗಳನ್ನು ದಾಟುವಂತಿರಲಿಲ್ಲ. ಹಂಚಿನ ಮನೆಗಳಿದ್ದಲ್ಲಿ ಬಹುಅಂತಸ್ಥಿನ ಮನೆಗಳು ಮಳಿಗೆಗಳು. ಹೋಟಲ್‌ಗಳಲ್ಲಿ ಊಟ ತಿಂಡಿ ಮಾಡಲು ಗಂಟೆ ಗಟ್ಟಲೆ ಕಾಯಬೇಕು. ಬೆಲೆಗಳು ಗಗನಕ್ಕೇರಿದ್ದವು. ಎಲ್ಲೆಲ್ಲೂ ಟ್ರಾಫಿಕ್ ಜಾಮ್. ನಾನು ಮೊದಲು ಹೋದಾಗ ಪಟ್ಟಣದ ಪ್ರತಿಷ್ಠಿತ ಸ್ಥಳದಲ್ಲಿ, ಕಿಂಗ್ಸ್ ಮ್ಯಾನಸನ್ಸ್, 31 ಸೌತ್ ಸಾಟ್‌ಹಾರನ್ ರೋಡ್‌ನಲ್ಲಿ ಇಳಿದುಕೊಂಡಿದ್ದೆ. ಹೋಟೆಲ್ ಬಾಡಿಗೆಯೂ ಸೇರಿ ಎರಡು ದಿವಸಕ್ಕೆ ಐವತ್ತು ಡಾಲರ್‌ನಲ್ಲಿ ನನ್ನ ಖರ್ಚೆಲ್ಲಾ ಮುಗಿದಿತ್ತು. ಎರಡನೆ ಬಾರಿ ಅದೆಷ್ಟಾಯಿತೋ ನನಗೆ ತಿಳಿಯದು. ನಾನು ಎಮ್.ಒ.ಎ. ಸಂಸ್ಥೆಯ ಅತಿಥಿಯಾಗಿದ್ದೆ. ಅಂತೂ ಏನನ್ನೂ ಕೊಂಡುಕೊಳ್ಳುವಂತಿರಲಿಲ್ಲ. ಥೈಲ್ಯಾಂಡ್ ನಮ್ಮ ದೇಶದಂತೆಯೇ ಬಹುತೇಕ ಜನರು ವ್ಯವಸಾಯ ಮೂಲದಿಂದ ಜೀವಿಸುವವರು. ಪಟ್ಟಣಕ್ಕೂ ಹಳ್ಳಿಗೂ ಅಂತರ ನೋಡಿದರೆ ಉಳ್ಳವರಿಗೂ ಇಲ್ಲದವರಿಗೂ ಮಧ್ಯೆ ನಮ್ಮಂತೆಯೆ ಅಲ್ಲಿಯೂ ದೊಡ್ಡ ಕಂದರವೇ ಏರ್ಪಟ್ಟಿದೆ.

ಬ್ಯಾಂಕಾಕ್‌ನಲ್ಲಿ ಬೌದ್ಧ ಮತ್ತು ಹಿಂದೂ ಧರ್ಮ ಹಾಸು ಹೊಕ್ಕಾಗಿ ಕಲೆತಿವೆ. ಇದನ್ನು ಅಲ್ಲಿರುವ ಪುರಾತನ ಮಂದಿರಗಳು, ಜನಜೀವನ, ಆಚಾರ ವ್ಯವಹಾರಗಳಲ್ಲಿ ಸ್ಥೂಲವಾಗಿ ನೋಡಬಹುದು. ಅಲ್ಲಿರುವ ಶಿವೋಂ ದೇವನ ಇಂಡಿಯನ್ ಟೆಂಪಲ್ ವಾಟ್‌ಕಾಕ್, ಫೋಮಾ

ಟೆಂಪಲ್ (ಅಂದರೆ ಬ್ರಹ್ಮ ದೇವಸ್ಥಾನ) ಗೋಲ್ಡನ್ ಬುದ್ಧ (ಪ್ರಪಂಚದಲ್ಲಿ ಅತಿ ದೊಡ್ಡದು), ರಿಕಾಯಿನಿಂಗ್ ಬುದ್ಧ ಎಲ್ಲವೂ ನೋಡಬೇಕಾದ ಸ್ಥಳಗಳು. ಬ್ಯಾಂಕಾಕ್‌ಗೆ ಸುಮಾರು ನೂರು ಮೈಲಿ ದೂರದ ಸಮುದ್ರ ತೀರ 'ಪಟಾಯ' ಪ್ರೇಕ್ಷಣೀಯ ಸ್ಥಳ. ಅಲ್ಲಿ ನಡೆಯುವ ಆಲ್‌ಕಜಾರ್ ಶೋ, ಅಲ್ಲಿಯ ಸಂಸ್ಕೃತಿಯ ಪರಂಪರೆಯನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ತಲ್ಲಣಿಸುತ್ತದೆ. ಪಟಾಯದಲ್ಲಿ ಮತ್ತೊಂದು ಆಕರ್ಷಣೆ ಎಂದರೆ ಕೊರಲ್ ಐಲಾಂಡಿನ ಹವಳ. ಕೊರಲ್ಸ್ ಅನ್ನು ಪಾರದರ್ಶಕ ದೋಣಿಯ ತಳದಿಂದ ನೋಡಬೇಕು. ಛತ್ರಿಯನ್ನೋ ಅಥವಾ ಸೂರ್ಯ ರಶ್ಮಿ ಬೀಳದ ಹಾಗೆ ಬಟ್ಟೆಯನ್ನೋ ಹೊದ್ದುಕೊಂಡು ನೋಡಬೇಕು. ನನ್ನ ಹತ್ತಿರವೇನೂ ಇರಲಿಲ್ಲವಾದ್ದರಿಂದ ನಮ್ಮ ಜೊತೆ ಬಂದಿದ್ದ ಮುಸ್ಲಿಂ ಮಹಿಳೆಯೊಬ್ಬಳು ತನ್ನ ಬುರುಕವನ್ನು ಕೊಟ್ಟಳು. ಅದನ್ನು ಹೊದ್ದುಕೊಂಡು ನೋಡಿದಾಗ ಟೀವಿಯಲ್ಲಿ ಸಾಗರ ಅನ್ವೇಷಣೆ ನೋಡುವ ಹಾಗೆ ವಿವಿಧ ಬಗೆಯ ಜೀವಂತ ಹವಳ, ಬಗೆ ಬಗೆಯ ಬಣ್ಣದ ಮೀನು, ಎಷ್ಟು ಹೊತ್ತು ನೋಡಿದರೂ ಬೇಸರವಾಗದ ದೃಶ್ಯ. ಅಲ್ಲಿಂದ ವಾಪಸ್ಸು ಮೋಟಾರು ಬೋಟಿನಲ್ಲಿ ಬರುವಾಗ ಭಾರಿ ಮಳೆಯಿಂದ ದೋಣಿ ತತ್ತರಿಸಿದಾಗ ನಾನು ಸಮುದ್ರಕ್ಕೆ ಮಗುಚಿಕೊಂಡೆ. ತಕ್ಷಣ ಇಬ್ಬರು ಯುವಕರು, ಮಿಡ್ಲ್‌ಈಸ್ಟ್‌ನಿಂದ ಬಂದ ಟೂರಿಸ್ಟ್, ದೋಣಿಯಿಂದ ಧುಮಿಕಿ ನನ್ನನ್ನು ಮೇಲೆತ್ತಿದರು. ಅದೃಷ್ಟವಶಾತ್ ಕೊರಳಿಗೆ ಸುತ್ತಿಕೊಂಡಿದ್ದ ಚೀಲ, ಅದರಲ್ಲಿದ್ದ ಕ್ಯಾಮರ, ಪಾಸ್‌ಪೋರ್ಟ್ ನನ್ನಿಂದ ದೂರವಾಗಿರಲಿಲ್ಲ. ನನ್ನ ಎಡದ ಕಣ್ಣಿಗೆ ಸ್ವಲ್ಪ ಪೆಟ್ಟಾಗಿದ್ದು ಬಿಟ್ಟು ಮತ್ತೇನು ಆಗಲಿಲ್ಲ.

ಪಟಾಯದಲ್ಲಿ ವಿವಿಧ ಬಗೆಯ ನೀರಿನ ಚೆಲ್ಲಾಟಗಳಿವೆ. ಮೋಟಾರುಬೋಟ್, ಸ್ಕೂಟರ್ ಬೋಟ್, ಪ್ಯಾರಾಚೂಟಿಂಗ್, ಶೂಟಿಂಗ್ ಟು ದಿ ಸೀ, ಮೊದಲಾದವು. ಕುದುರೆ ಲಾಳದಂತಿರುವ ಸಮುದ್ರ ತೀರ ಪರ್ವತ ತಪ್ಪಲಲ್ಲಿ ನೂರಾರು ಗಜ ಸಮುದ್ರದೊಳಕ್ಕೆ ನಡೆದುಕೊಂಡು ಹೋಗಲು ಆಳವಿಲ್ಲದ ಪ್ರಶಾಂತವಾದ ನೀರಿನ ಅಲೆಗಳು ಕೈ ಬೀಸಿ ಕರೆಯುವಂತಿದ್ದವು. ತೀರದ ಸುತ್ತಲೂ ತಡಿಕೆಯಿಂದ ನಿರ್ಮಿಸಿದ ನೂರಾರು ಹೋಟೆಲುಗಳಲ್ಲಿ ವಿವಿಧ ಬಗೆಯ ಮೀನು ಸೀಗಡಿಗಳ ಸಂತೆಯನ್ನೇ ನಿರ್ಮಿಸಿರುತ್ತಾರೆ. ಪ್ರವಾಸಿಗರನ್ನು ಆಕರ್ಷಿಸಲು ಥೈಲಾಂಡಿನವರು ನಮ್ಮವರಿಗಿಂತ ಬಹುಪಾಲು ಮೇಲು. ನಮ್ಮಲ್ಲಿ ಪ್ರವಾಸೋದ್ಯಮ ಹಿಂದೆ ಬೀಳಲು ಅದರ ಜವಾಬ್ದಾರಿ ಹೊತ್ತವರಿಗೆ ಪ್ರವಾಸದ ಅಭಿರುಚಿಯಾಗಲಿ ಅಥವ ಅಭಿರುಚಿ ಉಳ್ಳವರನ್ನು ಸಂತೃಸುವ ಕಲೆಯಾಗಲಿ ಮೈಗೂಡಿಸಿಕೊಂಡಂತೆ ಕಾಣುವುದಿಲ್ಲ. ನಮ್ಮಲ್ಲಿರುವ ನೈಸರ್ಗಿಕ ಸಂಪತ್ತು ಪುರಾತನ ಕಲೆ, ಸಂಸ್ಕೃತಿ, ಜಾನಪದ ಸಾಹಿತ್ಯ, ವೈವಿಧ್ಯಮಾನವಾದ ಉಡಿಗೆ ತೊಡಿಗೆ, ಅಹಾರ ಮುಂತಾದವು ಕುಂಟರನ್ನೂ ಕೆರಳಿಸುವಂತಿವೆ. ಆದರೆ ನಮ್ಮದೇ ಆದ, ಸಾಮಾನ್ಯರಿಗೆ ಎಟುಕುವಂತಹ ವಸತಿ, ವಾಹನ ಸೌಕರ್ಯ, ತಿಂಡಿ ತಿನಿಸು, ಕನಿಷ್ಟ ನೈರ್ಮಲ್ಯ ಒದಗಿಸುವಲ್ಲಿ ವಿಫಲರಾಗಿದ್ದೇವೆ. ಟೂರಿಸಂ ಮಾತೆತ್ತಿದರೆ ಪಂಚತಾರ ಸಂಸ್ಕೃತಿಯ ಅಭಾವವನ್ನೇ ಎತ್ತಿತೋರಿಸುತ್ತಾರೆ. ಯೂರೋಪ್ ಅಮೆರಿಕಾದಲ್ಲೂ ಕೂಡ ಪಂಚತಾರಾ ಸಂಸ್ಕೃತಿಯನ್ನು ಯಾರೂ ಬಯಸುವುದಿಲ್ಲ. ಅವರ ಬಯಕೆ ಒಂದೆ. ಅದೆಂದರೆ ಎಲ್ಲಿ ಹೋದರೂ ಎಡರು ತೊಡರಿಲ್ಲದೆ ನಿರಾಯಾಸವಾಗಿ ಸ್ವೇಚ್ಛೆಯಾಗಿ ಮನಬಂದಂತೆ ನೋಡುವ ಬಯಕೆ. ಎಲ್ಲರನ್ನೂ ಶಂಕಿಸುವ ನಾವು ಪ್ರವಾಸಿಗರನ್ನೂ ಬಿಡುವುದಿಲ್ಲ.

ಬ್ಯಾಂಕಾಕಿಗೆ ಸುಮಾರು ನೂರಐವತ್ತು ಮೈಲಿ ದೂರದಲ್ಲಿ ಒಂದು ಕೃಷಿ ಸಂಶೋಧನಾ ಫಾರಂಗೆ ಹೋಗಿದ್ದೆ. ದಾರಿಯಲ್ಲಿ ಎರಡು ಹಳ್ಳಿಗಳಿಗೆ ಹೋಗಿ ಕೆಲವರೊಡನೆ ಅವರು ಮಾಡುತ್ತಿದ್ದ

ವ್ಯವಸಾಯದಲ್ಲಿ ಇತ್ತೀಚೆಗೆ ಅಳವಡಿಸಿಕೊಂಡಿರುವ ವೈಜ್ಞಾನಿಕ ಪದ್ಧತಿಗಳ ಬಗ್ಗೆ ವಿಚಾರಿಸಿದೆ. ಚೋನ್‌ಬುರಿ ಪ್ರಾವಿನ್ಸ್‌ನಲ್ಲಿರುವ ವಾಟಿಯಾನ್ ಸಾಂಗವರಾಮ್ ಅಗ್ರಿಕಲ್‌ಚರ್ ಟ್ರೈನಿಂಗ್ ಹಾಗೂ ಡೆವಲೆಪ್‌ಮೆಂಟ್ ಸೆಂಟರ್, ಆಂಫೋರ್, ಬಾಂಗ್ಲಾಮುಂಗ್ ಸಂದರ್ಶಿಸಿ ಅಲ್ಲಿ ಕೈಗೊಂಡಿದ್ದ ಸಂಶೋಧನೆ ಮತ್ತು ವಿಸ್ತರಣೆ ಹೇಗೆಂದು ತಿಳಿದುಕೊಂಡೆ. ಥೈಲಾಂಡ್ ಹೆಚ್ಚು ಕಡಿಮೆ ನಮ್ಮ ದೇಶದ ವಾತಾವರಣ, ಹವಾಮಾನ, ಮಣ್ಣು, ನೀರು, ಬೇಸಾಯ ಪದ್ಧತಿಗೆ ಹೋಲುತ್ತದೆ. ಅವರ ಕೋಣನ ನೇಗಿಲಿನ ಆರಂಭ ಪಶ್ಚಿಮ ಕರಾವಳಿಯ ಆರಂಭಕ್ಕೆ ಹೋಲುತ್ತದೆ. ಹಳ್ಳಿಗಳಲ್ಲಿ ವಸತಿ ಸೌಕರ್ಯ, ನೈರ್ಮಲ್ಯ, ವ್ಯವಹಾರ ಜ್ಞಾನ ನಮಗಿಂತ ಹೆಚ್ಚಿನದಾಗಿ ಕಾಣಲಿಲ್ಲ. ಕೃಷಿ ಸಂಶೋಧನೆ, ಮತ್ತು ವಿಸ್ತರಣೆಯಲ್ಲಿ ನಾವೇ ಮುಂದು ಅನಿಸುತ್ತದೆ. ಆದರೆ ಥೈ ಜನರು ನಮಗಿಂತ ಬೇಗ ಪಾಶ್ಚಾತ್ಯ ಬೆಡಗು ಬಿನ್ನಾಣಕ್ಕೆ ಮಾರು ಹೋದಂತೆ ತೋರುತ್ತದೆ.

ಥೈಲಾಂಡಿನ ಫ್ಲೋಟಿಂಗ್ ಮಾರ್ಕೆಟ್ ಪ್ರಪಂಚಕ್ಕೆ ಹೆಸರಾದದ್ದು (ಬ್ಯಾಂಕಾಕಿಗೆ ಸುಮಾರು ನೂರು ಕಿ.ಮೀ.). ಮೈಲಿಗಟ್ಟಲೆ ಅಂಕುಡೊಂಕಾಗಿ ಸಂದುಗೊಂದಿಗಳಲ್ಲಿ ನುಸುಳಿ ಹೋಗುವ ನೀರು ಕಾಲುವೆಗಳ ಇಕ್ಕೆಲದಲ್ಲಿ ಮನೆಗಳು. ಅವುಗಳಿಗೆ ನೇರ ಸಂಪರ್ಕ ದೋಣಿಗಳಿಂದಲೆ. ಅವರ ವ್ಯಾಪಾರ ವಹಿವಾಟೆಲ್ಲ ದೋಣಿಗಳಲ್ಲೆ. ಸಣ್ಣಸಣ್ಣ ಹೋಟೆಲ್‌ಗಳು ಕೂಡ ದೋಣಿಯಲ್ಲೆ. ಆ ಸುತ್ತಮುತ್ತಲಿನ ಮನೆಗಳಿಗೆ ಸರಬರಾಜು ಮಾಡುವುದಲ್ಲದೆ ಟೂರಿಸ್ಟ್‌ಗಳಿಗೆ ಇಕ್ಕೆಲದಲ್ಲಿರುವ ಅಂಗಡಿಗಳಿಗೆ ದೋಣಿಗಳು ಆಕರ್ಷಿಸುತ್ತವೆ. ಅಲ್ಲಿ ಸಿಗದ ಸಾಮಾನುಗಳಿಲ್ಲ. ಥೈಲಾಂಡ್ ದೇಶಕ್ಕೆ ಹೋಗುವವರಿಗೆಲ್ಲ ಫ್ಲೋಟಿಂಗ್ ಮಾರ್ಕೆಟ್ ಒಂದು ಪ್ರೇಕ್ಷಣೀಯ ಸ್ಥಳ. ರಾತ್ರಿ ಉಳಿಯುವವರಿಗೂ ಕೂಡ, ಕಾಶ್ಮೀರದಲ್ಲಿ ಶ್ರೀನಗರದ ದಾಲ್‌ಲೇಕಿನಲ್ಲಿರುವಂತಹ ಬೋಟ್‌ಹೌಸ್‌ಗಳು ದೊರೆಯುತ್ತವೆ. ಆದರೆ ನಾನು ನೋಡಿದು ದರಲ್ಲಿ ದಾಲ್‌ಲೇಕಿನಲ್ಲಿರುವಷ್ಟು ಅಂದಚಂದದ ಬೋಟ್‌ಹೌಸ್ ಕಾಣಲಿಲ್ಲ. ಇಲ್ಲಿಂದ ಹಿಂತಿರುಗುವಾಗ ಬ್ಯಾಂಕಾಕಿಗೆ ಐವತ್ತು ಕಿ. ಮೀ. ಸಮೀಪದ ಬುದ್ಧಿಸ್ಟ್ ಪಗೋಡಕ್ಕೆ ಭೇಟಿಕೊಟ್ಟು ಅಲ್ಲಿರುವ ಗುಲಾಬಿ ತೋಟವನ್ನು ನೋಡಿದೆ. ಬುದ್ಧಿಸ್ಟ್ ಪಗೋಡ ವಿಸ್ತೀರ್ಣವಿನ್ಯಾಸದಲ್ಲಿ ಬೃಹದಾಕಾರವಾಗಿಯೂ ಸುಂದರವಾಗಿಯೂ ಇದೆ. ಅದಕ್ಕೆ ಒಪ್ಪುವಂತೆ ಇರುವ ಗುಲಾಬಿ ತೋಟ ಒಂದು ಟೂರಿಸ್ಟ್ ಆಕರ್ಷಣೆ. ಇಲ್ಲಿ ಹಲವು ಸಾಂಸ್ಕೃತಿ ಕಾರ್ಯಕ್ರಮಗಳೂ ಕೂಡ ಆಕರ್ಷಣೀಯವಾಗಿವೆ.

ಬ್ಯಾಂಕಾಕ್‌ನಲ್ಲಿರುವ ಚೂಲಾಲಾಂಗ್‌ಕರು ವಿಶ್ವ ವಿದ್ಯಾನಿಲಯದ ಕೀಟಶಾಸ್ತ್ರ ಪ್ರಾಧ್ಯಾಪಕರು ಡಾ॥ ಸಿರಿವಾಟ್ ವಾಂಗ್‌ಸಿರಿ ಮತ್ತು ಅವರ ಸಹೋದ್ಯೋಗಿಗಳೊಡನೆ ಜೇನುನೊಣಕ್ಕೆ ಬಂದಿರುವ ಥೈಸಾಕ್ ಬ್ರೂಡ್ ವಿಷಯವಾಗಿ ಚರ್ಚಿಸಲಾಯಿತು. ಮೊಟ್ಟಮೊದಲಿಗೆ ಥೈಲಾಂಡಿನಲ್ಲಿ ಕಂಡ ಈ ನಂಜು ರೋಗವನ್ನು ಥೈಸಾಕ್‌ಬ್ರೂಡ್ ಎಂದು ಕರೆದರು. ಏಷ್ಯಾದ ಜೇನು ಏಪಿಸ್ ಸೆರೆನಾ ಇರುವಲ್ಲೆಲ್ಲಾ ಈ ರೋಗ ಹರಡಿ ಅಪಾರ ನಷ್ಟವನ್ನುಂಟುಮಾಡಿತು. ಹಲವಾರು ವರುಷಗಳ ನಂತರ ಅಲ್ಲಲ್ಲಿ ಅಳಿದುಳಿದ ಸಂತತಿಯನ್ನು ಸಂರಕ್ಷಿಸಿ ಜೇನು ಸಾಕಾಣಿಕೆಯನ್ನು ಥೈಲಾಂಡಿನಲ್ಲಿ ಪುನರಾರಂಭಿಸಿದ್ದರು. ಕರ್ನಾಟಕಕ್ಕೆ ಈ ರೋಗ ಮೊದಲು ಬಂದಾಗ ಈ ಖಾಯಿಲೆಯ ಲಕ್ಷಣ, ಹರಡುವಿಕೆ ಮತ್ತು ನಿಯಂತ್ರಣದ ಬಗ್ಗೆ ಮಾಹಿತಿ ನೀಡಲು ಈ ಭೇಟಿ ಅನುಕೂಲವಾಯಿತು.

ತೈವಾನ್ ಚೈನ, ಮೈನ್‌ಲ್ಯಾಂಡ್ ಚೈನಾಕ್ಕೆ ಹೋಲುವುದೋ ಇಲ್ಲವೋ, ಆದರೆ ತೈವಾನಿನ ರಾಜಧಾನಿ ಟೈಪೈ ಚೈನಾಕ್ಕೆ ಭಿನ್ನವೆಂಬುದು ಎಲ್ಲರ ಅಭಿಪ್ರಾಯ. ಇದು ಪಶ್ಚಿಮ ರಾಷ್ಟ್ರಗಳ ಸೊಬಗನ್ನು ಅನುಭವಿಸುವ ದೊಡ್ಡ ಸಿಟಿಯಂತು ಹೌದು. ಏಷ್ಯಾಖಂಡದಲ್ಲಿ ಕಾಣುವ ಬಡತನವಂತು ಇಲ್ಲಿ ಕಾಣಲಿಲ್ಲ. ಭಾಷೆ ಚೈನೀಸ್ ಆದರೂ ಉಡಿಗೆ ತೊಡಿಗೆ ಪಾಶ್ಚಿಮಾತ್ಯ ದೇಶದ್ದು. ಅವರ ಆಹಾರದಲ್ಲೂ ಹೆಚ್ಚು ಮಾರ್ಪಾಟಾಗಿರುವುದಕ್ಕೆ ಅವರು ಸೇವಿಸುತ್ತಿದ್ದ ಅನ್ನದ ಪ್ರಮಾಣದಲ್ಲಿ ಮೊದಲಿಗಿಂತ ಈಗ ಅರ್ಧದಷ್ಟಾಗಿರುವುದೇ ನಿದರ್ಶನ. ಮೂವತ್ತು ವರುಷದ ಹಿಂದೆ ಸರಾಸರಿ ಒಬ್ಬನಿಗೆ ವರುಷಕ್ಕೆ ಇನ್ನೂರಿಪ್ಪತ್ತೈದು ಕೆ.ಜಿ. ಅಕ್ಕಿ ಬೇಕಿತ್ತಂತೆ, ಈಗ ಸರಾಸರಿ ನೂರಿಪ್ಪತ್ತು ಕೆ.ಜಿ.ಗೆ ಇಳಿದಿದೆ. ಏಕೆಂದರೆ ಜನರು ಹೆಚ್ಚು ಹೆಚ್ಚಾಗಿ ಮೀನು, ಮಾಂಸ, ಮೊಟ್ಟೆ, ಹಣ್ಣು, ಹಾಲು ಉಪಯೋಗಿಸುವುದರಿಂದ ಅನ್ನಸೇವನೆ ಅರ್ಧಕ್ಕೆ ಇಳಿದಿದೆಯಂತೆ. ಅವರ ವರಮಾನದ ಹೆಚ್ಚಳ ಇದರಿಂದ ಅರ್ಥವಾಗುತ್ತದೆ. ತೈವಾನ್‌ನಲ್ಲಿ ಕಾರುಗಳ ಸಂಖ್ಯೆ ಜಪಾನ್ ಬಿಟ್ಟರೆ ಏಷ್ಯಾದಲ್ಲಿ ಅತಿ ಹೆಚ್ಚಿನದೆಂದು ಹೇಳುವರು.

ಟೈಪೈನಲ್ಲಿರುವ ವಸ್ತು ಸಂಗ್ರಹಾಲಯ ಇಡೀ ಚೈನಾದಲ್ಲಿ ಎಲ್ಲಿಯೂ ಇಲ್ಲವಂತೆ. ಚಿಯಾಂಗ್‌ಕೈಶೇಕ್ ಕಮ್ಯುನಿಷ್ಟರಿಂದ ತಲೆತಪ್ಪಿಸಿಕೊಂಡು ಬರುವಾಗ ಚೈನಾದ ಪೂರ್ವ ಇತಿಹಾಸದ ವಸ್ತುಗಳನ್ನೆಲ್ಲ ತಂದರಂತೆ. ಈ ವಸ್ತುಸಂಗ್ರಹಾಲಯದಲ್ಲಿ ಚೈನಾದ ನಾಲ್ಕು ಸಾವಿರ ವರುಷಗಳ ಪರಂಪರೆಯನ್ನು ನೋಡಬಹುದು. ಅವರು ಬಳಸುತ್ತಿದ್ದ ಉಡುಪು, ಪಿಂಗಾಣಿ ಸಾಮಾನುಗಳು, ಮರದ ಸಾಮಾನುಗಳು, ನೇಯಿಗೆ ಕಸೂತಿ, ಮೊಟ್ಟಮೊದಲಿಗೆ ಪ್ರಪಂಚದಲ್ಲಿ ತಯಾರಿಸಿದ ಕಾಗದ, ಅದು ಮಾರ್ಪಾಡಾಗಿ ಬಂದಿರುವ ದಾರಿ, ನಮ್ಮ ಓಲೆಗರಿಯಂತೆ ಅವರು ಒಂದು ಬಗೆಯ ಮರದ ತೊಗಟೆಯ ಮೇಲೆ ಬರೆಯುತ್ತಿದ್ದ ಪುರಾತನ ಕಾಲದ ಬರವಣಿಗೆ, ಅವರ ಜಾನಪದ ಕಲೆ, ರಾಜವಂಶದವರು ಮೆರೆದಿದ್ದ ವೈಭೋಗ, ನಾಲ್ಕು ಸಾವಿರ ವರುಷಗಳ ಹಿಂದೆ ತಯಾರಿಸುತ್ತಿದ್ದ ರೇಷ್ಮೆ ಕಲೆ, ಎಲ್ಲವನ್ನೂ ನೋಡುತ್ತಿದ್ದಾಗ ನಮ್ಮ ಅರಿವೆ ಇಲ್ಲದೆ ಶತಮಾನಗಳ ಹಿಂದಕ್ಕೆ ನಮ್ಮನ್ನು ಒಯ್ಯುತ್ತದೆ. ಚಿಯಾಂಗ್‌ಕೈಶೇಕ್ ಬರುವಾಗ ಅಪಾರ ಸಂಪತ್ತನ್ನು ಮೈನ್‌ಲ್ಯಾಂಡ್ ಚೈನಾದಿಂದ ತಂದನೆಂದು ವದಂತಿ. ಇದರಿಂದಾಗಿ ತೈವಾನರಿಗೆ ತಾವೇ ಮುಖ್ಯವಾದ ಚೈನ ಎಂಬ ಆತ್ಮ ವಿಶ್ವಾಸ ಮತ್ತು ಸ್ವಾಭಿಮಾನ ಇರುವುದು.

ಭಾರತ ಸರ್ಕಾರ ನಿಯೋಜಿಸಿದ್ದ ಒಂದು ತಂಡದಲ್ಲಿ ನಾನೂ ಮೈನ್‌ಲ್ಯಾಂಡ್ ಚೈನಾಕ್ಕೆ ಹೋಗುವ ಅವಕಾಶವನ್ನು ಅನಿವಾರ್ಯವಾಗಿ ಕಳೆದುಕೊಳ್ಳಬೇಕಾಯಿತು. ನಾಲ್ಕು ಜನ ಕೃ.ವಿ.ವಿ. ಕುಲಪತಿಗಳು, ಮೂರು ಜನ ಐ.ಸಿ.ಎ.ಆರ್. ಡೈರೆಕ್ಟರ್ಸ್, ಮೂರು ವಾರಗಳ ಕೃಷಿ ಕ್ಷೇತ್ರದಲ್ಲಿ ಚೈನಾ ಸಾಧಿಸಿರುವ ಪ್ರಗತಿಯನ್ನು ನೋಡಲು ನಿಯೋಜಿಸಿತ್ತು. ನಾನು ಬೆಂಗಳೂರಿನಿಂದ ಪ್ರಯಾಣ ಬೆಳೆಸಬೇಕಾದ ದಿನವೇ ನಮ್ಮ ಕುಟುಂಬದವರು ನನಗಿಂತ ಹಿರಿಯರು ಮತ್ತು ಮಾರ್ಗದರ್ಶಕರೂ ಆಗಿದ್ದ ಜಿ. ಆರ್. ರಾಮೇಗೌಡರು ಹಾಸನದಲ್ಲಿ ಒಂದು ವಾಹನಕ್ಕೆ ಸಿಕ್ಕಿ ತಲೆಗೆ ಪೆಟ್ಟು ಬಿದ್ದು ನಿಮ್ಹಾನ್ಸಿಗೆ ಕರೆತಂದಿದ್ದರು. ನಾನು ಹೋಗುವಷ್ಟರಲ್ಲಿ ತೀರಿಕೊಂಡಿದ್ದರು. ಅವರ ಪಾರ್ಥಿವ ಶರೀರವನ್ನು ರಾತ್ರಿ ಶವಗಾರದಲ್ಲಿಟ್ಟು ಮುಂಜಾನೆ ಪೋಸ್ಟ್‌ಮಾರ್ಟಂ ಆದನಂತರ ಊರಿಗೆ ರವಾನಿಸುವ ಏರ್ಪಾಡಾಗಬೇಕಾಗಿತ್ತು. ಈ ಮಧ್ಯೆ ಛಾನ್ಸಲರ್ ಆಫೀಸಿನಿಂದ ಹೊರಡಲು ಅನುಮತಿಯನ್ನು ಅಮಾನತ್‌ನಲ್ಲಿ ಇಡಲಾಗಿದೆಯೆಂದು

ಕರೆಬಂದು ಚೈನಾದಲ್ಲಿನ ಕೃಷಿ ಪ್ರಗತಿಯನ್ನು ನೋಡಬೇಕೆಂಬ ಬಹುದಿನದ ಬಯಕೆ ಕೊನೆಗೂ ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ. ಇದೊಂದು ಬಯಸಿದ್ದು ಬಂದಿದ್ದರೂ ಅನುಭವಿಸಲಾಗದಿದ್ದಕ್ಕೆ ಉದಾಹರಣೆ.

ಕೆನಡಾಕ್ಕೆ ಹೋಗಲು ಕರೆಬಂದದ್ದು 1988 ರ ಜುಲೈನಲ್ಲಿ. ಮುಖ್ಯವಾಗಿ ಯೂನಿವರ್ಸಿಟಿ ಆಫ್ ಬ್ರಿಟಿಷ್ ಕೊಲಂಬಿಯ, ವ್ಯಾಂಕೂವರ್‌ನಲ್ಲಿ ಅಂತರರಾಷ್ಟ್ರೀಯ ಕೀಟ ಸಮ್ಮೇಳನದಲ್ಲಿ ಭಾಗವಹಿಸಿ ಬೇರು ಹುಳುಗಳ ಬಗ್ಗೆ ಒಂದು ಪ್ರಬಂಧವನ್ನು ಮಂಡಿಸಲು ಆಹ್ವಾನ ಬಂದಿದ್ದು ಕಾರಣ. ಆದರೂ ಸೈಮನ್ ಫ್ರೇಜರ್ ಯೂನಿವರ್ಸಿಟಿ ಡಾ॥ ಜಾನ್ ವೆಬ್‌ಸ್ಟರ್‌ರವರ ಪ್ರಯತ್ನದಿಂದ ಕೆನಡಾ ಸರ್ಕಾರದವರ ಐ.ಡಿ.ಆರ್.ಸಿ. ಪ್ರಾಜಕ್ಟ್ ಫಂಡ್ ಧನ ಸಹಾಯ ಅಲ್ಲಿಗೆ ಹೋಗಲು ಪ್ರಚೋದನೆ ನೀಡಿತ್ತು. ಇದರ ಜೊತೆಗೆ ಗುಜರಾತ್ ಅಗ್ರಿಕಲ್ಚರ್ ಯೂನಿವರ್ಸಿಟಿ, ಆನಂದ್‌ನಲ್ಲಿ ಕೀಟ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಆರ್. ಸಿ. ಪಟೇಲರ ಒತ್ತಾಯವೂ ವ್ಯಾಂಕೂವರ್‌ಗೆ ಹೋಗಲು ಒತ್ತುಕೊಟ್ಟಿತು. ಡಾ॥ ಪಟೇಲರ ಅಳಿಯಂದಿರು ಅರುಣ್ ಪಟೇಲ್ ಅವರ ಪತ್ನಿ ಸುರೇಖ, ಅವರ ತಮ್ಮ ಫರೀನ್ ಮತ್ತು ಅವರ ಪತ್ನಿ ವ್ಯಾಂಕೂವರ್‌ನಲ್ಲಿ ನನಗೆ ಆಶ್ರಯಕೊಡಲು ಕಾತರರಾಗಿದ್ದರು.

ಬೆಂಗಳೂರಿನಿಂದ ಮುಂಬೈ ಮಾರ್ಗವಾಗಿ ಹಾಂಕಾಂಗ್ ತಲುಪಿ, ಅಲ್ಲಿ ಒಂದು ದಿನ ಏರ್‌ವೇಸ್‌ರವರ ಆತಿಥ್ಯದಿಂದ ತಂಗಿದ್ದು, ಮರುದಿನ ಕ್ಯಾಥೆಪೆಸಿಫಿಕ್ ಜಂಬೋಜೆಟ್‌ನಲ್ಲಿ ಹಾಂಕಾಂಗ್‌ನಿಂದ ವ್ಯಾಂಕೂವರ್‌ಗೆ ಪ್ರಯಾಣ ಬೆಳಿಸಿದೆ. ನನಗೆ ವೈ ಕ್ಲಾಸ್‌ನಲ್ಲಿ ಟಿಕೆಟ್ ಇದ್ದರೂ ಸ್ಥಳಾಭಾವದಿಂದ ಎಕ್ಸಿಕ್ಯೂಟೀವ್ ಕ್ಲಾಸ್‌ನಲ್ಲಿ ಹೋಗುವ ಅವಕಾಶ ದೊರೆಯಿತು. ಹಾಂಕಾಂಗ್‌ನಿಂದ ವ್ಯಾಂಕೂವರ್‌ಗೆ ನಾನ್‌ಸ್ಟಾಪ್ ಹನ್ನೆರಡು ಘಂಟೆ ಪ್ರಯಾಣ. ಆದರೂ ಕೊಂಚವೂ ಬೇಸರವಾಗಲಿಲ್ಲ. ಆರನೂರು ಜನ ಪ್ರಯಾಣಿಕರನ್ನು ಹೊತ್ತಿದ್ದ ವೈಡ್‌ಬಾಡಿ - 747, ಜಂಬೋಜೆಟ್ ಆಕಾಶದಲ್ಲಿ ಅರಮನೆಯಿದ್ದಂತೆ ಇತ್ತು. ಕ್ಯಾಥೆಪೆಸಿಫಿಕ್ ಏರ್‌ಲೈನ್ ಆದರ ಆತಿಥ್ಯಕ್ಕೆ ಹೆಸರುವಾಸಿಯಾಗಿತ್ತು. ಒಳಗೆ ಕುಳಿತು ಸೀಟು ಬೆಲ್ಟನ್ನು ಬಿಗಿಯುವುದರೊಳಗೆ ಗಗನಸಖಿಯರು ಬಗೆಬಗೆಯ ಪಾನೀಯಗಳನ್ನು ಮುಂದೆ ಇಟ್ಟಾಗ ಪ್ರಾರಂಭವಾದ ಆತಿಥ್ಯ ವ್ಯಾಂಕೂವರ್‌ನಲ್ಲಿ ಇಳಿಯುವವರೆಗೂ ಒಂದಾದರ ಮೇಲೊಂದು ಬರುತ್ತಲೇ ಇದ್ದವು. ಹನ್ನೆರಡು ಚಾನಲ್ ಮ್ಯೂಸಿಕ್‌ನಲ್ಲಿ ಭಾರತೀಯ ಕ್ಲಾಸಿಕ್ ಮ್ಯೂಜಿಕ್‌ನಿಂದ ಹಿಡಿದು ಪ್ರಪಂಚದ ಮೆಚ್ಚುಗೆಯ ಮ್ಯೂಸಿಕ್ ಎಲ್ಲವೂ ಇದ್ದವು. ಬಗೆಬಗೆಯ ಸಿನಿಮಾಗಳ ಮಧ್ಯೆ ಬಿ.ಬಿ.ಸಿ. ಮತ್ತು ಸಿ.ಎನ್.ಎನ್. ನ್ಯೂಸ್ ಕೂಡ ಪರದೆಯ ಮೇಲೆ ಬರುತ್ತಿದ್ದವು. ಬೇಡದವರಿಗೆ ಕಣ್ಣು ಮುಚ್ಚಿಕೊಳ್ಳಲು ಕನ್ನಡಕದ ಹಾಗೆ ಕಪ್ಪು ಬಟ್ಟೆಯ ಕವಚಗಳನ್ನೂ ಇಟ್ಟಿದ್ದರು. ಊಟ, ತಿಂಡಿ, ಸಿನೆಮ, ಸಂಗೀತ ಏನೂ ಬೇಡವೆನ್ನುವವರಿಗೆ ಸೀಟನ್ನು ಮುಂದೆ ಚಾಚಿ ಹಾಸಿಗೆ ಮಾಡಿ ಕಂಬಳಿ ಹೊದ್ದು ಮಲಗಬಹುದಿತ್ತು.

ರಾಜಮಹಾರಾಜರುಗಳು ಬಯಸಿದ್ದೆಲ್ಲ ಬಗೆ ಬಗೆಯ ಪಾನೀಯ ಮತ್ತು ಊಟ ಇದ್ದವೆಂದು ಹೇಳಬಹುದು. ಸಸ್ಯಜನ್ಯ, ಪ್ರಾಣಿಜನ್ಯ, ಮತ್ಸ್ಯಜನ್ಯ ಬಯಸಿದವರಿಗೆ ಬೇಕಾದೆಲ್ಲಾ ಇತ್ತು. ಬರೀ ಹಣ್ಣು ಹಂಪಲು ತಿನ್ನುವವರಿಗೇನು ಕಡಿಮೆ ಇರಲಿಲ್ಲ. ಅಲ್ಲಿ ಸವಿದಿದ್ದ ಒಂದು ಬಗೆಯ ದ್ರಾಕ್ಷಿಯನ್ನು ಪುನಃ ಇಂದಿಗೂ ನಾನು ಕಂಡಿಲ್ಲ. ನನಗೆ ಎಲ್ಲೂ ಏರ್‌ವೇಸ್‌ಗಳ

ಎಕ್ಸಿಕ್ಯೂಟಿವ್ ಕ್ಲಾಸ್‌ನಲ್ಲಿ ಪ್ರಯಾಣ ಮಾಡಿದ ಅನುಭವವಿಲ್ಲದಿದ್ದರೂ ನನ್ನ ಪಕ್ಕದಲ್ಲಿ ಕುಳಿತಿದ್ದ ಅಮೆರಿಕಾದ ಮಲ್ಟಿನ್ಯಾಷನಲ್ ಕಂಪನಿಯ ಉದ್ಯೋಗಿಯೊಬ್ಬರು ಸದಾ ಪ್ರಪಂಚದಾದ್ಯಂತ ಎಕ್ಸಿಕ್ಯೂಟಿವ್ ಕ್ಲಾಸ್ ಅಥವಾ ಬಿಸಿನೆಸ್ ಕ್ಲಾಸ್‌ನಲ್ಲೇ ಪ್ರಯಾಣ ಮಾಡಿದ ಅನುಭವವಿದ್ದವರ ಅನಿಸಿಕೆಯೂ ಕೂಡ ಕ್ಯಾಥೆಪೆಸಿಫಿಕ್ ಏರ್‌ವೇಸ್‌ನ ಆತಿಥ್ಯ ಮಿಕ್ಕೆಲ್ಲವಕ್ಕಿಂತ ಹಿರಿಯದೆಂದು ಅಭಿಪ್ರಾಯಪಟ್ಟರು.

'ವಿಶ್ವಂ ದರ್ಪಣ ದೃಶ್ಯಮಾನ ನಗರೀತುಲ್ಯಂ, ನಿಜಾಂತರ್ಗತಂ....' ಎಂದು ಶಂಕರಾಚಾರ್ಯರು ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಹೇಳಿರುವಂತೆ ಎಲ್ಲವೂ ಮಾಯೆಯೋ ಎಂಬಂತೆ ಭಾಸವಾಗುತ್ತದೆ. ನಾನು ಚಿಕ್ಕಂದಿನಲ್ಲಿ ಬುತ್ತಿ ಕಟ್ಟಿಕೊಂಡು ಎತ್ತಿನಗಾಡಿಯಲ್ಲಿ ಕೊರಕಲು ದಾರಿಯಲ್ಲಿ ಹೋಗುತ್ತಿದ್ದ ಅನುಭವಕ್ಕೂ, ಕುಡಿದ ನೀರೂ ಅಲುಗಾಡದೆ ಮೂವತ್ತೈದು ನಲವತ್ತು ಸಾವಿರ ಅಡಿ ಎತ್ತರಲ್ಲಿ ಗಂಟೆಗೆ ಐನೂರು ಆರನೂರು ಮೈಲಿ ವೇಗದಲ್ಲಿ ಆಕಾಶದಲ್ಲಿ ಹಾರುತ್ತಿದ್ದರೂ ಬಿಸಿ ಬಿಸಿ ಕಾಫಿ ತಿಂಡಿಗಳನ್ನು ಸೇವಿಸುತ್ತಾ, ಗಗನಸಖಿಯರನ್ನು ಕರೆದು ಬಯಸಿದ್ದನ್ನು ಕೇಳಿ, ಹವಾನಿಯಂತ್ರಣ ಕೊಠಡಿಯಲ್ಲಿ ಕುಳಿತ ರಾಜಭೋಗದ ಅನುಭವಕ್ಕೂ 'ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು ಎತ್ತಣ ಸಂಬಂಧವಯ್ಯ' ಅನ್ನುವಂತಿತ್ತು. ಈ ಐಷಾರಾಮ ಪ್ರಯಾಣದ ಹಿನ್ನೆಲೆಯಲ್ಲಿ ಸಾವಿರಾರು ಜನರ ಹಗಲು ರಾತ್ರಿ ದುಡಿಮೆ ನೆನೆಸಿ ಕೊಂಡಾಗ ಅವರು ಜೀವನದಲ್ಲಿ ಒಂದು ದಿನವೂ ಈ ಐಸಿರಿಯನ್ನು ಕಂಡವರಲ್ಲವೆಂಬ ಚಿಂತನೆ ಮನಸ್ಸನ್ನು ಕಾಡಿತ್ತು.

ಹಾಂಕಾಂಗ್ ಬಿಟ್ಟಾಗ ಬೆಳಿಗ್ಗೆ 10-05 ಘಂಟೆ. ಹನ್ನೆರಡು ಗಂಟೆ ತಡೆರಹಿತ ಪ್ರಯಾಣ ಮಾಡಿ ವ್ಯಾಂಕೂವರ್ ಸೇರಿದಾಗ (2-7-88) ಅದೇ ದಿನ ಬೆಳಿಗ್ಗೆ 8-30 ಗಂಟೆ. ಇಂಟರ್‌ನ್ಯಾಷನಲ್ ಡೇಟ್‌ಲೈನ್ ದಾಟಿ ಹೋದಾಗ ಒಂದು ದಿನ ಮಿಗುತ್ತದೆ. ಸೂರ್ಯ ಅಸ್ತವಾಗುವುದು ಉದಯವಾಗುವುದು ಒಂದು ಗಂಟೆಯ ಅಂತರದೊಳಗೆ ನೋಡಬಹುದು.

ವ್ಯಾಂಕೂವರ್ ಒಂದು ರಮಣೀಯವಾದ ಸ್ಥಳ. ಮೂರುಕಡೆ ಗುಡ್ಡ ಸುತ್ತುವರಿದಿದ್ದು ಒಂದು ಕಡೆ ಸಮುದ್ರ ಮುಖವಾಗಿದೆ. ಉತ್ತರ ವ್ಯಾಂಕೂವರ್ ಒಂದು ನದಿಯ ದಡದಲ್ಲಿದ್ದು ಪ್ರೇಕ್ಷಣೀಯವಾಗಿರುವುದರಿಂದ ಪ್ರಪಂಚದ ಹಲವಾರು ಆಗರ್ಭ ಶ್ರೀಮಂತರು ವೈಭವವಾದ ಬಂಗಲೆಗಳನ್ನು ನಿರ್ಮಿಸಿ ಅಲ್ಲಿ ನೆಲೆಸಿದ್ದಾರೆ. ಪ್ರವಾಸಿಗರಿಗೆ ಇದೊಂದು ಪ್ರೇಕ್ಷಣೀಯ ಸ್ಥಳ. ನನ್ನ ಅತಿಥೇಯ ಪಟೇಲ್ ಸಹೋದರರು ಇದಕ್ಕೆ ಸಮೀಪ ನಂ. 3061, 7 ಅವಿನ್ಯೂ ಈಸ್ಟ್ ವ್ಯಾಂಕೂವರ್‌ನಲ್ಲಿದ್ದರು.

ನಾಲ್ಕು ವರುಷಕ್ಕೆ ಒಮ್ಮೆ ನಡೆಯುವ ಅಂತರರಾಷ್ಟ್ರೀಯ ಎಂಟಮಾಲಜಿ ಕಾಂಗ್ರೆಸ್ಸಿಗೆ, ನನ್ನ ಅನೇಕ ಸ್ನೇಹಿತರು ಬಂದಿದ್ದರು. ಅವರಲ್ಲಿ ನನ್ನ ಆಪ್ತರಾದ ಡಾ॥ ಸಿ. ಎ. ಎಡ್‌ವರ್ಡ್ಸ್, ಅಮೆರಿಕಾದಲ್ಲಿದ್ದಾಗ ಊಸ್ಟರ್ ವಹಾಯಿಯೊನಲ್ಲಿ ನನ್ನ ಅತಿಥೇಯ ಡಾ॥ ಹ್ಯಾರಿ ನೇಮ್‌ಜಿಕ್, ನಾನು ಅಧ್ಯಕ್ಷನಾಗಿದ್ದ ಐ.ಯು.ಎಸ್.ಎಸ್.ಐ.ನ ಸೆಕ್ರೆಟರಿ ಜನರಲ್ ನೆದರ್‌ಲ್ಯಾಂಡ್ಸ್‌ನ ಪ್ರೊ॥ ವೆಲ್ಲುಯಸ್ ಮತ್ತಿತರರು ಇದ್ದರು. ಇಂಡಿಯಾದಿಂದ ಡೆಲ್ಲಿ ಯೂನಿವರ್ಸಿಟಿ ಡಾ॥ ಪಿಳ್ಳೆ, ಭಾರತಿಯಾರ್ ಯೂನಿವರ್ಸಿಟಿ ಡಾ॥ ಡೇವಿಡ್ ಲಿವಿಂಗ್‌ಸ್ಟನ್, ಬೆಂಗಳೂರಿನಿಂದ ಪುಟ್ಟರಾಜು

ಮತ್ತು ಗೀತಾಬಾಲಿಯವರೂ ಇದ್ದರು. ಎರಡು ಸಾವಿರ ಪ್ರತಿನಿಧಿಗಳಿದ್ದ ಈ ಸಮ್ಮೇಳನ ಹದಿನಾಲ್ಕು ಸೆಕ್ಷನ್ ಹದಿನಾಲ್ಕು ಕಡೆಯಲ್ಲಿ ನಡೆಯುತ್ತಿತ್ತು. ಕೆಲವು ಮುಖ್ಯ ಮಂಡನೆಗಳನ್ನು ಬಿಟ್ಟರೆ ಬಹಳಷ್ಟು ಮಂಡನೆಗಳಲ್ಲಿ ನಾಲ್ಕಾರು ಜನರಿದ್ದರೆ ಹೆಚ್ಚು. ಅಲ್ಲಿ ಮಂಡಿಸಿದ ಪೇಪರ್‌ಗಳ ಬರಿ ಅಬ್‌ಸ್ಟ್ರಾಕ್ಟ್ ಪ್ರಿಂಟ್ ಮಾಡಿದ್ದೆ ಸಾವಿರ ಪುಟಗಳಷ್ಟಾಗುತ್ತಿತ್ತು. ಇಂತಹ ಸಮ್ಮೇಳನದ ಮುಖ್ಯ ಉದ್ದೇಶ ಅವರವರ ವಿಷಯಗಳಲ್ಲಿ ಆಸಕ್ತರಾಗಿರುವವರು ಒಂದು ಕಡೆ ಸೇರಿ ಅಲ್ಲಿಯವರಿಗೆ ಆಗಿರುವ ಪ್ರಗತಿ, ಮುಂದೆ ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ಚರ್ಚಿಸುವುದೇ ಗುರಿ. ಇದು ಬಹತೇಕ ಊಟ, ತಿಂಡಿ ಪಾನೀಯಗಳನ್ನು ಸೇವಿಸುವಾಗ ನಡೆಯುತ್ತಿದ್ದಂತಹವು. ನನ್ನ ಉದ್ದೇಶವು ಅದೇ ಆಗಿತ್ತು. ಸಾವಿರದ ಒಂಬೈನೂರು ತೊಂಬತ್ತರಲ್ಲಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಹತ್ತನೆಯ ಅಂತರರಾಷ್ಟ್ರೀಯ ಐ.ಯು.ಎಸ್.ಎಸ್.ಐ. ಕಾಂಗ್ರೆಸ್ಸಿಗೆ ಬೇಕಾಗಿದ್ದ ಸಲಕರಣೆ, ಸವಲತ್ತು, ಮುದ್ರಿಸಬೇಕಾಗಿದ್ದ ವಿಷಯಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ಮುಂದಿನ ಕಾರ್ಯಾಚರಣೆಗೆ ಅನುವು ಮಾಡುವುದಾಗಿತ್ತು.

ವ್ಯಾಂಕೂವರ್‌ನಲ್ಲಿ ನೋಡಿದ ಹಲವಾರು ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳಲ್ಲಿ ಸಾಮನ್ ಜಾತಿಯ ಮೀನು ಸಂಶೋಧನಾ ಕೇಂದ್ರ ಜ್ಞಾಪಕದಲ್ಲಿ ಅಚ್ಚಳಿಯದೆ ಇದೆ. ಸಾಮನ್ (ಸಾಲ್‌ಮನ್) ಮೀನು ಉತ್ತರ ಗೋಳಾರ್ಧಕ್ಕೆ ಸೀಮಿತವಾಗಿದ್ದು ಅಮೆರಿಕಾ, ಯೂರೋಪ್ ಮತ್ತು ಏಷ್ಯಖಂಡದ ಉತ್ತರ ಧ್ರುವದ ಕಡೆ, ಸಿಹಿ ನೀರು ಸಮುದ್ರ ಸೇರುವ ಕೊಲ್ಲಿಗಳಲ್ಲಿ ವಾಸಿಸುತ್ತವೆ. ಅಮೆರಿಕಾದ ರೆಡ್ ಇಂಡಿಯನ್ನರಿಗೆ ಬಹು ಪ್ರಿಯವಾದ ಆಹಾರ ಬೇರೆಯವರಿಗೂ ಕೂಡ ಬಯಸಿದ ಮೀನು. ಈ ಮೀನು ಗರ್ಭಕ್ಕೆ ಬರಬೇಕಾದರೆ ಐದರಿಂದ ಏಳು ವರುಷ ಬೇಕು. ಮೊಟ್ಟೆ ಇಡುವ ಸಮಯ ಬಂದಾಗ ಹರಿಯುವ ನೀರಿನ ಎದುರು ಮುಖವಾಗಿ ಎಷ್ಟೇ ರಭಸದಿಂದ ಧುಮುಕಿ ಹರಿಯುತ್ತಿದ್ದರೂ ಹತ್ತುವ ಸಾಹಸ ಇದಕ್ಕಿದೆ. ಮೊಟ್ಟೆ ಇಡುವ ಸ್ಥಳಕ್ಕೆ ಬರುವಷ್ಟರಲ್ಲಿ ಅವುಗಳ ರೆಕ್ಕೆಗಳೆಲ್ಲ ಹರಿದು ಸೊರಗಿ ಸುಸ್ತಾಗಿರುತ್ತವೆ. ಮೊಟ್ಟೆ ಇಟ್ಟನಂತರ ಪುನಃ ಹರಿಯುವ ನೀರಿನಲ್ಲಿ ಇಳಿಮುಖವಾಗಿ ತೇಲಿಹೋಗಿ ಪ್ರಾಣ ಬಿಡುತ್ತವೆ. ಇವುಗಳ ಮೊಟ್ಟೆ ಮತ್ತು ಮರಿ ಬೇರೆ ಮೀನು ಮತ್ತು ಇತರೆ ಜಲಚರ ಪ್ರಾಣಿಗಳಿಗೆ ಆಕರ್ಷಕ ಆಹಾರ. ಮೊಟ್ಟೆ ಇಡಲು ಮೇಲೆ ಹತ್ತುವಾಗ ಇವುಗಳನ್ನು ಸುಲಭವಾಗಿ ಹಿಡಿಯಬಹುದಾದ್ದರಿಂದ ಬಹಳಷ್ಟು ಮೀನುಗಾರರ ಪಾಲಾಗುತ್ತವೆ. ಹೀಗಾಗಿ ಇವುಗಳ ಸಂತತಿ ಕ್ಷೀಣಿಸುತ್ತಿದ್ದು ಕೆನಡ ಸರ್ಕಾರದವರು ಇವುಗಳನ್ನು ಸಂರಕ್ಷಿಸುವುದಕ್ಕೋಸ್ಕರ ಸಾಮನ್ ಬ್ರೀಡಿಂಗ್ ಸೆಂಟರ್ ತೆರೆದು ಲಕ್ಷಾಂತರ ಮೀನನ್ನು ಬೆಳಸಿ ಸಮುದ್ರಕ್ಕೆ ಬಿಡುತ್ತಾರೆ. ದೊಡ್ಡ ದೊಡ್ಡ ಪೈಪುಗಳ ಮುಖಾಂತರ ಹೊಳೆಯ ಬದಿಯಲ್ಲಿ ಹರಿಯುವ ನೀರನ್ನು ತಿರುವಿ ಮೀನು ಮೆಚ್ಚುವಂತಹ ರಭಸದಲ್ಲಿ ಸಮುದ್ರದ ತೀರಕ್ಕೆ ಬಿಟ್ಟಿದ್ದಾರೆ. ಮೊಟ್ಟೆ ಇಡುವ ಕಾಲದಲ್ಲಿ ಸಾಮನ್ ಮೀನುಗಳು ಈ ಕೊಳವೆಯ ಮುಖಾಂತರ ಹತ್ತಿಬಂದು ವಿಶೇಷವಾಗಿ ನಿರ್ಮಿತವಾದ ಕೊಳದಲ್ಲಿ ಬಂದು ಸೇರುತ್ತವೆ. ಅಲ್ಲಿಂದ ಮೊಟ್ಟೆ ಇಡುವ ಕೊಳಗಳಲ್ಲಿ ನಿಗದಿತ ಪ್ರಯಾಣದಲ್ಲಿ ಗರ್ಭಭರಿತ ಮೀನುಗಳನ್ನು ಬಿಡುತ್ತಾರೆ. ಮೊಟ್ಟೆ ಇಟ್ಟ ನಂತರ ಈ ಮೀನುಗಳನ್ನು ಮತ್ತೊಂದು ಕೊಳವೆಯ ಮೂಲಕ ನದಿಗೆ ಬಿಡುತ್ತಾರೆ. ಪ್ರೇಕ್ಷಕರಿಗೆ ನೋಡಲೆಂದು ದೊಡ್ಡ ದೊಡ್ಡ ಗಾಜಿನ ಕೊಳವೆಗಳನ್ನು ಕೂಡ ಜೋಡಿಸಿದ್ದಾರೆ. ದೊಡ್ಡ ದೊಡ್ಡ ಮೀನುಗಳು ಮೊಟ್ಟೆ ಇಡಲು ಮುನ್ನುಗ್ಗಿ ಬರುತ್ತಿರುವುದನ್ನು ನೋಡಲು ಕಣ್ಣಿಗೆ ಆನಂದ. ಮೊಟ್ಟೆ ಒಡೆದು ಮರಿಯಾದ ನಂತರ ನಾಲ್ಕಾರು ತಿಂಗಳು ಸಾಕಿ ಪರಭಕ್ಷಕಗಳಿಂದ ತಪ್ಪಿಸಿಕೊಳ್ಳುವ

ಚೈತನ್ಯ ಬಂದ ಮೇಲೆ ಕೊಳವೆಗಳ ಮೂಲಕ ನದಿ ಮುಖಜ ಭೂಮಿಗೆ ಹತ್ತಿರ ಬಿಡುತ್ತಾರೆ. ಒಮ್ಮೆ ಉಪ್ಪು ನೀರು ಸೇವಿಸಿದರೆ ಮುಂದೆ ಅವು ಶೀಘ್ರವಾಗಿ ಬೆಳೆಯುತ್ತವೆ. ಇದರಿಂದ ಕ್ಷೀಣಿಸುತ್ತಿದ್ದ ಸಾಮನ್ ಮೀನುಗಳನ್ನು ವೃದ್ಧಿಸುವುದರ ಜೊತೆಗೆ ಬಯಸಿದವರಿಗೆ ಹೇರಳವಾಗಿ ದೊರೆಯುವಂತಾಗಿದೆ. ನಮ್ಮಲ್ಲಿಯೂ ಪಶ್ಚಿಮ ಕರಾವಳಿ ಕಡೆಗೆ ಪಶ್ಚಿಮ ಘಟ್ಟಗಳಿಂದ ಹರಿಯುವ, ಅಡ್ಡಹಳ್ಳ, ಕೆಂಪುಹೊಳೆ ನೇತ್ರಾವತಿ ಹೊಳೆಯಲ್ಲಿರುವ ವಿಶೇಷವಾದ ಮೀನನ್ನು ಸಂರಕ್ಷಿಸಲು ಈ ಉಪಾಯ ಫಲಕಾರಿಯಾಗಬಹುದು.

1990-92ರ ಅವಧಿಯಲ್ಲಿ ನಾಲ್ಕಾರು ಬಾರಿ ಅಮೆರಿಕಾಕ್ಕೆ ಹೋಗಿದ್ದರೂ ಮೀಟಿಂಗ್ ಬಿಟ್ಟು ಮತ್ತೇನು ಅತ್ತಿತ್ತ ನೋಡದೆ ಹಿಂದಿರುಗುತ್ತಿದ್ದೆ. ಅಮೆರಿಕಾದ ನ್ಯಾಷನಲ್ ರೀಸರ್ಚ್ ಕೌನ್ಸಿಲ್ (2101 ಕಾನ್‌ಸ್ಟಿಟ್ಯೂಟಿನಲ್ ಅವಿನ್ಯೂ, ವಾಷಿಂಗ್‌ಟನ್ ಡಿ.ಸಿ. 20418) ಯೋಜಿಸಿದ್ದ ಐದು ಪ್ರಾಜೆಕ್ಟಿನಲ್ಲಿ ಒಂದಾದ ಸಸ್ಟೈನಬಲ್ ಅಗ್ರಿಕಲ್‌ಚರ್ ಮತ್ತು ನ್ಯಾಚುರಲ್ ರಿಸೋರ್ಸ್ ಮ್ಯಾನೇಜ್‌ಮೆಂಟ್‌ನಲ್ಲಿ ನಾನೊಬ್ಬ ಮೆಂಬರ್ ಆಗಿದ್ದೆ. ನಾಲ್ಕೈದು ತಿಂಗಳಿಗೊಮ್ಮೆ ಇದರ ಸಂಬಂಧವಾಗಿ ಮೀಟಿಂಗ್ ಕರೆಯುತ್ತಿದ್ದು ನನ್ನ ಪ್ರಯಾಣ ಊಟ ವಸತಿ ಎಲ್ಲವನ್ನು ಅವರೇ ಏರ್ಪಾಡು ಮಾಡುತ್ತಿದ್ದರಿಂದ ಅವರು ಹಾಕಿದ ಟೈಂ ಟೇಬಲ್ ಪ್ರಕಾರ ನಡೆಯಬೇಕಿತ್ತು. ನಂತರ 1993 ರಲ್ಲಿ ಕೊಲಂಬಸ್ ಓಹೈಓನಲ್ಲಿ ನಡೆದ ಒಂದು ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಹೋದಾಗ ಪಶ್ಚಿಮಾಭಿಮುಖವಾಗಿ ಹೋಗಿ ಪೂರ್ವಾಭಿಮುಖವಾಗಿ ಬರುವ ಅವಕಾಶ ದೊರೆಯಿತು. ಪ್ಯಾರಿಸ್‌ನಲ್ಲಿ ಒಂದು ದಿನವಿದ್ದು ವಾಷಿಂಗ್‌ಟನ್ ಮುಖಾಂತರ ಕೊಲಂಬಸ್‌ಗೆ ಹೋಗಿ ಅಲ್ಲಿ ನಡೆದ ನಾಲ್ಕುದಿನದ ಸಮ್ಮೇಳನದಲ್ಲಿ ಒಂದು ದಿನ ಊಸ್ಟರ್ ಒ.ಐ.ಆರ್.ಡಿ.ಸಿ.ಗೆ ಹೋಗುವ ಕಾರ್ಯಕ್ರಮವಿತ್ತು. 1975 ರಲ್ಲಿ ಎರಡು ವಾರಗಳ ನನ್ನ ತರಬೇತಿ ಇಲ್ಲಿಯೇ ನಡೆದಿತ್ತು. ನನ್ನ ಪ್ರೊಫೆಸರ್ ಪಾಲ್ ಓ. ರಿಚರ್‌ರವರ ಮತ್ತೊಬ್ಬ ವಿದ್ಯಾರ್ಥಿ ಪ್ರೊ॥ ನೇಮ್‌ಜಿಕ್ ಇಲ್ಲಿ ನನ್ನ ಅತಿಥೇಯರಾಗಿದ್ದರು. ಆ ಸಂದರ್ಭದಲ್ಲಿ ಓಹೈಓ ಸ್ಟೇಟ್ ಒಂದರಲ್ಲೇ 870 ಗಾಲ್ಫ್ ಕೋರ್ಸ್‌ಗಳಿದ್ದು ಅವುಗಳಲ್ಲಿ ಅನೇಕವುಗಳಿಗೆ ಬೇರು ತಿನ್ನುವ ಹುಳದ ಬಾಧೆ (White grubs) ಕಾಡಿಸುತ್ತಿತ್ತು. ನನ್ನ ಪರಿಣತೆಯು ಇದೇ ವಿಷಯದಲ್ಲಿದ್ದುದರಿಂದ ನೇಮ್‌ಜಿಕ್‌ರೊಡನೆ ಪ್ರತಿಸಂಜೆ ಒಂದಲ್ಲ ಒಂದು ಗಾಲ್ಫ್‌ಕೋರ್ಸ್‌ಗಳಿಗೆ ಭೇಟಿಕೊಟ್ಟು ಸಲಹೆಕೊಟ್ಟು ಅವರು ಏರ್ಪಡಿಸುತ್ತಿದ್ದ ಭರ್ಜರಿ ಡಿನ್ನರ್ ತಿಂದು ಹಿಂದಿರುಗುತ್ತಿದ್ದೆವು. ಹದಿನೆಂಟು ವರುಷಗಳ ನಂತರ ಪುನಃ ಇಲ್ಲಿಗೆ ಬಂದಾಗ ನನ್ನ ಹಳೇ ಸ್ನೇಹಿತರೆಲ್ಲರೂ ಇರಲಿಲ್ಲ. ನನ್ನ ಆಪ್ತರಾಗಿದ್ದ ಪ್ರೊ॥ ನೇಮ್‌ಜಿಕ್ ಮತ್ತು ಪ್ರೊ॥ ಕ್ರೂಗರ್ (1976ರಲ್ಲಿ ಯು.ಎನ್.ಡಿ.ಪಿ. ಕನ್‌ಸಲ್ಟೆಂಟ್ ಆಗಿ ಮೂರು ತಿಂಗಳು ನನ್ನ ಜೊತೆ ಬೆಂಗಳೂರಿನಲ್ಲಿ (ಯು.ಎ.ಎಸ್.) ನಲ್ಲಿ ಇದ್ದವರು ರಿಟೈರ್ ಆಗಿದ್ದರು.

ಕೊಲಂಬಸ್‌ನಲ್ಲಿ ನನ್ನ ಆಪ್ತ ಸ್ನೇಹಿತರಾದ ಡಾ॥ ಸಿ. ಎ. ಎಡ್‌ವರ್ಡ್ಸ್ ರಾಥಮ್‌ಸ್ಟಡ್ ಎಕ್ಸ್‌ಪರಿಮೆಂಟಲ್ ಸ್ಟೇಷನ್ ಬಿಟ್ಟು ಕೊಲಂಬಸ್ ಯೂನಿವರ್ಸಿಟಿ ಕೀಟಶಾಸ್ತ್ರ ವಿಭಾಗದ ಛೇರ್‌ಮೆನ್ ಆಗಿ ಬಂದಿದ್ದರು. ಇದೇ ಯೂನಿವರ್ಸಿಟಿಯಲ್ಲಿ ಜೂಆಲಜಿ ಪ್ರೊ॥ ಮಿಟ್‌ಚಲ್ ಇದ್ದರು. ಇವರು ಒಂದು ವರುಷದ ಅವಧಿಯ ಸೆಬಾಟಿಕಲ್ ರಜೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಮ್ಮ ಒಟ್ಟಿಗೆ 1978ರಲ್ಲಿ ಕೆಲಸ ಮಾಡುತಿದ್ದರು. ಅವರು

ವಾಸಿಸುತ್ತಿದ್ದದ್ದು ನಮ್ಮ ಬೀದಿಯಲ್ಲೇ. ನಮ್ಮ ಮಕ್ಕಳಿಗೆಲ್ಲ ಇವರಿಬ್ಬರು ಚಿರಪರಿಚಿತರು. ಇವರಿಬ್ಬರನ್ನು ನೋಡಿ ಕಲೆತು ಕೆಲವು ಸಮಯ ಕಾಲಕಳೆಯುವ ಹಂಬಲದಿಂದ ಇಲ್ಲಿಗೆ ಬಂದಾಗ ಇವರಿಬ್ಬರೂ ಕಾರ್ಯನಿಮಿತ್ತ ಹೊರದೇಶಕ್ಕೆ ಹೋಗಿದ್ದರು.

ಇಲ್ಲಿಂದ ಚಿಕಾಗೊಗೆ ಹೋಗಿ ಮೂರು ದಿನ ಡಾ॥ ರಾಜು ರತ್ನ, ಡಾ॥ ನಾಗರಾಜು ರೇಣು, ಮತ್ತು ಡಾ॥ ಅಪ್ಪಸ್ವಾಮಿಯವರೊಡನೆ ಕಾಲ ಕಳೆದು ಲಾಸ್‌ಏಂಜಲೀಸ್ ಮುಖಾಂತರ ಹವಾಯ್‌ಗೆ ಪ್ರಯಾಣ ಬೆಳಸಿದೆ. ಲಾಸ್‌ಏಂಜಲೀಸ್‌ನಲ್ಲಿ ನನ್ನ ಸ್ನೇಹಿತರು ಲಕ್ಷ್ಮಣ ಕಾದಿದ್ದರು. ಇವರು ಹಿಂದೆ ಚಿಕಾಗೊದಲ್ಲಿದ್ದಾಗ ಹಲವಾರು ಬಾರಿ ಇವರ ಆತಿಥ್ಯ ಪಡೆದಿದ್ದೆ. ಶಾರದೆಯೊಡನೆ 1984ರಲ್ಲಿ ಇವರ ಮನೆಯಲ್ಲಿ ಎರಡು ದಿನ ತಂಗಿದ್ದೆವು. ಲಕ್ಷ್ಮಣರ ಪತ್ನಿ ಡಾ॥ ರಮಾರವರಿಗೆ ಕ್ಯಾಲಿಫೋರ್ನಿಯಾದ ಪಾವ್‌ಡೇಲ್‌ನಲ್ಲಿ ಕೆಲಸ ಸಿಕ್ಕಿದ್ದರಿಂದ ಚಿಕಾಗೊ ಬಿಟ್ಟು ಕ್ಯಾಲಿಫೋರ್ನಿಯಾಕ್ಕೆ ಬಂದಿದ್ದರು. ಅಂದು ನನ್ನನ್ನು ನೋಡಲು ಲಕ್ಷ್ಮಣ 80 ಮೈಲಿಯಿಂದ ಬಂದಿದ್ದರು. ಲಾಸ್‌ಏಂಜಲೀಸ್‌ನಲ್ಲಿ ಅರ್ಧ ದಿವಸ ಕಾಲ ಕಳೆಯಬೇಕಾದ ಉದ್ದೇಶ ನನ್ನ ಭಾವನವರಾದ ಗುಡ್ಡದೂರು ಬೊಮ್ಮೆಗೌಡ್ರ ಮಗ ಪ್ರಸನ್ನನನ್ನು ನೋಡುವ ಹಂಬಲದಿಂದ. ಇವನು ಬೆಂಗಳೂರಿನಲ್ಲಿ ಪೈಲೆಟ್ ಟ್ರೈನಿಂಗ್ ಪಡೆದು ಹೆಚ್ಚಿನ ತರಬೇತಿಗೆ ಅಮೆರಿಕಾಕ್ಕೆ ಬಂದಿದ್ದನು. ಮುಂಚೆಯೆ ದೂರವಾಣಿ ಮುಖಾಂತರ ಇವನನ್ನು ವಿಮಾನ ನಿಲ್ದಾಣಕ್ಕೆ ಬರಲು ಹೇಳಿದ್ದೆ. ಅಂತೆಯೆ ನಾವು ಮೂವರು ಡೌನ್‌ಟೌನ್‌ಗೆ ಹೋಗಿ ಚೈನಾ ಬಜಾರಿನಲ್ಲಿ ಒಂದು ಚೈನೀಸ್ ರೆಸ್ಟೋರೆಂಟಿನಲ್ಲಿ ಊಟ ಮಾಡಿ ಪುನಃ ಇವರು ಏರ್‌ಪೋರ್ಟಿಗೆ ಬಂದು ನನ್ನನ್ನು ಬೀಳ್ಕೊಟ್ಟರು.

ಕ್ಯಾಲಿಫೋರ್ನಿಯ ಯೂನಿವರ್ಸಿಟಿಯ ಡೇವಿಸ್ ಕ್ಯಾಂಪಸ್‌ನ ಕೀಟಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಮೂಕರವರು ಅವರ ವಿದ್ಯಾರ್ಥಿನಿ ಜನ್ನಿಫರ್ ವುಡ್‌ರಿಂಗ್‌ರವರನ್ನು ಅವರ ಪಿಹೆಚ್.ಡಿ. ತರಬೇತಿಗಾಗಿ ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ನನ್ನ ಸಹಯೋಗದೊಂದಿಗೆ ಕೆಲಸ ಮಾಡಲು ಆರು ತಿಂಗಳಿಗೋಸ್ಕರ ಕಳುಹಿಸಿದ್ದರು. ಅವರ ಉದ್ದೇಶ ಭಾರತದಲ್ಲಿ ಎಂಟಮೋಫಿಲಿಕ್ ನಿಮಟೋಡ್‌ಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ವೃದ್ಧಿಪಡಿಸಿ, ಬೆಳೆ ಹಾನಿ ಮಾಡುವ ಕೀಟಗಳ ಮೇಲೆ ಪ್ರಯೋಗ ಮಾಡಿ ಉತ್ಕೃಷ್ಟವಾದವನ್ನು ಜೈವಿಕ ಹತೋಟಿಯಲ್ಲಿ ಬೆಳಸುವಂತಹದಾಗಿತ್ತು. ಜನ್ನಿಫರ್ ಬಂದ ನಂತರ ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ಎಂಟಮೋಫಿಲಿಕ್ ನಿಮಟೋಡುಗಳ ಬಗ್ಗೆ ಸಂಶೋಧನೆ ಚುರುಕುಗೊಂಡಿತೆಂದು ಹೇಳಬಹುದು. ಮುಂದೆ ನನ್ನ ವಿದ್ಯಾರ್ಥಿ ಎ. ಆರ್. ವಿ. ಕುಮಾರ್‌ರವರು ಬೇರುತಿನ್ನುವ ಹುಳುಗಳ ಮೇಲೆ (ವೈಟ್‌ಗ್ರಬ್ಸ್) ಇವುಗಳ ಪ್ರಯೋಗವನ್ನು ನೆಡೆಸಲು ಅನುಕೂಲವಾಯಿತು.

ಜನ್ನಿಫರ್‌ರವರು ಡೇವಿಸ್‌ಗೆ ವಾಪಸು ಹೋದನಂತರ ಅವಳ ಪ್ರೊಫೆಸರ್ ಮೂಕಾರವರು ಅವರ ಡಿಪಾರ್ಟ್‌ಮೆಂಟಿಗೆ ಭೇಟಿಕೊಡಲು ನನ್ನನ್ನು ಆಮಂತ್ರಿಸಿದ್ದರು. ಡೇವಿಸ್‌ಗೆ ಹತ್ತಿರ ವಿರುವ ಸ್ಟಾಕ್‌ಟನ್‌ನಲ್ಲಿ ನನ್ನ ಆಪ್ತ ಸ್ನೇಹಿತರು ಜಿ. ಹಾಲಪ್ಪನವರು ಇದ್ದರು. ಈ ಹಿಂದೆಯೆ ಇವರಲ್ಲಿಗೆ ಒಮ್ಮೆ ಭೇಟಿಕೊಟ್ಟಿದ್ದಾಗ ಸಾನ್‌ಫ್ರಾನ್ಸಿಸ್ಕೊ ನಗರದಲ್ಲೆಲ್ಲಾ ಅಡ್ಡಾಡಿಸಿದ್ದರು. ನಮ್ಮ ಯೂನಿವರ್ಸಿಟಿ ಪ್ರಾರಂಭದಲ್ಲಿ ನಾವಿಬ್ಬರೂ ಎದುರುಬದುರು ಮನೆಯಲ್ಲಿ ಹೆಬ್ಬಾಳ

ಫಾರಂನಲ್ಲಿದ್ದೆವು. ಅವರ ದೊಡ್ಡಮಗಳು ನಾಲ್ಕೈದು ವಯಸ್ಸಿನ ಅನಿತ ಬಹಳ ಸಮಯವನ್ನು ನಮ್ಮ ಮನೆಯಲ್ಲಿಯೇ ಕಳೆಯುತ್ತಿದ್ದಳು. ಈಗ ಆಕೆ ಮದುವೆಯಾಗಿ ನಮ್ಮ ಯೂನಿವರ್ಸಿಟಿ ವಿದ್ಯಾರ್ಥಿಯೇ ಆಗಿದ್ದ ಅವಳ ಗಂಡನ ಜೊತೆ, ಡೇವಿಸ್‌ನಲ್ಲಿ ಹೆಚ್ಚಿನ ವ್ಯಾಸಂಗ ಮಾಡುತ್ತಿದ್ದಳು. ಡೇವಿಸ್‌ಗೆ ಹೋಗಲು ಇವರೆಲ್ಲರ ಪ್ರೇರಣೆಯೂ ಇತ್ತು.

ಡೇವಿಸ್‌ಗೆ ನಾನು ಹೋದಾಗ ಜನ್ನಿಫರ್ ವುಡ್‌ರಿಂಗ್ ಪಿಹೆಚ್.ಡಿ.ಯನ್ನು ಪೂರೈಸಿ ಅವರ ಪತಿಯೊಂದಿಗೆ ದಕ್ಷಿಣ ಅಮೆರಿಕಾಕ್ಕೆ ಹೋಗುವುದರಲ್ಲಿದ್ದರು. ಪ್ರೊ॥ ಮೂಕಾರವರು ಅವರ ಮನೆಯಲ್ಲಿ ಏರ್ಪಡಿಸಿದ್ದ ಔತಣ ಕೂಟದಲ್ಲಿ ವುಡ್‌ರಿಂಗ್ ದಂಪತಿಗಳು ಮತ್ತು ಮೂಕಾರವರ ಇಬ್ಬರು ಸಹೋದ್ಯೋಗಿಗಳು ಸೇರಿದಂತೆ ಎಂಟು ಹತ್ತು ಜನ ಅಂದು ಮಧ್ಯ ರಾತ್ರಿಯವರೆಗೆ ಕಾಲ ಮಾತುಕತೆಯಲ್ಲಿ ಕಳೆದೆವು. ಪ್ರೊ॥ ಮೂಕಾರವರು ಜಪಾನಿನಿಂದ ವಿದ್ಯಾರ್ಥಿಯಾಗಿ ಬಂದು ಅಲ್ಲಿಯೇ ವೃತ್ತಿಯನ್ನವಲಂಬಿಸಿ ಅಮೆರಿಕನ್ ಆಗಿದ್ದರೂ, ಅವರ ಮೂಲವನ್ನು ಬಿಟ್ಟಿರಲಿಲ್ಲ. ಜನ್ನಿಫರ್ ಇಲ್ಲಿದ್ದ ಆರು ತಿಂಗಳಲ್ಲಿ ಅವರ ವಿಷಯದಲ್ಲಲ್ಲದೆ, ನಮ್ಮದನ್ನು ಎಷ್ಟು ತಿಳಿದಿದ್ದಳೆಂದರೆ ಅವಳೊಂದಿಗೆ ಅಂದು ಮನಬಿಚ್ಚಿ ಮಾತನಾಡುವಾಗಲೇ ಗೊತ್ತಾಗಿದ್ದು. ಇಲ್ಲಿರುವ ತನಕ ಅವಳು ಯಾರ ಬಗ್ಗೆ ಏನನ್ನೂ ಹೇಳಿದ್ದಿಲ್ಲ. ಪುನಃ ಅವಳನ್ನು ಡೇವಿಸ್‌ನಲ್ಲಿ ಸಂಧಿಸದಿದ್ದರೆ ಅವಳು ಮನಬಿಚ್ಚಿ ಮಾತನಾಡದಿದ್ದರೆ ನಮ್ಮನ್ನು ಮತ್ತು ನಮ್ಮ ಪರಿಸರವನ್ನು ಹೇಗೆ ಅರ್ಥಮಾಡಿಕೊಂಡಿದ್ದಳೆಂದು ತಿಳಿಯುತ್ತಿರಲಿಲ್ಲ. ಬಹಳಷ್ಟು ಹೊರದೇಶದವರು ನಮ್ಮಲ್ಲಿಗೆ ಬಂದಾಗ ನಮ್ಮನ್ನು ಹೊಗಳಿ ಹೊನ್ನಶೂಲಕ್ಕೇರಿಸುವರು. ಆದರೆ ವೈಯಕ್ತಿಕವಾಗಿ ಅವರ ಅಭಿಪ್ರಾಯವೇ ಬೇರೆ. ಯಾವ ಒಂದು ಫಲಾಪೇಕ್ಷೆ ಇಲ್ಲದ ಅವರ ಗ್ರಹಿಕೆ, ವ್ಯಕ್ತಿಯದ್ದಾಗಲಿ ಅಥವಾ ಪರಿಸರದ್ದಾಗಲಿ ಬಹುಮಟ್ಟಿಗೆ ನಿಖರವಾಗಿರುವುದೆಂದು ನನ್ನ ಅಭಿಪ್ರಾಯ.

ಹವಾಯ್‌ನಲ್ಲಿ ಮೂರು ದಿನ ಈಸ್ಟ್‌ವೆಸ್ಟ್ ಸೆಂಟರಿನಲ್ಲಿ ನನ್ನ ಕಾರ್ಯಕ್ರಮವಿತ್ತು. ಇಲ್ಲಿಯೂ ಕೂಡ ನಮ್ಮ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರು. ಅವರಲ್ಲಿ ಡಾ॥ ಆರಾಧ್ಯ ಮತ್ತು ಡಾ॥ ಕೃಷ್ಣಕುಮಾರ್ ಹೊನಲೂಲು ವಿಮಾನ ನಿಲ್ದಾಣದಲ್ಲಿ ಕಾದಿದ್ದು ಕರೆದುಕೊಂಡು ಹೋದರು. ಕೃಷ್ಣಕುಮಾರ್ ಮನೆಯಲ್ಲಿ ಮೂರು ದಿವಸ ಊಟ ತಿಂಡಿ ಸಮರ್ಪಕವಾಗಿ ನಡೆಯುತ್ತಿತ್ತು. ಯು.ಎ.ಎಸ್. ಬೆಂಗಳೂರಿಂದ ಹತ್ತಾರು ವಿದ್ಯಾರ್ಥಿಗಳು ಸೇರಿ ಒಂದು ಸಂಜೆ ನನಗಾಗಿ ಒಂದು ಔತಣವನ್ನು ಏರ್ಪಡಿಸಿದ್ದರು. ಅಂದು (13-4-1993) ಥಾಮಸ್ ಜಫರ್‌ಸನ್‌ರವರ 250ನೇ ಹುಟ್ಟು ಹಬ್ಬವೂ ಆಗಿತ್ತು. ಉಪಾಧ್ಯಾಯ ವೃತ್ತಿಯಲ್ಲಿ ಗಳಿಸಿದ ಅತಿ ದೊಡ್ಡ ಹೆಗ್ಗಳಿಕೆ ಎಂದರೆ ನನ್ನ ವಿದ್ಯಾರ್ಥಿ ಸಮೂಹ. ಅದರಲ್ಲೂ ಬೆಂಗಳೂರು ಕೃಷಿವಿಶ್ವವಿದ್ಯಾನಿಲಯದಲ್ಲಿ ಮೂರು ದಶಕಗಳಿಂದ ಹೊರಬಂದ ವಿದ್ಯಾರ್ಥಿಗಳು ಪ್ರಪಂಚದ ಮೂಲೆ ಮೂಲೆಯಲ್ಲಿ ಹರಡಿದ್ದಾರೆ. ಅವರಿಗೆ ಹೇಗೊ ಅವರುಗಳ ಪ್ರೊಫೆಸರ್‌ಗಳ ವಿದೇಶಯಾತ್ರೆಯ ಸುಳಿವು ಸಿಕ್ಕುತ್ತಿತ್ತು. ಅವರನ್ನು ಸಂಧಿಸಿ ಅವರುಗಳು ಓದಿದ್ದ ಕಾಲೇಜು, ಅಲ್ಲಿಯ ಸಿಬ್ಬಂದಿ, ಅವರಿಗೆ ಪಾಠ ಹೇಳಿಕೊಟ್ಟ ಉಪಾಧ್ಯಾಯರ ಯೋಗಕ್ಷೇಮ ಎಲ್ಲವನ್ನು ತಿಳಿಯುವ ಹಂಬಲ ಇವರೆಲ್ಲರಿಗೆ ಇರುತ್ತದೆ. ಇವರುಗಳ ಮಧ್ಯೆ ಕಾಲಕಳೆದಿದ್ದೇ ಗೊತ್ತಾಗುವುದಿಲ್ಲ.

ಪ್ರಪಂಚದಾದ್ಯಂತ ಹಣ್ಣು ತರಕಾರಿಗಳಿಗೆ ಬಾಧಿಸುವ ಫ್ರೂಟ್ ಫ್ಲೈ ನಿಯಂತ್ರಣದಲ್ಲಿ ಹವಾಯಿ ದ್ವೀಪ ಹೆಸರುಗಳಿಸಿತ್ತು. ಇಲ್ಲಿಗೆ ಬಂದ ಉದ್ದೇಶಗಳಲ್ಲಿ ಫ್ರೂಟ್ ಫ್ಲೈ ಲ್ಯಾಬೊರೇಟರಿ ನೋಡುವುದು ಒಂದು ಮುಖ್ಯವಾಗಿತ್ತು. ಟ್ರಾಪಿಕಲ್ ಫ್ರೂಟ್ ಮತ್ತು ವೆಜಿಟಬಲ್ ಲ್ಯಾಬೊರೇಟರಿಯಲ್ಲಿ ಒಂದು ಬಗೆಯ ನೊಣದ ಜಾತಿಗೆ ಸೇರಿದ ಡೇಕಸ್ ಎಂಬ ಮೆಡಿಟರೇನಿಯನ್ ಫ್ರೂಟ್ ಫ್ಲೈಗಳನ್ನು ಕೋಟ್ಯಾಂತರ ಸಂಖ್ಯೆಯಲ್ಲಿ ವೃದ್ಧಿಸಿ, ಇರಡೇಷನ್ ಕಿರಣಗಳಿಗೆ ಗುರಿಪಡಿಸಿ ಹಣ್ಣು ಮತ್ತು ತರಕಾರಿ ತೋಟಗಳಲ್ಲಿ ಬಿಡುತ್ತಿದ್ದರು. ಇರಡೇಷನ್ ಕಿರಣಗಳಿಗೆ ಗುರಿಪಡಿಸಿದ ಫ್ರೂಟ್ ಫ್ಲೈ ಸ್ವಾಭಾವಿಕವಾಗಿ ವೃದ್ಧಿಸಿದ ಫ್ರೂಟ್ ಫ್ಲೈಗಳೊಂದಿಗೆ ಲೈಂಗಿಕ ಸಂಪರ್ಕ ಹೊಂದಿದಾಗ ಸಂತಾನ ನಿಯಂತ್ರಣವಾಗುತ್ತಿತ್ತು. ಈ ಬಗೆಯ ಕೀಟ ಹತೋಟಿ ಹವಾಯಿಯಂತಹ ದ್ವೀಪಗಳಲ್ಲಿ ಯಶಸ್ವಿಯಾಗುತಿತ್ತು.

ಹವಾಯ್, ಹಣ್ಣು ಬೆಳೆಗೆ ಅಗ್ರಸ್ಥಾನ ಪಡೆದಿದೆ. ಸಾವಿರಾರು ಎಕರೆಯಲ್ಲಿ ಬೆಳೆಯುವ ಪೈನಾಪಲ್ ಕೃಷಿ ನೋಡಲು ಕಣ್ಣಿಗೆ ಆನಂದ. ಅದರ ಕೃಷಿ ಮತ್ತು ಕೊಯಿಲು ಯಂತ್ರಗಳಿಂದಲೇ. ಉತ್ತರ ಕರ್ನಾಟಕ ಬಯಲು ಪ್ರದೇಶದಲ್ಲಿ ಬೆಳೆದ ಜೋಳವನ್ನು ಮೈಲುಗಟ್ಟಲೆ ಕಣ್ಣಾಡಿಸಿ ನೋಡುವಂತೆ ಇಲ್ಲಿ ಪೈನಾಪಲ್ ಬೆಳೆ ನೋಡಬಹುದು. ಡೆಲ್‌ಮಾಂಟೆ ಮತ್ತು ಡೋಲ್ ಪೈನಾಪಲ್ ರಿಸರ್ಚ್ ಇನ್‌ಸ್ಟಿಟ್ಯೂಟಿಗೆ ಭೇಟಿ ಕೊಟ್ಟ ನಂತರ ಸಮೀಪದಲ್ಲಿದ್ದ ಬೀಚಿಗೆ ಹೋಗಿ ಅಲ್ಲಿ ಸಾವಿರಾರು ಜನ ಭಾವ ಬಂಗಿಯಿಂದ ಈಜಿ ಬಂದು ಮರಳ ಮೇಲೆ ಮಲಗಿ ತಿಂದು ಕುಡಿದು ಹೊರಳಾಡುವ ದೃಶ್ಯವನ್ನು ಕಂಡೆವು. ಸಂಜೆ ಪಾಲಿನೇಷಿಯನ್ ಕಲ್‌ಚರಲ್ ಸೆಂಟರಿಗೆ ಹೋಗಿ ಪಾಲಿನೇಷಿಯಗಳಾದ ಸಮೊವ, ನ್ಯೂಜಿಲೆಂಡ್, ಫಿಜಿ, ಹವಾಯ್, ಮಾರ್‌ಕ್ಯೂಸಸ್, ತಹಿತಿ ಮತ್ತು ಟೊಂಗಾಗಳ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿದೆವು.

ಪಾಲಿನೇಷಿಯ ಟ್ರಯಾಂಗಲ್, ಹಾವಾಯಿ ದ್ವೀಪ, ನ್ಯೂಜಿಲ್ಯಾಂಡ್ ಮತ್ತು ಈಸ್ಟರ್ ಐಲಾಂಡ್ ತ್ರಿಕೋಣ ಮೂರು ಮೂಲೆಗಳಲ್ಲಿದ್ದು ಪೆಸಿಫಿಕ್ ಸಾಗರದ ಮಧ್ಯೆ ಏಷ್ಯ, ಆಸ್ಟ್ರೇಲಿಯ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನ ತ್ರಿಕೋಣದ ಮಧ್ಯೆ ಬರುತ್ತವೆ. ನಮ್ಮ ಭಾರತದಲ್ಲಿ ಆಡುವ ಭಾಷೆ 1624 ಇದ್ದರೆ ಪಾಲಿನೇಷ್ಯದಲ್ಲಿ ಅದೆಷ್ಟಿವೆಯೆಂದು ಊಹಿಸಲು ಸಾಧ್ಯವಿಲ್ಲ. ಆದರೆ ಅವರ ನೃತ್ಯ ಸಂಗೀತಗಳ ಬೇರು ಒಂದೇ ಎಂದು ತೋರುತ್ತದೆ. ನಮ್ಮ ದೇಶದ ಯಾವುದಾದರೂ ಒಂದು ಭಾಗದ ಕಲೆ ನೃತ್ಯ ಸಂಗೀತ ಇದಕ್ಕೆ ಹೋಲಿಸುವುದಾದರೆ ಉತ್ತರ ಪೂರ್ವ ಪ್ರಾಂತದ ಗುಡ್ಡಗಾಡು ಜನರ ನೃತ್ಯ ಕಲೆಗೆ ಹೋಲಿಸಬಹುದು.

ಹವಾಯ್‌ನಲ್ಲಿ ಜಪಾನಿಯರ ಆಚಾರ ವ್ಯವಹಾರ ಉಡಿಗೆ ತೊಡಿಗೆ ಊಟ ಉಪಚಾರಗಳು ಹಾಸುಹೊಕ್ಕಾಗಿ ಎದ್ದು ಕಾಣುತ್ತವೆ. ಮರುದಿನ ಹವಾಯಿ ಎಂ.ಓ.ಎ (ಮೊಕುಚಿ ಓಕಾಡ ಅಸೋಸಿಯೇಷನ್) ಸೆಂಟರಿನ ಮುಖ್ಯಸ್ಥ ಒಗಾಟರವರು ಒಂದು ಔತಣ ಕೂಟ ಏರ್ಪಡಿಸಿದ್ದರು. ಜಾಪನೀಸ್ ರೆಸ್ಟೋರೆಂಟ್ ಇಜಾಕಿಯ ನಾನ್ ಬಿ. ದಲ್ಲಿ ನಡೆದ ಈ ಔತಣಕೂಟದಲ್ಲಿ ನನಗೆ ಒಂದೆಯೇ ಪರಿಚಯವಿದ್ದ ಒಗೆಟಾ ಮತ್ತು ಕವಸಾಕಿಯರು ನನ್ನ ಇಕ್ಕೆಲದಲ್ಲಿ ಕುಳಿತಿದ್ದರು. ಸುಮಾರು ಮೂವತ್ತಕ್ಕೂ ಮೀರಿದ ಜಾಪನೀಸ್ ಭಕ್ಷ್ಯಗಳನ್ನು ತಯಾರುಮಾಡುವ ಮತ್ತು ತಿನ್ನುವ ವಿಧಾನಗಳನ್ನು ಆಗಾಗ ವಿವರಿಸುತ್ತಿದ್ದರು.

ಹತ್ತಾರು ಬಗೆಯ ಮೀನು, ಸೀಗಡಿ, ಏಡಿಗಳನ್ನು ಪಕ್ಕದ ಒಂದು ಬುಟ್ಟಿಯಲ್ಲಿ ಟೇಬಲ್ ಮೇಲೆ ಇಟ್ಟಿರುತ್ತಾರೆ. ಟೇಬಲ್ ಮಧ್ಯದಲ್ಲಿ ಉರಿಯುತ್ತಿರುವ ಒಂದು ಸ್ಟೌವ್ ಅದರ ಮೇಲೆ ಪಾತ್ರೆಯಲ್ಲಿ ಕಾದು ಮರುಳುತಿದ್ದ ನೀರು. ಎಡಪಕ್ಕದಲ್ಲಿ ಒಂದು ಟ್ರೇಯಲ್ಲಿ ವಿವಿಧ ಬಗೆಯ ಸಾಸ್‌ಗಳು. ಎರಡು ಕಡ್ಡಿಗಳಿಂದ ಅವರವರಿಗೆ ಬೇಕಾದ ಮೀನು, ಸೀಗಡಿ, ಏಡಿ ಅಥವಾ ಮತ್ತಾವುದೋ ಸಮುದ್ರದಲ್ಲಿ ದೊರೆಯುವ ಮೀನಿನಂತಹ ಪ್ರಾಣಿಗಳನ್ನು ತೆಗೆದು ಕುದಿಯುತ್ತರುವ ನೀರಿನಲ್ಲಿ ಒಂದೆರಡು ನಿಮಿಷ ಅದ್ದಿ ತಟ್ಟೆಯ ಮೇಲಿಟ್ಟು, ಅದಕ್ಕೆ ರುಚಿಸುವಂತಹ ಸಾಸ್ ಹಾಕಿ ತಿನ್ನುವುದು ಪದ್ಧತಿ. ಈ ಬಗೆಯ ಡಿನ್ನರ್ ಕನಿಷ್ಠ ಎರಡು ಗಂಟೆಗಳ ಕಾಲವಾದರೂ ನಡೆಯುತ್ತದೆ. ನಾವು ಪ್ರಾರಂಭಿಸಿದ್ದು ಸಂಜೆ 5.45 ಗಂಟೆಗೆ ಮುಕ್ತಾಯ ವಾದದ್ದು 9.00 ಗಂಟೆಗೆ. ಊಟದ ನಂತರ ಸುಮಾರು ರಾತ್ರಿ ಹತ್ತು ಗಂಟೆಯ ಸಮಯದಲ್ಲಿ ರಾತ್ರಿಯಲ್ಲಿ ಹೊನಲೂಲು ನೋಡಲು ವೈಕಿಂಗ್ ಬೀಚ್‌ರೋಡ್ ಮುಖಾಂತರ ವೈಕಿಂಗ್ ಮತ್ತು ಡೈಮಂಡ್ ಹೆಡ್‌ಗೆ ಹೋದೆವು. ಅದೊಂದು ರಮಣೀಯವಾದ ದೃಶ್ಯ. ಹಲವಾರು ಬಾರಿ ರಾತ್ರಿ ಹೊತ್ತು ವಿಮಾನದಲ್ಲಿ ಇಳಿಯುವಾಗ ದೊಡ್ಡ ದೊಡ್ಡ ನಗರಗಳಾದ ಲಂಡನ್ ನ್ಯೂಯಾರ್ಕ್, ಚಿಕಾಗೊ, ಲಾಸ್ ಏಂಜಲೀಸ್,ಟೋಕಿಯೊ, ಸಿಡ್ನಿ ಮುಂತಾದ ನಗರಗಳನ್ನು ನೋಡಿದ್ದೇನೆ. ಆದರೆ ವೈಕಿಂಗ್ ಮತ್ತು ಡೈಮಂಡ್ ಹೆಡ್‌ನಲ್ಲಿ ನಿಂತು ಹೊನಲು ಬೆಳಕಿನಲ್ಲಿ ಹೊನಲೂಲು ಕಾಣುವ ಸುಂದರ ದೃಶ್ಯವನ್ನು ಅನುಭವಿಸಿರಲಿಲ್ಲ.

ಮತ್ತೊಂದು ಮರೆಯಲಾಗದ ದೃಶ್ಯ ಡೈಮಂಡ್ ಹಾರಬರ್‌ಗೆ ಹೋಗಿದ್ದು. ಎರಡನೇ ಮಹಾಯುದ್ಧದಲ್ಲಿ ಜಪಾನಿಯರು ಅಮೆರಿಕನ್ನರಿಗೆ ಅಚ್ಚರಿಯನ್ನುಂಟು ಮಾಡುವಂತೆ ಡೈಮಂಡ್ ಹಾರ್‌ಬರ್ ಮೇಲೆ ದಾಳಿ ನಡೆಸಿ ನಲವತ್ತಕ್ಕೂ ಮಿಗಿಲಾಗಿ ಹಡಗುಗಳನ್ನು ಮುಳುಗಿಸಿದ ದೃಶ್ಯ ಇಂದಿಗೂ ಕೆಲವು ಜೀವಂತವಾಗಿ ಕಾಣುತ್ತವೆ. ಅಲ್ಲಲ್ಲಿ ಸಮುದ್ರದಲ್ಲಿ ಗುಳ್ಳೆಗಳು ಮೇಲೆ ಬರುತ್ತಿರುವ ದೃಶ್ಯ ಅದರೊಂದಿಗೆ ಎಣ್ಣೆ ಬಂದು ತೇಲುತ್ತಿರುವುದು ಕಾಣಬಹುದು. ಇವುಗಳನ್ನು ವೀಕ್ಷಿಸಲೆಂದೇ ವಿಶೇಷವಾಗಿ ನಿರ್ಮಿತವಾದ ಸೇತುವೆಗಳ ಮೇಲೆ ಹೋಗಿ, ದಾಳಿ ಮಾಡಿದ ದೃಶ್ಯ ನಂತರದ ದಾರುಣ ಕತೆಯನ್ನು ವಸ್ತುಪ್ರದರ್ಶನದಲ್ಲಿ ಜೀವಂತವಾಗಿರುವಂತೆ ತೋರಿಸುವ ವಿಡಿಯೋ, ಸ್ಪೆಶಲ್ ಫಿರಂಗಿಗಳಲ್ಲಿ ಜೀವಂತ ಮಾನವರನ್ನು ತುಂಬಿ ಕಳುಹಿಸುತ್ತಿದ್ದ ಸೂಯಿಸೈಡ್ ಸ್ಕ್ವಾಡ್ ಎಲ್ಲವೂ ಯುದ್ಧ ಕಾಲದಲ್ಲಿ ಗೆಲ್ಲುವ ಒಂದೇ ದೃಷ್ಟಿಯಿಂದ ಮಾನವ ಮೃಗಗಳಿಗಿಂತ ಹೇಗೆ ಹೀನಾಯವಾಗಬಹುದೆಂದು ಇಲ್ಲಿ ಕಾಣಬಹುದು. ಇದರಿಂದ ಸಾವು ನೋವನ್ನು ಅನುಭವಿಸಿದ ಅಮೆರಿಕನ್ನರಿಗೆ, ಹೆಡೆಯ ಮೇಲೆ ಕಾಲಿಟ್ಟ ಹಾವಿನಂತೆ ಕೆರಳಿ ಹಿರೋಷಿಮ, ನಾಗಸಾಕಿಗಳ ಮೇಲೆ ಅಣುಬಾಂಬ್ ಹಾಕಲು ಪ್ರಚೋದನೆ ನೀಡಿತು. ಇಂದಿಗೂ ಇಲ್ಲಿ ನರಳುತ್ತಿರುವ ಲಕ್ಷಾಂತರ ಜನರ ನಿಟ್ಟುಸಿರು ಜ್ವಾಲೆಯಾಗಿ ಎಂದು ಹತ್ತಿಕೊಳ್ಳುವುದೋ ತಿಳಿಯದು.

ಹೊನಲೂಲು ಬಿಟ್ಟು ಟೋಕಿಯೋ ಮುಖಾಂತರ ಬಾಂಕಾಕ್ ತಲುಪಲು ಹದಿನೆಂಟು ಗಂಟೆಗಳ ಕಾಲ ಹಿಡಿಯಿತು. ಇಷ್ಟರಲ್ಲಿ ಆಗಲೆ ಒಂದು ದಿನ ಕ್ಯಾಲೆಂಡರಿನಿಂದ ಮಾಯೆಯಾಗಿತ್ತು. ಈ ಅವಧಿಯಲ್ಲಿ ರಾತ್ರಿಯನ್ನೇ ನೋಡಲಿಲ್ಲ. ಎರಡು ಊಟ ಎರಡು ತಿಂಡಿ ಹಗಲಿನಲ್ಲೇ ಮಾಡಿದ್ದಾಯಿತು. ಬಾಂಕಾಕ್ ವಿಮಾನ ನಿಲ್ದಾಣದಲ್ಲಿ ಎಮ್.ಒ.ಎ. ಆಫೀಸಿನವರು ಕಾದಿದ್ದರು.

ಎರಡು ದಿನ ಇವರ ಅತಿಥಿಯಾಗಿದ್ದೆ. ಸುಖಿಮ್‌ವಿತ್‌ನ ನಂ. ಹನ್ನೆರಡು, ನಾನಾನುವ ಗ್ರೇಸ್ ಹೋಟೆಲ್‌ನಲ್ಲಿ ಇರಿಸಿದ್ದರು. ಇಂದು ಐ.ಸಿ.ಎ.ಆರ್. ಡೈರೆಕ್ಟರ್ ಜನರಲ್ ಆಗಿರುವ ಡಾ॥ ಪರೋಡರವರು ಬಾಂಕಾಕ್‌ನಲ್ಲಿ ಎಫ್.ಎ.ಓ. ಸಂಸ್ಥೆಯಲ್ಲಿ ಇದ್ದರು. ಅವರನ್ನು ಭೇಟಿ ಮಾಡಿ ಭಾರತಕ್ಕೆ ಒಪ್ಪುವಂತಹ ಕೃಷಿ ತಜ್ಞತೆಯನ್ನು ಸುಧಾರಿಸುವ ಮಾರ್ಗದ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡೆವು.

ಈ ಮೂರು ವಾರಗಳ ಒಂದು ಸುತ್ತು ಪ್ರಪಂಚ ಪರ್ಯಟನೆ ಪ್ರಯಾಸವಾಗಿದ್ದರೂ ಮನಸ್ಸಿಗೆ ನೆಮ್ಮದಿ ತರುವಂತಹದಾಗಿದ್ದು, ಹಲವಾರು ಹೊಸ ಹೊಸ ವಿಚಾರಗಳು ಅನುಭವದ ಅಖಂಡದಲ್ಲಿ ಅಡಕವಾಗಿವೆ.

* * * *

ನನ್ನ ಮೊದಲ ಜಪಾನ್ ಪ್ರವಾಸ 1988ರಲ್ಲಿ. ಕಿಯೋಟೊ ಯೂನಿವರ್ಸಿಟಿ ಆಹ್ವಾನದ ಮೇಲೆ ಹೋಗಿದ್ದೆ. ಟೋಕಿಯೋದ ನಾರಿಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹನೇಡ ನಿಲ್ದಾಣಕ್ಕೆ ಬಸ್ಸಿನಲ್ಲಿ ಹೋಗಿ ಅಲ್ಲಿಂದ ಕಿಯೋಟೊಕ್ಕೆ ಹತ್ತಿರದ ವಿಮಾನ ನಿಲ್ದಾಣ ಒಸಾಕಾಕ್ಕೆ ಹೋದಾಗ ಡಾ॥ ಹಿರೊಹಿಕಿ ವಾಟನಾಬೆ ಕಾದಿದ್ದರು. ಇಲ್ಲಿಂದ ಪುನಃ ಬಸ್ಸಿನಲ್ಲಿ ನಲವತ್ತು ಮೈಲಿ ಪ್ರಯಾಣ ಉದ್ದಕ್ಕೂ ಪಟ್ಟಣವನ್ನು ಬಿಟ್ಟರೆ ಮತ್ತೇನನ್ನು ನೋಡಲಿಲ್ಲ. ಜಪಾನಿನಲ್ಲಿ ಬಸ್ಸುಗಳು ಕಾರುಗಳಷ್ಟೆ ಸ್ವಚ್ಛವಾಗಿರುತ್ತವೆ. ಅಷ್ಟೆ ಸುಲಲಿತವಾಗಿರುತ್ತವೆ.

ಟೋಕಿಯೋ ಯೂನಿವರ್ಸಿಟಿ ರಾಜಕೀಯ ಧುರೀಣರನ್ನು ತಯಾರು ಮಾಡಿದರೆ ಕಿಯೋಟೊ ಯೂನಿವರ್ಸಿಟಿ ನೋಬಲ್ ಪಾರಿತೋಷಕಗಳನ್ನು ಗಳಿಸುವಂತಹ ವಿಜ್ಞಾನಿಗಳನ್ನು ತಯಾರು ಮಾಡುತ್ತದೆ. ಇಷ್ಟರವರೆಗೆ ಈ ಯೂನಿವರ್ಸಿಟಿಯಿಂದ ಐದು ನೋಬಲ್ ಪಾರಿತೋಷಕ ಪಡೆದ ವಿಜ್ಞಾನಿಗಳಿದ್ದಾರೆ. ಕಿಯೋಟೊ ಸಾವಿರ ವರುಷಕ್ಕೂ ಮೀರಿ ಜಪಾನಿನ ರಾಜಧಾನಿಯಾಗಿತ್ತು. ಹದಿನೈದು ಲಕ್ಷ ಜನಸಂಖ್ಯೆ ಉಳ್ಳ ಜಪಾನಿನ ಆರನೆ ದೊಡ್ಡ ಪಟ್ಟಣವೆನಿಸಿಕೊಂಡಿರುವ ಕಿಯೋಟೊದಲ್ಲಿ 1600 ಮಂದಿರಗಳು, 1200 ಬ್ಯಾಂಕುಗಳು ಇವೆ. ಸಾವಿರ ವರುಷಕ್ಕೆ ಮೀರಿ ರಾಜಧಾನಿಯಾಗಿತ್ತೆಂದರೆ ರಾಜರುಗಳು ಮೆರೆದು ಬಿಟ್ಟಿರುವ ಕುರುಹುಗಳಿಗೇನು ಕಡಿಮೆಯಿಲ್ಲ. ಮೂರು ಕಡೆಯೂ ಮೂರು ಸಾವಿರ ಅಡಿ ಎತ್ತರಕ್ಕೆ ಇರುವ ಬೆಟ್ಟಗಳು ಸುತ್ತುವರಿದು ಸಿಟಿ ಮಧ್ಯೆಯಲ್ಲಿ ಕಾಮೊ ಹೊಳೆ ರಭಸದಿಂದ ಹರಿಯುತ್ತಿರುವ ದೃಶ್ಯ ಪಶ್ಚಿಮ ಘಟ್ಟಗಳ ಮಧ್ಯೆ ಕುಳಿತು ತಿಳಿಯಾದ ರಭಸದಿಂದ ಪಳಪಳನೆ ಹರಿಯುವ ನದಿ ದಂಡೆ ಮೇಲೆ ಕುಳಿತಂತೆ ಭಾಸವಾಗುತ್ತದೆ. ಸಂಜೆ ಹೊತ್ತು ಸಾವಿರಾರು ಜನ ನದಿಯ ಇಕ್ಕೆಲದ ದಂಡೆಗಳಲ್ಲಿ ಕುಳಿತು ಮೋಜು ಮಾಡುತ್ತಿರುತ್ತಾರೆ. ಎಲ್ಲಿಯೂ ತಿಂಡಿ ತಿನಸುಗಳನ್ನು ತಿಂದು ಬಿಸಾಡಿದ್ದಾಗಲಿ ಸಿಗರೇಟು ಬೀಡಿ ತುಂಡುಗಳು ಬಿದ್ದದ್ದು ಕಾಣಲಿಲ್ಲ. ಜಪಾನಿಯರ ಮುದ್ದಾದ ಮಕ್ಕಳನ್ನು ನೋಡಲು ಆನಂದ. ಅವುಗಳೂ ಕೂಡ ಮನಸ್ಸು ಬಂದಲ್ಲಿ ಕೊಳಚೆ ಮಾಡುವುದಿಲ್ಲ. ಚಿಕ್ಕಂದಿನಿಂದಲೇ ಬೆಳೆಸಿಕೊಂಡು ಬಂದ ಈ ಶಿಸ್ತು ನಿರ್ನಾಮವಾಗಿದ್ದ ದೇಶ ಕೇವಲ ನಲವತ್ತು ವರುಷಗಳಲ್ಲಿ ಪ್ರಪಂಚದ ಬೃಹತ್ ರಾಷ್ಟ್ರಗಳಲ್ಲೊಂದಾಗಿ ಮೆರೆಯುತ್ತಿರುವುದು. ನೈಸರ್ಗಿಕ ಸಂಪನ್ಮೂಲಗಳು ಕಡಿಮೆ ಇದ್ದರೂ ವರುಷದಲ್ಲಿ ಅರ್ಧಭಾಗದಲ್ಲಿ ಏನನ್ನು ಬೆಳೆಯಲಾಗ

ದಿದ್ದರೂ ಶಿಸ್ತು ಶ್ರಮದ ಜೀವನದಿಂದ, ಪ್ರಪಂಚದ ಏಳು ಅತಿ ಐಶ್ವರ್ಯ ಉಳ್ಳ ಔದ್ಯೋಗಿಕ ವಾದ ರಾಷ್ಟ್ರಗಳಲ್ಲಿ ಒಂದಾಗಿದೆ.

ಕಿಯೋಟೊ ನಗರದಲ್ಲಿ ಯಾರೂ ಮೂರು ಅಂತಸ್ತಿಗಿಂತ ಹೆಚ್ಚಿಗೆ ಮನೆ ಕಟ್ಟುವ ಹಾಗಿಲ್ಲ. ಏಕೆಂದರೆ ಕಾರುಗಳು ನಿಲ್ಲಲು ಓಡಾಡಲು ಜಾಗ ಸಾಲದೆಂದು.

ಜಪಾನಿನಲ್ಲಿ ಮಳೆಗಾಲ ಪ್ರಾರಂಭವಾಗುವುದು ಜುಲೈ 17ಕ್ಕೆ. ಅಂದು ಗಿಯಾನ್ ಹಬ್ಬವನ್ನು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ದೇಶದಾದ್ಯಂತ ಟಿ.ವಿ.ಯಲ್ಲಿ ತೋರಿಸುತ್ತಾರೆ. ನನಗೂ ಇದನ್ನು ಕೂಡ ನೋಡುವ ಅವಕಾಶ ದೊರೆಯಿತು.

ಡಾ॥ ವಾಟನಾಬೆ ಮತ್ತು ಡಾ॥ ಟಕಾಯ ಅಬೆ ನನ್ನ ಮೂರು ದಿನಗಳ ಕಿಯೋಟೊ ಯೂನಿವರ್ಸಿಟಿ ಕಾರ್ಯಕ್ರಮಗಳನ್ನು ಅಣಿ ಮಾಡಿದ್ದರು. ಮುಖ್ಯವಾಗಿ ಬಯಾಲಜಿ ಡಿಪಾರ್ಟ್‌ಮೆಂಟಿನಲ್ಲಿ ನಡೆಸುತ್ತಿದ್ದ ಗೆದ್ದಲಿನ ಸಂಶೋಧನೆ ಬಗ್ಗೆ ಹೆಚ್ಚಿನ ತಿಳುವಳಿಕೆ ಅವರಿಗೆ ಬೇಕಿತ್ತು. ಜಪಾನಿನಲ್ಲಿ ಗೆದ್ದಲು ಸಿಕ್ಕದಿದ್ದರಿಂದ ಆಫ್ರಿಕಾದಲ್ಲಿ ಈ ಸಂಶೋಧನೆಯನ್ನು ಕೈಗೊಂಡಿದ್ದರು. ಗೆದ್ದಲಿನ ಬಗ್ಗೆ ಇಲ್ಲಿ ನಡೆಯುತ್ತಿದ್ದ ಸಂಶೋಧನೆ ವಿಷಯವಾಗಿ ಅಗ್ರಿಕಲ್‌ಚರ್ ಫ್ಯಾಕಲ್ಟಿಯಲ್ಲಿ ಉಪನ್ಯಾಸ ಮಾಡಿದ್ದು ಅಲ್ಲಿಯ ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧಕರಿಗೆ ಹೆಚ್ಚಿನ ಕುತೂಹಲ ಕೆರಳಿಸಿತು. ಬಹಳ ಜನಕ್ಕೆ ಇಂಗ್ಲಿಷ್ ಬಾರದಿದ್ದದ್ದು ನಾನು ಹೇಳಿದ್ದನ್ನು ಪುನಃ ಜಾಪನೀಸ್‌ನಲ್ಲಿ ಡಾ॥ ವಾಟನಾಬೆ ತರ್ಜುಮೆ ಮಾಡಬೇಕಾಯಿತು. ನಾನು ಇದ್ದ ಮೂರು ದಿನ ಪೂರ್ತಿ ಇವರೆ ನನಗೆ ತರ್ಜುಮೆಗಾರರಾಗಿದ್ದರು. ಒಂದು ಸಂಜೆ ವಾಟನಾಬೆ ಸ್ನೇಹಿತರ ಮನೆಯಲ್ಲಿ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ವಾಟನಾಬೆ ಪ್ರತಿದಿನ ನಲವತ್ತು ಮೈಲಿಯಿಂದ ಕಾಲೇಜಿಗೆ ಬರುತ್ತಿದ್ದರು. ಅವರ ಪತ್ನಿ ಮತ್ತೊಂದು ಕಡೆ ಕೆಲಸಕ್ಕೆ ಐವತ್ತು ಮೈಲಿ ಹೋಗುತ್ತಿದ್ದರಂತೆ. ಜಪಾನಿನಲ್ಲಿ ಮಧ್ಯಮ ವರ್ಗದ ಜನರಿಗೆ ಕಾರು ಮತ್ತು ಮನೆ ಎರಡನ್ನು ಹೊಂದುವುದು ದುರ್ಲಭ. ಇವರಿಗೆ ಮನೆ ಇತ್ತು ಕಾರಿರಲಿಲ್ಲ.

ಜಾಪನೀಸ್ ಮನೆಗಳಲ್ಲಿ ಹೆಂಗಸರು ಅಪರಿಚಿತರ ಮುಂದೆ ಕೂತು ಮಾತನಾಡುವುದಿಲ್ಲ. ಯಾವ ಪಾರ್ಟಿಗಳಲ್ಲಿಯೂ ಭಾಗವಹಿಸುವುದಿಲ್ಲ. ಮನೆಗಳು ಚಿಕ್ಕದಾಗಿದ್ದು ಚೊಕ್ಕವಾಗಿರುತ್ತವೆ. ಎಲ್ಲರ ಮನೆಯಲ್ಲಿ ಕೂರಲು ಚಾಪೆ ದಿಂಬು. ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಹೋಗಬೇಕು. ಒಳಗಡೆ ಬದಲಿ ಪಾದರಕ್ಷೆ ಕೊಡುತ್ತಾರೆ. ನಮ್ಮ ಅತಿಥೇಯ ಮನೆಯ ಮುಂದೆ ಒಂದು ಕೈ ತೋಟ. ಅದರ ಸುತ್ತ ಹರಿಯುವ ನೀರು. ನೀರಿನಲ್ಲಿ ಹಲವಾರು ಬಣ್ಣಬಣ್ಣದ ಮೀನುಗಳು ಕೆಳಗೆ ಮೇಲೆ ತಿರುಗುತ್ತಿರುತ್ತವೆ. ಮಿನಿಯೇಚರ್ ಗಾರ್ಡನ್ ಮಾಡುವುದರಲ್ಲಿ ಜಪಾನಿಯರನ್ನು ಮೀರಿಸಿದವರಿಲ್ಲವೆಂದು ಹೇಳಬಹುದು. ಹಾಗೆಯೇ ಹೂವುಗಳ ಅಲಂಕಾರದಲ್ಲಿಯೂ ಎತ್ತಿದ ಕೈ. ಇಕೆಬಾನ, ಸಂಗಸ್ಸು ಮುಂತಾದ ಕಲೆಗಳು ಇವರಿಂದಲೆ ಬಂದವು. ಆವಶ್ಯಕತೆಗಿಂತ ಹೆಚ್ಚಿನ ಸಾಮಾನು ಮನೆಯಲ್ಲಿ ಇಡುವುದಿಲ್ಲ. ಸ್ಥಳ ಅಭಾವದೊಂದಿಗೆ ದುಬಾರಿ ಖರ್ಚು ಕೂಡ ಈ ಮಿತಸಂಗ್ರಹಣೆ ಸಂಸ್ಕೃತಿ ಬಳಕೆಗೆ ಬಂದಿದೆ.

ಜಪಾನಿಯರ ನಡೆ ನುಡಿ ಉಪಚಾರಗಳಲ್ಲಿ ಬಹಳ ನಮ್ರತೆ ಎದ್ದು ಕಾಣುತ್ತದೆ. ಜಪಾನಿಯರಿಗೆ ಬುದ್ಧನಿಗಿಂತ ಮುಂಚಿನಿಂದಲೆ ಜೆನ್ ಸಂಸ್ಕೃತಿ ರೂಢಿಯಲ್ಲಿತ್ತು. ಜೆನ್ ಅಂದರೆ

ಧ್ಯಾನವೆಂದರ್ಥ. ಜೆನ್ ಬೋಧಕರಿಗೆ ಅತಿ ಹೆಚ್ಚಿನ ಮರ್ಯಾದೆ, ಗೌರವ ಜಪಾನ್‌ನಲ್ಲಿ ದೊರೆಯುತ್ತದೆ. ಇವರು ಬೌದ್ಧ ಧರ್ಮಪಾಲಕರಾದರೂ ಹಿನ್ನಲೆಯಲ್ಲಿ ಭಾರತೀಯ ಸಂಸ್ಕೃತಿಯ ಕುರುವನ್ನು ಕಾಣಬಹುದು. ಮೈ ಬಾಗಿ ನಮಸ್ಕರಿಸುವುದು, ನಾವು ಕೈ ಮುಗಿಯುವುದಕ್ಕಿಂತ ಹೆಚ್ಚು ನಮ್ರತೆಯುಳ್ಳದ್ದಾಗಿ ಕಾಣುತ್ತದೆ. ಹೆಂಗಸು ಗಂಡಸರೆಲ್ಲ ಸ್ವಚ್ಛವಾದ, ಶುಭ್ರವಾದ ಉಡುಪು ಧರಿಸುತ್ತಾರೆ. ಕಾಯಕವೇ ಕೈಲಾಸವೆನ್ನುವುದನ್ನು ಇಲ್ಲಿ ಕಣ್ಣಾರೆ ಕಾಣಬಹುದು. ಅವರೇನಾದರೂ ತಮ್ಮ ಅಸಮತೆಯನ್ನು ತೋರಿಸಬೇಕಾದರೆ ಕೆಲಸ ಬಿಟ್ಟು ಮುಷ್ಕರ ಹೂಡುವುದಿಲ್ಲ. ಬದಲಿಗೆ ಹೆಚ್ಚು ಕಾಲ ಕೆಲಸ ಮಾಡಿ ಹೆಚ್ಚು ಉತ್ಪತ್ತಿ ತೋರಿಸುತ್ತಾರೆ. ಪ್ರಗತಿಗೆ ಶ್ರಮಜೀವನಕ್ಕಿಂತ ಮಿಗಿಲಾದ ತಂತ್ರವಿಲ್ಲವೆಂದು ಮನಗಂಡವರು.

ಎರಡನೆ ಬಾರಿ ನಾನು ಜಪಾನಿಗೆ ಹೋಗಿದ್ದು 1992 ರಲ್ಲಿ. ಮೊಕಿಚಿ ಒಕಾಡ ಸಂಸ್ಥೆಯ ಭಾರತೀಯ ಬ್ರಾಂಚಿನ ಸ್ಥಾಪಕ ಡೈರೆಕ್ಟರಲ್ಲಿ ನಾನೊಬ್ಬನಾಗಿದ್ದೆ. ಹೆಸರಾಂತ ನರತಜ್ಞ ಡಾ|| ಆರ್.ಎಲ್. ವರ್ಮ ಇದರ ಛೇರ್‌ಮೆನ್, ಹೆಸರಾಂತ ಹೋಮಿಯೋಪತಿ ಡಾಕ್ಟರು ಡಾ|| ಐಸಾಕ್ ಮಥಾಯಿ ವ್ಯವಸ್ಥಾಪಕರಲ್ಲಿ ಮುಖ್ಯಸ್ಥರು. ಕರ್ನಾಟಕದ ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ನಿಜಾಮುದ್ದೀನ್, ಉದ್ಯಮಿ ಮತ್ತು ಕಾಫಿ ಬೆಳೆಗಾರರು ಚಿಟ್ಟಿಯಪ್ಪ, ನಿಮ್‌ಹಾನ್ಸ್ ಡೈರೆಕ್ಟರ್ ಡಾ|| ಚನ್ನಬಸವಣ್ಣ ಉಳಿದ ಡೈರೆಕ್ಟರುಗಳು. ಎಂ.ಓ.ಎ. ಇಂಟರ್ ನ್ಯಾಷನಲ್ ಸಂಸ್ಥೆ ಜಪಾನ್ ಇವರ ಆಹ್ವಾನದ ಮೇಲೆ, ಎಂ.ಓ.ಎ. ಇಂಡಿಯ ಡೆಲಿಗೇಶನ್‌ನಲ್ಲಿ ಮೇಲೆ ತಿಳಿಸಿದ ಡೈರೆಕ್ಟರುಗಳು ಮತ್ತು ಅವರ ಪತ್ನಿಗಳು ಸೇರಿದ್ದರು. ಡಾ|| ಚನ್ನಬಸವಣ್ಣನವರ ಮತ್ತು ನನ್ನ ಪತ್ನಿ ಇದರಲ್ಲಿರಲಿಲ್ಲ. ಈ ಹತ್ತು ಮಂದಿಯ ಹನ್ನೆರಡು ದಿನದ ಪ್ರವಾಸದ ಪೂರ್ಣ ಜವಾಬ್ದಾರಿಯನ್ನು ಹೊತ್ತು ಮುಂದಾಳುತನವನ್ನು ಎಂ.ಓ.ಎ. ಸಂಸ್ಥೆಯ ಕೆಂಜಿ ಕಾಕಿನೋಕಿ ವಹಿಸಿದ್ದರು. ಬೊಂಬಾಯಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಹತ್ತಿರವಿರುವ ಲೀಲಾ ಕೆಂಪೆನ್ಸ್ಕಿ ಹೋಟಲಿನಲ್ಲಿ ಒಂದು ದಿನ ತಂಗಿದ್ದು ಮರುದಿನ ಬ್ಯಾಂಕಾಕ್ ಹಾಂಕಾಂಗ್ ಮಾರ್ಗವಾಗಿ ರಾತ್ರಿ ಎಂಟು ಗಂಟೆಗೆ ಟೋಕಿಯೋ ತಲುಪಿದೆವು. ವಿಮಾನ ನಿಲ್ದಾಣದಲ್ಲಿ ಐಜೊ ತನಾಕ, ಮಿಜೊನೊಸೋಜಿ, ಹಯಕಾವ ಟಕಾವೊ ಮತ್ತು ಕನೆಮರು ಜೋಡಿ ನಮ್ಮನ್ನು ಹಾರ್ದಿಕವಾಗಿ ಬರಮಾಡಿ ಕೊಂಡರು. ಇಬ್ಬಿಬ್ಬರಿಗೆ ಒಂದು ಕಾರಿನಂತೆ ಸುಸಜ್ಜಿತ, ಹವಾನಿಯಂತ್ರಿತ, ಪ್ರಪಂಚದ ಯಾವ ಮೂಲೆಗಾದರೂ ದೂರವಾಣಿ ಸಂಪರ್ಕ ವ್ಯವಸ್ಥೆ ಇರುವ ಕಾರುಗಳು ನಾವು ಹೋದಾಗಿನಿಂದ ಬರುವವರೆಗೆ ನಮಗಾಗಿ ಮೀಸಲಾಗಿದ್ದವು. ಪ್ರತಿ ಕಾರಿನಲ್ಲಿ ಇಂಗ್ಲಿಷ್ ಭಾಷೆ ಬರುವ ಒಬ್ಬ ಎಂ.ಓ.ಎ. ಸಿಬ್ಬಂದಿ ನಮ್ಮ ಜೊತೆಯಲ್ಲಿರುತ್ತಿದ್ದರು. ನಾನು ಮತ್ತು ಡಾ|| ಚನ್ನಬಸವಣ್ಣನವರು ಒಂದು ಕಾರಿನಲ್ಲಿ, ಉಳಿದವರು ದಂಪತಿ ಜೋಡಿಗಳು ಅವರವರ ಕಾರಿನಲ್ಲಿ ಇರುತ್ತಿದ್ದರು. ಟೋಕಿಯೋ ನಾರಿಟಾ ವಿಮಾನ ನಿಲ್ದಾಣದಿಂದ ಸಿಟಿ ಸೆಂಟರಿಗೆ ಸುಮಾರು ಒಂದು ಗಂಟೆ ಪ್ರಯಾಣ, ಪಂಚತಾರಾ ಹೋಟಲುಗಳಲ್ಲಿ ಒಂದಾದ ಅಸಕುಸ ವ್ಯೂವ್ ಹೋಟಲಿನಲ್ಲಿ ನಮ್ಮ ಮುಕ್ಕಾಮು.

ಮರುದಿನ ಮೊದಲು ಮಾಡಿದ ಕರ್ತವ್ಯ ಮೊಕಿಚಿ ಒಕಾಡರವರ ಹುಟ್ಟು ಸ್ಥಳವಾದ ಹಷಿಬಾಗೆ ಭೇಟಿ. ಇವರ ಜ್ಞಾಪಕಾರ್ಥವಾಗಿ ಸ್ವಾಭಾವಿಕವಾಗಿ ಹಲವು ಶತಮಾನಗಳ ಮಳೆ ಬಿಸಿಲನ್ನು ಎದುರಿಸಿದ್ದ ಕಲ್ಲು ಬಂಡೆಯನ್ನು ತಂದು ನಿಲ್ಲಿಸಿದ್ದರು. ಅಡಿಯಲ್ಲಿ ಎರಡು ಸಾಲಿನ ಜಾಪನೀಸ್ ಭಾಷೆಯಲ್ಲಿ ಬರೆದ ಸ್ಮರಣೆ ಲಿಪಿ ಇದ್ದಿತು. ಮುಂದೆ ನಾನು ಕೃ.ವಿ.ವಿ.

ಕುಲಪತಿಯಾದಾಗ ಭಾರತದ ಸ್ವರ್ಣ ಸ್ವಾತಂತ್ರ್ಯ ಮಹೋತ್ಸವದ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸುವ ಸಲಹೆ ಬಂದಾಗ ಇದೇ ತರಹದ ಸ್ವಾಭಾವಿಕ ಶಿಲೆಯನ್ನು ಸ್ಥಾಪನೆ ಮಾಡಬೇಕೆಂದು ನಿರ್ಧರಿಸಿ ಹೆಬ್ಬಾಳದಲ್ಲಿರುವ ಕೃಷಿ ಕಾಲೇಜಿನ ಮುಂದೆ ಸ್ಥಾಪಿಸಲಾಗಿದೆ. ಇದರ ಖರ್ಚು ಮೂವತ್ತು ಸಾವಿರ ರೂಪಾಯಿಯನ್ನು ನನ್ನ ಕಿರಿಯ ಮಿತ್ರರು, ಉದ್ಯಮಿ ಹಾಗು ಪ್ಲಾಂಟರ್ ಶ್ರೀಮಾನ್ ಸಿದ್ಧಾರ್ಥರವರು ಭರಿಸಿದರು. ಇದರ ಅಡಿಯಲ್ಲಿ 'ಕಲ್ಲಿಂದ ಮಣ್ಣು ಮಣ್ಣಿಂದ ಅನ್ನ ಸಕಲ ಜೀವಿಗಳಿಗೆ ಆಧಾರ'ವೆಂದು ಕೆತ್ತಿದೆ. ಆದರೆ ಹಷಿಬಾದಲ್ಲಿ ಸ್ಮಾರಕದ ಸುತ್ತ ಮಿನಿಯೇಚರ್ ಲ್ಯಾಂಡ್‌ಸ್ಕೇಪ್ ಮತ್ತು ಸುಂದರ ಹೂತೋಟವನ್ನು ವರ್ಷವಿಡಿ ಕಾಪಾಡಿದಂತೆ ಇಲ್ಲಿ ಮಾಡಲಾಗಲಿಲ್ಲ.

ಅಂದು ಹಷಿಬಾದಲ್ಲಿ ಮಧ್ಯಾಹ್ನ ಊಟ ಮಾಡಿದ್ದು ಮರೆಯುವಂತಿಲ್ಲ. ಒಂದು ಅಡಿ ಉದ್ದದ ಹೊಳೆಯ ಮೀನು, ಹುಲಿಗೆ ಹೊಕ್ಕಳು ತೆಗೆಯದೆ ಕೆಂಡದಲ್ಲಿ ಬೇಯಿಸಿ ತಟ್ಟೆಯಲ್ಲಿ ನಾಜೂಕಾಗಿ ಬಡಿಸಿದ್ದು, ಅದಕ್ಕೆ ಒಪ್ಪುವ ಕೆಲವು ಸಾಸೇಜು ಬಿಟ್ಟರೆ ಮತ್ತೇನು ಇಲ್ಲ. ಕುಡಿಯಲು ಬೀರು. ನಾನು ಹುಲಿಗೆಯನ್ನು ತೆಗೆದು ಹೊಟ್ಟೆಯಲ್ಲಿದ್ದದ್ದನ್ನು ಬೇರ್ಪಡಿಸಿ ತಲೆ ಬಾಲ ರೆಕ್ಕೆ ತೆಗೆದು ಖಂಡ ತಿನ್ನಲು ಪ್ರಾರಂಭಿಸುವುದರೊಳಗೆ ಜಪಾನೀಯರು ತಟ್ಟೆ ಖಾಲಿಮಾಡಿದ್ದರು. ಬೆನ್ನುಮೂಳೆ ಬಿಟ್ಟು ಮತ್ತೇನು ಅವರ ತಟ್ಟೆಯಲ್ಲಿರಲಿಲ್ಲ. ನಮ್ಮಲ್ಲಿ ಕೆಲವರು ಎಳೆ ಸೌತೆಕಾಯಿ ಮಟ್ಟ ತೆಗೆದು ತಿನ್ನುವವರಿದ್ದರೆ ಇಡೀ ಪೂರ್ತಿ ಹಾಗೆಯೆ ತಿನ್ನುವವರಿರುವಂತೆ ಜಪಾನೀಯರಿಗೆ ಹುಲಿಗೆಯ ರುಚಿ ಹಿಡಿಸಿರಬಹುದು.

ಟೋಕಿಯೋದಿಂದ ಸುಮಾರು ನೂರಿಪ್ಪತ್ತು ಕಿ.ಮೀ. ದೂರದಲ್ಲಿ ಪರ್ವತ ಶ್ರೇಣಿಯ ಮಧ್ಯದಲ್ಲಿದ್ದ ಹಕೋನೆಗೆ ಹೋದೆವು. ಇಲ್ಲಿ ಮೊಕಿಚಿ ಒಕಾಡ ಮತ್ತು ಅವರ ಪತ್ನಿ ಸಮಾಧಿ ಇದೆ. ಇವರ ಸಮಾಧಿಯನ್ನು ನೂರು ಇನ್ನೂರು ಅಡಿ ದೂರದಿಂದಲೇ ನೋಡಬೇಕು. ಹಕೋನೆ, ಶಿನ್‌ಸಿಯುಕಿಯೊ ಮೂಸಿಯಂನಲ್ಲಿ ಮೊಕಿಚಿ ಒಕಾಡರವರು ಸಂಗ್ರಹಿಸಿದ್ದ ಕಲೆ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಬೆಟ್ಟದ ತುದಿಯ ಒಂದು ಭಾಗದಲ್ಲಿ ಒಕಾಡಾರವರು ವಾಸಿಸುತ್ತಿದ್ದ ಪುಟ್ಟ ಮನೆ ಎಷ್ಟು ಚೊಕ್ಕವಾಗಿತ್ತೆಂದರೆ ಅದನ್ನು ನೋಡಿಯೇ ನಂಬಬೇಕು. ಚಾಪೆ, ದಿಂಬು, ದಿವಾನ ಮುಖ್ಯ ಆಸನಗಳು, ಕುರ್ಚಿ, ಮೇಜು ಬರೆಯಲು ಓದಲು ಮಾತ್ರ.

ಜಪಾನೀಸ್ ಟೀ ಪಾರ್ಟಿ ಒಂದು ವಿಶೇಷ. ಅರ್ಧಚಂದ್ರಾಕಾರದಲ್ಲಿ ಅತಿಥಿಗಳು ಚಾಪೆ ಅಥವಾ ದಿವಾನದ ಮೇಲೆ ಕುಳಿತುಕೊಳ್ಳಬೇಕು. ಗೀಶ ಮಾದರಿಯ ಉಡುಪನ್ನು ಧರಿಸಿದ ಜಪಾನಿ ಕನ್ಯೆಯರು ಕಾಲುಗಳನ್ನು ಹಿಂದಕ್ಕೆ ಮಡಿಸಿ ಪಾದದ ಮೇಲೆ ಅವರ ಪೃಷ್ಠವನ್ನು ಊರಿ ಮೈಬಾಗಿ ನಮಸ್ಕರಿಸಿ ಟೀ ಕಪ್ಪುಗಳನ್ನು ಮುಂದಿಡುತ್ತಾರೆ. ಹಸಿರು ಕಶಾಯದಂತಿರುವ ದಟ್ಟನೆಯ ಕಾಯಿಸದೆ ಇರುವ ಟೀಯನ್ನು ಒಂದು ಮಗ್ಗಿನಿಂದ ಬಸಿಯುತ್ತಾರೆ. ಅದನ್ನು ನಿಧಾನವಾಗಿ ಕುಡಿಯಲು ಅರ್ಧ ಮುಕ್ಕಾಲು ಗಂಟೆಯೇ ಬೇಕು. ಇದೊಂದು ಜಪಾನೀಯರ ಹಳೆ ಸಂಸ್ಕೃತಿ. ಒಕಾಡಾರವರ ಮೂಲ ಉದ್ದೇಶಗಳಲ್ಲಿ ಅಳಿಯುತ್ತಿದ್ದ ಪುರಾತನ ಜಾಪನೀಸ್ ಕಲೆ ಸಂಸ್ಕೃತಿಗಳನ್ನು ಜೀರ್ಣೋದ್ಧಾರ ಮಾಡುವುದೂ ಒಂದು. ನನಗೆ ಈ ಹಸಿರು ಟೀಯನ್ನು ಗುಟಕಿಸಲೂ ಸಾಧ್ಯವಾಗಲಿಲ್ಲ.

ಮೊಕಿಚಿ ಒಕಾಡ (1882-1955) "ಸೆಕ್ಕೈ ಕಿಯುಸಿ ಕಿಯೊ" (ವರ್ಲ್ಡ್ ಮೆಸ್ಸೈನಿಟಿ) ಸಂಸ್ಥೆಯ ಸಂಸ್ಥಾಪಕರು. ಅವರು 1982ರ ಡಿಸೆಂಬರ್ 23ರಲ್ಲಿ ಅಸಕುಸ ಪ್ರಾಂತ್ಯದ ಹಷಿಬ ಜಿಲ್ಲೆಯಲ್ಲಿ ಜನಿಸಿ, ಬಡತನದ ಬೇಗೆಯಲ್ಲಿ ಬೆಂದು, ಜೀವನದಲ್ಲಿ ಸಾವು ನೋವುಗಳನ್ನು ನುಂಗಿ, ದೈವತ್ವವನ್ನು ಕಂಡ ಮಹಾಯೋಗಿ. ಇಂದು ಜಪಾನ್‌ನಲ್ಲಿ ಲಕ್ಷಾಂತರ ಜನ ಮೊಕಿಚಿ ಒಕಾಡ ಸಂಸ್ಥೆಯ ಸದಸ್ಯರಾಗಿ ಅವರ ತತ್ವವನ್ನು ಪಾಲಿಸುತ್ತಿದ್ದಾರೆ. ಇವರ ಮುಖ್ಯ ಮೂರು ತತ್ವಗಳೆಂದರೆ ಕಲುಷಿತವಲ್ಲದ ಆಹಾರ (ಸಾವಯವ ಕೃಷಿಯಿಂದ ಉತ್ಪಾದಿಸಿದ್ದು), ನೈರ್ಮಲ್ಯ ಆರೋಗ್ಯ ("ಜೊರೈ" ಎಂಬ ಜಪಾನೀಯರ ಹಳೇ ಪದ್ಧತಿಯಿಂದ ದೇಹರಕ್ತ ಶುದ್ಧಿ ಮಾಡುವ ವಿಧಾನ) ಮತ್ತು ಪರಿಸರ ನೈರ್ಮಲ್ಯತೆ (ಲಲಿತಕಲೆ, ಚಿತ್ರಕಲೆ ಹೂವು ಅಂಲಂಕಾರ, ಸಂಗೆಟ್ಸು) ಮನಸ್ಸಿನ ಶಾಂತತೆಗೆ ಮೂಲಭೂತ ಅವಶ್ಯಕತೆಗಳು. ಇವುಗಳ ಪಾಲನೆಯಿಂದ ಮಾನವ ಜೀವನದ ಮೌಲ್ಯಗಳನ್ನು ಅರಿತು ದೈವತ್ವವನ್ನು ಪಡೆಯಬಹುದೆಂಬ ಸಿದ್ಧಾಂತವನ್ನು ಉಪದೇಶಿಸಿದರು. ನನ್ನ ವೃತ್ತಿಗೆ ಹತ್ತಿರವಾಗಿದ್ದ ಸಾವಯವ ಕೃಷಿ ಈ ಸಂಸ್ಥೆಗೆ ನನ್ನನ್ನು ಆಕರ್ಷಿಸಿತ್ತು.

ನಾನು ಎಮ್.ಒ.ಎ.ಗೆ ಸೇರಿದ ಹಿನ್ನೆಲೆಯನ್ನು ಇಲ್ಲಿ ವಿವರಿಸುವುದು ಸೂಕ್ತವೆಂದು ಕಾಣುತ್ತದೆ. ಸುಮಾರು ಸಾವಿರದ ಒಂಬೈನೂರ ತೊಂಬತ್ತೆರಡರ ಪ್ರಾರಂಭದಲ್ಲಿ ಎಂ.ಓ.ಎ. ಮತ್ತು ಅದರ ಅಂಗವಾಗಿದ್ದ ವರ್ಲ್ಡ್ ಸಸ್ಟೈನಬಲ್ ಅಗ್ರಿಕಲ್‌ಚರಲ್ ಅಸೋಸಿಯೇಷನ್ ಭಾರತದಲ್ಲಿ ಸ್ಥಾಪಿಸಲು ಸೂಕ್ತವಾದ ಸಂಸ್ಥಾಪಕರನ್ನು ಹುಡುಕುವ ಸಂದರ್ಭದಲ್ಲಿ ಡಾ॥ ವರ್ಮರವರಲ್ಲಿಗೆ ಆರೋಗ್ಯ ತಪಾಸಣೆಗೆ ಬರುತ್ತಿದ್ದವರಲ್ಲೊಬ್ಬರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ॥ ವೀರೇಶ್ ಒಬ್ಬರು ಸೂಕ್ತವೆಂದು ಸೂಚಿಸಿದರಂತೆ. ಕೂಡಲೆ ವರ್ಮರವರು ಡಾ॥ ಮಥಾಯಿಯವರಿಗೆ ಫೋನ್ ಮಾಡಿ ನನ್ನನ್ನು ಸಂಪರ್ಕಿಸಿ ಒಪ್ಪಿಗೆಯನ್ನು ಪಡೆಯುವಂತೆ ಆದೇಶಿಸಿದರಂತೆ. ಅಂತೆಯೆ ಡಾ॥ ಮಥಾಯಿಯವರು ನನ್ನನ್ನು ಸಂದರ್ಶಿಸುವ ವೇಳೆಯನ್ನು ಗೊತ್ತು ಮಾಡಿಕೊಂಡು ಬಂದು ಎಂ.ಒ.ಎ. (MOA) ಮತ್ತು ಡಬ್ಲ್ಯೂ.ಎಸ್.ಎ.ಎ. (WSAA) ಗಳ ಧ್ಯೇಯ ಧೋರಣೆಗಳನ್ನು ವಿವರಿಸಿ ಈ ಸಂಸ್ಥೆಯ ಸಂಸ್ಥಾಪಕರಲ್ಲಿ ನಾನೊಬ್ಬನಾಗಬೇಕೆಂದು ಕೇಳಿ ಒಪ್ಪಿಗೆ ಪಡೆದು ಮುಂದಿನ ಕ್ರಮ ಜರುಗಿಸಿದರು. ಇದೂ ಒಂದು ಬಯಸದೆ ಬಂದ ಅವಕಾಶ.

ಎಂ.ಓ.ಎ. ಸಂಸ್ಥೆಗೆ ಸೇರಿದ ಅತ್ಯಾಧುನಿಕ ಹೋಟಲ್ ಜೂಯಿವ್‌ಕೈಕಾನ್ ಹೋಟಲ್‌ನಲ್ಲಿ ಅಂದು ತಂಗಿದ್ದೆವು. ಮರುದಿನ ಇಲ್ಲಿಗೆ ಸಮೀಪವಿರುವ ಎಂ.ಓ.ಎ.ಯವರ ಸಾವಯವ ಕೃಷಿ ಸಂಶೋಧನೆ ಕೇಂದ್ರವಾದ ಒಹಿಟೊ ಫಾರಂಗೆ ಭೇಟಿ ಕೊಟ್ಟೆವು. ಮಳೆ ಪ್ರಯುಕ್ತ ಫಾರಂನಲ್ಲಿ ನಡೆಯುತ್ತಿದ್ದ ಎಲ್ಲ ಸಂಶೋಧನೆಗಳನ್ನು ನೋಡಲಾಗಲಿಲ್ಲ. ಅದರ ಚಟುವಟಿಕೆಗಳನ್ನೆಲ್ಲ ವೀಡಿಯೋ ಮುಖೇನ ತೋರಿಸಿದರು. ಪುನಃ ಹೋಟಲಿಗೆ ಬಂದು ಸಂಜೆ ಸಂಗೆಟ್ಸು ಪದ್ಧತಿಯ ಹೂವಿನ ಅಲಂಕಾರ ಪದ್ದತಿಯನ್ನು ಪ್ರಾತ್ಯಕ್ಷ ಮಾಡಿ ತೋರಿಸಿದರು. ಇದೊಂದು ಇಕಬೆನ ಮಾದರಿಯ ಹೂವು ಅಲಂಕಾರ. ನಮ್ಮ ಡೆಲಿಗೇಶನ್ನಿನ ಹತ್ತು ಮಂದಿಗೂ ಪುನಃ ಸಂಗೆಟ್ಸು ಮಾಡಲು ಹೇಳಿ ಉತ್ತಮವಾಗಿ ಮಾಡಿದವರಿಗೆ ಒಂದು ಬಹುಮಾನವನ್ನು ಕೊಡುವುದಾಗಿಯೂ ಘೋಷಿಸಿದರು. ಮನೆಯಲ್ಲಿ ಶಾರದ ಆಗಾಗ ಇಕೆಬೆನ ಅರೇಂಜ್ ಮಾಡುತ್ತಿದ್ದರಿಂದ ಇದರ ಗಂಧ ಸ್ವಲ್ಪ ಮಟ್ಟಿಗೆ ನನಗೆ ಗೊತ್ತಿತ್ತು. ಬಹುಮಾನ ನನಗೆ ದೊರೆಯಿತು.

ಮರುದಿನ ಹಕೋನೆಯಿಂದ ಟೋಕಿಯೋಗೆ ಪ್ರಯಾಣ ಬೆಳೆಸಿದೆವು. ನೂರಿಪ್ಪತ್ತೈದು ಮೈಲಿ ದೂರವನ್ನು ಮೂವತ್ತೈದು ನಿಮಿಷದಲ್ಲಿ ಶಿನ್‌ಕಾನ್‌ಸೆನ್ (Bullet Train) ಅಟಾಮಿಯಿಂದ ಟೋಕಿಯೋಗೆ ಕರೆತಂದಿತ್ತು. ಟಿಕೆಟ್ ಬೆಲೆ ಆರುನೂರು ರೂಪಾಯಿ. ನಮ್ಮ ದೇಶದಲ್ಲಿ ಈ ದುಡ್ಡಿಗೆ ಎರಡು ಸಾವಿರ ಕಿ.ಮೀ. ಪ್ರಯಾಣ ಮಾಡಬಹುದು. ಆದರೆ ನಲವತ್ತೆಂಟು ಗಂಟೆಗೂ ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು.

ಒಂದು ಕೋಟಿ 20 ಲಕ್ಷ ಜನ ಸಂಖ್ಯೆ ಉಳ್ಳ ಟೋಕಿಯೋ 26 ಸಬರ್‌ಬನ್ ಸಿಟಿಗಳು, 8 ಟೌನ್, 20 ಹಳ್ಳಿಗಳನ್ನು ನುಂಗಿದೆ. ಟೋಕಿಯೋ ಮುಖ್ಯ ಸ್ಥಳಗಳಲ್ಲಿ ಒಂದಾದ ಇಂಪೀರಿಯಲ್ ಪ್ಯಾಲೆಸ್, ಸುಮಾರು 1452-1519 ರ ಅವಧಿಯಲ್ಲಿ ಕಟ್ಟಿದ್ದು. ಪ್ರೇಕ್ಷಕರಿಗೆ ವರುಷದಲ್ಲಿ ಎರಡು ಬಾರಿ ಮಾತ್ರ ಇದರೊಳಕ್ಕೆ ಪ್ರವೇಶ, ರಾಜರ ಹುಟ್ಟು ದಿನವಾದ ಡಿಸೆಂಬರ್ 23 ಮತ್ತು ಹೊಸ ವರುಷದ ದಿನ ಮಾತ್ರ. ಜಪಾನ್ ಪಾರ್ಲಿಮೆಂಟ್ 'ಡಯಟ್' ಮತ್ತು ಮೇಲ್ಮನೆ 'ಶೊಗಿನ್'ಗೆ ಹೋಗಲು ಅಲ್ಲಿಯ ಕೃಷಿ ಮಂತ್ರಿ ಮತ್ತು ಆರೋಗ್ಯ ಮಂತ್ರಿಗಳು ನೆರವಾದರು. ಅಂದು ಟೋಕಿಯೋಕ್ಕೆ ಹೆಸರಾದ ಗಿಂಜಾದಲ್ಲಿ 'ಗಿಂಜಾ ಟೋಕಿಯೋ' ಹೋಟಲ್‌ನಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಬಹುಶಃ, ಪ್ರಪಂಚದಲ್ಲಿ ದುಬಾರಿಯಾದ ಹೋಟಲ್‌ಗಳಲ್ಲಿ ಇದೊಂದು. ದಿನಕ್ಕೆ 300 ಡಾಲರ್ ರೂಮ್ ಬಾಡಿಗೆ (12,000 ಸಾವಿರ ರೂ.) ಊಟ ತಿಂಡಿ ಅಷ್ಟೇ ದುಬಾರಿ. ಅಮೆರಿಕಾದ ಡಾಕ್ಟರೊಬ್ಬರು ಆಂಧ್ರದವರು, ಗಂಡ ಹೆಂಡತಿ ಒಂದು ಮಗು, ಎಂಟು ದಿವಸ ಜಪಾನ್ ಪ್ರವಾಸಕ್ಕೆ ಬಂದು ಇಲ್ಲಿ ಇಳಿದುಕೊಂಡಿದ್ದರು. ಅವರೂ ಕೂಡ ಜಪಾನ್ ಖರ್ಚು ತಡೆಯಲಾರದೆ ನಿಗದಿಗಿಂತ ಮೂರು ದಿನ ಮುಂಚಿತವಾಗಿಯೇ ಜಪಾನ್ ಬಿಡುತ್ತಿದ್ದೇವೆ ಎಂದರು.

ಜಪಾನಿಯರು ಆಧುನಿಕ ಕೈಗಾರಿಕೆ ಯಂತ್ರೋಪಕರಣಗಳ ಬಳಕೆಯಲ್ಲಿ ಅಗ್ರಗಣ್ಯರಾಗಿದ್ದರೂ ಅವರ ಕೌಟುಂಬಿಕ ಜೀವನ ಮತ್ತು ದೇವರಲ್ಲಿ ಭಕ್ತಿ ಅಚಲವಾಗಿದೆಯೆಂದೇ ಹೇಳಬೇಕು. ಟೋಕಿಯೋ ಅಸಕುಸಾದಲ್ಲಿನ ಒಂದು ದೇವಸ್ಥಾನಕ್ಕೆ ಹೋಗಿದ್ದೆವು. ಅಸಂಖ್ಯಾತ ಜಪಾನಿಯರು ಪ್ರತಿ ದಿನ ಇಲ್ಲಿಗೆ ಬರುವುದೇ ಈ ನಂಬಿಕೆಗೆ ಆಧಾರ. ಪೂಜೆ ಪ್ರದಕ್ಷಿಣೆ ಭಿನ್ನವಾಗಿದ್ದರೂ ಮೂಲ ಒಂದೆ. ಸಿಟಿ ಹಾಲ್, ಉಯಿನೊ ಪಾರ್ಕ್, ಅಸಕುಸದೇವಸ್ಥಾನ, ಭಾರತ ರಾಯಭಾರಿ ಕಛೇರಿ, ಅರಮನೆ ಸುತ್ತ ಚರಿಬ್ಲಾಸಮ್, ಎಲ್ಲವನ್ನು ವೀಕ್ಷಿಸಿ, ಎರಡು ದಿನ ಗಿಂಜಾ ಟೋಕಿಯೋ ಹೋಟಲಿನ ಇಂದ್ರಜಾಲದ ಆತಿಥ್ಯವನ್ನು ಅನುಭವಿಸಿ ಹಕೋನೆಗೆ 'ರಿಷ್‌ಹುಂ' ದಿನವನ್ನು ಆಚರಿಸಲು ಹೋದೆವು. ಇದೊಂದು ಬಗೆಯ ಪ್ರೇಯರ್ ಮೀಟಿಂಗ್ ಇದ್ದ ಹಾಗೆ. ವಿಶಾಲವಾದ ಟೆಂಟ್ ಕೆಳಗೆ ಹತ್ತು ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಕುಳಿತು, ಮೊಕಿಚಿ ಒಕಾಡ ರಚಿಸದ ತತ್ವಗಳನ್ನು ಪಠಿಸುತ್ತಾರೆ. ಇವರೆಲ್ಲರೂ ನೆಲದ ಮೇಲೆ ಕುಳಿತಿದ್ದರೆ ನಮಗೆ ಮಾತ್ರ ಪಕ್ಕದಲ್ಲಿ ಕುರ್ಚಿ ಕೊಟ್ಟು ಇಂಗ್ಲಿಷ್‌ನಲ್ಲಿ ತರ್ಜುಮೆ ಮಾಡುತ್ತಿದ್ದನ್ನು ಕೇಳಲು ಇಯರ್‌ಫೋನ್ ಒದಗಿಸಿದ್ದರು. ಮೊಕಿಚಿ ಒಕಾಡರವರ ಸೋದರ ಮಗ ಶ್ರೀ ಒಕಾಡ ಇದರ ಸ್ಪಿರಿಚ್ಯುಅಲ್ ಹೆಡ್. ಇವರು ಜೊರ‍್ರೈ ಪ್ರಯೋಗಿಸಿದರು.

ಹಕೋನೆಯಲ್ಲಿ ಎಂ.ಓ.ಎ. ಗೆ ಸೇರಿದ ಕೊವಾಕಿನ್ ಹೋಟೆಲ್‌ನಲ್ಲಿ ಇದ್ದೆವು. ಇಲ್ಲಿಯ ಒಂದು ವಿಶೇಷವೆಂದರೆ ಸನ್ನಸ್ನಾನ (ನಗ್ನಸ್ನಾನ) ಜಪಾನಿನಲ್ಲಿ ಟೂರಿಸ್ಟ್ ಸಂತೈಸಲು ಬಗೆ ಬಗೆಯ

ಸತ್ಕಾರಗಳು ವಿವಿಧ ಹೋಟಲ್‌ಗಳಲ್ಲಿ ದೊರೆಯುತ್ತವೆ. ಬಗೆ ಬಗೆಯ ಮಸಾಜ್ ಮಾಡುವುದರಲ್ಲಿ ಜಪಾನಿಯರು ನಿಪುಣರು, ನಗ್ನಸ್ನಾನವೂ ಒಂದು ವಿಶೇಷ. ಹಕೋನೆ ಅಟಾಮಿ·ಪರ್ವತ ಪ್ರದೇಶದಲ್ಲಿ ನೆಲದಿಂದ ಕುದಿಯುವ ನೀರು ಬುಗ್ಗೆ ಏಳುತ್ತಿರುತ್ತದೆ. ಇದರಲ್ಲಿ ಹಲವು ಬಗೆಯ ಲೋಹಗಳು ಕರಗಿರುತ್ತವೆ. ಈ ನೀರನ್ನು ಕೊಳವೆಗಳ ಮೂಲಕ ಕೊಳದೊಳಗೆ ಸಂಗ್ರಹಿಸಿ ಸಾಮೂಹಿಕ ಸ್ನಾನ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಕೊವಾಕಿನ್ ಹೋಟೆಲ್‌ನಲ್ಲಿ ವಿಶಾಲವಾದ, ಹೆಂಗಸರಿಗೆ ಗಂಡಸರಿಗೆ ಪ್ರತ್ಯೇಕವಾದ ಎರಡು ಸ್ನಾನದ ಮನೆಗಳು ಇದ್ದವು. ಕೊಳ, ನೆಲ, ಗೋಡೆಗಳಿಗೆಲ್ಲ ಪಾಲಿಷ್ ಮಾಡಿದ ಗ್ರಾನೈಟ್ ಕಲ್ಲುಗಳಿಂದ ಅಲಂಕೃತವಾಗಿದ್ದವು. ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಅಲ್ಲಿಯೆ ಇರುವ ಪ್ರತ್ಯೇಕ ಪಾದರಕ್ಷೆಗಳನ್ನು ಹಾಕಿಕೊಂಡು ಒರಾಂಡದೊಳಗೆ ಹೋದರೆ ನಮ್ಮ ಬಟ್ಟೆಗಳನ್ನು ಬಿಚ್ಚಿ ಇಡಲು ಪ್ರತ್ಯೇಕ ಕಪಾಟುಗಳು ಇವೆ. ಎಲ್ಲವನ್ನೂ ಬಿಚ್ಚಿ ಪಾದರಕ್ಷೆಯನ್ನೂ ಅಲ್ಲಿಯೆ ಬಿಟ್ಟು ದಿಗಂಬರರ ಹಾಗೆ ಒಳಕೋಣೆಗೆ ಹೋಗಬೇಕು. ಗೋಡೆಯ ಪಕ್ಕದಲ್ಲಿ ಹತ್ತಾರು ಪ್ರತ್ಯೇಕ ಶವರ್‌ಗಳಿರುತ್ತವೆ. ಮೊದಲು ಅಲ್ಲಿ ಸೋಪು ಹಚ್ಚಿ ಸ್ನಾನ ಮಾಡಿ ನಂತರ ಸನ್ನಸ್ನಾನದ ಕೊಳಕ್ಕೆ ಹೋಗಬೇಕು. ಕಾಲಾವಕಾಶವಿದ್ದಷ್ಟು ಸಮಯ ಈ ಕೊಳದಲ್ಲಿ ಮುಳುಗಿ, ತೇಲಿ, ಈಜಿ, ಕುಳಿತು ಬಿಸಿಬಿಸಿ ನೀರಿನಲ್ಲಿ ಸಾಮೂಹಿಕವಾಗಿ ಸ್ನಾನ ಮಾಡಬಹುದು. ನಂತರ ಕೊಳದ ಮತ್ತೊಂದು ಪಕ್ಕದಲ್ಲಿರುವ ಸ್ಟೀಮ್ ಬಾತ್ ರೂಂಗೆ ಹೋಗಿ ಬಾಗಿಲು ಹಾಕಿ ಕುಳಿತರೆ ಮೈಯ್ಯನ್ನೆಲ್ಲ ಹಿಂಡಿದ ಹಾಗೆ ಬೆವರು ಇಳಿಯಲು ಪ್ರಾರಂಭಿಸುತ್ತದೆ. ಹೆಚ್ಚಿಗೆ ಅಂದರೆ 5-10 ನಿಮಿಷ ಇಲ್ಲಿರಬಹುದು. ಹೊರಗೆ ಬಂದು ಅವರವರ ಟವಲ್ಲಿನಲ್ಲಿ ಮೈ ಒರಸಿಕೊಂಡು ಬಟ್ಟೆ ಹಾಕಿಕೊಳ್ಳಬೇಕು. ಈ ಬಗೆಯ ಸನ್ನಬಾತ್ ದೇಹದ ಎಲ್ಲ ಬಗೆಯ ಆಲಸ್ಯವನ್ನು ಹೋಗಲಾಡಿಸಿ ಮನಸ್ಸನ್ನು ಅಹ್ಲಾದಗೊಳಿಸುತ್ತದೆ. ದೇಹಕ್ಕೂ ನವಚೈತನ್ಯ ಮೂಡುತ್ತದೆ.

ಮುಂದಿನ ಕಾರ್ಯಕ್ರಮ ಹಕೋನೆಯಿಂದ ಕಿಯೋಟೊಗೆ ಪ್ರಯಾಣ. ವೈಯಕ್ತವಾಗಿ ನನಗೆ ಕಿಯೋಟೋಗೆ ಹೋಗುವುದು ಮನಸ್ಸಿಗೆ ಅಹ್ಲಾದಕರವಾಗಿತ್ತು. ನಾಲ್ಕು ವರುಷಗಳ ನಂತರ ಎರಡನೇ ಬಾರಿಗೆ ಕಿಯೋಟೋಗೆ ಹೋಗುವ ಅವಕಾಶ, ಪುನಃ ಕಿಯೋಟೋ ಯೂನಿವರ್ಸಿಟಿಯಲ್ಲಿರುವ ನನ್ನ ಮಿತ್ರರನ್ನು ಕಾಣುವ ಬಯಕೆ ಬಯಸದೆ ಬಂದಿತ್ತು. ಮೊದಲ ಬಾರಿಗೆ ಹೋದಾಗ ಒಂಟಿಯಾಗಿ ಇದ್ದೆ. ಕವಾರಮಾಷಿ, ಜೊರಿ ಸಾಂಜಿ ಸಗಾರುನಲ್ಲಿ ಒಂದು ಸಣ್ಣ ಹೋಟಲ್ ಸನ್‌ಹೋಟೆಲ್‌ನಲ್ಲಿ ಇಳಿದುಕೊಂಡಿದ್ದೆ. ಈ ಬಾರಿ ಕಿಯೋಟೋ ರಾಯಲ್ ಹೋಟೆಲ್‌ನಲ್ಲಿ ವ್ಯವಸ್ಥೆಯಾಗಿತ್ತು. ರಾಯಭಾರಿಗಳಿಗೆ ಸಲ್ಲುವ ಸನ್ಮಾನಗಳು ದೊರೆತಿದ್ದವು. ಈ ಮೊದಲೇ ಕಿಯೋಟೋದಲ್ಲಿ 1600 ಟೆಂಪಲ್‌ಗಳು 1200 ಬ್ಯಾಂಕುಗಳು ಇವೆಯೆಂದು ತಿಳಿಸಿದ್ದೆ. ಈ ಬಾರಿ ಮುಖ್ಯ ದೇವಸ್ಥಾನಗಳು, ಅರಮನೆಗಳು, ಪಾರ್ಕುಗಳು, ಕರೋಕೆ, ಕಬೂಕಿ, ಥಿಯೇಟರ್‌ಗಳನ್ನು ನೋಡುವ ಅವಕಾಶ ದೊರೆಯಿತು. ಕಿಯೋಟೋವಿನ ರಾಕ್‌ಗಾರ್ಡನ್ ಪ್ರಪಂಚಕ್ಕೆ ಹೆಸರುವಾಸಿಯಾದದ್ದು.

ಕಿಯೋಟೋನಿಂದ ಟೋಕಿಯೋಗೆ 530 ಕಿ.ಮೀ. ದೂರವನ್ನು ಕೇವಲ 2½ ಗಂಟೆಯಲ್ಲಿ ಪ್ರಯಾಣ. ವಿಮಾನದಲ್ಲಿ ಗಗನಸಖಿಯರು ಇರುವಂತೆ ರೈಲಿನಲ್ಲಿ ರೈಲ್‌ಹೊಸ್ಟೆಸ್ ಇರುತ್ತಾರೆ. ರೈಲು ಹೊರಡುವ ಮುನ್ನ ಇವರೆ ಆಸನಗಳ ಕವರುಗಳನ್ನು ಬದಲಾಯಿಸಿ, ಪ್ರಯಾಣಿಕರು ಬಿಟ್ಟಿದ್ದ ಪದಾರ್ಥಗಳನ್ನೆಲ್ಲ ಚೀಲದಲ್ಲಿ ತುಂಬಿ ವ್ಯಾಕ್ಯೂಂ ಕ್ಲೀನರಿನಿಂದ ಕಂಪಾರ್ಟ್‌ಮೆಂಟ್

ಸ್ವಚ್ಛಮಾಡಿ ಬಾಗಿಲಲ್ಲಿ ನಿಂತು ಬರಮಾಡಿಕೊಳ್ಳುತ್ತಾರೆ. ಇವರಾರಿಗೂ ಇಂಗ್ಲಿಷ್ ಬರುವಂತೆ ತೋಚಲಿಲ್ಲ. ಆದರೆ ಆಗಾಗ ಮುಖ್ಯ ವಿಷಯಗಳನ್ನು ಮೈಕ್ ಮೂಲಕ ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ದಾರಿಯಲ್ಲಿ ಹಿಮದಿಂದ ಮುಚ್ಚಿದ ಫ್ಯೂಜಿ ಪರ್ವತವನ್ನು ನೋಡಬಹುದು. ನಾಗೋಯ ಮತ್ತು ಟೋಕಿಯೋ ಮಧ್ಯೆ ಟೀ ತೋಟಗಳಿವೆ. ದಾರಿಯುದ್ದಕ್ಕೂ ಇಕ್ಕೆಲದಲ್ಲಿ ವೀಕ್ಷಿಸಿದಾಗ ಎಲ್ಲಿಯೂ ಜನರು ಅಡ್ಡಾಡುವುದಾಗಲಿ ಅಥವಾ ಕುಳಿತು ಹರಟೆ ಹೊಡೆಯು ವುದಾಗಲಿ, ವೃಥಾ ಕಾಲಹರಣ ಮಾಡುವುದಾಗಲಿ ಕಾಣಲಿಲ್ಲ. ಮಾನವ ಕುಲದಲ್ಲಿ ಇಷ್ಟು ಮೌನವಾಗಿ ಕಾರ್ಯತತ್ಪರರಾಗಿರುವುದನ್ನು ನೋಡುವ ಭಾರತೀಯರಿಗೆ ಸೋಜಿಗವೆಂದೆನಿಸ ಬಹುದು ಅಥವಾ ಜಪಾನಿಯರು ಇಲ್ಲಿಗೆ ಬಂದಾಗ ನಾವು ಕಾಲಹರಣ ಮಾಡುವುದನ್ನು ನೋಡಿ ಇವರೆಲ್ಲರೂ ತಮ್ಮಂತೆ ಕೆಲಸ ಮಾಡಿಬಿಟ್ಟರೆ ತಮ್ಮ ಪಾಡೇನು? ಎಂದು ಅವರು ಗ್ರಹಿಸಬಹುದೇನೋ!

ಟೋಕಿಯೊದಲ್ಲಿ ಗಿಂಜಟೋಕಿಯೊ ಹೋಟೆಲ್‌ನಲ್ಲಿ ಇಳಿದುಕೊಂಡಿದ್ದಾಗ ರಾತ್ರಿ ಊಟಕ್ಕೆ ಮುಂಚೆ ನಮ್ಮೆಲ್ಲರನ್ನು ಒಂದು ಹಾಲ್‌ನಲ್ಲಿ ಸೇರಿಸಿ ಕೂರಿಸಿದ್ದರು. ನಮಗೆ ಅರಿಯದೆ ಏನೋ ಒಂದು ಸಮಾರಂಭವಾಗುವ ಸೂಚನೆ ಕಾಣುತ್ತಿತ್ತು. ನಾಲ್ಕಾರು ಹುಡುಗಿಯರು ವಿಶೇಷ ಉಡುಪಿನಲ್ಲಿ ಬಂದು ಒಂದು ದೊಡ್ಡ ತಟ್ಟೆಯಲ್ಲಿ ಕೇಕ್ ಮತ್ತು ಕ್ಯಾಂಡಲ್‌ಗಳನ್ನು ತಂದಿಟ್ಟು ಪಕ್ಕದಲ್ಲಿ ಗಂಭೀರವಾಗಿ ನಿಂತರು. ನಮ್ಮ ಪ್ರವಾಸದ ಉಸ್ತುವಾರಿಯ ಎಂ.ಒ.ಎ. ಟೀಮಿನ ಮುಖ್ಯಸ್ಥ ಶ್ರೀ ಶೊನೊಬೆಯವರು ಎದ್ದು ನಿಂತು ಈವತ್ತಿನ ಸಂತೋಷ ಸಮಾರಂಭಕ್ಕೆ ನಿಮ್ಮನ್ನೆಲ್ಲ ಸ್ವಾಗತಿಸಲು ಸಂತೋಷಿಸುತ್ತೇನೆ. ಇಂಡಿಯನ್ ಡೆಲಿಗೇಶನಲ್ಲಿ ಒಬ್ಬರಾದ ಪ್ರೊ॥ ವೀರೇಶ್‌ರವರ ಹುಟ್ಟು ಹಬ್ಬ (4, ಏಪ್ರಿಲ್) ಅವರಿಗೆ ಶುಭಾಶಯ ಕೋರುತ್ತೇನೆಂದು ಹೇಳಿದಾಗ ನಮ್ಮ ತಂಡದವರೆಲ್ಲರೂ ನನ್ನತ್ತ ನೋಡಿ ನಮಗೇಕೆ ಹೇಳಲಿಲ್ಲವೆಂದು ಪ್ರಶ್ನಿಸಿದರು. ನನಗೆ ಅದರ ಅರಿವು ಗೊತ್ತಿದ್ದರೆ ತಾನೇ ಅವರಿಗೆ ಹೇಳುವುದು! ಆ ಗಳಿಗೆಯವರಿಗೂ ಅಂದು ನನ್ನ ಹುಟ್ಟುಹಬ್ಬವೆಂದು ತಿಳಿದಿರಲಿಲ್ಲ. ಮೊದಲೇ ತಿಳಿಸಿರುವ ಹಾಗೆ ಮೂರು ತಿಂಗಳಲ್ಲಿ ಮೂರು ಕ್ಲಾಸ್‌ಗಳನ್ನು ದಾಟಿ ಮೂರನೆ ತರಗತಿ ಪರೀಕ್ಷೆಗೆ ಕೂರಿಸುವ ಪ್ರಯಾಸದಲ್ಲಿ ಶಾಲೆಯ ಉಪಾಧ್ಯಾಯರು ಅವರ ಅಂದಾಜಿನ ಪ್ರಕಾರ 4-4-34 ಎಂದು ಬರೆದುಕೊಂಡರು. ನಮ್ಮ ಪ್ರವಾಸಕ್ಕೆ ಮುಂಚೆಯೆ ಕಳುಹಿಸಿದ್ದ ಮಾಹಿತಿ ಪ್ರಕಾರ ಈ ತಾರೀಖನ್ನು ಗುರುತಿಟ್ಟುಕೊಂಡು ಈ ಸಮಾರಂಭವನ್ನು ಏರ್ಪಡಿಸಿದ್ದರು.

ನನ್ನ ತಲೆಮಾರಿನ ಭಾರತೀಯರಿಗೆ ಈ ಹುಟ್ಟುಹಬ್ಬದ ಗೀಳಾಗಲಿ ಅಥವಾ ಅದನ್ನು ಆಚರಿಸುವ ವಾಡಿಕೆಯಾಗಲಿ ಬರಲಿಲ್ಲ. ಅಲ್ಲಲ್ಲಿ ಉಳ್ಳವರು ಉತ್ಸವ ಮಾಡಬಹುದು, ನನ್ನಂತವರು ಏನು ಮಾಡಬಲ್ಲರು? ಆದರೆ ಇತ್ತೀಚೆಗೆ ಇದೊಂದು ದೊಡ್ಡ ಸಂಭ್ರಮವಾಗಿ ಪರಿಣಮಿಸುತ್ತಿದೆ. ತಂದೆಯಾದವನು ಹೆಂಡತಿ ಮಕ್ಕಳ ಹುಟ್ಟು ಹಬ್ಬವನ್ನು ಜ್ಞಾಪಕದಲ್ಲಿಟ್ಟುಕೊಂಡು ಮುಂಜಾನೆ ಎಲ್ಲರಿಗಿಂತ ಮುಂಚಿತವಾಗಿ ಹ್ಯಾಪಿ ಬರ್ತ್‌ಡೆ ಹಾರೈಸದಿದ್ದರೆ ಅವನು ಈ ಋತುಮಾನಕ್ಕೆ ತಕ್ಕವನಲ್ಲವೆಂದು ತಿಳಿಯುವರು. ನನ್ನದನ್ನೇ ನಾನು ಜ್ಞಾಪಿಸಿಕೊಳ್ಳದಿದ್ದವನು ಮಕ್ಕಳ ಹುಟ್ಟುಹಬ್ಬವನ್ನು ಜ್ಞಾಪಕದಲ್ಲಿಟ್ಟುಕೊಂಡು ಹಾರೈಸುವುದೆಂತು? ಅದೇನೆ ಇರಲಿ ಗಂಡ, ತಂದೆಯಾದವನಿಗೆ ಇದರ ಮರೆವು ತಕ್ಕುದಲ್ಲ! ಇದರಿಂದ ಹಲವು ಬಾರಿ ನಾನು ಪೇಚಾಟಕ್ಕೆ ಸಿಕ್ಕಿಕೊಂಡಿದ್ದೇನೆ.

ಮೂರನೆ ಬಾರಿ ಜಪಾನಿಗೆ ಹೋಗಿದ್ದು 1995ರಲ್ಲಿ. ವರ್ಲ್ಡ್ ಸಸ್ಟೈನಬಲ್ ಅಗ್ರಿಕಲ್‌ಚರಲ್ ಅಸೋಸಿಯೇಷನ್ ಆಮಂತ್ರಣದ ಮೇರೆಗೆ. ಸಾವಯವ ಕೃಷಿ ಬಗ್ಗೆ ನಡೆದ ಹತ್ತು ದಿನದ ಕಾರ್ಯಗಾರ ಮತ್ತು ತರಬೇತಿಗೆ ಬೆಂಗಳೂರಿನಿಂದ ನಮ್ಮ ಕಾಲೇಜಿನ ಪದವೀಧರರಾದ ಚಂದ್ರಪ್ಪ ಮತ್ತು ಕೊಡಗಿನ ಷರಿ ಸುಬ್ಬಯ್ಯ ಸೇರಿ ಮೂವರು ಹೋಗಿದ್ದೆವು. ಈ ಕಾರ್ಯಗಾರ ಮತ್ತು ತರಬೇತಿ ಎಂ.ಒ.ಎ. ಓಹಿಟೊ ಫಾರಂನಲ್ಲಿ ನಡೆಯಿತು. ಅಮೆರಿಕ, ಹವಾಯ್, ಥೈಲ್ಯಾಂಡ್ ಮತ್ತು ಇಂಡಿಯಾದಿಂದ ಸೇರಿ ಒಟ್ಟು ಇಪ್ಪತ್ತು ಜನರಿದ್ದೆವು. ಎಲ್ಲರಿಗೂ ಫಾರಂನಲ್ಲಿಯೆ ವಸತಿ ಊಟ. ಮುನ್ನೂರು ವರುಷದ ಹಳೆಯ ಹುಲ್ಲಿನ ಅರಮನೆಯಂತಹ ಪುರಾತನ ಎರಡು ಮನೆಗಳನ್ನು ಉತ್ತರ ಜಪಾನಿನಿಂದ ಕಿತ್ತು ತಂದು ಇಲ್ಲಿ ಪುನರ್ ರಚಿಸಿದ್ದಾರೆ. ವಿಶಾಲವಾದ ಈ ಮನೆಗಳಲ್ಲಿ ಮಾಳಿಗೆ, ದನಕುರಿ ಕೋಳಿಗಳನ್ನು ಇಡಲು ಒಪ್ಪಾರು, ಅಡಿಗೆ ಊಟ ತಿಂಡಿ ಮಾಡುವ ಹಜಾರು, ಮಹಡಿ ಮೇಲೆ ಮಲಗಲು ಕೋಣೆಗಳು ಇವೆ. ಆದರೆ ಕೂರಲು ಮಲಗಲು ಕುರ್ಚಿ ಮಂಚಗಳೇನು ಇಲ್ಲ. ಕೂರಲು ದೀವಾನದ ತರಹ ದಿಂಬುಗಳು ಮಲಗಲು ಚಾಪೆ, ಅದರ ಮೇಲೆ ಹಾಸಿಗೆ ಹರಡಿ ಮಲಗಿ ಮುಂಜಾನೆ ಮಡಿಚಿ ಇಡುವುದು. ಎಲ್ಲರೂ ಅವರವರ ಕೆಲಸ ಅವರೇ ಮಾಡಿಕೊಳ್ಳಬೇಕು. ಊಟಕ್ಕೆ ಕಾಮನ್‌ಮೆಸ್. ಪರಿಚಾರಕರು, ಕೂಲಿಗಳು, ಆಫೀಸರ್ಸ್ ಅನ್ನುವ ಕಾಡರ್ಸ್ ಇಲ್ಲ.

ಮೊದಲ ದಿನ ಫಾರಂನ ಪರಿಚಯ ಮಾಡಿಕೊಡುವಾಗ ನಿಮ್ಮಲ್ಲಿ ಎಷ್ಟು ಜನ ಕೂಲಿಕಾರರಿದ್ದಾರೆಂದು ಕೇಳಿದೆ. ಅವರಿಗೆ ಅರ್ಥವಾಗಲಿಲ್ಲ. ನಂತರ ಇಲ್ಲಿ ಒಟ್ಟು ಇಪ್ಪತೊಂಬತ್ತು ಜನ ಕೆಲಸ ಮಾಡುತ್ತಿದ್ದೇವೆ ಅಂದರು. ನನಗೆ ಕೊಂಚ ಮುಜುಗರವಾಯಿತು. ಈ ಪ್ರಶ್ನೆಯನ್ನು ಕೇಳಬಾರದಿತ್ತು. ಕೂಲಿಕಾರರು ಎಂಬ ಪದ ಬಹುಶಃ ಭಾರತಕ್ಕೆ ಮೀಸಲಿರಬಹುದು. ಎಲ್ಲೆಲ್ಲೂ ಕೆಲಸಗಾರರಿರುವರೆ ಹೊರತು ಕೂಲಿಕಾರರಿಲ್ಲ! ಅರ್ಧ ಗಂಟೆಯ ನಂತರ ನಮಗೆ ವಿವರಿಸುತ್ತಿದ್ದವರೆ ಕ್ಲಾಸ್ ತೆಗೆದುಕೊಂಡರು. ಅವರಿಗಿದ್ದ ಕಂಪ್ಯೂಟರ್ ಪರಿಜ್ಞಾನ, ವಿಷಯಗಳ ಜೋಡಣೆ, ಸಾವಯವ ಕೃಷಿಯ ಆಳವಾದ ಅಧ್ಯಯನ ನಮ್ಮನ್ನು ಚಕಿತಗೊಳಿಸಿತು. ಉಟದ ನಂತರ ಮಧ್ಯಾಹ್ನ 'ಬಯೊಡ' ತಯಾರು ಮಾಡಲು ಬೇಕಿದ್ದ ಮಣ್ಣು, ನೀರು ಎಲ್ಲವನ್ನು ಇವರೆ ತಂದು ಶೇಖರಿಸಿ ಕೈಯಲ್ಲಿ ಗುದ್ದಲಿ ಹಿಡಿದು ತಯಾರು ಮಾಡುವ ವಿಧಾನವನ್ನು ಪ್ರಾತ್ಯಕ್ಷ ತೋರಿಸಿದರು. ಅಲ್ಲಿರುವ ಇಪ್ಪತ್ತೊಂಬತ್ತು ಜನಕ್ಕೂ ಆ ಫಾರಂನಲ್ಲಿ ಮಾಡಬೇಕಾದ ಪ್ರತಿಯೊಂದು ಕೆಲಸವೂ ಗೊತ್ತಿದ್ದು ಯಾರು, ಯಾವ ಸಂದರ್ಭದಲ್ಲಿ ಯಾವ ಕೆಲಸವನ್ನಾದರೂ ಮಾಡಲು ನಿಪುಣರಿದ್ದಾರೆಂದು ತಿಳಿಸಿದರು. ಪ್ರತಿಯೊಬ್ಬರೂ ಅವರವರ ಕೆಲಸದಲ್ಲಿ ವಿಜ್ಞಾನಿ ಮತ್ತು ಕೆಲಸಗಾರನೂ ಹೌದು. ಪ್ರತಿ ದಿನ ಮುಂಜಾನೆ 7-30 ಗಂಟೆಗೆ ಸರಿಯಾಗಿ ಎಲ್ಲರೂ ಒಂದು ನಿಗದಿತ ಸ್ಥಳದಲ್ಲಿ ಸೇರುವರು. ಡ್ರಿಲ್ ಮಾಡುವ ಒಂದು ಮ್ಯೂಸಿಕ್ ಹಾಕುವರು. ಅದರ ಪ್ರಕಾರ ಹದಿನೈದು ನಿಮಿಷ ಪ್ರತಿಯೊಬ್ಬರೂ ವ್ಯಾಯಾಮ ಮಾಡುವರು. ತರಬೇತಿಗೆ ಬಂದಿರುವವರೆಲ್ಲರೂ ಕೂಡ ಸೇರಿ ಮಾಡಬೇಕು. ಬಾಯಲ್ಲೂ ಕೂಡ ಜೋರಾಗಿ ಹೇಳಿಕೊಳ್ಳಬೇಕು. ಈ ವ್ಯಾಯಾಮ ಅಂದಿನ ಕೆಲಸಕ್ಕೆ ಹೊಸಹುರುಪು ಚೈತನ್ಯವನ್ನು ಒದಗಿಸುವುದರ ಜೊತೆಗೆ ಎಲ್ಲರೂ ಒಂದೇ ಎನ್ನುವ ಮನೋಭಾವ ಬರುತ್ತದೆ.

ಸಾವಯವ ಕೃಷಿಗೆ ಮೂಲಭೂತವಾದ ಪೌಷ್ಠಿಕಾಂಶ ದೊರಕಿಸುವ ವಿಧಾನಗಳನ್ನು ಇಲ್ಲಿ ಪರಿಪಕ್ವ ಮಾಡಿಕೊಂಡಿದ್ದಾರೆ. ದಡ್ಡನ ಆರಂಭ ಗೊಬ್ಬರದಲ್ಲಿದೆ ಎನ್ನುವ ಮಾತು ಸತ್ಯ. ಆದರೆ

ಎಲ್ಲಾ ಗೊಬ್ಬರಗಳು ಸಮತೋಲನವಾದ ಪೌಷ್ಠಿಕಾಂಶ ಹೊಂದಿರುವುದಿಲ್ಲ. ಸಸ್ಯಗಳಿಗೆ ಸಾಮಾನ್ಯವಾಗಿ ಹದಿನೇಳು ಸತ್ವಗಳುಳ್ಳ ಪೌಷ್ಠಿಕಾಂಶಗಳ ಆವಶ್ಯಕತೆ ಇದೆ. ಇವೆಲ್ಲವನ್ನು ಒದಗಿಸುವ ವಿಧಾನ ವೈಜ್ಞಾನಿಕವಾಗಿ ಕಾಂಪೋಸ್ಟ್ ತಯಾರು ಮಾಡುವುದು. ಆಧುನಿಕ ಬೇಸಾಯದಲ್ಲಿ ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿರುವ ರಸಗೊಬ್ಬರಗಳಲ್ಲಿ ಸಾರಜನಕ, ರಂಜಕ ಮತ್ತು ಪೊಟಾಷ್ ಮಾತ್ರ ಇರುತ್ತವೆ. ಕೊಟ್ಟಿಗೆ ಗೊಬ್ಬರ ಬಳಸದೆ ರಸಗೊಬ್ಬರವನ್ನೇ ಬಳಸುತ್ತಾ ಬಂದರೆ, ಮೊದಮೊದಲು ಹೆಚ್ಚು ಇಳುವರಿ ಬಂದರೂ ಕ್ರಮೇಣ ಭೂಮಿ ಬರಡಾಗುತ್ತದೆ. ಹಾಕಿದ ರಸಗೊಬ್ಬರದ ಜೊತೆ ಭೂಮಿಯೊಳಗಿರುವ ಬೇರೆ ಪೌಷ್ಠಿಕಾಂಶಗಳನ್ನು ಬೆಳೆ ಉಪಯೋಗಿಸುವುದರಿಂದ ಬಂಜರಾಗುವ ಸಾಧ್ಯತೆ ಇದೆ. ಆದ್ದರಿಂದ ಭೂಮಿಯ ಉತ್ಪಾದನೆಯನ್ನು ಸುಸ್ಥಿರವಾಗಿ ಕಾಪಾಡಲು ರಸಗೊಬ್ಬರಗಳ ಜೊತೆಗೆ ಕನಿಷ್ಠ ಪ್ರಮಾಣದ ಸಾವಯವ ಗೊಬ್ಬರ ಹಾಕಲೇಬೇಕು.

ನಮ್ಮ ದೇಶದಲ್ಲಿ ಪುರಾತನಕಾಲದಿಂದಲೂ ದನದ ಗೊಬ್ಬರವೇ ಬೆಳೆ ಉತ್ಪಾದನೆಗೆ ಮೂಲ ಪೌಷ್ಠಿಕಾಂಶವಾಗಿದೆ. ಅಧಿಕ ಇಳುವರಿ ಕೊಡುವ ತಳಿಗಳು ಚಾಲ್ತಿಗೆ ಬಂದ ನಂತರ ಸಮತೋಲನ ಗೊಬ್ಬರ ಬಳಕೆ ಅನಿವಾರ್ಯವಾಯಿತು. ಕೇವಲ ದನದ ಗೊಬ್ಬರ ಒಂದೇ ಸಾಲದಾಯಿತು. ಕಾರಣ ಇದರಲ್ಲಿ ಸಾರಜನಕ ಜಾಸ್ತಿ ಇದ್ದು ರಂಜಕ ಮತ್ತು ಪೊಟಾಷ್ ಕೊರತೆ ಇರುವುದರಿಂದ. ಕೊಟ್ಟಿಗೆ ಗೊಬ್ಬರದಲ್ಲಿ ಸಾರಜನಕ ಅಂಶವು ಶೇಕಡ 0.4 - 0.6ರವರೆಗೆ ಇದ್ದರೂ ಅದನ್ನು ಸರಿಯಾಗಿ ಶೇಖರಿಸಿ, ಸಕಾಲದಲ್ಲಿ ಭೂಮಿಗೆ ಹಾಕದಿರುವುದರಿಂದ ಪೂರ್ಣಫಲ ದೊರೆಯುತ್ತಿಲ್ಲ. ದನಗಳು ವಿಸರ್ಜಿಸಿದ ಸಗಣಿಯಲ್ಲಿ ಸಾರಜನಕ ಅಮೋನಿಯ ರೂಪದಲ್ಲಿರುವುದರಿಂದ ಅದು ಬೇಗ ಗಾಳಿಯಲ್ಲಿ ಆವಿಯಾಗಿ ಪೋಲಾಗುತ್ತದೆ. ಎರಡು ದಿವಸ ಇದನ್ನು ಗಾಳಿಯಲ್ಲಿಟ್ಟರೆ ಶೇಕಡ 48 ರಷ್ಟು ಸಾರಜನಕ ಅಮೋನಿಯ ರೂಪದಲ್ಲಿ ಆವಿಯಾಗುತ್ತದೆಯೆಂದು ತಿಳಿದಿದೆ. ದನ ತೊಪ್ಪೆ ಹಾಕಿದಾಗ ಬರುವ ಮೂಗು ಕಟ್ಟುವಂತಹ ವಾಸನೆ ಒಣಗಿದ ಮೇಲೆ ಮೂಸಿದರೂ ಬಾರದು.

ನಮ್ಮ ದೇಶದಲ್ಲಿ ವರುಷವೆಲ್ಲ ಸಿಗುವ ದನದ ಗೊಬ್ಬರವನ್ನು ತಿಪ್ಪೆಯಲ್ಲಿ ಕೂಡಿಟ್ಟು ಮುಂಗಾರು ಮಳೆ ಬರುವ ಮುನ್ನವೆ ಹೊಲಗದ್ದೆಗಳಲ್ಲಿ ಚೆಲ್ಲುವ ವಾಡಿಕೆ ಇದೆ. ತಿಪ್ಪೆಗುಂಡಿ ಮಳೆ ಗಾಳಿಗೆ ಸದಾ ತೆರೆದಿರುವುದರಿಂದ ತಳದಲ್ಲಿ ನೀರು ನಿಂತು ಗಟ್ಟಿಯಾಗಿ ಮೇಲ್ಭಾಗ ತೇವಾಂಶವೆಲ್ಲ ಹೋಗಿ ಒಣಗಿರುತ್ತದೆ. ಗಟ್ಟಿಯಾದ ಗೊಬ್ಬರದಲ್ಲಿ ಸೂಕ್ಷ್ಮಾಣುಗಳೆಲ್ಲ ಸತ್ತು ನಿಸ್ಸಾರವಾಗಿದ್ದರೆ ಒಣಗಿದ ಮೇಲ್ಭಾಗ ಗೆದ್ದಲಿಗೆ ಆಹಾರವಾಗುತ್ತದೆ. ಇದರ ಜೊತೆಗೆ ರೈತರು ಬಿಡುವಿದ್ದಾಗ ಗೊಬ್ಬರ ಹಾಕುವ ಶಾಸ್ತ್ರ ಪೂರೈಸುವುದರಿಂದ ಪುನಃ ಗಾಳಿ, ಬಿಸಿಲು, ಮಳೆಗೆ ಸಿಕ್ಕಿ ಪೋಲಾಗುತ್ತದೆ. ಲೆಕ್ಕಕ್ಕೆ ಎಕರೆಗೆ ಹತ್ತಿಪ್ಪತ್ತು ಗಾಡಿ ಗೊಬ್ಬರ ಹಾಕಿದರೂ ಬೆಳೆಗೆ ಸಿಕ್ಕುವುದು ಅತ್ಯಲ್ಪ. ನಮ್ಮ ಇಳುವರಿ ಕುಗ್ಗುತ್ತಿರುವುದಕ್ಕೆ ಮೂಲಕಾರಣಗಳಲ್ಲಿ ಇದೂ ಒಂದು.

ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಪ್ರತಿ ವರ್ಷವೂ 500 ರಿಂದ 700 ದಶಲಕ್ಷ ಟನ್ ಸಾವಯವ ಪದಾರ್ಥ ಪೋಲಾಗುತ್ತಿದೆ. ಇದಕ್ಕೆ ಸರಿಯಾದ ರೀತಿಯಲ್ಲಿ ಸರಿಯಾದ ಪ್ರಮಾಣದಲ್ಲಿ ದನ, ಕುರಿ, ಕೋಳಿ, ಗೊಬ್ಬರಗಳನ್ನು ಬೆರಸಿ ಕಾಂಪೋಸ್ಟ್ ಮಾಡಿದರೆ ರಸಗೊಬ್ಬರಗಳ ಆಮದು ಬೇಕಿಲ್ಲವೆಂದು ತಜ್ಞರ ಅಭಿಪ್ರಾಯ. ಪ್ರತಿಯೊಬ್ಬರೂ ಕಸವನ್ನು

ರಸವನ್ನಾಗಿ ಮಾಡುವ ಕಲೆಯನ್ನು ಕಲಿತರೆ ಪರಿಸರ ಮಾಲಿನ್ಯ ಹೋಗಿ ಭೂಮಿ ಫಲವತ್ತಾಗಿ, ಸಮೃದ್ಧಿಯಾದ ಬೆಳೆಯಾಗಿ ಧಾನ್ಯ ಧನ ಸಂಪತ್ತು ಹೆಚ್ಚುವುದು. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸು ಈ ಕಲೆಯಲ್ಲಿ ಅಡಕವಾಗಿದೆ. ತೊಂಬತ್ತೈದು ಕೋಟಿ ಜನರಿರುವ ನಮ್ಮ ದೇಶದಲ್ಲಿ ಮಲಮೂತ್ರಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಕಾಂಪೋಸ್ಟ್ ಮಾಡಿ ಬಳಸಿದರೆ ಬಡತನವೆಲ್ಲಿರುವುದು! ಭಾರತದಲ್ಲಿ ಪ್ರಪಂಚದ ಶೇಕಡ 16ರಷ್ಟು ಜನಸಂಖ್ಯೆ, ಶೇಕಡ 15 ರಷ್ಟು ಜಾನುವಾರುಗಳಿವೆ. ಆದರೆ ಪ್ರಪಂಚದ ಭೂ ಭಾಗದ ಕೇವಲ ಶೇಕಡ 2 ರಷ್ಟು ಜಾಗ, ಶೇಕಡ ಒಂದಷ್ಟು ಕಾಡು, ಶೇಕಡ 0.5 ರಷ್ಟು ಗೋಮಾಳವಿದೆ. ಆದ್ದರಿಂದ ಬಡತನದ ಮೂಲ ಎಲ್ಲಿದೆಯೆಂದು ಅಂದಾಜು ಮಾಡಬಹುದು. ಆದರೂ ಎಚ್ಚೆತ್ತುಕೊಂಡರೆ ಸುಭಿಕ್ಷೆಯ ನಾಡನ್ನಾಗಿ ಮಾಡಬಹುದು. ನಮ್ಮ ದೇಶದ ಭೂ ಭಾಗದ ಶೇಕಡ 52 ರಷ್ಟು ಜಾಗ ಸಾಗುವಳಿಗೆ ಯೋಗ್ಯವಾಗಿದೆ. ವರುಷದಲ್ಲಿ ಮೂರು ಬೆಳೆ ತೆಗೆಯಲು ಸಾಕಷ್ಟು ಶಾಖ, ಸೂರ್ಯರಶ್ಮಿ ದೊರೆಯುತ್ತದೆ. ಸಹರಾ ಮರುಭೂಮಿಯ ಮರಳನ್ನು ಚಿನ್ನವಾಗಿ ಪರಿವರ್ತಿಸಿದ ಇಸ್ರೇಲಿಯನ್ನರ ಸಾಹಸ ನಮ್ಮನ್ನು ಚಕಿತಗೊಳಿಸಬೇಕು. ನಮ್ಮ ಬಹುತೇಕ ಬೆಳೆಗಳ ಎಕರೆವಾರು ಇಳುವರಿ ಪ್ರಪಂಚದ ಎಲ್ಲ ದೇಶಗಳಿಗಿಂತ ಕಡಿಮೆ. ಈಗ ಉತ್ಪತ್ತಿ ಮಾಡುತ್ತಿರುವ 200 ದಶಲಕ್ಷ ಟನ್ ಆಹಾರವನ್ನು ದ್ವಿಗುಣ ಪಡಿಸುವ ಸಾಧ್ಯತೆ ಖಂಡಿತ ಇದೆ. ಆದರೆ ಮೊದಲು ನಾವು ಮಾಡಬೇಕಾದ ಆದ್ಯಕರ್ತವ್ಯ ಸಮರ್ಪಕವಾದ ನೀರು ನಿರ್ವಹಣೆ, ಸಮತೋಲನವಾದ ಸಸ್ಯ ಪೌಷ್ಠಿಕಾಂಶ ದೊರಕಿಸುವುದು. ಇವೆರಡಕ್ಕೂ ಸಾಕಷ್ಟು ತಂತ್ರಜ್ಞಾನ ನಮ್ಮಲ್ಲಿದೆ. ಇದಕ್ಕೆ ಒತ್ತುಕೊಡುವ ಮುಂದಾಳುತನ ಬೇಕು.

ಕಾಂಪೋಸ್ಟ್ ಮಾಡುವ ವಿಧಾನ ಹಲವಾರು ಇದ್ದರೂ ಮೂಲ ತತ್ವಗಳೆಂದರೆ ಸಾಕಷ್ಟು ತೇವಾಂಶ, ಆಮ್ಲಜನಕ ಮತ್ತು ಕನಿಷ್ಠ ಶಾಖಗಳನ್ನು ಒದಗಿಸುವುದು. ಮೂಲವಸ್ತುಗಳನ್ನೆಲ್ಲ ಸಂಗ್ರಹಿಸಿಕೊಂಡಿದ್ದು ಒಂದೇ ಸಾರಿ ಕಾಂಪೋಸ್ಟ್ ತಯಾರು ಮಾಡುವುದರಿಂದ ಮೇಲಿನ ಮೂರು ಅಂಶಗಳನ್ನು ಸರಿಯಾದ ಪ್ರಮಾಣದಲ್ಲಿ ನಿಯಂತ್ರಿಸಬಹುದು. ಕಾಂಪೋಸ್ಟ್ ಗುಂಡಿಯ ಬದಲು ಸಮತಟ್ಟಾದ ಜಾಗದಲ್ಲಿ, ನಾಲ್ಕು ಅಡಿ ಅಗಲ, ಅವಶ್ಯವಿದ್ದಷ್ಟು ಉದ್ದ, ಇಕ್ಕೆಲದಲ್ಲಿ ಬೇಲಿಯಂತೆ ನಾಲ್ಕು ಅಡಿ ಎತ್ತರಕ್ಕೆ ಸಾವಯವ ಪದಾರ್ಥಗಳು ಚಲ್ಲದಂತೆ ಹಿಡಿದಿಡಲು ಕಟ್ಟಬೇಕು. ಸ್ಥಳದಲ್ಲಿ ದೊರೆಯುವ ಯಾವ ವಸ್ತುವನ್ನಾದರೂ ಬೇಲಿಗೆ ಬಳಸಬಹುದು. ಕಲ್ಲುಚಪ್ಪಡಿಯಾದರೆ ಶಾಶ್ವತವಾಗಿರುತ್ತವೆ. ಎರಡು ಚಪ್ಪಡಿಗಳ ಮಧ್ಯೆ ಎರಡಂಗುಲ ಜಾಗ ಬಿಡಬೇಕು. ತಡಿಕೆ ಬೇಲಿಗಳಾದರೆ ರಂಧ್ರಗಳು ಅಗಲವಾಗದಂತೆ ನೋಡಿಕೊಳ್ಳಬೇಕು. ಸಾವಯವ ವಸ್ತುಗಳಿಗೂ ಸಗಣಿಗೊಬ್ಬರದ ಪ್ರಮಾಣ ಮೂರನೆ ಎರಡು ಭಾಗ ಮತ್ತು ಮೂರನೇ ಒಂದು ಭಾಗ ಇರಬೇಕು. ಪ್ಲಾಸ್ಟಿಕ್, ರಬ್ಬರ್, ಗಾಜು, ಕಬ್ಬಿಣ, ಹೆಚ್ಚು ಜಿಡ್ಡಾದ ವಸ್ತುಗಳನ್ನು ಹೊರತುಪಡಿಸಿ ಪರಿಸರದಲ್ಲಿ ಸಿಕ್ಕುವ ಸಸ್ಯಮೂಲ (ಹಸಿರಾಗಲಿ ಒಣಗಾಗಲಿ), ಬೆಳೆಯ ಉಳಿಕೆ, ಕೂಳೆ, ತೂರಿದ ಹೊಟ್ಟು, ಭತ್ತದ ಹೊಟ್ಟು, ಕಾಫಿ ಹೊಟ್ಟು ಮುಂತಾದುವನ್ನೆಲ್ಲ ಉಪಯೋಗಿಸಬಹುದು. ಸಾವಯವ ವಸ್ತುಗಳನ್ನು ಅರ್ಧ ಅಡಿ ಎತ್ತರಕ್ಕೆ ಹಾಸಿ ಅದರ ಮೇಲೆ ಸಗಣಿ ಬಗಡ ಅರ್ಧ ಅಡಿ ನೆನೆಯುವಂತೆ ತೊಯ್ಸಿಸಬೇಕು. ನಂತರ ಒಂದು ಪದರ ಕೊಟ್ಟಿಗೆ ಗೊಬ್ಬರ, ಕೋಳಿಗೊಬ್ಬರ, ಕುರಿ ಗೊಬ್ಬರ, ಕುದರೆ ಗೊಬ್ಬರ, ಮಲಮೂತ್ರ ಮುಂತಾದುವುಗಳ ಯಾವುದಾದರೊಂದನ್ನು ಹಾಕಬೇಕು. ಪುನಃ ಅರ್ಧ ಅಡಿ ಸಾವಯವ ವಸ್ತು ಹಾಕಿ ಗೊಬ್ಬರದ

ಬಗಡದಿಂದ ಅರ್ಧಅಡಿ ತೊಯ್ಯುವಂತೆ ಹಾಕಬೇಕು. ಹೀಗೆ 4-5 ಅಡಿ ಎತ್ತರ ಬರುವವರಿಗೂ ಶೇಖರಿಸಿ, ಮೇಲೆ ಪ್ಲಾಸ್ಟಿಕ್ ಹಾಳೆಯನ್ನಾಗಲಿ ಅಥವಾ ತೆಂಗಿನ ಗರಿ, ಅಡಿಕೆ ಗರಿ, ಬಾಳೆ ಎಲೆ, ಮುಂತಾದವುಗಳಿಂದ ಮಾಡು ಹೊದಿಸಿದ ಹಾಗೆ ಮುಚ್ಚಬೇಕು. ಇವೇನು ಸಿಗದಿದ್ದರೆ ಕೆಂಪು ಮಣ್ಣು ಕಲಸಿ ಒಂದೆರಡು ಇಂಚು ದಪ್ಪ ಮೆತ್ತ ಬೇಕು. ಒಳಗೆ ಶೇಕಡ 60 ರಷ್ಟು ತೇವಾಂಶವಿರುವಂತೆ ನೋಡಿಕೊಳ್ಳಬೇಕು. ಒಂದು ತಿಂಗಳ ನಂತರ ಒಂದು ಕಡೆಯಿಂದ ಇದನ್ನು ಅಡಿ ಮೇಲು ಮಾಡಿ ತೇವಾಂಶ ಜಾಸ್ತಿ ಇದ್ದರೆ ಸ್ವಲ್ಪ ಸಮಯ ಒಣಗಲು ಬಿಡಬೇಕು. ಕಡಿಮೆ ಇದ್ದರೆ ನೀರು ಚಿಮುಕಿಸಬೇಕು. ತೇವಾಂಶ ಸರಿಯಾದ ಪ್ರಮಾಣದಲ್ಲಿ ಇದೆ ಎಂದು ತಿಳಿಯಬೇಕಾದರೆ ಒಂದು ಹಿಡಿ ಕಾಂಪೋಸ್ಟ್‌ನ್ನು ಗಟ್ಟಿಯಾಗಿ ಕೈ ಮುಷ್ಟಿಯಿಂದ ಹಿಸುಕಿದರೆ ಬೆರಳ ಸಂದಿ ತೇವಾಂಶ ಬರಬೇಕು. ಪುನಃ ಮೇಲೆ ಹೊದಪು ಮಾಡಿ ಬಿಡಬೇಕು. ತಿಂಗಳಾದ ಮೇಲೆ ಅಡಿ ಮೇಲು ಮಾಡಬೇಕಾದ ಅವಶ್ಯಕತೆ ಏಕೆಂದರೆ ಆ ವೇಳೆಯಲ್ಲಿ ಕಾಂಪೋಸ್ಟ್ ಮಧ್ಯೆ 60 - 75ಸೆಂಟಿಗ್ರೇಡ್‌ನಷ್ಟು ಉಷ್ಣಾಂಶ ಏರುತ್ತದೆ. ಅದನ್ನು ಹಾಗೆಯೇ ಬಿಟ್ಟರೆ ಕಾಂಪೋಸ್ಟನ್ನು ಪಕ್ವ ಮಾಡುವ ಜೀವಾಣುಗಳೆಲ್ಲ ಸತ್ತು ಹೋಗುತ್ತವೆ. ಅಡಿ ಮೇಲು ಮಾಡಲು ಕಷ್ಟವಾದರೆ ಮಧ್ಯೆ ಎರಡು ಅಡಿ ಅಂತರದಲ್ಲಿ ಮೂರು ನಾಲ್ಕು ಅಂಗುಲದ ಕೊಳವೆಗಳನ್ನು ಅಲ್ಲಲ್ಲಿ ರಂಧ್ರಮಾಡಿ ತಳದಿಂದ ಮೇಲಕ್ಕೆ ನಿಲ್ಲಿಸಬೇಕು. ಇದರಿಂದ ಗಾಳಿ ಆಡಿ ಆಮ್ಲಜನಕ ದೊರೆಯುವಂತಾಗುತ್ತದೆ. ಹೀಗೆ ತಯಾರಿಸದ ಕಾಂಪೋಸ್ಟ್ ನಾಲ್ಕೈದು ತಿಂಗಳಲ್ಲಿ ಪರಿಪಕ್ವವಾಗುತ್ತದೆ. ಇಂತಹ ಕಾಂಪೋಸ್ಟನ್ನು ಬಿತ್ತನೆ/ನಾಟಿಗೆ ಮುಂಚೆ ಭೂಮಿಯಲ್ಲಿ ಸಾಕಷ್ಟು ತೇವಾಂಶವಿರುವಾಗ ಸಾಲುಗಳಲ್ಲಿ ಹಾಕಿ ಬಿತ್ತನೆ/ನಾಟಿ ಮಾಡಿದರೆ ಪೂರ್ಣ ಪೌಷ್ಠಿಕಾಂಶ ಬೆಳೆಗೆ ದೊರೆಯುವುದು. ಈ ವಿಧಾನದಿಂದ ಗೊಬ್ಬರದ ಪ್ರಮಾಣವನ್ನು ಮೂರು ನಾಲ್ಕು ಪಟ್ಟು ಹೆಚ್ಚಿಸಿಕೊಳ್ಳುವುದಲ್ಲದೆ, ಪೌಷ್ಠಿಕಾಂಶವೂ 3-4 ಪಟ್ಟು ಹೆಚ್ಚುತ್ತದೆ. ಬೆಳೆಗೆ ಬೇಕಾದ ಎಲ್ಲಾ ಸತ್ವಗಳು ದೊರೆಯುತ್ತವೆ. ಸಮತೋಲನ ಮೇವು ಹಾಕಿ ಸಾಕಿದ ದನದ ಗೊಬ್ಬರ ಕೋಳಿಗೊಬ್ಬರದಲ್ಲಿ ಸಾಕಷ್ಟು ರಂಜಕವಿರುತ್ತದೆ. ರಾಕ್‌ಫಾಸ್‌ಫೇಟ್ ಕೂಡ ಕೊಂಚ ಪ್ರಮಾಣದಲ್ಲಿ ಉಪಯೋಗಿಸಬಹುದು. ಶೇಕಡ 25 ರಷ್ಟು ಹಸಿರೆಲೆ ಸೇರಿಸಿದರೆ ಸಿ.ಎನ್. ರೇಶಿಯೋ ಕಡಿಮೆಯಾಗುವುದರಿಂದ ಬೇಗ ಕಾಂಪೋಸ್ಟ್ ಆಗುತ್ತದೆ. ಕಾಂಪೋಸ್ಟ್ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವುದರಿಂದ ಬೆಳೆ ರೋಗ, ಕೀಟ ಬಾಧೆಗಳಿಗೆ ಸುಲಭವಾಗಿ ತುತ್ತಾಗುವುದಿಲ್ಲ. ಬೆಳೆಯ ವಿವಿಧ ಹಂತದಲ್ಲಿ ಬೇಕಾಗುವ ವಿಶೇಷ ಪೌಷ್ಠಿಕಾಂಶ ದೊರೆಯುತ್ತವೆ, ತೇವಾಂಶ ಬೇಗ ಆರಿ ಹೋಗುವುದಿಲ್ಲ.

ಜಪಾನಿಯರ ಮತ್ತೊಂದು ಬಗೆಯ ಗೊಬ್ಬರ 'ಬಯೋಡ' ತಯಾರು ಮಾಡುವ ವಿಧಾನವೆಂದರೆ ಆರು ಭಾಗ ಕೆಂಪುಮಣ್ಣು, ಒಂದು ಭಾಗ ಅಕ್ಕಿ ಅಥವಾ ಗೋಧಿತೌಡನ್ನು ಶೇಕಡ 60 ರಷ್ಟು ನೀರು ಬೆರಸಿ ಇವು ಮೂರು ಸರಿಯಾಗಿ ಬೆರೆಯುವಂತೆ ಅಡಿಮೇಲು ಮಾಡಿ ಮಟ್ಟವಾದ ಜಾಗದಲ್ಲಿ ಗುಡ್ಡೆ ಮಾಡಿ ಗೋಣಿಚೀಲದಿಂದಲೋ ಅಥವಾ ಪ್ಲಾಸ್ಟಿಕ್ ಷೀಟ್‌ಗಳಿಂದ ಮುಚ್ಚಿ, 24 ಗಂಟೆಗಳಿಗೊಂದಾವರ್ತಿ ಏಳುದಿನ ಅಡಿಮೇಲು ಮಾಡಿ, ನಂತರ ಮೂಟೆಯಲ್ಲಿ ಕಟ್ಟಿಟ್ಟುಕೊಂಡಿರುತ್ತಾರೆ. ಇದನ್ನು ಹೆಚ್ಚಾಗಿ ನರ್ಸರಿ, ಕುಂಡ, ಪ್ಲಾಸ್ಟಿಕ್‌ಕಪ್‌ನಲ್ಲಿ ಬೆಳೆಯುವುದಕ್ಕೆ ಗೊಬ್ಬರವಾಗಿ ಉಪಯೋಗಿಸುತ್ತಾರೆ.

ಮತ್ತೊಂದು ಬಗೆ ಕಾಂಪೋಸ್ಟ್ 'ಬೊಕಾಶಿ' ಮೊದಲು ಹೇಳಿದ ವಿಧಾನದಿಂದಲೇ ಮಾಡಿದರೂ ಪೂರ್ಣ ಕೊಳೆಯಲು ಬಿಡುವುದಿಲ್ಲ. ಅರ್ಧ ಕೊಳೆಯುತ್ತಿದ್ದಾಗಲೆ ತೆಗೆದು ಹರಡಿ ಒಣಗಿಸಿ ಭೂಮಿಯಲ್ಲಿ ತೇವಾಂಶ ಇದ್ದಾಗ ಹಾಕುತ್ತಾರೆ. ಇಲ್ಲಿ ಅದು ಪೂರ್ಣಕೊಳೆಯುತ್ತದೆ.

ಲಿಕ್ವಿಡ್ ಕಾಂಪೋಸ್ಟ್, ಬೆಳೆ ತೆಂಡೆ ಒಡೆಯುವ ಸಮಯದಲ್ಲಿ ಸ್ಪ್ರೇ ಮೂಲಕ ಪೌಷ್ಠಿಕಾಂಶ ಒದಗಿಸುವ ವಿಧಾನ. ಒಂದು ಡ್ರಂ ನೀರಿನಲ್ಲಿ ಒಂದೆರಡು ಕೆ.ಜಿ. ಯಷ್ಟು ಕೊಳೆತ ಕಾಂಪೋಸ್ಟನ್ನು ಕದರಿ ಅದರಲ್ಲಿ ಯಾವ ಬೆಳೆಗೆ ಸ್ಪ್ರೇ ಮಾಡಬೇಕೋ ಆ ಬೆಳೆಯ ಎಲೆ ಅಥವಾ ಪೈರನ್ನು ತಂದು ಈ ಡ್ರಂನಲ್ಲಿ ಕರಗು ಹಾಕಿ 24 ಗಂಟೆಗಳ ನಂತರ ಬಟ್ಟೆಯಲ್ಲಿ ಶೋಧಿಸಿ ಆ ಬೆಳೆಗೆ ಸ್ಪ್ರೇ ಮಾಡುವುದು.

ಒಹಿಟೊ ಫಾರಂನಲ್ಲಿ ನಾವು ಕಂಡ ಆಶ್ಚರ್ಯ ಸಂಗತಿಯೇನೆಂದರೆ ಎಲ್ಲಾ ಕಾಂಪೋಸ್ಟ್ ಎಲ್ಲಾ ಬೆಳೆಗಳಿಗೆ ಒಗ್ಗುವುದಿಲ್ಲ. ಪ್ಲಾಸ್ಟಿಕ್ ಟ್ರೇಯಲ್ಲಿ ಕಾಂಪೋಸ್ಟ್ ಮತ್ತು ಮಣ್ಣನ್ನು ಸಮವಾಗಿ ಮಿಶ್ರಮಾಡಿ ವಿವಿಧ ಬಗೆಯ ಬೀಜವನ್ನು ಬಿತ್ತಿದಾಗ ಕೆಲವು ಸಕಾಲದಲ್ಲಿ ಮೊಳಕೆ ಒಡೆದು ಬೆಳೆಯಲು ಪ್ರಾರಂಭಿಸಿದರೆ ಮತ್ತೆ ಕೆಲವು ಮೊಳಕೆ ಒಡೆಯದೆ ಇದ್ದದ್ದು, ಮೊಳಕೆ ಒಡೆದಿದ್ದರೂ ಕುಂಟಿತವಾಗಿ ಬೆಳೆಯುತ್ತಿದ್ದದ್ದನ್ನು ವೀಕ್ಷಿಸಿದೆವು. ಆದ್ದರಿಂದ ಪ್ರತಿಯೊಂದು ಕಾಂಪೋಸ್ಟನ್ನು ಉಪಯೋಗಿಸುವ ಮುನ್ನ ಅದರ ಉಪಯುಕ್ತತೆಯನ್ನು ಕಂಡುಕೊಳ್ಳುವುದು ಒಳ್ಳೆಯದು.

ಜಪಾನಿನಲ್ಲಿ ಕೃಷಿ ವಿಜ್ಞಾನ, ಸಂಶೋಧನೆ ಮತ್ತು ವಿಸ್ತರಣೆ ಹತ್ತು ಜಿಲ್ಲೆಯ 41 ಪ್ರಿಫೆಕ್ಚರ್‌ನಲ್ಲಿ ನಡೆಯುತ್ತಿದೆ. ಪ್ರಿಫೆಕ್ಚರ್ ಅಂದರೆ ನಮ್ಮ ತಾಲ್ಲೂಕು ಮಟ್ಟವೆನ್ನಬಹುದು. ಟೊಚಿಗಿ ಪ್ರಿಫೆಕ್ಚರ್‌ನಲ್ಲಿರುವ ಕೃಷಿ ಸಂಶೋಧನಾ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದೆವು. ಆ ಪ್ರಿಫೆಕ್ಚರ್‌ಗೆ ಸಂಬಂಧಪಟ್ಟ ಕೃಷಿ ಮತ್ತು ಪಶುಸಂಗೋಪನೆ ಬಗ್ಗೆ ಸಂಶೋಧನೆ ನಡೆಸುತ್ತಿದ್ದರೂ ಅಲ್ಲಿರುವ ಸಂಶೋಧನೆಯ ಸೌಲಭ್ಯ ನಮ್ಮ ರಾಷ್ಟ್ರಮಟ್ಟದ ಸೌಲಭ್ಯಕ್ಕಿಂತ ಹೆಚ್ಚೆಂದು ಹೇಳಬಹುದು. ಟೊಚಿಗಿ ರೀಸರ್ಚ್ ಸೆಂಟರ್‌ನಲ್ಲಿ ಟ್ರಾನ್ಸ್‌ಜನಿಕ್ ಮತ್ತು ಮಾಲಿಕ್ಯುಲಾರ್ ಬಯಾಲಜಿ ಬಗ್ಗೆಯೂ ಕೆಲಸ ನಡೆಯುತ್ತಿತ್ತು. ಭತ್ತ, ಟೀ, ಸೆಣಬು ಮುಂತಾದವನ್ನು ಬಿಟ್ಟು ಬಹುತೇಕ ಬೆಳೆಗಳನ್ನು ಗ್ಲಾಸ್‌ಹೌಸ್‌ನಲ್ಲಿಯೇ ಬೆಳೆಯುತ್ತಾರೆ. ಭಾರತದಲ್ಲಿ ತಾಲ್ಲೂಕು ಮಟ್ಟದಲ್ಲಿ ಇಲ್ಲಿರುವಂತಹ ಪ್ರಯೋಗಾಲಯ ಸೌಲಭ್ಯಗಳನ್ನು ಕಲ್ಪಿಸಿದರೂ ಜಪಾನೀಯರಷ್ಟೆ ಕಾರ್ಯಕೌಶಲತೆಯುಳ್ಳ ಸಮರ್ಪಣೆ ಮನೋಭಾವದಿಂದ ಕೆಲಸ ಮಾಡುವ ನಿಷ್ಠಾವಂತ ಸಂಶೋಧಕರು ದೊರಕುವರೆ ಎಂಬ ಅನುಮಾನ. ಅಲ್ಲಿಯ ರೈತರೂ ಕೂಡ ಇರುವಷ್ಟು ಜಾಗದಲ್ಲಿ ಗರಿಷ್ಠ ಮಟ್ಟದ ಇಳುವರಿ ಪಡೆಯುವ ಎಲ್ಲಾ ಶ್ರಮವನ್ನು ವಹಿಸುವರು. ಬದನೆ ಮತ್ತು ಸೋರೆಕಾಯಿ ಬೆಳೆಯುತ್ತಿದ್ದ ಒಬ್ಬ ರೈತ ಮತ್ಸುಮೊಟ ತನ್ನ ಎರಡು ಹೆಕ್ಟೇರ್ ಜಾಗದಲ್ಲಿ ಜಪಾನಿಯರ ಮಟ್ಟದ ಜೀವನ ಸಾಗಿಸುವ ವರಮಾನವನ್ನು ತೆಗೆಯುತ್ತಿದ್ದದ್ದನ್ನು ನೋಡಿದೆವು. ಎರಡು ಹೆಕ್ಟೇರ್ ವಿಸ್ತೀರ್ಣ ಅವನ ಗಮನದಲ್ಲಿರಲಿಲ್ಲ. ಅದರೊಳಗಿದ್ದ ಪ್ರತಿಯೊಂದು ಗಿಡದಲ್ಲಿಯೂ ಅದರ ಗರಿಷ್ಠ ಫಸಲು ತೆಗೆಯುವುದೇ ಅವನ ಗುರಿ. ಪ್ರತಿ ಬದನೆ ಗಿಡವನ್ನು ಒಂದು ಕೋಲಿಗೆ ಆಶ್ರಯ ಕೊಟ್ಟು ಆ ಕೋಲು ಅಲುಗಾಡದ ರೀತಿ ಬೇರೆ ಕಂಬಗಳನ್ನು ಸೂಕ್ತವಾದ ರೀತಿಯಲ್ಲಿ ನಿಲ್ಲಿಸಿತ್ತು. ದೂರದಿಂದ ನೋಡಿದರೆ ಬಂಬೂ ಬಜಾರಿನ ಹಾಗೆ ಕೋಲುಗಳೇ ಕಾಣುತ್ತಿದ್ದವು. ಸುಂಟರ ಗಾಳಿ ಬಂದರೂ ಬುಡ ಮೇಲು ಆಗದು. ವಾತಾವರಣದಲ್ಲಿ ಏನೇ

ವೈಪರೀತ್ಯವಾದರೂ ಅದಕ್ಕೆಲ್ಲ ಮೊದಲೆ ಎಚ್ಚರಿಕೆ ವಹಿಸಿ ಫಸಲು ಹಾಳಾಗದ ಹಾಗೆ ನೋಡಿಕೊಳ್ಳುತ್ತಾರೆ. ನಮ್ಮಲ್ಲಿ ಗಾಳಿ, ಮಳೆ, ಅತಿವೃಷ್ಟಿ, ಅನಾವೃಷ್ಟಿಯಿಂದ ಪ್ರತಿ ವರುಷ ಕಳೆದುಕೊಳ್ಳುವ ಬೆಳೆ, ಮೂರನೇ ಒಂದು ಭಾಗ ಭಾರತೀಯರಿಗೆ ಸಾಕೆಂದು ಅಂದಾಜು ಮಾಡಲಾಗಿದೆ. ನೆಲದ ಮೇಲಿದ್ದ ಪ್ರತಿ ಸೋರೆಕಾಯಿಯ ಅಡಿಯಲ್ಲಿ ಥರ್ಮಕೂಲ್ ಇಟ್ಟು, ಮಣ್ಣಿಗೆ ತಾಗದ ಹಾಗೆ ಮಾಡಿದ್ದರು. ಆ ದೇಶದಲ್ಲಿ ಹಣ್ಣು ತರಕಾರಿಗಳು ಸೊಟ್ಟಗಿದ್ದು ಕಂದಿದ್ದರೆ ಮುಟ್ಟುವವರಿಲ್ಲ.

ಈ ರೈತ ಮಾರ್ಕೆಟ್ ಮಾಡುವ ವಿಧಾನವೂ ಅವರಿಗೆ ಹೆಚ್ಚು ಲಾಭ ತರುವಂತಹದು. ಪ್ರತಿ ಫ್ರಿಫೆಕ್ಚರ್‌ನಲ್ಲಿರುವ ಕಲೆಕ್ಟಿವ್ ಕೋ-ಆಪರೇಟಿವ್ ಸೊಸೈಟಿಗೆ ಇವರ ಮಾಲನ್ನು ಕಳುಹಿಸುತ್ತಾರೆ. ಆ ಸೊಸೈಟಿಯವರು ಟೋಕಿಯೋದಲ್ಲಿರುವ ಓಟ ಮಾರ್ಕೆಟ್‌ನಲ್ಲಿ ಹರಾಜಿನಲ್ಲಿ ಮಾರುತ್ತಾರೆ. ಅವರ ಕಮಿಷನ್ ಕಳೆದು ಅಲ್ಲಿ ಮಾರಿದ್ದ ಬೆಲೆಯನ್ನೇ ರೈತರಿಗೆ ಕೊಡುತ್ತಾರೆ.

ಓಟ ಮಾರ್ಕೆಟ್ (OTA-Market) ಟೋಕಿಯೋದಲ್ಲಿ ಇರುವ ಮೂರು ದೊಡ್ಡ ಮಾರ್ಕೆಟ್‌ನಲ್ಲಿ ಒಂದು. ಇಲ್ಲಿ ಪ್ರತಿದಿನ ಇಪ್ಪತ್ತು ಸಾವಿರ ಟನ್ ಹಣ್ಣು ತರಕಾರಿ ವಹಿವಾಟನ್ನು ಮೂರು ಸಾವಿರ ಹೋಲ್‌ಸೇಲರು ನಿರ್ವಹಿಸುತ್ತಾರೆ. ಕೆಲವು ಸಣ್ಣಪುಟ್ಟ ಕೆಲಸಗಳನ್ನು ಬಿಟ್ಟರೆ ಎಲ್ಲವೂ ಮೆಷಿನ್‌ನಿಂದಲೆ ವ್ಯವಹಾರ. ಇಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಒಂದು ತರಕಾರಿ ಹಣ್ಣು ಹಂಪಲು ಮತ್ತೊಂದು ಮೀನು ವಿಭಾಗ. ಮೀನು ಮಾರ್ಕೆಟ್‌ನಲ್ಲಿ ನೊಣಗಳ ಅವಾಂತರವಿಲ್ಲ. ಟ್ಯೂನಾ ಮೀನನ್ನು ಮರ ಕುಯ್ಯುವಂತೆ ಯಂತ್ರದಲ್ಲಿ ಕುಯ್ದು ವಿಂಗಡಿಸಿ ಮಾರುತ್ತಿರುವುದು, ಹಸಿ ಮೀನನ್ನು ತಿನ್ನಲು ಸ್ವಚ್ಛ ಮಾಡುತಿದ್ದ ವಿಭಾಗ ಎಲ್ಲವೂ ನೋಡಲು ಆನಂದ. ಸಾವಯವ ಕೃಷಿಯಿಂದ ಬೆಳೆದ ಹಣ್ಣು ತರಕಾರಿಗಳಿಗೆ ಪ್ರತ್ಯೇಕ ಜಾಗವಿದೆ. ಪ್ರತಿ ವರ್ಷ ಈ ಜಾಗ ವಿಸ್ತಾರವಾಗುತ್ತಿದೆ.

10 ಆಡಳಿತದಲ್ಲಿ ಕಂಡ ಅನುಭವಗಳು

ಕೃಷಿ ಕಾಲೇಜಿನ ಡೈರೆಕ್ಟರಾಗಿ, ವಿಶ್ವವಿದ್ಯಾನಿಲಯದ ಡೀನ್ ಆಗಿ, ಹೊಸ ಕಾಲೇಜುಗಳ ಸ್ಥಾಪನೆಯ ಸ್ಪೆಷಲ್ ಆಫೀಸರ್ ಆಗಿ ಕಾರ್ಯನಿರ್ವಹಿಸಿದ್ದರೂ ನಿವೃತ್ತಿಯಾದದ್ದು ಪ್ರಾಧ್ಯಾಪಕನಾಗಿ, ಏಪ್ರಿಲ್ 30, 1994 ರಲ್ಲಿ. ಬಹಳ ಜನಕ್ಕೆ ನಿವೃತ್ತಿಯಾದ ಮರುದಿನ ಏನು ಮಾಡಬೇಕೆಂದು ಇರುವ ಚಿಂತೆ ನನಗಿರಲಿಲ್ಲ. ಎಲ್ಲ ಹಿಂದಿನ ದಿನಗಳಂತೆ ನಿವೃತ್ತಿಯಾದ ಮರುದಿನವು ಬೆಳಿಗ್ಗೆ ಬಸ್ಸು ಹತ್ತಿ ಡಿಪಾರ್ಟ್‌ಮೆಂಟಿಗೆ ಹೋಗಿ ಯಥಾಪ್ರಕಾರ ಸಂಜೆಯೇ ವಾಪಸಾಗಿದ್ದೆ. ಈ ಪರಿಪಾಟ ವರುಷವೆಲ್ಲ ನಡೆಯಿತು. ನಾನು ಕೈಗೊಂಡಿದ್ದ ಸಂಶೋಧನೆಯ ಪ್ರಾಜೆಕ್ಟ್‌ಗಳು ಮುಂದುವರಿದಿದ್ದವು. ನನ್ನ ವಿದ್ಯಾರ್ಥಿಗಳು ಅವರ ಥೀಸೀಸ್ಸನ್ನು ಪೂರ್ಣ ಮಾಡಬೇಕಿತ್ತು. ಇದರ ಜೊತೆಗೆ ಐ.ಸಿ.ಎ.ಆರ್. ನಿಂದ ಮೂರು ವರುಷದ ಅವಧಿಗೆ ಎಮರಿಟಸ್ ಸೈಂಟಿಸ್ಟ್ ಆಗಿ ಆರ್ಡರ್ ಸದ್ಯದಲ್ಲಿ ಬರುವುದಿತ್ತು. ಕಾನೂನು ಪ್ರಕಾರ ವಿಶ್ವವಿದ್ಯಾನಿಲಯದ ನೌಕರನಾಗಿ ನಿವೃತ್ತಿಯಾಗಿದ್ದೆನೆ ಹೊರತು ನೌಕರಿಯಿಂದಲ್ಲ. ಎರಡು ವರುಷದ ಹಿಂದೆಯೆ ಒಮ್ಮೆ ನಿವೃತ್ತಿಯಾಗಿದ್ದೆ. ಸರ್ಕಾರದಿಂದ ಕೃ.ವಿ.ವಿ.ಕ್ಕೆ ವರ್ಗಾಯಿಸಿದ ಸಿಬ್ಬಂದಿಯೆಲ್ಲ 58 ನೇ ವಯಸ್ಸಿಗೆ ಸರ್ಕಾರದಿಂದ ನಿವೃತ್ತಿಯಾಗಿ ಯೂನಿವರ್ಸಿಟಿಯಲ್ಲಿ 60 ರವರೆಗೆ ಮುಂದುವರೆದು ನಿವೃತ್ತಿಯಾಗಬೇಕಿತ್ತು. ನನ್ನ ಪೆನ್‌ಷನ್ ಎರಡು ಭಾಗವಾಗಿ ಬರುತ್ತಿದೆ. ಸರ್ಕಾರದಿಂದ ಮತ್ತು ಯೂನಿವರ್ಸಿಟಿಯಿಂದ. ಈ ಸಮಯದಲ್ಲಿ ಕೈ ತುಂಬ ಕೆಲಸವಿದ್ದರೂ ಒತ್ತಡವಿರಲಿಲ್ಲ. ಆದರೆ ನನಗೆ ಬಿಡುವಿರುವುದೆಂಬ ಭಾವನೆಯಿಂದ ಹೊರಗಡೆಯಿಂದ ಹೆಚ್ಚು ಹೆಚ್ಚು ಕರೆ ಬರುತ್ತಿತ್ತು. ಐ.ಸಿ.ಎ.ಆರ್.ನ ಕೆಲವು ಕಮಿಟಿಗಳ ಸದಸ್ಯನಾಗಿ, ದೇಶದ ಹಲವು ಕೃಷಿ ವಿಶ್ವ ವಿದ್ಯಾನಿಲಯಗಳ ಆಯ್ಕೆ ಸಮಿತಿಯಲ್ಲಿ, ಇತರೆ ವೈಜ್ಞಾನಿಕ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ರಿವ್ಯೂ ಕಮಿಟಿಗಳು, ಇವಾಲ್ಯುಯೇಷನ್ ಕಮಿಟಿ ಮುಂತಾದವು ನನ್ನ ಕಾಲವನ್ನು ಕಬಳಿಸುತ್ತಿದ್ದವು. ಜೊತೆಗೆ ನನ್ನ ಎಮರಿಟಸ್ ಸೈಂಟಿಸ್ಟ್ ಹುದ್ದೆಯೂ ಪೂರ್ಣ ಪ್ರಮಾಣದ್ದಾಗಿತ್ತು. ನನ್ನ ಬಂಧು ಮಿತ್ರರು ಶುಭಕಾರ್ಯ ಸಮಾರಂಭಗಳಿಗೆ ಕರೆದಾಗ ನನಗೆ ಕೆಲಸವಿದೆಯೆಂದರೆ ಅವರಿಗೆ ಚೋದ್ಯವಾಗಿ ತೋರುತ್ತಿತ್ತು.

ವರುಷ ಉರುಳಿದಂತೆ ಒಂದು ಹೊಸತಿರುವು ಕಾದಿತ್ತು. 1995ರ ಏಪ್ರಿಲ್‌ನಲ್ಲಿ ಕೃ.ವಿ.ವಿ. ಕುಲಪತಿಗಳ ಸ್ಥಾನ ತೆರವು ಆಗುವುದಿತ್ತು. ಎಲ್ಲರಂತೆಯೆ ನನ್ನ ಬತ್ತಳಿಕೆಯು ಪರಿಶೀಲನ ಕಮಿಟಿಯ ಮುಂದೆ ಇತ್ತು. ದುರದೃಷ್ಟವಷಾತ್ ಆಯ್ಕೆಯ ದಿನಕ್ಕೆ ಮೂರು ದಿವಸ ಮುಂಚಿತವಾಗಿ ನನ್ನ ಭಾವ ಹಾಲಪ್ಪನವರು ಹಟಾತ್ತನೆ ತೀರಿಕೊಂಡರು. ಅವರೇ ಈ ವಿಷಯವಾಗಿ ಹೆಚ್ಚಿಗೆ ತಲೆ ಕೆಡಸಿಕೊಂಡಿದ್ದವರು. ಶವಸಂಸ್ಕಾರಕ್ಕೆ ಸಂಸಾರ ಸಮೇತ ಹೋದವನು ಮೂರುದಿನದ ಶಾಸ್ತ್ರವನ್ನು ಪೂರೈಸುವ ತನಕ ಅಲ್ಲಿಯೇ ಇರಬೇಕಾಯಿತು. ನಮ್ಮ ಭಾವನವರ ಬಾಜುದಾರರು ಬೈರೇಗೌಡರ

ಮನೆಯಲ್ಲಿ ನನ್ನ ಮುಕ್ಕಾಮು. ಮಲೆನಾಡಿನ ಮನೆಗಳಲ್ಲಿ ಭೂಷಣಕ್ಕೆ ಫೋನ್. ಯಾವಾಗಲೂ ಲೈನು ರಿಪೇರಿ, ಆಗಲೂ ಇದೇ ತಾಪತ್ರಯ. ಬೆಳಿಗ್ಗೆ ಫೋಸ್ ರಿಂಗ್ ಆದಾಗ ಲೈನ್ ಸರಿಯಾಯಿತೆಂದು ತಿಳಿಯಿತು. ಬೆಂಗಳೂರಿನಿಂದ ರಾಜಭವನದಿಂದ ಫೋನ್ ಇದೆಯೆಂದು ತಿಳಿದಾಗ ಮನೆಯವರೆಲ್ಲರಿಗೆ ಎಲ್ಲಿಲ್ಲದ ಆಶ್ಚರ್ಯ, ಕುತೂಹಲ. ನಾನು ಫೋನ್ ಹತ್ತಿರ ಬರುವುದೊರಳಗೆ ಕಟ್ಟಾಯಿತು. ಪುನಃ ಅರ್ಧಗಂಟೆಯ ನಂತರ ಕೃಷಿ ಮಂತ್ರಿಯವರಿಂದ ಕರೆ. ನನ್ನ ಆಯ್ಕೆಯಾಗಿರುವುದನ್ನು ತಿಳಿಸಿ ಶುಭಾಶಯಗಳನ್ನು ಹೇಳಿ ಕೂಡಲೆ ಬೆಂಗಳೂರಿಗೆ ಬರಬೇಕೆಂದು ಹುಕುಂ. ಬೆಳಗಿನ ನಿತ್ಯ ಕರ್ಮಗಳನ್ನು ಪೂರೈಸಿ ಹೊರಡಲು ಅಣಿಯಾಗುವುದ ರೊಳಗೆ ಪುನಃ ರಾಜಭವನದಿಂದ ಕರೆ. ಅಂದೇ ಬಂದು ರಾಜಭವನದಲ್ಲಿ ಆರ್ಡರ್ ತೆಗೆದುಕೊಳ್ಳಬೇಕೆಂದು ರಾಜ್ಯಪಾಲರ ಸೆಕ್ರಟರಿ ಸೂಚಿಸಿದರು. ಬೇಲೂರಿಗೆ ಕಾರಿನಲ್ಲಿ ಬಂದು ಅಲ್ಲಿಂದ ಬಸ್ಸಿನಲ್ಲಿ ಬೆಂಗಳೂರಿಗೆ ಬರುವುದರೊಳಗೆ ನಾಲ್ಕು ಗಂಟೆಯಾಗಿತ್ತು. ಮನೆಗೆ ಹೋಗಿ ಮುಖ ತೊಳೆದು ಹೊರಡಬೇಕೆನ್ನುವಷ್ಟರಲ್ಲಿ ರಾಜಭವನದಿಂದ ಕಾರು ಬಂದು ಮನೆ ಮುಂದೆ ನಿಂತಾಗ ಅಕ್ಕಪಕ್ಕದವರಿಗೆ ಕುತೂಹಲ. ರಾಜ್ಯಪಾಲರಿಗೆ ಅಂದು ಸಂಜೆ ಬೇರೆ ಕಾರ್ಯಕ್ರಮವಿರುವುದರಿಂದ ಆರ್ಡರ್ಸ್ ಮನೆಗೆ ಕಳುಹಿಸಿದ್ದಾರೆಂದು ರಾಜಭವನ ಅಧಿಕಾರಿಗಳು ಕೈಗಿತ್ತರು. ಅಂದು ಸಂಜೆಯಿಂದ ಮಧ್ಯರಾತ್ರಿಯವರೆಗೆ ಹೂವಿನ ಹಾರ ಶುಭ ಹಾರೈಕೆ ಬಿಟ್ಟರೆ ಹೊಟ್ಟೆಗೇನು ಇಲ್ಲ. ಮನೆಯಲ್ಲಿ ಯಾರೂ ಇರಲಿಲ್ಲ.

ಏಪ್ರಿಲ್ 20, 1995 ರಂದು ಅಧಿಕಾರ ವಹಿಸಿಕೊಂಡೆ. ಮುಂದಿನ ಮೂರು ವರುಷಗಳು ಉರುಳಿದ ಪರಿವೇ ಇಲ್ಲ. ನನ್ನ ಎರಡನೇ ಮಗಳ ಮದುವೆಯ ದಿನ ಒಂದು ರಜೆಯನ್ನು ಬಿಟ್ಟರೆ ಬೇರೆ ರಜೆಯನ್ನು ಕಂಡವನಲ್ಲ. ಹಲವು ಹತ್ತು ಸಮಸ್ಯೆಗಳು ಪಾರಂಪರ್ಯವಾಗಿ ಬಂದಿದ್ದವು. ಜೊತೆಗೆ ಯಾವ ಸೂಚನೆಯೂ ಇಲ್ಲದೆ ದಿಢೀರನೆ ಬರುವ ಸಮಸ್ಯೆಗಳೆಷ್ಟೋ. ಆಡಳಿತ ಕ್ರಮದಲ್ಲಿ ಮತ್ತು ವಹಿವಾಟಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಬೇರೆ ವಿಶ್ವವಿದ್ಯಾನಿಲಯ ಗಳಿಂತ ಭಿನ್ನ. ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆಗೆ ಹೆಚ್ಚಿನ ಆಧ್ಯತೆ ಇದ್ದು, ಸ್ನಾತಕೋತ್ತರ ಶಿಕ್ಷಣ ಬಿಟ್ಟರೆ ಬೇರೆಲ್ಲ ಕಾಲೇಜುಗಳು ಅಫಿಲಿಯೇಟೆಡ್ ಆದ್ದರಿಂದ ಪರೀಕ್ಷೆಗಳನ್ನು ಮಾಡಿ ಫಲಿತಾಂಶ ಹೊರಗೆಡಹುದನ್ನು ಬಿಟ್ಟರೆ ಆ ಕಾಲೇಜುಗಳ ಜವಾಬ್ದಾರಿ ಯೂನಿವರ್ಸಿಟಿಗೆ ಇರುವುದಿಲ್ಲ. ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಬೋಧನೆ ಸಂಶೋಧನೆ ಮತ್ತು ವಿಸ್ತರಣೆಯ ಜವಾಬ್ದಾರಿ ಸಮವಾಗಿರುತ್ತದೆ. ಈ ಮೂರು ಭಾಗಗಳೂ ಒಂದು ಮಣೆಯ ಮೂರು ಕಾಲುಗಳು ಇದ್ದ ಹಾಗೆ. ಯಾವ ಕಾಲು ಕುಂಟಿದರೂ ಮಣೆ ನಿಲ್ಲುವುದಿಲ್ಲ. ಶೇಕಡ 70ರಷ್ಟು ರೈತರಿರುವ ದೇಶದಲ್ಲಿ ಕೃಷಿ ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಏರುಪೇರು ಆದಾಗ ಸಮಸ್ಯೆಗಳು ನೇರವಾಗಿ ಅಸೆಂಬ್ಲಿಯಲ್ಲಿ ಉದ್ಭವವಾಗುತ್ತವೆ. ರೈತರಿಂದ ಆರಿಸಿ ಬಂದ ಪ್ರತಿನಿಧಿಗಳು ಕೃ.ವಿ. ವಿದ್ಯಾನಿಲಯವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಕೃಷಿ ಮತ್ತು ಪಶುಪಾಲನೆಯ ಸಂಶೋಧನೆಯ ಪೂರ್ಣ ಜವಾಬ್ದಾರಿ ಕೃಷಿ ವಿಶ್ವವಿದ್ಯಾನಿಲಯದ ಹೊಣೆಯಾದ್ದರಿಂದ ರೈತರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಗಣಿಸಬೇಕಾಗುತ್ತದೆ. ಕೆಲವೊಮ್ಮೆ ಬೇರೆಯವರು ಮಾಡಿದ ತಪ್ಪಿಗೂ ನಾವು ಹೊಣೆಯಾಗಬೇಕು. ಉದಾಹರಣೆಗೆ ಒಮ್ಮೆ ಮೈಸೂರು ಜಿಲ್ಲೆಯಲ್ಲಿ ಎಂಟು ಸಾವಿರ ಎಕರೆ ಪ್ರದೇಶದಲ್ಲಿ ಮುಸುಕಿನ ಜೋಳ ತೆನೆಯನ್ನೇ ಕಟ್ಟಲಿಲ್ಲ. ಬೀಜವನ್ನು ಯಾರೋ ಖಾಸಗಿ ಸಂಸ್ಥೆಯವರು ಕೃ.ವಿ.ವಿ. ಗಮನಕ್ಕೆ ತರದೆ ಸರಬರಾಜು ಮಾಡಿದ್ದರು. ಆದರೂ ಈ ಪರಿಸ್ಥಿತಿ

ಬರಬೇಕಾದರೆ ಕೃ.ವಿ.ವಿ.ದ ವಿಜ್ಞಾನಿಗಳು ಏನು ಮಾಡುತ್ತಿದ್ದರು? ಇದು ಹೇಗಾಯಿತು? ಎಂದು ತನಿಖೆ ಆಯಿತು. ಮತ್ತೊಮ್ಮೆ ಹೈಬ್ರಿಡ್ ಭತ್ತ ಬಿಡುಗಡೆಯಾಗುವುದಕ್ಕೆ ಮುಂಚಿತವಾಗಿ ರೈತರ ಬೇಡಿಕೆಯ ಮೇರೆಗೆ ಅವರ ತಾಕಿನಲ್ಲಿ ಪ್ರಾಯೋಗಿಕವಾಗಿ ಹಾಕಿತ್ತು. ತಾಂತ್ರಿಕ ವಿಫಲತೆಯಿಂದ ಫೇಲಾಗಿದ್ದು ಯೂನಿವರ್ಸಿಟಿಯನ್ನು ಪೀಕಲಾಟಕ್ಕೆ ಇಟ್ಟಿತು. ಇಂತಹ ಸಮಸ್ಯೆಗಳು ಕೃ.ವಿ.ವಿ.ದಲ್ಲಿ ಸಾಮಾನ್ಯವಾಗಿ ತಲೆದೋರುತ್ತಿರುತ್ತವೆ.

ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣ ಘಟಕ ಸಾಕಷ್ಟು ರೈತರ ಮನಸ್ಸನ್ನು ಸೆಳದಿತ್ತು. ಪ್ರತಿ ತಾಲ್ಲೂಕಿಗೂ ಒಬ್ಬ ನುರಿತ, ಸ್ನಾತಕೋತ್ತರ ಪದವಿ ಪಡೆದ ವಿಸ್ತರಣ ಅಧಿಕಾರಿಯಿದ್ದು, ರೈತರ ಸಮಸ್ಯೆಗಳನ್ನು ತಜ್ಞರಲ್ಲಿಗೆ ತಂದು, ವಿಮರ್ಶಿಸಿ ಪರಿಹಾರವನ್ನು ಒದಗಿಸುತ್ತಿದ್ದರು. ಆದರೆ ನಾನು ಕುಲಪತಿಯಾಗಿ ಅಧಿಕಾರವಹಿಸುವ ಸಮಯದಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ಈ ಸಿಬ್ಬಂದಿಸ್ಥಾನ ತೆರವು ಆಗಿದ್ದವು. ವಿಸ್ತರಣ ನಿರ್ದೇಶಕರ ಸ್ಥಾನ ಹಲವು ವರ್ಷಗಳಿಂದ ಹಂಗಾಮಿಯಾಗಿತ್ತು. ಖಾಲಿಯಾದ ಹುದ್ದೆಗಳನ್ನು ತುಂಬಲು ಸಂಪನ್ಮೂಲದ ಕೊರತೆ ಇತ್ತು. ಇವೆಲ್ಲ ಕಾರಣಗಳಿಂದ ಸಂಶೋಧನೆಯ ಫಲ ರೈತರಿಗೆ ಮುಟ್ಟುತ್ತಿಲ್ಲವೆಂಬ ಕೂಗು ಕೇಳಿ ಬರುತಿತ್ತು.

ಶಿಕ್ಷಣ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾದ ತಾಂತ್ರಿಕ ಜ್ಞಾನ ದೊರೆಯುತ್ತಿಲ್ಲವೆಂದು ಕೇಳಿಬರುತ್ತಿತ್ತು. ಕೃಷಿ ವಿಶ್ವವಿದ್ಯಾನಿಲಯದ ಪ್ರಾರಂಭದಲ್ಲಿ ಅಳವಡಿಸಿದ್ದ ಪಾಠ ವಿಷಯದ ಪಟ್ಟಿ ಮೂವತ್ತು ವರುಷ ಹಾಗೆಯೇ ಮುಂದುವರಿದುಕೊಂಡು ಬಂದಿದ್ದವು. ವಿದ್ಯಾರ್ಥಿಗಳಿಗೆ ರೈತರ ಹೊಲಗದ್ದೆ ತೋಟಗಳಲ್ಲಿನ ಅನುಭವವೇ ಇಲ್ಲವೆಂದು ದೂರು ಬರುತ್ತಿತ್ತು.

ಮೇಲೆ ಸೂಕ್ಷ್ಮವಾಗಿ ತಿಳಿಸಿರುವ ಸಂಶೋಧನೆ, ವಿಸ್ತರಣೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿನ ಕುಂದುಕೊರತೆಯನ್ನು ತಗ್ಗಿಸುವ ದಿಕ್ಕಿನಲ್ಲಿ ನನ್ನ ಚಿಂತನೆ ಹರಿದಿತ್ತು. ಕುಲಪತಿಯ ಸ್ಥಾನ ಎಷ್ಟೇ ಗೌರವಾನ್ವಿತ ಹುದ್ದೆಯಾಗಿದ್ದರೂ ಅದು ಹೂವಿನ ಹಾಸಿಗೆಯಲ್ಲವೆಂಬುದು ನನ್ನ ಹಿಂದಿನ ಎಲ್ಲ ಕುಲಪತಿಗಳೊಡನೆ ನಿಕಟವಾಗಿ ಕೆಲಸಮಾಡಿದ ಅನುಭವದಿಂದ ಅರಿವಾಗಿತ್ತು. ಆದರೂ ಈ ಸಂಸ್ಥೆಗೇನಾದರೂ ಸೇವೆ ಮಾಡಿ ಉಪ್ಪು ತಿಂದ ಋಣ ತೀರಿಸುವ ಸುಸಂದರ್ಭ ಒದಗಿ ಬಂದಿದ್ದಕ್ಕಾಗಿ ಮನಸ್ಸಿನಲ್ಲೆ ಆ ಕರ್ತೃವಿಗೆ ಕೃತಜ್ಞನಾಗಿ ಕೆಲಸ ಪ್ರಾರಂಭಿಸದೆ. ಈ ಸಂಸ್ಥೆಯಲ್ಲಿ ಒದಗಿದ್ದ ವಿಫುಲವಾದ ಅವಕಾಶಗಳು ನನ್ನನ್ನು ಈ ಸ್ಥಾನಕ್ಕೆ ತಂದಿದ್ದವು. ಅವಕಾಶಗಳಲ್ಲಿ ಆತಂಕಗಳನ್ನು ಕಂಡು ಅಂಜಿದವನಲ್ಲ ನಾನು. ಆತಂಕಗಳಲ್ಲಿ ಅವಕಾಶಗಳನ್ನು ಹುಡುಕುವ ಸ್ವಭಾವದವನು.

ನಾನು ರಿಪೋರ್ಟ್ ಮಾಡಿಕೊಂಡ ಮರುದಿನ ಮುಖ್ಯಮಂತ್ರಿಗಳನ್ನು ಕಾಣಲು ಹೋಗಿದ್ದಾಗ ಹೊರಗಡೆ ಕಾದು ಕುಳಿತಿದ್ದೆ. ಅಂದಿನ ಮುಖ್ಯಮಂತ್ರಿಗಳ ಕಾರ್ಯ ಚಟುವಟಿಕೆ ಮುಂಜಾನೆ ಐದು ಗಂಟೆಗೆ ಪ್ರಾರಂಭವಾಗುತ್ತಿತ್ತು. ನಾನೂ ಕೂಡ ಆ ಸಮಯಕ್ಕೆ ಹೋಗಿದ್ದೆ. ನನ್ನ ಪಕ್ಕದಲ್ಲಿ ಪೊಲೀಸ್ ಆಫೀಸರ್ ಒಬ್ಬರು ಕುಳಿತಿದ್ದರು. ಅವರು ಪ್ರತಿನಿತ್ಯ ರಾಜ್ಯದಲ್ಲಿ ಸಂಗ್ರಹಿಸಿದ ಬೇಹುಗಾರಿಕೆ ವೃತ್ತಾಂತವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲು ಕಾದಿದ್ದರು. ನಾನು

ಹೊಸದಾಗಿ ಕುಲಪತಿಯಾಗಿ ಆಯ್ಕೆಯಾಗಿ ಮುಖ್ಯಮಂತ್ರಿಗಳನ್ನು ನೋಡಲು ಬಂದಿದ್ದೇನೆಂದು ಅಲ್ಲಿಯ ಅಧಿಕಾರಿಯೊಬ್ಬರು ಪರಿಚಯಿಸಿದರು. ನನಗೆ ಶುಭಾಶಯವನ್ನು ಹೇಳಿ ನಿಮ್ಮ ರಿಪೋರ್ಟ್ ನಿಮ್ಮ ಆಯ್ಕೆಗೆ ಅನುಕೂಲವಾಯಿತೆಂದು ಹೇಳಿದರು. ಆಗ ನನಗೆ ಅವರು ಹೇಳಿದ್ದು ಅರ್ಥವಾಗಲಿಲ್ಲ. ಕೆಲವು ತಿಂಗಳು ಕಳೆದ ಮೇಲೆ ಒಂದು ಸಮಯದಲ್ಲಿ ಯಾವುದೋ ಪ್ರಸ್ತಾಪ ಬಂದಾಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ಸಂದರ್ಭ ಬಂದಾಗ ನಿಮ್ಮ ಆಯ್ಕೆ ಯಾರ ಶಿಫಾರಿಸ್ಸಿನ ಮೇಲೂ ಆಗಿದ್ದಲ್ಲ, ಶಿಫಾರಿಸ್ಸಿನ ಮೇಲೆಯೇ ಆಗುವುದಿದ್ದರೆ ಬೇರೆಯವರೂ ಇದ್ದರು. ಬಹಳ ಒತ್ತಡ ಬಂದಾಗ ಸ್ಪರ್ಧೆಯಲ್ಲಿರುವವರಲ್ಲಿ ಯಾರು ಸೂಕ್ತ ಎಂದು ರಿಪೋರ್ಟ್ ತರಿಸಿಕೊಂಡಾಗ ನಿಮ್ಮ ಹೆಸರು ಎದ್ದು ಕಾಣುತ್ತಿತ್ತು. ಆದ್ದರಿಂದ ನಿಮ್ಮದಾಯಿತು ಎಂದರು. ಆಗ ಅಂದು ಪೊಲೀಸ್ ಆಫೀಸರ್ ಹೇಳಿದ್ದು ಅರ್ಥವಾಯಿತು. ಇದಕ್ಕಾಗಿ ಮುಖ್ಯಮಂತ್ರಿ ಶ್ರೀ ಹೆಚ್. ಡಿ. ದೇವೇಗೌಡರಿಗೆ ಅಭಾರಿಯಾಗಿದ್ದೇನೆ.

ಕುಲಪತಿಯಾಗಿ ನಾನು ಮೊದಲು ಮಾಡಬೇಕಿದ್ದ ಕೆಲಸ, ಕೃ.ವಿ. ವಿದ್ಯಾನಿಲಯ ಪ್ರಾರಂಭವಾಗಿ ಮೂವತ್ತು ವರುಷಗಳಿಂದ ನಡೆದು ಬಂದ ಕಾನೂನು ಕಟ್ಟಲೆ, ಆಡಳಿತ ವೈಖರಿ, ಹಣಕಾಸು ಹಂಚಿಕೆ, ಆಡಳಿತ ಮಂಡಲಿ ನಡವಳಿಕೆ, ಶೈಕ್ಷಣಿಕ, ಸಂಶೋಧನೆ ಮತ್ತು ವಿಸ್ತರಣ ಮಂಡಲಿಗಳು, ನಾಗಾಲೋಟದಲ್ಲಿ ಬದಲಾಗುತ್ತಿರುವ ಸಂದರ್ಭಗಳಿಗೆ ಸ್ಪಂದಿಸಿ, ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೆ ಎನ್ನುವುದನ್ನು ತಿಳಿದುಕೊಳ್ಳುವ ವ್ಯವಸ್ಥೆ ಆಗಬೇಕಿತ್ತು. ಇದಕ್ಕಾಗಿ ಒಂದು ತಜ್ಞ ಸಮಿತಿಯನ್ನು ರಚಿಸಲು ಆಡಳಿತ ಮಂಡಳಿಯ ಮತ್ತು ರಾಜ್ಯಪಾಲರ ಒಪ್ಪಿಗೆಯನ್ನು ಪಡೆದು ಮೂರು ಜನ ವಿಜ್ಞಾನಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಇದೇ ವಿಶ್ವವಿದ್ಯಾನಿಲಯದಲ್ಲಿ ಕೆಲವು ಕಾಲ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದ, ಮಧ್ಯಪ್ರದೇಶದ ವ್ಯವಸಾಯ ಇಲಾಖೆಯ ನಿವೃತ್ತ ಡೈರೆಕ್ಟರೂ, ವಿಶ್ವಬ್ಯಾಂಕಿನ ನಿವೃತ್ತ ಅಧಿಕಾರಿಯೂ ಆಗಿದ್ದ ಅಪಾರ ಆಡಳಿತ ಅನುಭವವಿದ್ದ ಡಾ॥ ಆರ್.ವಿ. ರಾಮಕೃಷ್ಣರವರು ಈ ಸಮಿತಿಯ ಛೇರ್‌ಮನ್ ಆಗಿ, ಹಿಂದೆ ನಮ್ಮಲ್ಲಿ ಮೊದಲ ಡೀನ್ ಆಗಿ ಶೈಕ್ಷಣಿಕ ಮತ್ತು ಸಂಶೋಧನೆಯ ಬುನಾದಿಯನ್ನು ನಿರ್ಮಿಸಿದ್ದ, ನಂತರ ತಮಿಳುನಾಡು ಕೃ.ವಿ.ವಿ. ಕುಲಪತಿಯಾಗಿ, ಎಫ್.ಎ.ಓ. ಅಧಿಕಾರಿಯಾಗಿ ಹತ್ತು ಹಲವು ಸಂಶೋಧನೆಯ ಸಂಸ್ಥೆಗಳ ಅಡ್‌ವೈಸರ್ ಆಗಿ ಅಪಾರ ಅನುಭವಿ ಡಾ॥ ಜಿ. ರಂಗಸ್ವಾಮಿಯವರು ಮತ್ತು ವೆಟರಿನರಿ ಕಾಲೇಜಿನ ಪ್ರಾಧ್ಯಾಪಕ ಮತ್ತು ಎನಿಮಲ್ ಸೈನ್ಸ್ ಇನ್‌ಸ್ಟಿಟ್ಯೂಟಿನ ನಿವೃತ್ತ ಡೈರೆಕ್ಟರ್ ಆಗಿದ್ದ ಡಾ॥ ಕೇಶವಮೂರ್ತಿರವರು ಸದಸ್ಯರಾಗಿ ನೇಮಕಗೊಂಡರು. ಈ ಮೂವರ ಸಮಿತಿ ಕೃ.ವಿ.ವಿ. ಪರಿಮಿತಿಯಲ್ಲಿದ್ದ ಎಲ್ಲಾ ಕಾಲೇಜು, ಸಂಶೋಧನಾ ಕೇಂದ್ರಗಳಿಗೆ ಭೇಟಿಕೊಟ್ಟು ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಪಟ್ಟ ಎಲ್ಲ ಸಂಶೋಧಕರು, ಶಿಕ್ಷಕರು, ವಿಸ್ತರಣ ಅಧಿಕಾರಿಗಳು, ವಿದ್ಯಾರ್ಥಿಗಳು, ಕಾರ್ಮಿಕರು, ಸಿಬ್ಬಂದಿವರ್ಗದವರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಲ್ಲದೆ ಕೃ.ವಿ.ವಿ. ಸೇವಾಕ್ಷೇತ್ರದಲ್ಲಿದ್ದ ಎಲ್ಲಾ ಇಲಾಖೆಗಳ ನಿರ್ದೇಶಕರ ಸಭೆಯನ್ನು ಕರೆದು ಕೃ.ವಿ.ವಿ. ಸೇವೆ ಎಷ್ಟರ ಮಟ್ಟಿಗೆ ಇಲಾಖೆಗಳಿಗೆ ತಲುಪುತ್ತಿದೆಯೆನ್ನುವುದನ್ನು ಕೂಡ ತಿಳಿದು ಒಂದು ಅತ್ಯುತ್ತಮವಾದ ರಿಪೋರ್ಟನ್ನು ಕೊಟ್ಟರು. ಈ ರಿಪೋರ್ಟನ್ನು ಕೃ.ವಿ.ವಿ. ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ, ಕೆಲವು ಕಾನೂನಿಗೆ ಸಂಬಂಧಿಸಿದವನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸಿ ಅಮೆಂಡ್‌ಮೆಂಟ್ ಮಾಡುವಂತಹವನ್ನು ಪ್ರತ್ಯೇಕಿಸಿ, ಮತ್ತೆ ಕೆಲವನ್ನು ಆಡಳಿತ

ಮಂಡಳಿಯ ಮುಂದಿಟ್ಟು ಪರಿಶೀಲಿಸಿದ ನಂತರ ಕಾರ್ಯರೂಪಕ್ಕೆ ತರುವಂತಹವನ್ನು ಬೇರ್ಪಡಿಸಿ, ಕುಲಪತಿಯ ವ್ಯಾಪ್ತಿಯಲ್ಲಿ ಬರುವಂತವನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರುವ ತೀರ್ಮಾನ ತೆಗೆದುಕೊಂಡಿದ್ದಾಯಿತು. ಇವುಗಳಲ್ಲಿ ಮುಖ್ಯವಾದವು ಇಲ್ಲಿಯ ವರೆಗೆ ಕೇಂದ್ರೀಕೃತ ವಾಗಿದ್ದ ಆಡಳಿತವನ್ನು ಸಡಿಲಗೊಳಿಸಿ ಪ್ರತಿಯೊಬ್ಬ ಅಧಿಕಾರಿಗೆ ಪೂರ್ಣ ಜವಾಬ್ದಾರಿ ವಹಿಸಿದ್ದು ಅದರೊಂದಿಗೆ ಪ್ರತಿ ಅಧಿಕಾರಿ ಅವರ ಬಜೆಟ್‌ನಲ್ಲಿ ನಮೂದಿಸಿರುವ ಖರ್ಚನ್ನು ಒಂದು ಬಾರಿಗೆ ಐವತ್ತು ಸಾವಿರ ರೂಪಾಯಿ ಅನುಮೋದನೆ ನೀಡುವ ಹಕ್ಕನ್ನು ಕೊಟ್ಟಿದ್ದು.

ಎಲ್ಲಾ ನೌಕರರ ಸರ್ವೀಸ್ ರಿಜಿಸ್ಟರ್ ಆಡಳಿತ ಅಧಿಕಾರಿಯ ಕಛೇರಿಯಲ್ಲಿದ್ದು ಆಯಾ ಆಫೀಸಿನಲ್ಲಿ ಕೆಲಸ ಮಾಡುವವರ ಕಾರ್ಯವೈಖರಿ ವಿವರ ಸಂಬಂಧಪಟ್ಟ ಆಫೀಸರ್‌ಗೆ ತಿಳಿಯುತ್ತಿರಲಿಲ್ಲ. ಎಸ್.ಆರ್.ಗಳನ್ನು ಸಂಬಂಧಪಟ್ಟ ಆಫೀಸಿಗೆ ಕಳುಹಿಸಿ ಅದರ ಪೂರ್ಣ ಹೊಣೆಯನ್ನು ಅಲ್ಲಿಯ ಅಧಿಕಾರಿ ನಿರ್ವಹಿಸುವಂತೆ ಮಾಡಲಾಯಿತು. ಐನೂರು ರೂಪಾಯಿಗಿಂತ ಹೆಚ್ಚಿನ ವಸ್ತುಗಳನ್ನು ಕೊಳ್ಳಲು ಕೇಂದ್ರೀಕೃತವಾಗಿದ್ದ ಸ್ಟೋರ್ ಪರ್‌ಚೇಸ್ ಆಫೀಸಿನಿಂದಲೇ ಆಗಬೇಕಿತ್ತು. ಫೈಲುಗಳು ಜರುಗಲು ವಿಳಂಬವಾಗುತ್ತಿದ್ದರಿಂದ ಎಷ್ಟೋ ವಸ್ತುಗಳನ್ನು ಆಯಾ ವರುಷದ ಬಜೆಟ್ ಅವಧಿಯಲ್ಲಿ ಕೊಳ್ಳಲಾಗುತ್ತಿರಲಿಲ್ಲ. ಇವೆಲ್ಲವೂ ಹಣಕಾಸು ಅಧಿಕಾರಿಗಳ ಸಹಿ ಇಲ್ಲದೆ ಮುಂದೆ ಹೋಗುವ ಹಾಗಿರಲಿಲ್ಲ. ವಿಜ್ಞಾನಿಗಳಿಗೆ ಇದೊಂದು ದೊಡ್ಡ ಕಂದರವಾಗಿತ್ತು. ಅವರೇ ಪ್ರಾಜೆಕ್ಟ್ ಬರೆದು ಲಕ್ಷಾಂತರ ರೂಪಾಯಿಯ ಪ್ರಾಜೆಕ್ಟ್ ತಂದು ಕಾರ್ಯರೂಪಕ್ಕೆ ತರುವಾಗ ಖರ್ಚಿಗೆ ಕ್ಲಾರ್ಕ್‌ನ ಹತ್ತಿರ ಕೈ ಒಡ್ಡಬೇಕಾಗಿತ್ತು. ವಿಕೇಂದ್ರೀಕರಣ ದಿಂದ ಇಂತಹ ಕೊರತೆಗಳನ್ನು ನಿಭಾಯಿಸಲು ಅನುಕೂಲವಾಯಿತು.

ಆಡಳಿತ ಮತ್ತು ಖರ್ಚು ವೆಚ್ಚಗಳನ್ನು ವಿಕೇಂದ್ರಿಕರಿಸುವುದು, ಪಾರಂಪರ್ಯವಾಗಿ ನಡೆದು ಬಂದ ಸಂಸ್ಥೆಗಳಲ್ಲಿ ಸುಲಭದ ಕೆಲಸವೇನಲ್ಲ. ಸಂಸ್ಥೆಯ ದೃಷ್ಟಿಯಿಂದ ಎಷ್ಟೇ ಹಿತಕರವಾದರೂ ಮುಷ್ಟಿಯಲ್ಲಿದ್ದ ಹಿಡಿತವನ್ನು ಸಡಿಲಗೊಳಿಸುವಾಗ ಹಲವಾರು ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಇಷ್ಟಾದರೂ ಎಷ್ಟೋ ಅಧಿಕಾರಿಗಳು ಪೂರ್ಣ ಜವಾಬ್ದಾರಿ ಹೊರಲು ಹಿಂಜರಿಯುತ್ತಿದ್ದರು. ಇವರಿಗೆ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡು ಕೆಲಸಮಾಡುವುದಕ್ಕಿಂತ ಮೇಲಿನ ಅಧಿಕಾರಿಗಳತ್ತ ಕೈ ತೋರಿಸಿ ಕೂರುವುದು ಸುಲಭವಾಗಿತ್ತು.

ಕೃ.ವಿ.ವಿ.ದ ಆಕ್ಟ್ ಮತ್ತು ಸ್ಟ್ಯಾಟೂಟಸ್ ಪ್ರಕಾರ ಆಡಳಿತ ಮಂಡಳಿಯು ಸರ್ವಾಧಿಕಾರಿ. ಆದರೂ ಇಲ್ಲಿ ತೆಗೆದುಕೊಂಡ ಕೆಲವು ನಿರ್ಣಯಗಳನ್ನು ಕೋರ್ಟು ಪ್ರಶ್ನಿಸಬಹುದು. ಅಲ್ಲದೆ ಕಾನೂನು ಬಾಹಿರವೆಂದು ಪರಿಗಣಿಸಬಹುದು. ಆದರೆ ಶಿಕ್ಷಣ ಮಂಡಲಿ, ಸಂಶೋಧನಾ ಮಂಡಲಿ ಮತ್ತು ವಿಸ್ತರಣ ಮಂಡಲಿಗಳು ಕೈಗೊಂಡ ತೀರ್ಪನ್ನು ಯೂನಿವರ್ಸಿಟಿಯ ಹಕ್ಕೆಂದು ಪರಿಗಣಿಸಲಾಗುವುದು. ಇಂತಹ ಮಂಡಲಿಗಳ ಕಾರ್ಯವೈಖರಿ ಕಟ್ಟುಬದ್ಧವಾಗಿರಬೇಕು. ಇವುಗಳಿಗೆ ವಿಧಿಸಿರುವ ಪರಿಮಿತಿಯನ್ನು ಮೀರಿ ನಡೆದುಕೊಂಡರೆ ಅಥವಾ ಅಲಕ್ಷ್ಯ ಮಾಡಿದರೆ ಶಿಕ್ಷಣ, ಸಂಶೋಧನೆ, ವಿಸ್ತರಣ ಸಮರ್ಪಕವಾಗಿ ನಡೆಯದೆ ಗೊಂದಲವನೆಬ್ಬಿಸುವ ಸಾಧ್ಯತೆಗಳಿವೆ.

ಕುಲಪತಿಗಳೇ ಶಿಕ್ಷಣ ಮಂಡಲಿಯ ಛೇರ್‌ಮನ್. ಆದರೆ ಸಂಶೋಧನಾ ಮಂಡಲಿ ಮತ್ತು ವಿಸ್ತರಣ ಮಂಡಲಿಗಳ ಛೇರ್‌ಮನ್ ಆಯಾ ಡೈರೆಕ್ಟರುಗಳು ಇದ್ದರು. ಈ ಮಂಡಲಿಗಳ ಮುಖ್ಯ

ಉದ್ದೇಶ ನಿಯಮ ನಿಬಂಧನೆಗಳನ್ನು ರೂಪಿಸಿ ಆಯಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳು ಈ ನಿಬಂಧನೆಗಳಿಗೆ ಒಳಪಟ್ಟಿವೆಯೆ ಹಾಗೂ ಸಂಶೋಧನೆ ವಿಸ್ತರಣ ರೈತರಿಗೆ ಮುಟ್ಟುತ್ತಿವೆಯೆ ಎಂದು ಪರಿಶೀಲಿಸುವುದು. ಕಾರಣಾಂತರಗಳಿಂದ ನಿಯಮಿತ ಸದಸ್ಯರನ್ನೊಳಗೊಂಡ ಸಂಶೋಧನಾ ಮಂಡಳಿ ಮತ್ತು ವಿಸ್ತರಣ ಮಂಡಲಿ ಆಯಾ ಡೈರೆಕ್ಟರೇಟಿನಲ್ಲಿರುವ ಎಲ್ಲಾ ವಿಜ್ಞಾನಿಗಳನ್ನು ಮತ್ತು ಇತರೆ ಆಫೀಸರ್‌ಗಳನ್ನು ಒಂದೆಡೆ ಸೇರಿಸಿ ಆ ವರುಷ ಸಾಧಿಸಿರುವ ಕೆಲಸದ ಬಗ್ಗೆ ವರದಿ ಒಪ್ಪಿಸುವ ಒಂದು ದಿನದ ಕಾರ್ಯಾಗಾರದಂತಿದ್ದವು. ನೋಡುವವರಿಗೆ ಒಂದು ಬಗೆಯ ಜವಾಬಂದಿಯಂತೆ ಕಾಣುತ್ತಿದ್ದವು. ಸಂಶೋಧನೆ, ವಿಸ್ತರಣದಲ್ಲಿದ್ದ ಲೋಪದೋಷಗಳನ್ನು ಗಮನಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ದಿಕ್ಕಿನಲ್ಲಿ ಚರ್ಚೆ ನಡೆಯುತ್ತಿರಲಿಲ್ಲ. ಏಕೆಂದರೆ ನೂರಕ್ಕೂ ಹೆಚ್ಚು ಮಂದಿ ಸೇರುತ್ತಿದ್ದ ಈ ಸಭೆಯಲ್ಲಿ ಮೊದಲು ಕೊನೆ ಯಾವುದೆಂದು ತೀರ್ಮಾನಿಸುವುದು ಕಷ್ಟವಾಗುತ್ತಿತ್ತು. ಸ್ಟ್ಯಾಟ್ಯೂಟಸ್ ಪ್ರಕಾರ ಕೇವಲ ಹದಿನೈದು ಮಂದಿ ಈ ಎರಡು ಮಂಡಲಿಗಳ ಸದಸ್ಯರು. ಇಬ್ಬರು ಡೈರೆಕ್ಟರ್ಸ್, ಹೆಡ್ಸ್ ಆಫ್ ಡಿವಿಜನ್, ಲೈಬ್ರರಿಯನ್ ಮತ್ತು ಐದು ರಿಸರ್ಚ್ ಎಕ್ಸ್‌ಟೆನ್‌ಷನ್ ಸ್ಪೆಷಲಿಸ್ಟ್ ಇವುಗಳ ಸದಸ್ಯರು. ಈ ಮಂಡಲಿಗಳ ಪುನಶ್ಚೇತನದ ಅಗತ್ಯವನ್ನು ಕಂಡು, ಶಿಕ್ಷಣ ಮಂಡಲಿಗೆ ಇರುವಂತೆ ಇವೆರಡಕ್ಕೂ ಕುಲಪತಿಗಳನ್ನೇ ಛೇರ್‌ಮನ್ ಮಾಡಿ, ಹೊರಗಡೆಯಿಂದ ಖ್ಯಾತ ವಿಜ್ಞಾನಿಗಳನ್ನು, ಪ್ರಗತಿಪರ ರೈತರನ್ನು ಈ ಮಂಡಲಿಗಳಿಗೆ ಆಹ್ವಾನಿತರನ್ನಾಗಿ ಮಾಡಲಾಯಿತು. ವರುಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಈ ಮಂಡಲಿಗಳು ಸಭೆ ಸೇರಿ ಸಂಶೋಧನೆ, ವಿಸ್ತರಣ ಪ್ರಗತಿಯನ್ನು ಪರಿಶೀಲಿಸುವಂತೆ ಮಾಡಲಾಯಿತು.

ಈ ಮೊದಲೇ ತಿಳಿಸಿದಂತೆ ಕೃ.ವಿ.ವಿ. ಪ್ರಾರಂಭವಾದ ನಂತರ ಮೊದಲನೆ ಬಾರಿಗೆ ಪಠ್ಯಕ್ರಮಗಳನ್ನು ಬದಲಾಯಿಸುವ ಪ್ರಯತ್ನದಲ್ಲಿ ನನ್ನ ಸಕ್ರಿಯ ಪಾತ್ರವಿತ್ತು. ಅವನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಸದಾವಕಾಶ ದೊರೆಯಿತು. ವಿದ್ಯಾರ್ಥಿಗಳು ಒಂದು ಸೆಮೆಸ್ಟರ್ ಪೂರ್ತಿ ರೈತರ ಜಮೀನಿನಲ್ಲಿ ಅವರು ಕಲಿತದ್ದನ್ನು ಪ್ರಾಯೋಗಿಕವಾಗಿ ಮಾಡಿ ನೋಡುವುದರ ಜೊತೆಗೆ ರೈತರಿಂದ ಕಲಿಯಬೇಕಾದ ಹಲವಾರು ಅನುಭವಗಳನ್ನು ಚರ್ಚಿಸಿ ರೂಢಿಸಿಕೊಳ್ಳುವ ಅವಕಾಶ ವನ್ನು ಈ ರಾವೆ ಕಾರ್ಯಕ್ರಮದಲ್ಲಿ ಅಳವಡಿಸಲಾಗಿತ್ತು. ಹಣದ ಕೊರತೆಯಿಂದ ಇದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲವೆಂಬ ತರ್ಕವನ್ನು ಒಂದೆಡೆ ತಳ್ಳಿ ಹಾಕಿ ನಮ್ಮಲ್ಲಿರುವ ಸಂಪನ್ಮೂಲವನ್ನು ಕ್ರೋಢೀಕರಿಸಿ ಕಡ್ಡಾಯವಾಗಿ ಈ ಶಿಕ್ಷಣ ಆಗಲೇಬೇಕೆಂದು ಪ್ರಾರಂಭಿಸಿದೆವು. ಈ ಬಗೆಯ ತರಬೇತಿ ದೇಶದ ಎಲ್ಲಾ ಕೃ.ವಿ.ವಿ.ಗಳಲ್ಲಿ ಪ್ರಾರಂಭಿಸಬೇಕೆಂಬ ಆದೇಶವಿದ್ದರೂ ಇಲ್ಲಿ ಮಾಡಿದಷ್ಟು ಸಮರ್ಪಕವಾಗಿ ಬೇರೆ ವಿಶ್ವವಿದ್ಯಾನಿಲಯದಲ್ಲಿ ನಡೆದಿಲ್ಲವೆಂದು, ಇದರ ಬಗ್ಗೆ ನಡೆದ ಕಾರ್ಯಗಾರದಿಂದ ತಿಳಿಯಿತು. ಇದರ ಜೊತೆಗೆ ಪ್ರತಿ ಸೆಮೆಸ್ಟರ್ ಕೊನೆಯಲ್ಲಿ ಒಂದು ವಾರದ ತರಬೇತಿ ರೈತರ ಜಮೀನಿನಲ್ಲಿ ಆಗಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳ ಲಾಯಿತು. ಇದರ ಪರಿಣಾಮ ಮತ್ತು ಪ್ರತಿಫಲಗಳನ್ನು ಮುಂಬರುವ ವರುಷಗಳಲ್ಲಿ ಕಾದು ನೋಡಬೇಕು.

ಹೊಸ ಕಾಲೇಜುಗಳ ಸ್ಥಾಪನೆಗೆ ನಾನು ಸ್ಪೆಷಲ್ ಆಫೀಸರ್ ಆಗಿದ್ದು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಮಾಡಿದ ಪ್ರಯತ್ನವನ್ನು ಈ ಹಿಂದೆಯೇ ವಿವರಿಸಲಾಗಿದೆ. ಶಿವಮೊಗ್ಗ,

ಮೂಡಿಗೆರೆ, ಮಂಡ್ಯ, ಪೊನ್ನಂಪೇಟೆ ಮತ್ತು ಚಿಂತಾಮಣಿಗಳಲ್ಲಿ ಹೊಸ ಕಾಲೇಜುಗಳನ್ನೇನೊ ಸ್ಥಾಪನೆ ಮಾಡಿದ್ದಾಗಿತ್ತು. ಆದರೆ ಅವಕ್ಕೆ ಇರಬೇಕಾದ ಕನಿಷ್ಠ ಉಪಕರಣಗಳು ಮತ್ತು ಸಿಬ್ಬಂದಿ ಒದಗಿಸಿರಲಿಲ್ಲ. ಈ ಕಾಲೇಜುಗಳಿಗೆ ಸೇರಿದ ವಿದ್ಯಾರ್ಥಿಗಳು ಪಾಠ ಪ್ರವಚನ ಸರಿಯಾಗಿ ನಡೆಯುತ್ತಿಲ್ಲವೆಂದು ಆಗಾಗ ಮುಷ್ಕರ ಹೂಡುತ್ತಿದ್ದರು. ಉಪಾಧ್ಯಾಯರಿಲ್ಲದೆ ಬೆಂಗಳೂರಿನಿಂದ ಟೂರ್ ಮೇಲೆ ಕಳುಹಿಸಿ, ಕಾಲೇಜು ನಡೆಸುವ ಪರಿಸ್ಥಿತಿ ಇತ್ತು. ಬೆಂಗಳೂರಿನಿಂದ ಯಾರನ್ನಾದರೂ ವರ್ಗಾಯಿಸಿ ಈ ಕಾಲೇಜುಗಳಿಗೆ ಕಳುಹಿಸುವ ಪ್ರಯತ್ನಗಳು ವಿಫಲವಾಗಿದ್ದವು. ತುರ್ತಾಗಿ ಅವಶ್ಯಕವಿದ್ದ ಕನಿಷ್ಠ ಹುದ್ದೆಗಳನ್ನಾದರೂ ತುಂಬುವುದು ಅಗತ್ಯವಾಗಿತ್ತು. ಎಪ್ಪತ್ತು ಉಪಾಧ್ಯಾಯರನ್ನು, ನೂರ ಇಪ್ಪತ್ತು ಸಹಾಯಕರನ್ನು ಆಯ್ಕೆ ಮಾಡಿ ಎಷ್ಟೇ ಒತ್ತಡವಿದ್ದರೂ ಯಾರನ್ನೂ ಬೆಂಗಳೂರಿನಲ್ಲಿ ಇಡದೆ ಹೊಸ ಕಾಲೇಜುಗಳಿಗೆ ಕಳುಹಿಸಲಾಯಿತು. ಅಂದಿನ ಪರಿಸ್ಥಿತಿಯಲ್ಲಿ ಇದು ಸಾಮಾನ್ಯದ ಕೆಲಸವಲ್ಲ. ಈ ಸಂದರ್ಭದಲ್ಲಿ ಕೃಷಿ ಮಂತ್ರಿಯವರನ್ನು ಸ್ಮರಿಸಿಕೊಳ್ಳಬೇಕು. ಅವರು ಯಾವ ಒತ್ತಡಕ್ಕೂ ಮಣಿಯದೆ ಕುಲಪತಿಗೆ ಪೂರ್ಣ ಪ್ರೋತ್ಸಾಹ ನೀಡಿದ್ದರು. ಉಳಿದ ಎಲ್ಲ ಹುದ್ದೆಗಳನ್ನು ಹೊಸ ಕಾಲೇಜುಗಳಿಗೆ ಭರ್ತಿಮಾಡುವ ಉದ್ದೇಶದಿಂದ ಸುಮಾರು ಮುನ್ನೂರಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮಾಡಿದ ಭಗೀರಥ ಪ್ರಯತ್ನ ಎರಡು ವರುಷವಾದರೂ ಫಲಕಾರಿಯಾಗಲಿಲ್ಲ. ಕಾರಣ ನಮ್ಮೊಳಗೆ ಇದ್ದ ಪಟ್ಟಬದ್ಧ ಶಕ್ತಿಗಳು ತಂದ ಅಡ್ಡಿ ಆತಂಕಗಳಿಂದ.

ಪೊನ್ನಂಪೇಟೆ ಅರಣ್ಯಕಾಲೇಜು ಮತ್ತು ಚಿಂತಾಮಣಿ ರೇಷ್ಮೆಕೃಷಿ ಕಾಲೇಜುಗಳಿಗೆ ಹೊಸದಾಗಿ ನಿರ್ಮಿತವಾಗಿದ್ದ ಕಟ್ಟಡಗಳಿದ್ದವೆ ಹೊರತು, ವಾಸ್ತವವಾಗಿ ಈ ಎರಡು ಕಾಲೇಜುಗಳು ಹಿಂದಿನಿಂದಲೆ ಜಿ.ಕೆ.ವಿ.ಕೆ. ಕ್ಯಾಂಪಸ್, ಬೆಂಗಳೂರಿನಲ್ಲಿ ನಡೆಯುತ್ತಿದ್ದವು. ಪ್ರತಿ ಕಾಲೇಜಿನ ನಾಲ್ಕು ತರಗತಿ ವಿದ್ಯಾರ್ಥಿಗಳು, ಆ ಕಾಲೇಜುಗಳ ಉಪಾಧ್ಯಾಯರು, ಸಿಬ್ಬಂದಿ ವರ್ಗದವರು, ಉಪಕರಣಗಳ ಸಮೇತ ಸ್ಥಳಾಂತರಿಸುವ ಹೊಣೆ ನನ್ನ ಮೇಲೆ ಬಿತ್ತು. ಮೊದಮೊದಲು ಇದೊಂದು ಕಷ್ಟದ ಕೆಲಸವೆಂದು, ಮುಂದೆ ತಳ್ಳುವ ಪ್ರಯತ್ನ ನಡೆದಿದ್ದರೂ ಹೆಚ್ಚಿನ ಅಡಚಣೆ ಇಲ್ಲದೆ ಸ್ಥಳಾಂತರಿಸಲಾಯಿತು. ಹೊರಗಿನವರಿಗೆ ಇದೊಂದು ಸಾಮಾನ್ಯ ಆಡಳಿತ ಕ್ರಮವಾಗಿ ಕಂಡರೂ ಅನುಷ್ಠಾನಕ್ಕೆ ತರುವಲ್ಲಿ ಒಂದು ದೃಢ ನಿರ್ಧಾರ ತೆಗೆದುಕೊಳ್ಳ ದಿದ್ದರೆ ಪರಿಸ್ಥಿತಿ ಬದಲಾಗಬಹುದಿತ್ತು.

ವರುಷಗಳು ಉರುಳಿದಂತೆ ವೆಚ್ಚಗಳು ವೃದ್ಧಿಯಾಗುತ್ತಾ ಹೋಗುತ್ತವೆ. ಸರ್ಕಾರದ ಧನಸಹಾಯದಲ್ಲಿ ವರುಷದ ಮೊದಲಲ್ಲಿ ವಾಗ್ದಾನ ಮಾಡಿದ ಮೊಬಲಗು ಅಂತ್ಯದಲ್ಲಿ ಕಡಿತವಾಗುವುದು ಸಾಮಾನ್ಯ. ಅಂದಾಜು ವೆಚ್ಚ ಮುಂಗಡ ಪತ್ರ ಮಾರ್ಪಾಟು ಮಾಡಿ ಸರ್ಕಾರದಿಂದ ವಾಗ್ದಾನ ಮಾಡಿದ ಹಣಕ್ಕೆ ಸೀಮಿತಗೊಳಿಸಿದ್ದರೂ ವರ್ಷದ ಅಂತ್ಯದಲ್ಲಿ ಸಂದಾಯವಾಗುತ್ತಿದ್ದದ್ದು ಕಡಿಮೆಯಾಗುತ್ತಿದ್ದರಿಂದ, ಆದಾಯ ವೆಚ್ಚಗಳ ಸಮತೋಲನ ಕಷ್ಟದ ಕೆಲಸವಾಗಿ ಪರಿಣಮಿಸುತ್ತಿತ್ತು. ಬಹುಪಾಲು ಸಂಬಳಕ್ಕೆ ಮೀಸಲಾಗುತ್ತಿತ್ತು. ಸಂಶೋಧನೆ ವಿಸ್ತರಣೆಗಳಿಗೆ ಸಂಪನ್ಮೂಲ ಕಡಿಮೆಯಾಗಿ ಕುಂಠಿತವಾಗ ತೊಡಗಿದವು. ಅಭಿವೃದ್ಧಿ ಕಾರ್ಯಗಳಂತೂ ಸ್ಥಗಿತಗೊಂಡವು. ಇದರ ಜೊತೆಗೆ ಹೊಸ ಹೊಸ ಕಾಲೇಜು ಪ್ರಾರಂಭಿಸಲು ಬೇಕಿದ್ದ ಸುಮಾರು ಎಪ್ಪತ್ತು ಕೋಟಿ ಬೇಡಿಕೆಗೆ ಸಂದಾಯವಾಗಿದ್ದು ಇಪ್ಪತ್ತು ಕೋಟಿಗಿಂತ

ಕಡಿಮೆ. ಇವುಗಳನ್ನು ಮುಂದುವರಿಸಿಕೊಂಡು ಹೋಗಲು ವಿಶ್ವವಿದ್ಯಾನಿಲಯಕ್ಕೆ ಕೊಡುತ್ತಿದ್ದ ಒಟ್ಟಾರೆ ಹಣದಲ್ಲಿ ನಿಭಾಯಿಸಬೇಕಿತ್ತು. ಬೆಂಗಳೂರು ಕೃ.ವಿ.ವಿ.ಕ್ಕೆ ಸೇರಿದ ಇಪ್ಪತ್ತೆರಡು ಸಂಶೋಧನಾ ಕೇಂದ್ರಗಳಲ್ಲಿ ಬೇಲಿ, ನೀರು, ವಸತಿಗಳಿಲ್ಲದೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದವು. ಹೆಬ್ಬಾಳ ಫಾರಂ ಶತಮಾನದಷ್ಟು ಹಳೆಯದಾಗಿದ್ದರೂ ಕಾಂಪೌಂಡಿಲ್ಲದೆ ದನ, ಜನಗಳಿಗೆ ಎಲ್ಲೆಂದರೆ ಅಲ್ಲಿ ನಿರಾಯಾಸವಾಗಿ ಅಡ್ಡಾಡುತ್ತಿದ್ದುದರಿಂದ ಸಂಶೋಧನೆಗೆ ಧಕ್ಕೆ ಇತ್ತು. ಸಿಟಿಯ ಮಧ್ಯದಲ್ಲಿರುವುದರಿಂದ ಒತ್ತುವರಿಯ ಭಯ ಬೇರೆ.

ಸಾವಿರದ ಮುನ್ನೂರು ಎಕರೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಕೃ.ವಿ.ವಿ.ಕ್ಕೆ ವರ್ಗಾಯಿಸಿದಾಗ ಇದು ಊರ ಹೊರಗೆ ಇತ್ತು. ಈಗ ಅದು ಸಿಟಿ ಮಧ್ಯ ಭಾಗವಾಗಿದೆ. ಇದಕ್ಕೆ ಕಾಂಪೌಂಡಿಲ್ಲದೆ ಸುತ್ತಲೂ ಕಬಳಿಸುವ ಸಾಧ್ಯತೆ ಸದಾ ಕಾಡುತ್ತಿರುತ್ತದೆ. ಜನ ದನ ಕರುಗಳ ಹಾವಳಿಯಿಂದ ಸಂಶೋಧನೆ ತಾಕುಗಳನ್ನು ರಕ್ಷಿಸಲು ಅಲ್ಲಲ್ಲಿ ಕಲ್ಲು ಮುಳ್ಳು ಬೇಲಿ ಕಟ್ಟುವ ಆವಶ್ಯಕತೆ ಬಿತ್ತು. ನೋಡಿದವರಿಗೆ ಈ ಫಾರಂನಲ್ಲಿ ಎಷ್ಟು ಹಿಡುವಳಿದಾರರಿದ್ದಾರೆಂದೆನಿಸಬಹುದು. ಸಂಶೋಧನೆಗೆ ತಗಲುವ ಬಹುಪಾಲು ದುಡ್ಡು ಬೇಲಿ ನಿರ್ಮಿಸಲು ವೆಚ್ಚವಾಗುವುದು. ಸುತ್ತಲೂ ಭದ್ರವಾದ ಕಾಂಪೌಂಡಿದ್ದರೆ ಇಂತಹ ಅನಾವಶ್ಯಕ ವೆಚ್ಚಗಳನ್ನು ತಡೆಯಬಹುದಿತ್ತು. ಪ್ರಾರಂಭದಿಂದಲೂ ಹತ್ತಾರು ಎಕರೆ ಜಮೀನಿನಲ್ಲಿ ಸಾಗುವಳಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕಾರಣ. ಪಕ್ಕದ ಹಳ್ಳಿಯವರು ರಾತ್ರಿ ಹೊತ್ತು ಇದರೊಳಕ್ಕೆ ದನಗಳನ್ನು ಬಿಡುತ್ತಿದ್ದರು. ಸಂಬಂಧಪಟ್ಟವರಿಗೆ ಎಷ್ಟು ಮನವಿ ಮಾಡಿಕೊಂಡರೂ ಜಿ.ಕೆ.ವಿ.ಕೆ. ಫಾರಂಗೆ ಕಾಂಪೌಂಡು ಹಾಕಿಸುವ ಪ್ರಯತ್ನ ಸಫಲವಾಗಲಿಲ್ಲ. ಈ ಅನಿವಾರ್ಯದ ಕಾರ್ಯವನ್ನು ಸಾಲಮಾಡಿಯಾದರೂ ಮಾಡುವುದೆಂದು ಯೋಚಿಸಿದರೆ ಪ್ರೋತ್ಸಾಹ ದೊರೆಯುತ್ತಿರಲಿಲ್ಲ. ಭದ್ರವಾದ ಬಂದೋಬಸ್ತು ಮಾಡದಿದ್ದರೆ ಎಂದಾದರೊಂದು ದಿನ ಬಹುಪಾಲು ಜಿ.ಕೆ.ವಿ.ಕೆ. ಜಾಗ ಕೈ ತಪ್ಪುವ ಸಾಧ್ಯತೆ ಇದೆ.

ಸದಾ ಸರ್ಕಾರದ ಅನುದಾನವನ್ನೇ ನಂಬಿಕೊಂಡು ಶಿಕ್ಷಣ, ಸಂಶೋಧನೆ, ವಿಸ್ತರಣೆ ಕಾರ್ಯವನ್ನು ಮುಂದುವರಿಸಲು ಸಾಧ್ಯವಿಲ್ಲ. ಕ್ರಮೇಣ ಸರ್ಕಾರಕ್ಕೂ ಇದು ದೊಡ್ಡ ಹೊರೆಯಾಗಬಹುದು. ಎಷ್ಟೇ ಕುಂದುಕೊರತೆಗಳಿದ್ದರೂ ದೇಶದ ಇಪ್ಪತ್ತೊಂಬತ್ತು ಕೃ.ವಿ.ವಿ.ಗಳಿಗೆ ಹೋಲಿಸಿದರೆ ಕರ್ನಾಟಕದ ಎರಡು ಕೃ.ವಿ.ವಿದ್ಯಾನಿಲಯಗಳು ಸರ್ಕಾರದಿಂದ ಸಾಕಷ್ಟು ಧನ ಸಹಾಯ ಪಡೆಯುತ್ತಿವೆ. ನಮ್ಮಲ್ಲಿರುವ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆ ಕಾರ್ಯಕ್ಕೆ ಇರುವ ಸವಲತ್ತುಗಳು ದೇಶದ ನಾಲ್ಕೈದು ಮೇಲ್ಮಟ್ಟದ ಕೃ.ವಿ.ವಿದ್ಯಾನಿಲಯಗಳಿಗೆ ಮಾತ್ರ ಇವೆ. ಮೂಲತಃ ನಮ್ಮ ದೇಶದ ಕೃ.ವಿ.ವಿ.ಗಳು ಅಮೆರಿಕಾದ ಲ್ಯಾಂಡ್ ಗ್ರಾಂಟ್ ಕಾಲೇಜು ಮಾದರಿಯಲ್ಲಿ ಪ್ರಾರಂಭವಾದವು. ಪ್ರತಿ ಕೃ.ವಿ.ವಿ.ಗಳಿಗೆ ಕೊಟ್ಟಿರುವ ಜಮೀನಿನ ಆದಾಯದಲ್ಲಿ ಹೆಚ್ಚಿನ ಖರ್ಚನ್ನು ನಿಭಾಯಿಸಲು ಯೋಚಿಸಲಾಗಿತ್ತು. ಈ ದಿಸೆಯಲ್ಲಿ ಪಂತ್‌ನಗರ, ಪಂಜಾಬ್, ಹರಿಯಾಣ ಕೃ.ವಿ.ವಿ.ನಿಲಯಗಳು ಪ್ರಾರಂಭದಿಂದ ಸಾಕಷ್ಟು ಸಂಪಾದನೆಯನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದವು. ಒಂದು ಕಾಲದಲ್ಲಿ ಪಂತ್‌ನಗರ ದೇಶದಲ್ಲೇ ಹಣವಂತ ಕೃ.ವಿ.ವಿ. ಎಂದು ಹೆಸರುಗಳಿಸಿತ್ತು. ಅರವತ್ತರ ದಶಕದಲ್ಲಿ ಹೊಸದಾಗಿ ಬಂದ ಗೋಧಿ ತಳಿ ಬಿತ್ತನೆಯ ಮಾರಾಟದಲ್ಲಿ ಗಳಿಸಿದ ಹಣ ವಿಶ್ವವಿದ್ಯಾನಿಲಯದ ಖರ್ಚನ್ನು ನಿಭಾಯಿಸುವ ಸ್ಥಿತಿಯಲ್ಲಿತ್ತು. ಕ್ರಮೇಣ ಕಾರ್ಮಿಕರ ಮುಷ್ಕರದಿಂದ ಪಂತ್‌ನಗರ ತೆರೈ ಫಾರಂನಲ್ಲಿದ್ದ

8000 ಎಕರೆ ಇಳುವರಿ ಕಡಿಮೆಯಾಗಿ ಸಂಬಳ ಸಾರಿಗೆ ದುಬಾರಿಯಾಗಿ ಕೆಲವು ಸಮಯ ಈ ವಿಶ್ವವಿದ್ಯಾನಿಲಯ ಮುಚ್ಚುವ ಸ್ಥಿತಿಗೆ ಬಂದಿತ್ತು. ಬೇರೆ ಕೃ:ವಿ.ವಿ. ಫಾರಂಗಳ ಕಥೆಯೂ ಇದೇ ಪರಿಪಾಟು.

ಬೆಂಗಳೂರು ಕೃ.ವಿ.ವಿ.ಕ್ಕೆ ಸೇರಿದ 22 ಸಂಶೋಧನಾ ಕೇಂದ್ರಗಳಲ್ಲಿ ಸುಮಾರು 6000 ಎಕರೆ ಜಮೀನು ಇದೆ. ಇವುಗಳಲ್ಲಿ ಕೇವಲ ಮೂರು ನಾಲ್ಕು ಫಾರಂಗಳು ಖರ್ಚಿಗಿಂತ ಆದಾಯ ಹೆಚ್ಚು ತೋರಿಸುತ್ತಿರುವವು. ಉಳಿದವೆಲ್ಲ ಆದಾಯಕ್ಕಿಂತ ಖರ್ಚೆ ಹೆಚ್ಚು. ಖಾಸಗಿಯವರು ಆದಾಯ ವೆಚ್ಚ ಲೆಕ್ಕ ಹಾಕಿದ ಹಾಗೆ ಸಂಶೋಧನಾ ಕೇಂದ್ರಗಳು ಕಾರ್ಯ ನಿರ್ವಹಿಸಲು ಆಗದು. ಮೂಲತಃ, ಈ ಫಾರಂಗಳು ಸಂಶೋಧನೆಗೆ ಮೀಸಲಾಗಿರುವುದರಿಂದ ಲಾಭ ಗಳಿಸಲು ದುಸ್ತರ. ಆದರೂ ಸರಿಯಾದ ಯೋಜನೆ ಕಾರ್ಯ ನಿರ್ವಹಣೆ ಮತ್ತು ಫಾರಂ ಮೇನೇಜ್‌ಮೆಂಟ್ ಮಾಡಿದರೆ ಖರ್ಚನ್ನು ಬಹಳ ಮಟ್ಟಿಗೆ ತಗ್ಗಿಸಬಹುದು. ಫಾರಂಗಳಿಂದ ವರಮಾನ ಹೆಚ್ಚಿಸುವ ಹಲವಾರು ಉಪಾಯಗಳಿವೆ. ಒಳ್ಳೆಯ ಬೀಜ, ಬಿತ್ತನೆಗಳಿಗೆ ಸದಾ ಬೇಡಿಕೆ ಇರುತ್ತದೆ. ಇದಕ್ಕೆ ಬೇಕಿದ್ದ ತಜ್ಞರು ತಂತ್ರಜ್ಞರು ಸಾಕಷ್ಟು ಇದ್ದಾರೆ. ಲಾಭದಾಯಕವಾಗಿ ಉತ್ಪತ್ತಿ ಮಾಡುವ ಉಪಾಯವನ್ನು ಕಂಡುಕೊಳ್ಳಬೇಕು. ಖಾಸಗಿಯವರ ಸಹಕಾರ ಸಂಪರ್ಕ ಬೆಳೆಸಿಕೊಳ್ಳಬೇಕು. ಇವರೊಂದಿಗೆ ಸರಿಯಾದ ಒಡಂಬಡಿಕೆ ಮಾಡಿಕೊಂಡು ಯೋಜನೆಗಳನ್ನು ರೂಪಿಸಿಕೊಂಡರೆ ಫಾರಂ ವರಮಾನ ಹೆಚ್ಚಿಸಲು ಸಾಧ್ಯ.

ಬೆಂಗಳೂರು ಕೃ.ವಿ.ವಿ. ಪ್ರಾರಂಭವಾದ ನಂತರ ಮೊಟ್ಟಮೊದಲಿಗೆ ಕೃಷಿ ಪಶುಪಾಲನೆ, ಹೈನುಗಾರಿಕೆ, ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ಖಾಸಗಿ ಉದ್ಯಮಿಗಳನ್ನು ಆಹ್ವಾನಿಸಿ ವಿಚಾರ ವಿನಿಮಯ ಮಾಡಿ, ವಿಶ್ವವಿದ್ಯಾನಿಲಯ ಮತ್ತು ಉದ್ಯಮಿಗಳು ಕೃಷಿ ಸಂಶೋಧನೆಯಲ್ಲಿ ಪರಸ್ಪರ ಹೇಗೆ ಸಹಕರಿಸಬಹುದೆಂದು ಚರ್ಚಿಸಲಾಯಿತು. ನವೆಂಬರ್ 8, 1995ರಂದು ನಡೆದ ಈ ಸಭೆಯಲ್ಲಿ ಸುಮಾರು 88 ಖಾಸಗಿ ಉದ್ಯಮಿಗಳು ಹಾಜರಿದ್ದು ಎಪ್ಪತ್ತಕ್ಕೂ ಹೆಚ್ಚು ಯೋಜನೆಗಳನ್ನು ಮುಂದಿಟ್ಟರು. ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಮ್ಮಲ್ಲಿರುವ ತಜ್ಞರು, ತಂತ್ರಜ್ಞಾನ, ಸವಲತ್ತುಗಳು ಸಾಕಷ್ಟಿವೆಯೆ ಎಂದು ರೂಪು ರೇಖೆಗಳನ್ನು ಗೊತ್ತು ಮಾಡಲು ಪ್ರತ್ಯೇಕ ವಿಭಾಗವನ್ನು ಪ್ರಾಜೆಕ್ಟ್ ಪ್ಲಾನಿಂಗ್ ಮತ್ತು ಮಾನಿಟರಿಂಗ್ ಸೆಲ್ಲಿನಲ್ಲಿ ತೆರೆಯಲಾಯಿತು. ಆ ವರುಷ ಕೇವಲ ಆರೇಳು ಯೋಜನೆಗಳನ್ನು ಮಾತ್ರ ಕೈಗೊಳ್ಳಲಾಯಿತು. ಆದರೆ ಈ ಬಗೆಯ ಸಂಶೋಧನೆ ಸಹಕಾರ ಸಾಧ್ಯತೆಯ ಬಾಗಿಲನ್ನು ತೆರೆದಂತಾಯಿತು. ಖಾಸಗಿ ಉದ್ಯಮಿಗಳು ಈ ವಿಭಾಗವನ್ನು ಸಂಪರ್ಕಿಸಿ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳುವಂತಾಯಿತು. ಸಂಶೋಧನೆಯಲ್ಲಿ ಆಸಕ್ತಿ ಇರುವಂತಹ ವಿಜ್ಞಾನಿಗಳಿಗೆ ವಿಫುಲವಾದ ಅವಕಾಶಗಳು ತಮ್ಮ ಬಳಿಗೆ ಬರುವಂತಾದವು.

ಬೆಂಗಳೂರು ಕೃ.ವಿ.ವಿ.ದಲ್ಲಿ ಹೊರಗಿನ ಧನ ಸಹಾಯದಿಂದ ಸುಮಾರು ಮುನ್ನೂರಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳು ಚಾಲನೆಯಲ್ಲಿದ್ದವು. ಅವುಗಳಲ್ಲಿ ಅನೇಕವು ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆಗಳಾಗಿದ್ದವು. ಆದರೆ ಅವುಗಳೆಲ್ಲರ ಫಲಿತಾಂಶ ಸಾಮಾನ್ಯರಿಗೆ ಕೂಡಲೆ ದಕ್ಕುವಂತಹವಲ್ಲ. ಖಾಸಗಿಯವರು ಅಪೇಕ್ಷಿಸುತ್ತಿದ್ದದ್ದು ಸಂಶೋಧನೆಯ ಫಲ ಲಾಭದಾಯಕವಾಗಿ ಮಾರುಕಟ್ಟೆಗೆ ಕೊಂಡೊಯ್ಯುವಂತಿರಬೇಕು. ನಮ್ಮಲ್ಲಿ ಈ ತಂತ್ರಜ್ಞಾನವನ್ನು

ರೂಢಿಸಿಕೊಂಡಿರದಿರುವುದು ಒಂದು ದೊಡ್ಡ ಅಡಚಣೆ. ಹೀಗಾಗಿ ಬಹುತೇಕ ಸಂಶೋಧನೆಯ ಫಲಿತಾಂಶ ಸಂಶೋಧನಾಲಯವನ್ನು ಬಿಟ್ಟು ಬರಲು ಸಾಧ್ಯವಾಗಿಲ್ಲ. ನಾವು ಹೆಚ್ಚು ಹೆಚ್ಚು ವಿಜ್ಞಾನಕ್ಕೆ ಒಲವು ತೋರಿದ್ದೇವೆಯೇ ಹೊರತು, ತಂತ್ರಜ್ಞಾನಕ್ಕೆ ಗಮನಕೊಡಲಿಲ್ಲ. ಕೃಷಿ ತಂತ್ರಜ್ಞಾನ ನಾಗಾಲೋಟದಲ್ಲಿ ಚಲಿಸುತ್ತಿರುವಾಗ ಈಗ ತಾನೆ ನಾವು ಕಣ್ಣು ತೆರೆಯುತ್ತಿದ್ದೇವೆ. ನಿಧಾನವಾದರೂ ಇನ್ನು ಒಂದೆರಡು ದಶಕದಲ್ಲಿ ಬೇರೆಯವರನ್ನು ಹಿಮ್ಮೆಟ್ಟುವ ಸಾಧ್ಯತೆಗಳಿವೆ. ಕೃಷಿ ವಿಜ್ಞಾನ ತಂತ್ರಜ್ಞಾನಕ್ಕೆ ಭಾರತದಲ್ಲಿರುವಷ್ಟು ಅವಕಾಶಗಳು ಪ್ರಪಂಚದ ಮತ್ತಾವ ದೇಶಕ್ಕೂ ಇರಲಾರದು.

ಮುಂಬರುವ ದಿನಗಳಲ್ಲಿ ಕೃಷಿ ವಿಜ್ಞಾನ, ತಂತ್ರಜ್ಞಾನದ ಮುನ್ನಡೆಗೆ ಖಾಸಗಿಯವರ ಪ್ರೋತ್ಸಾಹ ಅತಿ ಮುಖ್ಯ. ಕೃಷಿ ವಿಜ್ಞಾನಿಗಳು ಕೂಡ ಸಂಶೋಧನೆಯ ಪ್ರಾರಂಭದಿಂದಲೆ ಅದರ ಫಲಿತಾಂಶ ಫಲಾನುಭವಿಗಳಿಗೆ ಮುಟ್ಟುವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅದರ ಫಲ ಶೀಘ್ರವಾಗಿ ಸಾಮಾನ್ಯರಿಗೆ ಮುಟ್ಟುವಂತೆ ಮಾಡಬೇಕು. ಈ ದಿಸೆಯಲ್ಲಿ ಈಗ ಪ್ರಾರಂಭಿಸಿದ ಸೆಲ್ ಹೇಗೆ ಕಾರ್ಯನಿರ್ವಹಿಸುತ್ತದೆಯೆಂದು ಕಾದುನೋಡಬೇಕು. ವಿಜ್ಞಾನ, ತಂತ್ರಜ್ಞಾನವನ್ನು ಕೊಂಡು ಮಾರುವ ಸೇಲ್ಸ್‌ಮನ್‌ಶಿಪ್ ಇರುವ ನುರಿತ ವ್ಯಕ್ತಿಗಳು ಇದರ ಜವಾಬ್ದಾರಿ ಹೊತ್ತರೆ ಮಾತ್ರ ಯೋಜನೆಗಳು ಯಶಸ್ವಿಯಾಗಬಲ್ಲವು.

ಮಾನವ ಸಂಪನ್ಮೂಲ ವೃದ್ಧಿಪಡಿಸುವ ಯಾವುದೇ ಕಾರ್ಯಕ್ರಮ ಕೃಷಿ ವಿಶ್ವವಿದ್ಯಾನಿಲಯದಲ್ಲಿರಲಿಲ್ಲ. ಕಾರ್ಮಿಕರಿಂದ ಕುಲಪತಿಯವರಿಗೆ ಒಮ್ಮೆ ಆಯ್ಕೆಯಾದ ನಂತರ ಅವರಿಗೆ ಯಾವುದೇ ತರಹದ ಟ್ರೈನಿಂಗ್‌ಗಾಗಲಿ ಓರಿಯಂಟೇಷನ್ ಆಗಲಿ ಇರಲಿಲ್ಲ. ಆಯ್ಕೆಯಾದ ನಂತರ ಆಯಾ ಹುದ್ದೆಯ ಮೇಲಧಿಕಾರಿಗಳಿಗೆ ರಿಪೋರ್ಟ್ ಮಾಡಿಕೊಳ್ಳುವುದು, ಅವರು ಹೇಳಿದ ಕೆಲಸ ನಿರ್ವಹಿಸುವುದು ಪದ್ಧತಿ. ಒಂದು ವರುಷ ಪ್ರೊಬೇಷನ್ ಪೀರಿಯಡ್ ಕೂಡ ಐ.ಎ.ಎಸ್.ಗೆ ಆಯ್ಕೆಯಾದವರಿಗಿರುವಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅವಕಾಶವೂ ಇಲ್ಲ. ಪ್ರೊಬೇಷನ್ ಡಿಕ್ಲೇರ್ ಮಾಡುವುದು ಒಂದು ಸಂಪ್ರದಾಯ. ಮೇಲಧಿಕಾರಿಗಳಿಂದ ಸ್ಯಾಟಿಸ್‌ಫ್ಯಾಕ್ಟರಿ ಸರ್ಟಿಫಿಕೇಟ್ ಲಗತ್ತಿಸಿ ಆಡಳಿತ ಅಧಿಕಾರಿಗಳಿಗೆ ಕಳುಹಿಸಿದರೆ ಮುಗಿಯಿತು. ಎಲ್ಲರಿಗೂ ತಿಳಿದಂತೆ ಹೊಸದಾಗಿ ಹುದ್ದೆಗೆ ಸೇರಿದವರು, ಮೇಲಧಿಕಾರಿಗಳ ಪರಿಪಾಠವನ್ನೇ ಕಲಿಯುವರು. ಮೇಲಧಿಕಾರಿಗಳು ಸರಿಯಾದ ಸಮಯಕ್ಕೆ ಬಂದು, ಆಫೀಸ್ ಮುಚ್ಚುವವರೆಗೆ ಅಥವ ಒಂದೆರಡು ಗಂಟೆ ಹೆಚ್ಚಾಗಿ ಕುಳಿತರೆ ಕೆಳಗಿನವರೂ ಅನುಸರಿಸುವರು. ಆಫೀಸಿಗೆ ತಡವಾಗಿ ಬಂದು, ಮುಂಚೆಯೇ ಆಫೀಸ್ ಬಿಡುವವರಾದರೆ ಅವರನ್ನೇ ಹಿಂಬಾಲಿಸುವರು. ಇದ್ದ ವೇಳೆಯಲ್ಲಾದರೂ ಆಯಾ ಇಲಾಖೆಯಲ್ಲಿ ಮಾಡುವ ಕನಿಷ್ಠ ಕೆಲಸವನ್ನಾದರೂ ನುರಿತವರು ತಿದ್ದುಕೊಡುವ ಅಥವಾ ಕಲಿಸುವ ವಾಡಿಕೆ ವಿರಳ. ಎಷ್ಟೋ ವೇಳೆ ಲ್ಯಾಬೊರೇಟರಿ ಅಸಿಸ್ಟೆಂಟ್, ಫೀಲ್ಡ್ ಅಸಿಸ್ಟೆಂಟ್ ಮೇಲಿನವರಿಗೆ ಕಾಫಿ ತಂದುಕೊಡುವುದು, ಟಪಾಲ್ ತರುವುದು, ಬ್ಯಾಂಕಿಗೆ ಹೋಗುವುದು, ಟೂರ್ ಹೋಗುವಾಗ ರೈಲ್ವೆ ಸ್ಟೇಷನ್, ಬಸ್ ಸ್ಟ್ಯಾಂಡಿಗೆ ಹೋಗಿ ಟಿಕೆಟ್ ತರುವುದು ಮಾಡಿದರೆ ಅವರ ಕೆಲಸ ಸಮರ್ಪಕವಾಗಿದೆಯೆಂದು ಪರಿಗಣಿಸುವರು. ಲ್ಯಾಬ್ ಟೆಕ್ನೀಷಿಯನ್, ಫೀಲ್ಡ್ ಟೆಕ್ನೀಷಿಯನ್ನರ ಹುದ್ದೆ ವಿಜ್ಞಾನಿಗಳಷ್ಟೇ ಮುಖ್ಯ. ಕೆಲವು ಸಮಯ ಇವರಿಲ್ಲದಿದ್ದರೆ ಕೈ ಕಟ್ಟಿದಂತಾಗುತ್ತದೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಕೆಲವೊಂದು

ವಿಷಯಗಳನ್ನು ಪ್ರಾಧ್ಯಾಪಕರಿಗಿಂತ ಟೆಕ್ನೀಷಿಯನ್ನರ ಹತ್ತಿರ ಕಲಿತುಕೊಳ್ಳುತ್ತಿದ್ದೆವು. ನಾನು ಮೊದಲು ಕೀಟಶಾಸ್ತ್ರ ವಿಭಾಗಕ್ಕೆ ಸೇರಿದಾಗ ಒಬ್ಬ ಲ್ಯಾಬ್ ಅಸಿಸ್ಟೆಂಟ್ ಟೈ ಕಟ್ಟಿಕೊಂಡು ಬರುತ್ತಿದ್ದರು. ಯಾರಾದರೂ ವಿಸಿಟರ್ ಬಂದರೆ ಕೆಲವು ಸಂದರ್ಭದಲ್ಲಿ ಅವರೇ ವಿವರಿಸುತ್ತಿದ್ದರು. ವಿಷಯವನ್ನು ಚೆನ್ನಾಗಿ ತಿಳಿದಿದ್ದು, ಡಿಸೆಕ್ಷನ್‌ನಿಂದ ಹಿಡಿದು ಯಾವ ಕೀಟ ಯಾವ ಬೆಳೆಗೆ ಹೇಗೆ ಹಾನಿ ಮಾಡುತ್ತದೆ ಮತ್ತು ಅವುಗಳ ನಿವಾರಣೋಪಾಯಗಳನ್ನು ಕೂಡ ತಿಳಿದಿದ್ದರು. ಅವರಿಗೆ ಯಾರೂ ಕಾಫಿ ತಿಂಡಿ ತರಲು ಹೇಳುತ್ತಿರಲಿಲ್ಲ ಅಥವಾ ಮೇಲಧಿಕಾರಿಗಳಿಗೆ ಸೇವೆ ಮಾಡಬೇಕೆಂದು ಅಪೇಕ್ಷಿಸುತ್ತಿರಲಿಲ್ಲ. ಇಂದು ಈ ಕುಶಲತೆ ಕೌಶಲ ಕಲಿಯುವ ಕಾಳಜಿ ಇರುವವರು ಬಹಳ ವಿರಳ. ಅಲ್ಲದೆ ಅವನ್ನು ಕಲಿಸುವ, ತರಬೇತಿ ಕೊಡುವ ಅಥವಾ ಪರೀಕ್ಷಿಸುವ ವ್ಯವಸ್ಥೆ ಇಂತಹ ಸಂಸ್ಥೆಗಳಲ್ಲಿ ಇಲ್ಲ. ಒಳ್ಳೆ ಯೌವ್ವನದಲ್ಲಿ ಕೆಲಸ ಪ್ರಾರಂಭಿಸಿದಾಗ ಅವರ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದಿದ್ದಾಗ ಸ್ವಾಭಾವಿಕವಾಗಿ ಅವರ ಮನಸ್ಸು ಬೇರೆ ಕ್ಷೇತ್ರದ ಕಡೆಗೆ ಹರಿಯುತ್ತದೆ. ಇಂತಹ ಸಂಸ್ಥೆಗಳಲ್ಲಿ ಇಂದು ನಾಯಿ ಕೊಡೆಯಂತೆ ಎದ್ದಿರುವ ಸಂಘ ಸಂಸ್ಥೆಗಳಿಗೆ ಇದೊಂದು ಮುಖ್ಯ ಕಾರಣ. ಬಹಳಷ್ಟು ಡಿಪಾರ್ಟ್‌ಮೆಂಟಿನಲ್ಲಿ ಪ್ರಾಧ್ಯಾಪಕರು ಮೊದಲುಗೊಂಡು ಒಂದಲ್ಲ ಒಂದು ನಾನ್ ಕರಿಕ್ಯುಲಾರ್ ಚಟುವಟಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಇದರಿಂದ ಪರೋಕ್ಷವಾಗಿ ಶಿಕ್ಷಣ, ಸಂಶೋಧನೆ, ವಿಸ್ತರಣೆ ಕುಂಟಿತವಾಗುವುದಕ್ಕೆ ಕಾರಣ. ಇಂತಹ ಚಟುವಟಿಕೆಗಳನ್ನು ಕಾನೂನು ಕಟ್ಟಲೆಯಿಂದ ತಡೆಯುವುದು ಕಷ್ಟ. ಬದಲಾಗಿ ಮನಃ ಪರಿವರ್ತನೆ ಮಾಡುವ ವಿಧಾನಗಳನ್ನು ಅನುಸರಿಸಬೇಕು. ಕಾರ್ಯತತ್ಪರತೆ, ನಿಷ್ಠೆ, ಕರ್ತವ್ಯ ಪ್ರಜ್ಞೆ, ಸ್ವಾಭಿಮಾನಗಳು ಬೆಳಸಿದಂತೆ ಬರುತ್ತವೆ ಹುಟ್ಟು ವಾಗಲೆ ಬರುವುದಿಲ್ಲ. ಸೋಮಾರಿತನ, ಬೇಜವಾಬ್ದಾರಿ, ಕೆಟ್ಟ ಚಾಳಿಗಳು ಹೇಗೆ ಸಹವಾಸದಿಂದ ಬೆಳೆದು ಬರುತ್ತವೆಯೋ ಒಳ್ಳೆ ಗುಣಗಳು ಕೂಡ ನಿಷ್ಠಾವಂತರ ಸಂಗ, ಕಾಲಕಾಲಕ್ಕೆ ತರಬೇತಿ, ಆಗಾಗ ಅವರ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸುವಂತಹ ವಾತಾವರಣದಿಂದ ಬರುತ್ತವೆ. ಇವುಗಳನ್ನು ರೂಢಿಸುವುದು ಆ ಸಂಸ್ಥೆಯ ಆದ್ಯ ಕರ್ತವ್ಯವೂ ಹೌದು. ಇದನ್ನು ಮನಗಂಡು, ಕೃ.ವಿ.ವಿ.ದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗವನ್ನು ಪಿ.ಪಿ.ಎಂ.ಸಿ.ಯಲ್ಲಿ ತೆರೆಯಲಾಯಿತು.

ಮಾನವ ಸಂಪನ್ಮೂಲ ವಿಭಾಗವು ಪ್ರತಿ ವರ್ಷ ಹಂತ ಹಂತವಾಗಿ ಕಾರ್ಮಿಕರಿಂದ ಹಿಡಿದು ಆಫೀಸರ್ ಹುದ್ದೆಯವರಿಗೆ ಬೇಕಾಗಿರುವ ತರಬೇತಿ, ಓರಿಯಂಟೇಷನ್, ಪುನಃ ಶ್ಚೇತನಗೊಳಿಸುವಂತೆ ಕಾರ್ಯಕ್ರಮಗಳನ್ನು ನಿರೂಪಿಸಿ ಕಾರ್ಯಗತ ಮಾಡುವ ಜವಾಬ್ದಾರಿ ಯನ್ನು ಹೊಂದಿದೆ. ಇದಕ್ಕೆ ಬೇಕಾದ ಖರ್ಚನ್ನು ಆಯಾ ವರುಷದ ಆಯವ್ಯಯದಲ್ಲಿ ತೆಗೆದಿಡಲಾಗುವುದು. ಮೊಟ್ಟಮೊದಲಿಗೆ ಇಂತಹ ತರಬೇತಿಯನ್ನು ಆ ವರುಷದಲ್ಲಿ ಆಯ್ಕೆ ಯಾದ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಯವರಿಗೆ ಮತ್ತು ಹಣಕಾಸು ಆಡಳಿತದಲ್ಲಿರುವ ಕೆಲವು ಹಂತದ ಅಧಿಕಾರಿಗಳಿಗೆ ವ್ಯವಸ್ಥೆ ಮಾಡಲಾಯಿತು. ಇವನ್ನು ಯೋಜನೆಗೆ ತರುವ ಮುಂಚೆ ಇವುಗಳ ಆವಶ್ಯಕತೆ ಬಗ್ಗೆ ಪ್ರಶ್ನಿಸಿದವರಿಗೆ ತರಬೇತಿಯ ನಂತರ ನಾವು ಕಲಿಯ ಬೇಕಾದ್ದು ಬಹಳಷ್ಟಿದೆಯೆಂದು ಮನವರಿಕೆಯಾದದ್ದು ಸಂತೋಷದ ಸಂಗತಿ. ನಮ್ಮಲ್ಲಿರುವ ಅತಿ ದೊಡ್ಡ ದೋಷವೆಂದರೆ ಬಹಳಷ್ಟು ಜನ ಎಲ್ಲವನ್ನೂ ತಿಳಿದಿದ್ದೇವೆಯೆಂದು ಭಾವಿಸುವುದು.

ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಿದಾಗ ನಮ್ಮ ಅಜ್ಞಾನ ಅರಿವಾಗುತ್ತದೆ. ಮಾನವ ಸಂಪನ್ಮೂಲ ವಿಭಾಗದ ಅಳಿವು ಉಳಿವು ಈ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿದವರ ಮೇಲೆ ನಿಂತಿದೆ. ಆದಂಗಾಗಲಿ ಮಾದಪ್ಪನ ಜಾತ್ರೆ ಅನ್ನುವವರಿಗೆ ಇದರ ಅವಶ್ಯಕತೆ ಇಲ್ಲ. ಬದಲಾಗುತ್ತಿರುವ ವಿದ್ಯಮಾನಗಳನ್ನು ಸ್ಪಂಧಿಸಿ ಇಪ್ಪತ್ತೊಂದನೇ ಶತಮಾನದಲ್ಲಿ ನಾವೂ ಕೂಡ ಬೇರೆಯವರಿಗೆ ಸರಿಸಾಟಿಯಾಗಿ ಸಾಗಬೇಕಿದ್ದರೆ ಮಾನವ ಸಂಪನ್ಮೂಲ ಅಭಿವೃದ್ಧಿ ಅತ್ಯವಶ್ಯ.

ಕುಲಪತಿಯಾದ ನಂತರ ಮತ್ತೊಂದು ವಿಷಯಕ್ಕೆ ಒತ್ತುಕೊಟ್ಟಿದ್ದು ಸಾವಯವ ಕೃಷಿ ಬಗ್ಗೆ. ಅರವತ್ತು ಎಪ್ಪತ್ತರ ದಶಕದಲ್ಲಿ ನಡೆದ ಹಸಿರು ಕ್ರಾಂತಿಯ ಸೊಬಗನ್ನು ಸವಿಯುತ್ತಿರುವಾಗಲೇ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಸಲು ಸಾಧ್ಯವೇ ಎಂಬ ಅನುಮಾನದ ಬೇತಾಳ ನಮ್ಮ ಮುಂದೆ ನಿಂತಿತ್ತು. ಕಾರಣ ಎಷ್ಟೇ ಪ್ರಯತ್ನ ಪಟ್ಟರೂ ಮುಂಗಾರು ಮಳೆ ಸತತವಾಗಿ ಹತ್ತು ಹನ್ನೊಂದು ವರುಷ ಸಮೃದ್ಧಿಯಾಗಿ ನಡೆಸಿದರೂ ಎಂಬತ್ತು ತೊಂಬತ್ತರ ದಶಕದಲ್ಲಿ ಇಳುವರಿ ದೇಶಾದ್ಯಂತ ಸ್ಥಗಿತಗೊಂಡಿದ್ದು ಕಳವಳಕ್ಕೆ ಎಡೆಯಾಗಿತ್ತು. ಎರಡು ದಶಕದಲ್ಲಿ ನೂರು ಮಿಲಿಯನ್ ಟನ್‌ನಷ್ಟು ಜಾಸ್ತಿ ಆಹಾರ ಉತ್ಪಾದಿಸಿ 185ದಶಲಕ್ಷ ಟನ್ ಮುಟ್ಟಿತು. ಮುಂದಿನ ಹತ್ತು ಹದಿನೈದು ವರುಷದಲ್ಲಿ 185 ರಿಂದ 195 ದಶಲಕ್ಷ ಟನ್ನಿಗೆ ಒಯ್ಯಬೇಕಾದರೆ ದುಸ್ಸಾಧ್ಯವಾಯಿತು. ಕರ್ನಾಟಕ ರಾಜ್ಯವು ಒಂದು ಕಮಿಟಿಯನ್ನು (ಸತೀಶ್‌ಚಂದ್ರನ್ ಕಮಿಟಿ) ನಿರೂಪಿಸಿ ಆಹಾರ ಉತ್ಪಾದನೆ ಸ್ಥಗಿತಗೊಳ್ಳಲು ಕಾರಣ ಕಂಡುಹಿಡಿದು ಪರಿಹಾರ ಸೂಚಿಸುವಂತೆ ಆದೇಶ ನೀಡಿತು. ಹಲವಾರು ಕಾರಣಗಳಲ್ಲಿ ಮುಖ್ಯವಾದದ್ದು ನಮ್ಮ ಭೂಮಿಯ ಉತ್ಪಾದಕತೆ ಕಡಿಮೆಯಾಗಿದ್ದೂ ಒಂದು ಎಂದು ತಿಳಿಯಿತು. ಈ ಕೊರತೆ ಕರ್ನಾಟಕದಲ್ಲಿ ಮಾತ್ರ ಅಲ್ಲ ದೇಶದಾದ್ಯಂತ ಇರುವಂತಹದು. ನಮ್ಮ ಎಲ್ಲಾ ಬೆಳೆಗಳ ಸರಾಸರಿ ಇಳುವರಿ ಪ್ರಪಂಚದ ಯಾವುದೇ ದೇಶಕ್ಕೆ ಹೋಲಿಸಿದರು ಕಡಿಮೆಯೆ.

ಅಧಿಕ ಇಳುವರಿ ಕೊಡುವ ತಳಿಗಳು ಬಂದ ಮೇಲೆ, ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರ, ನೀರು ಮತ್ತು ರಾಸಾಯನಿಕ ಸಸ್ಯ ಸಂರಕ್ಷಣೆ ಔಷಧಿಗಳು ಬಳಕೆಗೆ ಬಂದವು. ಮೊದಮೊದಲು ಇಳುವರಿ ಇಮ್ಮಡಿಯಾಗಿ ಬಂತು. ಸಸ್ಯಗಳಿಗೆ ಕನಿಷ್ಠ ಹದಿನೇಳು ಪೌಷ್ಠಿಕಾಂಶಗಳು ಬೇಕಿದ್ದು ಕೇವಲ ಸಾರಜನಕ, ರಂಜಕ ಮತ್ತು ಪೊಟಾಷ್‌ಗಳನ್ನು ಉಪಯೋಗಿಸಿದಾಗ ಭೂಮಿಯಲ್ಲಿದ್ದ ಇತರೆ ಪೌಷ್ಠಿಕಾಂಶಗಳನ್ನು ಪೂರ್ಣ ಎಳೆದುಕೊಂಡು ಬಂಜರು ಮಾಡಿದವು. ಇದರ ಜೊತೆಗೆ ಸಾವಯವ ಗೊಬ್ಬರದ ಬಳಕೆ ಕಾಲ ಕ್ರಮೇಣ ಕಾರಣಾಂತರಗಳಿಂದ ಕಡಿಮೆಯಾಗುತ್ತಾ ಬಂತು. ಪಂಜಾಬು ಹರಿಯಾಣದಂತಹ ಫಲವತ್ತಾದ ಭೂಮಿಗಳಲ್ಲಿ ಕೂಡ ಇಳುವರಿ ಇಳಿಮುಖ ವಾಯಿತು. ಕ್ರಮೇಣ ಭೂಮಿಯಲ್ಲಿ ಸಾವಯವದ ಕೊರತೆಯಿಂದಾಗಿ ಆರ್ಗಾನಿಕ್ ಕಾರ್ಬನ್ ಕಡಿಮೆಯಾಗುತ್ತಾ ಬಂತು. ಆರ್ಗಾನಿಕ್ ಕಾರ್ಬನ್, ಬೆಳೆಗೆ ಪೌಷ್ಠಿಕಾಂಶಗಳನ್ನು ಭೂಮಿಯಿಂದ ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ನಮ್ಮಂತಹ ಉಷ್ಣದೇಶದಲ್ಲಿ ಬಿಸಿಲಿನ ತಾಪಕ್ಕೆ ಸಾವಯವ ವಸ್ತು ಬಹುಬೇಗ ಲವಣವಾಗಿ ಮಾರ್ಪಾಟಾಗಿ ಹೆಚ್ಚು ಕಾಲ ಭೂಮಿಯಲ್ಲಿ ನಿಲ್ಲುವುದಿಲ್ಲ. ಆದ್ದರಿಂದ ಪ್ರತಿ ವರ್ಷ ಸಾವಯವ ಗೊಬ್ಬರವನ್ನು ಬೆಳೆ ಇಡುವ ಮುನ್ನ ಹಾಕಲೇಬೇಕು.

ಬರಿ ಸಾವಯವ ಮೂಲ ಪೌಷ್ಟಿಕಾಂಶಗಳು ಅಧಿಕ ಇಳುವರಿ ಕೊಡುವ ತಳಿಗಳ ಉತ್ಪತ್ತಿ ಹೆಚ್ಚಿಸದಿದ್ದರೂ, ರಾಸಾಯನಿಕ ಗೊಬ್ಬರದ ಜೊತೆಗೆ ಸಮತೋಲನವಾಗಿ ಬಳಸಿದಾಗ ನಿಗದಿತ ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಬಹುದಲ್ಲದೆ, ಭೂಮಿಗೆ ಹಾಕಿದ ಹೆಚ್ಚಿನಾಂಶ ರಾಸಾಯನಿಕ ಗೊಬ್ಬರ ಸಸ್ಯಗಳಿಗೆ ದೊರೆಯುವಂತೆ ಮಾಡುತ್ತವೆ ಎನ್ನುವುದಕ್ಕೆ ದೀರ್ಘಕಾಲದ ಪ್ರಯೋಗಗಳಿಂದ ಕಂಡು ಬಂದಿದೆ. ರೋಗರುಜಿನಗಳ ಹೊಡೆತ ಕಡಿಮೆಯಾಗುವುದು ಅಲ್ಲದೆ ಇಳುವರಿಯನ್ನು ಸುಸ್ಥಿರ ಮಟ್ಟದಲ್ಲಿ ಕಾಪಾಡಬಹುದು. ಮನುಷ್ಯರ ಪಶು ಪಕ್ಷಿಗಳ ಆರೋಗ್ಯಕ್ಕೆ ಧಾನ್ಯಗಳ ಆವಶ್ಯಕತೆ ಹೇಗೋ ಭೂಮಿಯ ಆರೋಗ್ಯಕ್ಕೆ ಸಾವಯವ ವಸ್ತುಗಳ ಅಗತ್ಯವಿದೆ. ಮಣ್ಣು ನಿರ್ಜೀವವಾಗಿ ತೋರಿದರೂ ಸಾವಯವ ಗೊಬ್ಬರದಿಂದ ಫಲವತ್ತತೆ ಹೆಚ್ಚಿ ಜೀವ ತುಂಬುತ್ತದೆ. ಭೂಮಿಯ ಜೀವಸಾರ ಸಾವಯವ ವಸ್ತು. ಕೆಲವು ಪ್ರದೇಶದಲ್ಲಿ ಶತಮಾನಗಳಿಂದ ಶೇಖರಣೆಯಾಗಿರುವ ಸಾವಯವ ವಸ್ತು ಇರುವಲ್ಲಿ ಯಥೇಚ್ಛವಾಗಿ ರಾಸಾಯನಿಕ ಗೊಬ್ಬರ ಬಳಸಿದರೂ ಭೂಮಿ ಬಂಜರಾಗುವುದಿಲ್ಲ. ನೆರಳಿಲ್ಲದ ನಮ್ಮ ಜಮೀನಿನಲ್ಲಿ ಬಿಸಿಲಿನ ತಾಪಕ್ಕೆ ಗಾಳಿ ಮಳೆ ಹೊಡೆತಕ್ಕೆ ಸಿಕ್ಕಿ ಮೇಲ್ಮೈಯಲ್ಲಿರುವ ಸಾವಯವ ವಸ್ತು ಪೋಲಾಗುತ್ತದೆ. ಮಳೆ ಆಶ್ರಯದಲ್ಲಿ ಬೆಳೆಯುವ ಪ್ರದೇಶಗಳಲ್ಲಿ ಆರ್ಗಾನಿಕ್ ಕಾರ್ಬನ್ ಶೇಕಡ 0.4 ರಿಂದ 0.6 ರಷ್ಟಿದ್ದರೆ ಹೆಚ್ಚು. ಹೆಚ್ಚು ಇಳುವರಿ ಪಡೆಯಲು ಇದರ ಅಂಶ ಕನಿಷ್ಟ ಶೇಕಡ ಒಂದಾದರೂ ಇರಬೇಕು.

ನಾನು ಎಮ್.ಒ.ಎ., ಡಬ್ಲ್ಯೂ.ಎಸ್.ಎ.ಎ. ಸಂಸ್ಥೆಯ ಡೈರೆಕ್ಟರ್‌ಗಳಲ್ಲಿ ಒಬ್ಬನಾಗಿದ್ದಾಗ ಕರ್ನಾಟಕದಲ್ಲಿ ಸಾವಯವ ಕೃಷಿಗೆ ಒತ್ತು ಕೊಡುವ ದೃಷ್ಟಿಯಿಂದ ಸರ್ಕಾರದ ಸಹಕಾರವನ್ನು ಯಾಚಿಸಲಾಯಿತು. ಆಗ ತಿಳಿದಿದ್ದು ಹಿಂದೆಯೇ ಕೆ.ಹೆಚ್. ಪಾಟೀಲರು ಕೃಷಿ ಮಂತ್ರಿಯಾಗಿದ್ದಾಗ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಸರ್ಕಾರದವತಿಯಿಂದ ಒಂದು ಕಮಿಟಿಯನ್ನು ರಚಿಸಲಾಗಿತ್ತು. ಆದರೆ ಈ ಕಮಿಟಿ ನಿರ್ಜೀವವಾಗಿತ್ತು. ಇದನ್ನು ಪುನಃಶ್ಚೇತನಗೊಳಿಸಿ, ಸಾವಯವ ಕೃಷಿಗೆ ಪ್ರತ್ಯೇಕವಾಗಿ ಸಂಶೋಧನೆ ನಡೆಸುವಂತೆ ಒತ್ತಾಯಿಸಲಾಯಿತು. ನಾನು ಕುಲಪತಿಯಾದ ನಂತರ ನಮ್ಮ ಎರಡು ಕೃ.ವಿ.ವಿ.ಗಳಿಗೆ ಸರ್ಕಾರದಿಂದ ಸಾವಯವ ಕೃಷಿ ಸಂಶೋಧನೆಗೆ ಪ್ರತ್ಯೇಕ ಹಣ ಒದಗಿಸಲು ಪ್ರಯತ್ನ ಪಟ್ಟು ಕಾರ್ಯರೂಪಕ್ಕೆ ತರಲಾಯಿತು. ಆದರೆ ಈ ವಿಭಾಗದಲ್ಲಿ ನುರಿತವರು, ಸಾವಯವ ಕೃಷಿಯಲ್ಲಿ ನಂಬಿಕೆ ಉಳ್ಳವರು ಆತ್ಮ ಪೂರ್ವಕವಾಗಿ ಸಂಶೋಧನೆ ನಡೆಸುವಂತಹವರ ಅಭಾವದಿಂದಾಗಿ ಮಂದಗತಿಯಲ್ಲಿ ಸಾಗಿತು. ಐದು ದಶಕಗಳ ನಮ್ಮ ಆಧುನಿಕ ಬೇಸಾಯ ಪದ್ಧತಿ ರಾಸಾಯನಿಕ ಗೊಬ್ಬರದ ಬುನಾದಿಯ ಮೇಲೆ ನಿಂತಿತ್ತು. ಪುರಾತನ ಕಾಲದಿಂದಲೂ ನಡೆದು ಬಂದ ಸುಸ್ಥಿರ ಬೇಸಾಯ ದಡ್ಡರಕಾಲದ್ದೆಂದು ಪರಿಗಣಿಸಲಾಗಿತ್ತು. ನೀರು, ರಾಸಾಯನಿಕ ಗೊಬ್ಬರ, ಒಳ್ಳೆ ಬಿತ್ತನೆ ಮತ್ತು ಸಸ್ಯ ಸಂರಕ್ಷಣೆ ರಾಸಾಯನಿಕ ಔಷಧಿಗಳಿದ್ದರೆ ಎಲ್ಲಿ ಏನನ್ನಾದರೂ ಎಷ್ಟಾದರೂ ಬೆಳೆಯಬಹುದೆಂಬ ಹುಸಿ ನಂಬಿಕೆ ಜನರಲ್ಲಿ ಮೂಡಿತ್ತು. ಐವತ್ತು ವರುಷದ ಹಿಂದೆ ಒಣ ಬೇಸಾಯಕ್ಕೆ ರಾಸಾಯನಿಕ ಗೊಬ್ಬರ ಬಳಸಿ ಎಂದವರಿಗೆ ಬುದ್ಧಿಯಿಲ್ಲವೆಂದಿದ್ದ ಕಾಲ ಈಗ ರಾಸಾಯನಿಕ ಗೊಬ್ಬರವಿಲ್ಲದೆ ಬೇಸಾಯ ಸಾಧ್ಯವಿಲ್ಲವೆಂಬ ನಂಬಿಕೆ ಬಂದಿದೆ. ಈ ನಂಬಿಕೆ ಹುಸಿಯಾಗಲು ಬಹುಕಾಲ ಬೇಕಾಗಲಿಲ್ಲ. ದಡ್ಡನ ಆರಂಭ ಗೊಬ್ಬರದಲ್ಲಿ ಅನ್ನುವ ನಾಣ್ನುಡಿ ಪುನಃ ಜ್ಞಾಪಕಕ್ಕೆ ಬರುವಂತಾಯಿತು. ಆದರೆ ಈ ಹೇಳಿಕೆ ಅಂದಿನ ತಳಿಗಳಿಗೆ ಅಂದಿನ ಇಳುವರಿ ಅಂದಿನ ಜನಸಂಖ್ಯೆಗೆ

ಸಾಕಾಗುತ್ತಿತ್ತು. ಐವತ್ತು ವರುಷದಲ್ಲಿ ನಮ್ಮ ಜನಸಂಖ್ಯೆ ಮೂರು ಪಟ್ಟು ಆಗಿದೆ. ಭೂ ಪ್ರದೇಶದ ಶೇಕಡ 51 ರಷ್ಟನ್ನು ಸಾಗುವಳಿಗೆ ತಂದಿದೆ. ಇದನ್ನು ಇನ್ನು ವಿಸ್ತರಿಸಲು ಸಾಧ್ಯವಿಲ್ಲ. ಐವತ್ತು ದಶಲಕ್ಷ ಟನ್ ಇದ್ದ ಅಹಾರ ಉತ್ಪಾದನೆ 200 ದಶಲಕ್ಷ ಟನ್‌ಗೆ ಬಂದರೂ ಇನ್ನೂ ಹತ್ತು ಇಪ್ಪತ್ತು ವರುಷಗಳಲ್ಲಿ ಇದನ್ನು 250 ದಶಲಕ್ಷ ಟನ್‌ಗೆ ಏರಿಸದಿದ್ದರೆ, ಪ್ರತಿ ವರ್ಷ ಒಂದು ಆಸ್ಟ್ರೇಲಿಯ ದೇಶದ ಜನಸಂಖ್ಯೆಯಷ್ಟು ಹೆಚ್ಚುತ್ತಿರುವ ಈ ದೇಶ ಅನ್ನದ ಅಭಾವಕ್ಕೆ ಒಳಗಾಗುತ್ತದೆ. ಆದ್ದರಿಂದ ಏನೇ ಆದರೂ ನಮ್ಮ ಆಹಾರ ಉತ್ಪಾದನೆಯ ಗುರಿಯನ್ನು ತಗ್ಗಿಸಲು ಸಾಧ್ಯವಿಲ್ಲ. ಈಗಾಗಲೇ ಇಳುವರಿ ಇಳಿಮುಖವಾಗುವುದನ್ನು ನಿಲ್ಲಿಸುವುದರ ಜೊತೆಗೆ ಇರುವ ಜಮೀನಿನಲ್ಲೇ ನಿಗದಿತ ಉತ್ಪಾದನೆ ಮಾಡುವ ಸಾಧ್ಯತೆಯನ್ನು ಶೀಘ್ರವಾಗಿ ಅಳವಡಿಸಬೇಕಾಗಿದೆ.

ಐವತ್ತು ವರುಷಗಳ ಹಿಂದೆ ರಾಸಾಯನಿಕ ವಸ್ತುಗಳನ್ನು ಬಳಸದಿದ್ದ ಕಾಲ ಸಾವಯವ ಕೃಷಿಯೇ ಆಗಿತ್ತು. ಆಗ ಇಳುವರಿ ತುಂಬಾ ಕಡಿಮೆ. ಅದನ್ನೇ ರೂಢಿಗೆ ತಂದರೆ ಮುಂದೇನು ಗತಿ ಎನ್ನುವ ಹೆದರಿಕೆ ಸಹಜ. ಸಾವಯವ ಕೃಷಿ ಆಧುನಿಕ ಬೇಸಾಯ ಪದ್ಧತಿಗಿಂತ ಹೆಚ್ಚು ತಂತ್ರಜ್ಞಾನ ಬಳಸುವಂತಹ ವಿಧಾನ. ಈಗ ಬೇಸಾಯ ಮಾಡುವವರು ಎಲ್ಲಾ ವೃತ್ತಿಗಳಿಗಿಂತ ಹೆಚ್ಚಿನ ಪರಿಶ್ರಮ, ಪರಿಜ್ಞಾನ, ತಂತ್ರಜ್ಞಾನ ಉಳ್ಳವರಾಗಬೇಕು. ಬರೀ ದೈಹಿಕ ಶ್ರಮದಿಂದ ದುಡಿಯುತ್ತಿದ್ದ ಕೃಷಿಕನ ಕಾಲ ಹಿಂದಕ್ಕಾಯಿತು. ಈ ವೃತ್ತಿ ಇನ್ನು ಎರಡು ಮೂರು ದಶಕಗಳಲ್ಲಿ ನಾವು ಗ್ರಹಿಸಲಾಗದಷ್ಟು ಬದಲಾವಣೆ ಆಗುವ ಸೂಚನೆಗಳಿವೆ. ‘Survival of the fittest’ ಅನ್ನುವ ಡಾರ್ವಿನ್ ತತ್ವ ದೂರವಾಗಲಾರದು. ಸಾವಯವ ಕೃಷಿ ಸುಸ್ತಿರ ಕೃಷಿ. ಇದರಲ್ಲಿ ರಾಸಾಯನಿಕ ವಸ್ತುಗಳ ಬಳಕೆ ಹೊರತಲ್ಲ. ಬದಲಾಗಿ ಪರಿಸರ ಕಲ್ಮಶವಾಗದೆ. ತಿನ್ನುವವರ ಆರೋಗ್ಯಕ್ಕೆ ಅಡ್ಡಿಯಾಗದಿದ್ದರೆ, ಭೂಮಿಯ ಫಲವತ್ತತೆ ಕಡಿಮೆಯಾಗದಂತೆ ರಾಸಾಯನಿಕ ವಸ್ತುಗಳನ್ನು ಅನಿವಾರ್ಯವಾಗಿ ಬಳಸಲೇ ಬೇಕಾಗುತ್ತದೆ. ಇವುಗಳ ಅಹಿತಕರ ದೋಷಗಳನ್ನು ದೂರಮಾಡುವ ದೃಷ್ಟಿಯಿಂದಲೇ ಸಾವಯವ ಕೃಷಿಗೆ ಉತ್ತೇಜನ ಕೊಡಬೇಕು. ಭೂಮಿಯ ಫಲವತ್ತತೆ ಮತ್ತು ಉತ್ಪಾದಕತೆಯ ಸುಸ್ತಿರತೆಗೆ ಸಾವಯವ ಗೊಬ್ಬರವೇ ಮೂಲ.

ಬೆಂಗಳೂರು ಕೃ.ವಿ.ವಿದ್ಯಾನಿಲಯ ದಕ್ಷಿಣ ಕರ್ನಾಟಕದ ಹನ್ನೆರಡು ಜಿಲ್ಲೆಯ ವ್ಯಾಪ್ತಿಯಲ್ಲಿ 22 ಸಂಶೋಧನಾ ಕೇಂದ್ರಗಳಿದ್ದು ಒಟ್ಟು ಐದು ಸಾವಿರ ಎಕರೆಗೆ ಮೀರಿದ ಜಮೀನು ಸ್ವಾಧೀನದಲ್ಲಿದೆ. ಈ ಎಲ್ಲಾ ಜಮೀನನ್ನು ಸರ್ಕಾರದಿಂದ ಕೃ.ವಿ.ವಿ.ನಿಲಯಕ್ಕೆ ವರ್ಗಾಯಿಸಿದಾಗ ಫಾರಂಗಳ ವಿಸ್ತೀರ್ಣ, ಹದ್ದುಬಸ್ತು, ಕಾಗದದ ಮೇಲೆ ಕಾಣಿಸಿದ್ದಲ್ಲದೆ, ಅಳತೆ ಮಾಡಿ ನಿಗದಿತ ಜಾಗವನ್ನು ಗುರುತಿಸಿ ನೋಡಿದವರಿಲ್ಲ. ಉದಾಹರಣೆಗೆ ತರೀಕೆರೆ ಭದ್ರಾವತಿ ಸಮೀಪವಿರುವ ರಂಗೇನಹಳ್ಳಿ ಫಾರಂ 425 ಎಕರೆ ಪ್ರದೇಶವನ್ನು ಯೂನಿವರ್ಸಿಟಿಗೆ ವರ್ಗಾಯಿಸಲಾಗಿತ್ತು. ಆದರೆ ವಾಸ್ತವವಾಗಿ ಯೂನಿವರ್ಸಿಟಿಯ ಆಬಾದಿನಲ್ಲಿ ಕೇವಲ ನೂರ ಐವತ್ತು ಎಕರೆಗಿಂತ ಕಡಿಮೆ ಇತ್ತು. ಕೃ.ವಿ.ವಿ.ಕ್ಕೆ ವರ್ಗಾಯಿಸುವ ಮೊದಲೇ ಇದರ ಒತ್ತುವರಿಯಾಗಿ ಹಲವಾರು ಖಾಸಗೀಯವರ ವಶದಲ್ಲಿ ಇತ್ತು. ಹೀಗೆಯೇ ಕತ್ತಲಗೆರೆ ಫಾರಂನಲ್ಲಿ 60 ಎಕರೆ ಜಮೀನು ತಂತಿಬೇಲಿಯೊಳಗಿದ್ದದ್ದು ಒತ್ತುವರಿಯಾಗಿತ್ತು. ಬೆಂಗಳೂರು ಜಿ.ಕೆ.ವಿ.ಕೆ. ಆವರಣದಲ್ಲಿ ಸುಮಾರು ಹತ್ತೂವರೆ ಎಕರೆ ಜಮೀನನ್ನು ಪ್ರಾರಂಭದಿಂದಲೂ ಸಾಗುವಳಿಗೆ ಬಿಡದೆ, ಒಂದು ಬೃಹತ್ ಯೋಜನೆ ಅಡಿಯಲ್ಲಿ ಖಾಸಗಿ ಬಿಲ್ಡರ್ ಗೃಹ ನಿರ್ಮಾಣ ಮಾಡುವ ಹಂತಕ್ಕೆ ಹೋಗಿತ್ತು.

ಹೊಳೆನರಸೀಪುರ ಗುಂಜಾವು ಫಾರಂನಲ್ಲಿ ನಿರ್ಮಿಸಿದ್ದ ಆಫೀಸ್ ಮತ್ತು ಮನೆಗಳ ಕಿಟಕಿ, ಬಾಗಿಲು ಫಾರಂನ ತಂತಿ ಬೇಲಿ ಸಮೇತ ಕಿತ್ತುಕೊಂಡು ಹೋಗಿದ್ದಲ್ಲದೆ, ಸಿಬ್ಬಂದಿಯವರು ಅಲ್ಲಿ ಕೆಲಸ ಮಾಡಲು ಕೂಡ ಅಡಚಣೆ ಮಾಡುತ್ತಿದ್ದರು. ಈ ಸಮಸ್ಯೆಗಳ ಪರಿಹಾರಕ್ಕೆ ಹಿಂದಿನವರು ಪಟ್ಟ ಪ್ರಯತ್ನವೆಲ್ಲ ಫಲಕಾರಿಯಾಗಿರಲಿಲ್ಲ. ಬದಲಿಗೆ ಪ್ರಯತ್ನಪಟ್ಟವರ ಸ್ಥಾನಕ್ಕೆ ಧಕ್ಕೆ ಬರುವ ಬೆದರಿಕೆ ಇತ್ತು. ನಾನು ಆಡಳಿತ ವಹಿಸಿಕೊಂಡಾಗ ಈ ಸಮಸ್ಯೆಗಳಿಗೆ ಆದ್ಯತೆ ಕೊಡದಿರುವುದು ವೈಯಕ್ತಿಕ ದೃಷ್ಟಿಯಿಂದ ಒಳ್ಳೆಯದೆಂದು ಕಿವಿಮಾತು ಕೇಳಿ ಬರುತ್ತಿತ್ತು. ಆದರೆ ಕೃಷಿ ಸಂಶೋಧನೆ ದೃಷ್ಟಿಯಿಂದ ಇಂತಹ ಸಮಸ್ಯೆಗಳನ್ನು ಉದಾಸೀನ ಮಾಡುವುದು ಭವಿಷ್ಯಕ್ಕೆ ತುಂಬಾ ಅಪಾಯಕಾರಿ ಎನ್ನುವುದು ನನಗೆ ಮನದಟ್ಟಾಗಿತ್ತು. ಮೂವತ್ತು ವರುಷಗಳಲ್ಲಿ ಮಾಡದಿದ್ದವುಗಳನ್ನು ಮೂರುವರುಷದಲ್ಲಿ ಮಾಡುತ್ತೇನೆಂದು ಹೇಳುವ ಮೊಂಡು ಧೈರ್ಯ ನನ್ನಲ್ಲಿರಲಿಲ್ಲ. ಆದರೆ ಪ್ರಯತ್ನಪಡುವ ಹಂಬಲ ಸದಾ ಇತ್ತು.

ರಂಗೇನಹಳ್ಳಿ ಫಾರಂ 400 ಎಕೆರೆಗೂ ಮಿಗಿಲು, ಫಲವತ್ತಾದ ಜಮೀನು, ನಾಲೆಯಿಂದ ಸುತ್ತುವರಿದಿದೆ. ಇದನ್ನು ಕೈ ಬಿಟ್ಟರೆ ಮುಂದೆ ಇಂತಹ ಜಮೀನು ಕೃ.ವಿ.ವಿ.ಗೆ ಸಿಗುವುದು ದುರ್ಲಭ. ಇದರ ಒತ್ತುವರಿಯ ಹಿನ್ನೆಲೆಯನ್ನೆಲ್ಲ ಅಧ್ಯಯನ ಮಾಡಿ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳನ್ನು ಖುದ್ದಾಗಿ ಭೇಟಿಮಾಡಿ ಸಮಸ್ಯೆಯನ್ನು ಅವರ ಮುಂದಿಡಲಾಯಿತು. ಒಳ್ಳೆಯ ದಕ್ಷ ಆಡಳಿತಾಧಿಕಾರಿ ವಯಸ್ಸು ಚಿಕ್ಕದಾಗಿದ್ದರೂ ಹುರಿಯಾಳುತನ ಹುಮ್ಮಸ್ಸಿನಿಂದ ಕೂಡಿದ್ದ ಡಿ.ಸಿ.ಯವರು ನಿಮ್ಮ ಪ್ರಯತ್ನಕ್ಕೆ ನನ್ನ ಪೂರ್ಣ ಬೆಂಬಲವಿದೆ, ಒತ್ತುವರಿ ಇದ್ದ ಜಮೀನನ್ನು ನಿಮ್ಮ ವಶಕ್ಕೆ ಕೂಡಿಸುವುದು ನನ್ನ ಜವಾಬ್ದಾರಿ ಎಂದು ಆಶ್ವಾಸನೆ ನೀಡಿದರು. ಎರಡು ವರುಷದ ಸತತ ಪ್ರಯತ್ನದಿಂದ ಇನ್ನೇನು ನಮ್ಮ ವಶಕ್ಕೆ ಬರಬೇಕೆನ್ನುವಷ್ಟರಲ್ಲಿ ಅವರಿಗೆ ಡೆಲ್ಲಿಗೆ ವರ್ಗವಾಯಿತು. ಕೈಯಿಗೆ ಬಂದದ್ದು ಬಾಯಿಗೆ ಬರಲಿಲ್ಲವೆಂಬ ನಿರಾಶೆಯಾಯಿತು. ಅದೃಷ್ಟವಶಾತ್ ಮುಂದೆ ಬಂದ ಜಿಲ್ಲಾಧಿಕಾರಿಗಳ ಸಹಾಯ ಮತ್ತು ಸ್ಥಳೀಯವರಾದ ಹಾಗೂ ನಮ್ಮ ವಿದ್ಯಾರ್ಥಿಯವರೇ ಆಗಿದ್ದವರೊಬ್ಬರು ಆ ಸಮಯಕ್ಕೆ ನಮ್ಮ ಕೃ.ವಿ.ವಿ. ಆಡಳಿತ ಮಂಡಳಿಯ ಸದಸ್ಯರಾಗಿದ್ದು ಅವರ ಸಹಾಯದಿಂದ ಸುಮಾರು 300 ಎಕರೆ ಜಮೀನನ್ನು ನಮ್ಮ ವಶಕ್ಕೆ ತೆಗೆದುಕೊಂಡು ಬೇಲಿ ಬಂದೋಬಸ್ತು ಮಾಡಲು ಸಾಧ್ಯವಾಯಿತು. ಉಳಿದದ್ದು ಇನ್ನೂ ಇತ್ಯರ್ಥವಾಗಬೇಕಿದೆ. ಇಷ್ಟು ವರುಷಗಳಿಂದ ಆಗದಿದ್ದದ್ದು ಇಷ್ಟಾದರೂ ಆಗಿದ್ದು ಸಾಮಾನ್ಯ ಕೆಲಸವೇನಲ್ಲ. ಕೃಷಿಮಂತ್ರಿ ಆದಿಯಾಗಿ ಸ್ಥಳೀಯ ಕೃ.ವಿ.ವಿ. ಸಿಬ್ಬಂದಿ ಮೊದಲುಗೊಂಡು ಮಾಡಿದ ಪ್ರಯತ್ನದಿಂದಾಗಿ, ಕೈತಪ್ಪಿದ್ದ ಸ್ವತ್ತು ಮತ್ತೆ ಕೃ.ವಿ.ವಿ. ಸ್ವಾಧೀನಕ್ಕೆ ಬಂದದ್ದು ಒಂದು ಸ್ಮರಣೀಯವಾದ ಕೆಲಸವೆಂದು ಪರಿಗಣಿಸಿದ್ದೇನೆ.

ಹೊಳೆನರಸೀಪುರ ಗುಂಜಾವು ಫಾರಂನಲ್ಲಿ ಕೆ.ವಿ.ಕೆ. ಪ್ರಾರಂಭ ಮಾಡುವ ಯೂನಿವರ್ಸಿಟಿ ಪ್ರಯತ್ನ, ಈ ಜಾಗ ಕೆ.ವಿ.ಕೆ.ಗೆ ಸೂಕ್ತವಾದುದಲ್ಲವೆಂದು ಐ.ಸಿ.ಎ.ಆರ್. ತಡೆಹಿಡಿದಿದ್ದು, ಅಂದಿನ ಮುಖ್ಯಮಂತ್ರಿಗಳ ಅನುಗ್ರಹದಿಂದ ಅದನ್ನು ಹಾಸನಕ್ಕೆ ವರ್ಗಾಯಿಸಿದ್ದನ್ನು ಈಗಾಗಲೇ ವಿವರಿಸಿದೆ. ಮುನ್ನೂರ ಐವತ್ತು ಎಕರೆ ಈ ಫಾರಂನ್ನು ತೋಟಗಾರಿಕೆ ಸಂಶೋಧನ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿ ಈ ಪರಿಸರದಲ್ಲಿ ತೋಟಗಾರಿಕೆಗೆ ಹೆಚ್ಚು ಉತ್ತೇಜನ ಕೊಡುವ ದೃಷ್ಟಿಯಿಂದ ಹಣ್ಣು ತರಕಾರಿಗಳ ಸಸ್ಯ, ಬೀಜಗಳನ್ನು ವಿತರಣೆ ಮಾಡುವ ಉದ್ದೇಶದಿಂದ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಹೇಮಾವತಿ ನಾಲೆಯು ಇದರ ಮೇಲ್ಭಾಗದಲ್ಲಿ ಹರಿದು ಮುಂದೆ ಇದು

ಪ್ರಬುದ್ಧಮಾನಕ್ಕೆ ಬರುವ ಸೂಚನೆಗಳನ್ನು ತಿಳಿದು ಸ್ಥಳೀಯ ಕೆಲವು ಪಟ್ಟಬದ್ಧ ಶಕ್ತಿಗಳು ಇದನ್ನು ಕಬಳಿಸಲು ಪ್ರಯತ್ನ ಮಾಡುತ್ತಿದ್ದವು. ಅಲ್ಲಲ್ಲಿ ಒತ್ತುವರಿ ಮಾಡಿಕೊಂಡು ಅಡಚಣೆ ಮಾಡುತ್ತಿದ್ದರು. ಒಂದು ರಾತ್ರಿ ಹನ್ನೊಂದು ಗಂಟೆ ಸಮಯದಲ್ಲಿ ದೂರವಾಣಿಯ ಕರೆಬಂತು. ಇಲ್ಲಿಯ ಫಾರಂ ಸೂಪರಿಂಟೆಂಡೆಂಟ್ ಮತ್ತು ಇತರ ಸಿಬ್ಬಂದಿಯವರ ಮೇಲೆ ಕೈ ಮಾಡಿ ಅವರನ್ನು ಒಂದೆಡೆ ಕೂಡಿ ಬಲಾತ್ಕಾರವಾಗಿ ನಮ್ಮ ಜಮೀನಿನ ಬೇಲಿಯನ್ನು ಕಿತ್ತು ಗದ್ದೆ ನಾಟಿ ಮಾಡುವುದನ್ನು ತಡೆ ಹಿಡಿದಿದ್ದಾರೆಂದು ಸುದ್ದಿ ಬಂತು. ಕೂಡಲೆ ಹಾಸನ ಡಿ.ಸಿ.ಯವರನ್ನು ಸಂಪರ್ಕಿಸಿ ನಮ್ಮ ಸಿಬ್ಬಂದಿಯವರಿಗೆ ರಕ್ಷಣೆಕೊಟ್ಟು ಪುಂಡುಗಾರಿಕೆಯನ್ನು ತಡೆಯದಿದ್ದರೆ ಮುಂದೆ ಅಲ್ಲಿ ಕೆಲಸ ಮಾಡುವುದು ದುಸ್ತರವೆಂದು ಹೇಳಿದೆ. ಈ ಹಿಂದೆಯೇ ಒಂದೆರಡು ಬಾರಿ ಹಾಸನ ಕೃಷಿ ಕಾಲೇಜಿನ ಬಗ್ಗೆ ಇವರನ್ನು ಸಂದರ್ಶಿಸಿದ್ದರಿಂದ ಇವರ ಪರಿಚಯ ಸಾಕಷ್ಟು ಇತ್ತು. ತಕ್ಷಣ ಇವರು ಎಸ್.ಪಿ.ಯವರನ್ನು ಸಂಪರ್ಕಿಸಿ, ಒಂದು ವ್ಯಾನ್ ಪೊಲೀಸ್ ಮತ್ತು ಇತರೆ ಆಫೀಸರ್‌ಗಳನ್ನು ಅಲ್ಲಿಗೆ ಕಳುಹಿಸಲು ಏರ್ಪಾಡು ಮಾಡಿದರು. ಯಾರು ಬೇಲಿಯನ್ನು ಕಿತ್ತು ಒಳಗೆ ನುಗ್ಗಿದ್ದರೋ ಅವರಿಂದಲೇ ಪುನಃ ಬೇಲಿಯನ್ನು ರಿಪೇರಿ ಮಾಡಿಸಿ, ಅಲ್ಲಿ ಆಗಿರುವ ನಷ್ಟವನ್ನು ಅವರಿಂದಲೇ ತುಂಬಿಸುವ ಕ್ರಮವನ್ನು ಕೈಗೊಂಡ ಮೇಲೆ ಆಜುಬಾಜಿನವರು ಮುಂದೆ ಇಂತಹ ಕೆಲಸಕ್ಕೆ ಕೈ ಹಾಕಲು ಹಿಂಜರಿಯುವಂತಾಯಿತು. ಈ ಕ್ರಮ ಕೈಗೊಳ್ಳದಿದ್ದರೆ ಈ ಫಾರಂ ಅಭಿವೃದ್ಧಿ ಪಡಿಸುವ ಕೆಲಸದ ಜವಾಬ್ದಾರಿ ವಹಿಸುವವರು ಮುಂದೆ ಬರುತ್ತಿರಲಿಲ್ಲ.

ಜಿ.ಕೆ.ವಿ.ಕೆ. ಫಾರಂನ ಒಂದು ಭಾಗದಲ್ಲಿ ಪ್ರಾರಂಭದಿಂದಲೂ ಆಬಾದು ಮಾಡುವುದಕ್ಕೆ ಸ್ಥಳೀಯರು ಅವಕಾಶ ಕೊಟ್ಟಿರಲಿಲ್ಲ. ಬೇಲಿಯನ್ನು ಕಿತ್ತು ದನಗಳನ್ನು ಒಳಗೆ ಬಿಡುವುದು, ಏನೇ ಬೇಸಾಯ ಮಾಡಿದರೂ ಅದನ್ನು ವಿಧ್ವಂಸ ಮಾಡುವುದು ಸರ್ವೇ ಸಾಮಾನ್ಯವಾಗಿತ್ತು. ಇವುಗಳನ್ನು ತಡೆಯಲು ಸಂಬಂಧಪಟ್ಟವರಿಂದ ಸರಿಯಾದ ಪ್ರೋತ್ಸಾಹ ದೊರೆಯುತ್ತಿರಲಿಲ್ಲ. ಬೆಂಗಳೂರು ಸುತ್ತಮುತ್ತ ಭೂಮಿಯ ಬೆಲೆ ಗಗನಕ್ಕೆ ಏರುತ್ತಿರುವ ಸಮಯದಲ್ಲಿ ಸುಮಾರು ಹತ್ತೂವರೆ ಎಕರೆ ಜಮೀನನ್ನು ಖಾಸಗಿ ಬಿಲ್ಡರ್ ಒಬ್ಬರಿಗೆ ಅವ್ಯವಹಾರವಾಗಿ ವರ್ಗಾಯಿಸಿ ಎರಡು ದಿನ ರಜ ಇದ್ದಾಗ, ಒಂದೂವರೆ ಕಿ.ಮೀ. ಹಾಲೊಬ್ಲಾಕ್ ಸಿಮೆಂಟ್ ಇಟ್ಟಿಗೆಯಿಂದ ಕಾಂಪೌಂಡ್ ಕಟ್ಟಿ ಒಳಗಡೆ ಸುಮಾರು ನಲವತ್ತು ಮನೆಗಳನ್ನು ನಿರ್ಮಿಸಿ, ಎಲೆಕ್ಟ್ರಿಕ್ ಕಂಬಗಳನ್ನು ನೆಟ್ಟು ಕಾನೂನು ಬದ್ಧವಾಗಿ ಕಾಲೋನಿ ಮಾಡುವ ವ್ಯವಸ್ಥೆ ನಡೆದಿತ್ತು. ಸ್ಥಳೀಯ ಪೊಲೀಸ್ ಅಸಹಾಯಕತೆಯನ್ನು ವ್ಯಕ್ತಪಡಿಸಿದಾಗ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಮೇಲಧಿಕಾರಿಗಳನ್ನು ಸಂಪರ್ಕಿಸಿ ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗಲೇ ಈ ಭೂಮಿ ನಮ್ಮ ಕೈ ತಪ್ಪುವ ಸೂಚನೆಗಳು ಬಲವಾಗಿ ಕಾಣಿಸತೊಡಗಿದವು. ಯೂನಿವರ್ಸಿಟಿ ಆಫೀಸರ್ಸ್ ಮತ್ತು ಉಪಾಧ್ಯಾಯ ವೃಂದದವರು ಸೇರಿ ಸಭೆ ನಡೆಸಿ ಮುಂದೇನು ಮಾಡಬೇಕೆಂದು ಚಿಂತಿಸಲಾಯಿತು. ವಿದ್ಯಾರ್ಥಿ ಸಮುದಾಯ ಒಕ್ಕೊರಲಿನಿಂದ ಇದನ್ನು ವಶಪಡಿಸಿಕೊಳ್ಳಲು ತೆಗೆದುಕೊಳ್ಳುವ ಕ್ರಮಕ್ಕೆ ತಮ್ಮ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು. ಯಾವ ಸಮಯದಲ್ಲಾದರೂ ಸಂಘರ್ಷ ಸ್ಫೋಟಕವಾಗುವ ಲಕ್ಷಣಗಳು ಕಂಡವು. ವಿಷಯಗಳೆಲ್ಲವನ್ನು ಪೊಲೀಸ್ ಕಮಿಷನ್‌ರವರ ಮುಂದೆ ಇಟ್ಟು ಯೂನಿವರ್ಸಿಟಿ ಆಸ್ತಿ ಮತ್ತು ವಿದ್ಯಾರ್ಥಿಗಳಿಗೆ ರಕ್ಷಣೆ ಕೊಡಬೇಕೆಂದು ಕೇಳಿದಾಗ ಅವರ ಪೂರ್ಣ ಸಹಾಯ ಸಹಕಾರ ಇರುವುದಾಗಿ ಆಶ್ವಾಸನೆ ನೀಡಿದರು. ಮರುದಿನ ಮುಂಜಾನೆ ಏಳುವರೆ ಗಂಟೆಗೆ ವಿದ್ಯಾರ್ಥಿಗಳು, ಕಾರ್ಮಿಕರು, ಎಲ್ಲಾ

ವರ್ಗದ ಸಿಬ್ಬಂದಿಯವರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಒಟ್ಟಿಗೆ ಮುತ್ತುಗೆ ಹಾಕಿ ಹತ್ತು ಇಪ್ಪತ್ತು ನಿಮಿಷದಲ್ಲಿ ಕಾಂಪೌಂಡು ಮತ್ತು ಮನೆಗಳನ್ನೆಲ್ಲಾ ಧ್ವಂಸಮಾಡಿದರು. ಅಷ್ಟರಲ್ಲಿ ಅತ್ತ ಕಡೆಯವರಿಂದ ಸುಮಾರು ಇನ್ನೂರು ಜನ ಹತಾರ ಸಮೇತ ಮುನ್ನುಗ್ಗಿದರು. ಸಾಕಷ್ಟು ಪೊಲೀಸ್ ಸಿಬ್ಬಂದಿಯು ಸ್ವಲ್ಪ ದೂರದಲ್ಲಿ ಮುಕ್ಕಾಮು ಹೂಡಿದ್ದರಿಂದ ಅಹಿತಕರ ಘಟನೆ ನಡೆಯಲು ಅವಕಾಶವಾಗಲಿಲ್ಲ.

ಮೇಲಿನ ಕ್ರಮ ಕಾನೂನು ಬದ್ಧವಾಗಿಲ್ಲದೆ ಹಲವಾರು ಅಪಾಯಗಳಿಂದ ಕೂಡಿತ್ತು. ಅಕಸ್ಮಾತ್ತಾಗಿ ವಿದ್ಯಾರ್ಥಿಗಳಿಗೇನಾದರೂ ದೈಹಿಕ ತೊಂದರೆಯಾಗಿದ್ದರೆ ನನ್ನ ಪರಿಸ್ಥಿತಿ ಏನಾಗುತ್ತಿತ್ತೆಂದು ಊಹಿಸಬಹುದು. ಈ ವಿಧದ ಕಾರ್ಯಾಚರಣೆಗೆ ನನ್ನ ಸಮ್ಮತಿ ಇರದಿದ್ದರೂ ಆ ಸಮಯದಲ್ಲಿ ಅದನ್ನು ತಡೆಗಟ್ಟುವುದು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಹೀಗೆ ಮಾಡಿರದಿದ್ದರೆ ಈ ಆಸ್ತಿ ಕೈ ತಪ್ಪುವುದರಲ್ಲಿ ಸಂದೇಹವಿರಲಿಲ್ಲ. ಕಾನೂನಿನ ನೆರವಿನಿಂದ ಇದನ್ನು ಕಾಪಾಡಲು ಇಪ್ಪತ್ತೈದು ವರುಷದಿಂದ ಆಗದಿದ್ದದ್ದು ಮುಂದೆ ಆಗುವ ನಂಬಿಕೆಯೂ ಇರಲಿಲ್ಲ. ಇದನ್ನು ರಕ್ಷಿಸಲು ಅಪಾಯ, ಅಡಚಣೆಗಳು ಅಪಾರವೆಂದು ಕೈ ಬಿಟ್ಟಿದ್ದರೆ ಇದರ ಜೊತೆಗೆ, 1300 ಎಕರೆ ಸುತ್ತುವರಿದ ಪಟ್ಟಣದಿಂದ ಪ್ರತಿ ಇಂಚಿಗೂ ಸಂಚು ಬೀಳುತ್ತಿತ್ತು. ಇದನ್ನು ವಶಕ್ಕೆ ತೆಗೆದುಕೊಂಡು ಈ ಭಾಗದ ಸುತ್ತಲೂ ಕಲ್ಲು ಕಾಂಪೌಂಡು ಕಟ್ಟಿದ್ದು ಬೇರೆಯವರಿಗೆ ಇಂತಹ ಕೆಲಸಕ್ಕೆ ಕೈ ಹಾಕದ ಹಾಗೆ ಎಚ್ಚರಿಕೆ ನೀಡಿದ್ದಲ್ಲದೆ ಇಷ್ಟರವರೆಗೆ ಆಬಾದು ಮಾಡಲು ಆಗದಿದ್ದದ್ದು ಕೈ ಸೇರುವುದರ ಜೊತೆಗೆ ಫಾರಂಗೆ ಒಂದು ರಕ್ಷಣೆ ದೊರೆತಂತಾಯಿತು. ಸಾರ್ವಜನಿಕರ ದೃಷ್ಟಿಯಲ್ಲಿ ಇದೊಂದು ಹೆಮ್ಮೆಯ ಕೆಲಸವೆಂದು ಹೆಸರು ಪಡೆಯಿತು.

ಕೇಂದ್ರ ಸರ್ಕಾರದ ಆಸ್ತಿಯಾಗಲಿ ಅಥವಾ ಖಾಸಗಿಯವರ ಆಸ್ತಿಯಾಗಲಿ ಮೊದಲು ಮಾಡುವುದು ಸುತ್ತಲೂ ಕಾಂಪೌಂಡು ಮತ್ತು ಬಂದೋಬಸ್ತು ಗೇಟು. ರಾಜ್ಯ ಸರ್ಕಾರದ ವತಿಯಿಂದ ಇಲಾಖೆಗಳಲ್ಲಿರುವ ಫಾರಂಗಳಿಗಾಗಲಿ ಅಥವಾ ಎರಡು ಕೃ.ವಿ.ವಿ.ಗಳ 50 ಫಾರಂಗಳಿಗಾಗಲಿ ಇಂತಹ ಬಂದೋಬಸ್ತು ಇಂದಿಗೂ ಇಲ್ಲ. ದನ ಜನಗಳ ಸಂಖ್ಯೆ ಹೆಚ್ಚುತ್ತಿರುವಾಗ ಈ ಫಾರಂಗಳು ಪ್ರತಿ ದಿನವೂ ಒಂದಲ್ಲ ಒಂದು ತೊಂದರೆ ಅನುಭವಿಸುತ್ತಲೇ ಇವೆ. ಅದರಲ್ಲೂ ಬೆಂಗಳೂರು ಮಧ್ಯೆ ಇರುವ ಹೆಬ್ಬಾಳ, ಜಿ.ಕೆ.ವಿ.ಕೆ. ಫಾರಂಗಳಿಗೆ ಸದಾ ಒತ್ತುವರಿಯ ಭಯ ಇದೆ. ಜೊತೆಗೆ ಸಂಶೋಧನೆಯ ತಾಕುಗಳನ್ನು ರಕ್ಷಿಸಲು ನಿರ್ಮಿಸುವ ಕಲ್ಲು ತಂತಿ ಬೇಲಿಗಳಿಗೆ ವ್ಯರ್ಥವಾಗಿ ಅನ್ಯಥಾ ದುರ್ಲಭವಿರುವ ಸಂಪನ್ಮೂಲ ವ್ಯಯವಾಗುವುದು.

ಕೃ.ವಿ.ವಿ.ದ ಪ್ರಾರಂಭದಿಂದಲೂ ರೈತರಿಗೆ ಒಂದೆಡೆ ಎಲ್ಲ ಮಾಹಿತಿ ದೊರೆಯುವ ವ್ಯವಸ್ಥೆ ಇರಲಿಲ್ಲ. ಬಿತ್ತನೆ ತಂತ್ರಜ್ಞಾನ ಬೇಕಾದರೂ ಸಂಬಂಧಪಟ್ಟವರನ್ನು ಹುಡುಕಿ ಸಿಗದೆ ಬೇಸತ್ತು ವಾಪಸು ಹೋಗಿರುವ ನಿದರ್ಶನಗಳೆಷ್ಟೋ ಇವೆ. ರೈತರಿಗೆ ಬೇಕಿರುವ ಸಂಗತಿ ಒಂದೇ ಎರಡೇ. ಪಶುಪಾಲನೆ, ಹೈನುಗಾರಿಕೆ, ಕೋಳಿ ಸಾಗಣಿಕೆ, ತೋಟಗಾರಿಕೆ, ರೇಷ್ಮೆ ಕೃಷಿ, ಮೀನುಗಾರಿಕೆ, ಕೃಷಿ ಉಪಕರಣಗಳು, ಹನಿ ನೀರಾವರಿ, ಬಿತ್ತನೆ ಬೀಜ, ಗೊಬ್ಬರ, ಔಷಧೋಪಚಾರ ಹೀಗೆ ಹಲವು ಹತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ದುಂಬಾಲು ಬಿದ್ದು ಬಂದವರನ್ನು ಕೇಳುವವರಿಲ್ಲದಿದ್ದರೆ ಅವರ ಮನಸ್ಸಿನ ಮೇಲೆ ಏನು ಪರಿಣಾಮವಾಗಬಹುದೆಂದು

ಊಹಿಸಬಹುದು. ಹೆಬ್ಬಾಳ, ಜಿ.ಕೆ.ವಿ.ಕೆ.ಗಳ ಅಂತರ ಏಳು ಕಿ.ಮೀ. ಜಿ.ಕೆ.ವಿ.ಕೆ.ಗೆ ಹೋದರೆ ಒಂದೊಂದು ವಿಭಾಗ ಒಂದೊಂದು ಕಡೆ. ಬೆಳಗಿನಿಂದ ಹುಡುಕಿ ಅಪನ ಸಮಸ್ಯೆಗೆ ಇನ್ನೇನು ಉತ್ತರ ದೊರೆಯಬಹುದೆಂದು ನಿರೀಕ್ಷಿಸುವಷ್ಟರಲ್ಲಿ ನಾಲ್ಕು ಗಂಟೆಗೆ ಬಾಗಿಲು ಮುಚ್ಚುವ ಸಮಯ, ನಾಳೆ ಬನ್ನಿ ಎನ್ನುವ ಉತ್ತರ. ಈ ಸಮಸ್ಯೆಗೆ ಒಂದು ಪರಿಹಾರವಾಗಿ ಹೆಬ್ಬಾಳ ಆವರಣದಲ್ಲಿ ಒಂದು ಮಾಹಿತಿ ಕೇಂದ್ರವನ್ನು ತೆರೆಯಲು ಆದ್ಯತೆ ನೀಡಲಾಯಿತು. ಯಾರಿಗೆ ಏನೇ ಸಮಸ್ಯೆ ಇದ್ದರೂ ಮೊದಲು ಇಲ್ಲಿ ನೊಂದಾಯಿಸಿ ಅದರ ಪರಿಹಾರ ಯಾರಿಂದ ದೊರೆಯುವುದೆಂದು ತಿಳಿದು ಆಗಲೇ ದೊರೆತರೆ ತಿಳಿಸುವುದು, ಇಲ್ಲದಿದ್ದರೆ ತಿಳಿದು ಪತ್ರದ ಮೂಲಕ ತಿಳಿಸುವ ವ್ಯವಸ್ಥೆ ಮಾಡಲಾಯಿತು. ಕೃ.ವಿ.ವಿ.ದಲ್ಲಿ ದೊರೆಯುವ ಬೀಜ, ಪುಸ್ತಕ ಮತ್ತಿತರ ವಸ್ತುಗಳು ಈ ಮಾಹಿತಿ ಕೇಂದ್ರದಿಂದ ದೊರೆಯುವಂತೆ ಏರ್ಪಡಿಸಲಾಯಿತು. ಯಾವುದಾದರೂ ತಾಂತ್ರಿಕತೆ ನೋಡುವುದಿದ್ದರೆ ಅಥವ ವಿಷಯ ತಿಳಿಯಲು ಇಚ್ಛಿಸುವವರಿಗೆ ವಿಶಾಲವಾದ ವಸ್ತು ಸಂಗ್ರಹಾಲಯವನ್ನು ತೆರೆಯಲಾಯಿತು. ಯೂನಿವರ್ಸಿಟಿಯಿಂದ ಬಿಡುಗಡೆಯಾದ ತಳಿಗಳನ್ನು ಪ್ರಾತ್ಯಕ್ಷವಾಗಿ ನೋಡಲು ಜೈವಿಕ ಸಂಗ್ರಹಾಲಯವನ್ನು ತೆರೆಯಲಾಯಿತು. ವಿವಿಧ ಬೆಳೆಗಳೇ ಅಲ್ಲದೆ ಕೋಳಿ, ಕುರಿ, ಮೊಲ, ಮೀನು, ಹಂದಿ ಮುಂತಾದವನ್ನು ಅವುಗಳ ಸಹಜ ಸ್ಥಿತಿಯಲ್ಲಿ ನೋಡಲು ಅವಕಾಶವಾಯಿತು. ಆಧುನಿಕ ರೀತಿಯ ಪಾಲಿಹೌಸ್‌ನಲ್ಲಿ ಸಸ್ಯಗಳನ್ನು ವೃದ್ಧಿ ಪಡಿಸುವ ವಿಧಾನವನ್ನು ಕೂಡ ತೋರಿಸುವ ಅನುಕೂಲ ಮಾಡಲಾಗಿದೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸಂಗ್ರಹಿಸಿರುವ ಸ್ಥಿರ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯಕ್ಕೆ ಹಲವು ಸಂಘ ಸಂಸ್ಥೆಗಳು ಧನ ಸಹಾಯ ನೀಡಿ ಸಹಕರಿಸಿವೆ.

ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ ಮಾಡಬೇಕೆಂದು ಮೊದಲು ಯೋಚಿಸಿದಾಗ ಇದೊಂದು ದುಸ್ಸಾಧ್ಯದ ಕೆಲಸವೆಂದು ಎಲ್ಲರೂ ಗ್ರಹಿಸಿದ್ದರು. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಯ ಮುಖ್ಯಸ್ಥರು ಡೆವೆಲಪ್‌ಮೆಂಟ್ ಕಮೀಷನ್ನರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೂರು ಗಂಟೆ ಚರ್ಚಿಸಿ, ಇದರ ವೆಚ್ಚ ಸುಮಾರು ಐದು ಕೋಟಿಯಾಗಬಹುದು. ಇದನ್ನು ವ್ಯವಸ್ಥೆ ಮಾಡಿ ಮುಂದುವರಿಸುವುದಕ್ಕೆ ಒಂದು ಪ್ರತ್ಯೇಕ ಕಮಿಟಿಯಾಗಬೇಕೆಂಬ ಅಭಿಪ್ರಾಯಕ್ಕೆ ಬರಲಾಯಿತು. ಇಂತಹ ಒಂದು ಸಲಹೆ ಸರ್ಕಾರಕ್ಕೆ ಹೋದರೆ ಅಂದಿನ ಹಣಕಾಸು ಪರಿಸ್ಥಿತಿಯಲ್ಲಿ ಸರ್ಕಾರದ ಅನುಮತಿಗೆ ಆದ್ಯತೆ ದೊರೆಯಲಾರದೆಂದು ತಿಳಿದು ನಮ್ಮಲ್ಲಿರುವ ಸಂಪನ್ಮೂಲದಿಂದ ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸುವುದೆಂದು ತೀರ್ಮಾನಿಸಿ, ಎಲ್ಲ ವಿಭಾಗದ ಮುಖ್ಯಸ್ಥರನ್ನೂ ಕರೆದು ಕೃಷಿ ವಿಜ್ಞಾನ ಮ್ಯೂಸಿಯಂ ಪ್ರಾರಂಭಿಸುವ ಪ್ರಸ್ತಾವನೆಯನ್ನು ಮುಂದಿಟ್ಟಾಗ ಎಲ್ಲರೂ ಇದರ ಅಗತ್ಯವಾದ ಆದ್ಯತೆಯನ್ನು ಒತ್ತಿ ಹೇಳಿದರು.

ಕೆಂಗಲ್ ಹನುಮಂತಯ್ಯನವರು ಅಡಿಗಲ್ಲು ಹಾಕಿ ಪ್ರಾರಂಭಿಸಿದ್ದ ಹೆಬ್ಬಾಳ ಕೃಷಿ ಕಾಲೇಜು ಆವರಣ ಮ್ಯೂಸಿಯಂ ಮಾಡಲು ಸೂಕ್ತವಾದ ಸ್ಥಳವೆಂದು ನಿರ್ಧರಿಸಲಾಯಿತು. ಹತ್ತಾರು ವಿಭಾಗಗಳಿದ್ದ ಈ ಕಾಲೇಜಿನಲ್ಲಿ ಕೆಲವು ವಿಭಾಗಗಳನ್ನು ಸ್ಥಳಾಂತರಗೊಳಿಸುವುದು ಸುಲಭದ ಕೆಲಸವಾಗಿರಲಿಲ್ಲ. ಅಂತೂ ಎಲ್ಲರ ಸಹಕಾರದಿಂದ ಮುಂಭಾಗದ ಮಹಡಿ ಮತ್ತು ಕೆಳಭಾಗದಲ್ಲಿ ವಿಶಾಲವಾದ 20 ಕೊಠಡಿಗಳನ್ನು ಮ್ಯೂಸಿಯಂಗೆ ಮೀಸಲಾಗಿರಿಸಿ ಕೃ.ವಿ.ವಿ.ದ ಎಲ್ಲಾ ಮುಖ್ಯವಿಭಾಗದ ಮುಖ್ಯಸ್ಥರಿಗೆ ಅವರವರ ಇಲಾಖೆಗಳಲ್ಲಿ ಅಗತ್ಯವಾದ ಆಧುನಿಕ ವಿಷಯಗಳನ್ನು

ಪ್ರದರ್ಶಿಸುವ ಪ್ಲಾನನ್ನು ತಯಾರು ಮಾಡಲು ಆದೇಶಿಸಲಾಯಿತು. ಕ್ರಾಪ್ ಪ್ರೊಡಕ್ಷನ್ ಪ್ರಾಧ್ಯಾಪಕ ಡಾ॥ ಶಿವಶಂಕರ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿ ವ್ಯವಸ್ಥಿತ ರೀತಿಯಲ್ಲಿ ಕೃಷಿ ವಿಜ್ಞಾನದ ಎಲ್ಲಾ ವಿಷಯಗಳ ಸೂಕ್ಷ್ಮ ಪರಿಚಯವನ್ನು ಸ್ಥೂಲವಾಗಿ ಪ್ರದರ್ಶಿಸುವ ಕರಡು ಯೋಜನೆಯನ್ನು ತಯಾರು ಮಾಡಲಾಯಿತು. ಅಂತೆಯೆ, ಹಿಂದೆ ಇದ್ದದ್ದು ಇಂದು ಇರುವುದು, ಮುಂದೆ ಏನಾಗಬಹುದೆಂಬ ಧ್ಯೇಯವನ್ನು ಅನುಸರಿಸಿ ಕಾರ್ಯರೂಪಕ್ಕೆ ತರಲಾಯಿತು. ಮಾನ್ಯ ರಾಜ್ಯಪಾಲರು ಇದನ್ನು ಉದ್ಘಾಟಿಸಿದರು.

ಕನ್ನಡ ಸಭಾಂಗಣದಲ್ಲಿ ಆಧುನಿಕ ಬೇಸಾಯದ ಬಗ್ಗೆ ವೀಡಿಯೋ ಕ್ಯಾಸೆಟ್‌ಗಳನ್ನು ಪ್ರದರ್ಶಿಸುವ ಅತ್ಯಾಧುನಿಕ ಆಡಿಯೋ ವಿಜುಯಲ್ ಉಪಕರಣವನ್ನು ಅಳವಡಿಸಲಾಯಿತು.

ಕನ್ನಡ ಸಭಾಂಗಣದ ಮುಂಭಾಗದಲ್ಲಿದ್ದ ಬಟಾನಿಕಲ್ ಗಾರ್ಡನ್, ಹೆಸರಿಗೆ ಬಟಾನಿಕಲ್ ಗಾರ್ಡನ್, ಒಳಹೊಕ್ಕರೆ, ಸ್ವಲ್ಪ ಜಾಗವನ್ನು ಬಿಟ್ಟರೆ ಉಳಿದೆಲ್ಲ ಜಾಗ ಕಾಡಾಗಿತ್ತು. ನಲವತ್ತು ಅಡಿ ಅಗಲ, ಐವತ್ತು ಅಡಿ ಆಳದ ಕಲ್ಲು ಕಟ್ಟಿದ ಹಾಳು ಬಾವಿ ಮುಚ್ಚಿ, ಇಲ್ಲಿ ಯೂನಿವರ್ಸಿಟಿ ವೃದ್ಧಿಪಡಿಸಿದ ವಿವಿಧ ಬಗೆಯ ಕೋಳಿ ತಳಿಗಳು, ಕುರಿ, ಹಂದಿ, ಮೊಲ, ಮೀನು ಮುಂತಾದುವನ್ನು ಶಾಶ್ವತವಾಗಿ ಇಟ್ಟು ಸಾಕುವ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಆಯಾ ವರುಷದಲ್ಲಿ ಬಿಡುಗಡೆ ಮಾಡಿದ ಬೆಳೆ ತಳಿಗಳನ್ನು ಪ್ರತ್ಯಕ್ಷವಾಗಿ ತೋರಿಸುವ ತಾಕುಗಳು, ಕರ್ನಾಟಕದಲ್ಲಿ ಬೆಳೆಯುವ ಕಾಫಿ, ಏಲಕ್ಕಿ, ಮೆಣಸು, ಟೀ, ರಬ್ಬರ್, ಸಾಂಬಾರ ಪದಾರ್ಥಗಳು, ಔಷಧ ಗಿಡ ಮೂಲಿಕೆಗಳು, ದ್ವಿದಳ ಧಾನ್ಯ, ಎಣ್ಣೆ ಕಾಳು ಮುಂತಾದವನ್ನು ಯಾರು ಯಾವ ಸಂದರ್ಭದಲ್ಲಿಯಾದರೂ ಸಹಜವಾಗಿ ನೋಡುವಂತೆ ಬೆಳೆಸಲಾಗುತ್ತಿದೆ. ಒಂದು ಮಿನಿ ವಾಟರ್ ಶೆಡ್, ಕರ್ನಾಟಕದ ನೀರಾವರಿ ಜಲ ಯೋಜನೆ, ಆಧುನಿಕ ಕಾಂಪೋಸ್ಟ್ ಮಾಡುವ ವಿಧಾನಗಳನ್ನು ಕೂಡ ಇಲ್ಲಿ ಸೇರಿಸಲಾಗಿದೆ. ವ್ಯವಸಾಯ ಯಂತ್ರೋಪಕರಣ, ಹನಿ ನೀರಾವರಿ ಪ್ರದರ್ಶಿಸಲು ಜಾಗಗಳನ್ನು ಗೊತ್ತುಮಾಡಲಾಗಿದೆ. ತೋಟಗಾರಿಕೆಯಲ್ಲಿ ವಿವಿಧ ಬಗೆಯ ಸಸ್ಯಗಳನ್ನು ವೃದ್ಧಿಪಡಿಸುವ ಟ್ರೈನಿಂಗಿಗೂ ಇಲ್ಲಿ ಅವಕಾಶವಿದೆ. ಒಟ್ಟಿನಲ್ಲಿ ದೂರದಿಂದ ಬಂದ ರೈತರು ನಿರಾಶರಾಗದಂತೆ ಕೃಷಿ ವಿಜ್ಞಾನದ ಸ್ಥೂಲ ಪರಿಚಯವನ್ನು ಬಣ್ಣಿಸುವಲ್ಲಿ ಈ ಮ್ಯೂಸಿಯಂ ಯಶಸ್ವಿಯಾಗಿದೆಯೆಂದು ಹೇಳಬಹುದು. ಇದನ್ನು ಮುಂದೆ ಹೆಚ್ಚು ಹೆಚ್ಚು ಅಭಿವೃದ್ಧಿ ಪಡಿಸಿ ಬೆಂಗಳೂರಿಗೆ ಬರುವ ಟೂರಿಸ್ಟ್‌ಗಳಿಗೆ ಒಂದು ಆಕರ್ಷಣೀಯ ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯ ಆಗುವುದಕ್ಕೆ ವಿಫುಲವಾದ ಅವಕಾಶಗಳಿವೆ. ಯೂನಿವರ್ಸಿಟಿ ಬಜೆಟ್‌ನಲ್ಲಿಯೂ ಪ್ರಾವಿಷನ್ ಇಲ್ಲದೆ ಇಪ್ಪತ್ತು ಲಕ್ಷಕ್ಕೂ ಮೀರಿದ ಖಾಸಗಿಯವರ ಧನಸಹಾಯದೊಂದಿಗೆ ಈ ವಸ್ತುಪ್ರದರ್ಶನವನ್ನು ಪ್ರಾರಂಭಿಸಿದ್ದು ಶ್ಲಾಘನೀಯವೆಂದು ಹೇಳಬಹುದು. ಇದನ್ನು ಸತತವಾಗಿ ಪುನಃಶ್ಚೇತನಗೊಳಿಸಿ ಆಕರ್ಷಣೀಯವಾಗಿ ಮುಂದುವರಿಸುವುದು ವಿಶ್ವವಿದ್ಯಾನಿಲಯದ ಪ್ರತಿ ವಿಭಾಗದ ವಿಜ್ಞಾನಿಗಳ ಜವಾಬ್ದಾರಿ. ಕರ್ನಾಟಕದ ವಿವಿಧ ಭಾಗದ ಗ್ರಾಮೀಣ ಜೀವನವನ್ನು ಪ್ರತಿಬಿಂಬಿಸುವಂತಹ ವ್ಯವಸಾಯಮೂಲವನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡುವಂತಹ ಮ್ಯೂಸಿಯಂನ್ನು ಮಾಡಬೇಕೆಂದಿದ್ದ ಹಂಬಲ ಕೈಗೂಡಲಿಲ್ಲ. ಮುಂದೆಯಾದರೂ ಇಂತಹದೊಂದು ಆಗಬಹುದೆಂಬ ನಂಬಿಕೆ ಇದೆ.

ಬೆಂಗಳೂರು ಕೃ.ವಿ.ವಿ. 1966 ರಲ್ಲಿ ಪ್ರಾರಂಭವಾದಾಗ ಕೇವಲ ಎರಡು ಡಿಗ್ರಿ ಪ್ರೋಗ್ರಾಂಗಳಾದ ಬಿ.ಎಸ್ಸಿ. (ಕೃಷಿ) ಮತ್ತು ಬಿ.ವಿ.ಎಸ್ಸಿ. ಇದ್ದವು. ಈಗ ಒಂಬತ್ತು ವಿಷಯಗಳಲ್ಲಿ ಡಿಗ್ರಿ ಪ್ರೋಗ್ರಾಂ ಇದ್ದು, 42 ವಿಷಯಗಳಲ್ಲಿ ಸ್ನಾತಕೋತ್ತರ, 28 ವಿಷಯಗಳಲ್ಲಿ ಪಿಹೆಚ್.ಡಿ. ಡಿಗ್ರಿಗಳನ್ನು ಕೊಡಲಾಗುತ್ತಿದೆ. ನಾನು ಕುಲಪತಿಯಾಗಿದ್ದ ಅವಧಿಯಲ್ಲಿ ಮೂರು ಹೊಸ ವಿಷಯಗಳನ್ನು ತೆರೆಯಲಾಯಿತು. ಬಿ.ಟೆಕ್. ಪೋಸ್ಟ್‌ಹಾರ್‌ವೆಸ್ಟ್ ಎಂಜಿನೀಯರಿಂಗ್ ಡಿಗ್ರಿ ಪ್ರೋಗ್ರಾಂ, ಬಯೋಟೆಕ್ನಾಲಜಿ ಮತ್ತು ಎಪಿಕಲ್ಚರ್‌ನಲ್ಲಿ ಸ್ನಾತಕೋತ್ತರ ಪ್ರೋಗ್ರಾಂ ತೆರೆಯಲಾಯಿತು. ಜೇನು ಸಾಕಾಣಿಕೆಯಲ್ಲಿ ದೇಶದಲ್ಲೇ ಮೊದಲನೆಯದಾಗಿ ಎಂ.ಎಸ್‌ಸಿ. ಎಪಿಕಲ್ಚರ್ ತೆರೆಯಲಾಯಿತು. ಇಪ್ಪತ್ತು ವರುಷಗಳ ಹಿಂದೆ ರೇಷ್ಮೆಕೃಷಿಯೂ ಕೂಡ ಕೀಟಶಾಸ್ತ್ರ ವಿಭಾಗದಲ್ಲಿ ಒಂದು ವಿಷಯವಾಗಿತ್ತು. ಅದನ್ನು ಒಂದು ಪ್ರತ್ಯೇಕ ಡಿಗ್ರಿ ಪ್ರೋಗ್ರಾಂ ಮಾಡಿದ ನಂತರ ಎಂ.ಎಸ್‌ಸಿ., ಪಿಹೆಚ್.ಡಿ. ಡಿಗ್ರಿಗಳಿಗೆ ವಿಸ್ತರಿಸಿದ್ದಲ್ಲದೆ ಚಿಂತಾಮಣಿಯಲ್ಲಿ ಒಂದು ಪ್ರತ್ಯೇಕ ಕಾಲೇಜು ಸ್ಥಾಪಿತವಾಗಿ ದೇಶದಲ್ಲೇ ಇದು ಮೊದಲನೆಯದೆಂದು ಗುರುತಿಸಲಾಗಿದೆ. ಹೀಗೆಯೇ ಮುಂದೆ ಜೇನುಕೃಷಿ ಕಾಲೇಜು ಆದ ದಿನ ಈ ದೇಶಕ್ಕೆ ಸುಭಿಕ್ಷೆ. ಒಂದು ಕಾಲದಲ್ಲಿ ಸ್ವಾಭಾವಿಕವಾಗಿ ಹೇರಳವಾಗಿ ಜೇನು ಸಿಕ್ಕುತ್ತಿದ್ದ ಈ ದೇಶದಲ್ಲಿ ಸ್ಥಳೀಯ ಜೇನು ತಳಿ (ಎಪಿಸ್ ಸೆರನ) ನಾಶಹೊಂದುವ ಸ್ಥಿತಿಗೆ ಬಂದಿದೆ. ಇದನ್ನು ಕಳೆದುಕೊಂಡರೆ ದೇಶದ ಅತ್ಯಮೂಲ್ಯ ಸಂಪತ್ತೊಂದನ್ನು ಕಳೆದುಕೊಂಡಂತೆ. ಆದ್ದರಿಂದ ಜೇನುಕೃಷಿ ಸಂಶೋಧನೆಗೆ ಮೂಲಭೂತವಾದ ಜೇನುಕೃಷಿ ವಿಜ್ಞಾನಿಗಳ ಆವಶ್ಯಕತೆ ಇದೆ. ಈ ದಿಶೆಯಲ್ಲಿ ಬೆಂಗಳೂರು ಕೃ.ವಿ.ವಿ.ದಲ್ಲಿ ಪ್ರಾರಂಭವಾದ ಎಪಿಕಲ್ಚರ್ ಡಿಪಾರ್ಟ್‌ಮೆಂಟ್ ಮುಂದಾಳುತನವನ್ನು ಒದಗಿಸುವುದೆಂಬ ನಂಬಿಕೆ ಇದೆ.

ರಾಜ್ಯದ ಶೇಕಡ 70ರಷ್ಟು ಜನ ಕೃಷಿಯನ್ನೇ ಅವಲಂಬಿಸಿ ಜೀವಿಸುತ್ತಿರುವಾಗ ವರುಷಕ್ಕೆ ಕೇವಲ 500 ವಿದ್ಯಾರ್ಥಿಗಳಿಗೆ ಕೃಷಿ ಕಾಲೇಜಿಗೆ ಪ್ರವೇಶ ದೊರೆಯುತ್ತಿರುವುದು ಕೃಷಿ ವಿಜ್ಞಾನ ತಂತ್ರಜ್ಞಾನ ಬೆಳವಣಿಗೆಗೆ ಎಷ್ಟು ಸಹಾಯವಾಗಬಹುದೆಂದು ಊಹಿಸಬಹುದು. ಪ್ರತಿ ತಾಲ್ಲೂಕಿನಲ್ಲಿ ಒಂದು ಕೃಷಿ ಕಾಲೇಜು ಸ್ಥಾಪಿತವಾಗಿ ಪ್ರತಿ ರೈತ ಕುಟುಂಬದ ಒಬ್ಬ ಸದಸ್ಯನಾದರೂ ಆಧುನಿಕ ಕೃಷಿ ವಿಜ್ಞಾನ ತಂತ್ರಜ್ಞಾನವನ್ನು ಪಡೆಯುವ ಮೇಟಿ ವಿದ್ಯೆಯನ್ನು ಕಲಿಯುವಂತಾದಾಗ ಮಾನವನ ಮೂಲಭೂತವಾದ ನಾಲ್ಕು ಅವಶ್ಯಕತೆ ಅನ್ನ, ಉರುವಲು, ಉಡುಪು, ಮೇವು (Food, Fuel, Fibre, Fodder) ಸಾಕಷ್ಟು ದೊರೆಯುವಂತಾಗಬಹುದು. ತಾಲ್ಲೂಕಿಗೊಂದು ಕೃಷಿ ಕಾಲೇಜು ಅಸಾಧ್ಯದ ಕೆಲಸವೇನಲ್ಲದಿದ್ದರೂ ಇದೊಂದು ಕನಸು. ಇದಕ್ಕೆ ಪರ್ಯಾಯವಾಗಿ ಕೃಷಿ ವಿಜ್ಞಾನ ತಂತ್ರಜ್ಞಾನವನ್ನು ತಿಳಿಯ ಬಯಸುವ ಪ್ರಜ್ಞಾವಂತ ರೈತರಿಗೆ ಒದಗಿಸುವ ಒಂದು ಯೋಜನೆಯನ್ನು ಕೃ.ವಿ.ವಿ.ದಲ್ಲಿ ರೂಪಿಸಲಾಯಿತು. ಡಿಸ್ಟೆನ್ಸ್ ಎಜುಕೇಷನ್ ಮೂಲಕ ತಮ್ಮ ಮನೆಯಲ್ಲಿ ಮತ್ತು ಸ್ವಂತ ಜಮೀನಿನಲ್ಲಿ ಸ್ವಯಂಪ್ರೇರಿತರಾಗಿ ಕಲಿಯಲು ಅನುಕೂಲವಾಗುವಂತೆ ಎರಡು ವರುಷಗಳ ತರಬೇತಿಯ ಪಠ್ಯಕ್ರಮವನ್ನು ತಯಾರುಮಾಡಿ, ಕೃಷಿ, ಪಶುಪಾಲನೆ, ಹೈನುಗಾರಿಕೆ, ಮೀನುಗಾರಿಕೆ ಮುಂತಾದ ಪ್ರತಿ ವಿಷಯಗಳಲ್ಲಿ ಪರಿಣತೆ ಹೊಂದುವ ಯೋಜನೆಯೊಂದನ್ನು ತಯಾರು ಮಾಡಿ ಕಾರ್ಯರೂಪಕ್ಕೆ ತರಲು ಅನುಕೂಲಮಾಡಿಕೊಡಲಾಗಿದೆ. ಇದರಿಂದ ಹೆಚ್ಚು ಹೆಚ್ಚು ರೈತರು ಆಧುನಿಕ ಕೃಷಿಯಲ್ಲಿ ಪರಿಣತೆ

ಪಡೆಯಲು ಅನುಕೂಲವಾಗುವುದು. ಇದನ್ನು 1999ರ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಎಲ್ಲಾ ಸಿದ್ಧತೆ ನಡೆದಿದೆ.

ಖಾಸಗಿಯವರು ಯಾರೂ ಕೃಷಿಗೆ ಸಂಬಂಧಪಟ್ಟ ಕಾಲೇಜುಗಳನ್ನು ತೆರೆಯಲು ಈಗ ಸಾಧ್ಯತೆ ಇಲ್ಲದಿರುವುದರಿಂದ ಕೃಷಿಯಲ್ಲಿ ಬೋಧನೆ, ಸಂಶೋಧನೆ, ವಿಸ್ತರಣೆಯ ಪೂರ್ಣ ಜವಾಬ್ದಾರಿಯನ್ನು ಕೃಷಿ ವಿಶ್ವ ವಿದ್ಯಾನಿಲಯಗಳಿಗೆ ನೀಡುವುದರ ಜೊತೆಗೆ ಸಂಪನ್ಮೂಲವನ್ನೂ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಕೃ.ವಿ.ವಿ.ದ ವಿಜ್ಞಾನಿಗಳೂ ಕೂಡ ಅಷ್ಟೇ ತ್ಯಾಗ ಮನೋಭಾವದಿಂದ, ತಮ್ಮ ವೈಯಕ್ತಿಕ ಸುಖ, ದುಃಖಗಳನ್ನು ಬದಿಗಿಟ್ಟು ರೈತರಿಗೆ ಬೆಂಗಾವಲಾಗಿ ಶ್ರಮಿಸದಿದ್ದರೆ ನಿರೀಕ್ಷಿಸಿದ ಇಳುವರಿಯ ಗುರಿ ಮುಟ್ಟಲು ಸಾಧ್ಯವಾಗದೆ ಇರಬಹುದು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಡಾ॥ ಎಚ್. ನರಸಿಂಹಯ್ಯನವರು ಒಂದು ದಿನ ಫೋನ್ ಮಾಡಿ ನಿಮ್ಮ ಕೃಷಿ ವಿಶ್ವವಿದ್ಯಾನಿಲಯದ ಎಲ್ಲ ಡಿಗ್ರಿ ಪ್ರೋಗ್ರಾಂಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಕೃಷಿ ವಿಜ್ಞಾನ ಬೇರೆಲ್ಲಾ ವಿಷಯಗಳಿಗಿಂತ ಹೆಚ್ಚು ಹಳ್ಳಿಯ ಜನರನ್ನು ಸ್ಪಂದಿಸುತ್ತದೆ, ಇಂಗ್ಲಿಷ್‌ನಲ್ಲಿ ಕಲಿತ ಜನ ಅಷ್ಟು ಸಮರ್ಪಕ ವಾಗಿ ವಿಷಯಗಳನ್ನು ಅವರಿಗೆ ತಲುಪಿಸಲು ಶಕ್ತರಲ್ಲ ಎಂದರು. ಈಗಾಗಲೇ ನಾವು ಒಂದು ಸೆಕ್ಷನ್ ಕನ್ನಡದಲ್ಲಿಯೇ ಬೋಧಿಸುತ್ತಿದ್ದೇವೆ, ಆದರೆ ಒತ್ತಾಯ ಮಾಡಿದರೂ ಹೆಚ್ಚು ಹುಡುಗರು ಅದಕ್ಕೆ ಸೇರುವುದಿಲ್ಲ. ಮೊದಲು ಇಪ್ಪತ್ತು ಮೂವತ್ತು ಹುಡುಗರು ಸೇರಿದರೆ ಕೊನೆಯಲ್ಲಿ ಉಳಿಯುವವರು ಒಂದೆರಡು. ಎಲ್ಲಾ ಹುಡುಗರೂ ಒಪ್ಪಿದರೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಇದರಲ್ಲಿ ಹಲವಾರು ನ್ಯೂನತೆಗಳಿವೆ. ತಾವು ಅಪ್ಪಣೆ ಕೊಟ್ಟರೆ ಒಂದು ದಿನ ನಿಮ್ಮಲ್ಲಿ ಖುದ್ದಾಗಿ ಬಂದು ಇದರ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆಂದು ಹೇಳಿದೆ. ಅದಕ್ಕೆ ಅವರು ಸಂತೋಷದಿಂದ ಒಪ್ಪಿಕೊಂಡು, ಎರಡೂ ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಹಾಗೂ ನಿರ್ದೇಶಕರನ್ನು ಮೀಟಿಂಗಿಗೆ ಕರೆದರು. ಸುಮಾರು ಮೂರು ಗಂಟೆಯ ಚರ್ಚೆಯಲ್ಲಿ ಹಲವಾರು ವಿಷಯಗಳನ್ನು ಪರಿಶೀಲಿಸಲಾಯಿತು.

ಐವತ್ತು ವರುಷದ ಹಿಂದೆ ಕೃಷಿ ಪದವೀಧರರಿಗೆ ಕೃಷಿ ಇಲಾಖೆ ಬಿಟ್ಟರೆ ಬೇರೆ ಎಲ್ಲಿಯೂ ಅವಕಾಶಗಳಿರಲಿಲ್ಲ. ಈಗ ಕರ್ನಾಟಕದಲ್ಲಿ ಪ್ರತಿವರ್ಷ ಸುಮಾರು 500 ಕೃಷಿ ಪದವೀಧರರು ಹೊರಬರುತ್ತಿದ್ದು ಅದರಲ್ಲಿ ಬೆರಳೆಣಿಸುವಷ್ಟು ಕೂಡ ಕೃಷಿ ಇಲಾಖೆಗೆ ಸೇರುವುದಿಲ್ಲ. ಸುಮಾರು ಹತ್ತು ಹದಿನೈದು ವರುಷದಿಂದ ಕೃಷಿ ಇಲಾಖೆಯಲ್ಲಿ ಯಾವ ಹುದ್ದೆಗೂ ಕೃಷಿ ಪದವೀಧರ ರನ್ನು ತೆಗೆದುಕೊಂಡಿಲ್ಲ. ಅಂದ ಮೇಲೆ ಅವರೆಲ್ಲರೂ ಬೇರೆ ಕಡೆ ಅವಕಾಶಗಳನ್ನು ಹುಡುಕಬೇಕು. ಕನ್ನಡದಲ್ಲಿ ಕಡ್ಡಾಯವಾಗಿ ಬೋಧಿಸಿದರೆ ಬೇರೆ ಎಲ್ಲಿಯೂ ಇವರಿಗೆ ಅವಕಾಶಗಳು ದೊರೆಯುವುದು ಕಷ್ಟವಾಗಬಹುದು. ಆದ್ದರಿಂದ ಇದನ್ನು ಐಚ್ಛಿಕವಾಗಿ ಇಡುವುದು ಒಳ್ಳೆಯದೆಂದು ಸಲಹೆ ಮಾಡಿದೆ. ಹಾಗೇನಾದರೂ ಕಡ್ಡಾಯವಾಗಿ ಕನ್ನಡದಲ್ಲಿಯೇ ಕಲಿಸಬೇಕೆಂದಿದ್ದರೆ ಈ ಪದವೀಧರರಿಗೆ ಏನಾದರೂ ಆಕರ್ಷಣೆ ತೋರಿಸಬೇಕಾಗುತ್ತದೆ. ಪಿ.ಯು.ಸಿ. ಆದನಂತರ ಕೃಷಿ ಇಲಾಖೆಯವರೆ ಆಯ್ಕೆ ಮಾಡಿ ಅವರ ಖರ್ಚಿನಲ್ಲಿ ಕೃಷಿ ಕಾಲೇಜಿಗೆ ಕಳುಹಿಸಿದರೆ ಕಡ್ಡಾಯವಾಗಿ ಕನ್ನಡದಲ್ಲಿ ಬೋಧಿಸಬಹುದು. ಅಥವಾ ಕನ್ನಡ ಮಾಧ್ಯಮ ತೆಗೆದುಕೊಳ್ಳುವವರಿಗೆಲ್ಲರಿಗೆ ಸ್ಕಾಲರ್‌ಶಿಪ್ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ

ಸ್ವಯಂ ಪ್ರೇರಿತ ಯಾರೂ ಸೇರುವುದಿಲ್ಲದೆಂದು ತಿಳಿಸಿದೆ. ತರ್ಕದಲ್ಲಿ ನರಸಿಂಹಯ್ಯನವರನ್ನು ಒಪ್ಪಿಸುವುದು ಕಷ್ಟ. ಎಲ್ಲದಕ್ಕೂ ಏನಾದರೂ ಒಂದು ಸಮಂಜಸವಾದ ಉತ್ತರವನ್ನಿಟ್ಟಿರುತ್ತಾರೆ. ಮೀಟಿಂಗ್ ಪೂರೈಸಿದ ನಂತರ ಬಾಗಿಲಿನವರೆಗೆ ಬಂದು ನಮ್ಮನ್ನು ಬೀಳ್ಕೊಡುವಾಗ ತಾವೆಲ್ಲ ಬಿಡುವುಮಾಡಿಕೊಂಡು ಬಂದು ಇಷ್ಟೊತ್ತು ಈ ಮೀಟಿಂಗ್‌ನಲ್ಲಿ ಭಾಗವಹಿಸಿದ್ದಕ್ಕೆ ತುಂಬಾ ಥ್ಯಾಂಕ್ಸ್ ಅಂದರು. ಪ್ರತ್ಯುತ್ತರವಾಗಿ ನಾನು ನಮ್ಮ ಕಾಲೇಜಿನಲ್ಲಿ ಕನ್ನಡ ಮಾಧ್ಯಮ ಹುಡುಗರಿಗೆ ಇಂತಹ 'ಸ್ವಚ್ಛ' ಕನ್ನಡವಾದ ಮೀಟಿಂಗ್, ಥ್ಯಾಂಕ್ಸ್, ಸೀಡ್ಸ್, ಹೈಬ್ರೀಡ್ ಪದಗಳನ್ನು ಉಪಯೋಗಿಸಿ ಪಾಠ ಮಾಡುತ್ತೇವೆ ಎಂದೆ. ಅದಕ್ಕೆ ಎಲ್ಲರನ್ನೂ ನಗಿಸುವಂತೆ ನಕ್ಕರು. ನರಸಿಂಹಯ್ಯರವರಿಗೆ, ಮಾನವೀಯತೆಯ ಒಂದು ದೊಡ್ಡ ಗುಣವೆಂದರೆ ಡಿ.ವಿ.ಜಿ.ಯವರು ಹೇಳುವಂತೆ 'ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ, ... ನಗುವ ನಗಿಸುವ ನಗಿಸಿ ನಗುತ ಬಾಳುವ' ವರವನ್ನು ಪಡೆದುಕೊಂಡಿದ್ದಾರೆ.

11 ಸಂಪ್ರಾಪ್ತಿ

ನಾನು ಕುಲಪತಿ ಸ್ಥಾನದಿಂದ ನಿವೃತ್ತಿಯಾದ ಕೆಲವು ದಿನಗಳ ನಂತರ ಒಂದು ಸಮಾರಂಭದಲ್ಲಿ ನನ್ನ ಕಿರಿಯ ಮಿತ್ರರು ಹಾಗೂ ಉದ್ಯಮಿ ಪ್ಲಾಂಟರ್ ಒಬ್ಬರು ನೀವು ಮುಂದೆ ಏನು ಮಾಡಬೇಕೆಂದಿದ್ದೀರಿ ಎಂದು ಪ್ರಶ್ನಿಸಿದರು. ನನ್ನ ಕೊನೆಯ ಪಯಣಕ್ಕೆ ಸಿದ್ಧತೆ ಮಾಡುವ ಪ್ರಯತ್ನದಲ್ಲಿದ್ದೇನೆ ಎಂದೆ. ಅವರಿಗೆ ಒಂದು ಬಗೆಯ ವಿಸ್ಮಯವಾಯಿತು. ಮುಂದೆ ಇವರೊಂದಿಗೆ ಮಾತನಾಡುವುದರಿಂದ ಪ್ರಯೋಜನವಿಲ್ಲವೆಂದು ಸುಮ್ಮನಾದರು. ನಾನಾದರೂ ಏಕೆ ಹಾಗೆ ಹೇಳಿದೆ ಎಂದು ತಿಳಿಯದು. ಕೆಲವೊಮ್ಮೆ ನನ್ನ ಅರಿವಿಲ್ಲದೆ ಇಂತಹ ಯೋಚನೆಗಳು ಬಾಯಿಂದ ಹೊರಬೀಳುವುವು. ಆದರೂ ಅವುಗಳಲ್ಲಿ ನಿಗೂಢವಾದ ಒಂದು ಬಗೆಯ ಸತ್ಯಾಂಶವಿರುವುದು ನಂತರ ಯೋಚಿಸಿದಾಗ ತಿಳಿಯುವುದು.

ಶಂಕರಾಚಾರ್ಯರು ಭಜಗೋವಿಂದಂನಲ್ಲಿ ಒಂದುಕಡೆ ಹೇಳುವ ಹಾಗೆ ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಒಂದಲ್ಲ ಒಂದು ಚಿಂತೆಯಲ್ಲಿರುತ್ತಾನೆ. "ಬಾಲಸ್ತಾವತ್ ಕ್ರೀಡಾಸಕ್ತ, ತರುಣಸ್ತಾವತ್ ತರುಣೀಸಕ್ತ, ವೃದ್ಧಸ್ತಾವತ್ ಚಿಂತಾಸಕ್ತ, ಪರಮೆ ಬ್ರಹ್ಮಣಿ ಕೋಪಿನಸಕ್ತ".

ಜೀವನದಲ್ಲಿ ಎಲ್ಲರ ಉದ್ದೇಶವೂ ಒಂದೆ. ಸುಖವನ್ನು ಬಯಸಿ ಅದನ್ನು ಪಡೆಯುವತ್ತ ಪ್ರಯತ್ನಿಸುತ್ತಲೇ ಇರುವುದು. ಯಾರಾದರೂ ಕೊನೆಗೂ ಬಯಸಿದ ಸುಖ ಸಂತೋಷ ಸಿಕ್ಕಿತು ಎಂದು ಹೇಳುವವರನ್ನು ನಾನು ಕಂಡಿಲ್ಲ. ಆದರೆ ಅದನ್ನು ಪಡೆಯುವತ್ತ ಸತತವಾಗಿ ಪಯತ್ನ ಪಡುವಾಗ ಸಿಕ್ಕುವ ಆನಂದವನ್ನು ಕಂಡಿರುವವರು ಅನೇಕರಿದ್ದಾರೆ. ಒಂದು ಗುರಿಯನ್ನು ಮುಟ್ಟುವಾಗ ಮಾಡುವ ಪ್ರಯತ್ನದಲ್ಲಿರುವ ಸಂತೋಷ ಅದನ್ನು ಪಡೆದಾಗ ಸಿಕ್ಕುವುದಿಲ್ಲ. ಏಕೆಂದರೆ ಜಾನುವಾರುಗಳು ಮೇಯುತ್ತಿರುವಾಗ ಮುಂದಿನ ಹುಲ್ಲುಗಾವಲು ಇದಕ್ಕಿಂತ ಹಸುರಾಗಿದೆಯೆಂದು ಭಾವಿಸುವಂತೆ, ಇದಕ್ಕಿಂತಲೂ ಮುಂದಿನದರಲ್ಲಿ ಹೆಚ್ಚಿನ ಸುಖವಿದೆಯೆಂದು ಭಾವಿಸುವುದರಿಂದ, ಆಸೆ ಎಲ್ಲ ಜೀವಜಂತುಗಳಿಗೆ ಹುಟ್ಟಿನಿಂದಲೆ ಬರುತ್ತದೆ. ಆ ಆಸೆ ಇಲ್ಲದಿದ್ದರೆ ಪ್ರಪಂಚದಲ್ಲಿ ಪ್ರಗತಿಯನ್ನೇ ಕಾಣುತ್ತಿರಲಿಲ್ಲವೆಂದು ನೆಹರುರವರು ಅವರ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಮಾನವನ ಪ್ರಗತಿಗೆ ಅತೃಪ್ತಿಯೇ ಮೂಲವೆಂದು ಹೇಳಿದ್ದಾರೆ. (Discontentment is the spur of progress). ಆದರೆ ಬುದ್ಧನ ಪ್ರಕಾರ ಆಸೆಯೇ ದುಃಖದ ಮೂಲ. ಈ ಸುಖ, ದುಃಖಗಳು ಪಾಪ ಪುಣ್ಯದಂತೆ ಅವರವರ ಗ್ರಹಿಕೆಯಲ್ಲಿ ಇವೆ. ಒಬ್ಬನಿಗೆ ಅಮೃತವಾಗಿದ್ದು ಮತ್ತೊಬ್ಬನಿಗೆ ವಿಷವಾಗಬಹುದು. ಪಾಪ ಪುಣ್ಯಗಳನ್ನು ವಿಶ್ಲೇಷಣೆ ಮಾಡುವಾಗ ಸ್ವಾಮಿ ಚಿನ್ಮಯಾನಂದರು, "ಪಾಪ ಮಾಡುವ ಕಾರ್ಯದಲ್ಲಿಲ್ಲ, ಮನಸ್ಸಿನ ಪರಿಣಾಮದಲ್ಲಿದೆ" ಎಂದು ಹೇಳುತ್ತಿದ್ದರು (Sin is not in the action but in the reaction).

ಒಟ್ಟಿನಲ್ಲಿ ಮೂಲತಃ ಮಾನವ ಏನನ್ನಾದರೂ ಹುಡುಕುತ್ತಲೇ ಇರುವುದು ಅವನ ನೈಜ ಸ್ವಭಾವ. ಇದರ ಮೂಲ ಉದ್ದೇಶ ಶಾಶ್ವತವಾದ ಶಾಂತಿಯನ್ನು ಪಡೆಯುವುದು. ಇದಕ್ಕಾಗಿ ಎರಡು ದಾರಿಯನ್ನು ಹಿಡಿಯುತ್ತಾರೆ. ಕೆಲವರಿಗೆ ಪ್ರಪಂಚದ ಸಂಪನ್ಮೂಲವನ್ನು ಸಂಗ್ರಹಿಸಿ ತನ್ನ ಸ್ವತ್ತನ್ನಾಗಿ ಮಾಡಿಕೊಂಡು ಎತನ್ಮೂಲಕ ಸುಖ ಪಡುವ ಆಸೆ. ಮತ್ತೆ ಕೆಲವರಿಗೆ ತಮ್ಮ ಚಿಂತನೆಯನ್ನು ಆಧ್ಯಾತ್ಮಿಕತೆಯ ಕಡೆ ತಿರುಗಿಸಿ ಬ್ರಹ್ಮತ್ವವನ್ನು ಪಡೆಯುವ ಆಸೆ. ಮೊದಲನೆಯ ವರ್ಗದವರು ಹಂತಹಂತವಾಗಿ ಕಾಣುವ ಪ್ರಗತಿ ಹೇಗೆಂದರೆ 'ಬಡವರಿಗೆ ಉಂಬುವ ಆಸೆ, ಉಂಬುವುದಾದರೆ ಉಡುವ ಆಸೆ, ಉಡುವುದಾದರೆ ಮಡದಿಯ ಆಸೆ, ಮಡದಿಯಾದರೆ ಮಕ್ಕಳ ಆಸೆ, ಮಕ್ಕಳಾದರೆ ಬದುಕಿನ ಆಸೆ....' ಹೀಗೆ ಪ್ರತಿಯೊಬ್ಬ ಮಾನವನಿಗೂ ಒಂದು ಆಸೆ ಕೈಗೂಡವುದರೊಳಗೆ ಮತ್ತೊಂದು ಆಸೆ ಬೇತಾಳನ ಹಾಗೆ ಕಾದಿರುತ್ತದೆ. ಅಮೆರಿಕನ್ನರಿಗೆ ಪೃಥ್ವಿಯ ಸಾರ್ವಭೌಮತೆ ಸಮೀಪಿಸುತ್ತಿದೆ ಎನ್ನುವಷ್ಟರಲ್ಲಿ ಚಂದ್ರಮಂಡಲಕ್ಕೆ ಹೋಗುವ ಆಸೆ, ಅದು ಸಿಕ್ಕಿತೆನ್ನುವಷ್ಟರಲ್ಲಿ ಬೇರೆ ಗ್ರಹಗಳಿಗೆ ಹೋಗುವ ಆಸೆ. ಉಳಿದವರಿಗೆ ಅಮೆರಿಕನ್ನರ ಜೀವನ ಮಟ್ಟ ತಲುಪುವ ಆಸೆ.

ಆಧ್ಯಾತ್ಮಿಕತೆ ಕಡೆ ಒಲವು ಇರುವವರಿಗೂ ಮುಂದುವರಿದಂತೆಲ್ಲ ಇದಲ್ಲ ಇದಲ್ಲ (ನೇತಿ ನೇತಿ) ಎಂದು ಮುಂದೆ ಮುಂದೆ ಹೋಗುವ ಬಯಕೆ. ಇಂದ್ರ ಪದವಿಯೂ ಕೂಡ ತಾತ್ಕಾಲಿಕ. ಇಂದ್ರನಿಗೂ ಕೂಡ ಅವನು ಗಳಿಸಿದ್ದ ಪುಣ್ಯವೆಲ್ಲ ಕರಗಿದಾಗ ಮತ್ತೆ ಮಾನವನಾಗಿ ಜನ್ಮ ತಾಳಿ ಇಂದ್ರ ಪದವಿಯನ್ನು ದಾಟಿ ಬ್ರಹ್ಮತ್ವವನ್ನು ಪಡೆಯಬೇಕೆಂಬ ಬಯಕೆ. ಶ್ರೀ ರಾಮಕೃಷ್ಣ ಪರಮಹಂಸರು ಸಾಮಾನ್ಯರನ್ನು ಸಂಧಿಸಿ ಮಾತನಾಡುವಂತೆ ಕಾಳಿಕಾದೇವಿಯಲ್ಲಿ ತಲ್ಲೀನರಾಗಿದ್ದಾಗ ಅವರ ಗುರು ತೋತಾಪುರಿಯವರು "ನೀನು ಅಲ್ಲಿಯೇ ನಿಂತರೆ ಸಾಲದು, ಇನ್ನೂ ಮುಂದೆ ಹೋಗಬೇಕು" ಎಂದು ಬೋಧಿಸುತ್ತಿದ್ದರು. ಅದ್ವೈತ ವೇದಾಂತದಲ್ಲಿ 'ನೀನೂ ಅವನೇ, ಅವನೂ ನೀನೇ', ಬಾಹ್ಯ ಪ್ರಪಂಚದಲ್ಲಿ ಹುಡುಕಿದರೆ ಸಿಕ್ಕುವಂತಹದಲ್ಲ, ನಿನ್ನೊಳಗೆ ನಿನ್ನನ್ನು ನೀನು ಕಂಡಾಗ ಶಾಶ್ವತ ಶಾಂತಿ ದೊರೆಯುವುದೆಂದು ಹೇಳುತ್ತದೆ.

ನಾನು ಅಂದು ನನ್ನ ಕಿರಿಯ ಸ್ನೇಹಿತರಿಗೆ ನನ್ನ ಕೊನೆಯ ಪಯಣಕ್ಕೆ ಸಿದ್ಧತೆ ಮಾಡುವ ಪ್ರಯತ್ನದಲ್ಲಿದ್ದೇನೆಂದು ಹೇಳಿದ್ದು ತಪಸ್ಸು ಮಾಡಿ ಬ್ರಹ್ಮತ್ವವನ್ನು ಪಡೆಯಲು ಹೊರಟಿದ್ದೇನೆಂದಲ್ಲ! ಡಿವಿಜಿಯವರು ಹೇಳುವಂತೆ 'ಮುಂಜಾನೆಯಿಂದ ಸಂಜೆಯವರೆಗೆ, ಉದ್ಧರಿಸುವೆನು, ಜಗವನ್ನೆನುತ ಒದ್ದಾಡಿ ಗುದ್ದಾಡಿ ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ ನಿನ್ನುದ್ಧಾರವೆಷ್ಟಾಯ್ತೋ ಮಂಕುತಿಮ್ಮ' ಎಂದು ನನ್ನ ಆತ್ಮಾವಲೋಕನ ಮಾಡುವ ಸಮಯ ಬಂದಿತ್ತು. ಅದರತ್ತ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದೇನೆಂದು ಹೇಳಿದ್ದೆ.

ಜೀವನದಲ್ಲಿ ನಾನು ಹೇಳಿಕೊಳ್ಳುವಂತಹದ್ದೇನನ್ನೂ ಗಳಿಸದಿದ್ದರೂ ನನ್ನ ಪುಟ್ಟ ಪುಸ್ತಕ ಭಂಡಾರ ನನ್ನ ಸರ್ವಸ್ವವಾಗಿದೆ. ಆತ್ಮಚೈತನ್ಯ ಕುಗ್ಗಿದಾಗ ಅದು ನನ್ನ ಸಹಾಯಕ್ಕೆ ಬರುತ್ತದೆ. ಆದರೆ ಅದರ ಪೂರ್ಣ ಪ್ರತಿಫಲವನ್ನು ಪಡೆಯಲಾಗುತ್ತಿಲ್ಲ. ಕೆಲವೊಮ್ಮೆ ನೋಡುವವರಿಗೆ ಭೂಷಣಕ್ಕೆ ಇವೆಲ್ಲವನ್ನೂ ಶೋಕೇಸಿನಲ್ಲಿ ಇಟ್ಟಿದ್ದೇನೆಯೋ ಎಂದು ಅನಿಸುತ್ತಿತ್ತು. ಬಿಡುವಿದ್ದಾಗ ಯಾವುದಾದರೊಂದನ್ನು ಕೈಗೆತ್ತಿಕೊಂಡರೆ ಮನೆಯವರಿಗೆಲ್ಲ ಇಷ್ಟವಾಗುತ್ತಿರಲಿಲ್ಲ. ನನ್ನ

ಪರಿಸರದಲ್ಲಿ ಪುಸ್ತಕಗಳನ್ನು ಓದುವ ಪರಿಪಾಠ ಇದ್ದವರು ಇರಲಿಲ್ಲ. ನಿವೃತ್ತಿಯಾದ ಮೇಲಾದರೂ ಹೆಚ್ಚಿನ ಸಮಯವನ್ನು ಇವುಗಳೊಂದಿಗೆ ಕಳೆಯುವ ಹಂಬಲವಿತ್ತು. 'ಬದುಕು ಜಟಕಾ ಬಂಡಿ ನೀನು ಕುದುರೆ ವಿಧಿ ಅದರ ಸಾಹೇಬ ಅವನು ಹೇಳಿದ ಕಡೆ ಹೋಗದೆ ವಿಧಿಯಿಲ್ಲ'.

ವಿಧಿ ಮತ್ತು ಕರ್ಮ ಎರಡೂ ತರ್ಕಬದ್ಧವಾದವು. ಕೆಲವರಿಗೆ ಅವರ ಹಣೆಯಲ್ಲಿ ಬರೆದಿದ್ದನ್ನು ಯಾರಿಂದಲೂ ಬದಲಾಯಿಸಲಾಗುವುದಿಲ್ಲ, ಅದನ್ನು ಅನುಭವಿಸಿಯೇ ತೀರಬೇಕೆಂಬ ದೃಢನಂಬಿಕೆ ಇದೆ. ಮತ್ತೆ ಕೆಲವರಿಗೆ ಮಾನವ ಮನಸ್ಸು ಮಾಡಿದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಲ್ಲ, ವಿಧಿ ಮತ್ತು ಕರ್ಮಗಳು ಕೈಲಾಗದವರು ಆಶ್ರಯಿಸುವ ಕೊನೆಯ ಉತ್ತರವೆನ್ನುವರು. ಭಗವದ್ಗೀತೆಯಲ್ಲೂ ಕರ್ಮಕ್ಕೆ ಆದ್ಯತೆ ಕೊಟ್ಟಿದೆ. ಅರ್ಜುನನು ಕುರುಕ್ಷೇತ್ರ ಯುದ್ಧದಲ್ಲಿ ತನ್ನ ಬಂಧು ಮಿತ್ರರು ಗುರು ಹಿರಿಯರನ್ನು ಕೊಲ್ಲುವುದು ಪಾಪವೆಂದು ಬಿಲ್ಲನ್ನು ಕೆಳಗಿಟ್ಟು, ಶೋಕಿಸುತ್ತಿದ್ದಾಗ ಶ್ರೀಕೃಷ್ಣ ಅರ್ಜುನನಿಗೆ ಉಪದೇಶ ಮಾಡುವಾಗ ಹೇಳುವ ಮಾತುಗಳು ಭಾರತದ ಉದ್ದಗಲಕ್ಕೆ ಜನಜನಿತವಾಗಿವೆ. 'ಪಾಪಪುಣ್ಯಗಳನ್ನು ನಿರ್ಧರಿಸಲು ನೀನು ಯಾರು? ಅವೆಲ್ಲವನ್ನು ಈಗಾಗಲೇ ನಾನು ನಿರ್ಧರಿಸಿದ್ದೇನೆ. ನಿನ್ನ ಕರ್ತವ್ಯ, ಕರ್ಮವನ್ನು ಮಾಡುವುದರಲ್ಲಿ ಇದೆಯೇ ಹೊರತು ಅದರ ಫಲಾಪೇಕ್ಷೆಯಲ್ಲ' ಎಂದು ಹೇಳುವಾಗ ಅವರವರ ಪಾಲಿಗೆ ಬಂದ ಕರ್ಮವನ್ನು ಮಾಡಲೇಬೇಕಾದ ಅನಿವಾರ್ಯ ಪ್ರಸಂಗವನ್ನು ಒತ್ತಿ ಹೇಳುತ್ತದೆ. ಅಂದರೆ ಬಡವ ಬಲ್ಲಿದ, ವರ್ತಕ ವಿಜ್ಞಾನಿ, ಜ್ಞಾನಿ ಅಜ್ಞಾನಿ ಮುಂತಾದ ಭಿನ್ನತೆಗಳು ಅವರವರ ಕರ್ಮದ ಫಲಗಳಿಂದ ಹುಟ್ಟಿನಿಂದಲೆ ಬಂದವು, ಇವೆಲ್ಲ ಮಾನವನ ಸೃಷ್ಟಿಯಿಂದಲ್ಲ ಎಂಬ ವಾದಕ್ಕೆ ಪುರಾವೆ ನೀಡುತ್ತದೆ. ಈ ಭಿನ್ನತೆಗಳನ್ನು ಬಲ್ಲವರು, ತಮ್ಮ ಸ್ವಾರ್ಥತೆಗೋಸ್ಕರ ಸೃಷ್ಟಿಸಿರುವುದು, ಇವೇ ನಮ್ಮ ಬಡತನಕ್ಕೆ ಮೂಲಕಾರಣಗಳು, ಇವುಗಳನ್ನು ಕಡ್ಡಾಯವಾಗಿ ಕಿತ್ತು ಒಗೆಯದಿದ್ದರೆ ಶೋಷಣೆಗೆ ಒಳಗಾದವರಿಗೆ ಭವಿಷ್ಯವೇ ಇಲ್ಲ ಎಂದು ಹೋರಾಡುವವರು ಎಲ್ಲಾ ಕಾಲದಲ್ಲೂ ಇದ್ದಾರೆ.

ನಮ್ಮ ಊರಿನ ಸುಗ್ಗಿಯ ಕೊನೆಯ ದಿವಸ ದೇವರು ಮನೆಗೆ ಬರುವ ಮಂಗಳವಾರ ಪೂರ್ವಾಹ್ನ ಹೆಂಗಸರು ಮಕ್ಕಳು ಆದಿಯಾಗಿ ಊರ ಗುಡಿಯ ಸುತ್ತ ನೆರೆದಿರುತ್ತಿದ್ದರು. ವಾದ್ಯದೊಂದಿಗೆ ದೇವರ ಮುಖಗಳನ್ನು ತಂದು ಗುಡಿಯಲ್ಲಿರುವ ಗಡಿಗೆಯೊಳಗೆ ಇಡುವ ಮುನ್ನ ಕೆರಳ್ಳಿ ತಿಮ್ಮನಿಗೆ ದೇವರು ಮೈಮೇಲೆ ಬಂದು ಊರಿಗೆ ಮುಂಬರುವ ಆಗುಹೋಗುಗಳನ್ನು ಹೇಳುತ್ತಿದ್ದ. ಅದರಲ್ಲಿ ನಂಬಿಕೆ ಇರುವವರು ಕೆಲವರಿದ್ದರೂ ಅನೇಕರು ಇದನ್ನು ಅಲ್ಲಗಳೆಯುವವರೂ ಇದ್ದರು. ಮತ್ತೊಬ್ಬರು ಹೆತ್ತೂರು ದೇವರು ಬನದ ಕುರುಡ ಎಂಬುವವರಿದ್ದರು. ಅವರ ಹೆಸರು ಇಂದಿಗೂ ನನಗೆ ತಿಳಿಯದು. ಅವರಿಗೆ ದೃಷ್ಟಿ ಸ್ವಲ್ಪ ಕಡಿಮೆ ಇದ್ದುದರಿಂದ ಏನನ್ನಾದರೂ ಓದಬೇಕೆಂದಿದ್ದರೆ ಕಣ್ಣ ಹತ್ತಿರ ಇಟ್ಟು ದೃಷ್ಟಿಸಿ ನೋಡುತ್ತಿದ್ದರು. ಉಳಿದಂತೆ ಎಲ್ಲರಂತೆ ಜೀವನ ನಡೆಸುತ್ತಿದ್ದರು. ಅವರಿಗೆ ಒಂದು ಬಗೆಯ ಅತೀಂದ್ರಿಯ ದೃಷ್ಟಿ (ಕ್ಲೇರ್‌ವಾಯನ್ಸ್) ಇತ್ತು. ಎಲ್ಲೆಂದರೆ ಅಲ್ಲಿ ಎದುರಿಗೆ ಸಿಕ್ಕಿದವರಿಗೆ ಅವರು ಕೇಳಿದ ಪ್ರಶ್ನೆಗೆ ಭವಿಷ್ಯವನ್ನು ಹೇಳುತ್ತಿದ್ದರು. ಸುಲಭವಾಗಿ ಎಲ್ಲರಿಗೂ ಅವರು ಸಿಕ್ಕುತ್ತಿದ್ದರಿಂದಲೋ ಅಥವಾ ಅವರು ಏನನ್ನೂ ತೆಗೆದುಕೊಳ್ಳದಿದ್ದರಿಂದಲೋ ಕೆಲವರು ಕ್ಷುಲ್ಲಕ ಕಾರಣಗಳಿಗೂ ಪ್ರಶ್ನೆ ಕೇಳುತ್ತಿದ್ದರು. ಇವರಿಗೆ ಕುಂಡಲಿ, ಹುಟ್ಟಿದ ತಾರೀಖು, ಮತ್ತಿತರ ಸಹಾಯವೇನೂ ಬೇಕಿರಲಿಲ್ಲ.

ಇವರ ಬಗ್ಗೆ ಯಾರಿಗೂ ಹೆಚ್ಚಿಗೆ ತಿಳಿಯುವ ಕುತೂಹಲವಾಗಲಿ ಅಥವಾ ಒಳ್ಳೆಯ ಕಾರ್ಯಕ್ಕೆ ಇವರ ಭವಿಷ್ಯವಾಣಿಯನ್ನು ಉಪಯೋಗಿಸಿಕೊಳ್ಳುವ ಆಸಕ್ತಿಯಾಗಲಿ ಇರಲಿಲ್ಲ. ಇವರನ್ನು ನೆನಸಿಕೊಂಡರೆ ಅಮೆರಿಕೆಯ ಎಡ್ಗರ್ ಕೇಸಿಯವರ ನೆನಪು ಬರುತ್ತದೆ.

ಅಮೆರಿಕಾದಲ್ಲಿ ಎಡ್ಗರ್ ಕೇಸಿ ಎಂಬುವರು ಇವರಂತೆಯೆ ಭವಿಷ್ಯವನ್ನು ನುಡಿಯುವ ಶಕ್ತಿಯುಳ್ಳವರಿದ್ದರು. ಕೆಂಟುಕಿಯಲ್ಲಿ ಹುಟ್ಟಿದ ಇವರಿಗೆ ಆರೇಳು ವಯಸ್ಸಿನಲ್ಲಿ ಭವಿಷ್ಯವನ್ನು ನೋಡುವ ಶಕ್ತಿ ಇತ್ತು. ಇವರ ಹತ್ತಿರದ ಸಂಬಂಧಿಕರು ಸತ್ತಿದ್ದವರೊಂದಿಗೆ ಸಂಪರ್ಕ ಬೆಳೆಸುವುದನ್ನು ಇವನ ತಂದೆ ತಾಯಿಯವರು ನಂಬುತ್ತಿರಲಿಲ್ಲ. ಶಾಲೆಯ ಪುಸ್ತಕಗಳನ್ನು ತಲೆ ಅಡಿ ಇಟ್ಟು ಮಲಗಿದರೆ ಅದರ ಪೂರ್ಣ ಛಾಯ ಇವನ ಜ್ಞಾಪಕಕ್ಕೆ ಬರುತ್ತಿತ್ತಂತೆ. ಆದರೆ ಏಳನೆ ತರಗತಿ ದಾಟುವುದರೊಳಗೆ ಇದ್ದಕ್ಕಿದ್ದ ಹಾಗೆ ಈ ಶಕ್ತಿ ಮಾಯವಾಯಿತಂತೆ. ಇವರು ಒಂದು ಹೋಲ್‌ಸೇಲ್ ಕಂಪನಿ ಸೇಲ್ಸ್‌ಮನ್ ಆಗಿದ್ದಾಗ ಇಪ್ಪತ್ತೊಂದನೆ ವಯಸ್ಸಿನಲ್ಲಿ ಇವರ ಗಂಟಲಿಗೆ ಒಂದು ಬಗೆಯ ಲಕುವ ಹೊಡೆದು ಮಾತು ನಿಂತು ಹೋಗುವ ಸಂಭವ ಬಂದಾಗ ಡಾಕ್ಟರಿಗೆ ಈ ಖಾಯಿಲೆಯನ್ನು ಪತ್ತೆ ಹಚ್ಚುವುದು ಕಷ್ಟವಾಯಿತು. ಎಡ್ಗರ್ ಕೇಸಿ ಅವರ ಸ್ನೇಹಿತರೊಂದಿಗೆ ತನ್ನ ಚಿಕ್ಕ ವಯಸ್ಸಿನಲ್ಲಿದ್ದ ಅತೀಂದ್ರಿಯ ದೃಷ್ಟಿ ಮಹತ್ವವನ್ನು ವಿವರಿಸಿ ಹೇಗಾದರೂ ಆ ಶಕ್ತಿ ಪುನಃ ಮರುಕಳಿಸುವಂತೆ ಮಾಡಿದರೆ ತನ್ನ ಕಾಯಿಲೆಗೆ ಸೂಕ್ತ ಪರಿಹಾರ ತಾನೇ ಕಂಡುಕೊಳ್ಳುವೆನೆಂದನಂತೆ. ಅವರ ಸ್ನೇಹಿತರು ಹಿಪ್ನಾಟಿಕ್ ವಿಧದಲ್ಲಿ ಅವರ ಸ್ಕೂಲು ಪುಸ್ತಕದ ಮೇಲೆ ಮಲಗುತ್ತಿದ್ದಂತೆ ಮಲಗಿಸಿದರಂತೆ. ಪುನಃ ಅವರಿಗೆ ಮೊದಲಿದ್ದ ಅತೀಂದ್ರಿಯ ದೃಷ್ಟಿ ಬಂದು ಅವರ ಕಾಯಿಲೆಗೆ ಪರಿಹಾರ ಕಂಡುಕೊಂಡರಂತೆ. ಅಂದಿನಿಂದ ಅಮೆರಿಕಾದಲ್ಲಿ ಡಾಕ್ಟರುಗಳು, ಆಧುನಿಕ ವಿಧಾನದಲ್ಲಿ ಪತ್ತೆ ಮಾಡಲಾಗದಿದ್ದ ಕಾಯಿಲೆಗಳಿಗೆ ಎಡ್ಗರ್ ಕೇಸಿಯವರ ಸಲಹೆಯನ್ನು ಪಡೆಯುತ್ತಿದ್ದರು. ಇವರು ಮುಂದುವರಿದು ಟ್ರಾನ್ಸ್‌ನಲ್ಲಿದ್ದಾಗ ಪ್ರಪಂಚದ ಯಾವುದೇ ಭಾಗದಿಂದ ಏನೇ ತೊಂದರೆ ಇದ್ದರೂ ಅದು ಶತಮಾನಗಳ ಹಿಂದೆ ನಡೆದಿದ್ದರೂ ಮುಂದೆ ಏನಾಗಬಹುದೆಂಬ ವಿವರವನ್ನು ಕೂಡ ಹೇಳುವಂತಾದರು. ಇವರು ಹುಟ್ಟಿದಾಗಿನಿಂದ (1877) ಸಾಯುವತನಕ (1945) ಸುಮಾರು ನಲವತ್ತು ಸಾವಿರ ಭೂತ ಭವಿಷ್ಯವನ್ನು ನುಡಿದಿದ್ದಾರಂತೆ. ಇವರ ಭೂತ ಭವಿಷ್ಯಗಳನ್ನು ಸಂಶೋಧನೆ ಮಾಡಲು ವರ್ಜೀನಿಯದಲ್ಲಿ 1932 ರಲ್ಲಿ ಒಂದು ದತ್ತಿಯನ್ನು (ಫೌಂಡೇಷನ್) ಸ್ಥಾಪಿಸಿ ವೈಜ್ಞಾನಿಕವಾಗಿ ಇವರು ನುಡಿದ ಎಲ್ಲ ಭೂತ ಭವಿಷ್ಯಗಳನ್ನು ಪರಿಶೋಧಿಸಿ ಅವುಗಳ ಬಗ್ಗೆ ಕಾರ್ಯಾಗಾರಗಳನ್ನು ನಡೆಸುತ್ತಿದ್ದಾರೆ. ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಎಡ್ಗರ್ ಕೇಸಿಯವರು ನುಡಿದ ಭೂತ ಭವಿಷ್ಯಗಳಿಂದ ಅಮೆರಿಕನ್ನರಿಗೆ ಪುನರ್ಜನ್ಮದಲ್ಲಿ ನಂಬಿಕೆ ಬರುವುದಕ್ಕೆ ಕಾರಣವಾಯಿತಲ್ಲದೆ ಮಾನವನ ಪ್ರಯತ್ನಕ್ಕಿಂತಲೂ ಮಿಗಿಲಾದ ಶಕ್ತಿಯೊಂದಿದೆಯೆಂದು ನಂಬುವಂತಾಯಿತು.

ಚಿಕ್ಕಂದಿನಿಂದಲೂ ನಾನು ಮಾಡುತ್ತಿದ್ದ ಒಂದು ಕೆಲಸ, ಇಂದಿಗೂ ಅದರ ಪೂರ್ಣ ಅರ್ಥ ಮನದಟ್ಟಾಗದಿರುವುದು ಇದ್ದಕ್ಕಿದ್ದಹಾಗೆಯೆ ಕಂಡ ಕಂಡ ದೇವರಿಗೆ ಕೈ ಮುಗಿಯುವುದು. ಇದು ಪೂರ್ವಾರ್ಜಿತ ಕರ್ಮದಿಂದಲೋ, ಭಯದಿಂದಲೋ, ಭವಿಷ್ಯದ ಅನಿಶ್ಚಿತೆಯಿಂದಲೋ ನಾನರಿಯೆ. ದೇಶದ ಉದ್ದಗಲಕ್ಕೆ ಇರುವ ಎಲ್ಲ ಮುಖ್ಯ ದೇವಸ್ಥಾನಗಳಿಗೆ ಹೋಗಿದ್ದೇನೆ. ಆದರೆ ತೀರ್ಥಯಾತ್ರೆಯಂತೆ ಯಾವ ದೇವಸ್ಥಾನಕ್ಕೂ ಹೋಗಿದ್ದು ನೆನಪಿಲ್ಲ. ಬದರಿನಾಥ್

ಕೇದಾರನಾಥ್‌ಗೆ ಹೋದಾಗಲೂ ಹೋಗುವ ಹಿಂದಿನ ದಿನದವರೆಗೂ ಇದರ ಪರಿವೆ ಇಲ್ಲ. ಸ್ವಾಮಿ ಅಯ್ಯಪ್ಪನ ದರ್ಶನ ಮಾಡಿದ್ದೂ ಮತ್ತೊಬ್ಬರ ಪ್ರೇರಣೆಯಿಂದ, ಒಟ್ಟಿನಲ್ಲಿ ನಾನು ಹೋಗಿದ್ದೆ ಅನ್ನುವುದಕ್ಕಿಂತ ಸಂದರ್ಭಗಳು ನನ್ನನ್ನು ಅಲ್ಲಿಗೆ ಎಳೆ ತಂದಿದ್ದವು ಎನ್ನುವುದು ಉಚಿತ.

ಆಧ್ಯಾತ್ಮಿಕ ಉಪನ್ಯಾಸಗಳನ್ನು ಕೇಳುವುದರಲ್ಲಿಯೂ ಆಸಕ್ತಿ ಬೆಳೆದದ್ದು ಯಾರ ಉಪದೇಶ ಅಥವಾ ಒತ್ತಾಯದಿಂದಲ್ಲ. ಮೊದಲೇ ತಿಳಿಸಿದಂತೆ ಮೈಸೂರಿನಲ್ಲಿ ಇಂಟರ್‌ಮೀಡಿಯಟ್ ಓದುತ್ತಿದ್ದಾಗ, ಯಾಂತ್ರಿಕವಾಗಿ ಯುವರಾಜ ಕಾಲೇಜಿನಲ್ಲಿ ಕ್ಲಾಸ್‌ಗಳಿಗೆ ಹೋಗುತ್ತಿದ್ದರೂ, ಸಂಜೆ ಹೊತ್ತು ಮಹಾರಾಜ ಕಾಲೇಜಿನ ಜೂನಿಯರ್ ಬಿ.ಎ. ಹಾಲ್ ಕಡೆಗೆ ಮನಸ್ಸು ಎಳೆಯುತ್ತಿತ್ತು. ಅಲ್ಲಿ ಪ್ರತಿದಿನ ಒಂದಲ್ಲ ಒಂದು ಪ್ರಖ್ಯಾತ ಉಪನ್ಯಾಸಕಾರರಿಂದ ಭಾಷಣವಿರುತ್ತಿತ್ತು. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದರೂ, ಹೆಚ್ಚಿನ ಒಲವು ಉಪನ್ಯಾಸಗಳತ್ತ. ಬೆಂಗಳೂರಿಗೆ ಬಂದನಂತರ ಸಮಯ ಸಿಕ್ಕಿದಾಗಲೆಲ್ಲ ಶನಿವಾರ ಸಂಜೆ ಬಸವನ ಗುಡಿಯಲ್ಲಿರುವ ರಾಮಕೃಷ್ಣ ಆಶ್ರಮದಲ್ಲಿ ನಡೆಯುತ್ತಿದ್ದ ಉಪನ್ಯಾಸಗಳನ್ನು ಕೇಳುತ್ತಿದ್ದೆ. ಮುಂದೆ, ಮಂಗಳೂರಿನಲ್ಲಿ ಆಕಸ್ಮಿಕವಾಗಿ ಕಂಡ ಸ್ವಾಮಿ ಚಿನ್ಮಯಾನಂದರ ಸಂಪರ್ಕ, ನನ್ನಲ್ಲಿ ಸುಪ್ತಾವಸ್ಥೆಯಲ್ಲಿದ್ದ ಯಾವುದೋ ಒಂದು ಬಗೆಯ ಬಯಕೆಗೆ ನೀರೆರೆದು ಪೋಷಿಸಿದಂತೆ, ಅವರ ಗೀತ ಜ್ಞಾನ ಯಜ್ಞ ಮತ್ತು ಉಪನಿಷತ್ತುಗಳ ವಾಚನ ನನ್ನ ಮನ ಸೆಳೆದವು. ನನ್ನ ಸಮಕಾಲೀನ ಯುವಕರು ಸ್ವಾಮಿ ಚಿನ್ಮಯಾನಂದರ ಭಾಷಣಕ್ಕೆ ಬರುತ್ತಿದ್ದವರೆಲ್ಲರಿಗೂ ಗೀತೆ, ಉಪನಿಷತ್‌ಗಳ ಸಾರವನ್ನು ತಿಳಿಯಬೇಕೆಂಬ ಹಂಬಲವಿತ್ತೆಂದು ಹೇಳಲಾರೆ. ಕೆಲವರಿಗೆ ಸ್ವಾಮಿಜೀಯವರ ಪೂರ್ವಚರಿತ್ರೆ, ಅವರ ಉಡಿಗೆ ತೊಡಿಗೆ, ಬಲಗೈಗೆ ಕಟ್ಟುತ್ತಿದ್ದ ವಾಚು, ನಶ್ಯಡಬ್ಬ, ಅವರನ್ನು ಸುತ್ತುವರಿಯುತ್ತಿದ್ದ ಜನ, ಜನಸಾಮಾನ್ಯರಿಗೆ ಕ್ಲಿಷ್ಟವಾದ ವಿಷಯಗಳನ್ನು ಮನದಟ್ಟು ಮಾಡುವುದಕ್ಕೆ ಉಪಯೋಗಿಸುತ್ತಿದ್ದ ಉದಾಹರಣೆಗಳು, ಎಲ್ಲರನ್ನು ನಗಿಸುತ್ತಿದ್ದ ರೀತಿ ಮುಂತಾದುವುಗಳ ಮೇಲೆ ಹೆಚ್ಚಿನ ಆಸಕ್ತಿ ಇರುವಂತೆ ತೋರುತ್ತಿತ್ತು. ಸ್ವಾಮಿ ಚಿನ್ಮಯಾನಂದರು ಎಂದೂ ತಾವು ಪವಾಡ ಪುರುಷರೆಂದು ಹೇಳಿಕೊಂಡವರಲ್ಲ. ಅವರ ಅಭಯ ಹಸ್ತದಿಂದ ಯಾರನ್ನೂ ಆಶೀರ್ವದಿಸಿ ಕಷ್ಟ ಪರಿಹಾರ ಮಾಡುತ್ತೇನೆಂದು ಹೇಳಿದವರಲ್ಲ. ಅವರು ಹೇಳುತ್ತಿದ್ದ ವಿಷಯಗಳನ್ನು ಮನನ ಮಾಡದೆ ಪದೇ ಪದೇ ಕಾಲಿಗೆ ಬೀಳುತ್ತಿರುವವರನ್ನು ಸಹಿಸುತ್ತಿರಲಿಲ್ಲ. ನನ್ನ ದೃಷ್ಟಿಯಲ್ಲಿ ಅವರು ಒಬ್ಬ ಒಳ್ಳೆಯ ಪ್ರಾಚಾರ್ಯರು ಮತ್ತು ಉಪನ್ಯಾಸಕರು. ಅವರು ತಮ್ಮ ಗುರುಗಳಿಂದ, ವೇದ ಉಪನಿಷತ್‌ಗಳನ್ನು ಕಲಿತದ್ದನ್ನು ವಿಮರ್ಶಿಸಿ, ತರ್ಕ ಬದ್ಧವಾಗಿ ಉಪದೇಶಿಸುತ್ತಿದ್ದರು. ಅವರ ದೀಕ್ಷೆ ಗುರು ಸ್ವಾಮಿ ಶಿವಾನಂದರವರಾದರೂ ಹೆಚ್ಚಿನ ಪಾಂಡಿತ್ಯ ಪಡೆದಿದ್ದು ಸ್ವಾಮಿ ತಪೋವನ್‌ಜಿ ಮಹಾರಾಜರಿಂದ. ಸ್ವಾಮಿ ತಪೋವನ್‌ಜಿಯವರು ಸನ್ಯಾಸತ್ವ ಸ್ವೀಕರಿಸಿದ್ದು ಮತ್ತು ಅವರ 'ವಾಂಡರಿಂಗ್ಸ್ ಇನ್ ದಿ ಹಿಮಾಲಯಾಸ್' ಪುಸ್ತಕ ನನಗೆ ತುಂಬ ಮೆಚ್ಚುಗೆಯಾಯಿತು. ಒಬ್ಬ ವಿದ್ಯಾರ್ಥಿ ತನ್ನ ಪ್ರಿಯವಾದ ಗುರುಗಳನ್ನು ನೆನೆಸಿಕೊಳ್ಳುವಂತೆ ಸದಾ ನಾನು ಚಿನ್ಮಯಾನಂದರನ್ನು ಸ್ಮರಿಸಿಕೊಳ್ಳುತ್ತೇನೆ.

ಮತ್ತೊಬ್ಬ ಮಹಾಪುರಷರ ಸಂಪರ್ಕವನ್ನು ಇಲ್ಲಿ ನೆನಸಿಕೊಳ್ಳಬಯಸುತ್ತೇನೆ. ಗಟ್ಟಹಳ್ಳಿ ಅಂಜನಪ್ಪ ಸ್ವಾಮಿಯವರು ವೇಷಭೂಷಣ, ಅನುಭವ, ಪಾಂಡಿತ್ಯದಲ್ಲಿ ಚಿನ್ಮಯಾನಂದರರಿಗೆ

ವ್ಯತಿರಿಕ್ತ. ಅಂಜನಪ್ಪ ಸ್ವಾಮಿಯವರನ್ನು ಸಾರ್ವಜನಿಕರಿಗೆ ಪರಿಚಯಿಸಿದ್ದು ಪೊಲೀಸ್ ಇಲಾಖೆಯಲ್ಲಿ ಡಿ.ಸಿ.ಸಿ. ಆಗಿದ್ದ ಸಿ. ರೇವಣ್ಣನವರು. ಅವರು ಮೊದಲು ಅಂಜನಪ್ಪ ಸ್ವಾಮಿಯವರನ್ನು ಭೇಟಿ ಮಾಡಿದ್ದು ಪೊಲೀಸ್ ಶೈಲಿಯಲ್ಲೇ. ಬಹುಶಃ ಪೊಲೀಸಿನವರು ಮೊದಲು ಮನುಷ್ಯರಲ್ಲಿ ಕಾಣಬಯಸುವುದು ಅವರಲ್ಲಿರುವ ಅಪರಾಧಿಯನ್ನು. ಬದಲಿಗೆ ದೈವತ್ವವನ್ನು ಕಂಡಾಗ ಪೂಜಿಸಿ, ಪೋಷಿಸಿ ಶರಣಾಗುತ್ತಾರೆ. ರೇವಣ್ಣನವರು ಅಂಜನಪ್ಪನಲ್ಲಿ ಅಪರಾಧಿಯನ್ನು ಹುಡುಕಲು ಹೋಗಿ ಪರಮಾತ್ಮನನ್ನು ಕಂಡರು. ಅಂದಿನಿಂದ ಅವರು ಶ್ರೀ ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದರು ಹೇಗೋ ಹಾಗೆ ಅಂಜನಪ್ಪ ಸ್ವಾಮಿಯವರಿಗೆ ರೇವಣ್ಣನವರಾದರು. ಅಂಜನಪ್ಪ ಸ್ವಾಮಿಯವರು ಬಾಹ್ಯರೂಪಕ್ಕೆ ಮತ್ತೊಬ್ಬರ ಮನೆಯಲ್ಲಿ ಕೂಲಿ ಮಾಡಿ ದನಕಾಯುವ ಅನಕ್ಷರಸ್ತ ಹಳ್ಳಿಯ ಬಡವನಂತೆ ಕಾಣುತ್ತಿದ್ದರು. ಅವರು ಆಂಜನೇಯನನ್ನು ಸಾಕ್ಷಾತ್ಕಾರ ಮಾಡಿಕೊಂಡು ಮಾತನಾಡುತ್ತಿದ್ದದ್ದು ಶ್ರೀ ರಾಮಕೃಷ್ಣ ಪರಮಹಂಸರು ಕಾಳಿಕಾದೇವಿಯೊಡನೆ ಮಾತನಾಡುತ್ತಿದ್ದಂತೆ. ನೋಡುವವರಿಗೆ ಅವರೂ ಒಂದು ಬಗೆಯ ಮಾನಸಿಕ ತೊಂದರೆಯಿಂದ ಬಳಲುತ್ತಿದ್ದಂತೆ ಕಂಡಿರಬೇಕು. ಅವರು ಹುಟ್ಟಿಬಂದ ಪರಿಸರದಲ್ಲಿ ಜನರು ಅವರ ಮಹಿಮೆಯನ್ನರಿಯುವಂತಹವರು ಯಾರೂ ಇರಲಿಲ್ಲ. ಅಥವಾ ಹೇಳಿದ್ದನ್ನು ಅರ್ಥೈಸಿಕೊಂಡು ಬರೆದು ಹೇಳುವಂತಹವರಿರಲಿಲ್ಲ. ಅಕ್ಷರ ಗಂಧವೇ ಇಲ್ಲದ ಇವರಿಗೆ ಬರೆಯಲು ಬಂದದ್ದು ಒಂದು ಪವಾಡವೆ. ಇವರ 'ಅನುಭವವೇದಾಂತಸಾರ ಕಥಾವಳಿ' ಎಲ್ಲ ತತ್ವಗಳ ಜ್ಞಾನ ಭಂಡಾರದಂತಿದೆ. ಯಾರೊಡನೆಯೂ ಹೆಚ್ಚಿಗೆ ವ್ಯವಹರಿಸುತ್ತಿರಲಿಲ್ಲ. ಇವರಲ್ಲಿ ದೈವತ್ವವನ್ನು ಗುರುತಿಸಿದ ಜನರು ಇವರನ್ನು ಕೊಂಡಾಡಲು ಪ್ರಾರಂಭಿಸಿದಾಗ ಯಾರೂ ಇವರನ್ನು ಅರಿಯದಿದ್ದಾಗ ಹೇಗೆ ನಿರ್ಲಿಪ್ತರಾಗಿರುತ್ತಿದ್ದರೋ ಆಗಲೂ ಹಾಗೆಯೇ ಇರುತ್ತಿದ್ದರು. ಇವರ ಊಟ ಉಪಹಾರದಲ್ಲಿ ಹುಟ್ಟಿದಾಗಿನಿಂದ ಕಡು ಬಡತನದಲ್ಲಿದ್ದಾಗ ಏನು ತಿನ್ನುತ್ತಿದ್ದರೋ ಅದನ್ನೇ ಕೊನೆಯವರಿಗೆ ಮುಂದುವರಿಸಿದರು. ನಾನು ಇವರನ್ನು ನೋಡಲು ಹೋದಾಗಲೆಲ್ಲ ಇವರೊಡನೆ ಮಾತನಾಡಿದ್ದಿಲ್ಲ. ಮೌನವೇ ನಮ್ಮಿಬ್ಬರ ಮಧ್ಯೆ ವ್ಯವಹರಿಸುತ್ತಿತ್ತು. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದಂತೆ ಪ್ರತಿಯೊಬ್ಬರೂ ಹುಟ್ಟುವಾಗ ದೈವತ್ವವನ್ನು ಪಡೆದೇ ಬಂದಿರುತ್ತಾರೆ. ಅದನ್ನು ರೂಢಿಸಿಕೊಂಡು ಮೇಲೇರುವುದಕ್ಕೆ ಪ್ರಯತ್ನ ಮಾಡುವವರು ಅಪರೂಪ. ಅವರಲ್ಲಿ ದಿವ್ಯದರ್ಶಿಯಾಗುವವರೂ ಮತ್ತೂ ವಿರಳ. ಅಂತಹವರು ಸಾಮಾನ್ಯ ಮನುಷ್ಯರಂತೆ ಇದ್ದರೂ, ಅವರ ಚಿಂತನೆಯೆಲ್ಲ ಸಾಕ್ಷಾತ್ಕಾರದತ್ತ. ಅಂಜನಪ್ಪ ಸ್ವಾಮಿಯವರು ದಿವ್ಯದರ್ಶಿಯಾಗಿ ಪರಮ ಸತ್ಯದ ರಹಸ್ಯವನ್ನು ತಿಳಿದು ಅನುಭವಿಸಿದವರು. ಆಗಾಗ ಅವರನ್ನು ನೋಡುವ ಅವಕಾಶ ದೊರೆತದ್ದು ನನ್ನ ಸುದೈವವೆಂದು ತಿಳಿದಿದ್ದೇನೆ.

ನನ್ನ ಬೋಧನೆ ಮತ್ತು ಸಂಶೋಧನೆಯ ವಿಷಯಗಳಿಗೆ ಸಂಬಂಧಪಟ್ಟ ಲೇಖನ, ಪುಸ್ತಕ, ಪ್ರಬಂಧಗಳನ್ನು ಓದುವುದನ್ನು ಬಿಟ್ಟರೆ ಬೇರೆ ಪುಸ್ತಕಗಳನ್ನು ಗಾಢವಾಗಿ ಓದುವ ಅವಕಾಶ ಅಷ್ಟಾಗಿ ಇರಲಿಲ್ಲವೆಂದೇ ಹೇಳಬೇಕು. ಆದರೂ ಆಗಾಗ ಒಳ್ಳೊಳ್ಳೆಯ ಕನ್ನಡ ಮತ್ತು ಇಂಗ್ಲಿಷ್ ಕೃತಿಗಳನ್ನು ಓದಿದ ನೆನಪಿದೆ. ಮನೆಯಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ನೂರಾರು ಪುಸ್ತಕಗಳ ಜೊತೆ ತತ್ವಜ್ಞಾನಕ್ಕೆ ಸಂಬಂಧಪಟ್ಟ ಹಲವು ಕೃತಿಗಳು, ಕಾದಂಬರಿಗಳು, ಆತ್ಮಕಥೆ ಇದ್ದರೂ ಪುನಃ ಪುನಃ ನೋಡುತ್ತಿರುವಂತಹವು ಕೆ. ವಿ. ಪುಟ್ಟಪ್ಪನವರ ರಾಮಾಯಣ ದರ್ಶನ, ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ ಮತ್ತು ಥಾಮಸ್ ಎ. ಕೆಂಪಿಸ್‌ರವರ 'ಆಫ್ ದಿ

ಇಮಿಟೇಷನ್ ಆಫ್ ಕ್ರಿಸ್ತ್'. ಹದಿನೈದನೆ ಶತಮಾನದ ಕ್ರೈಸ್ತಧರ್ಮದ ಸನ್ಯಾಸಿ ಥಾಮಸ್ ಆ. ಕೆಂಪಿಸ್‌ರವರ ಜ್ಞಾನೋದಯದ ತಿಳುವಳಿಕೆಯ ಸಾರವನ್ನೊಳಗೊಂಡ ಈ ಪುಸ್ತಕ ನಮ್ಮ ಭಗವದ್ಗೀತೆಯ ಸಾರಕ್ಕೆ ಹೋಲುತ್ತದೆ. ಈ ಕೃತಿ ನನ್ನ ಕೈ ಸೇರಿದ್ದು ಒಂದು ವಿಸ್ಮಯ ಸಂಗತಿ. ಒಮ್ಮೆ ಒಂದು ರೈಲು ನಿಲ್ದಾಣದಲ್ಲಿ ರೈಲಿಗೆ ಕಾಯುತ್ತಿದ್ದಾಗ ಅಪರಿಚಿತರೊಬ್ಬರು ಈ ಪುಸ್ತಕವನ್ನು ಕೈಗಿಟ್ಟು ಹೋದರು. ಯಾರೋ ಕ್ರೈಸ್ತಧರ್ಮ ಪ್ರಚಾರಕರು ಹೀಗೆ ಮಾಡಿರಬಹುದೆಂದು ಅಸಡ್ಡೆಯಿಂದಲೇ ಪುಸ್ತಕದತ್ತ ಕಣ್ಣಾಡಿಸಿದಾಗ, ಅದು ದೇವರ ಬಗ್ಗೆ ಬರೆದಿದ್ದಲ್ಲ – ಮಾನವನು ದೇವರ ಮುಂದೆ ನಿಂತಾಗ ಹೇಳುವಂತಹದು. ಮನಸ್ಸಿಗೆ ತುಂಬ ಮೆಚ್ಚುಗೆಯಾಯಿತು. ಅಂದಿನಿಂದ ಸದಾ ನನ್ನ ಒಡನಾಟದಲ್ಲಿ ಒಂದಾಯಿತು.

ನನ್ನ ಸಂಶೋಧನೆಯ ವಿಷಯಕ್ಕೂ ಸ್ವಂತ ವಿಷಯಕ್ಕೂ ಸಂಬಂಧವನ್ನು ಕಲ್ಪಿಸಿದವನಲ್ಲ. ನನ್ನ ವೈಯಕ್ತಿಕ ಅಭಿಲಾಷೆಗಳನ್ನು ಮತ್ತೊಬ್ಬರಲ್ಲಿ ಹೇಳಿಕೊಂಡವನೂ ಅಲ್ಲ. ನನ್ನ ಮಡದಿ, ಮಕ್ಕಳು, ವಿದ್ಯಾರ್ಥಿಗಳಿಗೂ ಕೂಡ ನನ್ನ ವೈಯಕ್ತಿಕ ಆಸೆ ಆಕಾಂಕ್ಷೆ, ಅಭಿಲಾಷೆ ಅಪೇಕ್ಷೆ ಅರಿವಾಗಿರುವುದು ಸಂಶಯ. ಮೊದಲನೆಯದು ನನ್ನ ವೃತ್ತಿಯಲ್ಲಿ ಕೈಗೊಂಡ ಕೆಲಸ ಕರ್ತವ್ಯವೆಂದು ತನುಮನವನಿಟ್ಟು ಮಾಡುತ್ತಿದ್ದೆ. ಬಯಸದೆ ಇದ್ದ ಫಲಗಳು ದೊರೆತವು. ನನ್ನ ಪ್ರಾಧ್ಯಾಪಕ ವೃತ್ತಿಯ ಜೊತೆಗೆ ಸಂಶೋಧನೆ ನಡಸಿ ಇನ್ನೂರಕ್ಕೂ ಹೆಚ್ಚು ಪ್ರಬಂಧಗಳನ್ನು ಪ್ರಕಟಿಸಿ, ಮಂಡಿಸಿ, ಹತ್ತಾರು ಪುಸ್ತಕಗಳ ಸಂಪಾದಕನಾಗಿ, ಹಲವಾರು ಕೀಟಬಾಧೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಡುವಲ್ಲಿ ಸಹಾಯಕನಾಗಿ, ಹಲವು ವೈಜ್ಞಾನಿಕ ಸಂಘ ಸಂಸ್ಥೆಗಳ ಸ್ಥಾಪಕನಾಗಿ ಮಾಡಿದ ಕೆಲಸ, ನನ್ನ ವೃತ್ತಿಯ ಮೆಟ್ಟಲಿನ ತುಟ್ಟತುದಿಗೆ ಮುಟ್ಟಿಸಿತು. ಭಾರತದ ಉದ್ದಗಲಕ್ಕೆ ಕೊಂಡೊಯ್ದಿತು. ಹತ್ತೆಂಟು ಸಾರಿ ಪ್ರಪಂಚ ಪರ್ಯಟನೆ ಮಾಡಿಸಿತು. ಕೆಲವು ಪುರಸ್ಕಾರಗಳು ದೊರೆತವು. ಸನ್ಮಾನ ಸಮಾರಂಭಗಳೂ ಆದವು. ಸಮಾಜದ ದೃಷ್ಟಿಯಲ್ಲಿ ಇವೆಲ್ಲವೂ ಒಬ್ಬ ಸಾಮಾನ್ಯ ವ್ಯಕ್ತಿಗೆ ಜೀವನದಲ್ಲಿ ಗಳಿಸುವ ಹೆಗ್ಗಳಿಕೆಗಳೇ ಆದರೂ ನನಗೆ ಅದು ನಾಣ್ಯದ ಒಂದು ಮುಖ. ವೈಯಕ್ತಿಕ ದೃಷ್ಟಿಯಿಂದ ಮತ್ತೊಂದು ಮುಖವನ್ನು ನೋಡುವುದಾದರೆ ಬಾಲ್ಯ, ಯೌವ್ವನ, ವೃದ್ಧಾಪ್ಯಗಳಲ್ಲಿ ಕಂಡ ನೋವು ನಲಿವು ನನ್ನ ಮಾನವೀಯತೆಯನ್ನು ಯಾವ ಮಟ್ಟಕ್ಕೆ ಏರಿಸಿದವು, ಅದರಿಂದ ಆದ ಆತ್ಮ ಸಂತೋಷವೆಷ್ಟು, ಎಂದು ತುಲನಮಾಡುವ ಸಮಯ ದೊರೆತದ್ದು ನಿವೃತ್ತಿಯಾದ ನಂತರ. ಇದರ ಹಿನ್ನೆಲೆಯಾಗಿ ಹಿಂದಿನದನ್ನು ನೆನಪಿದ್ದಷ್ಟು ಬರೆಯಲು ಪ್ರಯತ್ನಿಸಿದ್ದೆ ಈ ಹೊತ್ತಿಗೆಗೆ ಮೂಲ ಕಾರಣ.

* * *

ಗ್ರಂಥ ಪರಿಚಯ



ಪ್ರೊ|| ಗೊದ್ದು ವೀರೇಶ್ ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಆಡಳಿತಗಾರರಾಗಿ ಮೆಟ್ಟಲೇರಿ ಬಂದು ನಾಲ್ಕು ದಶಕಗಳ ಸೇವೆಯ ನಂತರ 1998ರಲ್ಲಿ ಬೆಂಗಳೂರು ಕೃ.ವಿ.ವಿ. ಕುಲಪತಿ ಸ್ಥಾನದಿಂದ ನಿವೃತ್ತಿಯಾದವರು. ಅವರ ಸೇವಾವಧಿಯಲ್ಲಿ 200ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನೂ, ಹಲವಾರು ಪುಸ್ತಕಗಳನ್ನೂ ಪ್ರಕಟಿಸಿ, ಮೂವತ್ತು ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗ ದರ್ಶನ ನೀಡಿ, ಕೀಟಶಾಸ್ತ್ರದಲ್ಲಿ ನಾಲ್ಕು ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಜರುಗಿಸಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೀರ್ತಿ ಗಳಿಸಿದ್ದಾರೆ. ಇವರು (1) ಇಂಡಿಯನ್ ಸೊಸೈಟಿ ಆಫ್ ಸಾಯಿಲ್ ಬಯಾಲಜಿ ಅಂಡ್ ಇಕಾಲಜಿ, (2) ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಸ್ಟಡಿ ಆಫ್ ಸೋಶಿಯಲ್ ಇನ್‌ಸೆಕ್ಟ್ಸ್ (ಇಂಡಿಯನ್ ಚಾಪ್ಟರ್ಸ್), (3) ಯು.ಎ.ಎಸ್. ಅಲ್ಯುಮ್ನಿ ಅಸೋಸಿಯೇಷನ್, (4) ಅಸೋಸಿಯೇಷನ್ ಫಾರ್ ಪ್ರೊಮೋಷನ್ ಆಫ್ ಆರ್ಗಾನಿಕ್ ಫಾರ್ಮಿಂಗ್, ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರು ಕೂಡ. ಇಂಟರ್‌ನ್ಯಾಷನಲ್ ಪಾರ್ಟಿಸಿಪೇಷನ್ ಫಾರ್ ಸಸ್ಟೈನಬಲ್ ಅಗ್ರಿಕಲ್ಚರ್ (ಯು.ಎಸ್.ಎ.) ಸಂಸ್ಥಾಪಕರಲ್ಲೊಬ್ಬರು ಹಾಗೂ ಹಲವಾರು ವಿಜ್ಞಾನ ಸಂಘ ಸಂಸ್ಥೆಗಳ ಸಲಹೆಗಾರರು. ಇವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

"ಬಯಸದೆ ಬಂದದ್ದು" ಇವರ ಆತ್ಮಕಥನದ ಕೆಲವು ಉಲ್ಲೇಖನ ಈ ಕೆಳಗಿನಂತಿವೆ.

- "ಗುರುವಿಲ್ಲದೆ, ಗುರಿಯೂ ಇಲ್ಲದೆ ವಿಧಿಯ ಕಾಲ್ಚೆಂಡಿನಂತೆ... ಹಳ್ಳಿಯ ಅನಕ್ಷರಸ್ಥ ಬಡಕುಟುಂಬದಲ್ಲಿ ಹುಟ್ಟಿದ ಹೈದನೊಬ್ಬ, ಮಹಾಪ್ರಾಧ್ಯಾಪಕನಾಗಿ, ಮಹಾಸಂಶೋಧಕನಾಗಿ ಹಾಗೂ ಕುಲಪತಿಯಾಗಿ, ಅಂತರರಾಷ್ಟ್ರ ಮಟ್ಟದ ವಿಜ್ಞಾನಿಯಾಗಿ, ಪವಾಡಸದೃಶವಾಗಿ ವಿಕಾಸಹೊಂದಿದ ಕಥೆಯೇ ಬಯಸದೆ ಬಂದದ್ದು" — ಪ್ರೊ|| ದೇಜಗೌ.
- "ದಿಟವಾಗಿ ಇದೊಬ್ಬ ಮಣ್ಣಿನ ಮಗನ ಬಾಳಿನ ಕಥೆ" — ಪ್ರೊ|| ಸಿ.ಪಿ.ಕೆ.
- "ಬಯಸದೆ ಬಂದದ್ದು ಕೇವಲ ಸ್ವಾಗತಾರ್ಹವಷ್ಟೇ ಅಲ್ಲ ಹರ್ಷದಾಯಕ ದಾಖಲೆ" — ಪ್ರೊ|| ಎಚ್.ಎ. ರಾಮಕೃಷ್ಣ.
- "ಪ್ರೊ|| ಜಿ.ಕೆ. ವೀರೇಶ್ ಅವರು ಬರೆದಿರುವ ಬಯಸದೆ ಬಂದದ್ದು ಕುತೂಹಲಕರವೂ ಸೋಜಿಗವೂ ಆದ ಒಂದು ಆತ್ಮಕಥೆ" — ಸಾಹಿತಿ ಜಿ. ನಾರಾಯಣ.

ಪ್ರಕಾಶಕರು